
ಎನ್‌ಸಿಸಿ ದಿನಗಳು

ಜಿ. ಟಿ. ನಾರಾಯಣರಾವ್





ಎನ್‌ಸಿಸಿ ದಿನಗಳು

ಜಿ. ಟಿ. ನಾರಾಯಣರಾವ್

ಅತ್ರಿ ಬುಕ್ ಸೆಂಟರ್
೪ ಶರಾವತಿ ಕಟ್ಟಡ ಬಲ್ಮಠ ಮಂಗಳೂರು ೫೭೫ ೦೦೧

NCC DINAGALU a book in Kannada written by G. T. NARAYANA RAO 8 Athree Kamakshi Hospital Road Saraswatipura Mysore 570 009 (Phone 0821—543759). Subject: his experiences in the National Cadet Corps as an Officer, 1952-69. First edition published in 1972 by Sri D. V. K. Murthy. Publishers of the present (second) edition: Athree Book Centre 4 Sharavathi building Balmatta Mangalore 575 001 (Phone 0824—425161), 1996. Pages xxviii+448. Price: Rs 55

ಬೆಲೆ : ರೂ ೫೫

PRINTED BY G. H. KRISHNAMURTHY MYSORE PRINTING PRESS
1210 KANTHARAJA URS ROAD KRISHNAMURTHIPURAM MYSORE 570 001

ಅರ್ಪಣೆ

ತರುಂಗಳ್ ಬಾಗುಗುಂಮುಂರಂ ಫಲ
ಭರದಿಂದ ಮುಗಿಲ್ ನವಾಂಬುಂ ಭಾರದಿ ಜೋಲ್ಗುಂ
ಸಿರಿಯೊಳ್ ನಯುಂಯುಂತರಾರ್ಯರ್
ಪರಿಕಿಪೊಡೆ ಪರೋಪಕಾರಿಗಳ್ಗಿದುಂ ಸಾಜಂ

ನೀತಿಶತಕದ ಈ ಭಾವನೆಯ ಜಂಗಮರೂಪಿಗಳಾಗಿದ್ದ
ಶ್ರೀಮಾನ್ ಗುಂಡುಕುಟ್ಟಿ ಎಂ. ಮಂಜನಾಥಯ್ಯ
ಶ್ರೀಮತಿ ಮೀನಾಕ್ಷಮ್ಮ ಮಂಜನಾಥಯ್ಯ
ಈ ಕರ್ಮಯೋಗಿ ದಂಪತಿಗಳಿಗೆ

ಶ್ರೀ ಮಂಜನಾಥಯ್ಯನವರು (ಜನನ ೨-೬-೧೯೦೪) ದಿನಾಂಕ ೬-೧೦-೧೯೮೬ರಂದೂ ಶ್ರೀಮತಿ ಮೀನಾಕ್ಷಮ್ಮನವರು (ಜನನ ೧-೧೨-೧೯೦೯) ದಿನಾಂಕ ೫-೧೨-೧೯೯೪ರಂದು ವಿಧಿವಶರಾದರು.

He who has well considered his duty will at once carry his convictions into action. Our acts are the only things that are in our power. They not only form the sum of our habits, but our character.

At the same time, the course of duty is not always the easy course. It has many oppositions and difficulties to surmount. We may have the sagacity to see, but not the strength of purpose to do. To the irresolute there is many a lion in the way. He thinks and moralizes and dreams, but does nothing. "There is little to see" said a hard worker, "and little to do : it is only to *do* it."

Duty by SAMUEL SMILES

ನಿಮಗೆ

[ಕರ್ತವ್ಯ]—[ಸ್ವಾರ್ಥ] > = < 0

ಆಗಿರುವಂತೆ ನಿಮ್ಮ ಜೀವನ ಸಾರ್ಥಕ, ಸಾಮಾನ್ಯ, ಅಸಾರ್ಥಕವಾಗಿರುತ್ತದೆ

ವಿಷಯಸೂಚಿ

೧೯೫೩

೧೯೫೪

೧೯೫೫

೧೯೫೬

೧೯೫೭

೧೯೫೮

೧೯೫೯

೧೯೬೦

೧೯೬೧

೧೯೬೨

೧೯೬೩

೧೯೬೮

೧೯೬೯

ಮುನ್ನುಡಿ

‘ನಕ್ಷತ್ರಲೋಕ,’ ‘ಮಾನವ, ಚಂದ್ರನ ಮೇಲೆ,’ ‘ವೇಗ,’ ‘ವಿಜ್ಞಾನ ನಿರ್ಮಾಪಕರು’ ಮುಂತಾದ ವಿಜ್ಞಾನ ಗ್ರಂಥಗಳನ್ನೂ ಹಲವಾರು ಜನಪ್ರಿಯ ವಿಜ್ಞಾನ ಲೇಖನಗಳನ್ನೂ ಬರೆದು ಓದುಗರಿಗೆ ಪರಿಚಿತರಾಗಿರುವ ಶ್ರೀ ಜೀಟಿಯವರು ಸಾಹಿತ್ಯದ ದೃಷ್ಟಿಯಿಂದ ಎನ್‌ಸಿಸಿಯಂಥ ನೀರಸ ವಿಷಯದಲ್ಲೂ ರಸಸ್ಥಾನಗಳನ್ನು ತುಂಬಿದ್ದಾರೆ. ಆಲಿವ್‌ಗ್ರೀನ್ ಸಮವಸ್ತ್ರ ಧರಿಸಿ ಅಧಿಕಾರಿಗಳ ಕೂಗಾಟದ ತಾಳಕ್ಕೆ ಸರಿಯಾಗಿ ಕಾಲನ್ನು ಎತ್ತಿ ಇಡುತ್ತ ಮುಂದಿಟ್ಟ ಕಾಲಿಗೆ ಅನುಗುಣವಾಗಿ ಕೈಯನ್ನು (ಅದೇ ಕೈಯನ್ನೋ ?) ಮುಂದೆ ತೂಗುತ್ತ ಮುಂದೆ ಹಿಂದೆ, ಎಡ ಬಲ ದಿಕ್ಕುಗಳಿಗೆ ಗಂಟೆಗಟ್ಟಲೆ, ದಿನಗಟ್ಟಲೆ, ಮಾಸಗಟ್ಟಲೆ, ವರ್ಷಗಟ್ಟಲೆ—ಬೇಸರವಾದರೂ ತೋರ್ಪಡಿಸಲಾರದೆ—ನಡೆಯುತ್ತಿರುವುದೇ ಎನ್‌ಸಿಸಿ ಎನ್ನುವುದು ಸಾಮಾನ್ಯ ಭಾವನೆ. ಎನ್‌ಸಿಸಿಯ ಉದ್ದೇಶ, ಶಿಕ್ಷಣ, ಕಾರ್ಯಕ್ರಮಗಳ ವೈವಿಧ್ಯ, ಅದು ಕಲಿಸಬೇಕಾದ ಪಾಠ, ಆದರೆ ಅದು ಕಲಿಸುತ್ತಿರುವ ಪಾಠ, ವಿದ್ಯಾರ್ಥಿಗಳಲ್ಲಿ ಇದರ ಪ್ರತಿಕ್ರಿಯೆ ಮುಂತಾದವುಗಳ ವ್ಯಾಪಕ ಸಮೀಕ್ಷೆಯನ್ನು ಈ ಗ್ರಂಥದಲ್ಲಿ ಸವಿವರವಾಗಿ ಜೀಟಿಯವರು ತಮ್ಮ ಅನಿರ್ಬಂಧಿತ ಸ್ವತಂತ್ರ ಶೈಲಿಯಲ್ಲಿ ನಿರೂಪಿಸಿರುವರು. ‘ಎನ್‌ಸಿಸಿ ದಿನಗಳು’ ಸುಮಾರು ೧೭ ವರ್ಷಗಳ ಅನುಭವದಿಂದ ಸುರಿದ ಅಮೃತವರ್ಷ.

ಜೀಟಿಯವರು ಎನ್‌ಸಿಸಿ ಅಧಿಕಾರಿಗಳಾಗಿ ಸೇರಿದಾಗ ಅವರಿಗೆ ೨೫ರ ತಾರುಣ್ಯ, ತುಂಬು ಆರೋಗ್ಯ, ಹೊಸ ಹುರುಪು. ಒಮ್ಮೆ ೧೯೪೭ರಲ್ಲಿ QLQ ಕಡಿಮೆಯೆಂದು ತಿರಸ್ಕೃತನಾಗಿಯೂ, ಸ್ವಪ್ರಯತ್ನದಿಂದ MRCಯಲ್ಲಿ ಶಿಕ್ಷಣಹೊಂದಿ QLQವನ್ನು ಪ್ರಥಮ ಶ್ರೇಣಿಯಲ್ಲೇ ಪಡೆದು ಬಂದ ನವಚೇತನ, ಇವು ನಾಲ್ಕು ಪರಿಗೊಂಡು ವೆಲ್ಲಿಂಗ್‌ಟನ್ನಿನಿಂದ ಮರಳಿದ ಜೀಟಿಯವರು ಮನೆಯಲ್ಲಿ (ನಾವಿಬ್ಬರೂ ಒಂದೇ ಮನೆಯ ಎರಡು ಭಾಗಗಳಲ್ಲಿದ್ದೆವು) ತಾರ ಧ್ವನಿವರ್ಧಕ ಕಂಠದೊಡನೆ ಸಪಾದದೇಹ ಚಲನ ಸಪ್ರಯೋಗ ವರದಿಯೊಪ್ಪಿಸುವಾಗ ನನ್ನಂಥ ಅಜ್ಞನೂ ಎನ್‌ಸಿಸಿ ಜ್ಞಾನಿಯಾದುದಲ್ಲದೆ ನೆರೆಯವರೆಲ್ಲರಿಗೂ ಎನ್‌ಸಿಸಿಯ ಮಹತ್ತ್ವದ ಪರಿಚಯವಾಯಿತು. ಹೀಗೆ ಮನಸ್ಸಿದ್ದೋ ಇಲ್ಲದೆಯೋ ಎನ್‌ಸಿಸಿ ಕೋಟೆಯನ್ನು ಪ್ರವೇಶಿಸಿದ ಜೀಟಿಯವರು ಮುಂದೆ ಅನೇಕ ಮೇಲಧಿಕಾರಿಗಳೊಡನೆ ನ್ಯಾಯಕ್ಕಾಗಿ ಪ್ರಕರಣ ಹೂಡಿಯೂ, ಮಿಲಿಟೆರಿ ಅಧಿಕಾರಿಗಳಾದ ದೊರೈರಾಜ್, ರಾಯಪ್ಪನ್, ಸೋಮಯ್ಯ, ನಾರಾಯಣ್‌ಸಿಂಗ್, ತಮ್ಮಯ್ಯ ಇವರುಗಳ ಹಾಗೂ ಪ್ರಿನ್ಸಿಪಾಲ್ ಉಮರ್ಜಿ ಮುಂತಾದವರ ಪ್ರೋತ್ಸಾಹ ಸ್ನೇಹಗಳ ಚಕ್ರವ್ಯೂಹದಲ್ಲಿ ಸಿಕ್ಕಿಹಾಕಿಕೊಂಡು ೧೯೬೯ರಲ್ಲಿ ಹೊರಬರುವವರೆಗಿನ ಅನುಭವಸಾರವೇ ಈ ಎನ್‌ಸಿಸಿ ಸಂಹಿತೆ. ಸುಮಾರು ೨೩ ವರ್ಷಗಳ ಒಡನಾಟ ಗೆಳೆತನಗಳಿಂದ ವ್ಯಕ್ತಿಯ ಬಗ್ಗೆ ನಾನು ಮೂಡಿಸಿಕೊಂಡಿರುವ ಭಾವನೆಯೆಂದರೆ ಚೇತನ, ಕ್ರಿಯಾಶೀಲತೆ, ಅಚ್ಚುಕಟ್ಟು, ಕರ್ತವ್ಯಪ್ರಜ್ಞೆ, ಪ್ರಾಮಾಣಿಕತೆಗಳಿಗೆ ಇನ್ನೊಂದು ಹೆಸರು ಜಿ. ಟಿ. ನಾರಾಯಣ

ರಾವ್. ಕನ್ನಡ ಸಾಹಿತ್ಯದ ಆಕರ್ಷಣೆಯೇ ಬಲವಾಗಿದ್ದರೂ ಕೈಗೊಂಡ ಕಾರ್ಯ ಎನ್‌ಸಿಸಿ ಇರಲಿ, ಸಹಕಾರ ಸಂಘವಿರಲಿ ಕರ್ತವ್ಯ ಮೊದಲು ಸ್ವಾಭಿರುಚಿ ಬಳಿಕ ಎನ್ನುವ ತತ್ತ್ವದಿಂದ ದುಡಿದ, ದುಡಿಯುತ್ತಿರುವ ಜೇಟಿಯವರ ಜೀವನದ ಹಲವು ಘಟನೆಗಳು ನನ್ನ ಸ್ಮರಣೆಯಲ್ಲಿವೆ. ಆದರೆ ಅವುಗಳನ್ನು ಉದಾಹರಿಸಲು ಈ ಪ್ರಕೃತ ಅವಕಾಶವನ್ನು ಉಪಯೋಗಿಸಿಕೊಳ್ಳುವುದು ಸಮಂಜಸವಲ್ಲ.

'ಎನ್‌ಸಿಸಿ ದಿನಗಳು' ಎನ್ನುವ ಈ ಬೃಹತ್ ಸಂಹಿತೆಯನ್ನು ಪ್ರಧಾನ ನಾಲ್ಕು ವಿಭಾಗಗಳಲ್ಲಿ ಸಮಾಲೋಚಿಸಬಹುದು. ಬಾಲ್ಯ ಶಿಕ್ಷಣ, ಸೈನ್ಯ ಶಿಕ್ಷಣ, ಶಿಕ್ಷಣೋತ್ತರ ಸೇವೆ, ಪೂರ್ಣಾವಧಿಯ ಕಮಿಷನ್. ಏಕಾದಶಿಗೂ ಇಮಾಂಸಾಬಿಗೂ ಇರುವಷ್ಟೇ ಸಂಬಂಧ ಬಡಕಲು ಬ್ರಾಹ್ಮಣ್ಯಕ್ಕೂ ಸೈನಿಕ ಶಿಕ್ಷಣಕ್ಕೂ. ಸ್ವಂತ ಅಭಿಪ್ರಾಯ ಇರಲಾರದ ಬಾಲ್ಯದಲ್ಲಿ ತಾಯಿಯ ಇಚ್ಛೆ ವೈದಿಕ ವಿದ್ಯೆಯ ಕಡೆ ಒಲಿದಾಗಲೂ ಅದನ್ನು ಬಿಟ್ಟುಕೊಟ್ಟು ಮ್ಲೇಚ್ಛ ವಿದ್ಯೆಗೆ ಶರಣುಹೋದುದು ಕಾಲಗುಣವೆಂದಿದ್ದಾರೆ. ಇದರಲ್ಲಿ ವಿಶೇಷತೆಯಿಲ್ಲವೆನ್ನಿ. ತನ್ನ ಹಿರಿಯರು ಜತನದಿಂದ ಕಾಪಾಡಿಟ್ಟಿದ್ದ ಮಗನ ಶೆಂಡಿ ಜುಟ್ಟು ಕ್ರಾಪಾಗಿ ಪರಿವರ್ತನೆಗೊಂಡ ಕತೆಯನ್ನು ಪ್ರತಿಯೊಬ್ಬ ಬ್ರಾಹ್ಮಣ ವಿದ್ಯಾರ್ಥಿಯೂ ಬರೆದಿಟ್ಟರೆ ಪರಿವರ್ತನಸಮಾಜಶಾಸ್ತ್ರದಲ್ಲಿ ಅದೊಂದು ಗ್ರಂಥವೇ ಆಗಬಹುದು. ತಾಂತ್ರಿಕ ಕಾಲೇಜು ಸೇರುವ ಅರ್ಹತೆಯಿದ್ದೂ ಗಣಿತದ ಮಡುವಿಗೆ ಜೇಟಿಯನ್ನೆಸೆದ ಘಟನೆಯನ್ನು ಅವರು ವಿಮರ್ಶಿಸದೆ ಕೇವಲ ಘಟನೆಯಾಗಿ ರೂಪಿಸಿದ್ದರೂ ಒಂದು ಸತ್ಯ ವಿಶದವಾಗುತ್ತದೆ. ಇದರಿಂದ ಸರ್ವತಂತ್ರ ಪ್ರಜಾಗಣರಾಜ್ಯವಾದ ನಮ್ಮ ದೇಶದಲ್ಲಿ ಜಾತೀಯಂತೆಯಿಲ್ಲ; ಶಾಸನ ಅದಕ್ಕೆ ಅವಕಾಶ ನೀಡುವುದಿಲ್ಲವೆಂದು ಮುಖಂಡರು ಮೈದಾನ ಘೋಷವೆಬ್ಬಿಸಿದರೂ ಈ ೫೦ ವರ್ಷಗಳಲ್ಲಿ ನಾವೆಷ್ಟು ಸುಧಾರಿಸಿದ್ದೇವೆಂದು ಯೋಚಿಸಿಕೊಳ್ಳಲು ಅನುವುಮಾಡಿಕೊಡುತ್ತದೆ ಈ ಘಟನೆ. ಬಾಲ್ಯದಲ್ಲಿ ಅಂಟಿದ ಅನುಕರಣೆಯ ಸಾಹಿತ್ಯದ ಗೀಳು ಮುಂದೆ ಪ್ರಾಧ್ಯಾಪಕನಾಗಿದ್ದಾಗಲೂ ತನ್ನ ಪ್ರಭಾವವನ್ನು ಬೀರಿತ್ತು. ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿದ್ದಾಗಲಂತೂ ಬೇರೆ ಬೇರೆ ವಿಷಯಗಳ ಮೇಲೂ, ನನ್ನಂಥ ಸಹೋದ್ಯೋಗಿಗಳ ಮೇಲೂ ಅಣಕವಾಡುಗಳನ್ನು ಕಟ್ಟಿ ಕಾಲೇಜಿನ *Times* ಎಂಬ ಪತ್ರಿಕಾ ಫಲಕದ ಮೇಲೆ ಪ್ರಕಟಿಸುತ್ತಿದ್ದರು. ಅವರ 'ವನಸುಮ' ಕಥಾಗುಚ್ಛ ಆಗಲೇ ಬೆಳಕು ಕಂಡುದು.

ಮನಸ್ಸಿದ್ದೋ ಇಲ್ಲದೆಯೋ ಇನ್ನೊಮ್ಮೆ ಅನಿರೀಕ್ಷಿತ ಘಟನೆಗಳಿಂದಾಗಿಯೋ, ವೆಲ್ಲಿಂಗ್‌ಟನ್ನಿನ MRC ಯಲ್ಲಿ ಶಿಕ್ಷಣಕ್ಕಾಗಿ ಪ್ರವೇಶ ಪಡೆದ ಜೇಟಿಯವರ—ತಾನು ಮಂಗಳೂರಿನಿಂದ ಹೊರಟು ವೆಲ್ಲಿಂಗ್‌ಟನ್ ತಲಪಿ ಅಲ್ಲಿ ಪ್ರೊ.ಮೆನನ್ ಎಂಇಎಸ್ ಇವರ ಮೊದಲ್ಗೊಂಡು ಇತರ ಸೈನ್ಯಶಿಕ್ಷಣ ಸಹಪಾಠಿಗಳ ಪರಿಚಯ ; ಶಿಕ್ಷಣಾರ್ಥಿಗಳ ಬರಾಕುಗಳ ವರ್ಣನೆ ; ಸೈನ್ಯದ ಒಬ್ಬ ಸಾಮಾನ್ಯ ಸಿಪಾಯಿಯನ್ನು ದೊಡ್ಡ ಅಧಿಕಾರಿಯೆಂದು ಮೋಸಹೋದ ಪ್ರಸಂಗ; MRC ಸಂಸ್ಥೆಯ ವಿವರಣೆ ; ಭೋಜನಶಾಲೆಯ ಭವ್ಯ ಪರಂಪರೆಯಲ್ಲಿ ಶಾಕಾಹಾರಿ ಪಟ್ಟಪಾಡು—ಇಂಥ ಬಿಗು ವಿಷಯಗಳ ಲಘು ಸರಣಿಯಲ್ಲಿ ವಿನೋದ ಹಾಸ್ಯಗಳು ಕೋಲಾಹಲ ಮಾಡುತ್ತಿವೆ. 'ಬೆನ್ನು ಹತ್ತಿದ ಸಂಖ್ಯೆ,' 'ತುಕ್ಕಡಿಯ ಒನ್ನೆಲೆಯ ಲೆಕ್ಕ' ಮುಂತಾದ ವಿವರಣೆಗಳು ಸಾಮಾನ್ಯಬುದ್ಧಿಗೆ ಸವಾಲು

ಹಾಕುವಂತಿರುವುವು. ನಾನು ಆ ಸವಾಲಿಗೆ ಉತ್ತರಿಸಲಾರದೆ ತತ್ತರಿಸಿ, ಇದನ್ನು ಜೀಟಿ
ಹಾಸ್ಯಗಳ ಪಟ್ಟಿಗೆ ಸೇರಿಸಿ ''ಕೊಯಿ ಶಕ್ ಯಾ ಸವಾಲ್'' ಎಂದು ಕೇಳಿದರೆ ''ಏಕ್
ಶಕ್ ಹೈ ಸಾಬ್'' ಎನ್ನಬೇಕಷ್ಟೆ. ಸಾಲಾಗಿ ನಿಲ್ಲುವುದು, ಹೆಜ್ಜೆ ಹಾಕುವುದು, ಕಿರುಚು
ವುದು ಮುಂತಾದ ಗಹನ ಗಂಭೀರ ವಿಚಾರಗಳನ್ನೊಳಗೊಂಡಿದ್ದರೂ ಗ್ರಂಥದ ಕೊಕ್ಕರೆ
ನಾಗರಾಜನ್, ಪುಳಿಮೂಟೆ ಬಾಲಕೃಷ್ಣನ್ 'As you were'ನ ಆರ್ಮೀಕರಣ
'ಐಸೊವರ್' ಇವು ಓದುಗರನ್ನು ನಗಿಸದಿರುವುದು ಅಸಾಧ್ಯ. ಆರ್ಮಿ ಭಾಷೆಯ ಬೀಜ
ಮಂತ್ರ ಬ್ಲಡೀ, ಬಿದ್ದಯ್ಯನವರ ಕಲಾಯಿ ಡ್ರಿಲ್, ಕೊಟ್ಟಮುಂಡಿಯಲ್ಲಿ ಕೊಟ್ಟ ಮುಡಿ,
ಸುಬೇದಾರ್ ಅಬ್ದುಲ್ ಖಾದರರ ಅಟೇನ್ಷನ್ ವಿವರಣಾ ತರಗತಿ ಇವುಗಳೆಲ್ಲ ಶಿಕ್ಷಣದಲ್ಲಿ
ಭಾಗವಹಿಸದ ವಾಚಕರಿಗೆ ವ್ಯಂಗ್ಯ ರಸಕವಳಗಳು. ಒಟ್ಟಿನಲ್ಲಿ ಈ ಶಿಕ್ಷಣದಲ್ಲಿರುವ ವಿವರ
ಗಳು ಮುಂದಿನ ಎನ್‌ಸಿಸಿ ಶಿಕ್ಷಣ ಪಡೆಯಲಿರುವ ಅಧಿಕಾರಿಗಳಿಗೆ ಬೋಧಪ್ರದವೂ ಕೊನೆಗೆ
ಜೀಟಿಯವರು ಕೊಡುವ ವಿಮರ್ಶಾತ್ಮಕ ಭಾಗ ಆತ್ಮಜಾಗೃತಿಯನ್ನುಂಟುಮಾಡುವುದೂ
ಆಗಿವೆ. ಇಲ್ಲಿ ಬರೆದಿರುವುದು ಕೇವಲ ಘಟನೆಗಳ ನಿರೂಪಣೆಯಾದರೂ ಓದುವವರಲ್ಲಿ
ಉಂಟಾಗುವ ಪರಿಣಾಮ ಜ್ಞಾನಸ್ನಾನ. ಪದವೀಧರರೇ ಶಿಕ್ಷಣಾರ್ಥಿಗಳು. ಅಲ್ಲಿ ಜಾತೀ
ಯತೆಯಿಲ್ಲದಿದ್ದರೂ ಪ್ರಾಂತೀಯತೆ, ಭಾಷಾಭಿಮಾನ (ದುರಭಿಮಾನ) ತಮ್ಮ ಸ್ವಂತ
ಯೋಗ್ಯತೆಗಳಲ್ಲದೆ 'ಹಿಕ್ಮತ್ತಿ'ನಿಂದ ಅಧಿಕಾರಿಗಳನ್ನು ಮೆಚ್ಚಿಸಿ ಪ್ರತಿಷ್ಠೆ ಪಡೆಯುವ
ಹಂಬಲ—ಇವು ಶಿಬಿರದ ತೋರಿಕೆಯ ಐಕ್ಯದಲ್ಲಿ ನೀರಸತೆಯನ್ನು ತರುವಂತಿದ್ದರೆ,
ಇನ್ನೊಂದೆಡೆ ಸೈನ್ಯದಲ್ಲೇ ಇದ್ದು ನಾಗರಿಕತೆಯ ವರ್ತನೆಯನ್ನು ಮರೆತಿರುವ, ಹೇಳಿ
ಕೊಟ್ಟದ್ದನ್ನೇ ಹಿಂದೆ ಕಾರುವ, ತಾವೇ ಮೇಲೆನ್ನುವ ಹಮ್ಮಿನ JCOಗಳು. ಪದವೀಧರ
ರಾಗಿದ್ದು ಕೆಲವು ವರ್ಷ ಕಾಲೇಜುಗಳಲ್ಲಿ ಪಾಠ ಹೇಳಿರುವ ಸೈನಿಕ ವಿದ್ಯಾಶಿಕ್ಷಣ
ವಿದ್ಯಾರ್ಥಿಗಳಿಗೆ ವಿವರಣೆ ಹೇಳುವ ಇವರು ಈ ಶಿಕ್ಷಣದಲ್ಲೇ ಜುಗುಪ್ಸೆ ಹುಟ್ಟಿಸ
ಬಲ್ಲರು. ಪ್ರಾಯಶಃ ಅಧ್ಯಾಪಕವೃತ್ತಿಗೆ ಯಾರೂ ಆಗಬಹುದೆನ್ನುವ ಮನೋಭಾವ
ಸೈನಿಕರನ್ನೂ ಬಿಟ್ಟಿಲ್ಲವೋ ಏನೋ. ಒಟ್ಟಿನಲ್ಲಿ ಮುಂದಿನ ಶಿಕ್ಷಣಾಧಿಕಾರಿಗಳಿಗೆ ಶಿಕ್ಷಣ
ನೀಡುವುದಕ್ಕೆ NCO, JCOಗಳನ್ನು ನೇಮಿಸುವಲ್ಲಿ ವಿವೇಚನೆ ಅಗತ್ಯವೆನಿಸುವಂತಿದೆ
ಎನ್‌ಸಿಸಿ ಶಿಕ್ಷಣದ ಒಳನೋಟ.

ಎನ್‌ಸಿಸಿ ಶಿಕ್ಷಣ ಕಾಲೇಜುಗಳಲ್ಲಿ ಕಡ್ಡಾಯವಾಗಿ ಬಳಕೆಗೆ ಬಂದಾಗ ವಿದ್ಯಾರ್ಥಿಗಳಲ್ಲಿ
ಅಥವಾ ಪ್ರಾಧ್ಯಾಪಕ ಎನ್‌ಸಿಸಿ ಅಧಿಕಾರಿಗಳಲ್ಲಿ ಇದ್ದ ಉತ್ಸಾಹ ಆಮೇಲೆ ಕಳೆದು
ಹೋದುದು ಸ್ಪಷ್ಟ. ಇದಕ್ಕೆ ಯಾರು ಹೊಣೆ ಎನ್ನುವುದಕ್ಕೆ ಉತ್ತರ 'ಎನ್‌ಸಿಸಿ ದಿನ
ಗಳ'ಲ್ಲಿ ದೊರಕುತ್ತಿದೆ. ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಎನ್‌ಸಿಸಿ ಆರಂಭ
ವಾದಾಗ ಕಾಲೇಜಿನ ವಿದ್ಯಾರ್ಥಿಗಳ ನಿತ್ಯದ ಒಂದು ಅವ್ಯವಸ್ಥೆಯನ್ನು ಸರಿಪಡಿಸಿದುದು
ನನ್ನ ನೆನಪಿಗೆ ಬರುತ್ತಿದೆ. ಮೂರು ಅಂತಸ್ತುಗಳುಳ್ಳ ಕಾಲೇಜು ಕಟ್ಟಡದ ಮೇಲಿನ
ಎರಡು ಅಂತಸ್ತುಗಳನ್ನೇರಲು ಸ್ವಲ್ಪ ಇಕ್ಕಟ್ಟಾದ ಸೋಪಾನ ಮಾರ್ಗವೊಂದಿದೆ. ಒಂದು
ಗಂಟೆಯ ಪಾಠ ಮುಗಿದೊಡನೆಯೇ ವಿದ್ಯಾರ್ಥಿಗಳು ಮೂರನೇ ಮತ್ತು ಎರಡನೇ
ಅಂತಸ್ತುಗಳಿಂದ ಇಳಿಯಲೂ, ಕೆಳಗಿನವರು ಮೇಲೇರಲೂ ಬೇಕಾಗಿದೆ. ಅಲ್ಲಿ ಸದಾ
ನೂಕಾಟ ತಿಕ್ಕಾಟಗಳು ನಡೆಯುತ್ತಿದ್ದುವು. ಜೀಟಿಯವರು ಸಮವಸ್ತ್ರದ ಎನ್‌ಸಿಸಿಗಳ

ಮೂಲಕ ಇದನ್ನು ನಿಯಂತ್ರಿಸಿ keep left ನಿಯಮವನ್ನು ಜಾರಿಗೆ ತಂದರು. ಅವರು ಮಂಗಳೂರನ್ನು ಬಿಡುವವರೆಗೂ ಈ ವ್ಯವಸ್ಥೆ ಚೆನ್ನಾಗಿ ಇದ್ದಿತು. ಆದರೆ ಆಮೇಲೆ ?

ಜೀಟಿಯವರು ನಾಯಕರಾಗಿ ದಕ್ಷಿಣ ಕನ್ನಡ, ಮಡಿಕೇರಿ ಮೈಸೂರು, ಬೆಂಗಳೂರು ಗಳಲ್ಲಿ ಭಾಗವಹಿಸಿದ ವಾರ್ಷಿಕ ಶಿಬಿರಗಳೆಷ್ಟೋ! ಹತ್ತಿ ಇಳಿದ ಗುಡ್ಡಗಳೆಷ್ಟೋ! ಪಥ ಚಲನೆ ನಡಿಸಿದ ದೂರವೆಷ್ಟೋ! ಅಭ್ಯಾಸಕ್ಕಾಗಿ ವಿದ್ಯಾರ್ಥಿಗಳನ್ನು ಏರಿಸಿ ಇಳಿಸಿದ ಶಿಲೆಗಳೆಷ್ಟೋ! ಮಂಗಳೂರಿನ ಮೈದಾನದಿಂದ ಆರಂಭಿಸಿ ಮಡಿಕೇರಿಯನ್ನು ಹತ್ತಿ ಬೆಂಗಳೂರು ಸೇರಿ ಕುದುರೆಮುಖವನ್ನೇರಿಯೂ ಮನತಣಿಯದೆ, ಹಿಮಾಲಯದ ಬೆನ್ನು ಹತ್ತಿ ಗೌರೀಶಂಕರ ಶಿಖರದ ಕನಸು ಕಂಡದ್ದೆಲ್ಲ ಈ 'ಎನ್‌ಸಿಸಿ ದಿನಗಳ' ಕತೆ. ಇದರಲ್ಲಿ ಶಿಬಿರ ನಡೆಸಬೇಕಾದವರು ಗಮನಿಸಬೇಕಾದ ಸ್ಥಳದ ಆಯ್ಕೆ, ಊಟದ ವ್ಯವಸ್ಥೆ, ಸ್ನಾನ ಶೌಚಾದಿಗಳ ಅನುಕೂಲತೆ, ಶಿಕ್ಷಣ ವಿವರ, ಕೆಲವು ವೇಳೆ ಎದುರಿಸಬೇಕಾದ ಅನಿರೀಕ್ಷಿತ ಸಮಸ್ಯೆಗಳು ಎಲ್ಲವೂ ವಿವರ ವಿವರವಾಗಿ ಇವೆ. ಒಂದೊಂದು ಸನ್ನಿವೇಶದ ನಿರೂ ಪಣೆಯೂ ಒಂದೊಂದು ರಸಪ್ರಸಂಗವಾಗಿ ಮಾರ್ಪಟ್ಟಿದೆ. ಲಘುಹಾಸ್ಯ ವಿಡಂಬನದಿಂದ ಕೂಡಿದ ವಾಸ್ತವದ ಸವಿವರ ಚಿತ್ರಣ.

ಸಮವಸ್ತ್ರ, ಪ್ರಭಾವ ಬೀರುವ ಸಮಪಾದ ಚಲನೆ, ಕಾಲನಿಷ್ಠೆ, ವಿಧೇಯತೆ, ವಿನಯ ಶಿಸ್ತು ಮುಂತಾದವು ಎನ್‌ಸಿಸಿಯ ಮೂಲಾಧಾರಗಳಾದರೂ ಇವುಗಳ ಹಿನ್ನೆಲೆಯ ಅನುಕೂಲ ಮನೋವೃತ್ತಿ ಪ್ರತಿಯೊಬ್ಬ ಎನ್‌ಸಿಸಿ ಸದಸ್ಯನಲ್ಲೂ ಇಲ್ಲವಾದರೆ ಎನ್‌ಸಿಸಿಯ ಶ್ರಮ ನಿಷ್ಫಲ. ದೇಶಪ್ರೇಮ, ನಾವೊಂದು ಮಹಾರಾಷ್ಟ್ರದ ಪ್ರಜೆಗಳು ಎನ್ನುವ ಭಾವನೆ, ವ್ಯಕ್ತಿ ಸಮಾಜಗಳು ಒಂದಕ್ಕೊಂದು ಪೂರಕವೆನ್ನುವ ಹಿರಿಯ ದೃಷ್ಟಿ —ಮುಂತಾದ ಜೀವನದ ಮೌಲ್ಯಗಳ ವಿಶಾಲ ಪ್ರಜ್ಞೆ ಇಲ್ಲದವರು ಎನ್‌ಸಿಸಿ ಸೇರು ವುದು ವ್ಯರ್ಥ. ಎನ್‌ಸಿಸಿ ಬಿಟ್ಟ ಮರುದಿನ ಶ್ವಾನಲಾಂಗೂಲವಾಗುವುದಿದ್ದರೆ ಎನ್‌ಸಿಸಿ ಕೇವಲ ಧನನಷ್ಟ, ವ್ಯರ್ಥ ಕಾಲಯಾಪನೆ ಮತ್ತು ವಯೋಹಾನಿ. ಈ ಎನ್‌ಸಿಸಿ ಸಂಹಿತೆ ಮನನ ಮಾಡಿಸುವ ಸಮಗ್ರದೃಷ್ಟಿ, ಎನ್‌ಸಿಸಿ ಕಾರ್ಯನಿರತರಿಗೆ ಮಾರ್ಗದರ್ಶಕವೆನ್ನು ವುದು ನಿಸ್ಸಂಶಯ. ಸಾಮಾನ್ಯರಿಗೆ ಆಸಕ್ತಿ ಹುಟ್ಟಿಸುವಂತಿದೆ. ಪೂರ್ಣಾವಧಿಯ ಕಮಿಷನ್ ಅಧಿಕಾರಿಗಳಿಗೆ ಮತ್ತು ಎನ್‌ಸಿಸಿಯ ಧೋರಣೆಗಳನ್ನು ರೂಪಿಸತಕ್ಕ ಅಧಿಕಾರಿಗಳನ್ನು ನೇಮಿಸುವ ಹೊಣೆ ಹೊತ್ತವರಿಗೆ ವಿವೇಕ ಪ್ರಜ್ಞೆಗಳನ್ನೂ ಮೂಡಿಸುವಲ್ಲಿ ಶಕ್ತವಾದರೆ ಜೀಟಿಯವರ ಈ ಪ್ರಾಮಾಣಿಕ ಯತ್ನ ಸಫಲ. ಎನ್‌ಸಿಸಿಯ ಯಶಸ್ಸು ಪೂರ್ಣಾ ವಧಿಯ ಸೇನಾಧಿಕಾರಿಗಳ, ಕಾಲೇಜಿನ ಅಧಿಕಾರಿಗಳ ಮತ್ತು ಎನ್‌ಸಿಸಿ ಸೇರುವ ವಿದ್ಯಾರ್ಥಿಗಳ ಮನಃಪೂರ್ವಕ ಸಹಕಾರದಿಂದ ಮಾತ್ರ ಸಾಧ್ಯವೆನ್ನುವುದು ಸ್ವತಸ್ಸಿದ್ಧ.

ಈ ಗ್ರಂಥದಲ್ಲಿ ಎದ್ದುಕಾಣುವ ವೈಶಿಷ್ಟ್ಯ, ಪ್ರಾಮಾಣಿಕತೆ ಮತ್ತು ಸಂಯಮ. ವ್ಯಕ್ತಿಚಿತ್ರಗಳನ್ನು ಕೊಡುವಲ್ಲಿ ಸಲ್ಲಬೇಕಾದೆಡೆ ಕ್ರಿಯಾಶೀಲತೆಗೆ ಗಮನವೂ, ಕ್ರಿಯಾ ಲೋಪಗಳಿಗೆ ದಮನವೂ ಏಕಪ್ರಕಾರವಾಗಿ ಸಂದಿವೆ. ಕ್ಯಾಪ್ಟನ್ ದೊರೈರಾಜ್, ಶರಾವತಿಯ ಕಾರ್ಗಲ್ಲ ಶಿಬಿರದ ಕಮಾಂಡೆಂಟ್ ಪ್ರಕರಣ, ಮೇಜರ್ ನಾರಾಯಣ್‌ಸಿಂಗರ ಘನ ವ್ಯಕ್ತಿತ್ವ ಇವು ಉದಾಹರಣೆಗಳಾಗಿ ನಿಲ್ಲಬಲ್ಲವು. ಎನ್‌ಸಿಸಿ ಅಧಿಕಾರಿಗಳಲ್ಲಿ ಜನಾರ್ದನ ಬಾಳಿಗರಂಥ ಕೇವಲ ಕೆಲವರು ಮಾನವನ ಮೌಲ್ಯಕ್ಕೆ ಗರಿಷ್ಠ ಬೆಲೆಯಿತ್ತು

ನಡೆಸಿಕೊಂಡುಹೋದ ಸನ್ನಿವೇಶಗಳನ್ನು ಮುಕ್ತಮನದಿಂದ ಶ್ಲಾಘಿಸಿರುವರು. JCO ಅಬ್ದುಲ್‌ಖಾದರ್ ವ್ಯಕ್ತಿತ್ವ ಹೃದಯಂಗಮವಾಗಿದೆ.

ಜೇಟಿಯವರಿಗೆ ಪ್ರಾಧ್ಯಾಪಕ ವೃತ್ತಿ ರೈಲುಮಾರ್ಗ. ಎನ್‌ಸಿಸಿ ಆದರೆ ಒತ್ತಿನ ಕಾಲು ದಾರಿ. ಸಹಕಾರ ಸಂಘ ಸಾಹಿತ್ಯಗಳು ಕಟ್ಟೆಗಳು. ಶ್ರಮಸಾಧ್ಯ ನಡಿಗೆಯಿಂದ ಕಾಲು ದಾರಿಯಲ್ಲಿ ಕಟ್ಟೆಪೂಜೆಸಲ್ಲಿಸುತ್ತ ನಡೆದೂ ಮಾನಸಗಂಗೋತ್ರಿಯ ಶಾರದೆಯ ದೇಗುಲದಲ್ಲಿ ಅರ್ಚಕರಾದ ಅವರ ದೀರ್ಘ ಹಾಗೂ ಪವಿತ್ರಯಾತ್ರಾಸಾಹಿತ್ಯ ಈ ಗ್ರಂಥ.

ಜೇಟಿಯವರ ಶೈಲಿ ಏಕಭಾಷಾ ಕಟ್ಟುಪಾಡುಗಳನ್ನು ಮಿಕ್ಕಿ ಹರಿದಿದೆ. ದಿವ್ಯ ನಿರ್ಲಕ್ಷ್ಯ, ಅನನುಕೂಲ ಎತ್ತರ, ಶುಭಪ್ರಾತಃಕಾಲ, ಅಮಂಗಳಕರ ಪ್ರಾತಃಕಾಲ, ಬಿಗಿಸರಿಗೆಯ ಮೇಲಿನ ನಡಿಗೆ, ಮಂಗಳ ಪ್ರಾತಃಕಾಲ, ಕುರುಡು ಬಿಂದು, ಕಡಿಮೆ ಎತ್ತರ, ಶಿಸ್ತಿನಲ್ಲಿ ಬಡಿಸುವ ಬಿಂದುಗಳು, ನರಕ ಅಲುಗಾಟ, ೫೦ರ ತಪ್ಪು ಮುಗ್ಗುಲು, ಅನನುಕೂಲ ಮೂತ್ರಿ—ಈ ಪದಗುಚ್ಛಗಳಲ್ಲಿ ಪ್ರಾಯಶಃ ಹದ್ದುಮೀರಿದ ಆಂಗ್ಲಭಾಷಾ ಪ್ರಭಾವ ಕಂಡುಬರುತ್ತಿದೆ. ಸಾನುಮೋದನೆ, ನಿಗಮನ, ಅಮನಸ್ಸಾಕ್ಷಿ, ಗುಡ್ ಈವ್ನಿಂಗ್ ಮಾನ್ಯರೆ, ಸೆಲ್ಯೂಟಿಸು, ಊಟ ಫಸ್ಟ್ ಡ್ಯೂಟಿ ಲಾಸ್ಟ್, ಆಮೀಕರಣ ಮುಂತಾದವು ಕಸಿ ಪದಗಳ ವಿಶೇಷ ಪ್ರಯೋಗಗಳು. ಚವೋ ಚಪೋ, ಉರುಚು, ಪದರುಡು, ಬಗೆತರೆ—ಇವು ಇವರು ಭಾಷೆಯಲ್ಲಿ ಹೆಣೆದಿರುವ ತುಳು ಪದಗಳು. ಬೇರೆ ಭಾಷೆಯಲ್ಲೂ ಇವು ಇರಬಹುದು.

ಏಕಭಾಷಾಪದ, ಸಮಾಸ ಮತ್ತು ಮಿತಿಮೀರಿದ ವ್ಯಾಕರಣ ನಿರ್ಬಂಧಗಳ ತೊಡಕುಗಳನ್ನು ಕಿತ್ತೊಗೆದಿರುವ ಇದೊಂದು ಮುಕ್ತ ಶೈಲಿ.

ವಿಚಾರಮಾಡಿ ಅರ್ಥಮಾಡಿಕೊಳ್ಳಬೇಕಾದ ವಾಕ್ಯಗಳು :

ಕಡತಗಳ ಅಂತರಾಳದ ಕತ್ತಲೆಯ ಡೊಂಕಿನ ಅನನುಕೂಲ ಮೂಲೆಯಲ್ಲಿ ಏಕಾಣು ಜೀವಿಯಾಗಿ ರೂಪುತಳೆದ ನಿಯಮ ಬಲುಬೇಗ ಬೆಳೆದು ಅಕ್ಟೋಪಸ್ ಸರ್ವವ್ಯಾಪ್ತಿಯನ್ನೂ ಸರ್ವಗ್ರಾಹಿತ್ವವನ್ನೂ ಸಾಮರ್ಥ್ಯವನ್ನೂ ಪಡೆದು ವ್ಯಕ್ತಿಯನ್ನು ಯಾಂತ್ರಿಕ ಕ್ರಿಯೆ ಎಸಗುವ ಒಂದು ಉಪಕರಣವನ್ನಾಗಿ ಮಾಡಿಬಿಡುತ್ತದೆ.

ಪಡುವಣ ತೆರೆಯಲ್ಲಿ ಶುಕ್ರ ಶನಿ ಒಟ್ಟಾಗಿ ಕಾಂತಿಬೀರಿ ನಕ್ಕವು. ಮಹಾವ್ಯಾಧ ಮತ್ತು ಮಹಾಶ್ವಾನಗಳೊಳಗೂಡಿ ವೃಷಭವನ್ನು ನೀರಿನೆಡೆಗೆ ಅಟ್ಟುವ ಚಿರಂತನ ನಾಟಕ ಆಗ ಪ್ರದರ್ಶಿತವಾಗತೊಡಗಿತು. ಡಯಾನಾದೇವಿ (ಚಂದ್ರ) ತನ್ನ ಪ್ರೇಮಿ ಮಹಾವ್ಯಾಧನ ಸಮಾಗಮಕ್ಕಾಗಿ ಮಂದಹಾಸದ ಪ್ರಭೆಯನ್ನು ಸೂಸಿ ಬರುತ್ತಿದ್ದ ಇನ್ನೊಂದು ನಾಟಕವೂ ಸಿದ್ಧವಾಗುತ್ತಿತ್ತು. ಮಿಥುನರಾಶಿಯ ಹೊಸ್ತಿಲಲ್ಲಿ ನಿಂತಿದ್ದ ಬೆಳಕಿನ ಉಂಡೆ ಗುರು ಇನ್ನೊಂದು ಅದ್ಭುತ ದೃಶ್ಯ.

ಕಾಲಾಕ್ಷದ ಋಣ ದಿಶೆಗೆ ಸಾಗಿ ಮುಂದೆಂದೂ ಮರಳದು.

ಧ್ವನಿಸಂಪುಟದ ಸೂಜಿಮೊನೆ ಮಾತಿನ ಗಾನದೋಸೆಯ ಕೊನೆಯ ವರ್ತುಲೀಯ ಗೀರನ್ನು ಮುಟ್ಟಿತು.

ಯಂತ್ರಬ್ರಹ್ಮ ಆಸ್ಫೋಟಿಸುತ್ತಿರುವ ಈ ಮಹಾ ಬೋಗುಣಿಯಲ್ಲಿ ಮಾನವ ಬದುಕಿ ಉಳಿದಾನೇ ?

ಮೈಕಾಬರನ ಈ ಅಂಶ ನಮ್ಮಲ್ಲೆಲ್ಲರಲ್ಲೂ ಇಲ್ಲದಿದ್ದರೆ ಇಂದಿನ ಬರಡು ದಾರಿಯು ನಡಿಗೆ ದುಸ್ಸಹವಾದೀತು.

ಇಂತಹ ಕೆಲವು ವಾಕ್ಯಗಳು ಗಣಿತ, ವಿಜ್ಞಾನ, ಖಗೋಳಶಾಸ್ತ್ರಗಳ ಮೋಹ, ಪರಿಚಯವಿದ್ದವರಿಗೆ ಮಾತ್ರ ಸುಲಭವಾಗಿ ಅರ್ಥವಾಗಬಲ್ಲವು.

ಮಾತಿನ ಮಾಣಿಕ್ಯಗಳು

ಅರ್ಹತೆ ಪಡೆದು ತಿನ್ನಿ ಗಂಜಿಯಲ್ಲಿ ಷಡ್ರಸಗಳು ಒಸರುತ್ತವೆ, ಅರ್ಹತೆ ಪಡೆಯದೆ ಮುಕ್ಕಿ ಮೃಷ್ಟಾನ್ನದಲ್ಲಿ ಹಾಗಲಕಾಯಿ ನುಸುಳುತ್ತದೆ.

ಶಿಕ್ಷಣಕ್ಕಿಂತಲೂ ಭಕ್ಷಣವೇ ಪರಮೋದ್ದೇಶ.

ನ್ಯಾಯದ ದಾರಿಯನ್ನು ಅನುಕಂಪದ ಇಟ್ಟಿಗೆಯಲ್ಲಿ ಕಟ್ಟಿಲ್ಲ.

ಬಗ್ಗಿ ಸಲಾಂ ನೀಡುವುದು ನಿಮ್ಮ ಕರ್ತವ್ಯ. ಅದಕ್ಕೆ ಹಲ್ಕಿರಿದು ಸಹ ಪ್ರತಿಕ್ರಿಯೆ ತೋರದಿರುವುದು ನನ್ನ ಅಂತಸ್ತು.

ದುಡ್ಡು ಕೊಡುವವನ ಸಂಕಟ ವೆಚ್ಚ ಮಾಡುವವನಿಗೆ ತಿಳಿಯದು ; ವೆಚ್ಚ ಮಾಡುವವನ ತಾಪತ್ರಯ ದುಡ್ಡು ಕೊಡುವವನಿಗೆ ತಿಳಿಯದು.

ಹೋತನ ಯೋಚನೆ ಮಾರಿ ತನ್ನನ್ನೇ ದಿಟ್ಟಿಸುತ್ತಿದೆಯೆಂದು.

ಕಡ್ಡಾಯದ ಗುಡಿಯಲ್ಲಿ ಮೊದಲ ಬಲಿ ಕುತೂಹಲ.

ಹಾವು ಕಚ್ಚಲು ಬಂದಾಗ ಹೊಡೆಯುವುದು ಕೈಗಳ ಕೆಲಸ ; ಆ ಮೊದಲೇ ವಿಚಾರಿಸಿ ನಿರ್ಧಾರವನ್ನು ಅಪ್ಪಣೆ ಕೊಡುವುದು ಮಿದುಳಿನ ಕೆಲಸ. ಕೈಗಳೇನಾದರೂ ವಿಚಾರಿಸಲಾರಂಭಿಸಿದರೆ ?

ಈ ಮುನ್ನುಡಿಯನ್ನು ಬರೆಯಲಿರುವ ಒಂದೇ ಒಂದು ಅರ್ಹತೆ ಜೀಟಿಯವರ ಮತ್ತು ನನ್ನ ಬಹುಕಾಲದ ಗೆಳೆತನ, ಅವರ ಸೌಜನ್ಯ. ಕನ್ನಡ ಜನ 'ಎನ್‌ಸಿಸಿ ದಿನಗಳು' ಗ್ರಂಥವನ್ನು ಸ್ವಾಗತಿಸುವಂತಾಗಲಿ.

ಮಂಗಳೂರು
೧೭-೭-೧೯೭೨

ಬಿ. ವಿ. ಕೆದಿಲಾಯ

ಶ್ರೀ ಕೆದಿಲಾಯರು (ಜನನ ೨೧-೫-೧೯೧೧) ದಿನಾಂಕ ೨೯-೮-೧೯೯೩ರಂದು ವಿಧಿವಶರಾದರು.

ಅರಿಕೆ

ನ್ಯಾಷನಲ್ ಕ್ಯಾಡೆಟ್ ಕೋರ್ (ಎನ್‌ಸಿಸಿ) ಸಂಸ್ಥೆಯಲ್ಲಿ ನಾನೊಬ್ಬ ಆಫೀಸರ್ ಆಗಿ ೧೯೫೨ರಿಂದ ೧೯೬೪ರ ತನಕ ಕೆಲಸ ಮಾಡಿದೆ. ಅಲ್ಲಿ ನನಗೆ ಲಭಿಸಿದ ಅನುಭವಗಳ ನಿರೂಪಣೆ ಈ ಪುಸ್ತಕ. ಘಟನೆಗಳ ಯಥಾರ್ಥ ವರದಿಗೆ ಪ್ರಾಧಾನ್ಯ ಸಲ್ಲಬೇಕು, ಓದು ಗರಿಗೆ ವಿಷಯಗ್ರಹಣ ಸುಲಭವಾಗುವಷ್ಟರ ಮಟ್ಟಿಗೆ ಮಾತ್ರ 'ನಾನು' ಅಂಶ ಹಿನ್ನೆಲೆ ಯಲ್ಲಿ ಇರಬೇಕು ಎಂಬ ನಿಯಮಗಳನ್ನು ವಿಧಿಸಿಕೊಂಡು ಈ ಪುಟಗಳನ್ನು ಬರೆದಿದ್ದೇನೆ. ಎನ್‌ಸಿಸಿ ದಿನಗಳ ಈ ಸಂಜಯಾನುಭವ ನನಗೆ ಸಂತೋಷ ನೀಡಿದೆ.

೧೯೭೧ರ ತರುಣದಲ್ಲಿ ಇಂಥ ಒಂದು ಪುಸ್ತಕವನ್ನು ಬರೆಯುವ ಹುಚ್ಚು ಮೊಳೆ ಯಿತು. ಉದ್ಯೋಗನಿಮಿತ್ತ ನನ್ನ ಸಹವಾಸಸುಖವನ್ನು ಅನುದಿನ ಅನುಭವಿಸಲೇ ಬೇಕಾಗಿರುವ ಸರ್ವಶ್ರೀ ಎನ್. ಪ್ರಹ್ಲಾದರಾವ್, ಕೆ. ಟಿ. ವೀರಪ್ಪ, ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಈ ಮಹನೀಯರು ಮೊಳಕೆಗೆ ನೀರೆರೆದು ಸಸಿ ಮಾಡಿದರು. ಮನೆಯಾಕೆ ಮತ್ತು ಮಕ್ಕಳು ಗೊಬ್ಬರ ಹಾಕಿ ಕೃಷಿ ಮಾಡಿದರು. ಅಂತೂ ಈ ಭೀಮ ರನ್ನು ಬೆಂಬತ್ತಿದ್ದ ಪುರುಷಾಮೃಗವಾದ ನನಗೆ ಈ ಪಿತೂರಿ ಆಂಜನೇಯ ರೋಮದರ್ಶನ ಮಾಡಿಸಿತು. ಆದ್ದರಿಂದ ಅವರಿಗೆ ತಾತ್ಕಾಲಿಕ ರಕ್ಷೆ ಒದಗಿತು, ನಿಜ ಆದರೆ ಬೇಗನೆ ಇದನ್ನು ಬರೆದು ಮುಗಿಸಿದೆ (೧೯೭೧).

ಹಸ್ತಪ್ರತಿಯನ್ನು ಗೀಚುತ್ತಿದ್ದಂತೆಯೇ ಅದನ್ನು ಓದಿ ಹೇಳುವ (ಕೇಳುವ) ಚಪಲ ನನಗೆ. ಈ ಪ್ರಯೋಗಕ್ಕೆ ಪುಕ್ಕಟೆ ಮೊದಲು ಸಿಕ್ಕುವ ಯಜ್ಞಪಶು ಕರಿಮಣಿ ಕಟ್ಟಿಸಿ ಕೊಂಡು ಸಹದುಃಖಿಯಾಗಿರುವವಳಲ್ಲದೇ ಬೇರೆ ಯಾರು ತಾನೇ ಆಗಿರಲು ಸಾಧ್ಯ ? ನಿಷ್ಠುರ ಸತ್ಯವನ್ನು ಪ್ರಾಮಾಣಿಕವಾಗಿಯೂ ನೇರವಾಗಿಯೂ ಹೇಳಲು ಅವಳಿಗಿಂತ ಹೆಚ್ಚಿನ ಸೌಲಭ್ಯ, ಹಕ್ಕು ಬೇರಾರಿಗಿವೆ ?

ನನ್ನ ಕಾಕಲಿಪಿರಂಜಿತ ಹಸ್ತ ಪ್ರತಿಯ ಮೇಲೆ ತಿರುಗಾ ಮುರುಗಾ ಮಾಡಿ ಗೀಚಿದ್ದ ಪರಿಚ್ಛೇದಗಳ ನಡುವೆ ದಾರಿ ತಪ್ಪದೆ ಎಳೆ ಹಿಡಿದು ಸಾಗಿ ದಿನ ದಿನ ಶ್ರದ್ಧೆ ಉತ್ಸಾಹ ಗಳಿಂದ ಬೆರಳಚ್ಚಿನ ಶುದ್ಧ ಪ್ರತಿ ಮಾಡಿಕೊಟ್ಟವರು ಶ್ರೀಮತಿ ಯಶೋದಮ್ಮನವರು.

ಹೀಗೆ ತಯಾರಾಗುತ್ತಿದ್ದ ಕಂತೆಗಳನ್ನು ಅಂದಂದೇ ಓದಿ "ಬೋರಿಕೆ ಬಾರದು, ತಲೆ ತುರಿಕೆ ತಾರದು, ಚೆನ್ನಾಗಿದೆ" ಎಂದು ಮುಂತಾಗಿ ಹೊಗಳಿ ನನ್ನ ಲೇಖನಿಗೆ ಶಾಯಿ ತುಂಬಿ ನೂಕುಬಲ ಒದಗಿಸಿದವರು ಶ್ರೀ ಮತ್ತು ಶ್ರೀಮತಿ ಎಚ್. ಜಿ. ಸೂರ್ಯನಾರಾ ಯಣರಾಯರು (ಪುಟ ೩೦೪) ಹಾಗೂ ಶ್ರೀಮತಿ ಆನಂದಮ್ಮ ಶೇಷಾದ್ರಿಯವರು.

"ಇದು ಎಷ್ಟೇ ದೊಡ್ಡ ಗ್ರಂಥವಾಗಲಿ, ಇದರ ಪ್ರಕಟಣೆಯ ಹೊಣೆ ನನಗಿರಲಿ" ಎಂದು ಬರೆಯಲು ತೊಡಗುವ ಮೊದಲೇ ಕುಮ್ಮಕ್ಕು ನೀಡಿದವರು, ಬರೆದಾದ ಮೇಲೆ ಇದಕ್ಕೆ "ಎನ್‌ಸಿಸಿ ದಿನಗಳು" ಎಂದು ಅರ್ಥಪೂರ್ಣ ನಾಮಕರಣ ಮಾಡಿದವರು, ಇದರ ಅಂದಚಂದಗಳಿಗೆ ಕಾರಣರಾದವರು ಆಪ್ತ ಮಿತ್ರರಾದ ಶ್ರೀ ಡಿ. ವಿ. ಕೆ. ಮೂರ್ತಿಯವರು.

ಶ್ರೀ ಡಿ. ವಿ. ಕೆ. ಮೂರ್ತಿಯವರ ಮತ್ತು ನನ್ನ ಒಲವು ನಿಲವುಗಳ ಸೂಕ್ಷ್ಮವನ್ನು ಚೆನ್ನಾಗಿ ಗ್ರಹಿಸಿ ಈ ಪುಸ್ತಕವನ್ನು ಆಕರ್ಷಕವಾಗಿ ಮುದ್ರಿಸಿದವರು ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರು ಹಾಗೂ ಅವರ ಅನುಯಾಯಿಗಳು.

ಮುದ್ರಣ ದಿವಸಗಳಲ್ಲಿ ಕರಡು ತಿದ್ದುವುದು ಸಾಗಿಸುವುದು ಇವೇ ಮುಂತಾದ ಬಿಟ್ಟಿ ಕೆಲಸಗಳನ್ನು ಮಾಡಿದವರು ನಮ್ಮ ಮಕ್ಕಳು ಅಶೋಕ, ಆನಂದ, ಅನಂತ.

ಇದರಲ್ಲಿ ಅಚ್ಚಾಗಿರುವ ಚಿತ್ರಗಳಲ್ಲಿ ಕೆಲವನ್ನು ಕೊಟ್ಟು ಉಪಕರಿಸಿದವರು ಎನ್‌ಸಿಸಿ ಡೈರೆಕ್ಟೊರೇಟಿನ (ಕರ್ನಾಟಕ) ಮೇಜರ್ ಸಿ. ಎಂ. ದೇವಯ್ಯ, ೧೨ನೆಯ ಕರ್ನಾಟಕ ಎನ್‌ಸಿಸಿಯ ಕ್ಯಾಪ್ಟನ್ ಡಿ. ಎಸ್. ಕಣ್ಣನ್, ೩೦ನೆಯ ಕರ್ನಾಟಕ ಎನ್‌ಸಿಸಿಯ ಮೇಜರ್ ಇ.ಎಸ್. ಕೃಷ್ಣಯ್ಯ ಮತ್ತು ೧೬ನೆಯ ಕರ್ನಾಟಕ ಎನ್‌ಸಿಸಿಯ ಕ್ಯಾಪ್ಟನ್ ಎಚ್. ಎನ್. ಅಶ್ವತ್ಥನಾರಾಯಣ. ನನ್ನನ್ನು ಎನ್‌ಸಿಸಿಗೆ ತಳ್ಳುವುದರಲ್ಲಿ ಪ್ರಧಾನ ಪಾತ್ರ ವಹಿಸಿದವರಲ್ಲೊಬ್ಬರಾದ ಪ್ರೊ॥ ಬಿ. ವಿ. ಕೆದಿಲಾಯರು ನನ್ನ ಕೆಲವು ಹಾರಾಟಗಳನ್ನು ಪ್ರತ್ಯಕ್ಷ ಕಂಡವರು, ಕೇಳಿದವರು. ಈಗ ಅವುಗಳ ವರದಿಯನ್ನು ಓದಿ ತಮ್ಮ ಎಂದಿನ ಬಿಚ್ಚು ಮನಸ್ಸಿನ ಮಾತಿನಲ್ಲಿ ಮುನ್ನುಡಿಯನ್ನು ಬರೆದಿದ್ದಾರೆ.

ಇವರೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು. ಇನ್ನು, ಈ ಪುಸ್ತಕವನ್ನು ಪೂರ್ತಿ ಓದುವುದೇ ಸರಿ ಎಂದು ನೀವು ಛಲ ತೊಟ್ಟು ಆ ಕೆಲಸವನ್ನು ಪೂರೈಸಿಯೇ ಬಿಟ್ಟರೆ ಆಗ ನಿಮಗೆ ಸಹ ನನ್ನ ಧನ್ಯವಾದಗಳು. ಅಡುಗೆಯ ಯಶಸ್ಸು ಊಟದಲ್ಲಿ ತಾನೇ!

ಜಿ. ಟಿ. ನಾರಾಯಣರಾವ್

ಅತ್ರಿ, ಎಂಟನೆಯ ಕ್ರಾಸ್
ಸರಸ್ವತೀಪುರ, ಮೈಸೂರು ೯
೧೫ನೆಯ ಆಗಸ್ಟ್ ೧೯೭೨

ಎರಡನೆಯ ಆವೃತ್ತಿಗೆ ಮೊದಲನೆಯ ನುಡಿ

೧೯೯೬. ಈಗ ನನಗೆ ವಯಸ್ಸು ೭೦ ದಾಟಿದೆ. ಮನೋದೈಹಿಕಾರೋಗ್ಯ ಸಂದೃಢವಾಗಿದೆ. ನಿಸರ್ಗದತ್ತ ಉಲ್ಲಾಸಕ್ಕೆ ಹೊಸ ಗರಿ ಚಿಗಿತಿದೆ : ಯಾವ ಹೊಣೆಯೂ ಇರದ ದೇಶ–ಕಾಲ–ಅರ್ಥ ಸರ್ವಮುಕ್ತತೆ! ಎಂದೇ ಇಂದು ನಾನು ಅಧಿಕ ಕಾರ್ಯಪ್ರವೃತ್ತನಾಗಿದ್ದೇನೆ. "ಇರಬೇಕು ಇರದಿರಬೇಕು ಸಂಸಾರದಿ ಜನಕಾದಿ ಋಷಿಗಳಂತೆ..." ಎಂಬ ಪುರಂದರವಾಣಿಯ ಅರ್ಥ ಈಗ ಹಿಂದೆಂದಿಗಿಂತಲೂ ಚೆನ್ನಾಗಿ ಆಗುತ್ತಿದೆ.

ನಡೆದು ಬಂದ ಹಾದಿಯನ್ನು ಇಂದಿನ ನಿರಪೇಕ್ಷ ಔನ್ನತ್ಯದಿಂದ ಸಿಂಹಾವಲೋಕಿಸಿದಾಗ ಎದ್ದು ಕಾಣುವುದು ಒಂದೇ ಒಂದು ಸಂಗತಿ: ವ್ಯಕ್ತಿಯ ಜೀವನದಲ್ಲಿ ಆಕಸ್ಮಿಕತೆಗಳ ಪಾತ್ರ. ಇದರ ಕಾರಣವೂ ನನಗೆ ಗೊತ್ತಿದೆ. ವಿಶ್ವವೆಂಬ ನಿರಂತರ ಕ್ವಥನ ಭಾಂಡದಲ್ಲಿ ಸದಾ ಕ್ರಿಯಾಶೀಲವಾಗಿರುವ ಬಲಗಳ ವೈವಿಧ್ಯ, ತೀವ್ರತೆ, ಸ್ವರೂಪ ಮುಂತಾದವು ಎಂದೂ ಮಾನವನ ಅಳವಿಗೆ ಬಾರವು. ಅಂದಮಾತ್ರಕ್ಕೆ ವ್ಯಕ್ತಿ ಉತ್ತರಕುಮಾರನಾಗತಕ್ಕದ್ದಲ್ಲ, ಅರ್ಜುನ ವಿಷಾದಯೋಗ ಅಧ್ಯಾಯ ಪ್ರವೇಶಿಸತಕ್ಕದ್ದಲ್ಲ. ವರ್ತಮಾನದಲ್ಲಿ ಪ್ರಾಮಾಣಿಕವಾಗಿಯೂ ತೀವ್ರವಾಗಿಯೂ ಬಾಳಲು ಪ್ರಯತ್ನಿಸುವುದೊಂದೇ ಅವನಿಗಿರುವ ಸ್ವಾತಂತ್ರ್ಯ. ಇದರ ಸಮರ್ಥನೆಗೆ ದೇವರ ಪರಿಕಲ್ಪನೆ ಅನಗತ್ಯ. ಏಕೆಂದರೆ ಬಿಡಿ ವ್ಯಕ್ತಿಗಳ ಲಂಚರುಷುವತ್ತುಗಳಿಗೆ (ಗಂಭೀರ ಪದಗಳಲ್ಲಿ ಹರಕೆ ಕಾಣಿಕೆ) ಒಲಿಯುವ (ಹಾಗೆಂದು ಜನ ನಂಬಿ ವರ್ತಿಸುತ್ತಿರುವ) ಈ ದೇವರೆಂಬ ಮಾನವ ಕಲ್ಪನೆ ನನ್ನ ಮಟ್ಟಿಗೆ ಪೂರ್ತಿ ಅನಾವಶ್ಯಕ.

ನನ್ನ ಜೀವನದಲ್ಲಿಯ ಪ್ರಮುಖ ಆಕಸ್ಮಿಕತೆಗಳಿವು : ೧೯೨೬ ನನ್ನ ಹುಟ್ಟು, ೧೯೪೭ ನಾನು ಪಡೆದ ಪದವಿ ಹಾಗೂ ನನಗೆ ದೊರೆತ ವೃತ್ತಿ, ೧೯೫೨ ಎನ್‌ಸಿಸಿಗೆ ನನ್ನ ದಾಖಲಾತಿ, ೧೯೬೯ ಎನ್‌ಸಿಸಿಯಿಂದ ಬಿಡುಗಡೆ ಮತ್ತು ಕನ್ನಡ ವಿಶ್ವಕೋಶಕ್ಕೆ ಆಹ್ವಾನಿತನಾಗಿ ಸೇರ್ಪಡೆ, ೧೯೮೬ ಅರುವತ್ತು ತುಂಬಿದಾಗ ವಿಶ್ವವಿದ್ಯಾಲಯದ ನಿಬಂಧನೆಗಳ ಪ್ರಕಾರ ವೃತ್ತಿನಿವೃತ್ತಿ, ೧೯೮೬ರಿಂದೀಚೆಗೆ ಸ್ವಂತಾಸಕ್ತಿಗಳ (ಮೌಲ್ಯಗಳ) ಅವಿಚ್ಛಿನ್ನ ಅಭಿಸರಣೆ. ಕನ್ನಡದಲ್ಲಿ ವಿಜ್ಞಾನ ವಾಙ್ಮಯ ರಚನೆ ಈಗ ನನ್ನ ಪೂರ್ಣ ಕಾಲಾಸಕ್ತಿ ಮತ್ತು ವೃತ್ತಿ.

೧೯೭೧. ಎನ್‌ಸಿಸಿಯಿಂದ ದೂರವಾಗಿ ಕೇವಲ ಎರಡು ವರ್ಷಗಳು ಸಂದಿದ್ದುವು. ಆದ್ದರಿಂದ ಆ ದೃಶ್ಯಗಳು, ಬಿಡಿ ವಿವರಗಳ ಸಹಿತ, ಇನ್ನೂ ಹಸುರಾಗಿದ್ದುವು. ಅಲ್ಲದೇ ಅವುಗಳಿಂದ "ನಾನುತನ" ಅಥವಾ ಅಹಂಭಾವ ಪೂರ್ತಿ ಮಸಳಿತ್ತು. ಆಗ ಬರೆದ "ಎನ್‌ಸಿಸಿ ದಿನಗಳು"—ಅನುಭವದ ಒತ್ತಡದ ಜೊತೆಗೆ ಗೆಳೆಯ ಡಿ. ವಿ. ಕೆ. ಮೂರ್ತಿಯವರ (ಪ್ರಕಾಶಕರು) ಪ್ರೋತ್ಸಾಹವೂ ಸೇರಿ, ಖುದ್ದು ನನಗೇ ಆಶ್ಚರ್ಯವಾಗುವಂತೆ, ಒಂದೇ ಬೀಸಿನಲ್ಲಿ ಇಡೀ ಪುಸ್ತಕ ಬರೆದು ಮುಗಿಸಿದೆ. ನನ್ನ ಈ ಪುಸ್ತಕಕ್ಕೆ ಮಾತ್ರ

"ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ" ಎಂಗಿಲ್ಲಾಗಿ "ಪದವಿಟ್ಟಳಿಪದೊಂದಗ್ಗಳಿಕೆ" ಸಲ್ಲಂತ್ತವೆ. ಉಳಿದವೆಲ್ಲವೂ

ಕರಡು ಕಾಗದ ರೀಮುಗಟ್ಟಲೆ
ಹರಿದು, ಶಾಯಿಯ ಸೇರುಗಟ್ಟಲೆ
ಸುರಿದು, ಆಕರ ಪುಸ್ತಕಾರ್ಣವವನ್ನು ಸೋಸುತ್ತ
ದೊರೆತ ನೊರೆಕಸ ರಾಡಿ ರಾಶಿಯ-
ನರಸಿ ಹಿಂಡಿದ ರಿಕ್ತ ಸಾರವ-
ನರಿತು ಕಡೆದಿಹ ದೀರ್ಘಕಾಲದ ಪರ್ವತ ಪ್ರಸವ !

೧೯೭೨. "ಎನ್‌ಸಿಸಿ ದಿನಗಳು" ಪುಸ್ತಕವನ್ನು ಶ್ರೀ ಡಿ.ವಿ.ಕೆ. ಮೂರ್ತಿಯವರು ಪ್ರಕಟಿಸಿದರು. ೧೯೮೦ರ ದಶಕದ ಕೊನೆಗೆ ಆ ೧೦೦೦ ಪ್ರತಿಗಳೂ ಮಾರಾಟವಾಗಿ ಹೋಗಿದ್ದುವು. ಸಗಟು ಖರೀದಿ, ಗ್ರಂಥಾಲಯ ಸರಬರಾಜು ಮುಂತಾದ ಕೃತಕ, ಅನಾವಶ್ಯಕ ಮತ್ತು ಈಚಿನ ದಿನಗಳಲ್ಲಿ ಅನೈತಿಕ ಕೂಡ, ಒತ್ತುಗಂಬಗಳ ನೆರವು ಇಲ್ಲದೇ !

೧೯೭೮. ನಮ್ಮ ಹಿರಿಮಗ ಅಶೋಕ ತಾನು ತಾಬೇದಾರಿಕೆಯ ನೊಗಕ್ಕೆ ಹೆಗಲೊಡ್ಡಲಾರೆ (ಆತ ಸ್ವತಂತ್ರ ಭಾರತದ ಪ್ರಜೆ, ೧೯೫೨ ಜನನ ; ಅವನ ಅಪ್ಪ ಅಮ್ಮಂದಿರಂತೆ ದಾಸ ರಾಷ್ಟ್ರದ patented product ಅಲ್ಲ !) ಎಂದು ನಿರ್ಧರಿಸಿ ಮಂಗಳೂರಿನಲ್ಲಿ ಸ್ವಂತೋದ್ಯಮ ಆರಂಭಿಸಿದ: ಅತ್ರಿ ಬುಕ್ ಸೆಂಟರ್. ಪ್ರಾಮಾಣಿಕತೆ, ಜನಸೇವೆ, ನಿರಂತರ ಪರಿಶ್ರಮ ಹಾಗೂ ಉತ್ಸಾಹ ಸಂಲಗ್ನಗೊಂಡಿರುವ ಯಾವ ಜನೋಪಯೋಗಿ ಉದ್ಯಮವೂ ಎಂದೂ ವಿಫಲವಾಗದು. ಸಹಜವಾಗಿಯೇ ಅತ್ರಿ ಬುಕ್ ಸೆಂಟರ್ ಯಶಸ್ವಿಯಾಯಿತು ಮತ್ತು ಆಚೆಗೆ ಚಾಚಿತು "ತನ್ನಯ ಚುಂಚ !"

"ನಾವೇಕೆ ಪ್ರಕಾಶನ ರಂಗಕ್ಕೂ ಇಳಿಯಬಾರದು ?" ಮೂಲೋದ್ಯಮಕ್ಕೆ ಇನಿತೂ ಭಂಗ ಬರದಂತೆ ಅದರ ಒಂದು ಕಿರುರೆಂಬೆಯಾಗಿ ಈ ನೂತನ ಪ್ರಯೋಗವಿರತಕ್ಕದ್ದು. ಇದು ಮಗರಾಯನ ಆಶಯ. ಅಪ್ಪ ? ಕನ್ನಡದಲ್ಲಿ ವಿಜ್ಞಾನ ಗ್ರಂಥಗಳ ಪ್ರಕಟಣೆ, ಅನೇಕ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಕಾರಣಗಳಿಂದಾಗಿ, ವಿರಳಾತಿವಿರಳ ಪ್ರಯತ್ನವಾಗಿದೆ. ಇದರಲ್ಲಿ ಸ್ಪರ್ಧೆಯೇ ಇಲ್ಲ, ನಮ್ಮ ಕೈಂಕರ್ಯ ಸಲ್ಲಿಸೋಣ ಎಂದು ನಾನು ಸಮ್ಮತಿಸಿದೆ. ಈ ಯೋಜನೆಯ ಪ್ರಕಾರ ನನ್ನ ಪುಸ್ತಕಗಳನ್ನು ಅವನು ಪ್ರಕಟಿಸುವುದು, ಅವನಿಗೆ ಅಸಲು ಕೊಂಚ ಕಡಿಮೆ ಬಂದರೂ ಸಾಕು (ಲಾಭ ಬೇಡ), ನನಗೆ ಪುಸ್ತಕ ಪ್ರಕಟವಾಗಿ ತೀರ ಕಡಿಮೆ ಬೆಲೆಗೆ ನೇರ ಜನರ ಕೈಸೇರುವುದೇ ನಿಜ ಸಂಭಾವನೆ. ಲೇಖನ ಕ್ರಿಯೆ ಒದಗಿಸುವ ಉಲ್ಲಾಸ ಮತ್ತು ಮಗ್ನತೆಯಲ್ಲವೇ ಲೇಖಕನ ನಿಜ ಪ್ರಶಸ್ತಿಗಳು ? ೧೯೮೦ರಲ್ಲಿ ನನ್ನ "ನೋಡೋಣು ಬಾರಾ ನಕ್ಷತ್ರ" ಅತ್ರಿ ಬುಕ್ ಸೆಂಟರ್‌ನ ಮೊದಲ ಪ್ರಕಟಣೆಯಾಗಿ ಬೆಳಕು ಕಂಡಿತು. ಈಗ ಲಭ್ಯವಿರುವ ನನ್ನ ಕೃತಿಗಳ ವಿವರಗಳು ಇದೇ ಪುಸ್ತಕದ ಪುಟ XXVIರಲ್ಲಿವೆ.

ನನ್ನ ವಿಜ್ಞಾನ ಪುಸ್ತಕಗಳನ್ನೂ ಲೇಖನಗಳನ್ನೂ ಕಷ್ಟಪಟ್ಟು ಓದಲು ಪ್ರಯತ್ನಿಸಿ ನಡುವಿನಲ್ಲೇ ಕೈಬಿಟ್ಟ ಅನೇಕ ಜನರು ಪ್ರಾಮಾಣಿಕವಾಗಿ ಒಂದು ಪ್ರಶ್ನೆ ಕೇಳುವುದುಂಟು : ನಿಮ್ಮ 'ಎನ್‌ಸಿಸಿ ದಿನಗಳು' ಪುಸ್ತಕ ಸುಲಭವಾಗಿ ಓದಿಸಿಕೊಂಡು ಹೋಗು

ತ್ತದೆ. ಆದರೆ ವಿಜ್ಞಾನ ಕೃತಿಗಳೆಲ್ಲವೂ ಉಕ್ಕಿನ ಕಡಲೆಗಳೇ. ಏಕೆ ಹೀಗೆ? ವಿಜ್ಞಾನ ಪುಸ್ತಕಗಳನ್ನು ಇನ್ನೂ ಸರಳವಾಗಿ ಬರೆಯಬಹುದಲ್ಲ?

ಕನ್ನಡದಲ್ಲಿ ಚಲಾವಣೆಯಲ್ಲಿರದ ಆಧುನಿಕ ವಿಜ್ಞಾನ ಪರಿಕಲ್ಪನೆಗಳನ್ನು ಸ್ಪಷ್ಟವಾಗಿ (ಪರಿಕಲ್ಪನೆ), ಶುದ್ಧವಾಗಿ (ಭಾಷೆ) ಮತ್ತು ಆಕರ್ಷಕವಾಗಿ (ಶೈಲಿ, ಉತ್ಸಾಹ) ನಿರೂಪಿಸುವುದೊಂದೇ ನನ್ನ ಪ್ರಯತ್ನ. ಸಹಜವಾಗಿಯೇ ಇಂಥ ಪ್ರಯೋಗ ಆರಂಭದಲ್ಲಿ ವಾಚಕರಿಗೆ ಕಷ್ಟಕರವಾಗುತ್ತದೆ. "ನೂತನ ವೈಜ್ಞಾನಿಕ ಸತ್ಯವೊಂದು ತನ್ನ ವಿರೋಧಿಗಳನ್ನು ತನ್ನತ್ತ ಒಲಿಸಿಕೊಂಡು ಅವರಿಗೆ ಬೆಳಕು ಬೀರಿ ಆ ಮೂಲಕ ಜಯಭೇರಿ ಮೊಳಗಿಸುವುದಿಲ್ಲ. ಬದಲು, ಈ ವಿರೋಧಿಗಳು ಕ್ರಮೇಣ ಮಡಿದು ಹೊಸತೊಂದು ಪೀಳಿಗೆಯೇ ಅದರ ಜೊತೆ ಸಹಜವಾಗಿ ಅರಳಿ ಪರಿಮಳಿಸುವುದರಿಂದ ತನ್ನ ಇರವನ್ನು ಟಂಕಿಸುತ್ತದೆ." ಮ್ಯಾಕ್ಸ್ ಪ್ಲಾಂಕ್‌ರ ಈ ನುಡಿ ಅರ್ಥಪೂರ್ಣವಾಗಿದೆ.

ಅಂದಿನಂತೆ (೧೯೭೨) ಇಂದು (೧೯೯೬) ಕೂಡ ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮೈಸೂರು ಪ್ರಿಂಟಿಂಗ್ ಪ್ರೆಸ್‌ನ ಸಕಲ ಕಾರ್ಮಿಕ ಬಂಧುಗಳಿಗೂ ಮಾಲೀಕರಾದ ಶ್ರೀ ಜಿ.ಎಚ್. ಕೃಷ್ಣಮೂರ್ತಿಯವರಿಗೂ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

೩೧-೩-೧೯೯೬ ಜಿ. ಟಿ. ನಾರಾಯಣರಾವ್

೮ ಅತ್ರಿ
ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦೦೦೯
ದೂರವಾಣಿ ೫೪೩೭೪೯

ಸಿಗಡಿ ಯಾಕೆ ಒಣಗಲಿಲ್ಲ ?

ಯುವ ಜನಾಂಗದಲ್ಲಿ ಶಿಸ್ತನ್ನು ಕೂಡಿಸಲು ಸ್ವಾತಂತ್ರ್ಯದ ಬಳಿಕ ನ್ಯಾಶನಲ್ ಕೆಡೆಟ್ ಕೋರನ್ನು ಹೆಚ್ಚು ಹೆಚ್ಚು ಪ್ರಚಾರಕ್ಕೆ ತರಲಾಯಿತಷ್ಟೆ. ಪ್ರತಿ ಶಾಲೆ, ಕಾಲೇಜಿಗೂ ಸಮವಸ್ತ್ರಧಾರಿಗಳಾದ ತರುಣರ ಕವಾಯತಿನ ಪಾಠ ಜೋಡಿಸಿದರೆ ಅಶಿಸ್ತಿನ ಸಮಸ್ಯೆ ತಕ್ಷಣ ಪರಿಹಾರವಾಗುವುದೆಂಬ ತತ್ತ್ವದ ಮೇಲೆ ಎನ್‌ಸಿಸಿಯ ಆಶಾ ಸೌಧವನ್ನು ನಿರ್ಮಿಸಲಾಯಿತು. ೧೯೬೨ರಲ್ಲಂತೂ ದೇಶಕ್ಕೊದಗಿದ ಚೀನೀ ಆಪತ್ತಿನಿಂದಾಗಿ ಎನ್‌ಸಿಸಿಗೆ ಬಂಧ ದೆಶೆಯೇ ಬಂದಿತು ; ಇಂತಿಂಥ ವರ್ಗಗಳ ಹುಡುಗರಿಗೆ ಕಡ್ಡಾಯವಾಗಿ ಈ ಶಿಕ್ಷಣ ಕೊಡತಕ್ಕದ್ದು ಎಂಬ ತೀರ್ಮಾನಕ್ಕೂ ಶಿಕ್ಷಣತಜ್ಞರು ಬಗ್ಗಿದರು. ಸಂಸ್ಥೆಗೊಂದು ಭೂಷಣಪ್ರಾಯವಾಗಿರುವ ಈ ಎನ್‌ಸಿಸಿ ಬರಬರುತ್ತ ತೇಜೋಹೀನವಾಗಿ, ಸತ್ವರಹಿತವಾಗಿ, ಶಿಸ್ತಿನ ಕಳೇಬರವಾಗಿ ಶಿಕ್ಷಣರಂಗದಲ್ಲಿ ಉಳಿಯಲು ಕಾರಣವೇನು ? ನೇರವಾಗಿ, ಮಿಲಿಟರಿ ಜನಗಳ ಮಾಗಿದ ಅನುಭವಗಳನ್ನು ಎರವಲು ಪಡೆದರೂ ಶಿಕ್ಷಣರಂಗದ ನೈತಿಕ ಮಟ್ಟ ಊರ್ಜಿತವಾಗಲಿಲ್ಲವೇಕೆ ? ರೂಪ, ವಾಸನೆ, ಕವಾಟು ಎಲ್ಲವೂ ಸೈನ್ಯದಿಂದಲೇ ಸರಬರಾಜಾದಂತೆ ತೋರಿದರೂ ಸೈನ್ಯದ ಶಿಸ್ತು, ವಿಧೇಯತೆಗಳು ಏಕೆ ಮೂಡಲಿಲ್ಲ ? ಸಿಗಡಿ ಯಾಕೆ ಒಣಗಲಿಲ್ಲ ?

ಬಿಸಿಲಿಗೊಡ್ಡಿದ ಕೂಡಲೆ ಸಿಗಡಿ ಒಣಗಬೇಕಾದ್ದು ಸಾಮಾನ್ಯ ; ಆದರೆ ಒಂದು ಮಕ್ಕಳ ಕಥೆಯಲ್ಲಿ ಸಿಗಡಿ ಒಣಗುವುದಿಲ್ಲ. ಸಿಗಡಿ ಯಾಕೆ ಒಣಗಲಿಲ್ಲ ? ಎಂದು ಮುದುಕಿ ಗೊಣಗುತ್ತಾಳೆ. ಇಡಿ ದೇಶದಲ್ಲಿ ಇದೇ ಪ್ರಶ್ನೆ: ಎನ್‌ಸಿಸಿ ಇದ್ದೂ ಶಿಸ್ತೇಕೆ ಬರಲಿಲ್ಲ ? ಎಲ್ಲರನ್ನೂ ಸಮವಸ್ತ್ರದೊಳಗೆ ತುರುಕಿಸಿದಾಗಲೂ ಶಿಸ್ತಿನ ಅವತಾರ ಏಕೆ ಆಗಲಿಲ್ಲ ? ಇದು ಶಿಕ್ಷಣರಂಗದ ಅತಿ ಮಹತ್ವದ ರಾಷ್ಟ್ರೀಯ ಪ್ರಶ್ನೆ. ಎನ್‌ಸಿಸಿಯನ್ನು ಸ್ವಸಂತೋಷದಿಂದ ಸೇರಿ ಅಷ್ಟೆ ಸಂತೋಷದಿಂದ ಬಿಟ್ಟು ಹೊರಬಿದ್ದ ಎನ್‌ಸಿಸಿಯ ವೈವಿಧ್ಯಪೂರ್ಣ ಜೀವನಕ್ಕೆ ತನ್ನ ಬದುಕಿನ ಸರ್ವಸ್ವವನ್ನೂ ಧಾರೆ ಎರೆದು ಪ್ರಾಮಾಣಿಕವಾಗಿ ದುಡಿದ ಒಬ್ಬ ಎನ್‌ಸಿಸಿ ಅಧಿಕಾರಿ (ಮತ್ತು ಪೂರ್ಣಕಾಲದ ಶಿಕ್ಷಕವೃತ್ತಿಯ) ಜಿ. ಟಿ. ನಾರಾಯಣರಾಯರು ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ನೀಡಿದ್ದಾರೆ.

೧೯೫೨ರಿಂದ ೬೯ ವರೆಗಿನ ೧೭ ವರ್ಷಗಳ ಸುದೀರ್ಘ ಅವಧಿಯ ನಿಷ್ಠಾಪೂರ್ಣ ಸೇವಾನಂತರ "ಎನ್‌ಸಿಸಿಯ ಈ ೨೪–೨೫ ವರ್ಷಗಳ ಅಸ್ತಿತ್ವ ಹಾಗೂ ವಿಸ್ತರಣೆಯಿಂದ ಆದರೆ ಧ್ಯೇಯಗಳು ಸಿದ್ಧಿಸಲ್ಪಟ್ಟುವೇನಾದರೂ ಇದ್ದರೆ ಅದು ಭಾವನಾತ್ಮಕಮಾತ್ರ... ಎನ್‌ಸಿಸಿ ತಲೆಭಾರದ ಮಹಾ ವ್ಯವಸ್ಥೆಯಾಗಿ ಬೆಳೆದಿದೆ. ಪಾರ್ಕಿನ್ಸನ್ನನ ಸೂತ್ರಗಳಿಗೆ ಇದೂ ಒಂದು ಉತ್ತಮ ನಿದರ್ಶನ" ಎಂಬ ಮನವರಿಕೆ ಜೀಟಿಯವರಲ್ಲಿ ದೃಢವಾಗಿ ಬೇರೂರಿದೆ. ೧೯೬೦ರ ವರೆಗೆ ಪರಿಮಿತ ಸಂಖ್ಯೆಯ ಕೆಡೆಟುಗಳನ್ನು ಹೊಂದಿದ್ದ ಎನ್‌ಸಿಸಿ

---

* 'ಉದಯವಾಣಿ' ೨೬-೫-೧೯೭೩ ಸಂಚಿಕೆಯ 'ಲೋಕಾಭಿರಾಮ' ಅಂಕಣದಲ್ಲಿ ಕು.ಶಿ. ಹರಿದಾಸ ಭಟ್ಟರು ಬರೆದ ಲೇಖನ.

ಆ ತರುವಾಯ ಕ್ಷಿಪ್ರ ವಿಸ್ತರಣೆಯು ಹಸಿವೆಗೆ ತುತ್ತಾಗಿ ಜಾರುವ ದಾರಿಯಲ್ಲಿ ನಡೆಯಿತು. ೧೯೬೩ರಲ್ಲಿ ಕಡ್ಡಾಯವಾಗಿ ಹೇರಿದ ಬಳಿಕ ಸಮವಸ್ತ್ರವಿಲ್ಲ, ಶಿಕ್ಷಣ ಸಾಮಗ್ರಿಗಳಿಲ್ಲ, ನುರಿತ ಶಿಕ್ಷಕರಿಲ್ಲ ಎಂದರೂ ನಡೆದದ್ದು ಎನ್‌ಸಿಸಿ ಶಿಕ್ಷಣವೇ ಎಂಬ ಭ್ರಮೆಯಲ್ಲಿ ದಿನಗಳುರುಳಿದವು. ಈ ವಿಸ್ತೃತ ಎನ್‌ಸಿಸಿಗೆ ಉಪಾಹಾರ ಕೊಡದೇನೆ ವಿದ್ಯಾರ್ಥಿಗಳ ರಾಷ್ಟ್ರಪ್ರೇಮವನ್ನು ಸಂವರ್ಧಿಸುವ ಉಪಾಯ ಹೂಡಿದಾಗ ಕೆಡೆಟುಗಳು ಸಾಮೂಹಿಕ ಮುಷ್ಕರದಿಂದ ತಮ್ಮ ಜನ್ಮಸಿದ್ಧ ಹಕ್ಕನ್ನು ಪಡೆದುಕೊಳ್ಳುವುದಕ್ಕೆ ನಾಚಲಿಲ್ಲ. ಶಿಸ್ತಿನ ಸಂಸ್ಥೆ ಅಶಿಸ್ತಿಗೆ ಶರಣಾಗತವಾದ ಈ ಮೊದಲ ಉದಾಹರಣೆ ಹತ್ತು ಹಲವು ಪ್ರಸಂಗಗಳಲ್ಲಿ ಮರುಕಳಿಸಿದ್ದನ್ನು ಜೀಟಿಯವರು ತಮ್ಮ ಆತ್ಮಕಥನದುದ್ದಕ್ಕೂ ನಿರ್ವ್ಯಂಜನೆಯಿಂದ ಚಿತ್ರಿಸಿದ್ದಾರೆ. ಕೇವಲ ದೋಷಾರೋಪಣೆ ಅವರ ಉದ್ದೇಶವಲ್ಲ ಎಂಬುದು 'ಎನ್‌ಸಿಸಿ ದಿನಗಳ' ಪಠನದಿಂದ ವಿದಿತವಾಗುತ್ತದೆ.

''ಎನ್‌ಸಿಸಿಯು ಶಿಕ್ಷಣಮಟ್ಟ ಇಳಿದುದಕ್ಕೆ ಅತಿ ವಿಸ್ತರಣೆ, ಶಿಕ್ಷಣ ಸಾಮಗ್ರಿಗಳ ಕೊರತೆ, ಅನಾಸಕ್ತ ವಿದ್ಯಾರ್ಥಿಗಳ ಹಿಂಡು ಮುಂತಾದುವು ನಿಜ ಕಾರಣಗಳೇ ಇರಬಹುದು. ಆದರೆ ಇಲ್ಲೆಲ್ಲ ಈ ಸವಾಲನ್ನು ಎದುರಿಸಿ ವಿಧಿನಿಯಮಗಳ ಪರಿಮಿತ ಚೌಕಟ್ಟಿನೊಳಗೇ ಕ್ಯಾಡೆಟುಗಳ ಧೃತಿ ಕಾಯ್ದಿಟ್ಟು ಎನ್‌ಸಿಸಿಯ ಗೌರವವನ್ನು ಏರಿಸಲು ಮಿಲಿಟರಿ ಅಧಿಕಾರಿಗಳೂ ಎನ್‌ಸಿಸಿ ಆಫೀಸರರೂ ಸಾರ್ವತ್ರಿಕವಾಗಿ ಮನಃಪೂರ್ವಕವಾಗಿ ಶ್ರಮಿಸಿದ್ದರೆ ಪರಿಸ್ಥಿತಿ ಹದಗೆಡುತ್ತಿರಲಿಲ್ಲ. ಅವರಿಗೆ (ಅಂದರೆ ಮಿಲಿಟರಿ ಅಧಿಕಾರಿಗಳಿಗೆ) ಕಾಗದದ ಮೇಲಿನ ಶಿಕ್ಷಣ, ಕಛೇರಿಯ ಶೃಂಗಾರ, ತಮ್ಮ ಅಧಿಕಾರ ಪ್ರದರ್ಶನ ಇವುಗಳ ಮೇಲಿದ್ದಷ್ಟು ವಾತ್ಸಲ್ಯ ವಿದ್ಯಾರ್ಥಿಗಳ ಮೇಲಾಗಲೀ ಅವರ ವಾಸ್ತವಿಕ ಶಿಕ್ಷಣದ ಮೇಲಾಗಲಿ ಮೂಡಲಿಲ್ಲ.'' ಶಿಕ್ಷಣರಂಗದಿಂದ ಎನ್‌ಸಿಸಿ ಸೇರಿದ ಆಫೀಸರುಗಳು ಜೀಟಿಯವರ ಮಟ್ಟಿಗೆ ದುಡ್ಡಿಗಾಗಿ ಆಕರ್ಷಿತರಾದ ಕಬ್ಬಿಣದ ರೇಕುಗಳೇ ಹೊರತು ಕರ್ತವ್ಯಾಸಕ್ತ ಚಿನ್ನದ ತುಂಡುಗಳಲ್ಲ. ಈ ''ಕಬ್ಬಿಣದ ರೇಕುಗಳಿಗೆ ಎನ್‌ಸಿಸಿ ಕರ್ತವ್ಯಗಳು ಪ್ರಿಯವಾಗಲಿಲ್ಲ. ಪೆರೇಡಿಗೆ ಹೋಗುವುದೇ ಕಷ್ಟ. ಹೋದರೂ ಆಗಂತುಕರಾಗಿ ಹೋದಾರೇ ವಿನಾ ಆದರ ಧುರೀಣತ್ವವೇ ತಮ್ಮದು ಎಂಬ ಮನೋಧರ್ಮದಿಂದಲ್ಲ. ಅಲ್ಲಿ ಪಾಠ ನಡೆಸುವುದು ಇವರ ಘನತೆಗೆ ಕಡಿಮೆ; ಆದರೆ ಅದರ ಫಲವಾದ ಗೌರವಧನ ಸ್ವೀಕರಿಸುವುದು ಅತಿ ಪ್ರಿಯ.'' ಹೀಗೆ ತನ್ನ ಓರಗೆಯವರನ್ನೂ ಬಿಡದೆ ಜೀಟಿಯವರ ಸತ್ಯವೇದ ಮುಂದುವರಿಯುತ್ತದೆ.

ಮೇಲಿನ ಕೆಲ ವಾಕ್ಯಗಳನ್ನು 'ಎನ್‌ಸಿಸಿ ದಿನಗಳು' ಗ್ರಂಥದ 'ಫಲಶ್ರುತಿ'ಯ ಅಧ್ಯಾಯದಿಂದ ಆರಿಸಲಾಗಿದೆ. ೫೫೨ ಪುಟಗಳ ಜೀಟಿಯವರ ಅನುಭವಕಥನಕ್ಕೂ ಈ ತಾತ್ತ್ವಿಕ ಮಂಥನಕ್ಕೂ ಬಲುದೂರದ ಸಂಬಂಧ ಮಾತ್ರ. ಜೀಟಿಯವರನ್ನು ಬಲ್ಲವರಿಗೆ ಅವರ ಬರವಣಿಗೆ ಎಷ್ಟು ಮೆಚ್ಚುಗೆಯಾಗುವುದೋ ಅಷ್ಟೇ ಗ್ರಂಥಪಠನದಿಂದ ಮಾತ್ರ ಅರಿಯಲಾಶಿಸುವವರಿಗೂ ಆಗುವಂತೆ ಲೇಖಕರು ಈ ಗ್ರಂಥ ಹೆಣೆದಿದ್ದಾರೆ. ಜೀಟಿ ಯಾರು ? ಎಂದು ಮೊದಲೇ ತಿಳಿದಿರುವವರಿಗೆ ಅವರು ವರ್ಣಿಸಿರುವುದೆಲ್ಲ ಜೀಟಿ ಹೀಗೆ ಮಾಡಬಲ್ಲರು, ಅವರೊಬ್ಬರೇ ಮಾಡಬಲ್ಲರು, ಈ ಪ್ರಸಂಗದಲ್ಲಿ ಅವರು ಹೀಗೆ ಪ್ರತಿಕ್ರಿಯೆ ತೋರಿಸುವರೆಂದು ಮೊದಲೇ ಗ್ರಹಿಕೆಯಾಗುತ್ತದೆ. ಆದರೆ ಅವರನ್ನು ಹೆಚ್ಚಾಗಿ

ಅರಿಯದ ಕೇವಲ ಓದುಗರಿಗೆ ಆಶ್ಚರ್ಯವೆನಿಸುವ ಹಲ ಘಟನೆಗಳು ಈ ಗ್ರಂಥದಲ್ಲಿ ಅಡಕವಾಗಿವೆ.

ಈ ಘಟನೆಗಳ ಮೂಲಕ ಅವರು ತಾವು ನೋಡದ ಜೀಟಿಯು ಚಿತ್ರವನ್ನು ಸುಮ ಕೋಮಲವಾದ ವಜ್ರದ ಹರಳುಗಳಿಂದ ನಿರ್ಮಿಸಿಕೊಳ್ಳಬಹುದು. ಇಂಥ ಕಠೋರವಾದ ತ್ಯಾಗ, ಶಿಸ್ತು, ಕಷ್ಟಸಹಿಷ್ಣುತೆ, ಅನ್ಯಾಯ, ದರ್ಪಗಳ ವಿರುದ್ಧ ಸೆಟೆದು ನಿಲ್ಲುವ ಪೌರುಷ ಒಬ್ಬ ಬಡ ಮೇಷ್ಟರಲ್ಲಿ ಹೇಗೆ ಮೂಡಿತು ಎಂದು ಅವರಿಗೆ ಆಶ್ಚರ್ಯವಾಗಬಹುದು. ೧೭ ವರ್ಷ ಎನ್‌ಸಿಸಿ ಮೂಸೆಯಲ್ಲಿ ಬೆಂದರೂ ತನ್ನ ವ್ಯಕ್ತಿತ್ವದ ಸಾಹಿತ್ಯ ರಚನೆ, ಸಂಗೀತರಸಾಸ್ವಾದನೆ, ಸ್ನೇಹಸಂಪರ್ಕ ಮುಂತಾದ ಸುಮಕೋಮಲ ಪಕಳೆಗಳನ್ನು ಜೀಟಿ ಹೇಗೆ ರಕ್ಷಿಸಿಕೊಂಡರೆಂಬುದು ಮತ್ತೊಂದು ಆಶ್ಚರ್ಯವಾಗಬಹುದು. ಪುಟದಿಂದ ಪುಟಕ್ಕೆ ಜೀಟಿಯವರ ಉತ್ಸಾಹದ ಚಿಲುಮೆ ಸ್ವಗ್ರಾಮವಾದ ಮಡಿಕೇರಿಯ ಬೆಟ್ಟದ ಕೊರಕಲಲ್ಲಿ ಇಳಿಯುವ ನಿರ್ಮಲ ಜಲಪಾತದಂತೆ ಹರಿಯುತ್ತದೆ. ಕಗ್ಗಾಡಿನಲ್ಲಿ ನೀವು ನಿರೀಕ್ಷಿಸದ ಯಾವುದೋ ಸಂದಿನಲ್ಲಿ ಒಂದು ಸುಂದರ ಜಲಪಾತ ನಿಮ್ಮನ್ನು ಸಂಧಿಸಿದರೆ ನಿಮಗೆ ಆಶ್ಚರ್ಯವಾಗುವುದಿಲ್ಲವೆ ? ಅಂಥ ನಿರ್ಮಲ ಸಲಿಲದರ್ಶನ 'ಎನ್‌ಸಿಸಿ ದಿನಗಳ'ಲ್ಲಿ ನಮಗೆ ದೊರೆಯುತ್ತದೆ. ಜೀಟಿಯನ್ನು ಬಲ್ಲವರಿಗೂ, ಎಲ್ಲರಿಗೂ ಈ ಕೃತಿ ಹುಟ್ಟಿಸುವ ಮೊದಲ ಭಾವ ಆಶ್ಚರ್ಯ–ತೀರ ಸಾಮಾನ್ಯ, ಸಪ್ಪೆ, ಶುಷ್ಕ ಎನಿಸುವ ಎನ್‌ಸಿಸಿ ಮರಳುಗಾಡಿನಲ್ಲೂ ಒಂದು ಸುಗಂಧ ತೈಲದ ಎನ್‌ಸಿಸಿ ಓಯಸಿಸ್ಸನ್ನು ಅಗೆದು ತೆಗೆದಿದ್ದಾರೆ ಜೀಟಿ. ಮೇಜರ್ ದೊರೈರಾಜ್, ನಾರಾಯಣ್ ಸಿಂಗ್, ರಾಯಪ್ಪನ್ ಅಂಥ ಶಿಸ್ತಿನ ಮಹಾ ಜೀವಗಳ ಸ್ನೇಹ ಪಡೆದಿದ್ದಾರೆ. ಎನ್‌ಸಿಸಿಯಿಂದ ಉಬ್ಬಿದ ಕಪ್ಪೆಗಳ ಗೊಟರಿಗೆ ಸೊಪ್ಪು ಹಾಕದೆ ನಡೆದಿದ್ದಾರೆ. ಕೊಡಗಿನ ಭಯಂಕರ ಮೀಸೆ ಹೊತ್ತ ವಿದ್ಯಾರ್ಥಿಗಳ ಅಚಲವಾದ ಪ್ರೀತಿ ಭಕ್ತಿಗಳನ್ನು ಸಂಪಾದಿಸಿದ್ದಾರೆ. ಕರ್ತವ್ಯವನ್ನು ಚಾಚೂ ತಪ್ಪದೆ ಪಾಲಿಸಿ, ಸಾಕಷ್ಟು ನೋವನ್ನು ಅನುಭವಿಸಿ, ಎನ್‌ಸಿಸಿ ಶಿಸ್ತಿನ ತಳವನ್ನು ಶೋಧಿಸಿ ಕೊನೆಗೆ ಅದರೊಳಗಿನ ದೌರ್ಬಲ್ಯವನ್ನು ಗುರುತಿಸಿ ಇದರಿಂದ ಉದ್ದಿಷ್ಟ ಪ್ರಯೋಜನ ಆಗದು ಎಂಬ ನಿರ್ಧಾರಕ್ಕೆ ಬಂದಮೇಲೆ ತಾನಾದರೂ ಅದಕ್ಕೆ ಅನ್ನಭಾರವಾಗಕೂಡದೆಂಬ ಹಠದಿಂದ ಅದನ್ನು ತ್ಯಜಿಸಿದ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿ ಜೀಟಿ ಈ ಗ್ರಂಥದಲ್ಲಿ ಬೆಳೆದು ತೋರುತ್ತಾರೆ.

ಶೈಲಿ—ಜೀಟಿಗೆ ವಿಶಿಷ್ಟವಾದೊಂದು ಶೈಲಿ ಅದು. ವಿವರ ನೀಡುವಾಗ ಅದು ವೈಜ್ಞಾನಿಕವಾಗಿಬೇಕು, ಸತ್ಯವಾಗಿರಬೇಕು, ಅಪ್ರಿಯವಾದರೂ ಅಡ್ಡಿ ಇಲ್ಲ—ಇದು ಜೀಟಿ ನಿಲುವು. ಹೆಚ್ಚಿನಂಶ ಇದೊಂದು ಜೀವಂತ ಅನುಭವಾಮೃತ. ಕನ್ನಡದ ಒಂದು ಪ್ರಾಮಾಣಿಕ ಕೃತಿರತ್ನ. ಮಿಲಿಟರಿಗೆ ಬಲುದೂರ ಇರುವ ನನ್ನಂಥವನ ದೃಷ್ಟಿಗೆ ಹೊಸ ಆಯಾಮ ಒದಗಿಸುವ ಕೃತಿ. ಎನ್‌ಸಿಸಿ ದುರಂತವನ್ನು ಇಷ್ಟು ಸ್ವಾರಸ್ಯವಾಗಿ ವರ್ಣಿಸುವ ಶಕ್ತಿ ಬರಬೇಕಾದರೆ ಪ್ರಾಯಃ ಲೇಖಕನಲ್ಲಿ ಅದರ ಬಗ್ಗೆ ತೀವ್ರ ಅನುಕಂಪ ಇರಬೇಕಾಗುತ್ತದೆ. ಅಲ್ಲಿ ಇಲ್ಲಿ ಟೀಕೆಯಂತೆ ತೋರುವ ಮಾತುಗಳು ಜೀಟಿಯವರ ಸತ್ಯವಾದಿತ್ವಕ್ಕೆ ಸಾಕ್ಷಿ. ಅಷ್ಟೆ ಹೊರತು, ಯಾರನ್ನೂ ನೋಯಿಸುವ ಸಲುವಾಗಿ ನಮೂದಿಸಿದುವಲ್ಲ. ಸ್ವನಿಂದೆ ಎನಿಸುವಂಥ ಘಟನೆಗಳನ್ನೂ ಜೀಟಿ ನಿರ್ವಿಕಲ್ಪವಾಗಿ ನಮ್ಮ

ಮುಂದೆ ಇಡುವಾಗ ಇದೇ ಈ ಕೃತಿಯು ಸತ್ವ ಮತ್ತು ಸ್ವತ್ವ ಎಂಬುದು ನಮಗೆ ಖಚಿತವಾಗುತ್ತದೆ. ಜೋಶಿಯವರ ಜೀವನದಲ್ಲಿ ಮುಚ್ಚುಮರೆಗೆ ಎಡೆ ಇಲ್ಲ; ಇನ್ನೊಬ್ಬರ ಜೀವನ ಕುರಿತು ಅನಾವಶ್ಯಕ ಕುತೂಹಲ ಅವರಿಗಿಲ್ಲ, ತನಗೆ ಸಂಬಂಧಪಟ್ಟವರ ಮೇಲೆ ಅಪಾರವಾದ ಮಾನವೀಯ ಸ್ನೇಹ, ಕರುಣೆ, ಅಭಿರುಚಿ, ವಿದ್ಯಾರ್ಥಿಗಳ ಮೇಲೆ ಎಲ್ಲಿಲ್ಲದ ಪ್ರೀತಿ. ಕೆಲಸದ ಮೇಲೆ ಸದಾ ಸರ್ವದಾ ಅನುರಕ್ತಿ. "ಎಲ್ಲಾದರೂ ಇರು, ಎಂತಾದರೂ ಇರು—ಎಲ್ಲೆಲ್ಲಿಯೂ ನೀ ಜೋಶಿಯಾಗಿರು" ಎಂದು ನಮ್ಮ ಯುವಜನರು ಪಾಠ ಕಲಿತದ್ದೇ ಆದರೆ ಹತಾಶರಾಗುವ ಕಾರಣವಿಲ್ಲ. ಮಂಗಳೂರು, ಮದರಾಸು, ಮಡಿಕೇರಿ, ಈಗ ಮಾನಸಗಂಗೋತ್ರಿ, ಎಲ್ಲಿದ್ದರೂ ಅಲ್ಲಿ ಈ ವ್ಯಕ್ತಿ ತಾನೇ ಆಗಿರುತ್ತಾರೆ, ಒಲಿದು ಬಾಳುತ್ತಾರೆ, ಒಲಿಸಿಕೊಳ್ಳುತ್ತಾರೆ, ತಾನು ಮಾಡುವ ಸೇವಾಧರ್ಮವನ್ನು ಪಾಲಿಸುತ್ತಾರೆ. ಕರ್ತವ್ಯಪಾಲನೆ ಮೊದಲ ಧರ್ಮ; ಪರೋಪಕಾರ ಎರಡನೆಯದು. ಇದರಿಂದ ದೊರೆಕೊಂಡ ಒಂದು ದೊಡ್ಡ ಸಿದ್ಧಿ, ಜೋಶಿಯವರ ಜೀವನ ಸಿದ್ಧಿ, ಎಂದರೆ ಅವರ ಶೀಲ. ಗಾಳಿ ಬಂದಂತೆ ತೊನೆಯುವ, ಉಯ್ಯಾಲಾಡುವ, ಸೂಕ್ಷ್ಮಕಲೆ ಈ ಸತ್ಯವ್ರತನಿಗೆ ವರ್ಜ್ಯ. ಅವರ ಕೃತಿಯಿಂದ ಸಾಮಾನ್ಯರಿಗೆ ಅಪರಿಚಿತವಾದ ಒಂದು ಹೊಸ ಪ್ರಪಂಚದ ಪರಿಚಯವಾಗುವುದರ ಜೊತೆಗೆ ಆ ಪ್ರಪಂಚದಲ್ಲಿ ಅತ್ಯಂತ ನಿಷ್ಠಾಪೂರ್ಣವಾಗಿಯೂ, ಪ್ರಾಮಾಣಿಕವಾಗಿಯೂ ದಕ್ಷತೆಯಿಂದಲೂ ವ್ಯವಹರಿಸಿದ ಸಾಮಾನ್ಯ ವ್ಯಕ್ತಿಯೊಬ್ಬನ ಶೀಲದ ಅಸಾಮಾನ್ಯತೆ ಮತ್ತು ಸಮುನ್ನತಿ ದೃಷ್ಟಿಗೋಚರವಾಗುತ್ತದೆ. ಈ ಬೃಹತ್ ಗ್ರಂಥದಲ್ಲಿ ಹೆಜ್ಜೆಹೆಜ್ಜೆಗೂ ನಮ್ಮನ್ನು ಆಕರ್ಷಿಸುವುದು ಈ ಶೀಲದ ವಿಕಸನ.

ಜಿ. ಟಿ. ನಾರಾಯಣರಾಯರ ಪುಸ್ತಕಗಳು

ಎನ್‌ಸಿಸಿ ದಿನಗಳು ರೂ ೫೫
ಜಾತಕ ಮತ್ತು ಭವಿಷ್ಯ ರೂ ೬
ಸೂರ್ಯನ ಸಾಮ್ರಾಜ್ಯ (ಎರಡನೆಯ ಆವೃತ್ತಿ) ರೂ ೧೨
ಕೊಡಗಿನ ಸುವಂಗಳು ರೂ ೨೦
ಭವಿಷ್ಯ ವಿಜ್ಞಾನ ರೂ ೧೨
ಭವಿಷ್ಯ ವಾಚನ ರೂ ೧೫
ಸವಾಲನ್ನು ಎದುರಿಸುವ ಛಲ ರೂ ೨೦
ಗಣಿತ ಗಗನ ಗಮನ ರೂ ೨೨
ಆಲ್ಬರ್ಟ್ ಐನ್‌ಸ್ಟೈನ್ (ಎರಡನೆಯ ಆವೃತ್ತಿ) ರೂ ೪೫
ಸುಬ್ರಹ್ಮಣ್ಯನ್ ಚಂದ್ರಶೇಖರ್ ರೂ ೫೫
ಗ್ರಹಣಗಳು (ಎರಡನೆಯ ಆವೃತ್ತಿ) ರೂ ೭
ವೈಜ್ಞಾನಿಕ ಮನೋಧರ್ಮ (ಮೂರನೆಯ ಆವೃತ್ತಿ) ರೂ ೩೫
ಧೂಮಕೇತು (ಮೂರನೆಯ ಆವೃತ್ತಿ) ರೂ. ೧೩
ಶ್ರೀನಿವಾಸ ರಾಮಾನುಜನ್ (ಎರಡನೆಯ ಆವೃತ್ತಿ) ರೂ ೩೦
ಆಲ್ಬರ್ಟ್ ಐನ್‌ಸ್ಟೈನರ ಮಾನವೀಯ ಮುಖ (ಎರಡನೆಯ ಆವೃತ್ತಿ) ರೂ ೧೫
ಐವರು ವಿಜ್ಞಾನಿಗಳು (ಎರಡನೆಯ ಆವೃತ್ತಿ) ರೂ ೧೮
ಶ್ರುತಗಾನ ರೂ ೧೨
ನಿಕೊಲಾಸ್ ಕೊಪರ್ನಿಕಸ್ ರೂ ೧೨.೫೦
ಸೂಪರ್ನೋವಾ (ಎರಡನೆಯ ಆವೃತ್ತಿ ಅಚ್ಚಿನಲ್ಲಿದೆ)
ನೋಡೋಣು ಬಾರಾ ನಕ್ಷತ್ರ (ಎರಡನೆಯ ಆವೃತ್ತಿ ಅಚ್ಚಿನಲ್ಲಿದೆ)
ಪ್ಲಾಂಕ್ ಐನ್‌ಸ್ಟೈನ್ ಬೋರ್ (ಎರಡನೆಯ ಆವೃತ್ತಿ ಅಚ್ಚಿನಲ್ಲಿದೆ)
ಸಪ್ತಸಾಗರದಾಚೆಯುಲ್ಲೋ (ಚಂದ್ರಶೇಖರ್ ದರ್ಶನ ಮತ್ತು ಅಮೆರಿಕಾ ಪ್ರವಾಸಾನುಭವ—ಹಸ್ತಪ್ರತಿ ಹಂತದಲ್ಲಿದೆ)

ವಿತರಣೆ

ಡಾ. ಕೆ. ಪಿ. ಎಸ್. ಕಾಮತರ "ಒಡೆಯರೆಲ್ಲ ಸೇವಕರು"—ಬಳಕೆದಾರರ ಚಳವಳಿಗೊಂದು ಕೈಪಿಡಿ (ರೂ ೧೮)

ಎನ್‌ಸಿಸಿ ದಿನಗಳು

೧೯೫೨

"ನನಗಂತೂ ನಿಮ್ಮ ಮೇಲೆ ತುಂಬ ವಿಶ್ವಾಸವಿದೆ"

"ಜೀಟಿ ! ನೋಟಿಸ್ ಬೋರ್ಡ್ ನೋಡಿದಿರಾ ?"

"ಇಲ್ಲವಲ್ಲ."

"ಹೋಗಿ ನೋಡಿ ಬನ್ನಿ ಕೂಡಲೇ."

"ಪ್ರಿನ್ಸಿಪಾಲರ ಓರೆದೃಷ್ಟಿಗೆ ಪುನಃ ಈಡಾಗಬೇಕೆಂದೇ ? ಅಲ್ಲೇನಿದ್ದೀತು ? ಮಾಮೂಲು—ಕಾಲೇಜು ಏಪ್ರಿಲ್ ೧ರಿಂದ ಜೂನ್ ೧೪ರ ತನಕ..."

"ನೋಡಿಬಂದ ಮೇಲೆ ನಿಮ್ಮ ಈ ಮಾತನ್ನೆಲ್ಲ ಕೇಳುತ್ತೇನೆ. ಮೊದಲು ಹೋಗಿ ನೋಡುವ."

ಪ್ರೊ॥ ಕೃಷ್ಣಮೂರ್ತಿಯವರು ಇಷ್ಟು ಹೇಳುವಾಗ ನನಗೆ ಬೇರೆ ದಾರಿ ಇರಲಿಲ್ಲ. ಅವರು ನನಗೆ ಇಂಟರ್ಮೀಡಿಯೇಟಿನಲ್ಲಿ ಎರಡು ವರ್ಷ ಗಣಿತ ಕಲಿಸಿದ ಗುರು. ಈಗ ಅದೇ ಕಾಲೇಜಿನಲ್ಲಿ (ಸೇಂಟ್ ಅಲೋಯ್ಸಿಯಸ್ ಕಾಲೇಜ್ ಮಂಗಳೂರು) ಗಣಿತದ ಅಧ್ಯಾಪಕನಾಗಿರುವ ನನ್ನ ಮೇಲಧಿಕಾರಿ, ಮಾರ್ಗದರ್ಶಿಗಳು ಮತ್ತು ಹಿತೈಷಿ. ಗಣಿತವೇ ಅವರ ಉಸಿರು. ಜೀವನದ ಪ್ರತಿಘಟನೆಯಲ್ಲಿಯೂ ಒಂದು ಗಣಿತನಿಯಮವನ್ನು ಗುರುತಿಸುವ ಮಹನೀಯರು. ಆದ್ದರಿಂದ ನೋಟಿಸ್ ಬೋರ್ಡಿನಲ್ಲಿಯೂ ಏನೋ ಒಂದು ಅಜ್ಞಾತವಿದೆ (ಅದು x ಆಗಿರಲಿ !), ಅದನ್ನು ಹುಡುಕಲು ಒಂದು ಸಮೀಕರಣ ರಚಿಸಬೇಕು, ಅದರ ಪರಿಹಾರ ನಾನು ಅರಸಬೇಕು, ಆ ಸಂತೋಷ ನನಗೆ ಲಭಿಸಬೇಕು— ಇವೆಲ್ಲ ಅವರ ಆ ಆತ್ಮೀಯತೆಯ ಒತ್ತಾಯದ ಹಿನ್ನೆಲೆಯಲ್ಲಿದ್ದ ಭಾವಗಳು.

ಪ್ರಿನ್ಸಿಪಾಲರ ಕೊಠಡಿ. ಸುಗ್ರೀವಾಗ ಮೊದಲು ಅವರ ದರ್ಶನವಾಗುತ್ತದೆ. ಅಲ್ಲಿ ಬಲಗಡೆ ಒಂದು ಮೇಜು. ಅದರ ಮೇಲೆ ಅಧ್ಯಾಪಕರಿಗೆ ಬಂದ ಕಾಗದಗಳು, ಅವರಿಗೆ ಅನ್ವಯಿಸುವ ವಿಷಯಗಳನ್ನು ಕುರಿತ ನೋಟಿಸುಗಳು, ಇತ್ಯಾದಿ. ಸಾಮಾನ್ಯವಾಗಿ ಬೆಳಗ್ಗೆ ಕಾಲೇಜಿಗೆ ಬಂದೊಡನೆಯೇ ಈ ಕೊಠಡಿಗೆ ಹೋಗಿ (ಪ್ರಿನ್ಸಿಪಾಲರಿದ್ದರೆ ಅವರಿಗೆ ವಂದನೆ ಅರ್ಪಿಸಿ) ಹಾಜರಿ ಪುಸ್ತಕದಲ್ಲಿ ಚುಟುಕು ದಸ್ಕತು ಗುಜರಾಯಿಸಿ ತಲೆ ಎತ್ತಿ ನೋಟಿಸ್ ಬೋರ್ಡ್ ನೋಡಿ ಸರಕ್ಕನೆ ಹೊರ ಜಾರುವುದು ನನ್ನ ಪದ್ಧತಿ.

ನಾನು ಮುದುರಿಕೊಳ್ಳುವ ಸ್ವಭಾವದವನು. ನನ್ನ ಕೆಲಸವಾಯಿತು. ಅದಕ್ಕೆ ಸಂಬಂಧಿಸಿದ ಅಭ್ಯಾಸವಾಯಿತು—ಸದಾ ಏಕಾಂತಪ್ರಿಯ. ಒಬ್ಬನೇ ಬೇಕಾದಂತೆ ಬೆಟ್ಟ ಗುಡ್ಡ ಬಯಲು ಅಲೆಯುವುದು ವಿಚಾರಮಾಡುವುದು ಇದು ಬೆಳೆದು ಬಂದ ಧರ್ಮ. ಮನ ಬಿಚ್ಚಿ ಹರಟೆ ಹೊಡೆಯುವ ಸ್ನೇಹಿತರಿಲ್ಲವೆಂದಲ್ಲ. ಆದರೆ ನಾನಾಗಿಯೇ ಸ್ನೇಹಿತರನ್ನಾಗಲೀ ಸ್ನೇಹವನ್ನಾಗಲೀ ಬಯಸಿ ಹೋದದ್ದು ನೆನಪಿಗೆ ಬಾರದು. ಕರ್ತವ್ಯ ನಿರ್ವಹಣೆಯಲ್ಲಿ ಆತ್ಮೀಯ ಗೆಳೆಯರು ಲಭಿಸಿದ್ದಾರೆ. ಅಂಥವರ ಒಡನಾಟದಲ್ಲಿ

ಮುಚ್ಚುಮರೆಯಿಲ್ಲದ (ಅತಿರೇಕವಾಯಿತೇ ಎಂದು ಕೆಲವು ಸಲ ಅನ್ನಿಸುವವರೆಗೂ) ವರ್ತನೆ ನನ್ನದು. ಆದರೆ ಆ ಕರ್ತವ್ಯ ಮುಗಿದ ತರುವಾಯ ಅವರಿಂದ ನಾನು ದೂರ ವಾಗಬೇಕಾದಾಗ ಭಾವುಕತೆಯಿಂದ ನೊಂದದ್ದಿಲ್ಲ. "ಓಹೋ! ಹೋ! ಆ ದಿವಸ ಇನ್ನು ಬಂದೀತೇ!" ಎಂಬ ಉದ್ಗಾರ ಎತ್ತಿದ್ದಿಲ್ಲ.

ಯಾರನ್ನೇ ಆಗಲಿ, ಅದೂ ಅಧಿಕಾರಾರೂಢರನ್ನು ವಿಶೇಷವಾಗಿ, ಕಾಣುವುದು ನನಗೆ ಅಳುಕಿನ ವಿಚಾರ. ಕಾಲೇಜಿನ ಪ್ರಿನ್ಸಿಪಾಲರು ಅಧಿಕಾರದ ಪ್ರತೀಕ. ಅವರಿಂದ ಆದಷ್ಟು ದೂರವಿರುವುದು ಕ್ಷೇಮ. ಹಾಜರಿ ಪುಸ್ತಕಕ್ಕೆ ದಸ್ಕತಿಸಲು ಹೋಗುವಾಗ ಅವರು ನನ್ನ ವಂದನೆಗೆ ಪ್ರತಿವಂದನೆ ಸಲ್ಲಿಸುತ್ತಿದ್ದರೂ ನನ್ನನ್ನು ನೇರವಾಗಿ ನೋಡುತ್ತಿರಲಿಲ್ಲ. ಅದೊಂದು ಯಾಂತ್ರಿಕ ವಿಧಿ, ಅವರ ದೃಷ್ಟಿಯಲ್ಲಿ ನಾನು *x*; ಇದು *y* ಆಗಬಹುದು *z* ಆಗಬಹುದು ಎಂದೆಲ್ಲ ಖಚಿತವಾಗಿ ನನಗೆ ತಿಳಿದಿತ್ತು. ಆದರೆ ನನ್ನ ಸಂಕೋಚ ಪ್ರವೃತ್ತಿಯ ಪರಿಣಾಮವಾಗಿ, ನಾನಲ್ಲಿ ನಿಂತಿರುವಷ್ಟು ಹೊತ್ತೂ ಅವರು ತಮ್ಮ ಎಕ್ಸ್‌ಕಿರಣ ದೃಷ್ಟಿಯಿಂದ ನನ್ನನ್ನು ಪರಿಶೋಧಿಸುತ್ತಿದ್ದಾರೆ, ತಮ್ಮ ಅತ್ಯುನ್ನತ ಶಿಷ್ಟ ಮಾನಕಗಳಿಂದ ನನ್ನನ್ನು ಅಂಗುಲಅಂಗುಲವಾಗಿ ಅಳೆದು ಈತ ಎಷ್ಟು ಕಿರಿಯವ ಎಂದು ತೀರ್ಮಾನಿಸುತ್ತಿದ್ದಾರೆ ಎಂದೆಲ್ಲ ಅನ್ನಿಸುತ್ತಿತ್ತು. ಆದ್ದರಿಂದ ಶೀಘ್ರನಿಷ್ಕ್ರಾಮಣ ದ್ವಾರವೇ ಶರಣು.

ಕೃಷ್ಣಮೂರ್ತಿಗಳಿಗೂ ನನಗೂ ಮಾತುಕತೆ ನಡೆದದ್ದು ಮಾರ್ಚ್ ೧೯೫೨ರ ಮಧ್ಯ ಭಾಗದಲ್ಲಿ. Beware the ides of March! ಪ್ರಿನ್ಸಿಪಾಲರ ಕೊಠಡಿಯನ್ನು ಮರು ಪ್ರವೇಶಿಸಿದೆ. ಈ ಸಲ ಪ್ರಿನ್ಸಿಪಾಲರು ತಲೆ ಎತ್ತಿ ನನ್ನನ್ನು ನೋಡಿದರು. ಆದರೆ ನಾನು ಅವರ ಲಕ್ಷ್ಯವನ್ನು ಗಮನಿಸದವನಂತೆ ನೋಟಿಸ್ ಬೋರ್ಡಿನ ಕಡೆ ತಿರುಗಿದೆ.

"ಮಿ. ರಾವ್! ಒಂದು ನಿಮಿಷ."

ಸರಿ, ಏನೋ ವಿಪತ್ತು ಕಾದಿದೆ. ಬೋರ್ಡ್ ನೋಡಲಾಗಲಿಲ್ಲ. ಅವರೆಡೆಗೆ ಸಾಗಿ ಅವರು ಅತಿ ಸೌಜನ್ಯದಿಂದ ತೋರಿಸಿದ ಆಸನದ ಮೇಲೆ "ಸುಖಾಸೀನ"ನಾದೆ.

"ನೋಟಿಸ್ ನೋಡಿದಿರಾ?"

"ಇಲ್ಲ ಫಾದರ್" (ಪ್ರಿನ್ಸಿಪಾಲರು ಪಾದ್ರಿಗಳು. ಇದು ಗೌರವಸೂಚಕ ಸಂಬೋಧನ ಸಂಪ್ರದಾಯ.)

"ನೋಡಿ ಬನ್ನಿ."

ಅಲ್ಲೇನಿತ್ತು?

"೧೯೫೨-೫೩ನೆಯ ಕಾಲೇಜುವರ್ಷ ಪ್ರಾರಂಭದಲ್ಲಿ ಈ ಕಾಲೇಜಿನಲ್ಲಿ ಒಂದು ನ್ಯಾಷನಲ್ ಕ್ಯಾಡೆಟ್ ಕೋರ್ ದಳವನ್ನು ಪ್ರಾರಂಭಿಸಬೇಕೆಂದಿದೆ. ಆ ದಳದಲ್ಲಿ ಆಫಿಸರು ಗಳಾಗಿ ಕೆಲಸಮಾಡಲು ಅಪೇಕ್ಷಿಸುವ ಅಧ್ಯಾಪಕರು ಪ್ರಿನ್ಸಿಪಾಲರಿಗೆ ಮಾರ್ಚ್ ೩೧ರ ಮೊದಲು ತಮ್ಮ ಹೆಸರು ಕೊಡಬೇಕು."

"ಏನು ನಿಮ್ಮ ಅಭಿಪ್ರಾಯ?" ಪ್ರಿನ್ಸಿಪಾಲರು ಮುಂದುವರಿಸಿದರು.

"ಗೊತ್ತಿಲ್ಲ?"

"ಅಂದರೆ?"

"ನ್ಯಾಷನಲ್ ಕ್ಯಾಡೆಟ್ ಕೋರ್ ಅಂದರೇನೆಂದೇ ನನಗೆ ತಿಳಿಯದು. ಅಂತೂ ಮಿಲಿಟೆರಿಗೆ ಸಂಬಂಧಿಸಿದ ಒಂದು ಹುದ್ದೆ ಅದಾಗಿರಬೇಕು."

"ಸ್ವಲ್ಪ ದಿವಸಗಳ ಹಿಂದೆ ಒಬ್ಬರು ಮಿಲಿಟೆರಿ ಆಫಿಸರ್ ಬಂದಿದ್ದರು. ನಮ್ಮ ಕಾಲೇಜಿನಿಂದ ಆರಿಸಿದ ಒಂದಷ್ಟು ಹುಡುಗರಿಗೆ ಸಂಜೆ ವೇಳೆ ರಜಾ ದಿವಸಗಳಲ್ಲಿ ಮಿಲಿಟೆರಿ ಶಿಕ್ಷಣವೀಯುವ ವ್ಯವಸ್ಥೆ ಇದೆಂದು ಅವರು ವಿವರಿಸಿದರು. ಇದರ ಮುಂದಾಳಾಗಿ ನಮ್ಮ ಅಧ್ಯಾಪಕರೊಬ್ಬರಿರಬೇಕಂತೆ. ಇತರ ವಿವರಗಳನ್ನು ಅವರೇ ನೋಡಿಕೊಳ್ಳುವರಂತೆ. ನೀವು ಯಾಕೆ ಈ ವಿಚಾರದಲ್ಲಿ ಮನಸ್ಸು ಮಾಡಬಾರದು ?"

"ಕ್ಷಮಿಸಿ ಫಾದರ್ ! ನನ್ನಿಂದ ಈ ಮಿಲಿಟೆರಿ ವ್ಯವಹಾರ ಆಗದು."

"ಮಿ. ರಾವ್, ಆತುರಬೇಡ. ಇನ್ನೂ ಸಮಯವಿದೆ. ಯೋಚನೆಮಾಡಿ. ನಿಮ್ಮ ಹಿರಿಯರನ್ನು ಕೇಳಿ. ನಾಳೆ ನಾಡಿದ್ದಾಗಿ ಹೇಳಿ. ನನಗಂತೂ ನಿಮ್ಮ ಮೇಲೆ ತುಂಬ ವಿಶ್ವಾಸವಿದೆ."

ತಪ್ಪದಿದ್ದ ಗಂಡಾಂತರ

ಗಂಡಾಂತರ ತಪ್ಪಿತು ಎಂದು ಪ್ರಿನ್ಸಿಪಾಲರ ಕೊಠಡಿಯಿಂದೇನೋ "ಹೊರವಂಟನಾ ಮಹೀಪಾಲ." ಆದರೆ ಗುರುದ್ವಯರಾಗಿ ಸ್ನೇಹರೂಪವಾಗಿ ಕಾದಿತ್ತು ಕಾಡಿತ್ತು ಹೊಸ ಗಂಡಾಂತರ. ಕೃಷ್ಣಮೂರ್ತಿಯವರ ಬೆಂಬಲಿಗರಾಗಿ ನನ್ನ ಇನ್ನೊಬ್ಬರು ಗುರುಗಳು ಪ್ರೊ॥ ನಾರಾಯಣ ಹೊಳ್ಳರು, ನನ್ನ ಸಹೋದ್ಯೋಗಿ ಮಿತ್ರ ಶ್ರೀ ಕೆದಿಲಾಯರು ಅಲ್ಲಿ ನಿಂತಿದ್ದಾರೆ.

"ಹೌದಾ ಮಾರಾಯ್ರೇ ! ನಿಮ್ಮಂಥ ಹುಡುಗರಿಗಲ್ಲದೇ ಇದು ಇನ್ನು ಯಾರಿಗೆ ? ಸುಮ್ಮನೆ ಹೋಗಿ ನೋಡುವಾ." ಭೌತಶಾಸ್ತ್ರದ ಹೊಳ್ಳರು ಪ್ರಯುಕ್ತಿಸಿದ ಬಾಹ್ಯ ಬಲ. ಆಗ ನನ್ನ ವಯಸ್ಸು ೨೬.

"ನೀವೇನು ಮಹಾ ಕೊಡಗಿನವರೆಂದು ಕೊಡಗರೆಂದು ಜಂಬ ಕೊಚ್ಚುವುದು ? ಇಷ್ಟು ಸಣ್ಣ ವಿಷಯಕ್ಕೆ ಹೆದರುವುದೇ ?" ಕನ್ನಡವ ಕೊಂಕುನುಡಿಯ ಕೆದಿಲಾಯರು ಆಂತರಿಕ ಬಲ ನೀಡಿದರು.

"ನಾರಾಯಣರಾವ್, ನಿಮ್ಮ ಪರವಾಗಿ ಅರ್ಜಿಯನ್ನು ಬರೆದಿದ್ದೇನೆ. ಇಲ್ಲಿ ನಿಮ್ಮ ದಸ್ಕತು ಹಾಕಿದರೆ ಮುಗಿಯಿತು." ಕೃಷ್ಣಮೂರ್ತಿಗಳು ಜಡದ್ರವ್ಯ ರಾಶಿಯಾಗಿದ್ದ ನನ್ನನ್ನು ನ್ಯೂಟನ್ನನ ಒಂದನೆಯ ನಿಯಮಾನುಸಾರ ಚಲಿಸುವಂತೆ ಪ್ರೇರಿಸಿಯೇ ಬಿಟ್ಟರು.

ಈ ರೀತಿ ಯಜ್ಞಪಶುವನ್ನು ವಧಸ್ಥಾನಕ್ಕೆ ಅದರ "ಒಪ್ಪಿಗೆ"ಯಿಂದಲೇ ನೂಕಲಾಯಿತು. ನನ್ನ ಆತ್ಮಹತ್ಯೆಗೆ ನಾನೇ ಕಯ್ಯಾರ ಪರವಾನಿಗೆ ಕೊಟ್ಟೆ.

IQ high but lacks OLQ

ನಾನು ಮೊದಲು ಮಿಲಿಟೆರಿ ಕಂಡದ್ದು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ನನ್ನ ೮–೧೦ರ ವರೆಗಿನ ಪ್ರಾಯದ ದಿವಸಗಳಂದು. ಪ್ರತಿ ಬೇಸಗೆ

ಯಲ್ಲಿಯೂ ಶಾಲೆಯ ಒಂದಿನ ವಿಶಾಲ ಮೈದಾನದಲ್ಲಿ ದಂಡುಗಳು ಡೇರೆ ಹೊಡೆದು ಹಗಲಿಡೀ ಶಿಕ್ಷಣದಲ್ಲಿ ಉದ್ಯುಕ್ತವಾಗಿರುತ್ತಿದ್ದುವು. ನಮ್ಮ ಆಸುಪಾಸಿನ ಹಳ್ಳಿಗ ಧಾಂಡಿಗರು ಆ ಶಿಬಿರಕ್ಕೆ ಸೇರುತ್ತಿದ್ದರು. ಶಿಕ್ಷಣಪ್ರಿಯತೆಗಿಂತಲೂ ಮಿಲಿಟೆರಿಯ ಪುಷ್ಕಳ ಮಾಂಸಾಹಾರವೇ ಈ ಪ್ರಾಣಿಭಕ್ಷಕರಿಗೆ ಅಧಿಕಾಕರ್ಷಣೆ ಎಂದು ಹಿರಿಯರು ಗೇಲಿ ಮಾಡುತ್ತಿದ್ದುದನ್ನು ಕೇಳುತ್ತಿದ್ದೆ. ಮಿಲಿಟೆರಿ ಅಡುಗೇಮನೆಯಿಂದ ಬೀಸುತ್ತಿದ್ದ ಗಾಳಿ ಈ ಕುಚೋದ್ಯಕ್ಕೆ ಪುರಾವೆ ನನಗಂತೂ ಒದಗಿಸಲಿಲ್ಲ. ಅದರ ಕಟು ಮತ್ತು ತೀಕ್ಷ್ಣ ವಾಸನೆ ನನಗೆ ತೀರ ಅಸಹನೀಯವಾಗಿತ್ತು. ನನ್ನ ಒಡನಾಡಿಗಳಾದ ಮಾದಪ್ಪ, ಕುಕ್ಕಪ್ಪ ಮೊದಲಾದ ಕೊಡವರು "ನಿಂಗೇನೋ ಗೊತ್ತು ಪಟ್ಟಾ ಅದರ ಶವಿ" ಎಂದು ನನ್ನನ್ನು ಮೂದಲಿಸುತ್ತಿದ್ದಾಗ "ಸವಿ"ಯನ್ನು "ಶವಿ" ಎಂದು ಹಿಂಸಿಸುವ ಈ ಕಟುಕ ರಿಂದ ದೂರವಿರುವುದು ಕ್ಷೇಮ ಎಂದು ನಾನು ಓಡುತ್ತಿದ್ದೆ. ಮಿಲಿಟೆರಿ ಶಿಕ್ಷಣ ಏನು ನೀಡುತ್ತಿದ್ದರೋ ನನಗೆ ತಿಳಿಯದು. ಆದರೆ ದಂಡುಗಳು ವಾದ್ಯಡೋಲುಗಳ ತಾಳಕ್ಕೆ ಸರಿಯಾಗಿ ನಡೆಯುತ್ತಿರುವಾಗ ಕವಾಯತು ಮಾಡುತ್ತಿರುವಾಗ ನಾನು ತರಗತಿಗೂ ಹೋಗದೆ ಮೈಮರೆತು ನಿಂತು ನೋಡುತ್ತಿದ್ದುದಿತ್ತು. ಬಿಡುವಿದ್ದಾಗ ಅದರ ನಡಿಗೆ ವಾದ್ಯ ತಂತ್ತೂರಿ ಡೋಲು ಇವನ್ನೆಲ್ಲ ಅನುಕರಿಸುತ್ತಿದ್ದೆ. ಪರಿಣಾಮ ಕಾಲುನೋವು, ಹಿರಿಯರಿಂದ ಛೀಮಾರಿ!

ನಾನು ದೊಡ್ಡ ತರಗತಿಗಳಿಗೆ ಬಂದಂತೆ ಇಂಥ ಶಿಬಿರಗಳು ಮಡಿಕೇರಿಯಲ್ಲಿ ನಡೆಯ ಲಿಲ್ಲ. ಕೊಡಗಿನಿಂದ ಸಾಕಷ್ಟು ಜನ ಮಿಲಿಟೆರಿಗೆ ಹೋಗಿದ್ದರೂ, ನನ್ನ ಸಂಬಂಧಿಕರೇ ಅವರಲ್ಲಿ ಕೆಲವರಿದ್ದರೂ, ಸಮವಸ್ತ್ರದಲ್ಲಾಗಲೀ ಸಾಮೂಹಿಕವಾಗಿ ಆಗಲೀ, ನಾನು ಯಾರನ್ನೂ ಮುಂದಿನ ದಿವಸಗಳಲ್ಲಿ ನೋಡಲಿಲ್ಲ. ಪೊಲೀಸಿನವನೇ ನಮಗೆ ರಾಜಬಲದ ಪ್ರತೀಕ, ಆ ದಿವಸಗಳಂದು.

ಮದರಾಸಿನಲ್ಲಿ ೧೯೪೪ರಿಂದ ೧೯೪೭ರ ತನಕ ಗಣಿತ ಎಂಎ ಪದವಿಗೆ ಓದಿದೆ. ೧೯೪೭ರಿಂದ ೧೯೪೮ರ ತನಕ ಮೊದಲ ಕೆಲವು ತಿಂಗಳುಗಳು ಒಂದು ದೊಡ್ಡ ಬ್ಯಾಂಕಿನಲ್ಲಿ ಚಿಕ್ಕ ಸಂಬಳದ ಗುಮಾಸ್ತ ಆಗಿಯೂ ತರುವಾಯ ಒಂದು ಕಾಲೇಜಿನಲ್ಲಿ ಅಧ್ಯಾಪಕ ನಾಗಿಯೂ ಕೆಲಸ ಮಾಡಿದೆ. ನಾನು ಎಂಎಗೆ ಓದಿದ್ದು ಲಯೊಲ ಕಾಲೇಜಿನಲ್ಲಿ. ಅಲ್ಲಿ, ಆರಿಸಿದ ವಿದ್ಯಾರ್ಥಿಗಳಿಗೆ ಮಿಲಿಟೆರಿ ಶಿಕ್ಷಣ ಯುಓಟಿಸಿ ನೀಡುತ್ತಿದ್ದರು. ಆದರೆ ಉನ್ನತ ಬೌದ್ಧಿಕ ಕವಾಯತಿಯಲ್ಲಿಯೇ ತಲ್ಲೀನರಾಗಿದ್ದ ಗಣಿತ ವಿದ್ಯಾರ್ಥಿಗಳು ಯಾರೂ ಆ ಕಡೆ ಎಳ್ಳಷ್ಟೂ ಗಮನ ಹರಿಸಲಿಲ್ಲ. ಮುಂದೆ ಮದರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿದಾಗ (೧೯೪೭) ದೇಶಕ್ಕೆ ಸ್ವಾತಂತ್ರ್ಯ ಬಂತು. ಅಸಂಖ್ಯಾತ ನೂತನ ಸಮಸ್ಯೆಗಳು ಈ ದೇಶದ ಅಸ್ತಿತ್ವವನ್ನೇ ಅಲುಗಿಸುವ ಆಘಾತಗಳನ್ನು ಒಡ್ಡಿ ದುವು. "ಮಿಲಿಟೆರಿ ಸೇರಿ, ದೇಶಸೇವೆ ಮಾಡಿ," "ನಿಮ್ಮ ದೇಶದ ರಕ್ಷಣೆ ನಿಮ್ಮ ಪವಿತ್ರ ಹೊಣೆ" ಎಂದು ಮುಂತಾದ ಜಾಹೀರಾತುಗಳೂ ಭಿತ್ತಿ ಪತ್ರಗಳೂ ಅಂದು ನನ್ನಂಥ ತರುಣರ ಗಮನವನ್ನು ಬಲುವಾಗಿ ಆಕರ್ಷಿಸಿದುವು. ಇಂಥ ಒಂದು ಗಳಿಗೆಯಲ್ಲಿ ನಾನು ವಿಮಾನದಳದ ಒಂದು ಹುದ್ದೆಗೆ ಅರ್ಜಿ ಸಲ್ಲಿಸಿದೆ.

ಮೊದಲ ಆಯ್ಕೆ ನಡೆದದ್ದು ಮದರಾಸಿನಲ್ಲೇ. ಬಂದಿದ್ದವರು ೨೦೦ರಷ್ಟು ಮಂದಿ.

ಎಲ್ಲರೂ ತರುಣರೇ. ಕನಿಷ್ಠ ಎಂಎ ಪದವಿ ಪಡೆದವರೇ. ಓಡಿಸಿದರು, ಉದ್ದುದ್ದವಾಗಿ ಎತ್ತರೆತ್ತರವಾಗಿ ಹಾರಿಸಿದರು, ಪುಲ್ ಅಪ್ಸ್ ಮಾಡಿಸಿದರು, ದಂಡೆ ಬಸ್ಕಿ ತೆಗೆಸಿದರು. ಇನ್ನೂ ಏನೇನೋ ಪರೀಕ್ಷೆಗಳು. ಈ ಒಂದರಿಯಲ್ಲಿ ಇಳಿದು ಬಂದ ೨೦ ಕಾಳುಗಳಲ್ಲಿ ನಾನೊಬ್ಬ ! ನನಗೇ ಆಶ್ಚರ್ಯ. ಆಟ ನನಗೆ ದೂರ, ಕೂಟದಲ್ಲಿ ನಾನೆಂದೂ ಇದ್ದವನಲ್ಲ. ಓಟ ಮತ್ತು ಅಂಗಸಾಧನೆಗಳಲ್ಲಿ (ಇವು ವೈಯಕ್ತಿಕವಷ್ಟೆ) ಆರೋಗ್ಯಪಾಲನೆಯ ದೃಷ್ಟಿಯಿಂದ ಪರಿಣತನಾಗಿದ್ದೆ. ಮುಂದೆ ನಮ್ಮನ್ನು ಅಂತಿಮ ಪರೀಕ್ಷೆಗೋಸ್ಕರ ಡೆಹರಾಡೂನಿಗೆ ಕಳುಹಿಸಿದರು. ಅದೇ ನನ್ನ ಪ್ರಥಮ ಉತ್ತರಭಾರತ ಪ್ರಯಾಣ.

ಡೆಹರಾಡೂನಿನ ಕ್ಲೆಮೆಂಟ್ ಟೌನಿನ ವಿಮಾನದಳದ ಶಿಕ್ಷಣಕೇಂದ್ರದಲ್ಲಿ ಆ ಬೆಳಗ್ಗೆ ಸೇರಿದವರು ೨೦ ಮಂದಿ. ಮದರಾಸಿಗರು ನನ್ನ ಸಮೇತ ೫ ಮಂದಿ. ಉಳಿದವರು ಭಾರತದ ವಿವಿಧ ಭಾಗಗಳವರು. ಪಂಜಾಬಿಗಳು ಮತ್ತು ಕಾಶ್ಮೀರಿಗಳು ದೈತ್ಯರು, ಸುಂದರರು. ಅವರ ದಿಟ್ಟತನ ಅಹಂಕಾರ, ಮೊದಲೇ ಅಳುಕು ಸ್ವಭಾವದ ನನ್ನಂಥವರಿಗೆ ತೀರ ನಿರಾಶೆ ಹುಟ್ಟಿಸಿದುವು. ಇವರ ಜೊತೆ ಸ್ಪರ್ಧಿಸಿ ಗೆಲ್ಲುವುದು ಸಾಧ್ಯವಾದೀತೆ ?

ಅಂದು ಅಪರಾಹ್ಣದಿಂದ ನಮ್ಮ ಪರೀಕ್ಷೆ ಪ್ರಾರಂಭವಾಯಿತು. ಎಲ್ಲರೂ ಚಡ್ಡಿ ಬನಿಯನ್ ಕ್ಯಾನ್ವಾಸ್ ಶೂಸ್ ಸಮವಸ್ತ್ರಧಾರಿಗಳು. ಎದೆಯಮೇಲೆ ಬೆನ್ನಿನಮೇಲೆ ಎತ್ತಿತೋರಿಸುವಂಥ ನಂಬರ್. ನನ್ನ ನಂಬರ್ ೭. ಎಂಎ ಡಿಗ್ರಿ ಪರೀಕ್ಷೆಗೂ ಇದೇ ಸಂಖ್ಯೆ ನನಗೆ ದೊರೆತಿದ್ದುದರಿಂದ ಹೊಸ ಉಮೇದು ಬಂತು. ನಾಲ್ಕು ದಿವಸಗಳ ಪರೀಕ್ಷೆ—ಬರವಣಿಗೆ, ಭಾಷಣ, ಅಂಗಸಾಧನೆ, ಸಾಮೂಹಿಕ ಕಾರ್ಯನಿರ್ವಹಣೆ, ಮನಶ್ಶಾಸ್ತ್ರಜ್ಞನೊಡನೆ ಆತ್ಮೀಯ ವಿಚಾರವಿನಿಮಯ ಎಲ್ಲವೂ ವಿಧ್ಯುಕ್ತವಾಗಿ ನಡೆದುವು. ಮೂರು ಜನ ಪರೀಕ್ಷಕರು ನಮ್ಮನ್ನು ಹಗಲೂ ಇರುಳೂ ಬರಾಕಿನಲ್ಲಿಯೂ ಹೊರಗೂ ತೀಕ್ಷ್ಣವಾಗಿ ಪರಿಶೀಲಿಸಿದರು. ನನ್ನ ಮಟ್ಟಿಗೆ ಎಲ್ಲವನ್ನೂ ಚೆನ್ನಾಗಿಯೇ ಮಾಡಿದ್ದೆ—ಸಾಮೂಹಿಕ ಕಾರ್ಯನಿರ್ವಹಣೆಯಲ್ಲಿ ಮಾತ್ರ ವಿಶೇಷವಾಗಿರಲಿಲ್ಲ. ಬಾಯಿಬಡಕ ಅಹಂಕಾರೀ ಧಾಂಡಿಗರು ಭಾಷಣ ಬರವಣಿಗೆಯಲ್ಲಿ ಪೂರಾ ನಿರ್ವೀರ್ಯರಾಗಿದ್ದರು. ದೈಹಿಕ ಚಟುವಟಿಕೆಗಳಿಗೆ ಗಾತ್ರ ಮುಖ್ಯವಲ್ಲ ಎಂಬ ಅರಿವೂ ನನಗಾಯಿತು. ಏನಾದರೇನು ? ಎಲ್ಲರೂ ನಪಾಸು. IQ high but lacks OLQ—ಇದು ನನಗೆ ಸಿಕ್ಕಿದ ಉಡುಗೊರೆ. ಈ IQ, OLQಗಳೆಂದರೇನು ? ಅವರನ್ನು ಕೇಳಲು ಧೈರ್ಯವಾಗಲಿಲ್ಲ. ಒಡನಾಡಿಗಳನ್ನು ಕೇಳಲು ಅಭಿಮಾನ ಬಿಡಲಿಲ್ಲ. ಅಂದಿನ ನಿಘಂಟುಗಳಲ್ಲಿ (ಗಣಿತ ಗ್ರಂಥಗಳು ಒತ್ತಟ್ಟಿಗಿರಲಿ) ಇವುಗಳ ಉಲ್ಲೇಖವಿರಲಿಲ್ಲ. ಮಿಲಿಟರಿ ಮಿತ್ರನಿಂದ ಮುಂದೊಂದು ದಿವಸ ತಿಳಿಯಿತು: IQ= Intelligence Quotient, OLQ =Officer Like Quality. ನನ್ನ ಧರ್ಮಕ್ಕೆ ಸ್ವಭಾವಕ್ಕೆ ಒಗ್ಗದ ದಾರಿ ನನಗೆ ಬೇಡ. ಆದ್ದರಿಂದ IQ, OLQಗಳ ವಿಚಾರ ಒಂದು ತಿರಸ್ಕಾರದ ನಗು ಬೀರಿ ವಿಷಯ ಮರೆತಿದ್ದೆ.

ಪೂರ್ವಕತೆ

ಕತ್ತಲೆಯ ಮನೆಗೆ ಮಣಿದೀಪ

ಕೊಡಗಿನ ಜಿ. ಎನ್. ತಿಮ್ಮಪ್ಪಯ್ಯ ಮತ್ತು ಅವರ ಧರ್ಮಪತ್ನಿ ವೆಂಕಟಲಕ್ಷ್ಮಮ್ಮನವರ ಎರಡನೆಯ ಮಗುವಾಗಿ ಮೊದಲನೆಯ ಮಗನಾಗಿ ನನ್ನ ಅವತಾರವಾಯಿತಂತೆ (೧೯೨೬). ಜನ್ಮಸ್ಥಳ ತಾಯಿಯ ತವರ್ಮನೆ, ಪುತ್ತೂರಿನ ಆರ್ಯಾಪು ಗ್ರಾಮದ ಮರಿಕೆ, ನನ್ನ ಸೋದರಮಾವ ಕಿರಿಯ ಎ. ಪಿ. ಸುಬ್ಬಯ್ಯನವರ ಮನೆ. ಈ ಮಹಾ ಇತಿಹಾಸಪ್ರವರ್ತಕ ಪರಮಾನಂದಕರ ಶುಭಸಮಾಚಾರವನ್ನು ಸುಬ್ಬಯ್ಯನವರು ಮಡಿಕೇರಿಯಲ್ಲಿದ್ದ ಅವರ ಅಜ್ಜ (ಹಿರಿಯ) ಶ್ರೀ ಸುಬ್ಬಯ್ಯನವರಿಗೆ ಸಾಂಗವಾಗಿ ಅನುನಯ ವಿನಯಪೂರ್ವಕವಾಗಿ ವರದಿ ಮಾಡುವಾಗ ಒಂದು ಸಣ್ಣ ವಿಚಾರ ಬರೆಯಲಿಲ್ಲವಂತೆ : ಕೂಸು ಗಂಡೋ ಹೆಣ್ಣೋ ? ಎಲ್ಲರ ಬಯಕೆ ಇದ್ದದ್ದು ಗಂಡೇ ಆಗಬೇಕೆಂದು. ಚಿಕ್ಕ ಮಕ್ಕಳು ಬಹುಕಾಲದಿಂದ ಆಡದಿದ್ದ ಆ ಹಿರಿಯ ದುಃಖಜೀವಿಗಳ ಮನೆ ಕತ್ತಲೆಯ ಮನೆಯೇ ಆಗಿತ್ತು. ಗಂಡು ಮಣಿದೀಪವೇ ಬರಬೇಕೆಂಬುದು ಹಿರಿಯರ ಆಸೆ. ಈ ವಿಚಾರವೇ ಪತ್ರದಲ್ಲಿಲ್ಲದಿದ್ದರೆ ! ೫೦ ಮೈಲಿಗಳೇನು ಸಾಮಾನ್ಯ ದೂರವೇ ? ಟಪ್ಪಾಲು ಬರಲು ೩ ದಿವಸಗಳು. ಬಸ್ಸಿಗೆ ಒಂದು ಇಡೀ ದಿವಸ. ಆದ್ದರಿಂದ ಮೊಮ್ಮಗ ತಿಮ್ಮಪ್ಪಯ್ಯ (ನನ್ನ ತಂದೆ) ತತ್‌ಕ್ಷಣ ಮರಿಕೆಗೆ ಹೋಗಿ ವಿವರ ತಿಳಿದು ಹಿಂದೆ ಬರಬೇಕೆಂದು ಹಿರಿಯರು ಅವರನ್ನು ಆಜ್ಞಾಪಿಸಿದರು. ಇವರಿಗೆ ಬೇಕಾದದ್ದೂ ಅದೇ. ಪುತ್ರರತ್ನದರ್ಶನದಿಂದ ಪುಳಕಿತಕಾಯರಾದ ತಿಮ್ಮಪ್ಪಯ್ಯ ಮಡಿಕೇರಿಗೆ ಮರಳಲು ಮರೆತರು. ಭಾವನ ಮನೆಯ ಉಪಚಾರ, ಕುಲದೀಪಕನ ಕರ್ಣಮಧುರಗಾನ, ಕಿಚ್ಚು ಹೆಚ್ಚಿಂದ ದೂರದಾ ಮಡಿಕೇರಿಗೆ. ಹಿರಿಯರಿಗೆ ತಾಳ್ಮೆಗೆಟ್ಟಿತು. "ಈಗಿನ ಕಾಲದವರೇ ಹೀಗೆ. ಸೋಮಾರಿಗಳು. ಹಿರಿಯರ ಮೇಲೆ ಗೌರವವಿಲ್ಲ" ಎಂದು ಗುಡುಗುತ್ತ ಸ್ವತಃ ತಾವೇ ಶಿಸ್ತನ್ನು ವಿಧಿಸಲು ಮರಿಕೆಗೆ ಬಂದರು. ಮರಿಮೊಮ್ಮಗನೇ ಉದಯಿಸಿದ್ದು ಖಚಿತವೆಂದು ಖಾತ್ರಿಯಾದ ಮೇಲೆ ಅವರ ಬಕ್ಕ ಬೋಡು ಚೊಕ್ಕ ನಗು ಬೀರಿತಂತೆ. ಅಂದರೆ ನನ್ನ ತಂದೆ ಬಚಾವು ! ಹೀಗೆ ಬಂಧುಬಾಂಧವ ಸಮೇತ ನನ್ನ "ದರ್ಶನ" ಪಡೆದವರು ಪುಣ್ಯಾರ್ಜನೆಯ ದಿವಸದವರೆಗೂ ಮರಿಕೆಯಲ್ಲಿಯೇ ಉಳಿದಿದ್ದು ನನ್ನ ನಾಮಕರಣವನ್ನು ನಡೆಸಿದರು. ತಾಯಿಯ ಆಸೆ ವೆಂಕಟನಾರಾಯಣ ಎಂದಿಡಬೇಕೆಂದು. ಕಾರಣ ಸುಲಭ. ನಾರಾಯಣ ನನ್ನ ಅಜ್ಜನ (ಪಿತಾಮಹ) ಹೆಸರು. ಸೊಸೆ ಮಾವನ ಹೆಸರು ಎತ್ತಿ ಕೂಗುವುದು ನಿಷಿದ್ಧ. ವೆಂಕಟನಾರಾಯಣನೆಂದರೆ ಅಜ್ಜನ ಹೆಸರನ್ನು ಉಳಿಸಿಕೊಂಡಂತೆಯೂ ಆಯಿತು. ತಾಯಿಗೆ ಕರೆಯಲು ವೆಂಕಟ ಎಂಬ ಸಂಕ್ಷೇಪರೂಪ ದೊರೆತಂತೆಯೂ ಆಯಿತು. ಇನ್ನು ವೆಂಕಟಲಕ್ಷ್ಮೀಪುತ್ರ ವೆಂಕಟನಾಮಾಂಕಿತನಾಗಬೇಕೆನ್ನುವಷ್ಟು ಸ್ವಾರ್ಥ ನನ್ನ ತಾಯಿಗೆ ಖಂಡಿತ ಇದ್ದಿರಲಾರದು. ಏನಿಟ್ಟರೋ ಇಡಲಿಲ್ಲವೋ ಮನೆಯವರಿಗೆ ನಾರಾಯಣನಾಗಿಯೂ ಇತರರಿಗೆ ಜೀಟಿ ಅಥವಾ ನಾರಾಯಣ

ರಾವ್ ಅಥವಾ ಜೀಟಿ ನಾರಾಯಣರಾವ್ ಆಗಿಯೂ ಬೆಳೆದು ಬಂದಿದ್ದೇನೆ. ಜಟ್ಟಿ ಎಂದೂ ಕೆಲವರು ಕರೆಯುತ್ತಿದ್ದರು ; ಆದರೆ ಇಲ್ಲಿ ಪ್ರಾಸಮೋಹ ಸ್ವರೂಪದರ್ಶನವನ್ನು ಮರೆಮಾಚಿತ್ತು. ನನ್ನ ಮಟ್ಟಿಗೆ ಇದೊಂದು ಪ್ರತೀಕ, x ಎಂಬಂತೆ! ಬೇರೆ ಯಾವ ಹೆಸರಿನಿಂದ ಕರೆದಿದ್ದರೂ ನಾನು ಇಷ್ಟೇ...ಬೀರಿರುತ್ತಿದ್ದೆ.

ಕಾರುಭಾರಿ ಕರಣಿಕರು

ಮಠಾಧಿಕಾರಿ ಕಾರುಭಾರಿ ಕರಣಿಕ ಅಡಮನೆ ಪಳತಡಕ ಸುಬ್ಬಯ್ಯ, ನಿವೃತ್ತ ಕರಣಿಕ, ಬ್ರಿಟಿಷ್ ಘನಸರಕಾರ ಕೊಡಗು, ಮಡಿಕೇರಿ ಇದು ಅವರ ಬಿರುದುಸಮೇತ ನಾಮಧೇಯ. ಹವ್ಯಕ ಬ್ರಾಹ್ಮಣವರ್ಗದ ಕೊಡಗು ಜಿಲ್ಲಾ ಮಠಾಧಿಕಾರಿ ಇವರು. ಈ ವರ್ಗದವರ ಆಚಾರ ವಿಚಾರ ನೇಮನಿಷ್ಠೆಗಳಿಗೆ ಅಂತಿಮ ತೀರ್ಪು ಇವರದೇ. ಇವರ ನ್ಯಾಯನಿಷ್ಠುರತೆ, ಸತ್ಯಸಂಧತೆ, ಕರ್ತವ್ಯತತ್ಪರತೆ ಇವರಿಗೆ ಶ್ರೀಮಠಾಧೀಶರ ಗೌರವವನ್ನೂ ಮಠಾಧೀನ ಭಕ್ತರ ಭಯಭಕ್ತಿಗಳನ್ನೂ ಒದಗಿಸಿದ್ದುವು. ಪಿತ್ರಾರ್ಜಿತವಾಗಿಯೂ ಸ್ವಂತಾರ್ಜಿತವಾಗಿಯೂ ಲಭಿಸಿದ್ದ ಸಂಪತ್ತು ಅಧಿಕಾರ, ಸ್ವಯಂದಕ್ಷತೆ ಇವುಗಳ ಸಂಗಮವಾಗಿದ್ದ ಸುಬ್ಬಯ್ಯನವರು ಕಾರುಭಾರಿಗಳೆಂದೇ ಪ್ರಸಿದ್ಧರಾಗಿದ್ದರು.

ಜೀವನ ಸರಳ ಸಮೀಕರಣವಲ್ಲ. ಕಾರುಭಾರಿಗಳ ಜೀವನ ಇದಕ್ಕೆ ಅಪವಾದವಲ್ಲ. ಇಳಿವಯಸ್ಸಿನಲ್ಲಿ ಆಘಾತಪರಂಪರೆ ಇವರನ್ನು ಘಾಸಿ ಮಾಡಿತು. ಹೆಂಡತಿ ತೀರಿಹೋದರು. ಹಿರಿಯ ಮಗ ತಿಮ್ಮಪ್ಪಯ್ಯ ಎಳೆ ವಯಸ್ಸಿನ ವಿಧವೆ ಪತ್ನಿಯನ್ನೂ ಇಬ್ಬರು ಕಿರಿಯ ಮಕ್ಕಳನ್ನೂ ಹಿಂದೆ ಬಿಟ್ಟು, ತರುಣನಾಗಿದ್ದಾಗಲೇ, ತಂದೆಗೆ ಬಲಗೈ ಬಂಟನಾಗಿ ನಿಲ್ಲಬೇಕಾಗಿದ್ದಾಗಲೇ, ದೈವಾಧೀನನಾದ. ಎರಡನೆಯ ಮಗನಿಗೂ ಕರಣಿಕರಿಗೂ ವೈಮನಸ್ಯ ಮೂಡಿದುದರಿಂದ ಇವರು ಆಸ್ತಿಯನ್ನು ಪಾಲುಮಾಡಿ ಹಂಚಿಬಿಟ್ಟರು. ಇದರ ಪ್ರಕಾರ ಹಿರಿಯ (ದಿವಂಗತ) ಮಗನ ಏಕಮಾತ್ರ ಪುತ್ರ (ಕಿರಿಯ) ಸುಬ್ಬಯ್ಯ ಮರಿಕೆಯ ಒಡೆಯನಾಗಿ ತಾಯಿ ಮತ್ತು ತಂಗಿ ವೆಂಕಟಲಕ್ಷ್ಮಿಯೊಡನೆ ಅಲ್ಲಿ ನೆಲಸಬೇಕಾಯಿತು. ಎರಡನೆಯ ಮಗನ ಪಾಲಿಗೆ ಮಡಿಕೇರಿಯ ಭವ್ಯಬಂಗಲೆ (ಐನ್ ಮನೆ) ಇತರ ಆಸ್ತಿ ಪಾಸ್ತಿ ಹೋದುವು. ಕರಣಿಕರು ವಿಧವೆಯರಾದ ಮಗಳಂದಿರೊಡನೆ ನೆರೆಯಲ್ಲೇ ಒಂದು ಮನೆ ಮಾಡಿದರು. ಇವರಿಗೆ ಇಬ್ಬರು ಗಂಡು ಮಕ್ಕಳು ನಾಲ್ವರು ಹೆಣ್ಣುಮಕ್ಕಳು. ಈ ಹೆಣ್ಣುಮಕ್ಕಳ ಪೈಕಿ ಹಿರಿಯಾಕೆ ಹಡೆದದ್ದು ಹದಿನಾಲ್ಕು, ಉಳಿದದ್ದು ಎರಡು—ನನ್ನ ತಂದೆ ಮತ್ತು ಚಿಕ್ಕಪ್ಪ. ಉಳಿದ ಮೂವರು ಹೆಣ್ಣುಮಕ್ಕಳೂ ಯುವತಿಯರಾಗಿದ್ದಾಗಲೇ ಗಂಡಂದಿರನ್ನೂ ಮಕ್ಕಳನ್ನೂ ಕಳೆದುಕೊಂಡು ತಂದೆಯ ಆಸರೆ ಪಡೆಯಲು ತಾಯಿಯಿಲ್ಲದ ತವರಿಗೆ ಮರಳಿದರು. ತಂದೆಗೆ ಮಗಳಂದಿರು ಊರುಗೋಲುಗಳಾದರೆ ಇವರಿಗೆ ತಂದೆ ಆಶ್ರಯದಾತರಾದರು. ಈ ಬೇಗೆಯ ಬೀಡಿನಲ್ಲಿ ಆಶೆಯ ಕೊನರುಗಳು ಹಿರಿಮಗಳ ಇಬ್ಬರು ಗಂಡು ಮಕ್ಕಳು. ಎರಡನೆಯ ಮಗನಿಗೆ ಮಕ್ಕಳಿದ್ದರೂ ಅವರದು ತುಂಬುಸಂಸಾರವಾಗಿ ಗೋಡೆಯಡ್ಡದ ಆಚೆ ಮನೆಯಾಗಿದ್ದರೂ ಮುರುಟಿದ ಮನಸ್ಸಿಗೆ ಅದು ಬರ್ಲಿನ್ ಗೋಡೆಯೇ ಆಗಿತ್ತು.

ತಿಮ್ಮಪ್ಪಯ್ಯ (ನನ್ನ ತಂದೆ) ಕಾರುಭಾರಿಗಳ ಮಗಳಮಗ ; ವೆಂಕಟಲಕ್ಷ್ಮಿ (ನನ್ನ

ತಾಯಿ) ಮಗನ ಮಗಳು. ಮೊಮ್ಮಗಳು ಪ್ರಾಯಕ್ಕೆ ಬಂದಾಗ ಈ ಸೋದರಿಕೆಯ ಸಂಬಂಧವೇ ಆಗತಕ್ಕದ್ದು ಎಂಬುದು ಹಿರಿಯರ ಅಭಿಪ್ರಾಯ. ಹೆಣ್ಣಿಗೆ ಅಭಿಪ್ರಾಯ ವಿಲ್ಲ ; ಗಂಡಿನ ಅಭಿಪ್ರಾಯ ಹಿರಿಯರ ಅಭಿಪ್ರಾಯಕ್ಕಿಂತ ಬೇರೆ ಆಗಿರಲು ಸಾಧ್ಯವಿಲ್ಲ— ಇದು ಅಂದಿನ ದಿವಸಗಳ ಹಿನ್ನೆಲೆ. ಹೀಗೆ ಕರಣಿಕರ ಬಳ್ಳಿಯ ಎರಡು ಕವಲುಗಳು ಮತ್ತೆ ಕೂಡಿದಾಗ ಮಕ್ಕಳನ್ನು ಕಾಣಲು ಮನೆ ಕಾತರವಾಗಿದ್ದುದು ಸಹಜವೇ.

ಕೇತು ಬೆಸೆ ತಂದ ಖಾಯಿಲೆ

ನಾನು ಬೆಳೆದದ್ದು ಇಂಥ ಪರಿಸರದಲ್ಲಿ. ಮುತ್ತಜ್ಜ, ಒಬ್ಬರು ಅಜ್ಜ, ಮೂವರು ಕಿರಿಯಜ್ಜಿಯರು, ತಂದೆ, ತಾಯಿ, ಚಿಕ್ಕಪ್ಪ ಇವರು ಮನೆಯ ಹಿರಿಯರು. ನನಗಿಂತ ಮೊದಲು ಹುಟ್ಟಿದ ಕೂಸು ಉಳಿದಿರಲಿಲ್ಲವಾದ್ದರಿಂದ ನಾನೇ ಮನೆಯ ಮಗು, ಮಗು ಗಳೆ ಮಾಣಿಕ್ಯ. ಇದು ಮಡಿಕೇರಿಯ ಮನೆಯಾದರೆ ಮರಿಕೆಗೆ (ತಾಯಿಯ ತವರ್ಮನೆ) ಹೋದರೆ ಅಲ್ಲಿಯ ಬಳಗ ನನ್ನ ಅಜ್ಜಿ (ತಾಯಿಯ ತಾಯಿ) ಸೋದರಮಾವ ಸುಬ್ಬಯ್ಯ, ಅವರ ಹೆಂಡತಿ, ನನಗಿಂತ ಕಿರಿಯವರಾದ ಅವರ ಮಕ್ಕಳು.

ನನಗೆ ಬುದ್ಧಿ ಬರುತ್ತಿದ್ದಂತೆ ಅರಿವಾದದ್ದು ಇಷ್ಟು. ಅತಿ ಮಡಿ. ಸದಾ ಸ್ನಾನ, ಜಪ, ಪೂಜೆ, ದಾನ. ಹಬ್ಬಹರಿದಿನಗಳಿಗೆ ಲೆಕ್ಕವಿಲ್ಲ. ನಿರಂತರ ಬರುವವರ ಹೋಗುವವರ ಸಮ್ಮೇಳನ, ಮನೆಯೊಂದು ಮಹಾನಗರ. ಆದರೆ ಎಲ್ಲೆಲ್ಲೂ ಮುತ್ತಜ್ಜನ ಉಕ್ಕಿನ ಹಿಡಿತ. ಪರಂಪರಾಗತವಾಗಿ ನಡೆದುಬಂದ ಹಬ್ಬ ಉತ್ಸವಗಳು. ಮರಿಕೆಯಲ್ಲೂ ಇವು ಸಾಕಷ್ಟಿ ದ್ದರೂ ಉಕ್ಕಿನ ಬಿಗಿಯಿಲ್ಲದ ಹಿತಕರ ವಾತಾವರಣ ಪಸರಿಸಿತ್ತು. ಸೋದರಮಾವ ನನ ಗಿಂತ ೨೫–೨೬ ವರ್ಷ ದೊಡ್ಡವರಾದರೂ ಅವರು ನನ್ನನ್ನು ಕಾಣುತ್ತಿದ್ದುದು ತಮ್ಮ ನಂತೆ. ಅವರ ನಡೆ ನುಡಿ ಎಲ್ಲವೂ ನನಗೆ ಬಲು ಪ್ರಿಯವಾಗುತ್ತಿದ್ದುವು, ನನಗೆ ತಿಳಿಯ ದಂತೆ ನನ್ನ ಮೇಲೆ ಪ್ರಭಾವಕಾರಿಗಳಾಗಿದ್ದುವು.

ಮುತ್ತಜ್ಜ ನನಗೆ ಕತೆ ಹೇಳಿದರು. ಇಂಗ್ಲಿಷ್, ಕನ್ನಡ, ಲೆಕ್ಕ, ವೇದ ಮಂತ್ರ ಎಲ್ಲ ವನ್ನೂ ಹೇಳಿಕೊಟ್ಟರು. ಚಿಕ್ಕಂದಿನಲ್ಲಿ ನರಪೇತಲನಾದ ಕಡುಖಾಯಿಲಸ್ಥನಾದ ನನ್ನ ರಕ್ಷಣೆ ಮನೆಯ ಹಿರಿಯರಿಗೆ ಬಲು ದೊಡ್ಡ ಸಮಸ್ಯೆಯಾಯಿತು. ನನ್ನ ತರುವಾಯ ಹುಟ್ಟಿದ ನಾಲ್ಕೈದು ಮಕ್ಕಳೂ ಉಳಿಯಲಿಲ್ಲ. ಭರತನಿಗೆ ಪ್ರಾಪ್ತವಾದ ಜಿಂಕೆಮರಿ ನಾನು ಈ ಹಿರಿಯರಿಗೆ. ಇನ್ನು ಮಡಿಕೇರಿಯ ಹವೆ—ಅಲ್ಲಿ ಎರಡೇ ಕಾಲಗಳು : ಮಳೆಗಾಲ, ಅತಿ ಮಳೆಗಾಲ ; ಬ್ರಾಹ್ಮಣರಕೇರಿಯ ಮೂಲೆಯಲ್ಲಂತೂ ಸದಾ ಅಳು ಗಾಲವೇ. ಆಮಾತಿಸಾರ, ನೆಗಡಿ, ಜ್ವರ, ವಾತ, ಕೆಮ್ಮಲು, ಕಜ್ಜಿ ಇವುಗಳ ನಿರಂತರ (ಕ್ರಮಬದ್ಧ) ಪುನರಾವರ್ತನೆ ನನ್ನ ಬಾಲಾಪ್ಯವಂತೆ. ಸೋದರಮಾವ ಹೆಗಲ ಮೇಲೇರಿಸಿ ದೂರದ ಹಳ್ಳಿಯ ಪಂಡಿತರಲ್ಲಿಗೆ ನನ್ನನ್ನು ಒಯ್ದಿದ್ದರಂತೆ. ಬಿಸಿನೀರು ಕುಡಿದರೆ ಉಷ್ಣ, ತಣ್ಣೀರು ಕುಡಿದರೆ ಶೀತ ; ಆದ್ದರಿಂದ ನೀರು ವರ್ಜ್ಯ. ಹಾಲು ಕುಡಿದರೆ ಅಗ್ನಿಮಾಂದ್ಯ, ಮಜ್ಜಿಗೆ ಹೀರಿದರೆ ಕೆಮ್ಮಲು ; ಆದ್ದರಿಂದ ಹಾಲು ಮಜ್ಜಿಗೆ ತ್ಯಾಜ್ಯ. ಅನ್ನ ತಿಂದರೆ ಭೇದಿ, ಗೋದಿ ತಿಂದರೆ ಮಲಬದ್ಧತೆ ; ಆದ್ದರಿಂದ ಅಕ್ಕಿ ಗೋದಿ

ಅಭೋಜ್ಯ. ಹೀಗೆ ನನ್ನ ಒಡಲಿನ ಸ್ಥಿತಿಯಂತೆ. ಅಂತೂ ಈ ಪರಸ್ಪರ ವಿರುದ್ಧ ಬಲಗಳ ನಡುವೆ ಸಮತೋಲ ನನ್ನ ಅಂದಿನ ದಿನಗಳು.

ಹುಟ್ಟಿನಿಂದ ೭ ವರ್ಷ ಕೇತುದೆಸೆ, ಆಗ ಖಾಯಿಲೆ ಕಾಡುವುದು ಸಹಜವೇ. ಮುಂದೆ ಬರುವ ಶುಕ್ರದೆಸೆಯಲ್ಲಿ ಈ ಹುಡುಗನಿಗೆ ಉಜ್ವಲ ಭವಿಷ್ಯ ಕಾದಿದೆ ಎಂದು ಜೋಯಿಸರು ಜಾತಕ ನೋಡಿ ಭವಿಷ್ಯ ನುಡಿದಾಗ ನನಗೆ ಡಬಲ್ ನಿಮೋನಿಯಾ ಆಗಿ ಏರುಸಿರು ಎಳೆಯುತ್ತ ಇದ್ದೆನಂತೆ. ಜೋಯಿಸರ ಆಜ್ಞೆಗೆ ಹೆದರಿಯೇ ಇರಬೇಕು— ಖಂಡಿತವಾಗಿಯೂ ಪಾರುಣಿ ಡಾಕ್ಟರರ ಆಂಟಿ ಫ್ಲೋಜಿಸ್ಟೈನ್ ಲೇಪನ ಮತ್ತು ಕಹಿ ಮದ್ದಿಗೆ ಹೆದರಿ ಅಲ್ಲ—ಕೇತು ನನ್ನನ್ನು ಒಯ್ಯಲಿಲ್ಲ. "ನಮ್ಮ ನಾರಾಯಣನಿಗೆ ನೆಗಡಿ ಇಲ್ಲದ ದಿವಸ ಯಾವಾಗ" ಎಂದು ನನ್ನ ತಾಯಿ ಇಂದಿಗೂ ಗೇಲಿಮಾಡುವುದುಂಟು. ಅದಕ್ಕೆ ಸರಿಯಾಗಿ ಇಂದಿಗೂ ಮಡಿಕೇರಿಗೆ ಹೋದಾಗ ನನಗೆ ನೆಗಡಿ ಆಗಿಯೂ ಆಗುತ್ತದೆ. ತಾಯಿ ಮಾತು ಹುಸಿಯಾದೀತೇ !

"ಇವನ ಖಾಯಿಲೆಗೆ ಮದ್ದು ಒಂದೇ—ಇವನನ್ನು ದ್ವಿಜನನ್ನಾಗಿ ಮಾಡುವುದು." ಕರ್ಮಠ ಬ್ರಾಹ್ಮಣ ಸಂಪ್ರದಾಯ, ಐದನೆಯ ವರ್ಷದಲ್ಲಿಯೇ ಬ್ರಹ್ಮೋಪದೇಶವಾಗ ಬೇಕಾದದ್ದು ನ್ಯಾಯ. ಇದು ಎಂಟನೆಯ ವರ್ಷದವರೆಗೂ ಮುಂದುವರಿದಾಗ "ವರುಷ ವೆಂಟು (ಹದಿನೆಂಟಲ್ಲ !) ಉಪನಯನವಿನ್ನೂ ಇಲ್ಲ" ಎಂದು ನೆರೆಕೆರೆಯವರು ಆಡಿ ಕೊಂಡಾಗ ಕರಣಿಕರ ಪ್ರತಿಷ್ಠೆಗೆ ಕಳಂಕ ತಗುಲಿದಂತಾಯಿತು. ಆಗಲೇ ನನಗೆ ಮುತ್ತಜ್ಜ ನೊಡನೆ ದನಿಗೂಡಿಸಿ ವೇದಮಂತ್ರಗಳು ಶ್ರುತಿ ರಾಗ ಲಯಬದ್ಧವಾಗಿ ಬಾಯಿಪಾಠ ಬರುತ್ತಿದ್ದುವು. ೧೯೩೪ರ ಫೆಬ್ರವರಿ ೧೬ರಂದು ನನಗೆ ಬ್ರಹ್ಮೋಪದೇಶವೆಂದು ನಿಶ್ಚಯ ವಾದಾಗ ಮುತ್ತಜ್ಜನ ಪ್ರತಿಷ್ಠೆ ಉಳಿಯಿತು; ಅಜ್ಜಿಯಂದಿರು ಬ್ರಹ್ಮೋಪದೇಶದ ಮುಂದಿನ, ಜೀವನದ ಎರಡನೆಯ, ಘಟನೆಯನ್ನು ಎದುರು ನೋಡುತ್ತಿದ್ದರು ; ಅಧಿಕೃತ ವಾಗಿ ಶ್ರೀ ಸತ್ಯನಾರಾಯಣ ಪೂಜೆಯನ್ನು ಕೊಡವರ ಮನೆಯಲ್ಲಿ ಮಾಡಲು ಲೈಸೆನ್ಸು ದೊರೆಯಿತಲ್ಲ ಎಂದು ನನಗೆ ನೆಮ್ಮದಿಯಾಯಿತು; ಇವನು ಅಭಿನವಶಂಕರಾಚಾರ್ಯ ನಾಗಿ ಪೌರೋಹಿತ್ಯದಲ್ಲಿ ನಮ್ಮ ಸಂಪ್ರದಾಯವನ್ನು ಬೆಳೆಸಿಕೊಂಡು ಹೋಗುತ್ತಾನೆ ಎಂದು ತಾಯಿಗೆ ತೃಪ್ತಿಯಾಯಿತು.

ಗಾತ್ರ ಪ್ರಾಯಗಳಿಂದ ಮಾತ್ರ ನಾನು ಅಂದು ಅಣುಗ. ಬೆಳೆದದ್ದು ಪೂರಾ ದೊಡ್ಡವ ರೊಡನೆ. ಸಮಪ್ರಾಯದವರೊಡನೆ ಒಂದು ದಿವಸವೂ ಬೆರೆಯಲಿಲ್ಲ, ಆಡಲಿಲ್ಲ. "ತಿಮ್ಮಪ್ಪಯ್ಯನವರ ಮಗ, ನೀವು ಒಳ್ಳೆಯ ಹಾಕಿ ಆಟಗಾರರಾಗಬೇಕಲ್ಲ ?" ಎಂದು ಮೊನ್ನೆ ತಾನೆ (೧೯೭೦) ನನ್ನ ತಂದೆಯ ಸಹೋದ್ಯೋಗಿ ಒಬ್ಬರು ಪ್ರಶ್ನಿಸಿದಾಗ "ನನ್ನ ಆಸಕ್ತಿ ಆ ಕಡೆ ಬೆಳೆಯಲಿಲ್ಲ" ಎಂದು ತಪ್ಪಿಸಿಕೊಂಡೆ. ಶಾಲೆಗೆ ಹೋಗಿ ಬರುತ್ತಿದ್ದೆ. ಆಗ ಎರಡನೆಯ ಕ್ಲಾಸು. ಮುಂದೆ ಹೇಗೂ ಪುರೋಹಿತನಾಗಿ ಸನಾತನ ಸತ್ಸಂಪ್ರದಾಯವನ್ನು ರಕ್ಷಿಸಿಕೊಂಡು ಹೋಗಬೇಕಾದವನಾದ್ದರಿಂದ ಈ ಮ್ಲೇಚ್ಛವಿದ್ಯೆ ತಿರಸ್ಕಾರಯೋಗ್ಯ ಎಂಬ ದೃಢಭಾವನೆ ಬೇರೂರಿತ್ತು.

ಎಳೆವೆಯ ಕೆಲವು ಪ್ರಭಾವಗಳು

ಚಿಕ್ಕಂದಿನ ಪ್ರಭಾವಗಳನ್ನು ನೆನೆಯುವಾಗ ಮೊದಲ ನೆನಪಾಗುವುದು ಮುತ್ತಜ್ಜ ಕರಣಿಕರ ಭವ್ಯಗಾತ್ರ, ಅವರಿಗಾಗ ೮೫ರ ಹರೆಯ. ಪ್ರಾಯದ ಭಾರದಿಂದ ಸ್ವಲ್ಪ ಬಗ್ಗಿದ್ದರೂ ಬಲು ಗಂಭೀರ ವ್ಯಕ್ತಿತ್ವ. ಚಂದನ ವರ್ಣದ ಮೈ. ಬಿಳಿ ಗಿರಿಜಾ ಮೀಸೆ. ಕಂಚುಕಂಠ. ಅವರೇ ನನಗೆ ಮೊದಲ ಗುರು.

ಕಿರಿಯಜ್ಜಿ ಒಬ್ಬರು ಬಲು ಸಂಗೀತಪ್ರಿಯರು. ಅವರಿಗೆ ಹಾಡುಗಾರಿಕೆಯಲ್ಲಿಯೂ ಪಿಟೀಲುವಾದನದಲ್ಲಿಯೂ ಶಾಸ್ತ್ರೋಕ್ತ ಶಿಕ್ಷಣ ದೊರೆತಿತ್ತು. ಅವರು ಎಷ್ಟು ಹೊತ್ತಿಗೂ ಹಾಡನ್ನು ಹೇಳುತ್ತ ಅಥವಾ ರಾಗ ಎಳೆಯುತ್ತ ಇರುತ್ತಿದ್ದರು. ಎಂಥ ಹಾಡುಗಳವು—ತ್ಯಾಗರಾಜರು, ಶ್ಯಾಮಾ ಶಾಸ್ತ್ರಿಗಳು, ಮುತ್ತುಸ್ವಾಮಿ ದೀಕ್ಷಿತರು, ಪುರಂದರದಾಸರು, ಕನಕದಾಸರು, ಗದುಗು ಜೈಮಿನಿ ಭಾರತಗಳಿಂದಲೂ ತೊರವೆ ರಾಮಾಯಣದಿಂದಲೂ ಪದ್ಯಗಳು, ಬಸವಣ್ಣ ಅಕ್ಕಮಹಾದೇವಿಯರ ವಚನಗಳು, ಅಸಂಖ್ಯಾತ ಸಂಸ್ಕೃತ ಶ್ಲೋಕಗಳು ಇತ್ಯಾದಿ. ಸಾಯಂಕಾಲವಾಗುವುದೇ ತಡ ಬ್ರಾಹ್ಮಣರ ಮತ್ತು ಕೊಡವರ ಹುಡುಗಿಯರು ಮನೆಯಲ್ಲಿ ಸೇರುತ್ತಿದ್ದರು—ಸಂಗೀತಪಾಠ. ಅಳುಕೋ ನಾಚಿಕೆಯೋ ಅಂತೂ ನಾನು ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯಲಿಲ್ಲ. ಆದರೆ ಅಂದು ಮೂಡಿದ ಆಸಕ್ತಿ ಸದಭಿರುಚಿಗಳು ವೃದ್ಧಿಯಾಗುತ್ತಲೇ ಬಂದಿವೆ. ಮದರಾಸಿನಲ್ಲಿ ಓದುತ್ತಿದ್ದಾಗ ಮುಂದೆ ಉದ್ಯೋಗದಲ್ಲಿದ್ದಾಗ ಉನ್ನತಮಟ್ಟದ ಸಂಗೀತಗಾರರ ಖಚೇರಿಗಳಿಗೆ ಹೋಗುವ ಯೋಗ ಲಭಿಸಿತು. ನನ್ನ ಪ್ರಥಮ ಒಲವು ಮೃದಂಗ--ತಾಳ. ಇಂದಿಗೂ ಅದನ್ನು ಒಂದಲ್ಲ ಒಂದು ದಿವಸ ಕಲಿತೇನು (ಪಾಲ್ಘಾಟ್ ಮಣಿ ಅಯ್ಯರರಿಂದ ಮಾತ್ರ) ಎಂಬ ಆಸೆ ಇದೆ.

ತಂದೆಯಿಂದ ನಾನು ಪಡೆದದ್ದು ದೈಹಿಕ ಮಾನಸಿಕ ತ್ರಾಣ, ಹಿಡಿದ ಕಾರ್ಯದಲ್ಲಿ ಶ್ರದ್ಧೆ ಉತ್ಸಾಹ, ಸ್ವಂತಲಾಭದ ಕಡೆ ದಿವ್ಯ ನಿರ್ಲಕ್ಷ್ಯ, ಕಡುಪ್ರಾಮಾಣಿಕತೆ ಮತ್ತು ನಿಷ್ಠೆ. ಅವರಷ್ಟೇ ಒರಟ ನಿಷ್ಠುರಿಯೂ ನಾನು ಹೌದು. ಆದರೆ ಅವರ ದೈಹಿಕದಾರ್ಢ್ಯ ನನಗಿಲ್ಲ. ಆದ್ದರಿಂದ ಆ ಮುಂಗೋಪವೂ ಇಲ್ಲ. ಮಹಾ ಬಲವಂತ, ಮುಂಗೋಪಿ, ದೈಹಿಕವಾಗಿ ಭೀಮನೇ—ಇದು ನನ್ನ ತಂದೆ. ವಿದ್ಯಾರ್ಥಿಜೀವನದಲ್ಲಿ "ಏನೋ ಪಟ್ಟಾ," "ಪಟ್ಟ ಕುಟ್ಟಿಯ ದವಲತ್ತು" ಎಂದು ಮುಂತಾಗಿ ಕೊಡವರ ದೊಡ್ಡ ಹುಡುಗನೊಬ್ಬ ಇವರನ್ನು ಅಣಕಿಸಿದ್ದನಂತೆ. ಕೈಗಿಳಿಯದ ಕೋಪ ದವಡೆಗೆ ಕುತ್ತ ಎಂದು ಅರಿತ ಇವರು ಅಂದಿನಿಂದ ಶುರುಮಾಡಿಯೇ ಬಿಟ್ಟರಂತೆ—ಹಸಿಕಡಲೆ ಉಣಿಸು. ಅಂಗಸಾಧನೆ, ನಿಷ್ಠಾಪೂರ್ವಕ ತಪಸ್ಸು. ಪರಿಣಾಮ! ಮುಂದಿನ ವರ್ಷ ಅದೇ ಹಿಡಿಂಬನಿಗೆ ಈ ಭೀಮನ ಪ್ರಹಾರ. ಇವರು ಇಂಟರ್ಮೀಡಿಯೆಟ್ ವರೆಗೆ ಓದಿ ಕೊಡಗಿನಲ್ಲಿ ಸರ್ಕಾರೀ ನೌಕರಿಗೆ ಸೇರಿದರು. ಸಹಕಾರ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್, ಮುಂದೆ ಕೇಂದ್ರ ಸಹಕಾರ ಬ್ಯಾಂಕಿನ ಕಾರ್ಯದರ್ಶಿಯಾಗಿ ನಿವೃತ್ತರಾದರು. ಇವರಿಗೆ ಕಚೇರಿ ಕೆಲಸ ಮೊದಲು, ಮನೆ ಮಂದಿ ಮಕ್ಕಳು ಎಲ್ಲರೂ ತರುವಾಯ. ಸರಕಾರದ ವ್ಯವಹಾರದಲ್ಲಿ ಇವರು ಕಂಡದ್ದು ಎರಡೇ ಜಾತಿ—ಸತ್ಯವಂತರು, ಅಸತ್ಯವಂತರು. ಮೊದಲಿನವರ ವಿಚಾರದಲ್ಲಿ ಇವರೆಷ್ಟು

ದಯಾಶೀಲರೋ ಸಹಕಾರಿಗಳೋ ಎರಡನೆಯವರ ವಿಚಾರದಲ್ಲಿ ಅಷ್ಟೇ ನಿಷ್ಠುರರೂ ದಂಡಕರು. ನನ್ನ ಅವರ ಸಂಬಂಧ ಎಂದೂ ನಿಕಟವಾಗಲಿಲ್ಲ.

ನನ್ನ ತಾಯಿ. ಪಾದರಸದಂಥ ತೀಕ್ಷ್ಣ ಮನಸ್ಸು. ಸಂಗೀತ ಸಾಹಿತ್ಯ ಲಲಿತಕಲೆಗಳಲ್ಲಿ ಅಪಾರಾಸಕ್ತಿ. ಗಾಂಧೀಭಕ್ತಿ (೧೯೩೦ರ ದಿವಸಗಳು) ; ಹಿಂದೀ ಕಲಿತರು. ಖಾದಿ ಧರಿಸಿದರು. ಚರಖಾದಲ್ಲಿ ನೂತರು. ಆದರೆ ಅವಿಭಕ್ತ ಕುಟುಂಬದ ಸಾವಿರ ಚಕ್ರಗಳ ತೇರಿನ ಒಂದು ಚಕ್ರ ಇವರು. ಸಂಬಂಧ ಮನೆಯೊಳಗಿನದೇ ಆದರೂ ಮನೆ ಅವರದಲ್ಲ, ಹಿರಿಯರದು—ಅತ್ತೆಯಂದಿರದು. ಅಂದಿನ ಸಂಪ್ರದಾಯವೇ ಹಾಗೆ. ತನ್ನ ಮಗ (ನಾನು) ಖಂಡಿತವಾಗಿಯೂ ಈ ನರಕದಲ್ಲಿ (ಅವಿಭಕ್ತ ಕುಟುಂಬ) ಇರಬಾರದು ಎಂಬುದು ಅವರ ದೃಢನಿಶ್ಚಯವಾಗಿತ್ತು. ಪುರೋಹಿತನಾಗಿ ದೇಶಕಲ್ಯಾಣವನ್ನು ಸಾಧಿಸುವ ದೊಡ್ಡ ವ್ಯಕ್ತಿ ನಾನಾಗಬೇಕೆಂದು ಅವರು ಬಗೆದಿದ್ದರು.

ನನ್ನ ಮೇಲೆ ಬಲು ಪರಿಣಾಮಕಾರೀ ಪ್ರಭಾವ ಬೀರಿದ ಹಿರಿಯರು ಇನ್ನಿಬ್ಬರು. ಒಬ್ಬರು ನನ್ನ ಚಿಕ್ಕಪ್ಪ. ಇವರು ನನಗಿಂತ ೧೩–೧೪ ವರ್ಷ ಹಿರಿಯರು. ಮಡಿಕೇರಿಯ ನಮ್ಮ ಕರ್ಮಠ ಬ್ರಾಹ್ಮಣಸಂಪ್ರದಾಯದಲ್ಲಿ ಈ ಚಿಕ್ಕಪ್ಪ ಪೂರಾ ಅಪವಾದರೂಪರು. ಆಗ ಅವರಿಗೆ ಜೀವನದಲ್ಲಿ ನೆಲೆ ಸಿಕ್ಕಿರಲಿಲ್ಲ. ತಾಯಿಯ ಕೊನೆಯ ಮಗನಾಗಿ ಅಕ್ಕರೆಯಿಂದ ಬೆಳೆದ ಇವರು ಶಾಲೆಗೆ ಹೋಗಿ ಅಲ್ಲಿಯ ನೀರಸ ಏಕತೆಯಲ್ಲಿ ದನಿಗೂಡಿಸಿ "ಕುರಿಗಳು ಸಾರ್ ನಾವು ಕುರಿಗಳು" ಎಂದು ಅರಚಲು ಒಪ್ಪಲಿಲ್ಲ. ಜನಿವಾರ, ಪೂಜೆ, ಪುರಸ್ಕಾರ ಇವರಿಗೆ ಅರ್ಥವಾಗದ ಸಂಕೇತಗಳಾದುವು. ಪ್ರತಿಯೊಂದು ಸಂಪ್ರದಾಯದ ಮನೋಧರ್ಮವೂ ಒಂದೇ. ಅದಕ್ಕೆ ಅನುಗುಣವಾಗಿ ಸ್ವಂತತ್ವವನ್ನು ಮರೆತು ವರ್ತಿಸುವವರು ಅದರ ಮಿತ್ರರು ; ಅದರ ಮೌಲ್ಯವನ್ನು ಧ್ವನಿಯಲ್ಲಿ ಪ್ರಶ್ನಿಸಿದರೂ ಅವರು ವೈರಿಗಳು. ನಮ್ಮ ಮನೆಯ ಅಂದಿನ ವಾತಾವರಣದಲ್ಲಿ ಕಾರುಭಾರಿಗಳ ಪಾಲಿಗೆ ಚಿಕ್ಕಪ್ಪ ಬಿಡಿಸಲಾಗದ ಕಗ್ಗಂಟು ; ತಾಯಿಗೆ ಪ್ರೀತಿಯ ಕಡೆಕುಟ್ಟಿ. ಆದರೆ ಇದು ಸಂಪ್ರದಾಯದ ವಿರುದ್ಧ ನಿಲ್ಲುವಷ್ಟು ಶಕ್ತಿಯುತವಲ್ಲ. ಚಿಕ್ಕಮ್ಮಂದಿರಿಗೆ ಇವರು ನಿರಂತರ ತಲೆನೋವು. ಅಣ್ಣನಿಗೆ ದಾರಿ ತಪ್ಪಿದ ಅಣುಗ. ನನಗೋ ಮಹಾ ಆದರ್ಶ. ಮನೆಯಲ್ಲಿ ನನ್ನೊಡನೆ ಮಾತ್ರ ಅವರು ಆತ್ಮೀಯರಾಗಿದ್ದುದು. ಹಿಂದಿ ಸಿನಿಮಾ ಹಾಡುಗಳು, ಇಸ್ಪೀಟ್ ಎಲೆ ಚಳಕಗಳು, ಸಾಹಸದ ಕತೆಗಳು, ಗಣಿತಶಾಸ್ತ್ರದ ಮೂಲ ಸೂತ್ರಗಳು ಇವನ್ನೆಲ್ಲ ಅವರು ನನಗೆ ಸಮಪ್ರಾಯದವನೆಂಬ ಆತ್ಮೀಯತೆಯಿಂದ ಹೇಳಿಕೊಡುವಾಗ ಅವರೇ ನನಗೆ ದೇವರು. ಲೆಕ್ಕವನ್ನು ನಾನು ಕಲಿತದ್ದು ಅವರಿಂದ. ಸಾಹಸಪ್ರಿಯತೆಯ ಬೀಜ ಬಿತ್ತಿದ್ದು ಅವರು. ಇಂದು (೧೯೭೨) ದುರ್ದೈವದಿಂದ ಅವರು ಬದುಕಿಲ್ಲ. ಅವರ ಜೀವನ ನಿರಂತರ ಸಾಹಸ, ಪ್ರಯೋಗಗಳ ಗಾಥಾ. ೧೯೩೦ನೇ ಇಸವಿ ೧೯೭೦ರಲ್ಲಿ ಬಂದಿದ್ದರೆ ಹೇಗಿರಬಹುದು? ಭವಿಷ್ಯದ ಪ್ರತೀಕ ಇವರಾಗಿದ್ದರು.

ಇನ್ನೊಬ್ಬರು ನನ್ನ ಸೋದರಮಾವ ; ಈಚೆಗೆ ಹೆಣ್ಣು ಕೊಟ್ಟ ಮಾವನೂ ಹೌದು. ಇವರು ನನ್ನ ತಾಯಿಯ ಗಂಡುರೂಪ. ಬಲು ತೀಕ್ಷ್ಣ ಮನಸ್ಸು. ಅತ್ಯುದಾರ ಸ್ವಭಾವ. ಸಾಹಿತ್ಯ ಸಂಸ್ಕೃತಿಗಳಲ್ಲಿ ಅಪಾರ ಆಸಕ್ತಿ. ಸ್ವತಃ ಉತ್ತಮ ಬರಹಗಾರರು. ಭಾಷಾಂತರಕಾರರು. ವ್ಯಕ್ತಿ ಇತರರಿಗಾಗಿಯೇ ಬಾಳುವುದು ಪರಮಪುರುಷಾರ್ಥ ಎಂದು ನಂಬಿ

ತೀರ ಸಹಜವಾಗಿ ಅದನ್ನು ಅನುಷ್ಠಾನಕ್ಕೆ ತಂದಿರುವ ಇವರ ಜೀವನ ನನಗೆ ಸಕಲ ಸದ್ಗುಣಗಳ ಆಕರ.

ಉಪನಯನ ತಂದ ಅಪಾಯ

ಉಪನಯನ ವಿಜೃಂಭಣೆಯಿಂದ ನಡೆಯಿತು. ಬಂದಂಥ ಬಂಧುಬಳಗದವರ ಸಂಖ್ಯೆ, ವೇದಮಂತ್ರಘೋಷ, ಅನ್ನಸಂತರ್ಪಣೆ ನಡೆದ ವೈಭವ ಇವೆಲ್ಲ ಅಭಿನವ ಶಂಕರಾಚಾರ್ಯರನ್ನು ಮಡಿಕೇರಿಗೆ ಆವಾಹಿಸಲು ತಕ್ಕುದಾಗಿದ್ದುವು. ರಾಮಾಯಣ ಮಹಾಭಾರತಗಳನ್ನು ಕೇಳಿ ತಕ್ಕಮಟ್ಟಿಗೆ ಓದಿ ಅತಿ ಭಾವುಕನಾಗಿದ್ದ ನನಗೆ ಇನ್ನೇನು ಕ್ಷೀರಸಾಗರಶಯನ, ಶೇಷತಲ್ಪ ಸುಖನಿದ್ರಿತ, ಬ್ರಹ್ಮಾದ್ಯಮರಪ್ರಾರ್ಥಿತ ಮಹಾವಿಷ್ಣು ದರ್ಶನ ಸಿದ್ಧಿಸಿದಂತೆಯೇ. ಮಡಿಕೇರಿಯ ದೊಡ್ಡ ಗುಡ್ಡವೇರಿ ಅರ್ಧನಿಮೀಲಿತ ನಯನನಾದರೆ ಸ್ಮರಭಸ್ಮಾಲಂಕೃತಾಂಗಂ ರತಿವಲಯ ಸಮಭ್ಯರ್ಚಿತಾಂಘ್ರಿದ್ವಯಂ ಅಲ್ಲಿಂದೇ ಮಾರ್ಕಾಂಡೇಯ ರಕ್ಷಣೆಗೆ ಪ್ರತ್ಯಕ್ಷನಾಗುವುದು ನಿಶ್ಚಯ. ನನಗೆ ವೇದಮಂತ್ರ ಕಲಿಸಿದ ಗುರುಗಳು ಶ್ರೀಸುಬ್ರಹ್ಮಣ್ಯ ಅವಧಾನಿಗಳು. ವೇದಪಾಠ, ಪೂಜೆ, ಖಾಯಿಲೆ ಇವು ಮುಂದಿನ ನಾಲ್ಕು ವರ್ಷ ನನ್ನ ನಿರಂತರ ಒಡನಾಡಿಗಳು

ಶಾಲೆ ಬೇಡ ಪೌರೋಹಿತ್ಯ ಬೇಕು ಎನ್ನುವ ತಾಯಿಯ ಆಕಾಂಕ್ಷೆ ಕುರಿತು ಇತರರಿಗೆ ಯಾರಿಗೂ ವಿಶ್ವಾಸವಿರಲಿಲ್ಲ. ನನಗೆ ಖಚಿತ ಅಭಿಪ್ರಾಯವೇನೂ ಇದ್ದಿರಲಾರದು. ಕ್ಲಾಸಿನಲ್ಲಿ ನನಗೆ ಮೊದಲ ರ್‍ಯಾಂಕ್ ಬರುತ್ತಿತ್ತು, ಹಲವಾರು ಬಹುಮಾನಗಳೂ (ಓದಿನಲ್ಲಿ ; ಆಟ ಬಲುದೂರ) ಲಭಿಸುತ್ತಿದ್ದುವು. ಈ ಮಧ್ಯೆ ಪದ್ಯ. ಪ್ರಬಂಧ, ಕತೆ. ನಾಟಕ ಬರೆಯುವ ಗೀಳು ಅಂಟಿತು. ಅವೆಲ್ಲವೂ ಬಹುತೇಕ ಪುಟ್ಟಪ್ಪನವರ ವಿವಿಧ ಬರವಣಿಗೆಗಳ ಅಂಧಾನುಕರಣೆಗಳು. ಇವುಗಳಿಂದೆಲ್ಲ ಆದ ಪರಿಣಾಮ : ಅರ್ಥವಾಗದ ವೇದಮಂತ್ರ, ಪೂಜೆಯ ತಂತ್ರಗಳಿಂದ ಪ್ರಯೋಜನವೇನು ಎನ್ನುವ ಪ್ರಶ್ನೆ ಬೆಳೆದದ್ದು. ದೇವರ ದರ್ಶನವೇನೂ ಸಿದ್ಧಿಸಿರಲಿಲ್ಲ. ಇಂಗ್ಲಿಷ್, ಕನ್ನಡ. ಲೆಕ್ಕ. ಸಂಗೀತ ನೀಡುತ್ತಿದ್ದ ಸಂತೋಷ. ಮಂತ್ರದಿಂದ ಬರಲಿಲ್ಲ. ಚಿಕ್ಕಪ್ಪನವರ ಪ್ರಯೋಗಗಳು—ಸಾಬೂನು ತಯಾರಿಕೆ, ಆಯುರ್ವೇದಾಸವಗಳ ನಿರ್ಮಾಣ, ಸ್ವಂತ ಖಾದಿ ಭಂಡಾರದ ವ್ಯಾಪಾರ, ಮುದ್ರಣ ಇತ್ಯಾದಿ—ಒಂದು ಹೊಸಲೋಕವನ್ನೇ ಕಣ್ಣ ಮುಂದಿಟ್ಟುವು. ಹೀಗೆ ವೈಜ್ಞಾನಿಕ ಮತ್ತು ಪ್ರಾಯೋಗಿಕ ದೃಷ್ಟಿ ಅವರ ನಿಕಟ ಸಂಪರ್ಕದಿಂದ ಮುಂದುವರಿದಂತೆ ಮಂತ್ರತಂತ್ರ, ದೂರವಾದುವು. ಅವಧಾನಿಗಳು ಬಲು ನೊಂದುಕೊಂಡರು. ಮಕ್ಕಳಿಲ್ಲದ ಆ ವೃದ್ಧರಿಗೆ ನನ್ನ ಮೇಲೆ ಅಪಾರ ವಿಶ್ವಾಸ. ತಮ್ಮ ಪಟ್ಟದ ಶಿಷ್ಯ ಎಂದು ಅಭಿಮಾನವಿತ್ತು. ನಾನೂ ಮ್ಲೇಚ್ಛವಿದ್ಯೆಗೇ ಶರಣಾದದ್ದು ಅವರ ಬಾಯಿಯಿಂದ "ಕಾಲಾಯ ತಸ್ಮೈನಮಃ" ಎಂಬ ಉದ್ಗಾರವನ್ನು ಹೊರಡಿಸಿರಬೇಕು.

ಶಾಲೆಯಲ್ಲಿ ಏರಿದ ಎತ್ತರ

ನಾನು ಓದಿನಲ್ಲಿ ದಡ್ಡನಲ್ಲ. ಲೆಕ್ಕ ಸಾಹಿತ್ಯ ನನಗೆ ಆಸಕ್ತಿಯ ವಿಷಯಗಳು. ಚರಿತ್ರೆ, ಭೂಗೋಳ, ಡ್ರಾಯಿಂಗ್, ಆಟ ಖಂಡಿತ ಅಲ್ಲ ಎಂಬ ಅರಿವು ಕ್ರಮೇಣ ಮೂಡಿತು.

ಅಂದಿನ ಕಾಲದಲ್ಲಿ ಪಾಠವೆಲ್ಲವೂ ಇಂಗ್ಲಿಷ್ ಮಾಧ್ಯಮದಲ್ಲಿಯೇ. ಎಲ್ಲಿಯವರೆಗೆಂದರೆ ಕನ್ನಡವನ್ನೂ ಇಂಗ್ಲಿಷಿನಲ್ಲಿಯೇ ಹೇಳಿಕೊಡುತ್ತಿದ್ದರು. "ಸಾದಿದಳು ನೃಪನಂಘ್ರಿಯಂನು ನಯನೋದಕದ ಧಾರೆಯಲಿ..." ಇದರ ಅರ್ಥವನ್ನು "She washed the feet of the king with tears rolling down her eyes" ಎಂದು ಬರೆಸುತ್ತಿದ್ದರು; ಕನ್ನಡ ಅರ್ಥವನ್ನೂ ಹೇಳುತ್ತಿದ್ದರು. ಹೀಗಿದ್ದರೂ ನಮ್ಮ ಕನ್ನಡದ ಮಟ್ಟ ಯಾವ ರೀತಿಯಲ್ಲಿಯೂ ಕಡಿಮೆಯಿರಲಿಲ್ಲ. ಪಂಪ, ರನ್ನರನ್ನು ಸರಾಗವಾಗಿ ಓದಿ ಅರ್ಥಸ್ವಾರಸ್ಯವನ್ನೂ ಛಂದೋವಿನ್ಯಾಸಗಳನ್ನೂ ಗ್ರಹಿಸಲು ನಾವು ಪ್ರೌಢಶಾಲೆ ಬಿಡುವ ವೇಳೆಗೆ ಅರ್ಹತೆ ಪಡೆದಿದ್ದೆವು.

ಗುರುಗಳಿಗೆ ನಾನು ಅಚ್ಚುಮೆಚ್ಚಿನ ಶಿಷ್ಯ. ಕಾರಣ ಸುಲಭ. ಸಾಮಾನ್ಯವಾಗಿ ಮೊದಲನೆಯ ರ್‍ಯಾಂಕ್, ಅತಿವಿಧೇಯ, ಪಾದ ಸವಾಲುಗಳು ನನ್ನ ಡಿಕ್ಷನರಿಯಲ್ಲಿರಲಿಲ್ಲ. ಆದರೆ ನಾನೆಂದೂ ಸಹಪಾಠಿಗಳೊಡನೆ ಜಂಬ ಮಾಡಿದ್ದಿಲ್ಲ. ಸ್ನೇಹ ಬೆಳೆದರೆ ತಾನೇ ! ಲೆಕ್ಕ, ಕನ್ನಡ ಕೇಳಲು ಬಂದವರಿಗೆ ಸಂತೋಷವಾಗಿ ಹೇಳಿಕೊಟ್ಟದ್ದುಂಟು.

೧೯೪೨ರಲ್ಲಿ ನಾನು ಮದರಾಸ್ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪಾಸ್ ಮಾಡಿದೆ. ಕೊಡಗಿನಲ್ಲಿ ಪ್ರಥಮ ರ್‍ಯಾಂಕ್ (೪೦-೫೦ಕ್ಕಿಂತ ಹೆಚ್ಚು ಉತ್ತೀರ್ಣರಾಗುತ್ತಿರಲಿಲ್ಲ). ಇದರಿಂದ ನನಗೆ ಕೊಡಗು ಸರಕಾರದ ಅರ್ಹತಾ ವಿದ್ಯಾರ್ಥಿವೇತನ ಮುಂದಿನ ವರ್ಷಗಳಲ್ಲಿ ದೊರೆಯಿತು. ಆ ವೇಳೆಗೆ ನನ್ನ ಆರೋಗ್ಯ ಸುಧಾರಿಸಿತ್ತು (ಕೇತುದೆಸೆ ಮುಗಿದಿತ್ತು ?) ಅವಿಭಕ್ತ ಕುಟುಂಬದ ಗೊಸರಿನಿಂದ ಬಿಡುಗಡೆಯಾಗುವ (ಕಾಲೇಜು ವಿದ್ಯಾಭ್ಯಾಸಕ್ಕೆ ಮಡಿಕೇರಿಯಿಂದ ಹೊರಗೆ ಹೋಗಬೇಕಾಗಿತ್ತು) ಈ ಸಂದರ್ಭ ನನಗೆ ಬಲು ಸಂತೋಷಕರವಾಗಿತ್ತು.

ಮೈಸೂರಿನ ಯುವರಾಜಾ ಕಾಲೇಜಿಗೆ ಹೋಗಿ ಸೀಟು ಕೇಳಿದರೆ "ಪರ ಊರಿನವರಿಗೆ ಇಲ್ಲಿ ಪ್ರವೇಶವಿಲ್ಲ" ಎಂಬುದು ಅಧಿಕೃತ ಉತ್ತರ !

ಕಾಲೇಜಿನಲ್ಲಿ ಕಲಿತ ಕಾಲುನಡಿಗೆ

ಮಂಗಳೂರಿನ ಸೇಂಟ್ ಅಲೋಯ್ಸಿಯಸ್ ಕಾಲೇಜನ್ನು ಸೇರಿದೆ. ಮಡಿಕೇರಿ ಬಿಟ್ಟದ್ದರಿಂದ ಎರಡು ವಿಧದ ಲಾಭ ನನಗಾಯಿತು. ಕೊಡಗಿನ ಮಹಾಪ್ರಾಜ್ಞನಾಗಿದ್ದ ನಾನು ನಮ್ಮ ಕ್ಲಾಸಿನ ೧೨೦ ಮಂದಿಯಲ್ಲಿ ೫೦ನ್ನೂ ದಾಟಿ ಹಿಂದಿನ ಸ್ಥಾನದಲ್ಲಿದ್ದೆ ! ನನ್ನ ಪರಿಶ್ರಮ, ತಿಳಿವಳಿಕೆ ಏನೇನೂ ಸಾಲವು ಎಂಬುದು ಒಂದು ಅರಿವಾದರೆ ದೃಢ ಆರೋಗ್ಯವಿಲ್ಲದಿದ್ದರೆ ಜೀವನದಲ್ಲಿ ಏನನ್ನೂ ಸಾಧಿಸಲಾಗದು ಎಂಬುದು ಎರಡನೆಯ ತಿಳಿವು. ನಿರಂತರ ಅಭ್ಯಾಸ, ಶಿಸ್ತಿನ ಜೀವನ ಇವೇ ಸರಿಯಾದ ದಾರಿಗಳು ಎಂದು ಬಗೆದು ಹೊಸ ಅಧ್ಯಾಯವನ್ನು ತೆರೆದೆ ; ತೆರೆಯುವಂತೆ ಸನ್ನಿವೇಶಗಳು ಕೂಡಿಬಂದುವೆಂದು ಹೇಳುವುದೇ ಹೆಚ್ಚು ಯುಕ್ತ. ಹಗಲಿಡೀ (ಸಾಯಂಕಾಲವೂ) ಓದುವುದು ; ಸಂಜೆ ಬಯಲಿಗೆ ಹೋಗಿ ೩-೪ ಮೈಲಿಗಳ ಓಟ. ಇಲ್ಲೂ ಒಂಟಿಜೀವನವೇ. ಸಾಮೂಹಿಕ ಆಟ ನಾನೆಂದೂ ಆಡಲಿಲ್ಲ. ನನ್ನ ಈ ವಿಶಿಷ್ಟ ವೈಯಕ್ತಿಕತೆ ಕೆಲವು ಅಪೂರ್ವ ಗೆಳೆಯರನ್ನು ನನ್ನೆಡೆಗೆ ಆಕರ್ಷಿಸಿತು. ಅವರ ದೃಷ್ಟಿಯಲ್ಲಿ ನಾನೊಬ್ಬ ಸ್ಯಾಮ್ಸನ್ ! ಬೇಕೋ ಬೇಡವೋ ನಾನು

ಅವರಿಗೆ ಮುಂದಾಳಾದೆ. ನಮ್ಮ ಕಾರ್ಯಕ್ರಮ ಪ್ರತಿ ಆದಿತ್ಯವಾರ ಸಾಯಂಕಾಲ ೪ ಗಂಟೆಗೆ ಹೊರಟು ಮಂಗಳೂರಿನ ಸರಹದ್ದಿನ ಎಲ್ಲ ಸ್ಥಳಗಳಿಗೂ ನಡೆದು ಹೋಗಿ ೮ ಗಂಟೆಯ ಹೊತ್ತಿಗೆ ಹಿಂತಿರುಗುವುದು. ಇಷ್ಟು ಹೊತ್ತಿನ ನಿರಂತರ ನಡಿಗೆಯಲ್ಲಿ ಕನಿಷ್ಠ ಪಕ್ಷ ೧೩–೧೪ ಮೈಲಿ ನಡೆದೇ ತೀರಬೇಕೆಂಬುದು ನಮ್ಮ ಸಂಕಲ್ಪ. ಹೋಗುತ್ತಿದ್ದವರು ನಾವೈವರು. ಇವರಲ್ಲೆಲ್ಲ ನಾಲ್ಕು ಹೆಜ್ಜೆ ಮುಂದೆ ಇರುತ್ತಿದ್ದವನು ನಾನು. ಇಲ್ಲೂ ನಾನು ಏಕಾಂತಪ್ರಿಯನೇ. ಅವರಾಗಿಯೇ ಬೇಕಾದರೆ ನನ್ನನ್ನು ಅನುಸರಿಸಿ ಬರಬೇಕು. ಅವರು ಬರದಿದ್ದರೂ ನಾನು ಹೋಗುವವನೇ—ನನ್ನ ದಾರಿಯಲ್ಲಿಯೇ ನನ್ನ ವೇಗ ದಲ್ಲಿಯೇ.

ಮಂಗಳೂರಿನ ವಿದ್ಯಾಭ್ಯಾಸ ಮುಗಿದ ತರುವಾಯ (೧೯೪೪) ಮದರಾಸಿಗೆ ಹೋದೆ. ಮೊದಲಿನ ವರ್ಷ ಮದರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿಯೂ ಮತ್ತಿನ ಎರಡು ವರ್ಷ ಲಯೊಲಾ ಕಾಲೇಜಿನಲ್ಲಿಯೂ ಓದಿ (೧೯೪೭ರಲ್ಲಿ) ಎಂಎ (ಗಣಿತ) ಡಿಗ್ರಿ ಪಾಸ್ ಮಾಡಿದೆ. ಜಾತಕದ ಪ್ರಕಾರ ನನಗೆ ಶುಕ್ರದೆಸೆ. ವಿದ್ಯೆಗೆ ಹೇಳಿಸಿದ ದೆಸೆ. ಆದರೆ ನಾನು ಅನುಭವಿಸಿದ್ದು ಸಾಡೇಸಾತ್ ಶನಿದೆಸೆ! ನನ್ನ ಮನಸ್ಸು ಬಹಳ ಪುಟಿತತೆ ಇರುವುದಾಗಿರ ಬೇಕು. ಇಲ್ಲವಾದರೆ ಆ ಮೂರು ವರ್ಷಗಳಲ್ಲಿ ಒಂದೋ ನನಗೆ ಹುಚ್ಚು ಹಿಡಿಯ ಬೇಕಾಗಿತ್ತು. ಇಲ್ಲವೇ ನಾನು ಹೇಳದೇ ಕೇಳದೇ ಓಡಿಹೋಗಬೇಕಾಗಿತ್ತು.

ಇಂಟರ್ಮೀಡಿಯೆಟ್‌ನಲ್ಲಿ ನಾನು ಒಂದನೆಯ ದರ್ಜೆಯಲ್ಲಿ ಪಾಸಾಗಿದ್ದೆ. ಕೊಡಗಿ ನಿಂದ ಉತ್ತೀರ್ಣರಾದವರ ಪೈಕಿ ನನ್ನದು ಎರಡನೆಯ ಸ್ಥಾನ. ಚೀಫ್ ಕಮಿಶನರರ ಆಡಳಿತೆಗೆ ಒಳಪಟ್ಟಿದ್ದ ಕೊಡಗಿನ ವಿದ್ಯಾರ್ಥಿಗಳಿಗಾಗಿ ಮದರಾಸಿನ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಒಟ್ಟು ಮೂರು ಸ್ಥಾನಗಳನ್ನು ಕಾದಿರಿಸುತ್ತಿದ್ದರು. ಚೀಫ್ ಕಮಿಶನರರು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗಿತ್ತು. ಹೇಗೂ ಈ ತಾಂತ್ರಿಕ ಕಾಲೇಜುಗಳಲ್ಲಿ ಒಂದು ಸ್ಥಾನ ನನಗೆ ದೊರೆಯುವುದು ಖಂಡಿತ—ಸ್ಥಳೀಯತೆ, ಗುಣಮಟ್ಟ ಎರಡೂ ನನಗಿದ್ದುವು. ಮೇಲಾಗಿ ನನ್ನ ತಂದೆ ಚೀಫ್ ಕಮಿಶನರರ ಸರ್ಕಾರದ ನೌಕರ ಮತ್ತು ಅವರ ಪರಿಚಯಸ್ಥ. ಆದರೆ ಇವೆಲ್ಲವನ್ನೂ ಮೀರಿ ಜಾತೀ ಯತೆಯ ಪ್ರಥಮಾಘಾತ ಆಗ ನನಗೆ ಬಡಿಯಿತು. ಚೀಫ್ ಕಮಿಶನರ್ ಮಹಾಶಯರು ಕೈಗೊಂಡ ನಿರ್ಧಾರ ನನ್ನ ವಿರುದ್ಧವಾಗಿತ್ತು. ನನ್ನ ತಂದೆ ಪ್ರತಿಭಟಿಸುವಂತಿಲ್ಲ. ಅವರು ಸರಕಾರೀ ನೌಕರರು. ನಮಗೆ ಹಕ್ಕುಬಾಧ್ಯತೆಗಳು ಇರದಿದ್ದ ನಿರಂಕುಶ ದಿವಸಗಳವು (೧೯೪೪).

ಪ್ರವಾಹ ನನ್ನನ್ನು ಗಣಿತದ ಮಡುವಿಗೆ ಎಸೆಯಿತು. ವಿಷಯ ನನಗೆ ಪ್ರಿಯವೇ. ಆದರೆ ಕ್ರಿಶ್ಚಿಯನ್ ಕಾಲೇಜಿನಲ್ಲಿ ಪಾಠ ಮಾಡುತ್ತಿರಲಿಲ್ಲ. ಹಾಸ್ಟೆಲಿನಲ್ಲಿ ಕೋಣೆ ದೊರೆಯದೇ ಹೊರಗೆ ಬದುಕುವುದು ಅಸಾಧ್ಯವಾಗಿ ಕಾಲೇಜಿನ ವರಾಂಡದಲ್ಲಿ ಹಾಸ್ಟೆಲ್ಲಿನ ಸ್ನೇಹಿತರ ಕೋಣೆಗಳಲ್ಲಿ ಕದ್ದು ಮಲಗಿ ಅನಾಥನಂತೆ ಒಂದು ವರ್ಷ ತಳ್ಳಿದೆ. ಆ ವರ್ಷದ ನಡುವೆ ತಂದೆಗೆ ಕಾಗದ ಬರೆದೆ ''ಈ ವ್ಯರ್ಥ ಶ್ರಮ ನನಗೆ ಸಾಧ್ಯವಿಲ್ಲ. ಹಿಂದೆ ಬರುತ್ತೇನೆ. ಮುಂದಿನ ವರ್ಷ ಆಯುರ್ವೇದ ಡಿಗ್ರಿಗೆ ಓದುತ್ತೇನೆ'' ಎಂದು! ''ಕಾಫಿ ತೋಟದ ರೈಟರ್ ಆಗಿಯೋ ಎಲಿಮೆಂಟರಿ ಶಾಲೆಯ ಉಪಾಧ್ಯಾಯನಾಗಿಯೋ

ದುಡಿಯಬೇಕಾದೀತು ಹಿಂದೆ ಬಂದರೆ" ಅವರ ಖಚಿತ ಉತ್ತರ. ದುಡ್ಡು ಕೊಡುವವರ ಸಂಕಟ ವೆಚ್ಚ ಮಾಡುವವರಿಗೆ ತಿಳಿಯದು ; ವೆಚ್ಚ ಮಾಡುವವರ ತಾಪತ್ರಯ ದುಡ್ಡು ಕೊಡುವವರಿಗೆಂದೂ ಅರ್ಥವಾಗದು. ಪರಿಣಾಮವಾಗಿ ನನ್ನಲ್ಲಿ ಛಲ, ತಿರಸ್ಕಾರ, ನಿರ್ಧಾರ ಎಲ್ಲವೂ ತೀವ್ರವಾದುವು. ಆ ವರ್ಷವೇನೋ ಪಾಸಾದೆ. ಮುಂದೆ ಕ್ರಿಶ್ಚಿಯನ್ ಕಾಲೇಜಿನಲ್ಲಿದ್ದರೆ ಉಳಿಗಾಲವಿಲ್ಲವೆಂದು ಸೀದಾ ಲಯೊಲಾ ಕಾಲೇಜನ್ನು ಶರಣುಹೊಕ್ಕೆ. ಹೊಳೆ ಮಧ್ಯೆ ದೋಣಿ ಬದಲಾಯಿಸಬಾರದು ; ದೋಣಿ ಹೊಸ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲೂಬಾರದು. ಆದರೆ ನನ್ನ ಬೇಡಿಕೆ, ಲಯೊಲಾದ ಸೋದರ ಸಂಸ್ಥೆ ಸೇಂಟ್ ಅಲೋಯ್ಸಿಯಸ್ ಕಾಲೇಜಿನ ಮಾಜಿ ವಿದ್ಯಾರ್ಥಿ ಎಂಬ ಶಿಫಾರಸು, ಮೇಲಾಗಿ ಇಂಟರ್ಮೀಡಿಯೆಟ್ ಅಂಕಗಳು ಇವುಗಳ ಪರಿಣಾಮವಾಗಿ ನನಗೆ ಅಲ್ಲಿ ಎರಡನೆಯ ವರ್ಷದ ಕ್ಲಾಸಿಗೆ ಪ್ರವೇಶ ದೊರೆಯಿತು.

ಛಲದೊಳ್ ದುರ್ಯೋಧನಂ

ಲಯೊಲಾ ಕಾಲೇಜಿನ ವ್ಯವಹಾರ ಬಲು ಶಿಸ್ತಿನದು. ಎಲ್ಲವೂ ಅಚ್ಚುಕಟ್ಟು, ಎಲ್ಲವೂ ನಿಯಮಾನುಸಾರ. ಅದೂ ಗಣಿತದ ವಿಭಾಗ ಕಳಶಪ್ರಾಯ. ಪ್ರತಿ ವರ್ಷವೂ ಮೊದಲಿನ ಹಲವಾರು ರ್‍ಯಾಂಕುಗಳು ಇದೇ ಕಾಲೇಜಿಗೆ. ವಿದ್ಯಾರ್ಥಿಗಳೆಲ್ಲರೂ ಬೆಂಕಿಚೂರುಗಳು, ಪ್ರಾಧ್ಯಾಪಕರೆಲ್ಲರೂ ಸೂರ್ಯರೇ. ಇವರ ಮಧ್ಯೆ ಬೇರೆ ಕಾಲೇಜಿನಿಂದ ಬಂದ ಎಲ್ಲ ರೀತಿಗಳಲ್ಲಿಯೂ ಹಿಂದುಳಿದಿದ್ದ ನಾನು ಕಣ್ಣಿನ ಕಸದಂತಾದೆ. ಕೊನೆ ಬೆಂಚು. ಒಬ್ಬನೇ ಕುಳಿತೆ. ಹಿಂದಿನ ವರ್ಷದ ಪಾಠ ಸಂಗ್ರಹಿಸಿ ನೋಟ್ಸು ಕಾಪಿ ಮಾಡಿ ಕಲಿಯಬೇಕು ; ಆ ವರ್ಷ ಅತಿವೇಗದಿಂದ ಸಾಗುತ್ತಿದ್ದ ಪಾಠಗಳೊಡನೆ ವಾರ ವಾರ ಪರೀಕ್ಷೆಗಳೊಡನೆ ತಾಳಗೆಡದೆ ಕಾಲಿಡಬೇಕು—ಇದು ಕಾಲುನಡಿಗೆಯಷ್ಟು ಸುಲಭವಲ್ಲ. ಸಹಪಾಠಿಗಳೊಡನೆ ಹಿಂದಿನ ವರ್ಷದ ನೋಟ್ಸ್ ಕೊಡಿ ಎಂದರೆ ಎಲ್ಲರೂ ತಪ್ಪಿಸಬೇಕೇ ? ಆ ಇಪ್ಪತ್ತು ಮಂದಿಯಲ್ಲಿ ಒಬ್ಬನಿಂದಲೂ ಸಹಕಾರಹಸ್ತವಿಲ್ಲ. ಆರ್ಥಿಕವಾಗಿ ಸಾಧ್ಯವಾಗುವಷ್ಟು (ಯುದ್ಧದ ದಿವಸಗಳು ; ದೊರೆಯುತ್ತಿದ್ದ ಕೆಲವೇ ಸೆಕೆಂಡ್ ಹ್ಯಾಂಡ್ ಪುಸ್ತಕಗಳ ಬೆಲೆಯೂ ಬಲು ದುಬಾರಿ) ಪುಸ್ತಕಗಳನ್ನು ಕೊಂಡೆ. ಉಳಿದವನ್ನು ಲೈಬ್ರರಿಯಿಂದ ಎರವಲಾಗಿ ತಂದು ೩೦೦–೪೦೦ ಪುಟಗಳಷ್ಟು ಗಾತ್ರದ ನಾಲ್ಕು ಗ್ರಂಥಗಳನ್ನು ಪ್ರತಿ ಮಾಡಿಟ್ಟುಕೊಂಡೆ. ಇದಕ್ಕೆಲ್ಲ ಸಮಯ ? ಬೆಳಗ್ಗೆ ೩ ಗಂಟೆಗೆ ಏಳುವುದು. ೧೧ರಿಂದ ೪ ಗಂಟೆ ತನಕ ಕಾಲೇಜುಪಾಠ ಬಿಟ್ಟು ಉಳಿದ ಹೊತ್ತು ಇದೇ ತಪಸ್ಸು. ಮಲಗುವುದು ರಾತ್ರಿ ೯ ಗಂಟೆಗೆ. ರಜಾ ದಿವಸಗಳಲ್ಲಿ, ಮೈಕಲ್‌ಮಾಸ್ ಮತ್ತು ಕ್ರಿಸ್‌ಮಸ್ ರಜೆಗಳಲ್ಲಿ ವಲ್ಮೀಕ ವಾಸಿಯೇ ನಾನಾದೆ. ಆ ದಿವಸಗಳಲ್ಲಿ ನನಗಿದ್ದ ಇತರ ಆಸಕ್ತಿಗಳು ಮೂರು—'ಹಿಂದೂ'ಪತ್ರಿಕೆಯ ಆಮೂಲಾಗ್ರ ವಾಚನ, ಸಂಜೆ ೭ರಿಂದ ೮ ಗಂಟೆಯ ತನಕ ಬಯಲಿನಲ್ಲಿ ಓಟ ಅಂಗಸಾಧನೆ, ಪ್ರತಿ ಆದಿತ್ಯವಾರ ಸಾಯಂಕಾಲ ಸಂಗೀತ ಕಛೇರಿಗೆ ಹೋಗಿ ಕರ್ನಾಟಕ ಸಂಗೀತಶ್ರವಣ.

ಪ್ರತಿವಾರ ನಡೆಯುತ್ತಿದ್ದ ಕ್ಲಾಸು ಪರೀಕ್ಷೆಗಳಲ್ಲಿ ನಾನೊಬ್ಬನೆ ಅನುತ್ತೀರ್ಣನಾಗುತ್ತಿದ್ದುದು. ಸಹಪಾಠಿಗಳ ಕುತ್ಸಿತದೃಷ್ಟಿಯಿಂದ ನಾನು ಕುಸಿಯುತ್ತಿದ್ದೆ. ಪ್ರತಿಕ್ರಿಯೆ

ಯಾಗಿ ಅಧಿಕ ಛಲವಂತನಾಗುತ್ತಿದ್ದೆ. ಆದೇ ಸಹಪಾಠಿಗಳು ನನ್ನಲ್ಲಿದ್ದ ಪಠ್ಯಪುಸ್ತಕಗಳನ್ನೂ ಪ್ರತಿಮಾಡಿದ್ದ ಗ್ರಂಥಗಳನ್ನೂ ಸಾಲವಾಗಿ ಕೇಳಿ ಕೊಂಡೊಯ್ಯುತ್ತಿದ್ದರು. ನಾನೇ ಅಪರಾಧಿಯಂತೆ ಅವರ ಕೋಣೆಗಳಿಗೆ ಹೋಗಿ ಅವನ್ನು ಹಿಂದೆ ತರಬೇಕಾಗುತ್ತಿತ್ತು. ಆ ದಿವಸಗಳಲ್ಲಿ ನನ್ನ ಮನಃಸ್ಥೈರ್ಯವನ್ನು ಉಳಿಸಿದ್ದು ಭಗವದ್ಗೀತಾಭ್ಯಾಸ ಮತ್ತು ಬೈಬಲ್ಲಿನ ವಾಚನ. ಬೇಸಗೆಯ ರಜೆಯಲ್ಲಿ ಮಾತ್ರ ಊರಿಗೆ ಹೋದೆ. ಹೀಗೆ ವರ್ಷಗಳು ಮುಗಿದುವು. ನಾನು ಎಂಎ ಪರೀಕ್ಷೆಗೆ ಕಟ್ಟಿಯೇಬಿಟ್ಟೆ. ಫಲಿತಾಂಶ ಬಂದಾಗ ನನಗೆ ಅತೃಪ್ತಿ ಆಗಲಿಲ್ಲ. ಸೆಕೆಂಡ್ ಕ್ಲಾಸಿನಲ್ಲಿ ಪಾಸು. ನಮ್ಮ ತರಗತಿಯವರಲ್ಲಿ ನನ್ನದು ೯ನೆಯದೋ ೧೦ನೆಯದೋ ಸ್ಥಾನ. ಈ ಪರೀಕ್ಷೆ ಹೇಗೂ ಇರಲಿ. ಜೀವನದಲ್ಲಿ ನಾನು ಖಂಡಿತ ಜಯಶಾಲಿಯಾಗುತ್ತೇನೆ, ಕೇವಲ ಸಾಮಾನ್ಯನಾಗಿ ಉಳಿಯುವುದಿಲ್ಲ ಎಂಬ ಆತ್ಮವಿಶ್ವಾಸ ಮೂಡಿತ್ತು. ಜೀವನದ ಲೆಕ್ಕಗಳನ್ನು ಬಿಡಿಸುವುದರಲ್ಲಿ ನಾನು ನನ್ನ ಅನೇಕ ಸಹಪಾಠಿಗಳಿಗಿಂತ ಬಹಳ ಮುಂದೆ ಇದ್ದೆ. ಪರೀಕ್ಷೆಯ ದೃಷ್ಟಿಯಿಂದ ನಾನು ಮುಂದೆ ಬರದಿದ್ದರೂ ವ್ಯವಹಾರದೃಷ್ಟಿಯಿಂದ ಚಿಪ್ಪನ್ನು ತೊರೆದು ಹೊರಗೆ ಬರಲು, ನನ್ನ ಇರವನ್ನು ಸ್ಥಾಪಿಸಲು, ಸಮರ್ಥಿಸಲು ಶಕ್ತನಾಗಿದ್ದೆ.

೧೯೫೨

ಉರದ ಮೇಲೆ ಬಿದ್ದ ಉರಗ

ಕೃಷ್ಣಮೂರ್ತಿಯವರು ತಯಾರಿಸಿದ್ದ ಅರ್ಜಿ ನನ್ನ ದಸ್ಕತ್ತು ಸಮೇತ ಪ್ರಿನ್ಸಿಪಾಲರ ಕೈಸೇರಿತು. ಮತ್ತೆ ಅದರ ವಿಚಾರ ಮರೆತು ನಿಶ್ಚಿಂತೆಯಿಂದಿದ್ದೆ. ಮುಂದಿನ ವಾರ ಹೆಂಡತಿಯನ್ನು (ಸೋದರಮಾವನ ಮಗಳು) ಮರಿಕೆಗೆ (ಪುತ್ತೂರಿನ ಸಮೀಪ) ಕಳಿಸಿ ನಾನೊಬ್ಬನೇ ಮಂಗಳೂರಿನಲ್ಲಿ ಉಳಿದಿದ್ದೆ. ಏಪ್ರಿಲ್ ೧ರಂದು ನಾನೂ ಮರಿಕೆಗೆ (ಮುಂದೆ ಮಡಿಕೇರಿಗೆ) ಹೋಗುವವನೇ. ಆದರೆ ಅಷ್ಟರಲ್ಲಿಯೇ ಪ್ರಿನ್ಸಿಪಾಲರ ಆದೇಶ ಬಂತು—ಎನ್‌ಸಿಸಿಗೆ ಅರ್ಜಿ ಸಲ್ಲಿಸಿದ್ದ ಪ್ರಾಧ್ಯಾಪಕರು ಮದರಾಸಿಗೆ ಹೋಗಿ ವಿಶ್ವವಿದ್ಯಾಲಯದ ಕಛೇರಿಯಲ್ಲಿ ಆಯ್ಕೆ ಸಮಿತಿಯ ಮುಂದೆ ಏಪ್ರಿಲ್ ೨ರಂದು ಹಾಜರಾಗಬೇಕು, ಎಂದು. ಕೃಷ್ಣಮೂರ್ತಿಯವರು ಪುನಃ ಎಚ್ಚರಿಸಿದರು. ಇಷ್ಟು ಬೇಗ ಇದು ಫಲಿಸುವುದೆಂದು ನಾನಂತೂ ಎಣಿಸಿರಲಿಲ್ಲ. ಆಯ್ಕೆಭೇಟಿಗೆ ಹೋಗದಿರುವುದೇ ಸರಿಯಾದ ಮಾರ್ಗ ಎಂದು ಮನಸ್ಸಿನಲ್ಲಿಯೇ ನಿರ್ಧರಿಸಿ ಯಾರಿಗೂ ಹೇಳದೆ ಮಾರ್ಚಿ ೩೧ರ ಸಾಯಂಕಾಲದ ೪-೩೦ ಗಂಟೆಯ ಪುತ್ತೂರು ಬಸ್ಸನ್ನೇರಿ ಕುಳಿತುಬಿಟ್ಟೆ. ಡ್ರೈವರ್ ಬಂದ, ಕುಳಿತ. ಟಿಕೆಟ್ ಗುಮಾಸ್ತ ವಿಧಿ ಮುಗಿಸಿದ. ಕಂಡಕ್ಟರ್ ರೈಟ್ ಅಂದ. ಎಂಜಿನ್... ಬಂದರಾ ಕೆಡಿಲಾಯರು! ಹೊಳ್ಳರೂ ಕೃಷ್ಣಮೂರ್ತಿಗಳೂ ಅಲ್ಲಿಯೇ ಪ್ರತ್ಯಕ್ಷರಾಗಿದ್ದರು.

"ಏನಿದು ಹೇಡಿತನ ?" ಕೃಷ್ಣಮೂರ್ತಿಗಳು.

"ಇಳಿಯಿರಿ ನೋಡೋಣ !" ನಾರಾಯಣಹೊಳ್ಳರು.

“ಎಂಥ ಪಡ್ಡೋಶಿ ಜನವಯ್ಯ ನೀವು!” ಕೃಷ್ಣಮೂರ್ತಿಗಳು

“ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವಾಲಯದ ಜಾತ್ರೆಗೆ ಮುಖ್ಯ ಅರ್ಚಕರು ಈಗಿಂದೀಗಲೇ ಹೋಗಲೇಬೇಕಾಗಿದೆ. ಇಲ್ಲವಾದರೆ ದೇವಕಾರ್ಯವೇ ನಿಂತು ಹೋದೀತು. ನೀವು ಇದು ಅವರಿಗೆ ಸೀಟ್ ಒದಗಿಸಲೇಬೇಕು”—ಕೆದಿಲಾಯರು.

ನಾನಿಳಿದೆ! ಅಥವಾ ಅವರು ನನ್ನನ್ನು ಎಳೆದಿಳಿಸಿದರು. ಅರ್ಚಕರೇರಿದರು. ಕುಞ್ಞಣ್ಣನ ಬಸ್ಸು ಪುತ್ತೂರಿಗೆ ಸಾಗಿತು.

ಆ ರಾತ್ರಿ. ಮಹಾಸೆಕೆಯ ರಾತ್ರಿ. ಮಂಗಳೂರಿಗೇ ಬೆಂಕಿಬಿದ್ದದ್ದಂತೂ ಖಾತ್ರಿ. ಆದರೆ ಸೊಳ್ಳೆಗಳಿಗೆ ಏನೂ ಕೇಡುಗಾಲವಿಲ್ಲ. ಮನೆಯಲ್ಲಿದ್ದವ ನಾನೊಬ್ಬನೇ. ಹೊರಜಗಲಿಯಲ್ಲಿ ಸೊಳ್ಳೆಪರದೆ ಕಟ್ಟಿ ಅದರೊಳಗೆ ನೆಲದ ಮೇಲೆ ಮೈ ಚೆಲ್ಲಿದ್ದೇನೆ. ನಿದ್ರೆ ಬರುತ್ತಿಲ್ಲ. ನಾಳಿನ ಚಿಂತೆ. ಮಂದರಾಸು, ಮುಂದೆ? ಏನು ಗ್ರಹಚಾರ. ನಾನೇಕೆ ಇಷ್ಟು ದುರ್ಬಲಮನಸ್ಕನಾದೆ? ನಾಳೆ ಹೋಗದಿದ್ದರೆ ಹೇಗೆ? ಇಲ್ಲ—ಅವರು ಅಲ್ಲಿಗೂ ಬಂದಾರು. ಪುನಃ ಹೇಡಿ ಅನ್ನಿಸಿಕೊಳ್ಳಬಾರದು. ಹೋದರೇನು? ಸರಿ—ಮುಂದೆ ಆರಿಸಿಯೂ ಬಿಟ್ಟರೆನ್ನೋಣ. ಆಗ ಮುಂದಿನ ವರ್ಷ ನಾನು ಈ ಕಾಲೇಜನ್ನು ಬಿಟ್ಟು ಮಡಿಕೇರಿಯ ಸರಕಾರೀ ಕಾಲೇಜನ್ನು ಸೇರಬೇಕು. ಆ ವೇಳೆಯಲ್ಲಿ ಈ ಎನ್‌ಸಿಸಿ ದೊಡ್ಡ ಅಡ್ಡಗೋಡೆಯಾಗಿ ನಿಲ್ಲಲಾರದೇ? ಕಾಲೇಜಿನಿಂದೇನೋ ಬಿಡುಗಡೆ ಹೊಂದಬಹುದು. ಆದರೆ ಈ ಕೇಂದ್ರಸರಕಾರದ ಮಿಲಿಟರಿ ಸಂಸ್ಥೆಯಿಂದ? ಹಾಗಾದರೆ ಏನು ಮಾಡಬೇಕು, ಏನು ಮಾಡಬಾರದು? ಹೊರಳಿದ್ದೇ ಹೊರಳಿದ್ದು. ಎಷ್ಟು ಹೊತ್ತಿಗೆ ಜೊಂಪು ಹತ್ತಿತೋ ತಿಳಿಯದು. ಬೆಂಕಿ ಹೊತ್ತಿದ ಧಗೆ. ಗಾಳಿಸಂಚಾರವೇ ಇಲ್ಲ. ಪರದೆಯನ್ನು ಒಂದು ಬದಿಯಿಂದ ಎಳೆದು ಮುದ್ದೆ ಮಾಡಿ ಮೇಲಕ್ಕೆ ಎತ್ತಿ ಎಸೆದೆ. ಎದೆಯ ಮೇಲೆ ಪಚಕ್ಕನೆ ತಣ್ಣ ತಣ್ಣಗೆ ಏನೋ ಬಿದ್ದ ಅನುಭವವಾಯಿತು. ಸ್ವಯಂಚಾಲಿತವಾಗಿ ಅದನ್ನು ಹಿಡಿದೆಸೆದೆ. ಥರಥರನೆ ನಡುಗಿ ಜಿಗಿದೆದ್ದೆ. ಟಾರ್ಚ್ ಲೈಟ್ ಹಾಕಿ ನೋಡಿದೆ—ಘೋರ ವಿಷದ ಹಾವು ಕಟ್ಟ ಬಳಕಡಿ. ನಿಶ್ಚೇಷ್ಟಿತವಾಗಿ ಬಿದ್ದುಕೊಂಡಿದೆ. ಸೆಕೆಯ ಅಮಲಿರಬಹುದು, ನನಗಾದಂತೆ ಅದಕ್ಕೂ ದಕ್ಕೆ ಬಡಿದಿರಬಹುದು. ಇನ್ನು ಅದಕ್ಕೆ ಭೂಮಿಯಮೇಲೆ ಬದುಕುವ ಅಧಿಕಾರ ಉಂಟೇ? ಹಾವಿನ ಯಜ್ಞ ಮುಗಿಯಿತು. ಮತ್ತೆ ನಿದ್ರೆ ಬರಲಿಲ್ಲ.

ಹಾವು ಕಡಿದು ನಾನು ಸತ್ತಿದ್ದರೆ? ಲೋಕ ಕೆದಿಲಾಯರಾದಿ ಹಿರಿಯರನ್ನು ದೂರುತ್ತಿತ್ತು. ಮಹಾಲಿಂಗೇಶ್ವರನಿಗೆ ಖಂಡಿತ ಶಾಪ ಹಾಕುತ್ತಿತ್ತು. ಹಾವು ಕಡಿಯದೇ ನಾನು ಬದುಕಿದ್ದರಿಂದ ನನ್ನ ಬುದ್ಧಿವಂತಿಕೆಯನ್ನೇ ಕೊಂಡಾಡುತ್ತಿದೆ. ಆದ್ದರಿಂದ ಒಳ್ಳೆಯದಾಗುವುದೆಲ್ಲ ಸ್ವಂತ ಬುದ್ಧಿವಂತಿಕೆಯಿಂದ; ಕೆಟ್ಟದಾಗುವುದೆಲ್ಲ ಇತರರ ಪ್ರೇರಣೆ ಪಿತೂರಿಗಳಿಂದ!

ಡಾ|| ಲಕ್ಷ್ಮಣಸ್ವಾಮಿ ಮುದಲಿಯಾರರ ದಿವ್ಯ ಸಮ್ಮುಖದಲ್ಲಿ

ಆಯ್ಕೆಭೇಟಿಗೆ ಹೋಗಿದ್ದವರು ಐದು ಮಂದಿ—ಜನಾರ್ದನ ಬಾಳಿಗ, ವೆಂಕಟರಾಮನ್, ವರದರಾಜನ್, ಮೊರೇರ ಮತ್ತು ನಾನು. ಇದ್ದ ಖಾಲಿ ಜಾಗ ಒಂದು. ನನ್ನ

ಅಂದಾಜಿನ ಪ್ರಕಾರ ಬಾಳಿಗರಿಗೇ ಇದು ದೊರೆಯತಕ್ಕದ್ದು. ಎರಡನೆಯ ಸ್ಥಾನ ಬಹುಶಃ ನನ್ನದು. ಕಾರಣವಿಷ್ಟೆ. ಪ್ರಾಯ, ಡಿಗ್ರಿ, ಕಾಲೇಜ್ ಅನುಭವ ಇವೆಲ್ಲವುಗಳಲ್ಲಿಯೂ ನಾವು ಸಮಾನರು. ಅವರು ಗರಡಿಸಾಧಕರು, ದೈಹಿಕವಾಗಿ ನಾನವರ ಮುಂದೆ ನರಪೇತಲ, ಅವರ ಕಂಠ ಧ್ವನಿ ಗುಡುಗಿನಂತೆ, ಮಿಲಿಟೆರಿಗೆ ಹೇಳಿಸಿದ್ದು ; ಮೀಸೆ ಹೊತ್ತ ಅವರ ಗಂಭೀರ ಮುಖಮುದ್ರೆ ಮಿಲಿಟೆರಿಗಾಗಿಯೇ ಸಿದ್ಧವಾದಂತಿತ್ತು. ಇನ್ನು ದಕ್ಷತೆಯೇ, ಕರ್ತವ್ಯನಿಷ್ಠೆಯೇ, ಪ್ರಾಮಾಣಿಕತೆಯೇ, ನಿಸ್ಪೃಹತೆಯೇ— ಇವೆಲ್ಲವೂ ಬಾಳಿಗಶಬ್ದದ ಪರ್ಯಾಯಪದಗಳು. ಮುಂದಿನ ವರ್ಷ ಮಡಿಕೇರಿ ಕಾಲೇಜನ್ನು ಸೇರಬೇಕೆಂಬ ಆಸೆ ನನ್ನಷ್ಟೇ ಅವರಿಗೂ ಇತ್ತು.

ವಿಶ್ವವಿದ್ಯಾಲಯದ ದೊಡ್ಡ ಕಟ್ಟಡ. ಕುಲಪತಿ ಮುದಲಿಯಾರರ ಕೊಠಡಿ. ಅವರೂ ಇಬ್ಬರು ಮಿಲಿಟೆರಿ ಅಧಿಕಾರಿಗಳೂ ನಮ್ಮನ್ನು ನೋಡಿ ಆರಿಸಲು ಕುಳಿತಿದ್ದರು. ನನ್ನ ಸರದಿ ಬಂತು. ವಿದ್ಯಾ ಅರ್ಹತೆ, ಅನುಭವ ಕೇಳಿದರು.

"ಆಟ, ಓಟ ?"

"ಇಲ್ಲ, ಆಡಿಲ್ಲ."

"ಕಾರಣ ?"

"ಮೊದಲಿನಿಂದಲೂ ಆಸಕ್ತಿ ಬೆಳೆಯಲಿಲ್ಲ. ಆದರೆ ನಾನು ಓಟಗಾರ, ವ್ಯಾಯಾಮ ಪ್ರಿಯ, ಈಜುಗಾರ. ಕೊಡಗಿನವನಾದ್ದರಿಂದ ಬೆಟ್ಟ ಗುಡ್ಡ ಏರಿ ನೆಗೆಯುವುದರಲ್ಲಿ ಬಲು ಪ್ರೀತಿ."

"ಏನಾದರೂ ಸ್ಪರ್ಧೆ ?"

"ಹೌದು. ಕಳೆದ ವರ್ಷದ ಸ್ವಾತಂತ್ರ್ಯೋತ್ಸವದ ಸಲುವಾಗಿ ಏರ್ಪಡಿಸಿದ್ದ ಐದು ಮೈಲಿಗಳ ದೀರ್ಘ ಓಟದಲ್ಲಿ ನನ್ನದು ಎರಡನೆಯ ಸ್ಥಾನ."

"ಬೇರೆ ಏನಾದರೂ ?"

"ಹಿಂದೊಮ್ಮೆ ಸರ್ವಿಸಸ್ ಸೆಲೆಕ್ಷನ್ ಬೋರ್ಡಿಗೆ ಹೋಗಿದ್ದೆ. ಆದರೆ ಅಂತಿಮ ಪರೀಕ್ಷೆಯಲ್ಲಿ ಯಾರನ್ನೂ ಆರಿಸಲಿಲ್ಲ."

"ಸರಿ. ಇನ್ನೇನಾದರೂ ನಿಮ್ಮ ವಿಷಯ ?"

ಎನ್‌ಸಿಸಿ ಬಿಡಲು ತೊಂದರೆ ಏನಾದರೂ ಆದೀತೇ ಎಂದು ಕೇಳಬೇಕೆಂದು ನಾಲಗೆಗೆ ಮಿದುಳಿನಿಂದ ಆದೇಶ ಹೋಯಿತು. ಆದರೆ ಹೊರಟ ಪ್ರಶ್ನೆ ಬೇರೆ "ಈ ಎನ್‌ಸಿಸಿ ಆಫೀಸರ್ಸ್ ಟ್ರೈನಿಂಗ್ ಅಂದರೇನು ? ಅದು ಎಲ್ಲಿ, ಎಷ್ಟು ಕಾಲ ?" ನನ್ನ ಅಳುಕು ಪ್ರವೃತ್ತಿ ಇದರ ಕಾರಣ.

ಅದರ ವಿವರ ಹೇಳಿದರು. "ನಿಮ್ಮಿಂದ ಸಾಧ್ಯವಾದೀತೇ ?" ಎಂದೂ ಸವಾಲು ಎತ್ತಿದರು.

"ಖಂಡಿತವಾಗಿಯೂ !" ಯೋಚಿಸದೆ ಉತ್ತರವ ಕೊಡುವಾತ ಆರ್ಮಿಯೊಳಗತಿ ಸ್ಮಾರ್ಟ್ ! ಗಂಡಸುತನವಿದೆಯಷ್ಟೆ. ಆಗಲಾರದು ಎಂಬ ಹೆದರಿಕೆ ವ್ಯಕ್ತಪಡಿಸಿಯೇನೇ ?

ಬಾಳಿಗರ ಭೇಟಿ ನನಗಿಂತ ಚೆನ್ನಾಗಿ ಉತ್ತೇಜನಕಾರಿಯಾಗಿ ನಡೆಯಿತಂತೆ. ಪ್ರಶ್ನೆ ಕೇಳಲು ಅವರ ಸರದಿ ಬಂದಾಗ ನಾನು ಕೇಳಬೇಕೆಂದಿದ್ದ ಪ್ರಶ್ನೆಯನ್ನು ಅವರು ಧೈರ್ಯ

ವಾಗಿ ಉಚ್ಚರಿಸಿಯೇಬಿಟ್ಟರು. ಪರಿಣಾಮ ವಿಪರೀತವಾಯಿತು. ನನಗೆ ಎನ್‌ಸಿಸಿಯಲ್ಲಿ ವಿಶೇಷಾಸಕ್ತಿಯುಂಟೆಂದೂ ಬಾಳಿಗರಿಗೆ ಅದನ್ನು ಸೇರುವ ಮೊದಲೇ ಬಿಡುವ ಚಿಂತೆಯೊಂದೂ ಆದ್ದರಿಂದ ಅವರು ನಿರಾಸಕ್ತರೆಂದೂ ಮುದಲಿಯಾರ್ ಸಮಿತಿ ತೀರ್ಮಾನಿಸಿತು.

ಫಲಿತಾಂಶ ತಿಳಿದಾಗ ನನಗೆ ಸಂತೋಷವಾಗಲಿಲ್ಲ. ಉರುಳು ನನ್ನ ಕೊರಳಿಗೆ ಬಿದ್ದಿತು.

ಹೊರಡುವ ಮುನ್ನ

ಅವಳು ನನ್ನ ಸೋದರಮಾವನ ಮಗಳು. ನಾವು ಒಂದೇ ಮನೆಯಲ್ಲಿ ಬೆಳೆದವರು. ಆದರೆ ನಾನು ಋಷ್ಯಶೃಂಗ. ಆದ್ದರಿಂದ ಎಂದೂ ಅವಳೊಡನೆ ಮಾತಾಡಲಿಲ್ಲ. ಅವಳನ್ನು ಸರಿಯಾಗಿ ನೋಡಲೂ ಇಲ್ಲ. ಅವಳೊಡನೆ ಆಡಿದ್ದಂತೂ ಇಲ್ಲವೇ ಇಲ್ಲವಷ್ಟೆ. ನಾನು ಫೋರ್ತ್ ಫಾರ್ಮಿಗೆ ಬಂದಾಗ ಅವಳು ಫಸ್ಟ್ ಫಾರ್ಮ್ ಸೇರಿದಳು. ಮಡಿಕೇರಿಯ ನಮ್ಮ (ಎಂದರೆ, ಅವಳ ಸೋದರತ್ತೆಯ ಮತ್ತು ಮುತ್ತಜ್ಜನ) ಮನೆಯಲ್ಲಿ ಅವಳ ವಾಸ. ಇದೊಂದು ನ್ಯೂಸೆನ್ಸ್ ಎಂದು ತಿರಸ್ಕಾರದಿಂದ ನಾನು ವರ್ತಿಸುತ್ತಿದ್ದೆ. ಹೀಗೆ ಬೆಳೆದ ಭಾವಕ್ಕೆ ಮುಂದೆ ಪ್ರಾಯ ಕ್ರಮೇಣ ನಾಚಿಕೆ ಮತ್ತು ಅಳುಕುಗಳನ್ನು ಲೇಪಿಸಿದುದರಿಂದ ನಮ್ಮೊಳಗೆ ಯಾವ ವಿಧವಾದ ಅಭಿಪ್ರಾಯ ವಿನಿಮಯವೂ ನಡೆಯಲಿಲ್ಲ.

ಮುಂದೆ ಮಂಗಳೂರಿನಲ್ಲಿ ನನಗೆ ಕೆಲಸ ಖಾಯಂ ಆಯಿತು. ಸೋದರಮಾವ ಮದುವೆ ಮಾತೆತ್ತಿದರು. ತಾಯಿ ಸೋದರಿಕೆ ಸಂಬಂಧ ಒಪ್ಪಿದರು. ತಂದೆ ತಥಾಸ್ತು ಎಂದರು. ಚಿಕ್ಕಪ್ಪ ಚಿಕ್ಕಮ್ಮ ಈ ಸಂಬಂಧ ಕುದುರಲೇಬೇಕು ಎಂದು ನನಗೆ ಬಲು ರೀತಿಯಲ್ಲಿ ಬೋಧಿಸಿದರು. ನಾನು ಎದುರಾಡಲಿಲ್ಲ. ಮೂವತ್ತು ವರ್ಷದ ತನಕ ಮದುವೆಯಾಗುವುದಿಲ್ಲ ಎಂದು ಹೇಳುತ್ತಿದ್ದವನು ಮುಂದಿನ ವರ್ಷ ಆಗುತ್ತೇನೆಂದು ಹೇಳಿ ಮರ್ಯಾದೆ ಉಳಿಸಿ(ಕಳೆದು)ಕೊಂಡೆ (?). ಕಾರಣವಿಷ್ಟೆ: ಸೋದರಮಾವ ಅತ್ತೆಯಂದಿರಂಥ ಸುಸಂಸ್ಕೃತರ ಮಗಳು ಸುಸಂಸ್ಕೃತಳಾಗಿಯೇ ಇರುತ್ತಾಳೆ; ನನ್ನ ವಿಚಿತ್ರ ಮತ್ತು ನನಗೇ ಅರ್ಥವಾಗದ ಸಂಕೀರ್ಣಪ್ರವೃತ್ತಿಗೆ ಅನುವರ್ತಿಯಾಗಿರುವಳು—ಇದು ಒಂದು ಕಾರಣ. ಇಂಥ ಆಯ್ಕೆಯಲ್ಲಿ ನನಗೆ ಸ್ವತಂತ್ರ ತಾರತಮ್ಯಜ್ಞಾನ ಇಲ್ಲವೆಂಬ ಅರಿವು ಎರಡನೆಯ ಕಾರಣ. ಆದರೂ “ಹುಡುಗಿಯ ಮನೋಗತ ತಿಳಿದುಕೊಳ್ಳಿ, ಈ 'ವೈರಿ'ಯನ್ನು ಅವಳು ಒಪ್ಪಿಯಾಳೇ” ಎಂದಿದ್ದೆ. ಆದರೆ ಕಾಲ ನನ್ನ ತಾಯಿಯ ಮದುವೆಯ ಕಾಲದ್ದೇ. ಆಕೆಯನ್ನು ಯಾರೂ ಕೇಳಿದಂತಿಲ್ಲ.

ನಾನು ಹುಟ್ಟಿದ ಮನೆಯಲ್ಲಿ ನನಗೆ ಅವಳೊಡನೆ ಮದುವೆಯಾಯಿತು. ಮುಂದೆ ಒಂಬತ್ತು ತಿಂಗಳ ಸಂಸಾರ ಮಂಗಳೂರಿನಲ್ಲಿ ಹೂಡಿದ್ದೆವು. ಅವಳು ನನ್ನ ನಿರೀಕ್ಷೆ ಮೀರಿದ ಗುಣವಂತೆ, ಅನುಕೂಲೆ. ನನ್ನಿಂದಲೂ ಕೆಲವಾದರೂ ಗುಣಗಳನ್ನು ನಿರೀಕ್ಷಿಸುತ್ತಾಳೆ, ಆದರೆ ವ್ಯಕ್ತಪಡಿಸಲಾರಳು ಎಂದು ನನಗೆ ಅಂದು ಗೊತ್ತೇ ಇರಲಿಲ್ಲ. ಇಂದು ಗೊತ್ತಿದೆ. ಆದರೆ ಸ್ವಭಾವದ ಡೊಂಕು ನೆಟ್ಟಗಾಗದು.

ಮಿಲಿಟೆರಿ ಟ್ರೈನಿಂಗಿಗೆ ನಾನು ಹೋಗಬೇಕು ಎಂದು ತಿಳಿದಾಗ ಅವಳಿಗೇನು ಅನ್ನಿಸಿತೋ ನಾನು ಅರಿಯಲು ಪ್ರಯತ್ನಿಸಲಿಲ್ಲ. ಹೋಗುವಾತ ನಾನಷ್ಟೆ. ಅವಳನ್ನೇನು ಕೇಳುವುದು ? ಆದರೆ ಪುತ್ತೂರನ್ನು ಬಿಡುವ ಆ ಬೆಳಗ್ಗೆ ಅವಳ ತುಂಬು ನೋಟದ ಮಿಂಚು ಖಂಡಿತವಾಗಿಯೂ ನನಗೆ ಶುಭ ಹಾರೈಸಿತು ಎಂದು ತಿಳಿದೆ. ಅವಳ ಬದಲಾಗುತ್ತಿದ್ದ ದೇಹರೇಖೆಗಳು ಭವಿಷ್ಯದ ಶುಭಸೂಚಕಗಳಾಗಿದ್ದುವು.

ವೆಲ್ಲಿಂಗ್ಟನ್ನಿನ ದಾರಿಯಲ್ಲಿ

ನನ್ನ ಎನ್‌ಸಿಸಿ ಶಿಕ್ಷಣದ ವಿಪರ್ಯಾಡು ಳನೆಯ ಮದರಾಸು ಬೆಟಾಲಿಯನ್ ಎನ್‌ಸಿಸಿ, ಪಾಲ್ಘಾಟ್, ಇದರ ಆಫಿಸರ್ ಕಮಾಂಡಿಂಗ್ ಆಗಿದ್ದ ಕ್ಯಾಪ್ಟನ್ ವಿ.ವಿ.ಕೆ. ನಂಬಿಯಾರರ ಹಿರಿತನದಲ್ಲಿ ನಡೆಯಿತು—ಅವರಿಂದ ನನಗೆ ಬಂದ ಮಿಲಿಟೆರಿ ಒಕ್ಕಣೆಯ ಪತ್ರ, ಥೇಟ್ ಮಿಲಿಟೆರಿ ಹುಕುಂ—ನೀಲಗಿರಿಯ ವೆಲ್ಲಿಂಗ್ಟನ್ನಿನಲ್ಲಿರುವ ಮದರಾಸ್ ರೆಜಿಮೆಂಟಲ್ ಸೆಂಟರಿನಲ್ಲಿ (ಎಂಆರ್‌ಸಿ) ನನ್ನ ಶಿಕ್ಷಣ, ಮೇ ೧ರಿಂದ ಜುಲೈ ೩೧ರ ತನಕ (೧೯೫೨) ; ನಾನು ಎಂಆರ್‌ಸಿಯಲ್ಲಿ ಏಪ್ರಿಲ್ ೩೦ರಂದೇ ಹಾಜರಾಗತಕ್ಕದ್ದು. ಆ ಮೊದಲೇ ಅಲ್ಲಿ ಶಿಕ್ಷಣ ಪಡೆದು ಬಂದಿದ್ದ ಮಡಿಕೇರಿಯ ಹೈಸ್ಕೂಲ್ ಅಧ್ಯಾಪಕರಿಂದ ಸ್ವಲ್ಪ ಮಾಹಿತಿ ಸಂಗ್ರಹಿಸಿದೆ. ಸಸ್ಯಾಹಾರಿಗಳಿಗೆ ಪರಿಸ್ಥಿತಿ ಭಯಂಕರ. ಆದರೆ ಇನ್ನು ತಪ್ಪಿಸುವಂತಿಲ್ಲ.

ದಿನಾಂಕ ೨೯ನೆಯ ಏಪ್ರಿಲ್ ಮಂಗಳವಾರ. ಬೆಳಗ್ಗಿನ ಮೊದಲ ಬಸ್ಸಿನಲ್ಲಿ ಫ್ರಂಟ್ ಸೀಟಿಗೆ (ಡ್ರೈವರ್ ಪಕ್ಕದಲ್ಲಿ ಎರಡು ಸೀಟುಗಳು ಅಂದಿನ ಬಸ್ಸುಗಳಲ್ಲಿರುತ್ತಿದ್ದುವು) ಒಂದೂವರೆಯಷ್ಟು ಬೆಲೆ ತೆತ್ತು ಸುಖಾಸೀನನಾದೆ. ಮಿಲಿಟೆರಿ ಆಫಿಸರರ ಗೌರವ ಉಳಿಸುವುದು ನನ್ನ ಕರ್ತವ್ಯವಷ್ಟೆ. ಪ್ರಯಾಣ ಮಡಿಕೇರಿ–ಮೈಸೂರಿನ ೭೫ ಮೈಲಿಗಳ ದೀರ್ಘಯಾನ. ೧೯೪೬ರ ಮೋಡೆಲ್ ಆಸ್ಟಿನ್ ಬಸ್, ಯುದ್ಧ ಪುನರ್ನಿವೇಶಿತ ಯಂತ್ರ. ಶಬ್ದ ವಿಪರೀತ, ಸಾಗುವ ದೂರ, ಗತಿಸುವ ವೇಗ ಬಲು ಕಡಿಮೆ. ಸಣ್ಣ ಚಡಾವು ಬಂದರೂ ಗೇರು ಇಳಿಸಲೇಬೇಕು ; ಇನ್ನು ಇಳಿಜಾರು ಸಾಗುವಾಗ ವೇಗ ನಿಯಂತ್ರಿಸಲು ಗೇರು ಇಳಿಸಲೇಬೇಕಷ್ಟೆ. ಸಮತಟ್ಟು ಬಂದಾಗ ಅದು ಓಡದು. ಬೆಳಗ್ಗೆ ಏಳು ಗಂಟೆಗೇ ಮಡಿಕೇರಿಯನ್ನು ಬಿಟ್ಟರೂ ಮೈಸೂರು ತಲಪಿದ್ದು ಅಪರಾಹ್ಣ ೩ ಗಂಟೆಗೆ. ಸೃಷ್ಟಿ ಸೌಂದರ್ಯವನ್ನು ಯಥೇಚ್ಛವಾಗಿ ನೋಡುವ (ಕೇಳುವ ಸಹ) ಸುಯೋಗ ನನ್ನದಾಗಿತ್ತು. ಇದರಿಂದ ಒಂದು ತೊಂದರೆ ಆಯಿತು. ಅಂದೇ ಉದಕಮಂಡಲಕ್ಕೆ ಹೋಗುವ ಬಸ್ಸು ಸಿಕ್ಕಲಿಲ್ಲ.

ಬುಧವಾರ ಬೆಳಗ್ಗಿನ ೮–೩೦ ಗಂಟೆಯ ಬಸ್ಸು. ಆದರಲ್ಲಿ ನನಗೆ ಸಿಕ್ಕಿದ್ದು ಕಂಡಕ್ಟರನ ಪಕ್ಕದ ಸೀಟು. ಫೋರ್ಡ್ ಎಂಜಿನ್ ಪರ್ಕಿನ್ಸ್ ಡೀಸೆಲ್ ಯಂತ್ರ ಜೋಡಿಸಿದ್ದರು. ಅಂಕುಡೊಂಕಿನ ಹೊಸದಾರಿಯಲ್ಲಿ ಆ ಬಸ್ಸು ಓಡಿದ ಸ್ಪೀಡ್ ಒಂದು ರಮ್ಯ ಕನಸಿನಂತೆ ಇತ್ತು. ಹಸುರು ಕಾಡಿನ ತೆರೆ ತೆರೆಗಳ ಮೇಲೆ ಕುಣಿಕುಣಿಯುತ್ತ ಬಸ್ಸು ಸಾಗಿದಂತೆ ಎತ್ತರ ಎತ್ತರ ಗಮನಿಸಿದೆವು. ಬಸ್ ಡ್ರೈವರ್‌ಗಿರಿ ಎಂಥ ಸಂತೋಷದ ಕೆಲಸ. ದಾರಿಯ ರಾಜ ಆತ. ವಿಶ್ವ ಆವನ ಹಿಂದೆ ಸರಿಯಬೇಕು. ಒಂದೊಂದು ತಿರುಗಾಸೂ ಒಂದೊಂದು ಚೌದುವ್ಯ ಕಮಾನಿನ ಚಿಕ್ಕಾ. ಆದನ್ನು ಮುಗಿಸಿದ ಗಳಿಗೆ ಡ್ರೈವರ್ ನಮ್ಮನ್ನು ನೋಡ

ಬೇಕು, ನಾವು ಅವನಿಗೆ ಮೆಚ್ಚುಗೆಯ ನೋಟ ಬೀರಬೇಕು. ಎರಡನೆಯ ಸಾಲಿನಲ್ಲಿ ಕುಳಿತಿದ್ದ ರಮಣಿಯರ ಕಡೆ ಅವನ ಗಮನ ಅಧಿಕ. ಬಸ್‌ನಿಲ್ದಾಣದಲ್ಲಿ ಬಸ್ ನಿಂತಾಗ ಅವನು ಇಳಿಯುವ ಠೀವಿ ಏನು. ಆಗ ಅವನ ಸ್ನೇಹ ಸಂಪಾದಿಸಲು ಕೆಲವು ಪ್ರಯಾಣಿಕರಾದರೂ ಮುಂದುವರಿಯುತ್ತಿದ್ದರು. ಮೊದಲೇ ಪರಿಚಯಸ್ಥರಿದ್ದರೆ ಇತರರಿಗೆ ಸ್ನೇಹ ಭಾಗ್ಯ ಲಭಿಸದು. ಮುಂದೆ ಗೊತ್ತೇ ಇದೆ. ಸರ್ವಾಂತರ್ಯಾಮಿ ಉಡುಪಿ ಶ್ರೀಕೃಷ್ಣನ ಸ್ಥಳೀಯ ಮಂದಿರಕ್ಕೆ ಭೇಟಿ, ಪ್ರಸಾದ ಸ್ವೀಕಾರ, ನಿರ್ಗಮನ ದ್ವಾರದಲ್ಲಿ ಕೃತಾರ್ಥ ಪ್ರಯಾಣಿಕನಿಂದ ದಕ್ಷಿಣೆ ನೀಡಿಕೆ. ಧೈರ್ಯ ಅಥವಾ ಅಂತಸ್ತು ಅಥವಾ ಎರಡೂ ಕಡಿಮೆಯಾದವರು ಕಂಡಕ್ಟರನ ಜೊತೆ.

"ಅವನೇನು ಮಹಾ! ನಾನು ತಾನೇ ಇಡೀ ಹೊಣೆ ಹೊತ್ತವನು? ಇಷ್ಟು ಜನ ಪ್ಯಾಸೆಂಜರರ ಯೋಗಕ್ಷೇಮ ನೋಡಬೇಡವೇ? ಹಣಕಾಸಿನ ಲಗ್ಗೇಜಿನ ಲೆಕ್ಕಾಚಾರ ಇಡಬೇಡವೇ?" ಕಂಡಕ್ಟರನಿಗೆ ಡ್ರೈವರನ ಮೇಲೆ ದರ್ಜೆ ಮತ್ಸರ.

"ಅಲ್ಲವೇ ಮತ್ತೆ!" ಪ್ಯಾಸೆಂಜರನ ಪಿಟೀಲು ವಾದನ. ಇವನದು ಇಸ್ತ್ರಿಯಿಲ್ಲದ ಒರಟು ಪ್ಯಾಂಟ್. ಡ್ರೈವರ್ ಜೊತೆಯಲ್ಲಿ ಹೋದ ಸೂಟುಧಾರಿಯ ಮೇಲೆ ದರ್ಜೆ ಮತ್ಸರ!

"ಬಸ್ಸು ಬಿಡೋದೇನು ಮಹಾ! ಇದೇ ದೊಡ್ಡ ಕೆಲಸ." ಕೆಲಸವೇ ಯೋಗ್ಯತೆಯ ನಿರ್ಣಯಕಾರಿ ಎಂಬ ನಿತ್ಯಸತ್ಯ.

"ಮತ್ತೆ ನೀವು ರೈಟ್ ಅನ್ನದಿದ್ದರೆ ಬಸ್ಸು ಹೊರಡಲಿಕ್ಕೇ ಸಾಧ್ಯವಿಲ್ಲವಲ್ಲ."

"ಅದೇ! ಮತ್ತೆ ಹಿಂದೆ ಕಟ್ಟೆ ಮಡಗದಿದ್ದರೆ ಈ ಡ್ರೈವರ್ ಏನು ಮಾಡಿಯಾನು? ಗುಂಡಿಗೆ ಎತ್ತಿ ಹಾಕಿಯಾನು." ನಿಷೇಧಾತ್ಮಕ ವಾದದಿಂದ ಅಲ್ಪ ಸಂತೃಪ್ತಿ.

ಎಲ್ಲ ಆಡಳಿತ ವ್ಯವಸ್ಥೆಯಂತೆ ಇಲ್ಲಿಯೂ—ಉನ್ನತ ಸ್ಥಾನದಲ್ಲಿರುವವನ, ಜನರ ಗೌರವಾದರ ಪಡೆದವನ ಮೇಲೆ ಅದೇ ವ್ಯವಸ್ಥೆಯ ಇತರರಿಗೆ ಅಸಹನೆ, ಮತ್ಸರ. ತಾವೇ ಹೇಗೆ ಶ್ರೇಷ್ಠ ಎಂಬುದರ ಸಾಧನೆ ಮೇಲಿನವರನ್ನು ಹಳಿಯುವುದರ ಮೂಲಕ ಮಾತ್ರ ಸಾಧ್ಯ ಕರ್ಕಟ ಸಂಸ್ಕೃತಿ.

ಉದಕಮಂಡಲದ ದಾರಿ ಬಲು ಸುಂದರ. ೧೨ ಗಂಟೆಗೆ ಈ ಕಾವ್ಯದ ಒಂದು ಘಟ್ಟ ಮುಗಿಯಿತು. ನಾವು ಬೆಟ್ಟದ ಬುಡದಲ್ಲಿದ್ದ ಗೂಡೂರಿಗೆ ಬಂದಿದ್ದೆವು. ಅಲ್ಲಿ ಊಟ ಮುಗಿಸಿದೊಡನೆಯೇ ಬಸ್ ನೀಲಗಿರಿಯನ್ನು ಏರಲಾರಂಭಿಸಿತು. ಬೆಟ್ಟವೇರುವಾಗ ಫೋರ್ಡ್ ಎಂಜಿನ್ ರಸ್ತೆಯರಾಜ. ಮಜಲುಮಜಲಾಗಿ ರಸ್ತೆ ಏರಿತು. ಬೆಟ್ಟದಮೈಗೆ ಹಾವು ಸುತ್ತಿದಂತೆ ರಸ್ತೆ. ಮುಂದೆ ಸಾಗಿದಂತೆ ಹಿಂದಿನ ಪಾತಾಳ ದೃಶ್ಯ ಅಗಾಧ. ತಡಿಯಂಡಮೋಳನ್ನು (ಕೊಡಗಿನ ಅತ್ಯುನ್ನತ ಶಿಖರ) ಏರುವಾಗ ಕಾಣುವ ದೃಶ್ಯಗಳೇ ಇಲ್ಲಿಯೂ. ಒಂದು ತಿರುಗಾಸಿನಲ್ಲಿ ಬಸ್ಸು ಹೂಂಕರಿಸಿದಂತೆ ದೌಡಾಯಿಸಿ ಧಾವಿಸಿತು ಜಿಂಕೆಗಳ ಹಿಂಡು. ಟೀ ಕಾಫಿ ರಬ್ಬರ್ ತೋಟಗಳನ್ನು ಸೀಳಿಕೊಂಡು ಬಸ್ಸು ಸಾಗಿತು. ಅತಿ ದೂರದಲ್ಲಿ ರಸಾತಳದಲ್ಲಿ ನೀರಿನತಾಣಗಳು ಮಧ್ಯಾಹ್ನದ ಮರೀಸೂರ್ಯನನ್ನು ಸೆರೆಹಿಡಿದಿದ್ದುವು. ಎದುರಿಗೆ ದಿಟ್ಟನೆ ತಲೆಯೆತ್ತಿ ಗಗನವನ್ನು ಎತ್ತಿ ಹಿಡಿದಿರುವ ಉನ್ನತ ಶೃಂಗಪಂಕ್ತಿ. ಇನ್ನಷ್ಟು ಎತ್ತರದಲ್ಲಿ ಕೆಳಮೋಡಗಳ ಅರಳೆರಟಿಕೆ. ಊಟಿಯನ್ನು ತಲುಪಿದಾಗ

ಅಪರಾಹ್ಣದ ೨ ಗಂಟೆ. ಆದರೆ ಅಲ್ಲಿ ಬಿಸಿಲೇ ಬೆಳುದಿಂಗಳು. ಸಮುದ್ರಮಟ್ಟದಿಂದ ೭,೯೦೦ ಅಡಿ ಎತ್ತರದ ಆ ಪರ್ವತನಗರ ಬಲು ತಂಪಾಗಿ ಶಾಂತವಾಗಿ ಹರಡಿಹೋಗಿತ್ತು.

ನಾನು ಹೋಗಬೇಕಾದದ್ದು ಅಲ್ಲಿಂದ ಮುಂದೆ, ಎಂದರೆ ಇಳಿದುಕೊಂಡು ಕೊಯ ಮತ್ತೂರು ಕಡೆ, ೧೦ ಮೈಲಿ ದೂರದ ವೆಲ್ಲಿಂಗ್ಟನ್ನಿಗೆ. ಅದರ ಎತ್ತರ ೫,೯೦೦ ಅಡಿಗಳು. ಬೇರೆ ಒಂದು ಬಸ್ಸನ್ನೇರಿ ಆ ಮಿಲಿಟರಿ ಪ್ರಪಂಚ ತಲಪಿದೆ. ಅತ್ತೆಯಿರುವ ಗಂಡನ ಮನೆಗೆ ಮೊದಲಸಲ ತವರಿನಿಂದ ಹೋಗುವ ಏಕಾಕಿ ಹೆಣ್ಣಿನ ಮನಃಸ್ಥಿತಿಯ ವರ್ಣನೆ ಓದಿದ್ದೇನೆ. ನನ್ನ ಮನಸ್ಸು ಇದಕ್ಕಿಂತ ಅವನತ ಸ್ಥಿತಿಯಲ್ಲಿತ್ತು. ದೂರದ ಊರು, ನನಗೆ ತಿಳಿಯದ ಪರಿಸರ. ಮಿಲಿಟರಿಯ ಘೋರ ವಾತಾವರಣದಲ್ಲಿ ಮೂರು ತಿಂಗಳ ಕಾಲ ಯಕ್ಷನ ಸೆರೆವಾಸ ಅನುಭವಿಸಬೇಕು. ದಾರಿ ಕರೆಯ ಒಂದೊಂದು ಮರವೂ ನನ್ನನ್ನು ಗಲ್ಲಿಗೆ ಹಾಕಲು ಇಡಿದಾಗಿ ನಿಂತು ಪಡಿಸುತ್ತಿರುವಂತೆ ಅನಿಸುತ್ತಿತ್ತು. ಇಂಗ್ಲಿಷಿನಲ್ಲಿ ಹೇಳುವಂತೆ my morale was at its lowest (or nadir).

ಬರಾಕಿನ ಸೆರೆಮನೆಗೆ

ಇಳಿದದ್ದು ಬ್ಲ್ಯಾಕ್ ಬ್ರಿಡ್ಜಿನಲ್ಲಿ, ಮೊದಲಿಗೆ ಬಿಳಿಯರದೇ ಕಾರುಭಾರವಾಗಿದ್ದಾಗ ಕರಿಯರಿಗಾಗಿ ಕಟ್ಟಿಸಿದ ನಿಕೃಷ್ಟ ಸೇತುವೆ ಇದಂತೆ. ನನಗಂತೂ ಇದು ನರಕದ ಸೇತುವೆ—ವೈತರಣೀಮುಖ—ಎಂಬುದರಲ್ಲಿ ಸಂದೇಹ ಉಳಿಯಲಿಲ್ಲ. ಕೂಲಿಯವನೊಡನೆ ಮುರುಕು ತಮಿಳು ಮಾತಾಡಿ ಒಂದು ಒಪ್ಪಂದಮಾಡಿಕೊಂಡು ಅರ್ಧಮೈಲಿ ದೂರದ ಬರಾಕುಗಳೆಡೆಗೆ ನಡೆದೆವು. ಅವನು ನನ್ನನ್ನು ಎಲ್ಲೆಲ್ಲೋ ಸುತ್ತಿಸಿ ಸಂದುಗೊಂದಿಗಳಲ್ಲಿ ನಡೆಸಿ ಮಿಲಿಟರಿ ಆಫೀಸಿನೆಡೆಗೆ ಕರೆದುಕೊಂಡು ಹೋದ. ನನ್ನ ಆಗಮನ ಕುರಿತು ಆ ಸ್ಥಳ ತಯಾರಾಗಿದ್ದಂತೆ ಅಥವಾ ಉತ್ಸುಕವಾಗಿದ್ದಂತೆ ನನಗನಿಸಲಿಲ್ಲ. ಆ ಓಜಿ (olive green —ಮಿಲಿಟರಿ ಉಡುಪಿನ ಬಣ್ಣ, ಇದರ ಸಂಕ್ಷೇಪ ರೂಪ) ಸಮುದ್ರದಲ್ಲಿ ನಾನೊಬ್ಬನೇ ಸಿವಿಯಲ್ಲಿ ಇದ್ದವನು (civilian ಶಬ್ದದ ಸಂಕ್ಷೇಪ ರೂಪ. ಮಿಲಿಟರಿ ಸಮವಸ್ತ್ರವಲ್ಲದ್ದಕ್ಕೆ ಈ ಹೆಸರು). ಆದ್ದರಿಂದ ಪ್ರತಿಯೊಬ್ಬನೂ ತೀಕ್ಷ್ಣವಾಗಿ ಅಪಹಾಸ್ಯಯುಕ್ತವಾಗಿ ನನ್ನನ್ನು ತಿವಿಯುತ್ತಿದ್ದಾನೆ ಎಂದು ನನಗೆ ಭಾಸವಾಯಿತು. ಇದರಿಂದ ನನ್ನ ಮ್ಲಾನತೆ ಇನ್ನಷ್ಟು ಏರಿತು. ಅಂತೂ ಯಾರೊಡನೆಯೋ ಧೈರ್ಯಮಾಡಿ ಮಾತಾಡಿದೆ, ನಾನು ಬಂದ ಉದ್ದೇಶ ಹೇಳಿದೆ.

"ನಿಮ್ಮನ್ನು ಇಲ್ಲಿಯ ಈ ಅಪ್ರವೇಶ್ಯ ಸ್ಥಳಕ್ಕೆ ಹೇಗೆ ಬಿಟ್ಟರು ?" ಅವನ ಪ್ರಶ್ನೆ.

"ಈ ಕೂಲಿಯವನೊಡನೆ ಬಂದೆ. ಬರಬಾರದಿತ್ತೇ ?"

"ನೀವು ಹೊಸಬರು. ಹಾಗೆಲ್ಲ ಇಲ್ಲಿಗೆ ಬರಬಾರದು. ಶತ್ರುಕಡೆಯವರೆಂದು ಗೂಢ ಚಾರರೆಂದು ಸೆರೆಹಿಡಿದು ಕ್ವಾರ್ಟರ್ ಗಾರ್ಡಿಗೆ ತಳ್ಳಬಹುದು."

"ನಿಮ್ಮ ಈ ಹಿತವಾದಕ್ಕೆ ಋಣಿಯಾಗಿದ್ದೇನೆ. ಈಗೇನು ಮಾಡಲಿ ?"

"ಅದಿರಲಿ. ನಿಮ್ಮಲ್ಲಿ ಒಂದು ಬೀಡಿ ಇದೆಯೋ ?"

"ಇಲ್ಲವಲ್ಲ."

"ಸಿಗರೇಟು ?"

"ನನಗೆ ಯಾವ ಅಭ್ಯಾಸವೂ ಇಲ್ಲ."

"ಏನೋ ವಿಚಿತ್ರವಾಗಿ ಕಾಣುತ್ತೀರಿ. ಸೂಟ್ ಹಾಕಿದ್ದೀರಿ, ಸಿಗರೇಟ್ ಸೇದೋದಿಲ್ಲ! ಅಲ್ಲಿ ಹೋಗಿ, ನಮ್ಮ ಸುಬೇದಾರ್ ಸಾಹೇಬರಿದ್ದಾರೆ. ಅವರನ್ನು ಕೇಳಿ ಮುಂದೆ ಎಲ್ಲಿಗೆ ಹೋಗಬೇಕೋ ತಿಳಿದುಕೊಳ್ಳಿ."

ಸುಬೇದಾರ್ ಸಾಹೇಬನ ಗತ್ತು ಚೀಫ್ ಕಮಿಷನರದಕ್ಕಿಂತಲೂ ಹೆಚ್ಚಿನದು. ನಾನು ಅವನ ಎದುರು ಹೋಗಿ ನಿಂತಾಗ ಅನುನಯವಿನಯಪೂರ್ವಕವಾಗಿ ವಂದನೆ ಸಲ್ಲಿಸಿದಾಗ ನನ್ನ ಪ್ರತಿಯೊಂದು ವರ್ತನೆಗೂ ಅವನು unmilitary ಎಂದು ತೀವ್ರ ಆಕ್ಷೇಪಣೆ ಎತ್ತಿದ, ಗೇಲಿ ಮಾಡಿದ.

"ಸ್ವಾಮೀ! ನನಗೆ ಇಲ್ಲಿಯ ಕ್ರಮ ತಿಳಿಯದು. ಕಲಿಯಲೆಂದು ಬಂದಿದ್ದೇನೆ. ದಾರಿ ತೋರಿಸಿ."

"ಇಲ್ಲೇನು ಸಿಪಾಯಿ ಆಗಿ ರಿಕ್ರೂಟ್ ಆಗಿದ್ದೀರೋ ? ನಿಮ್ಮ ಪತ್ರ ನೋಡುವ?"

ಅಲ್ಲಿಯತನಕ ನಮ್ಮಿಬ್ಬರ ನಡುವೆ ಮಾತು ನಡೆದದ್ದು ತಮಿಳಿನಲ್ಲಿ. ಪತ್ರ ನೋಡಿ ದೊಡನೆ ಅವನ ವರ್ತನೆ ಸುಧಾರಿಸಿತು. "ನೀವು ಮೊದಲೇ ಯಾಕೆ ಹೇಳಲಿಲ್ಲ ಕಾಲೇಜು ಲೆಕ್ಚರರ್ ಎಂದು. ಆ ಮೂರನೆಯ ಬರಾಕಿಗೆ ಹೋಗಿ ವಿಚಾರಿಸಿ."

ಹಿಂದಿನವನು ನನ್ನನ್ನು ಬೀಡಿ ಸೇದುವವರ ಮಟ್ಟದಲ್ಲಿಟ್ಟ; ಇವನೋ ಸಿಪಾಯಿಯ ಮಟ್ಟಕ್ಕೆ ನೂಕಿಬಿಟ್ಟ. ವಿನಯವಂತಿಕೆ ಬಹುಶಃ ಇಲ್ಲಿಯ ವಾತಾವರಣಕ್ಕೆ ಒಗ್ಗದು.

ಇದ್ದದ್ದು ಎಂಟೋ ಹತ್ತೋ ಬರಾಕುಗಳು. ಮೂರನೆಯದನ್ನು ಹೊಕ್ಕೆ. ಅಲ್ಲೊಂದು ದೊಡ್ಡ ಹಾಲ್ (ಹೋಲ್ ಅಂದರೂ ಸಂದೀತು). ಹಗ್ಗದ ಮಂಚಗಳು ಅರುವತ್ತೋ ಎಪ್ಪತ್ತೋ ಎರಡು ಸಾಲುಗಳಲ್ಲಿ ಅಳವಡಿಸಲ್ಪಟ್ಟಿವೆ. ಬಹುತೇಕ ಎಲ್ಲವುಗಳ ಮೇಲೂ ಹಾಸಿಗೆ ಬಟ್ಟೆ ಇದ್ದು ಅವು ಭರ್ತಿಯಾಗಿವೆ ಎಂದು ಸಾರುವಂತಿತ್ತು. ಅಲ್ಲೇ ಒಂದು ಮಂಚದ ಸುತ್ತಲೂ ಹಲವಾರು ಮಂದಿ ಕುಳಿತು ಇಸ್ಪೀಟು ಆಡುತ್ತಿದ್ದರು. ಅವರೆಲ್ಲರೂ ಮಲೆಯಾಳಿಗಳು. ಹೆದರಿ ಹೆದರಿ ಮಾತಾಡಿಸಿದೆ. ಆ ಬರಾಕು ಎನ್‌ಸಿಸಿ ಯವರಿಗೆ ಮೀಸಲಾದದ್ದು, ನಾನು ಯಾವ ಖಾಲಿ ಮಂಚವನ್ನಾದರೂ ಆರಿಸಿಕೊಳ್ಳ ಬಹುದು, ಸಾಯಂಕಾಲ ೬ ಗಂಟೆ ತನಕ (ಆಗ ೫ ದಾಟಿತ್ತು) ಯಾರೂ ನಮ್ಮನ್ನು ಮಾತಾಡಿಸಲು ಬರುವುದಿಲ್ಲ ಎಂದು ಮುಂತಾಗಿ ತಿಳಿಯಿತು.

ಕೂಲಿಯವನ ಉಪಕಾರ ಸೇವೆ ಸ್ಮರಿಸಿ ನಿಶ್ಚಯವಾದುದಕ್ಕಿಂತಲೂ ಎಂಟಾಣೆ ಹೆಚ್ಚು ಭಕ್ಷೀಸುಕೊಟ್ಟು ಕಳಿಸಿಕೊಟ್ಟೆ. ಬೆಳಗ್ಗಿನಿಂದ ಸೂಟುಧಾರಿಯಾಗಿ ಪ್ರಮಾಣದ ಆಯಾಸ ದಿಂದ ಬಳಲಿದ್ದೆ. ಕ್ಯಾಂಟೀನ್ ಹುಡುಕಿಕೊಂಡು ಹೋದೆ. ಕಲಗಚ್ಚಿನಂಥ ಉಗುರು ಬೆಚ್ಚಗಿನ ಚಾ ಹೀರಿ ಹಿಂದೆ ಬಂದು ಮಂಚದ ಮೇಲೆ ಮೈ ಚೆಲ್ಲಿದೆ. ಕುಸಿದು ಕುಕ್ಕರಿಸಿದೆ. ಉಳಿದ ಯಾರೂ ನನ್ನೊಡನೆ ಮಾತಾಡುವ ಕುತೂಹಲ ತೋರಿಸಲಿಲ್ಲ, ನಾನು ಮುಂಬ ರಿದು ಮಾತಾಡಿಸುವ ಸಾಹಸ ಮಾಡಲಿಲ್ಲ. ಅವರ ಮಲೆಯಾಳೀ ಉದ್ಗಾರಗಳು ಅವರೆಲ್ಲರೂ ಒಂದೇ ಊರಿನವರೆಂದು ಸ್ಥಿರೀಕರಿಸುತ್ತಿದ್ದುವು. ಕಾಲೇಜು ದಿವಸಗಳಲ್ಲೇ ಅನುಭವಿಸಿದ್ದೆ—ಮಲೆಯಾಳೀ ವ್ಯಾಘ್ರಗಳ ನಡುವೆ ಕನ್ನಡದ ಕುರಿಮರಿ ಆಹಾರವಾಗಿ ಅಳಿದೀತೇ ವಿನಾ ಆರಾಮವಾಗಿ ಉಳಿಯಲಾರದು.

ಆರು ಗಂಟೆಗೆ ಯಾರೋ ಬಂದರು. ನಾವೆಲ್ಲರೂ ಎದ್ದು ನಿಂತೆವು. ೨೦-೩೦ ಜನ ಅವರ ಸುತ್ತಲೂ ಹರಡಿ ನಿಂತೆವು. ಹೆಸರುಗಳನ್ನೂ ಸಂಸ್ಥೆಗಳನ್ನೂ ಓದಿ ಹೇಳಿದರು. ಬಂದಿದ್ದವರಿಗೆ ಹಾಜರಿ ಹಾಕಿ ಆಯಿತು. ಆದರೆ ಸಂಸ್ಥೆಗಳೆಲ್ಲವೂ ಹೈಸ್ಕೂಲುಗಳೇ. ಯಾವ ಕಾಲೇಜಿನ ಹೆಸರೂ ಬರಲಿಲ್ಲ; ನನ್ನ ಹೆಸರೂ ಇಲ್ಲ. ಮಂಗಳೂರಿನ ಕೆನರಾ ಹೈಸ್ಕೂಲಿನ ರಾಧಾಕೃಷ್ಣ ಕಿಣಿ ಹಸರನ್ನು ಕರೆದಾಗ ಆ ವ್ಯಕ್ತಿ ಯಾರೆಂದು ಗುರುತಿಸಿಕೊಂಡೆ. ಕಡೆಗೂ ಒಬ್ಬ ಊರವನು ದೊರೆತನಲ್ಲ ಎಂದು ಸಂತೋಷವಾಯಿತು. ಹಾಜರಿ ಕರೆದ ವ್ಯಕ್ತಿಯು ಮುಂದೆ ಹೋಗಿ ನನ್ನ ವಿಚಾರ ಕೇಳಿದೆ. ವಿವರ ಕೇಳಿ ''ಜೀವನವೇ ಹೀಗೆ!'' ಎಂದು ಗಹಗಹಿಸಿ ನಕ್ಕ. ''ನೋಡಿ ವಿ. ರಾವ್! ನೀವು ಯೂನಿವರ್ಸಿಟಿ ಪದವೀಧರರು, ಎಲ್ಲಿಗೆ ಹೋಗಬೇಕು ಎಂಬ ಸಣ್ಣ ವಿಚಾರವನ್ನೂ ಅರಿಯಲಿಲ್ಲವಲ್ಲ! ಜೀವನವೇ ಹೀಗೆ. ಉರುಟುಗೂಟ ಚೌಕಗುಳಿ.''

ನನಗೆ ನನ್ನ ಪದವಿಗೆ ಅಪಮಾನವಾಯಿತು. ''ಈಗೇನು ಮಾಡಬೇಕು ?''

''ನೀವು ರಸ್ತೆಯ ಪಕ್ಕದ ಒಂಟಿ ಬರಾಕಿಗೆ ಹೋಗಬೇಕು. ಸೀನಿಯರ್ ಡಿವಿಶನ್ನಿನವರಿಗೆ ಅಲ್ಲಿ. ಜೂನಿಯರ್ ಡಿವಿಶನ್ನಿನವರಿಗೆ ಇಲ್ಲಿ.''

ಅದು ಎಲ್ಲಿದೆ, ಯಾವ ರಸ್ತೆ, ಯಾವ ಒಂಟಿ ಬರಾಕು ಎಂದು ಮುಂತಾಗಿ ಕೇಳಿ ನನ್ನ ಪದವಿಗೆ ಅಪಮಾನದ ಬರೆಯನ್ನು ಪುನಃ ಎಳೆಸಿಕೊಳ್ಳಲು ತಯಾರಿರಲಿಲ್ಲ. ನನ್ನ ಹೆಸರನ್ನು ಕೇಳಿ ಕಿಣಿ ನನ್ನನ್ನು ಗುರುತಿಸಿದರು. ಆ ಮೊದಲೇ ನನ್ನನ್ನು ಮಂಗಳೂರಿನಲ್ಲಿ ನೋಡಿದ್ದರಂತೆ. ಅವರ ತಮ್ಮ ನನ್ನ ಶಿಷ್ಯನಂತೆ. ''ಈ ಜನರೇ ಹೀಗೆ. ನಾನು ಹಿಂದೆ ಆರ್ಮಿ ನೋಡಿ ಬಂದಿದ್ದೇನೆ. ನೀವು ಹೆದರಿದಿರೋ ಅವರು ಎಗರುತ್ತಾರೆ. ಎರಡು ಠರಾಯಿಸಿದಿರೋ ನಿಮ್ಮ ಅನುಯಾಯಿಗಳಾಗುತ್ತಾರೆ. ಉಪ್ಪರಿಗೆ ಖಾಲಿ ಮಾರಾಯ್ರೇ'' ಎಂದು ಭರ್ಜರಿ ನಗು ಹರಿಸಿದರು.

ಕನ್ನಡದ ಈ ಹಿತವಚನ ಅಮೃತೋಪಮವಾಯಿತು. ಕಿಣಿಯ ನೆರವಿನಿಂದ ಗಂಟು ಮೂಟೆ ಹೊತ್ತು ಅಲ್ಲಿಂದ ಮುಂದೆ ಹೋದೆ. ಒಂಟಿ ಬರಾಕಿನ ಜಗಲಿ ಮೇಲೆ ನನ್ನನ್ನು ಬಿಟ್ಟು ಕಿಣಿ ಮರಳಿದರು. ಆದರೆ ಕೆಳಗಿನ ಹಾಲಿನಲ್ಲಿ ಏಳು ಜನ ಭರ್ತಿಯಾಗಿದ್ದರು—ಅವರೆಲ್ಲರೂ ತಮಿಳರು. ಕ್ರಿಶ್ಚಿಯನ್ ಕಾಲೇಜಿನಲ್ಲಿ ನನ್ನ ಸಹಪಾಠಿಯಾಗಿದ್ದ ಚಿನ್ನದೊರೈ ಹೊರಗೆ ಬಂದು ನನ್ನನ್ನು ಸ್ವಾಗತಿಸಿದ. ಅವನೂ ನನ್ನ ಹಾಗೆಯೇ ಟ್ರೈನಿಂಗಿಗೆ ಬಂದವನು. ಮಹಡಿಯ ಮೇಲೆ ಸ್ಥಳವಿದೆ ಎಂದು ನನ್ನೊಡನೆ ಅಲ್ಲಿಯವರೆಗೂ ಗಂಟು ಹಿಡಿದುಕೊಂಡು ಬಂದ. ಅಲ್ಲಿ ಮಲೆಯಾಳಿ, ತಮಿಳು, ಇಂಗ್ಲಿಷ್ ಭಾಷೆಗಳ ಸಂಗಮವಾಗಿತ್ತು. ಅವರೆಲ್ಲರೂ ಟಿಪ್‌ಟಾಪಾಗಿ ಡ್ರೆಸ್ ಮಾಡಿ ಎಲ್ಲಿಗೋ ಹೊರಡಲು ಸಿದ್ಧರಾಗಿದ್ದರು.

ಒಂದು ಅಪೂರ್ವ ಭೇಟಿ

OLQವಿನ ಹಲವಾರು ಲಕ್ಷಣಗಳಲ್ಲಿ ಒಂದು, ಹೊಸಬರಲ್ಲಿ ನಾವು ನಮ್ಮ ಪರಿಚಯವನ್ನು ಮೊದಲಾಗಿ ಹೇಳಿ ಅವರಿಗೆ ಶುಭಕೋರಿ ಸ್ನೇಹಹಸ್ತ ನೀಡುವುದು. ಮಹಡಿ ಏರಿದ ನನಗೆ ಇದರ ಅನುಭವವಾಗಿ ನನ್ನ ನಿರುತ್ಸಾಹ ತಗ್ಗಿತು. ನನ್ನನ್ನು ಅಲ್ಲಿ ಸ್ವಾಗತಿಸಿದ

ಭವ್ಯಪುರುಷ "ನಾನು ಪ್ರೊಫೆಸರ್ ಮಾಧವ ಮೇನನ್, ಎಂಈಎಸ್. ಈ ಶುಭ ಸಾಯಂಕಾಲ ನೀವು ಚೆನ್ನಾಗಿದ್ದೀರೇ ? ನಿಮಗೆ ಸ್ವಾಗತ" ಎಂದ. ಇಂಗ್ಲಿಷ್ ಭಾಷೆಯ ಜಾಯಮಾನಕ್ಕೆ ಸಹಜವಾಗಿ ಒಗ್ಗುವ ಮಾತುಗಳಿವು.

ಮೇನನ್‌ನ disarming candourಗೆ ನಾನು ಸಂಪೂರ್ಣ ಮಾರು ಹೋದೆ. ಗಾತ್ರ, ಬಣ್ಣ, ಧ್ವನಿ, ಪ್ರಾಯ ಇವುಗಳಿಂದ ಮಾತ್ರವೇ ಆತ ನನಗಿಂತ ಹಿರಿಯನಲ್ಲ, ವೃತ್ತಿ ವರ್ತನೆಗಳಿಂದಲೂ ಹಿರಿಯನೆಂದು ದೃಢವಾಯಿತು. ಆತನ ಹಿರಿತನದಲ್ಲಿ ನನಗೆ ಚಿಂತೆಯಿರದು ಎಂದು ನೆಮ್ಮದಿ ತಾಳಿದೆ.

"ನಾನು ನಾರಾಯಣರಾವ್ ಜಿ. ಟಿ. ಮಂಗಳೂರಿನಿಂದ ಈ ಶಿಕ್ಷಣಕ್ಕೆ ಬಂದವನು. ನೀವು ನನಗೆ ಸರಿಯಾಗಿ ಮಾರ್ಗದರ್ಶನ ಮಾಡಬೇಕು."

"ಓ ಹೋ ಹೋ ! ಮಿ. ರಾವ್, ಆ ಯೋಚನೆಯೇ ಬೇಡ. ನಾನು ನೋಡಿ ಎಂಈಎಸ್ ಆಗಿ ಪಾಲ್ಘಾಟ್ ಗವರ್ನ್‌ಮೆಂಟ್ ವಿಕ್ಟೋರಿಯಾ ಕಾಲೇಜಿಗೆ ಪ್ರೊಫೆಸರ್ ಆಗಿ ನೇಮಕಗೊಂಡಾಗ ಆ ಇಡೀ ಕಾಲೇಜಿನಲ್ಲಿ ನಾನೊಬ್ಬನೇ ಎಂಈಎಸ್ ಪದವೀಧರನಿದ್ದುದು."

"ಕ್ಷಮಿಸಿ ಮಿ. ಮೇನನ್..."

"ಅಲ್ಲ, ಪ್ರೊ. ಮೇನನ್ .."

"ಸಾರಿ, ತಪ್ಪಾಯ್ತು, ಪ್ರೊ. ಮೇನನ್‌ರವರೇ ! ಈ ಎಂಈಎಸ್ ಅಂದರೇನೆಂದು '

"ಓ ನೀವು ಪ್ರೈವೇಟ್ ಕಾಲೇಜಿನವರು. ಅದ್ದರಿಂದ ನಿಮಗೆ ಅದು ಗೊತ್ತಿಲ್ಲ. ಸಿವಿಲ್ ಸರ್ವಿಸ್‌ನಲ್ಲಿ ಐಸಿಎಸ್ ಹೇಗೋ ಹಾಗೆ ಎಡ್ಯುಕೇಶನಲ್ ಸರ್ವಿಸ್‌ನಲ್ಲಿ ಎಂಈಎಸ್. ಮದರಾಸ್ ಎಡ್ಯುಕೇಶನಲ್ ಸರ್ವಿಸ್ ಎಂಬ ಉನ್ನತ ದರ್ಜೆ ಅದು. ನಾನು ಮುಂದೆ ಡಿಪಿಐ ಆಗಿ ಹೋಗುವವನು."

"ನಿಮ್ಮ ಪರಿಚಯ ನನಗೆ ಹೆಮ್ಮೆ ಉಂಟುಮಾಡಿದೆ. ಆದರೆ ನೀವು ಇಲ್ಲಿಗೆ ಬಂದದ್ದು ?"

"ಅದೇ ನಿಮಗೆ ನಾನು ಹೇಳಬೇಕಾದ ಸ್ವಾರಸ್ಯ. ಅದನ್ನು ಈಗ ಹೇಳಲು ಸಮಯ ವಿಲ್ಲ. ನಾವು ಹೇಗೂ ಮೂರು ತಿಂಗಳ ಕಾಲ ಇಲ್ಲಿರಬೇಕಲ್ಲ. ಆಗ ಹೇಳೋಣ. ಈಗ ನೀವು ಬಂದದ್ದು ತಡವಾದದ್ದರಿಂದ ನಿಮಗೆ ಈ ಹಾಲಿನ ಈ ಕಿಟಕಿ ಮೂಲೆಯ ಮಂಚವೇ ಗತಿ. ಒಳಗಿನ ಕೋಣೆ ಮುಂತಾದ ಬೆಚ್ಚಗಿನ ಪ್ರದೇಶಗಳನ್ನು ಮೊದಲೇ ಬಂದವರು ಆಕ್ರಮಿಸಿಬಿಟ್ಟಿದ್ದಾರೆ. ಅವರೊಡನೆ ನಿಮಗೆ ಸರಿಯೂ ಆಗದು. ಈ ಮಲೆಯಾಳಿಗಳೇ ಹಾಗೆ !"

"ಅಂದರೆ ?"

"ನನಗೆ ಗೊತ್ತಾಯಿತು ಜೀಟಿ ನಿಮ್ಮ ಸಂದೇಹ. ನಾನು ಹಿಂದೆ ಮಂಗಳೂರಿನಲ್ಲಿದ್ದೆ. ತಮಿಳು ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ನಾನು ಹುಟ್ಟಿನಿಂದ ಮಲೆಯಾಳಿ, ಆದರೆ ನಾನು ಮೊದಲು ಭಾರತೀಯ. ನನಗೆ ಅಚ್ಚುಮೆಚ್ಚಿನವರು ಕನ್ನಡಿಗರು. ಆ ಕೋಣೆಗಳಲ್ಲಿ ಮಲೆಯಾಳಿಗಳು. ನನ್ನನ್ನೇನೋ ಅವರೂ ಮುಂದಾಳೆಂದೇ ಭಾವಿಸಿದ್ದಾರೆ..."

"ಹಲೋ ರಾವ್. ಯಾವ ರೂಟಿಗಾಗಿ ಬಂದಿರಿ ?" ಮಂಗಳೂರಿನ ಗವರ್ನ್‌ಮೆಂಟ್

ಕಾಲೇಜಿನ ಶಿವಶಂಕರ ಮೇನನ್ ಒಳಗಿನ ಕೋಣೆಯಿಂದ ಪ್ರತ್ಯಕ್ಷನಾದ, ''ಎಲ್ಲಿ ನಿಮ್ಮ ವಾಸ !''

''ನಾನು ಮೈಸೂರು ಮಾರ್ಗವಾಗಿ ಬಂದೆ. ವಾಸ ಇಲ್ಲೇ ಈ ಕಿಟಕಿಯ ಬಳಿ.''

ಉಳಿದವರೂ ಹಾಜರು, ಈ ಆಗಂತುಕ ಪ್ರಾಣಿಯನ್ನು ನೋಡಲು: ರಹಮಾನ್, ಬಾಲಕೃಷ್ಣನ್, ಪಂಚನಾಥನ್, ನೀಲಕಂಠನ್, ರಾಜು, ರಾಜಗೋಪಾಲ್. ಇವರೆಲ್ಲರ ಹೆಸರು-ವ್ಯಕ್ತಿ-ಮಂಚ ಹೊಂದಾಣಿಕೆ ನೆಲೆಯೂರಲು ಒಂದು ವಾರವೇ ಬೇಕಾಯಿತು. ಅಷ್ಟು ಹೆಸರು, ಅಷ್ಟು ವ್ಯಕ್ತಿತ್ವ, ಅಷ್ಟು ವೈವಿಧ್ಯ. ಮಹಡಿ ಮೇಲಿನವರು ಏಳು ಜನ—ನೀಲಕಂಠನ್, ಪಂಚನಾಥನ್, ಮೇನನ್‌ದ್ವಯರು, ರಹಮಾನ್, ಬಾಲಕೃಷ್ಣನ್ ಮತ್ತು ನಾನು. ಹಾಲಿನಲ್ಲಿದ್ದವರು ಮೂವರು—ಮಾಧವಮೇನನ್, ಬಾಲಕೃಷ್ಣನ್ ಮತ್ತು ನಾನು.

ಮೂಲೆ ನೋಡಿದೆ—ಕಿಟಕಿ ಬದಿಯ ಮಂಚ, ಅದೇ ರಾವ್ಸ್ ಕಾರ್ನರ್ ಎಂದು ''ಜಗತ್ಪ್ರಸಿದ್ಧ''ವಾಯಿತು. ಅಲ್ಲೇ ಸಿದ್ಧಾರ್ಥ ಬುದ್ಧನಾದ. ಬೀಡು ಕಬ್ಬಿಣ ಉಕ್ಕಾಯಿತು. ಮಲಗಿದಲ್ಲಿಂದಲೂ ದೂರದ ಬೆಟ್ಟಗಳ ರೇಖೆಗಳು ಕಾಣುವುವು. ಗಾಳಿ ಬೆಳಕು ನೇರವಾಗಿ ಬರುತ್ತಿವೆ. ಇದಕ್ಕಿಂತ ಪ್ರಿಯವಾದ ಜಾಗ ನನಗೆ ಬೇರೆ ಇರುತ್ತಿರಲಿಲ್ಲ. ಒಳಗಿನ ಕೋಣೆಗಳನ್ನೂ ಹೋಗಿ ನೋಡಿ ಬಂದೆ—ಕತ್ತಲೆ, ಗಾಳಿ ಇಲ್ಲ, ಪುರಾತನ ಕಾಲದ ಬೂಷ್ಟು, ಬಲೆಗಳಿಂದ ಅಲಂಕೃತ ! ಇದನ್ನು ಬಿಟ್ಟು ಅಲ್ಲಿಗೆ ಹೋದವರಂಥ ಹೆಡ್ಡರೆಂದು ನನಗನ್ನಿಸಿತು.

''ಜೀಟಿ ! ನೀವೇನೂ ಚಿಂತೆ ಮಾಡಬೇಡಿ. ನಿಮಗೆ ತೊಂದರೆಯಾದರೆ ನಾನೂ ನೀವೂ ಜಾಗಗಳನ್ನು ಅದಲುಬದಲು ಮಾಡಿಕೊಳ್ಳೋಣ. ನನಗೆ ತೊಂದರೆಯಾದರೂ ಪರವಾಗಿಲ್ಲ. ಈ ಬರಾಕಿನ ಎಲ್ಲರ ಯೋಗಕ್ಷೇಮವನ್ನೂ ನೋಡಿಕೊಳ್ಳಬೇಕು ಎಂದು ಸುಬೆದಾರ್ ಅಬ್ದುಲ್ ಖಾದರ್ ನನಗೆ ಹೇಳಿದ್ದಾರೆ.'' ಮಾಧವಮೇನನ್ ಮುಂದುವರಿಸಿದ ಆಶ್ವಾಸನೆ.

ನಮ್ಮ ಮುಂದಾಳು, ಸ್ವತಃ ಸುಬೆದಾರರಿಂದಲೆ ನಿಯಮಿತವಾದವನು, ಎಂಕಾಎಸ್ ಪದವೀಧರ—ಈತನ ಕೋಣೆಯಲ್ಲಿ ವಾಸಮಾಡುವ ಭಾಗ್ಯ ದೊರೆತದ್ದಕ್ಕೆ ನಾನು ಸಂತೋಷಪಟ್ಟೆ.

''ಕ್ಷಮಿಸಿ ಪ್ರೊ. ಮೇನನ್. ಇದು ಅತ್ಯಂತ ಉತ್ಕೃಷ್ಟ ಸ್ಥಳವೆಂದು ನಾನು ತಿಳಿದಿದ್ದೇನೆ. ಇದನ್ನು ಮೊದಲು ಬಂದವರು ಆರಿಸದೇ ಬಿಟ್ಟದ್ದು ನನ್ನ ಪುಣ್ಯ.''

''ನೀವೇನು ತಮಾಷೆ ಮಾಡುತ್ತೀರೋ ಹೇಗೆ ! ಅಂತೂ ನಿಮ್ಮ ಈ ರೈಟ್ ಸ್ಪಿರಿಟನ್ನು ನಾನು ಬಲು ಮೆಚ್ಚುತ್ತೇನೆ. ಪಾಲಿಗೆ ಬಂದದ್ದು ಪಂಚಾಮೃತ. ಆದರೆ ಜೀಟಿ ! ನನ್ನ ಪ್ರಶ್ನೆ ಸೀರಿಯಸ್ಸೇ.''

''ನಾನೂ ಸೀರಿಯಸ್ಸೇ, ಕೇಳಿ.''

''ರಾವ್, ಇದು ಊಟಿ, ಮಂಗಳೂರಲ್ಲ ತಿಳಿಯಿತೇ. ಇಲ್ಲಿಯ ಕಡುಚಳಿ ನಿಮಗೆ ತಿಳಿಯದು. ನಾನು ನೋಡಿ ಇಷ್ಟು ಸರ್ಜ್ ಧರಿಸಿಯೂ ನಡುಗುತ್ತಿದ್ದೇನೆ. ನಿಮಗೆ ಡಬಲ್ ನಿಮೋನಿಯಾ ಬಂದೀತು. ಈ ಕಾರ್ನರ್ ಅತ್ಯಂತ ಅಪಾಯಕಾರೀ ಸ್ಥಳ.''

''ಪ್ರೊ. ಮೇನನ್‌ರವರೇ ! ನಾನು ಮಡಿಕೇರಿಯವ. ಈ ಹವೆಯೇ ನನಗೆ ಪ್ರಿಯ.

ನಾನು ಸದಾ ಕಾಟನ್‌ಧಾರಿ. ನನಗೆ ಏನೂ ಆಗದು !"

ನನಗೆ ಅವರೆಷ್ಟು ಆಶ್ಚರ್ಯಕರ ಮಾದರಿಗಳಾಗಿ ತೋರಿದರೋ ಅದಕ್ಕಿಂತ ಹೆಚ್ಚು ವಿಚಿತ್ರ ಪ್ರಾಣಿಯಾಗಿ ನಾನು ಅವರಿಗೆ ಕಂಡಿರಬೇಕು.

ಎಂಆರ್‌ಸಿ

ಮದರಾಸ್ ರೆಜಿಮೆಂಟಲ್ ಸೆಂಟರ್ ಎಂಬ ಪವಿತ್ರ ಮಂತ್ರದ ಸಂಕ್ಷೇಪ ರೂಪವಿದು— ಎಂಆರ್‌ಸಿ.

ಎಂಆರ್‌ಸಿ—ಸೈನ್ಯಶಿಕ್ಷಣ ಕೇಂದ್ರಗಳಲ್ಲಿ ಮುಕುಟಮಣಿ. ದಕ್ಷಿಣದ ಸೈನಿಕರಿಗೆ ಹೆಮ್ಮೆಯ ಆವರ್ಮನೆ. ಆ ಹೆಸರೇ ಅವರಿಗೆ ವಿದ್ಯುದಾಗಾರ. ಮಡದಿ, ಮಕ್ಕಳು, ಮನೆ ತೊರೆದಾರು. ಆದರೆ ಎಂಆರ್‌ಸಿಗೆ ಕಳಂಕ ತರುವಂಥ ಯಾವ ಕೆಲಸವನ್ನೂ ಅವರು ಮಾಡರು. ಉತ್ತರದ ಹಿಮವತ್ಪರ್ವತದ ಗಡಿರೇಖೆಯನ್ನು ಕಾಯುತ್ತಿರಲಿ, ಗಾಝಾ ಸೆರಗಿನಲ್ಲಿ ಶಾಂತಿ ಪಾಲಿಸುತ್ತಿರಲಿ, ಕೊರಿಯಾ ಸಂಧಾನದಲ್ಲಿ ದೂತರಾಗಿರಲಿ, ಬರ್ಮಾ ಕಾಡುಗಳಲ್ಲಿ ಜಪಾನಿಯರ ವಿರುದ್ಧ ಆಂಬುಷ್ ಹೊಂಚುತ್ತಿರಲಿ ಎಂಆರ್‌ಸಿ ಸ್ಮರಣೆ ಪ್ರತಿ ಸಿಪಾಯಿಗೆ ಪ್ರೇರಕ ವಿದ್ಯುಚ್ಚೈತನ್ಯ! ಅವನ ದುಡಿಮೆಗೆ ತ್ಯಾಗಕ್ಕೆ ಸಾಹಸಮಯ ಜೀವನಕ್ಕೆ ಸಾರ್ಥಕ್ಯ ಒದಗಿಸುತ್ತಿತ್ತು.

ದಕ್ಷಿಣ ಭಾರತದಿಂದ ಸೈನ್ಯಕ್ಕೆ ಆರಿಸಿದ ಸಿಪಾಯಿಗಳ ಶಿಕ್ಷಣಕೇಂದ್ರ ಎಂಆರ್‌ಸಿ. ಇಲ್ಲಿ ಪಡೆದ ಶಿಕ್ಷಣ, ಕಲಿತ ಪಾಠ, ಸುರಿಸಿದ ಬೆವರು, ಗಳಿಸಿದ ಸ್ನೇಹ, ವರ್ಧಿಸಿದ ಸ್ತೋಮ ಪ್ರಜ್ಞೆ ಅವರಿಗೂ ನಾಡಿಗೂ ಎಂದೆಂದಿಗೂ ರಕ್ಷೆ.

ಡೊಂಕಾಗಿ ಬರುತ್ತಾನೆ. ಹೆದರಿ ನಿಲ್ಲುತ್ತಾನೆ. ಲಂಗೋಟಿಧಾರಿಗೆ ಸಮವಸ್ತ್ರ ಧರಿಸಲು ಹೇಗೆತಾನೇ ತಿಳಿದೀತು! ಇನ್ನು ಮಿಣಿಮಿಣಿ ಹೊಳೆಯುವ ಬೂಟುಗಳು, ಮಿಂಚುವ ಬಕ್ಕಲುಗಳಿಂದ ಕೂಡಿದ ಬೆಲ್ಟು, ಟೋಪಿ ಇವೆಲ್ಲವೂ ಎಂದೂ ಏರಲಾಗದ ಸ್ವರ್ಗದ ಪ್ರತೀಕಗಳು. ಇವನಿಗೆ ಬರೆಹವಿಲ್ಲ—"ನಮೋ ಎನ್ನಿ ಸರಸ್ವತಿಯು ವೈರಿಗೆ." ಇವನ ಮಿದುಳೋ ಆದನ್ನೆಲ್ಲ "ಹೊಟ್ಟೆಯೇ ಮೇದುಬಿಟ್ಟಿದೆ !" ಲೋಕಜ್ಞಾನ ಇವನ ಹಳ್ಳಿಯ ಗಡಿಗೇ ಮುಕ್ತಾಯ. ಬಡತನ, ಅಂಧತೆ, ಅಜ್ಞತೆ, ಅಶಿಸ್ತು ಯುಕ್ತ ಪ್ರಮಾಣದಲ್ಲಿ ಬೆರೆತು ಇವನ ಸೃಷ್ಟಿಯಾಗಿದೆ. ಆದರೆ ಇವನು ಸತ್ಯಸಂಧ, ಸ್ವಂತ ಮತಧರ್ಮದಲ್ಲಿ ಆಸಕ್ತ, ಪರಧರ್ಮ ಕುರಿತು ಸಹಿಷ್ಣು—ಇಲ್ಲೆಲ್ಲ ಇವನು ಅಖಿಲ ಭಾರತೀಯ ಪ್ರಜೆ. ಇಂಥವನಿಗೆ ಒಂದೆರಡು ವರ್ಷಗಳ ಸಾಮೂಹಿಕ ಶಿಕ್ಷಣ ಶಿಸ್ತಿನ ಜೀವನ ಎಂಆರ್‌ಸಿಯಲ್ಲಿ ವಿಧಿಸುತ್ತಾರೆ. ಪೂರೈಸಿದ ಮಾಲು ಬೇರೆಯೇ ! ಖನಿಜವೀಗ ಲೋಹವಾಗಿದೆ. ಇವನ ಮುಖದ ಮೇಲಿನ ಕಳೆ, ಚಿಗುರು ಮೀಸೆಯ ಠೀವಿ, ಸಮವಸ್ತ್ರದ ಟಿಪ್ ಟಾಪು ಈ ಪರಿವರ್ತನೆಯ ಬಾಹ್ಯಲಕ್ಷಣಗಳು. ಇವನೀಗ ಭಾರತೀಯ ರಕ್ಷಣಬಲಗಳ ಬಲು ಮುಖ್ಯ ಘಟಕ. ಮಾತೃಭೂಮಿಯ ರಕ್ಷಣೆಯೋ, ದುಷ್ಟರ ವಿರುದ್ಧ ಆಕ್ರಮಣವೋ ಸರಕಾರದ ಹುಕುಂ ಯುಕ್ತ ದ್ವಾರಾ ಇವನಿಗೆ ಬಂದರೆ ಅದರ ನಿರ್ವಹಣೆಯೊಂದೇ ಇವನಿಗೆ ಗೊತ್ತು. ಅಲ್ಲಿ ವಿಚಾರಕ್ಕೆ ಎಡೆಯಿಲ್ಲ. ಹಾವು ಕಚ್ಚಲು ಬಂದಾಗ ಹೊಡೆಯುವುದು ಕೈಗಳ ಕೆಲಸ, ಆ ಮೊದಲೇ ವಿಚಾರಿಸಿ ನಿರ್ಧಾರವನ್ನು ಆಪ್ಪಣೆ ನೀಡುವುದು

ಮಿಂದುಳಿನ ಕೆಲಸ. ಕೈಗಳೇನಾದರೂ ವಿಚಾರಿಸಲಾರಂಭಿಸಿದರೆ ?

ಈ ಮಾತನ್ನು ನಾನು ಬರೆಯಲು ಕಾರಣವಿಷ್ಟೆ. ಸಾರ್ವಜನಿಕ ಜೀವನದಲ್ಲಿ ಸಮವಸ್ತ್ರ ಧಾರಿಗಳನ್ನು ಕುರಿತು ಒಂದು ವಿಧವಾದ ತಿರಸ್ಕಾರಮಿಶ್ರಿತ ಗೇಲಿ ಮನೋಭಾವ ಉಂಟು. ಮೂತ್ಕಾಳನೇ ಪಟ್ಟಾಲಂ ಸೇರುವುದು ಎಂಬ ನಾಡನುಡಿ ಈ ಮನೋಭಾವ ದಿಂದ ಜನಿಸಿದ್ದು. ಕೈಗಳು ಶ್ರೇಷ್ಠವೇ ? ಕಾಲುಗಳು ಕನಿಷ್ಠವೇ ? ಮಿಂದುಳು ಪರಮ ಶ್ರೇಷ್ಠವೇ ? ಆಯಾ ಪಾತ್ರಗಳನ್ನು ಹೊಂದಾಣಿಕೆಯಿಂದ ಆಯಾ ಅಂಗಗಳು ನಿರ್ವಹಿ ಸಿದರೆ ಎಲ್ಲವೂ ಉಳಿಯುತ್ತವೆ, ದೇಹ ಬೆಳೆಯುತ್ತದೆ. ಕೈಗಳ ಕೆಲಸವನ್ನು ಎದೆಗುಂಡಿಗೆ ಮಾಡಹೊರಟರೆ ಅದು ಅಪಾಯಕರವೂ ಹೌದು ಅಪಹಾಸ್ಯಕರವೂ ಹೌದು.

ನಮ್ಮ ಸೈನಿಕನೀಗ ರೋಮನ್ ಹಿಂದಿಯನ್ನು (ಹಿಂದೀ ಭಾಷೆ, ಇಂಗ್ಲಿಷ್ ಲಿಪಿ) ಓದಲು ಬರೆಯಲು ಕಲಿತಿದ್ದಾನೆ. ಅಖಿಲ ಭಾರತೀಯ ಸಂಚಾರಿ ಪ್ರಜೆ ಆದ ಇವನಿಗೆ ಭಾಷಾಸಮಸ್ಯೆಯೇ ಇಲ್ಲ! ಭಾಷೆಗಾಗಿ ನೆರೆಕೆರೆಯವರು ಹೊಡೆದಾಡುವಾಗ, ಭೀಕರ ಕದನವೆಸಗುವಾಗ ಶಾಂತಿಪಾಲನೆಗಾಗಿ ಈತ ಅಲ್ಲಿಗೆ ಹೋಗುತ್ತಾನೆ. ಕರ್ತವ್ಯವನ್ನೇನೋ ಸಮರ್ಥವಾಗಿ ನಿರ್ವಹಿಸುತ್ತಾನೆ. ಆದರೆ ಅಣ್ಣತಮ್ಮಂದಿರ ಈ ಜಗಳದ ಕಾರಣ ಈತನಿಗೆ ಅರ್ಥವಾಗುವುದಿಲ್ಲ. ರಾಜಕೀಯದ ದೊಂಬರಾಟಗಳಿಂದ ಈತ ಬಲುದೂರ.

ಇಂಥವರು ಸಾವಿರಾರು ಮಂದಿ ಅಲ್ಲಿ ಆಗಿಹೋಗಿದ್ದಾರೆ. ಅವರ ವೈಯಕ್ತಿಕ ಹಾಗೂ ಸಾಮೂಹಿಕ ಕವಾಯತುಗಳು ಎಂಆರ್‌ಸಿಯ ಸುತ್ತಲೂ ಒಂದು ಪ್ರಭಾವಲಯವನ್ನು ಸೃಷ್ಟಿಸಿವೆ. ಅವರು ಸುರಿಸಿದ ಬೆವರಿನಿಂದ ಆ ಮಣ್ಣು ಪುನೀತವಾಗಿದೆ.

ಯೂಕಲಿಪ್ಟಸ್ ಮರಗಳ ಕಾಡು ಅಲ್ಲೆಲ್ಲ ಸರ್ವವ್ಯಾಪಿ. ನೀಲಗಿರಿಯಲ್ಲಿ ದೊರೆಯುವ ಮರಗಳಿಂದ ಪಡೆದ ಯೂಕಲಿಪ್ಟಸ್ ಎಣ್ಣೆಗೆ ನೀಲಗಿರಿತೈಲವೆಂದೇ ಹೆಸರು. ಗಾಳಿ ತೀಡಿ ದಾಗ ಎಲೆಗಳಿಂದ ಸ್ರವಿಸುವ ಪರಿಮಳ ಇದೇ. ಎಲ್ಲೂ ಸಮತಟ್ಟಿಲ್ಲ. ಏರು ತಗ್ಗು ಬೆಟ್ಟ ಕಣಿವೆ—ಆದರೆ ಇವೆಲ್ಲವನ್ನೂ ಮುಚ್ಚಿರುವ ಹಸುರಿನ ಹಚ್ಚಡ ನಮ್ಮ ಮುಂದಿಯಿಂದ ನಿಂತು ನೋಡುವವನಿಗೆ ಭಾರೀ ವಕ್ರತಲವನ್ನೇ ಸೃಷ್ಟಿಸಿಬಿಟ್ಟಿದೆ.

ನಮ್ಮ ಮಿಲಿಟರಿ ನಗರದ ಹೆಸರು ವೆಲ್ಲಿಂಗ್ಟನ್. ಮಿಲಿಟರಿ ಬರಾಕುಗಳು. ಸಂಸಾರಿಗರ ಮನೆಸಾಲುಗಳು, ಅಧಿಕಾರಿಗಳ ಪ್ರತ್ಯೇಕ ಬಂಗ್ಲೆಗಳು, ಶಿಕ್ಷಣದ ಬಯಲುಗಳು, ಆಫಿಸರರ ಭೋಜನಗೃಹ, ಕ್ಯಾಂಟೀನ್ ಇವೆಲ್ಲವುಗಳಿಂದ ಪರಿಪೂರ್ಣವಾದ ಈ ಸ್ವಚ್ಛ ಶಿಸ್ತಿನ ನಗರ, ಸಮೀಪದ ಪೇಟೆಗೆ ಹೋಲಿಸುವಾಗ ಸ್ವರ್ಗವೇ. ಪೇಟೆಯೊಂದು ಕೊಳಚೆ ಪ್ರದೇಶ. ಅಲ್ಲೇ ವೆಲ್ಲಿಂಗ್ಟನ್ ರೇಲ್ವೇ ನಿಲ್ದಾಣವೂ ಇದೆ.

ಮೂರು ಅಂತಸ್ತಿನ ಮಂದಿರ

ಸೈನ್ಯ ಮೂರು ಅಂತಸ್ತಿನ ಮಂದಿರ. ಮೊದಲಿನ—ಎಂದರೆ ತೀರ ತಳದ—ಅಂತಸ್ತಿನಲ್ಲಿ ಎನ್‌ಸಿಓಗಳು (ನಾನ್‌ಕಮಿಷನ್ಡ್ ಆಫಿಸರ್ಸ್) ಇದ್ದಾರೆ. ಇವರಲ್ಲಿ ನಾಲ್ಕು ದರ್ಜೆಗಳು —ಸಿಪಾಯಿ, ಲ್ಯಾನ್ಸ್ ನಾಯಕ್, ನಾಯಕ್, ಹವಿಲ್ದಾರ್. ನಡುವಿನ ಅಂತಸ್ತಿನಲ್ಲಿ ಜೆಸಿಓಗಳು (ಜೂನಿಯರ್ ಕಮಿಷನ್ಡ್ ಆಫಿಸರ್ಸ್). ಇವರಲ್ಲಿ ಮೂರು ದರ್ಜೆಗಳು— ಜೆಮದಾರ್, ಸುಬೇದಾರ್, ಸುಬೇದಾರ್ ಮೇಜರ್. ಶಿಖರದವರು ಏಸಿಓಗಳು ಅಥವಾ

ಆಫಿಸರುಗಳು (ಇಂಡಿಯನ್ ಕಮಿಷನ್ಡ್ ಆಫಿಸರ್ಸ್). ಇವರಲ್ಲಿ ಹತ್ತು ದರ್ಜೆಗಳು—ಸೆಕೆಂಡ್ ಲೆಫ್ಟಿನೆಂಟ್, ಲೆಫ್ಟಿನೆಂಟ್, ಕ್ಯಾಪ್ಟನ್, ಮೇಜರ್, ಲೆಫ್ಟಿನೆಂಟ್ ಕರ್ನಲ್, ಕರ್ನಲ್, ಬ್ರಿಗೆಡಿಯರ್, ಮೇಜರ್ ಜನರಲ್, ಲೆಫ್ಟಿನೆಂಟ್ ಜನರಲ್, ಜನರಲ್.

ಎಲ್ಲರೂ ಓಜಿ ಬಣ್ಣದ (ಆಲಿವ್ ಹಸುರು) ಸಮವಸ್ತ್ರಧಾರಿಗಳು. ಯಾವ ಅಂತಸ್ತಿನವನು ಯಾರು ಅವನ ದರ್ಜೆ ಏನು ಎಂದು ಅರಿಯಲು ಕೆಲವು ವಿಶಿಷ್ಟ ಲಾಂಛನಗಳೂ ಭುಜಕೀರ್ತಿಗಳೂ ಸಹಾಯಕಗಳಾಗುತ್ತವೆ. ಸೆಕೆಂಡ್ ಲೆಫ್ಟಿನೆಂಟನಿಗೆ ಒಂದೊಂದು ನಕ್ಷತ್ರದ ಭುಜಕೀರ್ತಿ ಪ್ರತಿಭುಜದ ಮೇಲೆಯೂ ಇರುವುದು. ಆದ್ದರಿಂದ ಇವನು ಏಕನಕ್ಷತ್ರಾಧಿಕಾರಿ. ಲೆಫ್ಟಿನೆಂಟನಿಗೆ ಎರಡೆರಡು, ಕ್ಯಾಪ್ಟನ್ನನಿಗೆ ಮೂರು ಮೂರು ನಕ್ಷತ್ರಗಳ ಭುಜಕೀರ್ತಿಗಳಿವೆ. ಆದ್ದರಿಂದ ಇವರು ಕ್ರಮವಾಗಿ ದ್ವಿನಕ್ಷತ್ರಾಧಿಕಾರಿಗಳು ಮತ್ತು ತ್ರಿನಕ್ಷತ್ರಾಧಿಕಾರಿಗಳು. ಮೇಜರನಿಗೆ ಏರುವಾಗ, ನಿಮ್ಮ ಲೆಕ್ಕ ತಪ್ಪು—ಅವನು ನಾಲ್ಕು ನಕ್ಷತ್ರಗಳನ್ನು ಧರಿಸುವುದಿಲ್ಲ, ಬದಲು ರಾಷ್ಟ್ರ ಲಾಂಛನವನ್ನು (ಅಶೋಕ ಸ್ತಂಭ) ಭುಜಕೀರ್ತಿಯಾಗಿ ತೊಡುತ್ತಾನೆ. ಜೆಸಿಓಗಳು ನಕ್ಷತ್ರಭುಜಕೀರ್ತಿಧಾರಿಗಳೇ. ಆದರೆ ಒಂದು ಕೆಂಪುಪಟ್ಟಿಯೂ ಜೊತೆಯಲ್ಲೇ ಇರುತ್ತದೆ. ಕೆಂಪುಪಟ್ಟಿ ಜೆಸಿಓ ಅಂತಸ್ತು ಸೂಚಕವಾದರೆ ಒಂದು ನಕ್ಷತ್ರ ಜಮಾದಾರನನ್ನೂ, ಎರಡು ನಕ್ಷತ್ರಗಳು ಸುಬೇದಾರನನ್ನೂ, ರಾಷ್ಟ್ರಲಾಂಛನ ಸುಬೇದಾರ್ ಮೇಜರನನ್ನೂ ಸೂಚಿಸುತ್ತವೆ. ಎನ್‌ಸಿಓಗಳಿಗೆ ಭುಜಕೀರ್ತಿ ಇಲ್ಲ. ಬದಲು V ಆಕಾರದ ಪಟ್ಟಿಗಳು ಷರ್ಟಿನ ತೋಳುಗಳ ಮೇಲೆ ಇರುತ್ತವೆ. ಲ್ಯಾನ್ಸ್ ನಾಯಕನಿಗೆ ಒಂದು ಪಟ್ಟಿ, ನಾಯಕನಿಗೆ ಎರಡು, ಹವಿಲ್ದಾರನಿಗೆ ಮೂರು ಪಟ್ಟಿಗಳು. ಪಾಪದ ಸಿಪಾಯಿಗೆ ಏನೂ ಇಲ್ಲ!

ಪ್ರತಿಯೊಂದು ದರ್ಜೆಯವನೂ ಮೇಲಿನ ಎಲ್ಲ ದರ್ಜೆಗಳವರಿಗೂ ಮಿಲಿಟರಿ ವಿಧಿ ಪ್ರಕಾರವೇ ಗೌರವ ವ್ಯಕ್ತಪಡಿಸಬೇಕು. ವಿಧಿಪೂರ್ವಕ ಅಥವಾ ಹುಕುಂಪೂರ್ವಕ ಗೌರವ ವಿದು. ಶಿಕ್ಷಣದ ಪ್ರಧಾನಾಂಶ ಇದನ್ನು ಕಲಿಸಿಕೊಡುವುದು. ಎಲ್ಲ ಜೆಸಿಓಗಳೂ ಆಫಿಸರರೂ ಸೆಲ್ಯೂಟ್ (ಮಿಲಿಟರಿ ವಂದನೆ) ಪಡೆಯಲು ಅರ್ಹರು. ಯಾವ ಎನ್‌ಸಿಓನೂ ಸೆಲ್ಯೂಟ್ ಪಡೆಯಲು ಅರ್ಹನಲ್ಲ. ಎಂದರೇನಾಯಿತು? ಒಬ್ಬ ಹವಿಲ್ದಾರ್ ನಡೆದುಕೊಂಡು ಹೋಗುವಾಗ ಎದುರಾಗುವ, ಅವನು ಹಿಂದೆ ಹಾಕಿ ಸಾಗುವ ಎಲ್ಲ ಜೆಸಿಓಗಳಿಗೂ ಆಫಿಸರುಗಳಿಗೂ (ಕಂಡಷ್ಟು ಸಲವೂ) ಸೆಲ್ಯೂಟಿಸಲೇಬೇಕು; ಹೀಗೆ ಪಡೆದವರು ಯುಕ್ತ ಪ್ರತಿಸೆಲ್ಯೂಟನ್ನು ನೀಡಲೇಬೇಕು. ನಮ್ಮ ನಾಗರಿಕ ಜೀವನದಲ್ಲಾದರೆ? "ಬಗ್ಗಿ ಸಲಾಂ ನೀಡುವುದು ನಿಮ್ಮ ಕರ್ತವ್ಯ, ಅದಕ್ಕೆ ಹಲ್ಕಿರಿದು ಸಹ ಪ್ರತಿಕ್ರಿಯೆ ತೋರಿಸದಿರುವುದು ನನ್ನ ಅಂತಸ್ತು!" ಅಥವಾ ಕೊಡುವವನ ಅಂತಸ್ತಿಗನುಗುಣವಾಗಿ, ಪಡೆವವನ ಸಾಪೇಕ್ಷ ಅಂತಸ್ತನ್ನು ಅವಲಂಬಿಸಿ ಪ್ರತಿನಮಸ್ಕಾರ ವಿವಿಧ ರೂಪಗಳನ್ನು ವಿವಿಧ ಸನ್ನಿವೇಶಗಳಲ್ಲಿ ತಳೆಯುವುದು.

ಒಬ್ಬ ಜೆಸಿಓ ದೂರೊಯ್ದ ಮೇಲಧಿಕಾರಿಗಳಿಗೆ—ಈ ಎನ್‌ಸಿಓ ತನಗೆ ಸೆಲ್ಯೂಟ್ ಕೊಡಲಿಲ್ಲವೆಂದು. ಸರಿ. ಆರ್ಮಿ ಹುಕುಂ ಜಾರಿಯಾಯಿತು. ಒಂದು ನೂರು ಸೆಲ್ಯೂಟುಗಳನ್ನು ಆ ಬಡಪಾಯಿ ಎನ್‌ಸಿಓ ಆ ಕ್ಷಣವೇ ಜೆಸಿಓನಿಗೆ ಕೊಡತಕ್ಕದ್ದೆಂದು. ಕಾನೂನು ಪ್ರಕಾರ ಒಂದೊಂದು ಸೆಲ್ಯೂಟಿಗೂ ಪ್ರತಿಸೆಲ್ಯೂಟನ್ನು ಜೆಸಿಓ ಕೊಡಲೇಬೇಕಷ್ಟೆ!

ಮೇಲಧಿಕಾರಿಯೂ ಅಲ್ಲಿಯೇ ನಿಂತಿದ್ದಾರೆ. ಈಗ ಬಡಪಾಯಿ ಯಾರು ?

ದರ್ಜೆಯ ಪ್ರಜ್ಞೆ ಸೈನ್ಯಶಿಕ್ಷಣದ ಪ್ರಧಾನಾಂಶಗಳಲ್ಲಿ ಒಂದು. ಪ್ರತಿಯೊಬ್ಬನಿಗೂ ತನ್ನ ದರ್ಜೆಯನ್ನು ಕುರಿತು ಅಭಿಮಾನ ಉಂಟು. ಕೆಣಕಿ ನೋಡಿ ಆಗ ತಿಳಿಯುತ್ತದೆ. ಮೇಲಿನ ದರ್ಜೆಗೆ ಏರಲು ಅವನು ಸತತ ಪ್ರಯತ್ನಶೀಲನಾಗಿರುತ್ತಾನೆ. ಮೇಲೇರಿದಂತೆ ಅಧಿಕಾರ, ಗೌರವ, ಆರ್ಥಿಕ ಸಂಪಾದನೆ ಎಲ್ಲವೂ ಹೆಚ್ಚು.

ಮಿಲಿಟರಿ ಒಂದು ಸಂವೃತ ವ್ಯವಸ್ಥೆ. ಅಲ್ಲಿ ಒಂದು ಪ್ರತ್ಯೇಕವಾದ ಜೀವನಸೌಂದರ್ಯ ವಿದೆ, ಸ್ವಾರಸ್ಯವಿದೆ. ನಮ್ಮ ನಾಗರಿಕ ಮಾನದಂಡಗಳಿಂದ ಮಿಲಿಟರಿ ಮೌಲ್ಯಗಳನ್ನು ಅಳೆಯಲು ಹೊರಟಾಗ ಎಲ್ಲೋ ಅಪಸ್ವರ ಮಿಡಿಯುತ್ತದೆ, ತಾಳ ತಪ್ಪುತ್ತದೆ. ನನಗಾದದ್ದಾದರೂ ಇದೇ, ಆ ಪ್ರಥಮ ದರ್ಶನದಲ್ಲಿ. ಇನ್ನು ನಮ್ಮ—ನಾಗರಿಕ ಪ್ರಪಂಚದ ಯೂನಿವರ್ಸಿಟಿ ಪದವೀಧರರ—ಟ್ರೈನಿಂಗು ಈ ಮಿಲಿಟರಿ ಪರಿಸರದಲ್ಲಿ ನಡೆಯಬೇಕು. ಸಾಮಾನ್ಯ ಸಿಪಾಯಿಗೆ ಕೊಡುವ ಶಿಕ್ಷಣ ನಮಗೆ ಕೊಟ್ಟು ಪ್ರಯೋಜನ ವಿಲ್ಲ, ಎಂಆರ್‌ಸಿ ಅಧಿಕಾರಿಗಳು ಒಂದು ಸಮರ್ಥ ವಿಶಿಷ್ಟ ಪಡೆಯನ್ನೇ ನಮ್ಮ ಶಿಕ್ಷಣ ಕ್ಕಾಗಿ ನಿಯೋಜಿಸಿದ್ದರು.

ಪ್ರಥಮ ದರ್ಶನ

ನಾನು ಊರೂರು ತಿರುಗಿದ್ದೆ. ಓದುವ ದಿನಗಳಂದು ಸಾಮೂಹಿಕ ವಿದ್ಯಾರ್ಥಿ ಮಂದಿರ ಗಳಲ್ಲಿ ಎಲ್ಲ ಜಾತಿ ವಿದ್ಯಾರ್ಥಿಗಳೊಡನೆ ಉಂಡಿದ್ದೆ ನಲಿದಿದ್ದೆ, ಮಿತ್ರಸ್ನೇಹ (ನನ್ನ ಸ್ವಭಾವವೇ ಹೀಗೆ) ಗಳಿಸಿದ್ದೆ. ಮೊದಲಸಲ ಮನೆ ಬಿಟ್ಟು ಮಂಗಳೂರಿಗೆ ಕಾಲೇಜು ಸೇರಲು ಹೋದಾಗ ನಾನು ಸಾಮೂಹಿಕ ಹಾಸ್ಟೆಲ್ಲಿನಲ್ಲಿಯೇ ವಾಸಿಸತಕ್ಕದ್ದು. ಬ್ರಾಹ್ಮಣರ ಹಾಸ್ಟೆಲ್ಲಿನಲ್ಲಿ ಅಲ್ಲ ಎಂದು ನನ್ನ ತಂದೆ ವಿಧಿಸಿದ್ದರು. ಸ್ವತಃ ಅವರು ಬಲು ಆಚಾರ ವಂತರು. ಆಚಾರ ವೈಯಕ್ತಿಕ ಶುದ್ಧಿಕಾರಕ ವಿಧಿ. ಇದು ಸಾರ್ವಜನಿಕ ಜೀವನದಲ್ಲಿ ಶುಚಿತ್ವವಾಗಿ ಪ್ರಕಟವಾಗಬೇಕೇ ವಿನಾ ಪ್ರತಿಷ್ಠೆಯ ಪ್ರತೀಕವಾಗಿ ಅಲ್ಲ ; ಜಾತಿ ಮತ್ತು ಅದಕ್ಕೆ ಸಂಬಂಧಿಸಿದ ಸಕಲ ವ್ಯಾಪಾರಗಳೂ ಸಾರ್ವಜನಿಕ ಜೀವನದಲ್ಲಿ ಪ್ರವೇಶಿಸತಕ್ಕ ದ್ದಲ್ಲ—ಇದು ಅವರ ದೃಷ್ಟಿ. ಅವರ ಇಡೀ ಜೀವನ ಒಂದು ತೆರೆದ ಪುಸ್ತಕ.

ಆದ್ದರಿಂದ ನಾನು ಆಹಾರದ ವಿಷಯದಲ್ಲಿ ವಿವೃತಮನಸ್ಕ. ಒಂದೇ ಒಂದು ಕಡು ನೇಮ ಪಾಲಿಸುತ್ತಿದ್ದೆ—ಶುದ್ಧ ಸಸ್ಯಾಹಾರ, ಶುಚಿ ಆಗಿರಬೇಕು. ಮೊಟ್ಟೆ. ಮಾಂಸ. ಕುಡಿತ. ಸಿಗರೇಟ್ ಈ ಕಡೆ ನನಗೆಂದೂ ಕುತೂಹಲ ಸಹ ಮೂಡಲಿಲ್ಲ. ಜೀವನದಲ್ಲಿ ಇದರಿಂದ ತೊಂದರೆ ಏನೂ ಆಗಿರಲಿಲ್ಲ.

ವೆಲ್ಲಿಂಗ್ಟನ್ನಿನ ಪ್ರಥಮ ರಾತ್ರಿ, ಪ್ರಥಮ ಭೋಜನ, ಆಫಿಸರರ ಮೆಸ್ಸಿನ (ಭೋಜ ನಾಲಯ) ಪ್ರಥಮ ದರ್ಶನ. ರಾತ್ರಿ ೮–೧೫ಗಂಟೆಗೆ ಸರಿಯಾಗಿ ಅಲ್ಲಿರಬೇಕು. ಎಲ್ಲರೂ ಒಟ್ಟಾಗಿ ಶಿಸ್ತಿನಿಂದ ಗಲಭೆ ಮಾಡದೆ ಒಂದು ಸೇರಬೇಕು. ಉಡುಪು ಸಂಪೂರ್ಣ ಸೂಟ್. ಟೈ ಧರಿಸಿರಬೇಕು—ಇವೆಲ್ಲ ನಮಗೆ ಆ ಮೊದಲೇ ದೊರೆತಿದ್ದ ಹುಕುಂಗಳು. ನಮ್ಮ ಬರಾಕಿನಿಂದ ೧೦ ಮಿನಿಟುಗಳ ನಡಿಗೆ ಮೆಸ್ಸಿಗೆ. ವಿಶಾಲವಾದ ಕಾಂಕ್ರೀಟ್ ರಸ್ತೆ. ಇಕ್ಕೆಲ ಗಳಲ್ಲಿಯೂ ಗಗನಚುಂಬೀ ವೃಕ್ಷಗಳು. ವಿದ್ಯುದ್ದೀಪಗಳಿದ್ದರೂ ಆ ಗೊಂಡಾರಣ್ಯದ

ಕಗ್ಗತ್ತಲಿನ ತೀವ್ರತೆಯನ್ನು ಎತ್ತಿಹಿಡಿಯುವ ಸೂಚಕಗಳು ಅವಾಗಿದ್ದುವೇ ಹೊರತು ನಿಶಾಪರಿಹಾರಕಗಳಾಗಿರಲಿಲ್ಲ.

ಭವ್ಯ ಮಾಧವ ಮೇಸನ್ ಮುಂಚೆ. ಜೊತೆಗೆ ಇತರ ಮಲೆಯಾಳೀ ಮಿತ್ರರು, ನಾಗರಾಜನ್ ಸುತ್ತಲೂ ಹಲವಾರು ತಮಿಳು ಸೋದರರು. ಹೀಗೆ ಸಹಜವಾಗಿ ನಾಲ್ಕೈದು ಗುಂಪುಗಳಾದುವು. ಇದ್ದವರು ಹದಿನಾಲ್ಕು ಮಂದಿ. ಗುಂಪು ಸಿಕ್ಕದೇ ಉಳಿದ ಇಬ್ಬರೆದು ಕೊನೆಯ ಜೊತೆಯಾಯಿತು, ಬಾಲಕೃಷ್ಣನ್ ಮತ್ತು ನಾನು.

"ತಿರುಚಿನಾಪಳ್ಳಿಯಿಂದ ಬರುತ್ತಿದ್ದೇನೆ. ನಾನು ತಮಿಳುವಾದ್ಯಾರ್" ಬಾಲಕೃಷ್ಣನ್ ಮಾತು ತೊಡಗಿದರು.

"ಈ ಅನುಭವ ನಿಮಗೆ ಮೊದಲೇ ಇದೆಯೇ ?"

"ಖಂಡಿತ ಇಲ್ಲ. ಈ ಚಳಿ, ಈ ಅಕ್ರಮ ! ಯಾಕೆ ಬಂದೆ ಎಂದು ಈಗಲೇ ಅನ್ನಿಸಿದೆ."

"ಬಂದಾಯಿತು. ಒಂದು ರಾತ್ರಿಯೂ ಮುಗಿದಿಲ್ಲ. ಇಷ್ಟು ಥಕ್ಕನೆ ತೀರ್ಮಾನಕ್ಕೆ ಬರಬಾರದು."

"ಹಾಗಲ್ಲ ಮಿ. ರಾವ್, ನಾನು ಕಡುಸನಾತನಿ. ಇಲ್ಲಿಯ ಪರಿಸ್ಥಿತಿ ನೋಡಿದರೆ ಶೂದ್ರರ ಕೈ ಅನ್ನ ತಿನ್ನಬೇಕೋ ಹೇಗೆ ?"

"ನಾನೂ ನಿಮ್ಮ ಹಾಗೆಯೇ. ಅಂದರೆ ಶುಚಿಯಾಗಿ ಮಾಡಿ ಬಡಿಸಿದ ಸಸ್ಯಾಹಾರ ವಾದರೆ ತೀರಿತು. ಉಳಿದ ಗೊಡವೆ ನಮಗೆ ಯಾಕೆ ?"

"ಅದು ಸರಿಯಲ್ಲ. ಉತ್ತಮ ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಯಾವ ಅಸ್ಪೃಶ್ಯರೋ ಮಡಿಮೈಲಿಗೆ ಇಲ್ಲದೇ ತಯಾರಿಸಿದ್ದನ್ನು ತಿಂದರೆ ಬ್ರಾಹ್ಮಣ್ಯ ಎಲ್ಲಿ ಉಳಿಯಿತು ?"

"ಬಾಲಕೃಷ್ಣನ್ ! ನಿಮ್ಮ ಈ ದೃಷ್ಟಿ ಸರಿಯಲ್ಲ. ನೀವು ರೈಲಿನಲ್ಲಿ ಬಂದ ವೇಳೆ ನಿಮಗೆ ಕಾಫಿ ತಿಂಡಿ ಊಟವನ್ನು ಯಾವ ಸನಾತನ ಬ್ರಾಹ್ಮಣ ಮಾಡಿ ತಂದು ಬಡಿಸಿದ? ಕಾಲ ಬದಲಾಗಿದೆ. ನಾವೂ ಬ್ರಾಹ್ಮಣ್ಯವನ್ನು ಋಷಿಗಳ ತೆರನಾಗಿ ಅನುಸರಿಸುತ್ತಿಲ್ಲವೆಂಬು ದನ್ನು ಮರೆಯಬಾರದು."

"ಏನೇನಾಗಬೇಕೋ ಅದನ್ನು ಅನುಭವಿಸಲೇಬೇಕು."

ಬಾಲ ನನ್ನ ವಾದವನ್ನು ಎದುರಿಸಲು ಸಮರ್ಥನಾಗಲಿಲ್ಲ ; ಒಪ್ಪಲು ಸಿದ್ಧನಿರಲಿಲ್ಲ. ಆದ್ದರಿಂದ ಮೇಲಿನ ಉದ್ಗಾರ. ಇಂಥವನು ಇಲ್ಲಿಗೇಕೆ ಬಂದ ?

"ಅದಿರಲಿ ನೀವು ಈ ಕೋರ್ಸಿಗೆ ಬಂದದ್ದು ಹೇಗೆ ? ಯಾಕೆ ?"

"ನಮ್ಮ ಪ್ರಿನ್ಸಿಪಾಲರು ಶಿವಸುಬ್ರಹ್ಮಣ್ಯ ಅಯ್ಯರರು ಇಲ್ಲಿ ಬ್ರಾಹ್ಮಣರ ಭೋಜನಾಲಯವಿದೆ ಎಂದು ಮುಂತಾಗಿ ಆಶ್ವಾಸನೆ ನೀಡಿದ್ದರು. ಇಲ್ಲವಾದರೆ ನಾನು ಬರುತ್ತಿದ್ದೇನೇ ? ಆದರೆ ಈಗ ನೋಡಿ ಇಕ್ಕಳದಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ."

ಮೂವತ್ತೈದನ್ನು ಮೀರಿದ ಹಿರಿಯ ವ್ಯಕ್ತಿ ಬಾಲ. ಉಳಿದ ನಾವೆಲ್ಲರೂ ಮೂವತ್ತರ ಸರಿಮಗ್ಗುಲಿನವರು. ಅವನ ಅಭಿಪ್ರಾಯಗಳ ಜೊತೆಗೆ ದೇಹದ ಘನ ಗಾತ್ರವೂ ವಕ್ರತೆ ಗಳೂ ನಡೆನುಡಿಯೂ ಎಲ್ಲವೂ ದೃಢವಾಗಿ ಹೋಗಿದ್ದುವು. ಎದ್ದು ತೋರುತ್ತಿದ್ದ ಭಾಗ ಹೊಟ್ಟೆ. ಯಾವ ದೃಷ್ಟಿಯಿಂದ ನೋಡಿದರೂ ಈತನದು ಮಿಲಿಟರಿ ವಾತಾವರಣಕ್ಕೆ ಹೊಂದಲಾರದ ಹೊಂದಲಾಗದ ವಿಶಿಷ್ಟ ವ್ಯಕ್ತಿತ್ವ. ಪರಿಸ್ಥಿತಿ ಕರುಣಾಜನಕವಾಗಿತ್ತು.

ಹಾಸ್ಯಾಸ್ಪದವಾಗಿರಲಿಲ್ಲ. ನನ್ನ ಮಾತು, ವರ್ತನೆ, ಮೇಲಾಗಿ ಬ್ರಾಹ್ಮಣ್ಯದ ಪ್ರತೀಕವಾದ ಸಸ್ಯಾಹಾರಪ್ರಿಯತೆ ಆತನಿಗೆ ತುಂಬ ಹಿಡಿಸಿರಬೇಕು.

"ನೋಡಿ, ಮಿ. ರಾವ್. ಇಲ್ಲಿಗೆ ಬಂದುಬಿಟ್ಟಿದ್ದೇನೆ. ನೀವು ವಿಚಾರಿಸಿಕೊಂಡು ನನ್ನನ್ನು ನಡೆಸಿಕೊಂಡು ಹೋಗಬೇಕು."

ಮೆಸ್ಸೊಂದು ಅರಮನೆ. ಅದರ ಕಾಂಪೌಂಡನ್ನು ಪ್ರವೇಶಿಸುವಾಗಲೇ ನನ್ನಂಥವನಿಗೆ ಬಲು ಅಳುಕಾಗುವಂತೆ ವಿಶಾಲವಾಗಿಯೂ ಅಲಂಕಾರಮಯವಾಗಿಯೂ ಅದು ಇತ್ತು. ಮೆಸ್ಸಿನ ಉದ್ದವಾದ ಮೆಟ್ಟಿಲುಗಳನ್ನು ಏರಿ ಜಗಲಿಗೆ ತಲಪುತ್ತಿದ್ದಂತೆಯೇ ಬಲು ಸುಟಿಯಾದ ಸಿವಿಧಾರಿ ತರುಣ ಹೊರಗೆ ಬಂದು "ಗುಡ್ ಈವ್‌ನಿಂಗ್ ಸರ್. ನಿಮಗೆ ಸ್ವಾಗತ" ಎಂದು ಮಂದಹಾಸ ವ್ಯಕ್ತಪಡಿಸಿದ. (ರಾತ್ರಿ ೮–೧೫ ಗಂಟೆ—ಈವ್ನಿಂಗೇ ?) ತಾನು ಮೆಸ್ ಹವಿಲ್ದಾರ್ ಎಂದು ಪರಿಚಯಿಸಿಕೊಂಡ. ಹವಿಲ್ದಾರ್ ಒಬ್ಬನ ಹೆಸರೇ, ದರ್ಜೆಯೇ, ದರ್ಜೆಯಾಗಿದ್ದರೆ ಅದು ಕ್ಯಾಪ್ಟನ್, ಮೇಜರುಗಳಿಗಿಂತ ಮೇಲಿನದೋ ಕೆಳಗಿನದೋ ಯಾವುದೂ ತಿಳಿಯದ ನಾನು ಪ್ರತಿ ನಮಸ್ಕಾರವಿತ್ತು ಚಿನ್ನದೊರೈ ಹತ್ತಿರ ನನ್ನ ಸಂಶಯ ತೋಡಿಕೊಂಡೆ.

"ಹವಿಲ್ದಾರ್—ಅವನೊಬ್ಬ ಎನ್‌ಸಿಓ. ನಮ್ಮ ಆಫೀಸುಗಳಲ್ಲಿ ಗುಮಾಸ್ತರಿರುವಂತೆ ಅವನ ದರ್ಜೆ ಆರ್ಮಿಯಲ್ಲಿ" ಚಿನ್ನದೊರೈ ನೀಡಿದ ವಿವರಣೆ.

ಇಷ್ಟು ಸುಟಿಯಾದ ತರುಣ ಕೇವಲ ಗುಮಾಸ್ತ ದರ್ಜೆಯವನೇ ಎಂದು ವಿಸ್ಮಯವಾಯಿತು. ಇಷ್ಟರಲ್ಲಿಯೇ ಮಾಧವಮೇನನ್ ಮತ್ತು ನಾಗರಾಜನ್ ಹವಿಲ್ದಾರನೆಡೆಗೆ ಧಾವಿಸಿ ಆತನ ಪರಿಚಯದಿಂದ ತಮಗೊದಗಿದ ಲಾಭಕ್ಕೋಸ್ಕರ ಸಂತೋಷಪ್ರದರ್ಶನ ಮಾಡುತ್ತಿದ್ದರು. ಅವನು ಮಲೆಯಾಳಿಯಾಗಿದ್ದುದು ಮೇನನ್ನನಿಗೆ ಎಷ್ಟು ಸಂತೋಷದಾಯಕ ಸುದ್ದಿಯಾಗಿತ್ತೋ ಅದು ನಾಗರಾಜನ್‌ನಿಗೆ ಅಷ್ಟೇ ಖೇದದಾಯಕ ಸಂಗತಿಯೂ ಆಗಿತ್ತು. ಮೆಸ್ ಹವಿಲ್ದಾರ್ ನಮ್ಮನ್ನು ಒಳಗಿನ ವಿಶಾಲವಾದ ಹಾಲಿಗೆ ಕರೆದೊಯ್ದ. ಈ ಭವ್ಯ ಕೊಠಡಿಯ ಹೆಸರು ಆ್ಯಂಟಿರೂಮ್. ಇಲ್ಲಿ ಭೋಜನದ ಮೊದಲು ಹಾಗೂ ಭೋಜನಾನಂತರ ಆಫಿಸರರಿಗೆ ಕುಳಿತು ಲಘುವಾಗಿ ಕಾಲ ಕಳೆಯಲು ಏರ್ಪಾಡುಗಳಿವೆ. ದಿನಪತ್ರಿಕೆಗಳು, ಆಟದ ಸಾಮಗ್ರಿಗಳು, ರೇಡಿಯೊ, ಲೈಬ್ರೆರಿ, ಇತ್ಯಾದಿ. ನೆಲವಿಡೀ ರತ್ನಗಂಬಳಿಯಿಂದ ಅಲಂಕೃತವಾಗಿತ್ತು. ಗೋಡೆಗಳ ಎತ್ತರದಲ್ಲಿ ರಾಷ್ಟ್ರನಾಯಕರ, ಆರ್ಮಿವರಿಷ್ಠರ ಚಿತ್ರಗಳ ಸಾಲು. ತಗ್ಗಿನಲ್ಲಿ ಪುಷ್ಪಗಳನ್ನು, ತೆರ್ಮೆಗಳನ್ನು, ವಿಶಿಷ್ಟ ಬಣ್ಣಗಳ ಗರಿಕೆಗಳನ್ನು ಅಳವಡಿಸಿ ಇಟ್ಟಿದ್ದ ಕರಂಡಕಗಳು. ಮೇಜು ಕುರ್ಚಿ ಕಾಲು ಮಣೆ ಎಲ್ಲವೂ ಬಲು ನಾಜೂಕಿನವು. ಕೈ ತೊಳೆದೇ ಅಲ್ಲಿಯ ಪತ್ರಿಕೆಗಳನ್ನು ಮುಟ್ಟಬೇಕು ಅಲ್ಲಿ ಕೂರಬೇಕಾದರೆ ನಿಲ್ಲಬೇಕಾದರೆ ನಡೆಯಬೇಕಾದರೆ ದೇವಲೋಕದವರೇ ಬರಬೇಕು. ಇಸ್ತ್ರಿ ನಿಂತಿರದ ನನ್ನ ಕಾಟನ್ ಪ್ಯಾಂಟ್, ಹೋಲ್ಡಾಲಿನೊಳಗೆ ಮುದುರಿಹೋಗಿದ್ದ ನೆಕ್‌ಟೈಯ್ಯಿಯ ಅರೆ ಬಗ್ಗಿದ್ದ ಮೊಂಡು ತುದಿ, ಡಬಲ್ ಬ್ರೆಸ್ಟ್ ಕೋಟಿನ (ಗುಂಡಿಗಳನ್ನು ಆಗಸ ತಿಂದಿದ್ದುದರಿಂದ) ಜೋಲುತ್ತಿದ್ದ ಪಾರ್ಶ್ವಗಳು, ಪಾಲಿಷ್ ತೆಗೆದುಕೊಳ್ಳಲು ನಿರಾಕರಿಸಿದ್ದ ಶೂಗಳು—ಆ ವಾತಾವರಣಕ್ಕೆ ನನ್ನನ್ನು ಸಂಪೂರ್ಣ ನಾಲಾಯಕ್ ಮಾಡಿದ್ದುವು. ಬಾಲಕೃಷ್ಣನ್ ಇದ್ದುದರಿಂದ ನನಗೆ ಕೊನೆಯ ಸ್ಥಾನ ಬರಲಾರದೆಂಬ ಭರವಸೆ.

ಅಳುಕು ನಾಚಿಕೆಗಳಿಂದ ಕುಗ್ಗಿ ಕುಸಿದು ಹೋದ ನಾನು ಮೂಲೆಯ ಕುರ್ಚಿಯಲ್ಲಿ ಕೈಗೆ ಸಿಕ್ಕ ಪತ್ರಿಕೆ ಹಿಡಿದು ಮುಖ ಮುಚ್ಚಿ ಕುಳಿತು ಓದುವಂತೆ ನಟಿಸಿದೆ. ಸಿಕ್ಕಿದ ಪೇಪರು ತಮಿಳು ಭಾಷೆಯದಾಗಬೇಕೆ! ಬಾಲ ಅಲ್ಲಿ ಇಲ್ಲಿ ಸೀಟು ಅರಸಿ ಕೊನೆಗೆ ನನ್ನ ಪಕ್ಕ ದಲ್ಲಿಯೇ ಬಂದು ಅಲಂಕಾರದ ಒಂದು ಪುಟ್ಟ ಕುರ್ಚಿಯ ಮೇಲೆ ಭಾರಾಸೀನನಾದ.

ಹಾಲಿನ ಇನ್ನೊಂದು ಕೊನೆಯಲ್ಲಿ ಬಿಲಿಯರ್ಡ್ಸ್‌ನ ಆಟ ಆಡುತ್ತಿದ್ದವರ ಕೇಕೆ ಕೆಸೆತ ಅವರ ಡ್ರೆಸ್ಸಿನ ನಾಜೂಕು ಅವರೆಲ್ಲರೂ ಮಿಲಿಟರಿ ಆಫಿಸರರೇ ಇರಬೇಕೆಂದು ಸಾರಿದುವು. ಹದಿನಾಲ್ಕು ಜನರ ಹಿಂಡು ಬಂದು ಈ ಪಾವನ ಏಕಾಂತವನ್ನು ನಾಶಮಾಡಿದುದನ್ನು ಅವರು ನೋಡಿದ್ದರೂ ಗಮನಿಸಿರಲಿಲ್ಲ.

ನನ್ನ ತಮಿಳು ಪತ್ರಿಕೆಯ ವಾಚನ ಮುಂದುವರಿಯಲಿಲ್ಲ. ಮರೆಯಿಂದ ಬಿಲಿಯರ್ಡ್ಸ್ ಆಟಗಾರರನ್ನು ಇಣುಕಿ ನೋಡುತ್ತಿದ್ದೆ. ನಮ್ಮ ಬಳಗದವರೆಲ್ಲರೂ ಹೀಗೆಯೇ ಸಂಜ್ಞಾ ಲೋಕದಲ್ಲಿ ಸಂಭಾಷಿಸುತ್ತಿದ್ದರು. ಈ ಮೂಕ ಯುದ್ಧ ಮುಂದುವರಿದದ್ದು ೮-೩೦ರ ತನಕ ಎಂದರೆ ೧೫ ಮಿನಿಟುಗಳಷ್ಟು ಕಾಲ ಮಾತ್ರ—ಆದರೂ ನಮಗೆ ಅನಿಸಿದ್ದು ಅದೆಷ್ಟೋ ಗಂಟೆಗಳೇ ಸಾಗಿ ಹೋದುವೆಂದು. ಆಯಾಸ, ಹಸಿವು, ನಿದ್ರೆ, ಈ ನರಕ ಮೌನ! ಕೊನೆಗೂ—ಪ್ರತಿಯೊಂದಕ್ಕೂ ಬರುವಂತೆ—ಈ ಪರಿಸ್ಥಿತಿಗೂ ಅಂತ್ಯ ಬಂದಿತು.

ಅವನೆಲ್ಲಿಂದ ಬಂದ ತಿಳಿಯಲಿಲ್ಲ. ಬಿಲಿಯರ್ಡ್ಸ್ ಚೆಂಡೇ ಪುಟನೆಗೆದು ನಮ್ಮ ಮಧ್ಯೆ ಅವನಾಗಿ ಇಳಿದಿರಬೇಕೆಂದು ನಾನು ಭಾವಿಸಿದೆ. ನಮ್ಮ ಮೂಕ ಮತ್ತು ಭಾವುಕ ಮೊರೆ ಯನ್ನು ಕೇಳಿ ದೇವಾಧಿದೇವನೇ ಪ್ರತ್ಯಕ್ಷನಾಗಿರಬೇಕು. ಎಲ್ಲರೂ ಏಕ್‌ದಂ ಎದ್ದು ನಿಂತೆವು. ಹದಿನಾಲ್ಕು ಜನ ಹದಿನಾಲ್ಕು ವಿಧಗಳಲ್ಲಿ ವಂದನೆಗಳನ್ನು ಉಸುರಿದೆವು. ಕೈಗಳಲ್ಲಿ ಪ್ರದರ್ಶಿಸಿದೆವು.

"ಗುಡ್ ಈವ್‌ನಿಂಗ್ ಮಾನ್ಯರೇ!"

೮-೪೫ ರಾತ್ರಿ ಆಗಿದೆ. ಇನ್ನೂ ಶುಭಸಾಯಂಕಾಲ! ಹಾಗಾದರೆ ರಾತ್ರಿಯ ಊಟ?

"ಮಿತ್ರರೇ! ಈ ಶುಭ ಸಾಯಂಕಾಲ (ಎಲಾ ಇವನ! ಸಾಯಂಕಾಲ!) ನಿಮಗೆ ಸ್ವಾಗತ. ನಾನು ಲೆಫ್ಟಿನೆಂಟ್ ಪವರ್ಸ್ಸಾರ್. ನಿಮ್ಮ ಟ್ರೈನಿಂಗ್ ನನ್ನ ಹೊಣೆ. ನಿಮಗೆ ಒಳ್ಳೆಯದಾಗಲಿ. ಈಗ ನಿಮ್ಮ ಪರಿಚಯ ಹೇಳುತ್ತೀರಾ?"

ಹದಿಮೂರನೆಯವನು ನಾನಾಗಬೇಕಾಗಿತ್ತು. ಆದರೆ ಅಲ್ಲಿ ಬಾಲ ಇದ್ದುದರಿಂದ ನನಗೆ ಹದಿನಾಲ್ಕನೆಯ ಅಂದರೆ ಕೊನೆಯ ಸ್ಥಾನ ಯಾವ ಸ್ಪರ್ಧೆಯೂ ಇಲ್ಲದೇ ಲಭಿಸಿತು. ಮೇಸನ್ನನಿಗೆ ಒಂದನೇ ಸ್ಥಾನ ದೊರೆತದ್ದು ನಾಗರಾಜನ್‌ಗೆ ಒದಗಿದ ಎರಡನೇ ಮುಖ ಭಂಗ.

"ನಾನು ನಾರಾಯಣರಾವ್. ಕೊಡಗಿನಿಂದ ಬರುತ್ತಿದ್ದೇನೆ." ಮಂಗಳೂರು ಕಾಲೇಜಿ ನವನಾದರೂ ಕೊಡಗಿನವನೆಂದು ಒತ್ತಿ ಹೇಳುವುದರಲ್ಲಿ ನನಗೆ ಹೆಮ್ಮೆ.

"ಜನರಲ್ ಕಾರ್ಯಪ್ಪನವರ ಊರಿನವರೇ?"

"ಹಾಗೆಂದು ಒಪ್ಪಿಕೊಳ್ಳಲು ನನಗೆ ಸಂತೋಷವೂ ಹೆಮ್ಮೆಯೂ ಆಗುತ್ತದೆ. ನನ್ನಪ್ಪ ಅವರ ಸಹಪಾಠಿ."

ಪರಿಣಾಮ! ನನ್ನನ್ನು ಅವರು ಆಪಾದಮಸ್ತಕ ದಿಟ್ಟಿಸಿದರು. ಬೇರೆ ಯಾರಿಗೂ ಲಭಿಸದಿದ್ದ ಈ ಭಾಗ್ಯ ನನ್ನದಾಯಿತು. ಆದರೆ ನನ್ನ ಉಡುಪಿನ ಅರಿವಾಗಿ ಬಲು ನೊಂದೆ. ಒಂದು ಸರ್ಕಾರದರೂ ಹೊಲಿಸಬಾರದಿತ್ತೇ ?

ದೇವಾಲಯವೀ ಭೋಜನಶಾಲಾ

"ಮಿತ್ರರೇ ! ಈ ಆಫಿಸರ್ಸ್ ಮೆಸ್ಸಿಗೆ ಪ್ರಥಮವಾಗಿ ಬರುತ್ತಿರುವ ನಿಮಗೆ ಇಲ್ಲಿಯ ಕೆಲವು ಸಂಪ್ರದಾಯಗಳನ್ನು ತಿಳಿಸಬೇಕಾದದ್ದು ನನ್ನ ಮೊದಲ ಕರ್ತವ್ಯ. ಸಿವಿಲ್ ಜೀವನದಲ್ಲಿ ನಿಮ್ಮ ನಿಮ್ಮ ಮತಗಳಿಗೆ ಸಂಬಂಧಿಸಿದಂಥ ದೇವಾಲಯಗಳಿರುತ್ತವೆ. ಆದರೆ ಆರ್ಮಿಯಲ್ಲಿ ಎಲ್ಲ ಆಫಿಸರರೂ ಒಂದೇ ಮತದವರು. ಇವರ ದೇವಾಲಯವೇ ಈ ಆಫಿಸರ್ಸ್ ಮೆಸ್. ನಾನು ಹೇಳಿದ್ದು ನಿಮಗೆ ತಿಳಿಯಿತೇ !"

ಅವರು ಉತ್ತರ ನಿರೀಕ್ಷಿಸಿದಂತೆ ತೋರಲಿಲ್ಲ. ಕಾರಣ—ಒಂದಿಷ್ಟೂ ಬಿಡುವು ಕೊಡದೇ ಬಾಯಿಪಾಠ ಕಲಿತುಬಂದವರಂತೆ ಮುಂದಿನ ಚರಣಕ್ಕೆ ನೆಗೆದರು.

"ಈ ಮೆಸ್ ಎಂಬುದು ಬಲು ಪವಿತ್ರ ಸ್ಥಳ. ಒಂದು ಸೈನ್ಯಪಡೆಯ ಆಫಿಸರರ ಶಿಸ್ತಿನ, ಉತ್ಸಾಹದ ಮಟ್ಟವನ್ನು ಅವರ ಮೆಸ್ಸನ್ನು ನೋಡಿ ತತ್‌ಕ್ಷಣವೇ ಹೇಳಿಬಿಡಬಹುದು. ಇದನ್ನು ನಾವೆಲ್ಲರೂ ಜಾಗರೂಕತೆಯಿಂದಲೂ ವಿಶ್ವಾಸದಿಂದಲೂ ಅತ್ಯುತ್ಕೃಷ್ಟ ಮಟ್ಟದಲ್ಲಿ ಇಟ್ಟುಕೊಳ್ಳಬೇಕು. ಇದು ನಮ್ಮೆಲ್ಲರ ಒಟ್ಟಾದ ಹಾಗೂ ಪ್ರತ್ಯೇಕವಾದ ಪವಿತ್ರ ಹೊಣೆ. ನಾನು ನನ್ನ ಮನಸ್ಸನ್ನು ನಿಮಗೆ ಸ್ಪಷ್ಟಪಡಿಸಿದ್ದೇನೆಯೇ ?

"ಹೆಸರು ಭೋಜನಶಾಲೆಯೆಂದಿದ್ದರೂ ಇದರಲ್ಲಿ ಭೋಜನದ ಸ್ಥಾನ ಕೊನೆಯದು. ಕಾರಣ ಸುವಿದಿತ. ಆರ್ಮಿಯಲ್ಲಿ ಡ್ಯೂಟಿ ಫಸ್ಟ್, ಊಟ ಲಾಸ್ಟ್. ಇದರ ಅರ್ಥ ಊಟ ಬೇಡವೆಂದಲ್ಲ, ಅಲ್ಲಿ ಸೊಗಸು ಬೇಡವೆಂದಲ್ಲ. ಆದರೆ ದೇಶರಕ್ಷಣೆ ಎಂಬ ಪವಿತ್ರ ಹೊಣೆಯ ಮುಂದೆ ಊಟ ಮತ್ತು ಅದರ ಸೊಗಸು ಗಮನಾರ್ಹವಾದವಲ್ಲ. ಆದ್ದರಿಂದ ನೀವು ಯಾರೂ ಎಂದೂ ಪರೋಕ್ಷವಾಗಿ ಸಹ ಇಲ್ಲಿಯ ಆಹಾರವನ್ನು ಕುರಿತು ಏನೂ ಟೀಕೆ ಮಾಡಲಾಗದು. ನನ್ನ ವಿಷಯ ವಿವರಣೆ ಸಮರ್ಪಕವಾಗಿದೆಯೇ ?

"ಆರ್ಮಿಯಲ್ಲಿ ಎಲ್ಲವೂ ಶಿಸ್ತಿನಿಂದ ಪೂರ್ವನಿರ್ಧರಿತ ಕ್ರಮದಲ್ಲಿ ನಡೆಯಬೇಕು. ಅದು ಯುದ್ಧರಂಗದ ಹೋರಾಟವಿರಲಿ ಶಾಂತಿಕಾಲದ ಶಿಕ್ಷಣವಿರಲಿ ಭೋಜನಶಾಲೆಯ ಕೂಟವಿರಲಿ ಪ್ರತಿಯೊಂದರಲ್ಲೂ ಸ್ಪಷ್ಟವಿಧಾನ ಅವಶ್ಯ. ಸದ್ಯ ನಮ್ಮ ಮುಂದಿರುವುದು ಊಟದ ವಿಷಯವಾದ್ದರಿಂದ ಅದನ್ನು ಕುರಿತು ಕೆಲವು ವಿವರಗಳನ್ನು ನಾನೀಗ ತಮಗೆ ಹೇಳುತ್ತೇನೆ. ನನ್ನ ಉದ್ದೇಶವೇನೆಂಬುದು ನಿಮಗೆ ವೇದ್ಯವಾಯಿತೇ ?

"ಮೆಸ್ಸನ್ನು ದೇವಾಲಯವೆಂದೆ. ಆದ್ದರಿಂದ ಇಲ್ಲಿಗೆ ಬರತಕ್ಕಂಥ ನೀವು ಯುಕ್ತವೇಳೆ ಯುಕ್ತ ಉಡುಪಿನಿಂದ ಬರತಕ್ಕದ್ದು. ಆ ವಿವರಗಳು Mess Etiquette ಎಂಬ ಈ ಕಿರುಹೊತ್ತಗೆಯಲ್ಲಿವೆ. ಆದರೆ ಒಂದು ಕಾಪಿಯನ್ನು ನಿಮಗೆ ಅವಗಾಹನೆಗೋಸ್ಕರ ಕೊಡುತ್ತೇನೆ. ಯಾರು ನಿಮ್ಮ ಮುಂದಾಳು ?"

ಪುಟ ನೆಗೆದು ನಿಂತವನು ನಾಗರಾಜನ್. ಸರಿ ಆತನ ಕೈಗೆ ಈ ಪವಿತ್ರ ಗ್ರಂಥ (ಆಕಾರ ಗಾತ್ರ ಚಿಕ್ಕ ಡೈರಿಯಂತೆ. ಆದರೆ ಪಾವಿತ್ರ್ಯವೋ ?) ವರ್ಗಾವಣೆಗೊಂಡಿತು. ನಾಗರಾಜ

ನ್ನನ ಈ ಸಂದರ್ಭಸ್ಫೂರ್ತಿ ಆ ಹಿಂದಿನ ದ್ವಿವಿಜಯಗಳಿಂದ ತೂಕ ಏರಿದ್ದ ಮೇನನ್ನನಿಗೆ ಹಿತವಾಗಲಿಲ್ಲ ಎಂದು ಆತನ ಹುಳಿಮೋರೆಯಿಂದ ವ್ಯಕ್ತವಾಯಿತು.

ಪರ್ಮಾರ್ ಮುಂದುವರಿದರು "ನಾಳೆ ರಾತ್ರಿಯ ಮೊದಲು ಇದನ್ನು ನೀವು ಓದಿ ಮನನ ಮಾಡಿಕೊಂಡು ಬರತಕ್ಕದ್ದು. ಆಗ ನಿಮ್ಮನ್ನು ನಾನು ಹಲಕೆಲವು ಪ್ರಶ್ನೆಗಳನ್ನು ಕೇಳುವವನಿದ್ದೇನೆ. ಈಗ ಗಂಟೆ ೯-೩೦ನ್ನು ಸಮೀಪಿಸುತ್ತಿದೆ. ನಮ್ಮ ಸೀನಿಯರ್ ಆಫಿಸರರು ಭೋಜನ ಶಾಲೆಯನ್ನು ಪ್ರವೇಶಿಸುವ ಏರ್ಪಾಡಿನಲ್ಲಿದ್ದಾರೆ. ಆದ್ದರಿಂದ ನಾವೂ ಹೋಗೋಣ. ಒಂದು ವಿಚಾರ—ಅವರೆಲ್ಲರೂ ಒಳಹೊಕ್ಕ ತರುವಾಯ ನೀವು ಸಾಲಾಗಿ ಹೋಗಿ; ಊಟದ ದೊಡ್ಡ ಟೇಬಲಿನ ಕೊನೆಯ ಪಾರ್ಶ್ವದಲ್ಲಿ ಒಂದೊಂದು ಕುರ್ಚಿಯ ಹಿಂದೆ ಒಬ್ಬೊಬ್ಬರಂತೆ ನಿಲ್ಲಿ; ನೀವೆಲ್ಲರೂ ಹೀಗೆ ನಿಂತಮೇಲೆ ಸಿಓ ಸಾಹೇಬರು ತಮ್ಮ ಕುರ್ಚಿಯನ್ನೆಳೆದು ಕೂರುತ್ತಾರೆ; ನೀವು ಹಾಗೆಯೇ ಮಾಡಿ; ಹೆಚ್ಚಿನ ವಿವರಗಳಿಗೆ ಈಗ ವೇಳೆಯಿಲ್ಲ. ಒಂದು ಮುಖ್ಯ ಸಂಗತಿ: ಕೈಗಳಿಂದ ಮಾತ್ರ ಊಟ ಮಾಡಬೇಡಿ."

ಇದೇನು ವಿಪತ್ತು ಬಂತೆಂದು ನಾನು ಗಾಬರಿಯಾದೆ—ಕೈಗಳಿಂದ ಊಟಮಾಡ ಬಾರದೆಂದಾದರೆ ಈ ಆರ್ಮಿಯವರು ಊಟಮಾಡುವ ಬಗೆ ಹೇಗೆ ? ಕಾಲುಗಳಿಂದಲೇ ? ಸಾಧ್ಯವಾಗದು ; ಹಾಗಾದರೆ ಬಾಯಿಯಿಂದ ನೇರವಾಗಿ ಆಹಾರವನ್ನು ಮುಕ್ಕುವ ತಂತ್ರ ಕುಶಲಿಗಳು ಇವರಾಗಿರಬಹುದು.

ಪರ್ಮಾರರು ಇನ್ನೂ ಹೇಳುತ್ತಿದ್ದರೋ ಏನೋ ಹಸಿದವರ ಮುಂದೆ ಭೋಜನ ಸಂಹಿತೆಯನ್ನು. ಸೀನಿಯರ್ ಆಫಿಸರರೆಲ್ಲ ಊಟದ ಮನೆಗೆ ಈಗಾಗಲೆ ಹೋಗಿದ್ದರು ; ಮೆಸ್ ಹವಿಲ್ದಾರ್ ಪ್ರವೇಶದ್ವಾರದ ಕಿರು ಪಡಿಗಳನ್ನು ತೆರೆದು ಹಿಡಿದುಕೊಂಡು ಪರ್ಮಾರರ ಕಡೆಗೇ ಸೂಚ್ಯಾರ್ಥವಾಗಿ ನೋಡುತ್ತಿದ್ದ. ಬಡಪಾಯಿ ಹೊಟ್ಟೆ ಬಚಾವ್ !

ಮಂತ್ರಕ್ಕಿಂತ ಉಗುಳೇ ಜಾಸ್ತಿ

ಕಿರು ಆರೆ ಕದದ ಮೂಲಕ ಒಬ್ಬರ ಹಿಂದೆ ಇನ್ನೊಬ್ಬರು ಭೋಜನಮಂದಿರವನು ಪ್ರವೇಶಿಸಿದೆವು. ಝಗಝಗಿಸುವ ಮರ್ಕ್ಯುರಿ ದೀಪಗಳ ಹಗಲು ಬೆಳಕು ಗೋಡೆಗಳ ಮತ್ತು ವಿಶಾಲವಾದ ಊಟದ ಮೇಜಿನ ಮೇಲೆಯೂ ಉಳಿದೆಡೆಗಳಲ್ಲಿಯೂ ತುಂಬಿದ್ದ ನಾನಾ ವಿಧದ ಲೋಹ ಸಾಮಗ್ರಿಗಳ ಮೇಲೆ ಬಿದ್ದು ರೋಹಿತದ ಎಲ್ಲ ವರ್ಣಗಳೂ ವಿಸರಿತವಾಗಿದ್ದುವು. ಅದೊಂದು ಮಾಯಾಲೋಕ. ಬಲು ದೊಡ್ಡ ಹಾಲ್. ಅದರ ನಡುವಿನಲ್ಲಿ ಊಟದ ಮೇಜು. ಆಯತಾಕಾರ. ಅಗಲ ಬಹುಶಃ ಇಬ್ಬರಿಗೆ ಒತ್ತೊತ್ತಾಗಿ ಕುಳಿತು ಉಣ್ಣಲು ಸಾಕಾದರೆ ಉದ್ದ ಪ್ರತಿಯೊಂದು ಸಾಲಿನಲ್ಲಿಯೂ ೨೦ ಜನರಿಗೆ ಕೂರುವಷ್ಟು. ಉದ್ದದ ಒಂದೊಂದು ಅಂಚಿನಲ್ಲಿಯೂ ಸುಮಾರು ೧೫ ಕುರ್ಚಿಗಳು ಅಗಲದ ಅಂಚುಗಳಲ್ಲಿ ಒಂದೊಂದು ಕುರ್ಚಿ ಹೀಗೆ ಸುಮಾರು ೩೨ ಜನರಿಗೆ ಅಲ್ಲಿ ಒಂದೇ ಸಲ ಕುಳಿತು ಊಟಮಾಡಲು ಎಡೆಯಿತ್ತು. ಮೇಜದ ಮೆರಗು ನೋಡಿ ಬೆರಗಾದೆ. ಬೀಟೆ ಮರ. ತಳ ಕನ್ನಡಿಯಂತೆ ಪಳಪಳಿಸುತ್ತಿತ್ತು. ಅದರ ಮೇಲೆ ಒಂದೇ ಒಂದು ಗೀರು ಬರದಂತೆ ಹೇಗೆ ಕಾಪಾಡುತ್ತಿದ್ದರೋ ನನಗೆ ಆಶ್ಚರ್ಯವಾಯಿತು. ಮೇಜದ ತಳ ಸ್ವಚ್ಛ

ಕಾಶವಾದರೆ ಅದರ ಮೇಲೆ ಬಲು ವ್ಯವಸ್ಥಿತವಾಗಿ ಓರಣವಾಗಿ ಇಟ್ಟಿದ್ದ ಪಾತ್ರೆ ಪದಾರ್ಥಗಳು, ಅಲಂಕರಣ ಸಾಮಗ್ರಿಗಳು, ಪುಷ್ಪಗುಚ್ಛಗಳು ಇವೆಲ್ಲ ವಿವಿಧ ಬ್ರಹ್ಮಾಂಡಗಳು, ನಕ್ಷತ್ರಗಳು.

ಸಾಲಾಗಿ ಮುಂದುವರಿದೆವು. ಪ್ರವೇಶದ್ವಾರದ ಸಮೀಪದ ಅಗಲ ಅಂಚಿನ ಕುರ್ಚಿಯ ಹಿಂದೆ ಸಿಓ (ಕಮಾಂಡಿಂಗ್ ಆಫಿಸರ್) ಸಾಹೇಬರು ನಿಂತಿದ್ದರು. ಅಲ್ಲಿಂದ ತೊಡಗಿ ಎರಡು ಉದ್ದ ಅಂಚುಗಳಲ್ಲಿಯೂ ಇತರ ಸೀನಿಯರ್ ಆಫಿಸರರು ಸಮಾಂಗೀಯವಾಗಿ ವ್ಯಾಪಿಸಿ ಕುರ್ಚಿಗಳ ಹಿಂದೆ ನಿಂತು ನಮ್ಮ ಬರವನ್ನೇ ಕಾಯುತ್ತಿದ್ದರು. ಖಾಲಿ ಉಳಿದಿದ್ದ ಕೊನೆಯ ಕುರ್ಚಿಗಳ ಹಿಂದೆ ನಾವೆಲ್ಲರೂ ಅನುಕ್ರಮವಾಗಿ ಹೋಗಿ ನಿಂತೆವು. ನನಗೆ ದೊರೆತದ್ದು ಅಗಲ ಅಂಚಿನ—ಎಂದರೆ ಸಿಓ ಸಾಹೇಬರ ನೇರಿದಿರು ಅಂಚಿನ—ಒಂಟಿ ಕುರ್ಚಿಯ ಭಾಗ. ಸಿಓ ತಮ್ಮ ಕುರ್ಚಿಯನ್ನು ಎಳೆದು ಅದರ ಮೇಲೆ ಕುಳಿತರು. ಉಳಿದವರು ಡಿಟೋ. ನಾನು ಅವರಿಂದ ಅತಿ ದೂರದಲ್ಲಿದ್ದರೂ ನೇರಿದಿರೇ ಕುಳಿತಿದ್ದುದರಿಂದ ಅವರು ನನ್ನನ್ನೇ ದಿಟ್ಟಿಸುತ್ತಿದ್ದಾರೆಂದು ತಿಳಿದು ಅಳುಕುತ್ತಿದ್ದೆ. ಹೋತನ ಯೋಚನೆ ಮಾರಿ ತನ್ನನ್ನೇ ದಿಟ್ಟಿಸುತ್ತಿದೆಯೆಂದು.

ಪ್ರತಿಯೊಬ್ಬನ ಮುಂದೆಯೂ ಮೇಜಿನ ಮೇಲೆ ಫೋರ್ಕ್, ನೈಫ್, ಸ್ಪೂನ್, ನ್ಯಾಪ್‌ಕಿನ್ (ಭರ್ಜಿ, ಖಡ್ಗ, ಗುದ್ದಲಿ, ಗೋಣಿ) ಮುಂತಾದವನ್ನು ಒಂದು ಆಯತದ ಮೂರು ಬಾಹುಗಳಂತೆ ಅಳವಡಿಸಿದ್ದರು. ನಾಲ್ಕನೆಯ ಖಾಲಿ ಬಾಹುವಿನ—ಎಂದರೆ ಆಯತದ ತೆರೆದ—ಭಾಗ ಕುಳಿತವನ ಕಡೆಗಿತ್ತು. ಆದ್ದರಿಂದ ಈ ಆಯುಧರಕ್ಷಿತ ಕೋಟೆಯನ್ನು ಅವನು ಸುಲಭವಾಗಿ ಪ್ರವೇಶಿಸಬಹುದಿತ್ತು. ಪಕ್ಕದಲ್ಲಿ ನೀರು ತುಂಬಿದ ಗ್ಲಾಸು. ಆದರೆ ತಟ್ಟೆಯೇ ಇಲ್ಲ. ಪುಷ್ಪ ಕರಂಡಕಗಳೂ ಬೂದಿ ಬಟ್ಟಲುಗಳೂ (ಏಶ್ ಟ್ರೇಗಳು) ಸರಿ, ಆದರೆ ಅಲ್ಲಿದ್ದ ಹಲವಾರು ಸಾಸರುಗಳು, ಅವುಗಳ ಒಳಗೆ ಓರಣವಾಗಿ ಇಟ್ಟಿದ್ದ ತುದಿ ಚೂಪಾಗಿದ್ದ ಕಡ್ಡಿಗಳು ಹೇಗೆ ಮೇಜಿನ ಸೌಂದರ್ಯವರ್ಧಕಗಳು ಎಂಬುದು ನನಗೆ ತಿಳಿಯಲಿಲ್ಲ. ಅಷ್ಟರಲ್ಲೇ ಬಾಣಗಳಂತೆ ಬಂದರು ಬ್ಯಾರರುಗಳು. ಎಲ್ಲರೂ ಶ್ವೇತವಸನಧಾರಿಗಳು. ಅಷ್ಟೊಂದು ದೀಪಗಳಿಂದ ಪತನವಾಗುತ್ತಿದ್ದ ಬೆಳಕಿನ ಸಮಗ್ರ ಮೊತ್ತವನ್ನೂ ಅವರ ವದನಾರವಿಂದಗಳು ಹೀರಿಕೊಂಡು ಬಿಳೀ ಸಮವಸ್ತ್ರಗಳ ಮುನ್ನೆಲೆಯಲ್ಲಿ ತಿರುಪತಿ ಬೊಂಬೆಗಳನ್ನು ಸ್ಮರಣೆಗೆ ತರುವಂಥ ಮೈಬಣ್ಣಗಳಿದ್ದುವು. ಅವರ ಕೈಗಳಿಂದ ಸೂಪ್ ತುಂಬಿದ ಬಿಳಿ ಪಿಂಗಾಣಿ ತಟ್ಟೆಗಳನ್ನು ಹಿಡಿದು (ತಟ್ಟೆಗಳಿಗೆ ಅವರ ಬಣ್ಣ ಮೆತ್ತದಿದ್ದುದರಿಂದ ದೇಹದ ಬಣ್ಣಕ್ಕೆ ಪಿಂಗಾಣಿ ಪದಾರ್ಥ ಉತ್ತಮವಾಹಕವಲ್ಲ ಎಂದು ತರ್ಕಿಸಿದೆ) ಕ್ರಮಬದ್ಧವಾಗಿ ತಂದು ಪ್ರತಿಯೊಬ್ಬನ ಹಿಂದೆ ನಿಂತು ಬಲಭಾಗದಿಂದ ತೆರೆದ ಆಯತಾಕಾರದ ಖಾಲಿ ಪ್ರದೇಶದಲ್ಲಿ ಎಚ್ಚರಿಕೆಯಿಂದ ಸದ್ದಾಗದಂತೆ ಇಡುತ್ತಿದ್ದರು. ಅವುಗಳಿಂದ ಮೇಲೇಳುತ್ತಿದ್ದ ಉಗಿ ಆಪ್ಯಾಯಮಾನವಾಗಿ ಸುಖೋಷ್ಣಕರವಾಗಿ ಅಲ್ಲಿ ಪಸರಿಸಿ ನನ್ನ ಹಸಿವನ್ನು ತೀವ್ರಗೊಳಿಸಿತು.

ಇಷ್ಟರಲ್ಲಿಯೇ ನ್ಯಾಪ್‌ಕಿನ್ನನ್ನು ಇತರರು ಮಾಡಿದಂತೆ ನಾನೂ ನನ್ನ ತೊಡೆಗಳ ಮೇಲೆ ಬಿಡಿಸಿ ಹರಡಿಕೊಂಡೆ! ಸ್ಪೂನುಗಳನ್ನು ನೋಡಿ ತಿಳಿಯಿತು—ಊಟ ಕೈಗಳಿಂದ ಮಾಡಬಾರದೆಂದರೆ ಸ್ಪೂನುಗಳಿಂದ ಮಾಡಬೇಕೆಂದು. ಹೀಗೆ ಊಟಮಾಡುವಾಗ

ಆಹಾರದ ತುಣುಕುಗಳು ಬಟ್ಟೆಯ ಮೇಲೆ ಬಿದ್ದು ಅದನ್ನು (ಆಹಾರವನ್ನಲ್ಲ) ಹಾಳು ಮಾಡದಂತೆ ನ್ಯಾಪ್‌ಕಿನ್ ಕವಚರಕ್ಷಣೆ ಇದೆ. ಸೂಪ್ ತಟ್ಟೆಗಳ ಲಯಬದ್ಧ ಮುನ್ನಡೆ ನನ್ನೆಡೆಗೂ ಬರುತ್ತಿದ್ದಂತೆ ಆ ಕೋಟದಲ್ಲೂ ಬೆವರುವಂಥ ಒಂದು ಯೋಚನೆ ಮಿಂಚಿತು —ಇದು ಸಸ್ಯಸೂಪೇ ಮಾಂಸಸೂಪೇ ? ಬ್ಯಾರರನನ್ನೇ ಪಿಸುನುಡಿಯಲ್ಲಿ ಪ್ರಶ್ನಿಸಿದೆ.

"ಮಟನ್ ಸೂಪ್ ಸಾಬ್" ನನ್ನ ಎದುರೇ ಇಟ್ಟ ಮೇಕೆ ಸಾರನ್ನು.

"ನಾನು ಸಸ್ಯಾಹಾರಿ."

"ಸಾರಿ ಸಾಬ್. ಇವತ್ತು ಬೇರೆ ಏನೂ ಇಲ್ಲ" ಅವನು ನನ್ನ ಮಾತನ್ನು ಕೇಳಲು ನಿಲ್ಲಲಿಲ್ಲ. ಮುಂದಿನ ಸೀಟುಗಳ ವಿತರಣೆಗೆ ಸಾಗಿದ. ಅದುವರೆಗೆ ಯಾವ ಕಂಪು ಹಿತಕರ ವಾಗಿತ್ತೋ ಅದು ಆ ಕ್ಷಣವೇ ದುಸ್ಸಹನೀಯವಾಯಿತು.

ಬಿಳಿ ಪಿಂಗಾಣಿ ತಟ್ಟೆ—ಸಮುದ್ರದ ದಂಡೆ. ಅದರ ಒಳಗಿನ ಮಾಸಲು ಕೆಂಬಣ್ಣದ ದ್ರವ—ಕುರಿ ಪ್ರಪಂಚವನ್ನು ಹಿಂಡಿ ತೆಗೆದಿದ್ದ ರಕ್ತ. ತೇಲುತ್ತಿದ್ದ ತುಣುಕುಗಳು— ಮಾಂಸ ಮೂಳೆ ತುಂಡುಗಳು. ಮೇಲೇಳುತ್ತಿದ್ದ ಬಿಸಿ ಉಗಿ—ಬಡಬಾನಲ. ಸಾವಿರ ಕುರಿ ಗಳು ಅಲ್ಲಿ ವಿಲಿವಿಲಿ ಒದ್ದಾಡುತ್ತಿವೆ. ಅವುಗಳ ಆರ್ತರವ ಕಿವಿ ಕೊರೆಯುತ್ತಿದೆ. ಕಟುಕನ ದಕ್ಷ ಮತ್ತು ಖಚಿತ ಖಡ್ಗಪ್ರಹಾರದಿಂದ ಅವು ಅಸುನೀಗುತ್ತಿವೆ. ನ್ಯಾಯ ಸದಾ ತೋಳನ ಕಡೆಗಲ್ಲದೇ ಎಂದಾದರೂ ಕುರಿ ಪರವಾದೀತೇ !

ಈ ಮಧ್ಯೆ ಸಿಓನನ್ನು ಅನುಕರಿಸಿ ಉಳಿದವರು ಚಮಚಕರರಾಗಿ ತಟ್ಟೆಗಳನ್ನು ಅವರ ಎದುರು ಭಾಗಕ್ಕೆ ವಾಲುವಂತೆ ಸ್ವಲ್ಪ ಎತ್ತಿ ಹಿಡಿದು ಚಮಚದಿಂದ ಸೂಪ್ ದ್ರವವನ್ನು ಗೋಚಿ ತಂದಿ ನಾಲಗೆ ತುಟಿಗಳ ನೆರವಿನಿಂದ ಹೀರಿ ಚಪ್ಪರಿಸಲಾರಂಭಿಸಿದ್ದರು. ಬಾಲ ನನ್ನನ್ನು ನೋಡಿದ. ನಾನು ಶೂನ್ಯವನ್ನು ದಿಟ್ಟಿಸಿದೆ. ನಮ್ಮಿಬ್ಬರ ಸಮಾಧಿಸ್ಥಿತಿಯನ್ನು ಎದುರೇ ಕುಳಿತಿದ್ದ ಸಿಓ ಗಮನಿಸಿ ಮುತ್ತನ್ನು ಉದುರಿಸಿಯೇಬಿಟ್ಟರು:

"ಏನು ವಿಚಾರ ?"

ನಾನು ಎದ್ದು ನಿಲ್ಲಲು ಪ್ರಯತ್ನಿಸುತ್ತಿದ್ದಂತೆಯೇ ಪವರ್ಗಾರರ ಹುಳಿ ಮೋರೆ ಕಂಡೆ —ಕೂರಲಿಕ್ಕೆ ಸಂಜ್ಞೆ ಮಾಡಿದರು. ಆದರೆ ಅಷ್ಟರಲ್ಲಿಯೇ ನಾನು ಎದ್ದು ನಿಂತಿದ್ದೆ. ನ್ಯಾಪ್ ಕಿನ್ ನೆಲಕ್ಕೆ ಬಿತ್ತು.

"ಮೆಸ್‌ನಲ್ಲಿ ಕುಳಿತೇ ಮಾತಾಡಿ. ಏನು ಅನನುಕೂಲವಾಗಿದೆ ?" ಪುನಃ ಸಿಓ ಪ್ರಶ್ನಿಸಿದರು.

"ನಾನು ವೆಜಿಟೇರಿಯನ್, ಸಾರ್."

ನನ್ನ ಅಸಹಾಯ ಪರಿಸ್ಥಿತಿ ಅವರಿಗೆ ಚೆನ್ನಾಗಿ ಅರ್ಥವಾಗಿರಬೇಕು. ಮಾತು ಮಾಡ ದ್ದನ್ನು ಮೂತಿ ಮಾಡಿತ್ತು.

"ಮೆಸ್ ಹವಿಲ್ದಾರ್ ! ಇದೇನು ಏರ್ಪಾಡು ? ಆ ಇಬ್ಬರು ಆಫಿಸರರಿಗೆ ವೆಜಿಟೆಬಲ್ ಸೂಪ್ ಲಾವೋ" ಎಂದು ಆಜ್ಞಾಪಿಸಿದರು.

"ಟೇಕ್ ಶ್ಯ ಸಾಬ್" ಅಲ್ಲಿಯೇ ಅವನು ಅಂತರ್ಧಾನನಾದ. ಮುಂದಿನ ಕ್ಷಣಗಳಲ್ಲಿ ಇಬ್ಬರು ಬ್ಯಾರರರು ನಮ್ಮೆಡೆಗೆ ಬಂದು ಕುರಿಸಾರಿನ ಪ್ಲೇಟುಗಳನ್ನು ಕೊಂಡೊಯ್ದರು. ಅಷ್ಟರಲ್ಲೇ ಇನ್ನಿಬ್ಬರು ಅದುಗೇ ಮನೆಯಿಂದ ಹೊಸ ಪ್ಲೇಟುಗಳನ್ನು ಹಿಡಿದು ತಂದು

ನಮ್ಮ ಎದುರಿಟ್ಟರು "ಏ ವೆಜಿಟೇರಿಯನ್ ಸೂಪ್ ಹೈ ಸಾಬ್."

ಅದೇ ರೂಪ, ಅದೇ ವಾಸನೆ, ಅದೇ ಪರಿಮಾಣ, ಆದರೆ ತೆಗೆದುಕೊಂಡು ಹೋದ ತಟ್ಟೆಗಳು ಬೇರೆ ಇವು ಬೇರೆ. ಸಿಓರ ಆಜ್ಞೆಯ ಪ್ರಕಾರ ಇವು ಬಂದವಾದ್ದರಿಂದ, ಅವರ ಎದುರೇ ಬ್ಯಾರರ್ ಇವು ವೆಜಿಟೇರಿಯನ್ ಸೂಪ್ ಎಂದು ಶಿಫಾರಸಿಸಿದ್ದರಿಂದ ಬೇರೆ ಯಾವ ಸಂಶಯಕ್ಕೂ ಎಡೆಯಿಲ್ಲ. ನಂಬಿ ಕೆಟ್ಟವರಿಲ್ಲವೋ. ಇನ್ನು ಸಂಶಯ ಬೇಡ ಬಡ ಉದರವೇ. ವಾತಾಪಿ ಜೀರ್ಣೋಭವ ಮಂತ್ರ ಸ್ಮರಿಸಿ ವಿಶ್ವಾಮಿತ್ರ ಮಹರ್ಷಿಯ ದಾರಿಯನ್ನು ನೆನೆದು ಸೂಪನ್ನು ಹೀರಿದೆ. ಬಾಲಕೃಷ್ಣನ್‌ಗೆ ನಾನೇ ಸಿಓ.

ಸೂಪು ಮುಗಿಯಿತು. ದೃಶ್ಯವರ್ಗಾವಣೆ. ಬ್ಯಾರರರ ಒಂದು ಪಟಾಲಂ ಬಂದು ಆ ತಟ್ಟೆಗಳನ್ನು ತೆಗೆದು ಜಾಗ ಖಾಲಿ ಮಾಡುತ್ತಿದ್ದಂತೆ ಇನ್ನೊಂದು ಪಡೆ ಬೇರೆ ಆಕಾರದ ಖಾಲಿ ಪಿಂಗಾಣಿ ತಟ್ಟೆಗಳನ್ನು ಅಲ್ಲಿ ಓರಣವಾಗಿ ಇಡುತ್ತಿದ್ದರು. ಈ ಸಲ ಬ್ಯಾರರರ ನಿಗಾ ನಮ್ಮಿರ್ವರ ಕಡೆ ವಿಶೇಷವಾಗಿ ಇತ್ತು. ಪ್ರತಿಯೊಂದು ಪದಾರ್ಥವನ್ನೂ ತಂದು ನಮ್ಮ ಎಡಬದಿಯಿಂದ ನಮಗೆ ಬಡಿಸಿಕೊಳ್ಳಲು ಅನುಕೂಲವಾಗುವಂತೆ ಒಡ್ಡುವಾಗ ಅದು ಸಸ್ಯಾಹಾರಿಗಳದು ಎಂದು ಉಸುರುತ್ತಿದ್ದರು. ಮೊಟ್ಟೆಯ ತಯಾರಿಕೆ ಆಗಬಹುದೇ ಎಂದು ಕೇಳಿ ಬೇಡವೆಂದಾಗ ಮತ್ತೆ ನಮ್ಮೆಡೆಗೆ ತರಲಿಲ್ಲ. ಇನ್ನು ಮಾಂಸದ ಪದಾರ್ಥಗಳನ್ನು ಅವರಾಗಿಯೇ ನಮ್ಮ ಕಡೆಗೆ ತರದೆ ನಮಗೆ ಬೇಡವೆನ್ನುವ ಶ್ರಮವನ್ನು ತಪ್ಪಿಸಿದರು. ಇದರಿಂದ ನಮಗೆ ಲಭಿಸಿದ್ದು ಮೂರು ಬಗೆ ಮಾತ್ರ. ಮಿತ ಪ್ರಮಾಣದಲ್ಲಿ ಅನ್ನ—ಪ್ರತಿಸಲವೂ ಮೇಜದ ಪ್ರಾರಂಭದಲ್ಲಿ ತೊಡಗಿ ಕೊನೆಯಲ್ಲಿದ್ದ ನನ್ನ ಹತ್ತಿರ ಬರುವಾಗ ಅನ್ನದ ತಟ್ಟೆಯಲ್ಲಿ ಉಳಿಯುತ್ತಿದ್ದುದು ಹಲವಾರು ಅಗುಳುಗಳು ಮಾತ್ರ. ಎಷ್ಟು ಸಲ ಇವನು ಅನ್ನವನ್ನು ಸುರಿದುಕೊಳ್ಳುತ್ತಿದ್ದಾನೆ ಎಂದು ಸಿಓರಿಗೆ ಅನ್ನಿಸಬಾರದಲ್ಲ! "ಹೆಸರು ಭೋಜನಶಾಲೆಯೆಂದಿದ್ದರೂ ಇದರಲ್ಲಿ ಭೋಜನದ ಸ್ಥಾನ ಕಡೆಯದು" —ಪರ್ಮಾರರ ಉವಾಚ ಸ್ಮರಿಸಿಕೊಂಡೆ. ಅನ್ನದ ಮೇಲೆ ನಂಜಿಕೊಳ್ಳಲು ದೊರೆತದ್ದು ಬರೇ ಉಪ್ಪು ಹಾಕಿ ಬೇಯಿಸಿದ ಕ್ಯಾಬೇಜು ಪಲ್ಯ (ಇದು ಬಿಟಿ ಕುಕಿಂಗ್ ಎಂಬ ವಿಶಿಷ್ಟ ವಿಲಾಯತೀ ಬಗೆಯಂತೆ. ಬಿಟಿ ಅಂದರೆ ಬ್ರಿಟಿಷ್ ಟೈಪ್!) ಮತ್ತೆ ಒಂದಿಷ್ಟು ಅಡಿಸುಟ್ಟು ಗೆಮೆ ಬಂದಿದ್ದ ಹೆಸರಬೇಳೆ ತೊವೆ. ಉಳಿದವರಿಗೋ ? ಇವೆಲ್ಲವುಗಳ ಜೊತೆಗೆ ಮಾಂಸದ ಮತ್ತು ಮೊಟ್ಟೆಯ ನಾನಾ ಪದಾರ್ಥಗಳು.

ನಾವು ನೇಯ್ದಿರುವ ಬಲೆ ಚಿಕ್ಕದಾದರೆ ಅದಕ್ಕೆ ಬೀಳುವ ಹುಳುಗಳು ಚಿಕ್ಕವು, ಮಿತ ಪ್ರಮಾಣದವು. ತಪ್ಪು ಬಲೆಯದೇ, ನಮ್ಮದೇ ವಿನಾ ಹುಳುಗಳದಲ್ಲ. ಇನ್ನು ದೊಡ್ಡವು ಬಿದ್ದರೆ ನಮ್ಮ ಬಲೆಯೇ ನಾಶವಾಗಿ ಹೋಗಬಹುದು. ಆದ್ದರಿಂದ ಈ ಬಲೆಗೆ ಇಷ್ಟೇ ಲಭ್ಯ.

ತಿಂದದ್ದು ಮೂರು ಮುಷ್ಟಿ ಅನ್ನ. ಆದರೆ ಅದಕ್ಕಾಗಿ ವ್ಯಯಿಸಿದ್ದು ಸುಮಾರು ಒಂದು ಗಂಟೆಯೇ. ಅಲ್ಲಿ ವಿನಿಯೋಗವಾದ ವಿವಿಧ ಪಾತ್ರೆಗಳು, ಉಪಕರಣಗಳು, ಆಯುಧಗಳು ಲೆಕ್ಕವಿಲ್ಲದಷ್ಟು. ಊಟದ ಹಿನ್ನೆಲೆಯಲ್ಲಿದ್ದ ಗಣಿತವನ್ನು ಬೇಕೋ ಬೇಡವೋ ಮನಗಂಡಿದ್ದೆ : ಒಂದೊಂದು ಪದಾರ್ಥದ ಆವರ್ತನಾವಧಿಯೂ ನಿರ್ದಿಷ್ಟವಾಗಿತ್ತು—ಸಿಓ ಅದನ್ನು ತಿಂದು ತೃಪ್ತರಾಗಿ ಮುಗಿಸಿದಾಗ ಉಳಿದವರು ತಿನ್ನುವ

ಯಾವ ಘಟ್ಟದಲ್ಲಿಯೇ ಇದ್ದರೂ ಅದನ್ನು ಅಲ್ಲಿಯೇ ನಿಲ್ಲಿಸಬೇಕಾಗಿತ್ತು ; ಒಂದೊಂದು ಪದಾರ್ಥ ವಿನಿಯೋಗವಾಗುತ್ತಿರುವಾಗಲೂ ನಿರ್ದಿಷ್ಟ ಸಂಖ್ಯೆಯ ಬ್ಯಾರರರು ನಿರ್ದಿಷ್ಟ ಪಥಗಳ ಮೇಲೆ ನಿರ್ದಿಷ್ಟ ವಿನ್ಯಾಸದಿಂದ ಸಂಚರಿಸುತ್ತಿದ್ದರು ; ಇನ್ನು ಬಡಿಸಿದ ಪದಾರ್ಥ ಸಮಾಂತರ ಶ್ರೇಢಿಯಲ್ಲಿ ಏರುತ್ತಿದ್ದಂತೆ (೧, ೨, ೩, ೪, ೫ ಇತ್ಯಾದಿ) ವಿನಿಯೋಗ ಗೊಂಡ ಪಾತ್ರೆ ಉಪಕರಣಗಳು ಜ್ಯಾಮಿತೀಯ ಶ್ರೇಢಿಯಲ್ಲಿ ಏರುತ್ತಿದ್ದುವು (೧, ೨, ೪, ೮, ೧೬ ಇತ್ಯಾದಿ).

ಮಹಾ ಅನ್ನಸಂತರ್ಪಣೆ ಮುಗಿದೊಡನೆಯೇ ಔನ್ಸ್ ಗ್ಲಾಸಿನಂಥ ಬಿಳಿ ಪಿಂಗಾಣಿ ಬಟ್ಟಲುಗಳಲ್ಲಿ ಅರೆ ತುಂಬಿದ ಕರಿದ್ರವವನ್ನು ತಂದು ಮುಂದಿಟ್ಟರು. ಅಲ್ಲದೆ ಹತ್ತಾರು ಸಾಸರುಗಳಲ್ಲಿ ನೆಲಗಡಲೆಕಾಳುಗಳನ್ನೂ ಮೇಜಿನ ಮೇಲೆ ಮೂರು ನಾಲ್ಕು ಮಂದಿಗೆ ಒಂದರಂತೆ ದೂರ ದೂರವಿಟ್ಟರು. ಸ್ವತಃ ಪೀಯೂಷವನ್ನೇ ಆದರೂ ಅಷ್ಟು ಎಚ್ಚರಿಕೆ ಯಿಂದ ಅಷ್ಟು ಮಿತಪ್ರಮಾಣದಲ್ಲಿ ಮೋಹಿನಿ ಹಂಚಿರಲಾರಳು. ಅದು ಕಾಫಿ ಡಿಕಾಕ್ಷನ್, ಅರ್ಥಾತ್ ಕಲಿಯುಗದ ಅಮೃತ. ಹಾಲಿಲ್ಲ, ಸವಿಯಿಲ್ಲ, ಕಹಿಯೊಗರು ಭೋಜನಕ್ಕೆ ಕಳಶಪ್ರಾಯವಾಗಿತ್ತು. ನೆಲಗಡಲೆ ಸಾಸರುಗಳು ಮೇಜದ ಎರಡೂ ಅಂಚುಗಳ ಕಡೆ ಯಿಂದ ಕ್ರಮೇಣ ಸರಿದು ನನ್ನ ಮೂಲೆಯಲ್ಲಿ ಸಂಗಮಿಸಿದುವು. ಬಂದವು ನಾಲ್ಕೋ ಐದೋ ಆದರೆ ಅವೆಲ್ಲವುಗಳಲ್ಲಿಯೂ ಒಟ್ಟಾಗಿ ಇದ್ದ ಕಾಳುಗಳು ಆ ಸಾಸರುಗಳ ಸಂಖ್ಯೆ ಯನ್ನು ಸೊನ್ನೆಯಿಂದ ಗುಣಿಸಿದಷ್ಟು!

ಕತೆಯಲ್ಲಿ ಓದಿದ್ದೆ—ಹುಲಿಯೋ ಸಿಂಹವೋ ಪುಷ್ಕಳ ಗ್ರಾಸ ಭಕ್ಷಣಾನಂತರ ಬಾಯಿ ಕಳೆಯುತ್ತಿತ್ತಂತೆ, ಕೊಕ್ಕರೆ ದಂತ ವೈದ್ಯನ (ಹಲ್ಲುಮುರುಕನ) ಕೆಲಸ ಮಾಡುತ್ತಿತ್ತಂತೆ. ಆ ದೃಶ್ಯ ಈಗ ಕಂಡೆ. ಅಲಂಕಾರ ಸಾಮಗ್ರಿಗಳ ಜೊತೆಯಲ್ಲಿ ಸಾಸರುಗಳಲ್ಲಿದ್ದ ಚೂಪು ಕಡ್ಡಿಗಳಲ್ಲಿ ಒಂದನ್ನು ಆರಿಸಿ ಅದರ ನೆರವಿನಿಂದ ಸಿ ಓ ಸಾಹೇಬರು (ಅವರನ್ನು ಅನುಕರಿಸಿ ಇತರ ಆಫಿಸರರು) ದಂತಗಡಿಗಳಲ್ಲಿಯೂ ಕುಹರಗಳಲ್ಲಿಯೂ ಹುದುಗಿದ್ದ ಆಹಾರ ತುಣುಕುಗಳನ್ನು ಉತ್ಖನನ ಮಾಡುವುದರಲ್ಲಿ ತನ್ಮಯರಾಗಿದ್ದರು. ಸದ್ಯ ಒಬ್ಬನಿಗೆ ಒಂದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಈ ಕಡ್ಡಿಗಳು ಅಲ್ಲಿ ಇದ್ದುದರಿಂದ (ಕುಡಿಯುವ ನೀರಿಗೂ ಹಲ್ಲುಕಡ್ಡಿಗಳಿಗೂ ಎಂದೂ ಬರವಿರಲಿಲ್ಲ) ಸುಲಭವಾಗಿಯೆ ನನಗೂ ಸಿಓ ಸಾಹೇಬರನ್ನು ಅನುಕರಿಸಲು ಸಾಧ್ಯವಾಯಿತು.

ಕೊಯಿನಾ ಮುದ್ದನ್ನು ಹೀರಿದ ತೃಪ್ತ ಮನೋಭಾವದಿಂದ ಕಾಫಿ ಕಷಾಯವನ್ನು ಒಳಸುರಿದುಕೊಂಡೆ.

ಸಿಓ ಎದ್ದರು. ನಾವೆಲ್ಲ ಎದ್ದೆವು. ಸಿಓ ನಿರ್ಗಮನದ್ವಾರದೆಡೆಗೆ ಸಾಗಿದರು. ನಾವೆಲ್ಲ ಅನುಸರಿಸಿದೆವು. ಆ್ಯಂಟಿರೂಮಿನಲ್ಲಿ ಒಂದು ಕುರ್ಚಿಯ ಮೇಲೆ ಅವರು ಮಂಡಿಸಿದರು, ನಾವೆಲ್ಲ ಬೇರೆ ಬೇರೆ ಕುರ್ಚಿಗಳ ಮೇಲೆ ಡಿಟ್ಟೋ. ಅವರು ಸಿಗರೇಟ್ ಪ್ಯಾಕಿನಿಂದ ಒಂದು ಸಿಗರೇಟನ್ನು ಹೊರತೆಗೆದರು. ನಾಗರಾಜನ್ ಕಡ್ಡಿ ಗೀರಿ ಎದುರು ಹಿಡಿದ. ಮಾಧವ ಮೇನನ್ನನಿಗೆ ಪುನಃ ಸೋಲು. ನಾಗರಾಜನ್ ಇತರ ಆಫಿಸರರ ಮುಂದೆ ಅವನ ಹೊಸ ಪ್ಯಾಕೇಟನ್ನು ತೆರೆದು ಸಿಗರೇಟುಗಳನ್ನು ಒಡ್ಡಿದ. ಆದರೆ ಒಬ್ಬೊಬ್ಬರ ಬ್ರ್ಯಾಂಡ್ ಒಂದೊಂದು—ವಾಸ್ತವವಾಗಿ ಸಿಗರೇಟೇ ವ್ಯಕ್ತಿತ್ವದ ಪ್ರಧಾನ ಚಿಹ್ನೆ, ಉತ್ಸಾಹದ

ಸೆಲೆ, ಸಂಸ್ಕೃತಿಯ ದ್ಯೋತಕ, ಸ್ನೇಹ ಸಂಪಾದನೆಯ ಸೇತುವೆ.

"ಮಿತ್ರರೇ ಮೂರು ತಿಂಗಳ ಕಾಲ ನಾವೂ ನೀವೂ ಒಟ್ಟಾಗಿ ಬಾಳಬೇಕು. ಆರಾಮವಾಗಿರಿ, ಚೆನ್ನಾಗಿರಿ. ಈ ರಾತ್ರಿ ನಿಮಗೆ ಮಂಗಳವಾಗಲಿ. ಗುಡ್‌ನೈಟ್." ಸಿಓ ನಿರ್ಗಮನ.

"ಗುಡ್‌ನೈಟ್ ಸಾರ್!" ಒಕ್ಕೊರಲ ನಿನಾದ. ಸದ್ಯ ಈಗ "ನೈಟ್," "ಈವ್‌ನಿಂಗ್" ಅಲ್ಲ. ಆದ್ದರಿಂದ ಮಾರ್ನಿಂಗ್ ಆರಂಭ ಪ್ರಾಯಶಃ ಬೆಳಗ್ಗೆ ೧೦ ಗಂಟೆಗೆ ಇರಬೇಕು ಎಂದು ಸಮಾಧಾನ ತಳೆದೆ. ಆದರೆ ಇದು ಕ್ಷಿಪ್ರಾವಧಿಯ ತೃಪ್ತಿಯಾಗಿತ್ತು.

"ಮಿತ್ರರೇ! ನಾಳೆ ಬೆಳಗ್ಗೆ ೬–೧೫ ಗಂಟೆಗೆ ಪಿಟಿಕಿಟ್ಟಿನಲ್ಲಿ ಸ್ಪೋರ್ಟ್ಸ್ ಪೆವಿಲಿಯನ್ನಿಗೆ ಬನ್ನಿ. ಈ ರಾತ್ರಿ ನಿಮಗೆ ಮಂಗಳವಾಗಲಿ, ಗುಡ್ ನೈಟ್" ಪರ್ಮಾರ್ ಹೀಗೆ ಹೇಳುತ್ತ ಧಡಧಡ ಧಾವಿಸಿಯೇಬಿಟ್ಟರು.

ದಣಿದಿದ್ದ, ಅರೆಹೊಟ್ಟೆ ಉಂಡಿದ್ದ ನನಗೆ ಮಧ್ಯರಾತ್ರಿಯ ಈ ಮಂಗಳಾಶಂಸನೆ, ಈ ಗುಡ್‌ನೈಟ್, ಸಂತೋಷ ನೀಡಲಿಲ್ಲ.

ಬೆನ್ನು ಹತ್ತಿದ ಬೇತಾಳ ಸಂಖ್ಯೆ

ಮಿಲಿಟೆರಿ ಶಿಕ್ಷಣದ ಪ್ರಥಮ ಪ್ರಾತಃಕಾಲ. ಆಟದ ಬಯಲಿನಲ್ಲಿ ನಾವು ಹಲವರು ಸೇರಿದ್ದೇವೆ. ಎಲ್ಲರದೂ ಉಡುಪು ಒಂದೇ—ಖಾಕಿ ಚಡ್ಡಿ, ಬಿಳಿ ಬನಿಯನ್, ಕಾಲುಗಳಿಗೆ ಬಿಳಿ ಕಾಲುಚೀಲಗಳ ಮೇಲೆ ಕಂದು ಬಣ್ಣದ ಕ್ಯಾನ್ವಾಸ್ ಶೂಗಳು. ವೆಲ್ಲಿಂಗ್ಟನ್ನಿನ ಚಳಿಯನ್ನು ಸಹಿಸದ ಬಯಲು ಸೀಮೆಯವರು ಗಡಗಡ ಎಂದು ನಡುಗುತ್ತಿದ್ದಾರೆ. ನಿಂತಲ್ಲೇ ತಕಪಕ ಹಾರಿ ಚಳಿಯಿಂದ ದೂರ ಓಡಲು ಪ್ರಯತ್ನಿಸುತ್ತಿದ್ದಾರೆ. ಇನ್ನು ಕೆಲವರು ಮರದ ನೆರಳಿನಲ್ಲಿ (?) ನಿಂತು ಸಿಗರೇಟ್ ಸೇದಿ ಕಾವು ಉಂಟುಮಾಡಿಕೊಳ್ಳಲು ಅಥವಾ ಚಳಿಯ ಪ್ರಹಾರವನ್ನು ತಪ್ಪಿಸಿಕೊಳ್ಳಲು ವಿಫಲ ಸಾಹಸ ನಡೆಸಿದ್ದಾರೆ.

"ಏನು ರಾವ್? ನಿಮಗೆ ಹೇಗನ್ನಿಸಿದೆ" ಮೇನನ್ ಪ್ರಶ್ನೆ.

"ಮೀನನ್ನು ನೀರಿಗೆ ಬಿಟ್ಟಂತೆ. ನಿನ್ನೆಯೇ ನಿಮಗೆ ಹೇಳಲಿಲ್ಲವೇ ನಾನು ಮಡಿಕೇರಿಯವನೆಂದು. ಆಗ ನೀವು ನಂಬಲಿಲ್ಲ."

"ಈಗ ಏನು ಮಾಡುವುದು? ನನ್ನ ಮೂಳೆಗಳೇ ಮುರಿದುಹೋಗುವಂತೆ ಆಗುತ್ತಿದೆಯಲ್ಲ?"

"ಬನ್ನಿ ಈ ಬಯಲಿಗೆ ಒಂದು ಸುತ್ತು ಓಡೋಣ."

"ಓಡೋದೇ? ಸದ್ಯ ನಡೆಯಲೂ ಆಗುತ್ತಿಲ್ಲ."

ಆಟದ ಬಯಲಿದ್ದುದು ತಗ್ಗು ಪ್ರದೇಶದಲ್ಲಿ. ಆದರ ಸುತ್ತಲೂ ಕಡಿದಾದ ಬರೆಗಳೇ. ಹೀಗಾಗಿ ಇದೊಂದು ದೊಡ್ಡ ಬೋಗುಣಿಯಂತೆ. ಬರೆಗಳನ್ನು ಏರಿ ಮುಂದೆ ಹೋದರೆ ಒಂದು ಕಡೆ ಬರಾಕುಗಳು, ಇನ್ನೊಂದು ಕಡೆ ಆಫಿಸರ ಮೆಸ್ಸು ಮತ್ತೊಂದು ಕಡೆ ಊಟಿಗೆ ಹೋಗುವ ಸರ್ಪಸುತ್ತಿನ ದಾರಿ. ಆದರ ಮೇಲೆ ಭಾರೀ ಬೆಟ್ಟಗಳ ರಾಶಿಗಳು.

ಬರಾಕುಗಳಿಂದ ಬರೆಯಿಳಿದು ಧಾವಿಸಿ ಬರುತ್ತಿದ್ದರು. ತಡವಾಯಿತಲ್ಲ ಎಂದು ಗಾಬರಿಗೊಂಡವರು ಮುಂಕ್ಕರಿಸಿ ಬಿದ್ದು ಎದ್ದು ದೂಳನ್ನು ಕೊಡವಿಕೊಂಡು ಎಲ್ಲೆಲ್ಲಿಂದಲೋ ಬಂದು ಸಂಗಮಿಸುತ್ತಿದ್ದರು. ಅಷ್ಟರಲ್ಲೇ ೬–೧೫ ಗಂಟೆಯ ಬಿಗಿಲು ನಮ್ಮ ಕಿವಿಗಳನ್ನು

ಸೀಳುವಂತೆ ಕೊರೆಯಿತು.

"ಫಾಲ್ ಇನ್!" ಆಜ್ಞೆ ಗುಡುಗಿತು. "ಸೀನಿಯರ್ ಡಿವಿಶನ್ ಬಲಗಡೆ, ಜೂನಿಯರ್ ಡಿವಿಶನ್ ಎಡಗಡೆ, ಫಾಲ್ ಇನ್ ಸಿಂಗಲ್ ಲೈನ್."

ನಾವು ೧೪ ಮಂದಿ ಒಂದು ಗುಂಪಿನಲ್ಲೂ ನಮ್ಮ ಎಡಕ್ಕೆ ಸುಮಾರು ೩೦–೩೫ ಮಂದಿ ಇನ್ನೊಂದು ಗುಂಪಿನಲ್ಲೂ ನಿಂತೆವು. ಆಜ್ಞೆ, ದೊರೆತದ್ದು ನೇರ ಗೆರೆಯ ಮೇಲೆ ಸಾಲಾಗಿ ನಿಲ್ಲಬೇಕೆಂದು. ಆದರೆ ನಾವು ನಿಂತ ವಿಧಾನ ಯಾವ ಕಂರಿಸಮುದಾಯವನ್ನೂ ನಾಚಿಸು ವಂತಿತ್ತು. ಪ್ರತಿಯೊಂದು ಹಿಂಡಿನಲ್ಲೂ ಮೂರು ಸ್ತರಗಳಿದ್ದುವು. ಮೊದಲ ಸ್ಥಾನಗಳಿ ಗಾಗಿ ಕಾದಾಡುವವರದು, ಆದಷ್ಟು ಕಡಿಮೆ ಕದಲಿಕೆಯಿಂದ ಹೊಂದಾಣಿಕೆ ಸಾಧಿಸಿಕೊಳ್ಳು ವವರದು, ಕೊನೆಯ ಸ್ಥಾನಗಳನ್ನೇ ಅರಸಿ ಸಾಗುವವರದು. ನಾಗರಾಜನ್, ಮಾಧವ ಮೇನನ್ ಸೆಣಸಿ ಮುಂಚೂಣಿಯನ್ನು ಗಿಟ್ಟಿಸಿಕೊಂಡರು. ಬಾಲ ಮತ್ತು ನಾನು ಸ್ಪರ್ಧಾ ರಹಿತ ಅಂತಿಮ ಸ್ಥಾನಗಳನ್ನು ಅಂಗೀಕರಿಸಿದೆವು!

ಉಡುಪಿನ ಕಾರಣದಿಂದ ಇಲ್ಲಿ ನನಗೆ ಅಳುಕಾಗಲಿಲ್ಲ. ಎಲ್ಲರೂ ಸಮವಸ್ತ್ರಧಾರಿಗಳೇ ಆಗಿದ್ದುದರಿಂದ ಸರ್ಜ್‌ಸೂಟಿತನದಿಂದ ಇತರರು ನಮ್ಮ ಮೇಲೆ ಸವಾರಿ ಮಾಡುವ ಸನ್ನಿವೇಶ ಒದಗಲಿಲ್ಲ. ನಮ್ಮ ವಿಶೇಷ ದುಸ್ತಿನಲ್ಲಿ ಎದ್ದು ತೋರುತ್ತಿದ್ದವರು ಇಬ್ಬರು— ಕೊಕ್ಕರೆ ನಾಗರಾಜನ್, ಪುಳಿಮೂಟೆ ಬಾಲಕೃಷ್ಣನ್. ತಮ್ಮ ವಿಶೇಷ ಅಂಗಸೌಷ್ಠವದಿಂದ ಇವರು "ಒಡಲನಾವರಿಸಿದಂಗೋಪಾಂಗ ಸಂಕುಳದ ನಡುವೆ ನಯನದ್ವಯಂಗಳಂತೆ" ಕಂಗೊಳಿಸುತ್ತಿದ್ದರು. ಆರು ಅಡಿ ಉದ್ದ, ವದನಭೂಷಣ ಡೊಂಕು ಮೂಗು, ಕೊಕ್ಕರೆ ಕುತ್ತಿಗೆ, ಎಕ್ಕಲೆ ಕರಗಳು, ಗೂಡು ಎದೆ, ಹಾಳೆ ಹತ್ತಿದ ಹೊಟ್ಟೆ, ಕೋಳಿ ಕಾಲುಗಳು ಮೊದಲಿನವನ ಲಕ್ಷಣಗಳಾದರೆ ಎರಡನೆಯವನದು ಬರ್ಮಾಶೆಲ್ ಮಂಡೆ (ಆ ದಿವಸಗಳಲ್ಲಿ ಪೆಟ್ರೋಲ್ ಬಂಕಿನಲ್ಲಿ ಬಿಳಿಗೋಳವನ್ನು ಪಂಪಿನ ಶಿಖರದ ಮೇಲೆ ಕಾಣಬಹುದಿತ್ತು. ಆದ್ದರಿಂದ ಸಾಣೆ ಮಂಡೆಯವರಿಗೆ ಈ ಹೆಸರು.) ಗುಜ್ಜು ಗೊರಲು, ಕೆಳಗೆ ಉಬ್ಬ ಲಾಗದೇ ಎದೆಯನ್ನೂ ಆಕ್ರಮಿಸಿದ್ದ, ಭವ್ಯ ಭಾರತದ ಪ್ರತೀಕ ಬೊಜ್ಜು ಹೊಟ್ಟೆ, ದಳ್ಳಿಗಾಲುಗಳು. ರೋಹಿತದ ಒಂದು ಕೊನೆ ಕೊಕ್ಕರೆ ಇನ್ನೊಂದು ಕೊನೆ ಪುಳಿಮೂಟೆ. ಈ ವರ್ಣದ್ವಯಗಳ ನಡುವೆ ನಾವೆಲ್ಲರೂ. ವಾಸ್ತವವಾಗಿ ಮೇನನ್ನನೇ ಇಲ್ಲಿ ಸರ್ವಾಂಗ ಸುಂದರ, ಆಪಾತಮಧುರ.

ಸ್ಥಾನಗಳ ನಿರ್ಧಾರ ನಡೆದದ್ದು ಬೇರೆ ವಿಧಾನದಿಂದ. ಎತ್ತರ ಅನುಸಾರ ಭುಜಭುಜ ಮುಟ್ಟುವಂತೆ ಒಂದೇ ಸಾಲಿನಲ್ಲಿ ನಿಲ್ಲಿಸಿದರು. ಈಗ ನಾಗರಾಜನ್ ಒಂದನೆಯವನು.

ಮುಂದಿನ ಆಜ್ಞೆಗಳು ಇಂಗ್ಲಿಷಿನಲ್ಲಿ.

"ಬಲಗಡೆಯಿಂದ ತೊಡಗಿ ಸಂಖ್ಯೆಗಳನ್ನು ಕೂಗಿ."

"ಒನ್, ಟೂ, ತ್ರೀ..." ಒಬ್ಬನಾದ ಮೇಲೆ ಮುಂದಿನವನು ಅನುಕ್ರಮವಾಗಿ ಗಟ್ಟಿ ಯಾಗಿ ಚುರುಕಾಗಿ ಅರಚಬೇಕು. ಆದರೆ ಐದನೆಯವನಿಗೆ ಗಡಿಬಿಡಿಯಾಯಿತು. ಹಿಂದಿನವ ಹೇಳಿದ್ದನ್ನೇ "ಫೋರ್" ಎಂದು ಪುನರುಚ್ಚರಿಸಿದ.

"ಐಸೋವರ್" ಆಜ್ಞೆ.

ಇದರ ಅರ್ಥವೇನು? ಪುನಃ ಪುನಃ ಅದೇ ಆಜ್ಞೆ. ನಮ್ಮಲ್ಲಿ ನುರಿತವ ಚಿನ್ನದೊರೈ

(ಮೂರನೆಯ ಸ್ಥಾನದಲ್ಲಿ ನಿಂತಿದ್ದ). ಪುನಃ ಮೊದಲಿನಿಂದ ಸಂಖ್ಯೆಗಳನ್ನು ಕೂಗಲು ಸೂಚಿಸಿದ.

"As you were" ಎಂಬ ಇಂಗ್ಲಿಷ್ ಪದಗಳ ಅಪಭ್ರಂಶೀಕರಣ "ಐಸೋವರ್." ಈ ಪದಕ್ಕೂ ರಸಾಯನಶಾಸ್ತ್ರದ "ಐಸೋಮರ್"ಗೂ ಸುಳಿ ಮಾತ್ರೇಣ ವಿಶಿಷ್ಯತೇ ವಿನಾ ಅರ್ಥಗಳಲ್ಲಿ ಯಾವ ಸಂಬಂಧವೂ ಇಲ್ಲ ಎಂದು ಮುಂದೆ ತಿಳಿಯಿತು.

"ಒನ್, ಟೂ, ತ್ರೀ..." ಪುನರಾವರ್ತನೆ. ಪ್ರತಿಸಲವೂ ಎಲ್ಲಿಯೋ ಒಂದು ಕಡೆ ಮುನ್ನಡೆಗೆ ಹಠಾತ್ ಬಿರಿ, ಸರಿ ಐಸೋವರ್ ಪ್ರಾಯಶ್ಚಿತ್ತ.

"ಅಲ್ಲಿ, ಮೈದಾನದ ಕೊನೆಯಲ್ಲಿ ಮೂತ್ರಿ ಇದೆಯಷ್ಟೆ. ಅದನ್ನು ಎಡಗಡೆಯಿಂದ ಬಲಗಡೆಗೆ ಒಂದು ಸುತ್ತು ಸುತ್ತಿ ಇಲ್ಲಿಗೆ ಬಂದು ಪುನಃ ಇದೇ ಕ್ರಮದಲ್ಲಿ ನಿಲ್ಲಿ. ರೆಡೀ ಹೋಗಿ!" ಶಿಕ್ಷಕ ನಮಗೆ ಈ ಶಿಕ್ಷೆಯನ್ನು ವಿಧಿಸಿದ.

ಮೂತ್ರಿಯನ್ನು ಆ ಮೊದಲು ನೋಡಿರಲಿಲ್ಲ. ಅವನು ದಿಕ್ಕು ತೋರಿಸುವಾಗ ಹಿಂದೆ ಆ ಕಡೆ ನೋಡುವುದು ಶಿಸ್ತಿಗೆ ವಿರುದ್ಧ. ಆದರೂ ಅವನು ಕೈ ಮಾಡಿದ ದಿಕ್ಕಿಗೆ ಧಾವಿಸಿದೆವು. ಸ್ಥಳ ಕಾಣುವ ಮೊದಲೇ ಅದರ ಘೋರಂಕಾರ ನಾಸಿಕ ಕುಹರಗಳಿಗೆ ಬಡಿಯಲೇಬೇಕೆಂದು ದೃಢವಾಗಿ ನಂಬಿ ಮೂಗು ಸಿಂಡರಿಸಿ ಸಾಗಿದರೆ ಎರಡೂ ಇಲ್ಲ. ಹಿಂದೆ ನೋಡಿದೆವು—"ಹೋಗಿ ಹೋಗಿ—ಮುಂದೆ ಆ ಮೂಲೆ" ಅವನು ಗುಡುಗಿದ.

ಮೈದಾನದ ಮೂಲೆಯಲ್ಲಿ ಮೂರು ಬಿದಿರು ಗಳುಗಳನ್ನು ತ್ರಿಕೋಣ ರೂಪದಲ್ಲಿ ನೆಟ್ಟು ಅವುಗಳಿಗೆ ಗೋಣಿತಟ್ಟನ್ನು ಸುತ್ತಿ ಒಂದು ವಿಧದ ಮರೆ ಏರ್ಪಡಿಸಿದ್ದರು. ಅದರೊಳಗೆ ಟಿನ್ನಿನಿಂದ ತಯಾರಿಸಿದ ಅನುಕೂಲ ಎತ್ತರದ ಬುದ್ದಿವಂತ. ಇದೇ ಮೂತ್ರಿ. ಎಷ್ಟು ಸುಲಭ, ಎಷ್ಟು ಚೊಕ್ಕಟ.

ದೇವಾಲಯದ ಪ್ರದಕ್ಷಿಣೆ ಬಿಟ್ಟು ಅವೆಷ್ಟೋ ವರ್ಷಗಳಾಗಿದ್ದುವು. ಈಗ ಮೂತ್ರಿಯ ಪ್ರದಕ್ಷಿಣೆ. "ಯಾ ದೇವೀ ಸರ್ವಭೂತಾನಾಂ..."

ಈ ವ್ಯಾಯಾಮ ಮುಗಿಸಿ ಮೊದಲು ಬಂದು ನಿಂತ ಐವರಲ್ಲಿ ನಾನೊಬ್ಬ. ಕೊನೆಯ ತಂಡದಲ್ಲಿದ್ದವರಿಗೆ ಇನ್ನೊಂದು ಸುತ್ತು ಮುಗಿಸಿ ಬರಲು ಶಿಕ್ಷೆ. ಅವರ ಪುಣ್ಯ ಸಂಪಾದನೆ ಹೆಚ್ಚು.

ಆದರೆ ಈಗ ಮೊದಲಿನ ಕ್ರಮದಲ್ಲಿಯೇ ನಿಲ್ಲುವುದು ಮರೆತುಹೋಯಿತು. ನಮ್ಮ ಶಿಕ್ಷಕನಿಗೆ ಸಾಕು ಬೇಕಾಗಿರಬೇಕು! ಪುನಃ ಮೊದಲಿನಂತೆಯೇ ಒಂದೇ ಸಾಲಿನಲ್ಲಿ ನಿಲ್ಲಿಸಿ ಸಂಖ್ಯೆಗಳನ್ನು ಕೂಗಲು ಆಜ್ಞೆ ನೀಡಿದ. ಮೂತ್ರಿಯ ಆನಾಕರ್ಷಣೆಯೋ ಅನುಭವದ ಹಿರಿಮೆಯೋ ಯಾರೂ ತಪ್ಪು ಮಾಡಲಿಲ್ಲ. ಆದ್ದರಿಂದ ಐಸೋವರ್ ಮಂತ್ರೋಚ್ಚಾರಣೆ ಅನಾವಶ್ಯಕವಾಯಿತು.

"ಬೆಸ ಸಂಖ್ಯೆಗಳು ಒಂದು ಹೆಜ್ಜೆ ಮುಂದೆ, ಸರಿ ಸಂಖ್ಯೆಗಳು ಒಂದು ಹೆಜ್ಜೆ ಹಿಂದೆ—ಮುಂದೆ ಹಿಂದೆ ಚಲ್!" ಶಿಕ್ಷಕನ ಆಜ್ಞೆ.

ಜೀವನವೇ ಒಂದು ಬೃಹತ್ತಾದ ಬೆಸ ಸಮಸ್ಯೆ. ತಿಳಿದುನೋಡೆ ಬೆಸಯಾವುದು, ಸರಿಯಾವುದು? ಯಾಂತ್ರಿಕವಾಗಿ ಸಂಖ್ಯೆ ಕೂಗಿದ ಹಲವರಿಗೆ ತಾವು ಕೂಗಿದವು ಯಾವುವು ಎಂದು ಮರೆತುಹೋಗಿತ್ತು. ಕೆಲವರಿಗೆ ಬೆಸ, ಸರಿ ವ್ಯತ್ಯಾಸಗಳೂ ತಿಳಿದಿರಲಿಲ್ಲ.

ಆದ್ದರಿಂದ ಹಿಂದೆ ನಡೆದವರೂ ಮುಂದೆ ನಡೆದವರೂ ನಿಶ್ಚಲರೂ ಯದ್ವಾತದ್ವಾ ಆಗಿ ಇಡೀ ದೃಶ್ಯ ಆಧುನಿಕ ಚಿತ್ರ ಕಲೆಯನ್ನೋ ನವ್ಯ ಕವಿತೆಯ ಸಾಲುಗಳನ್ನೋ ನೆನಪಿಗೆ ತರುವಂತಿತ್ತು! ಮೂತ್ರಿಯ ದುರ್ದೈವದಿಂದ ಅದಕ್ಕೆ ನಮ್ಮ ಪ್ರದಕ್ಷಿಣೆಯ ಭಾಗ್ಯ ಪುನಃ ಲಭಿಸಲಿಲ್ಲ. ಶಿಕ್ಷಕನೇ ಬಂದು ನಮ್ಮ ಭುಜಹಿಡಿದು ಸರಿಯಾಗಿ ನಿಲ್ಲಿಸಿದ. "ನೀವೆಲ್ಲ ಯೂನಿವರ್ಸಿಟಿ ಪದವೀಧರರು. ಖಾಲಿ ಸಿಪಾಯಿಗಳು ಮಾಡದ ತಪ್ಪು ಮಾಡುತ್ತಿದ್ದೀರಿ."

೧ ೨ ೩ ೪ ೫ ೬ ೭ ೮ ೯ ೧೦ ೧೧ ೧೨ ೧೩ ೧೪

ಮುಂಭಾಗ ಆರಂಭದ ದೃಶ್ಯ

೨ ೪ ೬ ೮ ೧೦ ೧೨ ೧೪

೧ ೩ ೫ ೭ ೯ ೧೧ ೧೩

ಮುಂಭಾಗ ಎರಡನೆಯ ದೃಶ್ಯ

ಇಷ್ಟಾದ ಮೇಲೆ ಮುಂದಿನ ಸಾಲಿನವರನ್ನು (ಬೆಸ ವ್ಯಕ್ತಿಗಳನ್ನು) ಬಲಕ್ಕೂ ಹಿಂದಿನವರನ್ನು (ಸರಿ ವ್ಯಕ್ತಿಗಳನ್ನು ಎಡಕ್ಕೂ ತಿರುಗಿಸಿ ೧೪ನೆಯವನು ೧೩ನೆಯವನ ಬೆನ್ನ ಹಿಂದೆ ಸಾಲಾಗಿ ನಡೆದು ಬರುವಂತೆ ವಿಧಿಸಲಾಯಿತು. ೧ನೆಯವನು ನಿಂತಲ್ಲೇ. ೩ ಸಂಖ್ಯೆಯವನು ೧ರ ಬಲಮಗ್ಗುಲಲ್ಲಿಯೂ ೫ ಸಂಖ್ಯೆ ೩ರ ಬಲಮಗ್ಗುಲಲ್ಲಿಯೂ ನಿಂತರು. ತರುವಾಯ ೭, ೯, ೧೧ ಕ್ರಮವಾಗಿ ಮೊದಲಿನ ಮೂವರ ಹಿಂದೆ. ಈ ಕ್ರಮದಲ್ಲಿ ೧೪ ಜನರನ್ನೂ ನಿಲ್ಲಿಸಿ ಅವರನ್ನು ಒಟ್ಟಾಗಿ ಎಡಕ್ಕೆ ತಿರುಗುವಂತೆ ಆಜ್ಞೆ ನೀಡಲಾಯಿತು. ಈ ಚಿತ್ರ ಹೀಗಿದೆ:

೫11	೧೧12	೧೨13	೬14	—
೩6	೯7	೧೪8	೮9	೨10
೧1	೭2	೧೩3	೧೦4	೪5

ಮುಂಭಾಗ

ನನ್ನ ಮೊದಲ ಸಂಖ್ಯೆ ೯. ಆದರೆ ಈಗ ಏಳನೆಯ ಸ್ಥಾನ ಪ್ರಾಪ್ತವಾಗಿದೆ. ಬಾಲನದು ೧೩ ಆದರೆ ಈಗ ಮೂರನೆಯ ಸ್ಥಾನ. ರಾಜು ಕೊನೆಯವನು, ಈಗ ಅವನದು ಎಂಟನೆಯ ಸ್ಥಾನ. ನಾಗರಾಜನ್ ಮೊದಲೂ ಒಂದನೆಯವನು ಈಗಲೂ ಒಂದನೆಯವನು. ಆ ಕ್ಷಣವೇ ನಮಗೆಲ್ಲ ವಕ್ಷ ಸಂಖ್ಯೆಗಳನ್ನು (ಚೆಸ್ಟ್ ನಂಬರ್ಸ್) ಹಂಚಿದರು. ಒಂದಡಿ ಚೌಕದ ಬಿಳಿ ಬಟ್ಟೆಯ ಮೇಲೆ ಒಂದಿಂಚು ಅಗಲದ ಕರಿ ಪಟ್ಟಿಯಿಂದ ಸಂಖ್ಯೆಯನ್ನು ಹೊಲಿದಿರುತ್ತಾರೆ; ಇಂಥ ಒಂದು ಜೊತೆ ಚೌಕಗಳನ್ನು ಒಂದರ ತಲದಲ್ಲಿ ಅದರಿಂದ ಸ್ವಲ್ಪ ಮೇಲೆ, ಇನ್ನೊಂದನ್ನು ಸಂಖ್ಯೆ ತಲೆಕೆಳಗಾಗುವಂತೆ ಇಟ್ಟು, ಎರಡೂ ಚೌಕಗಳ ಸಮೀಪದ ಮೂಲೆಗಳನ್ನು ದಾರಗಳಿಂದ ಕಟ್ಟಿರುತ್ತಾರೆ. ಉಳಿದ ಹೊರ ಮೂಲೆಗಳಿಗೂ ಬಿಡಿ ದಾರಗಳನ್ನು ಜೋಡಿಸಿ ಖಾಲಿ ಬಿಟ್ಟಿರುತ್ತಾರೆ. ವಕ್ಷ ಸಂಖ್ಯೆಯ ಈ ಕವಚವನ್ನು ಬನಿಯನ್ ಧರಿಸಿದಂತೆ ತೊಡಬಹುದು. ಆಗ ಒಂದು ಚೌಕ ಎದೆಯ

ಮೇಲೂ ಇನ್ನೊಂದು ಚೌಕ ಬೆನ್ನಮೇಲೂ ಬರುತ್ತವೆ. ಸಮೀಪದ ಮೂಲೆಗಳನ್ನು ಜೋಡಿಸುವ ದಾರಗಳು ಹೆಗಲುಗಳ ಮೇಲಿರುವುವು. ದೂರ ಮೂಲೆಗಳಿಂದ ಇಳಿದಿರುವ ಬಿಡಿ ದಾರಗಳನ್ನು ಕಂಕುಳ ಅಡಿಗಾಗಿ ಸರಿಸಿ ಬಿಗಿಯಾಗುವಂತೆ ಕಟ್ಟಿದರೆ ಎದೆ ಸಂಖ್ಯೆಗಳು ಭದ್ರವಾಗಿ ಮತ್ತು ಹದವಾಗಿ ಸ್ಥಾನಾಪನ್ನವಾಗಿರುತ್ತವೆ. ಇನ್ನು ಎದೆ ಹೋದರೂ ಆ ಸಂಖ್ಯೆಗಳು ಕದಲವು—ಅಂಥ ಎದೆಗಾರಿಕೆ !

ಹಿಂದಿನಿಂದ ನೋಡಿ, ಮುಂದಿನಿಂದ ನೋಡಿ—ನಾನೀಗ ನಂಬರ್ ಏಳು. ಆ ಗಳಿಗೆಯಲ್ಲಿ ನನ್ನ ವ್ಯಕ್ತಿತ್ವ, ಸ್ವಂತಿಕೆ, ಪ್ರತಿಭೆ ಏನಿದ್ದರೂ ಅವೆಲ್ಲ ಆ ಕೊಕ್ಕೆಯಾಕಾರದ ಸಂಖ್ಯೆಯಲ್ಲಿ ಐಕ್ಯ. ನಾನು ಲೆಕ್ಚರರನಾಗಿರಬಹುದು, ಉನ್ನತಕುಲಪ್ರಸೂತನಾಗಿರಬಹುದು, ನವವಿವಾಹಿತ ತರುಣನಿರಬಹುದು—ಇವೆಲ್ಲ ಗುಣಗಳನ್ನೂ ಆಪೋಶನ ಮಾಡಿ ನಿಂತದ್ದು ಸಪ್ತರ್ಷಿಮಂಡಲಾಕಾರದ ಏಳು. ವಾದಮಾಡುವುದಾದರೆ, ನಾರಾಯಣನಾಮದಲ್ಲಿರುವ ಪಾವಿತ್ರ್ಯವೇನು ? ಏಳು ಸಂಖ್ಯೆಯಲ್ಲಿರುವ ವೈಲಿಗೆಯೇನು ? ಲೆಕ್ಕದವನಾದ ನನಗೆ ಏಳು ಸಂಖ್ಯೆ ಬಲು ಪ್ರಿಯವಾದದ್ದು—ಇದೊಂದು ಮೂಲಸಂಖ್ಯೆ ; ಸಪ್ತರ್ಷಿಗಳ ಸಂಖ್ಯೆ ; ಸಪ್ತಾಕ್ಷರೀ ಬೀಜಮಂತ್ರದ ಪ್ರತೀಕ ; ಕಾಮನ ಬಿಲ್ಲನ್ನು ಕಂಡು ತೆಕ್ಕನೆ ಮೈಮನ ಮರೆಯುವ ಕವಿಯಂಥ ಗಣಿತ ಅರಸಿಕನಿಗೂ ಸಪ್ತ ವರ್ಣಗಳೇ ಬಲು ಪ್ರಿಯ ; ಇನ್ನು ಸಂಗೀತವೋ ಸರಿಗಮಪದನಿಗಳಲ್ಲಿ ಐಕ್ಯ. ಆದ್ದರಿಂದ ಏಳು ನನಗೆ ಪ್ರಿಯವಾದ ಸಂಖ್ಯೆ. ಅದು ನನ್ನ ಎಂಎ ಡಿಗ್ರಿಯ ಪರೀಕ್ಷೆಯ ರಿಜಿಸ್ಟರ್ಡ್ ಸಂಖ್ಯೆಯೂ ಹೌದು ; ಡೆಹರಾಡೂನ್ ಸಂಖ್ಯೆಯೂ ಅದೇ ! ನಾನಾಗ ನನ್ನ ಇಪ್ಪತ್ತ ಏಳನೆಯ ವರ್ಷದಲ್ಲಿದ್ದೆ. ರಂಗನಾಯಕ ಏಳೋ ಏಳುಗಂಟೆಯೂ ಆಯ್ತೋ......

"ಆಫಿಸರರ ಮೆಸ್ಸಿಗೆ ರಾತ್ರಿಯ ಊಟಕ್ಕೆ ಬರುವಾಗ ಮಾತ್ರ ನಿಮಗೆ ವಿನಾಯಿತಿ. ಮಿಕ್ಕ ಎಲ್ಲ ಸಂದರ್ಭಗಳಲ್ಲಿಯೂ ನೀವು ಸಂಖ್ಯಾಧಾರಿಗಳಾಗಿಯೇ ಇರತಕ್ಕದ್ದು" ಹವಿಲ್ದಾರ್ ಮೇಜರ್ ಶಂಕರನ್ ಪಿಳ್ಳೆಯ ಆಜ್ಞೆಯಾಯಿತು.

ತುಕ್ಕಡಿಯ ಹಿನ್ನೆಲೆಯ ಲೆಕ್ಕ

ನಮ್ಮನ್ನು ವ್ಯವಸ್ಥೆಗೊಳಿಸಿ ನಿಲ್ಲಿಸುತ್ತಿದ್ದಾಗಲೇ ಪ್ರತ್ಯೇಕವಾಗಿ ಜೂನಿಯರ್ ಡಿವಿಶನ್ನಿನವರನ್ನು (ಜೆ ಡಿ) ಇದೇ ವಿಧದ ತೀವ್ರ ಸಂಸ್ಕರಣ ಕ್ರಿಯೆಗೆ ಒಳಪಡಿಸುತ್ತಿದ್ದರು. ಅಲ್ಲಿದ್ದವರು ನಲ್ವತ್ತು ಮಂದಿ. ಆದ್ದರಿಂದ ಅವರ ಸಮಸ್ಯೆಗಳು ನಮ್ಮ ಸಮಸ್ಯೆಗಳ ೪೦/೧೪ ಅಂದರೆ ೨೦/೭ ಅಥವಾ ಸುಮಾರು ಮೂರರಷ್ಟು ಎಂದು ನೀವು ಊಹಿಸಿದರೆ ನಿಮ್ಮ ಗಣನೆ ತಪ್ಪು. ಜನರ ಸಂಖ್ಯೆ ಸಮಾಂತರ ಶ್ರೇಣಿಯಲ್ಲಿ ಏರಿದರೆ ಸಮಸ್ಯೆಗಳ ಸಂಖ್ಯೆ ಜ್ಯಾಮಿತೀಯ ಶ್ರೇಣಿಯಲ್ಲಿ ವೃದ್ಧಿಸುವುದು.

ಜನರ ಸಂಖ್ಯೆ			ಸಮಸ್ಯೆಗಳ ಸಂಖ್ಯೆ
೧	...	...	$೧ = ೨^0$
೨	...	...	$೨ = ೨^1$
೩	...	...	$೪ = ೨^2$
೪	...	...	$೮ = ೨^3$
⋮			...

೧೪ ಸೀನಿಯರ್ ಡಿವಿಶನ್ ... ೨^{13} = ೮,೧೯೨

⋮ ...

...

೪೦ ಜೆಡಿ ... ೨^{39} = ಸುಮಾರು ೫೪೮,೩೦೦,೦೦೦,೦೦೦

ಈ ಸೂಕ್ಷ್ಮ ಗಣಿತ ಸೂತ್ರವನ್ನು ಗಮನಿಸಿದ ಪ್ರೊ॥ ನಾರ್ತ್‌ಕೋಟ್ ಪಾರ್ಕಿನ್ಸನ್ ಆತನ ಹೆಸರಿನ ಪ್ರಥಮನಿಯಮವನ್ನು ಮಂಡಿಸಿದ್ದಾನೆ. ಅದರ ನಿರೂಪಣೆ ಹೀಗಿದೆ: ಕಾರ್ಯ ನಿರಂತರವೃದ್ಧಿಯಾಗುತ್ತ ಲಭ್ಯಕಾಲವನ್ನು ಸ್ವಾಹಾಕರಿಸಿಬಿಡುವುದು. ಒಂದು ಸಮಸ್ಯೆ ಪರಿಹರಿಸಲು ಒಬ್ಬನನ್ನು ನೇಮಿಸಿದರೆ ಅವನು ಪ್ರತಿಯಾಗಿ ಎರಡು ಸಮಸ್ಯೆಗಳನ್ನು ಸೃಜಿಸುವನು. ಹೀಗೆ ಬೆಳೆಯುತ್ತ ಹೋಗುವುದು ಕೊನೆಯಿಲ್ಲದ ಹನುಮಂತ ಲಾಂಗೂಲ.

ಮೇಲೆ ನಿರೂಪಿಸಿರುವ ಸಮಸ್ಯೆಗಳಲ್ಲಿ ಒಂದೊಂದನ್ನೂ ೨″ × ೪″ ವಿಸ್ತಾರದ ಕಿರಿ ಕಾಗದದ ತುಣುಕಿನಲ್ಲಿ ಸಂಕ್ಷೇಪವಾಗಿ ಬರೆದರೆ ಸೀನಿಯರ್ ಡಿವಿಶನ್ನಿನ (ಎಸ್ ಡಿ) ಸಮಸ್ಯೆಗಳು ಈ ಪುಸ್ತಕದ ಹಾಳೆ ಗಾತ್ರದ ೧,೬೦೦ ಪುಟಗಳನ್ನೇ ನುಂಗಹಾಕುವುವು. ಇನ್ನು ಜೆ ಡಿಯವರದೋ? [illegible],೦೦೦ ಪುಟಗಳ ೧೦ ಕೋಟಿ ಪುಸ್ತಕಗಳೇ ಬೇಕಾಗ ಬಹುದು. ಅಂದಮಾತ್ರಕ್ಕೆ ಈ ಸಮಸ್ಯೆಗಳನ್ನೆಲ್ಲ ಅಲ್ಲಿ ಯಾರಾದರೂ ಆಲಿಸಿದರೆಂದಾಗಲೀ ಅವನ್ನು ಬಗೆಹರಿಸಿದರೆಂದಾಗಲೀ ಭಾವಿಸಬೇಕಾಗಿಲ್ಲ. ಪ್ರತಿ ಮನುಷ್ಯನ ಮೂಲ ಭೂತ ಹಕ್ಕುಗಳಲ್ಲಿ ಪ್ರಧಾನವಾದದ್ದು ಸಮಸ್ಯೆಗಳ ಸೃಷ್ಟಿ. ಸಮಸ್ಯೆಗಳ ಮೂಲವನ್ನು ಶೋಧಿಸಿದರೆ ಮನುಷ್ಯನ ಜನನವೇ ಸಮಸ್ಯೆಗಳ ಉಪೋತ್ಪನ್ನ ಎಂಬುದು ಸ್ಪಷ್ಟ. ಇನ್ನು ಪ್ರತಿ ಅಧಿಕಾರಿಗೂ (ಅಂದರೆ, ಸಮಸ್ಯೆ ಕೇಳಲು ಇರಲೇಬೇಕಾಗಿರುವ ಈಶ್ವರ) ಇರುವ ಮೂಲಭೂತ ಹಕ್ಕುಗಳಲ್ಲಿ ಪ್ರಧಾನವಾದದ್ದು ಕೈಕೆಳಗಿನವರ ಸಮಸ್ಯೆ ಇಲ್ಲವೇ ಇಲ್ಲ ಎಂಬ ದೃಢ, ಅಚಲ ನಂಬಿಕೆ ಮತ್ತು ತದನುಸಾರ ವರ್ತನೆ. ಹೀಗಲ್ಲದಿದ್ದರೆ ಆಕಾಶಗಂಗೆ ಹರನ ಜಡೆಯಲ್ಲಿ ಉಳಿಯುತ್ತಿದ್ದಳೇ? ಸರಕಾರ ಸಾಗೀತೇ? ಮನೆ ಮನೆಗಳಲ್ಲಿ ಹೊಗೆ ಸುರುಳಿ ಸುತ್ತೀತೇ? ಭಗವಂತ ಚಿರನಿದ್ರೆಯಲ್ಲಿರುವುದರಿಂದ ಒಂದು ವಿಷಯ ಖಾತ್ರಿ. ಸಮಸ್ಯೆಗಳ ನಿರ್ಮಾಣವೂ ಪರಿಹಾರವೂ ನ್ಯೂಟನ್ನನ ತೃತೀಯ ನಿಯಮಾನುಸಾರ ಇವೆ. ಎಂದರೆ, ಒಂದೊಂದು ಸಮಸ್ಯೆಗೂ ಸಮ ಮತ್ತು ವಿರುದ್ಧ ಪ್ರತಿಸಮಸ್ಯೆ ಇದೆ. ಗತಿ ವಿಜ್ಞಾನದ ಭಾಷೆಯಲ್ಲಿ ಮನುಷ್ಯ ಸಮುದಾಯ ಮತ್ತು ಪರಿಸರ ಒಂದು ಸಂವೃತ ವ್ಯವಸ್ಥೆ. ಸಮಸ್ಯೆಗಳು ಈ ವ್ಯವಸ್ಥೆಯಲ್ಲಿ ಆಂತರಿಕ ಬಲಗಳು. ಸಮಗ್ರ ವ್ಯವಸ್ಥೆಯನ್ನು ಪರಿಶೀಲಿಸುವಾಗ ಈ ಆಂತರಿಕ ಬಲಗಳು ಭವ್ಯ ಸಮತೋಲದಲ್ಲಿವೆ!

ಹೃದಯಸಂಖ್ಯಾಧಾರಿಗಳು (ಅಥವಾ ಸಂಖ್ಯಾಹೃದಯಿಗಳು) ೧೪ ಎಸ್‌ಡಿ ಮತ್ತು ೪೦ ಜೆಡಿ, ಒಟ್ಟು ೫೪ ಮಂದಿ. ಇವರದು ಎರಡು ಗುಂಪು. ಒಂದೊಂದನ್ನೂ ಮೂರು ಅಡ್ಡ ಸಾಲುಗಳಲ್ಲಿ ಎಸ್‌ಡಿಯ ಎಡಕ್ಕೆ ಜೆಡಿ ಇರುವಂತೆ ನಿಲ್ಲಿಸಿದರು. ಗುಂಪುಗಳ ವಿನ್ಯಾಸ ಹೀಗಿತ್ತು:

ಎಸ್ ಡಿ					ಜೆ ಡಿ							
೧೦	೧೧	೧೨	೧೩	೧೪	೪೨	೪೩	೪೪	...	...	೫೩	—	೫೪
೬	೭	೮	—	೯	೨೯	೩೦	೩೧	...	...	೪೦	—	೪೧
೧	೨	೩	೪	೫	೧೫	೧೬	೧೭	...	...	೨೬	೨೭	೨೮

ಈ ಭವ್ಯ ಕೋಟೆ—ಯೋಧರ ಗೋಡೆ—ಎದುರಿನಿಂದ ನೋಡಿದರೆ ೧೯ ಗಿಡ್ಡ ಗೆರೆಗಳ (೩ ಜನರಷ್ಟು ಆಳ) ಸಮುದಾಯ ; ಪಕ್ಕದಿಂದ ನೋಡಿದರೆ ೩ ಉದ್ದ ಮತ್ತು ಸಮಾಂತರ ಗೆರೆಗಳ ಸಮುದಾಯ. ಗಿಡ್ಡ ಗೆರೆಗಳ ಹೆಸರು ನೀಟಸಾಲುಗಳು ಅಥವಾ ಸಂಕ್ಷೇಪವಾಗಿ ನೀಟಗಳು. ಉದ್ದ ಗೆರೆಗಳ ಹೆಸರು ಅಡ್ಡಸಾಲುಗಳು ಅಥವಾ ಸಂಕ್ಷೇಪವಾಗಿ ಅಡ್ಡಗಳು. ಈ ಅಡ್ಡನೀಟಗಳು ಒಟ್ಟಾಗಿ ರಚಿಸುವ ಯೋಧರ ಗುಂಪಿನ ಹೆಸರು ತುಕ್ಕಡಿ.

ಎಸ್‌ಡಿಯ ೩ನೆಯ ಅಡ್ಡದ ೫ನೆಯ ನೀಟದ ಯೋಧ ಯಾರು ? ಉತ್ತರ ನಂಬರ್ ೧೪. ಜೆ ಡಿಯ ೨ನೆಯ ಅಡ್ಡದ ೭ನೆಯ ನೀಟದ ಯೋಧ ಯಾರು ? ಉತ್ತರ, ನಂಬರ್ ೩೫. ವಿಲೋಮವಾಗಿ, ನಂಬರ್ ೭ರ ಸ್ಥಾನ ಯಾವುದು ? ಉತ್ತರ, ಎಸ್‌ಡಿಯ ೨ನೆಯ ಅಡ್ಡದ ೨ನೆಯ ನೀಟ. ನಂಬರ್ ೪೭ರ ಸ್ಥಾನ ಯಾವುದು ? ಉತ್ತರ, ಜೆಡಿಯ ೩ನೆಯ ಅಡ್ಡದ ೬ನೆಯ ನೀಟ. ಹೀಗೆ ಅಡ್ಡ, ನೀಟ ದತ್ತವಾದಾಗ ದೊರೆಯುವ ಸಂಖ್ಯೆ (ಯೋಧ) ಒಬ್ಬನೇ ; ಪ್ರತಿಯೊಬ್ಬ ಯೋಧನಿಗೂ (ಸಂಖ್ಯೆ) ಒಂದೇ ಜೊತೆ ಅಡ್ಡ ನೀಟ ಸಂಖ್ಯೆಗಳಿವೆ. ತುಕ್ಕಡಿಯ ಈ ಲೆಕ್ಕಕ್ಕೂ ಗಣಿತದ ಮಾತೃಕೆ ಸಿದ್ಧಾಂತದ (ಮ್ಯಾಟ್ರಿಕ್ಸ್) ಮೊದಲ ಪಾಠಗಳಿಗೂ ಇದ್ದ ಸಾದೃಶ್ಯ ನನಗೆ ಕುತೂಹಲಕಾರಿಯಾಗಿತ್ತು.

ಒಂದು ತುಕ್ಕಡಿಯಲ್ಲಿ ಸಾಮಾನ್ಯವಾಗಿ ೩೦ ಮಂದಿಗಿಂತ ಹೆಚ್ಚಿರುವುದಿಲ್ಲ. ಯೋಧ ರೆಷ್ಟೇ ಇದ್ದರೂ ಅವರನ್ನು ಮೂರು ಅಡ್ಡಗಳಲ್ಲಿಯೂ ಸಾಕಷ್ಟು ನೀಟಗಳಲ್ಲಿಯೂ ಅಳವಡಿಸುವುದು ವಾಡಿಕೆ. ಶಿಕ್ಷಣ, ಸಾಮೂಹಿಕ ಕವಾಯತಿ, ಉತ್ಸವ ವಿಧಿ ಮುಂತಾದ ವುಗಳ ಏರ್ಪಾಡಿನ ದೃಷ್ಟಿಯಿಂದ ಈ ಕ್ರಮ ಅನುಕೂಲವೆನ್ನಿಸಿದೆ.

ನಮ್ಮ ಎರಡು ತುಕ್ಕಡಿಗಳಲ್ಲಿಯೂ ಯೋಧರ ಸಂಖ್ಯೆ ೩ರ ಅಪವರ್ತ್ಯಗಳಾಗಿರಲಿಲ್ಲ. ಎಸ್‌ಡಿಯಲ್ಲಿ ಒಬ್ಬ ಯೋಧನ ಕೊರತೆ, ಜೆಡಿಯಲ್ಲಿ ಇಬ್ಬರ ಕೊರತೆ ಇದ್ದುವು. ಈ ಕೊರತೆಗಳಿಗೆ ಪರಿಹಾರ ಪ್ರತಿಯೊಂದು ತುಕ್ಕಡಿಯಲ್ಲಿಯೂ ಕೊನೆಯಿಂದ ಎರಡನೆಯ ನೀಟದಲ್ಲಿ ಖಾಲಿ ಜಾಗಗಳನ್ನು ಬಿಡುವುದರ ಮೂಲಕ. ಆದ್ದರಿಂದ ಎಸ್‌ಡಿಯ ೨ನೆಯ ಅಡ್ಡ ೪ನೆಯ ನೀಟಖಾಲಿ ; ಜೆ ಡಿಯ ೧೩ನೆಯ ನೀಟದಲ್ಲಿ ೨ನೆಯ ಮತ್ತು ೩ನೆಯ ಅಡ್ಡಗಳು ಖಾಲಿ. ಒಂದು ಖಾಲಿ ಜಾಗವಿದ್ದರೆ ಅದು ನಡುವಿನ ಅಡ್ಡದಲ್ಲಿಯೂ ಎರಡಿದ್ದರೆ ಅವು ಎರಡನೆಯ ಮತ್ತು ಮೂರನೆಯ ಅಡ್ಡಗಳಲ್ಲಿಯೂ ಇರಬೇಕಾದದ್ದು ಕ್ರಮ. ಅರ್ಥಾತ್‌ಖಾಲಿಜಾಗ ಮೊದಲ ಅಡ್ಡದಲ್ಲಿ ಇರಬಾರದು. ವೀಕ್ಷಕನಿಗೆ ತುಕ್ಕಡಿಯ ಉತ್ಕೃಷ್ಟ ಮುಂಚೂಣಿಯನ್ನು ಪ್ರದರ್ಶಿಸಬೇಕು, ಅಲ್ಲದೇ ಅಂತಿಮವಾಗಿ ಯುದ್ಧದಲ್ಲಿ ಗರಿಷ್ಠ ಬಲದಿಂದ ಶತ್ರುವನ್ನು ಎದುರಿಸಬೇಕು—ಇವೆಲ್ಲ ಇಂಥ ಏರ್ಪಾಡುಗಳ ಹಿನ್ನೆಲೆಯಲ್ಲಿರುವ ಭಾವನೆಗಳು.

ಒಂದು ಮುಖ್ಯ ವಿಷಯವನ್ನೇ ನಿರೂಪಿಸಲಿಲ್ಲವಲ್ಲ—"ನೀಳ ಯೋಧ ಬಲಕ್ಕೆ ಗಿಡ್ಡಯೋಧ ಎಡಕ್ಕೆ ಭುಜ ಭುಜ ತಗುಲುವಂತೆ ಒಂದೇ ಸಾಲಿನಲ್ಲಿ ನಿಲ್ಲಿ" ಎಂಬ ಆಜ್ಞೆಯ

ಆವಶ್ಯಕತೆ ಏನು ? ಇಷ್ಟಬಂದಂತೆ ನಿಲ್ಲಿಸಬಾರದೇ ? ಅಥವಾ ಹೆಸರುಗಳ ಅಕಾರಾದಿ ಯಾಗಿ ಮೂರು ಸಾಲುಗಳಲ್ಲಿ ಅಳವಡಿಸಬಾರದೇ ? ಮೇಲಿನ ಆಜ್ಞಾನುಸಾರ ನಿಲ್ಲಿಸಿ ಮುಂದೆ ಏರ್ಪಡಿಸುವ ತುಕ್ಕಡಿಯಲ್ಲಿ ಒಂದು ಸುಂದರ ಸಮಾಂಗತೆ ಪ್ರದರ್ಶಿತವಾಗು ತ್ತದೆ. ಮೊದಲಿನ ಹಾಗೂ ಕೊನೆಯ ನೀಟಗಳಲ್ಲಿ ಅತಿ ಎತ್ತರದವರು ಇರುತ್ತಾರೆ; ಅಲ್ಲಿಂದ ತುಕ್ಕಡಿಯ ಕೇಂದ್ರಾಭಿಮುಖವಾಗಿ ಗಮನಿಸಿದಂತೆ ಯೋಧರ ಎತ್ತರಗಳು ಕ್ರಮೇಣ ತಗ್ಗಿ ನಡುವಿನ ನೀಟದಲ್ಲಿ ಕಡಿಮೆ ಎತ್ತರದವರೇ ಸೇರಿರುತ್ತಾರೆ. ತೋರಣ ದಂತೆ ಕಾಣುವ ತುಕ್ಕಡಿಯ ಮುಂಭಾಗ ನೋಡಲು ಮನೋಹರವಾಗಿರುವುದು. ಕುಳ್ಳ ರಿಗೆ (ಆದ್ದರಿಂದ ಬಲಹೀನರಿಗೆ ?) ಸಹಜ ರಕ್ಷಣೆಯೂ ಒದಗಿದಂತಾಯಿತಷ್ಟೆ.

ಪೆಮರ್ಾರ್ ಸಾಹೇಬರ ಇನ್‌ಸ್ಪೆಕ್ಷನ್

ಹವಿಲ್ದಾರ್ ಮೇಜರ್ ಶಂಕರನ್ ಪಿಳ್ಳೆ. ಬಿಸಿಲಿನಿಂದ ಕರಟ್ಟಿದ್ದ ಚರ್ಮದ ಬಣ್ಣ ಕಂದು. ಅವನ ಚುಚ್ಚುನೋಟ ಹೆಚ್ಚು ಅಪಾಯಕರವೋ ಗಡಸು ಧ್ವನಿಯ ಕೊರೆತ ಅಧಿಕ ತೀಕ್ಷ್ಣವೋ ಹುಲ್ಲು ಕಂತೆಗಳಂಥ ಮೀಸೆ ಬಲು ಭಯಂಕರವೋ ಆ ಗಳಿಗೆ ನಮಗೆ ನಿರ್ಧರಿಸಲಾಗಲಿಲ್ಲ.

"ಅಟ್ಟೇನ್...ಷನ್" ಎಂದು ಅವನು ಆಜ್ಞೆ ನೀಡಿದಾಗ ಇಡೀ ಮೈದಾನ ನಡುಗಿತು. ಆದರೆ ಪ್ರತಿಕ್ರಿಯೆಯಾಗಿ ೫೪ ಜನ ಅಷ್ಟೇ ವಿಧಗಳಲ್ಲಿ ಸೆಟೆದು ನಿಂತರು. ಸಿದ್ದೆಗಣ್ಣರೂ ಗೂನುಬೆನ್ನರೂ ಹೊಟ್ಟೆಮುಂದರೂ ದಳ್ಳೆಗಾಲರೂ ಈ ಪ್ರಹಾರದಿಂದ ನೆಟ್ಟಗಾದರು.

ನಮ್ಮ ಶಿಕ್ಷಣಕ್ಕೋಸ್ಕರ ಏರ್ಪಡಿಸಿದ್ದ ಆರು ಹವಿಲ್ದಾರರಿಗೆ (ಎನ್‌ಸಿಓ ಗಳು) ಪಿಳ್ಳೆಯೇ ನಾಯಕ. ಅವರಿಗೆ ನಮ್ಮ ಹಿಂದೆ ಸಾಲಾಗಿ ನಿಲ್ಲುವಂತೆ ಆಜ್ಞೆ ವಿಧಿಸಿದ. ಬೊಂಬೆಗಳು ನಡೆದಂತೆ ಅವರು ಎಲ್ಲೆಲ್ಲಿಂದಲೋ ಸಾಗಿ ಬಂದು ಮರೆದ ಕೊರಡುಗಳಂತೆ ನಮ್ಮ ಹಿಂದೆ ನಿಂತರು. ಸದ್ದಿನಿಂದ ಇದು ತಿಳಿದದ್ದು. ನೋಡಬೇಕೆಂಬ ಕುತೂಹಲ. ಆದರೆ ಸಾವಧಾನ ಸ್ಥಿತಿಯಲ್ಲಿ ಅಲುಗುವುದುಂಟೇ ?

"What the hell you are doing there, numbe r 7 ?" ("ಅಲ್ಲೇನು ನರಕ ನಿನ್ನ ಅಲುಗಾಟ ನಂಬರ್ ೭ ?")

ದೇಹ ತಲೆ ಯಾವುದನ್ನೂ ನಾನು ಅಲ್ಲಾಡಿಸಿರಲಿಲ್ಲ. ಬರೇ ಕಣ್ಣಾಲಿಗಳನ್ನು ತಿರುಗಿಸಿ ಹಿಂದೆ ಏನು ನಡೆಯುತ್ತಿದೆ ಎಂದು ತಿಳಿಯಲು ಯತ್ನಿಸಿದ್ದೆ. ಸಾಕಪ್ಪ ಈ ಪ್ರಕ್ಷಾಳನೆ, ಇನ್ನು ಮುಂದೆ ಎಲ್ಲಿಗೇ ಹೋದರೂ ಹಲ್ಲನ್ನು ತೋರಿಸೆ ಕಣ್ಣಾಲಿ ಮಿಟುಕಿಸೆ ಎಂದು ನಿರ್ಧರಿಸಿದೆ. ಜ್ವರ ಬಂದಂತೆ ಮುಖ ಬಿಸಿ ಬಿಸಿ ಆಗಿತ್ತು.

ನಮ್ಮನ್ನು ಹೀಗೆಯೇ ನಿಂತಿರುವಂತೆ ವಿಧಿಸಿ ಪಿಳ್ಳೆ ಸರಕ್ಕನೆ ಹಿಂತಿರುಗಿದ. ಆ ೧೮೦° ಗಳ ಕ್ಷಣಾರ್ಧದ ಆವರ್ತನೆ ದಂಗುಬಡಿಸುವಂತಿತ್ತು. ಅಲ್ಲಿಂದ ತತ್‌ಕ್ಷಣ ಅವನ ಮೂಗಿನ ನೇರ ಓಡಿ ಸುದೂರದಲ್ಲಿ ನಿಂತಿದ್ದ (ನನಗೆ ಪ್ರಕ್ಷಾಳನೆ ಮಾಡಿದ್ದ) ಕಿರಿಯ ಗಾತ್ರದ ಹಿರಿಯ ವ್ಯಕ್ತಿಯ ಎದುರು ನಿಂತು ಗೌರವ ಅರ್ಪಿಸಿದ.

"ರಾಮ್ ಜೀ ! ಅವರೇ ಸುಬೆದಾರ್ ಅಬ್ದುಲ್ ಖಾದರ್ !" ನಂಬರ್ ೬, ಮಾಧವ ಮೇನನ್ ಉಸುರಿದ.

ಈ ಹೊಸ ತಿಳಿವಳಿಕೆಯಿಂದ ನಾನೆಷ್ಟು ಸಂತುಷ್ಟನಾದೆ ಅಥವಾ ಭೀತನಾದೆ ಎಂಬ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಹೇಗೆ ?

"ನಂಬರ್ ೬ ! ತುಕ್ಕಡಿಗಳಿಗೆ ಮೂರು ಚಕ್ಕರ್ ಹೊಡಿ !"

ಸದ್ಯ ನಾನು ಬದುಕಿದೆ. ಪ್ರೊಫೆಸರ್ ಮಾಧವ ಮೇನನ್, ಎಂಈಎಸ್. ಈಗ ಕೇವಲ ನಂಬರ್ ೬. ಖಾಲಿ ಸುಬೇದಾರನಿಂದ ಥಳಿಸಲ್ಪಟ್ಟ. ಆದರೆ ಈ ರಾಕ್ಷಸರ ಪ್ರಪಂಚದಲ್ಲಿ ದೇವಪುತ್ರರು ಉಸಿರು ಬಿಡಲುಂಟೇ ? ನಂಬರ್ ೬ ಮೂರನೆಯ ಸುತ್ತನ್ನು ತೊಡಗುವ ಮೊದಲೇ "ಏಸ್ ಯೂ ವರ್" (ಐಸೋವರ್ ಅಲ್ಲ) ಆಜ್ಞೆ ದೊರೆಯಿತು. ಶುದ್ಧ ಉಚ್ಚಾರಣೆ. ಆದರೆ ಅದನ್ನು ಅರ್ಥಮಾಡಿಕೊಂಡು ಅನುಸರಿಸುವ ಮನಃಸ್ಥಿತಿಯಲ್ಲಿ ನಂಬರ್ ೬ ಇರಲಿಲ್ಲ. ಮೂರನೆಯ ಸುತ್ತನ್ನೂ ಮುಗಿಸಿ ಸ್ವಸ್ಥಾನದಲ್ಲಿ ಪ್ರತಿಷ್ಠಾಪಿತನಾದ.

"ಸ್ಟೇಂಡ್ ಎಟ್ ಈಸ್...ಸ್ಟೇಂಡ್ ಈಸಿ."

ತರುವಾಯ ಐದು ಮಿನಿಟುಗಳ ಕಾಲ ನಮಗೆ ಕವಾಯತಿನ ಮೂಲ ಆಜ್ಞೆಗಳನ್ನೂ ಅವುಗಳ ಅರ್ಥಗಳನ್ನೂ ಅಭಿನಯಸಹಿತವಾಗಿ ವಿವರಿಸಿದರು. ಖಾದರರ ಒಂದೊಂದು ವಿವರಣೆಯೂ ಅದಕ್ಕೆ ಪೂರಕವಾದ ಒಂದೊಂದು ಅಭಿನಯವೂ ಅವರ ವಿಚಾರದಲ್ಲಿ ಆ ಕ್ಷಣವೇ ನಮಗೆ ಗೌರವ ವಿಶ್ವಾಸ ಮೂಡಿಸುವಂತಿದ್ದುವು. ವಾಚ್ ನೋಡಿದರು. ೬-೫೯ ದಾಟಿತ್ತು. ಮೈದಾನದ ಹೊರ ಮೂಲೆಯಲ್ಲಿ ಪರ್ಮಾರ್ ದೊರೆಗಳು ಆಗಮಿಸುತ್ತಿದ್ದುದು ಕಂಡಿತು.

ಖಾದರ್ ಸೆಟೆದು ನಿಂತು "ಸ್ಕ್ವಾಡ್ ! ಸ್ಟೇಂಡ್ ಈಸಿ .. ಸ್ಕ್ವಾಡ್ ಅಟ್ಟೇನ್...ಷನ್ ! ಸ್ಟೆಡಿ." ಇವರ ಆಜ್ಞೆಯ ತೀಕ್ಷ್ಣತೆ ಇಡೀ ಎಂಆರ್‌ಸಿಯನ್ನು ನಡುಗಿಸಲು ಸಾಕು. ಅರ್ಧಾವರ್ತನೆಯನ್ನು ಮಿಂಚಿನ ವೇಗದಲ್ಲಿ ಮುಗಿಸಿ ಪರ್ಮಾರರೆಡೆಗೆ ಧಾವಿಸಿ ಗೌರವ ಅರ್ಪಿಸಿದರು. "54 Senior and Junior division Officercadets present on parade and ready for your inspection, Sir !" ("೫೪ ಮಂದಿ ಸೀನಿಯರ್ ಮತ್ತು ಜೂನಿಯರ್ ಡಿವಿಶನ್ ಆಫಿಸರ್-ಕ್ಯಾಡೆಟ್ಟುಗಳು ಪೆರೇಡಿನಲ್ಲಿ ಹಾಜರಿದ್ದು ನಿಮ್ಮ ವೀಕ್ಷಣೆಗೆ ಸಿದ್ಧರಾಗಿದ್ದಾರೆ, ಶ್ರೀಮಾನ್ !") ಇಷ್ಟು ಹೇಳಿ ಪುನಃ ಗೌರವ ಅರ್ಪಿಸಿ ಅದೇ ಚುರುಕುತನದಿಂದ ಹಿಂತಿರುಗಿ ಬಂದು ನಮ್ಮಿಂದ ಮುಂದೆ ನಮಗೆ ಬೆನ್ನು ಹಾಕಿ ನಿಂತರು.

ಈಗ ನಾವೆಲ್ಲರೂ ನಮ್ಮ ವರಿಷ್ಠ ಶಿಕ್ಷಣಾಧಿಕಾರಿಗಳ ವಶ ಇದ್ದೇವೆ. ಅವರು ನಮ್ಮನ್ನು ಸಾಮೂಹಿಕವಾಗಿಯೂ ವೈಯಕ್ತಿಕವಾಗಿಯೂ ವೀಕ್ಷಿಸುತ್ತಿದ್ದಾರೆ. ಉಸಿರಿಲ್ಲ, ಮೈದಾನದಲ್ಲಿ ಗಾಳಿಯೂ ಸಂಚರಿಸುತ್ತಿಲ್ಲ. ಇನ್ನು ಅಲುಗಾಟ. ಆಲಿಗಳ ಹೊರಳಾಟ ಎಲ್ಲಿಂದ ಬಂತು ?

"ಚಲಿಸಬೇಡಿ ! ನಂಬರ್ಸ್ ೧೨, ೫, ೩೩, ೫೧ !"

ಅಬ್ಬಾ, ಇವರ ಪರಿಗ್ರಹಣ ಸಾಮರ್ಥ್ಯವೇ !

"ನಾನು ೧ರಿಂದ ೨೮ರ ವರೆಗೆ ಇನ್‌ಸ್ಪೆಕ್ಟ್ ಮಾಡುತ್ತೇನೆ. ಉಳಿದವರನ್ನು ಸುಬೇದಾರ್ ಸಾಬ್ ಮುಂದುವರಿಸಿ !"

ಈ ಹುಕುಂ ನೀಡಿದವರೇ ನಂಬರ್ ೧ರೆಡೆಗೆ ಚಿಮ್ಮಿ ಬಂದರು. ಕಾಲಿನಿಂದ ನೆತ್ತಿವರೆಗೆ

ಸೂಕ್ಷ್ಮ ಮತ್ತು ವೈಯುಕ್ತಿಕ ಪರೀಕ್ಷೆ. ಆ ಕ್ಷಣವೇ ಖಚಿತ ತೀರ್ಮಾನದ ಉಚ್ಚಾರಣೆ. ಗಲ್ಲವನ್ನು ತೀಡಿ ನೋಡಿದರು. ಚಡ್ಡಿ ಸೊಂಟಪಟ್ಟಿಯನ್ನು ಅಲುಗಿಸಿದರು. ಕಾಲುಚೀಲ ಗಳ ಮಡಿಕೆಗಳನ್ನು ಪರೀಕ್ಷಿಸಿದರು.

"ಶೂಲೇಸ್ ಸರಿಯಾಗಿ ಕಟ್ಟಿಲ್ಲ. ಕಾಲುಚೀಲ ಕೊಳೆ. ಚಡ್ಡಿಗೆ ಇಸ್ತ್ರಿಯೇ ಇಲ್ಲ. ನಡುಪಟ್ಟಿ ಬಲು ಸಡಿಲ. ಬನಿಯನ್ ಏಕಿಷ್ಟು ಗಲೀಜು. ಗಡ್ಡ ಹೆರೆಯಂದೇ ದಿವಸ ವೆಷ್ಟಾಯಿತು. ತಲೆ ಕ್ಷೌರ ಇಂದೇ ಆಗತಕ್ಕದ್ದು."

ಭುಜ ಅಲುಗಿಸಿ, ಹೊಟ್ಟೆಗೆ ಮೆತ್ತಗೆ ಗುದ್ದಿ, ಮೊಳಕಾಲುಗಳನ್ನು ತಟ್ಟಿ ನಮ್ಮ ನಿಲವಿನ ಭಂಗಿಗಳನ್ನು ಸರಿಪಡಿಸಿದರು. ೧೫ ಮಿನಿಟುಗಳಲ್ಲಿ ಇವರು ಈ ಕ್ರಿಯೆಗಳನ್ನು ಮುಗಿಸಿ ಸ್ವಸ್ಥಾನಕ್ಕೆ ಮರಳುತ್ತಿದ್ದಂತೆಯೇ ಸುಬೆದಾರ್ ಅಬ್ದುಲ್ ಖಾದರರು ಅವರ ಕೆಲಸವನ್ನು ಇದೇ ಕೂಲಂಕಷತೆಯಿಂದ ಮುಗಿಸಿ ಅವರ ಸ್ಥಾನಕ್ಕೆ ಹಿಂತಿರುಗಿದರು.

"ಮಿತ್ರರೇ! ದಿನವೂ ಶೇವ್ ಅರ್ಜೆಂಟುಲ್ಲಿ ಕಡ್ಡಾಯ. ಈ ಸಾಯಂಕಾಲವೇ ನಿಮಗೆಲ್ಲ ತಲೆಕ್ಷೌರ ಆಗಲೇಬೇಕು, ನಿಮ್ಮ ಉಡುಪು ಮುಂತಾದ ವಿವರಗಳನ್ನು ಸುಬೆದಾರ್ ಸಾಹೇಬರು ಕೊನೆಯ ಪೀರಿಯಡ್ಡಿನಲ್ಲಿ ಹೇಳುತ್ತಾರೆ. ಈಗ ಪಿಟಿ. ಸುಬೆದಾರ್ ಸಾಬ್! ಮುಂದುವರಿಸಿ" ಪವರ್ಾರರು ಸಮಾರೋಪಿಸಿದರು.

ನಮ್ಮ ಯಾವ ವಿಧವಾದ ಪ್ರತಿಕ್ರಿಯೆಗೂ ಅಲ್ಲಿ ಎಡೆ ಇರಲಿಲ್ಲ. ಅವರು ಅದನ್ನು ನಿರೀಕ್ಷಿಸಿಯೂ ಇರಲಿಲ್ಲ. ಒಂದುಹುಕುಂ-ಒಂದುಕ್ರಿಯೆ ಇದು ಸೈನ್ಯದ ಪ್ರಧಾನ ಸೂತ್ರ.

ಬೆಟ್ಟವೇರಿದ ಸುಖಾನುಭವ

೧ರಿಂದ ೯ರವರೆಗೆ ಮೊದಲನೆಯ ಸ್ಕ್ವಾಡ್ ೧೦ರಿಂದ ೧೮ರ ವರೆಗೆ ಎರಡನೆಯ ಸ್ಕ್ವಾಡ್ ಹೀಗೆಯೇ ಮುಂದುವರಿದು ೪೬ರಿಂದ ೫೪ರ ವರೆಗೆ ಆರನೆಯ ಸ್ಕ್ವಾಡ್—ಈ ಪ್ರಕಾರ ನಮ್ಮನ್ನು ಆ ಕ್ಷಣವೇ ವಿಭಾಗಿಸಿದರು. ಒಬ್ಬೊಬ್ಬ ಎನ್‌ಸಿಓ ಒಂದೊಂದು ತಂಡದ ನಾಯಕತ್ವ ವಹಿಸಿಕೊಂಡ. ಹವಿಲ್ದಾರ್ ಸಂತಾನಂ ನಮ್ಮ ನಾಯಕ. ಅವನು ಬಂದು ನಿಂತದ್ದು ತಿಳಿಯುವ ಮೊದಲೇ "ಸ್ಕ್ವಾಡ್ ಡಬಲ್ ಮಾರ್ಚ್" ಎಂದು ನಮ್ಮನ್ನು ಓಡಿಸಿಕೊಂಡು ತಾನೂ ಪುಟನೆಗೆಯುತ್ತ ಹಿಂಬಾಲಿಸ ತೊಡಗಿದ. ಬರೆಯ ಓರೆಕೋರೆ ದಾರಿಗಳನ್ನು ಏರುತ್ತ ಸಾಗಿದೆವು. ಇಂಥ ದಾರಿಗಳಿಗೆ ಅಲ್ಲಿ ಕೊನೆಯೇ ಇಲ್ಲ. ಹಾಗಾಗಿ ಬೇರೆ ಬೇರೆ ಸ್ಕ್ವಾಡುಗಳು ಬೇರೆ ಬೇರೆ ದಾರಿಗಳಲ್ಲಿ ಗಮಿಸುತ್ತಿದ್ದಂತೆ ದೂರದಿಂದ—ಅಂದರೆ ನಾವು ಮೊದಲು ಒಂದುಗೂಡಿದ್ದ ಆಟದ ಮೈದಾನದ ತಳದಿಂದ—ನೋಡಿದವರಿಗೆ ಹಲವಾರು ಹುಳುಗಳು ಹರಿದುಕೊಂಡು ಮೇಲೇರುತ್ತಿರುವಂತೆ ಭಾಸವಾಗಿರಬೇಕು. ಪವರ್ಾರರೂ ಖಾದರರೂ ಅಲ್ಲೆಲ್ಲೋ ಅವಿತು ನಮ್ಮ ಚಲನವಲನಗಳನ್ನು ದುರ್ಬೀನು ಕಣ್ಣುಗಳಿಂದ ನೋಡುತ್ತಿದ್ದಾರೆ ಎಂದು ನನ್ನ ಮನಸ್ಸು ನುಡಿಯುತ್ತಿತ್ತು.

ಬೆಟ್ಟ ಏರುವುದು ಏರುಗರನ್ನು ನೋಡಿದಷ್ಟು ಸುಲಭವಲ್ಲ. ಅದೂ ಓಡಿಕೊಂಡು ಹತ್ತುವುದು ಎಂಥ ಸುಖಾನುಭವವೆಂಬುದನ್ನು ಅನುಭವಿಸಿಯೇ ತಿಳಿಯಬೇಕಷ್ಟೆ. ವೆಲ್ಲಿಂಗ್ಟನ್ನಿನ ಚಳಿ ಈಗೆಲ್ಲಿ? ಗುಂಡಿಗೆಯ ಬಡಿತ ಸ್ಪಷ್ಟವಾಗಿ ಕಿವಿಯೊಳಗೆ ಮೊಳಗು

ತ್ತಿತ್ತು ಮೂಗಿನ ಹೊಳ್ಳೆಗಳು ಅಗಲವಾದುವು—ಆದರೆ ಸಾಕಷ್ಟು ಗಾಳಿಯನ್ನು ಪುಪ್ಪುಸಗಳಿಗೆ ಪೂರೈಸಲು ಸಮರ್ಥವಾಗಲಿಲ್ಲ; ಅಥವಾ ಸಾಕಷ್ಟು ಗಾಳಿಯೇ ಅಲ್ಲಿರಲಿಲ್ಲವೇ ?

ನನ್ನ ತಂಡದ ಒಂಬತ್ತು ಮಂದಿಯಲ್ಲಿ ನಾಗರಾಜನ್ ಮತ್ತು ಮೇನನ್ ಸಹ ಸೇರಿದ್ದರು. ಈ ಸ್ವಯಂಸೇವಿಂತ ಪಂಁಂದಾಳುಗಳಿಗೆ ಪಿಟಿಯು ಓಟ ಪದ ಜಟಾಕಿ ತಟಪಟಾಯಿಸಿದಂತೆ ಅಲ್ಲ ಎಂಬುದು ವೇದ್ಯವಾಗಿರಬೇಕು—ತಲೆ ಅಡಿ ಹಾಕಿ ತುಟಿ ಚಾಚಿ ದೇಪಗಳ ಮೇಲೆ ಸ್ವಾಧೀನವಿಲ್ಲದವರಂತೆ ದಾಪುಗಾಲು ಹಾಕುತ್ತಿದ್ದಾಗ ಸಂತಾನಂ ಅವರನ್ನು ಪುರಿದುಂಬಿಸಿದ. ಮುಗ್ಗರಿಸತೊಡಗಿದವರಿಗೆ ಕುಂಟುತ್ತಿದ್ದವರಿಗೆ ಪ್ರೋತ್ಸಾಹದ ಚುಚ್ಚುಮದ್ದು ನೀಡಿದ.

"ನಿಮ್ಮ ಪ್ರಾಯ ಅನುಭವಗಳನ್ನು ಗಮನಿಸುವಾಗ ನಿಮ್ಮ ಈಗಿನ ಸಾಧನೆ ಅಭಿನಂದನಾರ್ಹವಾಗಿದೆ. ಬೇಕಾದದ್ದು ಇನ್ನು ಸ್ವಲ್ಪ ಪ್ರಯತ್ನ. ನಿಮಗೆ ಅದು ಸಾಧ್ಯ" ಎಂದು ಕೆಲವರಿಗೆ ಹೇಳಿದರೆ ಇನ್ನು ಕೆಲವರಿಗೆ "ಏನಪ್ಪ ಸುಂದರ ತರುಣಾ! ಈ ಮುಂಗಳ ಪ್ರಾತಃಕಾಲ ನಿನ್ನ ಚಿಂತೆ ಯಾರನ್ನು ಕುರಿತು ಇದೆ" ಎಂದು ಗೇಲಿ ಮಾಡಿದ. (ಮರಿಕೆಯ ಬಳಿಯ ಮಲಾರ ಗುಡ್ಡವನ್ನು ಅವಳೊಡನೆ ಅಂದು ಗಮಿಸಿದ ದೃಶ್ಯ ನನ್ನ ಮನಃಪಟಲದಲ್ಲಿ ಮಿಂಚಿದುದು ಸದ್ಯ ಇವನಿಗೆ ಕಾಣಲಿಲ್ಲವಲ್ಲ ಎಂದು ಧೈರ್ಯ ತಳೆದೆ.)

ಅಂತೂ ಇಂತೂ ಮೇಲಿನ ಮಟ್ಟಸ ದಾರಿಯನ್ನು ತಲಪುವಾಗ ಹೊಟ್ಟೆ ತಾಳದ ಗತಿ ಹೆಚ್ಚು ತೀವ್ರವೋ ಗುಂಡಿಗೆಯ ಬಡಿತದ ದರ ಅಧಿಕವೋ ಕಾಲುಗಳ ಮೀನಖಂಡಗಳ (ಸಿಂಗಾರ ಹೊಟ್ಟೆ) ಸೆಳೆತ ಹೆಚ್ಚೋ ತಿಳಿಯಲಿಲ್ಲ. ಒಂದು ಗಲಾಸ್ (ತತ್ಸಮ : ಗ್ಲಾಸ್) ಹೊಗೆ ನೀರನ್ನು ಟೀ ಎಂದು ಭ್ರಮಿಸಿ, ಬೇರೆ ಏನೂ ದೊರೆಯದ ಕಾರಣದಿಂದ, ಆ ಶುಭ ಪ್ರಾತಃಕಾಲ ಹೀರಿ ಬಂದಿದ್ದ ಸುಖಜೀವಿಗಳಿಗೆ ಈ ಅನುಭವ ಸಂತೋಷದಾಯಕವಾಗಿರಲಿಲ್ಲ.

ಮಟ್ಟಸದಾರಿಯಲ್ಲಿ ಏನಾದರೂ ವಿಶ್ರಾಂತಿ ನೀಡುವನೋ ಎಂದು ಹಾರೈಸಿದ್ದರೆ ಅದೇನೂ ದಿಟವಾಗಲಿಲ್ಲ. ಡಬಲ್ ಮಾರ್ಚ್ ಇದ್ದದ್ದು ಈಗ ಕ್ವಿಕ್ ಮಾರ್ಚ್ ಆಗಿ (ಓಟ ನಡಿಗೆಯಾಗಿ) ಬದಲಾಯಿತು. ರೂಪವ್ಯತ್ಯಾಸ ತಾಪತ್ರಯ ತೀವ್ರತೆಯನ್ನು ಕಡಿಮೆ ಮಾಡಲಿಲ್ಲ, ಹೋಲಿಕೆಯಿಂದ ಈಗ ವಿಶ್ರಾಂತಿ ಅಷ್ಟೆ. ಓಡುವಾತಂಗೆ ನಡಿಗೆಯೇ ವಿಶ್ರಾಂತಿ, ನಡೆವಾತಂಗೆ ಮಿಗೆ ಕೂರುವಿಕೆಯೇ ವಿಶ್ರಾಂತಿ, ಮೇಣ್ ಕೂತವಂಗೆ ಮಲಗಿರುವಿಕೆಯೇ ಮಹಾವಿಶ್ರಾಂತಿ. ಮಲಗಿದಾತಂಗೆ ನಿದ್ರೆಯೇ ತಾ ವಿಶ್ರಾಂತಿ, ನಿದ್ರಿಪಾತಂಗೆ ದೀರ್ಘ ನಿದ್ರೆಯೇ ಚಿರ ವಿಶ್ರಾಂತಿ ಕಣಾ (ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ!)

ಆದರೆ ಈ ಆರಾಮವೂ ಹೆಚ್ಚು ಕಾಲ ಮುಂದುವರಿಯಲಿಲ್ಲ. ಆಗಲೇ "ಡಬಲ್ ಮಾರ್ಚ್" ಆಜ್ಞೆ ಅರಚಿದ. ಹೀಗೆ ಐದು ಮಿನಿಟುಗಳ ಓಟ ಮತ್ತೆ ಎರಡು ಮಿನಿಟುಗಳ ನಡಿಗೆ—ಓಡಿ ನಡೆದು ಓಡಿ ನಡೆದು ಎಲ್ಲೆಲ್ಲೋ ಸುತ್ತಿ ಪುನಃ ಮೈದಾನಕ್ಕೇ ಮರಳುವಾಗ ಗಂಟೆ ೮–೩೦ನ್ನು ಸಮೀಪಿಸುತ್ತಿತ್ತು. ಸೂರ್ಯಕಿರಣಗಳು ಶುಭ್ರವಾಗಿ

ನೇರವಾಗಿ ನಮ್ಮನ್ನು ತಿವಿಯುತ್ತಿದ್ದುವು. ದಟ್ಟ ವನರಾಶಿಗಳಿಂದ ಆವೃತವಾದ ಪರ್ವತಗಳು ಈ ಕ್ರೌರ್ಯಕ್ಕೆ ಮೂಕಸಾಕ್ಷಿಯಾಗಿ ನಿಂತಿದ್ದುವು. ಇನ್ನಾದರೂ ಬಿಡುಗಡೆ ದೊರೆತೀತೇ ?

ಅಷ್ಟು ವೇಳೆಗೆ ಉಳಿದ ಎಲ್ಲ ಸ್ಕ್ವಾಡುಗಳೂ ಮೈದಾನದಲ್ಲಿ ಸಂಗಮಿಸಿದುವು. ಪುನಃ ನಮ್ಮನ್ನು ಕ್ರಮಬದ್ಧವಾಗಿ ನಿಲ್ಲಿಸಿ "ಇನ್ನೈದು ಮಿನಿಟು ಉಸಿರಾಟದ ವ್ಯಾಯಾಮ" ಎಂದರು. ಉಸಿರಾಟವೂ ಒಂದು ವ್ಯಾಯಾಮ, ಎಂದೇ ಒಂದು ಶಿಕ್ಷೆ ಇಲ್ಲಿ. ಈ ಮಿಲಿಟೆರಿಯವರಿಗೆ ಜೀವನದ ಒಂದೊಂದೂ ಸುಂದರ ಪ್ರಿಯಕರ ಕ್ರಿಯೆಯನ್ನೂ ಕವಾಯತಾಗಿ ಮಾರ್ಪಡಿಸಿ ಆ ಶಿಕ್ಷೆಗೆ ನಮ್ಮನ್ನು ಒಳಪಡಿಸಿ ನಮ್ಮ ಸಂಕಟವನ್ನು ನೋಡಿ ಕ್ರೂರಾನಂದ ಪಡೆಯುವ ಕಲೆ ಕರಗತವಾಗಿದೆ ಎಂದು ಮನಸ್ಸು ಮಿಡಿಯಿತು.

ಎರಡು ಕಾಲುಗಳನ್ನೂ ಕಿಸಿದು ನಿಂತಾಯಿತು. ಉಚ್ಛ್ವಾಸಕ್ಕೆ ಆಜ್ಞೆ ದೊರೆತೊಡನೆಯೇ ಕೈಗಳನ್ನು ಎಲ್ಲರೂ ಏಕಕಾಲದಲ್ಲಿ ನೇರವಾಗಿ ಚಾಚಿ ಎದೆ ಅಗಲವಾಗುವಂತೆ ಮೇಲೆತ್ತಿ ಹಿಡಿದಿರಬೇಕು. ಏಕಕಾಲೀಯತೆಯನ್ನು ಪಾಲಿಸದವರಿಗೆ ಮೂತ್ರಿ ಚಲೋ ಶಿಕ್ಷೆ ! ಮುಂದಿನ ಆಜ್ಞೆ ತನಕ ಕೈಗಳನ್ನು ಹಾಗೆಯೇ ಹಿಡಿದುಕೊಂಡಿರಬೇಕು. ಅಂದರೆ ಉಸಿರನ್ನು ಫುಪ್ಫುಸಗಳೊಳಗೇ ಸೆರೆಹಿಡಿದಿರಬೇಕು. ಮುಂದಿನ ಆಜ್ಞೆ, ಕೈಗಳು ಏಕಕಾಲೀಯವಾಗಿ ಕೆಳಗೆ ಬರಬೇಕು, ಜೊತೆಯಲ್ಲೇ ನಿಃಶ್ವಾಸ. ಹೀಗೆ ಮಾಡುತ್ತಿದ್ದಾಗಲೇ ಸುಬೆದಾರ್ ಅಬ್ದುಲ್ ಖಾದರರು ದೀರ್ಘ ಬಿಗಿಲನ್ನು ಊದಿಯೇಬಿಟ್ಟರು. ಅಂದರೆ ನಮ್ಮ ಬಂಧನದ ಸಂಕೋಲೆಗಳನ್ನು ತಾತ್ಕಾಲಿಕವಾಗಿ ಬಿಡಿಸಿದರು : "ಈಗ ಉಪಾಹಾರದ ಬಿಡುವು. ೯–೩೦ ಗಂಟೆಗೆ ಸರಿಯಾಗಿ ನೀವು ತುಪಾಕಿಖಾನೆಯ ಬಳಿ ನಿಂತಿರತಕ್ಕದ್ದು."

ಈಗ ಎಲ್ಲರೂ ಮೊದಲಿಗಿಂತಲೂ ವೇಗವಾಗಿ ಅದೇ ಬರೆಯ ಏರುದಾರಿಗಳನ್ನು ಜಿಗಿದು ನೆಗೆದು ಮಾಯವಾದೆವು. ಇಂಥ ಓಟಗಳಲ್ಲಿ ನಾನು ಯಾವಾಗಲೂ ಮೊದಲಿಗ. ಸ್ವಾತಂತ್ರ್ಯ ನೀಡುವ ಉಮೇದು ಮಾಡಿಸದ ಸಾಹಸವಿಲ್ಲ. ಪಂಗು ಲಂಘಯತೇ ಗಿರಿಂ.

ಖಾಲಿ ಭರಣಿಗಳ ನೆರವಿನಿಂದ ಉಪವಾಸ ಮುಕ್ತಾಯ

ಆಫಿಸರರ ಮೆಸ್ಸಿಗೆ ಅದು ನಮ್ಮ ಎರಡನೆಯ ಪ್ರಯಾಣ. ಮೈದಾನದಿಂದ ಅಲ್ಲಿಗೆ ಇದ್ದ ಅರ್ಧ ಮೈಲನ್ನು ಮೊದಲು ಮುಗಿಸಿದವ ನಾನು. ಕೂಡಲೇ ಪಕ್ಕದ ಬಚ್ಚಲು ಮನೆಗೆ ಹೋಗಿ ಕೈ ಮುಖ ತೊಳೆದು ತಲೆಕೂದಲು ಬಾಚಿ ಜಗಲಿಗೆ ಬಂದೆ. ಊಟದ ಮನೆಗೆ ಪ್ರವೇಶಿಸಲೇ ? ಅಲ್ಲಿ ಆ ಮೊದಲೇ ಬಂದು ಸುಖಾಸೀನರಾಗಿ ಆಯುಧಪಾಣಿಗಳಾಗಿ ಉಪವಾಸ ಮುಕ್ತಾಯ (ಬ್ರೇಕ್‌ಫಾಸ್ಟ್) ಸಮಾರಂಭವನ್ನು ಏಕಾಗ್ರತೆಯಿಂದ ಆಚರಿಸುತ್ತಿದ್ದ ಹಲವಾರು ಆರ್ಮಿ ಆಫಿಸರರನ್ನು ಕಂಡೆ. ಅವರಲ್ಲಿ ಮೇಜರರೂ ಇದ್ದರು. ಈ ಪರಿಸ್ಥಿತಿಯಲ್ಲಿ ನಾನೊಬ್ಬನೇ ನುಗ್ಗಿದರೆ ಅವರೇನೆಂದುಕೊಂಡಾರು ? ಇವನೊಬ್ಬ ಹೊಟ್ಟೆಬಾಕ. ಹಸುರು ಕಂಡ ಪರದೇಶಿಯಂತೆ ವರ್ತಿಸುತ್ತಿದ್ದಾನೆ, ಅನಾಗರಿಕ ಎಂದೆಲ್ಲ ಭಾವಿಸಿದರೆ ? ಅಷ್ಟರಲ್ಲೇ ಭಾರಕಾಯರಾದ ರಹಮಾನ್ ಮತ್ತು ಕೃಷ್ಣನ್‌ರೂ ನರಪೇತಲನಾದ ರಾಜುವೂ ಓಡಿ ಓಡಿ ಬಂದರು. ನನಗೆ ಮೂಡಿದಂಥ ಯಾವ ಪ್ರಶ್ನೆಗಳೂ ಅವರಿಗೆ ಬಂದಂತೆ ಅನಿಸಲಿಲ್ಲ. ಹೋಗಲಿ, ಮುಸುಡುಗಳನ್ನು ತೊಳೆದುಕೊಳ್ಳ

ಬೇಕೆಂಬ ಪ್ರಜ್ಞೆಯೂ ಇರಲಿಲ್ಲ. ಕೆದರಿದ ಕೂದಲು, ಅಳಕಗಳೆಡೆಯಿಂದ ಅರಿಸುತ್ತಿದ್ದ ಬೆವರಧಾರೆ, ನೆರಿಗಟ್ಟಿದ್ದ ಬನಿಯನ್, ಸಡಿಲವಾಗಿದ್ದ ಚಡ್ಡಿ, ಅಸ್ತವ್ಯಸ್ತಕಾಲುಚೀಲಗಳು, ಅರೆಬಿಚ್ಚಿಕೊಂಡಿದ್ದ ಶೂಲೇಸುಗಳು ಇಂಥ ಸರ್ವಾಂಗಸುಂದರ ಮಹಾಶಯರು ಧಿಡೀರನೆ ಊಟದ ಮನೆಯನ್ನು ನುಗ್ಗಿ ನೇರವಾಗಿ ಖಾಲಿ ಕುರ್ಚಿಗಳೆಡೆಗೆ ಧಾವಿಸಿ ಅವುಗಳ ಮೇಲೆ ಕೆಡೆದರು. ಅವರ ಹಿಂದೆ ಪ್ರವೇಶಿಸಿದ ನನಗೆ ಆರ್ಮಿ ಆಫಿಸರರ ಮುಖಗಳ ಮೇಲೆ ಮೂಡಿದ್ದ ತಿರಸ್ಕಾರಭಾವ ಚೆನ್ನಾಗಿ ಕಂಡಿತು. ನಾನು ''ಗುಡ್‌ಮಾರ್ನಿಂಗ್ ಸರ್ಸ್'' ಎಂದು ನನ್ನೊಳಗೇ ಅಂದುಕೊಂಡದ್ದು ಅವರಿಗೆ ಕೇಳಿಸಿತೋ ಇಲ್ಲವೋ ತಿಳಿಯದು. ಆದರೆ ಪವಾರ್‌ರರ ''ಗುಡ್‌ಮಾರ್ನಿಂಗ್ ಜಂಟಲ್‌ಮೆನ್'' ಸ್ವಾಗತದಲ್ಲಿದ್ದ ತೀಕ್ಷ್ಣ ನಾನುಮೋದನೆಯ ಧ್ವನಿ ನನಗೆ ಅರ್ಥವಾಗದಿರಲಿಲ್ಲ. ಸಾಲಿನ ಕೊನೆಯ ಕುರ್ಚಿಯ ಮೇಲೆ, ಉಳಿದವರಿಗಿಂತೆಲ್ಲ ದೂರಹೋಗಿ ಕುಳಿತೆ.

ಕಾರ್ನ್ ಫ್ಲೇಕ್ಸಿನ ಭರಣಿಗಳು, ಹಾಲಿನ ಕೆಟಲುಗಳು, ಸಕ್ಕರೆ ಬಟ್ಟಲುಗಳು ಇವನ್ನೆಲ್ಲ ಯುಕ್ತಪ್ರಮಾಣದಲ್ಲಿ ಮೇಜಿನ ಮೇಲೆ ಅಲ್ಲಲ್ಲಿ ಇಟ್ಟಿದ್ದರು. ಆಫಿಸರರು ಅವುಗಳಿಂದ ಮಿತಪ್ರಮಾಣದಲ್ಲಿ ತಮ್ಮ ಪ್ಲೇಟುಗಳಿಗೆ ಫ್ಲೇಕ್ಸನ್ನೂ ಹಾಲನ್ನೂ ಸುರುವಿಕೊಂಡು ರುಚಿಗೆ ತಕ್ಕಂತೆ ಸಕ್ಕರೆ ಮಿಶ್ರಿಸಿ ಪೋರಿಡ್ಜ್ (ಗಂಜಿ) ತಯಾರಿಸಿಕೊಂಡು ಹೀರಬೇಕು—ಇದು ಅಲ್ಲಿಯ ಕ್ರಮ. ನನ್ನ ಸೀಟಿನ ಎದುರು ಮೇಜಿನ ಮೇಲಿದ್ದದ್ದು ಅಲಂಕಾರಸಾಮಗ್ರಿಗಳು ಪುಷ್ಪ ಕರಂಡಕಗಳು, ಬೂದಿ ಕರಡಿಗೆಗಳು, ನೀರು ತುಂಬಿದ್ದ ಪಾರದರ್ಶಕ ಹೂಜಿಗಳು, ಬಲೆಸೌಟುಗಳು (ಇವುಗಳ ಉಪಯೋಗವೇನು ?) ಇತ್ಯಾದಿ. ಅಂತೂ ಒಂದೇ ಒಂದು ಪೋರಿಡ್ಜ್ ಸಾಧನವೂ ಅಲ್ಲಿರಲಿಲ್ಲ. ಮೇಲಿನವರು ಬಡಿಸಿಕೊಂಡು ಆ ಭರಣಿಗಳನ್ನು ನನ್ನೆಡೆಗೆ ಸರಿಸಬೇಕು. ಅಲ್ಲಿಯ ತನಕ ನಾನು ಪುಷ್ಪಕರಂಡಕಗಳ ಸೌಂದರ್ಯ ಸಮೀಕ್ಷಕನಾದೆ, ಅವೆಷ್ಟು ಬಣ್ಣಗಳು, ಅದೆಂಥ ಸಾಮರಸ್ಯ. ಆದರೂ ಒಂದಿನಿತಾದರೂ ಪರಿಮಳ ಬೇಕೇ ? ಪರಿಮಳವೇ ಇರದ ಈ ಸೌಂದರ್ಯಸಂಗ್ರಹಣೆಯೂ ಒಂದು ವಿಶಿಷ್ಟಸಾಹಸವೇ ? ಒಂದೊಂದು ಇಂಚೂ ಆರ್ಮಿಯೇ ! ಫ್ಲೇಕ್ಸಿನ ಭರಣಿಗಳು ನನ್ನಲ್ಲಿ ಬರುತ್ತಿದ್ದುವೋ ಏನೋ ಅಷ್ಟರಲ್ಲಿಯೇ ಖಾಲಿ ಕುರ್ಚಿಗಳೆಲ್ಲವೂ ಭರ್ತಿಯಾಗಿ ಹೋಗಿದ್ದುವು. ಹೀಗೆ ಒಂದೊಂದು ಕುರ್ಚಿ ಮುಂದೆಯೂ ಕಟ್ಟೆಪೂಜೆ ಮುಗಿಸಿ ಅವೆಲ್ಲವೂ ಬಂದು ನನ್ನ ಕೊನೆಯ ಸೀಟಿನಲ್ಲಿ ಸಂಗಮಿಸಿದಾಗ ಖಾಲಿ ಪಾತ್ರೆಗಳನ್ನು ನೋಡುವ ಸೌಭಾಗ್ಯ ನನ್ನ ಪಾಲಿನದಾಯಿತು. ಮೊದಲಿನವರು ಭರಣಿಗಳನ್ನೇ ತಮ್ಮ ತಟ್ಟೆಗಳ ಮೇಲೆ ಸುರುವಿಕೊಂಡಿದ್ದರು. ಬ್ಯಾರರುಗಳಿಗೆ ಹೊಸತಾಗಿ ಫ್ಲೇಕ್ಸನ್ನು ತರಲು ಹೇಳಿದರೆ ಅಡುಗೆ ಮನೆಗೆ ಹೋಗಿಬಂದರು ''ಕೋಟಾ ಮುಗಿದುಹೋಯ್ತು ಸಾಬ್ !'' ಎಂದು ಆಶ್ವಾಸನೆ ನೀಡಿದರು.

ಈ ಪ್ರಕಾರ ಪೋರಿಡ್ಜ್ ಸವಾರಿ ಮುಗಿಯಿತು. ಹೂಜಿಯ ಹಸಿ ನೀರನ್ನು ಹೀರಿ ಮುಂದಿನ ಸವಾರಿಗೆ ದಾರಿಕಾದೆ. ಆಮ್ಲೆಟ್, ಲಿವರ್, ಕಾಳು ಮೆಣಸಿನಪುಡಿ, ಕೆಚಪ್ ಸಮಾರಾಧನೆ ನಡೆಯಿತು. ಇವುಗಳ ಪೈಕಿ ಕೊನೆಯ ಎರಡು ಮಾತ್ರ ನನಗೆ ವರ್ಜ್ಯವಲ್ಲ. ಆದರೆ ಒಂದು ಮಹಾ ಖಾರ ಇನ್ನೊಂದು ಅತಿ ಹುಳಿ ! ಆದ್ದರಿಂದ ಪುನಃ ಹಸಿನೀರಿನ ಹುಸಿ ಆಹಾರ. ವೆಜಿಟೇರಿಯನ್‌ಗೆ ಏನೆಂದು ಬ್ಯಾರರನನ್ನು ಕೇಳಿದಾಗ ಅವರಲ್ಲೊಬ್ಬ

ಒಳಗೆ ಹೋಗಿ ಹುರಿದ ಎರಡು ಮುಳಕಗಳನ್ನೂ ಅರೆಬೇಯಿಸಿದ್ದ ಎರಡು ಆಲೂಗೆಡ್ಡೆ ತುಂಡುಗಳನ್ನೂ ತಂದು ನನ್ನ ಎದುರಿಟ್ಟ. ಒಂದೊಂದು ತುಂಡಿಗೆ ಒಂದೊಂದು ಮುಳಕ. ಇನ್ನು ಆಲೂಗೆಡ್ಡೆ ತುಂಡುಗಳು ಅಷ್ಟೂ ಒಂದೇ ತುಂಡಿಗೆ. ಲಿವರ್, ಆಮ್ಲೆಟ್ ತಿಂದು ತೇಗಿದ ಮಿತ್ರರಿಗೆ ಮುಳಕಗಳೂ ದೊರೆತುವು. ಬ್ಯಾರರಸಿಗೆ ನನ್ನ ಅವಸ್ಥೆ ಮರುಕ ಹುಟ್ಟಿಸಿತ್ತೋ ಏನೋ ಕಾಫಿ ಕೆಟಲನ್ನು ತಂದು ನನ್ನ ಎದುರೇ ಇಟ್ಟ. ಆದ್ದರಿಂದ ಒಂದು ಕಪ್ ಪೂರ್ತಾ ಕಾಫಿ ಬಗ್ಗಿಸಿಕೊಳ್ಳುವ ಅಸಾಮಾನ್ಯಯೋಗ ನನ್ನದಾಯಿತು.

ನಮ್ಮ ಕಾಫಿತೋಟದ ಉತ್ಕೃಷ್ಟ ಪೀಬೆರಿ ಕಾಫಿ ಬೇಳೆ; ಆವಳೇ ಅದನ್ನು ಹಾಳತ ವಾಗಿ ಹುರಿಯಬೇಕು; ಮುಂದೆ ಬೇಕಾದಷ್ಟು ಬೇಳೆಯನ್ನು ಮಾತ್ರ ಗ್ರೈಂಡರಿನಲ್ಲಿ ಪುಡಿ ಮಾಡಿ ಫಿಲ್ಟರಿಗೆ ಹಾಕಬೇಕು; ಮನೆಯಲ್ಲೇ ಕರೆದ ಎಮ್ಮೆ ಹಾಲನ್ನು ಉಗಿ ಉಷ್ಣದಲ್ಲಿ ಕಂದಿಸಿ ಕಾಫಿ ಡಿಕಾಕ್ಷನ್ನಿಗೆ ಯುಕ್ತ ಪ್ರಮಾಣದಲ್ಲಿ ಮಿಶ್ರಮಾಡಿ ಸಕ್ಕರೆ ಹಾಕಿ ಈ ಕಲಿಯುಗದ ಅಮೃತವನ್ನು ನನ್ನ ಎದುರು ಇಡಬೇಕು. ಕಂದಿಯುತ್ತಿರುವ ಈ ಕಾಫಿ ಯನ್ನು ಸೇವಿಸುವುದೂ ಒಂದು ಕಲೆ. ಲೋಟಾದ ಅಂಚನ್ನು ಮಾತ್ರ ನೀವು ಮುಟ್ಟ ಬಲ್ಲಿರಿ. ಅರೆತೆರೆದ ತುಟಿಗಳೆಡೆಯಿಂದ ಒಂದೆರಡು ಹನಿ ಕಾಫಿ ಹೀರುವಾಗ, ಹಾಗೆ ಹೀರಿದ ಅಂಶ ನಾಲಗೆಗೂ ಅಂಗುಳಕ್ಕೂ ನಡುವೆ ಒಂದು ತೆಳು ಫಿಲಂ ಆಗಿ ಹರಡಿರುವಾಗ, ಆದರೆ ಕಾವು ಅಂಗುಳವನ್ನು ಚುರುಚುರು ಸುಡುತ್ತಿರುವಾಗ, ಕಿರುನಾಲಗೆ ಕಾಫಿ ಸಿಹಿಯ ಹಿನ್ನೆಲೆಯ ಪ್ರಿಯಕರ ಕಹಿಯನ್ನು ಮೆಚ್ಚುತ್ತಿರುವಾಗ, ಕಾಫಿಯ ಸ್ವಾರಸ್ಯಕರ ಅಂಶವಾದ ಪರಿಮಳ ಘ್ರಾಣೇಂದ್ರಿಯವನ್ನು ಪ್ರಚೋದಿಸಿ ಮಿದುಳನ್ನು ಸಮಾಧಿಸ್ಥಿತಿಗೆ ಕೊಂಡೊ ಯ್ದಾಗ ಸಾಯುಜ್ಯ ಎಂದು ಬೇರೆ ಒಂದು ಸ್ಥಿತಿಯಿರಬಹುದೇ ಎಂದು ನಿಮಗೆ ಸಂಶಯ ಬಂದರೆ ಆಶ್ಚರ್ಯವಿಲ್ಲ. ಆ ಗಳಿಗೆಯಲ್ಲಿ ಮನಸ್ಸು ರಸ (ಕಾಫಿ) ಮೂರ್ಛೆಯಲ್ಲಿರುವುದು. ಇಂಥ ಕಾಫಿಯನ್ನು ಸೇವಿಸುವ ಕ್ರಿಯೆಗೆ ಅರ್ಥಶಾಸ್ತ್ರದ ತಗ್ಗುತ್ತಿರುವ ತೃಪ್ತಿಯ ಸಿದ್ಧಾಂತದ (Law of diminishing returns) ಅನ್ವಯ ಅರ್ಥಹೀನವಾಗುವುದು. ಕುಡಿದು ಮುಗಿದ ಮೇಲೆಯೂ ಇನ್ನಷ್ಟು ಇರಬಾರದಿತ್ತೇ ಎನ್ನುವ ಭಾವವೇ ಉಳಿದಿರು ವುದರಿಂದ ಇದಕ್ಕೆ ಬೇರೆಯೇ ಹೆಸರನ್ನು ಸೂಚಿಸಬೇಕಾದೀತು.

ಇಂಥ ಕಾಫಿಯ ಮಾನಕದಿಂದ ಅಳೆಯುವಾಗ ಆಫಿಸರರ ಮೆಸ್ಸಿನ ಕಾಫಿ ಹೇಗಿತ್ತು? ಆರ್ಮಿಯಲ್ಲಿ ರುಚಿ ಮುಖ್ಯವಲ್ಲ, ಕರ್ತವ್ಯವೇ ಪ್ರಧಾನ. ಬಿಸಿಯೊಂದೇ ಅದರ ಪ್ರಧಾನ ಗುಣ, ಸಕ್ಕರೆ ಬೆರೆಸಿಕೊಂಡೆ. ಇದೇ ಕಾಫಿ, ಇದೇ ಕಲಿಯುಗದ ಅಮೃತ ಎಂದು ಸ್ವಯಂ ಸೂಚನೆ ಮಾಡಿಕೊಂಡೆ, ಹೀರಿಯೇಬಿಟ್ಟೆ! ಇಲ್ಲಿಗೆ ಬ್ರೇಕ್‌ಫಾಸ್ಟ್ ವಿಧಿ ಮುಗಿಯಿತು. ಗಂಟೆ ೯-೧೫ ದಾಟಿತ್ತು.

ಆರ್ಮಿ ವೇಷ ತೊಟ್ಟ ಸುಂದರಾಂಗರು

ಮೆಸ್ಸಿನಿಂದ ಎದ್ದವರ ಪೈಕಿ ಮೊದಲಿಗ ನಾನಲ್ಲ. ಆರೇಳು ಮಂದಿ ಆ ಮೊದಲೇ ಕಾಫಿ ಹೀರಿಯೋ ಹೀರದೆಯೋ ಹೊರಗೆ ಧಾವಿಸಿದ್ದರು. ಮೇಜರ್ ಮೊದಲಾದ ಆರ್ಮಿ ಆಫಿಸರರು ಹೋಗಿ ಕಾಲುಗಂಟೆಯೇ ಮುಗಿದಿತ್ತು. ಇನ್ನು ತಡವಾದರೆ ತುಪಾಕಿಯ ಮುಂದೆಯೇ ನಿಲ್ಲಿಸಿಯಾರೆಂದು ಗಾಬರಿಯಿಂದ ನಾನೂ ಹೊರಗೆ ಓಡಿದೆ. ಒಂದು ಕಣಿವ

ಇಳಿದು ಎದುರಿನ ದಿಬ್ಬ ಏರಿ ಮುಂದೆ ಗಮಿಸಿದರೆ ತುಪಾಕಿಖಾನೆ ಸಿಕ್ಕುವುದೆಂದು ತಿಳಿಯಿತು, ಉಳಿದಿರುವ ಕೆಲವೇ ಮಿನಿಟುಗಳಲ್ಲಿ ಆ ದೂರ ಕ್ರಮಿಸುವುದು ನನ್ನಿಂದ ಸಾಧ್ಯವಾದೀತೇ ? "ರಾವ್ ಸ್ವಲ್ಪ ನಿಲ್ಲಿ. ನಾನೂ ನಿಮ್ಮೊಡನೆ ಬರುತ್ತೇನೆ" ಬಾಲಕೃಷ್ಣನ್ ಯಾಚನೆ.

"ಹೊತ್ತಾಗಿ ಹೋಯಿತು. ಬನ್ನಿ ನನ್ನ ಹಿಂದೆಯೇ" ಎಂದವನೇ ಕಣಿವೆ ಗುಂಡಿಗೆ ಧಡಧಡನೆ ಧುಮುಕಿದೆ.

೯-೩೦ ಗಂಟೆಯ ಬಿಗಿಲನ್ನು ಖಾದರ್ ಊದಿ ನಮ್ಮನ್ನು ಕೂರೆದಾಗ, ಬಡಿದೆಚ್ಚರಿಸಿದಾಗ. ತುಪಾಕಿಖಾನೆಯ ಎದುರು ನಿಂತಿದ್ದವರು ಒಟ್ಟು ಹತ್ತು ಮಂದಿ—ಇನ್ನುಳಿದ ನಲವತ್ತನಾಲ್ಕುಮಂದಿ ಗೈರುಹಾಜರ್. ಎನ್‌ಸಿಓಗಳು ಶತಪಥ ಕುಣಿದರು "ಡಬಲ್ ಅಪ್" ಎಂದು ಅರಚಿದರು. ಖಾದರ್ ತಡವಾಗಿ ಬಂದವರನ್ನು ವೈಯಕ್ತಿಕವಾಗಿ "ಯಾಕೆ ತಡ" ಎಂದು ಕಠೋರವಾಗಿ ಥಳಿಸಿ ಅವರ ಉತ್ತರವನ್ನು ಅಪೇಕ್ಷಿಸದೇ ಪ್ರತ್ಯೇಕವಾಗಿ ನಿಲ್ಲಿಸುತ್ತಿದ್ದರು. ಪವರ್ಸಾರರಾದರೋ ಕೆಂಡದ ಉಂಡೆಯಂತೆ ನಿಗಿನಿಗಿಯುತ್ತಿದ್ದರು. ೯-೪೫ ಗಂಟೆಗೆ ಕೊನೆಯ ಪಿಳ್ಳೆಯೂ ಬಂದ. ನಲವತ್ತನಾಲ್ಕು ಮಂದಿ ಅಪರಾಧಿಗಳನ್ನು ಬೇರೆ ಗುಂಪಾಗಿ ನಿಲ್ಲಿಸಿದರು. ಅವರ ಹೃದಯ ಸಂಖ್ಯೆಗಳನ್ನು ಗುರುತಿಸಿಕೊಂಡಾಯಿತು.

"ಪೆರೇಡಿಗೆ ನೀವು ತಡವಾಗಿ ಬಂದು ಅಕ್ಷಮ್ಯ ಅಪರಾಧವೆಸಗಿದ್ದೀರಿ. ಇಂದು ಅಪರಾಹ್ಣ ೨ರಿಂದ ೩ ಗಂಟೆ ವರೆಗೆ ನಿಮಗೆ ಎಕ್ಸ್‌ಟ್ರಾ ಪೆರೇಡ್" ಎಂದು ಸುಬೇದಾರ್ ಅಬ್ದುಲ್‌ಖಾದರ್ ಶಿಕ್ಷೆ ಗುಡುಗಿದರು.

"ಸಾಬ್ ನಮಗೆ ಬ್ರೇಕ್ ಫಾಸ್ಟ್..." ಒಬ್ಬ ಅಪರಾಧಿ.

"Will you shut up your bloody mouth !" ಖಾದರರ ಸವಾಲು.

ಆರ್ಮಿ ಭಾಷೆಯ ಪವಿತ್ರ ಬೀಜಮಂತ್ರಗಳೆಲ್ಲವನ್ನೂ ಎರಡು ಕಾರಣಗಳಿಂದ ಇಲ್ಲಿ ಬರೆಯುವುದಿಲ್ಲ—ಮೊದಲನೆಯದು, ಒಂದು ಶಬ್ದಕೋಶ ಮಾಡಬೇಕಾದ ಕೆಲಸವದು ; ಎರಡನೆಯದು, ನಾಗರಿಕ ಭಾಷೆಯಲ್ಲಿ ಆ ಮಂತ್ರಗಳಿಗೆ ಅಶ್ಲೀಲ ಅರ್ಥವಿರುವುದರಿಂದ ಅಲ್ಲಿ ಸಲ್ಲುವ ಭಾಷೆ ಇಲ್ಲಿ ಸಲ್ಲದು. ಪವಿತ್ರತಮವೂ ಗರಿಷ್ಠ ಆವೃತ್ತಿಸಂಖ್ಯೆಯೂ ಇರುವ ಮಂತ್ರದ ಪ್ರಥಮಾನುಭವ ಈಗ ಆಯಿತು—bloody. ಈ ವಿಶೇಷಣವಿಲ್ಲದೇ ಯಾವ ಅಂಗದ, ಯಾವ ಕ್ರಿಯೆಯ (ಅದೆಷ್ಟೋ ಸಲ ಯಾವ ಹೊಗಳಿಕೆಯ ಸಹ) ವಿವರಣೆಯೂ ಪೂರ್ಣವಾಗದು. ಆರ್ಮಿಯ ಪ್ರಣವಮಂತ್ರ bloody. ನಿಮ್ಮ ನಡಿಗೆ ಚೆನ್ನಾಗಿರದಿದ್ದರೆ bloody walk, ಮಾತು ಸರಿಯಾಗಿರದಿದ್ದರೆ bloody talk, ಉಡುಪು ಸಮರ್ಪಕವಾಗಿರದಿದ್ದರೆ bloody dress, ಇತ್ಯಾದಿ. ನೀವು ಓಟದಲ್ಲಿ ಒಂದನೆಯ ಸ್ಥಾನಗಳಿಸಿದರೆ ಅದು bloody success !

ನಲವತ್ತನಾಲ್ಕು ಅಪರಾಧಿಗಳ ಸಮೂಹದಲ್ಲಿ ನಿಂತಿರದ ನನ್ನ ಮನಃಸ್ಥಿತಿ ಸಂಕೀರ್ಣ. ಪ್ರಧಾನವಾಗಿ ನನ್ನ ವಿಚಾರದಲ್ಲಿ ಹೆಮ್ಮೆ—ವೇಳೆಗೆ ಸರಿಯಾಗಿ ಬಂದಿರುವೆನಲ್ಲ ಎಂದು. ಬಾಲಕೃಷ್ಣನ್ ವಿಚಾರ ಕನಿಕರ. ಆದರೆ ಇಲ್ಲಿ ನಾನೇನು ಮಾಡುವಂತಿದೆ ? ಅವನೊಡನೆ ಕುಂಟುಕಾಲಿಕ್ಕಿ ಅಪರಾಧಿಗಳ ತಂಡವನ್ನು ನಾನು ಸಹ ಸೇರಿದ್ದರೆ ಅವನಿಗೆ ದೊರೆಯುತ್ತಿದ್ದ ಶಿಕ್ಷೆ ರವೆಯಷ್ಟೂ ಕಡಿಮೆ ಆಗುತ್ತಿರಲಿಲ್ಲ. ಒಂದು ವಿಧದ ನಿಷೇಧಾತ್ಮಕ

ಸಂತೃಪ್ತಿಯೂ ಇತ್ತು—ಜಂಬದ ಕೋಳಿ ನಾಗರಾಜನ್, ಎಂಈಎಸ್ ಅಧಿಕಾರಿ ಪೇಸನ್, ಕಾರ್ನ್‌ಫ್ಲೇಕ್ಸ್ ಬಕಾಸುರರಾದ ರಹಮಾನಾದಿಗಳು ಅಪರಾಧಿಗಳ ತಂಡದಲ್ಲಿದ್ದುದರಿಂದ.

ಮುಂದಿನ ಒಂದೂವರೆ ಗಂಟೆಕಾಲ ನಮಗೆ ಸೈನ್ಯದ ಸಮವಸ್ತ್ರ ಮತ್ತು ಪರಿಕರಗಳನ್ನು ಕೊಡುವುದರಲ್ಲಿಯೂ ಅವನ್ನು ಸಮರ್ಪಕವಾಗಿ ತೊಡಿಸುವುದರಲ್ಲಿಯೂ ವ್ಯಯವಾಯಿತು. ಎಲ್ಲ ಮೊದಲೇ ಹೊಲಿದು ಸಿದ್ಧಪಡಿಸಿಟ್ಟಿದ್ದ ಉಡುಪುಗಳು, ಆದರೆ ಯಾವ ಪ್ಯಾಂಟೂ ಯಾವ ಷರಟೂ ಯಾವ ಒಬ್ಬನಿಗೂ ಪೂರ್ಣವಾಗಿ ಒಪ್ಪುವಂತೆ ಸಿದ್ಧವಾಗಿರಲಿಲ್ಲ. ಒಂದೋ ದೇಹಗಳ ರಚನೆಯಲ್ಲಿ ನಿಸರ್ಗ ತಪ್ಪಿದೆ; ಅಥವಾ ಆರ್ಮಿ ದರ್ಜಿಗಳು ವಿಶೇಷ ಚಾಕಚಕ್ಯದಿಂದ ನಿಸರ್ಗವನ್ನು ಮೀರಿಸುವ ಸೃಷ್ಟಿಕೌಶಲವನ್ನು ಪ್ರದರ್ಶಿಸಿದ್ದಾರೆ!

ದೊಗಲೆ ಖಾಕಿ ಸುರಾಲನ್ನು ನಾನು ಧರಿಸಿದೆ. ನಿಖರವಾಗಿ ಹೇಳುವುದಾದರೆ ಅದರೊಳಗೆ ನಾನು ನುಗ್ಗಿದೆ. ಜೋಲು ಷರಟನ್ನು ತೊಟ್ಟೆ. ಉದ್ದ ಕೈಗಳು ಜೋತವು. ಅವನ್ನು ಮೇಲಕ್ಕೆ ಮಡಿಸಿ ಅರ್ಧ ಕೈ ಗಾತ್ರದಲ್ಲಿ ನಿಲ್ಲಿಸಿದೆ. ಷರಟಿನ ಇಳಿಭಾಗಗಳನ್ನು ಪ್ಯಾಂಟಿನೊಳಗೆ ತುರುಕಿದೆ. ಹಾಸಿಗೆಗೆ ಗವಸು ತೊಡಿಸಿದಂತೆ ಬಾಲಕೃಷ್ಣನ್ ಕಂಡ! ಕೊಡಂಟಿಗೆ ಬಟ್ಟೆ ನೇತು ಹಾಕಿದಂತೆ, ಬೆರ್ಚಪ್ಪನಂತೆ ನಾಗರಾಜನ್ ಕಂಗೊಳಿಸಿದ. ಇವೆರಡು ಮಿತಿಗಳ ನಡುವಿನ ಕತ್ತೆಸ್ವರೂಪ ನನ್ನದು. ಅಗಲವಾದ ಆರ್ಮಿ ಬೆಲ್ಟನ್ನು ಬಿಗಿಯಾಗಿ ಸೊಂಟಕ್ಕೆ ಬಿಗಿದೆ. "ಅದು ಎಷ್ಟೆಷ್ಟು ಹೆಚ್ಚು ಬಿಗಿದಿರೋ ನೀವು ಅಷ್ಟಷ್ಟು ಹೆಚ್ಚು ಸುಟಿ" ಎಂದು ಸಂತಾನಂ ನಮಗೆ ವಿವರಣೆ ನೀಡಿದ. ಇಂಥ ಆಜ್ಞೆಗಳನ್ನು ನಾನು ಅಕ್ಷರಶಃ ಭಕ್ತಿಯಿಂದ ಪಾಲಿಸುವವ. ಇದಕ್ಕೊಂದು ನಿದರ್ಶನವನ್ನು ಇಲ್ಲಿ ಬರೆಯಬಹುದು.

ನಾನಾಗ ಫಸ್ಟ್ ಫಾರ್ಮಿನ ವಿದ್ಯಾರ್ಥಿ—ಪ್ರಾಯ ಸುಮಾರು ೧೧ ವರ್ಷ. ನಮ್ಮ ಡ್ರಿಲ್‌ಮೇಷ್ಟ್ರು ಬಿದ್ದಯ್ಯನವರು. ಅವರು ಪ್ರಥಮ ಜಾಗತಿಕ ಸಮರದಲ್ಲಿ ಭಾಗವಹಿಸಿ ಶತ್ರುದಮನ ಮಾಡಿ ಯಶಸ್ವಿಯಾಗಿ ಮರಳಿದವರೆಂದೂ ಹಿಂದೂದೇಶದ ಸೈನ್ಯದಲ್ಲಿಯೇ ಅವರಂಥ ಸಾಹಸಿಗಳೂ ವೀರರೂ ಇಲ್ಲವೆಂದೂ ವಿದ್ಯಾರ್ಥಿಗಳು ಆಡಿಕೊಳ್ಳುತ್ತಿದ್ದರು. ನನ್ನ ತಂದೆಗೂ ಬಿದ್ದಯ್ಯನವರೇ ಡ್ರಿಲ್‌ಮೇಷ್ಟ್ರಾಗಿದ್ದರಂತೆ. ಆಗ ಇನ್ನೂ ತರುಣರಾಗಿದ್ದ ಅವರ ಪ್ರತಾಪ, ಪೆಟ್ಟಿನ ರುಚಿ ಎಲ್ಲವನ್ನೂ ತಂದೆ ಚಿಕ್ಕಪ್ಪಂದಿರ ಬಾಯಿಯಿಂದ ಕೇಳಿ ಮೊದಲೇ ಪುಕ್ಲನಾದ ನನಗೆ ಬಿದ್ದಯ್ಯ ಹೆಸರೇ ಭಯದ ಪ್ರತೀಕವಾಗಿತ್ತು. ಅವರು ಬ್ರಹ್ಮಚಾರಿ. ಅಶನ, ವಸತಿ ನಮ್ಮ ಶಾಲೆಯ ಒಂದು ಕೋಣೆಯಲ್ಲಿ. ಅವರ ನಿರಂತರ ಸ್ನೇಹಿತ ಮತ್ತು ಒಡನಾಡಿ ಒಂದು ಅಲ್ಸೇಷನ್ ನಾಯಿ. ಅವರಿಗೂ ಅವರ ನಾಯಿಗೂ ಹೆದರಿ ನಾವು ಯಾರೂ ಅವರ ಕೋಣೆಯ ಪಕ್ಕವೂ ಸುಳಿಯುತ್ತಿರಲಿಲ್ಲ. ವಾರಕ್ಕೆರಡು ಸಲ ನಮಗೆ ಡ್ರಿಲ್. ಇದ್ದದ್ದು ಸುಮಾರು ೪೦ ಮಂದಿ. ಅವರು ಏನು ಡ್ರಿಲ್ ಮಾಡಿಸಿದರೆಂದು ಈಗ ನನಗೆ ನೆನಪಾಗುವುದಿಲ್ಲ. ಆದರೆ ಅವರ ಬೈಗುಳಗಳಲ್ಲಿ ಸುಪ್ರಸಿದ್ಧವಾದವು ಕೆಲವು ಇಂದೂ ಮರೆತಿಲ್ಲ:

"ಏನೋ ಬ್ರಾಹ್ಮಣಾ! ತಿಥಿಯೂಟ ಮಾಡಿ ಬಂದೆಯೇನೋ?"

"ಏನೋ ಸಾಬೀ! ಮಾ...ತ್."

"ನೀದಾಡರೇ! ನೀಡ ಅ...ತ."

ಇವರ ಬೈಗುಳಗಳು ಜಾತಿಪೂರಕ, ಅಂದರೆ ಒಂದೊಂದು ಜಾತಿಯ ಹುಡುಗನಿಗೂ ಅನ್ವಯವಾಗುವಂಥ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಅದರಲ್ಲಿ ಇದ್ದೇ ಇರುತ್ತಿತ್ತು.

ನಾಗೇಂದ್ರ ಎಂಬ ಶೆಟ್ಟರ ಹುಡುಗ ನಮ್ಮ ತರಗತಿಯಲ್ಲಿದ್ದ. ಅವನು ಕ್ಲಾಸಿಗೆ ಮೀರಿದ ಪ್ರಾಯದವ ಹಾಗೂ ಗಾತ್ರದವ. ಸ್ವಲ್ಪ ಶೋಕಿವಾಲ. ಚೆನ್ನಾದ ಉಡುಪು, ತಲೆಯಲ್ಲಿ ಎದ್ದುಕಾಣುವ ಸುಂದರ ಕ್ರಾಪು. ಕ್ರಾಪು ಬಿಟ್ಟಿದ್ದ ಹುಡುಗರೇ ಆ ದಿವಸಗಳಲ್ಲಿ ಇರಲಿಲ್ಲ. ಕಾಲೇಜಿಗೆ ಹೋಗಿಬಂದ ಹಿರಿಯ ಹುಡುಗರ ತಲೆ ಮೇಲೆ ಮಾತ್ರ ಕ್ರಾಪನ್ನು ನೋಡಬಹುದಿತ್ತು. ಒಂದು ಶುಭಸಾಯಂಕಾಲ ಬಿದ್ದಯ್ಯನವರ ಬೈಗುಳ ಖಾನೆ ಖಾಲಿ ಯಾಯಿತೆಂದು ತೋರುವುದು. ನಾಗೇಂದ್ರನ ಕ್ರಾಪಿನ ಮೇಲೆ ದೃಷ್ಟಿ ಬಿತ್ತು. ಹೊಸ ಸಾಹಿತ್ಯ ನಿರ್ಮಾಣವಾಯಿತು. "ಲೋ ಶೆಟ್ಟೀ! ಬಿಟ್ಟೀ ಬಸವಯ್ಯನ ಹಾಗೆ ಬೆಳೆದಿದ್ದೀ ಯಲ್ಲೋ! ನಿನ್ನ ಕೂದಲಿನ ಶೋಕಿ ಏನೋ! ನಾಳೆ ದಿವಸ ಡ್ರಿಲ್ಲಿಗೆ ಬರುವಾಗ ಕಾಲಿಂಚಿ ಗಿಂತ ಹೆಚ್ಚು ಉದ್ದ ಕೂದಲಿದ್ದರೆ ನಾನೇ ಬೋಳಿಸಿಬಿಡ್ತೀನಿ" ಎಂದು ಅವನಿಗೆ ಆಶ್ವಾಸನೆ ನೀಡಿದರು.

ನನಗೆ ಚಳಿ ಹಿಡಿಯಿತು. ಕ್ಷೌರಿಕ ನಂಜಪ್ಪನಿಗೆ ಬರಹೇಳಿದೆ. ತಲೆಯನ್ನು ನುಣ್ಣಗೆ ಬೋಳಿಸಿಬಿಡಲು ಆಣತಿ ನೀಡಿದೆ. "ಇದೇನು ಅವಲಕ್ಷಣ" ಎಂದು ಹಿರಿಯರೆಲ್ಲರೂ ಹೀಯಾಳಿಸಿದಾಗ "ಅದು ಬಿದ್ದಯ್ಯ ಮಾಷ್ಟ್ರ ಆಜ್ಞೆ" ಎಂದೆ. ನನ್ನ ತಂದೆ ಸ್ವತಃ ಬಿದ್ದಯ್ಯನವರನ್ನೇ ಕಂಡು ವಿಚಾರಿಸಿದರು. "ನೋಡೋ ತಿಮ್ಮಪ್ಪಯ್ಯ! ಅದು ನಿನ್ನ ಹಿಳ್ಳೆಗೆ ಹೇಳಿದ್ದಲ್ಲ. ಆ ಶೆಟ್ಟಿ ಕುಟ್ಟಿಗೆ" ಎಂದರಂತೆ.

ಬಿದ್ದಯ್ಯ ಮಾಷ್ಟ್ರ ಕತೆಯಿಂದ ಪೆಲ್ಲಿಂಗ್ಟನ್ನಿನ ವ್ಯಥೆಗೆ ಮರಳೋಣ.

ಬೆಲ್ಟನ್ನು ಬಲವಾಗಿಯೇ ಬಿಗಿದೆ. ಕರುಳು ಬಾಯಿಗೆ ಬರುವಂಥ ಅನುಭವ. ಪ್ಯಾಂಟು ಮುದುರಿ ನೆರಿನೆರಿಯಾಗಿ ಹೊಸ ಭಂಗಿಯಲ್ಲಿ ನಿಂತಿತು. ತುರುಕರ ಷರಾಯಿಯ ಒಂದು ನಮೂನೆ ಇದು. ಪಾದರಕ್ಷೆಗಳು ನಿಜವಾಗಿಯೂ ಬೃಹದ್ರಕ್ಷೆಗಳೇ ಸೈ. ದಪ್ಪದ ಉಣ್ಣೆ ಕಾಲುಚೀಲಗಳಲ್ಲಿ ಪಾದಗಳನ್ನು ಹುಗಿಸಿ ತರುವಾಯ ಕರಿಬೂಟುಗಳ ಒಳಗೆ ತುರುಕ ಲಾಯಿತು. ಚಕ್ಕಳದ ಲೇಸುಗಳನ್ನು ಓರಣವಾಗಿ ಕಟ್ಟಿ ಬೂಟುಗಳನ್ನು ಬಿಗಿ ಮಾಡಿದೆ. ಇಷ್ಟು ಹೊತ್ತೂ ಕುಳಿತು ಕಾಲೂರಿಕೊಂಡಿದ್ದುದರಿಂದ ಬೂಟುಗಳ ಘನತೆ ಅರಿವಾಗಿರ ಲಿಲ್ಲ. ನಿಂತೆ, ಹೆಜ್ಜೆ ಎತ್ತಿದೆ—ಬೂಟಿನ ಯಮಭಾರದಿಂದ ಕಂಗಾಲಾದೆ. ಬೂಟುಗಳು ನನ್ನನ್ನು ಹೊರಲು ಇರುವವೋ ಅಥವಾ ನಾನೇ ಅವನ್ನು ಹೊರಬೇಕೋ ಎಂಬ ವಿಚಾರ ಸಂದೇಹ ಮೂಡಿತು. ಹೆಜ್ಜೆ ಇಟ್ಟರೆ ಆ ಖಟ್ ಸದ್ದೇನು! ಮಗುವಿಗೆ ಹೊಸತಾಗಿ ಶೂ ತೊಡಿಸಿದಾಗ ವರ್ತಿಸುವಂತೆ ಅಲ್ಲಲ್ಲ ನಾವು ಖಟ ಘಟ ಎಂದು ನಡೆದು ತಪ್ಪು ಕಾಲಿಕ್ಕಿ ಸದ್ದು ಮಾಡಿದೆವು. ಕಳಶಪ್ರಾಯವಾಗಿ ಶಿರಸ್ತ್ರಾಣ. ಚಪಾತಿತೊಪ್ಪಿ ಎಂದು ಅದರ ಹೆಸರು. ಮುಂಬದಿಯನ್ನು ಹಣೆಯ ಮೇಲೆ ಒತ್ತಿ ಹಿಡಿದು ಹಿಂದೆ ಬಲಬದಿಯಲ್ಲಿ ಅದನ್ನು ಕೆಳಗೆ ಎಳೆದದ್ದೂ ಎಳೆದದ್ದೇ. ಉಣ್ಣೆಯ ರಚನೆಯಾದ್ದರಿಂದ ಅದು ಹರಿಯ ಲಿಲ್ಲ, ಸ್ವಲ್ಪ ಹಿಗ್ಗಿತು. ತಲೆಗೆ ಸಟೆಯಾಗಿ ಅಂಟಿಕೊಂಡಿತು ಎಂದು ಖಾತ್ರಿಯಾದ ಮೇಲೆಯೇ ಈ ಎಳೆತಕ್ಕೆ ವಿಶ್ರಾಂತಿ.

ಹೀಗೆ ಸುಮುಹೂರ್ತದಲ್ಲಿ ಸರ್ವಾಲಂಕಾರಭೂಷಿತರಾದ ನಮ್ಮನ್ನು ಪರ್ಮಾರರೂ ಖಾದರರೂ ಎನ್‌ಸಿಓಗಳೂ ಪರೀಕ್ಷಿಸಿ ಪರಿಶೀಲಿಸಿ ತಿದ್ದಿ ಸರಿಪಡಿಸಿದರು. "ಈ ಯೂನಿ ಫಾರ್ಮ್ ರೀಫಿಟ್ಟಿಂಗ್ ಆಗಬೇಕು. ಸಾಯಂಕಾಲ ದರ್ಜಿ ನಿಮ್ಮ ಬರಾಕಿಗೆ ಬರುತ್ತಾನೆ" ಎಂದು ಪರ್ಮಾರರು ಹೇಳಿದರು.

ವ್ಯಕ್ತಿ: ನಿಸರ್ಗಕಡೆದ ಶಿಲ್ಪ; ದುಸ್ತು: ಮನುಷ್ಯ ಹೊಲಿದ ಉಡುಪು. ವ್ಯಕ್ತಿಗೆ ಹೊಂದುವ ದುಸ್ತು ಎಲ್ಲಿದೆ! ದುಸ್ತನ್ನು ತುಂಬುವ ವ್ಯಕ್ತಿ ಎಲ್ಲಿರುವನು!

ನಿದ್ರಿಸದಿರು ವೀರಾ! ತಾಯ್ನಾಡಿನ ಧೀರಾ!

ಸಮವಸ್ತ್ರಧಾರಿಗಳಾದ ನಮ್ಮನ್ನು ೧೧-೩೦ ಗಂಟೆಗೆ ಸರಿಯಾಗಿ ದೇವಸ್ಥಾನದ ಬಳಿ ಇರುವ ಕವಾಯತಿ ಮೈದಾನಕ್ಕೆ ಕೊಂಡೊಯ್ದರು. ಪುನಃ ಮೊದಲಿನಂತೆ ಆರು ಸ್ಕ್ವಾಡುಗಳು. ದೊಡ್ಡ ಅರ್ಧ ವೃತ್ತಾಕಾರ ವಿನ್ಯಾಸದಲ್ಲಿ ನಿಲ್ಲಿಸಿ ಮೊದಲಿನ ಸಾಲಿನವ ರನ್ನು ಕೂರುವಂತೆಯೂ ನಡುವಿನವರನ್ನು ಮೊಳಕಾಲೂರಿ ಅರೆನಿಲ್ಲುವಂತೆಯೂ ಹಿಂದಿನ ಸಾಲಿನವರನ್ನು ನಿಂತಿರುವಂತೆಯೂ ವಿಧಿಸಿದರು. ವೃತ್ತದ ಕೇಂದ್ರದಲ್ಲಿ ಸುಬೇದಾರ್ ಅಬ್ದುಲ್ ಖಾದರ್.

"ಮಿತ್ರರೇ! ಈಗ ನಿಮಗೆ ಕವಾಯತಿಯ ಪ್ರಥಮ ಪಾಠವನ್ನು ಹೇಳಿಕೊಡುತ್ತೇನೆ. ಈ ಪಾಠದ ಉದ್ದೇಶ ಅಟ್ಟೇನ್‌ಷನ್ ಸ್ಥಿತಿಯ ವಿವರಣೆ, ನಮೂನೆ, ಅಭ್ಯಾಸ. ಉದ್ದೇಶ ಕುರಿತು ಏನಾದರೂ ಸಂಶಯ ಅಥವಾ ಸವಾಲುಂಟೇ?"

ನಾವು ಸುಮ್ಮನಿದ್ದೆವು. ಖಾದರ್ "ಪಾಠದ ಉದ್ದೇಶವೇನು?"

ಒಬ್ಬ ಅಧಿಕಪ್ರಸಂಗಿ "ಅಟ್ಟೇನ್‌ಷನ್..."

ಖಾದರ್ "ನಾನು ಕೇಳಿದವರು ಮಾತ್ರ ಉತ್ತರ ಹೇಳಬೇಕು ತಿಳಿಯಿತೇ? ಆರ್ಮಿಯ ಸುವರ್ಣಸೂತ್ರ ಸದಾ ನಿಮ್ಮ ನೆನಪಿನಲ್ಲಿರಲಿ—ನಿಮ್ಮನ್ನು ಕುರಿತು ಮಾತಾಡದಿದ್ದಾಗ ನೀವು ಮಾತಾಡಕೂಡದು. ಈಗ ಈ ಪಾಠದ ಉದ್ದೇಶವೇನು?" ಇಡೀ ಸಮೂಹ ವನ್ನು ವೀಕ್ಷಿಸಿದರು "ನಂಬರ್ ೩೩."

ಅವನು ಬೆಪ್ಪನಂತೆ ನಿಂತಿದ್ದ. ಖಾದರ್ "ನಂಬರ್ ೧೨."

ನಂಬರ್ ೧೨ "ಕವಾಯತಿಯ ಮೊದಲ ಪಾಠ, ಸಾಬ್."

ಖಾದರ್ "ಅಲ್ಲ." ಅಷ್ಟರಲ್ಲಿ ೧ ಕೈ ಎತ್ತಿದ.

ಖಾದರ್ "ಆಗಲಿ ನಂಬರ್ ೧ ಹೇಳಿ."

ನಂಬರ್ ೧ "ಅಟ್ಟೇನ್‌ಷನ್ ಸ್ಥಿತಿಯ ವಿವರಣೆ, ನಮೂನೆ ಮತ್ತು ಅಭ್ಯಾಸ ಸಾಬ್."

ಖಾದರ್ "ಭಲೆ, ವೆರಿ ಗುಡ್."

ಭಲೆ ನಾಗರಾಜನ್ ಎಂದು ನಾನಂದುಕೊಂಡೆ.

ಖಾದರ್ "ಅಟೇನ್‌ಷನ್. ಅಂದರೆ ಜಾಗರೂಕತೆಯೇ. ಆರ್ಮಿಯ ಜೀವಾಳ. ಆರ್ಮಿಯಲ್ಲಿ ಯಾವ ಕ್ರಿಯೆ ಮಾಡಬೇಕಾದರೂ ಅದನ್ನು ಅಟೇನ್‌ಷನ್ ಸ್ಥಿತಿಯಿಂದಲೇ

ತೊಡಗಬೇಕು. ಈ ಪಾಠವನ್ನು ಮೂರು ಹಂತಗಳಲ್ಲಿ ಕಲಿಸಲಾಗುವುದು. ಹಂತಗಳು ಎಷ್ಟು ನಂಬರ್ ೯ ?''

ನಂಬರ್ ೯ ಗಾಬರಿಯಿಂದ ''ಗೊತ್ತಿಲ್ಲ, ಸಾಬ್'' ಅಂದ.

ಖಾದರ್ ''ನಂಬರ್ ೩೯ ?'' ಅವನಿಗೂ ಹೇಳಲಾಗಲಿಲ್ಲ. ನಂಬರ್ ೧ ಪುನಃ ಕೈ ಎತ್ತಿದ.

ಖಾದರ್ ''ಮಿತ್ರರೇ! ನೀವೆಲ್ಲ ಯೂನಿವರ್ಸಿಟಿ ಗ್ರೇಜ್ಯುಯೇಟುಗಳು. ನಿರಕ್ಷರಕುಕ್ಷಿ ಸೈನಿಕರೂ ಬಲು ಸುಲಭವಾಗಿ ಹೇಳುವ ಉತ್ತರ ನಿಮಗೆ ತಿಳಿಯುವುದಿಲ್ಲವಲ್ಲ. ನೀವು ಆಸಕ್ತಿ ವಹಿಸಿ ಕೇಳಬೇಕು.''

ಪವಾರ್‌ರವರು ದೂರದಲ್ಲಿ ನಿಂತು ನಮ್ಮ ಕ್ರಿಯೆ ಪ್ರತಿಕ್ರಿಯೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಾರೆ. ಆರು ಎನ್‌ಸಿಓಗಳು ನಮ್ಮ ಹಿಂದೆ ಹರಡಿ ನಿಂತು ತಮ್ಮ ತೀಕ್ಷ್ಣ ದೃಷ್ಟಿಗಳಿಂದ ತಿವಿಯುತ್ತಿದ್ದಾರೆ. ''ಮನುಷ್ಯಾ! ನೀನು ವೀಕ್ಷಿಸಲ್ಪಡುತ್ತಿದ್ದೀಯೆ. ಎಚ್ಚರಿಕೆ. ನಿನ್ನ ಲೋಪದೋಷಗಳಿಗೆ ನೀನೇ ಬಾಧ್ಯಸ್ಥ. ನೀನೇ ಉತ್ತರ ಹೇಳಬೇಕಾದವ'' ಇಂಥ ಒಂದು ಭಾವನೆ ಅಲ್ಲಿ ಕ್ಷಣ ಕ್ಷಣವೂ ಮೂಡುತ್ತಿತ್ತು.

ಖಾದರ್ ''ಈ ಪಾಠವನ್ನು ಮೂರು ಹಂತಗಳಲ್ಲಿ ಕಲಿಸಲಾಗುವುದು. ಮೊದಲ ಹಂತ ಅಟೇನ್‌ಷನ್ (ಸಾವಧಾನ್) ಸ್ಥಿತಿಯ ವಿವರಣೆ! ಎರಡನೆಯ ಹಂತ ಮಂದಗತಿಯಲ್ಲಿ ಅಟೇನ್‌ಷನ್ ನಮೂನೆ; ಮೂರನೆಯ ಹಂತ ಕ್ಷಿಪ್ರಗತಿಯಲ್ಲಿ ಅಟೇನ್‌ಷನ್ ನಮೂನೆ.

''ಈಗ ಮೊದಲನೆಯ ಹಂತ. ನನ್ನನ್ನು ನೋಡಿ. ಹಿಮ್ಮಡಿಗಳು ಜೋಡಿಕೊಂಡಿವೆ ಮತ್ತು ಒಂದೇ ರೇಖೆಯ ಮೇಲಿವೆ. ಪಾದಗಳ ನಡುವಿನ ಕೋನ ೩೦ ಡಿಗ್ರಿಗಳು. ಎರಡು ಕಾಲುಗಳೂ ನೆಟ್ಟಗೆ. ಹೊಟ್ಟೆ ಒಳಗೆ. ಎದೆ ಹೊರಗೆ. ಭುಜಗಳು ಮುಂಭಾಗಕ್ಕೆ ಚೌಕವಾಗಿ ತೆರೆದಿವೆ. ಕೈಗಳು ನೇರವಾಗಿ ದೇಹಕ್ಕೆ ಒತ್ತಾಗಿ ಚಾಚಿವೆ. ಅವುಗಳಿಗೂ ದೇಹಕ್ಕೂ ನಡುವೆ ಕಂಡಿಯೇ ಇರಬಾರದು. ಬೆರಳುಗಳು ಮಡಿಸಿವೆ. ಹೆಬ್ಬೆರಳು ನೇರವಾಗಿಯೂ ಕೆಳಮೊಗವಾಗಿಯೂ ಚಾಚಿದೆ. ಅದು ಸುರಾಲಿನ ಹೊಲಿಗೆ ಗೆರೆಯ ಮೇಲೆಯೇ ಇದೆ. ಕುತ್ತಿಗೆ ನೇರ. ಗಲ್ಲ ಒಳಗೆ. ತುಟಿಗಳು ಸ್ವಾಭಾವಿಕವಾಗಿ ಮುಚ್ಚಿಕೊಂಡಿರಬೇಕು. ಮುಖದ ಮೇಲೆ ಮಂದಹಾಸ. ಕಣ್ಣುಗಳು ನಿಶ್ಚಲ. ದೃಷ್ಟಿ ಕಣ್ಣುಗಳ ಎತ್ತರದಲ್ಲಿ ಅನಂತದೂರದಲ್ಲಿ ಕೀಲಿಸಿರಬೇಕು. ಉಸಿರಾಟ ತಿಳಿಯಲಾಗದಂತೆ ಸ್ಥಿರ ಮತ್ತು ಮಂದ. ಮಿತ್ರರೇ! ಈಗ ನನ್ನನ್ನು ಎದುರಿನಿಂದ, ಬದಿಗಳಿಂದ, ಹಿಂಬದಿಯಿಂದ ನೋಡಲು ಅನುಕೂಲಿಸುವಂತೆ ವಿವಿಧ ಭಂಗಿಗಳಲ್ಲಿ ನಿಂತು ಪ್ರದರ್ಶಿಸುತ್ತೇನೆ, ನೋಡಿ.''

ನೆಲಕ್ಕೆ ಲಂಬವಾಗಿ ಕೊರಡನ್ನು ನೆಟ್ಟರೆ ಹೇಗಿರಬಹುದೋ ಹಾಗಿತ್ತು ಅವರ ನಮೂನೆ. ಅವರ ದೃಷ್ಟಿ ಅನಂತದಲ್ಲಿ ಲೀನವಾಗಿದ್ದುದರಿಂದ ಪ್ರತಿಮೆ ನಿಂತಿದ್ದಂತೆ ತೋರಿತು. ಏಕಾಗ್ರತೆಯ ಈ ಪರಮೋತ್ಕೃಷ್ಟ ನಿದರ್ಶನಕ್ಕೂ ತಪಸ್ಸಿನ ಸಮಾಧಿ ಸ್ಥಿತಿಗೂ ಏನಾದರೂ ಭೇದವಿದ್ದೀತೇ ? ಅಲ್ಲಿ ಪರಮಾತ್ಮನಲ್ಲಿ ಐಕ್ಯಗೊಳ್ಳುವುದು ಉದ್ದೇಶವಾದರೆ ಇಲ್ಲಿ ಕರ್ತವ್ಯದಲ್ಲಿ ಚಿತ್ತೈಕಾಗ್ರತೆಯೇ ಉದ್ದೇಶವಾಗಿರಬಹುದು. ಅಟೇನ್‌ಷನ್ ಸ್ಥಿತಿ ಎಂದರೆ ಒಂದು ವಿದ್ಯುದ್ವಿಭವ—ಮಹಾಶಕ್ತಿ ಅಲ್ಲಿದೆ. ಯೋಗ್ಯ ಪ್ರೇರಣೆ ಬಂದೊಡನೆಯೇ ಅದು ಕಾರ್ಯವೆಸಗುವುದು. ಗುಂಡಿ ಒತ್ತುವುದು ವಿದ್ಯುತ್ತಿಗೆ ಕಾರ್ಯ ನಡೆಸಲು ಹೇಗೆ

ಪ್ರೇರಣೆಯೋ ಹಾಗೆ ಯುಕ್ತ ಆಜ್ಞೆ ಅಟೇನ್‌ಷನ್ ಸ್ಥಿತಿಯಿಂದ ಮುಂದಿನ ಕಾರ್ಯ ನಡೆಸಲು ಚೋದನೆ.

"ಮಿತ್ರರೇ ! ಅಟೇನ್‌ಷನ್ ಸ್ಥಿತಿಯಲ್ಲಿ ನೀವು ಎಷ್ಟು ತನ್ಮಯರಾಗಿರಬೇಕೆಂದರೆ ಒಂದು ವಿಷಸರ್ಪ ನಿಮ್ಮನ್ನು ಕಚ್ಚಲು ಬುಸುಗುಟ್ಟಿ ಬಂದರೆ ಅದು ನಿಮ್ಮ ಲಕ್ಷ್ಯಕ್ಕೆ ಬರಬಾರದು. ನೀವು ಅದರಿಂದ ಕಡಿಸಿಕೊಂಡು ಮಡಿದುಬಿದ್ದರೂ ಪರವಾ ಇಲ್ಲ; ಅಟೇನ್‌ಷನ್ ಸ್ಥಿತಿಯನ್ನು ಮಲಿನಗೊಳಿಸಬಾರದು. ಆ ಸ್ಥಿತಿಯ ಪಾವಿತ್ರ್ಯಕ್ಕೆ ಚ್ಯುತಿ ತರಬಾರದು."

ಹುತ್ತ ಬೆಳೆದದ್ದು ಇದೇ ಸ್ಥಿತಿಯ ಇನ್ನೊಂದು ರೂಪದಲ್ಲಿ ಅಲ್ಲವೇ ?

"ಮೊದಲನೆಯ ಹಂತದ ವಿಚಾರ ಏನಾದರೂ ಸಂಶಯ ಅಥವಾ ಸವಾಲುಂಟೇ ?"

ನಂಬರ್ ೧ "ಸಾಬ್ ! ಒಂದು ಸಂಶಯ ಉಂಟು."

ಖಾದರ್ "ಹೇಳಿ."

ನಂಬರ್ ೧ "ಪಾದಗಳ ನಡುವೆ ೩೦ ಡಿಗ್ರಿ ಕೋನ ಇರಬೇಕೆಂದಿರಲ್ಲ. ಅದನ್ನು ಅಳೆಯುವುದು ಹೇಗೆ ?"

ಖಾದರ್ "ಬಲು ಜಾಣಪ್ರಶ್ನೆ. ಶಿಕ್ಷಣದ ಆರಂಭದ ದಿನಗಳಲ್ಲಿ ಈ ಕೋನಮಾಪಕದ ನೆರವಿನಿಂದ ಅದನ್ನು ಅಳೆದು ಸರಿಪಡಿಸುತ್ತೇವೆ. ಮುಂದೆ ಸೈನಿಕನಿಗೆ ಅದೇ ಅಭ್ಯಾಸವಾಗಿ ಹೋಗುತ್ತದೆ. ಎಲ್ಲಿವರೆಗೆಂದರೆ, ನಿಮ್ಮ ಲೆಕ್ಕವಾದರೂ ತಪ್ಪೀತು ಸೈನಿಕನ ಪಾದಗಳ ನಡುವಿನ ಕೋನವಲ್ಲ !"

ಲೆಕ್ಕದ ಮಾಷ್ಟ್ರಾದ ನನಗೆ, ನಾಗರಾಜನ್‌ನಿಗೆ ಹೊಳೆದ ಪ್ರಶ್ನೆ, ಏಕೆ ಹೊಳೆಯಬಾರದಿತ್ತು ? ಇದು ನನಗೆ ಅಪಮಾನ. ಆದ್ದರಿಂದ ನಾನೂ ಅದೇ ಮಟ್ಟದ ಒಂದು ಪ್ರಶ್ನೆ ಹಾಕಿ ನನ್ನ ಇರವಿನ ಅರಿವನ್ನು ಅವರಿಗೆ ಮೂಡಿಸಬೇಕು. ಬಾಯ್ದೆರೆದೆ "ಸಾಬ್ !" ಆದರೆ ಧ್ವನಿ ನನ್ನ ಗಂಟಲಿನಿಂದ ಹೊರಗೆ ಹೊರಡಲೊಲ್ಲದು. ಸುಬೆದಾರ್ ಮುಂದುವರಿಸಿಯೇಬಿಟ್ಟರು "ಈಗ ಎರಡನೆಯ ಹಂತ, ಮಂದಗತಿಯಲ್ಲಿ ಅಟೇನ್‌ಷನ್ ನಮೂನೆ. ಅಟೇನ್‌ಷನ್ನಿಗೆ ಪೂರ್ವಸ್ಥಿತಿಯ ಹೆಸರು ಸ್ಟೇಂಡ್ ಅಟ್ ಈಸ್—ಎಂದರೆ ವಿರಾಮವಾಗಿ ಆದರೂ ಕವಾಯತಿ ಕ್ರಮದಲ್ಲಿ ನಿಂತಿರುವ ಒಂದು ಭಂಗಿ (ವಿಶ್ರಾಮ್). ನನ್ನನ್ನು ನೋಡಿ ಈಗ ನಾನು ಸ್ಟೇಂಡ್ ಅಟ್ ಈಸ್ ಸ್ಥಿತಿಯಲ್ಲಿದ್ದೇನೆ. ಹಿಮ್ಮಡಿಗಳ ನಡುವಿನ ಅಂತರ ೧೨ ಇಂಚುಗಳು. ಕೈಗಳನ್ನು ಹಿಂಬದಿಗೆ ಚಾಚಿ ಎಳೆದು ಹಿಡಿದಿದ್ದೇನೆ. ಈಗ ಹಿಂಬದಿಯಿಂದ ಹೇಗೆ ತೋರುವುದೆಂದು ನೋಡಿ. ಎರಡು ಅಂಗೈಗಳನ್ನೂ ತೆರೆದಿದ್ದೇನೆ, ಎಡ ಅಂಗೈಮೇಲೆ ಬಲ ಅಂಗೈ ನೆಲಸಿದೆ, ಹೆಬ್ಬೆಟ್ಟು ಹಾಗೂ ತೋರು ಬೆಟ್ಟುಗಳ ನಡುವಿನ ಅಂತರಗಳು ಪರಸ್ಪರ ಕೂಡಿಕೊಂಡಿವೆ, ಬೆಟ್ಟುಗಳೆಲ್ಲವೂ ಚಾಚಿ ಒತ್ತಾಗಿ ಕೆಳಮುಖವಾಗಿ ಇಳಿದಿವೆ. ದೇಹದ ಇತರ ಅವಯವಗಳೆಲ್ಲವೂ ಅಟೇನ್‌ಷನ್ನಿನಂತೆಯೇ. ಇಂಥ ಸ್ಥಿತಿಯಲ್ಲಿರುವಾಗ ಅಟೇನ್‌ಷನ್ ಆಜ್ಞೆಯನ್ನು ಎರಡು ಸ್ಪಷ್ಟ ಘಟ್ಟಗಳಲ್ಲಿ ನೀಡಲಾಗುತ್ತದೆ. ಮೊದಲನೆಯದು ಅಟೇನ್‌ವರೆಗೆ ಮಾತ್ರ. ಇದು ಎಚ್ಚರಿಕೆಯದು—ಎಂದರೆ ಮುಂದೆ ಏನು ಬರಲಿದೆ ಎಂಬುದರ ಕಡೆಗೆ ನಿಗಾ ಸೆಳೆದು ಸೈನಿಕನನ್ನು ತಯಾರು ಮಾಡುವುದು. ಎರಡನೆಯದು ಉಳಿದದ್ದು, ಷನ್. ಇದು

ಕ್ರಿಯಾವಿಭಾಗ—ಎಂದರೆ ಇದನ್ನು ನೀಡುವಾಗಲೇ ತತ್ಸಂಬಂಧಕ್ರಿಯೆಯನ್ನು ಸಂಟಿಯಾಗಿ ಮಾಡಿ ಮುಗಿಸಬೇಕು. ಈಗ ನೋಡಿ—ಅಟೇನ್ ಎನ್ನುವಾಗ ಎಡಗಾಲನ್ನು ನಾನು ಹನ್ನೆರಡು ಇಂಚುಗಳಷ್ಟು ಎತ್ತರ ಎತ್ತಿದ್ದೇನೆ. ಉಳಿದ ಅಂಗೋಪಾಂಗಗಳು ಹಿಂದಿನಂತೆ. ಮುಂದೆ ನೋಡಿ—ಷನ್ ಎಂದೊಡನೆಯೇ ಎರಡು ಕ್ರಿಯೆಗಳನ್ನು ಏಕಕಾಲಿಕವಾಗಿ ನಿರ್ವಹಿಸುತ್ತೇನೆ. ಪಾದಗಳು ಅಟೇನ್‌ಷನ್ ಸ್ಥಿತಿಯಲ್ಲಿರುವಂತೆ ಎಡಗಾಲನ್ನು ನೆಲಕ್ಕೆ ಶೀಘ್ರವಾಗಿಯೂ ಬಲಯುತವಾಗಿಯೂ ಬಡಿಯುತ್ತೇನೆ; ಒಂದಿಗೆ ಎರಡು ಕೈಗಳನ್ನೂ ಸರಕ್ಕನೆ ದೇಹಕ್ಕೆ ಮುಟ್ಟಿಕೊಂಡಿರುವಂತೆಯೇ ಸರಿಸಿ ಆಟೇನ್‌ಷನ್ ಸ್ಥಿತಿಗೆ ತರುತ್ತೇನೆ. ಎರಡನೆಯ ಹಂತದ ವಿಚಾರ ಏನಾದರೂ ಸಂಶಯ ಅಥವಾ ಸವಾಲುಂಟೇ ?''

ನಂಬರ್ ೬ ''ನೀವು ಅದ್ಭುತವಾಗಿ ವಿವರಿಸಿದಿರಿ ಸಾಬ್. ಆದರೆ ಒಂದು ಸಂದೇಹವಿದೆ.''

ಭಲೆ ಮೇನನ್—ನೀನು ನನ್ನ ಕುದುರೆ. ನಾಗರಾಜನ್‌ಗೆ ಎಡೆಯೀಯಬೇಡ. ಮುಂದುವರಿಸು!

ಖಾದರ್ ''ಹೇಳಿ.''

ನಂಬರ್ ೬ ''ಸ್ಟೇಂಡ್ ಅಟ್ ಈಸ್ ಸ್ಥಿತಿಯಲ್ಲಿರುವಾಗ ಕೈಬೆರಳುಗಳು ತೆರೆದುಕೊಂಡೂ ಅಟೇನ್‌ಷನ್ ಸ್ಥಿತಿಯಲ್ಲಿರುವಾಗ ಅವು ಮುಚ್ಚಿಕೊಂಡೂ ಇರುವುವಷ್ಟೆ. ಈ ಬದಲಾವಣೆಯನ್ನು ಹೇಗೆ ನಿರ್ವಹಿಸಬೇಕು ?''

ಖಾದರ್ ''ಬಲು ಸುಟಿಯಾದ ಪ್ರಶ್ನೆ. ಅದು ಕ್ರಮೇಣ ನಡೆಯಬೇಕಾದ ಕಲಾತ್ಮಕ ಕ್ರಿಯೆ. ಕ್ಷಿಪ್ರಗತಿಯಲ್ಲಿ ನಿರ್ವಹಿಸುವಾಗ ಸಹಜವಾಗಿ ಬರಬೇಕಾದ ಕ್ರಿಯೆ.''

ಈ ಪ್ರಶ್ನೆಯೂ ನನಗೇಕೆ ಹೊಳೆಯಲಿಲ್ಲ ? ಮುಂದಿನ ಸಲ ನಾನೇನಾದರೂ ಪ್ರಶ್ನೆ ಕೇಳಿ ನನ್ನ ಅಸ್ತಿತ್ವವನ್ನು ತಿಳಿಯಪಡಿಸಲೇಬೇಕು.

ಖಾದರ್ ''ಈಗ ಮೂರನೆಯ ಹಂತ—ಕ್ಷಿಪ್ರಗತಿಯಲ್ಲಿ ಅಟೇನ್‌ಷನ್ ನಮೂನೆ. ಆಜ್ಞೆ ನನಗೆ ನೋಡಿ—'ಸ್ಕ್ವಾಡ್! ಅಟೇನ್...ಷನ್, ವನ್'—ಅಲ್ಲಿ 'ಸ್ಕ್ವಾಡ್' ಮುನ್ನೆಚ್ಚರಿಕೆಯ ಭಾಗ, 'ಅಟೇನ್' ಎಚ್ಚರಿಕೆಯ ಭಾಗ, 'ಷನ್' ಕ್ರಿಯಾಭಾಗ. ಆಗ ನಂಬರ್ ಹೇಳಿ, ಎಂದರೆ 'ವನ್' ಎಂದು ಹೇಳಿ, ಕ್ರಿಯೆ ನಡೆಸುತ್ತೇನೆ. ಒಟ್ಟಾಗಿ ಏನಾದರೂ ಸಂಶಯ ಅಥವಾ ಸವಾಲುಂಟೇ ?''

ಸಂದರ್ಭ ದೊರೆಯಿತು ಮುಂದೆ ಬರಲಿಕ್ಕೆ. ಆದರೆ ಪ್ರಶ್ನೆಯೇ ಹೊಳೆಯಲೊಲ್ಲದಲ್ಲ! ''ಮೆದುಳನು ನೀಡದೆ ತಲೆಯನು ಮಾಡಿದ ಕಮಲಜನನು ಬೈದಾಡಿದರು.''

ನಂಬರ್ ೧ ''ಸಾಬ್! ಅಟೇನ್‌ಷನ್ನಿನಿಂದ ಸ್ಟೇಂಡ್ ಅಟ್ ಈಸಿಗೆ ಬರುವುದು ಹೇಗೆ ಎಂದು ವಿವರಿಸುತ್ತೀರಾ ?''

ಅಯ್ಯೋ ನನ್ನ ಲೆಕ್ಕಕಲಿತ ತಲೆಯೇ! ಒಂದು ಪ್ರಮೇಯಕ್ಕೆ ವಿಲೋಮ ಪ್ರಮೇಯ ಇರಲೇಬೇಕೆಂದು ಹುಡುಗರಿಗೆ ಗುಡುಗಿ ಕಲಿಸಿದ್ದೆ. ಆದರೆ ಸ್ಟೇಂಡ್ ಅಟ್ ಈಸ್—ಅಟೇನ್‌ಷನ್ ಕ್ರಿಯೆಯ ವಿಲೋಮಕ್ರಿಯೆ—ಏನೆಂದು ಕೇಳುವಷ್ಟು ಬುದ್ಧಿ ನನಗೆ ಬರಬಾರದಿತ್ತೇ ? ಅದನ್ನು ಖಾದರ್ ಚುರುಕಾಗಿ ವಿವರಿಸಿದರು. ತರುವಾಯ ಎನ್‌ಸಿಓಗಳಿಗೆ ಆಯಾ ಸ್ಕ್ವಾಡುಗಳ ನಾಯಕತ್ವ ವಹಿಸಲು ಆಜ್ಞೆಯಿತ್ತರು. ಮೈದಾನದ ಏಸನ್ನರ

ದಲ್ಲಿ ಸ್ಟ್ಯಾಂಡುಗಳನ್ನು ಹರಡಿ ಅಲ್ಲಿ ಎನ್‌ಸಿಓಗಳ ಹಿರಿತನದಲ್ಲಿ ನಮ್ಮ ಅಭ್ಯಾಸ ಪ್ರಾರಂಭವಾಯಿತು.

ಸಮವಸ್ತ್ರ ಸಾಧಿಸಿದ ನೀರಸ ಏಕತೆ

ಎಂಆರ್‌ಸಿಯ ಮಿಲಿಟರಿ ಶಿಕ್ಷಣ ಪ್ರಾರಂಭವಾದದ್ದು ಗುರುವಾರ (ಮೇ ೧, ೧೯೫೨). ಗುರುವಾರ ಕ್ಷೌರಮಾಡಿಸಿಕೊಂಡರೆ ಮಾನಭಂಗ (ಮಾನವಿಲ್ಲದವರಿಗೋ ?) ಎಂದು ಮುತ್ತಜ್ಜ ಹೇಳುತ್ತಿದ್ದರು. ವಾರದ ರಜಾ ದಿನ ಎಂದು ಗೊತ್ತಿರದಿದ್ದ ಆ ದಿವಸಗಳಲ್ಲಿ ಮಡಿಕೇರಿಯ ರಾಜನಾಪಿತ ನಂಜಪ್ಪನಿಗೆ ಗುರುವಾರ ಗಿರಾಕಿಗಳೇ ಇಲ್ಲದಿದ್ದುದರಿಂದ ರಜೆಯೇ ಆಗಿತ್ತು. ಕಾಲೇಜು ಹೊಸ್ತಿಲ ದಾಟಿದಮೇಲೆ ಇಂಥ ಯಾವ ಸಂಪ್ರದಾಯ ವನ್ನೂ ನಾನು ಪಾಲಿಸುತ್ತಿರಲಿಲ್ಲ. ಕಾರಣವಿಷ್ಟೆ. ಇಲ್ಲಿ ಇರಬಹುದಾದ ಕಾರ್ಯಕಾರಣ ಸಂಬಂಧವನ್ನು ವೈಜ್ಞಾನಿಕವಾಗಿ ಸಮರ್ಥಿಸಲಾಗದು. ಆದರೆ ಆ ಮೊದಲ ಗುರುವಾರದ ಪುನರಾವರ್ತಿತ ಮಾನಭಂಗ, ಬರಿ ಹೊಟ್ಟೆಯ ಬಿಡುವಿಲ್ಲದ ಬಲು ನೀರಸ ದುಡಿಮೆ, ಅಂದೇ ಸಂಜೆ ಕಡ್ಡಾಯದ ಮಿಲಿಟರಿ ಮಾದರಿ ತಲೆ ಬೋಳಿಸಿಕೆ ಇವನ್ನೆಲ್ಲ ಹಿಮ್ಮೊಗ ವಾಗಿ ಗ್ರಾಫ್ ಕಾಗದದ ಮೇಲೆ ಗುರುತಿಸಿ ದೊರೆತ ಆಲೇಖವನ್ನು ನಿರಪೇಕ್ಷವಾಗಿ ಪರಿಶೀಲಿಸುವಾಗ ಮೂಡುವ ಉದ್ಗಾರ "After all Muttajja was right!" ನಮ್ಮ ಸಂಪ್ರದಾಯದ ಸೂಕ್ತಿಗಳ ಹಿನ್ನೆಲೆಯಲ್ಲಿ ವೈಜ್ಞಾನಿಕಾಧಾರಗಳು ಇರಲಾರವೇ ಎಂಬ ಕುತೂಹಲ ಮೂಡುವುದು.

ಆ ದಿನ ನಡೆದದ್ದೇನು ?

ನಮ್ಮ ವ್ಯಕ್ತಿತ್ವವನ್ನು ಮೊದಲು ಅಳಿಸಿದರು. ಸಂತೋಷ, ಅಭಿಮಾನ, ದುಃಖ, ಉದ್ವೇಗ ಮುಂತಾದ ಸಕಲ ಮಾನವೀಯ ಭಾವಗಳೂ ಮಿಲಿಟರಿ ಸಮತಲದಲ್ಲಿ, ಒಂದು ಆಜ್ಞೆಗೆ ಒಂದು ಕ್ರಿಯೆಯ ಸೂತ್ರದ ಎದುರಿನಲ್ಲಿ, ಅರ್ಥಹೀನ ಪ್ರತಿಕ್ರಿಯೆಗಳಾದುವು. ನಾಮಗಳಿಗೂ ಡಿಗ್ರಿಗಳಿಗೂ ದರ್ಜೆಗಳಿಗೂ ಮುಟ್ಟುಗೋಲು ಹಾಕಿದರು. ಪ್ರೊಫೆಸರ್ ಕೆ. ಮಾಧವ ಮೆನನ್, ಎಂ.ಎ. ಎಂಈಎಸ್, ಶ್ರೀ ಜಿ. ಟಿ. ನಾರಾಯಣರಾವ್, ಎಂ ಎ, ಲೆಕ್ಚರರ್ ಮುಂತಾದ ಭವ್ಯ ಪ್ರತಿಮೆಗಳನ್ನೂ ಪ್ರತೀಕಗಳನ್ನೂ ವಿಪೀಠಸ್ಥಗೊಳಿಸಿದರು. ನಮ್ಮ ಮನಸ್ಸನ್ನು ಮುರಿದರು. ಮಿಲಿಟರಿ ಚೌಕಟ್ಟಿನೊಳಗೆ ಸ್ವತಂತ್ರ ಚಿಂತನೆ ಅಪರಾಧ. ಆ ಮಹಾಯಂತ್ರದ ಒಂದು ತಿರುಪೋ ಚಕ್ರದ ಹಲ್ಲೋ ನಾವಾಗಬೇಕೇ ವಿನಾ ಯಂತ್ರದ ಹಿರಿಮೆಯನ್ನು ಅರಿಯಬಾರದು, ಪ್ರಶ್ನಿಸುವುದಂತೂ ಕೂಡದೇಕೂಡದು. ವಿರಾಮ ವನ್ನು ನಿರ್ನಾಮಗೊಳಿಸಿದರು. ವಿರಾಮ ಮನಸ್ಸಿಗೆ ಆಹಾರ ಒದಗಿಸುತ್ತದೆ. ಆಗ ಪ್ರಶ್ನೆಗಳು, ಕುತೂಹಲಗಳು ಮೂಡುತ್ತವೆ. ಇವು ಕ್ರಿಯಾಶೀಲಚಿಂತನೆಗೆ ಆವಿಷ್ಕಾರಗಳಿಗೆ ಎಷ್ಟು ಆವಶ್ಯಕವೋ ಮಿಲಿಟರಿ ಸೌಧದ ಉಳಿವಿಗೆ ಬೆಳೆವಣಿಗೆಗೆ ಅಷ್ಟೇ ಅಪಾಯಕಾರಿ. ಸಮವಸ್ತ್ರವೆಂಬ ನೀರಸ ಏಕತೆ ನಮ್ಮನ್ನು ಬಂಧಿಸಿತು. ಸಹದುಃಖಿಗಳೆಂಬ ನಕಾರಾತ್ಮಕ ಕಾರಣ ನಮ್ಮಲ್ಲಿ ತೋರಿಕೆಯ ಐಕ್ಯವನ್ನು ಪ್ರೇರಿಸಿತು. ಹೃದಯ ಸಂಖ್ಯೆಗಳು ನಮ್ಮ ಜಾತಕಗಳಾದುವು.

ರಾತ್ರಿ ೧೧ ಗಂಟೆಗೆ ಮೆಸ್ಸಿನಿಂದ ಬರಾಕಿಗೆ ಸರ್ವಪಥದಲ್ಲಿಯೂ ಸೋತು ಸುಣ್ಣಾಗಿ

ಪುಡಿಯಾಗಿ ಜರ್ಜರಿತಮನಸ್ಕರಾಗಿ ಅಭಿಮಾನಹೀನರಾಗಿ ಮರಳಿದ್ದು ನಾವಲ್ಲ—ನಮ್ಮ ಛಾಯೆಗಳು, ನಮ್ಮ ಪ್ರೇತಗಳು.

"ರಾವ್ ಜೀ ! ಗೆಜೆಟೆಡ್ ಆಫಿಸರ್ ನಾನು. ಈ ಖಾಲಿ ಎನ್‌ಸಿಓಗಳಿಂದ ಈ ಅಪಮಾನವೇ ನನಗೆ ? ಇದೆಲ್ಲ ನನಗೆ ಅವಶ್ಯವಿಲ್ಲ. ಏನೋ ಒಂದಿಷ್ಟು ಹುಡುಗರ ಸೇವೆಗೆ ಮುಂದೆ ಉಪಯೋಗವಾದೀತೆಂದು ನಾನು ಬಂದೆನಪ್ಪ" ಮೇನನ್ ಉವಾಚ.

ರಾಜು ಮುಂದುವರಿಸಿದ "ನಾನೇನು ಗೊತ್ತೇ ನಿಮಗೆ ? ಚಾರ್ಟರ್ಡ್ ಅಕೌಂಟೆಂಟ್-ಕಂ-ಪ್ರೊಫೆಸರ್. ನನ್ನ ತಿಂಗಳ ವರಮಾನವೇ ಸಾವಿರಾರು ರೂಪಾಯಿಗಳು. ದೇಶಸೇವೆ ಮಾಡೋಣವೆಂದು ಮಹಾತ್ಯಾಗ ಮಾಡಿ ಬಂದವನು ನಾನು. ಆದರೆ ಇದೇನು ಶನಿ ಹಿಡಿಯಿತು !"

ಫಿಲಾಸಫರ್ ನೀಲಕಂಠನ್ ಬಿಡುತ್ತಾನೆಯೇ ? ಇವರಿಗೆಲ್ಲ ಸುಲಭ ಹಾಗೂ ಸಹೃದಯ ಶ್ರೋತೃ ನಾನು ! "ಮಿಸ್ಟರ್ ರಾವ್ ! ಕರ್ಮಸಿದ್ಧಾಂತದಲ್ಲಿ ನಾನು ಅಚಲ ಶ್ರದ್ಧೆ ಇರುವವನು. ಕರ್ಮ ಮಾಡಬೇಕು ನಿಜ. ಆದರೆ ತಾರತಮ್ಯವಿಲ್ಲದ ಕರ್ಮ ಕುಕರ್ಮವಾದೀತು. ನಮ್ಮ ಭವ್ಯ ಸ್ವತಂತ್ರ ರಾಷ್ಟ್ರವನ್ನು ನಿರ್ಮಿಸುವ ಮಹಾಸಾಹಸದಲ್ಲಿ ಭಾಗಿಯಾಗಿ ಆ ಸಂತೋಷ ಪಡೆಯಲು ನಾನು ಬಂದಿದ್ದೇನೆಯೇ ಹೊರತು ಈ ಅರ್ಥಹೀನ ಕವಾಯತು ಕಲಿಯಲೆಂದಲ್ಲ !"

ಇಂಗ್ಲಿಷ್ ಪ್ರೊಫೆಸರ್ ನಾಗರಾಜನ್, ಆ ದಿವಸ ಯಾರೂ ಪಡೆಯದಿದ್ದಷ್ಟು ಶಹಭಾಷ್‌ಗಿರಿಗಳನ್ ಪಡೆದವನ್, ಹೃದಯಸಂಖ್ಯೆಯಲ್ಲಿಯೂ ಉದ್ದದಲ್ಲಿಯೂ ಮಾತಾಳಿತನದಲ್ಲಿಯೂ ನಂಬರ್ ವನ್, ಏಳು ತಂತಿ ಪಿಟೀಲಿನಲ್ಲಿ ಕುಂತಲವರಾಳಿ ನುಡಿಸಿದನ್ "ತಾಪತ್ರಯಂಗಳು ಪುಂಖಾನುಪುಂಖವಾಗಿ ಪ್ರವಹಿಸುತ್ತವೆ. ಅವುಗಳೊಡನೆ ಏರಿ ಚಲಿಸಿ ಭವ್ಯ ವಿಜಯಸ್ಥಾನ ತಲಪುವುದರಲ್ಲೇ ದಿಟ್ಟತನವಿದೆ ಕಾಣಿರೋ. ಇಂದು ನನಗೆ ಅತ್ಯಂತ ಸಂತೋಷದ ದಿವಸ !"

"ರಾವ್ ! ಸ್ವಲ್ಪ ನಿಲ್ಲಿ. ಬೆಳಗ್ಗಂತೂ ಕೈಕೊಟ್ಟೇ ಬಿಟ್ಟಿರಿ. ಗಂಟು ಗಂಟು ನೋವು. ಜೊತೆಗೆ ಹಸಿವು ಬೇರೆ. ಇದೇನು ಗ್ರಹಚಾರ ಬಂತಪ್ಪ" ಬಾಲಕೃಷ್ಣನ್ನನ ದುಃಖವಾಣಿ.

"ನಾಳೆ ನಾನಂತೂ ಈ ದಬ್ಬಾಳಿಕೆಯನ್ನು ವಿರೋಧಿಸುವವನೇ. ಸ್ವತಂತ್ರ ಭಾರತದಲ್ಲಿ ಇದೇನು ಪಾರತಂತ್ರ್ಯ. ರೂಸೋ ಹೇಳಿದ್ದಾನೆ—ದಡ್ಡರು ಸದಾ ಬಹುಸಂಖ್ಯಾತರು ; ದಡ್ಡರ ಬಹುಮತದಿಂದ ಉತ್ಪನ್ನವಾಗುವ ದೌರ್ಜನ್ಯವನ್ನು ಬುದ್ಧಿವಂತರು ಎದುರಿಸದಿದ್ದರೆ ಅಳಿದೇ ಹೋಗುತ್ತಾರೆಂದು. ನಾನು ಈ ರೀತಿ ಅಳಿದುಹೋಗಲು ತಯಾರಿಲ್ಲ" ರಾಜ್ಯಶಾಸ್ತ್ರ ಪದವೀಧರ ಪಂಚನಾಥನ್ ಗುಡುಗಿದ.

"ನಿಮ್ಮ ಈ ಹೇಳಿಕೆಯಲ್ಲಿಯ ಆಧಾರಭಾವನೆ ಏನು ? ಆರ್ಮಿಯವರು ದಡ್ಡರು, ನಾವು ಬುದ್ಧಿವಂತರೆಂದು ತಾನೇ ? ನಿಮ್ಮ ಈ ದಿವಸದ ವರ್ತನೆ ನೋಡಿದರೆ ಇದನ್ನು ಒಪ್ಪುವುದು ಕಷ್ಟ" ಭೌತಶಾಸ್ತ್ರ ಪಂಡಿತ ಶಿವಶಂಕರ ಮೇನನ್ ಮುತ್ತೊಡೆದ.

ಈ ಪರಮಾಣುವಿದಳನದಿಂದ ಉತ್ಪನ್ನವಾದ ಮಹಾಶಕ್ತಿ ಮಲೆಯಾಳೀ ಭಾಷೆಯಲ್ಲಿ ಜಗಳವಾಗಿ ಮುಂದುವರಿಯಿತು. ಇದರಿಂದ ತಮಿಳರು ಬೇರೆ ಆದರು. ಬಾಲಕೃಷ್ಣನ್ ಜೊತೆ ಓಡಿದ ನಾನೂ ಭಾವಶೂನ್ಯ ಮನಸ್ಸಿನಿಂದ ಅನಾದಿಕಾಲದ ಅನಂತದೂರದ ನಕ್ಷತ್ರ

ಗಳನ್ನು ನೋಡುತ್ತ ಹೆಜ್ಜೆಯಿಟ್ಟೆ. ನನಗೆ ತಿಳಿಯದಂತೆಯೇ ನನ್ನ ಯೋಚನಾಲಹರಿ ಬೇರೆ ದಾರಿಯಲ್ಲಿ ಹರಿಯುತ್ತಿತ್ತು. ದೈಹಿಕವಾಗಿ ಈ ಶಿಕ್ಷಣ ನನಗೆ ಅತಿ ಕಠಿಣ ವೆಂದಾಗಲೀ ಅಸಾಧ್ಯವೆಂದಾಗಲೀ ಅನಿಸಿರಲಿಲ್ಲ. ಇನ್ನು ನಾನೊಬ್ಬನೇ ಅಲ್ಲವಲ್ಲ ಇದನ್ನು ಅನುಭವಿಸುತ್ತಿರುವವನು. ಒಂದು ದಿವಸದ ಅನುಭವದಿಂದ ಹೇಳುವುದಾದರೆ ನಾನು ಯಾವ ಕಾರಣದಿಂದಲೂ ಅಳುಕಬೇಕಾಗಿರಲಿಲ್ಲ. ಬೌದ್ಧಿಕವಾಗಿ ಈ ಶಿಕ್ಷಣ ಅಷ್ಟೇನೂ ಕುತೂಹಲಪ್ರೇರಕವಾಗಿರಲಿಲ್ಲ, ನಿಜ. ಆದರೆ ಶಿಕ್ಷಣವನ್ನು ಪಡೆಯುತ್ತ ಇರುವಾಗ ಯಾವುದು ತಾನೇ ಕುತೂಹಲಪ್ರೇರಕವಾಗಿರುತ್ತದೆ ? ನನ್ನ ಕಾಲೇಜು ಜೀವನದ ಅನುಭವ ಖಂಡಿತ ಸಂತೋಷದಾಯಕವಾಗಿರಲಿಲ್ಲ. ಅಲ್ಲೆಲ್ಲ ಕರ್ತವ್ಯದೃಷ್ಟಿ, ಬೇರೆ ಯಾವ ದಾರಿಯೂ ಇಲ್ಲದಿರುವಿಕೆ, ಸಹಪಾಠಿಗಳ ಸಮಾನ ಅವಸ್ಥೆ ಮುಂತಾದವುಗಳಿಂದ ದಿವಸ ತಳ್ಳಿಯಾಯಿತು. ಮುಂದೆ ಫಲಿತಾಂಶ ಹಿತಕರವಾದಾಗ ಸಂದುಹೋದ ದಿವಸಗಳ ಕಷ್ಟಕಾರ್ಪಣ್ಯಗಳು ಹಿಮ್ಮೆಟ್ಟಿದ್ದುವು. "ಅನುಭವವು ಸವಿಯಲ್ಲ, ಆದರೆ ನೆನಪೇ ಸವಿಯು." ನಾನು ಬೆಳೆದು ಬಂದು ವ್ಯವಹರಿಸುತ್ತಿರುವ ಪ್ರಪಂಚ ಅಲ್ಲಿಯ ಭಾಷೆ ಸಂಪ್ರದಾಯ ಮೌಲ್ಯಗಳು ಒಂದು ಬಗೆಯವು. ಈ ಮಿಲಿಟರಿ ಪ್ರಪಂಚ ಅದಕ್ಕಿಂತ ತೀರ ಭಿನ್ನವಾದದ್ದು. ಇಲ್ಲಿಯ ಭಾಷೆ ಸಂಪ್ರದಾಯ ಮೌಲ್ಯಗಳು ಏನೆಂದು ತಿಳಿಯುವ ತನಕ ನಾನು ಇದನ್ನು ಕುರಿತು ಯಾವ ತೀರ್ಪನ್ನೂ ನೀಡಲಾಗದು. ಹಾಗೆ ಮಾಡಿದ್ದೇ ಆದರೆ ಅದು ಆ ಪ್ರಪಂಚದ ಮಾನದಂಡದಿಂದ ಈ ಪ್ರಪಂಚದ ಮೌಲ್ಯಗಳನ್ನು ಅಳೆಯುವಂಥ ಅವೈಜ್ಞಾನಿಕ ಕ್ರಮವಾಗುತ್ತದೆ. ಆದ್ದರಿಂದ ಕ್ಷಿಪ್ರ ತೀರ್ಮಾನ ಸಲ್ಲದು—ತಸ್ಮಾದ್ಯುಧ್ಯ ಸ್ವಭಾರತ.

ಮಿಲಿಟರಿ ಪರಿಭಾಷೆ

ಎಂಆರ್‌ಸಿ ಜೀವನದ ಮುಂದಿನ ದಿವಸಗಳ ಅನುಭವವನ್ನು ಸರಿಯಾಗಿ ಗ್ರಹಿಸಲು ಕೆಲವು ಮಿಲಿಟರಿ ಶಬ್ದಗಳ ಅರ್ಥ ಗೊತ್ತಿದ್ದರೆ ಒಳ್ಳೆಯದು.

ಈ ಅಧ್ಯಾಯವನ್ನು ಒಂದು ಮಿಲಿಟರಿ ಪ್ರಬಂಧವನ್ನು ಬರೆಯಬೇಕಾದ ಮಾದರಿ ಯಲ್ಲಿ ಬರೆದಿದ್ದೇನೆ.

ಉದ್ದೇಶ. ಮಿಲಿಟರಿ ಪರಿಭಾಷೆಯ ವಿವರಣೆ.

ಸಂಕ್ಷೇಪ ವಿವರಣೆ. ಈ ಪಾಠವನ್ನು ಮೂರು ಹಂತಗಳಲ್ಲಿ ವಿವರಿಸಿದೆ. ೧ ಮಿಲಿಟರಿ ಉಡುಪಿಗೆ ಸಂಬಂಧಿಸಿದ ಪರಿಭಾಷೆ. ೨ ಮಿಲಿಟರಿ ಶಸ್ತ್ರಗಳಿಗೆ ಸಂಬಂಧಿಸಿದ ಪರಿಭಾಷೆ. ೩ ಮಿಲಿಟರಿಯಲ್ಲಿ ಇತರ ವ್ಯವಹಾರಗಳಿಗೆ ಸಂಬಂಧಿಸಿದ ಪರಿಭಾಷೆ.

ವಿವರಣೆ. ೧ ಉಡುಪು—ಮಿಲಿಟರಿ ಭವ್ಯಸೌಧ ವಿವಿಧ ದರ್ಜೆಗಳ ಸ್ಪಷ್ಟ ವರ್ಗೀ ಕರಣ, ಅವುಗಳಲ್ಲಿ ಹೊಣೆಗಾರಿಕೆಯ ವಿತರಣೆ ಮತ್ತು ಅರಿವು ಹಾಗೂ ಎಲ್ಲ ದರ್ಜೆ ಗಳಲ್ಲಿಯೂ ಪರಸ್ಪರ ತಿಳಿವು ಮತ್ತು ನಿಸಮಯ ಇವುಗಳ ಮೇಲೆ ಭದ್ರವಾಗಿ ನೆಲಸಿದೆ. ಇಲ್ಲಿ ಉಡುಪಿನ ಪ್ರಾಧಾನ್ಯವನ್ನು ಎಷ್ಟು ಅವಧರಿಸಿದರೂ ಕಡಿಮೆಯೇ. ಮಿಲಿಟರಿಯ ಎಲ್ಲ ದರ್ಜೆಗಳೂ ಧರಿಸುವ ಉಡುಪನ್ನು ಸ್ಥೂಲವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು. (i) ಪಿಟಿ ಉಡುಪು, (ii) ಡ್ರಿಲ್ ಉಡುಪು, (iii) ಮೆಸ್ ಉಡುಪು.

(i) ಪಿಟಿ ಉಡುಪೆಂದರೆ ಫಿಸಿಕಲ್ ಟ್ರೈನಿಂಗ್ ಅಥವಾ ದೈಹಿಕ ವ್ಯಾಯಾಮಕಾಲದಲ್ಲಿ ಧರಿಸುವ ಉಡುಪು. ಇದರ ಮುಖ್ಯ ಅಂಶಗಳಿಷ್ಟು—ಕಾಲುಚೀಲಗಳು ಬಿಳಿಹತ್ತಿಯವು, ಶೂಗಳು ಕ್ಯಾನ್ವಾಸ್ ಕಂದು ಬಣ್ಣದವು, ಚಡ್ಡಿ ಖಾಕಿ, ಬನಿಯನ್ ಬಿಳಿ ಹತ್ತಿಯದು.

(ii) ಡ್ರಿಲ್ ಉಡುಪೆಂದರೆ ಕವಾಯತಿ, ಶಸ್ತ್ರಶಿಕ್ಷಣ, ಇತರ ಪಾಠಗಳು ಇವೇ ಮುಂತಾದ ಸಂದರ್ಭಗಳಲ್ಲಿ ಧರಿಸುವ ಉಡುಪು. ಇದರ ಮುಖ್ಯ ಅಂಗಗಳಿಷ್ಟು—ಕಾಲು ಚೀಲಗಳು ದಪ್ಪ ಕಂದು ಉಣ್ಣೆಯವು, ಬೂಟುಗಳು ಅಮ್ಯುನಿಷನ್ ಕಪ್ಪು ಬಣ್ಣದವು, ಸುರಾಲು ಖಾಕಿ, ಬೆಲ್ಟ್ ವೆಬ್ ಆಲಿವ್ ಹಸುರು, ಷರಟು ಬುಷ್ ಖಾಕಿ (ಸುರಾಲಿ ನೊಳಗೆ ತುರುಕಿರಬೇಕು), ಕೀರ್ತಿಗಳು ಭುಜ ಯುಕ್ತದರ್ಜೆಯವು, ತೊಪ್ಪಿ ಚಪಾತಿ ಆಲಿವ್ ಹಸುರು, ಬಿಲ್ಲೆ ತೊಪ್ಪಿ (ಬ್ಯಾಡ್ಜ್ ಕ್ಯಾಪ್).

(iii) ಮೆಸ್ ಉಡುಪೆಂದರೆ ಭೋಜನರಾತ್ರಿಯಂದು ಆಫಿಸರರು ಮೆಸ್ಸಿಗೆ ಹೋಗು ವಾಗ ಧರಿಸುವ ಉಡುಪು. ಇದರ ಮುಖ್ಯ ಅಂಗಗಳಿಷ್ಟು—ಕಾಲುಚೀಲಗಳು ಕಪ್ಪು ಹತ್ತಿಯವು, ಶೂಗಳು ಕರಿಚಕ್ಕಳದ್ದು, ಸುರಾಲು ಆಲಿವ್ ಹಸುರು, ಕೋಟ್ ಬುಷ್ ಆಲಿವ್ ಹಸುರು (ಸುರಾಲಿನ ಮೇಲೆ ಇಳಿಬಿಟ್ಟಿರಬೇಕು), ಬೆಲ್ಟ್ ಬಕ್ಕಲ್ ಸಮೇತ ಆಲಿವ್ ಹಸುರು, ಕೀರ್ತಿಗಳು ಭುಜ ಯುಕ್ತದರ್ಜೆಯವು, ತೊಪ್ಪಿ ಆಫಿಸರರದು (ಪೀಕ್ ಕ್ಯಾಪ್), ಬಿಲ್ಲೆ ತೊಪ್ಪಿ.

ಷರಾ. (i) ಎಫ್‌ಎಸ್‌ಎಂಓ ಎಂದರೆ ಫೀಲ್ಡ್ ಸರ್ವಿಸ್ ಮಾರ್ಚಿಂಗ್ ಆರ್ಡರ್ (ಕ್ಷೇತ್ರಸೇವಾಚಾಲನಾದೇಶ) ಎಂಬುದರ ಸಂಕ್ಷೇಪರೂಪ. ದೀರ್ಘನಡಿಗೆಯಲ್ಲಿ, ಗುಂಡು ಹೊಡೆವ ಮೈದಾನಕ್ಕೆ (ಫೈರಿಂಗ್ ರೇಂಜ್) ಹೋಗುವಾಗ, ಯುದ್ಧ ವಿದ್ಯೆಯ ಪ್ರಾಯೋಗಿಕಾಭ್ಯಾಸ ಕಾಲದಲ್ಲಿ ತೊಡಬೇಕಾದ ಈ ವಿಶೇಷ ಉಡುಪಿನ ವಿವರ ಮುಂದೆ ಕೊಡಲಾಗುವುದು.

(ii) ಇಲ್ಲಿ ಬರೆದಿರುವ ಯಾವುದನ್ನೂ ಗಮನಿಸದೆ ಯುಕ್ತ ಸಂದರ್ಭಗಳಲ್ಲಿ ಕಮಾಂಡಿಂಗ್ ಆಫಿಸರರು ನೀಡುವ ಮಾರ್ಪಾಡುಗಳು ಲಗಾವಾಗತಕ್ಕದ್ದು.

೨ ಶಸ್ತ್ರಗಳು. ಸೈನ್ಯಕ್ಕೆ ಹೊಸ ಆಯಾಮನೀಡುವ ಕಬ್ಬಿಣದ ಹಾಗೂ ಬೆಂಕಿಯ ಕರೆಗಳೇ ಶಸ್ತ್ರಗಳು. ರಕ್ಷಣೆಯಲ್ಲಿಯೂ ಆಕ್ರಮಣೆಯಲ್ಲಿಯೂ ಶಸ್ತ್ರಗಳ ಪ್ರಾಧಾನ್ಯ ವನ್ನು ಎಷ್ಟು ಅವಧರಿಸಿದರೂ ಕಡಿಮೆಯೇ. ಶಸ್ತ್ರಗಳನ್ನು ಸ್ಥೂಲವಾಗಿ ಎರಡು ವಿಭಾಗಗಳಾಗಿ ವಿಂಗಡಿಸಬಹುದು. (i) ಚಿಕ್ಕ ಶಸ್ತ್ರಗಳು, (ii) ದೊಡ್ಡ ಶಸ್ತ್ರಗಳು.

(i) ಚಿಕ್ಕ ಶಸ್ತ್ರಗಳು—ತೀರ ಸಮೀಪದ ಯುದ್ಧದಲ್ಲಿ (ಕ್ಲೋಸ್ ಕ್ವಾರ್ಟರ್ ಬ್ಯಾಟಲ್—ಸಿಕ್ಯುಬಿ) ಬಳಸುವಂಥವು. ಪಿಸ್ತೂಲ್, ಈಟಿ ಮುಂತಾದವು.

(ii) ದೊಡ್ಡ ಶಸ್ತ್ರಗಳು—ಇವುಗಳಲ್ಲಿ ಎರಡು ವಿಭಾಗಗಳಿವೆ: (1) ಅಸ್ವಯಂ ಚಾಲಿತ ಅಥವಾ ಸಾಧಾರಣ ಶಸ್ತ್ರಗಳು, (2) ಸ್ವಯಂಚಾಲಿತ ಶಸ್ತ್ರಗಳು.

(1) ಅಸ್ವಯಂಚಾಲಿತ ಅಥವಾ ಸಾಧಾರಣ ಶಸ್ತ್ರಗಳು—ರೈಫಲ್ ಗ್ರೆನೇಡ್.

(2) ಸ್ವಯಂಚಾಲಿತ ಶಸ್ತ್ರಗಳು—ಸ್ಟೆನ್‌ಗನ್, ಬ್ರೆನ್‌ಗನ್ (ಲೈಟ್ ಮಷೀನ್‌ಗನ್ —ಎಲ್‌ಎಂಜಿ.)

೩ ಇತರ ವ್ಯವಹಾರಗಳು. ಸೈನಿಕ ಕಲಿಯುವ ಇತರ ಪಾಠಗಳು ನಾಲ್ಕು. (i)

ಭೂಪಟ ಪಠನ (ಮ್ಯಾಪ್ ರೀಡಿಂಗ್—ಎಂಆರ್). (ii) ಕ್ಷೇತ್ರ ಕೌಶಲ (ಫೀಲ್ಡ್ ಕ್ರಾಫ್ಟ್—ಎಫ್‌ಸಿ). (iii) ಬೆಟಾಲಿಯನ್ ವ್ಯವಸ್ಥೆ (ಆರ್ಗನೈಸೇಷನ್—ಓಆರ್‌ಜಿ). (iv) ಪರಿಗಣನೆ (ಅಪ್ರಿಸಿಯೇಷನ್—ಎಪಿಸಿ). ಇವುಗಳಿಗೆ ಸಂಬಂಧಿಸಿದ ಪರಿಭಾಷೆ ಆಯಾ ಪಾಠಗಳ ಚರ್ಚೆಯಲ್ಲಿಯೇ ಬರುತ್ತದೆ.

ಪರಿಸಮಾಪ್ತಿ. ಮಿಲಿಟರಿ ಪರಿಭಾಷೆ ಪ್ರತಿಯೊಬ್ಬ ಸೈನಿಕನಿಗೂ ತಿಳಿದಿರತಕ್ಕದ್ದು. ಹೇಗೆ ಯುದ್ಧರಂಗದಲ್ಲಿ ಶಸ್ತ್ರಕೌಶಲ ಪ್ರಯತ್ನರಹಿತವಾಗಿ ಸರಾಗವಾಗಿ ಪ್ರದರ್ಶಿತವಾಗಬೇಕೋ ಹಾಗೆ ವ್ಯವಹಾರರಂಗದಲ್ಲಿ ಪರಿಭಾಷೆಯೂ ಅನ್ವಯವಾಗಬೇಕು.

ಕಾಲುಚೀಲ ಕದ್ದ ಕಳ್ಳ

ಎಂಆರ್‌ಸಿ ದಿನಗಳಲ್ಲಿ ಪ್ರತಿಯೊಂದು ಶಿಕ್ಷಣ ದಿವಸವೂ ಅತಿ ಕ್ಷಿಪ್ರವೇಗದಿಂದ ಧಾವಿಸುತ್ತಿತ್ತು. ಅಲ್ಲಿ ಯೋಚನೆಗೇ ಪುರುಸೊತ್ತಿರಲಿಲ್ಲ. ೪–೩೦ ಗಂಟೆಗೆ ಎದ್ದು ಧುಡಧುಡನೆ ಪ್ರಾತರ್ವಿಧಿ ತೀರಿಸಿ ಬೆಡ್ ಟೀ ಹೀರಿ ಪಿಟಿ ಉಡುಪು ತೊಟ್ಟು ಡ್ರಿಲ್ ದಿರಿಸು ಹೊತ್ತು ಫರ್ಲಾಂಗ್ ದೂರ ಏರಿ ತೋಪುಖಾನೆಯಲ್ಲಿ ಸರ್ತಿ ಕಾದು ರೈಫಲ್ ಪಡೆದು ಅಲ್ಲಿಂದ ಅರ್ಧ ಮೈಲಿ ದೂರದ ಆಟದ ಬಯಲಿಗೆ ಇಳಿದು ಸಾಗಿ ಅಲ್ಲಿ ೬–೧೫ ಗಂಟೆ ಬಿಗಿಲೂದುವಾಗ ಹಾಜರಿರಬೇಕು. ಪ್ರತಿಯೊಂದು ಕ್ರಿಯೆಯ ಅತಿ ಸೂಕ್ಷ್ಮ ವಿವರವನ್ನೂ ನಿಯೋಜಿತ ವಿಧಾನದಲ್ಲಿ ವೇಳಾಪಟ್ಟಿ ಅನುಸಾರ ನಿರ್ವಹಿಸಿದರೆ ಮಾತ್ರ ಇದು ಸಾಧ್ಯ. ಇಲ್ಲವಾದರೆ ಒಂದೋ ತಡವಾಗುತ್ತದೆ ಅಥವಾ ಅಪರಿಪೂರ್ಣವಾಗುತ್ತದೆ. ತೋಪುಖಾನೆ ತಲಪುವಾಗ "ಹ್ಹಾ! ತೊಪ್ಪಿ ಮರೆತೆ" ಎಂದು ಹಿಂದೆ ಓಡುವವರು ಬೇಕೇ? ಮೈದಾನ ತಲಪುವಾಗ "ಅಯ್ಯೋ! ಬೆಲ್ಟ್ ಕಾಣುವುದಿಲ್ಲ" ಎಂದು ಕಂಗಾಲಾಗುವವರು ಬೇಕೇ? ಪಿಟಿ ಮುಗಿಸಿ ಡ್ರಿಲ್ ಉಡುಪು ತೊಡುವಾಗ "ಬೂಟಿನಲ್ಲಿ ಲೇಸುಗಳೇ ಇಲ್ಲ" ಎಂದು ನಿಟ್ಟುಸಿರು ಬಿಡುವವರು ಬೇಕೇ? ವಿವರವನ್ನು ಅಲ್ಲಿ ಕೇಳುವವರಿಲ್ಲ. ಕಾರಣ ಏನೇ ಇರಲಿ, ಶಿಕ್ಷೆ ಒಂದೇ—ಅಪರಾಹ್ಣ ಒಂದು ಗಂಟೆಕಾಲ ಅಧಿಕ ಕವಾಯತು (ಎಕ್ಸ್‌ಟ್ರಾ ಪೆರೇಡ್). ಇತರರು ವಿಶ್ರಾಂತಿಸುತ್ತಿರುವಾಗ ಇಂಥ ಶಿಕ್ಷೆ ಪಡೆಯುವುದೇನೂ ಸಾಮಾನ್ಯ ಅಪಮಾನವಲ್ಲ. ಯಾನಿಶಾಸರ್ವಭೂತಾನಾಂ! ಈ ಶಿಕ್ಷೆಗೆ ಹೆದರಿ ಎಂಥ ಸೋಮಾರಿಗಳೂ ಕಾಲನಿಷ್ಠಾವಂತರಾಗಬೇಕಾಯಿತು, ಕಾರ್ಯನಿರ್ವಹಣೆಯಲ್ಲಿ ಕ್ರಮಬದ್ಧತೆಯನ್ನು ಅನುಷ್ಠಾನಗೊಳಿಸುವವರಾಗಬೇಕಾಯಿತು.

ಕಾಲನಿಷ್ಠೆಯ ವಿಚಾರದಲ್ಲಿ ನಾನು ಕಡುನಿಷ್ಠುರಿ. ಇದು ಚಿಕ್ಕಂದಿನಲ್ಲಿ ತಂದೆಯವರಿಂದ ಕಲಿತ ಪಾಠ. ಅವರದು ತಿರುಗುವ ಕೆಲಸ (ಎಗ್ಸಿಕ್ಯೂಟಿವ್ ಜಾಬ್). ಮಡಿಕೇರಿಯಿಂದ ೮–೧೦ ಮೈಲಿ ದೂರದ ಹಳ್ಳಿಗಳಿಗೆ ಹೋಗಿ ಸಹಕಾರ ಸಂಘಗಳ ಲೆಕ್ಕ ಪತ್ರಗಳ ಪರಿಶೋಧನೆ ನಡೆಸಬೇಕಾಗಿತ್ತು. ಅಲ್ಲಿಗೆಲ್ಲ ಬಸ್ಸುಗಳಿದ್ದರೂ ಅವು ಬೇಕಾದಷ್ಟು ಸಂಖ್ಯೆಯಲ್ಲಿರಲಿಲ್ಲ. ಇದ್ದ ಒಂದೆರಡು ಬಸ್ಸುಗಳೂ ಸಂತೆ, ಜಾತ್ರೆ ದಿವಸಗಳಲ್ಲದಿದ್ದರೆ ಹೆಚ್ಚು ಪಾಲು ಖಾಲಿಯಾಗಿಯೇ ಹೋಗುತ್ತಿದ್ದುವು. ಸುಭಿಕ್ಷದ ದಿವಸಗಳು ಬೆಳಗ್ಗಿನ ಬಸ್ಸಿನಲ್ಲಿ ಹೋದರೆ ಕೆಲಸ ಮುಗಿಸಿ ಸಂಜೆಯ ಬಸ್ಸಿನಲ್ಲಿ ಮರಳಬಹುದು. ಅದು ತಪ್ಪಿ ಹೋದರೆ ಮತ್ತೆ ನಡೆದೇ ಹೋಗಬೇಕು; ಇಲ್ಲವಾದರೆ ಅಪರಾಹ್ಣದ ಬಸ್ಸಿನಲ್ಲಿ ಹೋಗಿ ಹಳ್ಳಿ

ಯಲ್ಲೇ ರಾತ್ರಿ ಉಳಿಯಬೇಕು. ಮಡಿಕೇರಿಯ ಚಳಿ. ಜೊತೆಗೆ ಹಿಮ. ಬೆಳಗ್ಗಿನ ಸುಖ ನಿದ್ರೆ. ತಂದೆಯವರು ಬಡಿದೆಬ್ಬಿಸಿ ಆಜ್ಞಾಪಿಸುತ್ತಾರೆ "ಬಸ್ ನಿಲ್ದಾಣಕ್ಕೆ ಹೋಗು. ಮಡೂರ್ನಾಡಿಗೆ ಒಂದು ಸೀಟು ಇಟ್ಟುಕೊಂಡು ಬಸ್ಸಿನಲ್ಲೇ ಕೂತುಕೊಂಡು ಸುಂಕದ ಕಟ್ಟೆಗೆ ಬಾ. ಅಷ್ಟರಲ್ಲಿ ನಾನು ಬಂದುಬಿಡುತ್ತೇನೆ." ಬಸ್ ಹೊರಡುವುದು ೭ ಗಂಟೆಗೆ. ನನಗೆ ದೊರೆಯುವ ಹುಕುಂ ೬-೪೫ ಗಂಟೆಗೆ. ಇವರು ಎದ್ದದ್ದು ಬಹುಶಃ ೪ ಗಂಟೆಗೇ ಆಗಿದ್ದರೂ ಇನ್ನೂ ಸ್ನಾನವೇ ಆಗಿಲ್ಲ! ಆದರೆ ಕುರಿಯಣ್ಣಗ ಹುಲಿ ತಂದೆ ಎದುರು ವಾದಿಸಿ ನಿಲ್ಲಬಲ್ಲನೇ? ಅದೂ ಸ್ವಾತಂತ್ರ್ಯಪೂರ್ವದ ಭಾರತದಲ್ಲಿ! ಸರಿ ನಾನು ಓಡಿದೆ. ಬಸ್‌ನಲ್ಲಿ ಕುಳಿತೆ. ನಿಯಮಪ್ರಕಾರ ಟಿಕೇಟ್ ಕೊಂಡೆ. ನಿಲ್ದಾಣದಿಂದ ಮುಕ್ಕಾಲು ಮೈಲಿ ದೂರದ ಸುಂಕದ ಕಟ್ಟೆಗೆ ಮಲೆನಾಡಿನ ೧೯೨೦ರ ಮೋಡೆಲ್ ಫೋರ್ಡ್ ಸಾಗಿ ಬಂತು. ಮಲೆನಾಡಿನಲ್ಲಿ ಕಾಲಚಲನೆ ಬಲು ನಿಧಾನ. ಗಂಟೆ ೭-೩೦. ಆದರೆ ತಂದೆ ಯವರಿಲ್ಲ. ಬಸ್ ನಿಲ್ಲಿಸಿ ಹತ್ತಿರದ ದಿಬ್ಬವೇರಿ ಬ್ರಾಹ್ಮಣರಕೇರಿಯ ಕಡೆಯಿಂದ ಬರುವ ದಾರಿ ಇಡೀ ದಿಟ್ಟಿಸಿದೆ. ಅವರ ಸುಳಿವೇ ಇಲ್ಲ. ಡ್ರೈವರ್ ಶಪಿಸಿದ. ಕಂಡಕ್ಟರ್ ಗೇಲಿ ಸಿದ. ಬಸ್ ಹೊರಟೇಹೋಯಿತು. ಕಾಲ, ಪ್ರವಾಹ, ಬಸ್ ಯಾರನ್ನಾದರೂ ಕಾದಾವೇ? ಮುಂದಿನ ತಿರುಗಾಸಿನಲ್ಲಿ ಬಸ್ಸು ಮಾಯವಾಗುತ್ತಿದ್ದಂತೆಯೇ ತಂದೆ ಯವರು ನನ್ನೆದುರು ಪ್ರತ್ಯಕ್ಷ. ಅವರಿಂದಲೂ ನನಗೆ ಮುಖಭಂಗ ಡ್ರೈವರ್‌ನ ಮೇಲೆ ಪ್ರಭಾವ ಬೀರದಿದ್ದುದಕ್ಕೆ! ಇಂಥ ಅನುಭವ ಎರಡು ಮೂರು ಸಲ ಆಗುವಾಗ ಅದರ ಗಣಿತ ನನ್ನ ಎಳೆ ಮನಸ್ಸಿಗೂ ತಿಳಿಯಿತು "ಉದ್ದೇಶಿತ ಬಸ್ಸಿನಲ್ಲಿ ಇವರು ಹೋಗುವವ ರಲ್ಲ!" ಹೀಗೆ ನಾನು ಕಲಿತ ಕಾಲನಿಷ್ಠೆ ಒಂದು ವಿಧದ ನಕಾರಾತ್ಮಕ ಅನುಭವದಿಂದ ಲಭಿಸಿದ್ದು.

ಆಜ್ಞೆಗಳನ್ನು ಪಾಲಿಸುವ ವಿಚಾರದಲ್ಲಿಯೂ ಇದೇ ರೀತಿ ನನ್ನದು ಒಂದು ರೀತಿಯ ಅತಿ ನಿಷ್ಠೆ, ಅಂಧನಿಷ್ಠೆ ಎಂದೇ ಹೇಳಬೇಕಾದರೆ. ಆದ್ದರಿಂದ ನಾನು ಎಂಆರ್‌ಸಿಯಲ್ಲಿ ಹಿಂದಿನ ರಾತ್ರಿಯೇ ಮುಂದಿನ ದಿವಸದ ಎಲ್ಲ ವಿವರಗಳನ್ನೂ ಲಕ್ಷ್ಯವಿಟ್ಟು ಅಭ್ಯಸಿಸಿ ಅವುಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತಿದ್ದೆ. ಉಡುಪು ಮುಂತಾದವನ್ನು ಹಿಂದಿನ ರಾತ್ರಿಯೇ ಸರಿಯಾಗಿ ಜೋಡಿಸಿ ಸಿದ್ಧನಾಗಿರುತ್ತಿದ್ದೆ. "ಮಧ್ಯರಾತ್ರಿಯ ಗಾಢ ನಿದ್ರೆ ಯಲ್ಲಿಯೂ ಸಮರ್ಥ ಸೈನಿಕ ಯುದ್ಧ ಸನ್ನದ್ಧನಾಗಿರಬೇಕು. ಆಗ ಎದ್ದು ರೈಫಲ್ಲನ್ನೋ ಉಡುಪನ್ನೋ ಹುಡುಕುವವನಿಗೆ ಆರ್ಮಿಯಲ್ಲಿ ಸ್ಥಾನವಿಲ್ಲ" ಎಂದು ಖಾದರ್ ಹೇಳಿ ದ್ದುದನ್ನು ಅಕ್ಷರಶಃ ಪಾಲಿಸುತ್ತಿದ್ದೆ. ಈ ಮಿಲಿಟರಿಯವರು ಎಲ್ಲಿಯಾದರೂ ಪರೀಕ್ಷೆ ಮಾಡಲು ಬಂದರೆ ನಾನು ಖಂಡಿತ ಸೋಲಬಾರದು ಎಂಬ ಛಲ. ಸಾಮಾನ್ಯವಾಗಿ ೫ ಗಂಟೆಗೆ ಎದ್ದು ಚುರುಕಾಗಿ ಕ್ರಿಯೆ ಮುಗಿಸಿದರೆ ೬-೧೫ ಗಂಟೆಗೆ ಆಟದ ಬಯಲನ್ನು ವಿಶೇಷ ಗಡಿಬಿಡಿ ಇಲ್ಲದೇ ತಲಪಬಹುದಿತ್ತು. ಆದರೆ ನನ್ನದು ಇನ್ನಷ್ಟು ಎಚ್ಚರಿಕೆಯ ಸ್ವಭಾವ. ಹೀಗಾಗಿ ೪-೩೦ಕ್ಕೇ ಏಳುತ್ತಿದ್ದೆ. ಹೊತ್ತುಕೊಂಡು ಹೋಗಬೇಕಾಗಿದ್ದ ಕವಾಯತಿ ಉಡುಪಿನ ವಿವರಗಳನ್ನು ಹಿಂದಿನ ರಾತ್ರಿಯೇ ಪರಿಶೀಲಿಸಿದ್ದರೂ ಬರಾಕಿ ನಿಂದ ಹೊರಡುವ ಮುನ್ನ ಪುನಃ ಪರೀಕ್ಷಿಸುತ್ತಿದ್ದೆ. ಆಟದ ಬಯಲನ್ನು ೬ ಗಂಟೆಗೆ ಮೊದಲೇ ತಲಪಿ ಇನ್ನೊಮ್ಮೆ ಉಡುಪನ್ನು ಪರಿಶೀಲಿಸಿ ಅದನ್ನೂ ರೈಫಲ್ಲನ್ನೂ ಯುಕ್ತ

ಸ್ಥಳದಲ್ಲಿ ಓರಣವಾಗಿಟ್ಟು ಚಟುವಟಿಕೆ ಗಳಿಸಲು ಮೈದಾನದಲ್ಲಿ ಓಡುತ್ತಿದ್ದೆ. ಮೈದಾನಕ್ಕೆ ಮೊದಲು ತಲಪುತ್ತಿದ್ದ ಐವರಲ್ಲಿ ಪ್ರತಿದಿವಸವೂ ನಾನೊಬ್ಬ ಸ್ಥಿರ ಅಂಶ. ಖಾದರರೂ ಎನ್‌ಸಿಓಗಳೂ ನಾವು ಬಂದ ತರುವಾಯವೇ ಹಾಜರಾಗುತ್ತಿದ್ದುದು. ನಾವೆಲ್ಲರೂ ಅವರನ್ನು ವಂದಿಸಿ ಸ್ವಾಗತಿಸುತ್ತಿದ್ದೆವು.

ನಮ್ಮ ಶಿಕ್ಷಣದ ಎರಡನೆಯ ವಾರದ ಒಂದು ದಿವಸ. ಎಂದಿನಂತೆ ಪಿಟಿ ಮುಗಿಯಿತು. ಮುಂದಿನ ೧೦ ಮಿನಿಟುಗಳಲ್ಲಿ ನಾವು ಪಿಟಿ ದುಸ್ತನ್ನು ಕಳಚಿ ಡ್ರಿಲ್ ಉಡುಪುಧಾರಿಗಳಾಗಿ ರೈಫಲ್ ಸಮೇತ ಕವಾಯತಿಗೆ ಹಾಜರಾಗಬೇಕಾಗಿತ್ತು. ಪಿಟಿಯಿಂದ ಡ್ರಿಲ್ ಉಡುಪಿನೆಡೆಗೆ ಓಡುತ್ತಿದ್ದಂತೆಯೇ ಚಡ್ಡಿ ಸಡಿಲಿಸಿ ಆಯಿತು, ಕ್ಯಾನ್ವಾಸ್ ಶೂಗಳನ್ನೂ ಬಿಳಿ ಕಾಲುಚೀಲಗಳನ್ನೂ ಕಳಚಿ ಆಯಿತು. ಆದರೆ ಉಣ್ಣೆ ಕಾಲುಚೀಲಗಳೇ ಅಲ್ಲಿಲ್ಲ. ನನ್ನ ಡ್ರಿಲ್ ಉಡುಪಿನ ಕಟ್ಟು ನಾನು ಕಟ್ಟಿ ಇಟ್ಟಿದ್ದಂತೆ ಇರಲಿಲ್ಲ. ಸಂಗತಿ ಸ್ಪಷ್ಟ—ನನ್ನ ತರುವಾಯ ಬಂದವನೊಬ್ಬ ತಾನು ಕಾಲುಚೀಲಗಳನ್ನು ತರಲಿಲ್ಲ ಎಂದು ಆಗ ಮನಗಂಡಿರಬೇಕು ; ನನ್ನ ಕಟ್ಟಿನಿಂದ ಅವನ್ನು ಅಪಹರಿಸಿರಬೇಕು.

ಬದಿಯವನೆಂದ "ರಾವ್ ! ಕಾಟನ್ ಕಾಲುಚೀಲಗಳ ಮೇಲೆಯೇ ಬೂಟು ತೊಡಿ. ಹೇಗೂ ಪ್ಯಾಂಟು ಕಾಲುಚೀಲಗಳನ್ನು ಮುಚ್ಚುತ್ತದಷ್ಟೆ. ಆಫಿಸರರಿಗೆ ತಿಳಿಯುವುದಿಲ್ಲ."

ಇದು ನನಗೆ ಒಪ್ಪಿಗೆ ಆಗಲಿಲ್ಲ. ತಪ್ಪಿತಸ್ಥನಲ್ಲದ ನಾನು ಏಕೆ ಹೆದರಬೇಕು ? ಈ ಒಳದಾರಿ ಸಾಧ್ಯವಿಲ್ಲವೆಂದೆ. ಸೀದಾ ನಮ್ಮ ನಾಯಕ ಹವಿಲ್ದಾರ್ ಸಂತಾನಂ ನಿಂತಿದ್ದಲ್ಲಿಗೆ ಓಡಿದೆ, ಪಿಟಿ ಡ್ರೆಸ್ಸಿನಲ್ಲೇ. ನನ್ನ ದೂರನ್ನು ಅವನಿಗೆ ಹೇಳಿದೆ.

"ನಾನು ಒಪ್ಪಲು ತಯಾರಿಲ್ಲ. ನೀವು ಕಾಲುಚೀಲ ಮರೆತು ಬಂದಿದ್ದೀರಿ. ಈಗ ಈ ತಪ್ಪಿನಿಂದ ಬಚಾವಾಗಲು ದೂರು ಹೇಳುತ್ತಿದ್ದೀರಿ" ಸಂತಾನಂ ನನಗೇ ತಿರುಗಾಲಿ ಹೊಡೆದ.

"ಕ್ಷಮಿಸಿ, ಸ್ಟಾಫ್. ನನಗೆ ಎಕ್ಸ್‌ಟ್ರಾ ಪೆರೇಡಿನ ಹೆದರಿಕೆ ಖಂಡಿತ ಇಲ್ಲ. ಆದರೆ ನಾನು ಹೇಳುವುದು ನಿಜ" ನನ್ನ ಮಾತು.

"ತಪ್ಪು ಮಾಡಿದ ಪ್ರತಿಯೊಬ್ಬನೂ ಹೀಗೆಯೇ ಹೇಳುವುದು" ಸಂತಾನಂ.

"ನಿಮಗೆ ಅಂಥ ಅನುಭವ ಬಂದಿರುವುದು ದುರ್ದೈವ. ಸ್ಟಾಫ್. ನಾನು ಇದಕ್ಕೆ ಅಪವಾದಸ್ವರೂಪನೆಂದು ದೃಢವಾಗಿ ಹೇಳುತ್ತೇನೆ. ನೀವು ವಿಚಾರ ಮಾಡಬೇಕು" ಎಂದು ವಿನಯಪೂರ್ವಕವಾಗಿ ಯಾಚಿಸಿದೆ.

"ಆಗಲಿ. ನೀವು ಕಾಲುಚೀಲಗಳನ್ನು ಬೇರೆಯವರು ತೆಗೆದಿದ್ದಾರೆ ಅನ್ನುತ್ತೀರಲ್ಲ ? ನಿಮ್ಮ ಆಧಾರಗಳೇನು ?" ಸಂತಾನಂ.

"ಮೊದಲನೆಯದಾಗಿ ನಾನು ಅವನ್ನು ಈ ಮೈದಾನಕ್ಕೆ ತಂದಿದ್ದುದು ನಾನಿಲ್ಲಿ ನಿಂತಿರುವಷ್ಟೇ ಸತ್ಯ. ಎರಡನೆಯದಾಗಿ ಪಿಟಿ ಆದಮೇಲೆ ನಾನು ಹೋಗಿ ನೋಡುವಾಗ ನನ್ನ ಕಟ್ಟು ಮೊದಲಿನಂತಿರಲಿಲ್ಲ."

"ಅದೂ ಇರಬಹುದು. ಆದರೆ ನಿಮ್ಮ ಕಾಲುಚೀಲಗಳನ್ನೇ ಬೇರೆ ಒಬ್ಬನು ಅಪಹರಿಸಿ ಧರಿಸಿದ್ದಾನೆ ಎಂದು ಸಾಧಿಸುವುದು ಹೇಗೆ ? ಎಲ್ಲ ಕಾಲುಚೀಲಗಳೂ ಒಂದೇ ರೀತಿ ಇವೆಯಷ್ಟೆ ?"

ಅಷ್ಟರಲ್ಲಿ ೧೦ ಮಿನಿಟುಗಳ ಅವಧಿ ಮುಗಿದುಹೋಯಿತು. ಖಾದರರ ಬಿಗಿಲು ಎಲ್ಲರನ್ನೂ ಬಡಿದೆಬ್ಬಿಸಿತು.

"ಏನದು ನಿಮ್ಮ ನರಕ ನಂಬರ್ ೭! ಇನ್ನೂ ಪಿಟಿ ಡ್ರೆಸ್ಸಿನಲ್ಲೇ ಇರುವಿರಲ್ಲ" ಖಾದರರು ನನ್ನೆಡೆಗೆ ಬಾಣ ಎಸೆದರು.

ಸಂತಾನಂ ನನ್ನನ್ನು ಹಿಡಿಸಿಕೊಂಡು ಅವರೆದುರು ಕರೆದುಕೊಂಡು ಹೋಗಿ ನಿಲ್ಲಿಸಿದ. ನನ್ನ ಅಹವಾಲೆಯನ್ನು ಸಂಕ್ಷೇಪವಾಗಿ ನಿರೂಪಿಸಿದೆ. ಅವರದೂ ಅದೇ ಪ್ರಶ್ನೆ "ಗುರುತಿಸುವುದು ಹೇಗೆ?"

ನಾನೆಂದೆ "ನೀವು ಮೊದಲ ದಿನವೇ ಸೂಚಿಸಲಿಲ್ಲವೇ ಸಾಬ್! ಆ ಪ್ರಕಾರ ನಾನು ಎಲ್ಲ ಸಾಮಗ್ರಿಗಳಿಗೂ GTN ಗುರುತನ್ನು ಡೋಬಿ ಇಂಕಿನಲ್ಲಿ ಮಾಡಿದ್ದೇನೆ. ನನ್ನ ಕಾಲುಚೀಲಗಳ ಒಳಗೆ ಈ ಗುರುತಿದೆ. ಈಗ ಈ ಹಿಳ ಮಂದಿಯ ಕಾಲುಚೀಲಗಳನ್ನು ತಾವು ಪರೀಕ್ಷಿಸೋಣವಾಗಲಿ."

ಖಾದರ್ "ಜೆಡಿಯುವರಿಗೆ ಬಟ್ಟೆ ಇಡಲು ನಿಗದಿ ಮಾಡಿರುವ ಜಾಗ ಬೇರೆಯೇ ಆಗಿರುವುದರಿಂದ ಎಸ್‌ಡಿಯುವರನ್ನು ಮೊದಲು ಪರೀಕ್ಷಿಸೋಣ."

ಹದಿನಾಲ್ಕು ಮಂದಿಯನ್ನು ಸಂಖ್ಯಾನುಸಾರ ಸಾಲಾಗಿ ಕೂರಿಸಿದರು.

ಮೊದಲ ಆಜ್ಞೆ "ಕಾಲುಚಾಚಿ." "ವನ್" ಎಂದು ಕಾಲು ಚಾಚಿ ಕುಳಿತರು,

ಎರಡನೆಯ ಆಜ್ಞೆ "ಬೂಟು ಕಳಚಿ." "ವನ್, ಟೂಪ್, ತ್ರಿಪ್, ವನ್, ಟೂಪ್, ತ್ರಿಪ್, ವನ್." ಬೂಟುಗಳು ಎಲ್ಲರ ಬಲಗಡೆ ಮೈಗೆ ಒತ್ತಾಗಿ ಓರಣವಾಗಿ ನಿಂತುವು.

ಮೂರನೆಯ ಆಜ್ಞೆ "ಕಾಲು ಚೀಲ ಕಳಚಿ." ಪುನಃ ಮೊದಲಿನಂತೆ ಸಂಖ್ಯಾಶ್ರೇಣಿಯನ್ನು ಉಸುರುತ್ತ ಅವನ್ನು ಕಳಚಿದರು.

ನಾಲ್ಕನೆಯ ಆಜ್ಞೆ "ಒಳ ಹೊರಗು ಮಾಡಿ." ಅದೂ ನಡೆಯಿತು.

ಐದನೆಯ ಆಜ್ಞೆ "ಪರಿಶೀಲನಾರ್ಥವಾಗಿ ಕಾಲುಚೀಲಗಳನ್ನು ಎದುರು ನೇರವಾಗಿ ಹಿಡಿಯಿರಿ."

ನಂಬರ್ ೧೩ ಹಿಡಿಯಲು ಹಿಂದೆಮುಂದೆ ನೋಡುತ್ತಿದ್ದುದರಿಂದ ಖಾದರರ, ಎನ್‌ಸಿಓಗಳ ಗಮನಗಳು ಅವನ ಮೇಲೆಯೇ ಏಕಕಾಲದಲ್ಲಿ ಪತನವಾದುವು.

ನಂಬರ್ ೧೩ರ ಕರಿಚರ್ಮ ಬಿಳಿಚಿಹೋಗಿತ್ತು. ಆ ಚಳಿಯಲ್ಲಿಯೂ ಬೆವತು ಹೋಗಿದ್ದ. ಅಂದಮಾತ್ರಕ್ಕೆ ನಂಬರ್ ೧೩ ಕಳ್ಳನೆಂದಾಗಲೀ ಅನೀತಿವಂತನೆಂದಾಗಲೀ ತಿಳಿಯಬಾರದು. ಅವನು ಮಾಡಿದ್ದು ತಪ್ಪು. ಆದರೆ ನಾಗರಿಕ ಜೀವನದ ಸಡಿಲ ಪರಿಸರದಿಂದ ಏಕ್‌ದಂ ಮಿಲಿಟರಿ ವಾತಾವರಣದ ತೀಕ್ಷ್ಣ ಪ್ರಹಾರಕ್ಕೆ ಗುರಿಯಾದಾಗ ಸಾಮಾನ್ಯವಾಗಿ ಯಾರೂ ಅನುಸರಿಸುವ ಒಳದಾರಿಯೇ ಇದು.

ಮೊದಲ ಆದಿತ್ಯವಾರ

"ರಾವ್! ನಾಳೆ ಆದಿತ್ಯವಾರ. ಏನು ಮಾಡಬೇಕೆಂದಿದ್ದೀರಿ?" ಬಾಲಕೃಷ್ಣನ್ ಪ್ರಶ್ನೆ.

"ಎಂಟು ಗಂಟೆಯವರೆಗೆ ನಿದ್ರೆ. ಎದ್ದಮೇಲೆ ಮುಂದಿನ ಚಿಂತೆ."

"ಊಟಿಗೆ ಹೋಗಿ ಸಿನೆಮಾ ನೋಡಬೇಕು" ಮೇನನ್.

"ನನಗಂತೂ ಈ ಭೀಷ್ಮ ಪರ್ವ ಸಾಕಾಗಿ ಹೋಯಿತು. ಪ್ರಿನ್ಸ್ ಪಾರ್ಕಿನ ಪೂರಾಶಿ ನೋಡಿಯೇ ಮನದಳಲನ್ನು ನೀಗಿಸಬೇಕಷ್ಟೆ" ಕೃಷ್ಣನ್.

"ಪೂರಾಶಿಯ ವಾಸ್ತವಿಕ ರೂಪ ಕೃಷ್ಣಪ್ರಿಯರಾದ ಗೋಪಿಯರಲ್ಲವಷ್ಟೆ?" ನನ್ನ ಸವಾಲು.

"ಆಗಿದ್ದರೂ ತಪ್ಪೇನು?" ಪಂಚನಾಥನ್.

"ಅವರಲ್ಲಿ ನಿಮ್ಮ ಅಕ್ಕತಂಗಿಯರೂ ಇರುವರೆಂದು ಭಾವಿಸೋಣ. ಅಂಥವರ ಮೇಲೆ ಈ ಕೃಷ್ಣನ್ ದೃಷ್ಟಿ ಹಾಯಿಸಿದರೆ ನಿಮಗೆ ಹೇಗೆ ಅನಿಸೀತು?" ನನ್ನ ವಾದ.

"ಸ್ವಾಮೀ! ಕ್ಷಮಿಸಿ. ಈತನ ಸ್ವರೂಪ ನೋಡಿದರೆ ಅವನ ಮೇಲೆ ತಪ್ಪಿ ಮರೆತಾದರೂ ಯಾರಾದರೂ ಕಣ್ಣು ಹಾಯಿಸಿಯಾರೇ?" ಕೃಷ್ಣನ್.

ಇದರಿಂದ ಪಂಚನಾಥನ್ನಿಗೆ ಅಪಮಾನವಾಯಿತು "ನೀನೇನು ಮನ್ಮಥನ ಅವತಾರ ಎಂದು ಗ್ರಹಿಸಿರುವಿಯಾ? ಕೋಸುಗಣ್ಣು, ವಕ್ರನಾಸ, ಬೋಳು ಮಂಡೆ..."

"ಸಾಕು ಸಾಕು! ಇವೆಲ್ಲ ವರ್ಣನೆಗಳೂ ನಿನಗೇ ನನಗಿಂತ ಚೆನ್ನಾಗಿ ಒಪ್ಪುವುವು. ನೀವೇನನ್ನುತ್ತೀರಿ ರಾವ್?" ಕೃಷ್ಣನ್.

ಬಂತಲ್ಲ ಗ್ರಹಚಾರ, "ನಿಮ್ಮ ಮಾತಿನ ಜಾಲ ಹೆಂಗಸರನ್ನು ಬಿಟ್ಟು ಬೇರೆ ಉದಾತ್ತ ಭಾವನೆಗಳ ಕಡೆಗೆ ಸಾಗದೇ? ಗ್ರಂಥವಾಚನ, ನಿಸರ್ಗ ವೀಕ್ಷಣೆ, ಲೇಖನ, ಕಡೆಗೆ ಯಾವುದೂ ಇಲ್ಲವಾದರೆ ಊಟ ನಿದ್ರೆ!"

"ನಾನೊಂದು ಮಾತು ಹೇಳಲೋ ಮಿ. ರಾವ್!" ಮೇನನ್.

"ಅವಶ್ಯವಾಗಿ ಹೇಳಿ."

"ಈಗಿನ ಕಾಲದ ಹುಡುಗರೇ ಹೀಗೆ. ಕಂಡ ಕಂಡ ಹೆಣ್ಣುಮಕ್ಕಳ ಮೇಲೆ ಇವರ ಕಾಮುಕ ದೃಷ್ಟಿ. ನನಗೆ ನೋಡಿ ಎಂಥ ಅವಸ್ಥೆ. ಪ್ಲಾಟ್ಫಾರಮಿನಲ್ಲಿ ನನ್ನ ಹೆಂಡತಿ ಜೊತೆಯಲ್ಲಿ ಬೀದಿಯಲ್ಲಿ ನಡೆಯುವಂತೆಯೇ ಇಲ್ಲ!"

"ನಿಮ್ಮ ಹೆಂಡತಿಗೆ ಕಾಲು ಸರಿಯಿಲ್ಲವೋ?" ಬಾಲಕೃಷ್ಣನ್ನನ ಪೆದ್ದುಪೆದ್ದಾದ ಸಹಜ ಸಂಶಯ.

"ಅದಲ್ಲ ಪಾಯಿಂಟ್. ಅವಳಂಥ ತಿಲೋತ್ತಮೆ ಬೇರೆಲ್ಲಿ? ಕಾಳಿದಾಸನ ಮೇಘಸಂದೇಶದ ಯಕ್ಷಿಣಿ ಇವಳು."

"ಈಗ ನೀವು ಯಕ್ಷನೋ? ಕಾಳಿದಾಸನೋ?"

"ನಿಮ್ಮ ತಮಾಷೆ ಬೇಡ ಮಿ. ರಾವ್. ನನ್ನ ಹೆಂಡತಿ ಅಂಥ ರೂಪವತಿ. ಬೀದಿಯ ಮೇಲೆ ನಾನು ನಡೆದು ಹೋಗುವಾಗ ಎಲ್ಲರ ದೃಷ್ಟಿಯೂ ಇವಳ ಮೇಲೆಯೇ. ಪಾಪ ಅವಳು ಮುದುರಿ ನಾಚಿ ಕುಗ್ಗಿಯೇ ನಡೆಯಬೇಕು."

"ನೀವಂದದ್ದು ಸರಿ ಮೇನನ್! ಇಂಥ ಕೊಂಗರವನ ಜೊತೆ ಸಾಗುತ್ತಿರುವ ಈ ಅಪ್ಸರೆ ಯಾರು ಎಂದು ಜನ ಆಕೆಯನ್ನು ನೋಡುವುದೆಂದು ತಾನೆ?" ಪಂಚನಾಥನ್.

"ರಾವ್! ನೀವು ಹೇಳಿ. ನಾನು ಸ್ಫುರದ್ರೂಪಿ ಹೌದೇ ಅಲ್ಲವೇ?" ಮೇನನ್.

ಬಂತಲ್ಲ ಗ್ರಹಚಾರ. "ನಾನು ಮೂಲತಃ ಗಣಿತವಿದ್ಯಾರ್ಥಿ. ಅಲ್ಲಿ ಸೌಂದರ್ಯ, ಕೌರೂಪ್ಯಗಳನ್ನು ಅಳೆಯಲು ಒಂದು ಮಾನದಂಡವಿರುವುದು ನನಗೆ ತಿಳಿದಿಲ್ಲ. ಆದರೆ

ಒಂದು ವಿಷಯ, ಏಕಾಂತದಲ್ಲಿ ಕನ್ನಡಿ ಮುಂದೆ ಪ್ರತಿಯೊಬ್ಬನೂ ಮನ್ಮಥನೇ. ಅದಿರಲಿ. ನಾಳಿನ ಕಾರ್ಯಕ್ರಮವೇನು ?''

''ನಾನು ನಿಮ್ಮ ಜೊತೆ'' ಬಾಲ.

''ನಾನು ಊಟಿಗೆ ಸಿನಿಮಾ'' ಮೇನನ್.

''ನಾನು ಸಿಂಸ್ ಪಾರ್ಕ್'' ಕೃಷ್ಣನ್.

''ನಾನೂ ಅಲ್ಲಿಗೇ'' ಪಂಚನಾಥನ್.

''ನೀವೆಲ್ಲ ತೊಲಗಿ ಹೋದಮೇಲೆ ನಾನು ಶಾಂತವಾಗಿ ಎಂಟೋ ಒಂಬತ್ತೋ ಗಂಟೆತನಕ ನಿದ್ರೆ ಮಾಡಿ ಎಚ್ಚರವಾದಾಗ ಎದ್ದು ಮುಂದಿನ ಯೋಚನೆ ಮಾಡುತ್ತೇನೆ'' ನನ್ನ ಮಾತು. ಇಷ್ಟಾಗುವಾಗ ರಾತ್ರಿಯ ಊಟದ ವೇಳೆ ಬಂದಿತ್ತು.

ವೆಲ್ಲಿಂಗ್ಟನ್ನಿನ ಮೊದಲ ಆದಿತ್ಯವಾರ ನಾಳೆ. ಇದುವರೆಗೆ ಕಳೆದದ್ದು ಗುರುವಾರ, ಶುಕ್ರವಾರ, ಶನಿವಾರ ಮೂರು ಘನದಿವಸಗಳು; ೭೨ ಗಂಟೆಗಳು. ಒಂದೊಂದು ಸೆಕೆಂಡೂ ಕೂರಲಗಿನ ಮೇಲಿನ ಸಮತೋಲ; ಅಸಿಧಾರಾವ್ರತ; ವಾಸೀಚಂದನ ಕಲ್ಪತ್ವ! ಆದರೆ ಗತಿಸಿದ ಒಂದೊಂದು ಸೆಕೆಂಡೂ ನನ್ನ ವಿಷಯದಲ್ಲಿ ನನಗೇ ಅಭಿಮಾನ ಉಕ್ಕುವಂತೆ ಧೈರ್ಯವನ್ನೂ ಭರವಸೆಯನ್ನೂ ಜಡಿದಿತ್ತು. ಮಾತಿನ ಮಲ್ಲರಿಗೆ ಇಲ್ಲಿಲ್ಲ ಜಾಗ, ಬಕಪಾಂಡಿಗಳಿಗೆ ಎಡೆಯಿಲ್ಲವಿಲ್ಲಿ, ಕೆಲಸಗಳ್ಳರ ನೆಲೆಯಲ್ಲ ಮಿಲಿಟರಿ; ಕ್ರಿಯಾ ಶೀಲತೆ, ನಿಷ್ಠಾವಂತ ಪರಿಶ್ರಮವಿದ್ದರೆ ಯಾವ ಎತ್ತರವನ್ನೂ ಏರಬಹುದು ಎಂಬ ಭಾವ ದೃಢವಾಯಿತು.

Don't talk unless talked to—ಮಾತಾಡಿಸಿದ ವಿನಾ ಮಾತಾಡಬೇಡ ಎಂಬ ಖಾದರರ ಪದೇಪದೇ ಆದೇಶ ನನಗೆ ಬಲು ಹಿಡಿಸಿತು. ತಂತ್ರ ಪ್ರಪಂಚದಲ್ಲಿ ಮಂತ್ರ ಸ್ಥಾನ ಗೌಣ.

ಪ್ರತಿದಿನವೂ ಬೆಳಗ್ಗಿನ ೪-೩೦ ಗಂಟೆಗೇ ಎದ್ದು ಅಭ್ಯಾಸವಾಗಿ ಹೋಗಿದ್ದ ನನಗೆ ಆದಿತ್ಯವಾರ ಮಾತ್ರ ಸೂರ್ಯನಿಗೆ ಸೋಲುವುದು, ಎಷ್ಟೇ ಔದಾರ್ಯದಿಂದ ವರ್ತಿಸಿದರೂ, ಸಾಧ್ಯವಾಗಲಿಲ್ಲ. ನಕ್ಷತ್ರಗಳು ಮಾಯವಾಗುವ ಮುನ್ನವೇ ನಾನೆದ್ದೆ; ವೆಲ್ಲಿಂಗ್ಟನ್ ಜಗತ್ತನ್ನಾಗ ಆಕ್ರಮಿಸಿತ್ತು ಮಹಾನಿದ್ರೆ. ಬೆಡ್ ಟೀಯ ದುರ್ವಾಸನೆ ಈಗಿಲ್ಲ; ಬ್ಯಾರರುಗಳ ಲಗುಬಗೆಯ ಓಡಾಟವಿಲ್ಲ; ಹೊತ್ತಾಯ್ತು, ಹೊತ್ತಾಗಿಯೇ ಹೋಯಿತು ಎಂಬ ಉದ್ವೇಗಪೂರ್ಣ ವಾತಾವರಣ ಈಗ ಇಲ್ಲವೇ ಇಲ್ಲ! ತಂಗಾಳಿ ತೀಡುತ್ತಿತ್ತು. ಮರಗಾಡುಗಳ ಕರಾಳ ಛಾಯೆಯ ಅಸ್ಪಷ್ಟತೆಯ ಮೇಲೆ ಬೆಳಕಿನ ಲೇಪನ ಕ್ರಮೇಣ ತೀವ್ರಗೊಂಡಿತು. ನಾನು ರಸಮುಖಿಯಾಗಿ ಈ ಮೂಕನಾಟಕ ನೋಡುತ್ತಿದ್ದೆ.

''ಎಂಟು ಗಂಟೆ ಆಯಿತಾ ಮಿ. ರಾವ್!'' ಬಾಲಕೃಷ್ಣನ್ ಉವಾಚ.

ಈ ತಮಿಳನಿಗೆ ಇಡ್ಲಿ ಸಾಂಬಾರಿನ ಪರಿಮಳವೇ ಅಲಾರಾಂ ಎಂದು ನನಗೆ ಗೊತ್ತಿತ್ತು. ಕಲಿತದ್ದು ಕಲಿಸುತ್ತಿರುವುದು ತಮಿಳು ಸಾಹಿತ್ಯ. ಆದರೆ ಕಂಬ, ಭಾರತಿ ಮುಂತಾದವರ ನಿಸರ್ಗವರ್ಣನೆ ಈತನಿಗೆ ಪುಸ್ತಕದಲ್ಲಿದ್ದಿತೇ ವಿನಾ ಇಡ್ಲಿ ಸಾಂಬಾರಿನ ಉಕ್ಕಿನ ಗೋಡೆ ದಾಟಿ ಹೋಗಿರಲಿಲ್ಲ. ಬದುಕಿನ ಪರಮೋದ್ದೇಶ ತಿನ್ನುವುದು ತಾನೇ! ತಿಂದು ಕೆಟ್ಟವರಿಲ್ಲವೋ! ಮೆದುಳನ್ನೆಲ್ಲ ಹೊಟ್ಟೆ ಮೇದಿತ್ತು!

"ರಾವ್! ಮಾತಾಡುತ್ತಿಲ್ಲ!" ಅಂಗಲಾಚಿಕೆ.

"ಅಂತೂ ಹೊರಡಬೇಕೆಂದು ತಾನೇ ನಿಮ್ಮ ಅಭಿಲಾಷೆ?"

"ಏನಪ್ಪ. ಉಸಿರೇ ನಿಂತುಹೋಗಿದೆ. ಒಡಲೆಲ್ಲ ನೋವೇನೋವು. ಹೊಟ್ಟೆ ಕೆಟ್ಟು ಹೋಗಿದೆ. ತಲೆ ತಿರುಗುತ್ತಿದೆ."

"ಏನು ಜ್ವರಗಿರ ಏನಾದರೂ..."

"ಅಲ್ಲಪ್ಪ! ಇಡ್ಲೀಸಾಂಬಾರ್ ಮತ್ತು ಕುಡಕುಡ ಕಾಫಿ ಬಿದ್ದರೆ ಎಲ್ಲ ಸರಿಹೋಗುತ್ತದೆ!" ಕಲಿಯುಗದ ಅಮೃತರಸ!

"ಸರಿ, ಆದರೆ ಈಗಿನ್ನೂ ಏಳು ಗಂಟೆ ಆಗಿಲ್ಲವಲ್ಲ!"

"ಹೊರಡಲು ಇನ್ನು ಹೇಗೂ ಕಾಲುಗಂಟೆ ಬೇಕು (ಎಲಾ ಇವನ! ಬಾಕಿ ದಿವಸ ಒಂದು ಗಂಟೆಯಾದರೂ ಹೊರಡಲಾರ. ಇಂದು?) ಮುಂದೆ ಕೂನೂರಿಗೆ ೨ ಮೈಲು ಹೋಗಬೇಕಲ್ಲ. ಈ ದರಿದ್ರ ಊರಿನಲ್ಲಿ ಸಿಟಿಬಸ್ ಇದಯೇ, ಟ್ಯಾಕ್ಸಿ ಇದೆಯೇ. ನಡೆದೇ ಸಾಯಬೇಕು."

"ಹೇಗೂ ಪಿಟಿ ಪೆರೇಡಿನಲ್ಲಿ ಓಡಿಯೇ ಹೋಗಿದ್ದೆವಲ್ಲ. ಓಡೋಣ."

"ಅಯ್ಯಪ್ಪಾ! ಅಲ್ಲಿಗೆ ಹೋದಮೇಲೆ ಇಡ್ಲಿ ತಿನ್ನಲು ಉಳಿದಿರಬೇಡವೇ!"

ಬಾಲಕೃಷ್ಣನ್ನನ ಒತ್ತಾಯ. ನನಗೆ ಬೇರೆ ಏನು ಮಾಡಬೇಕೆಂದು ತಿಳಿಯದು. ಮೆಸ್ಸಿಗೆ ಹೋಗುವಂತಿಲ್ಲ, ಹಿಂದಿನ ರಾತ್ರಿಯೇ ಆದಿತ್ಯವಾರವಿಡೀ ಡೈನಿಂಗ್ ಔಟ್ (ಆಹಾರ ಸೇವನೆ ಹೊರಗಡೆ ಎಂದರ್ಥ) ಎಂದು ಬರೆದು ಬಂದಿದ್ದೆ. (ತಿಂಗಳ ಮೆಸ್ ಬಿಲ್‌ನಲ್ಲಿ ರಿಯಾಯತಿ ದೊರೆಯುವುದು.)

ಎಂಟು ಗಂಟೆಗೆ ನಮ್ಮ ಉದರಾನ್ವೇಷಣೆಯ ಬಂಡಿ—ಎದೆ ಮಿದುಳು ಹಿಂದೆ ಬಾಯಿ ಹೊಟ್ಟೆ ಮುಂದೆ—ಕೂನೂರಿನೆಡೆಗೆ ಉರುಳತೊಡಗಿತು. ಬಾಲಕೃಷ್ಣನ್ನನ ನಡಿಗೆಯ ಗತಿ ನನಗೆ ಸವಾಲಾಗುವಷ್ಟು ಕ್ಷಿಪ್ರವಾಗಿತ್ತು. ಎಲ್ಲಾರು ಓಡುವುದು ಹೊಟ್ಟೆಗಾಗಿ!

ಉಪಾಹಾರ ಮುಗಿಯಿತು. ಮತ್ತೆ ಊಟದ ತನಕ ಹೇಗೆ ಕಾಲವನ್ನು ಕೊಲ್ಲುವುದು? ಗರ್ಭಗುಡಿ ಮುಚ್ಚಿದ್ದ ದೇವಸ್ಥಾನ, ಬಂಡಿ ಬಂದಿರದ ರೈಲ್ವೆ ನಿಲ್ದಾಣ, ತೆರೆಯದಿದ್ದ ಗ್ರಂಥಭಂಡಾರ, ಕೂನೂರಿನ ಸಮಸ್ತ ರಸ್ತೆಗಳು—ಎಲ್ಲವೂ ಮುಗಿದುವು, ಗಂಟೆ ೧೦ ದಾಟಲಿಲ್ಲ! ಅಷ್ಟು ದೊಡ್ಡ ನಗರವದು, ಹಸುರಿನ ಹರವಿನ ಮಧ್ಯೆ ಇದ್ದ ಒಂದು ಕಿರಿಯ ಪುಷ್ಪವಷ್ಟೆ.

ಊಟವನ್ನೂ—ಮಂದ್ರಾಸೀ ಭೋಜನವನ್ನು—ಮಾಡಿ ಆಯಿತು. ನಾನು ಎಂಆರ್‌ಸಿಗೆ ಮರಳೋಣವೆಂದು ಹೊರಟೆ. ಬಾಲಕೃಷ್ಣನ್ ನಡೆಯಲು ಹಿಂದೇಟು ಹಾಕಿದ, ಇನ್ನೆರಡು ಗಂಟೆ ಕಾದಿದ್ದು ಕೂನೂರಿನಿಂದ ವೆಲ್ಲಿಂಗ್ಟನ್ಸಿಗೆ (ಕೇವಲ ೨ ಮೈಲಿಗಳು!) ಟ್ರೈನಿನಲ್ಲಿ ಹೋಗೋಣ ಎಂದು ಅವನ ವಾದ. ನನ್ನನ್ನು ಬಿಟ್ಟು ಇರಲು ಧೈರ್ಯ ಸಾಕಾಗದೆ, ಅವನು ಭಾರವಾದ ಹೆಜ್ಜೆ ಇಡುತ್ತ ನನ್ನ ಹಿಂದೆ ಬಂದ.

ಈ ಅನುಭವ ನನ್ನ ಮನಸ್ಸಿನ ಮುಂದೆ ಒಂದು ಪ್ರಶ್ನೆಯಾಗಿ ನಿಂತಿತು. ಆದಿತ್ಯವಾರವನ್ನು ಸದ್ವಿನಿಯೋಗಪಡಿಸುವುದು ಹೇಗೆ?

ಬೆಳಗ್ಗಿನಿಂದ ಮಧ್ಯಾಹ್ನದತನಕ ಮನೆಯಾಕೆಗೆ ಹಿಂದಿನ ವಾರದ ಅನುಭವವನ್ನು

ಒಳಗೊಂಡ ಸುದೀರ್ಘಪತ್ರ ಬರೆಯಬೇಕು. ತರುವಾಯ ಕೂನೂರಿಗೆ ಹೋಗಿ ಊಟ ಮಾಡಿ ಬರಬೇಕು; ಉಳಿದ ಹೊತ್ತು ಪುಸ್ತಕ ವಾಚನದಲ್ಲೋ ವೆಲ್ಲಿಂಗ್ಟನ್ನಿನ ಆಸು ಪಾಸಿನ ಬೆಟ್ಟಗುಡ್ಡಗಳ ಮೇಲೆ ಅಲೆಯುತ್ತಲೋ ಕಳೆಯಬೇಕು.

ಒಂದು ಪತ್ರ

ಎಂಆರ್‌ಸಿಯಿಂದ ಮನೆಯವರಿಗೆ (ಎಂದರೆ ನೆಂಟರಿಷ್ಟರೆಲ್ಲರಿಗೂ ಓದಲು ಅನುಕೂಲ ವಾಗುವಂತೆ) ಬರೆದ ಒಂದು ಪತ್ರವನ್ನು ಇಲ್ಲಿ ಉದ್ಧರಿಸಿದ್ದೇನೆ.

ವೆಲ್ಲಿಂಗ್ಟನ್, ೧೭–೫–೧೯೫೨, ಶನಿವಾರ, ಅಪರಾಹ್ಣ

ಈ ಪಾರೆ ಬರೆಯಲು ವಿಷಯ ವಿಪರೀತವಿರುವುದರಿಂದ ಬಹಳ ಮುಂಜಾಗ್ರತೆಯಿಂದ ಈ ಪತ್ರವನ್ನು ಪ್ರಾರಂಭಿಸಿದ್ದೇನೆ. ಅದೇನೆಂದರೆ—ಕಾಗದವನ್ನು ಒಂದೇ ಧಾರೆಯಲ್ಲಿ ಬರೆದು ಮುಗಿಸಲು ಕೆಲವು ಸೂತ್ರಗಳನ್ನು ಪಾಲಿಸಬೇಕು: (೧) ಹೊಟ್ಟೆಯಲ್ಲಿ ಯಾವ ತರದ ತೊಂದರೆಯೂ ಇರಬಾರದು. (೨) ಇನ್ನು ಅರ್ಧ ಗಂಟೆಯಲ್ಲಿಯೋ ಒಂದು ಗಂಟೆಯಲ್ಲಿಯೋ ತಲೆಹೋಗುವಂತಹ ಕೆಲಸ ಯಾವುದೂ ಇರಕೂಡದು. (೩) ಬಾಹ್ಯ ಪೀಡನೆಗಳು ಎಂದರೆ ಪಿರಿಪಿರಿಮಾಡುವ ಜತೆಗಾರರು ಇಲ್ಲಿರಬಾರದು. (೪) ಹಾಳೆಗಳು ಸಾಕಷ್ಟೂ ಪೆನ್ನಿನಲ್ಲಿ ಇಂಕು ತಕ್ಕಷ್ಟೂ ಇರಬೇಕೆಂಬುದು ಕ್ಷುದ್ರ ಮತಿಗಳಿಗೂ ಹೊಳೆ ಯುವ ವಿಷಯ. ಇಲ್ಲವಾದರೆ ಪ್ರಸ್ತುತ ಲೇಖಕ ಅವನ ಬಾಲಾಪ್ಯದಲ್ಲ (ಬಾಲ್ಯವೆನ್ನು ವುದರ ಬದಲಾಗಿ ಬರೆದಿರುವ ಶಬ್ದ. ವೃದ್ಧ ವೃದ್ಧಾಪ್ಯ. ಹಾಗೆಯೇ ಬಾಲ–ಬಾಲಾಪ್ಯ, "ಬಾಲ" ನನ್ನು "ಬಾಲ್ಯ"ವೆಂದೆನ್ನುವಾಗ "ವೃದ್ಧ"ನನ್ನು "ವೃದ್ಧ್ಯ" ಎಂದೇಕೆ ಹೇಳ ಬಾರದು ಎನ್ನುವ ಪ್ರಶ್ನೆ ಗಮನಾರ್ಹ) ಬರೆದಿರುವ ಮಹಾಕಾವ್ಯದ ಒಂದು ನುಡಿಯಂತೆ:

> ಪೆನ್ನಲ್ಲಿ ಸಾಕಷ್ಟು ಇಂಕಿಲ್ದೆ ಇರ್ವಾಗ
> ಹೆಡ್ನಲ್ಲಿ ನೋಷನ್ನಿನೋಷನ್ನು ಇಲ್ದಾಗ
> ನೋಡ್ಬೇಕು ಕವಿಯ ಮುಖ
> ಸವಿಬೇಕು ಅದರ ಸುಖ

ಎಂದಾಗುವುದು. ಮೇಲೆ ವಿವರಿಸಿರುವ ನಾಲ್ಕು ಮುಂಜಾಗ್ರತೆಗಳನ್ನು ನಾನು ಹೇಗೆ ವಹಿಸಿದ್ದೇನೆಂದರೆ: (೧) ಈಗ ತಾನೇ ಇಲ್ಲಿಗೆ ಸಮೀಪವಿರುವ ಕೂನೂರಿಗೆ ಹೋಗಿ ಬಂದೆ. ಅಲ್ಲಿಯ ಭವ್ಯವಾದ ರಾಯಲ್ ಕೆಫೆಯಲ್ಲಿ ಮಸಾಲೆದೋಸೆ ಮೈಸೂರುಪಾಕ್ ತಿಥಿವಡೆ ಕಾಫಿ ಮುಕ್ಕಿ ಹೀರಿ ಮರಳಿದ್ದೇನೆ. ಸ್ವಲ್ಪವಾದರೂ ಮನೆಯ ಆಹಾರದ ಅಪ ಭ್ರಂಶ ಇಲ್ಲಿಗೆ ಬಂದಮೇಲೆ ದೊರೆತುದು ಇಂದೇ. (೨) ಸಂಜೆ ೭–೩೦, ೮ ಗಂಟೆಗೆ, ಊಟದ ಮೊದಲು, ಸ್ನಾನ ಮಾಡುವ ಕೆಲಸ ಮಾತ್ರವಿರುವುದು. (೩) ಸ್ನೇಹಿತರೆಲ್ಲರೂ ಕೂನೂರಿಗೆ, ಉದಕಮಂಡಲಕ್ಕೆ ಹೋಗಿ ನಾನೂ ಕೆಲಸದವರೂ ಮಾತ್ರ ಇಲ್ಲಿ ಈಗ ಇರುವುದು. ಸ್ನಾನದ ಮಂದಿರದಲ್ಲಿ ಟಬ್‌ಗೆ ನಂಪಿನಿಂದ ಜೊರೋ ಎಂದು ನೀರು ಬೀಳುವ ಶಬ್ದ, ನಮ್ಮ ಕಟ್ಟಡದ ಎದುರಿನ ಮೈದಾನದಲ್ಲಿ ಹುಡುಗರು ಆಟವಾಡುತ್ತ ಕೆಲೆಯುವ ಸಡಗರದ ಶಬ್ದ, ಮತ್ತೆ ಒಮ್ಮೊಮ್ಮೆ ಏರನ್ನು ಏರುತ್ತ ಬರುವ ಫೋರ್ಡ್.

ಶೆವರ್ಲೆ ಎಂಜಿನ್‌ಗಳ ರೊಂಯೋ ರೊಂಯೋಕಾರ ಇವುಗಳಲ್ಲದೆ ಬೇರೆ ಏನೇನೂ ಇಲ್ಲ, (೯) ಕಾಗದ ೮ ಪುಟವಾಗುವಷ್ಟು ಇಟ್ಟುಕೊಂಡಿದ್ದೇನೆ. ಪಾರ್ಕರ್ ಪೆನ್ ನಮ್ಮ ವಿಧೇಯ ಸೇವಕನಾಗಿ ಕೂರ್ಗ್ ಟ್ರಾನ್ಸ್‌ಪೋರ್ಟ್ ಓಡಿದಂತೆ ಧಾವಿಸುತ್ತಿದೆ. ಅಲ್ಲದೇ ಇಷ್ಟು ದೊಡ್ಡ ಕಾಗದವನ್ನು ಬರೇ ಎರಡಾಣೆ ಕವರಿನಲ್ಲಿಟ್ಟು ಪೋಸ್ಟಿಸಿದರೆ ಸರಕಾರಕ್ಕೆ ಪುತ್ತೂರಿನ ಪೋಸ್ಟ್ ಆಫೀಸ್ ಮುಖಾಂತರ ನೀವು ಎರಡಾಣೆಯೋ ನಾಲ್ಕಾಣೆಯೋ ಹೆಚ್ಚು ತೆರಬೇಕಾಗುವುದು. ನಾಳೆ ಆದಿತ್ಯವಾರವಾದುದರಿಂದ ಸೋಮವಾರದ ಮೇಯ್ಲಿನಲ್ಲಿಯೇ ಇದನ್ನು (=ಕಾಗದವನ್ನು) ರವಾನಿಸಲು ಈ ದಿನವೇ ಎರಡಾಣೆ ಸ್ಟಾಂಪನ್ನು ಹೆಚ್ಚಿಗೆ ತರಿಸಿಟ್ಟಿದ್ದೇನೆ. ಇಷ್ಟನ್ನು ಓದಿದವರು ಅವರವರ ಕಲ್ಪನಾಶಕ್ತ್ಯನುಗುಣವಾಗಿ ಇನ್ನೂ ಹೆಚ್ಚಿಗೆ ಸೂತ್ರಗಳನ್ನು ಸೇರಿಸಿಕೊಳ್ಳಬಹುದು. ಉದಾಹರಣೆಗೆ—ಪತ್ರ ಬರೆಯಲು ಅವಶ್ಯವಾದುದು ಬಿಡುವಾಗಿರುವ ಒಂದು ಮೇಜು, ಬಿಡುವಾಗಿರುವ ಕುರ್ಚಿ. ನನ್ನ ಮೇಜು ಹೇಗಿರುವುದೆಂದು ತಜ್ಞಪಾಠಕರಿಗೆ ವಿವರಿಸುವುದು ಅವರ ಏಮಾಳಿನ ಶಕ್ತಿಗೆ ಅಪಮಾನಮಾಡಿದಂತೆ.

ಒಂದನೆಯ ವಿಷಯ : ಕಾಲನ್ನೇರಿ ಬಂದ ಕುತ್ತ.

ಅದೊಂದು ಗುರುವಾರ. ಮೊನ್ನೆ ಗುರುವಾರಕ್ಕೆ ಎಂಟು ದಿನಗಳ ಹಿಂದೆ. ಯಾವಾಗಲೋ ಗುರುವಾರ ಸಂಜೆ ನಾನು ತಲೆಹೊಡೆಸಿಕೊಂಡಿದ್ದ ನೆನಪು. ಹಾಗಾಗಿ ಮೇಲೆ ಹೇಳಿದ ಗುರುವಾರ ಮಾನಭಂಗವಾಯಿತು. ಫಲಿತಾಂಶ ನಳಚಕ್ರವರ್ತಿಗೆ ಕಾರ್ಕೋಟಕ ಹಿಡಿದಂತೆ ನನಗೆ ಬಲಗಾಲಿನ ಮೊಣಗಂಟಿಗೆ ಕುತ್ತವೇರಿತು. ಪ್ರತಿದಿನವೂ ಬೆಳಗ್ಗೆ ೬–೪೫ರಿಂದ ೭–೪೦ರ ತನಕ ಪಿಟಿ (ಫಿಜಿಕಲ್ ಟ್ರೈನಿಂಗ್ ಅಥವಾ ದೇಹವನ್ನು ಪಳಗಿಸಲು ವ್ಯಾಯಾಮ) ಇದೆಯೆಂದು ಹಿಂದೆ ಬರೆಯಲಾಗಿದೆ ಅದರಲ್ಲಿ ವಿವಿಧ ರೀತಿಯ ಶ್ರಮಸಾಧ್ಯವಾದ ವ್ಯಾಯಾಮಗಳಿವೆ. ನಮ್ಮ ಬ್ಯಾಚಿನಲ್ಲಿ ೨೦ ಜನರಿದ್ದೇವೆ (ಒಟ್ಟು ೫೪ ಜನರು ಸೀನಿಯರ್ ಮತ್ತು ಜೂನಿಯರ್ ಎನ್‌ಸಿಸಿ ಸೇರಿ ಇರುವವರು). ಆ ಗುರುವಾರ ನಾನೊಂದು ಮರದ ಗೋಡಾದ (ಕುದುರೆ) ಮೇಲಾಗಿ ಆ ಕಡೆಗೆ ಹಾರಬೇಕಾಗಿತ್ತು. ಗೋಡಾದ ಎತ್ತರ ನಾಲ್ಕು ಅಡಿ. ''ಉಪ್ಪರ್ ಜಂಪ್ ಕರೊ ಡಬ್ಬಲ್'' (ಮೇಲಾಗಿ ಹಾರಲು ಹೋಗಿ ಶೀಘ್ರವಾಗಿ) ಎಂದು ನಮ್ಮ ಶಿಕ್ಷಕ ಹೇಳಿದೊಡನೇ ಒಬ್ಬೊಬ್ಬರಾಗಿ ಓಡಿಹೋಗಿ ಹಾರತೊಡಗಿದೆವು. ಕೆಲವರು ಹಾರಿದರು. ಕೆಲವು ಪುಳಿಮೂಟೆ ಬೊಡ್ಡರು ಗೋಡಾದ ಹತ್ತಿರದವರೆಗೆ ಹೋಗಿ ಹೆದರಿ ಹಿಂದೆ ಸರಿಯುತ್ತಿದ್ದರು. ಎಲ್ಲರೂ ನಗುತ್ತಿದ್ದರು. ಶಿಕ್ಷಕ ''ಜಲ್ದಿ ಜಲ್ದಿ'' ಎಂದು ಹಿಂದಿನ ಕಾಲುಗಳ ಹತ್ತಿರ (ಗೋಡಾವು ಒದೆಯುದಂತೆ) ನಿಂತಿದ್ದ. ನಮ್ಮ ಆಗಿನ ಉಡುಪು ಖಾಕಿ ಚಡ್ಡಿ, ಕ್ಯಾನ್ವಾಸ್ ಶೂಸ್. ಮೈಗೆ ಏನೂ ಇಲ್ಲ. ನಾನೂ ಹೋಗಿ ಹಾರಿದೆ—ಹಿಂಜರಿಯಲಿಲ್ಲ. ಕಾಲು ಗೋಡಾದ ಬೆನ್ನನ್ನು ಸವರಿತು, ನಾನು ಗೋಡಾವನ್ನು ಒದ್ದು ದೊಡ್ಡ ಗೋಡಾ ಆದೆ. ಆ ಕಡೆ ನೆಲಕ್ಕೆ ಬೀಳುವಾಗಲೇ ಸರ್ರೆಂದು ಕಾಲು ಜಾರಿ ತಲೆ ನೆಲಕ್ಕೆ ಬಡಿದು ಭೂಶಾಯಿಯಾದೆ. ಇಲ್ಲದಿರುವ ಮೀಸೆ ಆಕಾಶವನ್ನು ನೋಡುತ್ತಿತ್ತು. ಹಾಗೆಯೇ ಜಿಗಿದು ಮೇಲೆದ್ದು ಅಪಮಾನವಾದುದನ್ನು ಲಕ್ಷಿಸದೇ ಹಿಂಡನ್ನು ಸೇರಿದೆ. ಆಗಲೇ ಕಾರ್ಕೋಟಕ (ಇಂದುವದನೆಯನಗಲಿ ತಾ ವನನೊಂದು ಕಾರ್ಕೋಟಕನ) ಉಳುಕಿನ ರೂಪದಿಂದ

ನನ್ನ ಬಲಗಾಲಿನ ಮಣಿಗಂಟನ್ನು ಗಪ್ಪೆಂದು ಹಿಡಿದುಬಿಟ್ಟ. ಮತ್ತೆ ಕೇಳಬೇಕೇ—ಡ್ರಿಲ್ ಮಾಡಲು ಸಾಧ್ಯವಿಲ್ಲ, ನಡೆಯುವುದೇ ಕಷ್ಟ. ಮಿಲಿಟರಿಯಲ್ಲಿ ಏನೇ ಆಗಲಿ, ಮಿಲಿಟರಿ ಆಸ್ಪತ್ರೆಗೆ ಮಾತ್ರ ಹೋಗಬೇಡವೆನ್ನುವುದು ಸುಪ್ರಸಿದ್ಧ. ಆಸ್ಪತ್ರೆಗೆ ಹೋಗುವುದರಿಂದ ಮೇಲಧಿಕಾರಿಗಳಲ್ಲಿ ಧ್ವನಿತವಾಗುವ ಅಭಿಪ್ರಾಯಗಳು : ಈ ಮನುಷ್ಯ ತ್ರಾಣಿಯಲ್ಲ ; ಅಥವಾ ಡ್ರಿಲ್, ಪಿಟಿಗಳನ್ನು ತಪ್ಪಿಸಲು ಹೀಗೆ ನೆಪ ಹೂಡಿದ್ದಾನೆ; ಇಷ್ಟು ಚಿಕ್ಕ ವಿಷಯಕ್ಕಾಗಿ ಹೀಗೆ ಹಲುಬುತ್ತಿರುವವನಲ್ಲಿ ಶ್ರಮಸಹಿಷ್ಣುತೆ ಸಾಕಷ್ಟಿಲ್ಲ. ಅಲ್ಲದೇ ಮಿಲಿಟರಿ ಡಾಕ್ಟರುಗಳಿಗೆ ವೈದ್ಯವಿಷಯ ತಿಳಿದಿರುವುದಕ್ಕಿಂತ ಹೆಚ್ಚು ಬೈರಿಗೆ ಹಿಡಿದು ಮೂಳೆ ಕೊರೆಯುವುದೋ (ಆರ್ಮಿ ವೈದ್ಯರಿಕು ಮೂಳೆ ಕಡೆಯಾದು—ತಮಿಳು—ಆರ್ಮಿ ವೈದ್ಯರಿಗೆ ಮಿದುಳು ಇರುವುದಿಲ್ಲ), ಖಡ್ಗ ಹಿರಿದು ಮಾಂಸ ಕತ್ತರಿಸುವುದೋ, ದಬ್ಬಣದಿಂದ ಏಕ್‌ದಂ ಚುಚ್ಚುವುದೋ, ಗೊಟ್ಟ ಹಿಡಿದು ಕ್ವಿನಾಯ್ನ್ ಮಿಕ್ಸ್ಚರ್ ದ್ರವವನ್ನು ಕುಡಿಸುವುದೋ ಚೆನ್ನಾಗಿ ತಿಳಿದಿರುವುದು. ಸರಿಯಾಗಿರುವವರಿಗೆ ಮಧ್ಯಾಹ್ನದ ಮೇಲೆ ಸಾಧಾರಣವಾಗಿ ಈ ವಾರದಿಂದ ವಿಶ್ರಾಂತಿಯೇ ಇದೆ. ಇನ್ನು ಮುಂದೆಯೂ ಹೀಗೆಯೇ ಇರುವುದಂತೆ. ಖಾಯಿಲಸ್ತರೆಂದೋ, ಊನವಿರುವವರೆಂದೋ ಆಸ್ಪತ್ರೆಗೆ ಹೋಗಿ ಪಿಟಿ ಡ್ರಿಲ್‌ಗಳಿಂದ ಬೆಳಗ್ಗೆ ವಿನಾಯತಿ ಹೊಂದಿದವರಿಗೆ ಬಲು ಕಷ್ಟವಿದೆ. ನಮ್ಮಂಥ ಕಾಲುನೋವಿನವರು—ಅಂದರೆ ಹಾಸಿಗೆ ಹತ್ತಿ ಮಲಗದೇ ಇರುವವರು—ಪಿಟಿಯನ್ನು ಡ್ರಿಲ್ಲನ್ನು ಮಾಡದಿದ್ದರೂ, ನಮ್ಮ ಬಳಗದವರು ಹೋದಲ್ಲೆಲ್ಲ ಹೋಗಬೇಕು. ಬದಿಯಲ್ಲಿ ಪ್ರತ್ಯೇಕವಾಗಿ ಕುಳಿತಿರಬೇಕು. ಆಗುವುದಿಲ್ಲವೆಂದು ಬದಿಯಲ್ಲಿ ಕುಳಿತು ಮಿಲಿಟರಿ ಆಫಿಸರುಗಳ ದೃಷ್ಟಿಯಲ್ಲಿ ಕಸವಾಗಿರುವುದಕ್ಕಿಂತ ಕಷ್ಟದಿಂದಾದರೂ ಎಲ್ಲ ಕೆಲಸಗಳಲ್ಲಿಯೂ ಭಾಗಿಯಾಗಿರುವುದು ಉತ್ತಮ. ಆಗ ಅಧಿಕಾರಿಗಳಿಗೆ ತೃಪ್ತಿಯಾಗುವುದು—ಅಷ್ಟು ಕೂಡದೇ ಇದ್ದರೂ ಅವನ ಉತ್ಸಾಹ ಸ್ತುತ್ಯರ್ಹ—ಎಂದೆನ್ನುವ ಭಾವವನ್ನು ವ್ಯಕ್ತಪಡಿಸುತ್ತಾರೆ. ಹೀಗಾಗಿ ಎಲ್ಲದರಲ್ಲಿಯೂ ಭಾಗಿಯಾಗಿರುತ್ತಿದ್ದೆ. ಕುಂಟುತ್ತ, ಡೊಂಕಿಡೊಂಕಿ ನಡೆಯುತ್ತ ದಿನದಿನವೂ ಮರುದಿನ ಗುಣವಾದೀತೆಂಬ ನಿರೀಕ್ಷೆಯಿಂದ ಡ್ರಿಲ್ ಮಾಡುತ್ತಿದ್ದೆ. ಕಳೆದ ಆದಿತ್ಯವಾರ ವಿಶ್ರಾಂತಿಯಿತ್ತು. ಆದರೆ ಗುಣವಾಗಲಿಲ್ಲ. ಮೊನ್ನೆ ಗುರುವಾರವಾಗುವಾಗ ಜೋರಾಯಿತು. ಮಣಿಗಂಟು ಊದಿತು. ನೋವನ್ನು ಲಕ್ಷ್ಯ ಮಾಡದೇ ಅಷ್ಟು ದಿವಸವಿದ್ದುದು ತಪ್ಪಾಯಿತು. ಪ್ರತಿ ದಿನವೂ ಕುಂಟುತ್ತ ಸಾಗುತ್ತಿದ್ದರೆ, ಓಡುವಾಗ ಹಿಂದೆ ಬೀಳುತ್ತಿದ್ದರೆ, ಅದೂ ಒಂದು ರೀತಿಯಲ್ಲಿ ಆಫಿಸರರ ಕಣ್ಣಿಗೆ ಕಸ ಹಾಕಿದಂತೆ. ರಾತ್ರಿ ನೋವು ಏರುತ್ತಿತ್ತು. ಕಾಲನ್ನು ಮಡಿಸಲೂ ಆಗುತ್ತಿದ್ದಿಲ್ಲ. ನಮ್ಮ ಶಿಕ್ಷಕನನ್ನು ಕಳೆದ ಗುರುವಾರ ಮರೆ ಹೊಕ್ಕೆ. ಅವನೆಂದ ರೈಫಲ್ ಆಯ್ಲನ್ನು ಹಾಕಿ ಮಸ್ಸಾಜು ಮಾಡಿದರೆ ಗುಣವಾಗುವುದು. ಎಂದು ತೆಂಗಿನೆಣ್ಣೆ ಎಂದರೆ ತೆಂಗಿನ ಕೊಬ್ಬರಿಯನ್ನು ಹಿಂಡಿ ತೆಗೆದುದು ಎಂದರ್ಥ. ಹಾಗೆಯೇ ಮೋಟಾರ್ ಆಯ್ಲ್, ರೈಫಲ್ ಆಯಿಲ್ ಎಂದರೆ ಮೋಟಾರನ್ನು ಹಿಂಡಿ, ರೈಫಲ್ಲನ್ನು ಹಿಂಡಿ ತೆಗೆದ ಎಣ್ಣೆ ಎಂದರ್ಥವೇ ಎಂದರೆ "ಕಡವಳೇ, ಈ ಪ್ರಶ್ನೆ ಕೇಳುವವರಿಗೆ ಸ್ವಲ್ಪ ಮೂಳೆಯನ್ನು ದಯಪಾಲಿಸಪ್ಪ" ಎಂದು ಮೇಲೆ ನೋಡಬೇಕಾಗುವುದು. ರೈಫಲ್ ಆಯ್ಲ್ ಎಂದರೆ ರೈಫಲ್ಲನ್ನು ಕ್ಲೀನ್ ಮಾಡಿಯಾದ ಮೇಲೆ ಆದರ ಬೇರೆ ಬೇರೆ ಭಾಗ

ಗಳಿಗೆ ಹಾಕಲಿರುವ ಒಂದು ಜಾತಿಯ ಎಣ್ಣೆ. (ರೈಫಲ್ ಆಯ್ಲ್ ಎಣ್ಣೆ ಎಂದರೆ, ಅದು ಫಾರೆಸ್ಟ್ ಕಾಡು ಅಲಂಕಾರವಾಗುವುದು). ನಮಗೆ ರೈಫಲ್ ಪಾಠ ಬಲುಮುಖ್ಯ ವಾದುದು. ತೋಟಾ ತುಂಬಿಸಿ, ಕೋವಿಯನ್ನು ಹಿಡಿದು, ಒಂದು ಕಣ್ಣು ಮುಚ್ಚಿ ಗುರಿ ನೋಡಿ, ಟ್ರಿಗ್ಗರ್(ಟ್ರಿಗ್ಗರ್ಅಥವಾ ಕುದುರೆ ಅಂದರೆ ಗುಂಡು ಹಾರಿಸಲು ಒತ್ತುವ ಪಟ್ಟಿ) ಒತ್ತುವುದು ಎಂದೂ ಅಭ್ಯಾಸದಿಂದ ಇಲ್ಲವೇ ಅದೃಷ್ಟದಿಂದ ಗುರಿ ಸರಿಬರುವುದೆಂದೂ ನಾನು ಯೋಚಿಸಿದ್ದೆ. ಆದರೆ ಮಿಲಿಟೆರಿಯಲ್ಲಿ ಪ್ರತಿಯೊಂದು ಕಾರ್ಯವೂ ನಿಯಮ, ಕ್ರಮಬದ್ಧವಾಗಿ ನಡೆಯಲೇಬೇಕು. ಇದಕ್ಕಾಗಿ ಕಳೆದ ಮಹಾಯುದ್ಧದಲ್ಲಿ ಉಪಯೋಗಿಸಿದ್ದ ಡಿಪಿ ರೈಫಲ್ಲುಗಳನ್ನು ನಮಗೆ ಒದಗಿಸಿರುತ್ತಾರೆ. ಡ್ರಿಲ್ ಪರ್ಪಸಸ್ (ಡ್ರಿಲ್ ಮಾಡು ವಾಗ ಅಭ್ಯಾಸಕ್ಕಾಗಿ ಇರುವ) ರೈಫಲ್ಲಿಗೆ ಡಿಪಿ ರೈಫಲ್ ಎಂದು ಹೆಸರು. ಸರ್ವವಿಧ ದಲ್ಲಿಯೂ ಇದು ಅತ್ಯಾಧುನಿಕ ರೈಫಲ್ಲಿನಂತೆಯೇ ಇದೆ. ಆದರೆ, ಒಂದು ಬೊಂಬೆ ಎಷ್ಟು ಸುಂದರವಾಗಿದ್ದರೂ, ಕಲೆಯ ಚರಮಸೀಮೆಯಾಗಿದ್ದರೂ ಏಕಗುಣಹೀನತೆಯಿಂದ—ಪ್ರಾಣವೆನ್ನುವ ''ದ್ರವ್ಯ'' ಇಲ್ಲದಿರುವುದರಿಂದ—ಮನುಷ್ಯನೆಂದೆನಿಸಿಕೊಳ್ಳುವುದಿಲ್ಲ. ಹಾಗೆಯೇ ಡಿಪಿ ರೈಫಲ್ಲುಗಳ ಪರಿಸ್ಥಿತಿ ಕೂಡ. ಇವುಗಳೊಳಗೆ ತೋಟಾವನ್ನು ಇಟ್ಟು ಟ್ರಿಗ್ಗರನ್ನು ಒತ್ತಿದರೆ ತೋಟಾ ಮಾತ್ರ ಹೊಟ್ಟುವುದಿಲ್ಲ. ಮೊದಲ ಪಾಠಗಳಲ್ಲಿಯೇ—ಬೆಂಕಿಯ ಜತೆಯಲ್ಲಿ, ಸಾವಿನ ಕೂಡ ಇರುವಾಗ—ಸರಿಯಾದ ರೈಫಲ್ ಇದ್ದರೆ ಪರಿಸ್ಥಿತಿ ಆಕಸ್ಮಾತ್ತಾಗಿಯಾದರೂ ವಿಕೋಪಕ್ಕೆ ಮುಟ್ಟದಿರದು. ರೈಫಲ್ಲಿನ ವಿವಿಧ ಭಾಗ ಗಳ ವಿಷಯ, ಅವುಗಳ ಕಾರ್ಯಗಳ ವಿವರ ಮೊದಲು ಪಾಠ ಮಾಡಿದರು. ಮತ್ತೆ ರೈಫಲ್ಲನ್ನು ಚೊಕ್ಕಟವಾಗಿ ರಕ್ಷಣೆ ಮಾಡುವುದು ಅಗತ್ಯ, ಅದು ಹೇಗೆ ಎಂದು ವಿವರಿಸಿದರು.

ನಮ್ಮ ಇಂಗ್ಲಿಷ್ ನೋಟ್ಸ್‌ನಲ್ಲಿ ಹೀಗಿದೆ ''ಸೈನಿಕನ ಪ್ರಾಣಮಿತ್ರ ರೈಫಲ್. ರೈಫಲ್ಲನ್ನು ಸಮಾನತೆಯಿಂದ, ಮರ್ಯಾದೆಯಿಂದ ಕಂಡುಕೊಂಡು ಹಾಗೆ ವರ್ತಿಸುವ ಸೈನಿಕನಿಗೆ ಅದು ಅತ್ಯಂತ ವಿಧೇಯತೆಯಿಂದ ನಡೆದುಕೊಳ್ಳುವುದು. ಇಲ್ಲವಾದರೆ ನಡು ನೀರಿನಲ್ಲಿ ಕೈಬಿಡುವುದು.'' ಒಂದು ವಾಚ್, ಸೈಕಲ್ ಯಾವುದನ್ನು ತೆಗೆದುಕೊಂಡರೂ ಇದು ನಿಜ. ಹಾಗೆಯೇ ನಮ್ಮ ದೇಹ ಕೂಡ. ''ದೇಹವೆನ್ನುವ ಯಂತ್ರ ಜೀವವೆನ್ನುವ ತಂತ್ರಗಾರನಿಂದ ಸಂಸೂತ್ರ''ವಾಗಿ ಸಾಗುವುದು. ನಾನು ದೇಹವನ್ನು ಅಲಕ್ಷಿಸಿದೆ, ಸಾಕಷ್ಟು ಕಷ್ಟಪಟ್ಟೆ. ಗುರುವಾರ ಸಂಜೆಯೇ ರೈಫಲ್ ಆಯ್ಲನ್ನು ತಂದು ಮಸ್ಸಾಜು ಮಾಡಿದೆ, ಒಂದು ಗಂಟೆ ನಡೆಯಿತು. ಮತ್ತೆ ಬಿಸಿನೀರನ್ನು ಧಾರೆಯೆರೆದು ಸ್ನಾನಮಾಡಿದೆ. ಶುಕ್ರವಾರವೂ ಹೀಗೆಯೇ ಮಾಡಿದೆ. ಈ ದಿನ ಬಲುಮಟ್ಟಿಗೆ ಕಡಿಮೆಯಾಗಿದೆ. ನಡೆಯು ವಾಗ ತೊಂದರೆಯೇ ಇಲ್ಲ. ಆದರೆ ಹಾರುವಾಗ, ಓಡುವಾಗ ನೋವಾಗುತ್ತಿದೆ. ಈ ಕಾಗದ ಪ್ರಾರಂಭ ಮಾಡುವ ಮೊದಲು ಚೆನ್ನಾಗಿ ಮಸ್ಸಾಜು ಮಾಡಿ ಕುಳಿತಿದ್ದೇನೆ. ನಾಳೆ ಹೇಗೂ ವಿಶ್ರಾಂತಿ. ಸೋಮವಾರ ಬೆಳಗ್ಗೆ ಖಂಡಿತವಾಗಿಯೂ ಗುಣವಾಗುವುದೆಂಬ ಭರವಸೆಯಿದೆ. ಇದೊಂದು ತಾತ್ಕಾಲಿಕವಾದ ತೊಂದರೆಯಲ್ಲದಿದ್ದರೆ ಮತ್ತೆ ಸರ್ವವಿಧ ದಲ್ಲಿಯೂ ಸರಿಯಾಗಿದ್ದೇನೆ. ದೇಹದಲ್ಲಿದ್ದ ಔದಾಸೀನ್ಯವೂ ತಪ್ಪದ ಸ್ವಾಕೂ ಕರಗಿ ಈಗ ನವರೂಪ ಬರುತ್ತಿದೆ. ಮುಂದಿನವಾರ ಪುನಃ ಕಾಗದಿಸುವಾಗ ಸರ್ವೋತ್ಸಾಹಭರಿತ ನಾಗಿರುವೆನೆಂದು ಧೈರ್ಯವಿದೆ.

ಎರಡನೆಯ ವಿಷಯ : ಸಂಭ್ರಮಸುಧಾಪಾಯಸದಲ್ಲಿ ಬಿದ್ದ ನೊಣ.

ವಿಷಯಪ್ರವೇಶದ ಮೊದಲು ಸ್ವಲ್ಪ ವಿವರಣೆ—ಮಿಲಿಟರಿ ಜೀವನ ಹೇಗೆ, ಇಲ್ಲಿಯ ಅಧಿಕಾರದ ಕ್ರಮ ಹೇಗೆ—ಎಂದು ಮುಂತಾಗಿ ಬರೆಯಬೇಕು. ಕೇಂದ್ರ ಸರಕಾರದಲ್ಲಿ ಡಿಫೆನ್ಸ್ ಮಂತ್ರಿ (ಈಗ ಗೋಪಾಲಸ್ವಾಮಿ ಅಯ್ಯಂಗಾರ್) ಮಿಲಿಟರಿ ಖಾತೆಗೆ ಮುಖ್ಯಾಧಿಕಾರಿ. (ಇದರಲ್ಲಿ ಸೈನ್ಯ, ವಿಮಾನದಳ, ನೌಕಾದಳ ಇವೆಲ್ಲವೂ ಸೇರಿವೆ). ಮಂತ್ರಿಗಳು ಚುನಾಯಿತರಾಗಿ ಬರುವವರು. ಯಾರೊಬ್ಬನೂ, ೨೫–೩೦ ವರ್ಷ ಸರಕಾರದ ಇತರ ಅಧಿಕಾರಿಗಳಿರುವಂತೆ, ಮಂತ್ರಿಯಾಗಿರುವುದು ಅಸಾಧ್ಯ. ಪ್ರತಿಯೊಂದು ಖಾತೆಗೆ ಸರಕಾರೀ ನೌಕರನೊಬ್ಬ, ಮಂತ್ರಿಯ ಕೈಕೆಳಗೆ, ಮುಖ್ಯಾಧಿಕಾರಿಯಾಗಿರುವನು. ಸೈನ್ಯದ ಮುಖ್ಯಾಧಿಕಾರಿಗೆ ಕಮಾಂಡರ್–ಇನ್–ಚೀಫ್ ಎಂದೂ ನೌಕಾದಳದವನಿಗೆ ಅಡ್ಮಿರಲ್ ಎಂದೂ ವಿಮಾನ ಪಡೆಯವನಿಗೆ ಏರ್‌ಮಾರ್ಷಲ್ ಎಂದೂ ಹೆಸರು. ನಾವೀಗ ಟ್ರೈನಿಂಗ್ ಆಗುತ್ತಿರುವುದು ಸೈನ್ಯದ ಖಾತೆಯಲ್ಲಿ. ಇದರ ಕಮಾಂಡರ್–ಇನ್–ಚೀಫ್ ಕೊಡಗಿನ ಜನರಲ್ ಕಾರ್ಯಪ್ಪನವರು. ಆಫೀಸುಗಳಲ್ಲಿ ಪ್ಯೂನ್, ಗುಮಾಸ್ತ, ಹೆಡ್‌ಕ್ಲಾರ್ಕ್, ಅಸಿಸ್ಟೆಂಟ್ ಆಫೀಸರ್, ಚೀಫ್ ಆಫೀಸರ್ ಎಂದು ಮುಂತಾಗಿ ಮೇಲೆ ಮೇಲೆ ದರ್ಜೆ ಏರುತ್ತ ಹೋಗುವಂತೆಯೇ ಸೈನ್ಯದಲ್ಲಿಯೂ ಇದೆ. ಸಿಪಾಯಿ, ಲ್ಯಾನ್ಸ್‌ನಾಯಕ್, ಹವಿಲ್ದಾರ್, ಕ್ವಾರ್ಟರ್ ಮಾಸ್ಟರ್ ಹವಿಲ್ದಾರ್ ಮೇಜರ್, ರೆಜಿಮೆಂಟಲ್ ಕ್ವಾರ್ಟರ್ ಮಾಸ್ಟರ್ ಹವಿಲ್ದಾರ್, ರೆಜಿಮೆಂಟಲ್ ಸಾರ್ಜೆಂಟ್ ಮೇಜರ್, ಜೆಮಾದಾರ್, ಸುಬೇದಾರ್, ಸುಬೇದಾರ್ ಮೇಜರ್, ಸೆಕೆಂಡ್ ಲೆಫ್ಟಿನೆಂಟ್, ಲೆಫ್ಟಿನೆಂಟ್, ಕ್ಯಾಪ್ಟನ್, ಮೇಜರ್, ಲೆಫ್ಟಿನೆಂಟ್ ಕರ್ನಲ್, ಕರ್ನಲ್, ಬ್ರಿಗೇಡಿಯರ್, ಮೇಜರ್ ಜನರಲ್, ಲೆಫ್ಟಿನೆಂಟ್ ಜನರಲ್, ಜನರಲ್ ಮತ್ತು ಫೀಲ್ಡ್ ಮಾರ್ಷಲ್—ಇವು ಸೈನ್ಯದಲ್ಲಿ ಇರುವ ಪದವಿಗಳು. ಸಿಪಾಯಿಯ ಹೊರತಾಗಿ ಆಯಾ ಹಂತದಲ್ಲಿರುವ ಪ್ರತಿಯೊಬ್ಬನೂ ಅವನ ಹೆಸರಿಗೆ ಮೊದಲು ಮೇಲಿನ ಬಿರುದನ್ನು ಸೇರಿಸಿಕೊಳ್ಳಬಹುದು. ಏಳನೆಯ ಹಂತದಲ್ಲಿ ಶಿವರಾಮಕೃಷ್ಣ ಮಹದೇವ ದೇಸಾಯಿ ಎನ್ನುವವನು ಇದ್ದರೆ ಅವನನ್ನು ರೆಜಿಮೆಂಟಲ್ ಕ್ವಾರ್ಟರ್ ಮಾಸ್ಟರ್ ಹವಿಲ್ದಾರ್ ಶಿವರಾಮಕೃಷ್ಣ ಮಹದೇವ ದೇಸಾಯಿಯೆಂದು ಕರೆಯಬೇಕು. ಸುಬೇದಾರ್ ಮೇಜರ್ ಮತ್ತು ಅವನಿಗಿಂತ ಕೆಳಗಿನವರು ಜೆಮಾದಾರ್ (ಸೇರಿ)ವರೆಗೆ ಜೂನಿಯರ್ ಕಮಿಷನ್ಡ್ ಆಫೀಸರ್ಸ್ ಎಂದೂ ಸೆಕೆಂಡ್ ಲೆಫ್ಟಿನೆಂಟ್ ಮತ್ತು ಅವನಿಗಿಂತ ಮೇಲಿನವರು ಇಂಡಿಯನ್ ಕಮಿಷನ್ಡ್ ಆಫೀಸರ್ಸ್ ಎಂದೂ ಕರೆಯಲ್ಪಡುತ್ತಾರೆ. ಸೈನ್ಯಖಾತೆಯಲ್ಲಿ ಆಫೀಸರ್ ಎಂದರೆ ಎರಡನೆಯ ವರ್ಗದವರು ಮಾತ್ರವೆಂದು ಅರ್ಥ. ಈ ಟ್ರೈನಿಂಗ್ ಆದಮೇಲೆ ನಮ್ಮನ್ನು (ಯಶಸ್ವಿಗಳಾದರೆ) ಸೆಕೆಂಡ್ ಲೆಫ್ಟಿನೆಂಟ್ ಸೋಪಾನದಲ್ಲಿಡುವರು. ಆದುದರಿಂದ ನಮ್ಮ ಹೆಸರಿನ ಮೊದಲು ಆಫೀಸರ್–ಕ್ಯಾಡೆಟ್ ಎಂದು ಈಗಲೇ ನಾವು ಸೇರಿಸಿಕೊಳ್ಳಬಹುದು. ಕ್ಯಾಡೆಟ್ ಎಂದರೆ ಸಿದ್ಧತಾ ಶಿಕ್ಷಣದಲ್ಲಿ ಇರುವವನು ಎಂದರ್ಥ. ಆದರೆ ಮುಂದೆ ಎಲ್ಲಿಯಾದರೂ ಆಫೀಸರಿಕೆ ದೊರೆಯದಿದ್ದರೆ ಎನ್ನುವ ಭೀತಿಯಿರುವುದರಿಂದ ಯಾರೂ ಅದನ್ನು ಈಗ ಸೇರಿಸುವುದಿಲ್ಲ. ಈ ಎಲ್ಲ ಹಂತದವರನ್ನು ಅವರ ಯೂನಿಫಾರ್ಮಿನಲ್ಲಿರುವ ಕೆಲವು ಗುರುತುಗಳಿಂದ ಕೂಡಲೇ ಕಂಡುಹಿಡಿಯಬಹುದು. ಜವಾರದಿಲ್ಲದವನು

ಬ್ರಾಹ್ಮಣೇತರ. ಒಂದು ಜನಿವಾರವಿರುವವನು ಮಧುವೆಯಾಗದ ಬ್ರಾಹ್ಮಣ, ವಿಭೂತಿ ಪಟ್ಟೆಯಿರುವವನು ಸ್ಮಾರ್ತ ಅಥವಾ ಶೈವ ಎಂದು ಮುಂತಾಗಿ ನಾವು ಎಷ್ಟು ಸುಲಭ ದಿಂದ ಗುರುತಿಸುವೆವೊ, ಅದಕ್ಕಿಂತಲೂ ಸ್ಪಷ್ಟವಾಗಿ ಶೀಘ್ರವಾಗಿ ನಾವು ಸೈನ್ಯದ ವಿವಿಧ ಸೋಪಾನಗಳಲ್ಲಿರುವವರನ್ನು ಗುರುತಿಸುತ್ತೇವೆ. ಆಫಿಸರರಿಗೆಲ್ಲ ಪೈಲಟ್‌ಗಳು (ಇವರು ವಿಮಾನದಳದಲ್ಲಿ ಆಫಿಸರರು) ಧರಿಸುವಂಥ ಚಂದದ ತೊಪ್ಪಿ ಮತ್ತು ಕೆಲವು ಲಾಂಛನ ಗಳು ದೊರೆಯುವುವು. ಸೆಲ್ಯೂಟ್ ಹೊಡೆಯುವುದು ಮಿಲಿಟೆರಿಯಲ್ಲಿ ಕಡ್ಡಾಯವಾದ ಅಂಗ. ನಿತ್ಯಜೀವನದಲ್ಲಿ ನಮ್ಮ ಮೇಲಧಿಕಾರಿಗಳಿಗೆ ಎಮಾರಾದಾಗಲೂ ಸೆಲ್ಯೂಟ್ ಹೊಡೆ ಯದೆ ಹೋಗಬಹುದು. ಕೆಲವರು ಸೆಲ್ಯೂಟ್ ಹೊಡೆದರೆ ತೆಗೆದುಕೊಳ್ಳುವುದೂ ಇಲ್ಲ. ಆದರೆ ಮಿಲಿಟೆರಿಯಲ್ಲಿ ಇದಕ್ಕೂ ಒಂದು ಕ್ರಮವಿದೆ. ಕೆಳಗಿನ ಸೋಪಾನದವನು ಮೇಲಿ ನವನಿಗೆ ಕಂಡಾಗಲೆಲ್ಲ ಮಿಲಿಟರಿ ಕ್ರಮದಂತೆ ಸೆಲ್ಯೂಟ್ ಹೊಡೆಯಬೇಕು, ಮೇಲಿನ ವನು ಅದನ್ನು ತೆಗೆದುಕೊಳ್ಳಬೇಕು. ಮಿಲಿಟೆರಿ ಕ್ರಮವೆಂದರೆ, ಹೆಜ್ಜೆ ಹೆಜ್ಜೆಗೂ ಶಿಸ್ತು, ನಿಯಮ. ಇವುಗಳನ್ನೆಲ್ಲ ವಿವರಿಸುತ್ತ ಹೋದರೆ ಅದೊಂದು ಗ್ರಂಥವಾದೀತು. ಪ್ರತಿ ಯೊಂದು ವ್ಯವಹಾರದಲ್ಲಿಯೂ ಕಠಿಣತೆ, ಬಿರುಸು. ಹೀಗಿಲ್ಲದಿದ್ದರೆ ಮಿಲಿಟೆರಿ ಯುದ್ಧಕಾಲದಲ್ಲಿ ಉತ್ತರ ಕುಮಾರಸಹಸ್ರವಾಗುಬಹುದು. ಇಲ್ಲಿಯ ಮಿಲಿಟೆರಿ ಕೇಂದ್ರದ ಹೆಸರು ಮದರಾಸ್ ರೆಜಿಮೆಂಟಲ್ ಸೆಂಟರ್ ಎಂದು. ಇದರ ಮುಖ್ಯಾಧಿಕಾರಿಯಾಗಿದ್ದ ಲೆಫ್ಟಿನೆಂಟ್ ಕರ್ನಲ್ ಸೊರೊಸ್ನಾ ಎನ್ನುವವರು ಎರಡು ವರ್ಷಗಳ ಅಧಿಕಾರಾನಂತರ ದೆಹಲಿಗೆ ವರ್ಗಾಯಿಸಲ್ಪಟ್ಟಿದ್ದರು. ಇವರಿಗೆ ಕಮಾಂಡಿಂಗ್ ಆಫಿಸರ್ ಅಥವಾ ಸಿಓ ಎಂದು ಹೆಸರು. ಇಲ್ಲಿ ಬೇರೆ ಬೇರೆ ತರಗತಿಯ ನೌಕರರಿಗೆ ಬೇರೆ ಬೇರೆ ಮೆಸ್ (ಭೋಜನಾಲಯ)ಗಳಿವೆ. ಹೀಗೆ ಆಫಿಸರರ ಮೆಸ್‌ಗೆ ಆ ಹೆಸರು. ನಾವೆಲ್ಲರೂ ಅದರಲ್ಲಿ ಹೊಟ್ಟೆ ತುಂಬಿಸುವುದು. ಈ ಎಲ್ಲ ಮೆಸ್‌ಗಳಲ್ಲಿಯೂ ಸಿಓರಿಗೆ ಬೀಳ್ಕೊಡುವ ಸಮಾರಂಭ ಪ್ರತಿರಾತ್ರಿ ಎನ್ನುವಂತೆ ನೆರವೇರಿತು. ಕೊನೆಯದು ನಮ್ಮ ಮೆಸ್‌ನಲ್ಲಿ ನಡೆಯಿತು. ಅದು ಗುರುವಾರ ರಾತ್ರಿ. ಅದರ ವರ್ಣನೆಗಾಗಿ ಇಷ್ಟೊಂದು ಪೀಠಿಕೆ.

ಆಫಿಸರರ ಮೆಸ್‌ಗೆ ಆಹಾರ ತೆಗೆದುಕೊಳ್ಳಲು ಹೋಗುವಾಗ ನಾವು ಸರಿಯಾದ ಪೋಷಾಕಿನಲ್ಲಿ, ಸೂಟ್ ಟೈಸಹಿತ, ಇರಬೇಕು. ವಿಶೇಷ ಸಮಾರಂಭಗಳಲ್ಲಿ ನಾವು ವಿಶೇಷ ವಾದ ಡಿನ್ನರ್ (ಮಹಾಭೋಜನ) ಯೂನಿಫಾರ್ಮಿನಲ್ಲಿ ಇರಬೇಕು. ಇಂಥ ಮೆಸ್ ಡಿನ್ನರ್ ಯೂನಿಫಾರ್ಮನ್ನು ತಯಾರಿಸಲು ನಮ್ಮ ಅಳತೆಗಳನ್ನೂ ಸಾಕಷ್ಟು ಹಸುರು ಬಣ್ಣದ ಬಟ್ಟೆಯನ್ನೂ ಈಗ ೧೦ ದಿವಸಗಳ ಹಿಂದೆಯೇ ದರ್ಜಿಗೆ ಒದಗಿಸಲಾಯಿತು. ಬುಧವಾರ ಬೆಳಗ್ಗಿನಿಂದಲೇ ನಮ್ಮ ಆಫಿಸರರು ದರ್ಜಿಯನ್ನು ಪೀಡಿಸತೊಡಗಿದರು —ಗುರುವಾರ ರಾತ್ರಿಗೆ ಆ ಯೂನಿಫಾರ್ಮ್ ತಯಾರಾಗಲೇಬೇಕು ಎಂದು. ನಮ್ಮ ಕೆಲಸದವರನ್ನು ದರ್ಜಿಯಲ್ಲಿಗೆ ಓಡಿಸಿದ್ದೂ ಓಡಿಸಿದ್ದೇ. ಗುರುವಾರ ೧೧ ಗಂಟೆಗೆ —ನಾವು ಆಗ ಟ್ರೈನಿಂಗ್‌ನಲ್ಲಿದ್ದೆವು—ಇಡೀ ವಸ್ತ್ರದ ಮೂಟೆ ಅಗಸನಲ್ಲಿಗೆ ಹೋಯಿತು. ಸಾಯಂಕಾಲ ೬ ಗಂಟೆಗೆ ಅಗಸ ಅವುಗಳಿಗೆ ಇಸ್ತ್ರಿ ಹಾಕಿದ ಶಾಸ್ತ್ರಮಾಡಿ ತಂದ. ಯಾವುದು ಯಾರದ್ದು ಎಂದು ದರ್ಜಿಗೂ ತಿಳಿಯಲಿಲ್ಲ. ಹೀಗಾಗಿ ಸಿಕ್ಕಿದುದನ್ನು ಸೆಳೆದುಕೊಂಡರು. ತೋರದವರಿಗೆ ಸಪುರದವರ ಪ್ಯಾಂಟೂ, ಸಪುರದವರಿಗೆ ಕಡಿಕೆಯಂಥ

ಪ್ಯಾಂಟೂ ದೊರೆತುವು. ಹಸುರು ಬಣ್ಣವೋ ಅಸಹ್ಯ. ಅಗಸ ಬಂದಾಗ ನಾನಲ್ಲಿ ಇಲ್ಲದಿದ್ದುದರಿಂದ ಕಡೆಗೆ ಉಳಿದುದು ನನಗೆ ಬಂತು. ಪ್ಯಾಂಟು ಸರಿಯಾಗಿತ್ತು. ಆದರೆ ಬುಷ್ ಷರ್ಟು ಬರಲೇ ಇಲ್ಲ. ಅಗಸನೆಂದ ದರ್ಜಿ ಅದನ್ನು ಕೊಡಲೇ ಇಲ್ಲವೆಂದು. ದರ್ಜಿಯಲ್ಲಿಗೆ ಕೆಲಸದವನನ್ನು ಅಟ್ಟಲಾಯಿತು. ಅವನೊಂದು ಬುಷ್‌ಷರ್ಟನ್ನು ಕಳಿಸಿದ. ಅದಕ್ಕೆ ಜೇಬೇ ಇರಲಿಲ್ಲ. ಉಳಿದವರದ್ದಕ್ಕೂ ಜೇಬು ಆಗುವಂತೆ ತೋರುವ ಮುಚ್ಚಳಗಳು ಇದ್ದುವು. ನಮ್ಮ ಆಫಿಸರ್ ಪರ್ವಾರ್ ಆಗ (೨ ಗಂಟೆ ಅಪರಾಹ್ನ) ಇಲ್ಲಿಗೆ ಧಾವಿಸಿ ಬಂದಿದ್ದರು—ನಮ್ಮ ಅವಸ್ಥೆ ಹೇಗಿದೆ ಎಂದು ನೋಡಲು. ನನ್ನೊಬ್ಬನ ಪರಿಸ್ಥಿತಿಯನ್ನು ನೋಡಿ "ಹಾಗಾದರೆ ನೀನು ಬರಬೇಡ" ಎಂದರು. ನನಗೆ ಒಂದು ರೀತಿಯಲ್ಲಿ ಸಂತೋಷ ಒಂದು ರೀತಿಯಲ್ಲಿ ದುಃಖವಾಯಿತು. ಅಲ್ಲಿ ಹೋದರೆ ರಾತ್ರಿ ೨-೩ ಗಂಟೆಯ ತನಕ ಕುಡಿಯುತ್ತ ಕೆಲೆಯುವವರನ್ನು ನೋಡುತ್ತ ನಿದ್ರೆ ತೂಗುವುದೊಂದೇ ನನ್ನ ಕಾರ್ಯ. ಮರುದಿನ ಮತ್ತೆ ೫ ಗಂಟೆಗೆ ಎದ್ದು ಶ್ರಮಿಸಲೇಬೇಕು. ಆದುದರಿಂದ ಹೋಗದಿದ್ದರೆ, ಇಲ್ಲಿಯೇ ಹೋಟೆಲ್ಲಿನಿಂದ ಆಹಾರ ತರಿಸಿ ಸುಖನಿದ್ರೆ ಮಾಡಬಹುದು. ಹೀಗಾಗಿ ಸಂತೋಷ. ನಿದ್ರೆ ಕೆಟ್ಟರೂ ಸಂಭ್ರಮಸುರಾಪಾಯಸದಲ್ಲಿ ಬಿದ್ದ ನೊಣವಾದರೂ ಈ ಒಂದು ನೂತನ ಅನುಭವ ಕಳೆದುಹೋಗುವುದಲ್ಲ ಎಂದು ದುಃಖ. ಆಗಲೇ ಆಫಿಸರರೇ ಸೂಚಿಸಿದರು. "ಈಗಲೇ ನನ್ನ ಮನೆಗೆ ಬನ್ನಿ. ನನ್ನ ಬುಷ್ ಷರ್ಟನ್ನು ಕೊಡುತ್ತೇನೆ." ಹೀಗೆ ಎರವಲಾಗಿ ತಂದ ಆದರೆ ಉಳಿದವರದೆಲ್ಲದಕ್ಕಿಂತಲೂ ಅತ್ಯುತ್ತಮವಾಗಿದ್ದ, ಸ್ವಲ್ಪ ಹಳೆಯದಾಗಿ ಬಣ್ಣ ಹೋಗಿದ್ದುದರಿಂದ ನನ್ನ ಪ್ಯಾಂಟಿನ ಬಣ್ಣದೊಂದಿಗೆ ಎರಕವಾಗದಿದ್ದ ಬುಷ್‌ಷರ್ಟನ್ನು ಧರಿಸಿ ಮೆಸ್‌ಗೆ ಹೋಗುವ ಭಾಗ್ಯ ನನ್ನದಾಯಿತು. ೭-೩೦ ಗಂಟೆಗೆ ನಾವೆಲ್ಲರೂ ಮೆಸ್ಸನ್ನು ಸೇರಿದ್ದೆವು. ಎದುರಿನ ಅಂಗಳವನ್ನೂ ಜಗಲಿಯನ್ನೂ ವಿದ್ಯುದ್ದೀಪಗಳಿಂದ ಅಲಂಕಾರಮಾಡಿದ್ದರು. ಅಂಗಳದ ಕರೆಯಲ್ಲಿ ದೊಡ್ಡದೊಂದು ಡೇರೆ ಹೊಡೆದಿದ್ದರು. ಅದರಲ್ಲಿ ಮಿಲಿಟೆರಿ ಬ್ಯಾಂಡಿನವರು ಯೂನಿಫಾರ್ಮ್ ಧರಿಸಿ ಅವರವರ ವಾದ್ಯಗಳನ್ನು ಹಿಡಿದು ಕುಳಿತಿದ್ದರು. ಅತಿಥಿಗಳು —ಮಿಲಿಟೆರಿ ಆಫಿಸರರು, ಅವರ ಪತ್ನಿಯರು—ಬರುತ್ತಿದ್ದರು. ಮೆಸ್ ಕಟ್ಟಡದ ಒಳಗೆ ಭೋಜನದ ಕೊಠಡಿ, ಸಮೀಪದಲ್ಲಿ ಬಿಲ್ಲಿಯರ್ಡ್ಸ್ ಆಡಲಿರುವ ಒಂದು ಹಾಲ್, ಅದರ ಸಮೀಪ ಪೇಪರ್ ಓದುತ್ತ ವಿಶ್ರಾಂತಿ ಪಡೆಯಲಿರುವ ಇನ್ನೊಂದು ದೊಡ್ಡ ಹಾಲ್ ಹೀಗೆ ಮುಖ್ಯವಾಗಿವೆ. ಭೋಜನದ ಕೋಣೆಯ ಹೊರತು ಉಳಿದ ಕೋಣೆಗಳಲ್ಲಿ ಜನರು ಕಿಕ್ಕಿರಿದಿದ್ದರು. ಆಫಿಸರರು, ಅವರ ಪತ್ನಿಯರು ನಾವು ೧೪ ಮಂದಿ ಸೇರಿ ಸುಮಾರು ೧೫೦ ಮಂದಿ ಅಲ್ಲಿದ್ದೆವು. ಆಫಿಸರರ ದಿರಿಸು ಕರಿ ಸರ್ಜ್ ಪ್ಯಾಂಟ್ (ಮಿಲಿಟೆರಿಯಲ್ಲಿ ತುದಿ ಮಡಿಸುವುದಿಲ್ಲ), ಅದರ ಕಾಲುಗಳಿಗೆ ಬಲಗಾಲಿನ ಬಲಭಾಗದಲ್ಲಿಯೂ ಎಡಗಾಲಿನ ಎಡಭಾಗದಲ್ಲಿಯೂ ಬಿಳೀಪಟ್ಟೆಗಳು. ಕಾಲಿಗೆ ಕರಿಯ ಥಳಥಳಿಸುವ ಶೂಸ್. ಮೇಲ್ಭಾಗದಲ್ಲಿ ಬಿಗಿಯಾಗಿ, ಕುತ್ತಿಗೆಯ ಹತ್ತಿರದ ಒಂದು ಗುಂಡಿಯ ಹೊರತು ಉಳಿದವನ್ನು ಹಾಕಲಾಗದಿರುವಂತಹ ಬಿಳೀ ರೇಶ್ಮೆಯ ಜುಬ್ಬ (ಉದ್ದ ಕೈ). ಗುಂಡಿಗಳೆಲ್ಲ ರೋಲ್ಡ್ ಗೋಲ್ಡ್‌ನವು. ಈ ಆಫಿಸರರೆಲ್ಲ ಮರಿ ಆನೆಗಳಂತೆ ತಿರುಗುತ್ತಿದ್ದರು. ವಿವಿಧ ಫ್ಯಾಶನ್ನಿನ ಸ್ತ್ರೀಯರು ಒಟ್ಟು ೧೫ ಮಂದಿಯಿದ್ದರು. ಎಲ್ಲರೊಡನೆಯೂ ಸರಳವಾಗಿ ಮರ್ಯಾದೆ

ಯಿಂದಲೂ ಸಮಾನತೆಯಿಂದಲೂ ವರ್ತಿಸಬೇಕು, ಬೇಕಾದಷ್ಟು ವೈನ್, ರಮ್, ವಿಸ್ಕಿ, ಬ್ರಾಂಡಿ ಮುಂತಾದವನ್ನು ಕುಡಿಯಬಹುದು, ಸಿಗರೇಟುಗಳನ್ನು ಸೇದಬಹುದು ಎಂದು ನಮ್ಮ ಆಫೀಸರರೆಂದಿದ್ದರು. ಕುಡಿದು ಅಭ್ಯಾಸವಿಲ್ಲದವರು, ಕುಡಿಯಲು ಬೇಡದವರು ಏನು ಮಾಡುವುದು ಎಂದು ಪ್ರಶ್ನಿಸಿದಾಗ "ಬರೀ ಕೈಯಿಯಲ್ಲಿರಬಾರದು. ಒಂದು ಗ್ಲಾಸಿನಲ್ಲಿ ಸೋಡಾವನ್ನೋ, ಆರೆಂಜ್ ಸ್ಕ್ವಾಷನ್ನೋ ಹಿಡಿದುಕೊಂಡು ಕುಡಿಯುವಂತೆ ನಟಿಸಿ. ಕುಡಿಯದವರಿಗೆ ನನ್ನ ಸಾವಿರ ಸಹಾನುಭೂತಿಗಳು" ಎಂದು ಪರ್ಮಾರ್ ಸೂಚಿಸಿದರು. ನಾವು ೬ ಜನ ಸಸ್ಯಾಹಾರಿಗಳಲ್ಲಿ ಇಬ್ಬರು ಕುಡಿಯುವವರು. ಉಳಿದ ನಾಲ್ವರಲ್ಲಿ ಒಬ್ಬನು ರಾತ್ರಿ ೧-೩೦ರತನಕ ಕುಡಿಯದೇ ಇದ್ದ. ಆಗ ವಿಪರೀತ ಚಳಿಯೂ ಯಿತೆಂದು ರಮ್ ಎನ್ನುವ ಮಾದಕ ಪಾನೀಯವನ್ನು ಹೀರಿಬಿಟ್ಟ. ರಾತ್ರಿಯಿಡೀ ತಿಂದುದನ್ನು ಕಾರಿ ಮರುದಿವಸ ಜ್ವರದಿಂದ ನರಳಿ ಕಂಗಾಲಾಗಿಬಿಟ್ಟ. ಕೊನೆಗೂ ಕುಡಿಯದೇ ಕುಡಿದವರನ್ನು ನೋಡಿ ಅಸಹ್ಯಪಟ್ಟು ಮರಳಿದವರು, ಸರಿಯಾದ ಬುದ್ಧಿಯಲ್ಲಿ ಹಿಂತಿರುಗಿದವರು ತ್ರಿಮೂರ್ತಿಗಳೇ. ಇವರಲ್ಲಿ ಪ್ರಸ್ತುತ ಲೇಖಕನೂ ಇದ್ದ ಎನ್ನುವುದು ಸುಸ್ಪಷ್ಟ. ಒಬ್ಬ ಆಫೀಸರ್, ಪೀಯೂಷಭರಿತ ಭಾಂಡ ಸುಸಜ್ಜಿತ ಅಲಮಾರದ ಮುಂದೆ ಕುಳಿತಿರುತ್ತಿದ್ದ. ಅಲ್ಲಿಗೆ ಹೋಗಿ ಬೇಕಾದುದನ್ನು ಕೇಳಿ ಕುಡಿಯುವುದು ಕ್ರಮ. ಒಬ್ಬ ತೆಗೆದುಕೊಂಡು ಹೋಗಿ ಮತ್ತೊಬ್ಬ(ಳಿ)ಗೆ ಕೊಡುವಾಗ ಇಬ್ಬರೂ ಅವರವರ ಗ್ಲಾಸುಗಳನ್ನು ಮುಟ್ಟಿಸಿ ಕ್ಲಿಕ್ಕಿಸಿ ಕುಡಿಯುವುದು ಮರ್ಯಾದೆ! "ಈ ಬ್ಲಡಿ ರಮ್ ವಿಸ್ಕಿಯಂತೆ ಇಲ್ಲ" ಎಂದು ಆದಷ್ಟು ಬ್ಲಡಿ ಶಬ್ದಗಳನ್ನು ಪ್ರಯೋಗಿಸಿ ನಗುವುದು, ಹೊರಗೆ ಒಳಗೆ ತಿರುಗುವುದು, ಕಟ್ಟಡ ಹಾರುವಂತೆ ಬಿದ್ದು ಬಿದ್ದು ನಗುವುದು ಹೀಗೆಯೇ ೯ ಗಂಟೆತನಕ ಸಾಗಿತು. ಸಿ ಓ ಅವರೂ (ಮುಖ್ಯ ಅತಿಥಿ) ಅವರ ಪತ್ನಿಯೂ ಚಿತ್ತೈಸಿದ್ದರು. ಸಿಓ ೪೦–೪೫ ವರ್ಷದ ದೈತ್ಯ. ಅವರು ಸೊಂಟದಿಂದ ಮೇಲೆ ಭಾರೀ ಆಳು. ಬರ್ಮಾ ಯುದ್ಧದಲ್ಲಿ, ಕಾಶ್ಮೀರ ಕಾಳಗದಲ್ಲಿ ವಿಶೇಷ ಬುದ್ಧಿವಂತಿಕೆಯಿಂದ ಕಾದು ಗೆದ್ದ ಖ್ಯಾತಿವೆತ್ತವರು. ಕಾಶ್ಮೀರದಲ್ಲಿ ಪೀರ್‌ಕಲಾವ ಎನ್ನುವ ದುರ್ಗ ಪಾಕಿಸ್ತಾನಿಗಳ ವಶದಲ್ಲಿತ್ತಂತೆ. ಅದನ್ನು ನಮ್ಮ ಸೈನ್ಯದವರು ಎಷ್ಟು ಪ್ರಯತ್ನಿಸಿದರೂ ವಶಪಡಿಸಿಕೊಳ್ಳಲು ಆಗಲಿಲ್ಲವಂತೆ. ನಮ್ಮ ಸಿ ಓ ಅಲ್ಲಿಗೆ ಹೋಗಿದ್ದಾಗ ತನ್ನ ಚಿಕ್ಕ ಮದರಾಸ್ ಪಡೆಯನ್ನು ತೆಗೆದುಕೊಂಡು ಹೋಗಿ ಪಾಕಿಸ್ತಾನಿಗಳನ್ನು ಸೋಲಿಸಿ ಓಡಿಸಿಬಿಟ್ಟರಂತೆ. ಪೀರ್‌ಕಲಾವ ಈಗ ನಮ್ಮ ವಶದಲ್ಲಿದೆ. ಈ ಸವಿನೆನಪಿಗಾಗಿ ವೆಲ್ಲಿಂಗ್ಟನ್‌ನಲ್ಲಿ ಒಂದು ಬೆಟ್ಟಕ್ಕೆ ಪಿ ಕೆ (ಪೀರ್ ಕಲಾವ) ಹಿಲ್ ಎಂದು ಹೆಸರಿಸಿದ್ದಾರೆ. ಅದರ ಮೇಲೆಯೂ ಒಂದು ಮಿಲಿಟರಿ ಶಿಕ್ಷಣ ಶಾಖೆಯಿದೆ. ಅಲ್ಲಿಗೆ ಇಲ್ಲಿಂದ ಏರಿ ಏರಿ ೨-೩ ಮೈಲಿ ಸಾಗಬೇಕು. ಒಂದು ವಾರದ ಹಿಂದೆ ನಮ್ಮೆಲ್ಲರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ದಾರಿ ತಪ್ಪಿದೆ, ಹಿಂದೆ ಮರಳುತ್ತೇನೆ. ೯ ಗಂಟೆಯಾಗುವಾಗ ಕ್ಯಾಪ್ಟನ್ ಮೈತ್ರ ಎನ್ನುವ ಆಫೀಸರ್ ನನ್ನನ್ನು ಕರೆಯುತ್ತಿದ್ದಾರೆ ಎಂದು ಒಬ್ಬ ಕೆಲಸದವನು ಹೇಳಿದ. ಅವನಿಗೆ ನನ್ನನ್ನು ಹೇಗೆ ಗೊತ್ತು ಎಂದು ಆಶ್ಚರ್ಯದಿಂದ ಅಲ್ಲಿಗೆ ಹೋದೆ. "ನೀನು ತಬಲಾ ಹೊಡೆಯುತ್ತೀಯೆ ಎಂದು ನಿನ್ನೊಬ್ಬ ಮಿತ್ರನಿಂದ ತಿಳಿಯಿತು. ಬಾ ನನ್ನ ಜತೆಯಲ್ಲಿ" ಎಂದು ಮೆಸ್ ಮಂದಿರದ ಒಂದು ಕೋಣೆಗೆ ಕರೆದುಕೊಂಡು ಹೋದರು. ಅಲ್ಲಿ

ನಾವಿಬ್ಬರೂ ಇನ್ನು ೪-೫ ಆಫೀಸರರೂ ಸೇರಿದರು. ಅವರು ೫ ಮಿನಿಟ್ ಹಾರ್ಮೋನಿಯಮ್ ಬಾರಿಸುತ್ತ ಬಾಯಿಯಲ್ಲಿ ಹಿಂದೀ, ಬಂಗಾಳಿ ಹಾಡುಗಳನ್ನು ಸೊಗಸಾಗಿ ಹಾಡಿದರು. ನಾನು ತಬಲಾ ನುಡಿಸಿದೆ. "ಮತ್ತೆ ನಮ್ಮದೊಂದು ಸಂಗೀತ ಕಛೇರಿಯೇ ಆಗಬೇಕು" ಎಂದು ಅಪ್ಪಣೆ ಮಾಡಿದರು. ಮತ್ತೆ ೫ ಮಿನಿಟ್ ನಾನು ಹಾರ್ಮೋನಿಯಮ್ ಬಾರಿಸಿದೆ, ಅವರು ತಬಲಾ ನುಡಿಸಿದರು. ನನ್ನ ಹೆಸರನ್ನು ಕೇಳಿದ ಒಬ್ಬ ಆಫಿಸರ್ ನಾನು ಯಾವ ಊರಿನವನು ಎಂದು ಪ್ರಶ್ನಿಸಿದರು. ಕೊಡಗು ಎಂದೊಡನೆಯೇ "ಹಾಗಾದರೆ ಕನ್ನಡಿಗ" ಎಂದು ಸಂತೋಷದಿಂದ ಕನ್ನಡದಲ್ಲಿ ಉದ್ಗಾರವೆತ್ತಿದರು. ಇವರು ಲೆಫ್ಟಿನೆಂಟ್ ಐಯ್ಯಂಗಾರ್, ಮೈಸೂರಿನವರು. ಅವರ ಜತೆಯಲ್ಲಿ ಸುಮಾರು ಹೊತ್ತು ಕನ್ನಡದಲ್ಲಿ ಮಾತಾಡುತ್ತಿದ್ದೆ. ಸಿಓರ ಕೈಕೆಳಗಿನ, ಅಂದರೆ ಎರಡನೆಯ ಮುಖ್ಯ ಅಧಿಕಾರಿ ಮೇಜರ್ ಸೋಮಯ್ಯ ಕೊಡಗಿನವರು. ಅವರನ್ನು ನೋಡಿ ಮಾತಾಡಿಸಬೇಕೆಂದಿದ್ದೆ. ಆಗಲೇ ಅವರು ಹೊರಗೆ ಬಂದು ನನ್ನ ಕೈ ಖಾಲಿಯಿದ್ದುದನ್ನು ನೋಡಿ "Come on my dear boy ! Let us have a cup" ಎಂದು ಎಳೆದರು (ಬಾ ನನ್ನ ಪ್ರಿಯ ಹುಡುಗನೇ, ನಾವೊಂದು ಕಪ್ ತೆಗೆದುಕೊಳ್ಳುವ). ನನ್ನ ಮುಖವನ್ನು ದಿಟ್ಟಿಸಿ "ನೀನು ಜಿ. ಎಸ್. ರಾಮಚಂದ್ರನ ತಮ್ಮನೇ" ಎಂದು ಇಂಗ್ಲಿಷಿನಲ್ಲಿ ಕೇಳಿದರು. ೧೦ ಗಂಟೆಯತನಕವೂ ನಾವು ಕೊಡಗಿನವರು ಎಷ್ಟು ಆತ್ಮೀಯತೆಯಿಂದ ಮಾತಾಡುತ್ತಿದ್ದೆವು. ಚಿಕ್ಕಪ್ಪನ ಕ್ಲಾಸ್‌ಮೇಟಂತೆ ಮೇಜರ್ ಸೋಮಯ್ಯ. ೧೦ ಗಂಟೆಗೆ ಎಲ್ಲರೂ ಎದ್ದು ಭೋಜನಾಲಯವನ್ನು ಹೊಕ್ಕರು. ಅಲ್ಲಿ ನಾವು ಯಾವಾಗಲೂ ಊಟ ಮಾಡುವ ಉದ್ದವಾದ ಆಯತಾಕಾರದ ಮೇಜಿನ ನಾಲ್ಕು ಬದಿಗಳಲ್ಲಿಯೂ ಸಾಲಾಗಿ ಆಹಾರ ಪದಾರ್ಥಗಳನ್ನು ಇಟ್ಟಿದ್ದರು. ಮೇಜದಿಂದ ೩ ಅಡಿ ದೂರದಲ್ಲಿ ಸಾಲಾಗಿ ಹತ್ತಿರ ಹತ್ತಿರ ಕುರ್ಚಿಗಳನ್ನು ಅಳವಡಿಸಿದ್ದರು. ನಾವು ಒಳಗೆ ನುಗ್ಗಿದಂತೆಯೇ ಪ್ಲೇಟ್, ನ್ಯಾಪ್ಕಿನ್ (ಬಟ್ಟೆ), ಸ್ಪೂನ್, ಫೋರ್ಕ್, ಕತ್ತಿ ಇವನ್ನು ಕೊಡುತ್ತಿದ್ದರು. ಒಬ್ಬರ ಹಿಂದೆ ಒಬ್ಬರು ಮೇಜಕ್ಕೆ ಪ್ರದಕ್ಷಿಣೆಯಾಗಿ ಸಾಗಿದೆವು, ಅಲ್ಲಿದ್ದ ಆಹಾರ ಪದಾರ್ಥಗಳು : ಅನ್ನ, ಚಪಾತಿ, ಬೇಯಿಸಿದ ಬಟಾಣಿ, ಕ್ಯಾಬೇಜ್ ಪಲ್ಯ, ಕಾಲಿಫ್ಲವರ್ ಸಾಂಬಾರ್, ಟೊಮಾಟೊ, ನೀರುಳ್ಳಿ ತುಂಡುಗಳು, ಬೇಯಿಸಿದ ಆಲೂಗೆಡ್ಡೆ, ಕತ್ತರಿಸಿ ಹುರಿದ ಆಲೂಗೆಡ್ಡೆ, ಹಪ್ಪಳ, ಕೋಳಿ ಮೇಲೋಗರ. ಹಂದೀಮೇಲೋಗರ, ಕುರಿ ಮಾಂಸದ ಮೇಲೋಗರ ಮತ್ತು ಈ ಮಾಂಸಗಳ ವಿವಿಧ ಮಿಶ್ರಣಗಳು. ಸಾಗುವಾಗ ನಾವು ಬೇಕಾದುದನ್ನು ತೆಗೆದು ನಮ್ಮ ತಟ್ಟೆಯ ಮೇಲೆ ಹಾಕಿಕೊಂಡು ಹೋದೆವು. ಈ ಸ್ವಯಂವರಣ ಭೋಜನ ವಿಧಾನಕ್ಕೆ ಬಫೆ ಎಂದು ಹೆಸರು. ಆ ಕೋಣೆಯ ಒಳಗಿನ ಕುರ್ಚಿಗಳಲ್ಲಿ ಕುಳಿತಿರಲು ಸ್ಥಳವಿರಲಿಲ್ಲ. ಹೀಗಾಗಿ ಸುಖವಾಗಿ ಹೊರಗೆ ಜಗಲಿಗೆ ಹೋಗಿ, ನ್ಯಾಪ್ಕಿನನ್ನು ನಮ್ಮ ತೊಡೆಯಮೇಲೆ ಹಾಸಿ ಅದರ ಮೇಲೆ ಪ್ಲೇಟ್ ಇಟ್ಟು ತಿಂದೆವು. ಒಬ್ಬ ಆಫಿಸರ್ ಅರ್ಧಜ್ಞಾನದಿಂದ ಹೊರಗೆ ಬಂದವನು "ಏನು ಮಾಂಸವೇ ಇಲ್ಲ" ಎಂದು ಅವನು ಕಚ್ಚಿ ಕಚ್ಚಿ ತಿನ್ನುತ್ತಿದ್ದ ಕುರಿಯ ಮೂಳೆಯನ್ನು ನನ್ನ ಪ್ಲೇಟಿಗೆ ಹಾಕಿದ. ಬುದ್ಧಿಸ್ವಾಸ್ಥ್ಯದಲ್ಲಿದ್ದ ನಾನು ಪ್ಲೇಟನ್ನು ಜಾರಿಸಿ ಬಿಟ್ಟೆ, ಮೂಳೆ ಕೆಳಗೆ ಬಿತ್ತು. ೧೧ ಗಂಟೆಯ ತನಕ ಊಟ ಸಾಗಿತ್ತು. ಮತ್ತೆ ಎಲ್ಲವರೂ ವಿಶ್ರಾಂತಿ ಕೋಣೆಯೊಳಗೆ ಸೇರಿದರು. ವಿವಿಧ ರೀತಿಯ ವಿನೋದಗಳು ನಡೆ

ದುವು. ವೈನ್ ಕುಪ್ಪಿಯನ್ನು (ಸೀಮೆಎಣ್ಣೆ ಸೀಸೆಯಂತೆ ಇದೆ) ತಂದು ನೆಲದ ಮೇಲೆ ಇಟ್ಟು ಅದರ ಮೇಲೆ ಒಬ್ಬ ಆಫಿಸರನನ್ನು ಕೂರಿಸಿದರು—ಉದ್ದುದ್ದವಾಗಿ ಒಂದು ಕಾಲನ್ನು ಇನ್ನೊಂದರ ಮೇಲೆ ಇಡಬೇಕು. ಮೇಲಿರುವ ಕಾಲಿನ ಶೂವಿನ ತುದಿಗೆ ಬೆಂಕಿ ಕಡ್ಡಿಯನ್ನು ಸಿಕ್ಕಿಸಿದರು. ಕೈಗೆ ಬೆಂಕಿ ಪೊಟ್ಟಣವನ್ನಿತ್ತರು. ಕೈಯನ್ನು ನೆಲಕ್ಕೆ ಮುಟ್ಟಿಸದೆ ಬೆಂಕಿಕಡ್ಡಿಯನ್ನು ಗೀರಿ ಶೂವಿನ ತುದಿಯ ಕಡ್ಡಿಯನ್ನು ಹೊತ್ತಿಸಬೇಕು. ೮–೧೦ ಜನ ಗಂಡಸರು ಪ್ರಯತ್ನಿಸಿ ಬ್ಯಾಲೆನ್ಸ್ ತಪ್ಪಿಬಿದ್ದರು. ಒಬ್ಬಳು ಸ್ತ್ರೀ ಆಗ ಮುಂದೆ ಬಂದು ಅದನ್ನು ಸುಲಭವಾಗಿ ಸಾಧಿಸಿ, ವೈನ್ ಕುಪ್ಪಿಯನ್ನು ಪಡೆದಳು. ಎಲ್ಲವರೂ ಅದನ್ನು ಹೀರಿದರು. ಮತ್ತೆ ನಮ್ಮ ಸಂಗೀತ ಕಛೇರಿ ೨೦ ಮಿನಿಟು ನಡೆಯಿತು. ಹಾಲ್ ನಡುವಿನಲ್ಲಿ ನಾವು ಕುಳಿತೆವು. ಜನರಿಗೆ ಸಂತೋಷ (ಅಥವಾ ಹೆಂಡದ ಉದ್ರೇಕ) ತಡೆಯಲಾಗದೇ ನಮ್ಮ ಸುತ್ತಲೂ ವಿವಿಧ ಭಂಗಿಗಳಲ್ಲಿ ಕುಣಿಯುತ್ತ ಉಲಿದರು. ನಕ್ಕೂ ನಕ್ಕೂ ಸಾಕಾಯಿತು. ಮತ್ತೆ ಅಂಗಳಕ್ಕೆ ಸಾಗಿದೆವು. ಅಲ್ಲಿ ಬ್ಯಾಂಡ್ ಬಜಾಯಿಸಿದರು. ಸಿಓರನ್ನು ಹೊತ್ತು ಕುಣಿದರು. ಅವರ ಹೆಂಡತಿ ಕುಳಿತಿದ್ದ ಕುರ್ಚಿಯನ್ನು ಹೊತ್ತು ನಲಿದರು. ಹೀಗೆ ಕುಣಿಯುತ್ತ ಕುಣಿಯುತ್ತ ರಾತ್ರಿ ೨ ಗಂಟೆಯಾಯಿತು. ಆಗ ಸಿಓ ತಂಗಾಳಿಯಿಂದ ಎಚ್ಚರಗೊಂಡು ಹೊರಟು ಮನೆಗೆ ನಿಷ್ಕ್ರಮಿಸಿದರು.

ನಾವೆಲ್ಲರೂ ಬರಾಕಿಗೆ ಮರಳಿ ಮಲಗುವಾಗ ೨-೩೦ ಗಂಟೆಯಾಗಿತ್ತು. ನನ್ನ ಕಾಲು ನೋವು ಜೋರಾಗಿತ್ತು. ಬೆಳಗ್ಗೆ ಮತ್ತೆ ೫ ಗಂಟೆಗೆ ಏಳಬೇಕಲ್ಲ, ಹೇಗೆ ಎಂದು ಚಿಂತಿಸುತ್ತ ನಿದ್ರೆ ಬರಲೇ ಇಲ್ಲ. ಆಗಲೇ ೫ ಆಯಿತು. ಶುಕ್ರವಾರ ಬಲು ಕಠಿಣವಾಗಿತ್ತು, ವಿಪರೀತ ಶ್ರಮದ ಕೆಲಸ ೨ ಗಂಟೆಯ ತನಕ. ಮಧ್ಯಾಹ್ನ ಮರಳುವಾಗ "ನಿಜವಾಗಿಯೂ ನಾನು ಮಾಡಿದ ಯಾವುದೋ ಪಾಪಕ್ಕಾಗಿ ಈ ರೀತಿ ನರಕ ದುಃಖ. ಸುಖವಾಗಿ ಬೇಸಗೆಯ ರಜೆಯನ್ನು ಕಳೆಯುವುದು ಬಿಟ್ಟು ಈ ಕೂಪಕ್ಕೆ ಬಿದ್ದೆನಲ್ಲ" ಎಂದಾಗಿ ಹೋಯಿತು. ಇದು ತಾತ್ಕಾಲಿಕ ಭಾವನೆ. ಈಗ ಪುನಃ ಹರ್ಷಿತನಾಗಿಯೇ ಇದ್ದೇನೆ. ನಾನು ಬರೆಯಬೇಕೆಂದಿದ್ದ ವಿಷಯದಲ್ಲಿ ಇನ್ನೂ ಅರ್ಧ ಹಾಗೆಯೇ ಉಳಿದಿದೆ. ಕಾಗದದ ಉದ್ದ ವಿಪರೀತವಾಯಿತು. ಇಲ್ಲಿಗೆ ನಿಲ್ಲಿಸುತ್ತೇನೆ. ಇನ್ನೊಂದು ವಾರ ಮುಂದುವರಿಸುತ್ತೇನೆ.

ಕೊಯಿ ಶಕ್ ಯಾ ಸವಾಲ್

ನಮ್ಮ ಟ್ರೈನಿಂಗ್ ಮುಂದುವರಿದಂತೆ ಹಳೆ ಎನ್‌ಸಿಓಗಳು ಹಲವಾರು ಮಂದಿ ವರ್ಗವಾಗಿ ಹೋದರು. ಅವರ ಸ್ಥಾನಗಳನ್ನು ಹೊಸಬರು ಬಂದು ತುಂಬಿದರು. ನೀರು ಎಷ್ಟೇ ಹರಿಯಬಹುದು ನದೀ ಪಾತ್ರ ಮಾತ್ರ ಬದಲಾಗುವುದಿಲ್ಲ. ಪ್ರತಿಯೊಬ್ಬನೂ ತಯಾರಾಗಿ ಬಂದದ್ದು ಒಂದೇ ಟಂಕಸಾಲೆಯಲ್ಲಿ. ಅದೇ ಕರ್ತವ್ಯಪ್ರಜ್ಞೆ. ಅದೇ ಶ್ರದ್ಧೆ, ಅದೇ ಚಟುವಟಿಕೆ. ಅವರ ಉಕ್ಕಿನ ಹಿಡಿತದಲ್ಲಿದ್ದಾಗ ಪ್ರಾಯಶಃ ಅದೊಂದು ಸಂತೋಷಾನುಭವವಲ್ಲ. ಆದರೆ ಪ್ರತಿಸಂಜೆಯೂ ಅವರಿಂದ ಬಿಡುಗಡೆಗೊಂಡು ಹಿಂದೆ ನಡೆದುದನ್ನು ನೆನೆಯುವಾಗ ಮೂಡುತ್ತಿದ್ದುದು ಆತ್ಮಾಭಿಮಾನ ಮತ್ತು ನಾನು ಎಂದು ಇದೇ ತರಹದ ಮಾದರಿ ಆದೇನು ಎನ್ನುವ ಸವಾಲು.

ಒಬ್ಬನೇ ಒಬ್ಬ ಎನ್‌ಸಿಓ ಸಹ ಪೆರೇಡ್ ಕಾಲದಲ್ಲಿ ನಮ್ಮೊಡನೆ ಆತ್ಮೀಯವಾಗಿ ವರ್ತಿಸಲಿಲ್ಲ. ನಮ್ಮಲ್ಲಿ ಅವರಿಗೆ ಪ್ರಿಯರಾರು ಅಪ್ರಿಯರಾರು ಎಂಬುದು ಸಾಂಕೇತಿಕ ವಾಗಿಯೂ ಅವರಿಂದ ಸೂಚಿತವಾಗುತ್ತಿರಲಿಲ್ಲ. ಅವರ ಸಮದರ್ಶಿತ್ವದ ತಲದಲ್ಲಿ ನಾವೆ ಲ್ಲರೂ ಋಣದಿಶೆಯಲ್ಲಿಯೇ ಇದ್ದವರು ; ಶೂನ್ಯವನ್ನು (ಎಂದರೆ ತಲದ ಮಟ್ಟವನ್ನು) ತಲಪುವುದೇ ಟ್ರೈನಿಂಗಿನ ಪರಮೋದ್ದೇಶ ಎಂಬಂತಿತ್ತು ಅವರ ವರ್ತನೆ. ಇನ್ನು ಧನ ದಿಶೆಗೆ ಏರುವುದು ಟ್ರೈನಿಂಗಿನ ತರುವಾಯ, ವಾಸ್ತವ ರಂಗದಲ್ಲಿ ಟ್ರೈನಿಂಗಿನ ಅನುಭವ ವನ್ನು ಅವನವನ ವಿಭವ ಶಕ್ತ್ಯನುಸಾರ ಪ್ರಯೋಗಕ್ಕೆ ಒಳಪಡಿಸಿದಾಗ.

ಒಂದು ಪೀರಿಯಡ್ ಮುಗಿದು ಮುಂದಿನ ಪೀರಿಯಡ್ ತೊಡಗುವ ನಡುವಿನ ವಿರಾಮ ಕಾಲದಲ್ಲಿ ನಮ್ಮಲ್ಲಿ ಕೆಲವರು ಎನ್‌ಸಿಓಗಳೊಡನೆ ಸ್ನೇಹ ಗಳಿಸಲೂ ಚಕ್ಕಂದವಾಡಲೂ ನಾನಾ ಹಿಕ್ಮತ್ತುಗಳನ್ನು ಮಾಡುತ್ತಿದ್ದರು. ಸಿಗರೆಟ್ ನೀಡುವುದು, ಎನ್‌ಸಿಓಗಳ ಸುಟಿತನವನ್ನು ಪ್ರಶಂಸಿಸುವುದು, ಆಕಾಶದಲ್ಲಿ ಹಾರಿದ ಹಕ್ಕಿಯ ವರ್ಣನೆ ಮಾಡಿ ತಮಗೆ ಅದರ ವಿಷಯದಲ್ಲಿ ಇರುವ ತೀವ್ರಾಸಕ್ತಿಯನ್ನು ವ್ಯಕ್ತಪಡಿಸಿ ಎನ್‌ಸಿಓಗಳಿಂದ ಪ್ರಶ್ನೆ ಗಳನ್ನು ನಿರೀಕ್ಷಿಸುವುದು, ವಿಶ್ವಸಮಸ್ಯೆಗಳನ್ನು ಕುರಿತು ಸವಾಲು ಹಾಕುವುದು, ಕೊನೆಗೆ ಆರ್ಮಿ ಜೀವನದ ಕಡು ಕಾಠಿಣ್ಯವನ್ನೂ ಕೃಪಣತೆಯನ್ನೂ ತೆಗಳಿ ಅಂಥಲ್ಲೂ ಮೇಲೆ ಬಂದಿರುವ ಎನ್‌ಸಿಓಗಳ ಹಿರಿಮೆಯನ್ನು ವರ್ಣಿಸುವುದು—ಒಂದೇ ಎರಡೇ ? ಆದರೆ ಯಾವನೊಬ್ಬನೂ ಈ ಯಾವ ತರಹದ ಖೆಡ್ಡಾ ಕ್ರಿಯೆಯಿಂದಲೂ ಮಣಿದಂತೆ ತೋರ ಲಿಲ್ಲ. ವಿರಾಮಕಾಲದಲ್ಲಿ ಅವರೆಲ್ಲರೂ ದೂರದ ಮರದ ನೆರಳಿನಲ್ಲಿ ಕಲೆತು ಮಾತು ಕೇಕೆ ಹೊಡೆಯುತ್ತಿದ್ದರು.

ಭಂಡ ನಂಬರ್ ೯ ಯಾವುದರಿಂದಲೂ ಹತಾಶನಾಗಲಿಲ್ಲ. ವಿರಾಮ ಕಾಲದಲ್ಲಿ ಅವರಿದ್ದಲ್ಲಿಗೇ ಹೋದ. ಅರ್ಧ ಲಕ್ಷ್ಯ ನಮ್ಮ ಕಡೆಗೂ ಇತ್ತು. ಸ್ಪರ್ಧಿಗಳ ಜೊತೆಯಲ್ಲಿ ಹಿರಿಮೆ ಸ್ಥಾಪಿಸುವುದು ತಾನೇ ಉದ್ದೇಶ ? ನಮಗೆ ಕೇಳುವಂತೆ ಪ್ರಶ್ನೆ ಹಾಕಿದ.

"ನೋಡಿ ಸ್ಟಾಫ್ ! ನೀವು ಗ್ರೇಡಿಯಂಟ್ ಅಂದಿರಲ್ಲ ಈಗ ತಾನೇ ನಡೆದ ಪಾಠದಲ್ಲಿ. ಅದು ವರ್ಟಿಕಲ್ ಇಂಟರ್ವಲ್ಲನ್ನು ಹಾರಿಸಾಂಟಲ್ ಈಕ್ವಿವಲೆಂಟಿನಿಂದ ಭಾಗಿಸಿ ದೊರೆ ಯುವುದೋ ಅಥವಾ ಹಾರಿಸಾಂಟಲ್ ಈಕ್ವಿವಲೆಂಟನ್ನು ವರ್ಟಿಕಲ್ ಇಂಟರ್ವಲ್ಲಿನಿಂದ ಭಾಗಿಸಿ ದೊರೆಯುವುದೋ ?"

"ವಿರಾಮ ಕಾಲದಲ್ಲಿ ವಿರಾಮ, ಪಾಠದ ಕಾಲದಲ್ಲಿ ಪಾಠ. ಎರಡನ್ನೂ ಮಿಶ್ರಮಾಡ ಬೇಡಿ. One thing at a time ಕೊಯಿ ಶಕ್ ಯಾ ಸವಾಲ್" ಏನಾದರೂ ಸಂಶಯ ಅಥವಾ ಪ್ರಶ್ನೆ ಉಂಟೇ ಎನ್ನುವ ಅರ್ಥ. ಪ್ರತಿಯೊಂದು ಹೊಸ ಪರಿಕಲ್ಪನೆಯನ್ನೂ ಹೇಳಿದ ಕೂಡಲೆ ಈ ಪಲ್ಲವಿಯನ್ನು ನುಡಿಯಲೇಬೇಕು ಎಂಬುದು ಆರ್ಮಿ ಪಾಠಗಳ ಸಂಪ್ರದಾಯ. ಉಚ್ಚಿ ಮೂಸಿದ ಎಮ್ಮೆ ಕರುವಿನ ಮುಸುಂಡಿನಂತಾಯಿತು ನಂಬರ್ ೯ರ ಸ್ಥಿತಿ.

ಎನ್‌ಸಿಓಗಳ ಗಾತ್ರ, ಹುರಿಮೀಸೆ, ಆತ್ಮವಿಶ್ವಾಸ ನಮಗೆ ಎಷ್ಟು ಭಯಕಾರಕಗಳಾಗಿ ದ್ದುವೋ ಅವರನ್ನು ಕುರಿತು ಅವು ಅಷ್ಟೇ ಗೌರವ ಪ್ರೇರಕಗಳೂ ಆಗಿದ್ದುವು. ಪೆರೇಡ್ ಗ್ರೌಂಡನ್ನುಳಿದು ಬೇರೆ ಎಲ್ಲಿಯೂ ಎಂದೂ ಅವರನ್ನು ನಾವು ಕಂಡ ನೆನಪು ನನಗಿಲ್ಲ.

ಅಡಿಗರ ಪ್ರಕಾರ ಇವರು ಅನೂಹ್ಯ ಲೋಕದ ಅನಂತ ಕಾಲದ ಯಾತ್ರಿಕರು ; ಯುಕ್ತ ವೇಳೆಯಲ್ಲಿ ಪೆರೇಡ್ ಗ್ರೌಂಡಿಗೆ ಅವತರಿಸಿ ಬಂದು ಮಣ್ಣಿನ ಗೊಂಬೆಗಳಾದ ನಮ್ಮಲ್ಲಿ ಚೇತನ ತುಂಬುವ ಅಪೂರ್ವ ತೇಜದ ಮಾಂತ್ರಿಕರು.

ಅಂದ ಮಾತ್ರಕ್ಕೆ ನಮ್ಮ ಪಾಠದ ಗಳಿಗೆಗಳೆಲ್ಲವೂ ಶ್ರೀಮದ್ಗಾಂಭೀರ್ಯಯುತವಾಗಿದ್ದುವೆಂದಾಗಲೀ ನಾವೆಲ್ಲರೂ ಮುಂಗುಸಿ ಪರಿವೇಷ್ಟಿತ ಸರ್ಪಗಳಾಗಿದ್ದೆವೆಂದಾಗಲೀ ಭಾವಿಸಬೇಕಾಗಿಲ್ಲ. ಎರಡು ಘಟನೆಗಳು ಸ್ಪಷ್ಟವಾಗಿ ನೆನಪಿನಲ್ಲಿವೆ.

ಅವನು ಬಲು ನಿಷ್ಠುರಿ ಎನ್‌ಸಿಓ. ಹೇಳಲು ತಿಳಿದ ವಿಷಯವನ್ನು ಬಿಡಿಬಿಡಿಯಾಗಿ ಬಡಿಯುವ ತನಕ ವಿವರಿಸಿ ಹೇಳುತ್ತಿದ್ದ. ನಾವೆಲ್ಲರೂ ನಿರಕ್ಷರ ಕುಕ್ಷಿಗಳಾದ ರಿಕ್ರೂಟುಗಳು (ಸಿಪಾಯಿಗಳಾಗಲು ಶಿಕ್ಷಣ ಪಡೆಯುತ್ತಿರುವ ಪ್ರಾರಂಭಿಕರು ; ಸಾಮಾನ್ಯವಾಗಿ ವಿದ್ಯೆ ಏನೂ ಇರದ ಬಡವರು) ಎಂದೇ ಅವನ ನಂಬಿಕೆ. ಹೇಳಲು ತಿಳಿಯದಿದ್ದ ವಿಷಯವಾದರೋ ಅದನ್ನು ದರ್ಪದಿಂದ ವ್ಯಂಗ್ಯದಿಂದ ಶಿಸ್ತಿನ ಹೆಸರಿನಿಂದ ಮುಚ್ಚಿ ಅಲ್ಲಿಯೂ ತಾನು ಗೆದ್ದೆನೆಂಬ ಭಾವ ತಳೆಯುತ್ತಿದ್ದ. ನಮ್ಮ ಮನೋಧರ್ಮ ಸಾಮಾನ್ಯವಾಗಿ ಉದಾಸೀನ—ಚೆನ್ನಾಗಿ ಆತ್ಮೀಯತೆಯಿಂದ ವಿವರಿಸುವವರ ಸಮ್ಮುಖದಲ್ಲಿ ಲವಲವಿಕೆ ; ಹಾಗಲ್ಲದವರ ತರಗತಿಯಲ್ಲಿ ಕಾಲದ ಎಣಿಕೆ (marking time). ಈ ನಿಷ್ಠುರಿ ಶಿಕ್ಷಕನ ತರಗತಿಯಲ್ಲಿ ದಿನದಿಂದ ದಿನಕ್ಕೆ ನಮ್ಮಲ್ಲಿ ಒಂದು ವಿಧದ ಅಸಹನೆ ಹಾಗೂ ಪ್ರತೀಕಾರೀ ಮನೋಭಾವ ಬೆಳೆದು ಬರುತ್ತಿತ್ತು. ಅವನು ಬೋಧಿಸಿದ್ದು ರೈಫಲ್ ಪಾಠವನ್ನು. ಮೂರು ದಿವಸಗಳ ಕಾಲ ಒಂದೊಂದು ದಿವಸವೂ ಎರಡೆರಡು ಪೀರಿಯಡುಗಳಂತೆ ಗೋಗರೆದು ಬೋಧಿಸಿದ. ಮೈದಾನದ ನೆರಳಿನಲ್ಲಿ ರೈಫಲ್ ಮತ್ತು ಇತರ ಹತ್ಯಾರುಗಳ ಸಮೇತ ನಡೆಯುವ ಪ್ರಾಯೋಗಿಕ ಶಿಕ್ಷಣವಿದು. ಮೊದಲು ರೈಫಲ್ ಅಂದರೇನು, ಅದರ ವಿವಿಧ ಭಾಗಗಳ ಹೆಸರುಗಳೇನು, ಅವುಗಳ ಉಪಯೋಗಗಳೇನು ಈ ವಿವರಗಳೆಲ್ಲವೂ ಮುಗಿದುವು. ಮತ್ತೆ ರೈಫಲ್ ಹೇಗೆ ಸಿಪಾಯಿಯ ಪರಮ ಹಾಗೂ ಏಕೈಕ ಮಿತ್ರ, ಈ ಮಿತ್ರನ ಸಾರ್ಥಕ ಉಪಯೋಗದಿಂದ ಹೇಗೆ ಆತ್ಮರಕ್ಷೆ ಹಾಗೂ ಶತ್ರುಶಿಕ್ಷೆ ಸಾಧಿಸಬಹುದು ಎಂಬುದನ್ನೂ ವಿವರಿಸಿದ. ಕೊನೆಯ ಹಂತದಲ್ಲಿ ಗುರಿಗೆ ತಾಗುವಂತೆ ಗುಂಡು ಹೊಡೆಯಲು ನಾವು ಪಾಲಿಸಬೇಕಾದ ನಿಯಮಗಳೇನು ಎನ್ನುವುದನ್ನು ತೋರಿಸಿಕೊಟ್ಟ. ಪ್ರತಿಯೊಂದು ಸಲವೂ "ಕೊಯಿ ಶಕ್ ಯಾ ಸವಾಲ್" ಪಲ್ಲವಿ ಹಾಡಿಯೇ ಇದ್ದ. ನಾವು ಸಂಶಯ ವ್ಯಕ್ತಪಡಿಸಿದೆವೋ ದೊರೆಯುತ್ತಿದ್ದ ಪ್ರತಿಕ್ರಿಯೆಗಳು ಎರಡು—ಹಿಂದೆ ಹೇಳಿದ್ದ ಗಾನದೋಸೆಯ ಪುನರಾವರ್ತನೆ, ಒಂದು ; ಯೂನಿವರ್ಸಿಟಿ ಗ್ರೇಜುಯೇಟುಗಳಾದ ನಮಗೆ ಇಂಥ ಕ್ಷುದ್ರ ಸಂಶಯ ಬರಬಹುದೇ ಎಂಬ ತೀಕ್ಷ್ಣ ಚಾಟಿ ಏಟು, ಎರಡು. ಉಭಯ ಸಂದರ್ಭಗಳಲ್ಲಿಯೂ ನಮ್ಮ ಸಂಶಯ ನಿವಾರಣೆ ಮಾತ್ರ ಆಗುತ್ತಿರಲಿಲ್ಲ. ಬದಲು ಆತನ ವಿಷಯದಲ್ಲಿ ತಿರಸ್ಕಾರ ತೀವ್ರಗೊಳ್ಳುತ್ತಿತ್ತು. ಹೋಗಲಿ ಇವನ ಸಹವಾಸ ದುಃಖವೇ ಬೇಡವೆಂದು ಮೂಕರಾಗಿ ಕುಳಿತೆವೋ ಅಲ್ಲಿಗೂ ನಮಗೆ ಶಾಂತಿ ಇಲ್ಲ "ನಿಮಗೆ ಸಂಶಯವಿಲ್ಲದಿದ್ದರೆ ಎಲ್ಲವೂ ತಿಳಿಯಿತೆಂದಾಯಿತು. ಹಾಗಾದರೆ ನಾನೀಗ ಪ್ರಶ್ನೆ ಕೇಳುತ್ತೇನೆ" ಎಂದು ಹೇಳಿ "ನಂಬರ್ ಒನ್ ಮಾರಕ್ ಟೂ ರೈಫಲ್ಲಿನ ಉದ್ದ ವೆಷ್ಟು?" ಎಂದೋ "ರೈಫಲ್ ನಂಬರುಗಳು ಅದರ ಯಾವ ಯಾವ ಭಾಗಗಳ ಮೇಲೆ

ಅಂಕಿತವಾಗಿವೆ ?'' ಎಂದೋ ''ಮುಂಕ್ಕಾಲಿಯು ಮೇಲೆ ಏರಿಸಿದ ರೈಫಲ್ಲಿನ ರೇಂಜ್ ಎಷ್ಟು?'' ಎಂದೋ ಪ್ರಶ್ನಾಪರಂಪರೆಯನ್ನೇ ಗುಂಡು ಹೊಡೆಯುತ್ತಿದ್ದ. ಬಾಯಿಪಾಠ ಕ್ರಮವೊಂದೇ ಇಲ್ಲಿ ಮುಕ್ತಿ ಲಭಿಸುವ ಮಾರ್ಗ. ಇಲ್ಲಿ ನಾವೆಲ್ಲ ಅದರಲ್ಲೂ ನಾನಂತೂ ಪೂರಾ ಹಿಂದೆ. ಬಾಲಕೃಷ್ಣನ್ ಹೆದರಿ ಬೆಪ್ಪಾಗಿ ಅಬದ್ಧ ಉತ್ತರ ಉದುರಿಸಿದರೆ ನನ್ನಂಥವರು ಸುಮ್ಮನೆ ಮಿಕಿ ಮಿಕಿ ಕಣ್ಣು ಮಿಟುಕಿಸುತ್ತಿದ್ದೆವು. ಸರಿ ಹಿಂದಿನ ಪ್ರಹಾರದ ಪುನರಾವರ್ತನೆ, ನಮ್ಮ ಯೂನಿವರ್ಸಿಟಿಗಳಿಗೆ ಮೋಕ್ಷ ಪ್ರಾಪ್ತಿ. ನನ್ನ ಎಂಎ ಗಣಿತ ತರಗತಿಯಲ್ಲಿ ರೈಫಲ್ಲಿನ ಉದ್ದವನ್ನು ಕುರಿತ ವಿವರ ಏಕೆ ಕಲಿಸಲಿಲ್ಲ ಎಂಬುದು ನನಗೆ ಒಗೆಹರಿಯದ ಪ್ರಶ್ನೆ ಆಯಿತು. ತಾಳುವುದು ಎಲ್ಲಿತನಕ ? ಕುರಿಮರಿಯೂ ತೋಳವನ್ನು ಮೆಟ್ಟುವ ಸಂದರ್ಭ ಒಂದಲ್ಲ ಒಂದು ಸಲ ಸನ್ನಿಹಿತವಾಗುತ್ತದೆ.

''ರೈಫಲ್ಲಿನ ಗುಂಡು ನಳಿಗೆಯ ತುದಿಯಿಂದ ಹೊರ ಹೊರಟೊಡನೆಯೇ ವಕ್ರಪಥದಲ್ಲಿ ತೆರಳುತ್ತದೆ. ಹೀಗಾಗಿ ಅದು ನೇರವಾಗಿ ಗುರಿಯನ್ನು ತಾಗುವುದಿಲ್ಲ. ರೈಫಲ್ಲನ್ನು ನೀವು ಗುರಿ ಹಿಡಿಯುವಾಗ ನಳಿಗೆಯ ತುದಿಯೂ ಗುರಿಬಿಂದುವೂ ಸರಳರೇಖೆಯ ಮೇಲಿರುತ್ತವೆ. ಆದರೆ ಅದೇ ದಿಕ್ಕಿನಲ್ಲಿ ಗುಂಡು ಸಾಗಿದರೆ ಗುರಿಗಿಂತ ಕೆಳಗೆ ಗುಂಡು ಬೀಳುತ್ತದೆ. ಈ ತೊಂದರೆಯನ್ನು ನಿವಾರಿಸಲು ರೈಫಲ್ಲಿಗೆ ಎಲಿವೇಶನ್ ಎಂದರೆ ಏರಿಕೆ ಕೊಡಬೇಕಾಗುತ್ತದೆ. ಈ ಹೊಸ ಏರ್ಪಾಡಿನಿಂದ ನೀವು ಗುರಿಹಿಡಿಯುವಾಗ ಎಲಿವೇಶನ್ ಸಲಕರಣೆಯ ನಡುಬಿಂದು, ನಳಿಗೆಯ ತುದಿಬಿಂದು ಮತ್ತು ಗುರಿಬಿಂದುಗಳನ್ನು ಒಂದೇ ಗೆರೆಯ ಮೇಲಿರುವಂತೆ ರೈಫಲ್ಲನ್ನು ಅಳವಡಿಸುವುದು ಸಾಧ್ಯವಾಗುತ್ತದೆ. ಅಂದರೆ ನಿಮ್ಮ ಗುರಿ ಹಿಡಿಯುವಿಕೆ ಸಹಜವಾಗಿಯೇ ಇರುವುದು. ಆದರೆ ಅದೇ ವೇಳೆಯಲ್ಲಿ ನಳಿಗೆ ಮಾತ್ರ ಗುರಿಬಿಂದುವಿನಿಂದ ಮೇಲಕ್ಕೆ ಸಾಕಷ್ಟು ಎತ್ತರಿಸಲ್ಪಟ್ಟಿರುತ್ತದೆ. ಈಗ ಗುಂಡು ಹಾರಿಸಿದರೆ ಗುಂಡು ಗುರಿಬಿಂದುವನ್ನು ತಗಲುವುದು ಸಾಧ್ಯ.'' ಈ ಜಟಿಲ ಪರಿಕಲ್ಪನೆಯನ್ನು ಗಾನದೋಸೆ ರೀತ್ಯ ಪುನರಾವರ್ತಿಸಿ ಪ್ರಾಯೋಗಿಕವಾಗಿ ತೋರಿಸಿ ನಮ್ಮಿಂದ ಮಾಡಿಸಿ ''ಕೊಯಿ ಶಕ್ ಯಾ ಸವಾಲ್'' ಮಂತ್ರ ಉಚ್ಚರಿಸಿದ. ಸರಿ, ಯಥಾಪ್ರಕಾರ ಅಲ್ಲಿ ಉಪಸ್ಥಿತವಾಗಿರದಿದ್ದ ವಿಶ್ವವಿದ್ಯಾಲಯಗಳು ಅಪರಾಧದ ಹೊಣೆ ಹೊರಬೇಕಾಯಿತು.

''ಏಕ್ ಶಕ್ ಹೈ ಸ್ಟಾಫ್'' ನಾನೆಂದೆ.

''ಹಂ, ಭೋಲೋ'' ಬೊಗಳೋ ಎನ್ನುವಂಥ ಅನುಗ್ರಹ.

''ಗುಂಡು ಹೊರಡುವುದು ನಳಿಗೆಯ ಬುಡದಿಂದ. ಅದು ನಳಿಗೆಯ ಒಳಗೆ ಸಾಗಿರುವುದು ಸರಳರೇಖೆಯ ಮೇಲೆ, ಹಾಗಿದ್ದ ಮೇಲೆ ನಳಿಗೆಯಿಂದ ಹೊರಹೊರಟ ತರುವಾಯ ಅದೇ ಸರಳರೇಖೆಯ ಮೇಲೆಯೇ ಅದು ಸಾಗಬೇಕಷ್ಟೆ, ವಕ್ರರೇಖೆಯ ಮೇಲೆ ಸಾಗಕೂಡದು. ನೀವಂದಿರುವುದು ಗುಂಡಿನ ಪಥ ಒಂದು ವಕ್ರರೇಖೆಯೆಂದು. ಇದು ಹೇಗೆ ಸಾಧ್ಯ?''

''ನೀವು ಯೂನಿವರ್ಸಿಟಿಯವರು. ಎಲ್ಲ ಭಾವನೆಗಳನ್ನೂ ಒಂದೇ ಸಲ ಹೇಳಿ ಮಿಶ್ರ ಮಾಡಿ ಗೊಂದಲ ಮಾಡಿಕೊಳ್ಳುತ್ತೀರಿ. ಇನ್ನೊಮ್ಮೆ ಸ್ಪಷ್ಟವಾಗಿ, ಒಂದೊಂದೇ ಭಾವನೆಯನ್ನು ಬಿಡಿಬಿಡಿಯಾಗಿ, ಹೇಳಿ. ಹೇಳುವುದನ್ನೂ ಕಲಿಯಬೇಕು, ತಿಳಿಯಿತೇ ?''

"ಗೊಂದಲ ಎಳ್ಳಷ್ಟೂ ನನಗಾಗಿಲ್ಲ, ಆದರೂ ಪುನಃ ಹೇಳುತ್ತೇನೆ, ಕೇಳಿ" ಎಂದು ಒಂದೊಂದೇ ವಾಕ್ಯವನ್ನು ಪುನಃ ಅಭಿನಯಪೂರ್ವಕವಾಗಿ ವಿವರಿಸಿದೆ. ನಮ್ಮ ಸ್ಕ್ವಾಡಿನ ಇತರರಿಗೆ ಇದೊಂದು ಮೋಜಿನ ಸನ್ನಿವೇಶ. ಮಾನವಿಕ ವಿಷಯಗಳ ವಿದ್ಯಾರ್ಥಿಗಳಾಗಿದ್ದ ಅವರಿಗೆ ಎನ್‌ಸಿಓ ವಿವರಿಸಿದ ಮೂಲ ಪರಿಕಲ್ಪನೆಯಾಗಲೀ ನಾನು ಎತ್ತಿದ ಕೊಂಕು ಸಂಶಯವಾಗಲೀ ಎರಡೂ ಸಮಾನ ಅರ್ಥಹೀನ ವಿಷಯಗಳೇ. ಆದರೂ ನಾನೇನೋ ಒಂದು ಮಹಾಸಾಧನೆಯ ಮಾರ್ಗದಲ್ಲಿದ್ದೇನೆ, ಎನ್‌ಸಿಓನಿಗೆ ಚಾಪಾಳ ಮಾತ್ರೆ ತಿನ್ನಿಸುವುದರಲ್ಲಿದ್ದೇನೆ ಎಂಬ ಅರಿವೇ ಅವರಿಗೆ ಸಂತೋಷದಾಯಕವಾಗಿತ್ತು. ಇದರಿಂದ ಸ್ಕ್ವಾಡಿನಲ್ಲಿ ಮೂಡಿದ ಶಿಸ್ತುಭಂಗವನ್ನು ಗಮನಿಸಿದ ಎನ್‌ಸಿಓನಿಗೆ ಕೋಪ ಅಧಿಕವಾಯಿತು. ಸರಿ, ಯಥಾಪ್ರಕಾರ ಪ್ರಕ್ಷಾಳನೆ ಮುಂದುವರಿಯುತ್ತಿದ್ದಂತೆ ಸುಬೇದಾರ್ ಅಬ್ದುಲ್ ಖಾದರರು ಬಿಗಿಲು ಊದಿದರು—ಪೀರಿಯಡ್ ಮುಗಿಯಿತು. ಎನ್‌ಸಿಓ ಗೆದ್ದ ಭಾವದಿಂದ ಹೋದ.

ಮರುದಿವಸದ ಅದೇ ಪೀರಿಯಡ್. ಹಿಂದಿನ ದಿವಸ ನನ್ನ ಹಠಾತ್ ಮತ್ತು ಅಪೂರ್ವ ಪ್ರಶ್ನೆಯಿಂದ (ಆರ್ಮಿ ಪರಿಭಾಷೆಯಲ್ಲಿ—attack—ಆಕ್ರಮಣ) ಸ್ವಲ್ಪಮಟ್ಟಿಗೆದುರ್ಭರನಾಗಿದ್ದ ಎನ್‌ಸಿಓ ಈ ದಿವಸ ಸಾಕಷ್ಟು ಪೂರ್ವಸಿದ್ಧತೆ ಮಾಡಿಕೊಂಡು (defence—ಪ್ರತಿರಕ್ಷಣೆ) ಬಂದಿದ್ದನೆಂದು ಅವನ ಧೋರಣೆ ರೀತಿಗಳಿಂದ ವ್ಯಕ್ತಪಡುತ್ತಿತ್ತು.

"ನಂಬರ್ ಸೆವೆನ್! ನಿಮ್ಮ ಪ್ರಶ್ನೆ ಮುಂದುವರಿಯಲಿ."

ಹಿಂದಿನಂತೆಯೇ ನಾನು ವಿವರಿಸಹೊರಟಾಗ ಅವನು ಅಲ್ಲಿಗೇ ನನ್ನನ್ನು ತಡೆದು "ನೀವು ಯೂನಿವರ್ಸಿಟಿಯವರು, ಬಲು ಸಣ್ಣ ವಿಷಯವನ್ನು ಅತಿ ವಿಸ್ತಾರವಾಗಿ ಹೇಳುವ ಅಭ್ಯಾಸ ನಿಮಗೆ. ಬರೇ ಮಾತು, ಮಾತು, ಮಾತು. ಸಂಕ್ಷೇಪವಾಗಿ ಹೇಳುವುದನ್ನು ಎಂದು ಕಲಿಯುತ್ತೀರೋ ನನಗೆ ತಿಳಿಯದು" ಎಂದು ಇನ್ನೊಂದು ಅಂತರ್ನಾಳ ಸೂಜಿಚುಚ್ಚಿದ. ಅವನೇ ಮುಂದುವರಿಸಿದ "ನಿಮ್ಮ ಸಂಶಯಕ್ಕೆ ಉತ್ತರ ಇಲ್ಲಿದೆ ನೋಡಿ. ಈ ಪ್ಯಾಂಫ್ಲೆಟ್ ಗುಂಡಿನ ದಾರಿ ವಕ್ರರೇಖೆ ಎಂದೇ ಬರೆದಿದೆ. ಚಿತ್ರವನ್ನು ಕೊಟ್ಟಿದೆ ನೋಡಿ. ಆದ್ದರಿಂದ ಅದು ಹಾಗೆಯೇ ಆಗಬೇಕು."

ಮಿಲಿಟರಿ ಪಾಠಗಳನ್ನು ಮಿಲಿಟರಿ ಕ್ರಮದಲ್ಲಿ ಬರೆದಿರುವ, ಭಾರತದ ರಕ್ಷಣಾ ಇಲಾಖೆ ಅಧಿಕೃತವಾಗಿ ಮುದ್ರಿಸಿರುವ ಮತ್ತು ನಿಯಮಿತ ವಲಯಗಳಲ್ಲಿ ಮಾತ್ರ ಪ್ರಚಲಿತವಿರುವ ಪುಸ್ತಕಗಳೇ ಆರ್ಮಿ ಪ್ಯಾಂಫ್ಲೆಟುಗಳು. ಇವು ಮಿಲಿಟರಿ ಶಿಕ್ಷಕರ ವೇದಗಳು. ಅವರ ಪ್ರತಿಯೊಂದು ಹೇಳಿಕೆಗೂ ಆಧಾರ ಇವು. ಅವನು ತೋರಿಸಿದ ಪ್ಯಾಂಫ್ಲೆಟನ್ನು ನಾನು ನೋಡಿದೆ "ಪ್ಯಾಂಫ್ಲೆಟ್ ಹೇಳಿದ್ದರಿಂದ ಗುಂಡಿನ ದಾರಿ ವಕ್ರರೇಖೆ ಆಗಬೇಕಾಗಿಲ್ಲ. ಪ್ಯಾಂಫ್ಲೆಟ್ಟೇ ತಪ್ಪಾಗಿರಬಹುದು!"

"ಏನು! ಅಖಿಲ ಭಾರತ ರಕ್ಷಣಾ ಖಾತೆ ಅಧಿಕೃತವಾಗಿ ಮುದ್ರಿಸಿರುವ ಈ ಪ್ಯಾಂಫ್ಲೆಟ್ ತಪ್ಪೆನ್ನುವಷ್ಟು ಧಾರ್ಷ್ಟ್ಯವೇ ನಿಮಗೆ?"

"ಸ್ಟಾಫ್! ಇಲ್ಲಿಯ ಪ್ರಶ್ನೆ ಇದರ ಮುದ್ರಕರು ಯಾರು, ಬರೆದವರು ಯಾರು ಎಂಬುದಲ್ಲ. ಈ ಪ್ಯಾಂಫ್ಲೆಟಿನಲ್ಲಿ ಹೇಳಿರುವ ಸಂಗತಿ ಸರಿಯೋ ತಪ್ಪೋ ಎನ್ನುವುದು. ಸರಿಯಾಗಿದ್ದರೆ ಅದು ಯಾಕೆ ಸರಿ ಎಂದು ನೀವು ವಿವರಿಸಿ."

ಇಂಥ ಸವಾಲು ಅವನಿಗೆ ಹೊಸತು. ಅದು ಅಶಿಸ್ತಿನ ಪರಮಾವಧಿ, ಔದ್ಧತ್ಯದ ಪರಾಕಾಷ್ಠೆ. "ನೀವೇನಾದರೂ ರಿಕ್ರೂಟ್ ಆಗಿದ್ದರೆ ನಿಮ್ಮನ್ನು ಹತ್ತು ವಾರ ರೆಲಿಗೇಟ್ ಮಾಡಿಬಿಡುತ್ತಿದ್ದೆವು." ರೆಲಿಗೇಟ್ ಎಂದರೆ ಅರ್ಥ ಇಪ್ಪ—೫೨ ವಾರಗಳ ಟ್ರೈನಿಂಗ್ ಒಬ್ಬ ರಿಕ್ರೂಟಿಗೆ ಆಗಬೇಕೆಂದು ಊಹಿಸೋಣ; ಪ್ರತಿವಾರಾಂತ್ಯದಲ್ಲೂ ಆತ ಪ್ರಗತಿಯನ್ನು ತೋರಿಸಲೇಬೇಕು; ಹಾಗಲ್ಲದಿದ್ದರೆ ಅವನು ಹಿಂದಿನ ವಾರದ ಪಾಠವನ್ನೇ ಪುನರಾವರ್ತಿಸುತ್ತ ಅದೇ ವಾರದಲ್ಲಿ ನಿಂತಿರಬೇಕು. (ನಮ್ಮ ಸೆಪ್ಟೆಂಬರ್ ಪರೀಕ್ಷೆ ಇದ್ದ ಹಾಗೆ); ೧೫ನೆಯ ವಾರದ ಟ್ರೈನಿಂಗಿನಲ್ಲಿರುವವನಿಗೆ ಯಾವುದೇ ಕಾರಣದಿಂದ ಶಿಕ್ಷೆ ವಿಧಿಸಬೇಕಾದರೆ ಐದೋ ಹತ್ತೋ ವಾರ ರೆಲಿಗೇಟ್ ಮಾಡಿದರೆ ಮುಗಿಯಿತು; ಸರಿ ಆಗ ಅವನು ಪುನಃ ಹತ್ತನೆಯ ಅಥವಾ ಐದನೆಯ ವಾರದ ಶಿಕ್ಷಣದಿಂದ ಪುನಃ ತೊಡಗಿ ಮುಂದೆ ಸಾಗಬೇಕು. ಚಿತ್ರಮಯ ಚೌಕುಳಿ ಆಟದಲ್ಲಿ ಸರ್ಪದ ಬಾಯಿ ಇರುವ ಮನೆಗೆ ಬಿದ್ದವನ ಪಾಡಿನಂತೆ ಇದೆ ಈ ರೆಲಿಗೇಟ್ ಪದ್ಧತಿ.

"ಅಂದರೆ, ನಿಮಗೆ ವಿವರಿಸಲಿಕ್ಕೆ ಆಗದ ವಿಷಯವನ್ನು ಶಿಸ್ತಿನ ಹೆಸರಿನಲ್ಲಿ ಮುಚ್ಚಿಡುತ್ತೀರಿ ಎಂದರ್ಥವೇ ?"

"ನಂಬರ್ ಸೆವೆನ್! ನಿಮ್ಮನ್ನು ಸಿಓ ಮುಂದೆ ಮಾರ್ಚ್ ಮಾಡಿಸಬೇಕು." ವರಿಷ್ಠಾಧಿಕಾರಿಯ ಮುಂದೆ ತಪ್ಪಿತಸ್ಥನನ್ನು ಮಿಲಿಟೆರಿ ಕ್ರಮದಲ್ಲಿ ನಡೆಸಿಕೊಂಡು ಹೋಗಿ ನಿಲ್ಲಿಸುವ ವಿಧಿ. ಇಂಥ ಎಲ್ಲ ಮಾರ್ಚ್‌ಗಳಲ್ಲಿಯೂ ತೀರ್ಪು ಪೂರ್ವಯೋಜಿತ—ಅಧಿಕಾರಿ ಎಂದೂ ತಪ್ಪಿತಸ್ಥನಾಗುವುದಿಲ್ಲ. ಕಡೆಗೆ ಕರುಣಾಳು ರಾಘವನಲಿ ತಪ್ಪಿಲ್ಲವಷ್ಟೆ.

"ಈಗಲೇ ಹೋಗೋಣ. ನಮಗೆ ಪಾಠದಲ್ಲಿ ಬರತಕ್ಕಂಥ ಪ್ರಾಮಾಣಿಕ ಸಂಶಯವನ್ನು ನಿವಾರಿಸಿಕೊಳ್ಳಲು ಇಲ್ಲಿ ಅವಕಾಶವಿದೆಯೋ ಇಲ್ಲವೇ ಎಂಬುದು ಸಿಓ ಸಮ್ಮುಖದಲ್ಲಿಯೇ ತೀರ್ಮಾನವಾಗಲಿ" ಎಂದು ನಾನೆದ್ದೆ, ನಡೆಯಲು ಸಿದ್ಧನಾಗಿ ನಿಂತೆ.

"ಮಾರ್ಚ್" ಅಂದ ಮಾತ್ರಕ್ಕೇ ಉರುಚಿಕೊಳ್ಳಬೇಕಾಗಿದ್ದ ಸಹಜ ಪರಿಸ್ಥಿತಿಗಿಂತ ತೀರ ಭಿನ್ನವಾದ ನನ್ನ ಈ ವರ್ತನೆಯಿಂದ ಅವನು ಅಪ್ರತಿಭನಾದ. ನನ್ನನ್ನೇ ದುರುಗುಟ್ಟಿ ನೋಡಿದ. ಮೀನು ಮಾನವನನ್ನು ಎಳೆಯುತ್ತಿದೆ.

"ಕೂತಂಕೊಳ್ಳಿ" ಧ್ವನಿ ಮೆದುವಾಗಿತ್ತು.

"ಇಲ್ಲ, ಇಲ್ಲ, ಸಿಓ ಮುಂದೆ ಹೋಗೋಣ."

"ದಯವಿಟ್ಟು ಕೂತಂಕೊಳ್ಳಿ."

ಇನ್ನು ಇವನ ಜೊತೆ ಸೆಣಸಾಟ ಬೇಡ. ಮುಂದೆ ಪ್ರವಾಹ ಹೇಗೆ ತಿರುಗುವುದೋ ತಿಳಿಯದಲ್ಲ. ನಾನು ಕುಳಿತೆ. ಅಲ್ಲಿಗೆ ಈ ಪಾಠ ಮುಗಿಯಿತು.

ಸಾಯಂಕಾಲ ಸುಬೆದಾರ್ ಖಾದರರು ಅನೌಪಚಾರಿಕವಾಗಿ ಆತ್ಮೀಯವಾಗಿ ಈ ಘಟನೆಯ ವಿಚಾರ ಎತ್ತಿದರು. ಎನ್‌ಸಿಸಿ ವರ್ತನೆಯನ್ನು ನಾವೆಲ್ಲರೂ ಏಕಕಂಠದಿಂದ ಟೀಕಿಸಿದೆವು. ನಾನು ಸೇರಿಸಿದೆ "ಗುಂಡು ವಕ್ರಪಥದಲ್ಲಿ ಏಕೆ ಹೋಗುತ್ತದೆ ಎಂಬುದನ್ನು ತಿಳಿಯದಷ್ಟು ಪೆದ್ದ ನಾನಲ್ಲ. ಅದರ ಗಣಿತವೂ ನನಗೆ ತಿಳಿದಿದೆ. ಆದರೆ ಈತನ ದುರಹಂಕಾರಕ್ಕೆ ಶಾಸ್ತಿ ಆಗಬೇಕೆಂದು ಆ ಸಂಶಯ ವ್ಯಕ್ತಪಡಿಸಿದೆನಷ್ಟೆ."

ಮರುದಿವಸದಿಂದ ಆ ಎನ್‌ಸಿಓನನ್ನು ನಾವು ನಮ್ಮ ಶಿಕ್ಷಣವಲಯದಲ್ಲಿ ಕಾಣಲಿಲ್ಲ. ಉಳಿದವರ ವರ್ತನೆಯೂ ಪಾಠಗಳು ಬಹಳವಾಗಿ ಸುಧಾರಿಸಿದುವು.

ಎರಡನೆಯ ಘಟನೆಯ ಹೆಸರು A map is a map.

ಎ ಮ್ಯಾಪ್ ಈಸ್ ಎ ಮ್ಯಾಪ್ !

"ಜೀವನದಲ್ಲಿ ಪರಮ ಮೂರ್ಖತೆ ಯಾವುದು ?" ಯಕ್ಷ ಪ್ರಶ್ನೆ.

ಮಿಲಿಟರಿ ಶಿಕ್ಷಣ ಪಡೆದ ಪ್ರತಿಯೊಬ್ಬ ಧರ್ಮರಾಯನೂ ಕೊಡುವ ತತ್‌ಕ್ಷಣ ಉತ್ತರ "ಅಪರಾಹ್ನ ರೂಮಿನೊಳಗೆ ನಡೆಸುವ ಮಿಲಿಟರಿ ಲೆಕ್ಚರ್ ಕ್ಲಾಸ್."

ಬೆಳಗ್ಗಿನಿಂದ ೧-೩೦ ಗಂಟೆ ತನಕ ನಿರಂತರ ದೈಹಿಕ ಪರಿಶ್ರಮದ ಶಿಕ್ಷಣ. ವೆಲ್ಲಿಂಗ್ಟನ್ ಆದರೂ ಬಿಸಿಲ ಬೇಗೆ ಒಳಗಿನ ಬೇಗೆಗೆ ಪೂರಕವಾಗಿ ಮಂಗಳೂರಿನ ಮೇ ತಿಂಗಳ ಅನುಭವವಾಗುತ್ತಿತ್ತು. ಅಂದಿನ ಊಟ ಸಸ್ಯಾಹಾರಿಗಳಿಗೆ ಸಹ ಪರಮಪ್ರಿಯವಾಗುವಷ್ಟು ಸಮೃದ್ಧಿಯದಾಗಿತ್ತು. ಕಂಠಪೂರ್ತಿ ಗ್ರಾಸ ಪೇರಿಸಿದ ನಾವು ಮೆಸ್ ಮಹಾಮಂದಿರದಿಂದ ನಿರ್ಗಮಿಸುವಾಗ ಗಂಟೆ ೨-೧೫. ಗಂಟೆ ೨-೩೦ಕ್ಕೆ ಮ್ಯಾಪ್ ರೀಡಿಂಗ್ ಕ್ಲಾಸ್. ಅಂದೇ ಈ ಹೊಸ ಜ್ಞಾನವಿಭಾಗದ ಉದ್ಘಾಟನೆ. ಪಾಠ ಪ್ರಾರಂಭವಾಗುವುದಕ್ಕಿಂತ ೧೦ ಮಿನಿಟು ಮೊದಲೇ ನಾವು ಕೋಣೆಯಲ್ಲಿ ಉಪಸ್ಥಿತರಾಗಿರಬೇಕಾದದ್ದು ಇಲ್ಲಿ ನಿರ್ವಹಿಸಬೇಕಾದ ಒಂದು ವಿಧಿ. ಹಾಗಾದರೆ ಉಳಿದಿರುವ ಕಾಲಾವಕಾಶವೆಷ್ಟು, ಸಾಗಬೇಕಾದ ದೂರವೆಷ್ಟು, ಹೊರಬೇಕಾದ ಭಾರ (ನಮ್ಮ ಹೊಟ್ಟೆ ಸಮೇತ) ಎಷ್ಟು ಎಂದು ವ್ಯರ್ಥ ಗಣನೆ ಮಾಡುವ ಬದಲು ಸುಲಭೋಪಾಯವಾದ (ಲೆಕ್ಕ ಕಷ್ಟವಾದ್ದರಿಂದ? ಅನನುಕೂಲವಾದ್ದರಿಂದ ?) ಕಾಲಿಗೆ ಬುದ್ಧಿ ಹೇಳುವ ಮಾರ್ಗ ಅವಲಂಬಿಸಿದೆವು.

ಆ ಪವಿತ್ರ ಸರಸ್ವತೀಮಂದಿರ ಅಥವಾ ಮಿಲಿಟರಿ ಕಾಳೀಮಂದಿರಕ್ಕೆ ಅದೇ ನಮ್ಮ ಪ್ರಥಮ ಪಾದಯಾತ್ರೆ. ಹೆಸರು Lecture hall. ಹೆಸರಲ್ಲೇನಿದೆ ? Lecture hole/hell ಎಂದಿದ್ದರೂ ಅರ್ಚಕರಿಗೆ ಏನೂ ವ್ಯತ್ಯಾಸ ತೋರುತ್ತಿರಲಿಲ್ಲ. ಈ ಅರ್ಥವನ್ನು ಅವರು ಒಪ್ಪುತ್ತಿದ್ದರೆಂದಲ್ಲ, ಭಾಷೆಯ ಈ ನವುರು ಈ ಪರೀಕು ಅವರ ರಾಜ್ಯಕ್ಕೆ ಹೊರತು. ಇದ್ದವರು ೫೪ ಮಂದಿ. ಕೂರಬಹುದಾಗಿದ್ದವರು ೩೦ ಮಂದಿ. ಈ ಗಣಿತ ತಾಪತ್ರಯವನ್ನು ಮೊದಲೇ ಗ್ರಹಿಸಿದ್ದ (Advance planning is a must in the army ಎಂದು ಆಗಾಗ, ನಾಗರಿಕ ಪ್ರಪಂಚದಲ್ಲಿ ಇದು ಇಲ್ಲವೇ ಇಲ್ಲ ಎನ್ನುವ ಧ್ವನಿಸ್ಫುರಿಸುವಂತೆ, ಅವಧರಿಸಿ ಹೇಳುತ್ತಿದ್ದರು. Advance planning is the only thing in the army, no action at all ಎಂದು ನಾವು ಅದಕ್ಕೆ ಟೀಕೆ—ಸ್ವಗತವಾಗಿ—ಹೇಳುತ್ತಿದ್ದೆವು.) ಎನ್‌ಸಿಓಗಳು ಕೋಣೆಯೊಳಗೆ ಮೂರು ಅಂತಸ್ತಿನ ಕೂರುವ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ಮೊದಲಿನ ಅಂತಸ್ತು ನೆಲ ; ಎರಡನೆಯದು ಮೂರು ಸಾಲು ಕುರ್ಚಿಗಳು ; ಮೂರನೆಯದು ಮೇಜುಗಳನ್ನು ಜೋಡಿಸಿ ಮಾಡಿದ್ದ ಎತ್ತರದ ವೇದಿಕೆ. ಮೊದಲು ತಲಪಿದವರನ್ನು ಮೇಜಗಳ ವೇದಿಕೆಗೂ ಮತ್ತೆ ಬಂದವರನ್ನು ಮುಂದಿನ ಕುರ್ಚಿಗಳಿಗೂ ಕೊನೆಗೆ ಅವತರಿಸಿದವರನ್ನು ನೆಲದ ಮೇಲಿನ ತಂಪು ಆಸನಗಳಿಗೂ ಕಳಿಸಿದರು.

ಮೇಜಾಸನನಾದ ನನಗೆ ದೊರೆತದ್ದು ಒಂದು ಮೂಲೆ—ಆದ್ದರಿಂದ ಎಡ ಭುಜಕ್ಕೂ ಬೆನ್ನಿಗೂ ಒಂದೊಂದು ಗೋಡೆ ಆಸರೆಯಾಗಿ ಇದ್ದುವು.

ನಮ್ಮ ಎದುರು ಉನ್ನತವಾದ ಖಾಲಿ ವೇದಿಕೆ. ಅದು ಶಿಕ್ಷಕರ ಪವಿತ್ರ ಸ್ಥಾನ. ಅದರ ಹಿಂದಿನ ಗೋಡೆಯ ಮೇಲೆ ಅಂದಿನ ಪಾಠಕ್ಕೆ ಸಂಬಂಧಿಸಿದ ವಿವಿಧ ಚಾರ್ಟುಗಳನ್ನು ಓರಣವಾಗಿ ತೂಗಿದ್ದಾರೆ. ವೇದಿಕೆಯ ಎಡಗಡೆ ಒಂದು ಜೊತೆ ಕರಿಹಲಗೆಗಳು ಮುಕ್ಕಾಲಿಗಳ ಮೇಲೆ ಸಂಟಿಯಾಗಿ ಎದೆಯೊಡ್ಡಿ ನಿಂತಿವೆ. ಎಡೆಗಡೆಯದರ ಮುಗ್ಗುಲಿಗೆ ೪ ಅಡಿ ಉದ್ದದ ತುದಿ ಚೂಪಾದ ಲಕ್ಷಣವಾದ ಒಂದು ಕೋಲನ್ನು ಇಟ್ಟಿದ್ದಾರೆ. (ನಮ್ಮನ್ನು ಶಿಕ್ಷಿಸಲು ಆಗಿರಬಹುದೇ ? ಬೆತ್ತವಿದೆ ಜಾಗ್ರತೆ !) ಎಡಗಡೆಯ ಕರಿಹಲಗೆಯ ಮೇಲಿನ ಅಂಚಿನ ಒತ್ತಿಗೆ Map Reading—Conventional Signs ಎಂದು ದೊಡ್ಡ ಅಕ್ಷರಗಳಲ್ಲಿ ಬರೆದಿದ್ದಾರೆ. ನೀಟವಾಗಿ ಕತ್ತರಿಸಿದ ಬಿಳಿ ಕಾಗದದ ಪಟ್ಟಿಗಳು ಉಳಿದ ಕರಿ ಜಾಗವನ್ನು ಆವರಿಸಿವೆ. ಜ್ಞಾನಕ್ಕೂ ನಮಗೂ ನಡುವಿನ ತೆರೆಮರೆಯಿದು. ಸಿಸೇಮ ತೆರೆದಾಗ ಕಾಣಸಿಗಬಹುದಾದ ಅಪೂರ್ವ ವಜ್ರವೈಡೂರ್ಯ ರಾಶಿ ಎಂಥದೋ ! ಕುತೂಹಲಾವಿಷ್ಟರಾಗಿ ಕಾದೆವು. ೨–೨೫ಕ್ಕೆ ಹವಿಲ್ದಾರ್ ಮೇಜರ್ ಶಂಕರನ್ ಪಿಳ್ಳೈ ಠೀವಿಯಿಂದ ನಡೆದುಬಂದ. ನೆಲಾಸನಿಗಳು ಎದ್ದು ನಿಲ್ಲಲು ತೊಡಗಿದರು ; ಕುರ್ಚಿಪೃಷ್ಠರು ಎದ್ದೇ ನಿಂತರು ; ಮೇಜಾಸನಿಗಳು ಗಪ್‌ಚಿಪ್ ಆದರು ಎದ್ದು ನಿಲ್ಲುವುದು ಸಾಧ್ಯವಾಗದ್ದರಿಂದ.

"ಮಿಲಿಟರಿ ಕ್ಲಾಸಿಗೆ ಆಫಿಸರ್ ಬರುವಾಗ ಗೌರವ ಸೂಚಿಸುವ ವಿಧಾನ ಬೇರೆಯೇ. ನಿಮ್ಮ ಸಿವಿಲಿಯನ್ ಕ್ರಮ ಇಲ್ಲಿ ಲಗಾವಾಗದು. ಅದರ ವಿಧಿ ಈಗ ವಿವರಿಸುತ್ತೇನೆ. 'ಕ್ಲಾಸ್ ! ಸಿಟ್ ಟು ಅಟೇನ್‌ಷನ್' ಎಂದು ಆಜ್ಞಾಪಿಸಿದಾಗ ನೀವು ಕುಳಿತಿರುವಲ್ಲಿಯೇ ಕುಳಿತಿರುವಂತೆಯೇ ಅಟೇನ್‌ಷನ್ ಸ್ಥಿತಿಗೆ ಬರತಕ್ಕದ್ದು. ಬೆರಳುಗಳು ಮುಚ್ಚಿಕೊಂಡು, ಚಾಚಿರುವ ಕೈಗಳು ತೊಡೆಗಳ ಮೇಲೆ ; ಎದೆ ಮತ್ತು ಅದರ ಮೇಲಿನ ಭಾಗಗಳು ಈ ಹಿಂದೆ ಡ್ರಿಲ್ ಕ್ಲಾಸಿನಲ್ಲಿ ಕಲಿತಂಥ ಅಟೇನ್‌ಷನ್ ಭಂಗಿಯಲ್ಲಿ ಇರಬೇಕು. ಮುಂದಿನ ಆಜ್ಞೆ 'ಕ್ಲಾಸ್ ! ಸಿಟ್ ಎಟ್ ಈಸ್.' ಈಗ ದೇಹವನ್ನು ಸಡಿಲಗೊಳಿಸಿ ಕೂರಬೇಕು. ಆದರೆ ಚಲನೆ ನಿಷಿದ್ಧ. 'ಕ್ಲಾಸ್ ! ಸಿಟ್ ಈಸಿ' ಅಂದಾಗ ನೀವು ಆರಾಮವಾಗಿ ಕುಳಿತುಕೊಳ್ಳಿ, ಕ್ಲಾಸನ್ನು ಕೇಳಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಿ. ಕೊಯಿ ಶಕ್ ಯಾ ಸವಾಲ್ ?"

ಮುಂದೆ ಒಂದೆರಡು ಅಭ್ಯಾಸಗಳು, ತಿದ್ದುಪಡಿಗಳು ನಡೆದುವು. ಅಷ್ಟರಲ್ಲಿ ಪಿಳ್ಳೈ ಬಲಕ್ಕೆ ತಿರುಗಿ ಬಾಗಿಲಿನಿಂದ ಹೊರಗೆ ನೋಡಿದ, ವಾಚ್ ನೋಡಿದ. ಶೂನ್ಯಗಳಿಗೆ ಸನ್ನಿಹಿತವಾಗುತ್ತಿತ್ತು ; ಕೊಠಡಿ ಇಡೀ ನಿಶ್ಚಲತೆ ನಿಶ್ಶಬ್ದತೆ ಆವರಿಸಿದುವು ; ಮುಂದೆ ಪ್ರತ್ಯಕ್ಷವಾಗಲಿರುವ ಮಹಾಘಟನೆಯನ್ನು ಸ್ವಾಗತಿಸಲು ಕ್ಲಾಸ್ ಸಿದ್ಧವಾಯಿತು. ಪಿಳ್ಳೆಯ ಕಣ್ಣಾಲಿಗಳ ಚಲನೆಯನ್ನು ಅನುಸರಿಸಿದ ನಮಗೆ ಅದು ಇಳಿದು ಬಂದದ್ದು (ಹರನ ಜಡೆಯಿಂದ ?), ಆ ಕುಂಭಪೂರ್ಣವಾದದ್ದು ತಿಳಿಯಿತು.

"ಕ್ಲಾಸ್ ! ಸಿಟ್ ಟು ಅಟೇನ್‌ಷನ್ !" ಪಿಳ್ಳೆಯ ಗುಡುಗು ಧ್ವನಿ.

ಆ ಉದ್ವೇಗಮಯ ಸನ್ನಿವೇಶದಲ್ಲಿ ಒಂದಷ್ಟು ಜನರಿಗೆ ಹಿಂದೆ ತಿಳಿಸಿದ್ದ ವಿಧಿಗಳೆಲ್ಲವೂ ಮರೆತೇಹೋದವು. ಅಲ್ಲಲ್ಲೇ ಛಂಗನೆ ನೆಗೆದು ನಿಂತರು. ನೆಲಾಸೀನರು ಏರುಪೇರಾಗಿ

ಒಬ್ಬನಿನ್ನೊಬ್ಬನ ಕೈಕಾಲು ತುಳಿದು ಸೊಟ್ಟ ಸೊಟ್ಟಾಗಿ ಆದರೂ ಗಂಭೀರವಾಗಿ ನಿಂತರು. ಎದ್ದು ನಿಂತ ಕುರ್ಚಿಪೃಷ್ಠರಿಗೆ ನೆಲೆಪೆಡೆಯಿಂದ ಬಂದು ಬಡಿದಪ್ಪಳಿಸಿದ ತೆರೆಯನ್ನು ತಡೆದುಕೊಳ್ಳಲಾಗದೆ ಕಂಪಿಸಿದು ಕುಕ್ಕರಿಸಿದರು. ಮೇಜಾಸೀನರು ನಿಂತ ಭರದಲ್ಲಿ ತಗ್ಗು ಟಿನ್ ಮಾಡು ಅವರ ತಲೆಗೆ ಹಟ್ಟಿ ಬಾಂಬ್ ಆಸ್ಫೋಟನೆಯ ಶಬ್ದ ನಗಾರಿಸಿತು. ಪಿಳ್ಳೆ ನಡುಗಿದ. ಹಿಂದೆ ಬಂದ ಖಾದರ್ ಗುಡುಗಿದರು "Can't you understand this simple drill, gentlemen ?"

ಬಂದಾತ ನಗುಮೊಗದ ಸುಂದರಾಂಗ, ತರುಣ, ಸೆಕೆಂಡ್ ಲೆಫ್ಟಿನೆಂಟ್ ದರ್ಜೆಯ ಆಫಿಸರ್. ಅವನಿಗೆ ಪರಿಸ್ಥಿತಿಯ ಅರ್ಥ ಚೆನ್ನಾಗಿ ಆಗಿರಬೇಕು. "ಗಾಬರಿ ಬೇಡ. ದಯವಿಟ್ಟು ಆರಾಮವಾಗಿ ಕುಳಿತುಕೊಳ್ಳಿ."

ನಾವು ಕುಳಿತ ಮೇಲೆ "ಈಗ ಹಾಯಾಗಿದ್ದೀರಾ ? Can you hear me number ten ?" ನಂಬರ್ ೧೦, ಇವನು ಮೇಜುಗಳ ಮೇಲಿನ ಕೊನೆಯ ಸಾಲಿನಲ್ಲಿ ಕುಳಿತವನು. ಆ ಪುಟ್ಟ ಕೋಣೆಯಲ್ಲಿ ಈ ಪ್ರಶ್ನೆ ಅಗತ್ಯವೇ ಎಂದು ನನಗೆ ಸಂದೇಹ. ಮುಂದೆ ತಿಳಿದೆ. ಕೊಯಿ ಶಕ್ ಯಾ ಸವಾಲಿನಂಥ ಇನ್ನೊಂದು ಪಾಲಿಸಲೇಬೇಕಾದ ಮಿಲಿಟರಿ ವಿಧಿ ಇದೆಂದು. "The aim of this lecture, gentlemen, is map reading—Conventional signs ..." ನಾವು ಭರದಿಂದ ನೋಟ್ಸ್ ಬರೆದುಕೊಳ್ಳಲು ತೊಡಗಿದೆವು. "ಬೇಡ, ಬೇಡ. ಕ್ಲಾಸ್ ನಡೆಯುವಾಗ ನೀವು ನೋಟ್ಸ್ ಬರೆಯಬಾರದು. ಒಂದೆರಡು ಮುಖ್ಯ ವಿಷಯಗಳನ್ನು ಗುರುತು ಹಾಕಿಕೊಳ್ಳಿ, ಮತ್ತೆ ನಿಧಾನವಾಗಿ ವಿಸ್ತರಿಸಿ ನಿಮ್ಮ ನೋಟ್ಸ್ ತಯಾರುಮಾಡಿ" ಅವನೆಂದ.

ನಮ್ಮ ಇಡೀ ವಿದ್ಯಾಭ್ಯಾಸದ ಅಡಿಪಾಯವೇ ನೋಟ್ಸ್. ವಿದ್ಯಾರ್ಥಿ ಜೀವನದಲ್ಲಿ ಬರೆದದ್ದೂ ಬರೆದದ್ದೇ. ಮುಂದೆ ಅದನ್ನು ಉರು ಹೊಡೆದದ್ದೂ ಹೊಡೆದದ್ದೇ. ನೋಟ್ಸ್‌ಇಲ್ಲದಿದ್ದರೆ ಜ್ಞಾನಪ್ರಪಂಚ ನಮಗೆ ಅಪ್ರವೇಶ್ಯವಾಗಿರುತ್ತಿತ್ತು. ಈಗ ಅಧ್ಯಾಪಕರಾಗಿ ಮುಂದುವರಿಸುತ್ತಿರುವ ಭವ್ಯಸಂಪ್ರದಾಯವಾದರೂ ಅದೇ—ನೋಟ್ಸನ್ನು ಹುಡುಗರಿಗೆ ಓದಿ ಹೇಳಿ ಬರೆಸುವುದು. ನೋಟ್ಸ್ ಬರೆಯಲೇಕೂಡದು ಎಂದು ಈ ಮಿಲಿಟರಿ ಆಫಿಸರ್ ವಿಧಿಸಿದರೆ ನಾವು ಮುಂದೆ ಎದುರಿಸಬೇಕಾದ ಮಿಲಿಟರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಹೇಗೆ ? ಕದ್ದು ಬರೆಯೋಣವೇ—ಹಿಂದೆ ಮುಂದೆ ಬದಿಯಲ್ಲಿ ಎಲ್ಲೆಲ್ಲೂ ಎನ್‌ಸಿಓಗಳು ವ್ಯಾಪಿಸಿದ್ದಾರೆ—Man ! You are being watched—ಅನುಭವ.

"What is the aim of this lecture, gentlemen ?" ಕ್ಲಾಸನ್ನು ನೋಡಿದ. ದಿಟ್ಟಿಸಿ ನೋಡಿದ. ಹಿಂದಿನ ಅನುಭವದಿಂದ ಪರಿಣತಮತಿಗಳಾಗಿದ್ದ ನಾವು ಯಾರೂ ಉತ್ತರ ಹೇಳುವ ಲವಲವಿಕೆ ವ್ಯಕ್ತಪಡಿಸಲಿಲ್ಲ.

"Number thirty ?"

"Controversial signs" ಎಂಬ ಅರ್ಥ ಬರುವ ಉಚ್ಚಾರಣೆಯನ್ನು ಪೆದ್ದು ಪೆದ್ದಾಗಿ ಮಾಡಿದ. ಕ್ಲಾಸು ಗೊಳ್ಳೆಂದು ನಕ್ಕಿತು. ಹೈಸ್ಕೂಲಿನ ಡ್ರಾಯಿಂಗ್ ಉಪಾಧ್ಯಾಯನವನಂತೆ.

"Number fortytwo !"

"Conventional. . . ."

"No, no ! I want you to repeat the aim fully and completely."

"The aim of this lesson is map reading—Conventional signs, sir !" ಒಬ್ಬ ಗಳಹಿದ. ಬೋರ್ಡ್ ಮೇಲೆ ಬರೆದಿತ್ತಲ್ಲ ಹೇಗೂ.

"That is right."

ಹೀಗೆ ಒಂದನೇ ಹಂತ ಮುಗಿಯಿತು. ಎರಡನೇ ಹಂತ ಉದ್ದೇಶವನ್ನು ಕುರಿತು ವಿವರಣೆ.

"What is a map ?" ಪ್ರಶ್ನೆ ಮಾಡಿದಾತ ಆಫಿಸರ್. ಕರಿಹಲಗೆಯ ಬದಿಯಲ್ಲಿ ಸಂಖ್ಯಾನಿದ್ರೆ ಮಾಡುತ್ತಿದ್ದ ಚೂಪುಕೋಲಿನ ದಪ್ಪ ಬುಡವನ್ನು ಹಿಡಿದು ಕೋಲನ್ನು ಚಳಕಿಸಿದ. ಅವನೇ ಮುಂದುವರಿಸಿದ. "A map, you know. . ." ಎಂದು ಭಾರವಾಗಿ ಧ್ವನಿಯಲ್ಲಿ ಏರುಪೇರು ಮಾಡಿ ಕತ್ತನ್ನು ಬಳುಕಿಸಿ ಹೇಳುತ್ತ "is a map !" ಎಂದು ನಾಟಕೀಯವಾಗಿ ತೇಲಿಸಿದ.

ನಮಗೆ ಗಾಬರಿ. ಮ್ಯಾಪ್ ಈಸ್ ಎ ಮ್ಯಾಪ್—ಗಹನ ಸತ್ಯ ಆದರೂ ಎಷ್ಟು ಸುಲಭ. The greatest joke is the simplest truth ಎಂದು ಯಾರ ಬಾಯಿಯಿಂದಲೋ ಷಾ ಹೇಳಿದ್ದು ಎಂದು ಉದುರಿದ್ದನ್ನು ಕೇಳಿದ್ದೆ. "ಆತ್ಮವೆಂದರೇನು ?" ಪ್ರಶ್ನೆಗೆ ಉತ್ತರ "ಆತ್ಮವೆಂದರೆ ಆತ್ಮವೇ—ಅದನ್ನು ಬೇರೆ ಹೇಗೆ ವಿವರಿಸಿದರೂ ಅದು ಆತ್ಮವಾಗದು."

ಆಫಿಸರ್ ಮುಂದುವರಿಸಿದ "A map is a sheet of paper."

ಭಲೇ ಸೆಕೆಂಡ್ ಲೆಫ್ಟಿನೆಂಟ್ ದೊರೆ. ಎಂಥ ಸರಳ ವಿವರಣೆ ನೀಡಿದೆ—ನ್ಯೂಟನ್, ಐನ್‌ಸ್ಟೈನರೂ ನಿನ್ನ ಮುಂದೆ ತಲೆತಗ್ಗಿಸಬೇಕು.

"What is a map, number ten ?"

"A map is a sheet of paper, Sir."

"Shabhash ! Now, gentlemen ! Conventional signs are important parts of the map" ಎಂದವನೇ ಕರಿಹಲಗೆಗೆ ಅಂಟಿಸಿದ್ದ ಒಂದು ಕಾಗದದ ಹಾಳೆಯನ್ನು ಸರಕ್ಕನೆ ಹರಿದ.

Map—conventional signs ಎಂಬ ಗಹನೋಕ್ತಿ ಅಲ್ಲಿ ನಿರೂಪಿತವಾಗಿತ್ತು. ಆಫಿಸರ್ ಮುಂದುವರಿಸಿದ "Conventional signs are. . ." ಕ್ಲಾಸಿನ ಮೂಲೆಯಿಂದ ಅಶರೀರವಾಣಿ "you know, are conventional signs !" ನಗುವಿನ ತೆರೆ.

"Who the hell it is ?"

"Don't talk unless talked to. . ."

ಕ್ಲಾಸ್ ಮುಂದುವರಿಯಿತು. ಸೆಕೆಯೋ ಸೆಕೆ. ಆಮರಿ ಕುಳಿತಿದ್ದೇನೆ. ಹೊಟ್ಟೆ ಭರ್ತಿಯಾಗಿದೆ. ಆಪ್ಯಾಯಮಾನ ಪಾಠ. ತೆರೆ ಸರಿಯಿತು. ಆಫಿಸರ್ ಕೃಷ್ಣನಾದ. ಕೈಯಲ್ಲಿದ್ದ ಕೋಲು "ಕರದಲಿ ಕೊಳಲು," ಅವನ ಆಲಿವ್‌ಗ್ರೀನ್ ಯೂನಿಫಾರಮ್ "ಕಾಶಿ ಪೀತಾಂಬರ" ಆದುವು. ಆಲಿಸುತ್ತ ಇದ್ದೇನೆ "ಕೃಷ್ಣನ ಕೊಳಲಿನ ಕರೆ," ನಾಮನಾಮ

ಕ್ರಿಯಾ ರಾಗದಲ್ಲಿ ಜೋಗುಳ "ಲಾಲೀ ತನಯಾ ಲಾಲೀ ಸುಂದರ ನಂದಕುಮಾರ ಜೋ ...ಕೃಪಾಕರ, ಪಾಪಹರ." ಪರಮಾಣು ಬಾಂಬು ಸ್ಫೋಟನೆಯ ಅನುಭವ.

"Number seven ! Stand up" ಎಂಬಂಥ ಅಸ್ಪಷ್ಟ ಆಜ್ಞೆ ಕೇಳಿಸಿದ ಹಾಗಾಯಿತು. ಪಕ್ಕದವನು ತಿವಿದ. ಗಡಿಬಿಡಿಯಿಂದ ಎದ್ದೆ. ಅದೇ ವೇಗದಲ್ಲಿ ಗಡಬಡಿಸಿದೆ : "I am enjoying nadanamakriya raga. Dont disturb me."

"You are a teacher ? I am ashamed of you."

ನಿದ್ರೆ ಓಡಿತು. ಬೆದರಿದೆ. ಎದೆ ಬಲವಾಗಿ ಬಡಿಯಲಾರಂಭಿಸಿತು. "Sorry sir, sorry sir, please excuse me."

"Go and wash your face and come."

ಆಫಿಸರ್ ಸ್ವಭಾವತಃ ಒಳ್ಳೆಯವನು. ಇಲ್ಲವಾದರೆ ಕನಿಷ್ಠ ಪಕ್ಷ ಎಕ್ಸ್‌ಟ್ರಾ ಪೆರೇಡ್ ಸೇವೆ ನನಗೆ ಲಭ್ಯವಾಗುತ್ತಲೇ ಇತ್ತು. ಕ್ಲಾಸಿನಲ್ಲಿ ನಿದ್ರೆಮಾಡುವುದು ನನ್ನ ಜನ್ಮಸಿದ್ಧ ಮೂಲಭೂತ ಹಕ್ಕುಗಳಲ್ಲೊಂದು. ನಾನು ಓದಿದ್ದ ಮಂಗಳೂರು, ಮದರಾಸು ನಗರಗಳಲ್ಲಿಯ ಸೆಕೆಯ ಹವೆ, ಕಡಲಿನಿಂದ ಬೀಸುತ್ತಿದ್ದ ಗಾಳಿ, ಹಾಸ್ಟೆಲ್ಲಿನ ಪುಷ್ಕಳ ಆಹಾರ ನಿದ್ರಾಪ್ರೇರಕಗಳಾಗಿದ್ದುವು. "ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗ್ರತಿ ಸಂಯಮೀ" ಗೀತೋಕ್ತಿಯ ವಿಲೋಮ ಪ್ರಮೇಯವೇನು ?— ಎಲ್ಲ ಜೀವಿಗಳೂ ಎಚ್ಚರವಾಗಿರುವಾಗ ಸಂಯಮಿಗಳು ನಿದ್ರೆ ಮಾಡುತ್ತಿರುತ್ತಾರೆ. ಆಗ ನಾ ಗೀಚಿದ್ದ ಕಗ್ಗಗಳಿವು :

ನಿದ್ದೆ ಬರುತಿದೆ ಪಾಠ ಕೇಳಲು
ಬುದ್ಧಿಯೆಲ್ಲವು ಮುಂದವಾಗಿದೆ
ಸದ್ದ ಕರ್ಣವು ಕೇಳಲೊಲ್ಲದು ಕರದ ಲೇಖನಿಯು
ಉದ್ಯಮದಿ ತೊಡಗಿರದು ಕಣ್ ತೆರೆ
ದಿದ್ದರೂ ವಸ್ತುಗಳ ನೋಡದು
ಬದ್ಧವೈರಿಗು ಬೇಡವಿಂತಹ ಕಷ್ಟ ಹಾ ದೇವ
ಲೆಕ್ಚರರು ಪಾಠವನು ಭರದಿಂ
ದುಚ್ಚರಿಸುತಿರಲಗಲಮಾಗಿಯೆ
ಬಿಚ್ಚಿ ಕಣ್ಗಳು ನೋಡುವುವು ಅವರನ್ನು ಮನ ಮಾತ್ರ
ಇಚ್ಛೆ ಬಂದೆಡೆಗೋಡಿ ಸಮಯವ
ವೆಚ್ಚಗೈವುದು ಪ್ರಶ್ನೆ ಕೇಳ್ದೊಡೆ
ಬೆಚ್ಚಿ ಬೀಳುತ ಏನನಾದರು ಹೇಳ ತೊಡಗುವುದು
ಅರ್ಥವಾಯ್ತೇ ಎಂದು ಕೇಳ್ದೊಡೆ
ಅರ್ಥವಾಯ್ತೆಂದುಸುರಿ ಅದಕೆ ಸ
ಮರ್ಥನೆಯ ಮನದಲ್ಲಿ ಕೊಡುತಲಿ ಆತ್ಮವಂಚನೆಯ
ವ್ಯರ್ಥವಾಗಿಯೆ ಮಾಡುವೀ ವಿ
ದ್ಯಾರ್ಥಿಜೀವನ ಸತ್ಯವಾಗಿ ಅ
ನರ್ಥಕಾರಿಯು ಸಾಕು ಬೂಟಾಟಿಕೆಯ ಜಗವೆಂದ

ಸುಬೆದಾರ್ ಅಬ್ದುಲ್ ಖಾದರ್

ವೆಲ್ಲಿಂಗ್ಟನ್ನಿನ ಅಸಂಖ್ಯಾತ ಅಜ್ಞಾತ ಓಜಿಧಾರಿಗಳಲ್ಲಿ ಪ್ರತ್ಯೇಕವಾಗಿ ಎದ್ದು ಕಾಣಬಲ್ಲ ದೇಹಗಾತ್ರ ಈತನಿಗಿಲ್ಲ. ಆದರೂ ಈತ ಬಲು ಎತ್ತರದವನು. ಸೈನ್ಯದ ವಿವಿಧ ದರ್ಜೆಗಳಲ್ಲಿ ಹೇಳಿಕೊಳ್ಳುವಂಥ ಮಹಾದರ್ಜೆಯೇನೂ ಈ ಜೂನಿಯರ್ ಕಮಿಷನ್ಡ್ ಆಫಿಸರನದಲ್ಲ. ಆದರೂ ಈತ ಬಲು ದೊಡ್ಡ ದರ್ಜೆಯವನು. ಯುದ್ಧರಂಗದ ಮುಂಚೂಣಿಯಲ್ಲಿ ವೀರಾವೇಶದಿಂದ ಕಾದು ಪರಮವೀರ ಚಕ್ರವನ್ನು ಪಡೆದವನು ಇವನಲ್ಲ. ಆದರೂ ಅಸಂಖ್ಯಾತ ಅಳ್ಳೆದೆಯವರನ್ನೂ ಅಂಜುಬುರುಕರನ್ನೂ ಪರಮವೀರರನ್ನಾಗಿ ಗುಣಾಂತರಿಸಿದ ಪರುಷಶಿಲೆಯಿವನು. ಎತ್ತರ ೫.೫ ಅಡಿಗಳನ್ನು ಮೀರದು. ಅದಕ್ಕೆ ಒಪ್ಪುವ ಮಾಟವಾದ ನಿಲವು. ನಡೆನುಡಿ ಸೌಮ್ಯ ಅನುಕಂಪಶೀಲ. ಪರಿಪಕ್ವತೆಯಿಂದ ಒದಗುವ ದಕ್ಷತೆ, ಕ್ರಿಯಾಶೀಲತೆಯಿಂದ ಲಭಿಸುವ ಸಂತೃಪ್ತಿ, ನಿರಂತರ ಅಭ್ಯಾಸದಿಂದ ಪಡೆಯುವ ಆತ್ಮವಿಶ್ವಾಸ—ಇವುಗಳ ಮೂರ್ತರೂಪ ಅಬ್ದುಲ್ ಖಾದರ್. ಮದರಾಸ್ ರೆಜಿಮೆಂಟಿನ (ಎಂಆರ್‌ಸಿ) ಹಿರಿಮೆಯ ಪ್ರತೀಕವೇನು ? ಬೇರೆ ಯಾರನ್ನು ಬಿಟ್ಟರೂ ಒಬ್ಬನನ್ನು ಬಿಡಲಾರದ, ಬಿಡಲಾಗದ ಆ ವ್ಯಕ್ತಿ ಯಾರು ? ದೆಹಲಿಯಿಂದ ಚಿತ್ತೈಸುವ ಸೈನ್ಯದ ವರಿಷ್ಠಾಧಿಕಾರಿಗಳು ಸಂಪ್ರದಾಯವನ್ನು ಮರೆತು ಅಥವಾ ಮುರಿದು ಮೊದಲು ಕೈ ಕುಲುಕಿ ಮಾತಾಡಿಸುವ ಒಬ್ಬ ವ್ಯಕ್ತಿ ಯಾರು ?

ಉತ್ತರ—ಸುಬೆದಾರ್ ಅಬ್ದುಲ್ ಖಾದರ್. ಇವರೇ ನಮ್ಮ ಟ್ರೈನಿಂಗ್ ಸುಬೆದಾರ್. ಒಂದೊಂದು ಕ್ಷೇತ್ರದಲ್ಲಿ ಭವ್ಯತೆಯ ಹಾಗೂ ಹಿರಿಮೆಯ ಪ್ರತೀಕಗಳಾಗಿ ವ್ಯಕ್ತಿಯನ್ನೋ ಸಂಸ್ಥೆಯನ್ನೋ ಹೆಸರಿಸುವುದುಂಟು. ಆಲ್ ಇಂಡಿಯಾ ರೇಡಿಯೋದ ಮೆಲ್ವಿಲ್ ಡಿಮೆಲ್ಲೋ, ಮದರಾಸಿನ 'ಹಿಂದೂ' ದೈನಿಕ. ಮೃದಂಗ ಮಾಂತ್ರಿಕ ಪಾಲ್ಘಾಟ್‌ಮಣಿ ಅಯ್ಯರ್ ಇಂಥ ಹಿಮಾಲಯ ಶಿಖರಗಳು. ಅಬ್ದುಲ್ ಖಾದರ್ ಇದೇ ಸಾಲಿನ ಇನ್ನೊಂದು ಶಿಖರ.

ಅವರು ಪೆರೇಡ್ ಗ್ರೌಂಡಿನಲ್ಲಿ ಇದ್ದಾಗ ಕಟ್ಟುತ್ತಿದ್ದ ಕಳೆಯೇ ಬೇರೆ. ಅವರೇ ಸ್ವತಃ ಕವಾಯತಿಯನ್ನಾಗಲೀ ಶಸ್ತ್ರಶಿಕ್ಷಣವನ್ನಾಗಲೀ ಕ್ಷೇತ್ರ ಕೌಶಲ ಮುಂತಾದ ಸೈನ್ಯದ ವಿವಿಧ ಪಾಠಗಳನ್ನಾಗಲೀ ವಿವರಿಸುತ್ತಿದ್ದಾಗ ನನಗೆ ಒದಗಿದ ರಸಾನುಭವ ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರ ಕನ್ನಡ ಪಾಠಗಳಲ್ಲಿ ಮಧುರೆಮಣಿ ಅಯ್ಯರರ ನಾದತನ್ಮಯತೆಯಲ್ಲಿ ದ್ವಾರಂ ವೆಂಕಟಸ್ವಾಮಿ ನಾಯ್ಡುರವರ ಪಿಟೀಲು ಕಛೇರಿಗಳಲ್ಲಿ ಲಭಿಸಿದ ರಸಾನುಭವಕ್ಕಿಂತ ಕಡಿಮೆಯದಲ್ಲ. ಇದರ ರಹಸ್ಯವೇನು ? ಅವರೇ ಹೇಳಲಿ.

"ಮಿತ್ರರೇ, ನೀವು ವಿದ್ಯೆ ಹಾಗೂ ಸಂಸ್ಕೃತಿ ರಂಗಗಳಲ್ಲಿ ಉನ್ನತ ಸ್ತರವನ್ನು ಏರಿರುವವರು. ಮುಂದೆ ವಿದ್ಯಾರ್ಥಿಗಳನ್ನು ತರಬೇತು ಮಾಡಿ ಅವರನ್ನು ನಾಡಿನ ಯೋಗ್ಯ ಪ್ರಜೆಗಳು, ದಕ್ಷ ಸೈನ್ಯಾಧಿಕಾರಿಗಳು ಮೊದಲಾಗಿ ಪರಿವರ್ತಿಸುವ ಪವಿತ್ರ ಹೊಣೆ ಹೊತ್ತು ಆ ದಾರಿಯಲ್ಲಿ ತಕ್ಕಷ್ಟು ಅನುಭವ ಗಳಿಸಲು ಇಲ್ಲಿಗೆ ಬಂದಿದ್ದೀರಿ. ನಿಮ್ಮಂಥವರೊಡನೆ ಒಡನಾಟ—ನಾವು ನಿಮಗೆ ಏನು ಕಲಿಸುತ್ತೇವೋ ಬಿಡುತ್ತೇವೋ ಅದು ಒತ್ತಟ್ಟಿಗಿರಲಿ—ನಮಗಂತೂ ಒಂದು ಸಂತೋಷಕರ ಅನುಭವ. ನಾವು ಹೇಳಿಕೊಡುವ

ಪಾಠ ಯಾವುದೇ ಇರಲಿ. ಅದರಲ್ಲಿ ಬಲು ಎತ್ತರವನ್ನು ಮೊದಲು ನಾವು ಏರಬೇಕು. ಆಗ ಮಾತ್ರ ತಗ್ಗಿನಲ್ಲಿರುವವರನ್ನು ಮೇಲಕ್ಕೆ ಎತ್ತಿಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ನಾವು ಕೆಳಗೆ ನಿಂತು ಅವರನ್ನು ಮೇಲೆ ತಳ್ಳುವವರಾಗಬಾರದು. ಬದಲು, ಮೇಲೆ ನಿಂತು ಪ್ರೀತಿಯಿಂದ ಆಕರ್ಷಿಸುವವರಾಗಬೇಕು. ಒಬ್ಬ ಸೈನಿಕನಿಗೆ ಸೈನ್ಯದ ಒಂದು ವಿಷಯವನ್ನು ಎಷ್ಟು ಹೇಳಿಕೊಡಬೇಕು ಎನ್ನುವುದು ಎರಡು ಮುಖ್ಯ ಅಂಶಗಳನ್ನು ಅವಲಂಬಿಸಿದೆ. ಒಂದು, ಅದು ಅವನ ಬುದ್ಧಿಯ ಮಟ್ಟಕ್ಕಿಂತ ಎತ್ತರದಲ್ಲಿರಬಾರದು. ಎರಡು, ಅಂತಿಮವಾಗಿ ಕದನರಂಗದಲ್ಲಿ ಅದು ಅವನಿಗೆ ಉಪಯುಕ್ತವಾಗಬೇಕು. ಉದಾಹರಣೆಗೆ ರೈಫಲ್ಲಿನ ಚರಿತ್ರೆ, ವಿವಿಧ ರಾಷ್ಟ್ರಗಳಲ್ಲಿಯ ರೈಫಲ್ಲುಗಳ ಅಥವಾ ತತ್ಸಮಾನ ಶಸ್ತ್ರಗಳ ತುಲನಾತ್ಮಕ ಅಭ್ಯಾಸ ಇವೇ ಮುಂತಾದವು ಸೈನಿಕನಿಗೆ ಅನಾವಶ್ಯಕ ; ಮಾತ್ರವಲ್ಲ, ಆ ವಿವರಗಳು ಅವನಿಗೆ ಅರ್ಥವೂ ಆಗವು. ಯುದ್ಧದಲ್ಲಿ ಶತ್ರು ಮಡಿಯಬೇಕು. ತಾನು ಉಳಿಯಬೇಕು ಈ ಮುಖ್ಯ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟು ರೈಫಲ್ಲಿನ ಶಿಕ್ಷಣವನ್ನು ಅವನಿಗೆ ನೀಡಿದರೆ ಸಾಕು. ಇಲ್ಲಿ ಅದರ ಕ್ರಿಯಾತಂತ್ರದೆಡೆಗೆ ಅವಧಾರಣೆ ಹೆಚ್ಚು. ನಿಮಗಾದರೋ ಸಮಗ್ರ ಚಿತ್ರವೇ ಹೆಚ್ಚು ಉಪಯೋಗಕಾರಿ, ಕಾಲಾನುಕಾಲಕ್ಕೆ ಯುದ್ಧಕ್ರಮಗಳಲ್ಲಿ ಆದ ವ್ಯತ್ಯಾಸಗಳು, ಶಸ್ತ್ರಗಳಲ್ಲಿ ಆದ ಮಾರ್ಪಾಡುಗಳು, ಶಸ್ತ್ರಗಳ ಉದ್ದೇಶಗಳು ಮುಂತಾದ ಯಾವ ವಿವರಗಳೂ ನಿಮಗೆ ಹೆಚ್ಚಲ್ಲ, ಆದ್ದರಿಂದ ಹೇಳಿಕೊಡುವವರಾದ ನಮಗೆ ಈ ದಿವಸಗಳಲ್ಲಿ ಹೆಚ್ಚಿನ ಅಭ್ಯಾಸ ಅಗತ್ಯ. ಒಂದು ರೀತಿಯಲ್ಲಿ ನಾವೇ ನಿಮ್ಮಿಂದ ಈ ಪ್ರೇರಣೆಯ ಫಲವಾಗಿ ಕಲಿಯುತ್ತಿದ್ದೇವೆ. ಇಂಥ ಹೊಸ ಕಲಿಕೆ ನಮಗೆ ತುಂಬ ಇಷ್ಟಕರವಾದದ್ದು. ಇಲ್ಲಿಯ ಶಿಕ್ಷಣವನ್ನು ಕುರಿತು ನಿಮಗೆ ಯಾವ ಸಂದೇಹವೂ ಉಳಿದಿರಬಾರದು. ಇಲ್ಲಿ ಉಳಿದದ್ದು ಎಳ್ಳಷ್ಟಾದರೆ ನಾಳೆ ವಿದ್ಯಾರ್ಥಿಪ್ರಪಂಚಕ್ಕೆ ನೀವು ಬೋಧಿಸುವಾಗ ಅದು ಪರ್ವತಗಾತ್ರ ತಳೆದೀತು. ಇಂಥ ಸನ್ನಿವೇಶ ದೇಶಕ್ಕೆ ಅಹಿತಕರ. ಆದ್ದರಿಂದ ಪ್ರಶ್ನೆ ಕೇಳಿ. ಗೊತ್ತಿದ್ದರೆ ಹೇಳೋಣ. ಗೊತ್ತಿಲ್ಲದಿದ್ದರೆ ಓದಿ ಅಥವಾ ಇತರರಿಂದ ಕೇಳಿ ತಿಳಿದು ನಿಮಗೆ ತಿಳಿಸೋಣ. ಇಲ್ಲಿ ನಾವು ಸಹಯಾತ್ರಿಕರು ಎಂಬುದು ನಿಮ್ಮ ನೆನಪಿರಲಿ.''

ವೆಲ್ಲಿಂಗ್ಟನ್ನಿನ ಪತ್ರಹರಿತ್ತುಗಳ ತಂಪುನೆರಳಿನಲ್ಲಿ ಕುಳಿತು ಈ ಮಾತುಗಳನ್ನು ಆಲಿಸುತ್ತಿದ್ದಾಗ ನನ್ನ ನೆನಪಿಗೆ ಬಂದುದು ಪ್ರಾಚೀನ ಋಷಿಕುಲದ ಪ್ರಾರ್ಥನಾಮಂತ್ರ ''ಸಹನಾವವತು ಸಹನೌ ಭುನಕ್ತು ಸಹವೀರ್ಯಂಕರವಾವಹೈ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ಓಂ ಶಾಂತಿಃ ಶಾಂತಿಃ ಶಾಂತಿಃ.''

ಕವಾಯತಿಯ ಶಿಕ್ಷಕರಲ್ಲಿ ಅಖಿಲಭಾರತೀಯ ಸೈನ್ಯಪಡೆಗಳಲ್ಲಿಯೇ ಖಾದರರ ಸಮಾನರಾದವರಿಲ್ಲ ಎಂಬುದು ಸೈನ್ಯದ ವರಿಷ್ಠಾಧಿಕಾರಿಗಳ ಮುಕ್ತಮನಸ್ಸಿನ ವಾಸ್ತವ ನುಡಿ. ಪೆರೇಡ್ ಗ್ರೌಂಡಿಗೆ ಖಾದರರು ನಡೆದು ಬರುವ ಠೀವಿ, ನಿಲ್ಲುವ ಗತ್ತು. ಕವಾಯತಿನ ಒಂದೊಂದು ಬಿಡಿ ವಿವರವನ್ನು ಅಭಿನಯಪೂರ್ವಕವಾಗಿಯೂ ಶಾಸ್ತ್ರೋಕ್ತವಾಗಿಯೂ ತಿಳಿಯಹೇಳುವ ಕ್ರಮ, ಸಾಮೂಹಿಕವಾಗಿ ನಮ್ಮಿಂದ ಕವಾಯತಿ ಮಾಡಿಸುವ ಚಾಕಚಕ್ಯ, ಆ ಆಜ್ಞೆಗಳಲ್ಲಿಯ ಖಚಿತತೆ ಮತ್ತು ಕಂಚುಕಂಠತೆ ಒಂದೊಂದೂ ಖಾದರರನ್ನು ನಮ್ಮ ಆದರ್ಶ ಹಾಗೂ ಆರಾಧ್ಯವ್ಯಕ್ತಿಯನ್ನಾಗಿ ಮಾಡಿತು. ಶಿಕ್ಷಣರಂಗ ಯಾವುದೇ ಇರಲಿ, ಶಿಕ್ಷಣ ಪಡೆಯಲು ಬರುವವರು ನಿವೇದಿತಮನಸ್ಕರಾಗಿಯೇ ಬರುತ್ತಾರೆ. ಅದೂ

ದೈಹಿಕ ಶಿಕ್ಷಣರಂಗದಲ್ಲಂತೂ ಈ ನಿವೇದನಭಾವ ಭಕ್ತಿಗೌರವಗಳಾಗಿ ಪರಿಣಮಿಸಿರುತ್ತದೆ. ಅಂಥಲ್ಲಿ ಶಿಕ್ಷಕನಾದವ ದಕ್ಷನೂ ಉಪಕಾರಿಯೂ ಆದರೆ ಅವನಿಗೆ ದೊರೆಯುವ ಸಹಕಾರ ಪ್ರೇಮವಿಶ್ವಾಸಗಳಿಗೆ ಎಣೆಯೇ ಇರುವುದಿಲ್ಲ. ಮಟಮಟ ಮಧ್ಯಾಹ್ನ ಹಸಿದ ಹೊಟ್ಟೆಯಲ್ಲಿ ನಾವು ದಣಿದಿರುವಾಗಲಾದರೂ ಖಾದರರು ಡ್ರಿಲ್ ತೆಗೆದುಕೊಂಡರೆ ಪೆರೇಡ್ ಗ್ರೌಂಡಿನ ಲವಲವಿಕೆಯೇ ಬೇರೆ. ನಮಗೆ ದಣಿವು ಇನಿತೂ ಆಗದಂತೆ ಖುದ್ದು ನಮಗೇ ನಮ್ಮ ಚೈತನ್ಯ ಕುರಿತು ಅಚ್ಚರಿ ಮೂಡುವಂತೆ ಅವರು ಡ್ರಿಲ್ ಮಾಡಿಸುತ್ತಿದ್ದರು. ಅಲ್ಲಿ ನಮಗೆ ಆಯಾಸವೇ ಆಗುತ್ತಿರಲಿಲ್ಲ. ಕೆಲಸದ ಈ ಹಿಕ್ಮತ್ ತಿಳಿಯದ ನಮ್ಮ ಮನೋಧರ್ಮದ ಆಳ ಅರಿಯದ ಇತರರು ಯಾರೇ ಡ್ರಿಲ್ ಮಾಡಿಸಿದಾಗಲೂ ಕೇವಲ ಮಿನಿಟುಗಳ ಕಾಲದಲ್ಲಿಯೇ ಮನಸ್ಸು ಚಿಟ್ಟು ಹಿಡಿದು ದೇಹ ಸಡಿಲ ಬೀಳುತ್ತಿತ್ತು. ಕೆಲಸ ಮಾಡುವವನ ಲವಲವಿಕೆಗೆ ಮಾಡಿಸುವವನ ಚಾಕಚಕ್ಯವೂ ಸೇರಿದರೆ ಏರುವ ಎತ್ತರ ಬೇರೆಯೇ. ಖಾದರರು ಕಲಿಸಿದ ಮಿಲಿಟರಿ ಪಾಠ ಮುಂದಿನ ದಿನಗಳಲ್ಲಿ ನನಗೆ ಅತ್ಯುಪಯುಕ್ತವಾಯಿತು. ಅದಕ್ಕಿಂತ ಹೆಚ್ಚಾಗಿ ಅವರಿಂದ ಕಲಿತ ಜೀವನ ಧರ್ಮ, ಸಮಸ್ಯೆಗಳನ್ನು ಪರಿಶೀಲಿಸಿ ಪರಿಹರಿಸುವ ರೀತಿ ಬಲು ಉನ್ನತ ಮಟ್ಟದ್ದು. ಆ ವ್ಯಕ್ತಿಯು ಚೇತನ ಯಾವ ರಂಗದಲ್ಲಿಯೇ ಕೆಲಸ ಮಾಡಿದ್ದರೂ ಅಲ್ಲಿ ಶಿಖರವೇರುವಂಥಾದ್ದು.

ಸರ್ವಧರ್ಮ ಸಮ್ಮೇಳನ

ನಾವಲ್ಲಿದ್ದ ದಿವಸಗಳಂದು ಹಿಂದೂಗಳಿಗೆ ಪವಿತ್ರವಾದ ಮತ್ತು ವಿಶೇಷವಾದ ಒಂದು ಹಬ್ಬ ಬಂದಿತು. ''ನಾಳೆ ದಿವಸ ಇಡೀ ರೆಜಿಮೆಂಟಿಗೇ ರಜೆ. ಎಲ್ಲರೂ ದೇವಾಲಯದ ಬಳಿ ಬೆಳಗ್ಗೆ ೮ ಗಂಟೆಯಿಂದ ಮೇಲೆ ಜರಗುವ ಪೂಜೆಪುರಸ್ಕಾರಗಳಲ್ಲಿ ಭಾಗಿಗಳಾಗಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಬೇಕಾಗಿ ವಿನಂತಿ'' ಎಂಬರ್ಥದ ಕರಪತ್ರಗಳು ಅಧಿಕೃತವಾಗಿ ಜಾರಿಗೊಂಡವು.

ಸುಬೇದಾರ್ ಖಾದರ್ ಪ್ರಶ್ನಿಸಿದರು ''ಏನು ಮಾಡುತ್ತೀರಿ ? ನಿಮ್ಮ ಕೊಡುಗೆ ಏನು ?'' ಭಜನೆಯೋ ಹಾಡೋ ವಾದ್ಯವೋ ಒಂದರಲ್ಲಿ ನಾವು ಪಾಲುಗೊಂಡು ತನ್ಮೂಲಕ ನಮ್ಮ ''ಉನ್ನತ ಕಲಾಮಟ್ಟ''ವನ್ನು ಪ್ರಕಟಪಡಿಸಬೇಕೆಂಬುದು ಅವರ ಇರಾದೆ.

ನಮ್ಮ ಪೈಕಿ ಒಬ್ಬನೆಂದ ''ಸಾಬ್, ನನಗೆ ಇದರಲ್ಲೆಲ್ಲ ನಂಬಿಕೆ ಇಲ್ಲ. ಊಟಿಗೆ ಹೋಗಿ ಸಿನೆಮಾ ನೋಡಬೇಕೆಂದಿದ್ದೇನೆ, ಟ್ರೈನಿಂಗ್ ಕಾಲದಲ್ಲಿ ಒಂದು ದಿವಸ ರಜೆ ದೊರೆಯುವುದೆಂದರೇನು ಸಾಮಾನ್ಯವೇ ?'' ಹೇಳಿದವನು ಅಚ್ಚ ಹಿಂದೂ ಸನಾತನಿ.

ಖಾದರರು ಚಕಿತರಾದಂತೆ ತೋರಿತು ''ಆರ್ಮಿಯ ಒಂದು ಸತ್ಸಂಪ್ರದಾಯ ಬಹುಶಃ ನಿಮಗೆ ತಿಳಿಯದು. ಇಲ್ಲಿ ಜಾತಿಮತಭೇದವಿಲ್ಲ. ಎಲ್ಲ ಜಾತಿಗಳವರ ಎಲ್ಲ ಹಬ್ಬಗಳನ್ನೂ ಎಲ್ಲರೂ ಸೇರಿ ವಿಜೃಂಭಣೆಯಿಂದ ಆಚರಿಸುವುದು ವಾಡಿಕೆ. ಒಂದೊಂದು ಜಾತಿಗೂ ಒಂದೊಂದು ಪ್ರಾರ್ಥನಾಮಂದಿರ, ಅಲ್ಲಿ ಆಯಾ ಜಾತಿಯ ಧರ್ಮದರ್ಶಿ ಇರುತ್ತಾರೆ. ಹಬ್ಬ ಯಾವ ಜಾತಿಯದೋ ಆ ಜಾತಿಯ ಮಂದಿರದಲ್ಲಿ ಈ ಸಾಮೂಹಿಕ ಆಚರಣೆ ನಡೆಯುತ್ತದೆ. ನಾಳೆ ನೀವೆಲ್ಲ ಹಿಂದೂ ದೇವಾಲಯಕ್ಕೆ ಬಂದು ಭಜನೆಯಲ್ಲಿ ಭಾಗವಹಿಸ

ಬೇಕು, ಕಮಾಂಡಿಂಗ್ ಆಫಿಸರ್ ಎಲ್ಲರೂ ಬಂದಿರುವಾಗ ನಮ್ಮ ಎನ್‌ಸಿಸಿ ದಳ ಅಲ್ಲಿ ಎದ್ದು ಕಾಣಬೇಕು. ಯೋಚನೆ ಮಾಡಿ."

"ನಮ್ಮ ಗೈರುಹಾಜರಿಯಿಂದ ನಾವು ಸುಪ್ರಸಿದ್ಧರಾಗುತ್ತೇವೆ" ಎಂದು ಗೇಲಿ ಭಾವ ದಿಂದ ನುಡಿದನೊಬ್ಬ.

"ಭಜನೆ, ಭಜನೆ. ನಮ್ಮೂರಿನಲ್ಲಿ ಸದಾ ಇದೇ ಗೋಳು. ಈ ದೇಶದಲ್ಲಿ ಬೇಕಾದದ್ದು ಕೆಲಸ ಕೆಲಸ. ಶಂಖ ಜಾಗಟೆ ತಾಳ ತಂಬೂರಿ ಅಲ್ಲ" ಎಂದನಾ ಮಹಾ ಕೆಲಸಗಳ್ಳ ನಂಬರ್ ೧೨.

ಈ ಮನೋಭಾವ ಖಾದರರಿಗೆ ಒಡಿಸಲಿಲ್ಲ "ನಿಮ್ಮ ಜೊತೆಯಲ್ಲಿ ವಾದ ಮಾಡು ವುದು ಬಹುಶಃ ನನಗೆ ಸಾಧ್ಯವಾಗದು. ಆದರೆ ಒಂದು ವಿಚಾರ. ವಿದ್ಯಾವಂತರ, ಸುಸಂಸ್ಕೃತರ ಲಕ್ಷಣ ಸದಾಕಾಲವೂ ಇತರರಿಗೆ ನೋವಾಗದಂಥ ವರ್ತನೆ. ಅದೂ ಜಾತಿ, ಸಂಸ್ಕೃತಿ, ಭಾಷೆ ಮುಂತಾದ ವಿಷಯಗಳಲ್ಲಿ ನಿಮ್ಮ ವೈಯಕ್ತಿಕ ನಿಲವೇನಿದ್ದರೂ ಸಾಮೂಹಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಅದಕ್ಕನುಗುಣವಾಗಿ ನಮ್ಮ ವರ್ತನೆಯನ್ನು ತಿದ್ದಿಕೊಂಡು ಬಾಳುವುದು ಜಾಣ್ಮೆ."

"ಕ್ಷಮಿಸಿ, ಸಾಬ್! ಇಲ್ಲಿಯೂ ಪೆರೇಡ್ ಗ್ರೌಂಡಿನ ಶಿಸ್ತು ಆಜ್ಞೆ ಬರಲೇಬೇಕೇ?"

"ನೀವು ಅಲ್ಲಿ ಬಂದು ನೋಡುವ ಮುನ್ನವೇ ತೀರ್ಮಾನಕ್ಕೆ ಏಕೆ ಹಾರುತ್ತೀರಿ? ಇನ್ನು ರಜಾದಿವಸ, ಈ ತಾಪತ್ರಯವೇನು ಎಂದೇ ನೀವು ತಿಳಿದಿರಬಹುದು. ನೀವು ಇಲ್ಲಿರುವಷ್ಟು ದಿವಸಗಳೂ ಪ್ರತಿ ಸೆಕೆಂಡೂ ಸಂಪೂರ್ಣ ಡ್ಯೂಟಿಯಲ್ಲಿಯೇ ಇರಲು ಬದ್ಧರು ಎಂಬುದನ್ನು ಮರೆಯಬೇಡಿ. ಆರ್ಮಿಯಲ್ಲಿ ಇನ್ನೂ ಒಂದು ಸಂಪ್ರದಾಯವಿದೆ. ವರಿಷ್ಠಾಧಿಕಾರಿಯ ಪ್ರಾರ್ಥನೆಗೆ ಸಹ ಆಜ್ಞೆಯಷ್ಟೇ ತೂಕ ಎಂದು ನಾವು ತಿಳಿದಿದ್ದೇವೆ. ಅಡ್ಜುಟೆಂಟರ ಪ್ರಾರ್ಥನೆ ಈ ಪತ್ರ. ಅಡ್ಜುಟೆಂಟರ ಮಾತೆಂದರೆ ಸಾಕ್ಷಾತ್ ಕಮಾಂಡಿಂಗ್ ಆಫಿಸರರ ಮಾತೇ ಎಂಬುದು ನಿಮ್ಮ ನೆನಪಿನಲ್ಲಿರಲಿ." ಖಾದರರು ಮತ್ತೆ ಅಲ್ಲಿ ನಿಲ್ಲಲಿಲ್ಲ.

ನಂಬರ್ ೧೨ಕ್ಕೆ ನಾವೆಲ್ಲ ಛೀಮಾರಿ ಹಾಕಿದೆವು. "ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಇಲ್ಲಿ ಎಡೆ ಇಲ್ಲವಲ್ಲ" ಎಂದು ಅವನು ಗೊಣಗಿದ.

ಹಬ್ಬದ ದಿನ. ಗಂಡಸರು ಹೆಂಗಸರು ಮಕ್ಕಳು ಎಲ್ಲರೂ ಆ ಭಾರೀ ಪ್ರಾಂಗಣದಲ್ಲಿ ಅಧಿಕ ಸಂಖ್ಯೆಯಲ್ಲಿ ಹಾಜರು. ಅದೊಂದು ಯಾತ್ರಾಸ್ಥಳದ ರೂಪ ಪಡೆದಿತ್ತು. ಆರ್ಮಿಯ ವಾಸನೆಯೇ ಅಲ್ಲಿಲ್ಲ. ಬಹುಶಃ ಸೂಕ್ಷ್ಮವಾಗಿ ವೀಕ್ಷಿಸುತ್ತಿದ್ದವನಿಗೆ ಇದು ಕಾಣುತ್ತಿತ್ತೋ ಏನೋ. ಬರುತ್ತಿದ್ದ ಗಂಡಸರೆಲ್ಲರೂ ಬಿಳಿಪಂಚೆ, ಬಿಳಿ ಕುಡ್ತಧಾರಿಗಳು. ನಮ್ಮ ಎನ್‌ಸಿಸಿ ಬಳಗದವರು ಇದಕ್ಕೆ ಅಪವಾದವಾಗುವಂತೆ ವಿಚಿತ್ರವಾದ ಪ್ಯಾಂಟು, ಷರಟುಗಳನ್ನು ತೊಟ್ಟು ಅವತರಿಸಿದ್ದರು! ಓರಣವಾಗಿ ನಿಶ್ಶಬ್ದವಾಗಿ ಹೂ ಹಣ್ಣು ಕಾಯಿ ಹಿಡಿದು ದೇವಾಲಯದ ಮುಂದೆ ಸಾಗಿದರು. ಬಣ್ಣಬಣ್ಣದ ಸೀರೆ ಉಟ್ಟಿದ್ದ ಹೆಂಗಸರ ಸಾಲೇ ಬೇರೆ. ದೇವಾಲಯದಲ್ಲಿ ವೈದಿಕ ಬ್ರಾಹ್ಮಣ ಅರ್ಚಕ! (ಆರ್ಮಿಯಿಂದ ನೇಮಕ ಪಡೆದಂಥ ಧರ್ಮದರ್ಶಿಗಳು ಇರುವರೆಂದು ಆಮೇಲೆ ತಿಳಿದೆ.) ನೈವೇದ್ಯ ಮಾಡಿದ ಹಣ್ಣು ಕಾಯಿ ಪಡೆದು ತೀರ್ಥಪ್ರಸಾದ ಸ್ವೀಕರಿಸಿ ಅವರೆಲ್ಲರೂ ಅಲ್ಲೇ

ಒತ್ತಿಗಿದ್ದ ಬಂಯಲು ರಂಗಮಂಟಪಕ್ಕೆ ತೆರಳಿದರು. ಹಣ್ಣು ಕಾಯಿ ಕೊಂಡೊಯ್ದಿದ್ದ ನಮ್ಮ ಬಳಗ ತೀರ್ಥಪ್ರಸಾದ ಸ್ವೀಕರಿಸಿ (ನಂಬರ್ ೧೨ ಬಂದಿದ್ದ) ಅವರ ಹಿಂದೆಯೇ ಹೋದೆವು.

"ನಮಸ್ಕಾರ! ಹೇಗಿದ್ದೀರಿ?" ಎಂದು ಚಿರಪರಿಚಿತ ಧ್ವನಿ ಮುಗುಳ್ನಗೆಯಿಂದ ನಮ್ಮನ್ನು ಸ್ವಾಗತಿಸಿದಾಗ ಮೊದಲು ಗೊತ್ತಾಗಲಿಲ್ಲ ಈ ತಮಿಳು ಸೋದರ ಯಾರೆಂದು. ಪಂಚೆ, ಕುಡ್ತ, ಶಾಲು ಹಣೆಯಲ್ಲಿ ಗಂಧ ಕುಂಕುಮ—ಅವರೇ ಅಬ್ದುಲ್ ಖಾದರ್!

ರಂಗಮಂಟಪದಲ್ಲಿ ಭಜನೆ, ಗಝಲ್, ಹಾಡುಗಾರಿಕೆ ಎಲ್ಲವೂ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿದ್ದುವು. ನಾವು ನಮಗೆ ಇಷ್ಟಬಂದಲ್ಲಿಗೆ ಹೋಗಿ ಸೇರಿಕೊಂಡೆವು.

ಮನೆಯಲ್ಲಿ ಮೇಜಕ್ಕೆ, ತಮ್ಮಂದಿರ ಬೆನ್ನಿಗೆ ಕುಟ್ಟಿ ನಾನೊಂದಿಷ್ಟು ತಬಲಾವಾದನ ಕಲಿತಿದ್ದೆ—ಕಲಿಯುವುದೇನು ಬಂತು? ಸ್ವೇಚ್ಛಾವಾದಕ ನಾನು. ನನ್ನ ವಾದನದಲ್ಲಿ ಕಲೆಯ ಅಂಶಕ್ಕಿಂತಲೂ ಬಲದ ಬಜಾಯಿಸುವಿಕೆಯ ಅಂಶವೇ ಜಾಸ್ತಿ. ಭಜನೆಯಲ್ಲಿ ತಬಲಾ ಬಾರಿಸುವಾತ "ಠೂಪ್ ತ್ರೀಪ್ ವನ್, ಠೂಪ್‌ತ್ರೀಪ್ ವನ್" ಎಂಬ ಕಾಲು ನಡಿಗೆಯ ಏಕತಾನದಲ್ಲಿ ತಬಲಾ ಕುಟ್ಟುತ್ತಿದ್ದ. ಆತನನ್ನು ನೋಡಿ ನನಗೆ ಆತ್ಮವಿಶ್ವಾಸ ಅಧಿಕವಾಯಿತು. ಆವನಿಗೆ ಬಚ್ಚಿತೆಂದು ತಿಳಿದಾಗ ನಾನು ತಬಲಾಗಳನ್ನು ಬೇಡಿ ತೆಗೆದು ಕೊಂಡೆ. ಆದರೆ ಅದರಿಂದ ಅವನಿಗೆ ತೃಪ್ತಿಯಾದಂತೆ ಅನ್ನಿಸಲಿಲ್ಲ. ಅಲ್ಲಿ ಅವನು ತಬಲಾ ಏಕಚ್ಛತ್ರಾಧಿಪತಿಯಾಗಿ ಮೆರೆಯುತ್ತಿದ್ದ. ಈಗ ನಾನೊಬ್ಬ ಸ್ಪರ್ಧಾಳು ಬಂದದ್ದು—ಅದೂ ಆರ್ಮಿ ವಾಸನೆ ಇಲ್ಲದವ—ಅವನಿಗೆ ಹಿಡಿಸಲಿಲ್ಲವೋ ಏನೋ.

ಭಜನಕಾರರು ಬದಲಾಗುತ್ತಿದ್ದರು. ಹಾರ್ಮೋನಿಯಮ್ ವಾದಕ ಮಾತ್ರ ಪುನಃ ಏಕಚ್ಛತ್ರಾಧಿಪತಿ. ಭಜನಕಾರರು ಯಾವ ಯಾವ ಪರಿಯಲ್ಲಿ ಗಂಟಲಗೋಳನ್ನು ತೋಡಿ ಕೊಂಡರೂ ಭಗವಂತನನ್ನು ಹಲುಬಿ ಮೊರೆಯಿಟ್ಟು ಅರಚಿ ಕಿರುಚಿ ಮಿಲಿಟರಿ ಆಜ್ಞೆ ಅನುಸಾರ ಗರ್ಜಿಸಿ ವಿವಿಧ ಭಾಷೆಗಳಲ್ಲಿ ವಿವಿಧ ಭಾಷೆಗಳ ಮಿಶ್ರಣಗಳಲ್ಲಿ ಹಾವಭಾವ ಭಂಗಿಪೂರ್ವಕವಾಗಿ ತಮ್ಮ ಚೈತನ್ಯ ಪ್ರದರ್ಶನ ಮಾಡಿದರೂ ಹಾರ್ಮೋನಿಯಮ್‌ಕಾರ ಅವೆಲ್ಲವನ್ನೂ ತನ್ನ ಅಖಂಡವಾದ ಒಂದೇ ಶ್ರುತಿಗೆ ಎಳೆದು ತರುತ್ತಿದ್ದ. ಶ್ರುತಿ ಸಂಬದ್ಧ ವಾಯಿತೋ ಮುಂದೆ ಅವನ ಬೆಟ್ಟುಗಳ ಕುಣಿತವನ್ನು ಅನುಸರಿಸಿ ಅವರ ಸಾಹಿತ್ಯ ಮಾರ್ಪಾಡಾಗುತ್ತಿತ್ತು. ಆ ಬೆಟ್ಟುಗಳು ಹಿಂದೆ ಮುಂದೆ ಕರಿಮನೆ ಬಿಳಿಮನೆಗಳಲ್ಲಿ ಸರಿಯುತ್ತಿದ್ದ ಕ್ರಮದಲ್ಲಿಯೂ ಕಂಡೆನೊಂದು ಮಿಲಿಟರಿ ನಮೂನೆಯನ್ನು! ಇಷ್ಟಾಗು ವಾಗ "ಲಯವಿಲ್ಲದ ಸಂಗೀತವೇನಯ್ಯ, ಗತಿಯಿಲ್ಲದ ನಡಿಗೆಯ ಮೆಚ್ಚ ನಮ್ಮ ಸುಬೆದಾರ್ ಸಾಹೇಬ" ಎಂದುಕೊಂಡೆ. ತಾಳದಲ್ಲಿ ನನ್ನ ಮೊದಲು ಗುರುವಾದ ಕೊಡವರ ಮದುವೆಯ "ಢಂಗ ಡಕ ಢಂಗ ಡಕ" ಗತಿಗೆ ತಬಲವನ್ನು ಹೊಂದಿಸಿ ಬಾರಿಸಲು ತೊಡಗಿದ್ದೇ ತೊಡಗಿದ್ದು—ತಕ್ಕೊಳ್ಳಿ, ಅಲ್ಲಿ ನೆರೆದಿದ್ದ ಅಗಣಿತ ಭಕ್ತಕೋಟಿ ಕೈಗಳಿಂದಲೂ ಅಂಗಾಂಗಗಳಿಂದಲೂ ತಾಳ ಹಾಕಲು ತೊಡಗಿ ಭಲೇ ಭೇಷ್ ಎಂದು ನನಗೆ ಬೆಂಬಲ ಸಾರಿತು. ತಬಲಾದ ವ್ಯಕ್ತಿತ್ವ ಏರಿದಂತೆ ನನ್ನ ಖ್ಯಾತಿಯೂ ಏರಿತು. ಖಾದರರೂ ಪರ್ಮಾರರೂ ಇತರ ಅಧಿಕಾರಿಗಳೂ ಅಲ್ಲಿಗೆ ಬಂದು ತಮ್ಮ ಮೆಚ್ಚುಗೆ ಸೂಚಿಸಿ ಮುಂದುವರಿದಾಗ ನನಗಾದ ಹೆಮ್ಮೆ ಅಷ್ಟಿಷ್ಟಲ್ಲ.

ಹನ್ನೆರಡು ಗಂಟೆಗೆ ಈ ಸರ್ವಧರ್ಮಸಮ್ಮೇಳನ ಬರಖಾಸ್ತು ಆಗುವಾಗ ಭಕ್ತರಿಗೆಲ್ಲ, ದೊನ್ನೆಗಳಲ್ಲಿ ಹುಗ್ಗಿ ಚಿತ್ರಾನ್ನಗಳ ಸಂತರ್ಪಣೆ ನಡೆಯಿತು. ಅದೊಂದು ಫೋಟಾ ಊಟವೇ !

"ಆರ್ಮಿ ಪ್ರತಿಯೊಂದನ್ನು ದೊಡ್ಡದಾಗಿಯೂ ಕ್ರಮಬದ್ಧವಾಗಿಯೂ ಮಾಡುತ್ತದೆ" ಎಂದಿದ್ದರು ಪವಾರ್ ಒಮ್ಮೆ.

ಕೇಳು ಜನಮೇಜಯ ಧರಿತ್ರೀಪಾಲ

ಇಂತು ಪರಮಹರ್ಷಿತರಾಗಿ ಸುಖಸತ್ಕಥಾವಿನೋದದಲ್ಲಿ ಸೈನ್ಯಶಿಕ್ಷಣವನ್ನು ಪಡೆದು ದಿನೇ ದಿನೇ ಶಿಸ್ತು ಸುಟಿತನ ಸಾಮೂಹಿಕ ಪ್ರಜ್ಞೆ, ಜನಾಡಳಿತ ಸೈನ್ಯದ ಪಾಠಗಳು ಮುಂತಾದವುಗಳಿಂದ ನಾವು ದೈಹಿಕ ಹಾಗೂ ಮಾನಸಿಕ ಗಾತ್ರಗಳನ್ನು ವರ್ಧಿಸಿಕೊಂಡು ಮಳೆಗಾಲದ ಕಾವೇರಿಯ ತೆರದಲ್ಲಿ ದಂಡೆ ಮೀರಿದ ಉತ್ಸಾಹದಿಂದ ಮೆರೆಯುತ್ತಿರಲಾಗಿ ಆ ಮೂರು ತಿಂಗಳುಗಳುರುಳಿಯೇ ಹೋದುವು. ಎರಡು ತಿಂಗಳ ಕೊನೆಯಲ್ಲಿ ಜೂನಿಯರ್ ಡಿವಿಶನ್ನಿನವರು (೪೦ ಮಂದಿ) ತಮ್ಮ ಟ್ರೈನಿಂಗ್ ಮುಗಿಸಿ ಮನೆಗಳಿಗೆ ಮರಳಿದ್ದರು. ಉಳಿದವರು ನಾವು ಹದಿನಾಲ್ಕು ಮಂದಿ ಮಾತ್ರ.

ಶಿಕ್ಷಣದ ಕೊನೆಯ ವಾರವೂ ಆರಂಭವಾಯಿತು.

"ನಾಳೆ ದಿವಸ ನಿಮ್ಮ ಅಂತಿಮ ಪರೀಕ್ಷೆ ಪ್ರಾರಂಭವಾಗುವುದು. ನಾಲ್ಕು ದಿವಸಗಳ ಕಾಲ ಇದು ನಡೆಯುತ್ತದೆ. ಪ್ರತಿದಿನವೂ ಪೂರ್ವಾಹ್ನ ಪೆರೇಡ್ ಗ್ರೌಂಡಿನಲ್ಲಿ ಪ್ರಾಯೋಗಿಕವಾಗಿ ವೈಯಕ್ತಿಕ ಮತ್ತು ಸಾಮೂಹಿಕ ಪರೀಕ್ಷೆ, ಕವಾಯತಿ, ಕ್ಷೇತ್ರಕೌಶಲ, ನಕ್ಷೆಪಠನ, ಮಿಲಿಟರಿ ಯೋಜನೆ ಮುಂತಾದ ಎಲ್ಲ ವಿಷಯಗಳಲ್ಲೂ ನಿಮ್ಮನ್ನು ಪರೀಕ್ಷಿಸುತ್ತೇವೆ. ಅಪರಾಹ್ನ ಬರವಣಿಗೆಯ ಪರೀಕ್ಷೆ ಲೆಕ್ಚರ್ ಹಾಲಿನಲ್ಲಿ. ಈ ಅಂತಿಮ ಪರೀಕ್ಷೆಯಲ್ಲಿ ನಿಮ್ಮ ನಿರ್ವಹಣೆಯ ಜೊತೆಗೆ ಈ ಮೂರು ತಿಂಗಳ ಕಾಲ ವಿವಿಧ ಹಂತಗಳಲ್ಲಿ ನೀವು ಪ್ರದರ್ಶಿಸಿರುವ ಸಾಹಸ ಕುತೂಹಲ ಉತ್ಸಾಹ ಶೂಟಿಂಗ್ ರೇಂಜಿನಲ್ಲಿ ನೀವು ಗಳಿಸಿರುವ ಅಂಕಗಳು ಮುಂತಾದ ಸಕಲ ವಿವರಗಳನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ. ನಿಮಗೆ ಶುಭವಾಗಲಿ" ಎಂದು ಲೆಫ್ಟಿನೆಂಟ್ ಪವಾರರು ಹಾರೈಸಿದರು. ಅವರೇ ಮುಂದುವರಿಸಿದರು "ನೀವು ಏನೂ ಗಾಬರಿ ಆಗಬೇಕಾಗಿಲ್ಲ. ಮೂರು ತಿಂಗಳ ಕಾಲ ನಿಮ್ಮ ದೈನಂದಿನ ಕೆಲಸದ ಸಮಗ್ರ ಮೊತ್ತ ಮುಖ್ಯ. ಅಲ್ಲಿ ನೀವು ಮನಃಪೂರ್ವಕವಾಗಿಯೂ ಚೆನ್ನಾಗಿಯೂ ಪ್ರಯತ್ನ ಮಾಡಿದ್ದರೆ ಈ ಅಂತಿಮ ಪರೀಕ್ಷೆ ನಿಮಗೆ ಎಳ್ಳಷ್ಟೂ ತ್ರಾಸ ಕೊಡಲಾರದು. ಅಲ್ಲಿ ಕೆಲಸ ಮಾಡದೇ ಬಾಯಿಪಾಠಕ್ರಮದಿಂದಲೋ ಬೇರಾವುದೋ ವಿಧಾನದಿಂದಲೋ ಇಲ್ಲಿ ದಾಟುತ್ತೇನೆಂದು ತೊಡಗಿದವನಿಗೆ ಆರ್ಮಿಯಲ್ಲಿ ಜಯ ಲಭಿಸದು. ಜಯವೆಂಬುದು ದೈನಂದಿನ ಅವಿಶ್ರಾಂತ ದುಡಿಮೆಯ ಅಂತಿಮ ಫಲವೆಂಬುದು ಅಧ್ಯಾಪಕರಾದ ನಿಮಗೆ ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ !"

ಈ ಆಶ್ವಾಸನೆ ನಮ್ಮಲ್ಲಿ ಬಹುಮಂದಿಗೆ ಧೈರ್ಯ ನೀಡುವುದರ ಬದಲು ಅವರ ಧೃತಿಯನ್ನೇ ಕುಂದಿಸಿತು. ಸೈನ್ಯದ ಶಿಕ್ಷಣವನ್ನು ತಿರಸ್ಕಾರದಿಂದ ಅನಿವಾರ್ಯ ಕಾರಣಗಳಿಗಾಗಿ ಸ್ವೀಕರಿಸಿದವರಿಗೆ ಮೂಳೆಯಿಲ್ಲದ (ತಮಿಳಿನಲ್ಲಿ ಮಿದುಳೆಂದು ಅರ್ಥ)

ಇವರಿಂದ ಮೂಳೆಯೇ ಪ್ರಧಾನವಾಗಿರುವ ನಾವೇನು ಕಲಿಯುವುದು ಮಹಾ ಎಂದು ಉಪ್ಪಟೆ ಮಾಡಿದ ಈ ಮಹನೀಯರಿಗೆ ನಾಳೆಯ ಆಗಮನ ಸಂತೋಷದಾಯಕವಾಗಲಿಲ್ಲ. ಖಾದರರ ಮರೆ ಹೊಕ್ಕರಾ ಭೂಪಾಲರು. ಇತರ ಸೈನಿಕಶಿಕ್ಷಕರ ನೆರವು ಪಡೆದರು. ಅವರನ್ನು ಹೊಗಳಿ ಸಂತೋಷಗೊಳಿಸಿ ಪರೀಕ್ಷೆಯಲ್ಲಿ ಬರಬಹುದಾದ ವಿವರಗಳ ಸುಳಿವನ್ನು ತಿಳಿಯಲು ಹಂಚಿಕೆ ಹೂಡಿದರು. ಅವರಿಗೆಷ್ಟು ತಿಳಿಯಿತೋ ಏನು ತಿಳಿಯಿತೋ ಕರ್ತವ್ಯದಲ್ಲಿಯೇ ಸದಾ ಮಗ್ನರಾಗಿದ್ದಂಥ ನಮ್ಮಲ್ಲಿ ಹಲವರಿಗೆ ಗೊತ್ತಾಗಲಿಲ್ಲ. ಆದರೆ ನಮ್ಮ ಮುಂದೆ ಬಂದು ಬಗೆಬಗೆಯ ಹಿರಿ ಭಂಗಿಗಳನ್ನು ಕೋಡಂಗಿಗಳನ್ನು ಮೀರಿಸುವ ಅಂಗವಿನ್ಯಾಸಗಳಿಂದ ಪ್ರದರ್ಶಿಸಿದರು. ಕವಾಯತಿಯ ಒಂದು ಪ್ರದರ್ಶನ, ಕ್ಷೇತ್ರಕೌಶಲದ ಒಂದು ಪಾಠ, ಆಕ್ರಮಣದ (ಯುದ್ಧರಂಗದ ಒಂದು ಕ್ರಿಯೆ) ಒಂದು ಯೋಜನೆ ಇವನ್ನೆಲ್ಲ ಕುರಿತು ಗಟ್ಟಿಯಾಗಿ ಚರ್ಚೆ ನಡೆಸಿದರು. ಫಲಿತಾಂಶ—ಹೂರಣ ಹೊರಟದ್ದು.

"ಗ್ರೇಡಿಯಂಟ್ ಎಂದರೆ ರೈಫಲ್ಲಿನಲ್ಲಿ ದೂರವನ್ನು ಸರಿಪಡಿಸಲು ಬಳಸುವ ಕಿರಿಯ ಸಾಧನವಲ್ಲವೇ!" (ವಾಸ್ತವಿಕವಾಗಿ ಈ ಸಾಧನದ ಹೆಸರು ಬ್ಯಾಕ್‌ಸೈಟ್; ಗ್ರೇಡಿಯಂಟ್ ಎಂಬುದು ಮ್ಯಾಪ್ ಪಠನದಲ್ಲಿ ಎರಡು ಸ್ಥಳಗಳ ನಡುವೆ ಏರಿಕೆಯನ್ನು ಸೂಚಿಸಲು ಬಳಸುವ ಪರಿಕಲ್ಪನೆ.)

"ಕಂಪೆನಿಯಲ್ಲಿ ಮೂರು ಸೆಕ್ಷನ್ನುಗಳಿವೆ." (ವಾಸ್ತವಿಕವಾಗಿ ಒಂದು ಕಂಪನಿಯಲ್ಲಿ ಮೂರು ಪ್ಲೆಟೂನುಗಳೂ ಒಂದು ಪ್ಲೆಟೂನಿನಲ್ಲಿ ಮೂರು ಸೆಕ್ಷನ್ನುಗಳೂ ಇವೆ.)

ಈ ತೆರನಾಗಿ ಘನಘೋರವಾಗಿ ಕೈಶಿಕಿನಿಷಾಧ ಧ್ವನಿಯಲ್ಲಿ ತರ್ಕಿಸುತ್ತಿದ್ದಾಗ ವಿಷಯ ಅವರಿಗಿಂತ ಚೆನ್ನಾಗಿ ತಿಳಿದಿದ್ದಂಥ ನಮಗೆ ಬಂದದ್ದು ನಗು, ಮೂಡಿದ್ದು ಮರುಕ. ಆದರೆ ಹಾಗೇನಾದರೂ ಹೇಳುವಂತಿದೆಯೇ! ಕಾಕಾ ಹಿಡಿಯುವುದರಲ್ಲಿಯೇ ಜೀವನಸಾರ್ಥಕ್ಯ ಕಾಣುತ್ತಿದ್ದ ಇವರ ಮುಂದೆ ನಮ್ಮ ಮಾತುಗಳು ಹಿಡಿಸುತ್ತಿರಲಿಲ್ಲ. ಪರ್ಮಾರರ ಮನಸ್ಸಾಕ್ಷಿ ಖಾದರರೆ ಮಿದುಳು ಶಿಕ್ಷಕರ ಜೆಪ್ಪೆ ಎಲ್ಲವೂ ಇವರಾಗಿದ್ದರು. ಮನುಷ್ಯ ಕಂಗಾಲಾದಾಗ ಎಂಥೆಂಥ ಅವತಾರಗಳನ್ನು ತಾಳಬಲ್ಲ (ಅಂಥಿಂಥ ಅವತಾರ ಇದು ಅಲ್ಲ!) ಎಂಬುದಕ್ಕೆ ಇಂಥ ಸನ್ನಿವೇಶಗಳು ಉತ್ತಮ ನಿದರ್ಶನಗಳು. ಎಂಥಾ ಮೋಜಿನ ಕುದುರಿ!

ಪರೀಕ್ಷೆಯ ಮೂರು ದಿವಸಗಳು ಬಲು ಬಿರುಸಿನಿಂದ ಸಾಗಿ ಹೋದುವು. ಪೆರೇಡ್ ಗ್ರೌಂಡಿನ ಎಲ್ಲ ಪ್ರಯೋಗಗಳನ್ನೂ ನಾನು ಬಲು ಸಮರ್ಪಕವಾಗಿ ನಿರ್ವಹಿಸಿದ್ದೆ. ಆದರೆ ಕೆಲವು ಬಿಡಿ ವಿವರಗಳನ್ನು ಕೇಳಿದಾಗ ಉತ್ತರ ಕೊಡಲಾಗಲಿಲ್ಲ. ಉದಾಹರಣೆಗೆ "ಒಂದು ಸೆಕ್ಷನ್ನಿನಲ್ಲಿರುವ ಎಲ್ಲ ಆಯುಧಗಳ, ಹತ್ಯಾರುಗಳ ವಿವರವೇನು?" ಎಂಬ ಪ್ರಶ್ನೆಗೆ ಒಂದು ಭಯಂಕರವಾದ ಕ್ಯಾಟಲಾಗನ್ನು ನೆನಪಿನಿಂದ ಉದುರಿಸಬೇಕು. ಈ ಬಾಯಿಪಾಠದ ಕೆಲಸ ನನಗೆ ಎಂದೂ ಹಿಡಿಸುತ್ತಿರಲಿಲ್ಲ. ಈ ದುರ್ಬಲತೆಯ ಜೊತೆಗೆ ಸ್ವಭಾವಸಿದ್ಧ ಕೊರತೆಯೂ ಒಂದಿದೆ—ಅದು ಅತಿಯಾದ ಅವಸರ. ಮೂರು ಗಂಟೆಗಳಲ್ಲಿ ಆಗುವ ಕೆಲಸ ಒಂದೇ ಗಂಟೆಯಲ್ಲಿ ಆಗಬೇಕು; ಮತ್ತೆ ಬೇರೆಯೇ ಕೆಲಸ ಹಿಡಿಯಬೇಕು— ಈ ಉದ್ವೇಗಮಯ ಪ್ರವೃತ್ತಿಯ ದೆಸೆಯಿಂದ ಚೆನ್ನಾಗಿ ಗೊತ್ತಿದ್ದ ಕವಾಯತಿ, ರೈಫಲ್ ಪ್ರಯೋಗಗಳು ಕೈಗೊಟ್ಟುವು; ಗಣಿತವೇ ಪ್ರಧಾನವಾಗಿದ್ದ ಮ್ಯಾಪ್ ಪಠನದ ಉತ್ತರ

ದಲ್ಲಿ ತಪ್ಪು ಮಾಡಿದ್ದೆ! ಅಪರಾಹ್ಣದ ಬರವಣಿಗೆಯ ಪರೀಕ್ಷೆಗಳಲ್ಲಿ ಸಾವಕಾಶವಾಗಿ ಬರೆದು ಸಂತೃಪ್ತಿಯಿಂದ ಹೊರಗೆ ಬಂದಿದ್ದೆ. ಈ ಪರೀಕ್ಷೆಗಳು ನಮ್ಮ ಕಾಲೇಜುಗಳ ಪರೀಕ್ಷೆಗಳಂತಲ್ಲ—ಕ್ವಿರೆಫ್ ಮಾದರಿಯವೇ ಜಾಸ್ತಿ. ಇನ್ನು ಪ್ರಬಂಧಗಳನ್ನು ಬರೆಯಲೇಬೇಕಾದಲ್ಲಿ ಪಂಕ್ತಿಗಳನ್ನು ಮೊದಲೇ ನಿಗದಿ ಮಾಡಿ ಅಷ್ಟಕ್ಕೆ ಮಾತ್ರ ಜಾಗ ವನ್ನು ಉತ್ತರಪತ್ರಿಕೆಯಲ್ಲಿ ಒದಗಿಸುತ್ತಿದ್ದರು. ಎಲ್ಲದರಲ್ಲಿಯೂ ನಿಖರ ಹಾಗೂ ಕ್ಷಿಪ್ರ ವ್ಯವಹಾರ. "ಶತ್ರುವಿಗೆ ಗುಂಡು ಹೊಡೆ" ಎಂದಾಗ ಗುಂಡಿನ ಸದ್ದು ಕೇಳಬೇಕು, ಶತ್ರು ಉರುಳಬೇಕು ಅಷ್ಟೇ; "ಅಲ್ಲಿ ನನ್ನ ಸಂಬಂಧಿಕರನ್ನು ಕಾಣುತ್ತಿದ್ದೇನೆ. ಹಿರಿಯರಿದ್ದಾರೆ. ಯಾರಿಗೆ ಗುಂಡು ಹೊಡೆಯಲಿ ?" ಎಂಬ ವಿವೇಚನೆಗೆ ಇಂದಿನ ಸೈನ್ಯದ ವ್ಯವಹಾರದಲ್ಲಿ ಅವಕಾಶವಿಲ್ಲ. ಇದೇ ಕ್ರಮ ಪರೀಕ್ಷೆಯಲ್ಲೂ ಜಾರಿ.

ಪರೀಕ್ಷೆಯ ಕೊನೆಯ ದಿನ. ನಮ್ಮ ವರದಿ ಪುಸ್ತಕಗಳನ್ನು ಲೆಫ್ಟಿನೆಂಟ್ ಪವಾರ್‌ರರು ಹಿಂತಿರುಗಿಸಿದರು. ಆ ಮೂರು ತಿಂಗಳ ಕಾಲ ಅಲ್ಲಿ ನಾವು ಕಲಿತ ಪಾಠಪ್ರವಚನಗಳನ್ನು ಕುರಿತು ಸುದೀರ್ಘ ಪ್ರಬಂಧಗಳನ್ನು ಬರೆದಿದ್ದ ದಾಖಲೆಗಳವು. ಕಡ್ಡಾಯವಾಗಿ ಎಲ್ಲರೂ ತಯಾರಿಸಲೇಬೇಕಾಗಿದ್ದುದರಿಂದ ಯಾರಿಗೂ ಇಲ್ಲಿ ಒಳದಾರಿ ಹುಡುಕಲುಸಾಧ್ಯವಾಗಲಿಲ್ಲ. Very good ಎಂದು ವರ್ಗೀಕರಿಸಿದ್ದ ನಾಲ್ಕು ವರದಿ ಪುಸ್ತಕಗಳಲ್ಲಿ ನನ್ನದೂ ಒಂದು ಎಂದು ತಿಳಿದಾಗ ಅದಕ್ಕಿಂತ ಎತ್ತರದ ಸೂಚಿಯನ್ನು ಬೇರೆ ಯಾವ ವರದಿ ಪುಸ್ತಕಕ್ಕೂ ನೀಡಲಿಲ್ಲವೆಂದು ಗೊತ್ತಾದಾಗ ನನಗೆ ಬಲು ಸಂತೋಷವಾಯಿತು.

"ಏನಪ್ಪಾ ಹಿಲ್ಮನ್! AX ಗಿಟ್ಟಿಸೋದು ನಿಶ್ಚಯ" ಎಂದು ಕಾಕಾಪಿಡಿಯೊಬ್ಬ, ಅರೆಹುಳಿಯಿಂದ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ.

ಬರವಣಿಗೆಯ (ಎಂದರೆ ಸಿದ್ಧಾಂತದ) ಪರೀಕ್ಷೆಯಲ್ಲಿ ಮೂರು ದರ್ಜೆಗಳು—A, B, C. ಪ್ರಯೋಗ ಪರೀಕ್ಷೆಯಲ್ಲಿಯೂ ಮೂರು ದರ್ಜೆಗಳು—X, Y, Z. ಈಗ, AX ಎಂದು ದರ್ಜೆ ದೊರೆತವ ಸಿದ್ಧಾಂತದಲ್ಲೂ ಪ್ರಯೋಗದಲ್ಲೂ ಅತ್ಯುತ್ಕೃಷ್ಟ ಮಟ್ಟದವನೆಂದರ್ಥ.

"ಕಾಕಾಪಿಡಿಯುವುದರ ಮೂಲಕವೇನೂ ಆ ಅರ್ಹತೆಯನ್ನು ನಾನು ಪಡೆಯಲಿಲ್ಲ" ಎಂದು ಅವನಿಗೆ ನಾನು ಎದುರು ಕೊಂಕುನುಡಿ ಆಡಲೇಬೇಕಾಯಿತು.

ನಿರ್ಗಮಿಸುವ ಮುನ್ನ

ಕೊನೆಯ ರಾತ್ರಿಯ ಮಹಾ ಭೋಜನವನ್ನು ಮುಗಿಸಿ ಬರಾಕಿಗೆ ಮರಳಿದೆವು. ಇನ್ನು ೮೦ ರಾತ್ರಿಗಳು, ೭೯ ರಾತ್ರಿಗಳು ಎಂದು ಮುಂತಾಗಿ ಪ್ರತಿರಾತ್ರಿಯೂ ಇಳಿಯೆಣಿಕೆ ಮಾಡುತ್ತ ಮರಳುತ್ತಿದ್ದುದು ವಾಡಿಕೆ. ಹೀಗೆ ಮಾಡುತ್ತಿದ್ದಾಗ ಮುಂದಿನ ವಾರ ಇದೇ ರಾತ್ರಿ, ಅದರ ಮುಂದಿನ ವಾರ ಇದೇ ರಾತ್ರಿ ಈ ಸಂಖ್ಯೆ ಎಷ್ಟು ಕಡಿಮೆ ಆಗಿರುತ್ತದೆ ಎಂದು ಊಹಿಸಿ ಹಿರಿ ಹಿಗ್ಗುತ್ತಿದ್ದಂತೆ ವಾಸ್ತವಿಕತೆಗೆ ಮರಳಿ, ಅಯ್ಯೋ ಆ ಸುಖ ಬರಲು ಇನ್ನೂ ಕಾಯಬೇಕಲ್ಲ ಎಂದು ಸಿಟ್ಟುಸಿರುಬಿಡುತ್ತಿದ್ದೆವು.

ಕಾರಿರುಳ ಸಾಂದ್ರತೆಯಲ್ಲಿ ಕಪ್ಪು ನೀಲಾಕಾಶದ ಜರಡಿಯಿಂದ ಸೌಂದರ್ಯಸುಧೆ ಸೋಸಿ ನಕ್ಷತ್ರಗಳಾಗಿ ಹನಿಯುತ್ತಿದ್ದಾಗ ಮಾವನ ಮನೆ, ಮನೆಯೊಳಗಿನ ಚೇತನ ಇವುಗಳ ನೆನಪಾಗದಿರುವುದು ಸಾಧ್ಯವಿರಲಿಲ್ಲ. "ಅಲ್ಲಿ ನಮ್ಮ ಮನೆ...ಇಂದ್ರಚಾಪ

ತೋರಣದಿ ಮೆರೆಯೆ ದೂರಿಂದ ಕಾಣಬಹುದು. ಹತ್ತಿರಕ್ಕೆ ಸನ್ನಾಕೆ ನೀರನುಣಿಸಿರುವ ಕಂದನಾಗಿ ಕೈ ಎತ್ತರಾದ ಮಂದಾರವೊಂದು ಇದೆ ಗೊಂಚಲಾಗಿ ಬಾಗಿ.'' ಬೇಂದ್ರೆಯವರ ಈ ಪದ್ಯದ ಭಾವಸ್ವಾನುಭವವಾದಾಗ ಎಂಥ ಮಾಂತ್ರಿಕಶಕ್ತಿ ಎಂಥ ಮೋಡಿ ಈ ಜಾದೂಗಾರನ ಮಾತಿನಲ್ಲಿದೆ ಎಂದುಕೊಂಡು ಪುಳಕಿತನಾಗಿದ್ದೇನೆ. ಇಂದಿನ ವಾಸ್ತವಿಕತೆ ಬಹುಪಾಲು ನೀರಸ. ಆದರೆ ಹಿಂದೆ ಕಳೆದುದನ್ನು ವಾಸ್ತವಿಕವಾಗಿ ಅನುಭವಿಸುತ್ತಿದ್ದಾಗ ಅದು ಎಷ್ಟೆಷ್ಟು ಕಠಿಣ ಮತ್ತು ತೀವ್ರ ಆಗಿತ್ತೋ ಅದರ ಸ್ಮರಣೆ ಅಷ್ಟಷ್ಟು ಉತ್ಸಾಹದಾಯಕ ಆಗಿರುವುದು. ಇನ್ನು ಬರಲಿರುವ ದಿವಸಗಳಾದರೋ ? ಅವು ಸದಾ ಸಂತೋಷದಾಯಕಗಳೇ. ಡಿಕನ್ಸ್ ಕುಂಚಿಸಿರುವ ಮೈಕಾಬರನ ಈ ಅಂಶ ನಮ್ಮೆಲ್ಲರಲ್ಲೂ ಇಲ್ಲದಿದ್ದರೆ ಇಂದಿನ ಬರಡುದಾರಿಯ ನಡಿಗೆ ದುಸ್ಸಹನೀಯವಾದೀತು. ಆಶಾವಾದವೇ ಜೀವನದ ಗಂಗೋತ್ರಿ.

ಕಳೆದುಹೋದ ಅಸಂಖ್ಯಾತ ರಾತ್ರಿಗಳು, ಅಂದು ಕೊನೆಯ ರಾತ್ರಿಗೆ ಇನ್ನೆಷ್ಟು ಮೈಲಿಗಳ ನಡಿಗೆ ಮತ್ತು ಗಂಟೆಗಳ ಕಾದಿರುವಿಕೆ ಬೇಕೆಂದು ತೋರಿಸಿಕೊಟ್ಟಿದ್ದರೂ ಆ ಕೊನೆಯ ರಾತ್ರಿ ಇಂದೇ ಬಂದಿರುವಾಗ, ಇನ್ನು ಕೇವಲ ಕೆಲವೇ ಗಂಟೆಗಳಲ್ಲಿ ಇದು ಕಾಲಾಕ್ಷದ ಋಣದಿಶೆಗೆ ಸಾಗಿ ಮುಂದೆ ಎಂದೆಂದೂ ಮರಳದೆಂದು ತಿಳಿದಾಗ, ನನ್ನ ಮನೋಭಾವ ಹೇಗಿರಬಹುದು ? ಸಂತೋಷ—ದಿಗ್ವಿಜಯ ಮುಗಿಸಿ ಊರಿಗೆ, ಬಂಧು ಬಾಂಧವರ ಪರಿಸರಕ್ಕೆ ಮರಳುತ್ತಿದ್ದೇನೆ; ನನ್ನ ಬಳಗದಲ್ಲಿ ಯಾರೂ ಏರದ ಹೊಸ ಎತ್ತರ ಏರಿ ಯಶಸ್ವಿಯಾಗಿ ಹಿಂದೆ ಬರುತ್ತಿದ್ದೇನೆ; ಹೊಸ ಆಸೆ ಆಕಾಂಕ್ಷೆಗಳನ್ನು ಸಿದ್ಧಿಸುವ ಭವಿಷ್ಯದತ್ತ ನಡೆಯುತ್ತಿದ್ದೇನೆ. ವೇದನೆ—ಈ ಚಿರಪರಿಚಿತ ಪರಿಸರವನ್ನು ಬಿಟ್ಟು ದೂರ ಹೋಗಬೇಕಲ್ಲ ; ಇನ್ನು ಪರ್ಮಾರ್, ಖಾದರರಂಥ ಮಹಾನುಭಾವರ ಆತ್ಮೀಯ ಸಂಪರ್ಕ ದೊರೆಯುವದಲ್ಲ ; ಎಂಆರ್‌ಸಿಗೆ ನಾವು ಪರಕೀಯರಾಗುವೆವಲ್ಲ !

ಮಲಗಿದರೆ ನಿದ್ರೆ ಬರುವುದೇ ? ಒಂದು ವಿಧದ ಉದ್ವೇಗದಿಂದ ಇಡೀ ದೇಹ ಕಂಪಿಸುತ್ತಿರುವ ಅನುಭವವಾಗುತ್ತಿತ್ತು. ಇದುವರೆಗೆ ನಾಳಿನ ಪೆರೇಡ್, ನಾಳಿನ ಟ್ರೈನಿಂಗ್ ಎಂದು ಮುಂತಾದ ಸ್ಪಷ್ಟ ಉದ್ದೇಶ ಎದುರಿಸುತ್ತಿದ್ದುದರಿಂದ ನಿದ್ರೆಗೆ ಒಂದು ಅರ್ಥವಿತ್ತು. ಮಲಗಿದೊಡನೆಯೇ ಗಾಢನಿದ್ರೆ ಕವಿದು ಬೆಳಗ್ಗೆ ನಿಶ್ಚಿಂತೆಯಿಂದ ಏಳುತ್ತಿದ್ದೆ. ಇನ್ನು ಅಂಥ ನಿರೀಕ್ಷಣೆ ಎದುರಿಗಿಲ್ಲ. ನಾಳೆ ಬೆಳಗ್ಗೆ ೧೦ ಗಂಟೆಗೆ ಲೆಕ್ಚರ್ ಹಾಲಿಗೆ ಸಮಾರೋಪ ಭಾಷಣ ಕೇಳಲು ಹೋದರೆ ಆಯಿತು. ೧೧ ಗಂಟೆಯ ಹೊತ್ತಿಗೆ ವೆಲ್ಲಿಂಗ್ಟನ್ನಿಗೆ ನಮ್ಮನ್ನು ಬಂಧಿಸಿದ್ದ ಹೊಕ್ಕುಳ ಬಳ್ಳಿಯನ್ನು ತುಂಡರಿಸುತ್ತಾರೆ. ಮತ್ತೆ ಇಲ್ಲಿ ಉಳಿಯುವುದುಂಟೇ ? ಆದಷ್ಟು ಬೇಗನೆ ಬಸ್ ಹಿಡಿದು ಊಟಿ ಸೇರಿ ಮುಂದೆ ಮೈಸೂರಿಗೆ ಧಾವಿಸಬೇಕು. ಮೈಸೂರು ಬಸ್ ಸಿಕ್ಕದಿದ್ದರೆ ? ಮರುದಿವಸದ ವರೆಗೆ ಕಾಯುವುದೇ ? ಅಥವಾ ಮೈಸೂರು ದಾರಿಯಲ್ಲಿ ನಡೆಯುತ್ತ ಹೋಗುವುದೇ ?

ಇಂಥ ಚಿಂತನೆಗಳನ್ನು ಕೋಣೆಯಲ್ಲಿದ್ದ ನಾವೆಲ್ಲರೂ ಮಾಡುತ್ತಿದ್ದೆವು. ಉಳಿದವರೆಲ್ಲರೂ ಟ್ರೈನಿನಲ್ಲಿ ಮರಳುವವರು. ನಾನೊಬ್ಬನೇ ಬಸ್ ಪ್ರಯಾಣಿಕ. ಆದ್ದರಿಂದ ವೆಲ್ಲಿಂಗ್ಟನ್ನಿನಲ್ಲಿಯೇ ನಾವು ಪರಸ್ಪರ ಬೀಳ್ಕೊಳ್ಳಬೇಕಾಗಿತ್ತು. ಹೀಗಾಗಿ ನಡುನಡುವೆ ಮಾತು. ತಾನು ಪಾಸಾಗುತ್ತೇನೋ ಇಲ್ಲವೋ ಎಂದು ಬಾಲಕೃಷ್ಣನ್‌ಗೆ ಚಿಂತೆ. ಅವನಿಗೆ

ಸಾಂತ್ವನ ನುಡಿಯುವ ಬದಲು ತನ್ನಂಥ ಗಝೆಟೆಡ್ ಆಫಿಸರನಿಗೆ AXನ್ನೇ ಕೊಡದಿದ್ದರೆ ಅದು ಎಂಆರ್‌ಸಿಗೇ ಕಳಂಕಕಾರಿ ಎಂದು ಕೊಚ್ಚಿಕೊಳ್ಳುತ್ತಿದ್ದ ಮೇನನ್ ಮಹಾಶಯ. ರಹಮಾನನ ಗೊರಕೆ ಎಂದಿನಂತೆ ಇಂದೂ ನಿರ್ವಿಘ್ನವಾಗಿ ಸಾಗಿತ್ತು. ಆದರೆ ಎಂದೂ ಅದನ್ನು ಇಷ್ಟು ಸ್ಫುಟವಾಗಿ ನಾನು ಆಲಿಸಿರಲಿಲ್ಲ. ನಮ್ಮ ಚಾರ್ಟರ್ಡ್ ಅಕೌಂಟೆಂಟ್ ಮಹಾಶಯ ರಾಜುವಂತೂ ಹೊಸ ಬೈಗುಳ ಸಾಹಿತ್ಯವನ್ನೇ ಸೃಷ್ಟಿಸಿದ—ಎಂಆರ್‌ಸಿಯ ವಿರುದ್ಧವಾಗಿ. ಅವನ ವರದಿಪುಸ್ತಕದ ಮೇಲೆ Attempt to be more factual (ವಿಷಯದ ಕಡೆಗೆ ಹೆಚ್ಚು ಲಕ್ಷ್ಯವಿರಲಿ) ಎಂದು ಪವಾರ್‌ರರು ಷರಾ ಬರೆದಿದ್ದರಂತೆ. ಇಂಕು ಚೆಲ್ಲಿ ಕಾಕಲಿಪಿಯಲ್ಲಿ ಗೀಚಿದ್ದ ಆ ಪುಸ್ತಕದ ಮೇಲೆ ಇನ್ನೂ ಕಠಿಣವಾದ ಮಾತನ್ನು ಬರೆಯದಿದ್ದುದು ಪವಾರ್‌ರರ ಸೌಜನ್ಯ ಎಂದು ಈತನಿಗೆ ತಿಳಿಯಲಿಲ್ಲ. ತಿಳಿದು ನೋಡೆ ಯಾರಿಗೆ ತಾನೇ ತನ್ನ ತಪ್ಪಿನ ಅರಿವಾಗುತ್ತದೆ ?

ಹೀಗಿರುವಾಗ "ಬೆಳ್ಳನೆ ಬೆಳಗಾಯಿತು." ಪುತಿನರವರ ಅಮೃತವಾಣಿಯಲ್ಲಿ

ಮೂಡಣ ಕಣಿವೆಯ ಹಿಮದವಕುಂಠನ
ರವಿ ಕರ ಸ್ಪರ್ಶಕೆ ಜಾರುತಿದೆ
ನಾಡದೊ ಹಿಗ್ಗುತ ನಾಚುತ ಮೆಲ್ಲನೆ
ಮೈ ಸಿರಿಯನು ತಾ ತೋರುತಿದೆ
ಬನದೊಳು ಕೆರೆಯೊಳು ಕಮರಿಯ ಬುಡದೊಳು
ದಿಗಂತ ವಿಸ್ತೃತ ನಾಡಿನೊಳು
ಇನನರುಣಾಂಶಗಳೆಲ್ಲೆಡೆ ಮಿಡಿವುವು
ತರುಜಲಗಳ ನೆರೆ ನಲವಿನೊಳು

ಎಂಆರ್‌ಸಿಗೆ ವಿದಾಯ

ಪ್ರಾತಃಕಾಲದ ೯-೪೫ ಗಂಟೆಗೆ ನಾವು ಹದಿನಾಲ್ಕು ಸಮವಸ್ತ್ರಧಾರಿಗಳು ಲೆಕ್ಚರ್ ಹಾಲಿನಲ್ಲಿ ಉಪಸ್ಥಿತರಾದೆವು. ಸುಬೆದಾರ್ ಅಬ್ದುಲ್‌ಖಾದರ್ ಆತ್ಮೀಯವಾಗಿ ಮಾತಾಡಲು ತೊಡಗಿದರು "ದೇಶದ ಸಮಷ್ಟಿ ಚೈತನ್ಯದ ಪ್ರಭಾವದಿಂದ ನಿಮ್ಮೊಡನೆ ಈ ಕೆಲವು ತಿಂಗಳುಗಳ ರಸಾನುಭವ ಪಡೆಯುವ ಭಾಗ್ಯ ನನ್ನದಾಯಿತು. ನಿಮ್ಮಂಥ ವಿದ್ಯಾವಂತರ ಸುಸಂಸ್ಕೃತರ ಸಂಪರ್ಕ ನನ್ನ ಜೀವನದ ಅಮೂಲ್ಯ ಸ್ಮರಣೆಗಳಲ್ಲಿ ಒಂದು. ನಾವು ನಿಮ್ಮನ್ನು ಪೆರೇಡ್‌ಗ್ರೌಂಡಿನಲ್ಲಿ ಛೇಡಿಸಿದ್ದರೆ ನಿಮಗೆ ನೋವಾಗುವಂತೆ ಕಟುನುಡಿ ಆಡಿದ್ದರೆ ಅದು ಉದ್ದೇಶಪೂರ್ವಕವಲ್ಲ. ಆರ್ಮಿ ವಿಧಾನವೇ ಹಾಗೆ. ಕೆಲಸ ಚುರುಕಾಗಿ ಶಿಸ್ತಿನಿಂದ ನಡೆಯಬೇಕಾದಾಗ ಇಂಥ ಕ್ರಮ ಅನಿವಾರ್ಯವಾಗುತ್ತದೆ. ಮಕ್ಕಳನ್ನು ತಾಯಿ ಗದರಿಸುವಂಥ ರೀತಿ ಇದು. ಆ ನೋವನ್ನು ಮರೆತುಬಿಡಿ. ಈ ಸಹವಾಸದ ದಿವಸಗಳ ಮಧುರ ಸ್ಮರಣೆ ಮಾತ್ರ ಉಳಿದಿರಲಿ" ಎಂದು ಅವರೆಂದಾಗ ಮಾತು ತೊದಲಿತು. ನಮಗೆಲ್ಲರಿಗೂ ಒಂದು ಸಹಿಸಲಾರದ ಸಂಕಟವಾಯಿತು. ಅಷ್ಟರಲ್ಲೇ ಲೆಫ್ಟಿನೆಂಟ್ ಪವಾರ್ ಬಂದರು. ಮುಖ್ಯ ಅತಿಥಿಗಳು ಬರಲು ಇನ್ನು ಏಳೆಂಟು ಮಿನಿಟುಗಳಿದ್ದುವು.

"ಮಿತ್ರರೇ! ನನ್ನ ಆಫಿಸರ್ ಹುದ್ದೆಯ ಪ್ರಾರಂಭದಲ್ಲಿಯೇ ನಿಮ್ಮಂಥವರ ಶಿಕ್ಷಣದ

ಹೊಣೆ ನನಗೆ ದೊರೆತದ್ದು ಪರಮಭಾಗ್ಯವೆಂದು ತಿಳಿದಿದ್ದೇನೆ. ಇಲ್ಲಿ ದೊರೆತ ಶಿಕ್ಷಣವನ್ನು ಸದುಪಯೋಗಪಡಿಸಿಕೊಂಡು ಅಭ್ಯಾಸದಿಂದ ಅಭಿವೃದ್ಧಿಪಡಿಸಿಕೊಂಡು ವಿದ್ಯಾರ್ಥಿಗಳನ್ನು ದಕ್ಷರೂ ಶಿಸ್ತುವಂತರೂ ಆಗಿ ತಯಾರುಮಾಡುವುದು ನಿಮ್ಮ ಪವಿತ್ರ ಹೊಣೆ. ನಿಮಗೆ ಒಳ್ಳೆಯದಾಗಲಿ.''

ಅವರ ಮಾತು ಮುಗಿಯುತ್ತಿದ್ದಂತೆಯೇ ಖಾದರರಿಂದ ಸಂಜ್ಞೆ ಬಂದಿತು. ಒಂದು ಕ್ಷಣ ಎಲ್ಲರೂ ಗಂಭೀರರಾದೆವು. ''Class ! Sit to attention !'' ಎಂದು ಪರ್ಮಾರ್ ಆಜ್ಞೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಂಆರ್‌ಸಿಯ ಉಪಮುಖ್ಯಸ್ಥ (ಸೆಕೆಂಡ್-ಇನ್-ಕಮಾಂಡ್) ಮೇಜರ್ ಬಿ. ಕೆ. ಸೋಮಯ್ಯನವರಿಗೆ ವಂದನೆ ಅರ್ಪಿಸಿದರು. ಅವರದನ್ನು ಸ್ವೀಕರಿಸಿ ತಮ್ಮ ಸ್ಥಾನದ ಮೇಲೆ ಕುಳಿತರು. ತರುವಾಯ ಪರ್ಮಾರರಿಂದ ''Sit at ease, sit easy'' ಹುಕುಂಗಳು ಇದೇ ಕ್ರಮದಲ್ಲಿ ದೊರೆತುವು.

ನಾವೆಲ್ಲರೂ ಒಬ್ಬೊಬ್ಬರಾಗಿ ಎದ್ದು ನಿಂತು ಸೆಲ್ಯೂಟ್ ಸಲ್ಲಿಸಿ ನಮ್ಮ ಹೆಸರನ್ನೂ ಕಾಲೇಜು ಹೆಸರನ್ನೂ ಹೇಳಿ ಪುನಃ ಸೆಲ್ಯೂಟ್ ನೀಡಿ ಕುಳಿತುಕೊಂಡೆವು. ಮೇಜರ್ ಸೋಮಯ್ಯನವರು ಮಾತಾಡಿದರು :

''ಸ್ನೇಹಿತರೇ, ನೀವು ಈ ಮೂರು ತಿಂಗಳುಗಳ ಮಿಲಿಟರಿ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿ ಒಂದು ವಿಧವಾದ ಕೃತಾರ್ಥತೆಯ ಭಾವದಿಂದ ದೀಪ್ತರಾಗಿ ಬಂದು ಇಲ್ಲಿ ಸೇರಿದ್ದೀರಿ. ನಾಗರಿಕ ಜೀವನದಲ್ಲಿ ಕಾನ್ವೊಕೇಶನ್ ಅಥವಾ ಪದವೀದಾನ ಸಮಾರಂಭವಿರುವಂತೆ ಇಂದಿನ ಈ passing out parade ಇದೆ. ನಿಜ, ನೀವು ಮಿಲಿಟರಿ ಶಿಕ್ಷಣದಲ್ಲಿ ಉತ್ತೀರ್ಣರಾಗಿ ನಿಮ್ಮ ನಿಮ್ಮ ನಿಯೋಜಿತ ಹುದ್ದೆಗಳಿಗೆ ಸಾಗಿ ಹೋಗಲು ಇಂದು ಸಿದ್ಧರಾಗಿದ್ದೀರಿ. ಆದರೆ ನಿಮ್ಮ ಶಿಕ್ಷಣದ ಮೊದಲ ಹಂತ ಮಾತ್ರ ಇಂದು ಮುಗಿದಿದೆ ಎಂದು ನೆನಪಿನಲ್ಲಿರಲಿ. ಇಲ್ಲಿ ನೀವು ಕಲಿತದ್ದರಲ್ಲಿ ಪುತ್ಥಳಿ ಎಷ್ಟು ಬೆಟ್ಟೆ ಎಷ್ಟು ಎನ್ನುವುದನ್ನು ತೀರ್ಮಾನಿಸುವ ಒರೆಗಲ್ಲು ಮುಂದೆ ಬರಲಿದೆ. ನೀವು ವಿದ್ಯಾರ್ಥಿಗಳನ್ನು ತರಬೇತು ಮಾಡುವಾಗ ನಿಮ್ಮ ನಿಜವಾದ ಸಾಮರ್ಥ್ಯ ಹೊರಗೆ ಬರುತ್ತದೆ. ಇಲ್ಲಿ ನೀವು AX ದರ್ಜೆಯನ್ನೇ ಪಡೆದು ಅತ್ಯುತ್ತಮ ಆಫಿಸರ್ ಕ್ಯಾಡೆಟ್ ಆಗಿ ತೇರ್ಗಡೆ ಹೊಂದಿರಬಹುದು. ಆದರೆ ಅಲ್ಲಿ ಅದು ಇನ್ನಷ್ಟು ಪ್ರಖರವಾಗಿ ಪ್ರಕಟಗೊಳ್ಳದಿದ್ದರೆ ನಿಮ್ಮ ಈ ತಿಳಿವಳಿಕೆ ನಿಷ್ಪ್ರಯೋಜಕವಾಗುವುದು. ಆದ್ದರಿಂದ ಮುಂಬರುವ ದಿವಸಗಳಲ್ಲಿ ಲಕ್ಷ್ಯ ಸದಾ ಪ್ರಾಯೋಗಿಕ ಸಾಫಲ್ಯ ಪಡೆಯುವುದರ ಕಡೆಗಿರಲಿ. ನಮ್ಮ ಪವಿತ್ರ ರಾಷ್ಟ್ರದ ಸಮಷ್ಟಿ ಚೈತನ್ಯದ ಒಂದು ಭವ್ಯ ಪ್ರತೀಕ ಮಿಲಿಟರಿ. ಇದರ ಒಂದು ಪ್ರಧಾನಾಂಶ ನಮ್ಮ ಈ ಮದರಾಸ್ ರೆಜಿಮೆಂಟಲ್ ಸೆಂಟರ್. ಇಲ್ಲಿಯ ಈ ಪೆರೇಡ್ ಗ್ರೌಂಡಿನಲ್ಲಿ ಶಿಕ್ಷಣ ಪಡೆದು ಹೋದ ಪ್ರತಿ ಯೋಧನಿಗೂ ಇದು ತಾಯ್ನೆಲ. ಇಲ್ಲಿ ಕಳಪೆಗೆ ಜಳ್ಳಿಗೆ ಸ್ಥಾನವಿಲ್ಲ. ನೀವು ಒಬ್ಬೊಬ್ಬರೂ ಎಂ ಆರ್ ಸಿಯ ಈ ಭವ್ಯ ಪರಂಪರೆಯ ಕುಡಿಗಳು. ಇದನ್ನು ಹೊರನಾಡುಗಳಲ್ಲಿ ಪ್ರತಿನಿಧಿಸುವ ರಾಯಭಾರಿಗಳು. ಆದ್ದರಿಂದ ನಿಮ್ಮ ಸಕಲ ವರ್ತನೆಗಳಲ್ಲೂ—ಅದು ಎನ್‌ಸಿಸಿ ಶಿಕ್ಷಣ ರಂಗವಾಗಿರಲಿ, ಇತರ ವ್ಯವಹಾರ ಕ್ಷೇತ್ರವಾಗಿರಲಿ—ಎಂಆರ್‌ಸಿಯ ಅಂದರೆ ಮಿಲಿಟರಿಯ ಘನತೆ ಗೌರವಗಳನ್ನು ಕಾಪಾಡಿ

ಕೊಂಡು ಬರಬೇಕಾದದ್ದು ಪ್ರತಿಯೊಬ್ಬನ ವೈಯಕ್ತಿಕ ಹೊಣೆ. ಸಾಮೂಹಿಕ ಜೀವನದಲ್ಲಿ ಸಹಕಾರ, ದಕ್ಷತೆ, ಪ್ರಾಮಾಣಿಕತೆ, ಕ್ಷಿಪ್ರತೆ ಈ ಸದ್ಗುಣಗಳು ಮಿಲಿಟರಿಯಲ್ಲಿ ಹೇಗೋ ಹಾಗೆ ಇತರ ಎಲ್ಲ ರಂಗಗಳಲ್ಲೂ ಅತ್ಯಾವಶ್ಯಕ. ಇವನ್ನು ಮೈಗೂಡಿಸಿಕೊಂಡು ನಿಷ್ಠಾವಂತರಾಗಿ ದುಡಿದರೆ ನಿಮ್ಮ ಕ್ಷೇತ್ರ ಯಾವುದೇ ಇದ್ದರೂ ನಿಮಗೆ ಅಲ್ಲಿ ತೃಪ್ತಿ, ಕೃತಕೃತ್ಯಭಾವ ಕಟ್ಟಿಟ್ಟದ್ದು. ಜೀವನದಲ್ಲಿ ಕೆಲವೇ ಜನರಿಗೆ ಮುಂದಾಳುಗಳಾಗುವ ಭಾಗ್ಯ ಲಭ್ಯವಾಗುತ್ತದೆ. ನೀವು ಅಂಥ ಭಾಗ್ಯವಂತರಲ್ಲಿ ಅಗ್ರಗಣ್ಯರು. ಕಾರಣ, ಪ್ರಾಧ್ಯಾಪಕರಾಗಿ ನೀವು ವಿದ್ಯಾರ್ಥಿಗಳ ಸಹಜ ಬೌದ್ಧಿಕ ನಾಯಕರು. ಇನ್ನು ಎನ್‌ಸಿಸಿ ಆಫಿಸರುಗಳಾಗಿ ನೀವು ಅವರ ಸಾಮರ್ಥ್ಯನಾಯಕರೂ ಆಗುತ್ತೀರಿ. ಹೀಗೆ ದ್ವಿವಿಧ ಹೊಣೆ ಹೊತ್ತಿರುವ ನಿಮ್ಮ ಲಕ್ಷ್ಯದಲ್ಲಿ ಎಲ್ಲ ವೇಳೆಗಳಲ್ಲೂ ನಾನು ಮುಂದೆ ಹೇಳುವ ಮಿಲಿಟರಿ ಜೀವನದ ಸಾರಸರ್ವಸ್ವವಾದ ಮಾತುಗಳು ನೆನಪಿನಲ್ಲಿರಲಿ. ಪ್ರಖ್ಯಾತ ಮಿಲಿಟರಿ ಅಧಿಕಾರಿಯೊಬ್ಬರ ಮಾತನ್ನು ನಾನಿಲ್ಲಿ ಪುನರುಚ್ಚರಿಸುತ್ತಿದ್ದೇನೆ: 'ನಿಮ್ಮ ರಾಷ್ಟ್ರದ ಹಿತಾಸಕ್ತಿ ಸದಾ ಪ್ರಥಮ ಸ್ಥಾನ ಪಡೆಯಬೇಕು; ನಿಮ್ಮ ಯೋಧರ ಹಿತ ಮತ್ತು ಉತ್ಕರ್ಷ ತರುವಾಯ ಬರಬೇಕು; ನಿಮ್ಮ ವೈಯಕ್ತಿಕ ಹಿತ ಮತ್ತು ಸೌಕರ್ಯ ಸದಾ ಕೊನೆಯ ಸ್ಥಾನ ಪಡೆಯಬೇಕು.' ನಿಮಗೆ ಮಂಗಳವಾಗಲಿ. ಎಂಆರ್‌ಸಿ ಸದಾ ನಿಮ್ಮ ಬೆಂಬಲಕ್ಕಿದೆ, ನಿಮ್ಮ ಪ್ರಗತಿಯಲ್ಲಿ ಸಂತೋಷಗೊಳ್ಳುತ್ತದೆ ಎಂಬುದು ನೆನಪಿನಲ್ಲಿರಲಿ. ನಿಮ್ಮ ಪ್ರಯಾಣ ಶುಭಕರವಾಗಲಿ. ವಂದನೆಗಳು."

ತವರೂರ ದಾರಿಯಲಿ

ಜೀನಿ ಎಂಬ ಧೂಮ ರಾಕ್ಷಸನನ್ನು ಕುಪ್ಪಿಯಲ್ಲಿ ತುಂಬಿ ದಿಮ್ಮಿಯನ್ನು ಜಡಿದು ನೀರಿಗೆ ಎಸೆದಿದ್ದರು. ಅದು ಹಾಗೆಯೇ ತೇಲಿಕೊಂಡು ಬಂದು ಎಲ್ಲೋ ನೆಲದಲ್ಲಿ ಸಿಕ್ಕಿ ಹಾಕಿಕೊಂಡಿತ್ತು. ಒಬ್ಬ ನಿರಪರಾಧಿ ದಾರಿಹೋಕ ಈ ಕುಪ್ಪಿಯನ್ನು ಹೆಕ್ಕಿದ. ಎಲ್ಲರಂತೆ ಇವನದೂ ಸಹಜ ಕುತೂಹಲ. ದಿಮ್ಮಿ ತೆಗೆದ. ಭುಸ್ಸನೆ ಹೊರಗೆ ನೆಗೆದ ರಾಕ್ಷಸನ ಗಾತ್ರ, ಸಾಮರ್ಥ್ಯಗಳಿಂದ ಕಂಗಾಲಾಗಿ ಕುಸಿದೇ ಹೋದ. ತನ್ನ ರಕ್ಷಕನಾದ ಈ ನಿರಪರಾಧಿಯನ್ನು ತಿಂದುಬಿಡುವೆನೆಂದು ಜೀನಿ ಆರ್ಭಟಿಸಿದ. (ಸಾಮರ್ಥ್ಯ ಮತ್ತು ಬುದ್ಧಿಬಲ ಪರಸ್ಪರ ಪ್ರತಿಲೋಮಾನುಪಾತದಲ್ಲಿರುವುದು ನಿಸರ್ಗದ ಒಂದು ಚೋದ್ಯ ಹಾಗೂ ರಕ್ಷೆ). ದಾರಿಹೋಕ ಉದ್ಗರಿಸಿದ "ಅಪ್ಪಾ ಮಹಾ ಗಾತ್ರನೇ! ನಕ್ಷತ್ರಮಂಡಲದವರೆಗೂ ಸರ್ವವ್ಯಾಪಿಯೂ ಸರ್ವಶಕ್ತನೂ ಆದ ನೀನು ಈ ಕ್ಷುದ್ರ ಸೂಕ್ಷ್ಮ ಕುಪ್ಪಿಯಲ್ಲಿ ಹೇಗೆ ತಾನೇ ಅಡಕವಾಗಿದ್ದೆ? ಅದು ಸಾಧ್ಯವೇ ಇಲ್ಲ ಎಂಬ ಸಂಶಯ ನನ್ನನ್ನು ಕಾಡುತ್ತಿದೆ. ಅದನ್ನು ಪರಿಹರಿಸಬಲ್ಲೆಯಾ?" ಜೀನಿಗೆ ಇದೊಂದು ಸವಾಲಾಯಿತು. "ಹುಂ. ಹುಲು ಮಾನವಾ! ನಿನ್ನನ್ನು ತಿನ್ನುವ ಮೊದಲು ನಿನ್ನ ಸಂಶಯವನ್ನು ನಿವಾರಣೆ ಮಾಡುತ್ತೇನೆ ನೋಡು!" ಎಂದು ಕುಪ್ಪಿ ಹೊಕ್ಕ ಜೀನಿ—ದಿಮ್ಮಿ ಜಡಿದ ಮಾಣಿ!

ಮೇಜರ್ ಸೋಮಯ್ಯನವರ ಜೊತೆಯಲ್ಲಿ ಲೆಫ್ಟಿನೆಂಟ್ ಪವಾರರರೂ ನಿಷ್ಕ್ರಮಿಸಿದರು. ಸುಬೇದಾರ್ ಖಾದರರು ನಮ್ಮ ತರಗತಿಗೆ ವಿಸರ್ಜನೆಯ (Class ! Dismiss

ಎಂಬ ಮಿಲಿಟರಿ ಹುಕುಂ) ಆಜ್ಞೆ ಜಾರಿ ಮಾಡಿದಾಗ ದಿಮ್ಮಿ ತೆಗೆದ ಕುಪ್ಪಿಯೊಳಗಿಂದ ಹೊರ ನೆಗೆದ ಜೀನಿಗಳು ನಾವಾದೆವು.

ಬರಾಕಿಗೆ ಒಂದೇ ಉಸುರಿಗೆ ಜಿಗಿದೆ. ಸಮವಸ್ತ್ರ ಕಳಚಲು ಪುರಸೊತ್ತಿಲ್ಲ. ಬ್ಯಾರರ ನನ್ನು ಹುಡುಕಿದರೆ ಅವನೆಲ್ಲಿ! ಬಕ್ಷೀಸನ್ನು ಸಹ ಆ ಮೊದಲೇ ಕೊಟ್ಟು ಅವನ ಲೆಕ್ಕಾಚಾರವನ್ನು ಚುಕ್ತಗೊಳಿಸಿದ್ದು ತಪ್ಪಾಯಿತೆಂಬ ಪಾಠ ಕಲಿತೆ. ಹೀಗಾಗಿ ನನ್ನ ಮಿಲಿಟರಿ ದುಸ್ತಿನಲ್ಲಿಯೇ ಟ್ರಂಕು ಬೆಡ್ಡಿಂಗುಗಳನ್ನು ಹೊತ್ತು ಬ್ಲ್ಯಾಕ್ ಬ್ರಿಡ್ಜಿನೆಡೆಗೆ ಧಾವಿಸಿದೆ. ದಾರಿಯಲ್ಲಿ ಎದುರಾದ ಸೈನಿಕರಿಗೆ ನನ್ನ ಅತ್ಯುತ್ಸಾಹ ಅರ್ಥವಾಗಿರಬೇಕು. ಅವರು "ಶುಭ ಪ್ರಯಾಣವಾಗಲಿ" ಎಂದು ಹಾರೈಸಿದ್ದು ಕೇಳಿತು. ಆದರೆ ಅವರಿಗೆ ಶುಕ್ರಿಯಾ ನೀಡಲು ನನಗೆ ಸಮಯವಿರಲಿಲ್ಲ. ಕಾಕತಾಲೀಯ ನ್ಯಾಯವೆಂದರೆ ಇದು—ನಾನು ಏರುಬ್ಬಸ ಬಿಡುತ್ತ ಬ್ಲ್ಯಾಕ್ ಬ್ರಿಡ್ಜಿಗೆ ತಲಪುವುದೂ ಕೂನೂರಿನಿಂದ ಊಟಿಗೆ ಹೋಗುವ ಬಸ್ಸು ಅಲ್ಲಿಗೆ ಬಂದುದೂ "ಚಮೋ ಚಮೋ," (ಯಜಮಾನ ತನ್ನ ಸಹಾಯಕ್ಕೆ, ಬೆಂಗಾವಲಿಗೆ ಎಂದು ಆಳನ್ನು ಜೊತೆಗೆ ಕರೆದೊಯ್ದಿದ್ದ. ಗೊಂಡಾರಣ್ಯದಲ್ಲಿ ಬೇಟೆ ಅರಸಿ ಯಜಮಾನ ಮುಂದೆ ನಡೆದ; ಪುಕ್ಲ ಆಳು ಯಜಮಾನನ ಭಯದಿಂದ ಅವನನ್ನು ಅನುಸರಿಸಿದ. ತಿರುವಿನಲ್ಲಿ ಹುಲಿ ಹಾರಿ ಯಜಮಾನನನ್ನು ಹಿಡಿದಾಗ ಆಳು ಅಲ್ಲಿಂದ ಪದರಾಡು! ಮನೆಗೆ ಬಂದು ಯಜಮಾನತಿಗೆ ಗಾಬರಿಯಿಂದ ಹೇಳುತ್ತಾನೆ: ಯಜಮಾನನ ನರಿ ಪುಡಿಚು, ಇಾ ಇ ಓಡಿಚು ಚಮೋಚಮೋ.")

ಕಾಕತಾಲೀಯ ನ್ಯಾಯದ ಪುನರಾವರ್ತನೆ ೧ ಗಂಟೆಗೆ ಊಟಿ ಬಸ್ ನಿಲ್ದಾಣವನ್ನು ತಲಪಿದಾಗ ೧೨ ಗಂಟೆಗೇ ಹೊರಟು ಹೋಗಬೇಕಾಗಿದ್ದ ಮೈಸೂರಿನ ಕೊನೆ ಬಸ್ಸು ಇನ್ನೂ ಅಲ್ಲಿ ಕಾದು ನಿಂತಿತ್ತು. ಊಟ ಕಾಫಿ ತಿಂಡಿ ಯಾವುದಕ್ಕೂ ಅವಕಾಶವಿಲ್ಲ. ನಾನು ಅದನ್ನು ಹತ್ತಿ ಕುಳಿತೆ. ಮರುಕ್ಷಣದಲ್ಲಿ ಫೋರ್ಡ್ ಪರ್ಕಿನ್ಸ್ ಡೀಸೆಲ್ ಎಂಜಿನ್ ಜೀವಂತವಾಯಿತು. ಈಗ ನಾವು ಊಟಿಯ ತಂಪು ಹಸುರು ಎತ್ತರದಿಂದ ಎದುರು ತಗ್ಗಿನಲ್ಲಿ ವಿಸ್ತಾರವಾಗಿ ಹಾಸಿರುವ ವಿಶ್ವಕರ್ಮನ ರತ್ನಗಂಬಳಿಯನ್ನು ನೋಡುತ್ತಿದ್ದೇವೆ. ಈ ಕಂಬಳಿಗೆ ಅಂತ್ಯವೆಂಬುದಿಲ್ಲ. ನಾವು ಮುಂದೆ ಮುಂದೆ ಸಾಗಿದಂತೆ ಅದರ ಹೊಸ ಹೊಸ ಮಡಿಕೆಗಳು ಅಲ್ಲಿ ನೂತನ ಕಲಾ ಕುಸುರುಗಳು ಅನಾವರಣಗೊಳ್ಳುತ್ತಿವೆ. ಇಂಥ ಒಂದು, ಈಗ ಕಾಣದ ಆದರೆ ನಾಳೆ ಖಂಡಿತವಾಗಿ ತೋರುವ, ಮಡಿಕೆಯಲ್ಲಿ ಮಡಿಕೇರಿ ಅದರಿಂದಾಚೆಗೆ ಮರಿಕೆ ಎಲ್ಲವೂ ಹುದುಗಿವೆಯಲ್ಲವೇ?

ಗಾಳಿಯೊಡನೆ ತಿಳ್ಳಿಯಾಡುತಾಡುತದರ ಓಟಾ
ದಿಕ್ತಟಗಳ ಹಾಯುತಿತ್ತು; ಅದರ ಬಿದಿಗೆ ನೋಟಾ
ನಕ್ಕ ನಗುವ ಚಿಕ್ಕೆಯೊಡನೆ ಬೆಳೆಸುತಿತ್ತು ಕೂಟಾ
ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ!

ಅಂಬಿಕಾತನಯದತ್ತ

ಪರಿಪೂರ್ಣತೆಯೇ ಮಿಲಿಟರಿ

ಆಗಸ್ಟ್ (೧೯೫೨) ಪ್ರಥಮವಾರ ನಾನು ಸಪತ್ನೀಕನಾಗಿ ಮಂಗಳೂರಿನ ಕದ್ರಿಯ ನಮ್ಮ ಮನೆಗೆ ಬಿಜಯಂಗೈದಾಗ ವೀರಸ್ವಾಗತವನ್ನು ನನಗೆ ಬಯಸಿದವರು ಬಿ. ವಿ. ಕೆದಿಲಾಯರು. ಇವರೂ ನಾನೂ ಒಂದು ದೊಡ್ಡ ಮನೆಯಲ್ಲಿ ವಾಸಕ್ಕೆ ಪಾಲುದಾರರೂ ಹೌದು. ನನ್ನನ್ನು ಎನ್‌ಸಿಸಿ ಶಿಕ್ಷಣಕ್ಕೆ ತಳ್ಳುವಲ್ಲಿ ಇವರ ಪ್ರಯತ್ನ ಏನೂ ಸಣ್ಣದಲ್ಲ. ಸ್ವಭಾವತಃ ಹಿಂಜರಿದು ನಿಲ್ಲುವ ನನ್ನನ್ನು ಹುರಿದುಂಬಿಸಿ ಹೀಯಾಳಿಸಿ ಕೋಪ ಬರಿಸಿ ಈ ಹೊಸ ಕ್ಷೇತ್ರವನ್ನು ಪ್ರವೇಶಗೊಳಿಸಿದಾಗ ಪ್ರಾಯಶಃ ಜೀವನದಲ್ಲಿ ತಾನು ಪಡೆಯದಿದ್ದ ಅನುಭವಗಳು ಈ ಕಿರಿಯ ಸಹೋದ್ಯೋಗಿ ಪಡೆದು ಬರಲಿ ಎಂಬ ತಮ್ಮ ಹಂಬಲದ ಪೂರೈಕೆಯನ್ನು ಅವರು ಕಂಡಿರಬೇಕು. ಕೆದಿಲಾಯರ ವ್ಯಕ್ತಿತ್ವ ಬಲು ವಿಶಿಷ್ಟವಾದದ್ದು. ಚಿಕ್ಕ ಪ್ರಾಯದಲ್ಲಿ ಸಾಂಸಾರಿಕ ತಾಪತ್ರಯಗಳ ಕಾರಣದಿಂದ ಶಾಲಾ ಮಾಸ್ತರಿಕೆ ಹಿಡಿದರು. ಅವರ ಕಾರ್ಯಕ್ಷೇತ್ರ ಶಾಲೆಯ ಮಿತವಾತಾವರಣದಲ್ಲಿ ಎಷ್ಟು ವಿಸ್ತಾರಗೊಳ್ಳಬಹುದಿತ್ತೋ ಅಷ್ಟೂ ವಿಸ್ತರಿಸಿತು. ಆದರೆ ಈ ವೈನತೇಯನಿಗೆ ಬೇಕಾದದ್ದು ಕಾಲೇಜಿನ ಆಕಾಶ, ಶಾಲೆಯ ಗೂಡಲ್ಲ. ಸ್ವಂತಾಭ್ಯಾಸದಿಂದ ಎಂ. ಎ. ಪದವಿಯನ್ನು ಪಡೆದು ಸೇಂಟ್ ಅಲೋಯ್ಸಿಯಸ್ ಕಾಲೇಜಿನಲ್ಲಿ ಕನ್ನಡ ಲೆಕ್ಚರರ್ ಆಗಿ ನೇಮಕಗೊಂಡಿದ್ದರು. ಆ ಕಾಲೇಜನ್ನು ನಾನೂ ಇವರೂ ಸೇರಿದ್ದು ಒಂದೇ ವರ್ಷ (೧೯೪೯). ನನಗಾಗ ೨೫ ವರ್ಷ ವಯಸ್ಸು. ನನಗಿಂತ ಇವರು ಸುಮಾರು ೧೫ ವರ್ಷಗಳಷ್ಟು ಹಿರಿಯರಾದರೂ ಇವರ ದೈಹಿಕ ಲವಲವಿಕೆ ಅಸಾಧಾರಣವಾಗಿತ್ತು. ನಾವಿದ್ದದ್ದು ಕಾಲೇಜ್ ಹಾಸ್ಟೆಲಿನಲ್ಲಿ. ಸಾಯಂಕಾಲದ ನಡಿಗೆಯೋ, ಬೆಳಗ್ಗಿನ ಓಟವೇ, ಬೆಟ್ಟವೇರುವುದೇ, ಸೈಕಲ್ ತುಳಿಯುವುದೇ, ಗಂಟೆಗಟ್ಟಲೆ ಪಾಠ ಮಾಡುವುದೇ—ಇವೆಲ್ಲದರಲ್ಲಿಯೂ ಅವರ ಹುಮ್ಮಸ್ಸು ನನಗೆ ಸವಾಲಾಗಿತ್ತು. ಇನ್ನು ಲೋಕಜ್ಞಾನ, ಶಾಸ್ತ್ರ, ಸಾಹಿತ್ಯಜ್ಞಾನ ಇಲ್ಲೆಲ್ಲ ಅವರೊಬ್ಬ ವಿಸ್ಮಯಪುರುಷರು. ಯಾವ ಹೇಳಿಕೆಯನ್ನೂ ಸೀದಾ ಒಪ್ಪುವವರಲ್ಲ. ಅದನ್ನು ವಾದ ಮಾಡಿಯೇ ಮಾಡಿಯಾರು. ನಮ್ಮಿಂದ ವಿವರಣಾತ್ಮಕ ಉತ್ತರಗಳನ್ನು ಹೊರಡಿಸಿ ಅಸಾಂಗತ್ಯವೇನಾದರೂ ಇದ್ದರೆ ಅದನ್ನು ನಿರ್ದಾಕ್ಷಿಣ್ಯವಾಗಿ ಹೇಳಿಯಾರು. ನಮ್ಮ ಬುದ್ಧಿಗೆ ಸಾಣೆ ಹಿಡಿಯುವಂಥ ನಿಶಿತಮತಿ ಅವರದು, ಅವರ ಆಸಕ್ತಿ, ಓದಿಕೆ ಬಲು ವಿಶಾಲ. ಕನ್ನಡ ಸಾಹಿತ್ಯ ಮಾತ್ರವಲ್ಲ, ಕಲೆ, ವಿಜ್ಞಾನ. ಆಟೋಟಗಳು, ದೇಶದ ರಾಜಕೀಯ ಆರ್ಥಿಕ ಸಮಸ್ಯೆಗಳು ಇವುಗಳಲ್ಲೆಲ್ಲ ಅವರಿಗೆ ಅದಮ್ಯ ಕುತೂಹಲ.

ಮುಂದೆ ೧೯೫೧ರಲ್ಲಿ ನನಗೆ ಮದುವೆ ಆದಾಗ ನಾವಿಬ್ಬರೂ ಸೇರಿಯೇ ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೆವು. ಕೆದಿಲಾಯರು ಹೇಗೆ ನನಗೆ ಹಿರಿಯಣ್ಣ ಆದರೋ ಅವರ ಹೆಂಡತಿ ಹಾಗೆ ನನ್ನ ಹೆಂಡತಿಗೆ ಹಿರಿಯಕ್ಕ ಆದರು. ನನ್ನ ಮಿಲಿಟರಿ ಶಿಕ್ಷಣವನ್ನು ಕುರಿತು ಅವರ ಉತ್ಸಾಹ ಅರಳಿತು. ನಾನೋ—ಖಚಿತ ತೀರ್ಮಾನಗಳು ತುಂಬಿ ಬಿರಿಯುವಂತಿದ್ದ ಭಾಂಡ. ಇವರ ಪ್ರಶ್ನೆ ನನಗೆ ಅಪ್ಯಾಯಮಾನವಾಯಿತು. "ಲೋಕದ ಎಲ್ಲ ಸಮಸ್ಯೆಗಳಿಗೂ ಇರುವ ಏಕೈಕ ಪರಿಹಾರ ಮಿಲಿಟರಿ ಶಿಕ್ಷಣ, ಮಿಲಿಟರಿ ಕ್ರಮ" ನಾನೆಂದೆ.

"ಈಗ ದೇಶದಲ್ಲಿ ತಾಂಡವವಾಡುತ್ತಿರುವ ದಾರಿದ್ರ್ಯ, ವಂಚನೆ, ಜಾತೀಯತೆ, ಅವಿದ್ಯೆ ಇವನ್ನೆಲ್ಲ ಮಿಲಿಟರಿ ಸಮರ್ಪಕವಾಗಿ ಪರಿಹರಿಸಿ ರಾಮರಾಜ್ಯವನ್ನು ಆವಾಹಿಸ ಬಲ್ಲುದೆಂದು ನಿಮ್ಮ ನಂಬಿಕೆಯೋ ?" ಅವರ ಸವಾಲು.

"ಖಂಡಿತವಾಗಿಯೂ. ಸಾವಿರ ಸಲ ಖಂಡಿತವಾಗಿಯೂ ಎಂದು ಸಾರುತ್ತೇನೆ. ಒಬ್ಬ ಮಿಲಿಟರಿ ಅಧಿಕಾರಿ ಎಂದರೆ ಏನೆಂದು ಭಾವಿಸಿದ್ದೀರಿ? ಅವನು ಪರಿಪೂರ್ಣ ಮಾನವ. ದೇಶಪ್ರೇಮವೇ ಅವನ ಸಮವಸ್ತ್ರ; ದೇಶಸೇವೆಯೇ ಅವನ ಉಸಿರು. ನಿರಂತರ ಕ್ರಿಯಾ ತತ್ಪರತೆ, ಸಾಮೂಹಿಕ ಸಹಕಾರ, ಒಂದು ಹುಕುಂ ಒಂದು ಕ್ರಿಯೆ ಈ ತತ್ತ್ವನಿಷ್ಠನಿಯಾದ ಅವನಿಂದ ಸಾಧಿಸಲಾಗದ ಕೆಲಸವೆಂಬುದೇ ಇಲ್ಲ."

"ಅಂದರೆ ಒಬ್ಬೊಬ್ಬ ಮಿಲಿಟರಿ ಅಧಿಕಾರಿಯೂ ದಕ್ಷತೆಯ, ಪ್ರಾಮಾಣಿಕತೆಯ ಮೂರ್ತರೂಪವೆಂದು ನೀವು ಹೇಳುವುದೇ ?"

"ಅದಕ್ಕೇನು ಸಂಶಯ ? ಸಮಸ್ಯೆಯ ವಿಶ್ಲೇಷಣೆ, ಪರಿಹಾರಕ್ಕಾಗಿ ಒಂದು ಯೋಜನೆ, ಅದರ ನಿರ್ವಹಣೆಗೆ ಸೈನಿಕ ಸಿಬ್ಬಂದಿಗಳ ನೇಮಕ, ತರುವಾಯ ಕ್ರಮಪ್ರಕಾರ ಕ್ರಿಯಾ ತತ್ಪರತೆ. ಇಂಥ ಮಿಲಿಟರಿ ವಿಧಾನದಲ್ಲಿ ಅಪವ್ಯಯವೆಂಬುದಿಲ್ಲ. ಗುರಿಸಾಧನೆ ಖಚಿತ. ಯುದ್ಧವೆಂದರೇನು ಸಾಮಾನ್ಯವೇ ? ಅದನ್ನೇ ಮಾಡಿ ಜಯ ಸಾಧಿಸುವ ಸೈನಿಕನಿಗೆ ಸಾಧ್ಯವಾಗದ್ದು ಬೇರಾವುದಿದೆ ?"

"ಅವನು ಯುದ್ಧಪರಿಣತನೇನೋ ಇರಬಹುದು. ಆದ ಮಾತ್ರಕ್ಕೆ ವ್ಯಾವಹಾರಿಕ ಪ್ರಪಂಚದ ಇತರ ಸಮಸ್ಯೆಗಳ ಎದುರು ಅವನೊಬ್ಬ ಅಜಾತಶತ್ರುವೆಂದು ನಾನು ಒಪ್ಪಲು ತಯಾರಿಲ್ಲ."

"ನಿಮ್ಮನ್ನವನು ಒಪ್ಪುವಂತೆ ಮಾಡುತ್ತಾನೆ, ಮಾಡಿಯೇ ಮಾಡುತ್ತಾನೆ."

"ಹೇಗೆ ? ವಾದಮಂಡನೆಯಿಂದಲೇ ?"

"ಸ್ವಾಮೀ—ಈ ವಾದ ವಾದ ವಾದ ಇದನ್ನು ಕೇಳಿ ಕೇಳಿ ಸಾಕಾಗಿಹೋಯಿತು. ವಿಶ್ವದ ಪರಮ ಶತ್ರುಗಳು ಈ ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುವವರು. ಇವರ ಜೀವನದ ಪರಮೋದ್ದೇಶ ಅಭಿಪ್ರಾಯ ವಿನಿಮಯ. ಎಂದರೆ ಮಾತು ಮಾತು, ಕೆಲಸಕ್ಕೆ ಬಾರದ ಮಾತು. ಇದರಿಂದ ಎಷ್ಟು ಕಾಲಹರಣ. ಯೋಚನೆ ಮಾಡಿ. ಒಂದು ಹುಕುಂ ಒಂದು ಕೆಲಸ ಎಂಬುದು ಜಾರಿಯಲ್ಲಿ ಬಂದಿದ್ದರೆ ಎಷ್ಟು ಸಮಯ, ಶಕ್ತಿ ಉಳಿತಾಯವಾಗಿ ದೇಶ ಪ್ರಗತಿ ಆಗುತ್ತಿತ್ತು!"

"ಒಂದು ಹುಕುಂ ಅಂದಿರಲ್ಲ, ಅದನ್ನು ಕೊಡುವವನು ಯಾರು ?"

"ಅವನೇ ಮಿಲಿಟರಿ ಶಿಕ್ಷಣ ಪಡೆದ ಅಧಿಕಾರಿ. ಮಿಲಿಟರಿಯ ಸಂವೃತ ವ್ಯವಸ್ಥೆಯಲ್ಲಿ ಇದೆಲ್ಲ ಸ್ವಯಂಚಾಲಿತವಾಗಿ ನೆರವೇರುತ್ತದೆ."

"ಈಗ ನೀವು ಮೂರು ತಿಂಗಳ ಕಾಲ ಆ ಮಿಲಿಟರಿ ಕೇಂದ್ರದಲ್ಲಿ ಮಿದುಳುಮೀಹ ಮಾಡಿ ಬಂದಂತೆ ನನಗೆ ಅನ್ನಿಸುತ್ತದೆ. ಮುಂದೆ ನೋಡೋಣ. ಎಲ್ಲಿಯ ತನಕ ಈ ಖಚಿತಾಭಿಪ್ರಾಯ ನಿಮ್ಮಲ್ಲಿರುವುದೆಂದು."

"ಇಲ್ಲೇ ನೀವು ತಪ್ಪಿದ್ದು. ವಾದ ಮಾಡಲು ಸಾಧ್ಯವಾಗದಾಗ ಬೇರೆ ದಾರಿ ಹಿಡಿಯುವುದು. ಅಂತೂ ಕಡೆಗೆ ಕರುಣಾಳು ಕದಿಲಾಯುನಲಿ ತಪ್ಪಿಲ್ಲವಷ್ಟೆ!"

ಶಿಕ್ಷಣದ ಮೊದಲ ದಿವಸ

ಮರುದಿವಸ ನಾನು ಕಾಲೇಜಿಗೆ ಹೋಗಿ ಪ್ರಿನ್ಸಿಪಾಲರಿಗೆ ಗೌರವ ಅರ್ಪಿಸಿ ಅಧ್ಯಾಪಕರ ಕೊಠಡಿಗೆ ನಡೆದೆ. ಎಷ್ಟು ವ್ಯತ್ಯಾಸವಾಗಿ ಹೋಯಿತು, ಈ ಮೂರು ತಿಂಗಳಲ್ಲಿ—ಮೊದಲಿನ ಅಳುಕು ಈಗ ನನಗಿಲ್ಲ. ನನ್ನೊಳಗೆ ಸೇರಿಕೊಂಡಿದ್ದ ಅದುವರೆಗೆ ಸುಪ್ತವಾಗಿದ್ದ ಯಾವುದೋ ಶಕ್ತಿ ಈಗ ಮೈ ಕೊಡಹಿ ಎದ್ದಂತಿತ್ತು. ಯಾವ ಕಾರ್ಯವೂ ನನಗೆ ಅಸಾಧ್ಯವಲ್ಲ ಎಂದು ಅಂತರ್ವಾಣಿ ನುಡಿದರೆ ಅಂಥದ್ದೊಂದನ್ನು ಮಾಡಿ ತೋರಿಸು ಎಂದು ಮರುವಾಣಿ ಮಿಡಿಯಿತು. ಏನು ಮಾಡಲಿ ಎಂದು ಮಾತ್ರ ತಿಳಿಯು ಲಿಲ್ಲ.

ನನ್ನ ನಡಿಗೆ ಯಾವಾಗಲೂ ಚುರುಕು. ಅದಕ್ಕೆ ಈಗ ಮಿಲಿಟೆರಿ ಒಪ್ಪ ಸೇರಿತ್ತು. ಕೈಬೀಸಿ ನಡೆದು ಲಟಪಟನೆ ನಿಂತು ಕೃಷ್ಣಮೂರ್ತಿ ಮೊದಲಾದ ಹಿರಿಯ ಪ್ರಾಧ್ಯಾಪಕರಿಗೆ ವಂದನೆ ಸಲ್ಲಿಸಿದೆ. ಜಗಲಿಯ ಮೇಲೆ ಅಡ್ಡಾಡುತ್ತಿದ್ದ ವಿದ್ಯಾರ್ಥಿಗಳು ಬೆಕ್ಕಸ ಬೆರಗಾಗಿ ನನ್ನ ಚಲನವಲನ ಗಮನಿಸುತ್ತಿದ್ದುದು ನನಗೆ ತಿಳಿದಿತ್ತು; ಆದ್ದರಿಂದ ಸ್ವಲ್ಪ ನಾಟಕೀಯತೆಯನ್ನು ಮಿಶ್ರಿಸಲು ಮರೆಯಲಿಲ್ಲ. ನೋಡುವವರಿದ್ದಾಗ ಮಾತ್ರವಲ್ಲವೇ ಕೋಡಂಗಿ ವೇಷದ ಸಾರ್ಥಕ್ಯ?

ಅಷ್ಟರಲ್ಲಿಯೇ ಮಿಲಿಟೆರಿ ಸಮವಸ್ತ್ರಧಾರಿ ಜಮಾದಾರನೊಬ್ಬ (ಜೆಸಿಓ) ನನ್ನೆಡೆಗೆ ನೇರವಾಗಿ ನಡೆದುಬಂದು ಥಟ್ಟನೆ ನಿಂತು ಮಿಲಿಟೆರಿ ವಂದನೆ ಸಲ್ಲಿಸಿದ. ನಾನು ಅವನಿಗೆ ಯುಕ್ತ ಪ್ರತಿವಂದನೆಯನ್ನು ಮಿಲಿಟೆರಿ ಕ್ರಮದಲ್ಲಿ ನೀಡಿ "ನೀವು ಹೇಗಿದ್ದೀರಿ ಸಾಬ್ ?" ಎಂದು ಕುಶಲಪ್ರಶ್ನೆ ಮಾಡಿದೆ.

"ಬಲು ಚೆನ್ನಾಗಿದ್ದೇನೆ, ಸಾರ್."

"ನಿಮ್ಮ ಹೆಸರೇನು ? ಎಂದು ಬಂದಿರಿ ? ಏನು ಮಾಡುತ್ತಿದ್ದೀರಿ ? ನನ್ನನ್ನು ಹೇಗೆ ಗುರುತಿಸಿದಿರಿ ?"

ಅವನಿಂದ ತಿಳಿದು ಬಂದ ವಿವರಗಳಿಷ್ಟು. ಅವನ ಹೆಸರು ಜಮಾದಾರ್ ಶ್ರೀಧರನ್, ಮಲೆಯಾಳಿ. ಮದರಾಸು ರೆಜಿಮೆಂಟಿನವನೇ. ನನ್ನನ್ನು ಎಲಿಅರ್‌ಸಿಯಲ್ಲಿ ನೋಡಿದ್ದನಂತೆ. ಅವನನ್ನೂ ಇಬ್ಬರು ಎನ್‌ಸಿಓಗಳನ್ನೂ ನಮ್ಮ ಕಾಲೇಜಿನ ಹಾಗೂ ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜಿನ ಎನ್‌ಸಿಸಿ ದಳಗಳನ್ನು ನೋಡಿಕೊಳ್ಳಲು ನೇಮಿಸಿ ಮಂಗಳೂರಿಗೆ ವರ್ಗ ಮಾಡಿದ್ದರಂತೆ. ನಮ್ಮ ಕಾಲೇಜಿಗೆ ೭೪ ಮಂದಿ ಕ್ಯಾಡೆಟುಗಳ ಒಂದು ದಳ ಮಂಜೂರು ಮಾಡಿರುವರೆಂದೂ ಅವರನ್ನು ಆರಿಸಲು ತಾನು ಎರಡು ದಿವಸಗಳ ಹಿಂದೆ ಪ್ರಯತ್ನ ಮಾಡಿದುದಾಗಿಯೂ ತಿಳಿಸಿದ. ೧,೫೦೦ ವಿದ್ಯಾರ್ಥಿಗಳ ಆ ಮಹಾಕಾಲೇಜಿನಲ್ಲಿ ೭೦೦ಕ್ಕೂ ಮಿಕ್ಕ ಹುಡುಗರು ಎನ್‌ಸಿಸಿ ಸೇರಲು ಅಭ್ಯರ್ಥಿಗಳಾಗಿ ಬಂದಿದ್ದರಂತೆ. ಅವರ ಹೆಸರು, ಕ್ಲಾಸು ಮುಂತಾದ ವಿವರ ತಯಾರು ಮಾಡುವುದೇ ಈತನಿಂದ ಪೂರೈಸಲಾಗದ ಹೊರೆಯಾಗಿತ್ತು. ಏನು ಮಾಡುವುದೆಂದು ತಿಳಿಯದೆ ಕಂಗಾಲಾಗಿದ್ದ.

"ಇಂದು ಸಾಯಂಕಾಲ ನಾನೇ ಅವರನ್ನು ನೋಡುತ್ತೇನೆ" ಎಂದೆ ಅವನಿಗೆ, ನಮ್ಮ

ಮಾತುಕತೆಗಳನ್ನು ಆಲಿಸುತ್ತಿದ್ದ ಇತರರ ಎದುರು, ಸ್ವಲ್ಪ ಗಟ್ಟಿಯಾಗಿಯೇ ಹೇಳಿದೆ. ಇದು ಅಧಿಕಾರದ ಚಿಹ್ನೆಯಲ್ಲ, ಏನು ಮಾಡುವುದೆಂದು ತಿಳಿಯದೇ ಆದರೆ ಹಾಗೆ ತೋರಿಸಿಕೊಳ್ಳಲು ಇಚ್ಛೆಯಿಲ್ಲದೇ ಹುಚ್ಚು ಧೈರ್ಯದಿಂದ ಗರ್ಜಿಸಿದ ಅಬ್ಬರ!

ಈ "ಒಂದು ಹುಕುಂ"ನ ಮುಂದಿನ ಹೆಜ್ಜೆ "ಒಂದು ಕ್ರಿಯೆ" ಆಗಲೇಬೇಕಷ್ಟೆ. ನೋಟೀಸು ಬರೆದು ಕ್ಲಾಸುಗಳಿಗೆ ಕಳಿಸಿದ್ದಾಯಿತು; ನೋಟೀಸು ಬೋರ್ಡಿನ ಮೇಲೆ ಹಾಕಿದ್ದಾಯಿತು—ಎನ್‌ಸಿಸಿ ಸೇರಲು ಇಚ್ಛೆ ಇರುವವರು ಸಾಯಂಕಾಲ ೪-೪೫ ಗಂಟೆಗೆ ಕಾಲೇಜು ಮೈದಾನದಲ್ಲಿ ಹಾಜರಿರತಕ್ಕದ್ದೆಂದು.

ಮಧ್ಯಾಹ್ನದ ಮೇಲೆ ನನಗೆ ಕ್ಲಾಸ್ ಪಾಠವಿಲ್ಲದಿದ್ದುದರಿಂದ ತಕ್ಕಷ್ಟು ಯೋಚನೆ ಮಾಡಿ ಒಂದು ಯೋಜನೆ ಸಿದ್ಧಪಡಿಸಲು ಬಿಡುವು ದೊರೆಯಿತು. ಹೊಸತಾಗಿ ಒಂದು ಕಾರ್ಯಕ್ರಮ ಆರಂಭಿಸುವವನಿಗೆ ತೊಂದರೆ ತಾಪತ್ರಯಗಳಷ್ಟೇ ಇರಲಿ ಅವನ್ನೆಲ್ಲ ಚಕ್ರಬಡ್ಡಿಸಮೇತ ಭರ್ತಿ ಮಾಡುವ ಒಂದು ಯೋಗ ಅವನಿಗೆ ಮಾತ್ರ ಮೀಸಲು—ಅವನು ತುಳಿದದ್ದು ದಾರಿ ಆಗುತ್ತದೆ, ಅವನು ನುಡಿದದ್ದು ವೇದವಾಗುತ್ತದೆ, ಅವನ ವರ್ತನೆ ಸಂಪ್ರದಾಯವಾಗುತ್ತದೆ. ಇವುಗಳಿಂದ ದೊರೆಯುವ ಸಂತೋಷಕ್ಕೆ ಮಿತಿಯಿಲ್ಲ. ಇದು ನನಗೆ ತಿಳಿದಿತ್ತು. ಆದ್ದರಿಂದ ನಾನು ಎಚ್ಚರಿಕೆಯಿಂದ ಆದರೂ ದಕ್ಷತೆ ಕ್ಷಿಪ್ರತೆ ಪ್ರಾಮಾಣಿಕತೆಗಳಿಗೆ ಎಳ್ಳಷ್ಟೂ ಎಲ್ಲಿಯೂ ಚ್ಯುತಿ ಬಾರದಂತೆ ಮುನ್ನಡೆಯಬೇಕೆಂದು ನಿರ್ಧರಿಸಿದೆ.

ಜೆಮಾದಾರ್ ಶ್ರೀಧರನ್ ಮತ್ತು ಇಬ್ಬರು ಎನ್‌ಸಿಓಗಳು ಸಾಯಂಕಾಲದ ೪ ಗಂಟೆಗೇ ಹಾಜರಾದರು. ೪-೪೫ ಗಂಟೆಗೆ ಅಲ್ಲಿ ಬಂದು ಸೇರಿದ ವಿದ್ಯಾರ್ಥಿಗಳ ಸಂಖ್ಯೆ ದಂಗು ಬಡಿಸುವಂತಿತ್ತು. ಒಂದು ಸೇರು ಸಾಸಿವೆ ಕಾಳುಗಳನ್ನು ನೆಲದ ಮೇಲೆ ಚೆಲ್ಲಿದರೆ ಅವು ಎಷ್ಟು ಕ್ರಮವಾಗಿ ಹರಡಿಕೊಂಡಿರಬಹುದೋ ಹಾಗೆ ಆ ವಿದ್ಯಾರ್ಥಿಗಳು ನಿಂತಿದ್ದರು.

ಕತ್ತಲಿನಿಂದ ಬೆಳಕಿನೆಡೆಗೆ; ಗೊಂದಲದಿಂದ ಕ್ರಮದೆಡೆಗೆ.

"ಕ್ಲಾಸ್ ಪ್ರಕಾರ, ನಾಲ್ಕನೆಯ ವರ್ಷದವರು ಬಲ ಕೊನೆಗೆ, ಮೂರನೆಯ ವರ್ಷದವರು ಅವರ ಎಡಕ್ಕೆ, ಎರಡನೆಯ ವರ್ಷದವರು ಅವರ ಎಡಕ್ಕೆ ಮತ್ತು ಒಂದನೆಯ ವರ್ಷದವರು ಎಡಕೊನೆಯಲ್ಲಿ ನಿಲ್ಲಿ."

ಆ ಹುಡುಗರಲ್ಲಿದ್ದ ಆಸಕ್ತಿ ಅನ್ಯಾದೃಶವಾದದ್ದು. ಎನ್‌ಸಿಸಿ ಅಂದರೇನೆಂದು ಅವರಲ್ಲಿ ಬಲು ಮಂದಿಗೆ ತಿಳಿದಿರಲಿಲ್ಲ—ಕೊಡಗಿನ ಹೈಸ್ಕೂಲುಗಳಿಂದ ಬಂದಿದ್ದ ಬೆರಳೆಣಿಕೆಯ ವಿದ್ಯಾರ್ಥಿಗಳನ್ನು ಬಿಟ್ಟು. ಎನ್‌ಸಿಸಿ ಅಂದರೆ ಒಂದು ಸ್ವರ್ಗ. ಅದಕ್ಕೆ ತಮಗೆ ಪ್ರವೇಶ ದೊರಕಿಸಿಕೊಳ್ಳಲೇಬೇಕು ಎಂದು ಅವರ ಆಕಾಂಕ್ಷೆ. ಹೀಗಾದ್ದರಿಂದ ಅಲ್ಲಿ ಸೇರಿದ್ದ ೬೦೦-೭೦೦ ಮಂದಿಯೂ ನಿಶ್ಶಬ್ದವಾಗಿ ವಿಧೇಯತೆಯಿಂದ ನನ್ನ ಆಜ್ಞೆ ಪಾಲಿಸುತ್ತಿದ್ದರು.

"ನಾಲ್ಕನೆಯ ವರ್ಷದವರಿಗೆ ಎನ್‌ಸಿಸಿಗೆ ಪ್ರವೇಶವಿಲ್ಲ. ಇದು ಎರಡು ವರ್ಷಗಳ ಶಿಕ್ಷಣಕ್ರಮ. ಆದ್ದರಿಂದ ನೀವು ದಯವಿಟ್ಟು ಹೋಗಿ. ನಿಮಗಾಗಿರುವ ಹತಾಶೆಗೋಸ್ಕರ ನಾನು ದುಃಖಿಸುತ್ತೇನೆ."

ಒಂದು ನೂರು ಮಂದಿ ಮೈದಾನದಿಂದ ಚದರಿ ದೂರದಲ್ಲಿ ಗುಂಪು ಗುಂಪಾಗಿ ನಿಂತು ಉಳಿದವರ ಭಾಗ್ಯವನ್ನು ನೋಡಿ ಕರುಬನ್ನೋ ವ್ಯಥೆಯನ್ನೋ ಪ್ರದರ್ಶಿಸುತ್ತಿದ್ದರು.

"ಜೂನಿಯರ್ ಡಿವಿಶನ್ ಎನ್‌ಸಿಸಿ ಶಿಕ್ಷಣ ಪಡೆದವರೆಲ್ಲ ಪ್ರತ್ಯೇಕವಾಗಿ ನಿಲ್ಲಿ."

ಹತ್ತು ಜನ ಬೇರೆಯಾಗಿ ನಿಂತರು. ಆದರೆ ೫೦೦ನ್ನು ಮಿಕ್ಕಿ ಇತರರು ಇರುವರಲ್ಲ— ಇವರನ್ನೇನು ಮಾಡುವುದು ?

"ಮಿತ್ರರೇ ! ಎನ್‌ಸಿಸಿ ಟ್ರೈನಿಂಗಿನ ವಿಚಾರ ಸ್ವಲ್ಪ ವಿವರಿಸುತ್ತೇನೆ ಕೇಳಿ. ಇದು ಮುಖ್ಯವಾಗಿ ದೈಹಿಕ ಶಿಕ್ಷಣದ ಒಂದು ವಿಧಾನ. ಹಗಲು ಇರುಳು ಚಳಿ ಮಳೆ ಎಂದು ಲೆಕ್ಕಿಸದೇ ಆಹಾರ ವಿಶ್ರಾಂತಿ ದೊರೆಯಿತೋ ಇಲ್ಲವೋ ಎಂದು ಪರಿಗಣಿಸದೇ ಹತ್ತಿಪ್ಪತ್ತು ಮೈಲು ಏಕ್‌ದಂ ನಡೆಯಲು ಬೆಟ್ಟಗುಡ್ಡ ಏರಿ ಇಳಿಯಲು ಸಿದ್ಧರಾದವರಿಗೆ ಮಾತ್ರ ಇಲ್ಲಿ ಪ್ರವೇಶ. ಇದು ಎಂದೂ ಸಂಪತ್ತಿಗೆ ಅಲ್ಲ. ಇದು ಎಂದೂ ವಾರಾಂತ್ಯದ ಸಮುದ್ರದಂಡೆಯ ಸುಖಪ್ರಯಾಣವಲ್ಲ. ಆದ್ದರಿಂದ ಪ್ರಾಮಾಣಿಕವಾಗಿ ನಿಮ್ಮನ್ನು ಪ್ರಶ್ನಿಸಿಕೊಳ್ಳಿ—ನಿಮ್ಮಲ್ಲಿ ಆ ಸಾಮರ್ಥ್ಯವಿದೆಯೇ ಎಂದು. ಇದ್ದರೆ ನಿಲ್ಲಿ. ಇಲ್ಲವಾದರೆ ಈಗಲೇ ಅದನ್ನು ಒಪ್ಪಿಕೊಂಡು ಇಲ್ಲಿಂದ ನಿಷ್ಕ್ರಮಿಸಿ."

ಎಲಾ ! ಅಲ್ಲಾಡಿದವರು ಯಾರೂ ಇಲ್ಲ. ಭೇಷ್ ಇಂಥ ಹುಡುಗರ ಆಫಿಸರ್ ಆಗುವುದು ಪರಮಸೌಭಾಗ್ಯ ಎಂದು ಒಂದು ಸಲ ಅನ್ನಿಸಿತು. ಆದರೆ ಇವರಿಂದ ಎಪ್ಪತ್ತ ನಾಲ್ಕನ್ನು ಮಾತ್ರ ಆರಿಸುವುದು ಹೇಗೆ ?

"ಒಂದು ಕಾಗದದ ಹಾಳೆಯ ಮೇಲೆ ನಿಮ್ಮ ಹೆಸರು ಕ್ಲಾಸ್ ಪ್ರಾಯ, ವಿಳಾಸ ಈ ವಿವರಗಳನ್ನು ಬ್ಲಾಕ್ ಅಕ್ಷರಗಳಲ್ಲಿ ಬರೆಯಿರಿ."

ನೋಟ್ ಪುಸ್ತಕಗಳಿಂದ ಹಾಳೆ ಹರಿದು ಆ ಕಾರ್ಯ ಮುಗಿಸಿದರು. ಒಂದೊಂದು ಕ್ಲಾಸಿನವರೂ ಹೆಸರುಗಳ ಅಕ್ಷರಮಾಲಾನುಸಾರ ಹಾಳೆಗಳನ್ನು ಜೋಡಿಸಿಕೊಂಡರೆ ನನ್ನ ಮುಂದಿನ ಕೆಲಸ ಸುಗಮವಾಗುವುದೆಂದುಕೊಂಡೆ. ಒಂದೊಂದು ಕ್ಲಾಸಿಗೂ ಇಬ್ಬಿಬ್ಬರು ವಿದ್ಯಾರ್ಥಿನಾಯಕರನ್ನು ಆರಿಸಿ A, B, C, D ಎಂದು ಮುಂತಾಗಿ ಅವರು ಒಂದೊಂದಾಗಿ ಆ ಅಕ್ಷರಗಳನ್ನು ಕೂಗಬೇಕೆಂದೂ ಹಾಗೆ ಕೂಗಿದಾಗ ಆಯಾ ಅಕ್ಷರಗಳಿಂದ ಪ್ರಾರಂಭ ವಾಗುವ ಹೆಸರುಳ್ಳವರು ತಮ್ಮ ಹಾಳೆಗಳನ್ನು ಈ ನಾಯಕರಿಗೆ ಒಪ್ಪಿಸಬೇಕೆಂದೂ ವಿವರಿಸಿ ಹೇಳಿದೆ. ಮುಂದಿನ ೧೫ ಮಿನಿಟುಗಳಲ್ಲಿ ಈ ಮಹಾಕಾರ್ಯ ಮುಗಿದು ಹೋಗಿತ್ತು. ಈಗ ಸುಮಾರು ೬೦೦ ಹಾಳೆಗಳು ಕ್ಲಾಸು ಪ್ರಕಾರ ಒಂದೊಂದು ಕ್ಲಾಸಿನಲ್ಲೂ ಅಕ್ಷರ ಮಾಲಾನುಸಾರ ಅಳವಡಿಸಲ್ಪಟ್ಟು ನನ್ನ ಕೈಸೇರಿದುವು.

"ನಾಡಿದ್ದು ಶನಿವಾರ ಕಾಲೇಜಿಗೆ ರಜೆಯಷ್ಟೆ. ಅಂದು ಬೆಳಗ್ಗೆ ೭ ಗಂಟೆಗೆ ಸರಿಯಾಗಿ ಒಂದನೆಯ ಮತ್ತು ಎರಡನೆಯ ವರ್ಷದವರೂ ಆದಿತ್ಯವಾರ ಅಷ್ಟೇ ಹೊತ್ತಿಗೆ ಮೂರನೆಯ ವರ್ಷದವರೂ ಚಡ್ಡಿ, ಬನಿಯನ್, ಕ್ಯಾನ್ವಾಸ್ ಶೂಧಾರಿಗಳಾಗಿ ಇಲ್ಲಿ ಹಾಜರಾಗತಕ್ಕದ್ದು. ೧೧ ಗಂಟೆಯ ತನಕ ನಿಮಗೆ ವಿವಿಧ ರೀತಿಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಅವುಗಳಲ್ಲಿ ಉತ್ತೀರ್ಣರಾದವರಿಗೆ ಮುಂದಿನ ಹಂತ ಹೇಳುತ್ತೇನೆ. ಒಂದು ವಿಚಾರ—೭ ಗಂಟೆ ಎಂದರೆ ನೀವು ೬-೫೦ಕ್ಕೇ ಹಾಜರಾಗಿರತಕ್ಕದ್ದು. ತಡವಾಗಿ ಬರುವವರಿಗೆ ಇಲ್ಲಿ ಪ್ರವೇಶವಿಲ್ಲ. ಯಾವುದೇ ಕಾರಣದಿಂದ ನಿಮಗೆ ನಿಗದಿ ಮಾಡಿರುವ ದಿವಸಗಳಂದು ಗೈರುಹಾಜರಾದರೂ ನಿಮ್ಮ ಅವಕಾಶ ಬರಖಾಸ್ತಾಗುತ್ತದೆ."

ಶನಿವಾರಕ್ಕಾಗುವಾಗ ಅಂದು ಬರಲಿರುವವರ ಹಾಜರಿಪಟ್ಟಿ ತಯಾರಿಸಿಕೊಂಡು ಬಂದೆ.

ಸುಮಾರು ೩೦೦ ಮಂದಿ ಬರಬೇಕಾದವರಲ್ಲಿ ಕ್ಲಿಪ್ತ ವೇಳೆಗೆ ಬಂದಿದ್ದವರು ೨೦೦ ಮಂದಿ ಮಾತ್ರ. ತಡವಾಗಿ ಬಂದ ಹತ್ತಿಪ್ಪತ್ತು ಜನರಿಗೆ ಪ್ರವೇಶ ನೀಡಲಿಲ್ಲ. ಈ ೨೦೦ ಮಂದಿಯನ್ನು ೨೦ರ ಹತ್ತು ಗುಂಪುಗಳಾಗಿ ವಿಭಾಗಿಸಿ ಅವರಿಗೆ ಓಟ, ವಿವಿಧ ಬಗೆಯ ಮಿಲಿಟರಿ ಸಾಮೂಹಿಕ ಆಟಗಳು, ಪುಲ್ ಅಪ್ಸ್, ಹೈ ಜಂಪ್, ಲಾಂಗ್ ಜಂಪ್ ಮುಂತಾದವನ್ನು ವಿಧಿಸಲಾಯಿತು. ಪ್ರತಿಯೊಂದರಲ್ಲಿಯೂ ಜಳ್ಳುಗಳನ್ನು ಬಿಡುತ್ತ ಕಾಳುಗಳನ್ನು ಹೆಕ್ಕುತ್ತ ಸಾಗಿದಂತೆ ಉಳಿದವರು ಒಂದೈವತ್ತು ಮಂದಿ. ಆದಿತ್ಯವಾರದ ಪರೀಕ್ಷೆಯಲ್ಲಿ ಸಿಕ್ಕಿದವರೂ ಸುಮಾರು ಅಷ್ಟೇ ಮಂದಿ. ಈ ನೂರು ವಿದ್ಯಾರ್ಥಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಅವರನ್ನೆಲ್ಲ ವೈಯಕ್ತಿಕವಾಗಿ ಪರೀಕ್ಷಿಸಿ ಅಂತಿಮವಾಗಿ ೭೪ ಮಂದಿಯನ್ನು ಆರಿಸಿದಾಗ ಗೆದ್ದವರು ಅವರಲ್ಲ—ನಾನು!

ಡಿಟಾಚ್‌ಮೆಂಟ್ ೪ನೆಯ ಮದರಾಸ್ ಬೆಟಾಲಿಯನ್ ಎನ್‌ಸಿಸಿ

ನನ್ನ ದಳದ ಹೆಸರು ಡಿಟಾಚ್‌ಮೆಂಟ್, ೪ನೆಯ ಮದರಾಸ್ ಬೆಟಾಲಿಯನ್ ಎನ್‌ಸಿಸಿ. ನಾನದರ ಆಫಿಸರ್ ಕಮಾಂಡಿಂಗ್. ೪ನೆಯ ಮದರಾಸ್ ಬೆಟಾಲಿಯನ್ ಎನ್‌ಸಿಸಿಯ ಮುಖ್ಯ ಕಛೇರಿ ಇದ್ದದ್ದು ಪಾಲ್ಘಾಟಿನಲ್ಲಿ. ಅದರ ಆಫಿಸರ್ ಕಮಾಂಡಿಂಗ್ ಕ್ಯಾಪ್ಟನ್ ವಿ. ವಿ. ಕೆ. ನಂಬಿಯಾರರು. ನಾನು ಕಾಲೇಜು ಸೇರಿದ ಮರುದಿನವೇ ಅವರಿಂದ ಒಂದು ಖಾಸಗಿ ಪತ್ರ ನನಗೆ ಬಂದಿತ್ತು. ನನಗೆ ಅವರು ಸ್ವಾಗತವನ್ನೂ ಶುಭವನ್ನೂ ಕೋರಿದ್ದರು. ಎಂಆರ್‌ಸಿಯ ವರದಿ ಪ್ರಕಾರ ನನಗೆ A X ದರ್ಜೆ ಬಂದುದನ್ನು ಅವರು ಉಲ್ಲೇಖಿಸಿ ನನ್ನನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದ್ದರು. ಮುಂದಿನ ವಾರ ತಾನು ಸ್ವತಃ ಮಂಗಳೂರಿಗೆ ಬರುವುದಾಗಿಯೂ ಆ ತನಕ ಶಿಕ್ಷಣ ನಡೆಸುತ್ತ ಇರಬಹುದೆಂದೂ ತಿಳಿಸಿದ್ದರು.

ಅವರು ಬರುವ ದಿವಸ ಸಾಯಂಕಾಲವೇ ನಮ್ಮ ಡಿಟಾಚ್‌ಮೆಂಟಿನ ಉದ್ಘಾಟನೆ ಮಾಡುವುದೆಂದು ನಿರ್ಧರಿಸಿ ಹಾಗೆಂದು ಪ್ರಿನ್ಸಿಪಾಲರಿಗೆ ಹೇಳಿದೆ. ಅವರು ಸಂತೋಷದಿಂದ ಸಮ್ಮತಿ ಇತ್ತರು. "ಪಾಠ ಪ್ರವಚನಗಳಿಗೆ ಮಾತ್ರ ತೊಂದರೆ ಬರಬಾರದು" ಇದು ಅವರ ಎಚ್ಚರಿಕೆಯ ಮಾತು. ಆ ಒಂದು ವಾರ ಪ್ರತಿ ಸಂಜೆಯೂ ಸಿವಿ (ನಾಗರಿಕ) ಉಡುಪಿನಲ್ಲಿಯೇ (ಸಮವಸ್ತ್ರ ಬಂದಿರಲಿಲ್ಲ) ನಮ್ಮ ೭೪ ಮಂದಿಗೂ ಶಿಕ್ಷಣ ನೀಡಿದ್ದಾಯಿತು. ನಾನು ಹತ್ತು ಸೋಪಾನ ಹಾರುವಲ್ಲಿ ಈ ಹುಡುಗರು ಇಪ್ಪತ್ತು ಹಾರುವವರು. ಅಷ್ಟು ಉತ್ಸಾಹ ಅವರಲ್ಲಿ. ಟ್ರೈನಿಂಗಿನ ಕ್ರಮವೇನು? ಕೇವಲ ಕವಾಯತು. ಇದೇನು ಸಾಮಾನ್ಯವೆಂದು ಭಾವಿಸಬಾರದು. ಒಂದು ದಳದ ಪ್ರತಿ ಯೋಧನೂ ನಿಖರವಾಗಿ ಕ್ಲಿಪ್ತವಾಗಿ ಕವಾಯತಿನ ವಿವಿಧ ವಿಧಿಗಳನ್ನು ನಿರ್ವಹಿಸುವುದು, ಸಾವಧಾನ ಸ್ಥಿತಿಯಲ್ಲಿ ಸ್ಥಿರತೆ ಅಚಲತೆಗಳನ್ನು ದೀರ್ಘಕಾಲ ಪ್ರದರ್ಶಿಸುವುದು, ನಡಿಗೆಯಲ್ಲಿ ಲವಲವಿಕೆ ಹಾಗೂ ಸುಟಿತನ ವ್ಯಕ್ತಪಡಿಸುವುದು. ಇವೆಲ್ಲ ನಿರಂತರ ಕ್ರಮಬದ್ಧ ಶಿಕ್ಷಣದಿಂದ ಮಾತ್ರ ಸಾಧ್ಯ. ಹೀಗಲ್ಲದಿದ್ದರೆ ದನಗಳ ಹಿಂಡಿಗೂ ಜನರ ದಳಕ್ಕೂ ಕಾಲುಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡೀತೇ ವಿನಾ ಬೇರಾವುದರಲ್ಲೂ ಅಲ್ಲ.

ಆ ಸಾಯಂಕಾಲ ಕಾಲೇಜಿನ ಎದುರಿನ ಭವ್ಯ ಮೈದಾನದಲ್ಲಿ ನಮ್ಮ ೭೪ ಮಂದಿಯು

ದಳ ಪ್ರಿನ್ಸಿಪಾಲರಿಗೆ ಗೌರವ ವಂದನೆ ಸಲ್ಲಿಸಿತು. ಎಲ್ಲರಿಗೂ ಬಿಳಿ ಉಡುಪು ಕರಿ ಶೂಗಳು ಕಡ್ಡಾಯವೆಂದು ಮೊದಲೇ ವಿಧಿಸಿದ್ದೆ. ಇದೂ ಒಂದು ಬಗೆಯ ಸಮವಸ್ತ್ರ. ನಾನು ದಳದ ಮುಖ್ಯಸ್ಥ. ಕ್ಯಾಪ್ಟನ್ ನಂಬಿಯಾರರು ಸ್ವಾಗತ ಭಾಷಣದಲ್ಲಿ ಎನ್‌ಸಿಸಿಯ ಉದ್ದೇಶಗಳನ್ನೂ ವಿಧಾನಗಳನ್ನೂ ಚೆನ್ನಾಗಿ ವಿವರಿಸಿದ್ದಲ್ಲದೇ (ವಾಸ್ತವಿಕವಾಗಿ ನನಗೂ ಆ ವಿಚಾರ ಏನೂ ತಿಳಿದಿರಲಿಲ್ಲ) ನಮ್ಮ ಹುಡುಗರು ಪ್ರದರ್ಶಿಸಿದ ಅತ್ಯುನ್ನತ ಮಟ್ಟದ ಕವಾಯತಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಪ್ರಿನ್ಸಿಪಾಲರ ಉದ್ಘಾಟನ ಭಾಷಣ ದಲ್ಲಿ ಹೇಗೆ ಈ ವಿಶಿಷ್ಟವಾದ ಎನ್‌ಸಿಸಿ ದಳ ಕಾಲೇಜಿನ ಹಾಗೂ ಎನ್‌ಸಿಸಿಯ ಗೌರವ ಪ್ರತಿಷ್ಠೆಗಳನ್ನು ಸದಾ ಕಾಪಾಡಿಕೊಂಡು ಬರಬೇಕೆಂಬುದನ್ನು ಅವಧರಿಸಿದ್ದರು. "ಇಂದಿ ನಿಂದ ನಿಮ್ಮ ಪ್ರತಿಯೊಂದು ವರ್ತನೆಯೂ—ಮನೆಯಲ್ಲಿ, ಪೇಟೆಯಲ್ಲಿ, ಕಾಲೇಜಿನಲ್ಲಿ, ಎನ್‌ಸಿಸಿ ಶಿಕ್ಷಣ ರಂಗದಲ್ಲಿ—ಕಾಲೇಜಿನ ಹಾಗೂ ಎನ್‌ಸಿಸಿಯ ಹಿರಿಮೆಯನ್ನು ಎತ್ತಿ ತೋರಿಸುವಂತಿರಬೇಕು. ಇಂಥ ವರ್ತನೆ ನಿಮ್ಮ ಉಸಿರೇ ಆಗಬೇಕು. ನಿಮ್ಮ ಪ್ರಗತಿ ಯನ್ನು ಸದಾ ಸಂತೋಷದಿಂದ ಎದುರು ನೋಡುತ್ತಿರುತ್ತೇನೆ" ಎಂದು ಅವರು ಸಮಾ ರೋಪಿಸಿದರು.

ವಂದನಾರ್ಪಣೆ ಇಲ್ಲದೇ ಸಭೆ ಬರಖಾಸ್ತು ಆದದ್ದನ್ನೂ ಸಭಾಪೂರ್ವದಲ್ಲಿ ಪ್ರಾರ್ಥನೆ ಇಲ್ಲದ್ದನ್ನೂ ಹಾರತುರಾಯಿಗಳ ಗೌಜಿ ಇಲ್ಲದ್ದನ್ನೂ ಗಮನಿಸಿದ ಹಲವಾರು ಮಿತ್ರರು ಸಮ್ಮಿಶ್ರ ಅಭಿಪ್ರಾಯ ವ್ಯಕ್ತಪಡಿಸಿದರು. ಇದು ಮಿಲಿಟರಿ ವಿಧಾನವೆಂದು ಅವರಿಗೆಲ್ಲ ಸಮಾಧಾನ ಹೇಳಿದೆ. ಅಂತೂ ಕಾಲೇಜಿನಲ್ಲಿ (ವಾಸ್ತವಿಕವಾಗಿ ನನ್ನ ಜೀವನದಲ್ಲಿ) ಹೊಸ ತೊಂದು ಅಧ್ಯಾಯವನ್ನು ಈ ಸಮಾರಂಭ ಉದ್ಘಾಟಿಸಿತು.

ಕ್ಯಾಪ್ಟನ್ ನಂಬಿಯಾರರು ಒಂದು ದಿವಸವಿಡೀ ನನ್ನೊಡನೆ ಇದ್ದು ಎನ್‌ಸಿಸಿ ಆಡಳಿ ತೆಯ ಪೂರ್ಣ ಮಾಹಿತಿಯನ್ನು ಸವಿವರವಾಗಿ ತಿಳಿಸಿದರು. ಅವರೆಂದಿದ್ದ ಒಂದು ಮಾತು ನನಗೆ ಎಂದೂ ಮರೆಯಲಾರದು "ಉನ್ನತ ಮಟ್ಟದ ಪ್ರಾಮಾಣಿಕತೆ ಹಾಗೂ ಶಿಕ್ಷಣಯೋಗ್ಯತೆಗೆ ಆದ್ಯ ಸ್ಥಾನವಿರಲಿ, ಕಾಗದದ ವ್ಯವಹಾರ ತನ್ನಿಂದ ತಾನೇ ಸರಿ ಹೊಂದುತ್ತದೆ. ಕೃತಿ ಮುಖ್ಯ, ಆದರ ವ್ಯಾಖ್ಯಾನ ಹಿಂಬಾಲಿಸುತ್ತದೆ."

ಮುಂದಿನ ವಾರ ನಮಗೆ ಸಮವಸ್ತ್ರ ಮುಂತಾದ ಸಕಲ ಪರಿಕರಗಳೂ ಪಾಲ್ಘಾಟಿನ ಮುಖ್ಯ ಕಛೇರಿಯಿಂದ ಬಂದುವು. ಕ್ಯಾಡೆಟ್ಟುಗಳಿಗೆ ಪ್ರತಿ ಪೆರೇಡಿನ ದಿನವೂ ೮೦ ಮಿನಿಟುಗಳ ಒಂದೊಂದು ಪೆರೇಡಿಗೆ ನಾಲ್ಕಾಣೆಯ ಬೆಲೆಯ ಉಪಾಹಾರವೀಯ ಬಹುದೆಂಬ ಆದೇಶವೂ ಬಂದಿತು. ವಾರಕ್ಕೆ ನಾವು ನಡೆಸಬೇಕಾಗಿದ್ದ ಪೆರೇಡು ೪ ಗಂಟೆ ಗಳ ಕಾಲದ್ದು. ಆದಿತ್ಯವಾರ ಬೆಳಗ್ಗೆ ೬ ಗಂಟೆಯಿಂದ ೧೬೦ ಮಿನಿಟುಗಳ (ಆದ್ದರಿಂದ ಎಂಟಾಣೆ ಉಪಾಹಾರದ) ಪೆರೇಡನ್ನೂ ಮಂಗಳವಾರ ಸಾಯಂಕಾಲ ೪-೪½ ಗಂಟೆ ಯಿಂದ ೮೦ ಮಿನಿಟುಗಳ ಪೆರೇಡನ್ನೂ ನಡೆಸಲು ನಿರ್ಧರಿಸಿದೆ.

ಕ್ಯಾಡೆಟ್ಟುಗಳ ನಮ್ರತೆ ಅಸಾಧಾರಣವಾದದ್ದು. ಯಾವ ಕಮಾಂಡಿಂಗ್ ಆಫಿಸರನೂ ಇಂಥ ದಳದ ನಾಯಕತ್ವ ವಹಿಸಲು ಹೆಮ್ಮೆಯಿಂದ ಒಪ್ಪುವ ದಳವಿದು. ಆದಿತ್ಯವಾರ ೬ ಗಂಟೆ ಎಂದರೆ ೫-೩೦ ಗಂಟೆಗೇ ಇವರೆಲ್ಲ ಅಲ್ಲಿ ಹಾಜರೇ ! ನನಗೂ ನನ್ನ ಮಿಲಿಟರಿ ಶಿಕ್ಷಕರಿಗೂ ಅತ್ಯುತ್ಸಾಹ. ನಮ್ಮ ಬಿರುಸಿನ ಶಿಕ್ಷಣದ ಪರಿಣಾಮವಾಗಿ ಮಂಗಳೂರಿನ

ನೆಲ ಅಕ್ಷರಶಃ ಕ್ಯಾಡೆಟ್ಟುಗಳ ಬೆವರಿನಿಂದ ತೋಯ್ದು ಹೋಗಿತ್ತೆನ್ನಬಹುದು. ನಾಲ್ಕು ವಾರಗಳ ಶಿಕ್ಷಣಾನಂತರ ಕ್ಯಾಡೆಟ್ಟುಗಳಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಅವರಿಂದ ಬೇರೆ ಬೇರೆ ದರ್ಜೆಗಳ ನಾಯಕರುಗಳನ್ನು ಆರಿಸಿದೆ. ಇಲ್ಲೆಲ್ಲ ಅನುಸರಿಸಿದ್ದು ಆರ್ಮಿ ಸೆಲೆಕ್ಷನ್ ಬೋರ್ಡಿನ ಸಾಮೂಹಿಕ ಪರೀಕ್ಷಾವಿಧಾನವನ್ನು. ಹೇಗೂ ಹಿಂದೊಮ್ಮೆ ನಾನು ಡೆಹ್ರಾಡೂನಿನಲ್ಲಿ ಈ ಪರೀಕ್ಷೆಗೆ ಒಳಪಟ್ಟಿದ್ದೆನಷ್ಟೆ. ಹೀಗೆ ಹೊಣೆಗಾರಿಕೆ ವಿತರಣೆ ಗೊಂಡಂತೆ ನನಗೆ ಶಿಕ್ಷಣದ ಇತರ ವಿವರಗಳ ಕಡೆಗೆ ವಿಶೇಷ ಗಮನವೀಯಲು ಬಿಡು ದೊರೆಯಿತು; ಇದರ ಜೊತೆಯಲ್ಲೇ ನನ್ನ ಅಂತಸ್ತು ಸಹ ಏರಿತು.

ಮಧುಕೆರೆಯ ವಾರ್ಷಿಕ ಶಿಬಿರ

ಡಿಸೆಂಬರ್ ಕೊನೆಯ ವಾರದಿಂದ ತೊಡಗಿ ೧೪ ದಿವಸಗಳ ಒಂದು ಕೇಂದ್ರೀಯ ವಾರ್ಷಿಕ ಶಿಕ್ಷಣಶಿಬಿರ ಕೊಯಮತ್ತೂರಿನ ಬಳಿಯ ಮಧುಕೆರೆಯಲ್ಲಿ ಜರಗುವುದೆಂದು ನಮಗೆ ಆದೇಶ ಬಂದಿತು. ಆ ಮೊದಲು ಸೆಪ್ಟೆಂಬರಿನಲ್ಲಿ ಕಲ್ಲಿಕೋಟೆಯ ಬಳಿ ನಮ್ಮ ಕ್ಯಾಪ್ಟನ್ ನಂಬಿಯಾರರೇ ನಡೆಸುತ್ತಿದ್ದ ಇನ್ನೊಂದು ಶಿಬಿರಕ್ಕೆ ನಾನು ಖಾಸಗಿಯಾಗಿ ಹೋಗಿ ಬಂದಿದ್ದೆ. ಇದರಿಂದ ಒಂದು ಲಾಭವಾಯಿತು. ಇಂಥ ಕೇಂದ್ರೀಯ ಶಿಬಿರಗಳಲ್ಲಿ ನಮ್ಮ ಕ್ಯಾಡೆಟ್ಟುಗಳಿಗೆ ಒದಗುವ ಕಷ್ಟಸುಖಗಳೇನು, ಅಲ್ಲಿ ನಮ್ಮ ಪಾತ್ರ ಹೇಗಿರಬೇಕು —ಈ ವಿವರಗಳನ್ನು ಮಂದಟ್ಟು ಮಾಡಿಕೊಂಡೆ. ನಮ್ಮ ಹುಡುಗರನ್ನು ಶಿಬಿರದಲ್ಲಿ ಸಮರ್ಥವಾಗಿ ಭಾಗವಹಿಸಲು ಅನುಕೂಲಿಸುವಂತೆ ಅಕ್ಟೋಬರಿನಿಂದಲೇ ಶಿಕ್ಷಣ ವಿಧಾನ ವನ್ನು ಬಿಗಿಮಾಡಿದೆ. ಎಲ್ಲದರಲ್ಲಿಯೂ ನಮ್ಮ ದಳ ಅಗ್ರಸ್ಥಾನದಲ್ಲಿರತಕ್ಕದ್ದು, ಬೇರೆ ಯಾವ ಸ್ಥಾನವೂ ನಮಗೆ ಸಲ್ಲದು—ಈ ಛಲದಿಂದ ಈ ಉದ್ದೇಶದಿಂದ ದಿನಗಳು ರಂಜಿಸಿದುವು.

ಮಧುಕೆರೆಯ ಮಿಲಿಟರಿ ಬರಾಕುಗಳಲ್ಲಿ ಸೇರಿದ್ದವರು ಪಾಲ್ಘಾಟಿನ ಕೇಂದ್ರ ಕಛೇರಿಯ —ಎಂದರೆ ಕ್ಯಾಪ್ಟನ್ ನಂಬಿಯಾರರ—ಆಡಳಿತೆಯಲ್ಲಿದ್ದ ಎಲ್ಲ ಎನ್‌ಸಿಸಿ ದಳಗಳು. ಮಂಗ ಳೂರಿನಿಂದ ನಮ್ಮೆರಡು ಕಾಲೇಜುಗಳು, ಕಲ್ಲಿಕೋಟೆ, ಪಾಲ್ಘಾಟ್ ಮುಂತಾದೆಡೆಗಳಲ್ಲಿದ್ದ ಕಾಲೇಜುಗಳು ಇವೆಲ್ಲವೂ ಇಲ್ಲಿ ಭಾಗಿಗಳು. ನನ್ನ ಹಳೆಯ ಮಿತ್ರರಾದ ಮೇನನ್, ಪಂಚ ನಾಥನ್, ನೀಲಕಂಠನ್, ನಂಬೀಶನ್, ಶಿವಶಂಕರ ಮೇನನ್ ಇವರೆಲ್ಲರೂ ಈ ಶಿಬಿರದಲ್ಲಿ ನನ್ನಂತೆಯೇ ಭಾಗಿಗಳು. ಕ್ಯಾಂಪಿನ ಒಟ್ಟು ಸಂಖ್ಯೆ ಸುಮಾರು ೧,೦೦೦.

ಮಂಗಳೂರಿನಿಂದ ರಾತ್ರಿ ಇಡೀ ರೈಲುಪ್ರಯಾಣ ಮಾಡಿ ಮಧುಕೆರೆಯ ಕ್ಯಾಂಪನ್ನು ನಾವು ತಲಪಿದ್ದು ಶಿಬಿರಾರಂಭದ ದಿವಸ ಬೆಳಗ್ಗೆ ಸುಮಾರು ೯ ಗಂಟೆಗೆ—ನಾವೇ ಕೊನೆಯವರು. ನಮ್ಮ ಹುಡುಗರಿಗೆ ನಿಗದಿ ಮಾಡಿದ್ದ ಬರಾಕುಗಳಲ್ಲಿ ಅವರನ್ನು ಜಮಾ ಯಿಸಿ ಅವರ ಆಹಾರ ಮುಂತಾದ ವ್ಯವಸ್ಥೆ ಮುಗಿಸುವಾಗ ಗಂಟೆ ೧೦ ದಾಟಿತ್ತು. ೧೧ ಗಂಟೆಗೆ ಶಿಬಿರದ ಉದ್ಘಾಟನೆ, ಎಲ್ಲರೂ ಸಮವಸ್ತ್ರಗಳಾಗಿ ಪೆರೇಡ್ ಗ್ರೌಂಡಿನಲ್ಲಿ ಕ್ಲುಪ್ತ ವೇಳೆಗೆ ಮೊದಲೇ ಹಾಜರಿರತಕ್ಕದ್ದು ಎಂಬ ಹುಕುಮನ್ನು ಶಿಬಿರದ ಅಡ್ಜುಟೆಂಟ್ ಜಾರಿ ಮಾಡಿದ; ಧ್ವನಿವರ್ಧಕಗಳಲ್ಲಿ ಘೋಷಿಸಿದರು ಕೂಡ.

೧೦-೩೦ ಗಂಟೆಗೇ ನಮ್ಮ ದಳ ಅಲ್ಲಿ ಹಾಜರಾದಾಗ ನಾವೇ ಮೊದಲಿಗರಾದವು

"ಅರೆ! ಈಗ ತಾನೇ ಊರಿನಿಂದ ಬಂದಿರಿ. ಇಷ್ಟು ಬೇಗ ಹೇಗೆ ತಯಾರಾಗಿ ಇಲ್ಲಿಗೆ ಬಂದಿರಿ ?" ಎಂದು ಸುಬೆದಾರ್ ಮೇಜರ್ ಆಶ್ಚರ್ಯ ವ್ಯಕ್ತಪಡಿಸಿದಾಗ ನಮ್ಮ ಸೀನಿಯರ್ ಕ್ಯಾಡೆಟ್ ಸಹಜವಾಗಿ ಅಂದ "ಸಾಬ್! ಇದು ಶಿಕ್ಷಣದ ಒಂದು ಅಂಶ ವಲ್ಲವೇ ?"

ಆದರೆ ೧೧ ಗಂಟೆಗೂ ರಂಗ ಪೂರ್ಣ ಸಿದ್ಧವಾಗಿರಲಿಲ್ಲ. ಕ್ಯಾಪ್ಟನ್ ನಂಬಿಯಾರರು ವೇದಿಕೆ ಏರಿದ ತರುವಾಯವೂ ಅಸ್ತವ್ಯಸ್ತ ಸಮವಸ್ತ್ರಗಳಲ್ಲಿ ಓಡಿ ಓಡಿ ಬರುತ್ತಿದ್ದ ಕ್ಯಾಡೆಟ್ಟುಗಳು ಹಲವಾರು ಮಂದಿ. ಅವರನ್ನು ಪ್ರತ್ಯೇಕಿಸಿ ಅವರ ಕಾಲೇಜುಗಳ ಹೆಸರು ಗಳನ್ನು ಸಾರ್ವಜನಿಕವಾಗಿ ಘೋಷಿಸಿ "ಇಂಥ ಬೇಜವಾಬ್ದಾರಿಕೆ ಇಲ್ಲಿ ಸಲ್ಲದು" ಎಂದು ಅವರಿಗೂ ಅವರ ಆಫಿಸರರಿಗೂ ಮಂಗಳಾರತಿ ಮಾಡಿದರು.

ಕ್ಯಾಪ್ಟನ್ ನಂಬಿಯಾರರ ಸ್ವಾಗತ ಭಾಷಣದಲ್ಲಿ ನಮ್ಮ ಕಾಲೇಜನ್ನು ವಿಶೇಷ ಗೌರವ ದಿಂದ ಪ್ರಸ್ತಾವಿಸಿದ್ದು ಮಾತ್ರವಲ್ಲ ಆ ಬೆಳಗ್ಗಿನ ನಮ್ಮ ಶಿಸ್ತನ್ನು ಬಲುವಾಗಿ ಶ್ಲಾಘಿ ಸಿದ್ದರು. ನಮ್ಮ ಬರಾಕಿನ ಓರಣ ಅಚ್ಚುಕಟ್ಟನ್ನು ಅವರು ಮೆಚ್ಚಿ ಇತರರಿಗೆ ಮಾದರಿ ಎಂದು ಹೇಳಿದರು. ಜೀವನದ ಸಾರ್ಥಕ ಕ್ಷಣಗಳೆಂದರೆ ಇವು—ನಮ್ಮ ಕೂಸಿನ ವಿಜಯದ ಕ್ಷಣಗಳು.

ಶಸ್ತ್ರಾಗಾರದಿಂದ ತೊಡಗಿ ಅಡುಗೇಮನೆಯ ಮೂಲಕ ಶೌಚಗೃಹಗಳವರೆಗೂ ಬರಾಕಿನ ಖಾಸಗಿ ಜೀವನದಲ್ಲಿಯೂ ನಮ್ಮ ಹುಡುಗರ ವರ್ತನೆ ಅತ್ಯುತ್ಕೃಷ್ಟ ಮಟ್ಟ ದ್ದಾಗಿತ್ತು. ಇನ್ನು ಟ್ರೈನಿಂಗ್ ಗ್ರೌಂಡಿನಲ್ಲಿ ಆಯಾ ಆಫಿಸರರು ಅವರವರ ದಳಗಳ ಟ್ರೈನಿಂಗನ್ನು ಕ್ಯಾಂಪಿನ ಶಿಕ್ಷಣ ಕಾರ್ಯಕ್ರಮ ಪಟ್ಟಿಯ ಪ್ರಕಾರ ನಡೆಸಬೇಕಾಗಿತ್ತು. ಕ್ಷೇತ್ರಕೌಶಲ, ಯುದ್ಧ ಮುಂತಾದ ವಿವಿಧ ಪ್ರಾಯೋಗಿಕ ವಿವರಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕಾದಷ್ಟು ಹತ್ಯಾರುಗಳು ನಮಗೆ ಕ್ಯಾಂಪಿನಲ್ಲಿ ದೊರೆಯುತ್ತಿದ್ದುವು ಒಂದು ವಿಚಾರ ಮಾತ್ರ ನಾವು (ಆಫಿಸರರು) ಮುನ್ನೆಚ್ಚರಿಕೆ ವಹಿಸಬೇಕಾಗಿತ್ತು—ನಾಳಿನ ಕಾರ್ಯ ಕ್ರಮ ಏನು ಎಂದು ಇಂದೇ ಅಭ್ಯಾಸ ಮಾಡಿಕೊಂಡು ಅದರ ನಿರ್ವಹಣೆಗೆ ಬೇಕಾಗುವ ಸಕಲ ಪರಿಕರಗಳ ಯಾದಿ ತಯಾರಿಸಿಕೊಂಡು ಆಯಾ ದಿವಸದ ಮುಂಜಾನೆಯೇ ಪರಿಕರ ಗಳನ್ನು ಟ್ರೈನಿಂಗ್ ಸ್ಟೋರಿನಿಂದ ಪಡೆದುಕೊಂಡು ಗ್ರೌಂಡಿಗೆ ಹೋಗಬೇಕು. ಇಷ್ಟು ಸವಿವರ ಚಿಂತನೆ ಹಾಗೂ ಏರ್ಪಾಡು ಮಾಡದಿದ್ದರೆ ಪೆರೇಡು ಗ್ರೌಂಡಿನಲ್ಲಿ ನಾವೂ ನಮ್ಮ ದಳಗಳೂ ಅನಾಥರಂತೆ ಎದ್ದು ಕಾಣುತ್ತಿದ್ದೆವು. "ನಿನಗೆ ನೀನೆ ಗೆಳೆಯ, ನಿನಗೆ ನೀನೇ" ಎಂಬ ಈ ವೇದಾಂತ ಸೂತ್ರವನ್ನು ಇಷ್ಟೊಂದು ಪರಿಷ್ಕಾರವಾಗಿ ಕಾರ್ಯರೂಪಕ್ಕೆ ತಂದಿ ರುವ ಈ ಮಿಲಿಟರಿ ವಿಧಾನವನ್ನು ನಾನು ಬಲುವಾಗಿ ಮೆಚ್ಚಿಕೊಂಡೆ.

ಕ್ಯಾಪ್ಟನ್ ನಂಬಿಯಾರರು ಪ್ರತಿದಿವಸವೂ ಎಲ್ಲ ಕಡೆಯೂ ಇರುತ್ತಿದ್ದ ನಿಷ್ಠುರ ಮತ್ತು ಶಿಸ್ತುಗಾರ ಆಫಿಸರರು. ಅವರು ಎಷ್ಟು ಸ್ನೇಹಪರರೋ ಸೌಜನ್ಯಶೀಲರೋ ಶಿಸ್ತಿನ ವಿಚಾರ ದಲ್ಲಿ ಟ್ರೈನಿಂಗಿನ ದಕ್ಷತೆಯನ್ನು ಕುರಿತಾಗಿ ಅಷ್ಟೇ ಕಠಿಣ ಹೃದಯಿಗಳು ಮತ್ತು ದಕ್ಷ ನಿರ್ವಾಹಕರು. ಆ ದಿವಸಗಳಲ್ಲಿ ಅವರಿಂದ ಒಂದೂ ಬಿರುನುಡಿ ಕೇಳದ, ಮಾತ್ರವಲ್ಲ, ಮುಕ್ತಕಂಠದ ಶ್ಲಾಘನೆ ಕೇಳಿದ ಒಂದೇ ಒಂದು ಪಡೆ ನಮ್ಮದು. ಪ್ರತಿದಿವಸ ಸಂಜೆ

ಪ್ರಕಟವಾಗುತ್ತಿದ್ದ ಶಿಬಿರದ ವರದಿ ಪತ್ರದಲ್ಲಿ (ಪಾರ್ಟ್ ಒಂದು ಹುಕುಂಗಳು) ನಮ್ಮ ಕಾಲೇಜಿನ ಹೆಸರು ಅಗ್ರಸ್ಥಾನದಲ್ಲಿ ಇರುತ್ತಿತ್ತು.

"ಇಷ್ಟೊಂದು ಕಂಟ್ರೋಲ್ ನಿಮಗೆ ಹೇಗೆ ಬರುತ್ತದೆ ನಿಮ್ಮ ಹುಡುಗರ ಮೇಲೆ?" ಒಬ್ಬ ಆಫಿಸರ್ ಕೇಳಿದ. ಇತರರೂ ಇದ್ದರು.

"ಅವರಿಂದ ನಾನು ಬೇರೆ ಅಲ್ಲ ಎಂಬುದು ನನ್ನ ವರ್ತನೆಯ ಸಹಜ ಅಂಶವಾಗಿರಬೇಕು. ಕಾಲೇಜಿನಲ್ಲಿ ನಾವು ನಿರ್ವಹಿಸಿದ ದಿನದಿನದ ಟ್ರೈನಿಂಗಿನ ವಿಸ್ತರಣೆಯಲ್ಲವೇ ಈ ಸಾಮೂಹಿಕ ಕ್ಯಾಂಪ್ ?" ನನ್ನ ಉತ್ತರ.

"ಅಂದರೆ ಕಾಲೇಜ್ ದಿವಸಗಳಲ್ಲಿ ನೀವೇ ಶಿಕ್ಷಣ ನೀಡುತ್ತೀರಾ ?" ಅವನಿಗೆ ಆಶ್ಚರ್ಯ.

"ಇದರಲ್ಲೇನು ಆಶ್ಚರ್ಯ ?"

"ಜೆಸಿಓ, ಎನ್‌ಸಿಓಗಳು ಮಾಡಬೇಕಾದ ಕೆಲಸವದು."

"ನಾವು ಡ್ರಿಲ್, ಶಸ್ತ್ರ ಕವಾಯತಿ ಮುಂತಾದವನ್ನು ಹೇಳಿಕೊಡಬಾರದೆಂದು ನೀವು ಹೇಳುವುದೇ ?"

"ಅದೇ ನಾನು ಹೇಳುವುದು. ನಾವು ಯಾರೂ ಈ ಡರ್ಟಿ ಕೆಲಸ ಮಾಡೋದಿಲ್ಲ."

"ಕ್ಯಾಡೆಟ್ಟಿಗೆ ಡ್ರಿಲ್ ಹೇಳಿಕೊಡುವುದು ಡರ್ಟಿ ಆದರೆ ಕ್ಲೀನ್ ಯಾವುದು ?"

"ಸಿದ್ಧಾಂತದ ಕ್ಲಾಸ್—ಉದಾಹರಣೆಗೆ ಮ್ಯಾಪ್ ರೀಡಿಂಗ್."

"ಅಂದರೆ, ಆಫಿಸರನಾದವನು ಕಠಿಣ ದೈಹಿಕ ಕೆಲಸ ಮಾಡತಕ್ಕದ್ದಲ್ಲ, ಮೆದುವಾದ ನೆರಳಿನ ತಂಪಿನಲ್ಲಿ ಅವನು ಸೈದ್ಧಾಂತಿಕ ತಜ್ಞನಾಗಿರತಕ್ಕದ್ದು—ಇದು ನಿಮ್ಮ ತೀರ್ಮಾನವೇ ?"

"ಅಲ್ಲರೀ—ಇವರು ಕೊಡುವ ಈ ಹದಿನೇಳೂವರೆ ರೂಪಾಯಿಗೆ ಇನ್ನೇನು ಮಾಡಬೇಕು ?"

ಎನ್‌ಸಿಸಿ ಆಫಿಸರುಗಳಿಗೆ ಆಗ (೧೯೫೨–೫೩) ವರ್ಷದಲ್ಲಿ ಆರು ತಿಂಗಳಕಾಲ ತಿಂಗಳೊಂದರ ಹದಿನೇಳೂವರೆ ರೂಪಾಯಿ ಗೌರವಧನ ದೊರೆಯುತ್ತಿತ್ತು. ಈಗ (೧೯೬೨ ರಿಂದೀಚೆಗೆ) ಅದು ಹನ್ನೆರಡು ತಿಂಗಳೂ ತಿಂಗಳೊಂದರ ಎಪ್ಪತ್ತೈದು ರೂಪಾಯಿಗೆ ಏರಿದೆ.

ನಾನೆಂದೆ "ನೀವು ಗೌರವಧನವನ್ನೂ ಕೆಲಸವನ್ನೂ ತಳಕಿಸುವುದು ತಪ್ಪು. ಮೊದಲಿನದು ನಮ್ಮ–ಸರ್ಕಾರದ ಸಂಬಂಧ, ಎರಡನೆಯದು ನಮ್ಮ—ಕ್ಯಾಡೆಟ್ಟುಗಳ ಬಾಂಧವ್ಯ. ನಮಗಿರಬಹುದಾದ ಅತೃಪ್ತಿಯನ್ನು ನಿರಪರಾಧಿ ಕ್ಯಾಡೆಟ್ಟುಗಳ ಮೇಲೆ ಹೇರಬಾರದು."

ನಮ್ಮ ವಾದಕ್ಕೆ ಹಠಾತ್ತಾಗಿ ಬಿರಿ ಬಿದ್ದದ್ದು ಕ್ಯಾಪ್ಟನ್ ನಂಬಿಯಾರರ ಆಗಮನದಿಂದ. ಅವರೇ ಮುಂದುವರಿಸಿದರು "ನಾಳೆ ಒಂದು ರೂಟ್ ಮಾರ್ಚ್ (ದೀರ್ಘನಡಿಗೆ) ಇದೆ. ಮುಂಜಾನೆ ಊಟ ಮುಗಿಸಿ ಕಟ್ಟಿಕೊಟ್ಟ ಬುತ್ತಿಯನ್ನು ಪಡೆದುಕೊಂಡು ೭ ಗಂಟೆಗೆ ಶಿಬಿರದಿಂದ ನಿರ್ಗಮಿಸಬೇಕು. ೧೫ ಮೈಲಿಗಳ ನಡಿಗೆ ಮುಗಿಸಿ ಶಿಬಿರಕ್ಕೆ ಮರಳಬೇಕು. ದಾರಿಯಲ್ಲಿ ಮಿಲಿಟೆರಿ ಕವಾಯತಿಗಳನ್ನು ಮಾಡಲು ಬೇಕಾಗುವ ಶಸ್ತ್ರಗಳನ್ನೂ ಗುಂಡು ಮದ್ದುಗಳನ್ನೂ ನೀವೇ ಕೊಂಡೊಯ್ಯಬೇಕು."

"ಈಗ ರಾತ್ರಿ ೧೦ ಗಂಟೆಯಾಯಿತಲ್ಲ, ಸಾರ್. ಹುಡುಗರು ಸುಖವಾಗಿ ನಿದ್ರೆ ಮಾಡಿರಬೇಕಲ್ಲ, ಸಾರ್. ಅವರಿಗೆ ನಾವು ತಿಳಿಸುವುದು ಹೇಗೆ ?" ಒಬ್ಬ ಆಫಿಸರನ ಪ್ರಶ್ನೆ.

"ನನ್ನ ಹುಕುಮನ್ನು ಜಾರಿಮಾಡುವ ವಿಧಾನ ನಿಮ್ಮದು. ಬೇರೆ ಏನಾದರೂ ಸಂಶಯ ಉಂಟೇ !" ನಂಬಿಯಾರರ ಈ ಖಚಿತ ಧ್ವನಿಯು ಎದುರು ಸಂಶಯದ ಅಪ ಸ್ವರ ಕೇಳಲಿಲ್ಲ. ದಾರಿ ಯಾವುದೆಂದು ಕೇಳೋಣವೆಂದು ನನಗೆ ಮನಸ್ಸಾಯಿತು. ಆದರೆ ಇತರರಿಗೆ ಈ ಪ್ರಶ್ನೆ ಹಿತಕರವಾಗದು, ಮುಂದೆ ನನ್ನನ್ನು ಛೇಡಿಸಿಯಾರು ಅಂದು ಕೊಂಡು ಸುಮ್ಮನಾದೆ. ನಂಬಿಯಾರರು ನಿರ್ಗಮಿಸಿದರು.

"ಏನ್ರೀ ಮಾಡೋದೀಗ ?" ಆಫಿಸರರಿಗೆ ಕಳವಳ.

"ಬರಾಕಿನಲ್ಲಿ ಹುಡುಗರಿದ್ದಾರಷ್ಟೆ. ಅಲ್ಲಿಗೆ ಹೋಗೋಣ. ಈ ಆಜ್ಞೆಯನ್ನು ಈಗಲೇ ಚಲಾಯಿಸೋಣ" ನಾನೆಂದೆ.

"ಆದರೆ ಅವರ ಗೋಣಗಾಟ ಎದುರಿಸೋದು ಹೇಗೆ ?"

"ನಮ್ಮ ಗೋಣಗಾಟವನ್ನು ನಂಬಿಯಾರರು ಸ್ವೀಕರಿಸಿದಂತೆ !" ನಾನು.

"ಅದು ಹೇಳಿದಷ್ಟು ಸುಲಭವಲ್ಲ."

"ನಾನು ಮಾಡಿ ತೋರಿಸುತ್ತೇನೆ. ವಾಸ್ತವಿಕವಾಗಿ ನಮ್ಮಲ್ಲಿ ಗೋಣಗಾಟವೇ ಬರದು."

ಮರುದಿವಸದ ರೂಟ್ ಮಾರ್ಚ್ ಮುಂಜಾನೆ ೭ ಗಂಟೆಗೆ ತೊಡಗಿದಾಗ ಮೊದಲು ಹೊರಟದ್ದು ನಮ್ಮ ಕಾಲೇಜ್. ಪ್ರತಿಯೊಂದು ದಳವನ್ನೂ ಬೇರೆಬೇರೆಯಾಗಿ ಬೇರೆ ಬೇರೆ ದಾರಿಗಳಲ್ಲಿ ಕಳಿಸುವ ಏರ್ಪಾಡು ಮಾಡಿದ್ದರು.

ಪೆರೇಡ್ ಗ್ರೌಂಡಿನ ಗೊಂದಲ ಊಟದ ಮನೆಯ ಗದ್ದಲ ನಮಗೆ ಬಲು ದೂರ ಕೇಳಿಸುತ್ತಲೇ ಇತ್ತು. ನಮ್ಮ ಎನ್‌ಸಿಸಿ, ಜೆಸಿಓಗಳ ನೆರವಿನಿಂದ ದಾರಿಯಲ್ಲಿ ಬೇಕಾ ದಷ್ಟು ಮಿಲಿಟೆರಿ ಕವಾಯತಿಗಳನ್ನು ಪ್ರದರ್ಶಿಸಿದೆವು. ಪಾಠ, ಪ್ರಾಯೋಗಿಕ ಸಮರ್ಥನೆ, ಬೆಟ್ಟಗುಡ್ಡಗಳ ಹರವಿನಲ್ಲಿ ಮಂದಗಮನ ಈ ಎಲ್ಲ ಕಾರಣಗಳಿಂದ ಆ ೧೫ ಮೈಲಿಗಳ ನಡಿಗೆ ನಮಗೆ ಆಯಾಸವೆನಿಸಲಿಲ್ಲ. ಮಧುಕೆರೆಯ ಹವೆ ಹಿತಕರವಾಗಿತ್ತು. ನಾವು ಅಪರಾಹ್ನ ೩ ಗಂಟೆಗೆ ಹಿಂತಿರುಗಿದಾಗ ಶಿಬಿರ ಬಿಕೋ ಅನ್ನುತ್ತಿತ್ತು. ೫ ಗಂಟೆಯ ತರುವಾಯ ಬೇರೆ ಬೇರೆ ದಳಗಳು ಬೇರೆ ಬೇರೆ ದಾರಿಗಳ ಮೂಲಕ ಮರಳತೊಡಗಿದುವು. ಒಂದು ದಳದವರು ತಮ್ಮ ಪೈಕಿ ಒಬ್ಬನ ವಾಟರ್ ಬಾಟಲನ್ನು ಕಳೆದುಕೊಂಡು ಬಂದಿದ್ದರು. ಸರಿ—ಇಡೀ ದಳ ತಮ್ಮ ದಾರಿಯನ್ನು ಆ ಸಂಜೆ ಪುನಃ ತುಳಿದು ಆ ವಸ್ತು ವನ್ನು ಅರಸಬೇಕಾಯಿತು. "ಹೋದ ವಸ್ತುವಿನ ಬೆಲೆ ಮುಖ್ಯವಲ್ಲ. ಈ ಘಟನೆಯ ಹಿಂದೆ ಇರುವ ಬೇಜವಾಬ್ದಾರಿಕೆಗೆ ಸಾಮೂಹಿಕ ಶಿಕ್ಷೆಯೊಂದೇ ದಾರಿ" ಎಂದರು ನಂಬಿ ಯಾರರು.

ಕ್ಯಾಂಪ್ ಮುಗಿದು ಮಂಗಳೂರಿಗೆ ಮರಳುವಾಗ (ಜನವರಿ ೧೯೫೩) ಕ್ಯಾಪ್ಟನ್ ನಂಬಿಯಾರರಿಗೆ ನಮ್ಮ ದಳವನ್ನೂ ನನ್ನನ್ನೂ ಕುರಿತು ವಿಶೇಷವಾದ ಆತ್ಮೀಯತೆ ಬೆಳೆದು ಬಂದಿತ್ತು.

"ರಾವ್! ಎಲ್ಲರೂ ನಿಮ್ಮಂಥವರೇ ಆಗಿದ್ದರೆ? ಎಲ್ಲ ಕ್ಯಾಡೆಟ್ಟುಗಳೂ ನಿಮ್ಮ ಈ ಬಂಗಾರವೇ ಆಗಿದ್ದರೆ?" ಎಂದಾಗ ಅವರ ಧ್ವನಿ ಕಂಪಿಸಿತು. ಆ ಕಠೋರ ಶಿಸ್ತಿನ ಹಿನ್ನೆಲೆಯಲ್ಲಿದ್ದ ಮಾನವೀಯ ತಂತಿ ಮಿಡಿದಾಗ ನನಗೆ ಉತ್ತರ ಕೊಡುವುದು ಸಾಧ್ಯವಾಗಲಿಲ್ಲ. ಇದೇ ಅರ್ಹತೆಯನ್ನು ಸದಾ ಉಳಿಸಿಕೊಂಡಿರುವುದೂ ಸಾಧ್ಯವಾಗಲಿ ಎಂದುಕೊಂಡೆ.

ಕ್ಯಾಂಪಿನಿಂದ ಕಲಿತ ಪಾಠಗಳು: ೧ ಘಟನೆ ಎಂದೂ ನನ್ನನ್ನು ಹಿಂದೆ ಹಾಕಬಾರದು. ೨ ಉನ್ನತ ಮೌಲ್ಯದ ಜೊತೆ ಅವಿನಾ ಸಂಬಂಧವಿರಿಸಿಕೊಂಡಾಗ ಸಾಮಾನ್ಯ ವ್ಯಕ್ತಿಯೂ ಅಸಾಮಾನ್ಯನಾಗುತ್ತಾನೆ. ಧುರೀಣತ್ವದ ಹೂರಣವೇ ಇದು.

ಮೂಕಂ ಕರೋತಿ ವಾಚಾಲಂ
ಪಂಗುಂ ಲಂಘಯತೇ ಗಿರಿಂ
ಯತ್ಕೃಪಾ ತಮಹಂ ವಂದೇ
ಪರಮಾನಂದ ಮಾಧವಂ

೧೯೫೩

ಮಂಗಳೂರಿಗೆ ಮಂಗಳ ಹಾಡಿದೆ

ಡಾ॥ ಲಕ್ಷ್ಮಣಸ್ವಾಮಿ ಮುದಲಿಯಾರರ ದಿವ್ಯ ಸಮ್ಮುಖದಲ್ಲಿ ಕುಳಿತಾಗ ನನ್ನ ಮನಸ್ಸಿನಲ್ಲಿದ್ದ ಆದರೆ ಜನಾರ್ದನ ಬಾಳಿಗರ ನಾಲಗೆಯಲ್ಲಿ ಮಾತಾಗಿ ಮೂಡಿದ ಪ್ರಶ್ನೆ ಈಗ ವಾಸ್ತವಿಕ ರೂಪ ತಳೆಯತೊಡಗಿತ್ತು. ಮಡಿಕೇರಿಯ ಸರಕಾರಿ ಕಾಲೇಜಿನಲ್ಲಿ ಜೂನ್ ೧೯೫೩ರಿಂದ ಪ್ರಥಮ ಬಿ.ಎ. ತರಗತಿಗಳು ಪ್ರಾರಂಭವಾಗುವುವು; ಆಗ ಹೊಸ ಗಣಿತಾಧ್ಯಾಪಕ ಅಲ್ಲಿಗೆ ಬೇಕಾಗುತ್ತದೆ. ಊರಿನವನಾದ, ಅರ್ಹ ಪದವಿ ಹಾಗೂ ಅನುಭವಪಡೆದವನಾದ ನನಗೆ ಈ ಕೆಲಸ ದೊರೆಯದೇ ಬೇರೆ ಯಾರಿಗೆ ದೊರೆತೀತು ? ಇಲ್ಲಿ ದೊರೆಯುತ್ತಿರುವ ವೇತನ ತಿಂಗಳೊಂದರ ೧೫೦ ರೂಪಾಯಿಗಳು ; ಅಲ್ಲಿ ಸೇರಿದೊಡನೆಯೇ ೨೧೦ ರೂಪಾಯಿಗಳು ದೊರೆಯುವುವು, ಇಲ್ಲಿಯ ಕೆಲಸ ಭದ್ರವಾದದ್ದಲ್ಲ, ಖಾಸಗಿ ಸಂಸ್ಥೆ ; ಅಲ್ಲಿಯ ಕೆಲಸ ಸರಕಾರದಷ್ಟೇ ಸಂಭದ್ರವಾದದ್ದು. ಇಲ್ಲಿ ನನ್ನ ಹಂಬಲಗಳಿಗೆ ಗರಿಗೂಡಿಸಿ ಹಾರುವಂತಿಲ್ಲ ; ಅಲ್ಲಿ ನನ್ನ ಗರಿಯ ಸಾಮರ್ಥ್ಯವನ್ನು ಅವಲಂಬಿಸಿ ಎಷ್ಟೋ ದೂರ ಎಷ್ಟೋ ಎತ್ತರ ಹಾರಬಹುದು. ಆದರೆ ನೇರ ದಾರಿಯಲ್ಲಿ ಯಾರಿಗೂ ತೊಂದರೆ ಆಗದಂತೆ ನಾನು ಪ್ರಯತ್ನ ಮಾಡತಕ್ಕದ್ದು ಎಂದು ನಿರ್ಧರಿಸಿ ಮೊದಲು ಕೊಡಗಿನ ಸರಕಾರದ ವರಿಷ್ಠ ನಾಯಕರೊಡನೆ ಪ್ರಸ್ತಾವಿಸಿದೆ. ಚೀಫ್ ಕಮಿಷನರರೂ ಮಂತ್ರಿಗಳೂ ನನ್ನನ್ನು ವೈಯಕ್ತಿಕವಾಗಿ ಬಲ್ಲವರು. ನಾನು ಮಡಿಕೇರಿ ಕಾಲೇಜನ್ನು ಸೇರುವುದನ್ನು ಅವರು ಸ್ವಾಗತಿಸಿದರು.

ಸೇಂಟ್ ಅಲೋಯ್ಸಿಯಸ್ ಕಾಲೇಜನ್ನು ಬಿಡುವಾಗ ಅಲ್ಲಿಯ ಎನ್‌ಸಿಸಿ ದಳವನ್ನೂ ಬಿಡಬೇಕಷ್ಟೆ. ಆಗ ಎನ್‌ಸಿಸಿಗೆ ನನ್ನಿಂದ ತೊಂದರೆ ಆಗಬಾರದು. ಈ ವಿಚಾರವನ್ನು ಸಂಬಂಧಿಕಾರರೊಡನೆ ಮುಚ್ಚುಮರೆ ಇಲ್ಲದೆ ಎತ್ತಿದೆ. ನನ್ನ ಭವಿಷ್ಯ ಉಜ್ಜ್ವಲವಾಗಲೇಬೇಕು, ಆ ದಾರಿಯಲ್ಲಿ ನಾನು ಮುಂದುವರಿಯಲೇಬೇಕು ಎಂದು ಅವರು ಹುರಿದುಂಬಿಸಿದರು. ಮೂರು ತಿಂಗಳ ನೋಟೀಸ್ ಎನ್‌ಸಿಸಿಗೆ ಕೊಟ್ಟರೆ ಸಾಕು ಎಂದು ಸಲಹೆ ಮಾಡಿದರು. ನನ್ನ ಸ್ಥಾನವನ್ನು ತುಂಬಲು ಬೇರೆ ಒಬ್ಬ ಅಧ್ಯಾಪಕನನ್ನು ಸೂಚಿಸಬೇಕೆಂದು ಕೇಳಿಕೊಂಡರು. ಜನಾರ್ದನ ಬಾಳಿಗರಿಗಿಂತ ಅಧಿಕ ಅರ್ಹತೆಪಡೆದವರು ಬೇರೆ ಯಾರಿದ್ದಾರೆ ? ಅವರನ್ನೇ ಸೂಚಿಸಿದೆ.

ಕಾಲೇಜಿಗೂ ನಾನು ಮೂರು ತಿಂಗಳ ನೋಟೀಸ್ ಕೊಡಬೇಕಾಗಿತ್ತು. ಮಾರ್ಚ್ ೩೧ರಂದು ಕಾಲೇಜಿಗೂ ಎನ್‌ಸಿಸಿಗೂ ಅಧಿಕೃತ ರಾಜಿನಾಮೆ ಸಲ್ಲಿಸಿದೆ. ಸರಿಯಾದ ಕಾರಣವನ್ನೇ—ಎಂದರೆ ನಾನು ಮಡಿಕೇರಿಯಲ್ಲಿರುವ ಕೊಡಗು ಸರಕಾರದ ಕಾಲೇಜನ್ನು ಸೇರಬೇಕೆಂದಿದ್ದೇನೆ—ನೀಡಿದ್ದೆ. ಈ ಅರ್ಜಿಗಳ ಪ್ರಕಾರ ಜುಲೈ ೧, ೧೯೫೩ರಿಂದ ನಾನು ಮಂಗಳೂರಿನ ಕಾಲೇಜ್ ಮತ್ತು ಎನ್‌ಸಿಸಿಯೊಡನೆ ಸಂಬಂಧ ಕಡಿದುಕೊಳ್ಳುವವನಿದ್ದೆ. ಏಪ್ರಿಲ್ ೧ರಂದು ಜನಾರ್ದನ ಬಾಳಿಗರು ಎಂಆರ್‌ಸಿಗೆ ಮೂರು ತಿಂಗಳ ಮಿಲಿಟರಿ

ಶಿಕ್ಷಣ ಪಡೆಯಲು ಹೋದರು ; ಮಡದಿ ಮತ್ತು ೬ ತಿಂಗಳ ಮಗ ಅಶೋಕನ ಸಮೇತ ಮಂಗಳೂರನ್ನು ಅಧಿಕೃತವಾಗಿ ತೊರೆದೆ.

ಮಡಿಕೇರಿಯಲ್ಲಿ ವಿರಿಬಿರೋಣಿ ವರ್ಷ

ಮಡಿಕೇರಿಯ ಕೆಲಸ ? ಏಪ್ರಿಲ್ ೧೯೫೩ರ ಪರಿಸ್ಥಿತಿ ಹೀಗಿತ್ತು: ಹೊಸ ತರಗತಿಗಳನ್ನು ತೆರೆಯಲು ಮದರಾಸು ವಿಶ್ವವಿದ್ಯಾಲಯದ ಆಯೋಗ ಜೂನಿನಲ್ಲಿ ಬರುವುದಿತ್ತು; ಆ ಮೊದಲೇ ಊರ ಹೊರಗಿನ ಗಾಳಿಬೀಡಿನ ದಿಬ್ಬದ ಮೇಲೆ ಕಟ್ಟಲಾಗುತ್ತಿದ್ದ ನೂತನ ಭವ್ಯಕಟ್ಟೋಣಕ್ಕೆ ಕಾಲೇಜು ವರ್ಗಾವಣೆಗೊಳ್ಳಲೇಬೇಕಿತ್ತು : ಇಂಟರ್ಮೀಡಿಯೇಟ್ ತರಗತಿಗಳನ್ನು ಊರ ನಡುವಿನ (ನಾನು ಓದಿದ್ದ) ಹೈಸ್ಕೂಲಿನಲ್ಲಿಯೇ ನಡೆಸುತ್ತಿದ್ದರು.

ಮಡಿಕೇರಿಯ ಚಳಿಯಲ್ಲಿ ಎಲ್ಲವೂ ಮಂದಗತಿ. ಮೇ ತಿಂಗಳಿನಿಂದ ಮಳೆ ಗಾಳಿ ಇರುಚಲು ಸೇರಿ ಜೀವನ ದಿನದಿನ ಒಂದು ಸಾಹಸವಾಗುತ್ತದೆ. ಕಾಲೇಜಿನ ಕಟ್ಟಡ ಮುಂದುವರಿಯಲಿಲ್ಲ. ವಿಶ್ವವಿದ್ಯಾಲಯದ ಆಯೋಗ ಬರಲಿಲ್ಲ. ಆದರೂ ವಾರ್ತಾ ಪತ್ರಿಕೆಗಳಲ್ಲಿ ಜಾಹೀರಾತೇನೋ ಬಂದಿತು—ಅದುವರೆಗೆ ರೂ ೧೫೦-೩೦೦ ಶ್ರೇಣಿಯಲ್ಲಿದ್ದ ಲೆಕ್ಚರರುಗಳ ಹುದ್ದೆಗಳನ್ನು ರೂ ೨೫೦-೪೦೦ಕ್ಕೆ ಹಠಾತ್ತಾಗಿ ಏರಿಸಿದ್ದರು. ನೆರೆ (ಪ್ರತ್ಯೇಕ) ರಾಜ್ಯಗಳಾದ ಮೈಸೂರು, ಮಂಗಳೂರುಗಳಲ್ಲಿ (ಏಕೆ ಮದರಾಸು ಮುಂಬಯಿ ಸಂಸ್ಥಾನಗಳಲ್ಲೂ) ಈ ದೊಡ್ಡ ವೇತನಶ್ರೇಣಿ ಲೆಕ್ಚರರುಗಳಿಗೆ ಆಗ ಇರಲಿಲ್ಲ. ಇದರ ಪರಿಣಾಮವಾಗಿ ನೂರಾರು ಜನ ಅರ್ಜಿ ಸಲ್ಲಿಸಿಯೇಬಿಟ್ಟರು. ನನಗಿದ್ದದ್ದು ಶಿಕ್ಷಣಾನುಭವ ಆರು ವರ್ಷಗಳು ಮತ್ತು ಎನ್‌ಸಿಸಿ ಶಿಕ್ಷಣ. ಆದರೆ ಹದಿನೈದು ಇಪ್ಪತ್ತು ವರ್ಷಗಳ ಅನುಭವವಿದ್ದವರೂ ಅರ್ಜಿ ಗುಜರಾಯಿಸಿದ್ದರೆಂದು ತಿಳಿದಾಗ ಅಥೋ ಭ್ರಷ್ಟ ತಥೋ ಭ್ರಷ್ಟವಾಯಿತಲ್ಲ ಎಂದು ಪೇಚಾಡಿದೆ.

ಆಯ್ಕೆ ಭೇಟಿಗೆ ಬಂದವರು ಹತ್ತು ಮಂದಿ ಮಾತ್ರ. ಅವರಲ್ಲೂ ಆರೇಳು ಮಂದಿ ಮಡಿಕೇರಿಯ ಜೂನ್ ತಿಂಗಳ ಮಳೆ ಚಳಿ ಅನುಭವಿಸಿ ತಮಗೆ ಕನಿಷ್ಠ ಪಕ್ಷ ರೂ ೩೫೦ನ್ನು ಸಂಬಳವಾಗಿ ನೀಡದಿದ್ದರೆ ತಾವು ಬರುವುದಿಲ್ಲವೆಂದರು. ಉಳಿದವರಲ್ಲಿ ನನ್ನನ್ನು ನೇಮಿಸುವುದು ಸರಕಾರಕ್ಕೆ ಕಷ್ಟವಾಗಲಿಲ್ಲ. ವಿದ್ಯಾಮಂತ್ರಿ ಮಲ್ಲಪ್ಪನವರಿಗೆ ಬಲು ವಿಶ್ವಾಸ "ನಮ್ಮ ತಿಮ್ಮಪ್ಪಯ್ಯನವರ ಮಗ. ನಮ್ಮೂರಿನ ಅಣುಗ. ಪರ ಊರಿನಲ್ಲಿ ಹೆಸರು ಪಡೆದಿದ್ದಾನೆ. ಇಲ್ಲಿ ಕೆಲಸ ಮಾಡಬೇಕೆಂದು ಆ ಕೆಲಸವನ್ನು ತೊರೆದೇ ಬಂದಿದ್ದಾನೆ. ಇವನಿಗೆ ಕೆಲಸ ಕೊಡಲೇಬೇಕು" ಇದು ಅವರು ತಳೆದ ದಿಟ್ಟ ನಿಲವು.

ಅರ್ಧಂಬರ್ಧ ಮುಗಿದಿದ್ದ ಗಾಳಿಬೀಡಿನ ಹೊಸ ಕಟ್ಟಡಕ್ಕೆ ಕಾಲೇಜು ಜುಲೈ ತಿಂಗಳಿನ ಭಯಂಕರ ವರ್ಷಾಘಾತದ ನಡುವೆ ವರ್ಗವಾಯಿತು. ಜುಲೈ ೧೩ರಂದು ನಾನು ಅಧಿಕೃತವಾಗಿ ಅಲ್ಲಿ ಕೆಲಸಕ್ಕೆ ಹಾಜರಾದೆ.

ವಾತಾಪಿ ಗಣಪತಿಂ

ಕಾಲೇಜಿನ ಪ್ರಿನ್ಸಿಪಾಲ್ ಪ್ರೊಫೆಸರ್ ಕೆ. ಪಿ. ಅಚ್ಯುತನ್ ಪಿಳ್ಳೆ. ನನ್ನ ವಿಷಯವಾದ ಗಣಿತ ವಿಭಾಗದ ಮುಖ್ಯಸ್ಥರು ಕಾಲೇಜಿನ ವೈಸ್ ಪ್ರಿನ್ಸಿಪಾಲರೂ ಆಗಿದ್ದ ಪ್ರೊಫೆಸರ್ ವಿ. ವೆಂಕಟರಮಣರಾವ್.

"ಪಾಠಪ್ರವಚನ ಸ್ಪೆಶಲ್ ಕ್ಲಾಸುಗಳು ಇವನ್ನೆಲ್ಲ ಚೆನ್ನಾಗಿ ನಿರ್ವಹಿಸಬೇಕು. ಗಣಿತ ವಿಭಾಗವನ್ನು ನಾವು ಚೆನ್ನಾಗಿ ಕಟ್ಟಬೇಕು" ಎಂದು ವೆಂಕಟರಮಣರಾಯರು ಸ್ವಾಗತಿಸಿದರು.

"ಪಾಠ ನಡೆಯಬೇಕು. ಜೊತೆಗೆ ಇತರ ಚಟುವಟಿಕೆಗಳೂ ಸಾಕಷ್ಟು ನಡೆಯಲೇಬೇಕು. ಕಾಲೇಜಿನ ಸಮಾಜ ಸೇವಾಸಂಸ್ಥೆಯ ಮುಖ್ಯಸ್ಥರಾಗಿ ಕೆಲಸ ಮಾಡುವಿರಾ ?" ಎಂದು ಪ್ರಿನ್ಸಿಪಾಲ್ ಪಿಳ್ಳೆ ಕೇಳಿದರು.

"ನಮ್ಮ ಕಾಲೇಜಿನ ಪ್ರತಿಯೊಂದು ಕೆಲಸವೂ ನನಗೆ ಸಮಾನ ಪ್ರಿಯವಾದದ್ದೇ. ನೀವು ಹೇಳಿದ ಕೆಲಸ ಮಾಡುತ್ತೇನೆ."

ಎನ್‌ಸಿಸಿ ದಳ ಕಾಲೇಜಿನಲ್ಲಿ ಪ್ರಾರಂಭವಾಗಿರಲಿಲ್ಲ. ನನ್ನ ಚೈತನ್ಯಕ್ಕೆ ಒಂದು ಹೊರದಾರಿ ಬೇಕೇಬೇಕಾಗಿತ್ತು. ಸಮಾಜ ಸೇವಾಸಂಸ್ಥೆ ಇದನ್ನು ಚೆನ್ನಾಗಿ ಪೂರೈಕೆ ಮಾಡಿತು. ಹರಿಜನಕೇರಿಯಲ್ಲಿ ಪ್ರತಿ ಸಂಜೆ ವಯಸ್ಕರಿಗೆ ವಿದ್ಯಾಬೋಧನೆ, ನವಮಾರ್ಗ ನಿರ್ಮಾಣ, ಕಾಲೇಜಿನ ಆವರಣದಲ್ಲಿ ಶುಚಿತ್ವ ಕಾಪಾಡುವುದು ಸಮೀಪದ ಹಳ್ಳಿಗಳಿಗೆ ಹೋಗಿ ಅವರ ಜೀವನದ ತೊಂದರೆಗಳನ್ನು ಕೇಳಿ ತಿಳಿದು ಪರಿಹಾರ ಕ್ರಮಗಳನ್ನು ಅಳವಡಿಸುವುದು ಮುಂತಾದ ಕೆಲಸಗಳನ್ನು ಆರಿಸಿಕೊಂಡೆವು. ಆಸಕ್ತ ವಿದ್ಯಾರ್ಥಿಗಳನ್ನು ಆಯಾ ಕೆಲಸಗಳಿಗೆ ನಿಯೋಜಿಸಿ ಅವರನ್ನು ಹುರಿದುಂಬಿಸುತ್ತ ಮೇಲ್ವಿಚಾರಣೆ ನಡೆಸುವುದು ನನ್ನ ಪ್ರಿಯವಾದ ದೈನಂದಿನ ಕಾರ್ಯವಾಯಿತು. ಇಲ್ಲೆಲ್ಲ ಮಿಲಿಟರಿಯ ಕ್ರಮಬದ್ಧತೆಯನ್ನು ತರಲು ಮಾಡಿದ ಪ್ರಯತ್ನಗಳು ಸಾಕಷ್ಟು ಫಲಕಾರಿಗಳಾದುವು. ಕೊಡಗಿನ ವಿದ್ಯಾರ್ಥಿಗಳು ದಷ್ಟಪುಷ್ಟರು. ಸಹಜವಾಗಿ ಕಷ್ಟಸಹಿಷ್ಣುಗಳು. ಆದ್ದರಿಂದ ಈ ಎಲ್ಲ ದೈಹಿಕ ಶ್ರಮ ಕಾರ್ಯಗಳಲ್ಲಿಯೂ ಅವರು ಅಧಿಕ ಲವಲವಿಕೆಯಿಂದ ಉದ್ಯುಕ್ತರಾಗಿದ್ದರು.

ನವಂಬರ್ ತಿಂಗಳು. ಮಳೆ ನಿಂತಿತ್ತು. ಚಳಿ ಏರಿತ್ತು. ಪ್ರಿನ್ಸಿಪಾಲರೆಂದರು "ನಮ್ಮ ವಿದ್ಯಾರ್ಥಿಗಳು ಪುಸ್ತಕ ಪೆನ್ಸಿಲ್ ಮುಂತಾದ ಕಾಲೇಜು ಅವಶ್ಯಕತೆಗಳನ್ನು ಪಡೆಯಲು ಬಲು ಕಷ್ಟಪಡುತ್ತಿದ್ದಾರೆ. ಅವರಿಗೆ ಸುಲಭ ದರದಲ್ಲಿ ಇವು ದೊರೆಯುವಂತೆ ಒಂದು ಸಹಕಾರ ಸಂಘವನ್ನು ಕಾಲೇಜಿನಲ್ಲಿಯೇ ಪ್ರಾರಂಭಿಸಬಹುದೇ ? ಯೋಜನೆ ಮಾಡಿ."

ನಾನು ಕಂಡಿದ್ದ ದೃಶ್ಯವೇನು ? ನಮ್ಮ ವಿದ್ಯಾರ್ಥಿಗಳು ಕಾಲೇಜಿನಿಂದ ಒಂದು ಮೈಲಿ ದೂರದ ಪೇಟೆಯ ಗೂಡಂಗಡಿಗಳ ನವಾಬರ ಎದುರು ರಸ್ತೆಯಲ್ಲಿ ಮಳೆಗಾಳಿ ಲೆಕ್ಕಿಸದೆ ದೇಹಿ ಎಂದು ನಿಲ್ಲಬೇಕಾಗಿತ್ತು. ಕೃಪಾಹಸ್ತದಿಂದ ತಿರಸ್ಕಾರ ದೃಷ್ಟಿಯಿಂದ ಅವರೊಗೆದ ನಾಲ್ಕನೆಯ ದರ್ಜೆಯ ಸಾಮಗ್ರಿಗಳಿಗೆ ಇವರು ಒಂದನೆಯ ದರ್ಜೆಯ ಬೆಲೆ ತೆತ್ತು ಕೃತಾರ್ಥರಾಗಬೇಕಾಗಿತ್ತು. ದಿನದಿನ ಇದನ್ನು ನೋಡುತ್ತಿದ್ದೆ. ಒಂದು ದಿನ ನನ್ನಂಥ "ಅಗ್ರಗಣ್ಯ"ನಿಗೂ ಅದೇ ಅನುಭವವಾಯಿತು. ದರ ಮತ್ತು ದರ್ಜೆಯನ್ನು ಚೌಕಾಶಿ ಮಾಡಿದಾಗ "ನಿಮಗಿಷ್ಟವಿಲ್ಲದಿದ್ದರೆ ತಕ್ಕೊಳ್ಳಬೇಡಿ" ಎಂಬ ವ್ಯಾಧಾಸ್ತ್ರ ಪ್ರಯೋಗವಾಯಿತು. ಮುಂದಿನ "ಮಹಾಕಾವ್ಯ"ಕ್ಕೆ ಇದೇ ಪ್ರೇರಕ ಘಟನೆ—ಕಾಲೇಜಿನಲ್ಲಿ ಒಂದು ಸಹಕಾರ ಸಂಘ ಸ್ಥಾಪಿಸಲೇಬೇಕು, ಇದು ಆಗ ನಾನು ತಳೆದ ನಿರ್ಧಾರ. ಪ್ರಿನ್ಸಿಪಾಲರಿಂದ ಆ ಸೂಚನೆ ಬಂದಾಗ ಕಾಲ ಸರ್ವವಿಧದಲ್ಲಿಯೂ ಪಕ್ವವಾಗಿತ್ತು. ನಾನು ಸಂತೋಷದಿಂದ ಸಮ್ಮತಿ ಸೂಚಿಸಿದೆ. ಮುನ್ನೂರು ರೂಪಾಯಿ ಬಂಡವಾಳದಿಂದ ಕೊಡಗು

ಸರಕಾರೀ ಕಾಲೇಜ್ ಸಹಕಾರ ಸಂಘ ನಿಯಮಿತ, ಮಡಿಕೇರಿ, ಇದನ್ನು ಫೆಬ್ರುವರಿ ೧೯೫೪ರಲ್ಲಿ ನೋಂದಣಿ ಮಾಡಿಸಿಯೇಬಿಟ್ಟೆವು. ಜೂನ್ ಹೊತ್ತಿಗೆ—ಎಂದರೆ ಶಾಲೆ ಕಾಲೇಜುಗಳು ಆರಂಭವಾಗುವಾಗ—ನಮ್ಮ ಸಂಘ ಮಾರುಕಟ್ಟೆಯ ಮೇಲೆ ಬಲವಾದ ಪ್ರಹಾರವನ್ನೇ ಝಾಡಿಸಬೇಕೆಂಬುದು ಉದ್ದೇಶ.

ಬಂಡವಾಳ ಇಲ್ಲ, ವ್ಯಾಪಾರದ ಹಿಕ್ಮತ್ ತಿಳಿಯದು, ಉದ್ದೇಶದ ವಿವರಗಳೇನು ಎಂಬುದೇ ಗೊತ್ತಿರಲಿಲ್ಲ. ಮಾರ್ಚ್ ತಿಂಗಳ ಕೊನೆಗೆ ಕಾಲೇಜಿಗೆ ಬೇಸಗೆಯ ರಜೆ ದೊರೆಯಿತು. ಆಗ ಮಂಗಳೂರಿಗೆ ಹೋಗಿ ಪುಸ್ತಕತಯಾರಕರೊಡನೆ ಮತ್ತು ರಖಂವ್ಯಾಪಾರಿಗಳೊಡನೆ ವಿಚಾರವಿನಿಮಯ ನಡೆಸಿದೆ. ಬೇಸಿಗೆ ರಜೆ ಇಡೀ ಈ ಕೆಲಸವನ್ನು ಅದಿಂದ ಇದವರೆಗೆ ಎಂಬಂತೆ ನಾಲ್ಕೆಂಟು ಆಸಕ್ತ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಮಾಡಿದೆ. ಜೂನ್ ಆರಂಭದಲ್ಲಿ ಎರಡು ಲಾರಿ ತುಂಬ ಪುಸ್ತಕಗಳು ಸಾದಿಲ್ವಾರುಗಳು ಬಂದುವು—ಎಲ್ಲವೂ ನಂಬಿಕೆ, ಪ್ರಾಮಾಣಿಕತೆ, ನಮ್ಮ ಹಿಂದೆ ಕಾಲೇಜ್ ಸಂಸ್ಥೆ ಇದೆ ಎಂಬ ಬಂಡವಾಳದ ವಿನಿಮಯವಾಗಿ ಬಂದಂಥವು. ನಾವು ೪೦ ಪುಟಗಳ ಖಾಲಿ ಪುಸ್ತಕವನ್ನೂ ಗೆರೆ ಹಾಕಿದ ಪುಸ್ತಕವನ್ನೂ ಒಂದಾಣೆಗೆ ಮಾರಿದಾಗ ಪೇಟೆಯಲ್ಲಿ ತೀವ್ರ ಭೂಕಂಪನವೇ ಆಯಿತು. ಅಲ್ಲಿ ೩೬-ಪುಟಗಳ ಗೆರೆಹಾಕಿದ ಪುಸ್ತಕಕ್ಕೆ ಎರಡಾಣೆ, ಗೆರೆಹಾಕದ ಪುಸ್ತಕಕ್ಕೆ ಒಂದೂವರೆ ಆಣೆ! ನಮ್ಮ ಕಾಗದ ಉತ್ಕೃಷ್ಟ ದರ್ಜೆಯದು. ಹೆಚ್ಚು ಬೆಲೆಯ ಸಾಮಗ್ರಿಗಳಲ್ಲಿ ನಮ್ಮದು ಪೇಟೆಯ ದರದ ಅರ್ಧದಷ್ಟು ಕಡಿಮೆ ಇತ್ತು! ಕಾಲೇಜು ಸಂಘ ಒಂದು ಪವಾಡ ಎನ್ನುವಂಥ ಮಾತು ಮಡಿಕೇರಿಯಲ್ಲೂ ಹೊರಗೂ ಮನೆಮಾತಾಯಿತು. ಅಲ್ಲಿ ಕೆಲಸ ಮಾಡಿದವರು ನಮ್ಮ ವಿದ್ಯಾರ್ಥಿಗಳು. ಅವರಿಗೆ ಹಿಡಿಸಲಾರದಷ್ಟು ಸಂತೋಷ ಪ್ರಿನ್ಸಿಪಾಲರಿಗೆ ವೆಂಕಟರಮಣರಾಯರಿಗೆ ಸಹೋದ್ಯೋಗಿಗಳಿಗೆಲ್ಲ ಬಲು ಹೆಮ್ಮೆ.

ಈ ಮಧ್ಯೆ ನಮ್ಮ ಕಾಲೇಜಿನಲ್ಲಿ ಹೊಸತಾಗಿ ಎನ್‌ಸಿಸಿ ದಳದ ಪ್ರಾರಂಭವನ್ನು ಕುರಿತು ಸರಕಾರಕ್ಕೂ ಬೆಂಗಳೂರಿನಲ್ಲಿದ್ದ ಎನ್‌ಸಿಸಿ ಮುಖ್ಯ ಕಛೇರಿಗೂ ಪತ್ರವ್ಯವಹಾರ ನಡೆದಿತ್ತು. ಜನರಲ್ಲುಗಳ ತೂಗುತೊಟ್ಟಿಲು ವೀರಯೋಧರ ಆಡುಂಬೊಲವಾದ ಕೊಡಗಿನ ಏಕೈಕ ಕಾಲೇಜಿನಲ್ಲಿ ಎನ್‌ಸಿಸಿ ದಳ ಇಲ್ಲದಿರುವುದು ಬಲು ದೊಡ್ಡ ಕೊರತೆ ಎಂದು ಸರಕಾರಕ್ಕೂ ತಿಳಿದಿತ್ತು. ಕೊಡಗಿನ ಎಲ್ಲ ಹೈಸ್ಕೂಲುಗಳಲ್ಲಿಯೂ ಜೂನಿಯರ್ ಡಿವಿಶನ್ ಎನ್‌ಸಿಸಿ ಇದ್ದುದರಿಂದ ಈ ಶಿಕ್ಷಣ ಎಲ್ಲ ವಿದ್ಯಾರ್ಥಿಗಳಲ್ಲಿಯೂ ಸಾಕಷ್ಟು ಪ್ರಿಯವಾಗಿತ್ತು. ಫೆಬ್ರವರಿ (೧೯೫೪) ತಿಂಗಳಿನಲ್ಲಿ ಬೆಂಗಳೂರಿನಿಂದ ನಮ್ಮ ಕಾಲೇಜಿಗೆ ಬಂದಿದ್ದ ಮಿಲಿಟೆರಿ ಅಧಿಕಾರಿ ಮೇಜರ್ ಪಿ. ಜಿ. ಗಣಪತಿಯವರು ನನ್ನ ಎನ್‌ಸಿಸಿ ವಿವರಗಳನ್ನು ಕೇಳಿ ಬರೆದುಕೊಂಡು ಹೋಗಿದ್ದರು. ಮಿಲಿಟೆರಿ ಶಿಕ್ಷಣ ಪಡೆದಿರುವ ಒಬ್ಬ ಪ್ರಾಧ್ಯಾಪಕ ಈಗಾಗಲೇ ಇಲ್ಲಿರುವುದರಿಂದ ಎನ್‌ಸಿಸಿ ದಳದ ಪ್ರಾರಂಭ ಏನೂ ಕಷ್ಟವಾಗದು ಎಂದು ಅವರು ಭರವಸೆ ನೀಡಿದ್ದರು.

ನಾಳೆ ಎಂಬುದು ನಿನ್ನಿನ ಮನಸು
ಮುಂದೆ ಎಂಬುವದು ಇಂದಿನ ಕಣಸು
ಭೂತದಿಂದಲೇ ಭಾವವು ಬಂತು
ಭಾವವಿಲ್ಲದೇ ಉದ್ಭವವೆಂತು ?
—ಬೇಂದ್ರೆ

೧೯೫೪

ಯಾರಿವನು ?

ಜೂನ್ ತಿಂಗಳಿನ (೧೯೫೪) ಮೊದಲ ಆದಿತ್ಯವಾರ. ವಾಡಿಕೆಯಂತೆ ನಾನು ಬೆಳಗ್ಗೆ ಕಾಲೇಜಿಗೆ ಹೋಗಿದ್ದೆ. ನಮ್ಮ ಸಹಕಾರ ಸಂಘದಲ್ಲಿ ವ್ಯಾಪಾರ ಲೆಕ್ಕಾಚಾರ ಎಲ್ಲವನ್ನೂ ಮುಗಿಸಿ ೧ ಗಂಟೆ ವೇಳೆಗೆ ಮನೆಗೆ ಹೊರಟೆ. ಊರ ಹೊರಗಿನ ಎತ್ತರದ ದಿಬ್ಬದ ಮೇಲಣ ಭವ್ಯ ಕಟ್ಟಡ ನಮ್ಮ ಕಾಲೇಜು. ಹಸುರು ಸಮುದ್ರದ ನಡುವಣ ದೀಪಸ್ತಂಭ ನಮ್ಮ ಕಾಲೇಜು. ತಿಳಿನೀಲ ಆಗಸದ ಪರದೆಯ ಮೇಲೆ ಬಿಡಿಸಿರುವ ಚಿತ್ರಕಲೆ ನಮ್ಮ ಕಾಲೇಜು. ದಿನದಿನ ಅದರೆಡೆಗೆ ನಡೆದುಹೋಗುವಾಗ ನಮ್ಮ ಕಾಲುಗಳಿಗೆ ಅಧಿಕ ವೇಗೋತ್ಕರ್ಷ ನೀಡುತ್ತಿದ್ದುದು ಅದರ ಆಕರ್ಷಣ ಬಲ. ಅದರ ಆಶ್ರಯದಲ್ಲಿದ್ದುದರಿಂದ ನಮಗೆ ಸ್ಥಾನ ಮಾನ ಗೌರವ. ನಮ್ಮ ವಿವಿಧ ಅನ್ವೇಷಣೆಗಳಿಗೆ ಕ್ರೀಡೆಗಳಿಗೆ ಅದೊಂದು ಅನುಕೂಲ ಪ್ರಯೋಗ ಮಂದಿರ. ಮಾನವ ಗತಿಶಾಸ್ತ್ರದ (human dynamics) ನಿಯಮಗಳನ್ನು ಇಲ್ಲಿ ಕಲಿತಂತೆ ಇಲ್ಲಿ ಪ್ರಯೋಗಿಸಿದಂತೆ ಬೇರೆಲ್ಲಿಯೂ ನನಗೆ ಮಾಡಲಾಗಿರಲಿಲ್ಲ. ಕಾಲೇಜಿನೆದುರು ಇಳಿದಿಳಿದು ಸುತ್ತಿಸುತ್ತಿ ಸಾಗುವ ದಾರಿ ನಮ್ಮನ್ನು ಊರಿಗೆ ಕೊಂಡೊಯ್ಯುತ್ತದೆ. ಕಾಲೇಜಿನ ಜಗಲಿಯಲ್ಲಿ ನಿಂತವನಿಗೆ ಬಲು ದೂರದ ತಿರುಗಾಸಿನಲ್ಲಿ ರಸ್ತೆ, ಮರೆಯಾಗುವ ವರೆಗೂ ವಿಶಾಲ ಪ್ರದೇಶ ಅನಾವರಣಗೊಂಡಂಥ ದೃಶ್ಯ ಕಾಣುವುದು. ಇದು ರಸ್ತೆಯಲ್ಲ ಹಸುರು ದೇವಿಯ ಬೈತಲೆ! ಈ ದಾರಿಯಲ್ಲಿ ಈ ಕಾಲೇಜಿನಲ್ಲಿ ಈ ವಾತಾವರಣದಲ್ಲಿ ದಿನ ದಿನ ನಾನು ಹೊಸ ದೃಶ್ಯ ಕಂಡಿದ್ದೇನೆ, ಹೊಸ ಭಾವ ಅನುಭವಿಸಿದ್ದೇನೆ, ಹೊಸಬನೇ ಆಗಿದ್ದೇನೆ.

ಈ ದಿನ ಹೊಸತೇನು ? ದೂರದ ತಿರುಗಾಸಿನ ವರೆಗೆ ದೃಷ್ಟಿ ಬೀರಿದೆ. ವಿಶಿಷ್ಟವಾದ ಹೊಸತನ ಅಲ್ಲಿ ಕಂಡಿತು. ಹಸುರು ಘನೀಭವಿಸಿ ಹಸುರುಡುಪು ತೊಟ್ಟು ಕಾಲೇಜಿನ ಕಡೆಗೆ ನಡೆದು ಬರುವಂಥ ಅಸ್ಪಷ್ಟ ಚಿತ್ರ. ತವಕದಿಂದ ನಾನು ಇಳಿಯುತ್ತ ಸಾಗಿದೆ ; ಎದುರು ಬರುತ್ತಿದ್ದವನು ಆಲಿವ್‌ಗ್ರೀನ್ (ಓಜಿ) ವಸ್ತ್ರಧಾರಿ—ಎಂದರೆ ಮಿಲಿಟರಿ ಸಮವಸ್ತ್ರ ಧರಿಸಿದ ವ್ಯಕ್ತಿ. ಗಂಡುಸೆಂದರೆ ಹೀಗಿರಬೇಕು. ಆರು ಅಡಿಗಳನ್ನು ಮೀರುವ ಎತ್ತರ. ನೇರ ಗಂಭೀರ ನಡಿಗೆ. ಬಲು ಸುಟಿಯಾಗಿ ಒಪ್ಪುವ ಸಮವಸ್ತ್ರ. ನಡಿಗೆಯ ಒಂದೊಂದು ಹೆಜ್ಜೆಯಲ್ಲಿಯೂ ಅವನು ತ್ರಿವಿಕ್ರಮನಂತೆ ನಮ್ಮೂರನ್ನು ಅಕ್ಷರಶಃ ಅಳೆದುಕೊಂಡೇ ಮುಂದೆ ಬರುತ್ತಿದ್ದ.

ನಮ್ಮ ಅಂತರ ಕಿರಿದಾದಂತೆ ಅವನ ದರ್ಜೆಯನ್ನು ಗುರುತಿಸುವುದು ನನಗೆ ಸಾಧ್ಯವಾಯಿತು. ಅವನು ಮಿಲಿಟರಿ ಆಫಿಸರ್, ಕ್ಯಾಪ್ಟನ್ ದರ್ಜೆಯವನು. ಒಂದು ವರ್ಷದ ಮೇಲೆ ಕಂಡ ಈ ಅಕಸ್ಮಾತ್ ದೃಶ್ಯ ನನಗೆ ಬಲು ಪ್ರಿಯವಾಯಿತು.

"ನಮಸ್ಕಾರ, ಕ್ಯಾಪ್ಟನ್ ಸಾಹೇಬರೇ ! ನನ್ನಿಂದ ನಿಮಗೇನಾದರೂ ಸಹಾಯವಾದೀತೇ ?" ನಾನು ಮುಂದುವರಿದು ಹೀಗೆ ಹೇಳಿದೆ. ಪಂಚೆ, ಷರಟು ಉಡುಪಿನಲ್ಲಿದ್ದ

ನನ್ನನ್ನು ಅವನು ಗುರುತಿಸುವುದು ಹೇಗೂ ಸಾಧ್ಯವಿರಲಿಲ್ಲವಷ್ಟೆ. ಅವನೆದುರು ನಿಂತಿದ್ದ ನಾನು ದೈಹಿಕವಾಗಿ ಅದೆಷ್ಟು ಕುಬ್ಜ ಎಂದು ಅರಿವಾಗಿ ನಾಚಿಕೆಯಾಯಿತು. ನಮ್ಮ ಮಾತು ನಡೆದದ್ದು ಇಂಗ್ಲಿಷಿನಲ್ಲಿ.

"ನಮಸ್ಕಾರ ನಿಮಗೆ! ನಾನು ಕಾಲೇಜು ನೋಡಲು ಹೋಗುತ್ತಿದ್ದೇನೆ. ಎದುರು ಕಾಣುತ್ತಿರುವುದು ತಾನೇ ?"

"ನೀವು ಸರಿಯಾದ ದಾರಿಯಲ್ಲಿದ್ದೀರಿ. ನಾನು ಈ ಕಾಲೇಜಿನಲ್ಲಿ ಒಬ್ಬ ಅಧ್ಯಾಪಕ. ಆದ್ದರಿಂದ ನಿಮ್ಮನ್ನು ಕರೆದುಕೊಂಡು ಹೋಗಿ ತೋರಿಸಲು ನಿಮ್ಮೊಡನೆ ಬಂದರೆ ನಿಮಗೆ ತೊಂದರೆ ಆದೀತೇ ?"

"ಅದು ತುಂಬ ಉಪಕಾರ ಮತ್ತು ಸೌಜನ್ಯ ಎಂದು ತಿಳಿಯುತ್ತೇನೆ. ಬನ್ನಿ, ನೋಡಿ ಹಿಂತಿರುಗೋಣ."

"ಕ್ಯಾಪ್ಟನ್ ಸಾಹೇಬರೆ! ನೀವು ಯಾರು ಎನ್ನಲಿಲ್ಲವಲ್ಲ. ಈ ಆದಿತ್ಯವಾರ ಸಮವಸ್ತ್ರದಲ್ಲೇನು ಈ ಕಡೆ ಬರುತ್ತಿದ್ದೀರಿ ? ನೀವು ಕೊಡಗಿನವರಲ್ಲ ಎಂದು ನಿಮ್ಮ ಮಾತಿನಿಂದ ತಿಳಿಯುತ್ತದೆ."

"ಕ್ಷಮಿಸಿ. ನಾನು ಕ್ಯಾಪ್ಟನ್ ದೊರೈರಾಜ್, ಈ ಕಾಲೇಜಿನಲ್ಲಿ ಎನ್‌ಸಿಸಿ ದಳವನ್ನು ಪ್ರಾರಂಭಮಾಡಲು ನೇಮಕಗೊಂಡು ಬಂದಿರುವ ಮಿಲಿಟರಿ ಆಫಿಸರ್. ಈಗ ಒಂದು ಗಂಟೆ ಹಿಂದೆ ಈ ಊರಿಗೆ ಬಂದಿಳಿದೆ. ಅತಿಥಿಗೃಹದಲ್ಲಿ ನನ್ನ ವಸ್ತುಗಳೆಲ್ಲವನ್ನೂ ಇಟ್ಟು ನನ್ನ ಕಾರ್ಯಕ್ಷೇತ್ರವನ್ನು ನೋಡೋಣ ಎಂದು ಈ ಕಡೆಗೆ ಬರುತ್ತಿದ್ದೇನೆ."

"ನಾನು ಈ ಹಿಂದೆ ಎನ್‌ಸಿಸಿಯಲ್ಲಿದ್ದವನು. ನಿಮ್ಮ ಈ ಭೇಟಿ ಅದೆಂಥ ಆಶ್ಚರ್ಯಕರ ಹೊಂದಾಣಿಕೆ!"

"ಎಂದರೆ, ನೀವು ಲೆಫ್ಟಿನೆಂಟ್ ಜಿ. ಟಿ. ನಾರಾಯಣರಾವ್ ಎಂದು ಹೇಳುತ್ತಿಲ್ಲವಷ್ಟೆ?" ದೊರೈರಾಜರ ಪ್ರಶ್ನೆ. ನನ್ನ ಉಡುಪಿನಲ್ಲಿ ಯಾವ ತರಹದ ಮಿಲಿಟರಿತನವಾಗಲೀ ಎನ್‌ಸಿಸಿತನವಾಗಲೀ ಇಲ್ಲದಿದ್ದುದರಿಂದ ಅವರಿಗೆ ಆಶ್ಚರ್ಯ.

"ನೀವು ಹೇಳುವಂಥ ವ್ಯಕ್ತಿ ನಾನೇ! ಅದಿರಲಿ, ನನ್ನ ಹೆಸರು ವಿವರ ನಿಮಗೆ ಹೇಗೆ ತಿಳಿಯಿತು ?"

"ಬೆಂಗಳೂರಿನಲ್ಲೇ ತಿಳಿದುಕೊಂಡೆ. ಎನ್‌ಸಿಸಿ ಮುಖ್ಯ ಕಛೇರಿಯಲ್ಲಿ ಈ ಊರಿನ ಈ ಕಾಲೇಜಿನ ನಿಮ್ಮ ವಿವರಗಳನ್ನು ಸಂಗ್ರಹಿಸಿಕೊಂಡಿದ್ದೇನೆ."

"ನಿಮ್ಮ ಈ ಸಾಧನೆ ನಿಜವಾಗಿಯೂ ದಂಗುಬಡಿಸುವಂಥದು."

"ಇಲ್ಲ, ಇಲ್ಲ. ಮಿಲಿಟರಿ ಕ್ರಮವೇ ಹಾಗೆ. ಜಾಗ ನೋಡಿ ಲಾಗ ಹೊಡಿ ಎಂದು ನೀವು ಹೇಳುವುದಿಲ್ಲವೇ ? ಅದರಂತೆಯೇ ಈ ವಿಧಾನ. ಪ್ರತಿಯೊಬ್ಬ ಆಫಿಸರನೂ ಆತನ ಯೋಧರನ್ನೂ ಅವರಿರುವ ಸ್ಥಳದ ಎಲ್ಲ ಮಾಹಿತಿಗಳನ್ನೂ ತಿಳಿದಿರಲೇಬೇಕು."

ಇಷ್ಟಾಗುವಾಗ ನಾವು ಕಾಲೇಜು ತಲಪಿದೆವು. ಆ ವೇಳೆಗೆ ನಮ್ಮ ವಿದ್ಯಾಮಂತ್ರಿ ಕೆ. ಮಲ್ಲಪ್ಪನವರು ಕಾಲೇಜು ಹಾಸ್ಟೆಲ್ ಹೇಗೆ ಮುಂದುವರಿಯುತ್ತಿದೆ ಎಂದು ನೋಡಲು ಅಲ್ಲಿಗೆ ಬಂದಿದ್ದರು. ದೊರೈರಾಜರನ್ನು ಅವರಲ್ಲಿಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದೆ. "ದೊರೈರಾಜ್! ನೀವು ಮುಂದುವರಿಸಿ. ನಮ್ಮ ಈ ಹುಡುಗ ನಿಮಗೆ ಎಲ್ಲ

ವಿಧದಲ್ಲಿಯೂ ನೆರವಾಗುತ್ತಾನೆ. ಸರಕಾರ ನಿಮ್ಮ ಬೆಂಬಲಕ್ಕಿದೆ. ಕಾಲೇಜಿನ ವಿದ್ಯಾರ್ಥಿಗಳನ್ನು ಉತ್ಕೃಷ್ಟ ವ್ಯಕ್ತಿಗಳಾಗಿ ಮಾಡಿ'' ಅವರೆಂದರು.

ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿ ಎನ್‌ಸಿಸಿ

ಮರುದಿವಸ ಸೋಮವಾರ. ಕ್ಯಾಪ್ಟನ್ ದೊರೈರಾಜ್ ಕಾಲೇಜಿಗೆ ಬಂದು ಪ್ರಿನ್ಸಿಪಾಲರಿಗೂ ರಜಾದಿನಗಳಲ್ಲಿ ಕಾಲೇಜಿಗೆ ಬಂದಿದ್ದ ಇತರ ಪ್ರಾಧ್ಯಾಪಕರಿಗೂ ಗೌರವ ಸಲ್ಲಿಸಿ ತಮ್ಮ ಪರಿಚಯ ಹೇಳಿಕೊಂಡರು. ``ಕೂರ್ಗ್ ಇಂಡೆಪೆಂಡೆಂಟ್ ಕಂಪನಿ ಎನ್‌ಸಿಸಿ ಎಂದು ನಮ್ಮ ಆಫೀಸಿನ ಹೆಸರು. ಇದರ ಆಶ್ರಯದಲ್ಲಿ ಈ ಕಾಲೇಜಿನಲ್ಲಿ ಪ್ರಾರಂಭವಾಗಲಿರುವ ಎನ್‌ಸಿಸಿ ದಳವೂ ಕೊಡಗಿನ ಎಲ್ಲ ಶಾಲೆಗಳ ಎನ್‌ಸಿಸಿ ದಳಗಳೂ ಬರುತ್ತವೆ. ನಮ್ಮನ್ನು ನಿಮ್ಮ ಸಹೋದ್ಯೋಗಿ ಎಂದೇ ಭಾವಿಸಿ. ಈ ಕಾಲೇಜಿನ ಒಂದು ಅಂಶ ನಮ್ಮ ಎನ್‌ಸಿಸಿ ಎಂಬುದನ್ನು ಅಕ್ಷರಶಃ ನಂಬಿ ಕಾರ್ಯರೂಪಕ್ಕೆ ತರುವವ ನಾನು. ನಿಮ್ಮ ಸಹಕಾರ ಸೌಹಾರ್ದ ನನಗೆ ಸದಾ ಬೇಕು.''

ಈ ತಿಳಿನುಡಿ ಈ ಪಾರಕ ಸ್ವಭಾವ ಒಂದು ಸಂವೃತ ವ್ಯವಸ್ಥೆಯಾಗಿದ್ದ ಕಾಲೇಜಿನ ಪ್ರಾಧ್ಯಾಪಕರಲ್ಲಿ ಸಂತೋಷವನ್ನೂ ದೊರೈರಾಜರನ್ನು ಕುರಿತು ಒಲವನ್ನೂ ಉಂಟು ಮಾಡಿದುವು. ಕಾಲೇಜಿನ ಪಕ್ಕದ ಹಾಸ್ಟೆಲಿನಲ್ಲಿ ಮೂರು ಕೋಣೆಗಳ ಒಂದು ಸಾಲು ದೊರೈರಾಜರ ಕಛೇರಿ.

ಇಷ್ಟಾಗುವಾಗ ನನ್ನ ಹಳೆಯ ಮಿತ್ರ ಜನಾರ್ದನ ಬಾಳಿಗರು, ಸೇಂಟ್ ಅಲೋಯ್ಸಿಯಸ್ ಕಾಲೇಜಿನಲ್ಲಿ ಎನ್‌ಸಿಸಿ ಆಫಿಸರ್ ಆಗಿ ನನ್ನ ಕಡಾವುಗಳಿಗೆ ಕಾಲಿಟ್ಟವರು, ಮಡಿಕೇರಿಯ ಕಾಲೇಜಿಗೆ ಭೌತಶಾಸ್ತ್ರದ ಅಧ್ಯಾಪಕರಾಗಿ ನೇಮಕಗೊಂಡು ನಮ್ಮ ತಂಡ ಸೇರಿದರು. ಹೀಗೆ ನಮ್ಮ ಎನ್‌ಸಿಸಿ ಕಂಪೆನಿಗೆ ಮಿಲಿಟೆರಿ ಶಿಕ್ಷಣ ಪಡೆದಿದ್ದ ಈರ್ವರು ನಿರಾಯಾಸವಾಗಿ ದೊರೆತಂತಾಯಿತು. ಮೂರನೆಯ ಒಂದು ಸ್ಥಾನ ಖಾಲಿ ಉಳಿದಿತ್ತು. ದಿನಗಳುರುಳಿದಂತೆ ಎನ್‌ಸಿಸಿ ಆಫೀಸ್ ಬೃಹತ್ತಾಗಿ ಬೆಳೆಯಿತು. ಮಿಲಿಟೆರಿ ಜೆಸಿಓ, ಎನ್‌ಸಿಓಗಳು ಬಂದರು. ಮಿಲಿಟೆರಿ ಲಾರಿ, ರೈಫಲ್ ಮುಂತಾದ ಶಸ್ತ್ರಗಳು, ಸಮವಸ್ತ್ರಗಳು, ಇತರ ಸಾಮಗ್ರಿಗಳು ಬಂದುವು. ಪೇದೆಗಳು, ಗುಮಾಸ್ತರು, ಬೆರಳಚ್ಚುಗಾರರು, ಮುಖ್ಯ ಗುಮಾಸ್ತ ಎಲ್ಲರೂ ಒಂದುಗೂಡಿದರು. ಕೂರ್ಗ್ ಇಂಡೆಪೆಂಡೆಂಟ್ ಕಂಪೆನಿ ಒಂದು ಪುಟ್ಟ ಮಿಲಿಟೆರಿ ಠಾಣ್ಯವಾಯಿತು.

ದೊರೈರಾಜರ ದುಡಿಮೆ ಅಸಾಧಾರಣ ಮಟ್ಟದ್ದು. ಊಟ, ವಿಶ್ರಾಂತಿ ಪರಿವೆ ಇಲ್ಲದೇ ಆ ಜಡಿಮಳೆಯ ಬಿರುಗಾಳಿಯ ದಿವಸಗಳಲ್ಲಿ ಅವರೂ ಅವರ ತಂಡದವರೂ ದುಡಿದರು. ಬಾಳಿಗರೂ ನಾನೂ ಬೇರೆ ರೀತಿಯಲ್ಲಿ (ಎಂದರೆ ಕಾಲೇಜಿನ ಪ್ರವೇಶಗಳು, ಸಹಕಾರ ಸಂಘದ ಅತಿ ವ್ಯಾಪಾರ, ಲೆಕ್ಕಾಚಾರ, ಕ್ಲಾಸುಪಾಠಗಳು ಮುಂತಾದವು) ಇಡೀ ದಿವಸ ಕಾಲೇಜಿನಲ್ಲಿಯೇ ಇರಬೇಕಾಗುತ್ತಿತ್ತು. ಹಲವಾರು ಸಲ ಬಿಡುವು ಮಾಡಿಕೊಂಡು ನೆರೆ ಕಟ್ಟಡದಲ್ಲಿದ್ದ ದೊರೈರಾಜರಲ್ಲಿಗೆ ಹೋಗಿ ನಮ್ಮ ಸಹಕಾರ ಸದಾ ಇದೆಯೆಂದೂ ಏನಾದರೂ ಆಗಬೇಕಾದರೆ ತಿಳಿಸಬೇಕೆಂದೂ ವಿನಂತಿಸಿಕೊಂಡೆವು. ನಮಗೆ ಅತಿ ಸೌಜನ್ಯಯುತವಾದ ಧನ್ಯವಾದಗಳನ್ನು ಅವರು ನೀಡುತ್ತ ``ಈಗ ನಿಮಗೆ ಕಾಲೇಜಿನಲ್ಲಿಯೇ

ಎಷ್ಟು ಕೆಲಸವಿದೆ ಎಂದು ನಾನೇ ನೋಡುತ್ತಿದ್ದೇನೆ. ಆದರ ಜೊತೆಗೆ ಈ ಹೊರೆಯನ್ನೂ ಸೇರಿಸಲು ನಾನು ಇಷ್ಟಪಡುವುದಿಲ್ಲ. ಜುಲೈ ೧೫ರ ಅನಂತರ ಕ್ಯಾಡೆಟ್ಟುಗಳನ್ನು ಸೇರಿಸಿಕೊಂಡಾಗ ನೀವು ತಾನೇ ಶಿಕ್ಷಣ ನಿರ್ವಹಿಸಬೇಕಾದವರು!'' ಎನ್ನುತ್ತಿದ್ದರು.

ಜುಲೈ ಮೂರನೆಯ ವಾರದಲ್ಲಿ ಹುಡುಗರಿಗೆ ಎನ್‌ಸಿಸಿಗೆ ಸೇರಲು ಕರೆಕೊಡುವ ಪತ್ರ ಬಂದಿತು. ನಾನೊಂದು ಕ್ಲಾಸಿನಲ್ಲಿದ್ದೆ. ದೊರೈರಾಜರ ರುಜುವಿರುವ ಆ ಕಾಗದವನ್ನು ಹುಡುಗರಿಗೆ ಓದಿ ಹೇಳಿದಾಗ ಸಹಜವಾಗಿ ಅವರು ಹಲವಾರು ಪ್ರಶ್ನೆಗಳನ್ನು ಕೇಳಿದರು. ಕ್ಲಾಸ್ ಬಿಟ್ಟ ಮೇಲೆಯೂ ಹಲವಾರು ಹುಡುಗರು ನನ್ನ ಹತ್ತಿರ ಬಂದು ಎನ್‌ಸಿಸಿಯನ್ನು ಕುರಿತು ಆಸಕ್ತಿಯ ಪ್ರಶ್ನೆಗಳನ್ನು ಕೇಳಿದರು. ನನಗೆ ಯಾವ ವಿವರವೂ ತಿಳಿದಿರಲಿಲ್ಲ. ಅಲ್ಲದೇ ನಮ್ಮ ಸಹಕಾರ ಸಂಘದ ನಿಬಿಡ ವ್ಯಾಪಾರದಲ್ಲಿ ''ಬದುಕಲೇ ಪುರಸೊತ್ತು ಇರಲಿಲ್ಲ!'' ಆಗ ಇಂಥ ಪ್ರಶ್ನೆಗಳನ್ನು ಬೇರೆ ಬೇರೆ ಹುಡುಗರು ಬೇರೆ ಬೇರೆ ವೇಳೆಯಲ್ಲಿ ಬಂದು ಕೇಳಿದಾಗ, ಅವರಲ್ಲಿ ಪ್ರತಿಯೊಬ್ಬನಿಗೂ ಈ ಪ್ರಶ್ನೆ ಮೊದಲಿನದೇ ಆದರೂ ನನಗೆ ಮಾತ್ರ ಅದು *n*ನೇ ಸಲದ್ದಾದ್ದರಿಂದ ''ನನಗೊತ್ತಿಲ್ಲ. ಯಾಕೆ ಈ ಹಿಂಸೆ? ಯಾರು ರುಜು ಹಾಕಿದ್ದಾರೋ ಅಲ್ಲಿ ಹೋಗಿ ಕೇಳಿ'' ಎಂದು ಮುಖ ಸಿಂಡರಿಸಿ ಹೇಳಿದ್ದೆ. ಹೇಳಿದ ಮೇಲೆ ಹಾಗೆ ಹೇಳಬಾರದಿತ್ತು, ಹುಡುಗರ ಮುಂದೆ ನಮ್ಮ ಮೇಲಧಿಕಾರಿಗಳನ್ನು ಕುರಿತ ಯಾವ ಅಸಮಾಧಾನದ ಛಾಯೆಯನ್ನೂ ವ್ಯಕ್ತಪಡಿಸಬಾರದಿತ್ತು ಅಂದುಕೊಂಡೆ. ಆದಷ್ಟು ಬೇಗನೆ ಬಿಡುವು ಮಾಡಿಕೊಂಡು (ಸಂಘದ ಗಲ್ಲದಲ್ಲಿ—ಗಲ್ಲಿಯಲ್ಲಿಯೂ ಸಹ ಎನ್ನಿ ಬೇಕಾದರೆ—ಕುಳಿತು ವ್ಯಾಪಾರ ನಿರ್ವಹಿಸುವಾಗ ಎದ್ದು ಹೊರಡುವುದು ಸುಲಭ ಅಲ್ಲ) ದೊರೈರಾಜರ ಕಛೇರಿಗೆ ಹೋದೆ.

ಎಂದಿನಂತೆ ಅವರ ಕೋಣೆಗೆ ನಯವಾಗಿ ಪ್ರವೇಶಿಸಿ ಮಿಲಿಟರಿ ಕ್ರಮದಲ್ಲಿ ಸಾವಧಾನ ಸ್ಥಿತಿಯಲ್ಲಿ ನಿಂತು ''ಗುಡ್ ಈವ್‌ನಿಂಗ್, ಸರ್'' ಎಂದು ಆಶಂಸಿಸಿದೆ.

''I will see you later'' ಎಂದು ನಿಷ್ಠುರ ಉತ್ತರ ದೊರೆಯಿತು.

''ಕ್ಷಮಿಸಿ. ಕ್ಯಾಡೆಟ್ಟುಗಳ ರಿಕ್ರೂಟ್‌ಮೆಂಟ್ ವಿಚಾರ ವಿವರ ತಿಳಿಯಲು ಬಂದೆ.'' ನಾನು ನಿಂತೇ ಇದ್ದೆ. ಕೂರಲು ಅವರು ಹೇಳಲಿಲ್ಲ.

''ನೋಟೀಸಿನಲ್ಲಿದ್ದುದಕ್ಕಿಂತಲೂ ಹೆಚ್ಚೇನೂ ಇಲ್ಲ.''

''ಹುಡುಗರು ಬಂದು ನನ್ನನ್ನು ಕೇಳುತ್ತಾರೆ.''

''ಅವರಿಗೆ ಸಮರ್ಪಕವಾಗಿ ಉತ್ತರ ನೀಡಲು ನಿಮಗೆ ತಿಳಿದಿದೆಯಷ್ಟೆ.''

''ಧನ್ಯವಾದಗಳು. ಬರುತ್ತೇನೆ.'' ಪುನಃ ಮಿಲಿಟರಿ ಕ್ರಮದ ಮದನೆ ಸಲ್ಲಿಸಿ ನಾನು ಹೊರಟೆ.

ಅಪಸ್ವರ

ಇದು ಏಕೆ ಹೀಗೆ? ಬಾಳಿಗರೊಡನೆ ವಿಚಾರವಿನಿಮಯ ಮಾಡಿದೆ. ನನ್ನದು ಎಷ್ಟು ದುಡುಕು ಪ್ರವೃತ್ತಿಯೋ ಅವರದು ಅಷ್ಟೇ ಸಮಾಧಾನ ಪ್ರವೃತ್ತಿ. ನಮಗಿಬ್ಬರಿಗೂ ಬಗೆಹರಿಯದ ಒಗಟಾಯಿತು ದೊರೈರಾಜರ ವರ್ತನೆ. ಈಗ ನಮ್ಮ ಕರ್ತವ್ಯ ಏನು? ಮೇಲಧಿಕಾರಿಗಳಿಂದ ರುಜುವಾದ ಕಾಗದ ನಾವು ಓದಿದ್ದೇವೆ. ನಾವಿಬ್ಬರೂ ಎನ್‌ಸಿಸಿ

ಆಫಿಸರುಗಳು. ಆದ್ದರಿಂದ ನಮಗೆ ಪ್ರತ್ಯೇಕವಾಗಿ ಹುಕುಂ ಬರದಿದ್ದರೂ ಈ ಕಾಗದದ ವಿವರದ ಅನುಸಾರ ಹುಡುಗರನ್ನು ರಿಕ್ರೂಟ್ ಮಾಡುವ ಗಳಿಗೆಯಲ್ಲಿ ನಾವು ಹಾಜರಿರ ತಕ್ಕದ್ದು. ಓಸಿ (ಆಫಿಸರ್ ಕಮಾಂಡಿಂಗ್—ಎಂದರೆ ಇಲ್ಲಿ ಕ್ಯಾಪ್ಟನ್ ದೊರೈರಾಜ್) ವಿಧಿಸಿದ ಕಾರ್ಯವನ್ನು ನಿರ್ವಹಿಸತಕ್ಕದ್ದು ಎಂದು ತೀರ್ಮಾನಿಸಿಕೊಂಡೆವು. ರಿಕ್ರೂಟ್ ಮೆಂಟ್ ದಿವಸ ಬಂದಿತು. ನಾವು ೧೫ ವಿನಿಟು ಮೊದಲೇ ಕಾಲೇಜ್ ಜಗಲಿಯಲ್ಲಿ ಹಾಜ ರಾದೆವು. ಅಂಗಳ, ಮೈದಾನಗಳನ್ನು ಪ್ರವೇಶಿಸುವಂತಿಲ್ಲ—ಅಷ್ಟು ಜಡಿಮಳೆ ಸುರಿಯು ತ್ತಿತ್ತು. ದೊರೈರಾಜರು ಅವರ ಮಿಲಿಟರಿ ಪರಿವಾರ ಸಮೇತ ಬಿಜಯಂಗೈದಾಗ ನಾವು ಯುಕ್ತ ವಂದನೆ ಸಲ್ಲಿಸಿದೆವು. ಅವರು ಅದನ್ನೇನೋ ಸ್ವೀಕರಿಸಿದರು. ಆದರೆ ನಮ್ಮೊಡನೆ ಮಾತಾಡಲಿಲ್ಲ. ಬಳಿಯಲ್ಲಿದ್ದ ಸುಬೆದಾರನಿಗೆ ಸೂಚನೆಗಳನ್ನು ನೀಡಿ ಮುಂದಿನ ಕೆಲಸ ಮಾಡಲು ಕಳಿಸಿದ್ದು ಕಂಡಿತು.

ಸುಬೆದಾರ್ ಬಿಗಿಲೂದಿದ. ಹುಡುಗರಿಗೆ "Fall in" ಹುಕುಂ ನೀಡಿದ. ಎನ್‌ಸಿಓ ಗಳು ಹುಡುಗರನ್ನು ಓರಣವಾಗಿ ನಿಲ್ಲಿಸುವುದರಲ್ಲಿ ಸಹಾಯಮಾಡಲು ಮುಂದಾದರು. ಎನ್‌ಸಿಓಗಳ ಮುಖ್ಯಸ್ಥ ಕಂಪೆನಿ ಹವಿಲ್ದಾರ್ ಮೇಜರ್ (ಸಂಕ್ಷೇಪವಾಗಿ ಸಿಎಚ್‌ಎಂ). ಈತ ಇಡೀ ಪೆರೇಡಿನ ನಾಯಕತ್ವ ವಹಿಸಿಕೊಂಡು ಅದನ್ನು ಸುಬೆದಾರನಿಗೆ ಮಿಲಿಟರಿ ಕ್ರಮದಲ್ಲಿ ವರ್ಗಮಾಡಿದ (ಅಂದರಿಷ್ಟೆ—ಓರಣವಾಗಿ ನಿಂತ ಹುಡುಗರನ್ನು ಸಾವಧಾನ್ ಸ್ಥಿತಿಗೆ ತಂದು ಅವರ ಸಂಖ್ಯೆ ಮುಂತಾದ ವಿವರ ಸಮೇತ ಸುಬೆದಾರನಿಗೆ ಹೋಗಿ ವರದಿ ಮಾಡುವುದು "೧೨೦ ಕ್ಯಾಡೆಟ್ಟುಗಳೂ ೮ ಎನ್‌ಸಿಓಗಳೂ ಪೆರೇಡಿನಲ್ಲಿ ಹಾಜರಿದ್ದಾರೆ. ಸಾಬ್.") ಪೆರೇಡನ್ನು ಸುಬೆದಾರ್ ಪರಿಶೀಲಿಸಿ ಓಸಿಗೆ ಅದನ್ನು ಒಪ್ಪಿಸಿದ. ನ್ಯಾಯ ವಾಗಿ ಸುಬೆದಾರ್ ನನಗೆ ಪೆರೇಡನ್ನು ಒಪ್ಪಿಸಬೇಕಿತ್ತು; ಅನಂತರ ನಾನು ಓಸಿಗೆ ಒಪ್ಪಿಸ ಬೇಕಿತ್ತು. ಈ ಅಕ್ರಮ ನನಗೆ (ಮತ್ತು ಬಾಳಿಗರಿಗೆ) ಮಾಡಿದ ಉದ್ದೇಶಪೂರ್ವಕ ಅಪಚಾರ ಎಂದೆನ್ನಿಸಿತು. ಹಾಗಿದ್ದರೂ ನಾವು ಅಲ್ಲಿ ಏನೂ ಮಾಡುವಂತಿರಲಿಲ್ಲ. ಬೆಕ್ಕು ಗಳ ರಾಜ್ಯದಲ್ಲಿ ಇಲಿಗಳು ಬೇರೇನು ಮಾಡಿಯಾವು? ಪೆರೇಡಿನ ಆ ಒಂದೂವರೆ ಗಂಟೆ ಕಾಲವೂ ನಾವು, ದುರಹಂಕಾರೀ ಶ್ರೀಮಂತರ ಮನೆಯ ಬಡ ಸಂಬಂಧಿಕರಂತೆ, ಕಾಲ ಕಳೆದೆವು. ಕೊಡಗಿನ ಹುಡುಗರು ಧಾಂಡಿಗರು. ಮಿಲಿಟರಿ ವಿಚಾರ ಆಸಕ್ತಿ ಇರುವವರು. ಪ್ರತಿಯೊಂದು ಸಂಸಾರದಲ್ಲೂ ಸಾಮಾನ್ಯವಾಗಿ ಒಬ್ಬನಾದರೂ ಮಿಲಿಟರಿ ಸೇರಿದಾತ ಇರುವುದರಿಂದ ಆ ದಾರಿಯಲ್ಲಿ ಅವರ ಒಲವು ಅಧಿಕ. ಇಂಥ ಹುಡುಗರ ನಡುವೆ ನಾಯಕತ್ವಕ್ಕೆ ತೀವ್ರ ಪೈಪೋಟಿ ಇತ್ತು. ಈಗಿನಿಂದಲೇ ನಾಯಕನಾಗಿ ಮುಂಚೂಣಿ ಯಲ್ಲಿದ್ದರೆ ಮುಂದೆ ಮಿಲಿಟರಿ ಸೇರಿದಾಗ ಅಥವಾ ಬೇರಾವುದಾದರೂ ಉದ್ಯೋಗ ಹಿಡಿ ದಾಗ ಇದು ಪರಿಣಾಮಕಾರಿಯಾಗಬಲ್ಲುದು ಎಂಬುದು ಅವರೆಲ್ಲರಲ್ಲ ಇದ್ದ ಪ್ರಜ್ಞೆ. ನಾಯಕನನ್ನು ಆರಿಸುವುದು ಹೇಗೆ ಎಂಬ ಸಮಸ್ಯೆ ಬೇರೆ ಊರುಗಳಲ್ಲಿ ಎದುರಾದರೆ ಯಾರನ್ನು ಬಿಡುವುದು ಎಂಬ ಬೇರೆ ವಿಧದ ಸಮಸ್ಯೆಯನ್ನೇ ಇಲ್ಲಿ ಎದುರಿಸಬೇಕಾಗಿತ್ತು.

ಆ ಒಂದೂವರೆ ಗಂಟೆ ಕಾಲದ ಪೆರೇಡಿನಲ್ಲಿ ದೊರೈರಾಜರು ವಿದ್ಯಾರ್ಥಿ ನಾಯಕರ ಆಯ್ಕೆಯ ಕಾರ್ಯವನ್ನೂ ಮಾಡಿದರು. ಒಬ್ಬ ವಿದ್ಯಾರ್ಥಿ (ಕ್ಲಾಸಿನಲ್ಲಿ ಇವನು ನನ್ನ ಶಿಷ್ಯ) ಜನರಲ್ ಕಾರ್ಯಪ್ಪನವರ ಸಮೀಪ ಸಂಬಂಧಿ, ನೋಡಲು ಭವ್ಯವಾಗಿದ್ದಾನೆ

ಎಂಬ ಬಾಹ್ಯ ಕಾರಣದಿಂದ ಕ್ಯಾಡೆಟ್ ಸೀನಿಯರ್ ಅಂಡರ್ ಆಫಿಸರ್ (ಸಂಕ್ಷೇಪವಾಗಿ ಎಸ್‌ಯೂಓ) ಆಗಿ ನೇಮಕಗೊಂಡಾಗ ನನಗೆ ತಡೆಯಲಾಗಲಿಲ್ಲ. ಮಂಗಳೂರಿನಲ್ಲಿ ನಾನು ಆರಿಸಿದ ಕ್ರಮ ಏನಾಯಿತು? ಎಂಆರ್‌ಸಿಯಲ್ಲಿ ನಾನು ಕಲಿತ ಪಾಠ ಎಲ್ಲಿ ಹೋಯಿತು? ಸಾಕ್ಷಾತ್ ದೇವರೇ ಬಂದರೂ ನೂರಾರು ಹುಡುಗರಲ್ಲಿ ಸರ್ವಸಮರ್ಥನಾದವ ಯಾರೆಂದು ಕೇವಲ ಒಂದೂವರೆ ಗಂಟೆಯಲ್ಲಿ ಆರಿಸಬಲ್ಲನೇ? ನನಗೆ ಸಂದೇಹವಿದೆ. ಏಕೆಂದರೆ ದೇವರ ನಾಲಗೆ ಎಂದು ಹೇಳಿಕೊಳ್ಳುವ, ಜನ ಹಾಗೆಂದು ನಂಬಿ ಪೂಜಿಸುವ, ದೇವಮಾನವರನ್ನೇ ನೋಡುವಾಗ ನಮ್ಮ ಕಲ್ಪನೆಯ ಭಗವಂತ ನಮ್ಮಂತೆಯೇ ತಪ್ಪು ಮಾಡಬಲ್ಲ ಎಂದೇ ದೃಢವಾಗುವುದು. ಇನ್ನು ವಿದ್ಯಾರ್ಥಿಗಳ ಈ ಪ್ರಧಾನ ಪುರುಷ ಕಾಲೇಜಿನಲ್ಲಿ ಹೆಸರಾಂತ ರೌಡಿ. ರೌಡಿತನವೇ ಮುಂದಾಳುತನವಾದರೆ ಎನ್‌ಸಿಸಿ ಏಕೆ? ಉಪನಾಯಕರುಗಳಾಗಿ ದೊರೈರಾಜರು ಆರಿಸಿದ ಇತರ ವಿದ್ಯಾರ್ಥಿ ಮುಂದಾಳುಗಳೂ ರೌಡಿತನಕ್ಕೆ ಪ್ರಸಿದ್ಧರಾಗಿದ್ದವರೇ! ಸಚ್ಛೀಲವಂತರು, ಆಸಕ್ತರು—ಇಂಥ ವಿದ್ಯಾರ್ಥಿಗಳೆಲ್ಲರೂ ನಿಜವಾದ ಶಿಕ್ಷಣದಲ್ಲಿ ಆಸಕ್ತರು—ಈ ದರ್ಜೆಯ ವಿದ್ಯಾರ್ಥಿಗಳೆಲ್ಲರೂ ದೊರೈರಾಜರ ಆ ದರ್ಬಾರಿನಲ್ಲಿ ಗಸಿಯಾದರು. ಪೆರೇಡ್ ಮುಗಿದು ಸದ್ದುಗದ್ದಲವಿಲ್ಲದೇ ನಾವು ಹೊರಡಲು ನಿಂತಿದ್ದಾಗ ಓಸಿ ಸಾಹೇಬರು ನಮ್ಮೆಡೆಗೆ ಬಂದರು. "ನನ್ನ ಆಯ್ಕೆಯನ್ನು ನೀವು ನೋಡಿದಿರಾ? ಇವರೇ ನಾಳೆ ಮಿಲಿಟರಿಯಲ್ಲಿ ಮೇಲೆ ಮೇಲೆ ಏರುವವರು. ಏನಂತೀರಿ?"

ಕಂಡದ್ದನ್ನು ತತ್‌ಕ್ಷಣ ಹೇಳಿಬಿಡುವ ಸ್ವಭಾವ ನನ್ನದು. ನೈಸಾಣಿ, ಹೇಳಿದುದರ ಪರಿಣಾಮ ಇವು ಯಾವುವೂ ಆ ಗಳಿಗೆಯಲ್ಲಿ ಲಕ್ಷ್ಯದಲ್ಲಿ ಬಾರವು. ಬಾಳಿಗರದು ಬಲು ಗಂಭೀರ ಮತ್ತು ಮೌನ ಪ್ರವೃತ್ತಿ. ನಮ್ಮಿಬ್ಬರಲ್ಲಿ ನಾನು (ಎನ್‌ಸಿಸಿ ಮಟ್ಟಿಗೆ) ಹಿರಿಯನಾದ್ದರಿಂದ ಮಿಲಿಟರಿ ಶಿಸ್ತಿನ ಪ್ರಕಾರ ನಾನೇ ಉತ್ತರ ಕೊಡಬೇಕಾದವನು. ನಾನು ಅಡರನ್ನು ಮುರಿದಂತೆ ಉತ್ತರವಿತ್ತೆ "ರೌಡಿತನಕ್ಕೆ ಪಟ್ಟ ದೊರೆಯಿತು."

ಓಸಿ ಮುಖ ಹೇಗೆ ಹೇಗೋ ಆಯಿತು "ನಿಮ್ಮಿಂದ ಬೇರೆ ಉತ್ತರ ಬರಲಾರದೆಂದು ನನಗೆ ಮೊದಲೇ ಗೊತ್ತಿತ್ತು."

ತೆರೆದ ಮನ

ಮರುದಿವಸ ಬಾಳಿಗರೂ ನಾನೂ ದೊರೈರಾಜರ ಕಛೇರಿಗೆ ಹೋದೆವು. ಮೊದಲೇ ನಿಶ್ಚಯಿಸಿಕೊಂಡಿದ್ದ ಪ್ರಕಾರ ನಾನು ಮಾತನ್ನು ಪ್ರಾರಂಭಿಸಿದೆ. "ನಿಮ್ಮ ವರ್ತನೆಯಿಂದ ನಿಮಗೆ ನಮ್ಮ ಮೇಲೆ ವಿಶ್ವಾಸವಿಲ್ಲವೆಂದು ಭಾಸವಾಗುತ್ತಿದೆ. ಇದರಲ್ಲಿ ನಮ್ಮ ತಪ್ಪು ಏನಿದೆ ಎಂದು ದಯವಿಟ್ಟು ತಿಳಿಸುತ್ತೀರಾ?"

ತೆರೆದ ಮನದ ಈ ನೇರಪ್ರಶ್ನೆಯಿಂದ ಅವರು ಒಂದು ಕ್ಷಣ ಅಪ್ರತಿಭರಾದರು. "ಅದು ನಿಮ್ಮ ಮನಸ್ಸಿನ ಊಹೆಯಷ್ಟೆ" ಅವರ ಉತ್ತರ.

"ಖಂಡಿತ ಅಲ್ಲ. ನಿನ್ನೆ ದಿನ ನೀವು ಮಾಡಿರುವ ಕ್ಯಾಡೆಟ್ ಧುರೀಣರ ಆಯ್ಕೆಯ ಸಂದರ್ಭದಲ್ಲಿ ನಮ್ಮ ಅಸ್ತಿತ್ವವನ್ನೇ ಕಡೆಗಣಿಸಿದ್ದೀರಿ. ಹಾಗಿರುವಾಗ ನಿಮಗೆ ನಮ್ಮ

ವಿಷಯದಲ್ಲಿ ವಿಶ್ವಾಸವಿಲ್ಲ ಅಥವಾ ಏನೋ ಪೂರ್ವಾಗ್ರಹವಿದೆ ಎಂಬುದಕ್ಕೆ ಬೇರೆ ಪುರಾವೆ ಬೇಕೆ ?''

''ಧುರೀಣರ ಆಯ್ಕೆ ನನ್ನ ಹೊಣೆ. ಆದರಲ್ಲಿ ಇತರರಿಗೆ ಪ್ರವೇಶವೆಂದರೆ ಜಾತೀಯತೆಗೆ ಸ್ವಜನ ಪಕ್ಷಪಾತಕ್ಕೆ ಎಡೆಮಾಡಿಕೊಟ್ಟಂತೆ.''

''ನೀವನ್ನುವುದು ನನಗೆ ಅರ್ಥವಾಗುತ್ತಿಲ್ಲವಲ್ಲ ?'' ನಾನು.

''ಅರ್ಥವಾಗಬೇಕಾಗಿಲ್ಲ.''

''ಹಾಗಾದರೆ ನಮ್ಮ ಪಾತ್ರವೇನು ಎನ್‌ಸಿಸಿಯಲ್ಲಿ ?''

''ಎನ್‌ಸಿಸಿ ಸಂವಿಧಾನದ ಪ್ರಕಾರ ಕಮಾಂಡಿಂಗ್ ಆಫಿಸರರು ವಿಧಿಸಿದ ಕಾರ್ಯಗಳನ್ನು ನಡೆಸುವುದು.''

''ಸಂವಿಧಾನ ಏನು ಹೇಳಿದೆಯೋ ಹೇಳಿಲ್ಲವೋ ನನಗೆ ತಿಳಿಯದು. ಆದರೆ ಕಾಲೇಜಿನ ಹುಡುಗರ ಸಂಗಡ ನಮ್ಮ ಕಾರ್ಯಕಲಾಪಗಳು ನಡೆಯಬೇಕು. ಅಲ್ಲಿ ಅವರ ನಿಕಟವರ್ತಿಗಳಾದ ನಮ್ಮ ಅಭಿಪ್ರಾಯಗಳಿಗೆ ನೀವು ಬೆಲೆ ಕೊಡದಿದ್ದರೆ ಅದು ಎನ್‌ಸಿಸಿಯ ದೃಷ್ಟಿಯಿಂದ ಹಿತಕರವಲ್ಲ.''

''ಎನ್‌ಸಿಸಿಯ ಹಿತಾಹಿತಗಳನ್ನು ಕುರಿತು ನಿಮ್ಮಿಂದ ನನಗೆ ಬೋಧನೆ ಅನಾವಶ್ಯಕ. ನೀವು ಹೋಗಬಹುದು.''

ಎಷ್ಟು ಸುಲಭವಾಗಿ ಸೋತುಹೋದೆವಲ್ಲ ! ನಮ್ಮ ಸಂಸ್ಕೃತಿ ನಮ್ಮ ಶಿಸ್ತು ನಮ್ಮ ಸೌಜನ್ಯ ಏನೂ ಪ್ರಯೋಜನಕರವಾಗಲಿಲ್ಲ. ಮುಂದೇನು ಮಾಡುವುದು ? ರಾಜಿನಾಮೆ ನೀಡುವುದೇ ? ಕಾಲ ಪಕ್ವವಾದಾಗ ಅದಕ್ಕೆ ಹಿಂಜರಿಯುವುದಿಲ್ಲ. ಆದರೆ ಈಗ ನಮ್ಮ ಪ್ರಿಯ ಸಂಸ್ಥೆ ಕಾಲೇಜಿನ ಎನ್‌ಸಿಸಿ ಹಾಳಾಗದಂತೆ ಸರ್ವ ಪ್ರಯತ್ನವನ್ನೂ ಮಾಡಬೇಕು ಎಂದು ನಿರ್ಧರಿಸಿದೆವು.

ಮುಂದಿನ ಪೆರೇಡಿನಲ್ಲಿ ರೌಡಿ ನಾಯಕ ಪೆರೇಡನ್ನು ಹತೋಟಿಗೆ ತೆಗೆದುಕೊಂಡ. ತರುವಾಯ ಸುಬೆದಾರನ ಮೂಲಕ ಪೆರೇಡಿನ ವರದಿ ನೇರವಾಗಿ ಓಸಿಗೆ ತಲಪಿತು. ನಮ್ಮನ್ನು ಹಿಂದಿನ ಸಲದಂತೆಯೇ ಕಡೆಗಣಿಸಲಾಗಿತ್ತು. ಪೆರೇಡನ್ನು ಶಿಕ್ಷಣಕ್ಕೋಸ್ಕರ ತುಕ್ಕಡಿಗಳಾಗಿ ವಿಭಾಗಿಸಿ ಮೈದಾನದ ಬೇರೆ ಬೇರೆ ಕಡೆ ಕಳಿಸಲಾಯಿತು. ಬಾಳಿಗರೂ ನಾನೂ ಯಾವ ಕೆಲಸವೂ ಇಲ್ಲದೇ ಅಲಂಕಾರಪುರುಷರಂತೆ ಅಲ್ಲೆಲ್ಲ ಸುತ್ತುತ್ತಿದ್ದೆವು. ಓಸಿ ಅವರಷ್ಟಕ್ಕೆ—ನಾವು ನಮ್ಮಷ್ಟಕ್ಕೆ.

ಎರಡು ಪಾಠಗಳು ಮುಗಿಯುವಾಗ ಕ್ಯಾಡೆಟುಗಳಿಗೆ ಉಪಾಹಾರ ನೀಡಲು ಹೋಟೆಲಿನ ಕಾರ್ ಬಂದಿತು. ''ರಾವ್ ! ಉಪಾಹಾರ ಹಂಚುವುದನ್ನು ಸ್ವಲ್ಪ ನಿಯಂತ್ರಣ ಮಾಡಿ'' ಎಂದು ಸುಬೆದಾರ್ ನನಗೆ ಆಜ್ಞೆ ನೀಡಿದ (ಇಂಗ್ಲಿಷಿನಲ್ಲಿ).

ನಾನು ಇಂಗ್ಲಿಷಿನಲ್ಲಿಯೇ ಗದರಾಯಿಸಿದೆ ''ನೀನು ಖಾಲಿ ಜೆಸಿಓ ಎಂಬುದನ್ನು ಮರೆಯಬೇಡ. ನನಗೆ ಆಜ್ಞೆ ನೀಡಲು ನೀನು ಯಾರು ? ನೀನೇ ಹೋಗಿ ವಿಲೆವಾರಿ ಮಾಡು.'' ಈ ಸುಬೆದಾರ್ ಎಂದೂ ನಮಗೆ ವಂದನೆ ನೀಡಿದವನಲ್ಲ. ಮಿಲಿಟೆರಿ ಕಾನೂನು ಪ್ರಕಾರ ಇದು ಮಹಾಪರಾಧ.

"ಏನು ಏನದು ಗಲಾಟೆ ?" ಓಸಿ ಪ್ರವೇಶ.

"ಸುಬೆದಾರ್ ನನಗೆ ಆಜ್ಞೆ ನೀಡುತ್ತಿದ್ದಾನೆ. ಅದು ಹೇಗೆ ಸಾಧ್ಯ?" ನಾನೆಂದೆ.

"ಲೆಫ್ಟಿನೆಂಟ್ ರಾವ್ ಸುಳ್ಳು ಹೇಳುತ್ತಿದ್ದಾರೆ, ಸಾರ್. ಇಂಡಿಯನ್ ಆರ್ಮಿಯ ಶಿಸ್ತಿನ ಜೆಸಿಓ ಆಗಿರುವ ನನಗೆ ನನ್ನ ಸ್ಥಾನಮಾನ ಗೊತ್ತಿಲ್ಲವೇ ? ಅವರೇ ನನ್ನನ್ನು 'ಏಯ್ ಸುಬೆದಾರ್' ಎಂದು ಕರೆದು ಅಪಮಾನಗೊಳಿಸಿದ್ದಾರೆ."

"ಲೆಫ್ಟಿನೆಂಟ್ ರಾವ್! ನಿಮ್ಮ ವರ್ತನೆ ಅಸಭ್ಯ ರೀತಿಯದು" ದೊರೈರಾಜರ ಮಾತು.

"ಹೌದು, ನನಗೆ ಸಭ್ಯತೆಯನ್ನು ಈ ಸುಬೆದಾರ್ ಹೇಳಿಕೊಡಬೇಕು !"

"Will you please shut up your bloody mouth ? How can you talk so insultingly of a Junior Commissioned Officer of the Indian Army ?"

ಇಂಥ ಸನ್ನಿವೇಶ ಇಂಥ ವರ್ತನೆ ನನಗೆ ಪೂರಾ ಅನಿರೀಕ್ಷಿತ. ಏನು ಮಾತಾಡುವುದೆಂದು ತಿಳಿಯಲಿಲ್ಲ. ಮೈ ನಡುಗುತ್ತಿತ್ತು. ಆ ಕೊರೆಯುವ ಗಾಳಿಯ ಚಳಿಯಲ್ಲಿಯೂ ಬೆವರುತ್ತಿತ್ತು. ನಾನು ಮಾತನಾಡದೇ ಅಲ್ಲಿಂದ ಹೋದೆ. ಸುಬೆದಾರನೂ ಓಸಿಯೂ ಬಹಳ ಹೊತ್ತು ಗುಸುಗುಸು ಮಾತಾಡುತ್ತ ಅಲ್ಲಿಯೇ ನಿಂತಿದ್ದರು. ಇನ್ನು ಈ ಸಂಸ್ಥೆಯಲ್ಲಿರುವುದು ಸಲ್ಲದೆಂದು ನಿರ್ಧರಿಸಿ ಮರುದಿವಸ ಬಾಳಿಗರೂ ನಾನೂ ದೊರೈರಾಜರ ಕಛೇರಿಗೆ ಹೋದೆವು. ಆ ದಿವಸ ನಮಗೆ ಅವರು ಭೇಟಿ ನೀಡಲಿಲ್ಲ.

ಮರುದಿವಸ ಆದಿತ್ಯವಾರ. ಬೆಳಗ್ಗೆ ೬ ಗಂಟೆಗೆ ಕಾಲೇಜಿನ ಸಮೀಪದ ಪೆರೇಡ್ ಗ್ರೌಂಡಿನಲ್ಲಿ ಪೆರೇಡ್. ರಾತ್ರಿಯೆಲ್ಲ ಮಳೆ ಸುರಿದದ್ದೇ ಸುರಿದದ್ದು. ಆದರೂ ಕರ್ತವ್ಯ ಇದೆಯಷ್ಟೆ. ಬೆಳಗ್ಗೆ ೫ ಗಂಟೆಗೇ ಸಿದ್ಧನಾಗಿ ಗ್ರೌಂಡಿಗೆ ಸಾಗಿದೆ. ೫-೪೫ ಗಂಟೆಗೆ ಅದನ್ನು ತಲಪುತ್ತಿದ್ದಂತೆಯೇ ಹಲವಾರು ಮಂದಿ ಕ್ಯಾಡೆಟುಗಳು ಎದುರಿನಿಂದ ಬರುತ್ತಿದ್ದರು. "ಏನು ವಿಷಯ ?" ನಾನು ಪ್ರಶ್ನಿಸಿದೆ.

"ಇಂದು ಪೆರೇಡ್ ಇಲ್ಲವಂತೆ. ವಜಾ ಮಾಡಿದ್ದಾರೆ" ಹುಡುಗರ ಉತ್ತರ.

"ಯಾರೆಂದರು ?"

"ಗ್ರೌಂಡಿನಲ್ಲಿರುವ ಹವಿಲ್ದಾರರು."

ನಾನು ಗ್ರೌಂಡಿಗೆ ಹೋದೆ. ಹೇಗೂ ಕ್ಯಾಡೆಟುಗಳು ಬಂದಿದ್ದಾರೆ. ಈಗ ಮಳೆ ನಿಂತಿದೆ. ಪೆರೇಡ್ ಮಾಡಿಬಿಡಬಹುದಿತ್ತಲ್ಲ ಎಂದು ನನಗೆ ಆಸೆ. ಪೆರೇಡನ್ನು ವಜಾ ಮಾಡಲೇಬೇಕೆಂದು ಓಸಿ ಅಪೇಕ್ಷಿಸಿದಲ್ಲಿ ಆ ಕ್ರಿಯೆಯನ್ನು ಕ್ರಮಬದ್ಧವಾಗಿ—ಎಂದರೆ ಆಫಿಸರನಾದ ನನ್ನ ಮೂಲಕ—ಮಾಡಬೇಕಿತ್ತು. ಸೀದಾ ಹುಡುಗರಿಗೆ ಒಬ್ಬ ಹವಿಲ್ದಾರನ ಮೂಲಕ ತಿಳಿಸಿ ನನಗೆ ಪುನಃ ಅಪಮಾನ ಮಾಡಿದ್ದಾರೆ ಎಂದು ನೊಂದುಕೊಂಡೆ. ಗ್ರೌಂಡಿನಲ್ಲಿ ನಿಂತಿದ್ದ ಹವಿಲ್ದಾರ್ ನನಗೆ ಸೆಲ್ಯೂಟ್ ಮಾಡದೇ "ಇವತ್ತು ಪೆರೇಡನ್ನು ವಜಾಮಾಡಲು ಓಸಿ ಹೇಳಿದ್ದಾರೆ" ಎಂದ.

"ಹೇಗೂ ಕ್ಯಾಡೆಟುಗಳು ಬಂದಿದ್ದಾರೆ. ಮಳೆಯೂ ನಿಂತಿದೆ. ಮಾಡಿಬಿಡಬಹುದಾಗಿತ್ತು" ನಾನು ಮುಂದುವರಿಸಿದೆ.

"ಓಸಿ ಅಪ್ಪಣೆ ಹಾಗಿಲ್ಲ" ಎಂದ.

ಮರುದಿವಸ ಸೋಮವಾರ. ದೊರೈರಾಜರ ಕಛೇರಿಗೆ ಹೋದೆ. ನಾನು ಮಾತಾಡುವ ಮೊದಲೇ ಅವರೇ ಸಿಡಿದಿದ್ದರು "ನನ್ನ ಆಡಳಿತೆಯ ಮೇಲೆ ಟೀಕೆ ಮಾಡಲು ನೀವು ಯಾರು ?"

"ನಾನೇನೂ ಮಾಡಲಿಲ್ಲವಲ್ಲ!" ನನಗೆ ಆಶ್ಚರ್ಯ.

"ಮೊನ್ನೆ ಸಂಬೆದಾರರ ವಿರುದ್ಧ ಒಂದು ಸುಳ್ಳು ಹೇಳಿದಿರಿ. ಈಗ ಎರಡನೆಯದು. ನಿನ್ನೆ ಹವಿಲ್ದಾರ್ ಮೇಜರನ ಜೊತೆ ನೀವೇನು ಮಾತಾಡಿದಿರಿ ನೆನಪಿದೆಯೇ ? ಅಥವಾ ಅವನೇ ಸುಳ್ಳನೆಂದು ಸಾಧಿಸುತ್ತೀರಾ ?"

ಪ್ರತಿಯೊಂದು ಮಾತಿಗೂ ಪ್ರತಿಯೊಂದು ವರ್ತನೆಗೂ ಅಪಾರ್ಥ ನೀಡುವ ಈ ಪ್ರತಿಕೂಲ ಸನ್ನಿವೇಶದಲ್ಲಿ ಮೌನವೇ ಶ್ರೇಯಸ್ಕರ ಎಂದು ಸುಮ್ಮನಾದೆ.

"ನಿಮ್ಮ ಶಿಸ್ತು ತುಂಬ ಸುಧಾರಿಸಬೇಕು ಲೆಫ್ಟಿನೆಂಟ್ ರಾವ್!" ಅವರೇ ಮುಂದುವರಿಸಿದರು.

"ಈಗ ನಿಮ್ಮ ಜೊತೆಯಲ್ಲಿ ಒಂದು ವಿಚಾರ ಮಾತಾಡಬೇಕೆಂದು ಬಂದಿದ್ದೇನೆ. ಬಾಳಿಗರ ಹಾಗೂ ನನ್ನ ಮೇಲೆ ನಿಮಗೆ ಏನೇನೂ ನಂಬಿಕೆ ಇಲ್ಲ ಎಂಬುದು ಖಚಿತ. ನಾವು ಜಾತೀಯವಾದಿಗಳು, ಶಿಸ್ತಿಲ್ಲದವರು ಎಂದು ಮುಂತಾಗಿ ನೀವು ಭಾವಿಸಿದ್ದೀರಿ. ಇದೆಲ್ಲ ಬುಡವಿಲ್ಲದ್ದು ಎಂದು ಒಂದಲ್ಲ ಒಂದು ದಿವಸ ನಿಮಗೆ ತಿಳಿದೀತು. ಆದರೆ ಅಲ್ಲಿಯತನಕ ಇದೇ ರೀತಿ ಇರಲು ನಮಗೆ ಸಹನೆ ಇಲ್ಲ. ನಿಮ್ಮ ದಾರಿಯ ಮೇಲಿನ ಮುಳ್ಳಾಗಿರಲು ನಮಗೆ ಇಷ್ಟವಿಲ್ಲ. ಇನ್ನು ಎನ್‌ಸಿಸಿಯಲ್ಲಿ ದೊರೆಯುವ ಮಾಸಿಕ ಗೌರವ ಧನದ ಆಸೆಯಿಂದ ನಾವು ಇದರಲ್ಲಿದ್ದೇವೆಂದು ನೀವು ಭಾವಿಸಿದರೆ ಅದು ತಪ್ಪು. ಆದ್ದರಿಂದ ನಮ್ಮನ್ನು ಎನ್‌ಸಿಸಿಯಿಂದ ಬಿಡುಗಡೆ ಮಾಡಿಬಿಡಿರೆಂದು ಪ್ರಾರ್ಥಿಸುತ್ತೇವೆ ನೀವು ಒಪ್ಪಿದರೆ ನಾವು ರಾಜಿನಾಮೆ ಅರ್ಜಿ ಸಲ್ಲಿಸಲು ಸಿದ್ಧರಿದ್ದೇವೆ."

"ನಿಮ್ಮ ಪ್ರಿನ್ಸಿಪಾಲ್, ನಿಮ್ಮ ಸರಕಾರ ಇವರನ್ನು ಕೇಳಿ ಏನು ಮಾಡಬೇಕೋ ಹಾಗೆ ಮಾಡಿ. ನನ್ನನ್ನು ಈ ಮೂಲಕ ನೀವೇನೂ ಹೆದರಿಸಬೇಕಾಗಿಲ್ಲ."

ಈ ಸಲವೂ ಮಾತಿನಲ್ಲಿ ನಾನು ಸೋತದ್ದೇ.

ಕಾಲೇಜಿನ ಹಿರಿಯರು ಸಹನೆಯನ್ನೇ ಬೋಧಿಸಿದರು. ಅವರಿಗೆ ನನ್ನ ಹೇಳಿಕೆಯನ್ನು ಕುರಿತು ನಂಬಿಕೆ ವಿಶ್ವಾಸಗಳಿದ್ದರೂ ನಾನು ಹುಡುಗ, ದುಡುಕುಸ್ವಭಾವದವ, ಎಲ್ಲದರಲ್ಲೂ ಆತುರ, ದುಷ್ಟ ಪರಿಸ್ಥಿತಿಯನ್ನು ಕಾಲ ಪರಿಹರಿಸೀತು ಎಂದೆಲ್ಲ ಭಾವಿಸಿದ್ದರು.

ಕೆಲಸ ಮಾಡಲು ಇಷ್ಟವಿದೆ ಕೆಲಸವಿಲ್ಲ

ಡಿಸೆಂಬರಿನಲ್ಲಿ (೧೯೫೪) ಎನ್‌ಸಿಸಿ ವಾರ್ಷಿಕ ಶಿಕ್ಷಣ ಶಿಬಿರ ನಡೆಯಬೇಕಾಗಿತ್ತು. ಆದರ ಪ್ರಯುಕ್ತ ದೊರೈರಾಜರು ಕೊಡಗೆಲ್ಲ ಸುತ್ತಿ ಒಂದು ಶಿಬಿರಯೋಗ್ಯ ಸ್ಥಳ ಹುಡುಕಿದರು. ಕೊನೆಗೆ ನಮ್ಮ ಕಾಲೇಜಿನಿಂದ ಎರಡು ಮೈಲಿ ಸುಬ್ರಹ್ಮಣ್ಯದ ಕಡೆಗಿರುವ ಕಾಡುದಾರಿಯ ಪಕ್ಕದ ಗಾಲ್ಫ್ ಮೈದಾನದಲ್ಲಿ ಶಿಬಿರ ನಡೆಸುವುದೆಂದು ತೀರ್ಮಾನಿಸಿದರು. ಇವೆಲ್ಲ ನನಗೆ ತಿಳಿದದ್ದು ಆಫಿಸಿನ ಗುಮಾಸ್ತರುಗಳ ಮೂಲಕ.

ಶಿಬಿರದಲ್ಲಿ ಭಾಗಿಗಳು ನಮ್ಮ ಕಾಲೇಜಿನ ಎಲ್ಲ ಕ್ಯಾಡೆಟುಗಳು ಮತ್ತು ಕೊಡಗಿನ ಎಲ್ಲ ಹೈಸ್ಕೂಲುಗಳ ಜೂನಿಯರ್ ಡಿವಿಶನ್ ಕ್ಯಾಡೆಟುಗಳು—ಒಟ್ಟು ಸುಮಾರು ಒಂದು ಸಾವಿರ ಮಂದಿ. ಇಷ್ಟು ಜನರಿಗೆ ೧೪ ದಿವಸಗಳ ಶಿಬಿರದಲ್ಲಿ ಆಹಾರ, ಶಿಕ್ಷಣ, ವಾಸ, ವೈದ್ಯಕೀಯ ಸೌಲಭ್ಯ, ಶುಚಿತ್ವ ಇವೆಲ್ಲವೂ ಬಲು ಪರಿಷ್ಕಾರವಾಗಿ ಯುಕ್ತವೇಳೆಯಲ್ಲಿ ಸರಕಾರ ನಿಗದಿ ಮಾಡಿರುವ ಹಣ ಮತ್ತು ನಿಬಂಧನೆಗಳ ಅನುಸಾರ ಒದಗಬೇಕು. ಒಬ್ಬ ಮನುಷ್ಯ ಇವೆಲ್ಲವನ್ನೂ ಮುಂದೆ ಉಳಿದಿದ್ದ ಕೇವಲ ಒಂದು ತಿಂಗಳಿನಲ್ಲಿ ನಿರ್ವಹಿಸ ಬಲ್ಲನಾದರೆ ಆತ ಅಲ್ಲಾಉದ್ದೀನನ ವಿಚಿತ್ರ ದೀಪವನ್ನು ಪಡೆದುಬಂದವನಾಗಿರಬೇಕು. ದೊರೈರಾಜರು ರಾಕ್ಷಸನಂತೆ ದುಡಿದರು. ನಾನು ಕಂಡಂತೆ ಕೇಳಿದಂತೆ ಆ ದಿವಸಗಳಲ್ಲಿ ಅವರು ಮನೆಗೇ ಹೋಗಲಿಲ್ಲ. ಜೊತೆಯಲ್ಲಿದ್ದ ಗುಮಾಸ್ತರಿಗೆ ಎನ್‌ಸಿಓ ಹಾಗೂ ಜೆಸಿಓ ಗಳಿಗೆ ಸಾಕುಬೇಕಾಯಿತು. ಕ್ಯಾಡೆಟ್ (ರೌಡಿ) ಮುಂದಾಳುಗಳನ್ನು ಸೇರಿಸಿಕೊಂಡು ದುಡಿದರು. ಆದರೆ ಕೆಲಸ ಮಾಡಲು ಇಷ್ಟವಿದ್ದ, ಕೆಲಸವನ್ನು ಸಮರ್ಥವಾಗಿ ಮಾಡಬಲ್ಲ ನಮಗಿಬ್ಬರಿಗೆ ಮಾತ್ರ ಅಲ್ಲಿ ಕೆಲಸವಿರಲಿಲ್ಲ. ನಮಗೆ ತಡೆಯಲಾಗಲಿಲ್ಲ—ಅವರ ಕಷ್ಟ ನೋಡಿ. ಕಾಲೇಜಿನಲ್ಲಿ ನಮಗೆ ಸಾಕಷ್ಟು ಕೆಲಸವಿದ್ದರೂ ದೊರೈರಾಜರನ್ನು ಪುನಃ ಕಂಡು ಮಾತಾಡಿದೆವು, ನಮ್ಮಿಂದ ಏನಾದರೂ ಸಹಾಯ ಬೇಕೇ ಎಂದು. "ಹೇಗೂ ಕಾಲೇಜಿನ ಕೋಪರೇಟಿವ್ ಸ್ಟೋರ್ಸ್ ನೀವು ನಡೆಸುತ್ತಿದ್ದೀರಲ್ಲ. ನೀವು ಶಿಬಿರದಲ್ಲಿ ಒಂದು ಕ್ಯಾಂಟೀನ್ ಪ್ರಾರಂಭಮಾಡಿ ಅದನ್ನು ನಡೆಸಿ" ಎಂದು ನನಗೆ ಅಪ್ಪಣೆ ಆಯಿತು. "ನೀವು ಟ್ರೈನಿಂಗಿನಲ್ಲಿ ನನಗೆ ಸಹಾಯಕರಾಗಿ ಇರಿ" ಎಂದು ಬಾಳಿಗರಿಗೆ ಹುಕುಂ ನೀಡಿದರು.

ಆನೆಗೆ ಗಾಣ ಎಳೆವ ಕೆಲಸ! ಆದರೆ ಶಿಸ್ತು ಇದೆಯಲ್ಲ.

ದೊರೈರಾಜರಲ್ಲ, ಸಾಕ್ಷಾತ್ ಭಗವಂತನೇ ಧರ್ಮಸಂಸ್ಥಾಪನಾರ್ಥಾಯ ಅವತರಿಸಿದ್ದರೂ, ಮಿಲಿಟರಿ ಮಾಂದ್ಯವನ್ನು ನಿವಾರಿಸಲು ಸಾಧ್ಯವಾಗುತ್ತಿರಲಿಲ್ಲ. ಡೇರೆಗಳು ಯುಕ್ತ ವೇಳೆಗೆ ಬರಲಿಲ್ಲ, ಬೇಗನೆ ಬರುವ ಭರವಸೆ (ರಾಜಕೀಯ ಭರವಸೆಗಳಂತೆ) ಮಾತ್ರ ವಿಪುಲವಾಗಿ ಇತ್ತು. ಹೀಗಾಗಿ ಗಾಲ್ಫ್ ಮೈದಾನದ ಶಿಬಿರ ಕಾಲೇಜ್ ಕಟ್ಟಡಕ್ಕೆ ವರ್ಗವಾಯಿತು. ಶಿಬಿರ ತೊಡಗಿದಾಗ ಗೊಂದಲ ಅವ್ಯವಸ್ಥೆಗಳು ತಾಂಡವವಾಡುತ್ತಿದ್ದುವು. ಬಂದವರೆಷ್ಟು ಎಂದು ಪ್ರಾಯಶಃ ಯಾರಿಗೂ ತಿಳಿದಿರಲಿಲ್ಲ, ಸಾವಿರ ಚಿಳ್ಳೆಪಿಳ್ಳೆಗಳು ಆಹಾರಕ್ಕಾಗಿ ತಡಕಾಡಿದಾಗ, ಕುಡಿಯುವ ನೀರಿಗಾಗಿ ಬೇಡಿದಾಗ, ಶೌಚಗೃಹಗಳನ್ನು ಹುಡುಕಾಡಿದಾಗ ಅವರಿಗೆ ಯುಕ್ತ ಮಾರ್ಗದರ್ಶನ ನೀಡಬೇಕಾಗಿದ್ದ ಏಕೈಕ ನಾಯಕ ದೊರೈರಾಜ್ ಅಲ್ಲಿರಲಿಲ್ಲ. ಕಾಲೇಜು ಊರ ಹೊರಗಿದ್ದರೂ ಸಮವಸ್ತ್ರಧಾರಿ ಕ್ಯಾಡೆಟುಗಳು ಊರಿಗೆ ಹೋದರು. ನೆಂಟರ ಮನೆಗಳಲ್ಲಿ, ಹೋಟೆಲುಗಳಲ್ಲಿ ಉಂಡರು. ಇಷ್ಟ ಬಂದಾಗ ಮರಳಿದರು. ಕಾಲೇಜು ಆವರಣವೆಲ್ಲ ಹೊಲಸು, ವಾಸನೆ, ಹೇಸಿಕೆ. ಜಾನುವಾರುಗಳ ಜಾತ್ರೆಗಿಂತ ಕಳಪೆಯಾಯಿತಲ್ಲ ಈ ಶಿಸ್ತಿನ ಶಿಬಿರ ಎಂದು ನಾನು ನೊಂದೆ. ನಾನು ಪ್ರಾರಂಭಿಸಿದ ಕ್ಯಾಂಟೀನಿನಲ್ಲಿ ಬಿರುಸಿನ ವ್ಯಾಪಾರ—ಪ್ಯಾರೀ ಸ್ವೀಟುಗಳು, ಬಾಳೇಹಣ್ಣು, ಕಿತ್ತಳೇಹಣ್ಣು, ಬನ್ ಇತ್ಯಾದಿ. ಕಾಲೇಜು ಹೊರವಲಯದ ಗೂಡಂಗಡಿಯಲ್ಲಿ ಬೀಡಿ ಸಿಗರೇಟುಗಳ ತೆರೆದ ವ್ಯವಹಾರವೂ ಅದರ ಹಿಂಬದಿಯಲ್ಲಿ ಕಳ್ಳಬಟ್ಟಿಯ ಮುಚ್ಚಿದ ವ್ಯವಹಾರವೂ ಸಾರೋದ್ಧಾರವಾಗಿ ನಡೆದುವು.

ಶಿಬಿರದ ಎರಡನೆಯ ದಿವಸ ದೊರೈರಾಜರ ಘನಾಧ್ಯಕ್ಷತೆಯಲ್ಲಿ ಎನ್‌ಸಿಸಿ ಆಫೀಸರರ ಮಹಾಸಭೆ ನಡೆಯಿತು. ಸೀನಿಯರ್ ಡಿವಿಶನ್ನಿನ ನಾವಿಬ್ಬರು, ಜೂನಿಯರ್ ಡಿವಿಶನ್ನಿನ ಹನ್ನೆರಡು ಮಂದಿ, ಎಲ್ಲ ಎನ್‌ಸಿಓ ಜೆಸಿಓಗಳು, ಗುಮಾಸ್ತರು, ಎಲ್ಲ ಶಾಲೆಗಳ ಕ್ಯಾಡೆಟ್ ಮುಂದಾಳುಗಳು—ಸುಮಾರು ಐವತ್ತೈವತ್ತು ಆಳ್ಕರ ಉನ್ನತ ಸಭೆ ಅದು. ದೊರೈರಾಜರ ಮಾತು ಶಿವಿಯಿಂತ್ತ ಪ್ರಾರಂಭವಾಯಿತು "ಈ ಕ್ಯಾಂಪಿನಲ್ಲಿ ಕ್ಯಾಡೆಟುಗಳು ಬೀದಿ ಭಿಕಾರಿಗಳಿಗಿಂತಲೂ ಕೀಳಾಗಿ ಅಲೆಯುತ್ತಿದ್ದಾರೆ—ಯಾಕೆ? ಟ್ರೈನಿಂಗ್ ಕಾರ್ಯಕ್ರಮ, ಆಹಾರಸೇವನೆಯ ಕಾಲ ವಿಧಾನ ಮುಂತಾದ ಸಕಲ ವಿವರಗಳನ್ನೂ ಕ್ಯಾಂಪು ಪ್ರಾರಂಭವಾಗುವ ಮೊದಲೇ ನಿಮಗೆಲ್ಲ ಕಳಿಸಿದ್ದರೂ ಅವುಗಳ ಅನುಸಾರ ವರ್ತಿಸುವ ಪ್ರಯತ್ನವನ್ನು ಕೂಡ ಯಾರೂ ಮಾಡಿರುವಂತೆ ಕಾಣುವುದಿಲ್ಲ—ಇದು ಯಾಕೆ? ಆಫೀಸರರಾದ ನೀವೆಲ್ಲ ಯೂನಿವರ್ಸಿಟಿ ಪದವೀಧರರು, ವಿದ್ಯಾರ್ಥಿಗಳಿಗೆ ಗುರುಗಳು. ನಿಮ್ಮ ಈ ಕೂಸುಗಳು ಬದುಕಿದ್ದಾರೆಯೇ ಸತ್ತಿದ್ದಾರೆಯೇ ಎಂದು ತಿಳಿಯುವ ಗೊಡವೆಗೇ ಹೋಗದೇ ನಿಮ್ಮ ಆಹಾರ ನಿಮ್ಮ ವಾಸ ನಿಮ್ಮ ವಿಶ್ರಾಂತಿ ಇವುಗಳ ಕಡೆಗೆ ವಿಶೇಷ ಲಕ್ಷ್ಯವಿತ್ತಿರುವುದನ್ನೇ ಕಂಡಿದ್ದೇನೆ. ಈ ಅಕ್ರಮ ಯಾಕೆ? ಮಿತ್ರರೇ, ಈ ಕ್ಯಾಂಪು ನಿಮ್ಮದು. ಕ್ಯಾಪ್ಟನ್ ದೊರೈರಾಜ್ ಇಲ್ಲೊಂದು ಅನ್ನಛತ್ರ ಇಟ್ಟಿಲ್ಲ. ಇದನ್ನು ನಡೆಸುವುದು ಅಥವಾ ಮುಡಿಸುವುದು ಅಥವಾ ಕಡೆಗಾಣಿಸುವುದು ನಿಮ್ಮ ಕೈಯಲ್ಲಿದೆ. ಏನು ಹೇಳುತ್ತೀರಿ ಸುಬೆದಾರ್ ಸಾಬ್?"

"ತಾವು ಹೇಳಿದ್ದು ಬಲು ಖರೆ ಸಾರ್. ಎಲ್ಲ ಎನ್‌ಸಿಸಿ ಆಫೀಸರರ ಸಹಕಾರ ದೊರೆತರೆ ಈ ಕ್ಯಾಂಪ್ ನಂದನ ವನವಾದೀತು. ಇಂಥ ಹುಡುಗರಿಗೆ ಯೋಗ್ಯ ಮುಂದಾಳುತನ ಇಲ್ಲವಲ್ಲ ಎಂದು ನನಗೆ ದುಃಖ. ಎಲ್ಲವನ್ನು ನಾವೇ ಆರ್ಮಿ ಸ್ಟಾಫುಗಳೇ ಮಾಡಬೇಕಾಗಿದೆ."

"ಈ ರೀತಿ ಬೇಜವಾಬ್ದಾರಿಯಿಂದ ಆಫೀಸರರು ಮಿಲಿಟರಿಯಲ್ಲಿ ವರ್ತಿಸಿದರೆ ಏನಾದೀತು ನಿಮಗೆ ಗೊತ್ತಿದೆಯೇ? ಸುಬೆದಾರ್ ಸಾಬ್—ಹೇಳಿ ಅವರಿಗೆ" ಓಸಿಯ ಮಾತು.

"ಸಾರ್, ಕೋರ್ಟ್ ಮಾರ್ಶಲ್, ಕೋರ್ಟ್ ಮಾರ್ಶಲ್."

"ಲೆಫ್ಟಿನೆಂಟ್ ರಾವ್! ಏನಂತೀರಿ?" ದೊರೈರಾಜರ ಸವಾಲು.

"ಇದೊಂದು ನಾಟಕ. ನಿಮ್ಮ ಅದಕ್ಷತೆಯ ಅಪಕ್ವ ಫಲ ಈ ಅವ್ಯವಸ್ಥೆ. ಅದನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆ ನಿಮ್ಮಲ್ಲಿಲ್ಲ. ಆದ್ದರಿಂದ ನಮ್ಮ ಮೇಲೆ ತಪ್ಪು ಹೊರಿಸುತ್ತೀರಿ." ನನ್ನ ಅಸಹನೆಯ ಉದ್ಗಾರ.

"ಆರ್ಮಿಯಲ್ಲೇನಾದರೂ ಇಂಥ ಮಾತನ್ನು ನೀವು ಕಮಾಂಡಿಂಗ್ ಆಫೀಸರರಿಗೆ ಹೇಳಿದ್ದರೆ ಏನಾಗುತ್ತಿತ್ತು ಗೊತ್ತೋ?" ದೊರೈರಾಜರ ಬೆದರುಗುಂಡು.

"ನನಗೆ ಅದು ಗೊತ್ತಾಗಿ ಆಗಬೇಕಾದದ್ದು ಏನೂ ಇಲ್ಲ. ಸದ್ಯ ಇದು ಆರ್ಮಿ ಅಲ್ಲವಲ್ಲ. ಯಾರ ಮುಂದೆ ನಿಮ್ಮ ಈ ಟೊಳ್ಳು ಗರ್ಜನೆ!"

"ಹಾಗಲ್ಲ. ಈ ಕ್ಯಾಂಪು ನಮ್ಮದು. ಇದರಲ್ಲಿರುವ ಪ್ರತಿ ಹುಡುಗನೂ ನಮ್ಮ ಮಗ. ಆದ್ದರಿಂದ ಅವನ ಯೋಗಕ್ಷೇಮದ ಕಡೆ ಗಮನ ಕೊಡೋಣ. ಏನು ಮಾಡಬೇಕೆಂದು

ಈಗ ನಿಮ್ಮ ಸೂಚನೆ ?'' ದೊರೈರಾಜ್ ಧ್ವನಿ ತಗ್ಗಿಸಿ ನುಡಿದರು.

''ನೀವು ಹೇಳಿದ್ದನ್ನು ನಾವು ಮಾಡಲು ಸಿದ್ಧರಾಗಿದ್ದೇವೆ. ಯಾವ ವಿಚಾರಕ್ಕೂ ನೀವು ನಮ್ಮನ್ನು ಲೆಕ್ಕಿಸದೇ ಈಗ ಪರಿಸ್ಥಿತಿ ಪ್ರಕೋಪಕ್ಕೆ ಹೋಗಿರುವಾಗ ನಮ್ಮ ಸೂಚನೆ ಕೇಳಿದರೆ ನಾವೇನು ಹೇಳಬಲ್ಲೆವು ?'' ನನ್ನ ಮಾತು.

''ಹಿಂದಿನ ವಿಚಾರ ಈಗ ಬೇಡ. ಇಂದು, ನಾಳೆ ಏನು ಮಾಡಬಹುದು ಹೇಳಿ'' ಓಸಿಯ ಸಾಂತ್ವನ ನುಡಿ.

''ನಾನಾಗಲೇ ಹೇಳಿದೆನಷ್ಟೆ. ನೀವು ಏನು ಹೇಳಿದರೂ ಅದನ್ನು ಮಾಡಲು ನಾನೂ ನನ್ನ ಮಿತ್ರರೂ ಸಿದ್ಧ.''

''ಹಾಗಾದರೆ ನೀವೆಲ್ಲ ಆಫಿಸರ್ ಆಗಲು ನಾಲಾಯಕ್. ಏನು ಹೇಳುತ್ತೀರಿ ಸುಬೆದಾರ್ ಸಾಬ್.''

''ಸರಿಯಾದ ಮಾತು ಸಾರ್.''

ಮೀಟಿಂಗ್ ಬರಖಾಸ್ತಾಯಿತು.

Offence is the best form of defence—ಇದು ಆರ್ಮಿಯ ಮುಖ್ಯ ಸೂತ್ರಗಳಲ್ಲಿ ಒಂದು. (ಆಕ್ರಮಣೆಯೇ ರಕ್ಷಣೆಯ ಉತ್ಕೃಷ್ಟರೂಪ.) ಇದರ ಅರ್ಥವಿಷ್ಟು. ಕಾಳಗದಲ್ಲಾಗಲೀ ವಾದದಲ್ಲಾಗಲೀ ಎದುರಾಳಿಗಿಂತ ನೀವು ಸ್ವಲ್ಪ ಕಡಿಮೆ ಎಂದು ನಿಮಗೆ ಮನವರಿಕೆಯಾದೊಡನೆ ನೀವು ತಳೆಯುವ ಸಹಜ ನಿಲವನ್ನು ಸ್ವಲ್ಪ ಯೋಚಿಸಿ ನೋಡಿ—ಎದುರಾಳಿಗಿಂತ ಮುಂದಾಗಿ ಯುದ್ಧವನ್ನೋ ಯುದ್ಧಸನ್ನದ್ಧ ಸ್ಥಿತಿಯನ್ನೋ ನೀವು ತಳೆದಿರುತ್ತೀರಿ. ಇಲ್ಲಿದೆ ಮೇಲೆ ಬರೆದಿರುವ ಆರ್ಮಿ ಸೂತ್ರದ ರುಜುವಾತು. ವಾದದಲ್ಲಿ ಹಿಮ್ಮೆಟ್ಟುತ್ತಿರುವ ವ್ಯಕ್ತಿಯ ಬೊಬ್ಬೆ ಹೆಚ್ಚಾಗುವಲ್ಲಿ, ನಾಯಿಯ ಎದುರು ಕುರಿ ಹಿಂಗಾಲುಗಳಲ್ಲಿ ನಿಂತು ಮುಂಗಾಲುಗಳಿಂದ ತುಳಿಯಲು ಸಿದ್ಧವಾಗಿರುವ ನಿಲವಿನಲ್ಲಿ, ತತ್ತ್ವಹೀನ ಪುಡಾರಿಗಳು ಪ್ರಾಮಾಣಿಕಾಧಿಕಾರಿಗಳ ವಿರುದ್ಧ ಪ್ರದರ್ಶಿಸುವ ಆಕ್ರೋಶದಲ್ಲಿ ಸೂತ್ರ ಯಾವುದು ?—ಆಕ್ರಮಣೆಯೇ ರಕ್ಷಣೆಯ ಉತ್ಕೃಷ್ಟ ರೂಪ. ನಮ್ಮನ್ನು ಹೆದರಿಸಲು ಆಗದಿದ್ದಾಗ ದೊರೈರಾಜರಿಗೆ ಉಳಿದದ್ದು ಬೇರೆ ಉಪಾಯ. ಶಿಕ್ಷಣ ನಡೆಸಲು ಬಂದಿದ್ದ ಎಲ್ಲ ಆರ್ಮಿ ಸ್ಟಾಫುಗಳನ್ನು ಪೆರೇಡು ಗ್ರೌಂಡಿನಿಂದ ಹಿಂದಕ್ಕೆ ಕರೆಸಲಾಯಿತು. ಊಟ, ವಾಸ, ಶುಚಿತ್ವ ಈ ಕಡೆಯ ಕೆಲಸಗಳನ್ನು ಅವರಿಗೆ ವಿಧಿಸಿದರು. ಕ್ಯಾಡೆಟುಗಳಿಗೆ ಮಧ್ಯಾಹ್ನದ ಊಟ ಸಕಾಲದಲ್ಲಿ ಪುಷ್ಕಳವಾಗಿ ದೊರೆಯಿತು. ಮಾಂಸ ಭಕ್ಷಕರಿಗೆ ತೃಪ್ತಿಯಾಗುವಷ್ಟು ಬಿರಿಯಾನಿ ದೊರೆತುದರಿಂದ, ಪುಳಿಚಾರುಗಳಿಗೆ ಪಂಟಿ ಬಿರಿಯ ಹಲ್ವ ಪಾಯಸ ಸಿಕ್ಕಿದುದರಿಂದ ಶಿಬಿರದಲ್ಲಿ ತೋರಿಕೆಯ ಶಿಸ್ತು ಏರ್ಪಟ್ಟಿತು. ಆರ್ಮಿಯ ಮುನ್ನಡೆ ಎಂದರೆ ಹೊಟ್ಟೆಯ ನಡಿಗೆ ಅಲ್ಲವೇ ? ನಾನು ಕ್ಯಾಂಟೀನ್ ವ್ಯಾಪಾರಿ ಆಗಿ ಆ ದಿವಸಗಳನ್ನು ಕಳೆದೆ. ಬಾಳಿಗರು, ಇತರ ಆಫಿಸರರು ಅವರಿಗೆ ವಿಧಿಸಿದ ಕಾರ್ಯಗಳನ್ನು ನಡೆಸಿದರು. ಪೆರೇಡ್ ಗ್ರೌಂಡಿನ ಶಿಕ್ಷಣಕ್ಕಿಂತಲೂ ಅಡುಗೇಮನೆಯ ಭಕ್ಷಣವೇ ಕ್ಯಾಂಪಿನ ಪರಮೋದ್ದೇಶವೆಂಬುದು ದೃಢವಾಯಿತು. ಕೊಡಗು ಸರಕಾರದ ಮಂತ್ರಿಗಳನ್ನು, ಚೀಫ್ ಕಮಿಷನರರನ್ನು, ಕಾಲೇಜು ಪ್ರಿನ್ಸಿಪಾಲರನ್ನು, ಇತರ ಮರಿಷ್ಠರನ್ನು ಕ್ಯಾಂಪಿಗೆ (ಡಿನ್ನರಿಗೆ—ರಾತ್ರಿಯ ಮಹಾ ಭೋಜನ) ಆಮಂತ್ರಿಸಿ ಮ್ಯಾಪುಗಳನ್ನೂ

ಚಾರ್ಟುಗಳನ್ನೂ ತೋರಿಸಿ ರೈಫಲ್ ಬ್ರೆನ್ ಮುಂತಾದವುಗಳ ಕಾರ್ಯ ನಿರ್ವಹಣೆಯನ್ನು ವಿವರಿಸಿ ಪುಷ್ಕಳ ಭೋಜನವನ್ನು ಆರ್ಮಿ ಕ್ರಮದಲ್ಲಿ ಬಡಿಸಿ "best camp," "ಎಂಥ ಸ್ಮಾರ್ಟ್ ಕ್ಯಾಂಪ್ ಕಮಾಂಡೆಂಟ್" ಎಂಬ ಬಿರುದುಗಳನ್ನು ಪಡೆದರು ನಮ್ಮ ಸಾಹೇಬರು.

ಶಿಬಿರದ ಕೊನೆಯ ದಿವಸ. ಎನ್‌ಸಿಸಿ ಆಫಿಸರುಗಳಿಗೆಲ್ಲ ಗೌರವಧನ ಬಟವಾಡೆ ಆಗಬೇಕು. ಜೂನಿಯರ್ ಡಿವಿಶನ್ನಿನ ಆಫಿಸರರು ಅದನ್ನು ಸ್ವೀಕರಿಸಿ ಮರಳಿದರು. ಬಾಳಿಗರ ಮತ್ತು ನನ್ನ ಸರದಿ ಬಂದಾಗ ನಾವಿಬ್ಬರೂ ಖಚಿತವಾಗಿ ಹೇಳಿದೆವು "ನಾವು ಈ ಗೌರವಧನವನ್ನು ಗಳಿಸಿಲ್ಲ. ಆದ್ದರಿಂದ ಅದನ್ನು ಪಡೆಯಲಾರೆವು."

"ಏನು, ಏನೆಂದಿರಿ ?" ಅವರು ಚಕಿತರಾದರು.

"ಸಾರ್! ದುಡಿಮೆಯಿಂದ ಹಣ. ನಾವು ಈ ಕ್ಯಾಂಪಿನಲ್ಲಿ ದುಡಿದಿಲ್ಲ. ಆದ್ದರಿಂದ ಈ ಹಣ ಸ್ವೀಕರಿಸಲು ನಮಗೆ ಅರ್ಹತೆ ಇಲ್ಲ."

"ದುಡಿದಿದ್ದೀರಲ್ಲ ?"

"ಅದನ್ನು ಆಫಿಸರರ ದುಡಿಮೆ ಎಂದು ಕರೆಯುವುದಿಲ್ಲ. ಈ ಗೌರವಧನ ಆಫಿಸರರ ದುಡಿಮೆಗೆ ಇರುವಂಥಾದ್ದು."

"ಅಂತೂ ದುಡಿದಿದ್ದೀರಲ್ಲ ?"

"ಆ ದುಡಿಮೆಗೆ ಬಿಟ್ಟಿ ಕೂಳು ಉಂಡಿದ್ದೇವಲ್ಲ--ಸಾಕು."

"ನಿಮ್ಮ ಈ ವರ್ತನೆಯನ್ನು ಆರ್ಮಿಯಲ್ಲಿ ಮ್ಯೂಟಿನಿ ಎಂದು ಕರೆಯುತ್ತಾರೆ. ಇದಕ್ಕೆ ಶಿಕ್ಷೆ ಜೈಲುವಾಸ, ತಿಳಿಯಿತೇ ?"

"ನಾವಿರುವುದು ಆರ್ಮಿಯಲ್ಲಿ ಅಲ್ಲ—ಸಿವಿಲ್ಲಿನಲ್ಲಿ ಎಂದು ನಿಮಗೆ ತಿಳಿದಿರಲಿ. ಪ್ರತಿ ಸಲವೂ ನೀವು ಆರ್ಮಿ ಆರ್ಮಿ ಎಂದು ಹೆದರಿಸುವುದು ಯಾರನ್ನು ?"

"ಹಾಗಾದರೆ ನೀವು ಗೌರವಧನ ಸ್ವೀಕರಿಸುವುದಿಲ್ಲ ?"

"ಇಲ್ಲ."

"ಯೋಚನೆ ಮಾಡಿ. ಪರಿಣಾಮ ಭೀಕರವಾದೀತು."

"ಈಗಿನದಕ್ಕಿಂತ ಭೀಕರವಾಗದಷ್ಟೆ ?"

"ನೋಡಿ! ನೀವೆಲ್ಲ ವಿದ್ಯಾವಂತರು, ಸುಸಂಸ್ಕೃತರು, ಶಿಸ್ತಿನ ವ್ಯಕ್ತಿಗಳು. ಹೀಗೆ ಮಾಡಬಹುದೇ ?"

"ಎಂದು ನಿಮಗೆ ಈ ಹೊಸ ಜ್ಞಾನೋದಯವಾದದ್ದು ? ಕ್ಷಮಿಸಿ."

"ಬರೆದು ಕೊಡಿ—ಗೌರವಧನ ಸ್ವೀಕರಿಸುವುದಿಲ್ಲ ಎಂದು."

"ಅದರ ಆವಶ್ಯಕತೆ ನನಗೇನೂ ತೋರುವುದಿಲ್ಲ. ಈ ವಿಚಾರ ಇನ್ನು ವಾದ ಬೇಕಾಗಿಲ್ಲ. ಇಲ್ಲಿಗೆ ಬರಖಾಸ್ತು."

ನಾವು ಕ್ಯಾಂಪಿನಿಂದ ನಿರ್ಗಮಿಸಿದೆವು.

ಮುಂದಿನವಾರ ಒಂದು ದಿವಸ ಪ್ರಿನ್ಸಿಪಾಲರಿಂದ ನನಗೆ ಕರೆ ಬಂತು. ಅವರ ಮಾತು ಇದೇ ವಿಚಾರವನ್ನು ಕುರಿತು. ನಾವು ಕ್ಯಾಂಪಿನಲ್ಲಿ ದೊರೈರಾಜರೊಡನೆ ಸಹಕರಿಸಲಿಲ್ಲ, ಅಶಿಸ್ತಿನಿಂದ ವರ್ತಿಸಿದ್ದೆವು, ಅವನ್ನೆಲ್ಲ ಅವರು ನುಂಗಿಕೊಂಡಿದ್ದರು. ಈಗ ಅವಿವೇಕ

ದಿಂದ ಗೌರವಧನವನ್ನು ಸ್ವೀಕರಿಸುವುದಿಲ್ಲ ಎಂಬ ಪುರಸ್ಕಾರ ಹೂಡಿದ್ದೇವೆ, ಇದು ತಪ್ಪು —ಎಂಬ ಏಕಪಕ್ಷ ತೀರ್ಮಾನ ಅವರದಾಗಿತ್ತು. ಆಗ ನನಗೆ ತಡೆದುಕೊಳ್ಳಲು ಆಗಲಿಲ್ಲ. ಎನ್‌ಸಿಸಿಯ ದುರಂತ ಪರಂಪರೆಗಳನ್ನು ಅವರಿಗೆ ಸವಿವರವಾಗಿ ತಿಳಿಸಿ "ಇದೊಂದು ಮನಸ್ಸಾಕ್ಷಿಯ ಪ್ರಶ್ನೆ. ಇದರ ಇತ್ಯರ್ಥದಲ್ಲಿ ನಾನು ಎನ್‌ಸಿಸಿಯನ್ನೂ ತೊರೆದೇನು, ಕಾಲೇಜು ಕೆಲಸವನ್ನೂ ಬಿಟ್ಟೇನು—ಬೇರೆ ರೀತಿ ವರ್ತಿಸಲು ಸಾಧ್ಯವಿಲ್ಲ" ಎಂದೆ. ಕಾಲೇಜಿನ ಹಿತದೃಷ್ಟಿಯಿಂದ ಎನ್‌ಸಿಸಿಯ ವಿಚಾರವನ್ನು ಮೇಲಧಿಕಾರಿಗಳೊಡನೆ ಪ್ರಸ್ತಾವಿಸುವುದು ಅತ್ಯಗತ್ಯವೆಂದು ನಾನು ಪ್ರಿನ್ಸಿಪಾಲರಿಗೆ ಒತ್ತಾಯಮಾಡಿದೆ.

ಮುಕುರಂ ಕೈಯೊಳಿರಲ್ಕೆ ನೀರ ನೆಳಲೇಕೈ ? ಕಾಮಧೇನಿರ್ದರೂ-
ಟಕೆ ಗೊಡ್ಡಾಕಳನಾಳ್ವರೇ ? ಗುಣಯುತರ್ ಪಾಲುಂಡು ಮೇಲುಂಬರೇ ?

ಸೋಮೇಶ್ವರ ಶತಕ

೧೯೫೫

ಡಿನ್ನರಿನ ಹಿನ್ನೆಲೆಯ ವಿಚಾರಣೆ

ಫೆಬ್ರುವರಿ (೧೯೫೫) ತಿಂಗಳಿನಲ್ಲಿ ನಮಗೊಂದು ಎನ್‌ಸಿಸಿ ನೋಟಿಸ್ ಬಂತು—ಸರ್ಕಲ್ ಕಮಾಂಡರರು ನಮ್ಮ ಆಶಿಸ್ತನ್ನು ಕುರಿತು ವಿಚಾರಣೆ ನಡೆಸುವವರಿದ್ದಾರೆ; ಕಾಲೇಜು ಪ್ರಿನ್ಸಿಪಾಲರ ಹಾಗೂ ಕಮಾಂಡಿಂಗ್ ಆಫಿಸರರ ಸಮಕ್ಷಮ ನಡೆಯುವ ಈ ವಿಚಾರಣೆಗೆ ನಾವು ಹಾಜರಿರತಕ್ಕದ್ದು. (ಹಳೆ ಮೈಸೂರು ಮತ್ತು ಕೊಡಗು ರಾಜ್ಯಗಳ ಎನ್‌ಸಿಸಿ ಕಛೇರಿಗಳ ಮುಖ್ಯಾಧಿಕಾರಿಯೇ ಈ ಸರ್ಕಲ್ ಕಮಾಂಡರ್.) ಇರುಳನ್ನು ಹಗಲೆಂದು ಸಾಧಿಸುವ ರುಜುವಾತಿಸುವ ದಕ್ಷತೆ ಆರ್ಮಿ ಅಧಿಕಾರಿಗಳಿಗಿದೆ ಎಂದು ನನಗೆ ಚೆನ್ನಾಗಿ ತಿಳಿದಿತ್ತು. ಬೇಕಾದಂತೆ ಅವರು ಕಾಗದ ಪತ್ರಗಳನ್ನು ಸೃಷ್ಟಿಸಬಹುದು. ಕಛೇರಿಯಲ್ಲಿ ಎಷ್ಟು ಆರ್ಮಿ ಸ್ಟಾಫುಗಳಿರುವರೋ ಅಷ್ಟು ವಿವಿಧ ಎಡಹೆಬ್ಬೆಟ್ಟುಗಳ ಮುದ್ರೆಗಳು ಈ ಕಾಗದಪತ್ರಗಳಿಗೆ ಸಿಂಧುತ್ವ ನೀಡುತ್ತವೆ. ಇನ್ನು ವಿಚಾರಣೆ ನಡೆಸುವವರೂ ಒಬ್ಬರು ಆರ್ಮಿ ವರಿಷ್ಠರು. ಇವರ ಡ್ರೆಸ್ಸು, ಠಾಕುಠೀಕಾಗಿ ಕಾಗದ ಪತ್ರ, ಫೈಲು ಇವುಗಳ ಮಹಾ ಸೈನ್ಯದ ವಿರುದ್ಧ ನಮಗಿದ್ದ ರಕ್ಷಣೆ ಏನು? ಮನಸ್ಸಾಕ್ಷಿಗೆ ವಿರುದ್ಧವಲ್ಲದ ವರ್ತನೆ, ಪ್ರಿನ್ಸಿಪಾಲರಿಗೆ ನಮ್ಮ ವಿಷಯದಲ್ಲಿದ್ದ ವಿಶೇಷ ಗೌರವ, ಸರಕಾರದ ಮಂತ್ರಿಗಳಿಗೆ ನಮ್ಮ ಪ್ರಾಮಾಣಿಕತೆ ಹಾಗೂ ಕರ್ತವ್ಯನಿಷ್ಠೆಯ ಬಗ್ಗೆ ಇದ್ದ ವಿಶ್ವಾಸ.

ನಿಶ್ಚಿತ ದಿವಸ ಸಂಜೆ ೫ ಗಂಟೆಗೆ ಪ್ರಿನ್ಸಿಪಾಲರ ಕೊಠಡಿಯಲ್ಲಿ ನಾವೆಲ್ಲರೂ ಸೇರಿದೆವು. ಪ್ರಿನ್ಸಿಪಾಲರು ಅಧ್ಯಕ್ಷರು. ಅವರ ಸುತ್ತಲೂ ಕ್ರಮವಾಗಿ ಸರ್ಕಲ್ ಕಮಾಂಡರ್ ಸಾಹೇಬರು, ಅವರ ಮಿಲಿಟರಿ ಕಾರ್ಯದರ್ಶಿಗಳು, ಬಾಳಿಗರು, ನಾನು ಮತ್ತು ಕ್ಯಾಪ್ಟನ್ ದೊರೈರಾಜರು ಹೀಗೆ ಕುಳಿತೆವು. ಒಂದು ಸಮಾಧಾನವಾಯಿತು—ನಮ್ಮನ್ನು ಆರೋಪಿಗಳೆಂದು ಹೊರಗೆ ನಿಲ್ಲಿಸಿ ಒಳಗಡೆಗೆ ಮಾರ್ಚ್ ಮಾಡಿಸಿ ಕರೆದೊಯ್ಯಲಿಲ್ಲವಲ್ಲ ಎಂದು. ಕಮಾಂಡರ್ ಆಲ್ಮೀಡಾ ಎಂದು ಸರ್ಕಲ್ ಕಮಾಂಡರರ (ಬಿರುದು ಸಮೇತ) ಹೆಸರು. ಅವರೇ ಪ್ರಾರಂಭಿಸಿದರು "ನೀವಿಬ್ಬರು ಎನ್‌ಸಿಸಿ ಆಫಿಸರರು, ಗೌರವಾನ್ವಿತರು, ಕಾಲೇಜು ಪ್ರಾಧ್ಯಾಪಕರು, ಪ್ರಿನ್ಸಿಪಾಲರ ಗೌರವಕ್ಕೆ ಪಾತ್ರರಾದವರು ಹೀಗೇಕೆ ಮಾಡಿದಿರೆಂದು ನನಗೆ ಆಶ್ಚರ್ಯವಾಗಿದೆ. ಗೌರವಧನ ಸ್ವೀಕರಿಸದಿರಲು ಏನೋ ಪ್ರಬಲ ಕಾರಣವಿರಬೇಕು—ಅದೇನೆಂದು ನನಗೆ ಹೇಳುವಿರಾ?"

ಅವರ ಈ ಸ್ವಚ್ಛ ವರ್ತನೆಗೆ ನಾವು ಮಾರುಹೋದೆವೋ ಅವರ (ನೌಕೆಯ ಸಮವಸ್ತ್ರವಾದ) ಸ್ವಚ್ಛ ಉಡುಪನ್ನು ಮೆಚ್ಚಿದೆವೋ ಅವರ ನಗುಮೊಗದ ಸುಂದರ ರೂಪಕ್ಕೆ ವಶರಾದೆವೋ ತಿಳಿಯದು. ವಿಚಾರಣೆಯ ಆತಂಕ ಒತ್ತಡ ಆ ಗಳಿಗೆ ಮಾಯವಾದುವು.

ಎನ್‌ಸಿಸಿ ಮುಖ್ಯವಾಗಿ ಕಾಲೇಜಿನ ಅಂಗ. ಇದರ ಶಿಕ್ಷಣ ನಿರ್ವಹಣೆಯಲ್ಲಿ ಎನ್‌ಸಿಸಿ ಆಫಿಸರರನ್ನು ಉಪೇಕ್ಷಿಸುವುದು ಸರಿಯಲ್ಲ. ಕಮಾಂಡಿಂಗ್ ಆಫಿಸರರು ತಮ್ಮ ಕೈಕೆಳಗಿರುವ ಸಮಸ್ತ ಎನ್‌ಸಿಸಿ ಆಫಿಸರರನ್ನು ಗೌರವ ಹಾಗೂ ಸ್ನೇಹಯುಕ್ತವಾಗಿ ನಡೆಸಿ

ಕೊಂಡು ಅವರಿಗೆ ಯುಕ್ತ ಮಾರ್ಗದರ್ಶನ ಮಾಡಬೇಕು. ಆದರೆ ಇಲ್ಲಿ ನಡೆದಿರುವುದು ತದ್ವಿಪರೀತ. ಸಂಶಯಗ್ರಸ್ತರಾದ ದೊರೈರಾಜರು, ಕೆಲಸಮಾಡಲು ಆಸಕ್ತಿ ಇರುವ ನಿಷ್ಠೆ ಇರುವ ನಮ್ಮ ಒಂದೊಂದು ನಡೆಯಲ್ಲಿಯೂ ನುಡಿಯಲ್ಲಿಯೂ ತಪ್ಪನ್ನು ಕಂಡಿದ್ದಾರೆ, ನಾಗರಿಕವಲ್ಲದ ರೀತಿಯಲ್ಲಿ ನಮ್ಮೊಡನೆ ವರ್ತಿಸಿದ್ದಾರೆ. ನಾವಿಲ್ಲದಿದ್ದರೂ ಎನ್‌ಸಿಸಿ ಇರುವುದೆಂದು ನಮಗೆ ಚೆನ್ನಾಗಿ ತಿಳಿದಿದೆ. ಆದರೆ ಇಂಥ ಶಿಸ್ತಿನ ಪ್ರತೀಕ ಹೀಗೆ ಅನಾವಶ್ಯಕ ಮನಸ್ತಾಪದಿಂದ, ಹಾಳಾಗಿ ಹೋಗುವುದನ್ನು ನೋಡುವಾಗ ತುಂಬ ನೋವಾಗುವುದು ಎಂದು ಮುಂತಾಗಿ ಸಂಕ್ಷೇಪವಾಗಿ ಹೇಳಿದೆ. ದೊರೈರಾಜರ ವಿರುದ್ಧ ಒಂದು ಅಪವಾದವನ್ನೂ ಹೊರಿಸಬಾರದು, ಒಂದು ಕೆಟ್ಟ ಮಾತನ್ನೂ ಆಡಬಾರದು ಎಂದು ನಾವು ನಿರ್ಧರಿಸಿದ್ದೆವು. ಕಮಾಂಡರ್ ಆಲ್ಮೀಡಾರವರು ದೊರೈರಾಜರನ್ನು ನೋಡಿದರು. ಅವರೇನೂ ಹೇಳಲಿಲ್ಲ. ಪ್ರಿನ್ಸಿಪಾಲರನ್ನು ನೋಡಿದರು. ಪ್ರಿನ್ಸಿಪಾಲರೆಂದರು "ನನ್ನ ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಸಹೋದ್ಯೋಗಿಗಳಲ್ಲಿ ಇವರಿಬ್ಬರು ಸೇರಿದ್ದಾರೆ. ಮನೆ ಮಡದಿ ಮಕ್ಕಳನ್ನು ಮರೆತು ಇವರು ಕಾಲೇಜು ಕೆಲಸ ಮಾಡುವ ಶ್ರದ್ಧಾವಂತರು."

ನಮ್ಮನ್ನು ನೋಡಿದರು "ಈ ವೃಥಾ ಮನಸ್ತಾಪ ನಿಲ್ಲಬೇಕು. ಎನ್‌ಸಿಸಿ ಉದ್ಧಾರವಾಗಬೇಕು."

"So we meet at Captain Durairaj's residence this night for dinner!" ಎದ್ದರು ಕಮಾಂಡರ್ ಆಲ್ಮೀಡಾರವರು.

"ಎಲ್ಲವನ್ನು ಮರೆತುಬಿಡಿ. ಡಿನ್ನರಿಗೆ ಬರಬೇಕು ದಯವಿಟ್ಟು" ಎಂದು ದೊರೈರಾಜರು ನಮಗಿಬ್ಬರಿಗೆ ಆಮಂತ್ರಣ ನೀಡಿದರು.

"ಹಾಗಾದರೆ ಗೌರವಧನ ಸ್ವೀಕರಿಸುವಿರಷ್ಟೆ?" ಕಮಾಂಡರರ ಅತ್ಯಂತ ಸ್ನೇಹಯುಕ್ತ ವಾಣಿ.

"ಆಗಬಹುದು ಸಾರ್." ತರ್ಕದಿಂದ ಒದಗಿದ್ದ, ನೈಷ್ಠುರ್ಯದಿಂದ ಕಾಠಿಣ್ಯ ತಳೆದಿದ್ದ ನಿರ್ಧಾರ, ಸ್ನೇಹದ ಎದುರು ಸಡಿಲಗೊಂಡಿತು. ಹಾಗಾದರೆ ಮನಸ್ಸಾಕ್ಷಿ ಏನಾಯಿತು? ಆ ಹಣ ಪಡೆಯಲು ನಾವು ಈಗ ಗಳಿಸಿರುವ ವಿಶೇಷ ಅರ್ಹತೆ ಏನು? ಬಾಳಿಗರೂ ನಾನೂ ಆಮೇಲೆ ಮಾತಾಡಿಕೊಂಡು ಒಂದು ನಿರ್ಧಾರಕ್ಕೆ ಬಂದೆವು—ರುಜು ಹಾಕಿ ಹಣವನ್ನು ಪಡೆಯೋಣ; ಆ ಹಣವನ್ನು ನಮ್ಮ ಎನ್‌ಸಿಸಿ ಯೂನಿಟ್ಟಿಗೆ ದಾನ ಮಾಡೋಣ.

ಮಂಗಳಕರ ಶುಭ ಪ್ರಾತಃಕಾಲ

ಡಿನ್ನರಿನ ಮಾರನೇ ದಿನ. ನಾನು ಕಾಲೇಜಿಗೆ ಬರುತ್ತಿದ್ದೇನೆ. ಅಹಂಕಾರಿ ಸುಬೇದಾರ್ ಎಲ್ಲಿಯೋ ಇದ್ದವನು ನನ್ನೆಡೆಗೆ ಉದ್ದೇಶಪೂರ್ವಕವಾಗಿ ದ್ರುತಗತಿಯಿಂದ ಸುಟಿಯಾಗಿ ನಡೆದು ಬಂದು ಸೆಲ್ಯೂಟ್ ನೀಡಿದ. ಅವನ ಮಂದಹಾಸ ಮಧುರ ವರ್ತನೆಗೆ ವಿಸ್ಮಿತನಾದೆ. ಮಾತಾಡಲು ವಿಶೇಷವೇನೂ ಇರದೆ "ಹೇಗಿದ್ದೀರಿ ಸಾಬ್" ಎಂದೆ.

"ಬಹೂತ್ ಅಚ್ಛಾ ಹೈ ಸಾಬ್" ಎಂದು ಪುನಃ ಸೆಲ್ಯೂಟಿಸಿ ಅದೇ ಗತಿಯಿಂದ ಸಾಗಿಹೋದ.

ಸ್ವಲ್ಪ ಹೊತ್ತಿನಲ್ಲಿಯೇ ದೊರೈರಾಜರು ನಮ್ಮ ಸಹಕಾರ ಸಂಘದ ಬಾಗಿಲಿಗೆ ಬಂದು "Good morning Rao ! May I come in ?" ಎನ್ನಬೇಕೇ! ಅವರೇ ಮುಂದರಿಸಿ "ಈ ವರ್ಷ ಬೇಸಗೆ ರಜೆಯಲ್ಲಿ ಒಂದು ಸಮಾಜಸೇವಾಶಿಬಿರ ನಡೆಸಬೇಕಂತೆ. ಏನು ಮಾಡೋಣ ? ಆಮೇಲೆ ಬಿಡುವಾದಾಗ ಆಫೀಸಿಗೆ ಬರುತ್ತೀರಾ ? ಅಥವಾ ಹೇಳಿ ಕಳಿಸಿದರೆ ನಾನೇ ಬರುತ್ತೇನೆ" ಎಂದರು.

ಈ ಶುಭಪ್ರಾತಃಕಾಲ ಅದೆಷ್ಟು ಮಂಗಳಕರವಾಗಿದೆ ಎಂದುಕೊಂಡೆ. ಗತಾನುಭವ ಕೆಟ್ಟ ಸ್ವಪ್ನದಂತೆ ಮರೆಯಾಗಿ ಹೋಯಿತು; ಎಂದೂ ಮರುಕಳಿಸದಿರಲಿ ಎಂದು ಹಾರೈಸಿದೆ. ಅಂದೇ ಸಂಜೆ ಬಾಳಿಗರೂ ನಾನೂ ದೊರೈರಾಜರ ಕೊಠಡಿಗೆ ಹೋದೆವು. ಅವರ್ಣ ಸ್ವಾಪ್ಪಗಳಿಂದ ನಮಗೆ ದೊರೆತ ಗೌರವ ಮರ್ಯಾದೆ ಆತ್ಮೀಯತೆಯೂ ಕ್ರಮಬದ್ಧವಾದುದೂ ಆಗಿದ್ದುವು. ಭಾಗಮಂಡಲದಲ್ಲಿ ಏಪ್ರಿಲ್ ಮೇ ತಿಂಗಳುಗಳಲ್ಲಿ ೨೦ ದಿವಸಗಳ ಸಮಾಜಸೇವಾ ಶಿಬಿರವನ್ನು ನಡೆಸುವುದು, ಭಾಗಮಂಡಲ–ತಲಕಾವೇರಿ ಬಸ್‌ದಾರಿಯನ್ನು ಕಡಿಯಲು ಆರಂಭಿಸಿ ಆದಷ್ಟು ಮುಂದುವರಿಸುವುದು ಎಂದು ತೀರ್ಮಾನಿಸಿದೆವು. ಈ ಸಮಾಜಸೇವಾಶಿಬಿರಕ್ಕೆ ಒಬ್ಬ ಎನ್‌ಸಿಸಿ ಆಫೀಸರ್ ಮಾತ್ರ ಹೋಗಬಹುದಾಗಿತ್ತು. ದರ್ಜೆಯಲ್ಲಿ ಹಿರಿಯನಾದ ನಾನು ಹೋಗಬೇಕೆಂದು ದೊರೈರಾಜರು ಹೇಳಿದರು. ಸರಿ, ಆದ್ದರಿಂದ ಮರುವರ್ಷದ ಇಂಥ ಕ್ಯಾಂಪಿಗೆ ಬಾಳಿಗರು ಹೋಗಬೇಕೆಂಬ ನನ್ನ ಸೂಚನೆಗೆ ಅವರ ಹೃತ್ಪೂರ್ವಕ ಅನುಮೋದನೆ ದೊರೆಯಿತು.

ಕಾವೇರಿ ತಾಯಿ ತರ್ಪಣೆ

ಕಾವೇರಿನದಿಯ ಉಗಮಸ್ಥಾನವೇ ತಲಕಾವೇರಿ. ಆದರೆ ಇಲ್ಲಿರುವ ಪವಿತ್ರ ಕುಂಡಿಗೆಯ ವಿನಾ ಹರಿಯುವ ಹೊಳೆ ಎಲ್ಲಿಯೂ ಕಾಣುವುದಿಲ್ಲ. ಕೆಳಗೆ ಎಲ್ಲಿಯೋ ಕಾಡಿನ ಮರೆಯಲ್ಲಿ ಬಂಡೆಗಳ ಬಿರುಕಿನಲ್ಲಿ ಈ ತೀರ್ಥ ಜಿನುಗಿ ತೊರೆಯಾಗಿ ಹರಿದು ಭಾಗಮಂಡಲದಲ್ಲಿ ಪ್ರಕಟವಾಗುವುದು. ತಲಕಾವೇರಿಯ ಕುಂಡಿಗೆಯಲ್ಲಿ ಪ್ರತಿವರ್ಷವೂ ತುಲಾಕಾವೇರಿ ಸಂಕ್ರಮಣದ ಮುಹೂರ್ತದಲ್ಲಿ ತೀರ್ಥೋದ್ಭವವಾಗುತ್ತದೆ. ಈ ಪವಿತ್ರ ಕಾಲದಲ್ಲಿ ತೀರ್ಥಸ್ನಾನ ಮಾಡಲು ದೇಶದ ವಿವಿಧ ಎಡೆಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ. ಅವರೆಲ್ಲರೂ ಮಡಿಕೇರಿ ಮಾರ್ಗವಾಗಿ ಭಾಗಮಂಡಲದ ವರೆಗೆ ಬಸ್, ಕಾರ್ ಮುಂತಾದ ವಾಹನಗಳ ನೆರವಿನಿಂದ ಪಯಣಿಸಬಹುದು. ಆದರೆ ಅಲ್ಲಿಂದ ಮುಂದಿನ ಮೂರು ಮೈಲಿಗಳನ್ನು ಕಾಲ್ನಡಿಗೆಯಿಂದಲೇ ಹತ್ತಬೇಕು. ಭಾಗಮಂಡಲದಿಂದ ತಲಕಾವೇರಿಗೆ ಬಳಸಿಕೊಂಡು ಹೋಗುವ ಬಸ್ ದಾರಿಯನ್ನು ನಿರ್ಮಿಸಿದರೆ ಅದು ಯಾತ್ರಾರ್ಥಿಗಳಿಗೆ ವಿಶೇಷ ಉಪಯುಕ್ತವಾಗುತ್ತದೆ, ಆ ಸೇವಾಕಾರ್ಯದ ಉದ್ಘಾಟನೆ ನಮ್ಮ ಎನ್‌ಸಿಸಿ ದಳದ ತರುಣರಿಂದ ನೆರವೇರುವುದು ಸರ್ವಶ್ಲಾಘ್ಯ ಎಂದು ನಾವೆಲ್ಲರೂ ಭಾವಿಸಿದೆವು, ಹೆಮ್ಮೆ ತಳೆದೆವು.

ಬೆಟ್ಟದ ನಾಡಿನ ಗದ್ದೆಗಳು ಬಯಲು ಸೀಮೆಯ ಗದ್ದೆಗಳಂತಲ್ಲ. ಅಂಗೈ ಅಗಲದ

ಬ್ರಹ್ಮಾಂಡಗಳು ಮೆಟ್ಟಿಲುಮೆಟ್ಟಿಲಾಗಿ ಅಂಕುಡೊಂಕಾದ ಏರಿಗಳಿಂದ ಸೀಮಿತವಾಗಿ ಬೆಟ್ಟದ ಹರವನ್ನು ಅನುಸರಿಸಿ ಸಾಗುತ್ತವೆ ಏರಿದಂತೆ ಕಾಡಿನ ಸೆರಗಿನಲ್ಲೋ ಇಳಿದಂತೆ ತೊರೆಯ ಅಂಚಿನಲ್ಲೋ ಇವು ಕೊನೆಗೊಳ್ಳುತ್ತವೆ. ಇಂಥ ಒಂದು ಗದ್ದೆಯಲ್ಲಿ (ಬೇಸಗೆಯಲ್ಲಿ ಇವು ಪಾಳು ಬಿದ್ದಿರುತ್ತವೆ) ದೊರೈರಾಜರ, ನನ್ನ ಮತ್ತು ಎಸಿಸಿ (Auxiliary Cadet Corps—ಎನ್‌ಸಿಸಿಯ ಸೋದರ ಸಂಸ್ಥೆ, ಈಗ ಪ್ರಚಾರದಲ್ಲಿಲ್ಲ) ಶಿಕ್ಷಕಿಯರ ಡೇರೆಗಳನ್ನು ಸಾಲಾಗಿ ಹೊಡೆದಿದ್ದರು. ಕೆಳಗಿನ ಸೋಪಾನದ ಗದ್ದೆಯಲ್ಲಿ ಎಸಿಸಿ ಶಿಕ್ಷಕರ ಡೇರೆಗಳು. ಮೂರನೆಯ ಸೋಪಾನದ ಗದ್ದೆಯಲ್ಲಿ ನಮ್ಮ ಕ್ಯಾಡೆಟುಗಳ ಡೇರೆಗಳಿದ್ದುವು. ಬಲಗಡೆಯ ಅಂಚಿನ ಕಾವೇರಿತೀರದಲ್ಲಿ ಭೋಜನಾಲಯ. ಇಲ್ಲಿಂದ ಒಂದು ಮೈಲಿ ದೂರದಲ್ಲಿ ನಮ್ಮ ಬಸ್‌ದಾರಿಯ ಆರಂಭಬಿಂದು. ಈ ಕೆಲಸದ ಹೊಣೆ ನನ್ನದು. ಎಸಿಸಿ ಶಿಕ್ಷಣ ಹಾಗೂ ನಮ್ಮ ಕೆಲಸ ಇವುಗಳ ಸಮಗ್ರ ಹೊಣೆ ದೊರೈರಾಜರದು. ನಮ್ಮ ರೌಡಿ ಮುಂದಾಳುಗಳೆಲ್ಲರೂ ಬಂದಿದ್ದರು. ಅವರೆಲ್ಲರೂ ಈಗ ಪಳಗಿಸಿದ್ದ ಸಲಗಗಳು. ಭಾಗಮಂಡಲದ ಗದ್ದೆಯ ಕೊರೆಯುವ ಚಳಿಯಲ್ಲಿ ಈ ಚೈತನ್ಯದ ಬುಗ್ಗೆಗಳು ೫ ಗಂಟೆಗೇ ಕೆಲಸಕ್ಕೆ ಸಿದ್ಧ! ಪುಷ್ಕಳ ಗ್ರಾಸಾನಂತರ ನಾವು ಬೆಟ್ಟದ ಬುಡವನ್ನು ಹಾರೆಗುದ್ದಲಿ ಪಿಕ್ಕಾಸು ಕುಕ್ಕೆ ಕತ್ತಿ ಮುಂತಾದ ಹತ್ಯಾರುಗಳ ಸಮೇತ ತಲಪುತ್ತಿದ್ದೆವು. ಬೆಳಗಿನ ಆರೂವರೆ ಗಂಟೆಗೆ ಕೆಲಸದ ಆರಂಭ. ೧೨ ಗಂಟೆ ವರೆಗೂ ಬಿಡುವಿರದ ದುಡಿಮೆ. ಎಂಥ ಸಮರ್ಥ ಕಾರ್ಮಿಕನೂ ಅಚ್ಚರಿಪಡುವಂಥ ದುಡಿಮೆ ಈ ಹುಡುಗರದು. ಅವರ ವಿನೋದಶೀಲ ಪ್ರವೃತ್ತಿ, ಕಾರ್ಯೋತ್ಸಾಹ, ಹಾಡು ಕೇಕೆ ಇವುಗಳಿಂದ ಆ ಗೊಂಡಾರಣ್ಯದಲ್ಲಿ ಮಂದಹಾಸದ ರಸಝರಿ ಹರಿಯುತ್ತಿತ್ತು.

ಅಪರಾಹ್ಣದ ೩ರಿಂದ ೬ರ ತನಕ ಪುನಃ ನಾವು ರಸ್ತೆ ಕಡಿಯಲು ಹೋಗಬೇಕಿತ್ತು. ಆದರೆ ಆ ವನರಾಶಿಯ ದಟ್ಟ ತಳದಲ್ಲಿ ಪ್ರತಿ ಅಪರಾಹ್ಣವೂ ಜಡಿಮಳೆ. ಗದ್ದೆಯೆಲ್ಲ ಸಮುದ್ರ. ಆದರೆ ಹುಡುಗರು ಹೆದರಲಿಲ್ಲ. ಡೇರೆಗಳ ಸುತ್ತಲೂ ಚರಂಡಿ ಹೊಡೆದು ಕಟ್ಟೆ ಕಟ್ಟಿ ನೀರು ಒಳಗೆ ಬಾರದಂತೆ ಮಾಡಿದರು. ಕಾಡಿನಿಂದ ಬಿದಿರು, ಹಂಬು, ಕವೆ ತಂದು ಡೇರೆಗಳ ಒಳಗೆ ಮಂಚ ಕಟ್ಟಿದರು. ಅವರ ಸಹನೆ, ಸಮಯಸ್ಫೂರ್ತಿ ನೋಡಿ ನಮಗೆಲ್ಲ ಪರಮಾನಂದ. ೨೧ ದಿವಸಗಳ ಕ್ಯಾಂಪಿನ ಕೊನೆಯ ದಿವಸಗಳಲ್ಲಿ ನಮ್ಮೊಡನೆ ಇರಲು, ನಮ್ಮ ಕೆಲಸವನ್ನು ವೀಕ್ಷಿಸಲು ಬಂದವರು ನಮ್ಮ ಹೊಸ ಸರ್ಕಲ್ ಕಮಾಂಡರ್ ದಾದಾಭಾಯ್. ಆಲ್ಮೀಡಾರವರಂತೆ ಇವರೂ ನೌಕಾದಳದವರು, ಪರಮ ಉದಾರ ಮನಸ್ಸಿನವರು, ಭಾಗಮಂಡಲದ ಮಳೆಯಲ್ಲಿ ನಮ್ಮ ಜೊತೆಯಲ್ಲಿ ಇದ್ದು ನಾವು ಮಾಡಿದ ಕೆಲಸ ನೋಡಿ ಮುಕ್ತ ಮನಸ್ಸಿನ ಮೆಚ್ಚುಗೆ ಸೂಚಿಸಿದರು. ತಾತ ಮೊಮ್ಮಕ್ಕಳನ್ನು ಕುರಿತು ವ್ಯಕ್ತಪಡಿಸುವ ತುಂಬುಮನಸ್ಸಿನ ಪ್ರಶಂಸೆ ದಾದಾಭಾಯ್ ಅವರದು. "ಓ ನನ್ನ ಮಕ್ಕಳೇ! ನೀವೆಂಥ ಪವಾಡಪುರುಷರು" ಎಂದೇ ನಮ್ಮೆಲ್ಲರನ್ನೂ ಅವರು ಮಾತಾಡಿಸುತ್ತಿದ್ದುದು. ನಮ್ಮ ಕೆಲಸಕ್ಕೆ ಇಂಥ ಮಾತುಗಳು ವಿಶೇಷ ಉತ್ತೇಜಕಗಳಾಗಿದ್ದುವು.

ಒಂದು ದಿವಸ ಆತ್ಮೀಯವಾಗಿ ನನ್ನೊಡನೆ ನುಡಿದರು "ಜೀಟಿ! ಕಮಾಂಡರ್

ಆಲ್ಮೀಡಾರಿಂದ ನಾನೆಲ್ಲವನ್ನೂ ತಿಳಿದಿದ್ದೇನೆ. ನಿಮ್ಮಂಥವರು ಬಲು ವಿರಳ. ಬಾಳಿಗಾ ಎಲ್ಲಿದ್ದಾರೆ? ಅವರನ್ನೂ ನಾನು ನೋಡಬೇಕು.”

ಕ್ಯಾಂಪ್ ಮುಗಿದು ಮರಳುವಾಗ ಸುಮಾರು ಒಂದು ಮೈಲಿನಷ್ಟು ಉದ್ದದ ಬಸ್ ದಾರಿಯ ರೂಪುರೇಖೆಗಳನ್ನು ನಾವು ರಚಿಸಿದ್ದೆವು. ಆ ಗದ್ದೆ, ಆ ಕಾಲುದಾರಿ, ಕಾವೇರಿ ತಾಯ ಆ ವಿನ್ಯಾಸ, ದೂರದ ಬಾನಗೋಡೆಗಳ ಆ ಚಿರ ಪ್ರಶ್ನೆ, ಮುಗಿಲುಗಳ ನಿರಂತರ ಆಟ, ಗೊಂಡಾರಣ್ಯದ ಭವ್ಯ ಏಕಾಂತತೆ—ಇವೆಲ್ಲ ನನ್ನ ಮೇಲೆ ಮಾಡಿದ ಪರಿಣಾಮ ಅವರ್ಣನೀಯ. ಒಟ್ಟಾಗಿ ಬಾನ್ ಏರಿಯೇವು; ಬಿಡಿಯಾಗಿ ಹನಿಯನ್ನೂ ಅರಿಯಲಾರೆವು.

ನಡಿಗೆ ಒದಗಿಸಿದ ರಸಕವಳ

ಮುಂದಿನ ಕಾಲೇಜು ವರ್ಷದ (ಜುಲೈ ೧೯೫೫ರಿಂದ ಆರಂಭ) ತರುಣದಲ್ಲಿ ದೊರೈರಾಜರು ಒಂದು ಸೂಚನೆ ನೀಡಿದರು: ಆಸಕ್ತ ಹುಡುಗರ ತಂಡ ಕಟ್ಟಿಕೊಂಡು ನಾಲ್ಕು ದಿವಸ ಬೇಕಾಬಿಟ್ಟಿ ಅಲೆದು ಮರಳಬೇಕು. ಸೆಪ್ಟೆಂಬರ್ ಹೊತ್ತಿಗೆ ಮಳೆಯ ತೀವ್ರತೆ ತಗ್ಗಿರುತ್ತದೆ; ಆಗ ಕಡಮಕಲ್ಲು ಘಾಟಿನ ಮೂಲಕ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ನಡೆದು ಹೋಗಿ ಅಲ್ಲಿಂದ ಮುಂದೆ ಸುಳ್ಯ, ಸಂಪಾಜೆ ಮಾರ್ಗವಾಗಿ ಮಡಿಕೇರಿಗೆ ಮರಳೋಣ, ಸುಮಾರು ೭೦–೮೦ ಮೈಲಿ ದೂರದ ಈ ವರ್ತುಳೀಯ ಪಥವನ್ನು ಗಮಿಸಲು ನಾಲ್ಕು ದಿವಸಗಳು ಸಾಕು ಎಂದು ನಾನು ಸೂಚಿಸಿದೆ. ಈ ಕಾರ್ಯಕ್ರಮ ಅವರಿಗೆ ಒಪ್ಪಿಗೆ ಆಯಿತು. ಏರ್ಪಾಡುಗಳನ್ನು ಮುಂದುವರಿಸಲು ನನಗೆ ಆದೇಶ ನೀಡಿದರು.

ಕಡಮಕಲ್ಲಿನಲ್ಲಿರುವ ರಬ್ಬರ್ ತೋಟದ ಮಾಲಿಕರಿಗೆ, ಅಲ್ಲಿಂದ ಮುಂದೆ ಕಟ್ಟದ ವೆಂಕಟರಮಣಯ್ಯ, ಕಟ್ಟದ ಗಣಪಯ್ಯ ಮುಂತಾದ ಮಹನೀಯರಿಗೆ, ಸುಬ್ರಹ್ಮಣ್ಯ ಕ್ಷೇತ್ರದ ಮೊಕ್ತೇಸರರಿಗೆ, ಕಟ್ಟದ ಮಂಜಯ್ಯನವರಿಗೆ, ಸುಳ್ಯದ ಜನಪ್ರಿಯ ವೈದ್ಯ ಕೆ. ವೆಂಕಪ್ಪಯ್ಯನವರಿಗೆ, ಸಂಪಾಜೆಯ ಮಿತ್ರರಿಗೆ—ಹೀಗೆ ದಾರಿಯಲ್ಲಿದ್ದ ಎಲ್ಲ “ದೀಪಸ್ತಂಭ”ಗಳಿಗೂ ಪತ್ರ ಬರೆದೆ. ಸುಮಾರು ಮೂವತ್ತು ಮಂದಿ ಹುಡುಗರ ತಂಡವನ್ನು ನಾನು ಕಟ್ಟಿಕೊಂಡು ಬರುತ್ತೇನೆ, ಅಡುಗೆ ಮಾಡಿಕೊಳ್ಳಲು ಸೌಕರ್ಯ ಹಾಗೂ ಮಲಗಲು ಜಾಗ ಕೊಡಬೇಕೆಂದು ಪ್ರಾರ್ಥಿಸಿದ್ದೆ. ಅವರೆಲ್ಲರಿಂದಲೂ ಬಂದ ಉತ್ತರ ಒಂದೇ—ತಮ್ಮ ನಾಡಿನ ಈ ಕುಗ್ರಾಮಗಳ, ನಾಗರಿಕತೆ ಸುಳಿಯದ ಕಾಡುಗೂಡುಗಳ ಮೂಲಕ ನಮ್ಮಂಥವರು ನಡೆದು ಸಾಗುವುದೊಂದು ಅಪೂರ್ವಯೋಗ; ಊಟ ವಸತಿ ವ್ಯವಸ್ಥೆ ಎಲ್ಲವನ್ನೂ ತಾವೇ ಸಂತೋಷದಿಂದ ಇದೊಂದು ನಾಡಹಬ್ಬವೆಂದು ಭಾವಿಸಿ ಏರ್ಪಡಿಸುತ್ತೇವೆ ಎಂದು ಮುಂತಾಗಿ ಆಶ್ವಾಸನೆ ನೀಡಿದ್ದರು. ಅಲ್ಲದೇ, ನಾವು ನಮ್ಮ ನಿರ್ಧಾರವನ್ನು ಯಾವುದೇ ಕಾರಣಕ್ಕಾಗಿಯೂ ಬದಲಾಯಿಸಬಾರದು ಎಂದೂ ಕೋರಿದ್ದರು. ಮಲೆನಾಡಿನಲ್ಲಿ ಹಸುರು ಹೇಗೋ ಹಾಗೆ ಆತಿಥ್ಯವೂ ಹಾಗೆ ಸಮೃದ್ಧವೇ. ರುದ್ರ ನಿಸರ್ಗದ ನಿಕಟ ಸಂಪರ್ಕದಿಂದ ಈ ಜನ ತೋರಿಕೆಗೆ ಒರಟರಾಗಿ ಕಂಡರೂ ಮಾತಿನಲ್ಲಿ ನಿಷ್ಠುರರೆಂದು ಅನ್ನಿಸಿದರೂ ಅವರ ಅಂತರಾಳದಲ್ಲಿ ಸ್ಪಂದಿಸುತ್ತಿರುವುದು ಮಲೆನಾಡಿನ ಪವಿತ್ರತೀರ್ಥದ ಸ್ವಚ್ಛತೆ, ಶುದ್ಧತೆ.

ಸೆಪ್ಟೆಂಬರಿನ ಆ ಆದಿತ್ಯವಾರದ ಬೆಳಗ್ಗೆ ನಮ್ಮ ಕಾಲೇಜಿನ ಮುಂದೆ ಸೇರಿದ್ದವರು ೨೩ ಮಂದಿ ಕ್ಯಾಡೆಟುಗಳು, ಕ್ಯಾಪ್ಟನ್ ದೊರೈರಾಜ್ ಮತ್ತು ನಾನು. ಹಿಂದಿನ ರಾತ್ರಿ ಆಕಾಶ ಬಹುವಾಗಿ ಸೋರಿ ಆ ಮುಂಜಾನೆ ಶುಭ್ರವಾಗಿತ್ತು. ಹೊಂಬಿಸಿಲು ನಮಗೆ ಹಿತಕರವಾಗಿ ಉಷ್ಣಲೇಪನ ಮಾಡುತ್ತಿತ್ತು. ಕಾಲೇಜಿನ ಪ್ರಾಂಗಣದಲ್ಲಿ ಒಂದು ಕಪಿಲೆ ಆಗತಾನೇ ಹಡೆದ ತನ್ನ ಹೆಣ್ಣುಕರುವನ್ನು ಪ್ರೀತಿಯಿಂದ ನೆಕ್ಕುವ ದೃಶ್ಯ ನಮ್ಮ ಮುಂದಿದ್ದ ಸುಂದರಾನುಭವಗಳ ಪ್ರತೀಕದಂತಿತ್ತು. ಕಾಲೇಜಿಗೆ ಪ್ರದಕ್ಷಿಣೆ ಬಂದು ಗುಡ್ಡಗಾಡಿನ ದಾರಿ ಹಿಡಿದೆವು. ಮ್ಯಾಪು, ಪ್ರಿಸ್‌ಮ್ಯಾಟಿಕ್ ಕಂಪಾಸ್, ಬೈನಾಕ್ಯುಲರ್, ತುಪಾಕಿ ಇವುಗಳಿಂದೆಲ್ಲ ಸುಸಜ್ಜಿತರಾಗಿ ನಾವು ಇರುವೆಗಳ ಸಾಲಿನಂತೆ ಹರಿಯತೊಡಗಿದೆವು. ದಾರಿ ತೋರುತ್ತ ದಾರಿ ಅರಸುತ್ತ ಕ್ಯಾಪ್ಟನ್ ದೊರೈರಾಜರು ಮುಂದೆ; ಹಿಂದಿನಿಂದ ನೂಕುವ ರಕ್ಷಕ ಗಡಿ ನಾನು. ಆ ನಿರ್ಜನ ಏಕಾಂತದಲ್ಲಿ ದಾರಿ ಹುಡುಕಿ ಸಾಗಿದಾಗ ಹುಡುಗರಿಗೆ ಕ್ಷೇತ್ರಕೌಶಲದ, ಮ್ಯಾಪ್ ಪಠನದ, ಯುದ್ಧರಂಗದ ವಿವಿಧ ವಿನ್ಯಾಸ ಚಟುವಟಿಕೆಗಳ ವಿವರಣೆ ನೀಡಿದೆವು. ಕಾಡು ಗುಡ್ಡ ಬೆಟ್ಟ ಬಯಲು ಗದ್ದೆ ಎಲ್ಲವನ್ನೂ ಹಿಂದೆ ಹಾಕಿ ನಡೆದದ್ದೇ ನಡೆದದ್ದು. ಒಂದು ತೊರೆಯ ಅಂಚಿನಲ್ಲಿ ನಾಲ್ಕು ಕಲ್ಲು ಹೂಡಿ ಚಾ ಕಾಯಿಸಿ ಕಟ್ಟಿತಂದಿದ್ದ ಬಿಸ್ಕತುಗಳ ಜೊತೆಯಲ್ಲಿ ಅದನ್ನು ಕುಡಿದು ಹೊಸ ಹುರುಪು ಪಡೆದೆವು. ಮತ್ತೆ ಮುಂದಿನ ದಾರಿ. ಮಳೆ ಬಂದಾಗ ಮಳೆಕೋಟನ್ನು ತಲೆಮೇಲೆಳೆದುಕೊಂಡು ರಕ್ಷಣೆ ಪಡೆದೆವು. ಕಾಲು ತುರಿಸಿದಾಗ ಬೆಟ್ಟುಗಳ ಸಂದಿಗಳು ವಿಶೇಷವಾಗಿ ಚೈತನ್ಯ ಪಡೆದಾಗ ತಿಳಿಯಿತು ಜಿಗಣೆಗಳು ಹೂಡಿದ್ದ ಆಟ. ಶೂ ಕಳಚಿ, ಕಾಲುಚೀಲ ಹೊರಗೆಳೆದು ಆ ರಕ್ತಶೋಷಕ ಪ್ರಾಣಿಗಳನ್ನು ಕಿತ್ತು ನೆಲದ ಮೇಲೆ ಕಲ್ಲಿನಿಂದ ಜಜ್ಜಿ ಅವು ರಕ್ತಕಾರಿ ಸತ್ತಾಗ ಸಮಾಧಾನ ತಳೆದೆವು. ನಮಗೆ ರಕ್ತಲಾಭವಾಗದಿದ್ದರೂ ಜಿಗಣೆಗಳಿಗೆ ಅದು ದಕ್ಕಲಿಲ್ಲವಲ್ಲ ಎಂದೇ ತೃಪ್ತಿ. ಜಿಗಣೆಗಳಿದ್ದಾವೆ ಜಾಗ್ರತೆ ಎಂಬುದು ನಮ್ಮ ಘೋಷಣೆ ಆಯಿತು. ಮುಂದೆ ದಟ್ಟ ಕಾಡಿನ ನಡುವೆ ಕಡಮಕಲ್ಲು ಘಾಟನ್ನು ಇಳಿದಿಳಿದು ಸಾಗುವಾಗ ಹಸಿವು ಜೋರಾಯಿತು. ಹಸುರಿನ ಸಮುದ್ರ ಒಂದು ತುತ್ತು ಅನ್ನ ನೀಡಲಿಲ್ಲ. ಕದ್ದು ಸೇಂದಿ ಕಟ್ಟಿದ್ದನ್ನು ಇಳಿಸುತ್ತಿದ್ದವನೊಬ್ಬ ನಮ್ಮ ವೇಷಭೂಷಣ ನೋಡಿ ಗಡಿಗೆಯನ್ನು ಅಲ್ಲೇ ಮಡಗಿ ಜೀವ ಉಳಿದರೆ ಸಾಕೆಂದು ಪದರಾಡಾದ. ಅನೇಕ ಹುಡುಗರ ಬಾಯಿಯಲ್ಲಿ ಅನುಕಂಪದ ನೊರೆ ಸೂಸಿದರೂ ನಮ್ಮ ವಜ್ರಶಿಸ್ತಿನ ಗಟ್ಟಿ ಗಾರೆಯ ಬಂಧದಿಂದ ಅವರಿಗೆ ವಿಮೋಚನೆ ದೊರೆಯಲಿಲ್ಲ. ಅಮೃತದ ಬೆಲೆ ತಿಳಿಯದ ನನ್ನಂಥ ಮೂರ್ಖರ ಅವಿವೇಕ ನಮ್ಮ ಕೆಲವು ಹುಡುಗರಿಗಾದರೂ ಆಶ್ಚರ್ಯಕರವಾಗಿ ಕಂಡಿರಬೇಕು. ಮಧ್ಯಾಹ್ನದ ಸೂರ್ಯ ಪ್ರಖರವಾಗಿಯೇ ಇದ್ದ. ಕಾರಣ ನಾವೀಗ ಕಡಮಕಲ್ಲಿನ ಬುಡವನ್ನು—ಎಂದರೆ ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದನ್ನು—ತಲಪಿದ್ದೆವು. ಸೆಕೆಗೆ ಪ್ರಸಿದ್ಧವಾದ ಜಿಲ್ಲೆಯದು. ಮುಂದಿನ ನಡಿಗೆ ಬಯಲಿನ ಅಂಚಿನಲ್ಲಿ. ದೂರ ದೂರ ಗುಡಿಸಲುಗಳು ಕಾಣುತ್ತಿದ್ದುವು. ಮುಂದೊಂದು ತೊರೆ ದಾಟಿದೊಡನೆ ಲಾರಿ ದಾರಿ ಎದುರಾಯಿತು. ಅಲ್ಲೇ ಮುಂದೆ ಕೂಲಿ ಲೈನುಗಳು, ಜನರಾಶಿ, ಜಾನುವಾರುಗಳ ಹಿಂಡು, ಕೋಳಿ ಆಡುಗಳ ಸಮ್ಮೇಳನ. ಈ ವಾಸನೆಯ ಕೋಟೆಯನ್ನು ಭೇದಿಸಿ ಮುಂದೆ ನಡೆದಂತೆ ರಬ್ಬರ್ ತೋಟದ ಸೂಪರಿಂಟೆಂಡೆಂಟರ

ಬಂಗ್ಲೆಗೆ ಸಾಗುವ ರಾಜಮಾರ್ಗ ಎದುರಾಯಿತು. ಅದರಲ್ಲಿ ಏರಿ ಮೇಲೆ ನಡೆದಂತೆ ತೋಟದ ಯಜಮಾನರೂ ಅವರ ಸಹಾಯಕರೂ ನಮ್ಮೆಡೆಗೆ ಧಾವಿಸಿ ಬಂದರು. ತಮ್ಮ ಪರಿಚಯವನ್ನು ಹೇಳಿ ನಮಗೆ ಆನಂದದ ಸ್ವಾಗತ ಕೋರಿದರು.

ಬಂಗ್ಲೆಯ ವಿಶಾಲ ಅಂಗಳದಲ್ಲಿ ಹಾಕಿದ್ದ ಅಸಂಖ್ಯಾತ ಕುರ್ಚಿ ಬೆಂಚುಗಳ ಮೇಲೆ ನಾವು ಮೈ ಚೆಲ್ಲಿದೆವು. ಬೆನ್ನಮೇಲೆ ಹೊತ್ತಿದ್ದ ಹೊರೆ ಕಳಚಿದಾಗ ಆದ ಆನಂದ ಅಷ್ಟಿಷ್ಟಲ್ಲ. ಆಗಲೇ ಬಂತು ಪಾನಕ ಪನಿವಾರ ಸಿಹಿತಿಂಡಿ ಖಾರತಿಂಡಿಗಳ ಪಟಾಲಮ್ಮೇ! "ಊಟ ಈಗಲೇ ಮಾಡುವಿರಾ? ಸ್ವಲ್ಪ ತಡೆದು ಸಾಕೇ?" ಎಂದು ಯಜಮಾನರು ಕೇಳಿದಾಗ, ನಾವು ಎಚ್ಚರ ತಪ್ಪಿ ತಿಂಡಿ ತಿಂದೆವೇ ಪಾನಕ ಕುಡಿದೆವೇ ಎಂದು ನಮಗೆಲ್ಲರಿಗೂ ಅನ್ನಿಸಿತು.

ಒಂದು ಗಂಟೆ ತಡೆದು ಊಟ—ರಾಜಭೋಜನ. ಇದು ಮೊದಲೇ ತಿಳಿದಿದ್ದರೆ ಎಂದು ಕಸಿವಿಸಿಗೊಂಡವರು ಬಲು ಮಂದಿ. ಆದರೂ ಮೂಳೆ ತುಂಡೊಂದು ಇದ್ದಿದ್ದರೆ ಅದೆಷ್ಟು ಪರಿಷ್ಕಾರವಾಗುತ್ತಿತ್ತು ಎಂದು ಜೊಲ್ಲು ಸುರಿಸಿದವರು ಹಲವಾರು ಹುಡುಗರು. ಆ ವರೆಗೆ ನಾವು ೧೮ ಮೈಲಿಗಳನ್ನು ಏಕ್‌ದಂ ಎಂಬಂತೆ ನಡೆದಿದ್ದೆವು. ಮುಂದಿನ ದೂರ ಸುಮಾರು ೭ ಮೈಲಿಗಳು ಮಾತ್ರ, ಕಟ್ಟದ ಗಣಪಯ್ಯನವರ ಮನೆಗೆ. ಅವರು ನಮ್ಮನ್ನು ಎದುರುಗೊಳ್ಳಲು ರಬ್ಬರ್ ತೋಟದ ಸೂಪರಿಂಟೆಂಡೆಂಟರ ಬಂಗ್ಲೆವರೆಗೂ ಬಂದಿದ್ದರು. ಸಾಯಂಕಾಲದ ಕಾಫಿ ಉಪಾಹಾರ (ತಿಂದದ್ದು ಏನೂ ಇಲ್ಲ) ಮುಗಿಸಿ ಬಂಗ್ಲೆಯಿಂದ ಮುಂದಿನ ದಾರಿ ಹಿಡಿದೆವು. ಒಂದು ಮೈಲಿ ಸಾಗಲಿಲ್ಲ. "ನಮ್ಮ ಮನೆಗೆ ದಯಮಾಡಿಸಬೇಕು" ಎಂದು ದಾರಿ ಬದಿಯ ರೈತ ಮಹನೀಯರೊಬ್ಬರು ಆಹ್ವಾನಿಸಿದರು. ತಳಿರು ತೋರಣಗಳಿಂದ ಅಲಂಕೃತವಾದ ಮಂಟಪದಲ್ಲಿ ನಮ್ಮನ್ನು ಕೂರಿಸಿ ಎಳನೀರು, ಬಾಳೇ ಹಣ್ಣು, ಅವಲಕ್ಕಿ ಸಮಾರಾಧನೆ ಮಾಡಿದರು. ಮತ್ತೆರಡು ಮೈಲಿ ನಡೆದೆವೋ ಇಲ್ಲವೋ ಇನ್ನೊಬ್ಬ ಹಿರಿಯರ ಉಪಚಾರ—ಪಾನಕ ಬಾಳೇಹಣ್ಣು ಬೆಲ್ಲ ನೀರು. ಈ ಜನರ ಔದಾರ್ಯ ಬಲು ದೊಡ್ಡ ಪ್ರಮಾಣದ್ದು. ನಾವು ಬರುತ್ತೇವೆಂದು ತಿಳಿದು ತಾವಾಗಿಯೇ ಈ ವಿಧದ ಸತ್ಕಾರಕೂಟ ಏರ್ಪಡಿಸಿ ನಮ್ಮನ್ನು ತೃಪ್ತಿಪಡಿಸುವ ಮನೋಭಾವ ಭಾರತೀಯ ಸಂಸ್ಕೃತಿಯ ಉನ್ನತ ಪ್ರತೀಕ.

ವೆಂಕಟರಮಣಯ್ಯನವರದೂ ಗಣಪಯ್ಯನವರದೂ ಅಕ್ಕಪಕ್ಕದ ಮನೆಗಳು. ಮನೆಗಳೇನು? ಒಂದೊಂದೂ ದೊಡ್ಡ ಅರಮನೆಯೇ! ಅವುಗಳ ವಿಶಾಲ ಜಗಲಿಗಳ ಮೇಲೆ ನಾವೆಲ್ಲರೂ ಹರಡಿಕೊಂಡೆವು. ಈಗ ರಾತ್ರಿ ಕವಿದಿತ್ತು. ಒಂದೆರಡು ಮಳೆಯೂ ಸುರಿದು ಹವೆ ತಂಪಾಯಿತು. ಆಳುಗಳ ಒಂದು ದಂಡೇ ಎಣ್ಣೆ ಭಾಂಡಗಳನ್ನು ಹಿಡಿದು ನಮ್ಮೆಡೆಗೆ ಧಾಳಿಯಿಟ್ಟಿತು. ನಮ್ಮಲ್ಲಿ ಒಬ್ಬೊಬ್ಬನಿಗೂ ಒಬ್ಬೊಬ್ಬನೆಂಬಂತೆ ಆ ಆಳುಗಳು ಎಣ್ಣೆ ಪೂಸಿದರು. ಕೈಕಾಲುಗಳಿಗೆ ಮಸಾಜು ಮಾಡಿದರು. (ಭರತನ ಸೇನೆಗೆ ಭರದ್ವಾಜಾಶ್ರಮದಲ್ಲಿ ದೊರೆತ ಅದ್ಭುತ ಸ್ವಾಗತಸೇವೆ ನನಗೆ ನೆನಪಾಯಿತು.) ಮತ್ತೆ ಮಲೆನಾಡಿನ ಅಭ್ಯಂಜನ. ಅದರ ವೈಭವವನ್ನು ಬೇರೆಯೇ ಗ್ರಂಥದಲ್ಲಿ ಬರೆಯಬೇಕಷ್ಟೆ. ಸ್ನಾನ ಮುಗಿಸಿ ಬದುಕಿ ಮೇಲೆದ್ದು ಬಂದಾಗ ನಮಗೆ ಲಭಿಸಿದ್ದು ಅಕ್ಷರಶಃ ಪುನರ್ಜನ್ಮ. ಆಮೇಲೆ ಪಂಚಭಕ್ಷ್ಯ ಪರಮಾನ್ನ ಸಮೇತ ಭೋಜನ. ಮನೆಯ ಯಜಮಾನ ಯಜ

ಮಾನಿತಿಯರಿಗೆ ಇತರರಿಗೆ ಈ ಸಮಾರಂಭ ನೋಡಲು ಆಗಮಿಸಿದ್ದ ಅವರ ಬಂಧು ಬಾಂಧವರಿಗೆ ನಮ್ಮ ವಾಸ್ತವ್ಯ ಒಂದು ಪರ್ವಕಾಲದ ಹಬ್ಬದಂತೆ. ಅವರೆಲ್ಲರೂ ಪ್ರೈಪ್ರೋಟಿಯಿಂದ ನಮಗೆ ಬಡಿಸಿದರು. ಮಲಗಲು ಸುಪ್ಪತ್ತಿಗೆ! ನಾವೇನು ಮಿಲಿಟರಿ ಕವಾಯಿತು ಪ್ರದರ್ಶನಕ್ಕೆ ಬಂದವರೇ ಅಥವಾ ಮದುವೆ ಮಂಟಪಕ್ಕೆ ಬೀಗರಾಗಿ ಆಗಮಿಸಿದವರೇ! ಗಣಪಯ್ಯ ಸಹೋದರರ ಔದಾರ್ಯಕ್ಕೆ ಎಣೆಯೇ ಇರಲಿಲ್ಲ.

ಮರುದಿನ ಮಧ್ಯಾಹ್ನದ ವೇಳೆಗೆ ನಾವು ಸುಬ್ರಹ್ಮಣ್ಯಕ್ಷೇತ್ರವನ್ನು ತಲಪಬೇಕು. ನಡೆಯಬೇಕಾಗಿದ್ದ ದೂರ ಪ್ರಾಯಶಃ ೧೦–೧೨ ಮೈಲಿಗಳು. ೮ ಗಂಟೆಗೆ ಹೊರಟರೂ ಮಹಾಪೂಜೆಯ ಮುನ್ನ ತಲಪಬಹುದೆಂದುಕೊಂಡು ಸಾವಕಾಶವಾಗಿ ಸಾಗಿದೆವು. ಆದರೆ ಪುನಃ ದಾರಿ ಕರೆಯ ಸ್ವಾಗತೋಪಚಾರಗಳಿಂದ ತಡವಾಯಿತು. ಕ್ಷೇತ್ರವನ್ನು ತಲಪಿದಾಗ ಮಧ್ಯಾಹ್ನದ ಮಹಾಪೂಜೆ ಮುಗಿದು ಹೋಗಿತ್ತು. ದೇವರ ದರ್ಶನ ಮುಗಿಸಿ ಸಮೀಪದ ಛತ್ರದಲ್ಲಿ ಊಟ ಮಾಡಿದೆವು. ಮರುದಿವಸ ಬೆಳಗ್ಗೆ ಸುಬ್ರಹ್ಮಣ್ಯದಿಂದ ಸುಳ್ಯದೆಡೆಗೆ ಗುತ್ತಿಗಾರು ಮಾರ್ಗವಾಗಿ ಸಾಗುವುದೆಂದು ಮೊದಲಿನ ಯೋಜನೆಯಿತ್ತು. ಆದರೆ ಒಂದು ಹಗಲಿಗೆ ಈ ದೂರ ಬಲು ಹೆಚ್ಚಾದೀತೆಂದು ಸ್ಥಳಿಕರಿಂದ ತಿಳಿದುದರಿಂದ ಯೋಜನೆಯನ್ನು ಬದಲಾಯಿಸಿದೆವು. ರಾತ್ರಿ ದೇವರಪೂಜೆ ನೋಡಿ ಮಂಗಳಾರತಿ ಪ್ರಸಾದ ಸ್ವೀಕರಿಸಿ ಊಟ ಮಾಡಿ ಮುಂದಿನ ದಾರಿ ಒಂದು ಹತ್ತು ಮೈಲಷ್ಟಾದರೂ ದೂರ ಗಮಿಸಬೇಕು ಎಂದು ನಿರ್ಧರಿಸಿದೆವು. ಊರವರು ಪಂಜು, ಸೂಟೆ ಹಿಡಿದು ಮುನ್ನಡೆದು ನಮಗೆ ಮಾರ್ಗದರ್ಶನ ಮಾಡಿದರು. ದೊಡ್ಡ ದೊಡ್ಡ ಹೊಳೆಗಳನ್ನು ದೋಣಿಗಳ ನೆರವಿನಿಂದ ಅಡ್ಡದಾಟಿಸಿದರು. ಯಾವುದೋ ಹಳ್ಳಿಯ ಶಾಲೆಯ ಜಗಲಿಯ ಮೇಲೆ ಮಲಗಿ ರಾತ್ರಿಯ ಅಪರಾರ್ಧವನ್ನು ಸುಖನಿದ್ರೆಯಲ್ಲಿ ಕಳೆದೆವು. ಬೆಳಗ್ಗಿನ ಉಪಾಹಾರ ಕಟ್ಟದ ಮುಂಜಯ್ಯ ಮಾಷ್ಟರರ ಮನೆಯಲ್ಲಿ. ಅಪರಾಹ್ಣದ ೩–೪ ಗಂಟೆ ವೇಳೆಗೆ ಸುಳ್ಯ (ಇದು ಮಡಿಕೇರಿ–ಮಂಗಳೂರು ರಾಜಮಾರ್ಗದಲ್ಲಿ ಮಡಿಕೇರಿಯಿಂದ ೩೨ ಮೈಲಿಗಳ ದೂರದಲ್ಲಿರುವ ಒಂದು ಹಳ್ಳಿ) ತಲಪಿದಾಗ ನಮಗೆ ಸ್ವಾಗತ ಕೋರಿದವರು ವೆಂಕಪ್ಪಯ್ಯನವರು. ಅಲ್ಲಿಯ ಪ್ರೌಢಶಾಲೆಯ ವಿದ್ಯಾರ್ಥಿ ಭವನದಲ್ಲಿ ನಮ್ಮನ್ನು ಇಳಿಸಿದರು. ಇಲ್ಲಿಯ ಸಕಲ ಏರ್ಪಾಡುಗಳೂ ಖರ್ಚೂ ಈ ಡಾಕ್ಟರರದೇ. ಮರುದಿನ ರಾಜಮಾರ್ಗದ ಮೇಲೆ ಸಂಪಾಜೆ-ಮಡಿಕೇರಿ ದಿಕ್ಕಿನಲ್ಲಿ ನಡೆಯತೊಡಗಿದೆವು. ೧೪ ಮೈಲಿ ದೂರದ ಸಂಪಾಜೆ ತಲಪಿದಾಗ ಆಯಾಸ ವಿಪರೀತವಾಯಿತು. ಇದರ ಕಾರಣಗಳು ಹಲವಾರು. ಮುಖ್ಯವಾಗಿ ರಾಜಮಾರ್ಗದ ಸಾಹಸವಿಹೀನ ನೀರಸ ನಡಿಗೆ. ಆ ಹಿಂದೆ ಹಳ್ಳಿಯ ಔದಾರ್ಯದ ಕಡಲಿನಲ್ಲಿ ಮಿಂದು ತೇಲಿ ಈಸಿ ಸುಖಿಸಿದ್ದ ನಮಗೆ ಈಗ ಅದರ ಸಂಪೂರ್ಣ ಅಭಾವ. ದಾರಿಯಲ್ಲಿ ಕುಡಿಯಲು ಸರಿಯಾದ ನೀರು ಸಹ ದೊರೆಯಲಿಲ್ಲ. ಸಂಪಾಜೆಯಲ್ಲಿ ಮಧ್ಯಾಹ್ನದ ಊಟ ವ್ಯವಸ್ಥಿತವಾಗಿ ನಡೆಯಿತು. ಆದರೆ ಇನ್ನುಳಿದಿದ್ದ ಕಡಿದಾದ ಚಡಾವು ಏರಿ ಮಡಿಕೇರಿ ಸೇರುವ ಹುಮ್ಮಸ್ಸು ಯಾರಿಗೂ ಉಳಿದಿದ್ದಂತೆ ತೋರಲಿಲ್ಲ. ಸರ್ವಾನುಮತಪ್ರಕಾರ (ಪರಮೋತ್ಕೃಷ್ಟ ಪ್ರಜಾಪ್ರಭುತ್ವ ?) ಬಸ್ ಏರಿ ಸಾಯಂಕಾಲವಾಗುವಾಗ ಮಡಿಕೇರಿಗೆ ಮರಳಿದೆವು.

ಒಬ್ಬೊಬ್ಬರಾಗಿ ಒಂದು ಮೈಲನ್ನೂ ನಡೆಯಲು ಗೋಗರೆಯುವ ನಮ್ಮ ಹುಡುಗರು

ಒಟ್ಟಾಗಿ ಸಾಧಿಸಿದ ಈ ಎತ್ತರ ಸಾಮಾನ್ಯವಲ್ಲ. ಸಹಕಾರ ವಿರದ ಎತ್ತರವಿಲ್ಲ. ಈ ಸಾಹಸದ ಯಶಸ್ಸಿನಿಂದ ಬೋರೈರಾಜರ ಮತ್ತು ನನ್ನ ಆತ್ಮೀಯತೆ ತೀರ ನಿಕಟವಾಯಿತು. ಅಂತಿಮವಾಗಿ ಕೆಲಸವೇ ಮನುಷ್ಯನ ಯೋಗ್ಯತೆಯ ಒರೆಗಲ್ಲು.

ಬನ್ನಿ ನಾಪೋಕ್ಲಿಗೆ !

ಮಡಿಕೇರಿಯಿಂದ ೧೨ ಮೈಲಿ ದೂರದಲ್ಲಿ ಕೊಡಗು ರಾಜ್ಯದ (ಅಂದು ಕೊಡಗು ಪ್ರತ್ಯೇಕ ರಾಜ್ಯವಾಗಿತ್ತು) ಆರನೆಯ ಮಹಾನಗರವಾದ ನಾಪೋಕ್ಲು ಶೋಭಿಸುತ್ತಿದೆ. ಊರೆಂದರೆ ಮಡಿಕೇರಿಯೆಡೆಗೆ ಸಾಗುವ ಒಂದು ಮಹಾಮಾರ್ಗ ಮಾತ್ರ ! ಅದರ ಇಕ್ಕೆಲಗಳಲ್ಲಿಯೂ ಕಿಕ್ಕಿರಿದು ದಟ್ಟೈಸಿರುವ ಎಲ್ಲವೂ ಒಂದರಲ್ಲಿರುವ ಎಲ್ಲದರಲ್ಲೂ ಒಂದಿರುವ ಮಹಾ ಮಳಿಗೆ ಗಳಿವೆ. ಅನಿವಾರ್ಯವಾಗಿ ಉಡುಪಿ ಶ್ರೀಕೃಷ್ಣನಾಮಾಂಕಿತ ಉದರಪೋಷಣಕೇಂದ್ರಗಳೂ ತಿರುಪತಿ ಶ್ರೀ ವೆಂಕಟೇಶ್ವರ ಪ್ರಸಾದಿತ ಕೇಶಮುಂಡನ ನಿಲಯಗಳೂ ಕಫೆ ಸ್ಕಾರ್ಪಿಯನ್, ಕಫೆ ಕಕ್ರೋಚ್ ಎಂಬ ವಿದೇಶೀ ಪವಿತ್ರ ನಾಮಧರ ಹಿಂದೂ ಮುಸ್ಲಿಂ ಮಿಲ್ಟ್ರಿ ಭಕ್ಷಣಾ ಲಯಗಳೂ ಅಲ್ಲಿ ವಿಪುಲ ಸಂಖ್ಯೆಯಲ್ಲಿ ಜನಸೇವೆಯಲ್ಲಿ ಸದಾ ತಲ್ಲೀನವಾಗಿವೆ. ಪ್ರೌಢ ಶಾಲೆ, ಕಸಾಯಿಖಾನೆ, ಅಕ್ಕಿಗಿರಣಿ, ಬೆರಣಿ ರಾಶಿ, ಆಸ್ಪತ್ರೆ, ಸುಡುಗಾಡು, ಖಾದಿವಸ್ತ್ರಾ ಲಯ, ಸೇಂದಿ ಅಂಗಡಿ, ಶಿಶುವಿಹಾರ, ಜಾನುವಾರು ದೊಡ್ಡಿ, ಸರಕಾರದ ಕಛೇರಿಗಳು, ಲಂಚ ಕೇಂದ್ರಗಳು, ಪೋಲೀಸುಠಾಣ್ಯ, ಕಳ್ಳಸಂತೆ—ಇವೇ ಮೊದಲಾದ ಮಹಾಮಹಾ ಸಂಸ್ಥೆ ಗಳು ಯಥೋಚಿತವಾಗಿ ಜನದನ ಸೇವೆಯನ್ನು ಗೈಯ್ಯುತ್ತ ನಾಪೋಕ್ಲು ನಗರದ ಬೆಳ್ಳಿಯ ಕಲಶಕ್ಕೆ ಹೊನ್ನಿನ ಮುಲಾಮನ್ನು ಲೇಪಿಸುತ್ತಿವೆ. ಹಿಂದೆ ಹೋದರೆ ಕಕ್ಕಬೆ, ಇಗ್ಗುತಪ್ಪ, ನಾಲ್ಕುನಾಡು ಅರಮನೆ ಮೇಲಾಗಿ ಕೊಡಗಿನ ಅತ್ಯುನ್ನತ ಪರ್ವತಶಿಖರ ತಡಿಯಂಡಮೋಳು ಈ ನಗರಕ್ಕೆ ರಕ್ಷೆ. ಮುಂದೆ ನಡೆದರೆ ಕಾವೇರಿ ನದಿಯ ಬೆಳ್ಳಿಯ ಒಡ್ಯಾಣ ಈ ನಗರಕ್ಕೆ ಮಹಾಭೂಷಣ. ನಾಪೋಕ್ಲಿನ ಸುತ್ತಲೂ ಹಬ್ಬಿವೆ ಬತ್ತದ ಗದ್ದೆಗಳು, ಕಿತ್ತಳೆ ತೋಟಗಳು, ಯಾಲಕ್ಕಿ ಮಲೆಗಳು, ಅಲ್ಲಿ ಇಲ್ಲಿ ಕಾಫಿ ತೋಟಗಳು. ಮಲೆನಾಡಿನ ಒಂದು ವಿಶಿಷ್ಟ ಕೇಂದ್ರ ನಾಪೋಕ್ಲು. ವರ್ಷದಲ್ಲಿ ಇಲ್ಲಿ ಎರಡೇ ಋತು ಗಳು—ಸುಷುಪ್ತಿಋತು, ನಿದ್ರಾಋತು. ಏಪ್ರಿಲಿನಲ್ಲಿ ಮಳೆ ಸುರಿಯಲು ತೊಡಗಿದರೆ ಬಳ್ಳಿಯಂತೆ, ತೆಳುವಾಗಿ ಬಳುಕಿ ಹರಿಯುತ್ತಿರುವ ಕಾವೇರಿ ಪುಷ್ಟಿಗೊಳ್ಳಲು ತೊಡಗು ತ್ತಾಳೆ. ಮುಂದಿನ ದಿವಸಗಳಲ್ಲಿ ಆಕೆಯ ಅಬ್ಬರ ಉಬ್ಬರ ಇತಿಮಿತಿ ಇಲ್ಲದೆ ವರ್ಧಿಸು ತ್ತವೆ. ಮೂರು ಕಡೆಯೂ ನಾಪೋಕ್ಲನ್ನು ಈ ನದಿ ಸುತ್ತಿ ಹರಿಯುವಾಗ ನಾಗರಿಕತೆಗೂ (ಎಂದರೆ ದೈನಂದಿನ ಟಪ್ಪಾಲು, ದಿನಪತ್ರಿಕೆಗಳು, ರಾಜಧಾನಿ ಮಡಿಕೇರಿಯ ವಾರ್ತೆ ಗಳು ಮುಂತಾದವು) ಊರವರಿಗೂ ನಡುವೆ ಸಂಪರ್ಕ ಕಡಿದು ಹೋಗುತ್ತದೆ. ಆದರೂ ಈ ಜನರು ಗಾಬರಿಗೊಂಡವರಲ್ಲ. ಏನೋ ಕಳೆದುಹೋಯಿತಲ್ಲ ಎಂದು ಚಡಪಡಿಸಿ ಒದ್ದಾಡಿ ಓಡಿ ಬಿದ್ದವರಲ್ಲ. ಬರ್ಲಿನ್ ಗೋಡೆ ಏನಾದರೇನು, ನೆಹರೂ ಸರಕಾರದ ವಿದೇಶನೀತಿ ಹೇಗಿದ್ದರೇನು. ಬೇಡಿ ಮಹಾಶಯರ (ಕೊಡಗಿನ ಚೀಫ್ ಕಮಿಶನರ್) ಸರಕಾರ ಕಂದಾಯದಲ್ಲಿ ರಿಯಾಯಿತಿ ಕೊಟ್ಟರೇನು ಕೊಡದಿದ್ದರೇನು—ಈ ಜನ ನಿಶ್ಚಿಂತರು. ಮಳೆಗಾಲದಲ್ಲಿ ಮುಳುಗದ ಮರಿಯಂದ ಸೇತುವೆ ಕಾವೇರೀನದಿಗೆ ಬೇಕೆಂಬು

ದೊಂದೂ ಈ ನಾಗರಿಕರ ಬಹುಕಾಲದ ಬಯಕೆ. ಈ ನಿದ್ರಾಸ್ಥಿತಿ ಡಿಸೆಂಬರ್‌ತನಕವೂ ಮುಂದುವರಿಯುತ್ತದೆ. ಆಗ ಕಾವೇರಿ ಪ್ಪೈ ಸೊರಗಿ ಸೇತುವೆಯನ್ನು ಆಕೆಯ ಮೇಲೆ ಹೇರಿದರೆ ಪ್ರತಿಭಟಿಸಲು ತ್ರಾಣವಿಲ್ಲದೇ ಒಪ್ಪಿಕೊಳ್ಳುತ್ತಾಳೆ. ಹೀಗೆ ಜನವರಿಯಿಂದ ನಾಗರಿಕತೆಯ ದೂತ ಹಾಗೂ ಪ್ರತೀಕ ಬಸ್ ನಾಪೋಕ್ಲನ್ನು ಪುನಃ ಸ್ಪರ್ಶಿಸಿ ಅದರ ಹೊಗೆಯಿಂದಲೂ ಅದು ಹಾರಿಸಿದ ಧೂಳಿನಿಂದಲೂ ಆ ನಗರವನ್ನು ಪವಿತ್ರಗೊಳಿಸುತ್ತದೆ. ಮುಂದೆ ಏಪ್ರಿಲ್‌ತನಕ ಸುಷುಪ್ತಿಸ್ಥಿತಿ. ಕಾವೇರಿನದಿಗೆ ನೆರೆ ಬಂದಾಗ ಅಕ್ಕಪಕ್ಕದ ಪರಂಬಿನಲ್ಲಿ ಹತ್ತಿಪ್ಪತ್ತು ಅಡಿ ಎತ್ತರಕ್ಕೆ ಕನ್ನೀರು ತುಂಬಿ ರುದ್ರಾಟ್ಟಹಾಸದಿಂದ ಪ್ರವಹಿಸಲು ತೊಡಗುತ್ತದೆ. ಆಗ ಪ್ರವಾಹದ ಆಗಲ ಒಂದು ಮೈಲನ್ನೂ ಮೀರಬಹುದು. ಅದನ್ನು ಆ ಸೆಳವಿನಲ್ಲೂ ಈಸಿ ದಾಟಿದ ವೀರರಿದ್ದಾರಂತೆ! ದೋಣಿಯಲ್ಲಿ ದಾಟುವಾಗಲೂ ನಮಗೆ ಜೀವ ಪುಕಪುಕ ಎನ್ನುವ ವಾಸ್ತವಿಕ ಪರಿಸ್ಥಿತಿ ಇದು. ನಾಪೋಕ್ಲಿಗೂ ಕಾವೇರಿಗೂ ನಡುವೆ ಇರುವ ವಿಶಾಲವಾದ ಪರಂಬಿನ ಹೆಸರು ಕೊಟ್ಟಮುಡಿ. ಮಡಿಕೇರಿಯಿಂದ ನಾಪೋಕ್ಲಿಗೆ ಹೋಗುವಾಗ ಮೊದಲು ಕಾವೇರಿಯನ್ನು ದಾಟಬೇಕು. ಆ ಕೂಡಲೇ ಕೊಟ್ಟಮುಡಿ ಪರಂಬು—ಅತಿ ವಿಶಾಲವಾದ ಹಸುರು ಜಮಖಾನ ಹಾಸಿದಂಥ ಬಯಲು ಎದುರಾಗುವುದು. ಮತ್ತೂ ಮುಂದೆ ಒಂದು ಮೈಲಿ ಏರುತ್ತ ಸಾಗಿದರೆ "ಬನ್ನಿ ನಾಪೋಕ್ಲಿಗೆ!" ಫಲಕ ನಿಮ್ಮನ್ನು ಸ್ವಾಗತಿಸುವುದು.

ಈಗ ಕೃತಿ, ಮಾತಲ್ಲ!

ಜೂನ್ ೧೯೫೫. ನಮ್ಮ ಎನ್‌ಸಿಸಿ ಕಛೇರಿ ಸ್ವಂತ ಕಟ್ಟಡಕ್ಕೆ ವರ್ಗವಾಗಿ ಹೋಗಿದೆ. ಕಾಲೇಜಿನ ದಿಬ್ಬದಿಂದ ಮಡಿಕೇರಿ ಪಟ್ಟಣದ ಕಡೆಗಿನ ಸಮೀಪದ ದಿಬ್ಬದ ಮೇಲೆ ಈ ವಿಶಾಲವಾದ ಆವರಣವಿದೆ. ಹೊರಗೆ ಸೋನೆ ಮಳೆ. ಜಗಲಿ ಮೇಲೆ ದೊರೈರಾಜರೂ ನಾನೂ ಅಡ್ಡಾಡುತ್ತಿದ್ದೇವೆ. "ಈ ವರ್ಷದ ಕ್ಯಾಂಪನ್ನು ಬಲು ಪರಿಷ್ಕಾರವಾಗಿ ನಡೆಸಲೇಬೇಕು. ಒಂದು ಯೋಗ್ಯ ಸ್ಥಳ ಸೂಚಿಸುತ್ತೀರಾ?" ಅವರ ಪ್ರಶ್ನೆ.

"ಅಂಥ ಸ್ಥಳದ ಆವಶ್ಯಕತೆಗಳೇನೇನು?"

"ಡೇರೆಗಳನ್ನು ಹೂಡೆಯಲು ವಿಶಾಲ ಪ್ರದೇಶ, ಪೆರೇಡ್ ಗ್ರೌಂಡ್, ನೀರಿನ ಸೌಕರ್ಯ, ವಾಹನಗಳಿಗೆ ಪ್ರವೇಶ್ಯತೆ, ಪೇಟೆ ಪಟ್ಟಣಗಳಿಂದ ದೂರವಾಗಿದ್ದರೆ ಒಳ್ಳೆಯದು, ಹಾಗಿದ್ದರೂ ವೈದ್ಯಕೀಯ ಸೌಲಭ್ಯ ಸಮೀಪದಲ್ಲಿ ದೊರೆಯುವಂತಿರಬೇಕು. ಇವೆಲ್ಲವೂ ಒಂದೇ ಸ್ಥಳದಲ್ಲಿ ಕೇಂದ್ರೀಕೃತವಾಗಿದ್ದರೆ ಅದು ಸರ್ವೋತ್ಕೃಷ್ಟ ಶಿಬಿರಸ್ಥಾನವೆನ್ನಿಸುವುದು. ಯೋಜನೆ ಮಾಡಿ."

"ಯೋಜನೆ ಏನು ಬಂತು? ಕೊಡಗು ರಾಜ್ಯದಲ್ಲಿ ಇರುವಂಥ ಏಕೈಕ ಅರ್ಹಸ್ಥಳ ಕೊಟ್ಟಮುಡಿ ಪರಂಬು."

ಆ ಸ್ಥಳವನ್ನು ವೀಕ್ಷಿಸಿದ ದೊರೈರಾಜರು ನನ್ನ ಸೂಚನೆಯನ್ನು ಬಲುವಾಗಿ ಮೆಚ್ಚಿಕೊಂಡರು. ಡಿಸೆಂಬರ್ ೨೫ರಿಂದ ಪ್ರಾರಂಭವಾಗಬೇಕಾಗಿದ್ದ ಕ್ಯಾಂಪಿನ ಪೂರ್ವಸಿದ್ಧತೆಗಳನ್ನು ಜೂನ್ ತಿಂಗಳಿನಿಂದಲೇ ಮಾಡಲು ತೊಡಗಿದೆವು.

ಡಿಸೆಂಬರ್ ೨೫ರ ನಸುಕು. ಮಡಿಕೇರಿಯ ರಾಜಾಸೀಟಿನ ನಂದೀಮರದ ಕೆಳಗೆ

(ಕೊಡಗು ರಾಜ್ಯದ ಓರ್ವ ಕವಿಪುಂಗವರು ಈ ಮರದಲ್ಲಿ ಬೋಧಿವೃಕ್ಷವನ್ನು ಕಂಡು ನಿದ್ದೆಯಿಂದ ಎದ್ದು "ರಾಜಾಸೀಟಿನ ನಂದೀಮರವೇ! ಏತಕೆ ಸುಮ್ಮನೆ ನಿಂತಿರುವೆ ? ರಾಜನು ಎಲ್ಲಿಗೆ ಪೋದನು ಎಂದೂ ಪೇಳೌ ನೀನು ನನಗಿಂದು!" ಎಂದು ಆಶುಕಾವ್ಯ ಉದ್ಗರಿಸಿದರೆಂದು ಪ್ರತೀತಿ) ಶಕ್ತಿರಾಶಿ ಅಕಸ್ಮಾತ್ತಾಗಿ ಒಂದುಗೂಡಿದೆ. ಕೊರೆಯುತ್ತಿರುವ ಚಳಿ, ಬೀಳುತ್ತಿರುವ ಮಂಜು ಯಾವುದನ್ನೂ ಲೆಕ್ಕಿಸದೇ ಈ ತರುಣಯೋಧರು ಅಲ್ಲಿ ಲಗುಬಗೆಯಿಂದ ಓಡಾಡುತ್ತಿದ್ದಾರೆ. ಬೂಟುಗಳನ್ನು ಕ್ಲಿಕ್ ಮಾಡಿ ತಮ್ಮ ಇರವಿನ ಅರಿವನ್ನು ಲೋಕಕ್ಕೆ ಸರಿಯಾಗಿಯೇ ತಿಳಿಯಪಡಿಸುತ್ತಿದ್ದಾರೆ. ಬೆಳಗ್ಗಿನ ೬ ಗಂಟೆಗೆ ಇನ್ನೂ ಕತ್ತಲು. ಸಿಎಚ್‌ಎಂ ಬಿಗಿಲೂದಿದಾಗ ಈ ಜೇನುಗೂಡು ಸ್ತಬ್ಧವಾಯಿತು. ಒಂದು ಹುಕುಂ ಒಂದು ಕ್ರಿಯೆ ಸೂತ್ರ. ಆ ನೂರಿಪ್ಪತ್ತೂ ಮಂದಿಯನ್ನು ಮಿಲಿಟರಿ ಕ್ರಮದಲ್ಲಿ ಅಳವಡಿಸಿ ಅವರ ಮೊತ್ತವನ್ನೂ ಇತರ ವಿವರಗಳನ್ನೂ ಕ್ರಮಬದ್ಧವಾಗಿ ಪಡೆದು ಸಿಎಚ್‌ಎಂ ವರದಿಯನ್ನು ನನಗೆ ಒಪ್ಪಿಸಿದ. ನನ್ನ ಸಹ ಅಧಿಕಾರಿಗಳಾದ ಲೆಫ್ಟಿನೆಂಟ್ ಜನಾರ್ದನ ಬಾಳಿಗರೂ ಲೆಫ್ಟಿನೆಂಟ್ ಈ. ಎಸ್. ಕೃಷ್ಣಯ್ಯನವರೂ (ಇವರು ೧೯೫೫ರ ಬೇಸಗೆಯಲ್ಲಿ ಎಂಆರ್‌ಸಿಯಲ್ಲಿ ಮಿಲಿಟರಿ ಶಿಕ್ಷಣ ಪಡೆದು ಎನ್‌ಸಿಸಿ ಆಫಿಸರ್ ಆಗಿ ನೇಮಕಗೊಂಡು ನಮ್ಮ ಬಳಗವನ್ನು ಪೂರ್ಣಗೊಳಿಸಿದ್ದರು. ಕಾಲೇಜಿನಲ್ಲಿ ಶ್ರೀಯುತರು ಕನ್ನಡ ಅಧ್ಯಾಪಕರು) ಅಲ್ಲಿ ಹಾಜರಿದ್ದರು. ಸಮಗ್ರ ಪೆರೇಡನ್ನು ವೀಕ್ಷಿಸಿ ಅದನ್ನು ವಿಶ್ರಾಮಸ್ಥಿತಿಗೆ ತಂದು ನಾನು ನಾಲ್ಕು ಮಾತು ಹೇಳಿದೆ "ಮಿತ್ರರೇ! ಈ ದಿವಸ ನಾವು ಕೊಟ್ಟಮುಡಿ ಕ್ಯಾಂಪಿಗೆ ನಡೆದುಕೊಂಡು ಹೋಗುವವರಿದ್ದೇವೆ. ನಮ್ಮ ಹುಡುಗರ ಧೈರ್ಯ, ಸಹಿಷ್ಣುತೆಗಳ ಮುಂದೆ ಈ ಏಳೆಂಟು ಮೈಲಿಗಳ ಒಳದಾರಿ ಒಂದು ದೊಡ್ಡ ದೂರವಲ್ಲ. ಆದರೆ ದಾರಿ ನಡೆಯುವಾಗ ನಾವು ಸಂಪೂರ್ಣವಾದ ಮಿಲಿಟರಿ ಶಿಸ್ತಿನ ರೀತಿಯಲ್ಲಿಯೇ ಇರತಕ್ಕದ್ದು. ದಾರಿಯನ್ನು ಬಿಟ್ಟು ಆಚೆ ಈಚೆ ಕದಲತಕ್ಕದ್ದಲ್ಲ. ನೆರೆಕರೆಯ ಯಾವ ಅಂಗಡಿ ಯಾವ ಮನೆಯಿಂದಲೂ ಏನನ್ನೂ ಪಡೆಯತಕ್ಕದ್ದಲ್ಲ. ಎಲ್ಲಿಯೂ ಯಾರೂ ಕೇಂದ್ರೀಯ ಹುಕುಂ ಇಲ್ಲದೇ ವಿಶ್ರಾಂತಿ ಪಡೆಯತಕ್ಕದ್ದಲ್ಲ. ಎಂದರೆ, ನಿಮ್ಮ ಶಿಸ್ತು, ನಿಮ್ಮ ವರ್ತನೆ ನಮ್ಮ ಭವ್ಯ ಕಾಲೇಜಿನ, ನಮ್ಮ ಭವ್ಯ ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿ ಎನ್‌ಸಿಸಿಯ, ಮೇಲಾಗಿ ನಮ್ಮ ಭವ್ಯ ಕೊಡಗು ರಾಜ್ಯದ ಕೊಡಗು ಸಂಸ್ಕೃತಿಯ ಪರಮೋತ್ಕೃಷ್ಟ ಪ್ರತೀಕವಾಗಿರಬೇಕು. ನಮ್ಮ ಇಂದಿನ ಈ ಸುಮುಹೂರ್ತವನ್ನು ಉದ್ಘಾಟಿಸಲು ಹಾಗೂ ನಮ್ಮ ನಡಿಗೆಯ ಮುಂದಾಳುತನ ವಹಿಸಲು ನಮ್ಮ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಪ್ರೊಫೆಸರ್ ರಾಘವ ಬಾಳಿಗರು ಬಂದಿರುವುದು ನಮಗೆ ಬಲು ಅಭಿಮಾನದ ಸಂತೋಷದ ಸಂಗತಿ. ಸ್ವತಃ ಮಾಜಿ ಎನ್‌ಸಿಸಿ ಆಫಿಸರರಾಗಿದ್ದ ಈ ಮಹನೀಯರ ಧುರೀಣತ್ವ, ಸ್ಫೂರ್ತಿ ನಮಗೆ ಸದಾ ಬೆಂಬಲಕ್ಕಿರುವಾಗ ನಾವು ಸಾಧಿಸಲಾಗದ ಸಾಹಸ ಯಾವುದು ?"

ವರ್ಗವಾಗಿ ಹೋಗಿದ್ದ ಪ್ರಿನ್ಸಿಪಾಲ್ ಅಚ್ಯುತನ್ ಪಿಳ್ಳೆಯವರ ಸ್ಥಾನಕ್ಕೆ ಬಂದಿದ್ದ ರಾಘವ ಬಾಳಿಗರು ಜ್ಞಾನ ಹಾಗೂ ವಯೋವೃದ್ಧರು. ೫೫ನ್ನು ದಾಟಿದ್ದ ಅವರ ಉತ್ಸಾಹ ಚೈತನ್ಯ ೩೦ನ್ನು ತಲಪದಿದ್ದ ನನ್ನಂಥವರಿಗೆ ಮಾರ್ಗದರ್ಶಕವೂ ಹೌದು ಸವಾಲೂ ಹೌದು. ಮೇಲಧಿಕಾರಿ ಶಕ್ತಿಯ ಸೌಹಾರ್ದದ ಆಕರವಾದಾಗ ಆ ಸಂಸ್ಥೆಗೆ ಅದು ಪರ್ವ

ಕಾಲ. ಪ್ರಿನ್ಸಿಪಾಲ್ ರಾಘವ ಬಾಳಿಗರು ಹುಡುಗರಿಗೆ ಉತ್ಸಾಹದ ನಾಲ್ಕು ಮಾತು ಹೇಳಿದರು. ''ಈಗ ಕೃತಿ, ಮಾತಲ್ಲ. ಆದ್ದರಿಂದ ನಾವು ನಡೆಯಲು ತೊಡಗೋಣ'' ಎಂದು ಕಂಚು ಕಂಠದಿಂದ ಅವರು ಕರೆ ನೀಡಿದಾಗ ನಮ್ಮ ಉತ್ಸಾಹ ಇನ್ನೊಂದು ಗರಿಷ್ಠ ಮಿತಿಯನ್ನು ಮುಟ್ಟಿತು.

ಆಸಕ್ತಿಯೇ ದುಡಿಮೆಯ ಮೂಲ

ರಾಜಾಸೀಟಿನಿಂದ ಕುಂದೂರ್ಮೊಟ್ಟೆಯನ್ನು ಇಳಿದು ಮಂಗಳೂರು ರಾಜ ಮಾರ್ಗವನ್ನು ತಾಳತ್ತಮನೆಯಲ್ಲಿ ದಾಟಿ ಮೇಕೇರಿ ಹಳ್ಳಿಮೂಲಕ ಅರುವತ್ತೊಕ್ಲಿನ ಗದ್ದೆ ಯಾಲಕ್ಕಿ ತೋಟ ಕಿತ್ತಳೆ ವನಗಳಲ್ಲಿ ಬಾಯಿ ಚಪ್ಪರಿಸಿ (ಮಾತ್ರ) ಮುಂದೆ ಹರಿಶ್ಚಂದ್ರ ಹಳ್ಳಿಯಲ್ಲಿ ಬೆಟ್ಟಕ್ಕೇರಿ-ನಾಪೋಕ್ಲು ರಾಜಮಾರ್ಗ ತಲಪಿದಾಗ ಚಳಿ ಸೆಕೆಯಾಗಿತ್ತು; ತಂಗದಿರನಂತಿದ್ದ ಸೂರ್ಯ ನಿಜವಾಗಿಯೂ ಬಿಸಿಗದಿರನಾಗಿದ್ದ. ಹಳ್ಳಿಯ ಹೈಕಳು, ದನಮೇಯಿಸುತ್ತಿದ್ದ ಗೂಡೆಗಳು, ಪೋಲಿ ಅಲೆಯುತ್ತಿದ್ದ ಹಂದಿಗಳು ನಮ್ಮ ದೀರ್ಘ ನಡಿಗೆ ಮತ್ತು ಅದರ ಅಬ್ಬರದಿಂದ ಹೆದರಿ ಕಾಡಿನ ಹಸುರಿನಲ್ಲಿ ಕರಗಿಹೋದರು. ದಿಟ್ಟತನದಿಂದ ಮುಂದೆ ಬಂದ ಹಿರಿಯ ರೈತರು ಅವರ ಮಡದಿಯರು ಸಂಭ್ರಮದಿಂದ ನಮ್ಮ ಕ್ರಮಬದ್ಧ ನಡಿಗೆಯನ್ನು ನೋಡಿ ಮೆಚ್ಚತೊಡಗಿದರು. ಈ ಟಾನಿಕ್ಕಿನಿಂದ ಶಕ್ತಿವರ್ಧನೆಯಾಗಿ ನಮ್ಮ ಕ್ಲಿಕ್ ಕ್ಲಿಕ್ ಗಮನ ಇನ್ನಷ್ಟು ಪರಿಷ್ಕಾರವಾಯಿತು. ತಾಯಿ ಕಾವೇರಿಯನ್ನು ದಾಟಿ ಚಿಕ್ಕ ಜಡಾವನ್ನು ಏರಿ ಬಲಕ್ಕೆ ತಿರುಗಿದಾಗ ಫಕ್ಕನೆ ಅನಂತ ವಿಸ್ತಾರದ ಕೊಟ್ಟಮುಡಿಯ ಹಚ್ಚ ಹಸುರು ಪರಂಬು ಅನಾವರಣಗೊಂಡಿತು. ಅಲ್ಲಿ ಇಲ್ಲಿ ನಾಲ್ಕೆಂಟು ಬಿಳಿ ಡೇರೆಗಳ ವಿನಾ ಇಡೀ ಮೈದಾನ ಖಾಲಿಯಾಗಿಯೇ ಇತ್ತು. ಆದರೆ ಯಾವುದೋ ಮೂಲೆಯಿಂದ ಆವಿರ್ಭವಿಸಿ ಓಡಿ ಓಡಿ ನಮ್ಮೆದುರು ಬಂದು ನಿಂತ ವ್ಯಕ್ತಿ ಕ್ಯಾಪ್ಟನ್ ದೊರೈರಾಜ್. ಪ್ರಿನ್ಸಿಪಾಲರಿಗೆ ಅವರು ಮಿಲಿಟರಿ ವಂದನೆ ಸಲ್ಲಿಸಿ ಅವರ ಯೋಗಕ್ಷೇಮ ವಿಚಾರಿಸಿಕೊಂಡರು. ಪೆರೇಡನ್ನು ವ್ಯವಸ್ಥಿತಗೊಳಿಸಿ ದೊರೈರಾಜರಿಗೆ ವರದಿ ಒಪ್ಪಿಸಿದೆ. ಅವರು ಅದನ್ನು ಪ್ರಿನ್ಸಿಪಾಲರಿಗೆ ಒಪ್ಪಿಸಿ ಅವರ ಅನುಮತಿ ಮೇರೆಗೆ ಕ್ಯಾಡೆಟುಗಳಿಗೆ ಶುಭ ಸ್ವಾಗತ ಕೋರಿದರು. ಪ್ರಿನ್ಸಿಪಾಲರೇ ಸ್ವತಃ ಈ ನಡಿಗೆಯ ಧುರೀಣತ್ವ ವಹಿಸಿದುದು ಅದೆಂಥ ಉತ್ತೇಜನದಾಯಕ ನಿಲವು ಎಂಬುದನ್ನು ಕೃತಜ್ಞತೆಯಿಂದ ಸ್ಮರಿಸಿದರು. ಇದೆಲ್ಲ ನಡೆದದ್ದು ಕೇವಲ ೨-೩ ಮಿನಿಟುಗಳ ಕಾಲದಲ್ಲಿ. ಕೂಡಲೇ ಹುಡುಗರನ್ನು ಮೈದಾನದ ಅಂಚಿನಲ್ಲಿ ಹೊಳೆಯ ಕರೆಯಲ್ಲಿ ಇದ್ದ (ನಾವು ನಿಂತಲ್ಲಿಂದ ಬೆಳಕಿಗೆ ಅಪಾರಕವಾಗಿದ್ದ ಆದರೆ ಹೊಗೆಗೂ ಪರಿಮಳಕ್ಕೂ ಪಾರಕವಾಗಿದ್ದ) ಅಡುಗೇ ಮನೆಯೆಡೆಗೆ ಸಾಲಾಗಿ ಕರೆದುಕೊಂಡು ಹೋದೆವು. ಉಪ್ಪಿಟ್ಟು, ಸಕ್ಕರೆ, ಬಾಳೆಹಣ್ಣು, ಕಾಫಿ, ಟೀ ಬೇಕಾದಷ್ಟು ಬಡಿಸಿದರು. ನಮ್ಮ ಪ್ರಾಮಾಣಿಕ ಸಂಪಾದನೆ ಅವು. ಹಸಿವೇ ರುಚಿಯ ಸೆಲೆ; ದುಡಿಮೆಯೇ ಹಸಿವಿನ ನೆಲೆ; ಆಸಕ್ತಿಯೇ ದುಡಿಮೆಯ ಬೆಲೆ—ಎಂದು ಮುಂತಾಗಿ ನಾನು ಆಗ ವಿವರಿಸಿದ ಗಣಿತಸೂತ್ರ ಹುಡುಗರಿಗೆ ಚೆನ್ನಾಗಿ ಅರ್ಥವಾದದ್ದು ಉಪ್ಪಿಟ್ಟು ಸಕ್ಕರೆ ಬಾಳೇಹಣ್ಣುಗಳ ಕಾಂಕ್ರೀಟಿನ ಮೇಲೆ ಕಾಫಿಕಷಾಯ ಒಂದಿಂಚು ಮಟ್ಟದಲ್ಲಿ ನಿಂತ

ಮೇಲಿರಿಯೇ ! ಪ್ರಿನ್ಸಿಪಾಲರು ನಮಗೆ ಶುಭಕೋರಿ ನಮ್ಮನ್ನು ಬೀಳ್ಕೊಟ್ಟು ಮಡಿಕೇರಿಗೆ ಬಸ್ಸಿನಲ್ಲಿ ಕುಳಿತು ಮರಳಿದರು.

ಸಮವಸ್ತ್ರಗಳನ್ನು ಕಳಚಿ ಓರಣವಾಗಿ ಪೇರಿಸಲಾಯಿತು. ಪಿಟಿ ಉಡುಪಿನಲ್ಲಿ ಸಿದ್ಧರಾದೆವು. ಕ್ಯಾಡೆಟುಗಳನ್ನು ತಂಡ ತಂಡಗಳಾಗಿ ವಿಭಾಗಿಸಿ ಆರ್ಮಿ ಸ್ಟಾಫುಗಳ ಹಿರಿತನದಲ್ಲಿ ಡೇರೆ ಹೊಡೆಯಲು ನಿಯೋಜಿಸಿದೆವು. ಡೇರೆ ಪೇರಿಸಿಟ್ಟಲ್ಲಿಗೆ ಹೋಗುವುದು, ಒಂದೊಂದನ್ನೂ ಅದರ ಗೂಟ ಹಗ್ಗ ಕಂಬ ಮುಂತಾದ ಪರಿಕರಗಳ ಸಮೇತ ಹೊತ್ತು ತರುವುದು, ಮೊದಲೇ ಗುರುತು ಮಾಡಿದ್ದ ಸ್ಥಳಗಳಲ್ಲಿ ಇವನ್ನು ಚೆಲ್ಲಿ ಹರಡುವುದು, ತರುವಾಯ ಕ್ರಮಬದ್ಧವಾಗಿ ಡೇರೆಯನ್ನು ಏರಿಸಿ ಕಟ್ಟಿ ಅದರ ಸುಟಿತನವನ್ನು ಪರಿಷ್ಕರಿಸುವುದು—ಎಲ್ಲವೂ ಮಿಲಿಟೆರಿ ಕ್ರಮದಲ್ಲಿ ನಡೆದುವು. ಪೂರ್ವಯೋಜಿತ ವಿಧಾನದಲ್ಲಿ ಸಮರ್ಥ ನಿರ್ದೇಶನದಲ್ಲಿ ನಡೆದ ಈ ಕ್ರಿಯೆಗಳು ಅತ್ಯಾಶ್ಚರ್ಯಕರವೆನಿಸುವಷ್ಟು ಕ್ಷಿಪ್ರವಾಗಿಯೂ ಗೊಂದಲವಿಲ್ಲದೆಯೂ ಕನಿಷ್ಠ ಶಕ್ತಿವ್ಯಯದಿಂದಲೂ ನೆರವೇರಿಹೋದುವು. ೧೧ ಗಂಟೆ ಹೊತ್ತಿಗೆ ಈ ಕೆಲಸವನ್ನು ನಾವು ತೊಡಗಿರಬಹುದು. ೧ ಗಂಟೆಯ ವೇಳೆಗೆ ಸಾಲಾಗಿ ಸುಟಿಯಾಗಿ ಅಚ್ಚುಕಟ್ಟಾಗಿ ನಿಂತಿದ್ದ ಆ ಬಿಳಿ ಡೇರೆಗಳ ಸಾಲು ನೀಲವ್ಯೋಮ ವಿಸ್ತಾರದಲ್ಲಿ ಸಾಲಾಗಿ ಹಾರುವ ಪಾರಿವಾಳಗಳ ಭಂಗಿಯನ್ನು ನೆನಪಿಗೆ ತರುವಂತಿತ್ತು. ಕೊಟ್ಟಮುಡಿಯ ಹಸುರು ಪುಷ್ಪಿಸಿತು. ಬಿಡಿದಿನಗಳಲ್ಲಿ ಒಂದು ಜನ ಎರಡು ದನ ಅಪೂರ್ವವಾಗಿ ಅಲೆಯುತ್ತಿದ್ದ ಈ ಶೂನ್ಯ ವಿಸ್ತಾರ ಈಗ ಚೇತನದ ಗನಿಯಾಗಿತ್ತು. ಮಧ್ಯಾಹ್ನದ ಊಟವನ್ನು ನಾವು ಚೆನ್ನಾಗಿಯೇ ಸಂಪಾದಿಸಿದ್ದೆವು. ಪೂರ್ವಯೋಜಿತ ವಿಧಾನ, ಕ್ರಮಬದ್ಧ ನಿರ್ವಹಣೆ ದಕ್ಷಧುರೀಣತ್ವ—ಗುರಿಯೆಡೆಗೆ ಇವುಗಳಿಗಿಂತ ಸಮರ್ಪಕ ದಾರಿ ಇನ್ನು ಬೇರೆ ಇಲ್ಲ.

ಕ್ಯಾಂಪೊಂದು ಸುಸಜ್ಜಿತ ನಗರ

ನಮ್ಮ ಕ್ಯಾಂಪೊಂದು ಪರಿಪೂರ್ಣ ಸುಸಜ್ಜಿತ ನಗರ ಆಹಾರ, ವಸತಿ, ವೈದ್ಯಾಲಯ, ಶೌಚಗೃಹಗಳು—ಇವು ಅನಿವಾರ್ಯ ಪ್ರಥಮಾವಶ್ಯಕತೆಗಳು. ಜೀವನವನ್ನು ಹಿತಕರವನ್ನಾಗಿ ಮಾಡುವ ಇತರ ಸೌಕರ್ಯಗಳು—ಲಲಿತಕಲೆಗಳು, ವಾಚನ ಸೌಲಭ್ಯ, ಕ್ಯಾಂಟೀನ್, ರೇಡಿಯೋ, ಧೋಬಿ, ಕ್ಷೌರಿಕ ಇತ್ಯಾದಿ—ಇವೆಲ್ಲ ಸೌಕರ್ಯಗಳೂ ನಮ್ಮ ಕ್ಯಾಂಪಿನಲ್ಲಿದ್ದುವು. ಟ್ರೈನಿಂಗಿಗೋಸ್ಕರ ಬೇಕಾದಷ್ಟು ಜಾಗಗಳನ್ನು ಹುಡುಕಿ ಸಿದ್ಧ ಮಾಡಿಕೊಂಡಿದ್ದೆವು. ಪ್ರಥಮ ದಿವಸದ ಸಾಯಂಕಾಲ ಶಿಬಿರವನ್ನು ಅಧಿಕೃತವಾಗಿ ಉದ್ಘಾಟಿಸುತ್ತ ದೊರೈರಾಜರು "ಈ ಕ್ಯಾಂಪು ನಿಮ್ಮದು, ಇದನ್ನು ಸರ್ವೋತ್ಕೃಷ್ಟವಾಗುವಂತೆ ಮಾಡುವ ಹೊಣೆ ನಿಮ್ಮದು. ನಾನೂ ನನ್ನ ಆಫಿಸರರೂ ನಿಮಿತ್ತಮಾತ್ರ. ಕ್ಯಾಂಪಿನ ಸಕಲ ವಿಧಿಗಳನ್ನೂ ಶ್ರದ್ಧಾಪೂರ್ವಕವಾಗಿ ನಿರ್ವಹಿಸಿ. ಕ್ಯಾಂಪು ಮುಗಿದು ಮರಳುವಾಗ, ಮುಂದೆ ಎಂದಾದರೊಂದು ದಿನ ಕ್ಯಾಂಪಿನ ಸ್ಮರಣೆಯನ್ನು ನೀವು ಮೆಲುಕು ಹಾಕುವಾಗ, ನಿಮ್ಮ ವಿಚಾರ ನಿಮಗೆ ಹೆಮ್ಮೆ ಅಭಿಮಾನ ಉಕ್ಕುವಂತೆ ಮಾಡಲು ಇದೀಗ ಸುಸಂದರ್ಭ" ಎಂದು ಮುಂತಾಗಿ ಹೇಳಿದರು.

ಒಂದೊಂದು ಸುಸಜ್ಜಿತ ಡೇರೆಯಲ್ಲಿಯೂ ಇದ್ದವರು ೧೨ ಮಂದಿ ಕ್ಯಾಡೆಟುಗಳು.

ಅವರ ಪೈಕಿ ಒಬ್ಬ ಆ ಡೇರೆಯ ನಾಯಕ. ಅದರ ಅಚ್ಚುಕಟ್ಟು, ಡೇರೆ ವಾಸಿಗಳ ಶಿಸ್ತು, ಕಾಲನಿಷ್ಠೆ, ಆರೋಗ್ಯ ಎಲ್ಲವೂ ಈತನ ಹೊಣೆಗಾರಿಕೆ. ಬೆಳಗ್ಗೆ ೫ ಗಂಟೆಗೆ ಈ ಹುಡುಗರೆಲ್ಲರೂ ಏಳಬೇಕು. ೫-೩೦ರ ಹೊತ್ತಿಗೆ ಅಡುಗೇಮನೆ ಬಳಿ ಹೋಗಿ ಛೋಟಾಪಜ್ರಿ (ಬೆಡ್ ಕಾಫಿ) ಪಡೆದು ಡೇರೆಗೆ ಹಿಂತಿರುಗಿ ಪಿಟಿ ಉಡುಪಿನಲ್ಲಿ ಸಮೀಪದ ಪೆರೇಡ್ ಮೈದಾನದಲ್ಲಿ ಹಾಜರಾಗಬೇಕು. ೬ ಗಂಟೆಗೆ ಮೊದಲ ಬಿಗಿಲು. ೬-೧೫ರ ಹೊತ್ತಿಗೆ ಸಮಗ್ರ ಪೆರೇಡನ್ನೂ ಕ್ಯಾಂಪಿನ ಉಪಮುಖ್ಯಸ್ಥನಾದ ನಾನು ಕ್ಯಾಂಪ್ ಕಮಾಂಡೆಂಟರಿಗೆ (ದೊರೈರಾಜ್) ಒಪ್ಪಿಸಬೇಕು. ಅವರು ಪೆರೇಡನ್ನು ವೀಕ್ಷಿಸಿ ದೈಹಿಕ ಕವಾಯತಿಗಳಿಗೋಸ್ಕರ ವಿಸರ್ಜಿಸುತ್ತಾರೆ. ಆ ಕೂಡಲೇ ಪೆರೇಡು ಬೇರೆ ಬೇರೆ ತುಕ್ಕಡಿಗಳಾಗಿ ಒಡೆದು ಬೇರೆ ಬೇರೆ ಶಿಕ್ಷಕರ ಹಾಗೂ ಆಫಿಸರರ ನಾಯಕತ್ವದಲ್ಲಿ ಬೇರೆ ಬೇರೆ ಕಡೆಗೆ ಓಡಿ ಮಾಯವಾಗಿಬಿಡಬೇಕು. ಮುಂದಿನ ೪೦ ಮಿನಿಟುಗಳ ಕಾಲ ಓಟ, ಚುರುಕು ನಡಿಗೆ, ಸಾಮೂಹಿಕ ಅಂಗಸಾಧನೆ ಮುಂತಾದವು. ೭ ಗಂಟೆಗೆ ಶಿಬಿರಕ್ಕೆ ಮರಳುತ್ತಿದ್ದಂತೆಯೇ ಬೆಳಗ್ಗಿನ ಉಪಾಹಾರಕ್ಕೆ ಧಾವಿಸಬೇಕು. ಇದನ್ನು ಮುಗಿಸಿ, ಡೇರೆಗಳಿಗೆ ಸಾಗಿ ಡ್ರಿಲ್ ಉಡುಪನ್ನು (ಪೂರ್ಣ ಸಮವಸ್ತ್ರ) ತೊಟ್ಟು, ಡೇರೆಯನ್ನು ಪರೀಕ್ಷೆಗೋಸ್ಕರ (ಡೇರೆ ಡೇರೆಗೆ ಸ್ಪರ್ಧೆ ಇದೆ; ಕಮಾಂಡೆಂಟರು ಪ್ರತಿಯೊಂದು ಡೇರೆಯನ್ನೂ ಕೂಲಂಕಷವಾಗಿ ಪರೀಕ್ಷಿಸಿ, ಪರಿಶೀಲಿಸಿ ದಿನ ದಿನ ಅದಕ್ಕೆ ಅಂಕವನ್ನು ನೀಡುತ್ತಾರೆ. ಕ್ಯಾಂಪು ಮುಗಿಯುವಾಗ ಈ ಅಂಕಗಳನ್ನು ಕೂಡಿಸಿ ಜುಮ್ಲಾದಲ್ಲಿ ಗರಿಷ್ಠ ಅಂಕ ಪಡೆದ ಡೇರೆಗೆ ಬಹುಮಾನ ನೀಡುವ ಏರ್ಪಾಡು ಉಂಟು. ಪ್ರತಿ ದಿನವೂ ಕನಿಷ್ಠಮಿತಿ ತಲಪಿದ ಡೇರೆಯ ವಾಸಿಗಳಿಗೆ ಶಿಕ್ಷೆಯನ್ನೂ ವಿಧಿಸಲಾಗುತ್ತದೆ) ಸಿದ್ಧಪಡಿಸಿ, ರೈಫಲ್ಲು ಮುಂತಾದ ಶಸ್ತ್ರಗಳನ್ನೂ ಶಿಕ್ಷಣದ ಇತರ ಹತ್ಯಾರುಗಳನ್ನೂ ತೆಗೆದುಕೊಂಡು ಟ್ರೈನಿಂಗಿಗೋಸ್ಕರ ನಿಗದಿಸಿರುವ ಸ್ಥಳಗಳಲ್ಲಿ ಹಾಜರಿರಬೇಕು. ಟ್ರೈನಿಂಗಿನ ಆರಂಭ ೮ ಗಂಟೆಗೆ. ಮುಂದೆ ೪೦ ಮಿನಿಟುಗಳ ಐದು ಪಾಠಗಳು. ಒಂದೊಂದು ಪಾಠದ ನಡುವೆ ಒಂದಿಷ್ಟು ವಿಶ್ರಾಂತಿ. ಈ ವಿಶ್ರಾಂತಿ ವೇಳೆಯಲ್ಲಿ ಒಂದೊಂದು ತುಕ್ಕಡಿಯೂ ಅದರ ಮೊದಲಿನ ಪಾಠದ ಸ್ಥಳವನ್ನು ಬಿಟ್ಟು ಮುಂದಿನ ಪಾಠದ ಸ್ಥಳವನ್ನು ಸೇರಬೇಕು. ಹೀಗೆ ೧ ಗಂಟೆ ತನಕ ಮಿಲಿಟೆರಿಯ ವಿವಿಧ ಪಾಠಗಳು ನಡೆಯುತ್ತವೆ. ಎಲ್ಲವೂ ವಿಶಾಲ ಬಯಲಿನ ಬೇರೆ ಬೇರೆ ಮೂಲೆಗಳಲ್ಲಿ; ಕುಳಿತು ಬೋಧಿಸುವ ಪಾಠಗಳಾದರೆ ಮರಗಳಡಿಯ ನೆರಳಿನಲ್ಲಿ; ಡ್ರಿಲ್, ಮಿಲಿಟೆರಿ ಕವಾಯತಿಗಳಾದರೆ ಯುಕ್ತ ಸ್ಥಳಗಳಲ್ಲಿ. ಈ ನಾಲ್ಕು ಗಂಟೆಗಳ ಶಿಕ್ಷಣ ಸಾಮಾನ್ಯ, ಎಂಥ ಗಂಡುಗೊಡಲಿಯ ಮತ್ತು ಗಂಡುಗಲಿಯ ಸಾಮರ್ಥ್ಯಕ್ಕಾದರೂ ಸವಾಲು. ಮಿಲಿಟೆರಿ ಯೋಧ ಹೇಗಿರಬೇಕು? ಕೆಲಸದ ಕಾಠಿಣ್ಯ ಹೆಚ್ಚಾದಷ್ಟೂ ಅವನ ಪುಟಿತತೆ ಹೆಚ್ಚಾಗಬೇಕು. ಆ ದಾರಿಯಲ್ಲಿ ಸಿದ್ಧಿ ಇಂಥ ಶಿಕ್ಷಣದ ಮೂಲಕ ಮಾತ್ರ ಸಾಧ್ಯ. ಕ್ಯಾಡೆಟುಗಳು ಹೀಗೆ ಶಿಕ್ಷಣ ಪಡೆಯುತ್ತಿರುವಾಗ ಕ್ಯಾಂಪ್ ಕಮಾಂಡೆಂಟರು ಎಲ್ಲ ಡೇರೆಗಳನ್ನೂ ಸಂದರ್ಶಿಸಿ ಅವುಗಳ ತುಲನೆಯನ್ನು ಮಾಡಿ ಅಂಕಗಳನ್ನು ಹಾಕಿರುತ್ತಾರೆ; ತಮ್ಮ ಸೂಚನೆಗಳನ್ನು ಹೇಳಿರುತ್ತಾರೆ. ಇವನ್ನೆಲ್ಲ ಆ ಕ್ಷಣವೇ ಗುರುತು ಮಾಡಿಕೊಳ್ಳಬೇಕಾದವರು ಕ್ಯಾಂಪ್ ಅಡ್ಜುಟೆಂಟರಾಗಿರುವ ಆಫಿಸರರೊಬ್ಬರು. ಲೆಫ್ಟಿನೆಂಟ್ ಕೃಷ್ಣಯ್ಯ ನಮ್ಮ ಕ್ಯಾಂಪಿನ ಅಡ್ಜುಟೆಂಟ್. ಒಂದು ದಿವಸದಲ್ಲಿ ಕಮಾಂಡೆಂಟರು ಇಡೀ ಕ್ಯಾಂಪನ್ನು ಅದೆಷ್ಟು

ಸಲ ಸುತ್ತುವರೋ ಅವರಿಗೇ ತಿಳಿದಿರಲಾರದು. ಎಲ್ಲೆಲ್ಲಿಯೂ ಅವರಿದ್ದೇ ತೀರಬೇಕು. ಅಡ್ಜುಟೆಂಟರು ಅವರ ಆಪ್ತಕಾರ್ಯದರ್ಶಿಯಿದ್ದಂತೆ. ಇತ್ತ ಟ್ರೈನಿಂಗ್ ನಡೆಯುವಲ್ಲಿಗೂ ಕಮಾಂಡೆಂಟರು ಬಂದು ಅದು ಸರಿಯಾಗಿ ನಡೆಯುತ್ತಿದೆಯೇ ಎಂದು ನೋಡಿ ತಮ್ಮ ಸೂಚನೆಗಳನ್ನು ನೀಡುತ್ತಾರೆ. ಅವರು ಕೆಲವು ಪಾಠಗಳನ್ನು ತೆಗೆದುಕೊಳ್ಳುವುದು ಸಹ ಉಂಟು. ಮಿಲಿಟರಿ ಕವಾಯತಿ ದೊರೈರಾಜರ ಬಲು ಮೆಚ್ಚಿನ ಪಾಠ. ಟ್ರೈನಿಂಗಿನ ಹೊಣೆ ಲೆಫ್ಟಿನೆಂಟ್ ಜನಾರ್ದನ ಬಾಳಿಗರದ್ದು—ಇವರಿಗೆ ಟ್ರೈನಿಂಗ್ ಆಫಿಸರ್ ಎಂದು ಬಿರುದು. ದಕ್ಷತೆ, ನಿಷ್ಠೆ, ಪ್ರಾಮಾಣಿಕತೆಗಳಿಗೆ ಪರ್ಯಾಯ ಪದ ನನ್ನ ಈ ಮಿತ್ರರು. ಎಂಆರ್‌ಸಿಯ ಎಲ್ಲ ಶ್ರೇಷ್ಠ ಗುಣಗಳನ್ನೂ ಅವರು ಸ್ವಾಂಗೀಕರಿಸಿಕೊಂಡಿದ್ದುದರ ಜೊತೆಗೆ ಯೋಗಾಭ್ಯಾಸದ ಹಾಗೂ ವಿಜ್ಞಾನದ ಪರಿಷ್ಕೃತ ವಿಧಾನಗಳನ್ನೂ ತಿಳಿದು ಕೊಂಡಿದ್ದರು. ಲಕ್ಷ್ಮಣನಂಥ ಮೌನ ಕರ್ತವ್ಯನಿರ್ವಹಣೆ ಇವರದು. ಊಟ, ನಿದ್ರೆ, ವಿಶ್ರಾಂತಿ ಇವರಿಗೆ ಬೇಡ. ಮಾತು ಕಡಿಮೆ. ಆದರೆ ಧೃತಿ ಬಲು ದೊಡ್ಡವು. ನಮ್ಮ ಕ್ಯಾಂಪನ್ನು ನೋಡಲು ಆಗಮಿಸಿದ ಎಲ್ಲ ಮಿಲಿಟರಿ ಅಧಿಕಾರಿಗಳಿಗೂ ಇಲ್ಲಿಯ ಶಿಕ್ಷಣದ ಉನ್ನತ ಮಟ್ಟವನ್ನು ಕಂಡು ಆಶ್ಚರ್ಯವೂ ಸಂತೋಷವೂ ಆದುವು. ದೇಶದ ಬೇರೆ ಬೇರೆ ಕಡೆಗಳಲ್ಲಿ ಅವರು ಎನ್‌ಸಿಸಿ ಕ್ಯಾಂಪುಗಳನ್ನು ನೋಡಿ ಬಂದವರು. ಆದರೆ ಅವರು ಆತ್ಮೀಯವಾಗಿ ನಮ್ಮೊಡನೆ ಬಿಚ್ಚು ಮನಸ್ಸಿನಿಂದ ನುಡಿಯುತ್ತಿದ್ದರು—ಇಂಥ ಒಂದು ಕ್ಯಾಂಪು ಪೂರ ಅಪೂರ್ವ ಎಂದು. ಅಪರಾಹ್ನ ೧ ಗಂಟೆಯಿಂದ ೨-೩೦ ಗಂಟೆ ತನಕ ಕ್ಯಾಡೆಟುಗಳಿಗೆ ವಿಶ್ರಾಂತಿ—ಆಗ ಅವರು ಊಟ ಮಾಡಿ ಸ್ವಲ್ಪ ಕಾಲ ಡೇರೆ ಒಳಗೆ ವಿಶ್ರಾಂತಿ ಪಡೆಯಬಹುದಿತ್ತು; ಅಥವಾ ವಾಚನಾಲಯಕ್ಕೆ ಹೋಗಿ ದೈನಿಕಗಳನ್ನು ಓದ ಬಹುದಿತ್ತು; ಕ್ಯಾರಮ್, ಚೆಸ್ ಮುಂತಾದ ಒಳಾಂಗಣದ ಆಟಗಳನ್ನು ಆಡಬಹುದಿತ್ತು. ೨-೩೦ ಗಂಟೆಯಿಂದ ೪ ಗಂಟೆ ತನಕ ಇನ್ನೆರಡು ಪಾಠಗಳು. ಇವು ಸಾಧಾರಣವಾಗಿ ಲಘು ವಾಗಿರುತ್ತಿದ್ದುವು. ೪ ಗಂಟೆಗೆ ಸಾಯಂಕಾಲದ ಲಘೂಪಹಾರ. ತರುವಾಯ ಸ್ನಾನಾದಿ ವೈಯಕ್ತಿಕ ಕೆಲಸಗಳಿಗೆ ಬಿಡುವು. ೬ ಗಂಟೆಗೆ ಕೇಂದ್ರೀಯವಾಗಿ ರೋಲ್ ಕಾಲ್. ಕ್ಯಾಂಪ್ ಸಮಸ್ತರ ಲೆಕ್ಕವೂ ಆಗ ದೊರೆಯಲೇಬೇಕು. ಅದೇ ವೇಳೆ ಕ್ಯಾಂಪ್ ಕಮಾಂಡೆಂಟರ ಪಾರ್ಟ್ ೧ ಹುಕುಂಗಳನ್ನು ಸಾರ್ವಜನಿಕವಾಗಿ ಓದಲಾಗುತ್ತದೆ. ಕ್ಯಾಂಪಿಗೆ ಸಂಬಂಧಪಟ್ಟ ಸಕಲ ವಿವರಗಳ ವರದಿ ಇದು ; ಕಮಾಂಡೆಂಟರ ಹುಕುಂಗಳ ಮಾಲೆ ; ಮರುದಿನದ ವಿವಿಧ ಡ್ಯೂಟಿಗಳ ವಿತರಣೆಯ ವಿವರ ಇದರಲ್ಲೇ ಉಲ್ಲೇಖಿತವಾಗಿರುವುದು. ರೋಲ್‌ಕಾಲ್ ಮುಗಿದಮೇಲೆ ೭ ಗಂಟೆ ತನಕ ಕ್ಯಾಡೆಟುಗಳಿಗೆ ವಿಶ್ರಾಂತಿ. ೭ರಿಂದ ೮ ಗಂಟೆಯ ತನಕ ರಾತ್ರಿಯ ಊಟ. ೯-೩೦ ಗಂಟೆಗೆ ಕಡ್ಡಾಯವಾಗಿ ಎಲ್ಲ ಕ್ಯಾಡೆಟುಗಳೂ ಮಲಗಲೇ ಬೇಕು. ಆಡಳಿತೆಯ ಹೊಣೆ ಕ್ಯಾಂಪ್ ಕಮಾಂಡೆಂಟ್, ಡೆಪ್ಯುಟಿ ಕಮಾಂಡೆಂಟ್ (ನಾನು), ಟ್ರೈನಿಂಗ್ ಆಫಿಸರ್ (ಬಾಳಿಗ), ಅಡ್ಜುಟೆಂಟ್ (ಕೃಷ್ಣಯ್ಯ) ಹೀಗೆ ಹರಿದು ಮುಂದೆ ಹಲವಾರು ಆರ್ಮಿ ಸ್ಟಾಫುಗಳ ಮೂಲಕ ಕ್ಯಾಡೆಟು ಮುಂದಾಳುಗಳವರೆಗೂ ಹಂಚಿ ಹೋಗುವುದು. ಆಫಿಸರರ ಮಟ್ಟದಲ್ಲಿ ಸದಾ ಅಭಿಪ್ರಾಯ ವಿನಿಮಯಗಳು ನಡೆಯು ತ್ತಲೇ ಇರಬೇಕು. ಪ್ರೋಗ್ರಾಮೇನೋ ಮೊದಲೇ ಸಿದ್ಧವಾಗಿದ್ದರೂ ದೊಡ್ಡ ಒಂದು ಕ್ಯಾಂಪಿನಲ್ಲಿ ಕ್ಷಣ ಕ್ಷಣ ತಲೆದೋರುವ ಸಮಸ್ಯೆಗಳು ಅಸಂಖ್ಯ. ಅವುಗಳಿಗೆಲ್ಲ ಪರಿಹಾರ

ಗಳನ್ನು ಯಾವ ಕಂಪ್ಯೂಟರ್ ಪ್ರೋಗ್ರಾಮಿನ ನೆರವಿನಿಂದಲೂ ಕಂಡುಕೊಳ್ಳಲು ಸಾಧ್ಯವಿಲ್ಲ. ಒಂದು ದೃಷ್ಟಿಯಿಂದ ಹೇಳುವುದಾದರೆ ಒಬ್ಬೊಬ್ಬ ಕ್ಯಾಡೆಟೂ ಪ್ರತಿ ಕ್ಷಣವೂ ಹತ್ತತ್ತು ಸಮಸ್ಯೆಗಳನ್ನು ರಚಿಸಿ ಎಸೆಯುತ್ತಲೇ ಇರುತ್ತಾನೆ. ಆಯಾ ಕ್ಷಣವೇ ಈ ಸವಾಲುಗಳನ್ನು ಎದುರಿಸಿ ಸಮಯಸ್ಫೂರ್ತಿಯಿಂದ, ಅನುಕಂಪದಿಂದ, ಶಿಸ್ತಿನ ಬಿಗಿಯಿಂದ, ಸಾಮೂಹಿಕ ಹಿತದೃಷ್ಟಿಯಿಂದ ಪರಿಹರಿಸಬೇಕು. ಕ್ಯಾಂಪಿನಲ್ಲಿ ಆಫಿಸರುಗಳು ಸದಾ ಉದ್ರಿಕ್ತ—ಗರಿಷ್ಠ ವಿದ್ಯುದ್ವಿಭವದ ತಂತಿಗಳಂತೆ—ಇರಬೇಕಾಗುತ್ತದೆ.

ನಮ್ಮ ೧೨೦ ಮಂದಿಯ ಕ್ಯಾಂಪು ನಾಲ್ಕು ದಿವಸಗಳು ಮುಗಿದು ಐದನೆಯ ದಿವಸ ತೊಡಗಿದಾಗ ಜೂನಿಯರ್ ಡಿವಿಶನ್ನಿನ ಸುಮಾರು ೮೦೦ ಕ್ಯಾಡೆಟುಗಳು (ಚಿಳ್ಳೆ ಪಿಳ್ಳೆಗಳು) ಅವರ ಆಫಿಸರರ (ಹೈಸ್ಕೂಲ್ ಅಧ್ಯಾಪಕರು) ಸಮೇತ ಹತ್ತು ದಿವಸಗಳ ಕ್ಯಾಂಪಿಗೋಸ್ಕರ ಬಂದು ನಮ್ಮನ್ನು ಸೇರಿದರು. ಅವರಿಗೆ ಬೇಕಾದ ಡೇರೆಗಳನ್ನು ಆ ಮೊದಲೇ ನಮ್ಮ ಧಾಂಡಿಗ ಕಾಲೇಜಿನ ಮಕ್ಕಳು ತಯಾರಿಸಿದ್ದರಷ್ಟೆ. ಮುಂದಿನ ೧೦ ದಿವಸಗಳ ಕಾಲ ನಮ್ಮ ಕ್ಯಾಂಪೊಂದು ಮಹಾನಗರವೇ ಆಯಿತು.

ಕೊಟ್ಟೆಮುಡಿಯಲ್ಲಿ ಕೊಟ್ಟೆ ಮುಡಿ

ಕೊಡಗು ಮಲೆನಾಡು. ಆದ್ದರಿಂದ ಇಲ್ಲಿಯ ಜನ ಫ್ಯಾಶನ್ನು ತಿಳಿಯದವರೆಂದೇನಾದರೂ ನೀವು ಭಾವಿಸಿದ್ದರೆ ಅದು ತಪ್ಪು. ದೈವದತ್ತವಾದ ಬೃಹದ್ಗಾತ್ರ ಸುಂದರ ರೂಪಗಳಿಗೆ ಆಕರ್ಷಕ ಹಾಗೂ ಆಧುನಿಕ ಉಡುಪುಗಳು ಈ ತರುಣರಿಗೆ ಒಂದು ವೈಶಿಷ್ಟ್ಯವನ್ನು ಒದಗಿಸಿವೆ. ಬೆಂಗಳೂರು, ಮದರಾಸು, ಬೊಂಬಾಯಿಯ ಜನಜಂಗುಳಿಯಲ್ಲಿಯೂ ಈತ ಕೊಡಗಿನ ತರುಣ ಎಂದು ಗುರುತು ಹಿಡಿಯುವಂತೆ ಆತನ ಸ್ವರೂಪವೂ ಶಿಷ್ಟ ವರ್ತನೆಯೂ ಇರುತ್ತವೆ. ಇದನ್ನು ಅರಿತಿರುವ ಅವನಿಗೆ, ಇತರರು ಇದನ್ನು ಗುರುತಿಸಿದ್ದಾರೆ ಎಂದು ತಿಳಿದಿರುವ ಈ ತರುಣನಿಗೆ, ತನ್ನ ಹಿರಿಮೆಯನ್ನು ಕುರಿತು ಅಪಾರ ಅಭಿಮಾನ. ಈ ಹಿರಿಮೆಯ ಒಂದು ಪ್ರತೀಕ ಆತನ ತಲೆಯನ್ನು ಅಲಂಕರಿಸಿರುವ ಕೇಶರಾಶಿಯ ವಿವಿಧ ವಿನ್ಯಾಸಗಳು. ೬–೮ ಇಂಚುಗಳಿಗಿಂತ ಕಡಿಮೆ ಉದ್ದ ಇಲ್ಲದಿರುವ ತಲೆಕೂದಲನ್ನು ಬಗೆಬಗೆಯಾಗಿ ಶೃಂಗರಿಸಿಕೊಳ್ಳುವುದರಲ್ಲಿ ಕೊಡಗಿನ ಹುಡುಗರು ಯಾವ ಹುಡುಗಿಗೂ ಹಿಂದೆ ಅಲ್ಲ. ಮಿಲಿಟೆರಿ ಸಮವಸ್ತ್ರದಲ್ಲಿ ತಲೆಮೇಲಿನ ಈ ಹುಲ್ಲುಮುಂಡ ದೊಡ್ಡ ತಾಪತ್ರಯ. ಚಪಾತಿ ಟೊಪ್ಪಿಯನ್ನು ಅದೆಷ್ಟು ಹಿಗ್ಗಿಸಿ ಜಗ್ಗಿಸಿ ಬಿಗಿಯಾಗಿ ಲಗತ್ತಿಸಿದರೂ ಸೆರೆಯಿಂದ ಹಣುಕಿ ಇಣುಕಿ ತಿಣುಕುತ್ತಿದ್ದ ಈ ನಾಗರಹಾವಿನ ಮರಿಗಳು ಸಮವಸ್ತ್ರದ ಗಾಂಭೀರ್ಯವನ್ನು ಲಘುಗೊಳಿಸುತ್ತಿದ್ದುವು. ಇದನ್ನು ಮೊದಲನೆಯ ದಿವಸವೇ ಕಂಡ ದೊರೈರಾಜರು ಪಾರ್ಟ್ ೧ ಹುಕುಂಗಳಲ್ಲಿ ಒಂದು ಆಜ್ಞೆಯನ್ನು ವಿಧಿಸಿದರು—ಯಾವ ಕ್ಯಾಡೆಟಿನ ತಲೆಕೂದಲಿನ ಉದ್ದವೂ ೧ ಇಂಚನ್ನು ಮೀರತಕ್ಕದ್ದಲ್ಲ ; ಮಿಲಿಟೆರಿಕಟ್ ಕ್ರಾಪನ್ನು ಪ್ರತಿ ಕ್ಯಾಡೆಟನೂ ಈ ಕೂಡಲೇ ಮಾಡಿಸಿಕೊಳ್ಳತಕ್ಕದ್ದು ; ಮರುದಿವಸದ ಪೆರೇಡಿನಲ್ಲಿ ತಲೆಕೂದಲಿನ ಇನ್‌ಸ್ಪೆಕ್ಷನ್ನನ್ನು ವಿಶೇಷ ನಿಗಾ ಇಟ್ಟು ಮಾಡಡಾಗುತ್ತದೆ ; ಹುಕುಮನ್ನು ಜಾರಿಗೆ ತರದ ಕ್ಯಾಡೆಟನಿಗೂ ಆತನ ಮುಂದಾಳು ಕ್ಯಾಡೆಟನಿಗೂ ಆ ಕ್ಷಣವೇ ಬಹಿರಂಗವಾಗಿ ತಲೆಬೋಳಿಸಲಾಗುತ್ತದೆ. ಕ್ಯಾಂಪಿನಲ್ಲಿ ಕ್ಷೌರಿಕಸೇವೆ ಉಚಿತ.

ಇತೋಬಾ ಭಂಡಾರಿ ನಾಪಿತರ ಮುಖಂಡ. ನಾಲ್ಕೈದು ಜನ "ತಲೆ ಹೊಡೆಕ"ರು ಅವನ ವಿಧೇಯ ಅನುನಾಯಿಗಳು. ಭಂಡಾರಿಯು ಕರ್ತವ್ಯ ನಿಷ್ಠೆ ಹರಿಶ್ಚಂದ್ರನ ಮಟ್ಟದ್ದು. ಕಮಾಂಡೆಂಟರ ಹುಕುಮಿನ ವಿವರ ನಾನು ಅವನಿಗೆ ತಿಳಿಸಿದೆ. ಕ್ಯಾಡೆಟುಗಳ ಮೊದಲ ನಾಲ್ಕೈದು ತಂಡಗಳ ಕ್ಷೌರವನ್ನು ನಾನೇ ನಿಂತು ಯುಕ್ತ ನಿರ್ದೇಶನ ನೀಡಿ ಮಾಡಿಸಿದೆ, (ನಾನೇ ಮಾಡಲಿಲ್ಲ—ಆ ಕಲೆ ತಿಳಿಯದು!) ಇಂಗು ತಿಂದ ಸಿಂಗಳೀಕದ ಮುಸುಡಿನಿಂದ ಧಿಡೀರ್ ಕ್ಷೌರ ಮಾಡಿಸಿಕೊಂಡ ಹುಡುಗರು ವಧಾ ಪೀಠದಿಂದ ನಿರ್ಗಮಿಸಿದರು. ಮಿಲಿಟೆರಿಕಟ್ ಎಂದರೆ ಮಿಶನ್ ಹಿಡಿದು ನಾಲ್ಕೈದು ಘಾತಗಳಲ್ಲಿ ನೆತ್ತಿಯಿಂದ ಎರಡಿಂಚಿನ ವರೆಗೆ ಮುಂಭಾಗ ಬಿಟ್ಟು ಉಳಿದೆಡೆಗಳಲ್ಲಿ ಹತ್ತರಿ ಹೊಡೆಯುವುದು; ಮತ್ತೆ ಕತ್ತರಿ ಪ್ರಯೋಗದಿಂದ ಉದ್ದ ಕೂದಲುಗಳನ್ನು ಗಿಡ್ಡಗೊಳಿಸುವುದು; ಕೊನೆಯದಾಗಿ ಕೊಂಬಿನ ಹಿಂದೆ ರೇಜರನ್ನು ಅಳವಡಿಸಿ ಒತ್ತಿ ತಲೆ ಬಾಚುವುದು; ಈ ಕ್ರಿಯೆಯಿಂದ ಕೂದಲಿನ ಸಾಂದ್ರತೆ ಕಡಿಮೆ ಆಗುವುದು. ಈಗ ತೊಪ್ಪಿ ಹಾಕಿ ನೋಡಿ—ಅದರಂಚಿನಿಂದ ಹೊರಗೆ ಖಾಲಿ ಚರ್ಮ ಮಾತ್ರ, ಕೂದಲಿನ ಒಂದು ಗುತ್ತಿಯೂ ಇಲ್ಲ! ನಾನು ನಾಪಿತಕೇಂದ್ರದಿಂದ ನಿರ್ಗಮಿಸಿದ ತರುವಾಯ ಭಂಡಾರಿಯ ಕತ್ತರಿ ಸ್ವಲ್ಪ ಬೊಡ್ಡಾಗಿರಬೇಕು. ಎಷ್ಟಾದರೂ ಹುಡುಗರು, ದಾಕ್ಷಿಣ್ಯ. ಮುಂದೆ ಅವರನ್ನು ಮಡಿಕೇರಿಯಲ್ಲಿ ನೋಡಿ ಬಚಾವಾಗಬೇಕಲ್ಲ. ಇದರ ಪರಿಣಾಮವಾಗಿ ಮರುದಿವಸದ ಪೆರೇಡಿನಲ್ಲಿ ಇನ್‌ಸ್ಪೆಕ್ಷನ್ ಮಾಡುವಾಗ ಬಹುಸಂಖ್ಯಾತ ಹುಡುಗರು ಸಿಕ್ಕಿಹಾಕಿಕೊಂಡರು. ಆದ್ದರಿಂದ ಆ ಸಾಯಂಕಾಲ ನಾನು ಕ್ಷೌರದ ಆಫಿಸರನಾದೆ—ಮೂರು ಗಂಟೆಗಳ ಕಾಲ ಕೇಶಮುಂಡನ ಮಹಾಯಜ್ಞದ ಅಧ್ಯಕ್ಷತೆ ವಹಿಸಿ ಕ್ಯಾಂಪಿನ ದಕ್ಷತೆಯನ್ನು ಕಾದಿರಿಸಿದೆ.

ವೈಯಕ್ತಿಕವಾಗಿ ನಾನು ಇದೇ ಉಗ್ರಶಿಸ್ತಿನಲ್ಲಿ (ಎಂಆರ್‌ಸಿ ದಿವಸಗಳಿಂದ ವಿಶೇಷವಾಗಿ) ಬೆಳೆದು ಬಂದವನು. ವಾರವಾರವೂ ಮಿಲಿಟೆರಿ ಕಟ್ ಕ್ಷೌರವನ್ನು ನಾನು ಮಡಿಕೇರಿಯಲ್ಲಿ ಇದೇ ಇತೋಬಾ ಭಂಡಾರಿಯಿಂದ ಮಾಡಿಸಿಕೊಳ್ಳುತ್ತಿದ್ದೆ. ಆದರೂ ನನ್ನ ಕೂದಲನ್ನು ಅಡಿಕೋಲಿಟ್ಟು ಅಳತೆ ಮಾಡಿ ನೋಡಿದಾಗ ೧.೩೫" ಉದ್ದ ಇದ್ದುದು ತಿಳಿಯಿತು. "ನೀನು ಪಾಲಿಸದ ವಿಧಿಯನ್ನು ಕ್ಯಾಡೆಟುಗಳಿಗೆ ವಿಧಿಸಲಾಗದು" ಎಂದು ಅಂತರ್ವಾಣಿ ಮೊಳಗಿತು. ಆಗ ರಾತ್ರಿ ೭ ಗಂಟೆ. ಹುಡುಗರ ಊಟದ ವೇಳೆ. ಅದಾದ ಬಳಿಕ ನಮ್ಮ ಊಟ. ಮತ್ತೆ ಕ್ಯಾಂಪಿನ ಇತರ ಉಸ್ತುವಾರಿಗಳು. ಇವೆಲ್ಲ ಮುಗಿಯುವಾಗ ರಾತ್ರಿ ೯ ಗಂಟೆ ದಾಟಿತು. ಪರಮ ವಿಧೇಯ ಹನುಮಂತಸದೃಶ ಬಾಲಕೃಷ್ಣನ್ನಿಗೆ ಹೇಳಿದೆ "ಭಂಡಾರಿ ಬುಲಾವ್." ನಾನು ಟೆಂಟಿನೊಳಗೆ ಲಾಂದ್ರದ ಬೆಳಕಿನಲ್ಲಿ ಮರು ದಿನದ ಪ್ರೋಗ್ರಾಮನ್ನು ತಿರುವುತ್ತಿದ್ದೆ. "ಸಾರ್!" ಭಂಡಾರಿಯ ಕತ್ತರಿಯ ಕರೆ!

ಟೆಂಟಿನ ಹೊರಗೆ ಬಯಲಿನಲ್ಲಿ ಕುರ್ಚಿ ಎಳೆದುಕೊಂಡು ಬಂದು ಕುಳಿತೆ. ಎದುರಿಗೆ ಬಿಳಿ ಡೇರೆಗಳು ಮಲಗಿವೆ. ಕ್ಯಾಂಪ್ ಇಡೀ ನಿಶ್ಚಲ, ನೀರವ. ಎದುರಿನಲ್ಲಿ ಎತ್ತರಕ್ಕೆ ಬಂದಿದ್ದಾನೆ ಹುಣ್ಣಿಮೆಯ ಚಂದ್ರ. ಕಾವೇರಿ ತೀರದ ಕೊಡಗಿನ ಡಿಸೆಂಬರ್ ಚಳಿ ಕೊರೆತ ಕಠಾರಿ ಇರಿದಂತಿತ್ತು. ಆದರೆ ನಾನು ಗಟ್ಟಿ—ಬನಿಯನ್ನನ್ನು ಕಳಚಿ ಬರಿಮೈಯಲ್ಲಿ ಕುಳಿತೆ. ತಲೆಯೊಡ್ಡಿದೆ. "ಈಗ ಬೇಡ ಸ್ಸಾರ್! ಈ ತಿಂಗಳಬೆಳಕಿನಲ್ಲಿ ನನಗೆ ಚೆನ್ನಾಗಿ ಕಣ್ಣು ಕಾಣಿಸುವುದಿಲ್ಲ ಸ್ಸಾರ್!" ಭಂಡಾರಿ ಅಂಗಲಾಚಿದ.

"ನನಗೇನೂ ಅಶೋಕಕುಮಾರ್ ಟಚ್ ಬೇಡ ಭಂಡಾರಿ. ಹೊಡಿ ಮಿಶನ್" ನಾನು ಅಪ್ಪಣೆ ಮಾಡಿದೆ.

"ಇಲ್ಲ ಸ್ಸಾರ್—ಕಟ್ ಹೆಚ್ಚು ಕಡಿಮೆ ಆಗಿಹೋದೀತು."

"ವಾದ ಬೇಡ. ಹುಕುಂ ಪಾಲಿಸು, ಚಲೋ." ಚಂದ್ರ ನಕ್ಕ. ಭಂಡಾರಿಯ ಕೈ ನಡುಗಿತು. ನನ್ನ ಶಿಸ್ತಿಗೆ ನಾನೇ ಭಲಾ ಅಂದುಕೊಂಡೆ. ತಲೆಯ ಹಿಂದಿನಿಂದ ಹೊಡೆದ ಮಿಶನ್ ಹದ ತಪ್ಪಿ ನೆತ್ತಿಯನ್ನು ಉತ್ತರಿಸಿ ಮುಂಭಾಗದವರೆಗೂ ಚರುಂಡಿ ಕೊರೆದೇ ಬಿಟ್ಟಿತು.

"ಸ್ಸಾರ್ ಸ್ಸಾರ್! ಪ್ರಮಾದವಾಯಿತು. ನಾನು ಬೇಡ ಎಂದು ಬೇಡಿಕೊಂಡೆ ಸ್ಸಾರ್!" ಭಂಡಾರಿ ನಡುಗಿದ.

ನಾನೆಂದೆ "ಚಿಂತೆ ಬೇಡ ಭಂಡಾರಿ. ಉಳಿದ ಕೂದಲನ್ನು ಕತ್ತರಿಸಿ ಹಾಕಿ ಇದೇ ಮಟ್ಟಕ್ಕೆ ತಂದು ಬಿಡು. ತೊಲಗಿ ಹೋಗಲಿ ಈ ತಾಪತ್ರಯ! ಹೊಡಿಹತ್ತರಿ."

"ಏನು ಏನೆಂದಿರಿ ಸ್ಸಾರ್?"

"ಬೋಳಿಸಿ ಬಿಡಯ್ಯ. ತಡಮಾಡಬೇಡ."

ಅವನಿಗೆ ಧೈರ್ಯ ಬಂತು. ಲಗುಬಗೆಯಿಂದ ಬೆರಳುಗಳು ಉರುಳಿದುವು. ಮಿಶನ್ ಉತ್ತಲ್ಲಿ ಕತ್ತರಿಗೆ ಕೆಲಸ ಇರಲಿಲ್ಲ. ಆದರೆ ಸಮವಟ್ಟ ತರಲು ಬಾಳಿಗೆ ಕೆಲಸವಿತ್ತು.

"ಸಮ ಕೆರೆದು ಬಿಡು" ನಾನೇ ಸೂಚಿಸಿದೆ. ನೀರು ಚಿಮುಕಿಸಿದ. ನೊರೆ ಮಾಡಿದ. ಬಾಳು ಹಿಡಿದ. ತಲೆ ಕೆರೆದ. ಮುಡಿಯನ್ನು ಕೊಟ್ಟಾಯಿತು ಕೊಟ್ಟಮುಡಿಯಲ್ಲಿ!

ಭಂಡಾರಿ ಹೋದ. ಹಿಮಗಡ್ಡೆಯ ತೂತಿನೊಳಗೆ ತಲೆ ಅದ್ದಿದಂಥ ಚಳಿ, ಕೋಟ, ಉರಿ. ಬಟ್ಟೆ ಸುತ್ತಿಕೊಂಡೆ. ಅಡುಗೆಮನೆಗೆ ಮುಂಡಾಸು ಸಮೇತ ಧಾವಿಸಿ, ಅಲ್ಲಿ ಬಿಸಿ ನೀರು ಹೊಯ್ದುಕೊಂಡು ಸ್ನಾನ ಮುಗಿಸಿದೆ. ಮುಂಡಾಸು ಸಮೇತ ನಿದ್ರಿಸಿದೆ. ಆದರೆ ಮರುದಿವಸದ ಪಿಟಿ ಪೆರೇಡಿಗೆ ನಾನು ಹೋಗುವುದು ಹೇಗೆ? ಸಾವಿರ ಹುಡುಗರ ಮುಂದೆ ಪ್ರಪ್ರಥಮವಾಗಿ ನನ್ನ ಬೋಳು ಮಂಡೆಯ ಬಯಲಾಟ ಪ್ರದರ್ಶಿಸಿದಾಗ ಮಿಲಿಟರಿ ಶಿಸ್ತು ಗಾಂಭೀರ್ಯ ನಿರ್ನಾಮವಾಗಿ ನಗು ಕೋಲಾಹಲಗಳು ಕಟ್ಟೆಯೊಡೆದು ಹರಿಯುವೇ! ಕ್ಯಾಂಪ್ ಕಮಾಂಡೆಂಟರಿಗೆ ಶಿಸ್ತಿನ ಈ ಪರಮೋತ್ಕೃಷ್ಟ ಮುಡಿ ಸೇವೆಯನ್ನು ವರದಿ ಮಾಡಿ ಅವರ ಅನುಮತಿ ಮೇರೆಗೆ ಸಂಪೂರ್ಣ ಸಮವಸ್ತ್ರದಲ್ಲಿ ಹಾಜರಾಗುವುದೊಂದೇ ಉಳಿದಿರುವ ದಾರಿ ಎಂದು ನಿರ್ಧರಿಸಿದೆ.

ಕ್ಯಾಂಪ್ ಮುಗಿದು ಮಡಿಕೇರಿಗೆ ಮರಳಿದ ಮೇಲೆ ಯಾರೋ ಅಂದರು—ಏನಂತೆ? —ಭಂಡಾರಿಗೆ ಭಂಡರು ಕೊಟ್ಟಿದ್ದರಂತೆ ಲಂಚ!

ಕ್ಯಾಂಪಿನಲ್ಲಿ ಕಲಿತ ಪಾಠ

ಕ್ಯಾಂಪಿನಲ್ಲಿ ಹದಿನಾಲ್ಕು ದಿವಸಗಳನ್ನು ಮುಗಿಸಿ ತಲೆಗೆ ಟೊಪ್ಪಿ ಹಾಕಿಕೊಂಡು ಮನೆಗೆ ಮರಳಿದಾಗ ನಾನು ಸ್ವತಃ ನೋಡಿ, ಅನುಭವಿಸಿ ಕಲಿತ ಮಾನವಮೌಲ್ಯಗಳು ಹಲವಾರು. ಅಡುಗೇ ಮನೆಯಲ್ಲಿ ಕಲಿತದ್ದನ್ನು ಮೊದಲು ಉಲ್ಲೇಖಿಸಬೇಕು. ಕಾರಣ, ಹೊಟ್ಟೆಯ

ಹಸುಗೆ ಗಟ್ಟಿಯಾದರೆ ಮಾತ್ರವಲ್ಲವೇ ಮಿದುಳಿನ ಮತ್ತು ಹೃದಯದ ಚಿಂತೆ ಚಿಂತನೆಗಳು? ಉಲ್ಲಾಸದ ಉದ್ದೀಪನಗಳು?

ಒಂದನೆಯ ಪಾಠ. ಕುರಿಮಾನವರು ಹುಲುಮಾನವರನ್ನು ತಿನ್ನಬಲ್ಲರು. ಇದರ ವಿಲೋಮ ಪ್ರಮೇಯ (ಎಂದರೆ ಹುಲುಮಾನವರು ಕುರಿಮಾನವರನ್ನು ತಿನ್ನಬಲ್ಲರು ಎಂಬುದು) ಸಾಧುವಲ್ಲ. ಲೋಕದ ಜನರನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು —ಮಾಂಸಾಹಾರಿಗಳು, ಇವರೇ ಕುರಿಮಾನವರು (ಕುರಿ ತಿನ್ನಕರು); ಸಸ್ಯಾಹಾರಿಗಳು— ಇವರೇ ಹುಲುಮಾನವರು (ಹುಲ್ಲು ತಿನ್ನಕರು). ಮಾಂಸದ ಪದಾರ್ಥಗಳನ್ನೂ ಸಸ್ಯದ ಪದಾರ್ಥಗಳನ್ನೂ ವಿಶಾಲವಾದ ಮೇಜಿನ ಮೇಲೆ ಬೇರ್ಪಡಿಸಿದ ಭಾಗಗಳಲ್ಲಿಟ್ಟು ಬೇಕಾದದ್ದನ್ನು ಆರಿಸಿಕೊಂಡು ಊಟ ಮಾಡಿ ಎಂದು ಒಂದಷ್ಟು ಜನರನ್ನು ಬಿಟ್ಟರೆ ಕುರಿಮಾನವರು ಸರ್ವಭಕ್ಷಕರಾಗುತ್ತಾರೆ—ಎಂದರೆ ಮಾಂಸ ಪದಾರ್ಥಗಳನ್ನು ತಿನ್ನು ವುದರ ಜೊತೆಗೆ ಸಸ್ಯಪದಾರ್ಥಗಳನ್ನೂ (ಆದ್ದರಿಂದ ಹುಲುಮಾನವರನ್ನು) ತಿನ್ನು ತ್ತಾರೆ. ಆದರೆ ಹುಲುಮಾನವರು ಕುರಿಮಾನವರನ್ನು ತಿನ್ನುವುದಿಲ್ಲ. ಕ್ಯಾಂಪಿನಲ್ಲಿದ್ದವರು ಸುಮಾರು ೬೦೦ ಮಂದಿ. ಇವರಲ್ಲಿ ಸುಮಾರು ೭೦೦ ಮಂದಿ ಕುರಿಮಾನವರು, ಮಿಕ್ಕವರು ಹುಲುಮಾನವರು. ಪ್ರತಿ ಎರಡನೆ ದಿವಸದ ಮಧ್ಯಾಹ್ನದ ಊಟಕ್ಕೆ ಮಾಂಸ ಪದಾರ್ಥವನ್ನು ತಯಾರಿಸಿ ಬಡಿಸುವ ಏರ್ಪಾಡಿತ್ತು. ಆಗ ಸಸ್ಯಾಹಾರಿಗಳಿಗೆ ಸಿಹಿಭಕ್ಷ್ಯ ಇಲ್ಲವೇ ಪಾಯಸ ಬಡಿಸುತ್ತಿದ್ದೆವು. ಬಡಿಸುವ ನಾಲ್ಕು ಸ್ಥಾನಗಳು ಮಾಂಸಾಹಾರಿಗಳಿಗೂ ಒಂದು ಸ್ಥಾನ ಶಾಕಾಹಾರಿಗಳಿಗೂ ನಿಗದಿ ಮಾಡಿ ಹುಡುಗರನ್ನು ಇದೇ ಪ್ರಕಾರ ಸಾಲಾಗಿ ಕ್ಯೂನಲ್ಲಿ ನಿಲ್ಲಿಸುತ್ತಿದ್ದೆವು. ನಮ್ಮ ಉದ್ದೇಶ ಸ್ಪಷ್ಟ—ಪ್ರತಿಯೊಬ್ಬನೂ ಅವನ ಪಾಲನ್ನು ಆಯಾ ಬಡಿಸುವ ಬಿಂದುವಿನಿಂದ ಬೇಕಾದಷ್ಟು ಪಡೆದು ಮುಂದೆ ಸಾಗಿ ಆರಾಮವಾಗಿ ಕುಳಿತು ಉಂಡು ಕೈತೊಳೆದು ಟೆಂಟಿಗೆ ಮರಳಬೇಕು. ಇನ್ನಷ್ಟು ಬೇಕೆಂದೆನ್ನಿಸಿದರೆ ತನ್ನ ಬಡಿಸುವ ಬಿಂದುವಿಗೆ ಪುನಃ ಹೋಗಬಹುದಿತ್ತು. ಈ ವಿಚಾರದಲ್ಲಿ ಕುರಿ ಮಾನವರು ಹುಲಿಯಷ್ಟೇ ಚುರುಕು. ತಮ್ಮ ಸಾಲಿನಲ್ಲಿ ಬೇಕಾದಷ್ಟು ಪಡೆದು ತಿಂದು ತಟ್ಟೆ ಗ್ಲಾಸನ್ನು ಪರಿಷ್ಕಾರವಾಗಿ ತೊಳೆದು ಹಸಿದ ಹೊಸ ಮೋರೆಯಿಂದ ಹುಲುಮಾನವರ ಸಾಲಿಗೆ ಬರುತ್ತಿದ್ದವರು ಶೇಕಡಾ ೨೦ ಮಂದಿ ಕುರಿಮಾನವರು! ಮೊದಲಿನ ದಿವಸ ೩೦೦ ಬಾದುಶಾಗಳನ್ನು ಮಾಡಿಸಿದ್ದು ಸಾಕಾಗದೇ ಮತ್ತೆ ಇನ್ನೂರನ್ನು ಧಿಡೀರಾಗಿ ತಯಾರಿಸಬೇಕಾದ ಸಂದಿಗ್ಧ ಪರಿಸ್ಥಿತಿ ಒದಗಿತು. ಹುಲುಮಾನವರಲ್ಲೂ ಈ ಆಟ ಹೂಡಿದವರು ಇದ್ದಿರಬಹುದು. ಆದರೆ ಅವರ ಶೇಕಡಾ ಕಡಿಮೆ. ಹುಡುಗರನ್ನು ಗುರುತು ಹಿಡಿಯಲು, ಪುನರಾವರ್ತನೆ ತಪ್ಪಿಸಲು ಟಿಕೇಟುಗಳನ್ನು ಮುಂಚಿತವಾಗಿಯೇ ಹಂಚಿ ಬಿಡೋಣವೆಂದು ಯೋಚಿಸಿದೆವು. ಆದರೆ ಹುಡುಗರೆಲ್ಲರೂ ಅಪ್ರಾಮಾಣಿಕರು ಎಂಬ ನಕಾರಾತ್ಮಕ ನಿಲವು ಸಲ್ಲದು: ಶೇಕಡಾ ೨೦ ಅಪ್ರಾಮಾಣಿಕರಾದರೆ ಅವರಿಗೆ ಸಾಮೂಹಿಕ ವಾಗಿ ಬೋಧಿಸಿ ಸರಿದಾರಿಗೆ ತರೋಣ ಎಂದು ನಿಶ್ಚೈಸಿದೆವು. ಆದರೆ ನಮ್ಮ ಬೋಧನೆ ಗಳು ಅನ್ನಬ್ರಹ್ಮದ ದೇಗುಲದಲ್ಲಿ ಪ್ರಾಯೋಗಿಕವೆನ್ನಿಸಲಿಲ್ಲ.

ಎರಡನೆಯ ಪಾಠ. ಕೆಲಸವೂ ಮಾತೂ ಪರಸ್ಪರ ಪ್ರತಿಲೋಮಾನುಪಾತದಲ್ಲಿವೆ. ಜೀವನ

ದಲ್ಲಿ ಅನುದಿನ ನೋಡುವ ಅನುಭವಿಸುವ ಈ ಪಾಠದ ಸಂಕ್ಷೇಪ ಚಿತ್ರ ಕ್ಯಾಂಪಿನಲ್ಲಿಯೂ ಎದುರಾಯಿತು.

ಬಲು ಸುಟಿಯಾದ ಸೀನಿಯರ್ ಕ್ಯಾಡೆಟ್ ಬಂದ. ಬೂಟುಗಳನ್ನು ಕ್ಲಿಕ್ಕಿಸಿ ಸೆಟೆದು ನಿಂತು ಸೀಳು ಮಿಂಚು ಚಿಮ್ಮಿದಂತೆ ವಂದನೆ ಅರ್ಪಿಸಿ ಹೇಳಿದ "ಸಾರ್! ನನ್ನದೊಂದು ಸೂಚನೆ ಉಂಟು."

"ಹೇಳು" ನಾನೆಂದೆ.

"೯ರಿಂದ ೧ ಗಂಟೆ ತನಕ ಕ್ಯಾಡೆಟುಗಳಿಗೆ ಏಕ್‌ದಮ್ ಪೆರೇಡ್ ಮಾಡುವಾಗ ಮಧ್ಯೆ ಒಂದು ಸಲ ಟೀಯನ್ನು ಸರಬರಾಜು ಮಾಡಿದರೆ ಒಳ್ಳೆಯದು ಸಾರ್."

"ಬಲು ಒಳ್ಳೆ ಸೂಚನೆ."

"ಆದ್ದರಿಂದ ಅವರಿಗೆ ಕೆಲಸ ಮಾಡಲು ಅಧಿಕ ಉತ್ಸಾಹ ಬರುವುದು, ಸಾರ್. ನಾನು ಕಳೆದ ವರ್ಷ ಮೈಸೂರಿನ ಸಾಮೂಹಿಕ ಕ್ಯಾಂಪ್ ಒಂದಕ್ಕೆ ಹೋಗಿದ್ದಾಗ ಈ ಏರ್ಪಾಡಿತ್ತು, ಸಾರ್."

"ನಿನ್ನ ಈ ಸಮಯೋಚಿತ ಸಲಹೆಯನ್ನು ನಾನು ಮೆಚ್ಚುತ್ತೇನೆ."

"ಟೀ ಜೊತೆಗೆ ಎರಡೆರಡು ಬಿಸ್ಕತ್ತುಗಳನ್ನೂ ಕೊಡಿಸಿದರೆ ಅದು ಇನ್ನಷ್ಟು ಚೈತನ್ಯ ದಾಯಕ, ಸಾರ್. ನಾಳೆಯಿಂದ ಮಾಡಿಸುತ್ತೀರಾ?"

"ಮಿತ್ರ! ಇಲ್ಲೇ ನೀನು ತಪ್ಪಿದ್ದು. ನಾನು ಮಾಡಿಸುವುದಿಲ್ಲ. ನೀನು ಮಾಡು." ಆ ಕ್ಷಣವೇ ಪ್ರಧಾನ ಬಾಣಸಿಗನನ್ನು ಕರೆಸಿದೆ "ಭಟ್ಟರೇ ನಾಳೆ ೧೦ ಗಂಟೆಗೆ ೧೦೦೦ ಹುಡುಗರಿಗೆ ಟೀ ಮತ್ತು ತಲಾ ಎರಡರಂತೆ ಬಿಸ್ಕತ್ತುಗಳನ್ನು ತಯಾರು ಮಾಡಿಡಿ. ಈ ಸೀನಿಯರ್ ಕ್ಯಾಡೆಟ್ ಅವನ್ನು ಅಡುಗೆ ಮನೆಯಿಂದ ತೆಗೆಸಿಕೊಂಡು ಹೋಗಿ ಕ್ಯಾಡೆಟು ಗಳಿಗೆ ಸರಬರಾಜು ಮಾಡುತ್ತಾನೆ" ಎಂದು ಆಜ್ಞೆ ವಿಧಿಸಿ ಆ ಕ್ಯಾಡೆಟ್ ಕಡೆ ತಿರುಗಿ "ಸರಿಯೇನಪ್ಪ?" ಎಂದು ಕೇಳಿದೆ. ಮುಂದಿನ ವಿವರ ಬರೆಯುವುದು ಅನಾವಶ್ಯಕ. ನನ್ನ ಹಿಡಿತದಿಂದ ತಪ್ಪಿಸಿಕೊಳ್ಳುವುದರಲ್ಲಿ ಅವನು ಪ್ರದರ್ಶಿಸಿದ ಚಾಕಚಕ್ಯ ಅಸಾಧಾರಣ ಮಟ್ಟದ್ದು. ಅವನ ಎದುರೇ ಬೇರೆ ಒಬ್ಬ ಸೀನಿಯರ್ ಕ್ಯಾಡೆಟನ್ನು ಕರೆಸಿದೆ. ಇದೇ ಆಜ್ಞೆಯನ್ನು ಅವನಿಗೆ ವಿಧಿಸಿದೆ. ಮಾತಿಲ್ಲ, ಪ್ರಶ್ನೆಯಿಲ್ಲ. ಮಿಲಿಟರಿ ಸೆಲ್ಯೂಟ್ ಕೊಟ್ಟ —ಒಪ್ಪಿದೆ ಎಂಬುದರ ಸೂಚನೆ ಇದು—ಮರಳಿದ. ಪ್ರತಿ ದಿವಸದ ಈ ಕೆಲಸವನ್ನು ಪರಿಷ್ಕಾರವಾಗಿ ನಿರ್ವಹಿಸಿದ.

ಮೂರನೆಯ ಪಾಠ. ಮಿಣಿಮಿಣಿ ಬೂಟು, ಗರಿಗರಿ ಪ್ಯಾಂಟು, ನುಣ್ಣಗೆ ಮುಸುಡು ಸಚ್ಚೀಲದ ಪ್ರತೀಕಗಳೇ ಆಗಿರಬೇಕಾಗಿಲ್ಲ. ಮಿಲಿಟರಿ ಶಿಕ್ಷಣದ ಬಲು ಮುಖ್ಯ ಘಟಕ **turn out** ಕಡೆಗೆ ವಿಶೇಷ ಗಮನ ನೀಡುವುದಾಗಿದೆ—ವ್ಯಕ್ತಿಯ ಆಕರ್ಷಕ ಬಾಹ್ಯ ಪ್ರದರ್ಶನದ ಒಟ್ಟು ಹೆಸರು ಟರ್ನ್ ಔಟ್. ಬೂಟುಗಳು ಕನ್ನಡಿಯಂತೆ ಹೊಳೆಯು ತ್ತಿರಬೇಕು; ಪ್ಯಾಂಟಿನ ಇಸ್ತ್ರಿ ಬ್ಲೇಡಿನಷ್ಟು ತೀಕ್ಷ್ಣವಾಗಿರಬೇಕು; ಬೆಲ್ಟಿನ ಬ್ಲಾಂಕೊ (ಬೆಲ್ಟಿಗೆ ಹಚ್ಚುವ ಹಸುರು ಲೇಪ) ಹೊಸತಾಗಿ ಸ್ವಚ್ಛವಾಗಿರಬೇಕು; ಬೆಲ್ಟಿನ ಲೋಹ ಭಾಗಗಳು (ಬಕ್ಕಲ್ಲುಗಳು) ಬ್ರಾಸ್ಸೋ ಲೇಪನದಿಂದ ಚಿನ್ನದ ಹೊಂಗಾಂತಿ ತಳೆದು ಮಿರುಗುತ್ತಿರಬೇಕು; ಷರ್ಟಿನ ಇಸ್ತ್ರಿ ಪ್ಯಾಂಟಿನಷ್ಟೇ ಉತ್ಕೃಷ್ಟ ಮಟ್ಟದ್ದಾಗಿರಬೇಕು;

ಮುಖದ ಕ್ಷೌರ ಪರಿಪೂರ್ಣ ನುಣುಪಾಗಿರಬೇಕು (ದಿವಸಕ್ಕೆ ಎರಡು ಸಲ ಗಡ್ಡ ಕೆರೆದರೂ ಸಾಲದು) ; ಒಟ್ಟು ವ್ಯಕ್ತಿತ್ವ ಆತ್ಮಾಕರ್ಷಣೀಯವಾಗಿರುವಂತೆ ಇರಬೇಕು. ಇಂಥ ಒಬ್ಬ ಕ್ಯಾಡೆಟನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಒಂದೊಂದು ಪ್ಲೆಟೂನನ್ನು (ಸುಮಾರು ೩೦ ಕ್ಯಾಡೆಟುಗಳ ತಂಡ) ಆಫಿಸರರು ವೀಕ್ಷಿಸುವಾಗ ಅದರಲ್ಲಿಯ ಎಲ್ಲ ಕ್ಯಾಡೆಟುಗಳೂ ಇದೇ ಮಟ್ಟದವರಾದರೆ ಆ ಪ್ಲೆಟೂನ್ ಮುಕ್ಕಾಲು ಪರೀಕ್ಷೆಯಲ್ಲಿ ಗೆದ್ದಂತೆಯೇ ಸರಿ. ಇಷ್ಟು ಉತ್ಕೃಷ್ಟಮಟ್ಟದ ಟರ್ನ್ ಔಟ್ ಸಾಧಿಸಲು ಆ ಹುಡುಗರು ಮಾಡಿರುವ ತಪಸ್ಸು ಅದೆಷ್ಟು ಉನ್ನತ ಮಟ್ಟದ್ದಿರಬೇಡ ? ಬಿಡಿ ವಿವರಗಳಿಗೆ ಅವರು ನೀಡುವ ಗಮನವೇನು ಸಾಮಾನ್ಯವೇ ? ಹೀಗೆ ಶುಚಿಯಾಗಿರುವಾತನ ರುಚಿ ಅಭಿರುಚಿಗಳೂ ಶುಚಿಯಾಗಿರುತ್ತವೆ. ಆದ್ದರಿಂದ ಅವನ ಶೀಲ ಉನ್ನತ ಮಟ್ಟದ್ದಿರುತ್ತದೆ ಎಂಬುದು ಸಾಮಾನ್ಯ ನಂಬಿಕೆ.

"ಜೀಟಿ ! ಇಡೀ ಕ್ಯಾಂಪಿನಲ್ಲಿ ಸುಬ್ರಹ್ಮಣ್ಯ ಅತ್ಯಂತ ಸ್ಮಾರ್ಟ್ ಆಗಿದ್ದಾನೆ. ಅವನ ಟರ್ನ್ ಔಟ್ ನೋಡಿ !" ದೊರೈರಾಜ್ ಅಂದರು.

ಮೂರು ದಿವಸಗಳ ತರುವಾಯ ಇದೇ ಸುಬ್ರಹ್ಮಣ್ಯ ಕದ್ದು ಕ್ಯಾಂಪಿನಿಂದ ನುಸುಳಿ ಕಳ್ಳಬಟ್ಟಿ ಹೀರಿ ತೂರಾಡುತ್ತ ಹಿಂತಿರುಗುತ್ತಿದ್ದಾಗ ನನ್ನ ಕೈಗೆ ಸಿಕ್ಕಿಹಾಕಿಕೊಂಡ. ಶೀಲ ಆಂತರಿಕವಾದ ಗುಣ. ಅದು ತಂದೆತಾಯ್ಗಳಿಂದ, ಮನೆಯ ದೈನಂದಿನ ಪರಿಸರದಿಂದ, ಶಾಲೆ ಕಾಲೇಜುಗಳಲ್ಲಿ ಸಾರ್ವಜನಿಕ ನಡವಳಿಕೆಯಿಂದ ವರ್ಧಿಸಿ ವಿಕಸಿಸಬೇಕಾದ ಪ್ರಜ್ಞೆ. ಅದರ ಒಂದು ಪ್ರಕಟಿತ ರೂಪ ಆಕರ್ಷಕ ಬಾಹ್ಯ ವ್ಯಕ್ತಿತ್ವ ಅಥವಾ ಟರ್ನ್ ಔಟ್. ಆಂತರಿಕವಾದ ಈ ಮುಖ್ಯ ಗುಣ ಕೊರೆಯಾದಾಗ ಟರ್ನ್ ಔಟ್ ಠಕ್ಕರ ಸೋಗಿನ ಮೊಗವಾಡವಾಗುತ್ತದೆ.

ನಾಲ್ಕನೆಯ ಪಾಠ. ಅಶಿಸ್ತಿನ ಮೂಲ ಮುಂದಾಳುಗಳಲ್ಲಿದೆ. ಎರಡು ಶಾಲೆಗಳ ಕ್ಯಾಡೆಟುಗಳ ನಡುವೆ ಹಾಕಿ ಪಂದ್ಯಾಟವನ್ನು ಕ್ಯಾಂಪಿನ ಅಂಗವಾಗಿ ಏರ್ಪಡಿಸಿದೆವು. ಒಂದು ಶಾಲೆ ಗೆದ್ದಿತು. ಇನ್ನೊಂದು ಶಾಲೆ ಸೋತಿತು—ಎಲ್ಲರೂ ಕ್ಯಾಂಪಿನವರೇ. ಗೆದ್ದ ಶಾಲೆಯ ಕ್ಯಾಡೆಟುಗಳು ತಮ್ಮ ಸಂತೋಷವನ್ನು ಸ್ವಲ್ಪ ಹೆಚ್ಚಾಗಿಯೇ ಪ್ರದರ್ಶಿಸಿದರು. ಸೋತ ಶಾಲೆಯ ಮುಂದಾಳು ಈ "ದುರ್ವರ್ತನೆ" ಸಹಿಸಲಿಲ್ಲ. ವಾಸ್ತವಿಕವಾಗಿ ತಾವು ಸೋಲಲಿಲ್ಲ. ಅಂಪೈರ್ ಆಗಿದ್ದ ಆಫಿಸರ್ ಅನ್ಯಾಯ ಮಾಡಿ, ತಾವು ಹೊಡೆದಿದ್ದ ನಿಜ ಗೋಲನ್ನು ಫೌಲ್ ಆಗಿಯೂ ಎದುರು ಪಕ್ಷದವರು ಫೌಲಾಗಿ ಹೊಡೆದಿದ್ದ ಗೋಲನ್ನು ನಿಜವಾಗಿಯೂ ಮಾಡಿ ತಮ್ಮನ್ನು ಬೇಕೆಂದೇ ಅಪಮಾನಗೊಳಿಸಿದ ಎಂದು ಮುಂತಾಗಿ ಸಾರಿದ. ಮುಂದಾಳುವಿನ ತವಂಟೆ ವಾಲಗಕ್ಕೆ ಹಿಂದಾಳುಗಳು ಕತ್ತಿ ಹಿಡಿದು ರುದ್ರನಾಟ್ಯ ಪ್ರದರ್ಶಿಸಿದರು. ನಮ್ಮ ಪ್ರವೇಶ ಸಕಾಲದಲ್ಲಿ ಆದದ್ದರಿಂದ ಎರಡು ಶಾಲೆಗಳ ನಡುವೆ ಹೊಡೆದಾಟ ಆರಂಭವಾಗಲಿಲ್ಲ.

ಎನ್‌ಸಿಸಿಯ ಧ್ಯೇಯಗಳು ಮೂರು—(೧) ಶೀಲ, ಸಹವಾಸಿತ್ವ, ಧುರೀಣತ್ವದ ಹೊಣೆ ಮತ್ತು ಸೇವಾದರ್ಶ ಈ ಗುಣಗಳನ್ನು ಯುವಕಯುವತಿಯರಲ್ಲಿ ಸಂವರ್ಧಿಸು ವುದು. (೨) ಸೇನಾ ಶಿಕ್ಷಣವನ್ನು ಯುವಕ ಯುವತಿಯರಿಗೆ ನೀಡುವುದರ ಮೂಲಕ ಅವರಲ್ಲಿ ರಾಷ್ಟ್ರರಕ್ಷಣೆಯ ವಿಚಾರದಲ್ಲಿ ಆಸ್ಥೆ ವರ್ಧಿಸುವುದು. (೩) ರಾಷ್ಟ್ರೀಯ

ಗಂಡಾಂತರ ಪರಿಸ್ಥಿತಿಯಲ್ಲಿ ರಕ್ಷಣಾ ಪಡೆಗಳನ್ನು ಕ್ಷಿಪ್ರವಾಗಿ ವಿಸ್ತರಿಸಲು ಅನುಕೂಲವಾಗುವಂತೆ ನುರಿತ ಜನಬಲವನ್ನು ಸಿದ್ಧಪಡಿಸುವುದು.

ಕ್ಯಾಂಪ್ ಮುಗಿಸಿ ಮಡಿಕೇರಿಯ ಎತ್ತರ ತಲಪುತ್ತಿದ್ದಂತೆ ಮನಸ್ಸಿನಲ್ಲಿ ಗುಂಯಿಗುಟ್ಟುತ್ತಿದ್ದ ಪ್ರಧಾನ ಪ್ರಶ್ನೆ—ಈ ಕ್ಯಾಂಪು ಎನ್‌ಸಿಸಿ ಧ್ಯೇಯಗಳನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗಿದೆಯೇ ?

ಹೊರಗೆ ಪೂಸಿ ಏವೇನಯ್ಯಾ ಒಳಗೆ ಶುದ್ಧವಿಲ್ಲದನ್ನಕ ?
ಮಣಿಯ ಕಟ್ಟಿ ಏವೇನಯ್ಯಾ ಮನ ಮುಟ್ಟದನ್ನಕ ?
ನೂರನೋದಿ ಏವೇನಯ್ಯಾ
ನಮ್ಮ ಕೂಡಲ ಸಂಗಮದೇವನ ಮನ ಮುಟ್ಟದನ್ನಕ ?

೧೯೫೬

ಕುದುರೆಮುಖದ ಮೊದಲ ದರ್ಶನ

೧೯೫೬ರ ತರುಣದಲ್ಲಿ ದೊರೈರಾಜರು ಹೊಸ ಸವಾಲು ಒಡ್ಡಿದರು "ಕಳೆದ ವರ್ಷ ಸುಬ್ರಹ್ಮಣ್ಯ ನಡಿಗೆ ಆಯಿತು. ಈ ವರ್ಷ ಎಲ್ಲಿಗೆ ಹೋಗೋಣ ?"

ನಾನು ಸಿದ್ಧನಾಗಿದ್ದೆ "ಕುದುರೆಮುಖ ಪರ್ವತಕ್ಕೆ. ಅದು ನಮ್ಮ ಈ ವಲಯದಲ್ಲಿಯೇ ಅತಿ ಎತ್ತರದ ಶಿಖರವೆಂದು ಕೇಳಿದ್ದೇನೆ."

"ಅದು ಎಲ್ಲಿದೆ ? ನೀವು ಮೊದಲು ಹೋಗಿದ್ದೀರಾ ?"

"ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ಪುತ್ತೂರಿನಿಂದ ಅದರ ಅಸ್ಪಷ್ಟ ರೇಖೆಯನ್ನು ಕಂಡಿದ್ದೇನಷ್ಟೆ."

"ಹೋಗುವುದು ಹೇಗೆ ?"

"ವಿಚಾರಿಸಿ ನೋಡುತ್ತೇನೆ."

"ಕಾರ್ಯಕ್ರಮ ಸಿದ್ಧಪಡಿಸಿ. ಹಣ ಬೇಕಾದರೆ ಕೊಡಗು ಸರಕಾರವನ್ನು ಪ್ರಾರ್ಥಿಸೋಣ. ಕೆಲಸವಿರುವಲ್ಲಿ ಹಣ ಒಸರುತ್ತದೆ."

ಬೆಳ್ತಂಗಡಿವರೆಗೆ (ಮಡಿಕೇರಿ–ಪುತ್ತೂರು–ಬೆಳ್ತಂಗಡಿ ಮಾರ್ಗ ಸುಮಾರು ೭೦ ಮೈಲಿಗಳು) ಬಸ್ಸಿನಲ್ಲಿ ಹೋಗಬೇಕು. ಅಲ್ಲಿಂದ ಕಾಲುನಡಿಗೆಯಲ್ಲಿ ಬೆಟ್ಟ ಏರಬೇಕು. ಮಾರ್ಚ್ ಆಖೈರಿನ ಮೊದಲೇ ನಮ್ಮ ಪ್ರಯತ್ನ ನೆರವೇರಬೇಕು. ಇದಕ್ಕಿಂತ ಹೆಚ್ಚಿನ ವಿವರ ನನಗೆ ದೊರೆಯಲಿಲ್ಲ. ಬಸ್ ಚಾರ್ಜ್ ಮುಂತಾದ ಖರ್ಚಿಗೆಂದು ಇನ್ನೂರು ರೂಪಾಯಿ ಬೇಕೆಂದು ಸರಕಾರವನ್ನು ಕೇಳಿದೆವು. ಕೂಡಲೇ ಅದು ಮಂಜೂರಾಯಿತು. ದೊರೈರಾಜ್, ನಾನು ಮತ್ತು ಸುಮಾರು ಇಪ್ಪತ್ತು ಸಾಹಸಪ್ರಿಯ ಕ್ಯಾಡೆಟುಗಳು ಒಟ್ಟಾಗಿ ಹೊರಡುವುದೆಂದು ತೀರ್ಮಾನಿಸಿದೆವು. ಕಾಲೇಜಿನ ರಜೆ ಮುಂತಾದವನ್ನೆಲ್ಲ ಅಳವಡಿಸಿಕೊಂಡು ನಾಳೆ ದಿವಸ ಪ್ರಾತಃಕಾಲ ಹೊರಡುವುದೆಂದು ಎಲ್ಲ ವಿವರಗಳನ್ನು ಮುಗಿಸಿ ಸಂಜೆ ಮನೆಗೆ ಹೊರಟಾಗ ಬೆಂಗಳೂರಿನಿಂದ ತಂತಿ ಬಂದಿತು "ಕಮಾಂಡರ್ ದಾದಾಭಾಯ್ ಮಡಿಕೇರಿಗೆ ನಾಳೆ ದಿನ ಬರುತ್ತಾರೆ. ಸ್ವಾಗತಿಸಿ."

ದೊರೈರಾಜರೆಂದರು "ನಾಳೆ ನೀವೆಲ್ಲ ಹೋಗಿ. ರಾತ್ರಿ ಬೆಟ್ಟದ ಬುಡದಲ್ಲಿ ತಂಗುವಿರಷ್ಟೆ. ಅಷ್ಟರಲ್ಲಿ ನಾನು ಸ್ಪೆಷಲ್ ಕಾರನ್ನಾದರೂ ಮಾಡಿ ಅಲ್ಲಿಗೆ ಬಂದು ತಲಪುತ್ತೇನೆ. ನಾನು ಬರಲು ಅಸಾಧ್ಯವಾದರೆ ನೀವು ಕಾಯಬೇಡಿ—ಮುಂದುವರಿಸಿ."

ಇದೇನಪ್ಪ ಕೊನೆಗಳಿಗೆಯ ವಿಘ್ನ ಎಂದು ಚಿಂತೆಯಾಯಿತು. ನನ್ನ ಹೊಣೆ ಹೆಚ್ಚಾಯಿತಲ್ಲ ಎಂದು ಕಳವಳವೂ ಆಯಿತು. ಗೊತ್ತಿಲ್ಲದ ಗುರಿ, ಗೊತ್ತಿಲ್ಲದ ದಾರಿ, ಗೊತ್ತಿಲ್ಲದ ಕೇರಿ, ಇಪ್ಪತ್ತು ಹುಡುಗರ ಹೊಣೆ. ಉತ್ಸಾಹದ (ದುಡುಕಿನ) ಮುಸುಕು ಕಳವಳವನ್ನು ಮುಚ್ಚಿತು. ಮರುದಿನ ಮಧ್ಯಾಹ್ನದ ಊಟ ಬೆಳ್ತಂಗಡಿಯ ಕೃಷ್ಣ ಭಾವನಲ್ಲಿ (ಭವನದಲ್ಲಿ). ಕುದುರೆಮುಖದ ಬುಡ ನಾವೂರು (ಕು)ಗ್ರಾಮ. ಅಲ್ಲಿಂದ

ಬೆಳ್ತಂಗಡಿಗೆ ವ್ಯಾಪಾರಕ್ಕೋಸ್ಕರ ಬಂದಿದ್ದ ಮುಂಗಿಲ ಶೇಣವನೆಂಬ ಪುರ್ಬುವನ್ನು (ಕ್ರಿಶ್ಚನ್) ಹೋಟೆಲಿನವ ಪರಿಚಯಿಸಿಕೊಟ್ಟ. ಇದು ಆಕಸ್ಮಾತ್ತಾಗಿ ಒದಗಿದ ಸುಯೋಗ.

"ನೀವು ಮಾರ್ಗದರ್ಶಕನಿಲ್ಲದೇ ಬೆಟ್ಟ ಏರಿದರೆ ವರ್ಷಗಟ್ಟಲೆ ಅಲೆದರೂ ಶಿಖರ ತಲಪಲಾರಿರಿ. ಇವನೇ ಅದರಲ್ಲಿ ಪಳಗಿದ ಹಳೆ ಹುಲಿ" ಎಂದ ಕೃಷ್ಣಭಾವ.

ಶೇಣವ ಮಂದಹಾಸದ ಮಿನುಗು ನಗೆ ಬೀರಿ ಆಹಾರ ಪದಾರ್ಥಗಳನ್ನು ಬೆಳ್ತಂಗಡಿಯಿಂದಲೇ ಖರೀದಿಸಿ ಕೊಂಡು ಹೋಗಲು ನಮಗೆ ಸೂಚನೆ ನೀಡಿದ. ಅಪರಾಹ್ಣದ ೪ ಗಂಟೆಗೆ—ದಕ್ಷಿಣ ಕನ್ನಡ ಜಿಲ್ಲೆಯ (ಫೆಬ್ರುವರಿ ಆದರೂ) ಕುದಿಯುವ ಬಿಸಿಲಿನಲ್ಲಿ—ನಾವು ಭಾರ ಹೊತ್ತು ದಾಪುಗಾಲು ಹಾಕುತ್ತ ನಡೆದೆವು ಏಳು ಮೈಲಿದೂರದ ನಾವೂರಿಗೆ. ಶೇಣವ ಜೊತೆಯಲ್ಲಿದ್ದುದರಿಂದ ದಾರಿ ಅರಸುವ ಸನ್ನಿವೇಶ ಒದಗಲಿಲ್ಲ. ನಾವೂರಿನ ಫಾರೆಸ್ಟ್ ಬಂಗ್ಲೆಯ ನಿರ್ಜನ ಹೊರಾವರಣ ತಂಪಾಗಿತ್ತು, ರಾತ್ರಿ ಆಗಿದ್ದುದರಿಂದ. ಅಲ್ಲಿ ಮೈ ಚೆಲ್ಲಿ ರಾತ್ರಿಯ ಊಟದ ಚಿಂತೆ ಮಾಡಿದೆವು. ಒಂದು ಗಂಟೆ ನೀರು-ಬೆಂಕಿ-ಹುಡುಗರು ಹೀಗೆ ಹೊಡೆದಾಡುವಾಗ ಗೆಮೆ ಬಂದ ಗಂಜಿ ತಯಾರಾಯಿತು. ಇನ್ನೇನು ಅದರ ಸುಖ ಸವಿಯಬೇಕೆನ್ನುವಷ್ಟರಲ್ಲಿ ಕಾರಿನ ಹಾರನ್ ನಮ್ಮನ್ನು ಎಚ್ಚರಿಸಿತು. ಅದರ ಹಿಂದೆಯೇ ದೊರೈರಾಜರ ಗಂಡು ಧ್ವನಿಮೊಳಗಿ ನಮಗೆ ವಿಶೇಷ ಹರ್ಷ ನೀಡಿತು. ಅದೇ ದಿನ ೧೧ ಗಂಟೆಗೆ ಬಂದ ಇನ್ನೊಂದು ತಂತಿ ಪ್ರಕಾರ ಕಮಾಂಡರರು ಅಂದು ಬರುವುದಿಲ್ಲವೆಂದೂ ಮೂರು ದಿವಸಗಳ ತರುವಾಯ ಬರುವರೆಂದೂ ತಿಳಿಯಿತಂತೆ. ಆ ಕೂಡಲೇ ಸಿಕ್ಕಿದ ಪುತ್ತೂರು ಬಸ್ಸನ್ನೇರಿ ಅಲ್ಲಿಂದ ಬಾಡಿಗೆ ಕಾರ್ ಮಾಡಿ ದೊರೈರಾಜರು ನಾವೂರನ್ನು ತಲಪಿದ್ದರು. ನಾವೆಲ್ಲರೂ ಒಟ್ಟಾಗಿ, ಗೆಮೆ ಬಂದಿದ್ದ ಗಂಜಿಯಲ್ಲಿ ಏಲಕ್ಕಿ ಪರಿಮಳವನ್ನು ಅನುಭವಿಸುತ್ತ ಸಂತೋಷಿಸಿದೆವು. ಮರುದಿನದ ಮುಂಜಾನೆ ೫ ಗಂಟೆಗೆ ಒಂದಿಷ್ಟು ಅವಲಕ್ಕಿ ಮುಕ್ಕಿ ಮುಂಗಿಲ ಶೇಣವನ ಮಾರ್ಗದರ್ಶನದಲ್ಲಿ ಬೆಟ್ಟ ಏರಲು ತೊಡಗಿದೆವು. ಹಿಂದಿನ ದಿವಸದ ಬಳಲಿಕೆಯಿಂದ ಆಹಾರದ ಕೊರತೆಯಿಂದ ದೇಹಗಳಲ್ಲಿ ಲವಲವಿಕೆ ಇರಲಿಲ್ಲ. ಆದರೂ "ನಡೆ ಮುಂದೆ, ನಡೆ ಮುಂದೆ. ಜಗ್ಗದೆಯೆ ಕುಗ್ಗದೆಯೆ ನಡೆ ಮುಂದೆ" ಮಂತ್ರ ಪಠಿಸುತ್ತ ಬೆಟ್ಟ ಏರಿದೆವು. ನಮ್ಮ ಸಕಲ ಏರ್ಪಾಡೂ—ಉಡುಪು, ಪಾದರಕ್ಷೆ. ಆಹಾರ ಸಾಮಗ್ರಿಗಳು, ಪಾತ್ರೆಗಳು—ಅದೆಷ್ಟು ಅಸಮರ್ಪಕವಾಗಿತ್ತೆಂದರೆ ನನಗೆ ನನ್ನ ವಿಚಾರದಲ್ಲಿಯೇ ಅಸಹ್ಯವೆನಿಸುವಂತಾಯಿತು. ಎಂಥ ತಿಳಿಗೇಡಿತನವಾಯಿತು ಈ ನಡಿಗೆ! ಸುಬ್ರಹ್ಮಣ್ಯದ ನಡಿಗೆಗೆ ಹೋಲಿಸುವಾಗ ಇದೆಂಥ ಅವಾಂತರ ಎಂದುಕೊಂಡೆ. ಊಟ ವಿಶ್ರಾಂತಿ ಏನೂ ಬೇಡದ ಮಹಾಘಟ ದೊರೈರಾಜ್. ಆದರೆ ಹುಡುಗರೋ, ನಾನೋ ? ನಡೆ ಮುಂದೆ! ಮಧ್ಯಾಹ್ನ ಹೇವಳದ ಸಿಂಹಪುರ್ಬು ಮನೆ ಸೇರಿದೆವು. ಸುಮಾರು ೪,೦೦೦ ಅಡಿ ಎತ್ತರದ ಈ ಸ್ಥಳಕ್ಕೆ ಎಲ್ಲವೂ ತಲೆ ಹೊರೆಯಿಂದಲೇ ಬರಬೇಕು. ಅಲ್ಲಿ ಗದ್ದೆ, ತೋಟ ಮಾಡಿಕೊಂಡಿರುವ ಸಂಸಾರಗಳು ಎರಡು ಮಾತ್ರ. ಸಿಂಹಪುರ್ಬುವಿನ ಮನೆಯಂಗಳದಲ್ಲಿ ಒಲೆ ಹೂಡಿ ಅನ್ನ ಮಾಡಿದೆವು. ದೊರೈರಾಜರ ನೇತೃತ್ವದಲ್ಲಿ ಬಟಾಟೆ ನೀರುಳ್ಳಿ ಪಲ್ಯವೂ ನನ್ನ ನೇತೃತ್ವದಲ್ಲಿ ಏಲಾಯಂತಿ ಚಟ್ಟಿನ ಮುದ್ದೆಹುಳಿಯೂ ತಯಾರಾದುವು. ಬಲು ರುಚಿಕರವಾದ ಈ ಊಟವನ್ನು ಮುಗಿಸಿ, ಅಪರಾಹ್ಣದ ೪ ಗಂಟೆಗೆ ಏರಿಕೆಯ ಕೊನೆಯ ಹಂತ ಆರಂಭಿಸಿದೆವು. ಮಿಲಿಟರಿ

ಅಧಿಕಾರಿ ದೊರೈರಾಜರ ಗಂಭೀರ ವ್ಯಕ್ತಿತ್ವ. ಅವರ ಹೆಗಲ ಮೇಲಿದ್ದ ರೈಫಲ್ ಇವುಗಳಿಂದ ಆಕರ್ಷಿತನಾದ ಸಿಂಹಪುರ್ಬುರ್ಜ ಬೇಟೆ ಆಸೆಯಿಂದ ನಮ್ಮ ಜೊತೆ ಸೇರಿದ. ಕುದುರೆಮುಖ ಬೆಟ್ಟದ ಬೆನ್ನನ್ನು ತಲಪಿದಾಗ ಅವರ ಕಿರುಗಾಸನ್ನು ಫಕ್ಕನೆ ತಿರುಗಿ ಆಚೆ ಮಗ್ಗುಲಿನ ವಿಶಾಲ ಇಳಿಜಾರನ್ನು ಕಂಡಾಗ ಅಲ್ಲಿ ಹುಲ್ಲಿನ ಹೊದಿಕೆಯ ವಿಸ್ತಾರದಲ್ಲಿ ಸ್ವಚ್ಛಂದವಾಗಿ ಮೇಯುತ್ತಿದ್ದ ಕಾಟಿಗಳ ಹಿಂಡನ್ನು ಕಂಡೆವು. ಪುರ್ಬುರ್ಜದ್ವಯರ ಸಂತೋಷಕ್ಕೆ ಮಿತಿಯಿಲ್ಲ. ದೊರೈರಾಜರು ನಮಗೆಲ್ಲ ಸದ್ದು ಮಾಡದೆ ಅಲ್ಲೇ ಕುಳಿತಿರಬೇಕೆಂದು ವಿಧಿಸಿ ಇಬ್ಬರು ಪುರ್ಬುರ್ಜಗಳೊಡನೆ ಅದೆಲ್ಲಿಗೋ ಸರಸರನೆ ಸಾಗಿ ಅಂತರ್ಧಾನರಾದರು. ಬಳಸಂದಾರಿಯಿಂದ ಅವರು ಕಾಡನ್ನು ಸೇರಿ ಅದನ್ನು ದಾಟಿ ಕಾಟಿಗಳ ಹಿಂಡು ಮೇಯುತ್ತಿದ್ದ ಇಳಿಜಾರಿನ ತುತ್ತತುದಿಗೆ ತಲಪಿದಾಗ ನಮ್ಮ ಸ್ಥಿತಿಯೇನು? ಬೆಟ್ಟದ ಒಂದು ಗೆರೆಯಲ್ಲಿ ನಾವು, ಎದುರು ಗೆರೆಯಲ್ಲಿ ದೊರೈರಾಜ್ ಮೊದಲಾದವರು. ನಮ್ಮಿಬ್ಬರ ಸ್ಥಾನಗಳ ನಡುವಿನ ತಗ್ಗಿನಲ್ಲಿ ಕಾಟಿಗಳ ಹಿಂಡು. ನಾವು ಕುಳಿತಲ್ಲಿಂದಲೇ ಅವರ ತೆವಳಿಕೆಯೂ ಕಾಟಿಗಳ ಸ್ವಚ್ಛಂದ ಅಲೆತವೂ ಕಾಣುತ್ತಿದ್ದುವು. ಶಿಸ್ತಿನ ಬಿಗಿಯಿಲ್ಲದಿರುತ್ತಿದ್ದರೆ ಆ ಗಳಿಗೆಯಲ್ಲಿ ಏನಾದರೂ ಸದ್ದು ಮಾಡಿ ಕಿರುಚಿ ಕಾಟಿಗಳನ್ನು ಓಡಿಸಿಬಿಡುತ್ತಿದ್ದೆ. ಈಗೇನು ಮಾಡುವುದು? ಎದುರಿದ್ದವರು ಮಿಲಿಟರಿ ಮೇಲಧಿಕಾರಿ. ಮುಂದಿನ ನಿಮಿಷಗಳಿಗೆಯಲ್ಲಿ ರೈಫಲ್ ಸ್ಫೋಟನ ಭಯಂಕರವಾಗಿ ಅನುರಣಿಸಿತು. ಕಾಟಿಗಳ ಹಿಂಡು ದಿಕ್ಕಾಪಾಲಾಗಿ ಕಂಗಾಲಾಗಿ ಚದರಿ ಹೋಯಿತು. ಇಲ್ಲ, ಇಲ್ಲ. ಕುದುರೆಮುಖದ ಶಿಖರವೇ ಕಳಚಿ ಬಿದ್ದಂತೆ ಒಂದು ಭಾರೀಮೃಗ ಉರುಳಿ ಬಿದ್ದು ವಿಲವಿಲನೆ ಒದ್ದಾಡಿ ರಕ್ತದ ಕಾರಂಜಿ ಹಾರಿಸಿ ನಿಶ್ಚೇಷ್ಟಿತವಾಯಿತು. ಮತ್ತೊಂದು ಗುಂಡಿನ ಸದ್ದು—ಇದು ಬಹುಶಃ ಭದ್ರತೆಗೋಸ್ಕರ ಸತ್ತಕಾಟಿಗೇ ಪುನಃ ಹೊಡೆದುದಾಗಿರಬೇಕು. ನಾನಲ್ಲಿಗೆ ಹೋಗಲಿಲ್ಲ. ಅಂಥ ದೃಶ್ಯ ನೋಡುವುದು ನನಗಾಗದು. ಹುಡುಗರು ಓಡಿದರು. ನಮ್ಮ ಇಪ್ಪತ್ತು ಧಾಂಡಿಗರಿಗೆ ಆ ಪರ್ವತ ದೇಹವನ್ನು ಒಂದು ಮಗ್ಗುಲಿನಿಂದ ಇನ್ನೊಂದು ಮಗ್ಗುಲಿಗೆ ಮಗುಚುವುದು ಅತಿ ಪ್ರಯಾಸಕರವಾಯಿತಂತೆ. ಆದನ್ನು ಸುಲಿದು ಚರ್ಮ ಮಾಂಸಗಳನ್ನು ಪುರ್ಬುರ್ಜಗಳು ಸಾಗಿಸಿದರು. ಬೇಟೆಯ ಪ್ರತೀಕವಾಗಿ ಕ್ಯಾಪ್ಟನ್ನರು ಕಾಟಿಯ ಕೊಂಬುಗಳನ್ನು ಸಂಗ್ರಹಿಸಿದರು. ಈ ದುರ್ಘಟನೆಯನ್ನು ಬರೆಯುವಾಗ ಇಂದಿಗೂ (೧೯೭೧) ನನ್ನ ಲೇಖನಿ ಕುಂಟುತ್ತದೆ. ಹೃದಯ ವಿಕಾರವಾಗುತ್ತದೆ. ಕಾನೂನು, ನ್ಯಾಯ ನೀತಿ ಯಾವ ದೃಷ್ಟಿಯಿಂದ ನೋಡಿದರೂ ನಾವು ಮಾಡಿದ್ದು ಘೋರ ಪಾಪ. ಭೂಮಿಯ ಮೇಲೆ ವಾಸಮಾಡಲು ಮನುಷ್ಯನಿಗಿರುವಷ್ಟೇ ಹಕ್ಕು ಪ್ರಾಣಿಗೂ ಇದೆ. ಅದು ನಮ್ಮ ಮೇಲೆ (ಆತ್ಮರಕ್ಷಣೆಗೋಸ್ಕರ ಮಾತ್ರ) ಏರಿ ಬಂದಿದ್ದರೆ (ಬರ್ನಾಡ್ ಷಾ ಎಂದಿರುವಂತೆ) ಅದನ್ನು ಭೀಕರ ಕ್ರೌರ್ಯ ಎನ್ನುತ್ತಿದ್ದೆವು. ಆದರೆ ನಾವದನ್ನು ಹೊಡೆದದ್ದೋ? ಬೇಟೆ, ಆಟ, ವಿನೋದ!

ಸೂರ್ಯಾಸ್ತಮಾನವನ್ನು ಕುದುರೆಮುಖ ಶಿಖರದಿಂದ ನೋಡಿದೆವು. ಆದರೆ ಹೆಚ್ಚು ಹೊತ್ತು ಅಲ್ಲಿ ಕುಳಿತಿರಲಾಗಲಿಲ್ಲ—ರಾತ್ರಿಯ ಹೊಟ್ಟೆಪಾಡಿನ ಚಿಂತೆ ಇದೆಯಷ್ಟೆ. ಶಿಖರದ ಮಗ್ಗುಲಿನ ಇಳಿಜಾರಿನಲ್ಲಿ ಒಂದೆರಡು ಬಂಗ್ಲೆಗಳ (ಅಕ್ಷರಶಃ) ಭಗ್ನಾವಶೇಷಗಳಿವೆ. ಹಿಂದಿನ ಶತಮಾನದಉತ್ತರಾರ್ಧದಲ್ಲೂ ಈ ತರುಣದಲ್ಲೂ ಮಂಗಳೂರಿನಿಂದ ವಿದೇಶೀಪಾದ್ರಿಗಳು

ಬೇಸಗೆಯಲ್ಲಿ ಈ ಶಿಖರಕ್ಕೆ ಬಂದು ತಂಗುತ್ತಿದ್ದರಂತೆ. ಅವರ ವಾಸಕ್ಕಾಗಿ ಬಂಗ್ಲೆಗಳನ್ನೂ ಪ್ರಾರ್ಥನೆಗಾಗಿ ಇಗರ್ಜಿಯನ್ನೂ ಇಲ್ಲಿ ಕಟ್ಟಿಸಿದ್ದರು. ಮಂಗಳೂರು ಇಟ್ಟಿಗೆ, ಹಂಚು, ಮರದ ಭಾರಿ ತೊಲೆಗಳು, ರೀಪುಗಳು, ಪಕ್ಕಾಸುಗಳು ಇವುಗಳಿಂದೆಲ್ಲ ಈ ಕಟ್ಟಡಗಳನ್ನು ಸುಭದ್ರವಾಗಿ ರಚಿಸಿದ್ದರಂತೆ. ಆದರೆ ೧೯೩೦ರಿಂದೀಚೆಗೆ ವಿದೇಶೀ ಪಾದ್ರಿಗಳು ಆಗಮಿಸ ಲಿಲ್ಲ. ದೇಶೀ ಪಾದ್ರಿಗಳಿಗೆ ಈ ಸಾಹಸ ರುಚಿಸಲಿಲ್ಲ. ಬಂಗ್ಲೆಗಳು ಹಾಳು ಬಿದ್ದವು. ಗಾಳಿ, ಮಳೆ, ಕಾಡುಬೆಂಕಿ ಎಂಬ ನೈಸರ್ಗಿಕ ವಿಘಾತಕ ಶಕ್ತಿಗಳು ಒಂದು ಕಡೆ ; ಅಪೂರ್ವಕ್ಕೆ ಬರುತ್ತಿದ್ದವರ ಸ್ವಂತ ಹಿತಸಾಧನೆಯ ನಾಶಕೃತ್ಯ ಇನ್ನೊಂದು ಕಡೆ (ಆ ಕಾಡಿನ ಮಧ್ಯವೂ ಇವರಿಗೆ ಬೆಂಕಿ ಮಾಡಲು ಸಿಕ್ಕಿದ್ದು ಬಂಗ್ಲೆಯ ಮರದ ತೊಲೆಗಳು ; ಬೆಂಕಿ ಹೊತ್ತಿಸಿದ್ದು ಬಂಗ್ಲೆಯ ನೆಲದ ಮೇಲೆ)—ಇವುಗಳಿಂದ ಹತಿಗೊಂಡ ಮೇಲೆ ಉಳಿದದ್ದೇನು ? ಹಾಳು ಗರೆಯುತ್ತ ಹಾಮಾಸು ಹಿಡಿದಿರುವ ತುಂಡು ಗೋಡೆಗಳು, ಚದರಿ ಬಿದ್ದಿರುವ ಇಟ್ಟಿಗೆಯ ತುಂಡುಗಳು. ಬಂಗ್ಲೆಗಳ ನೆಲವನ್ನೂ ಅಡಿಪಾಯವನ್ನೂ ಕಾಡು ಮುಸುಕಿ ಕಬಳಿಸಿದೆ. ಇಗರ್ಜಿಯ ಗೋಡೆಗಳ ಮೇಲೆ ಏಸುಕ್ರಿಸ್ತನ ಅವತಾರ ಸಂಬಂಧ ವಿವಿಧ ತೈಲಚಿತ್ರಗಳ ಅವಶೇಷಗಳು ಇನ್ನೂ ಉಳಿದಿರುವುದನ್ನು ನೋಡಿ ವಿಸ್ಮಿತರಾದೆವು. ಆ ಪಾದ್ರಿಗಳ ಸೌಂದರ್ಯದೃಷ್ಟಿ ಸಾಹಸಪ್ರಿಯತೆ ನಿಜವಾಗಿಯೂ ಶ್ಲಾಘನೀಯ.

ರಾತ್ರಿಯ ಗಂಜಿ ಉಂಡು ಬಂಗ್ಲೆಯ ಆವರಣದಲ್ಲಿ ಬೆಂಕಿ ಹೊತ್ತಿಸಿ ಅದರ ಸುತ್ತಲೂ ಆಕಾಶದಡಿಯಲ್ಲಿ ಮಲಗಿದೆವು, ಆದರೆ ಆ ಚಳಿ ಗಾಳಿ ಸಹಿಸಿ ಉಳಿಯುವುದು ತೀರ ಅಸಾಧ್ಯ ಎಂದೆನ್ನಿಸಿತು. ಹಸಿವು ಬೇರೆ, ಆದರೆ ಬೆಳಗ್ಗಿನ ನಾಷ್ಟಾಕೋಸ್ಕರ ಉಳಿಸಿದ್ದ ಸ್ವಲ್ಪ ಅವಲಕ್ಕಿ ವಿನಾ ಬೇರೆ ಏನೂ ಇರಲಿಲ್ಲ. ರಾತ್ರಿ ಇಡೀ ನರಕವಾಸ. ಬೆಳಗಾಗುವಾಗ ನಖಶಿಖಾಂತ ನೋವು, ಜ್ವರಬಂದಂಥ ಅನುಭವ. ಆದಷ್ಟು ಬೇಗ ಇಲ್ಲಿಂದ ತೊಲಗಿ ಹೋಗುವುದೊಂದೇ ಉಳಿಯುವ ಮಾರ್ಗವೆಂದು ನಿರ್ಧರಿಸಿ ಬೆಟ್ಟ ಇಳಿಯಲು ತೊಡಗಿ ದೆವು, ದೊರ್ರೈರಾಜರು ಅಂದೇ ಸಂಜೆ ಮಡಿಕೇರಿ ತಲಪಬೇಕಾಗಿತ್ತು. ಆದ್ದರಿಂದ ಅವರು ನಮ್ಮನ್ನು ಹಿಂದೆ ಬಿಟ್ಟು ಮುಂದೆ ಓಡಿ ಓಡಿ ಬೆಟ್ಟದ ಅಂಚಿನಲ್ಲಿ ಮರೆಯಾದರು. ನಾವೂರಿನಿಂದ ಬೆಟ್ಟದ ತುದಿ ಒಂದು ಹಗಲಿನ ನಡಿಗೆಯ ದೂರ. ಆದರೆ ಇಳಿಯಲು ಅರ್ಧ ದಿವಸವೂ ಬೇಕಾಗಲಿಲ್ಲ. ದೊರ್ರೈರಾಜರು ಮೊದಲೇ ಏರ್ಪಡಿಸಿದ್ದ ಪ್ರಕಾರ ಬಾಡಿಗೆ ಕಾರು ನಾವೂರಿಗೆ ಬಂದಿತ್ತು, ಅದನ್ನು ಏರಿ ಮಧ್ಯಾಹ್ನದ ಊಟಕ್ಕೆ ಬೆಳ್ತಂಗಡಿ ಸೇರಿದೆವು. ಕೃಷ್ಣಭಾವನ ಊಟ ಉಪಚಾರ ನಮಗೆ ಪುನರ್ಜನ್ಮ ನೀಡಿತು. ಬೆಳ್ತಂಗಡಿಯ ಸಾಮೀಪ್ಯದಿಂದ ಕುದುರೆಮುಖಕ್ಕೆ ಮಂಗಳ ಹಾಡುವಾಗ ಇನ್ನೊಮ್ಮೆ ಪೂರ್ವಸಿದ್ಧತೆ ಯೊಡನೆ ಬಂದೇ ಬರುತ್ತೇನೆ ಎಂದಿದ್ದೆ.

"ಗುಡ್ ಈವ್ನಿಂಗ್ ಸರ್ ! ನನ್ನ ಪರಿಚಯವಿದೆಯೋ !"

ಅದೇ ವರ್ಷದ (೧೯೫೬) ಬೇಸಗೆ ರಜೆಯಲ್ಲಿ ನಾನು ರಿಫ್ರೆಷರ್ ಕೋರ್ಸಿಗೋಸ್ಕರ ಡೆಹರಾಡೂನಿನ ಕ್ಲೆಮೆಂಟ್ ಟೌನಿಗೆ ಹೋದೆ. ಹಿಂದೊಮ್ಮೆ ಅಲ್ಲಿಗೆ ವಿಮಾನ ದಳ ಸೇರಲು ಹೋಗಿ IQ high but lacks OLQ ಪದವಿ ಪಡೆದು ವಿಫಲನಾಗಿ ಮರಳಿದ್ದ ನೆನಪು ಮರೆತಿರಲಿಲ್ಲ. ಆದರೆ ಈಗ ಆಫೀಸರ್ ಆಗಿಯೇ OLQ ಸಹಿತವೇ ಮರಳಿದ್ದೆ. ಅಲ್ಲಿದ್ದವರು

ನೂರು ಜನ ಎನ್‌ಸಿಸಿ ಆಫಿಸರರು—ಅಕ್ಷರಶಃ ಆಸೇತು ಹಿಮಾಚಲ ವಿವಿಧ ರಾಜ್ಯಗಳವರು. ನಮ್ಮ ವಾಸಕ್ಕೆ ನಾಲ್ಕು ಬರಾಕುಗಳು. ಆದರೆ ಊಟ ಸರ್ವತ್ರ ಒಂದು ದೊಡ್ಡ ಹಾಲಿನಲ್ಲಿ. ಸೆಕೆಂಡ್ ಲೆಫ್ಟಿನೆಂಟ್‌ನಿಂದ (ನನ್ನ ದರ್ಜೆ ಇದು) ತೊಡಗಿ ಕ್ಯಾಪ್ಟನ್‌ವರೆಗೆ ಮೂರು ದರ್ಜೆಗಳ ಆಫಿಸರರೂ ಇದ್ದರು. ಆದರೆ ೯೦ ಮಂದಿ ಸೆಕೆಂಡ್ ಲೆಫ್ಟಿನೆಂಟ್‌ಗಳು ; ೮ ಮಂದಿ ಲೆಫ್ಟಿನೆಂಟ್‌ಗಳು : ಇಬ್ಬರು ಕ್ಯಾಪ್ಟನ್‌ಗಳು. ನಮ್ಮ ಶಿಕ್ಷಣದ ಹೊಣೆ ಮೇಜರ್ ಅನಂತಸಿಂಗ್ ಮತ್ತು ಅವರ ಆರ್ಮಿ ಅನುಯಾಯಿಗಳದ್ದು. ಈ ತಂಡ ಬಲು ದಕ್ಷತೆಯಿಂದ ಶ್ರದ್ಧೆಯಿಂದ ಶಿಕ್ಷಣ ನೀಡಿತು. ಆದರೆ ಶಿಕ್ಷಣದ ಮಟ್ಟವೆಂದೂ ಎಂಆರ್‌ಸಿಯ ಅರ್ಧವನ್ನು ಮುಟ್ಟಲಿಲ್ಲ. ಕಾರಣವಿಷ್ಟೆ—ಎಂಆರ್‌ಸಿಯಲ್ಲಿ ಒಂದು ಭವ್ಯ ಪರಂಪರೆ ಇದೆ : ಅಲ್ಲಿನ ಅಧಿಕಾರಿಗಳು ನಮಗೆ ಶಿಕ್ಷಕರಾಗಿದ್ದರು. ಇಲ್ಲಿ ಹಾಗಲ್ಲ—ಎಲ್ಲ ಅಧಿಕಾರಿಗಳೂ ದೇಶದ ಬೇರೆ ಬೇರೆ ಆರ್ಮಿ ಕೇಂದ್ರಗಳಿಂದ ಈ ಉದ್ದೇಶದ ಸಲುವಾಗಿಯೇ ಬಂದವರು. ಒಂದೊಂದು ಆರ್ಮಿ ಕೇಂದ್ರದ ಪರಂಪರೆ ಒಂದೊಂದು ವಿಧ. ಆದ್ದರಿಂದ ವಿವಿಧ ಕೇಂದ್ರಗಳ ಅಧಿಕಾರಿಗಳ ಮೇಳದಲ್ಲಿ ಒಂದು ಪರಂಪರೆ ರೂಪುಗೊಳ್ಳುವುದು ದೀರ್ಘಕಾಲ ಬೇಡುವ ಜಟಿಲ ಸಂಗತಿ.

ಶಿಕ್ಷಣ ಸುಲಭವಾಗಿದ್ದಾಗಿದ್ದರೂ ಎನ್‌ಸಿಸಿ ಆಫಿಸರರು ಬಲು ಮಂದಿ ಗೋಗರೆದರು ಇದು ಬಲು ಕಷ್ಟ ಎಂದು. ಸಾಕಷ್ಟು ಮಂದಿ ವಿನಾಕಾರಣ ಆಸ್ಪತ್ರೆಗೆ ಹೋಗಿ ಖಾಯಿಲೆ ಆದ್ದರಿಂದ ವಿಶ್ರಾಂತಿ ಬೇಕು ಎಂಬ ಚೀಟಿ ಪಡೆದು ಬಂದರು. ಕಾಲೇಜಿನ ಪ್ರಾಧ್ಯಾಪಕರು, ಸದಾ ಮಿಲಿಟರಿ ವೃತ್ತಿಯವರಲ್ಲ, ಆದ್ದರಿಂದ ಸ್ವಲ್ಪ ರಿಯಾಯಿತಿ ತೋರೋಣವೆಂದು ಮಿಲಿಟರಿ ವೈದ್ಯ ಮೊದಲಿನ ಎರಡು ದಿವಸ ಸಡಿಲವಾಗಿದ್ದ. ಆದರೆ ಮೂರನೆಯ ದಿವಸ ಖಾಯಿಲಸ್ಥರ (ವಿಶ್ರಾಂತಿ ಪಡೆಯುವವರ) ಸಂಖ್ಯೆ ೨೦ಕ್ಕೆ ಏರಿದಾಗ, ಅದು ಇನ್ನೂ ಏರುವ ಚಿಹ್ನೆ ತೋರಿದಾಗ, ವೈದ್ಯ ಬಿಗಿಯಾದ ; ಮೇಜರ್ ಅನಂತಸಿಂಗರು ಈ ಖಾಯಿಲಸ್ಥರಿಗೆ ಹೊಸ ಶಿಕ್ಷಣವಿಧಾನ ರೂಪಿಸಿದರು—ಖಾಯಿಲಸ್ಥರು ಹಗಲಿಡೀ ಶಸ್ತ್ರಗಳನ್ನು ಶುಚಿಗೊಳಿಸುತ್ತ ಕುಳಿತಿರಬೇಕು ; ಗಂಜಿ ಆಹಾರವನ್ನು ನಿಯಮಿತವೇಳೆ ಸೇವಿಸಬೇಕು ; ಎರಡು ದಿವಸಗಳಲ್ಲಿ ಖಾಯಿಲೆ ಗುಣವಾಗಿ ಪೆರೇಡಿಗೆ ಮರಳದಿದ್ದರೆ ಅಂಥವರ ಪ್ರಗತಿಪತ್ರದಲ್ಲಿ "ಪ್ರಗತಿ ಅತೃಪ್ತಿಕರ" ಎಂಬ ಷರಾ ಬರೆಯಲಾಗುವುದು ಒಂದು ರೈಫಲನ್ನು ೧೦ ಮಿನಿಟ್ ಕಾಲ ಶುಚಿಗೊಳಿಸಲು ಕುಳಿತಿರಿ—ಅದರಂಥ ನೀರಸ ಕೆಲಸ ಅನಂತ ಬೋರಿಕೆ ಬೇರೆ ಯಾವುದೂ ಇರದು. ಬೋರಿಕೆಯ ವಿಶ್ರಾಂತಿಗಿಂತ ಪೆರೇಡು ಗ್ರೌಂಡಿನ ಹಾರಾಟದ ವೈವಿಧ್ಯವೇ ಲೇಸೆಂದು ಭೂಪಾಲರೆಲ್ಲರೂ ಬಗೆದರು. ಮರುದಿವಸದಿಂದ ಖಾಯಿಲಸ್ಥರ ಪಟಾಲಂ ತಾನಾಗಿಯೇ ಕರಗಿಹೋಯಿತು. ಈ ಶಿಕ್ಷಣ ಇವರಿಗೆ ತ್ರಾಸದಾಯಕವಾದದ್ದು ಏಕೆ ? ಪ್ರಾಯ, ೨೫ರಿಂದ ೩೦ರವರೆಗೆ ಇರುವ ಬಹುಸಂಖ್ಯಾತ ತರುಣರು ಇಂಥ ಆಲಸಿಗರಾದದ್ದೇಕೆ ? ಈ ಕುತೂಹಲಕರ ಪ್ರಶ್ನೆಗೆ ಉತ್ತರ ಅರಸಲು (ಇನ್ನೆರಡು ಕನ್ನಡ ಮಿತ್ರರೊಡನೆ) ನಾನು ತೊಡಗಿದೆ. ನನ್ನ ಸಂಶೋಧನೆ ಒಂದು ಹೊಸ ಸಂಗತಿಯನ್ನು ವ್ಯಕ್ತಪಡಿಸಿತು. ಬಹುಮಂದಿ ಬಹಿರಂಗವಾಗಿ ಕುಡುಕತನಕ್ಕೂ ವ್ಯಭಿಚಾರಕ್ಕೂ ಮಾರುಹೋಗಿದ್ದರು. ಇನ್ನು ಧೂಮಪಾನವೊಂದು ಫ್ಯಾಶನ್ನೇ ಆಗಿಹೋಗಿತ್ತು. ಯಾವುದೇ ಆರ್ಮಿ ಕೇಂದ್ರದಲ್ಲಿಯ ವೈದ್ಯಕೀಯ ವಿಭಾಗದಲ್ಲಿ ಲೈಂಗಿಕ

ಸಮಸ್ಯೆಗಳ (ವಿಶೇಷವಾಗಿ ವ್ಯಾಧಿಗಳ) ವಿಷಯ ನಿರಪೇಕ್ಷವಾಗಿ ವಿಚಾರವಿನಿಮಯ ಮಾಡಿದರೆ, ನಾವು ಕಣ್ಣುಮುಚ್ಚಿಕೊಂಡು ರಾಮರಾಜ್ಯದಲ್ಲಿದ್ದೇವೆ ಎಂದು ಸಮಾಧಾನ ತಳೆದಿರುವುದರ ಹಿಂದೆ ಅಡಗಿರುವ ಭೀಕರ ಮಾರೀಚ ಸತ್ಯ ದರ್ಶನವಾಗುತ್ತದೆ. ಇದೊಂದು ಮಾನವೀಯ ಪ್ರಶ್ನೆ, ಮನೋವೈಜ್ಞಾನಿಕ ಸಮಸ್ಯೆ. ಇದರ ಬಿಡಿಸಿಕೆ ಹೇಗೆಂಬುದು ಅಥವಾ ಸಾಧ್ಯವಾದೀತೇ ಎಂಬುದು ನನ್ನ ತಿಳಿವಳಿಕೆಯಲ್ಲಿಲ್ಲ. ಆದರೆ ಸಂಸಾರಿಗಳಾದ ಎನ್‌ಸಿಸಿ ಆಫಿಸರರು, ಕೇವಲ ಒಂದು ತಿಂಗಳ ಕಾಲ ಮಾತ್ರ ತಮ್ಮ ಮನೆಯವರಿಂದ ದೂರವಿರಬೇಕಾದವರು, ತಾವು ಬಂದಿದ್ದ ಉದ್ದೇಶ ಮರೆತು ಸಲ್ಲದ ದುರ್ವ್ಯಾಪಾರಗಳಿಗೆ ವ್ಯಸನಗಳನ್ನು ಬಲಿಕೊಟ್ಟಾಗ ಆಶ್ಚರ್ಯವೂ ನೋವೂ ಉಂಟಾಗುತ್ತವೆ.

ಆರ್ಮಿಯಲ್ಲಿ ದರ್ಜೆ ಪ್ರಜ್ಞೆ ಪ್ರಧಾನವೂ ಹೌದು ಅವಶ್ಯವೂ ಹೌದು. ಇದು ಕರ್ತವ್ಯ ನಿರ್ವಹಣೆಯ ಸೌಕರ್ಯಕ್ಕೋಸ್ಕರವೇ ವಿನಾ ವ್ಯಕ್ತಿಪ್ರತಿಷ್ಠೆಯ ಪ್ರದರ್ಶನಕ್ಕಲ್ಲ. ಇದನ್ನೇ ಅಧಿಕ ಪ್ರಮಾಣದಲ್ಲಿ—ಎಂದರೆ ಅವಧಾರಣೆ ಉಲ್ಟಾ ಆಗುವಂತೆ—ಪಾಲಿಸುವುದರಲ್ಲಿ ನಮ್ಮ ಸಹವರ್ತಿ ಆಫಿಸರರು ನಿಸ್ಸೀಮರು. ಮಧುಕೆರೆಯಲ್ಲಿ ಸೇರಿದ್ದ ಎನ್‌ಸಿಸಿ ಆಫಿಸರ ರಾಗಲೀ ಈಚೆಗೆ ಕೊಡಗಿನ ಎರಡು ಕ್ಯಾಂಪುಗಳಲ್ಲಿ ಒಂದುಗೂಡಿದ್ದ ಸೀನಿಯರ್ ಹಾಗೂ ಜೂನಿಯರ್ ಡಿವಿಶನ್ ಆಫಿಸರರಾಗಲೀ (ಇವರು ಹೈಸ್ಕೂಲುಗಳ ಅಧ್ಯಾಪಕರು) ಎಂದೂ ಶ್ರೇಷ್ಠ-ಕನಿಷ್ಠ ಹಿರಿ-ಕಿರಿ ಭಾವನೆಯಿಂದ ಬಾಧಿತರಾದದ್ದಿಲ್ಲ. ಒಂದು ಸಮಗ್ರ ಕಾರ್ಯವನ್ನು ನೆರವೇರಿಸುವ ದೃಷ್ಟಿಯಿಂದ ದರ್ಜೆಯ ಈ ಭೇದಗಳಿವೆ, ಪ್ರತಿಯೊಂದು ದರ್ಜೆಯೂ ಸಮಾನ ಪ್ರಾಮುಖ್ಯ ಉಳ್ಳದ್ದು ಎಂಬುದೇ ನಮ್ಮೆಲ್ಲರಲ್ಲೂ ಇದ್ದ ಭಾವನೆ; ಇದೇ ವೃತ್ತಿಗೌರವವೂ ಹೌದು. ಆದರೆ ಡೆಹರಾಡೂನಿನ ಎನ್‌ಸಿಸಿ ಕ್ಯಾಪ್ಟನ್ನುಗಳ ಜಬರ್ದ, ದೌಲೇನು! ಅವರ ದೃಷ್ಟಿಯಲ್ಲಿ ನಾವೆಲ್ಲರೂ ಬ್ಯಾರರುಗಳಿಗಿಂತಲೂ (ಬೂಟ್ ಪಾಲಿಷ್ ಮಾಡುವ ಸೇವಕರು) ಕೀಳು. ಕ್ಯಾಪ್ಟನ್ ಎಂದೂ ನಮ್ಮೊಡನೆ ಮನುಷ್ಯನಂತೆ ಮಾತಾಡಿದ್ದಿಲ್ಲ. ಆತನ ವರ್ತನೆ ಏನಿದ್ದರೂ ಪೆರೇಡ್ ಗ್ರೌಂಡಿನಲ್ಲಾಗಲೀ ಹೊರಗಾಗಲೀ —ಅದು ಅಧಿಕಾರಪೂರ್ವಕವೇ ಅನುಗ್ರಹದಾಯಕವೇ, ಹಲವಾರು ಬಾರಿ ನಿಗ್ರಹಶೀಲವೇ! ಇಂದಿನ ಎನ್‌ಸಿಸಿ ಆಫಿಸರರು ಇದನ್ನು ಓದುವಾಗ ಇದು ಸಾಧ್ಯವೇ ಎಂದು ಸಂದೇಹಿಸ ಬಹುದು. ನಮ್ಮ ದೇಶದಲ್ಲಿ ಎನ್‌ಸಿಸಿ ಪ್ರಾರಂಭವಾದದ್ದು ೧೯೪೮ರಲ್ಲಿ; ಮಂಗಳೂರಿ ನಂಥ ಸಾಮಾನ್ಯ ನಗರಗಳಿಗೆ ಇದರ ವ್ಯಾಪ್ತಿ ಹರಡಿದ್ದು ೧೯೫೨ರಲ್ಲಿ; ಮಡಿಕೇರಿ ಮುಂತಾದ ಕಿರಿಯ ಪಟ್ಟಣಗಳಿಗೆ ಎನ್‌ಸಿಸಿ ಹರಿದದ್ದು ೧೯೫೫ರಷ್ಟು ತಡವಾಗಿ. ಹೀಗಾಗಿ ಎನ್‌ಸಿಸಿಯ ಹೊಸತನ, ರಾಷ್ಟ್ರದಲ್ಲಿ ಸಮಗ್ರವಾಗಿ ಆರ್ಮಿಯನ್ನೂ ಅದರ ಕ್ರಮಗಳನ್ನೂ ಕುರಿತು ಇದ್ದ ಭಯ ಗೌರವ ಇವೆಲ್ಲವುಗಳ ಪರಿಣಾಮವಾಗಿ ಕಿರಿಯ ದರ್ಜೆಯ ನನ್ನಂಥ ಆಫಿಸರರಿಗೆ ಹಿರಿ ದರ್ಜೆಯ ಆಫಿಸರರ ವಿಚಾರದಲ್ಲಿ ಬಹಳವಾಗಿ ಅಂಜಿಕೆಯೇ ಇತ್ತು. ಅವರು ಅಂದದ್ದನ್ನು ಅನುಗ್ರಹವೆಂದೇ ಸ್ವೀಕರಿಸುವ ಮನೋಭಾವ ನಮ್ಮದು.

ಆದರೆ ನಮ್ಮ ಸೀನಿಯರರು ತಮ್ಮ ಮಟ್ಟವನ್ನು ಕಾಯ್ದಿಟ್ಟುಕೊಳ್ಳಲು ಸಮರ್ಥ ರಾಗಲಿಲ್ಲ. ಎರಡನೆಯ ವಾರದ ಮೊದಲ ದಿವಸ ಮಾಡಿದ ಪರೀಕ್ಷೆಗಳಲ್ಲಿ ಇವರ ಜಬರ್ದ ಬರಖಾಸ್ತಾಯಿತು. ಕವಾಯತಿ, ಶಸ್ತ್ರಕವಾಯತಿ, ಶಸ್ತ್ರಶಿಕ್ಷಣ ಮುಂತಾದ ಪ್ರಾಯೋಗಿಕ ಪಾಠಗಳಲ್ಲಿ ಇವರು ತೀರ ಸತ್ತ್ವಹೀನರಾಗಿದ್ದರು. ಅದಿರಲಿ, ಬರವಣಿಗೆಯ ಪರೀಕ್ಷೆ

ಗಳೆಲ್ಲೂ ಸೋತು ನಿರ್ವೀರ್ಯರಾದರು. ಮೇಜರ್ ಅನಂತಸಿಂಗರು ಎಲ್ಲ ಆಫಿಸರರಿಗೂ ಭುಜಕೀರ್ತಿಗಳನ್ನು ಕಳಚಿ ಖಾಲಿ ಆಫಿಸರ್ ಕ್ಯಾಡೆಟುಗಳಾಗಿ ಪೆರೇಡಿಗೆ ಬರಲು ಆಜ್ಞೆ ನೀಡಿದಾಗ ನಮ್ಮ ವರಿಷ್ಠ ಎನ್‌ಸಿಸಿ ಆಫಿಸರರ ಗರ್ವದ ಕೊನೆಯ ಗುತ್ತಿಯೂ ಕಳಚಿ ಹೋಯಿತು. ಅಂದಿನಿಂದ ನಾವೆಲ್ಲರೂ ಸಮಾನ ದರ್ಜೆಯವರು. ಪ್ರಾಯೋಗಿಕ ಹಾಗೂ ಬರವಣಿಗೆಯ ಪರೀಕ್ಷೆಗಳಲ್ಲಿ ಅಧಿಕ ಅಂಕ ಗಳಿಸಿ ಸರ್ವ ಸಮರ್ಥನೆನ್ನಿಸಿದವನೇ ನಮ್ಮ ನಾಯಕನಾಗಲು ಅರ್ಹತೆ ಪಡೆದ. ನನಗೆ ಹತ್ತು ಜನರ ಒಂದು ಸೆಕ್ಷನ್ನಿನ ನಾಯಕ ನಾಗುವ ಅರ್ಹತೆ ಬಂತು. ನಮ್ಮ ಇಡೀ ತಂಡದ ನಾಯಕನಾದದ್ದು ಮೈಸೂರು ರಾಜ್ಯದ ಸೋದರ ಆಫಿಸರ್ ಸೆಕೆಂಡ್ ಲೆಫ್ಟಿನೆಂಟ್ (ಈಗ ಮೇಜರ್, ೧೯೭೧) ಟಿ ರಂಗನಾಥ ರಾವ್. ದರ್ಜೆಯೂ ದಕ್ಷತೆಯೂ ವಿಲೋಮಾನುಪಾತದಲ್ಲಿವೆ (ಸಾಮಾನ್ಯವಾಗಿ) ಎಂದು ಅಂದು ಕಂಡುಕೊಂಡೆ.

ಆ ದಿನಗಳಲ್ಲಿ ಒಂದು ದಿವಸ ನಮ್ಮನ್ನು ಸಮೀಪದ ಮಿಲಿಟರಿ ಕಾಲೇಜಿಗೆ ಕರೆದೊಯ್ದರು. ಇದು ಅಖಿಲ ಭಾರತೀಯ ಏಕೈಕ ಸಂಸ್ಥೆ. ಮಿಲಿಟರಿ ಆಫಿಸರರಿಗೆ ಉನ್ನತ ಶಿಕ್ಷಣ ನೀಡುವ ಕೇಂದ್ರ. ಜನರಲ್ ತಿಮ್ಮಯ್ಯನವರಂಥ ಪವಾಡ ಪುರುಷರು ಒಂದು ಕಾಲದಲ್ಲಿ ಈ ಮಿಲಿಟರಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅಲ್ಲಿಯ ವಿಸ್ತಾರ ವಿಶಾಲ ಪೆರೇಡ್ ಚೌಕದಲ್ಲಿ ಇಪ್ಪತ್ತರ ಹರೆಯದ ಚಲು ಸುಟಿ ತರುಣರ ಭಾರೀ ಪೆರೇಡ್ ನಡೆಯುತ್ತಿತ್ತು. ಅದನ್ನು ವೀಕ್ಷಿಸಲು ನಮ್ಮನ್ನು ಅಲ್ಲಿಯೇ ಬದಿಯ ಗ್ಯಾಲರಿಯಲ್ಲಿ ಕೂರಿಸಿದ್ದರು. ಆ ಮಿಂಚಿನ ಮರಿಗಳನ್ನು ನಿಯಂತ್ರಿಸುತ್ತ ಗರ್ಜಿಸುತ್ತ ಕುದುರೆ ಮೇಲೆ ಸವಾರಿ ಮಾಡುತ್ತ ರಾಜಠೀವಿಯಿಂದ ಮೆರೆಯುತ್ತಿದ್ದ ಈ ಸುಬೆದಾರ್ ಯಾರು ? ಈತನ ಸ್ವರ ಪರಿಚಯವಿದೆಯಲ್ಲ ಅಂದುಕೊಳ್ಳುತ್ತಿದ್ದ ಹಾಗೆಯೇ ಆತನ ಮುಖವೂ ಕಂಡಿತು—ಸುಬೆದಾರ್ ಅಬ್ದುಲ್ ಖಾದರ್ ! ಮಿಂಚಿನ ಹೊಳೆ ತುಳುಕಿತು, ಡೆಹರಾಡೂನ್ ಎಂಆರ್‌ಸಿ ಆಯಿತು.

ಈ ಮಹನೀಯನಿಂದಲೇ ನಾನು ಟ್ರೈನಿಂಗ್ ಪಡೆದದ್ದು ಎಂದು ಸೋದರ ಆಫಿಸರರೊಡನೆ ಜಂಬ ಕೊಚ್ಚಿದ್ದೇ ಕೊಚ್ಚಿದ್ದು. ಆದರೆ ಉತ್ತರ ಭಾರತದ ಆ ಮಿತ್ರರು ಇವನ್ನು ಒಪ್ಪಲು ಸಿದ್ಧರಿರಲಿಲ್ಲ. ಆತ ಡೋಗ್ರಾರೆಜಿಮೆಂಟಿನವನು. ಮದರಾಸು ರೆಜಿಮೆಂಟಿನವನಾಗಲು ಸಾಧ್ಯವೇ ಇಲ್ಲ ಎಂದು ಖಚಿತವಾಗಿ ನನ್ನ ವಾದವನ್ನು ಖಂಡಿಸಿದ್ದು ಮಾತ್ರವಲ್ಲ, ತಾವು ಹೇಳುತ್ತಿರುವುದು ಅಕ್ಷರಶಃ ಸತ್ಯ ಎಂದು ಪರಸ್ಪರ ಸಾಕ್ಷಿ ಅನುಮೋದನೆಗಳಿಂದ ಸಾಧಿಸಿದರು. ಆ ಆರ್ಭಟೆಯಾಗಲೀ ಅವಧಾರಣೆಯಾಗಲೀ ಬಹುಮತವಾಗಲೀ ನನ್ನ ಹೇಳಿಕೆಯನ್ನು ಸುಳ್ಳಾಗಿಸವು ಎಂದು ನಾನೆಷ್ಟು ಹೇಳಿದರೂ ಅದಕ್ಕೆ ಬೆಲೆ ಬರಲಿಲ್ಲ.

ಅಲ್ಲಿಯ ಪೆರೇಡ್ ಮುಗಿದ ತರುವಾಯ ನಮಗೆ ಮಿಲಿಟರಿ ಕಾಲೇಜನ್ನು ತೋರಿಸಲು ಕರೆದುಕೊಂಡು ಹೋದರು. ಇಲ್ಲೆಲ್ಲ ಒಟ್ಟಾಗಿ ಶಿಸ್ತಿನಿಂದ ನಾವು ಹೋಗಬೇಕಾಗಿತ್ತು. ತಿರುಗಾಟದ ಕೊನೆಯಲ್ಲಿ ಭಾರೀ ಮೆಸ್ಸಿಗೆ ಟೀ ಸೇವನೆಗೋಸ್ಕರ ನಮ್ಮನ್ನು ಆಹ್ವಾನಿಸಿದರು. ಅದರೊಳಗೆ ಪ್ರವೇಶಿಸಿದೆನೋ ಇಲ್ಲವೋ ನನಗೆ ಅಪೂರ್ವವಾದ ಸ್ವಾಗತ ಲಭಿಸಿತು "Good evening, Sir ! Do you recognize me ?" ಸ್ವತಃ ಸುಬೆದಾರ್ ಅಬ್ದುಲ್ ಖಾದರರು ನನ್ನನ್ನು ವಂದಿಸಿ ಸ್ವಾಗತಿಸಿದ್ದು ಮಾತ್ರವಲ್ಲ (ದರ್ಜೆಯಲ್ಲಿ ನಾನು

ಹಿರಿಯಣ್ಣನಷ್ಟೆ) ಅಲ್ಲಿ ಇದ್ದ ಇತರ ಮಿಲಿಟರಿ ಅಧಿಕಾರಿಗಳಿಗೆಲ್ಲ ನನ್ನ ಪರಿಚಯ ಮಾಡಿದರು "My best Officer-cadet Lieutenant Narayana Rao Saab" ಎಂದು ಇತರರಿಗೆ ಹೇಳುವಾಗ ನಾನು ಅಳುಕು ನಾಚಿಕೆಗಳಿಂದ ಕುಸಿದುಹೋದೆ. ಸ್ನೇಹಿತರ ನಡುವೆ ನನ್ನ ಪಾದ ಗೆದ್ದುದರಿಂದ ಮೇಲಾಗಿ ಖಾದರರು ನನ್ನನ್ನು ಹೆಸರು ಹೇಳಿ ಹೊಗಳಿ ಗುರುತಿಸಿದುದರಿಂದ ನನ್ನ ವರ್ಚಸ್ಸು ಏರಿತು. ನಮ್ಮ ಶಿಕ್ಷಣದ ಕೊನೆಯ ವಾರದಲ್ಲಿ ನಮ್ಮ ಸೆರೆಮೋನಿಯಲ್ ಪೆರೇಡನ್ನು (ಉತ್ಸವ ವಿಧಿ) ದಿಗ್ದರ್ಶಿಸಲು ಸ್ವತಃ ಖಾದರರೇ ಆಗಮಿಸಿದ್ದರು.

ಒಂದು ಬಾವುಟ ಒಂದು ರಾಷ್ಟ್ರ

ಸುದೀರ್ಘಕಾಲ ಉತ್ತರ ಭಾರತದಲ್ಲಿ ನಾನು ಉಳಿದದ್ದು ಅದೇ ಮೊದಲ ಬಾರಿ. ಸ್ವಾತಂತ್ರ್ಯಸಂಗ್ರಾಮದ ದಿನಗಳಲ್ಲಿ ಝಂಡಾ ಊಂಛಾ ರಹೇ ಹಮಾರಾ ಗೀತೆ ಕೇಳಿದಾಗ ವಿಂಧ್ಯ ಹಿಮಾಚಲ ಯಮುನಾ ಗಂಗಾ ಎಂಬ ನುಡಿ ಆಲಿಸಿದಾಗ ಅಸ್ತ್ಯುತ್ತರಸ್ಯಾಂ ದಿಶಿದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ ಶ್ಲೋಕ ಓದಿದಾಗ ಶಂಕರಾಚಾರ್ಯರ ಭಾರತ ಯಾತ್ರೆಯ ಭಾವೈಕ್ಯದ ಸಾಹಸ ತಿಳಿದಾಗ ನಮ್ಮ ದೇಶದ ನಮ್ಮ ಸಂಸ್ಕೃತಿಯ ಹಿರಿಮೆ, ಐಕ್ಯೈಕತೆ, ಅಖಂಡತೆಗಳನ್ನು ಕುರಿತು ಹೆಮ್ಮೆ ತಾಳಿದ್ದೇನೆ. ಈ ವೇದ ಭೂಮಿ ಆರ್ಯಾವರ್ತವೆಂದು ಖ್ಯಾತನಾಮವಾಗಿರುವ ಹಿಮಾಲಯದ ತಪ್ಪಲಿನಲ್ಲಿ ಅಖಿಲ ಭಾರತೀಯ ಶಿಬಿರದಲ್ಲಿ ಭಾಗವಹಿಸಲು ಹೋಗುತ್ತಿದ್ದೇನೆಂದಾಗ ನನಗೆ ಆದ ಸಂತೋಷ ಅವರ್ಣನೀಯ.

ಡೆಹರಾಡೂನಿನ ಕ್ಯಾಂಪಿನ ಅಧಿಕಾರಿಗಳು ಅಖಿಲಭಾರತೀಯ ದೃಷ್ಟಿಯನ್ನೇ ಇಟ್ಟು ಶಿಕ್ಷಣ ಏರ್ಪಡಿಸಿದ್ದರು. ದಕ್ಷಿಣದವರಾದ ನಮಗೆ ಹಿಂದಿಯಲ್ಲಿ ಮಿಲಿಟರಿ ಪಾಠಗಳನ್ನು ಬೋಧಿಸಿದರೆ ತಿಳಿಯಲಾರದು ಕಷ್ಟವಾದೀತು ಎಂದು ಮನಗಂಡು ಇಂಗ್ಲಿಷ್ ಮತ್ತು ತಮಿಳು ಭಾಷೆಗಳನ್ನು ಬಲ್ಲ (ಉತ್ತರ ಭಾರತದಲ್ಲಿ ಅಂದು ಪ್ರಚಲಿತವಿದ್ದ ಭಾವನೆ—ದಕ್ಷಿಣ ಭಾರತವೆಂದರೆ ಮದರಾಸು; ದಕ್ಷಿಣ ಭಾರತದ ಭಾಷೆಯೆಂದರೆ ತಮಿಳು) ಶಿಕ್ಷಕರನ್ನು ನೇಮಿಸಿದ್ದರು. ಆದರೆ ಉತ್ತರ ಭಾರತದಿಂದ ಬಂದಿದ್ದ ನಮ್ಮ ಸೋದರ ಆಫಿಸರರು ಈ ಏರ್ಪಾಡನ್ನು ಮೆಚ್ಚಲಿಲ್ಲ. ಬರಾಕುಗಳಲ್ಲಿ ಮಾತಾಡುವಾಗ ಸದಾ ನಮಗೆ ಟಾಂಟುಗಳನ್ನು ಕೊಡುವುದೇ ಅವರ ಹಾಬಿ ಆಗಿತ್ತು. "ಸ್ವತಂತ್ರ ಭಾರತದ ನಮಗೆ ಇನ್ನೂ ಇಂಗ್ಲಿಷ್ ವ್ಯಾಮೋಹ ಅದೇಕೆ? ರಾಷ್ಟ್ರಭಾಷೆಯಾದ ಹಿಂದಿಯನ್ನು ನಾವೇಕೆ ಕಲಿಯಬಾರದು?" ಇದು ಅವರ ವಾಕ್ಸರಣಿ. "ಜ್ಞಾನವನ್ನು ತಿಳಿಯುವುದು ಮುಖ್ಯ. ಅದರ ವಾಹನವಾದ ಭಾಷೆಯ ವಿಷಯ ಜಗಳವೇಕೆ?" ಎಂದು ವಾದಿಸಿದರೆ, "ಹಾಗೆ ವಾದ ಮಾಡುವುದಾದರೆ ಹಿಂದಿಯೇ ಏಕಾಗಬೇಕು? ನಮ್ಮ ಮಾತೃಭಾಷೆಗೆ ಏನು ಕೊರತೆ ಆಗಿದೆ?" ಎಂದು ಕೇಳಿದರೆ ನಮಗೆ ಅವಹೇಳನವಾಗುವಂತೆ ಅವರೆಲ್ಲರೂ ಒಂದಾಗಿ ನಮ್ಮ ವಾದವನ್ನು ಖಂಡಿಸುತ್ತಿದ್ದರು. "ಏಯ್ ಮದ್ರಾಸೀ" ಎಂದು ಅವರು ತಿರಸ್ಕಾರಪೂರಿತವಾಗಿ ವ್ಯಂಗ್ಯವಾಗಿ ನಮ್ಮನ್ನು ಕರೆಯುವಾಗ ನಮ್ಮ ಮಾತೃಭಾಷೆ ಒಂದು ಭಾಷೆಯೇ ಅಲ್ಲ (ಕನ್ನಡ ನಾಡು ಎಂದರೆ ಅದೇನು ಕೆನಡಾದಲ್ಲಿದೆಯೇ ಕನ್ನಡ

ಭಾಷೆ ಕೆನಡಾದ ಭಾಷೆಯೋ ಎನ್ನುವಷ್ಟು ಭೂಗೋಳಜ್ಞಾನ ಮತ್ತು ದೇಶಪ್ರೇಮ ಈ ಮಿತ್ರರದು) ಎಂದು ಅವಮಾನಿಸುವಾಗ ತಾಳಿಕೊಂಡಿರುವುದು ಎಂಥ ಬೆಣ್ಣೆ ಮುದ್ದೆಗೂ ಸಾಧ್ಯವಿಲ್ಲ. ಇಂಥಲ್ಲೆಲ್ಲ ಜಗಳ ಆಡಲು ನನಗೆ ತಿಳಿಯದು. ಅಪಮಾನ ಸೈರಿಸಲು ಆಗದು. ಆದ್ದರಿಂದ ಅವರ ಸಂಗ ತೊರೆದು ಕಹಿಯಾಗಿಯೇ ಇರುತ್ತಿದ್ದೆ. ಒಂದು ರಾಷ್ಟ್ರ ಒಂದು ಬಾವುಟ—ಹೌದು. ಆದರೆ ಈ ಭಾವನೆ ಪರಸ್ಪರವಾಗಿರಬೇಕು, ಏಕಪಕ್ಷೀಯವಾಗಿರಬಾರದು. ಇಲ್ಲವಾದರೆ ಪರದೇಶಿ ಹೋದ ಸ್ವದೇಶಿ ಬಂದ—ಬಟ್ಟೆ ಬದಲಾಗಿರಬಹುದು, ಚರ್ಮದ ಬಣ್ಣ ಬದಲಾಗಿರಬಹುದು, ಆಡುವ ಭಾಷೆ ಬದಲಾಗಿರಬಹುದು ಆದರೆ ಮನಸ್ಸಿನ ಕಪ್ಪು ಬಿಳುಪಾಗಿಲ್ಲ—ಎಂಬ ಪರಿಸ್ಥಿತಿ ತಲೆದೋರುವುದು. ಡೆಹರಾಡೂನಿನಿಂದ ಹಿಂತಿರುಗುವಾಗ ಮಿಡಿಯುತ್ತಿದ್ದ ಪ್ರಶ್ನೆ—ಶೀಲ, ಸಹವಾಸಿತ್ವ ಮುಂತಾದ ಗುಣಗಳ ವರ್ಧನೆ ಎನ್‌ಸಿಸಿ ಉದ್ದೇಶಗಳಲ್ಲಿ ಒಂದಂಶ. ಈ ಕ್ಯಾಂಪು ಅದನ್ನು ಸಾಧಿಸುವ ದಿಶೆಯಲ್ಲಿ ಯಶಸ್ಸು ಗಳಿಸಿದೆಯೇ ? ನನ್ನ ಮನಸ್ಸು ಗೊಂದಲಸ್ಥಿತಿಯಲ್ಲಿತ್ತು.

ಜೈಸಲಾಮುಗಳ ಆವರಣದಲ್ಲಿ ಅಧಿಕಾರದ ಅಮಲು

ಯಥಾಪ್ರಕಾರ ಅಪರಾಹ್ಣದ ಕಾರ್ಮೋಡ, ಜಡಿಮಳೆ ಮುಂಗಾರಿನ ಮುನ್ಸೂಚಕಗಳಾದುವು. ಲಾರಿಗಟ್ಟಳೆ ಮಾಲುಗಳನ್ನು ತರಿಸುವುದು, ಅವನ್ನು ಓರಣವಾಗಿ ಪೇರುವುದು, ಮಾರಾಟದ ಬೆಲೆ ನಿಗದಿ ಮಾಡುವುದು. ಲೆಕ್ಕಪತ್ರಗಳ ಕಡೆ ಗಮನ ಹರಿಸುವುದು ಇವೇ ಮೊದಲಾದ ಕ್ರಿಯೆಗಳು ಕಾಲೇಜಿನ (ನಾನು ಗೌರವ ಕಾರ್ಯದರ್ಶಿ ಆಗಿದ್ದ. ಸಂಬಳದ ಸಿಬ್ಬಂದಿ ಇರದಿದ್ದ) ಸಹಕಾರ ಸಂಘದ ದೈನಂದಿನ ಚಟುವಟಿಕೆಗಳಾದುವು. ಜೂನ್ ತಿರುಗಿತು. ಕಾಲೇಜು ಕ್ಲಾಸುಗಳು ಆರಂಭವಾದುವು. ಎನ್‌ಸಿಸಿ ಪೆರೇಡುಗಳು ಮಾಮೂಲಿನಂತೆ ದಿವಸಗಳಿಗೆ ಹೊಸ ಹುರುಪು ನೀಡಿದುವು. ದೊರೈರಾಜರು ಎರಡು ತಿಂಗಳ ವಾರ್ಷಿಕ ರಜೆ ನಿಮಿತ್ತ ಊರಿಗೆ ಹೋಗಿದ್ದುದರಿಂದ ನಾನೇ ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿಯ ತಾತ್ಕಾಲಿಕ ಆಫಿಸರ್ ಕಮಾಂಡಿಂಗ್ ಆಗಿ ನೇಮಕಗೊಂಡಿದ್ದೆ. ಎಲ್ಲವೂ ವ್ಯವಸ್ಥಿತವಾಗಿ ನಡೆದುಕೊಂಡು ಹೋಗುತ್ತಿದ್ದುದರಿಂದ ಈ ಒಂದು ಹೊಣೆ ನನಗೆ ಹೊರೆ ಆಗಲಿಲ್ಲ. ಕಾಲೇಜಿನ ಸಹೋದ್ಯೋಗಿಗಳ ದೃಷ್ಟಿಯಲ್ಲಿ ಊರವರ ದೃಷ್ಟಿಯಲ್ಲಿ ನಾನೊಬ್ಬ ಬಲು ಗಣ್ಯ ವ್ಯಕ್ತಿಯಾಗಿದ್ದೇನೆಂಬುದು ಅವರ ವರ್ತನೆಗಳಿಂದ ನನಗೆ ತಿಳಿಯಿತು. ನನ್ನ ಮಟ್ಟಿಗೆ ಅಂಥ ಯಾವ ಭ್ರಮೆಯೂ ಬರಲಿಲ್ಲ—ಹೊಣೆ ಚೆನ್ನಾಗಿ ನಿರ್ವಹಣೆ ಆದರೆ ಅದಕ್ಕಿಂತ ಹೆಚ್ಚಿನ ಸಂತೃಪ್ತಿ ಇಲ್ಲ, ಇದೇ ನನ್ನ ದೃಷ್ಟಿ : ಆ ದಾರಿಯಲ್ಲಿ ಲಭಿಸುವ ಮರ್ಯಾದೆ ಖ್ಯಾತಿ ಎಲ್ಲವೂ ಆ ಅಧಿಕಾರಕ್ಕೆ. ಅದನ್ನು ನಿರ್ವಹಿಸುತ್ತಿರುವ ವ್ಯಕ್ತಿ ನಿಮಿತ್ತ ಮಾತ್ರ ಎಂಬುದು ನನ್ನ ಅಭಿಪ್ರಾಯ. ನನ್ನ ಈ ನಿಲುಮೆಯನ್ನು ಪರೀಕ್ಷಿಸಲೋ ಎನ್ನುವಂತೆ ಒಂದು ಸನ್ನಿವೇಶ ಒದಗಿ ಬಂತು.

ಆಗಸ್ಟ್ ೧೫ರ ಸ್ವಾತಂತ್ರ್ಯೋತ್ಸವವನ್ನು ಕೊಡಗು ಸರಕಾರ ಬಲು ವೈಭವದಿಂದ ನಿರ್ವಹಿಸಬೇಕೆಂದು ನಿರ್ಧರಿಸಿ ತದಂಗವಾಗಿ ಪೊಲೀಸ್, ಎನ್‌ಸಿಸಿ ಹಾಗೂ ಎಸಿಸಿ ಪಡೆಗಳ ಸಾಮೂಹಿಕ ಕವಾಯತಿ ನಡೆಯಬೇಕು. ರಾಷ್ಟ್ರಧ್ವಜವನ್ನು ಚೀಫ್ ಕಮಿಷನರರು ಮಂತ್ರಿಗಳ ಹಾಗೂ ಜನಸ್ತೋಮದ ಸಮಕ್ಷಮದಲ್ಲಿ ಅನಾವರಣ ಮಾಡಿ ಉತ್ಸವವಿಧಿ

ಯನ್ನು ವೀಕ್ಷಿಸಿ ಜನತೆಗೆ ಭಾಷಣ ಮಾಡಬೇಕು ಎಂಬ ಕಾರ್ಯಕ್ರಮವನ್ನು ರೂಪಿಸಿತು. ಈ ಉತ್ಸವ ಕವಾಯತಿಯ ಪ್ರಮುಖ ಹೊಣೆಯನ್ನು ರಾಜ್ಯದ ಪೊಲೀಸ್ ಸೂಪರಿಂಟೆಂಡೆಂಟರವರಿಗೆ ವಹಿಸಿ ಎನ್‌ಸಿಸಿ ಕಮಾಂಡಿಂಗ್ ಆಫಿಸರರು ಅವರೊಡನೆ ಸಹಕರಿಸಬೇಕೆಂದು ಪ್ರಾರ್ಥನೆ ಸಲ್ಲಿಸಿತು. ಸೂಪರಿಂಟೆಂಡೆಂಟರೂ ನಾನೂ ಭೇಟಿ ಮಾಡಿ ವಿವರಗಳನ್ನು ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದೆವು. ಮಡಿಕೇರಿಯ ಕೋಟೆ ಆವರಣದಲ್ಲಿ ನಡೆಯುವ ಉತ್ಸವದಲ್ಲಿ ಕಾಲೇಜಿನ ಸೀನಿಯರ್ ಡಿವಿಶನ್ ಕ್ಯಾಡೆಟುಗಳ ಶಸ್ತ್ರಸಹಿತ ಮೂರು ಪ್ಲೆಟೂನುಗಳು ಭಾಗವಹಿಸಬೇಕು ಎಂಬುದು ಇದರ ಒಂದು ಅಂಶ. ಕಾಲೇಜಿನಿಂದ ಕೋಟೆಗೆ ಸುಮಾರು ೨ ಮೈಲಿಗಳ ದೂರವಿರುವುದರಿಂದಲೂ ಜಡಿಮಳೆಯನ್ನು ಎದುರಿಸಿ ಪ್ರತಿಯೊಂದು ಸಾಯಂಕಾಲದ ಅಭ್ಯಾಸದ ಪೆರೇಡಿಗೂ (ರಿಹರ್ಸಲ್) ರೈಫಲುಗಳನ್ನು ನಮ್ಮ ಹುಡುಗರಿಂದ ಹೊರಿಸಿಕೊಂಡು ಹೋಗಿ ಪೆರೇಡ್ ಮುಗಿದ ಅನಂತರ ಹಿಂದೆ ಹೊರಿಸಿಕೊಂಡು ಸಾಗುವುದು ಕಾಲಹರಣ ಹಾಗೂ ಶ್ರಮದಾಯಕ ಆದದ್ದರಿಂದಲೂ ಈ ರೈಫಲುಗಳನ್ನು ತಾತ್ಕಾಲಿಕವಾಗಿ ಕೋಟೆಯ ಸಮೀಪದ ಪೊಲೀಸ್ ಸ್ಟೇಶನ್ನಿನಲ್ಲಿಯೇ ಇಡಲು ಅನುಮಾಡಿ ಕೊಡಬೇಕು ಎಂದು ನಾನು ಸೂಪರಿಂಟೆಂಡೆಂಟರನ್ನು ಕೇಳಿಕೊಂಡೆ. ಅಂದು ಎನ್‌ಸಿಸಿಗೆ ೩-ಟನ್ ಲಾರಿಯ ಸೌಕರ್ಯವಿರಲಿಲ್ಲ; ಇದ್ದ ಒಂದು ೧೫-CWT ಪುಟ್ಟ ಟ್ರಕ್ ಎಷ್ಟೆಲ್ಲ ಕೆಲಸ ಮಾಡೀತು? ಆಗಸ್ಟ್ ೧೨ರ ಸಂಜೆ ಮೊದಲಿನ ಅಭ್ಯಾಸ ಪೆರೇಡ್ ಮುಗಿಯಿತು. ೬-೩೦ ಗಂಟೆಯ ಹೊತ್ತಿಗೆ ಕ್ಯಾಡೆಟುಗಳ ಸಮೇತ ಬಾಳಿಗರೂ ಕೃಷ್ಣಯ್ಯನವರೂ ನಾನೂ ಪೊಲೀಸ್ ಠಾಣ್ಯಕ್ಕೆ ಹೋದೆವು. ಪೆರೇಡ್ ಗ್ರೌಂಡಿನಲ್ಲಿ ಮಾತ್ರವಲ್ಲ. ಎಲ್ಲ ಕಡೆಗಳಲ್ಲಿಯೂ ನಾವು ನಮ್ಮ ಕ್ಯಾಡೆಟುಗಳ ಜೊತೆಯಲ್ಲಿಯೇ ಇದ್ದು ಅವರ ಯೋಗಕ್ಷೇಮ ನೋಡಿಕೊಳ್ಳಬೇಕು, ಆಡಳಿತೆಯ ಸಮಸ್ಯೆಗಳನ್ನು ಆಗಿಂದಾಗಲೇ ಬಗೆಹರಿಸಬೇಕು—ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಎಂಬುದನ್ನು ನಾವು ಮೂವರೂ ನಂಬಿ ಸದಾ ಪಾಲಿಸುತ್ತಿದ್ದವರು. ರೈಫಲ್ಲುಗಳನ್ನು ಠಾಣ್ಯದ ಒಳಗೆ ಪೇರಿಸಿ ಹುಡುಗರು ಮನೆಗಳಿಗೆ ಹೋದರು. ನಾನು ಸಹೋದ್ಯೋಗಿಗಳೊಡನೆ ಠಾಣ್ಯದ ಎದುರು ಅದರ ಆವರಣದಿಂದ ಹೊರಗೆ ರಸ್ತೆಯ ಅಂಚಿನಲ್ಲಿ ನಿಂತುಕೊಂಡು ಪೆರೇಡಿಗೆ ಸಂಬಂಧಿಸಿದ ವಿಷಯ ಮಾತಾಡುತ್ತಿದ್ದೆ. ನನ್ನ ಬೆನ್ನು ಠಾಣ್ಯದ ಜಗಲಿ ಕಡೆಗಿತ್ತು. ಜಗಲಿಯಿಂದ ಚಪ್ಪಾಳೆ ಸದ್ದು ಕೇಳಿಸಿತು. ಅಕಸ್ಮಾತ್ತಾಗಿ ಬಂದ ಈ ಸದ್ದಿನಿಂದ ನಾನು ಸಹಜವಾಗಿಯೇ ಆ ಕಡೆಗೆ ತಿರುಗಿದೆ. ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ನನ್ನೆಡೆಗೆ ಪುನಃ ಚಪ್ಪಾಳೆ ತಟ್ಟಿ ತನ್ನೆಡೆಗೆ ಬರುವಂತೆ ಕೈಸನ್ನೆ ಮಾಡಿದ. ಅವನ ಈ ಹೀನವರ್ತನೆಗೆ ಉದಾಸೀನವೇ ಮದ್ದೆಂದು ನಾನು ಮತ್ತೊಮ್ಮೆ ಆ ಕಡೆಗೆ ತಿರುಗಿ ನೋಡಲಿಲ್ಲ.

"ಏ ನಾರಾಯಣ್! ಕಂ ಹಿಯರ್!" ಎಂದು ಆಜ್ಞೆ ಮಾಡಿದ ಆ ಸಬ್‌ಇನ್‌ಸ್ಪೆಕ್ಟರ್.

"ಅದು ನನ್ನ ಹೆಸರಲ್ಲ. ನೀವು ವಿನಯವಂತರಾಗಿ ವರ್ತಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ" ಎಂದು ಮೃದುವಾಗಿ ನುಡಿದೆ.

"I know you by that name" ಎಂದ ಇನ್ನಷ್ಟು ಅಹಂಕಾರದಿಂದ.

"ಅಲ್ಲ ಅಲ್ಲ ಅಲ್ಲ. ನಾನು ಜಿ. ಟಿ. ನಾರಾಯಣರಾವ್. ನಿಮಗೆ ನನ್ನ ಹೆಸರನ್ನು ಮೊಟಕು ಮಾಡಲು ಅಧಿಕಾರವಿಲ್ಲ."

"If that is not your name you get out" ಎನ್ನಬೇಕೇ ! ಕೆಂಪಾಗಿ ಅವನು ಠಾಣ್ಯದೊಳಗೆ ಪ್ರವೇಶಿಸುತ್ತಿದ್ದಂತೆ "ಈ ಪಟ್ಟುಕುಟ್ಟಿಯ ದವಲತ್ತು..." ಎಂದು ಕೂಗಿದ್ದು ಕೇಳಿಸಿತು. ಒಬ್ಬ ಬ್ರಾಹ್ಮಣರ ಹುಡುಗನನ್ನು ನಿಕೃಷ್ಟವಾಗಿ ಹೀನಾಯವಾಗಿ ಸಂಬೋಧಿಸುವುದು ಪಟ್ಟು ಕುಟ್ಟಿ ಎಂದು ! ನನ್ನ ಹುಟ್ಟು ಏನೇ ಇದ್ದರೂ (ಅದರ ಮೇಲೆ ನನಗೆ ಹತೋಟಿ ಇಲ್ಲವಷ್ಟೆ ?) ಈ ಸಂದರ್ಭದಲ್ಲಿ ವಿನಾ ಕಾರಣ ಇಂಥ ಅವಾಚ್ಯ ನಿಂದನೆಗೆ ಸಾರ್ವಜನಿಕವಾಗಿ ಈಡಾಗಲು ಕಾರಣವೇನೆಂದು ನನಗೆ ತಿಳಿಯಲಿಲ್ಲ. ಆ ಸಬ್ ಇನ್‌ಸ್ಪೆಕ್ಟರ್ ನನಗೆ ಮೊದಲೇ ತಿಳಿದವನಲ್ಲ. ನನ್ನ ಅಧಿಕೃತ ವ್ಯವಹಾರ ಏನಿದ್ದರೂ ಅದು ಸಮಾನ ದರ್ಜೆಯ (ಆತನ ಮೇಲಧಿಕಾರಿಯಾದ) ಸೂಪರಿಂಟೆಂಡೆಂಟರವರೊಡನೆ. ಇವನೇಕೆ ಹೀಗೆ ಎಗರಾಡಿದ ? ಮರುದಿವಸ ಮುಂಜಾನೆ ಮಾಡಿದ ಮೊದಲ ಕೆಲಸ ಇಡೀ ಘಟನೆಯ ಯಥಾವತ್ತು ವರದಿ ತಯಾರಿಕೆ. ಒಂದನ್ನು ಸೂಪರಿಂಟೆಂಡೆಂಟರಿಗೆ ಎನ್‌ಸಿಸಿ ಮೂಲಕವೂ ಇನ್ನೊಂದನ್ನು ಸರಕಾರಕ್ಕೆ ಕಾಲೇಜು ಪ್ರಿನ್ಸಿಪಾಲರ ಮೂಲಕವೂ ಕಳಿಸಿದೆ. ಪ್ರಿನ್ಸಿಪಾಲ್ ರಾಘವ ಬಾಳಿಗರು ಸಾತ್ತ್ವಿಕ ರೋಷದಿಂದ ಕುದ್ದರು. ನಾನು ಸುಮ್ಮನೆ ಮರಳಿದುದನ್ನು ಕೇಳಿ ಅವರಿಗೆ ನನ್ನ ಮೇಲೆಯೂ ಸಿಟ್ಟು ಬಂದಿತು. ನಾನಿಷ್ಟೇ ಹೇಳಿದೆ "ವೈಯಕ್ತಿಕವಾಗಿ ನನಗೆ ಏನು ತೂಕವಿದೆಯೋ ಇಲ್ಲವೋ ತಿಳಿಯದು. ಆದರೆ ನಾನಾಗ ಮಹತ್ತರವಾದ ಹೊಣೆ ಹೊತ್ತ ಒಬ್ಬ ಗಣ್ಯನಾಗಿದ್ದೆ. ದಾರಿಹೋಕ ಪೋಲಿ ನನ್ನೆದುರು ದುರ್ವರ್ತನೆ ಎಸಗಿದರೆ ಅವನಿಗೆ ನಾನು ಬೇರೆ ಏನು ಮಾಡಬಲ್ಲೆ ?"

ಮುಂದೆ ನಡೆದ ವಿಚಾರಣೆಯಲ್ಲಿ ಆ ಸಬ್‌ಇನ್‌ಸ್ಪೆಕ್ಟರನಿಗೆ ಸರಿಯಾದ ಶಾಸ್ತಿ ಆಯಿತು. ನನಗೆ ಆತ ಬರವಣಿಗೆಯಲ್ಲಿ ಅನಿರ್ಬಂಧಿತ ಕ್ಷಮಾಪತ್ರ ಕೊಟ್ಟ. ಸರಕಾರ ಆತನ ಜಾತಕ ಪತ್ರದಲ್ಲಿ ಕಪ್ಪು ಗುರುತು ಮಾಡಿತು. ಇಂದಿಗೂ ನನಗೆ ಅನ್ನಿಸುತ್ತದೆ—ಆತ ಒಂದೋ ಹುಚ್ಚನಾಗಿರಬೇಕು ಅಥವಾ ಅಮಲೇರಿದವನಾಗಿರಬೇಕು. ಇಲ್ಲವಾದರೆ ಕಾಲು ಕೆರೆದುಕೊಂಡು ಬಂದು ಆ ರೀತಿ ಜಗಳ ಆಡುವ ಆವಶ್ಯಕತೆ ಖಂಡಿತ ಇರಲಿಲ್ಲ. ಜೈ ಸಲಾಮುಗಳ ಆವರಣದಲ್ಲಿ ಅಧಿಕಾರದ ಅಮಲು ಮಾಡಿಸದ ಅವಾಂತರವಿಲ್ಲ.

ಡೊರೈರಾಜರಿಗೆ ನಮನ !

ನನ್ನ ಅಧಿಕಾರಾವಧಿ ಇನ್ನೂ ಮೂರು ವಾರ ನಡೆಯಬೇಕಾಗಿತ್ತು. ಆದರೆ ಅಷ್ಟರಲ್ಲಿಯೇ ಒಂದು ಪ್ರಾತಃಕಾಲ ಟಪ್ಪಾಲಿನಲ್ಲಿ ಬಂದ ಪತ್ರ ಬೇರೆ ಪರಿಸ್ಥಿತಿಯನ್ನೇ ರಚಿಸಿಬಿಟ್ಟಿತು—ಕ್ಯಾಪ್ಟನ್ ದೊರೈರಾಜರಿಗೆ ಆ ಕೂಡಲೇ ಅವರ ಆರ್ಮಿ ಯೂನಿಟ್ಟಿಗೆ ವರ್ಗ ; ಕ್ಯಾಪ್ಟನ್ ಎಂ.ಎಸ್. ರಾಯಪ್ಪನ್ ಎಂಬವರು ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿ ಎನ್‌ಸಿಸಿಯ ಹೊಸ ಆಫಿಸರ್ ಕಮಾಂಡಿಂಗ್ ಆಗಿ ನೇಮಕಗೊಂಡಿದ್ದಾರೆ ; ಈ ಹುಕುಂ ತತ್‌ಕ್ಷಣ ಜಾರಿಗೆ ಬರತಕ್ಕದ್ದು. ಅದೇ ದಿನ ಅಪರಾಹ್ಣ ಕ್ಯಾಪ್ಟನ್ ರಾಯಪ್ಪನ್ ಅವರಿಂದ ಒಂದು ಪತ್ರ ಬಂದಿತು—ತಾನು ಇನ್ನೈದು ದಿವಸಗಳಲ್ಲಿ ಮಡಿಕೇರಿಗೆ ಬರುವವನಿದ್ದೇನೆ ; ಸ್ವಾಗತದ ಏರ್ಪಾಡು ನಡೆಯಬೇಕು. ಅವರು ಕಾಗದ ಬರೆದದ್ದು

ದೆಹಲಿಯಿಂದ. ಮಿಲಿಟರಿಯಲ್ಲಿ ಎಲ್ಲವೂ ಮಿಂಚಿನ ವೇಗದಿಂದ ನಡೆಯಬೇಕು; ಆದ್ದರಿಂದ ನಾನು ಅಂದೇ ದೊರೈರಾಜರಿಗೆ ತಾರು ಕಳಿಸಿದೆ; ಅದನ್ನು ಸ್ಥಿರೀಕರಿಸುವ ಸವಿವರ ಪತ್ರವನ್ನು ಅಂಚೆಗೆ ಹಾಕಿದೆ. ಊರಿಗೆ ಹೋಗಿದ್ದ ದೊರೈರಾಜರು ತಮ್ಮ ರಜೆಯನ್ನು ಮನ್ನಾ ಮಾಡಿ ಮಡಿಕೇರಿಗೆ ಮರಳಿದರು. ಮರುದಿನ ಸಾಯಂಕಾಲ ರಾಯಪ್ಪನ್ ಆಗಮಿಸಿದರು. ಹೋಗುವ ಓಸಿ, ಬರುವ ಓಸಿ ಇವರ ನಡುವೆ ತಾತ್ಕಾಲಿಕ (ಎಂದೆಂದೂ ಇರುವ?) ಓಸಿ ನಾನು—ಜಗವಿದು ಬಲು ಹುಸಿ ಕಣಾ ಎನ್ನುವಂಥ ಮನೋಭಾವನೆ ನನ್ನದು.

ದೊರೈರಾಜರ ದೈತ್ಯಾಕಾರದ ಮುಂದೆ ರಾಯಪ್ಪನ್ ಅವರ ಕುಬ್ಜಾಕೃತಿ; ಅವರ ಗುಡುಗು ಧ್ವನಿಯ ನಿನಾದದ ಎದುರು ಇವರ ಮೃದು ನುಡಿ; ಅವರ ಗಜಗಮನಕ್ಕೆ ಹೋಲಿಸುವಾಗ ಇವರ ಮನುಷ್ಯ ನಡಿಗೆ—ಎರಡು ವಿರುದ್ಧ ಮೇರುಗಳು ಇಲ್ಲಿ ಸಂಗಮಿಸಿವೆ ಎಂಬಂಥ ಭಾವ ನನ್ನಲ್ಲಿ ಮೊಳೆಯಿತು. ಹುಡುಗರ ಆದರ್ಶ ಆರಾಧ್ಯ ಮೂರ್ತಿ ಆಗಿದ್ದ ದೊರೈರಾಜರ ವರ್ಗದ ವಾರ್ತೆ ಅವರೆಲ್ಲರ ಮೇಲೂ ಊರಿನ ಮೇಲೂ ಕರಾಳ ಛಾಯೆಯಂತೆ ಪಸರಿಸಿತು. ಮಡಿಕೇರಿಯಂಥ ಸಣ್ಣ ಊರುಗಳಲ್ಲಿ ಇವೆಲ್ಲವೂ ಮಹಾಘಟನೆಗಳೇ! ಹುಡುಗರ ಸಭೆ ಸೇರಿಸಿದೆ. ದೊರೈರಾಜರಿಗೆ ಹಾರ್ದಿಕ ಬೀಳ್ಕೊಡಿಗೆ ರಾಯಪ್ಪನ್ ಅವರಿಗೆ ಹಾರ್ದಿಕ ಸ್ವಾಗತ ಎರಡನ್ನೂ ಏಕಕಾಲದಲ್ಲಿ ನೆರವೇರಿಸಬೇಕು ಎಂದು ತೀರ್ಮಾನಿಸಿದೆವು. ಮಿಲಿಟರಿ ಸಭೆಗಳಲ್ಲಿ ತೀರ್ಮಾನವೇನು ಬಂತು—ಆಫಿಸರುಗಳಾದ ನಾವು ಮೊದಲೇ ವಿಚಾರ ವಿನಿಮಯ ಮಾಡಿ ಒಂದು ಇತ್ಯರ್ಥಕ್ಕೆ ಬರುವುದು; ಇದನ್ನೇ ಹುಡುಗರ ಮುಂದೆ ಸವಿವರವಾಗಿ ಮಂಡಿಸುವುದು. ಇಲ್ಲಿ ನಮ್ಮ ಉದ್ದೇಶ ಪ್ರಾಮಾಣಿಕವಾಗಿದ್ದರೆ ಯಾವ ಹುಡುಗನೂ ನಮ್ಮ ಮಾತಿಗೆ ಎದುರು ಬರುವುದಿಲ್ಲ. ಫೋಟೋ, ಮಹಾ ಭೋಜನ, ಸಭೆ, ದೊರೈರಾಜರಿಗೆ ನಮ್ಮ ಕೃತಜ್ಞತೆಯ ಪ್ರತೀಕವಾಗಿ ಒಂದು ಉಡುಗೊರೆ ನೀಡುವುದು ಇವೆಲ್ಲ ಕಾರ್ಯಕ್ರಮದ ವಿವರಗಳು. ಭೋಜನ ಮುಂತಾದ ಚಿರಿಚಿರಿ ವಿಷಯಗಳನ್ನು ನಮ್ಮ ಸಿದ್ಧಹಸ್ತರಾದ ಅಪ್ರತಿಮ ದಕ್ಷರಾದ ಬಾಳಿಗರು ವಹಿಸಿಕೊಂಡರು. ಆಮಂತ್ರಣ, ಸ್ವಾಗತ ಮುಂತಾದ ಸೂಕ್ಷ್ಮ ಆತ್ಮೀಯ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಕೃಷ್ಣಯ್ಯನವರಲ್ಲದೇ ಬೇರೆ ಯಾರಿದ್ದಾರೆ? ಸಭೆಯ ಸಮಸ್ತ ಏರ್ಪಾಡೂ ನನ್ನದು. ಹುಡುಗರನ್ನು ಇಲ್ಲೆಲ್ಲ ನಿಯೋಜಿಸಿ ಅವರಿಗೆ ಸಮರ್ಪಕ ನಿರ್ದೇಶನ ನೀಡಿ ಕಾರ್ಯಗಳನ್ನು ಮುಂದುವರಿಸಿದೆವು. ನನ್ನ ಸ್ವಾಗತ ಹಾಗೂ ವರದಿಭಾಷಣದಲ್ಲಿ ದೊರೈರಾಜರನ್ನು ನಾನು ಪ್ರಥಮವಾಗಿ ಭೇಟಿಯಾದಲ್ಲಿಂದ ತೊಡಗಿ ಅಂದಿನ ವರೆಗಿನ ಅವರ ಸಾಧನೆಗಳನ್ನು ವಿವರಿಸಿದೆ (ಕಹಿಪ್ರಸಂಗಗಳನ್ನು ಎಲ್ಲಿಯೂ ತರಲಿಲ್ಲ). ವಾಸ್ತವಿಕವಾಗಿ ಆ ಎರಡು ವರ್ಷಗಳ ಕಾಲದಲ್ಲಿ ಈ ಹಿಮಾಲಯ ಸದೃಶ ವ್ಯಕ್ತಿತ್ವ ನಿರ್ವಹಿಸಿದ್ದ ಕಾರ್ಯ ಅಗಾಧವಾಗಿತ್ತು; ದಂಗುಬಡಿಸುವಂತಿತ್ತು. ಕೊಡಗಿನ ಉದ್ದಗಲಕ್ಕೂ ತ್ರಿವಿಕ್ರಮನಂತೆ ಪಾದಯಾತ್ರೆ ಮಾಡಿದ ಈ ಧೀರೋನ್ನತ ವ್ಯಕ್ತಿಯ ಗುಣ ನಡತೆ ಗಾಂಭೀರ್ಯಗಳಿಗೆ ಕೊಡಗಿನ ಜನತೆ ಮಾರುಹೋಗಿತ್ತು. ಅವರು ನಡೆಸಿದ ಎನ್‌ಸಿಸಿ ಕ್ಯಾಂಪುಗಳು ಮತ್ತು ಇತರ ಸಾಹಸಗಳು ಜನರ ದೃಷ್ಟಿಯಲ್ಲಿ ಅವರನ್ನು ಒಬ್ಬ ಅವತಾರ ಪುರುಷನನ್ನಾಗಿ ಮಾಡಿದ್ದುವು.

ಹಲವಾರು ಕ್ಯಾಡೆಟುಗಳು ದೊರೈರಾಜರ ಗುಣಗಾನ ಮಾಡಿದರು. ಪ್ರಿನ್ಸಿಪಾಲ್ ರಾಘವ ಬಾಳಿಗರು "ನಿದ್ರಿಸುತ್ತಿದ್ದಂಥ ಯುವಕ ಶಕ್ತಿಗೆ ಕ್ರಿಯಾ ಪ್ರೇರಣೆ ನೀಡಿದ ಈ ಮಹಾಶಕ್ತಿ ದೊರೈರಾಜ್ ಅಪೂರ್ವ ವ್ಯಕ್ತಿ. ಅವರ ಮುಂದೆ ಆ ಸ್ಥಾನವನ್ನು ವಹಿಸುವ ರಾಯಪ್ಪನ್ ಇದೇ ಪರಂಪರೆಯನ್ನು ಇನ್ನಷ್ಟು ಉಜ್ಜ್ವಲಗೊಳಿಸುವರೆಂಬ ನಂಬಿಕೆ ನನಗಿದೆ" ಎಂದು ಮುಂತಾಗಿ ಆಡಿದರು.

ರಾಯಪ್ಪನ್ ಅವರನ್ನು ಭಾಷಣ ಮಾಡಲು ಕೇಳಿಕೊಂಡಾಗ ಅವರೆಂದರು "ನನ್ನ ಕೆಲಸವನ್ನು ನಾನು ಮನಃಪೂರ್ವಕವಾಗಿ ಮಾಡುತ್ತೇನೆ. ನಿಮ್ಮ ಬೆಂಬಲ ನನಗಿರಲಿ"— ಇದಕ್ಕಿಂತ ಹೆಚ್ಚು ಅವರೇನನ್ನೂ ಅನ್ನಲಿಲ್ಲ. ಅವರ ಭಾಷಣ ದೊರೈರಾಜರ ಮತ್ತು ರಾಘವ ಬಾಳಿಗರ ಭಾಷಣಗಳ ಎದುರು ಸಪ್ಪೆ ಎನಿಸಿತು. ಭಾವೋದ್ವೇಗದಿಂದ ದೊರೈರಾಜರ ಗಳಗಳು ಹಿಡಿದುಕೊಂಡವು. ಆದರೂ ಅವರು ಒಂದು ಉತ್ಕೃಷ್ಟ ಪರಿಪೂರ್ಣ ಭಾಷಣಮಾಡಿದರು. ಊರವರ, ಕ್ಯಾಡೆಟುಗಳ, ಕಾಲೇಜು ಅಧಿಕಾರಿಗಳ, ವೈಯಕ್ತಿಕವಾಗಿ ನಾವು ಮೂವರು ಆಫಿಸರರ ಸಹಕಾರವನ್ನು ಮನಸ್ವೀ ಕೊಂಡಾಡಿದರು. ರಾಯಪ್ಪನ್ ಅವರಿಗೆ ಶುಭ ಕೋರಿದರು. ಮಹಾಭೋಜನಾನಂತರ ನಮ್ಮೂರಿನ ಸಂಪ್ರದಾಯದಂತೆ, ಮಿಲಿಟರಿ ಕ್ರಮದಂತೆ ಉಕ್ಕಡದವರ ತಾಳವಾದ್ಯ ಕಛೇರಿ ನಡೆಯಿತು ; ಕುಣಿಯುವವರು ಕುಣಿದರು ; ದೊರೈರಾಜರನ್ನು ಹತ್ತು ಜನ ಎತ್ತಿ ಹಿಡಿದು ಜಯಜಯಕಾರ ಮಾಡಿದರು. ರಾತ್ರಿ ೧೧ ಗಂಟೆಗೆ ನಮ್ಮ ಟ್ರಕ್ಕಿನಲ್ಲಿ ಅವರನ್ನು ಬೀಳ್ಕೊಟ್ಟಾಗ ದೊರೈರಾಜ್ ಅಧ್ಯಾಯ ನಮ್ಮ ಕಾಲೇಜಿನಲ್ಲಿ ಮುಗಿಯಿತು.

ಬಿಡಿಸಿದ ಒಗಟು

ದೊರೈರಾಜ್ ದಂಪತಿಗಳು ನಮ್ಮ ಮನೆಗೆ ಬಂದರು. ಇಬ್ಬರು ಹೆಣ್ಣು ಮಕ್ಕಳ ಆ ಪುಟ್ಟ ಸಂಸಾರ ಭಾರತೀಯ ಪರಂಪರೆಯ ಸುಸಂಸ್ಕೃತಿಯ ಉತ್ತಮ ನಿದರ್ಶನ. ಹೆಂಗಸರು ಅಡುಗೇ ಮನೆಯಲ್ಲಿಯೇ ಕುಳಿತು ಮಾತಾಡಿದರು. ನಾನೂ ದೊರೈರಾಜರೂ ಏನು ಮಾತಾಡಿದೆವೋ ಮಾತಾಡಲಿಲ್ಲವೋ ಆ ವಿವರಗಳು—ವಾತಾವರಣ ಭಾವೋದ್ವೇಗ ಪೂರಿತವಾಗಿದ್ದುದರಿಂದ—ಈಗ ಮಸುಕಾಗಿವೆ. ಹಿಂದಿನ ದಿವಸಗಳ ಅನುಭವಗಳನ್ನು ಮೆಲುಕು ಹಾಕಿದೆವು. ಆದರೆ ಎಲ್ಲಿಯೂ ಕಹಿ ಗಳಿಗೆಗಳ ನೆನಪು ನಾನು ತರಲಿಲ್ಲ. ಅವರೂ ಪ್ರಸ್ತಾವಿಸಲಿಲ್ಲ. ಇನ್ನೇನು ನಿರ್ಗಮಿಸಬೇಕು ಎನ್ನುವಾಗ ಅವರು ಮೊದಲೇ ಉದ್ದೇಶ ಪೂರ್ವಕವಾಗಿ ತಯಾರಿಮಾಡಿಕೊಂಡು ಬಂದಿದ್ದಂಥ ಒಂದೆರಡು ಮಾತುಗಳನ್ನು ಉದ್ವೇಗವನ್ನು ತಡೆಹಿಡಿದು ಹೇಳಿದರು "ಜಾತೀಯತೆಯ ಭೂತ ಪ್ರಬಲವಾಗಿದೆ. ನಾನು ಅದಕ್ಕೆ ಬಲಿಯಾದೆ. ಆದರೆ ನೀವೆಲ್ಲರೂ ತುಂಬ ದೊಡ್ಡವರು. ಬೇಗನೆ ಚೇತರಿಸಿಕೊಂಡೆ."

ನನ್ನ ಗಂಟಲಿನಲ್ಲಿ ನೋವಿನ ಅನುಭವ, ಅವರೇ ಮುಂದುವರಿಸಿದರು "ಎಲ್ಲ ಮರೆತು ಬಿಡಿ. ನಮ್ಮ ಸ್ನೇಹ ಬಲವಾಗಿರಲಿ. ನಿಮ್ಮ ನಿಷ್ಠೆ ನಿಮ್ಮನ್ನು ಸದಾ ಕಾಯಲಿ."

ಮರುದಿವಸ ಬಸ್ ಹತ್ತಿ ಮಡಿಕೇರಿಯಿಂದ ನಿರ್ಗಮಿಸುವ ಮುನ್ನ ದೊರೈರಾಜರು

ನಮಗೆ ಮೂವರಿಗೂ ಒಟ್ಟಾಗಿ ಅಂದರು "ಎನ್‌ಸಿಸಿಯ ರತ್ನತ್ರಯರು ನೀವು. ನೀವು ಹಿಡಿದ ಕಾರ್ಯ ರತ್ನವಾಗುತ್ತದೆ."

ಅವರ ಗಾತ್ರ ಎಷ್ಟು ದೊಡ್ಡದೋ ಅವರ ಔದಾರ್ಯವೂ ಅಷ್ಟೇ ದೊಡ್ಡದು. ನಾಡಿನ ಯುವಜನಾಂಗದ ಶಕ್ತಿ ಆಕಾಂಕ್ಷೆಗಳಿಗೆ ಹೊಸ ಆಯಾಮ ನೀಡಿದ ಮಹಾಪುರುಷ ಅವರು. ಮುಂದೆ ಒಂದೆರಡು ವರ್ಷ ಅವರಿಗೂ ನನಗೂ ಪತ್ರ ವ್ಯವಹಾರ ಮುಂದುವರಿದಿತ್ತು. ಆದರೆ ನೇಫಾ ಯುದ್ಧದಲ್ಲಿ (೧೯೬೨) ಅವರಿಗೇನೋ ಹಾನಿಯಾಯಿತೆಂಬ ವದಂತಿ ಮಾತ್ರ ಕೇಳಿಬಂತು. ನಾನು ಹಾಕಿದ ಯಾವ ಕಾಗದಕ್ಕೂ ಆ ತರುವಾಯ ಉತ್ತರ ಬಂದಿಲ್ಲ. ಆ ಮಹಾನುಭಾವರಿಗೆ ಅವರೆಲ್ಲಿದ್ದರೂ ವಂದನೆ.

ಇದನ್ನು ಕಟ್ಟಬೇಕಾದವರು ನೀವು

ಹೊಸ ಕಮಾಂಡಿಂಗ್ ಆಫಿಸರ್ ಹೇಗೋ ಏನೋ! ಅಳುಕಿನಿಂದಲೇ ಹೋದೆ. ಎದ್ದುನಿಂತು ಆತ್ಮೀಯತೆಯ ಹಸ್ತಾಲಿಂಗನವಿತ್ತು ಸ್ವಾಗತಿಸಿದರು "Come on come on, Rao." ರಾಯಪ್ಪನ್ ಅವರ ಸರಳ ನಿರಾಡಂಬರ ನಗು ಆ ಕ್ಷಣ ನನ್ನನ್ನು ಗೆದ್ದಿತು. ಅವರೇ ಮಾತು ಮುದುವರಿಸಿದರು "ಈಗ ನೋಡಿ ಲೆಫ್ಟಿನೆಂಟ್ ರಾವ್! ನಾನು ಎನ್‌ಸಿಸಿಗೆ ಹೊಸಬ. ನೀವು ಅದರಲ್ಲಿ ಪಳಗಿದವರು. ನೀವು ಮೂವರು ಎಷ್ಟು ದಕ್ಷರೆಂಬುದನ್ನು ನಾನು ಸ್ವತಃ ಮೊನ್ನೆ ನೋಡಿ ಸಂತೋಷಪಟ್ಟಿದ್ದೇನೆ. ಸೀನಿಯರ್ ಆಫಿಸರರಾಗಿರುವ ನಿಮ್ಮನ್ನೇ ನಾನು ಎಲ್ಲ ವಿಧವಾದ ಮಾರ್ಗದರ್ಶನಕ್ಕೂ ಅವಲಂಬಿಸಿದ್ದೇನೆ. ಈ ಯೂನಿಟ್ ನಿಮ್ಮದು. ಇದನ್ನು ಇನ್ನಷ್ಟು ಚೆನ್ನಾಗಿ ದೊಡ್ಡದಾಗಿ ಕಟ್ಟಬೇಕಾದವರು ನೀವು. ಇನ್ನೆರಡು ಮೂರು ವರ್ಷಗಳಾದ ಮೇಲೆ ನಾನು ಸಹ ಹೋಗುವವನೇ." ಅವರ ನೇರವಾದ ಮಾತಿನ ಮೋಡಿ ಇದ್ದದ್ದು ಹೀಗೆ. ಮಾತು ಮೃದು; ಬಲು ಆತ್ಮೀಯ; ನಮ್ಮ ವಿಚಾರ ತುಂಬ ಗೌರವ ಆದರಗಳಿಂದ ಕೂಡಿದುದು.

"ಈ ಡಿಸೆಂಬರಿನ ಕ್ಯಾಂಪ್ ಎಲ್ಲಿ ಮಾಡಬೇಕೆಂದು ನೀವು ಸೂಚಿಸಬೇಕು" ನನಗೆ ಅವರ ಪ್ರಶ್ನೆ.

"ಕೂಡಿಗೆ ಕಡೆ ಕಾವೇರಿ ತೀರದಲ್ಲಿ ನೋಡೋಣ. ಕಳೆದ ವರ್ಷ ಹೋದ ಕೊಟ್ಟಮುಡಿಗೇ ಪುನಃ ಹೋಗುವುದು ಬೇಡ" ನನ್ನ ಸೂಚನೆ.

ಮುಂದಿನ ರಜಾ ದಿವಸ ನಾವು ಮಡಿಕೇರಿ-ಕುಶಾಲನಗರ-ಕೂಡಿಗೆ ವಲಯದಲ್ಲಿ ಸಂಚರಿಸಿ ಕಾವೇರೀತೀರದ ಒಂದು ಬಯಲನ್ನು ಆರಿಸಿದೆವು. ಶೆಟ್ಟಿ ಗಾರ್ಡನ್ಸ್—ಎಂದರೆ ಶೆಟ್ಟಿ ಮಹನೀಯರೊಬ್ಬರ ಮಾವಿನ ತೋಪುಗಳಿದ್ದ ಸ್ಥಳ—ಎಂದು ಅದರ ಹೆಸರು.

"ನೀವು ಕ್ಯಾಂಪಿನಲ್ಲಿ ನಿರ್ವಹಿಸುವ ಕೆಲಸವೇನು?" ಅವರ ಪ್ರಶ್ನೆ.

"ಉಪನಾಯಕನಾಗಿ ನಾನು ನಿರ್ವಹಿಸುವ ವಿಶಿಷ್ಟ ಕೆಲಸ ಎಂಬುದೇನೂ ಇಲ್ಲ. ಬಾಳಿಗರು ಟ್ರೈನಿಂಗನ್ನೂ ಕೃಷ್ಣಯ್ಯನವರು ಅಡ್ಜುಟೆಂಟ್ ಕೆಲಸವನ್ನೂ ಬಲು ಸಮರ್ಪಕವಾಗಿ ನಿರ್ವಹಿಸಿ ಅನುಭವ ಗಳಿಸಿದ್ದಾರೆ. ಅದೇ ದಾರಿಯಲ್ಲಿ ಅವರನ್ನು ಮುಂದುವರಿಸುವುದು ಒಳ್ಳೆಯದು."

"ನೀವು ?"

"ಹಿಂದೆ ಹೇಳಿದೆನಲ್ಲ—ಖಚಿತವಾದ ಕೆಲಸ ಇಂಥಾದ್ದೇ ಎಂದು ಹೇಳಲಾರೆ. ಆದರೆ ಬಿಡುವೆಂದೂ ದೊರೆತಿಲ್ಲ."

"ರಾವ್ ! ಮುಖ್ಯವಾದದ್ದನ್ನೇ ನೀವು ಮರೆತಂತೆ ತೋರುವುದಲ್ಲ !"

"ಬೇರೆ ಏನಿದೆ, ಹೇಳಿ ?"

"ಆಡಳಿತೆ—ಅಡ್ಮಿನಿಸ್ಟ್ರೇಶನ್ ! ಶಿಬಿರದ ನಿಲುಗಡೆ, ಅಡುಗೆ ಊಟದ ಏರ್ಪಾಡು, ಲೆಕ್ಕಪತ್ರಗಳನ್ನು ಕ್ರಮಬದ್ಧವಾಗಿ ಇಟ್ಟು ಆಡಿಟ್ಟಿಗೆ ಒಪ್ಪಿಸುವುದು ಇವನ್ನೆಲ್ಲ ಈ ಹಿಂದೆ ಯಾರು ಮಾಡಿದರು ?" ರಾಯಪ್ಪನ್ ಪ್ರಶ್ನೆ.

"ಓಸಿ. ಆರ್ಮಿ ಸ್ಟಾಫ್ ಮತ್ತು ಕಛೇರಿ ಸಿಬ್ಬಂದಿ."

"ಹಿಂದೆ ಅದು ಹೇಗೂ ನಡೆದಿರಲಿ. ಈಗ ಆ ಹೊಣೆ ನೀವು ವಹಿಸಿಕೊಂಡರೆ ಒಳ್ಳೆಯದು. ಆಗದೇ ?"

"ನಿಮ್ಮ ಹುಕುಮನ್ನು ಒಪ್ಪುತ್ತೇನೆ. ಆದರೆ ಇಪ್ಪತ್ತು ಮೂವತ್ತು ಸಾವಿರ ರೂಪಾಯಿಗಳ ಕ್ಷಿಪ್ರ ವ್ಯವಹಾರ. ಏನೂ ಅನುಭವವಿಲ್ಲದ ನನ್ನಿಂದ ಇದು ಸಾಧ್ಯ ವಾದೀತೇ ಎಂದು ಭಯವಾಗುತ್ತಿದೆ."

"ನಿಮ್ಮ ಸಹಕಾರ ಸಂಘದ ವ್ಯವಹಾರವೆಷ್ಟು ?"

"ವರ್ಷಕ್ಕೆ ಸುಮಾರು ಒಂದು ಲಕ್ಷ ರೂಪಾಯಿಗಳು."

"ಅದರ ಆಡಳಿತೆ ನಡೆಸುತ್ತಿರುವವರಾರು ?"

"ಸಹೋದ್ಯೋಗಿಗಳ ಹಾಗೂ ಹುಡುಗರ ನೆರವಿನಿಂದ ನಾನು."

"ಅದೇ ನನಗೆ ಬೇಕಾದದ್ದು. ಈ ಕೆಲಸ, ಎಂದರೆ ಕ್ಯಾಂಪಿನ ಆಡಳಿತೆ, ನಿಮ್ಮಿಂದ ಆಗುತ್ತದೆ. ನಿಮ್ಮ ಹಿಂದೆ ನಾನಿದ್ದೇನೆ. ಇಂದಿನಿಂದಲೇ ಮುಂದುವರಿಯಬೇಕು" ರಾಯಪ್ಪನ್ ಬೆನ್ನು ತಟ್ಟಿದರು.

ಡಿಸೆಂಬರ್ ಕ್ಯಾಂಪಿಗೆ ಸೆಪ್ಟೆಂಬರಿನಲ್ಲಿಯೇ ಮೊದಲ ಗುಂಡು ಹಾರಿಸಬೇಕಾಗಿತ್ತು. ಡೇರೆಗಳು ಸಕಾಲದಲ್ಲಿ ಬರಬೇಕು, ಸರಕಾರದಿಂದ ಹಣ ಮಂಜೂರಾತಿ, ಆಹಾರ ಪದಾರ್ಥಗಳ ಟೆಂಡರು, ಅಡುಗೆಯವರ ಸಂಗ್ರಹ, ಪಾತ್ರೆಗಳು, ಸೌದೆ, ಹಾಲು, ತರಕಾರಿ, ಶಿಕ್ಷಣ ಸ್ಥಳಗಳು, ಟ್ರೈನಿಂಗ್ ಹತ್ಯಾರುಗಳು, ವೈದ್ಯಕೀಯ ಸೌಲಭ್ಯ, ವಿದ್ಯುದ್ದೀಪಗಳು, ಎಲ್ಲ ಸಂಸ್ಥೆಗಳಿಗೂ ಯುಕ್ತ ಪೂರ್ವನಿರ್ದೇಶನ, ವಾಹನ ಸೌಕರ್ಯ —ಇವೆಲ್ಲವೂ ಸರಕಾರದಿಂದ ನಿಬಂಧಿತವಾಗಿರುವ ನಿಯಮಾವಳಿಯ ಚೌಕಟ್ಟಿನಲ್ಲಿ ಸಮರ್ಪಕವಾಗಿ ನಡೆದು ಹದಿನಾಲ್ಕು ದಿವಸಗಳ ಶಿಬಿರ ಸಾರೋದ್ಧಾರವಾಗಿ ನಡೆಯ ಬೇಕು. ಪ್ರತಿ ದಿನವೂ ನಾನು ಒಂದೆರಡು ಗಂಟೆಕಾಲ ಎನ್‌ಸಿಸಿ ಕಛೇರಿಯಲ್ಲಿ ಇರಬೇಕಾಗುತ್ತಿತ್ತು. ರಾಯಪ್ಪನ್‌ರ ಸಮರ್ಥ ಆತ್ಮೀಯ ಹಿರಿತನದಲ್ಲಿ ಈ ಕೆಲಸ ಕ್ರಮಬದ್ಧವಾಗಿ ಮುಂದುವರಿಯಿತು. ನನಗೆ ಒಂದಿಷ್ಟೂ ಕಷ್ಟವಾಗಲಿಲ್ಲ. ಅಷ್ಟೇ ಅಲ್ಲ —ನನ್ನಲ್ಲಿ ಇಷ್ಟೊಂದು ಸಾಮರ್ಥ್ಯ ಉಂಟೇ ಎಂದು ನನಗೇ ಆಶ್ಚರ್ಯವಾಗುವಂತೆ ಸನ್ನಿವೇಶಗಳು ಮೈದಳೆಯುತ್ತ ವಿಕಸಿಸಿದುವು. ಕಾಲೇಜಿನ ದೈನಂದಿನ ಪೆರೇಡುಗಳ ಸಮಗ್ರ ವಿವರಗಳನ್ನು ಬಾಳಿಗರು ನೋಡಿಕೊಳ್ಳುತ್ತಿದ್ದುದರಿಂದ ಅಲ್ಲಿ ನಾನು ಕೇವಲ

ಪೆರೇಡಿಗೆ ಹೋಗಿ ನನ್ನ ಪಾಲಿನ ಪಾಠ ಮಾಡಿದರೆ ಯಥೇಷ್ಟವಾಗುತ್ತಿತ್ತು. ಒಂದು ನಿಯಮವನ್ನು ನಾವು ಕಡ್ಡಾಯವಾಗಿ ಪಾಲಿಸುತ್ತಿದ್ದೆವು. ಕಾಲೇಜಿನ ನಮ್ಮ ಪಾಠ ಪ್ರವಚನಗಳನ್ನೂ ಎನ್‌ಸಿಸಿ ದೈನಂದಿನ ಪೆರೇಡುಗಳನ್ನೂ ಯಾವುದೇ ಕಾರಣಕ್ಕೂ ನಾವು ತಪ್ಪಿಸಿಕೊಳ್ಳತಕ್ಕದ್ದಲ್ಲ. ಇವೆಲ್ಲವೂ ಆದ ಮೇಲೆ ಕ್ಯಾಂಪಿನ ಏರ್ಪಾಡುಗಳು, ಸಹಕಾರ ಸಂಘದ ಕೆಲಸಗಳು ಕಾಲೇಜಿನ ಇತರ ಹೊಣೆಗಾರಿಕೆಗಳು—ಇವನ್ನೂ ನಿರ್ವಹಿಸಬೇಕು.

ಖಾಲಿ ಹೊಟ್ಟೆಯಲ್ಲಿ ದೇಶ ಪರ್ಯಟನೆ

ರಾಯಪ್ಪನ್ ಈ ಬೆಲೂನಿಗೆ ಗಾಳಿ ಊದಿದರು. ಅದು ಉಬ್ಬಿತು. ಕಳೆದ ವರ್ಷ ಸುಬ್ರಹ್ಮಣ್ಯದ ದೀರ್ಘ ಪಾದಯಾತ್ರೆ ಆಯಿತು. ಮುಂದೆ ಕುದುರೆಮುಖ (ವಿಫಲ ?) ಸಾಹಸ ಮುಗಿಯಿತು. ಈ ವರ್ಷ ? ಮಡಿಕೇರಿಯಿಂದ ಹೊರಟು ಉತ್ತರ ಕೊಡಗಿನ ನಿರ್ಜನ ಹಾಗೂ ಬಲು ಹಿಂದುಳಿದಿರುವ ಪ್ರದೇಶಗಳಾದ ಮುಕ್ಕಂದೂರು, ಮುಕ್ಕೊಡ್ಲು, ಕೋಟೆ ಬೆಟ್ಟ, ಸೂರ್ಲಬಿ ಮಾರ್ಗವಾಗಿ ನಡೆದು ಸೋಮವಾರಪೇಟೆ ಸೇರಬೇಕು. ಅಲ್ಲಿಂದ ಮುಂದೆ ಕೂಡಿಗೆಗೆ ನಡೆದು ಕುಶಾಲನಗರ ಸುಂಟಿಕೊಪ್ಪಗಳ ಮೂಲಕ ಮಡಿಕೇರಿಗೆ ಮರಳಬೇಕು. ನಾಲ್ಕು ದಿವಸಗಳ ಈ ಕಾರ್ಯಕ್ರಮ ರೂಪಿಸಿದೆ. ಸೋಮವಾರಪೇಟೆ ಸೇರುವವರೆಗೆ (ಎಂದರೆ ಎರಡು ಹಗಲುಗಳು ಒಂದು ಇರುಳು ಪೂರ್ತಿ) ನಮ್ಮ ನಡಿಗೆ ಆಧುನಿಕ ನಾಗರಿಕತೆಯ ಸಂಪರ್ಕ ಪಡೆದಿರದ ಮತ್ತು ಹೆಚ್ಚು ಕಡಿಮೆ ನಿರ್ಜನ ಪ್ರದೇಶದಲ್ಲಿ. ಆದ್ದರಿಂದ ಇಲ್ಲೆಲ್ಲ ನಮ್ಮ ಆಹಾರ ವಸತಿ ನಾವೇ ನೋಡಿಕೊಳ್ಳಬೇಕು. ಹನ್ನೆರಡು ಜನ ಉತ್ಸಾಹಿಗಳು ಮುಂದೆ ಬಂದರು. ರಾಯಪ್ಪನವರಿಗಾಗಲೀ ಇತರ ಆಫೀಸರರಿಗಾಗಲೀ ನಮ್ಮೊಡನೆ ಬರಲು ಅನುಕೂಲವಾಗಲಿಲ್ಲ. ನಮ್ಮ ಮೆರವಣಿಗೆ ಒಂದು ಮಂಗಳ ಮುಂಜಾನೆ ಮಡಿಕೇರಿಯಿಂದ ಹೊರಟಾಗ ಹವಾಪರಿಸ್ಥಿತಿ ಬಲು ಶುಭ್ರವಾಗಿತ್ತು. ಮ್ಯಾಪ್ ಹಿಡಿದು ಪ್ರಿಸ್‌ಮ್ಯಾಟಿಕ್ ಕಂಪಾಸಿನ ನೆರವಿನಿಂದ ದಾರಿ ಮಾಡಿಕೊಂಡು ನಡೆದೆವು. ಇಂಥ ನಡಿಗೆ ಸಹಜವಾಗಿ ಕುಂಠಿತವಾಗಿರುತ್ತದೆ. ಗೊತ್ತಿರದ ಪ್ರದೇಶದಲ್ಲಿ ದಾರಿ ಕೇಳಲು ಯಾವ ವ್ಯಕ್ತಿಯೂ ಎದುರಾಗದ ಸ್ಥಳಗಳಲ್ಲಿ, ಅಭ್ಯಾಸಮಾಡಿ ವಿಶ್ಲೇಷಿಸಿ ಮುಂದುವರಿಯಬೇಕಾಗುತ್ತದೆ. ಕಾಡಿನ ನೆರಳಿನ ರಕ್ಷಣೆಯಲ್ಲಿ ನಡಿಗೆ ಹಿತಕರವಾಗಿತ್ತು. ಒಂದು ತೊರೆಯ ಬಳಿ ಅನ್ನ ಮೇಲೋಗರ ಮಾಡಿ ಊಟ ಮಾಡಿದೆವು. ಸಾಯಂಕಾಲ ಸೂರ್ಲಬಿ ಹಳ್ಳಿ ಸೇರಿ ಅಲ್ಲಿಯ ಯಾವುದಾದರೂ ಒಂದು ಗುಡಿಸಲಿನ ಅಥವಾ ಶಾಲೆಯ ಜಗಲಿಯಲ್ಲಿ ತಂಗಬೇಕೆಂದು ನಮ್ಮ ಯೋಜನೆ. ಹೀಗೆ ಹೋಗುವಾಗ ಕೋಟೆ ಬೆಟ್ಟವನ್ನು ಏರಿ ಇಳಿದರೆ ದಾರಿ ಹತ್ತಿರವಾಗುತ್ತದೆಂದು ಮ್ಯಾಪಿನಿಂದ ಕಂಡೆ. ಆದರೆ ಹವೆಯ ಮಹಾರಾಯ ಕೈಗೊಟ್ಟ. ಮೋಡಗಳು ಕವಿದುವು ಸೋನೆಯಲ್ಲ ಜಡಿಮಳೆಯೇ ಸುರಿಯಲಾರಂಭಿಸಿತು. ಕೊಡಗಿನ ಗಾಳಿ ಮಳೆಗಳ ಆಘಾತವನ್ನು ಯಾವ ಮಳೆಕೋಟೂ ತಡೆಯಲಾರದು. ನಾವೂ ನಾವು ಹೊತ್ತಿದ್ದ ಆಹಾರ ಪದಾರ್ಥಗಳೂ ಎಲ್ಲವೂ ಚಂಡಿಪಿಂಡಿ. ಬೆಟ್ಟ ಏರಲಿಲ್ಲ. ಬಳಸುದಾರಿ ದಟ್ಟ ಕಾಡುಗಳ ಮೂಲಕ. ಅಂಗುಲ ಉದ್ದದ ಜಿಗಣೆಗಳಿಂದ ತೊಡಗಿ ಗೇಣುದ್ದದ ಪಾವಳಿಗಳು ನಮ್ಮ ಬೆಚ್ಚಗಿನ ರುಚಿಕರವಾದ ರಕ್ತ ಹೀರಲು

ಬಂದಾಗ ನಾವು ಕಂಗಾಲಾದೆವು. ದಾರಿ ತಪ್ಪಿ ಗೊಸರಲ್ಲಿ ಹತ್ತಿರದ ದಾರಿ ಎಂದು ಇನ್ನಷ್ಟು ಬಳಸಿ ಕೊನೆಗೆ ಯಾವುದೋ ಹೆಸರಿಲ್ಲದ ಗುಡಿಸಲುಗಳ ಹಿಂಡಿಗೆ ಕಾಲಿಟ್ಟಾಗ ರಾತ್ರಿಯ ಗಂಟೆ ಎಂಟು—ಸರಭರ ಮಳೆಯು ಸುರಿಯುತಲಿತ್ತು. ಭಟ್ಟರ ಹೊಟ್ಟೆ ವಟಗುಟ್ಟುತ್ತಿತ್ತು. ಆ ಗುಡಿಸಲುಗಳ ಬಡತನ ಮತ್ತು ಗಲೀಜು ಸಹಿಸಲು ಸಾಧ್ಯವಿಲ್ಲ. ಹೊರಗೆ ಮಳೆ. ಅಲ್ಲೇ ಠಾಣ್ಯ ಊರಿದೆವು. ಗಂಜಿ ಕಾಯಿಸುವಾಗ ಗಂಟೆ ೧೧ ಆಯಿತು. ಪದಾರ್ಥ ಏನೂ ಮಾಡುವಂತಿರಲಿಲ್ಲ. ಉಪ್ಪು ಬಿಸ್ಕತ್ತು (ಮೆತ್ತಗಿನ ಮುದ್ದೆಯಾಗಿದ್ದುವು) ನಂಜಿಕೊಂಡು ಮನೆಯ ನೆಮ್ಮದಿಯನ್ನು ಕಲ್ಪಿಸಿಕೊಂಡು ಗಂಜಿಯೂಟದ ಸೊಗಸನ್ನು ಅನುಭವಿಸಿದೆವು. ನಮಗೆಲ್ಲರಿಗೂ ಮಲಗಲು ಅಲ್ಲಿ ಜಾಗವಿಲ್ಲ. ಬೆಂಕಿಯ ಸುತ್ತಲೂ ಮುದುರಿ ಕುಳಿತು ರಾತ್ರಿ ಜಾಗರ ಮಾಡಿ ಕಳೆದೆವು. ಬೆಳಗ್ಗೆ ಅವಲಕ್ಕಿ ಒಗ್ಗರಣೆ ಹಾಕೋಣವೆಂದು ತೆಗೆದರೆ ಉಪ್ಪಿನ ಮತ್ತು ಅವಲಕ್ಕಿಯ ಕಟ್ಟುಗಳು ಒಡೆದು ಅವುಗಳಲ್ಲಿ ಸಾಮರಸ್ಯ ಏರ್ಪಟ್ಟಿತ್ತು. ಈ ಲವಣ ಬಾಂಧವ್ಯದಲ್ಲಿ ಉಪ್ಪಿನ ಏಕಚ್ಛತ್ರಾಧಿಪತ್ಯ ಸ್ಥಾಪನೆಗೊಂಡಿತ್ತು. ನೀರಿನಲ್ಲಿ ಇಡೀ ಮಿಶ್ರಣವನ್ನು ಹಲವಾರು ಬಾರಿ ನೆನೆಸಿ ನೀರನ್ನು ಚೆಲ್ಲಿ ಉಪ್ಪಿನ ಅಂಶವನ್ನು ಕಡಿಮೆ ಮಾಡಿ ಉಳಿದಿದ್ದ ಅವಲಕ್ಕಿ ಮಣ್ಣೆಯನ್ನು ಹಾಗೆಯೇ ನೆಕ್ಕಿದೆವು. ಇನ್ನು ಒಂದು ಹಗಲಿನ ನಡಿಗೆ ಸೋಮವಾರಪೇಟೆಗೆ ಇದೆ! ದಾರಿಯಲ್ಲಿ ಯಾವ ಹಳ್ಳಿಯೂ ಇಲ್ಲ. ವಾಹನ ಸಂಚಾರವಂತೂ ಇಲ್ಲವಷ್ಟೆ! ಆ ಪ್ರಾತಃಕಾಲದಷ್ಟು ಅಮಂಗಳಕರ ಪ್ರಾತಃಕಾಲ ಬಹುಶಃ ಬೇರೆಂದೂ ನಾನು ಅನುಭವಿಸಲಿಲ್ಲ. ಪುಣ್ಯಕ್ಕೆ ಮಳೆ ಇರಲಿಲ್ಲ. ಹಸಿದ ಹೊಟ್ಟೆ ಹೊತ್ತು ಹ್ಯಾಪ್ಮೋರೆ ಹಾಕಿ ನಡೆದೆವು ಬೆಪ್ಪುತಕ್ಕಡಿಗಳು —ಕಾಡಿನ ಮಧ್ಯೆ ನಡೆಯುತ್ತಿದ್ದರೂ ತಿನ್ನಲು ಒಂದೇ ಒಂದು ಫಲವಿಶೇಷವೂ ಲಭಿಸಲಿಲ್ಲ. ಕುಡಿಯುವ ನೀರಿಗೆ ಮಾತ್ರ ತತ್ವಾರವಾಗಲಿಲ್ಲ. ನಮ್ಮ ಸಂಗ್ರಹದಲ್ಲಿ ಕೊನೆಯದಾಗಿ ಉಳಿದಿದ್ದ ಒಂದು ತೆಂಗಿನಕಾಯಿಯನ್ನು ಒಡೆದು ಅದರ ಹೋಳುಗಳನ್ನು ಹಂಚಿಕೊಂಡೆವು. ದಾರಿಯಲ್ಲಿ ಒಂದೆರಡು ಗುಡಿಸಲುಗಳನ್ನು ಕಂಡೆವು. ಆದರೆ ಅವುಗಳ ಕಡು ಬಡತನ ಕರುಣಾಜನಕವಾಗಿತ್ತು. ನಾವೇ ಆ ಅರಿಶಿನ ಮುಂಡಿಗೆ ಖಾಯಿಲೆಗ್ರಸ್ತ ಮಕ್ಕಳಿಗೆ ಏನನ್ನಾದರೂ ಕೊಡಬೇಕಾಗಿದ್ದಂಥ ಪರಿಸ್ಥಿತಿ. ಅಪರಾಹ್ಣದ ೨ ಗಂಟೆಯ ಸುಮಾರಿಗೆ ಒಂದಷ್ಟು ಕೂಲಿ ಕೆಲಸಗಾರರು ಎದುರಾದರು. ಅಲ್ಲೇ ಮುಂದೆ ಎರಡು ಮೈಲಿ ಅವರು ತೋರಿಸಿದ ದಾರಿಯಲ್ಲಿ ಹೋದರೆ ಲಿಂಗಾಯತರ ಒಂದು ಮಠ ಕಾಣಿಸುವುದೆಂದೂ ಅಲ್ಲಿ ಅನ್ನವೋ ಗಂಜಿಯೋ ದೊರೆತೀತೆಂದೂ ಆ ಕೆಲಸಗಾರರಿಂದ ತಿಳಿಯಿತು. ಆದರೆ ಅಷ್ಟನ್ನು ಕ್ರಮಿಸುವ ಚೈತನ್ಯ ನಮಗಿದೆಯೇ ! ನಿರ್ವಾಹವಿಲ್ಲ. ಒಂದು ಗಂಟೆ ಕಾಲ ನಡೆದು ಆ ಮಠವನ್ನು ತಲಪಿದೆವು. ಊಟದ ಸಮಯ ಮೀರಿದ್ದರೂ ನಮ್ಮ ಕಂಗಾಲು ಪರಿಸ್ಥಿತಿ ಕಂಡ ಮಠದ ಸ್ವಾಮಿಗಳು ಹೊಸತಾಗಿ ಅಡುಗೆ ಮಾಡಿಸಿ ಹಸಿದು ಬಂದವರಿಗೆ ಅಶನವಿಕ್ಕಲುಬೇಕು ಎಂಬ ನೀತಿಯನ್ನು ಅಕ್ಷರಶಃ ಪಾಲಿಸಿದರು. ದಿಟದ ನಾಗನಿಗೂ ಹಾಲೆರೆದ ಮಹಾನುಭಾವರು. ಅವರಿಂದ ಆಶೀರ್ವಾದ ಪಡೆದು ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸಿ ಉಳಿದಿದ್ದ ಐದು ಮೈಲಿಗಳನ್ನು ತ್ವರಿತಗತಿಯಿಂದ ನಡೆದು ಮುಗಿಸಿದೆವು. ಸಂಜೆ ೬ ಗಂಟೆಗೆ ಸೋಮವಾರಪೇಟೆ ಷಹರು ತಲಪಿದಾಗ ಮೊದಲು ಮಾಡಿದ ಪುಣ್ಯಕಾರ್ಯವೆಂದರೆ ಸಮೀಪದ ಉಡುಪಿಕೃಷ್ಣ ಭವನ ಸಂದರ್ಶನ. ಮಸಾಲೆದೋಸೆ, ವಡೆ.

ಪೂರಿ, ಕಾಫಿ ಎಲ್ಲವೂ ಹೊಸ ಹೊಸ ರುಚಿಯನ್ನೇ ನಮ್ಮ ಪಾಲಿಗೆ ಒದಗಿಸಿದುವು. ರಾತ್ರಿ ನಾವು ಉಳಿದದ್ದು ಸೋಮವಾರಪೇಟೆಯ ಪ್ರೌಢಶಾಲೆಯ ಹಾಸ್ಟೆಲಿನಲ್ಲಿ. ನನ್ನ ಮಾವ (ಮತ್ತು ಗುರು) ಎ. ಪಿ. ಶ್ರೀನಿವಾಸರಾಯರು ಅಲ್ಲಿಯ ಮುಖ್ಯೋಪಾಧ್ಯಾಯ ರಾಗಿದ್ದುದರಿಂದ ನಮಗೆ ಬಿಸಿನೀರು ಸ್ನಾನ, ರಸಕವಳ, ಮಲಗಲು ಸುಪ್ಪತ್ತಿಗೆ ಎಲ್ಲವೂ ಯಥೇಚ್ಛ ದೊರೆತವು. ಮುಂದಿನ ನಡಿಗೆ ನಾಗರಿಕತೆಯ ಮೂಲಕವಾದದ್ದರಿಂದ ನಮಗೆ ಏನೇನೂ ಪ್ರಯಾಸವಾಗಲಿಲ್ಲ. ಎರಡು ದಿವಸಗಳ ತರುವಾಯ ಮಡಿಕೇರಿ ತಲಪಿದಾಗ ಕಲಿತ ಪಾಠವೇನು ?

ಹೊಟ್ಟೆ ಗಟ್ಟಿಯಾಗಿರುವಾಗ ನಾಳಿನ ಚಿಂತೆ ಇಲ್ಲದಿರುವಾಗ "ನಾನು ಬದುಕಲೆಂದು ತಿನ್ನುವುದು" ಎಂದು ಅಬ್ಬರಿಸಿ ಇತರರ ಮೆಚ್ಚುಗೆ ಪಡೆದು ನನ್ನ ಆದರ್ಶದ ಹಿರಿಮೆಗೆ ನಾನೇ ಬೆನ್ನು ಚಪ್ಪರಿಸಿಕೊಳ್ಳಬಹುದು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಈ ಆದರ್ಶ ನಿಂತೀತೇ ! ವಿಶ್ವಾಮಿತ್ರ ! ಹೊಟ್ಟೆಯ ಪ್ರಶ್ನೆಯನ್ನು ಪ್ರಾಯೋಗಿಕವಾಗಿಯೂ ಆದರ್ಶದ ಸೋಗಿಲ್ಲದೆಯೂ ನಾವು ಎದುರಿಸದಿದ್ದರೆ ಬೇರೆ ಯಾವ ಮಹಾಕಾರ್ಯವೂ (ಅದೂ ಸಾಮೂಹಿಕವಾಗಿ) ನಮ್ಮಿಂದ ಸಾಧ್ಯವಾಗದು. ಈ ವಿಚಾರದಲ್ಲಿ ನಾವು ನಾಚಬೇಕಾಗಿಯೂ ಇಲ್ಲ. ನಿಂದಿಸಬೇಡ ಅನ್ನವನ್ನು !

ಕೊಡಿಗೆಯಲ್ಲಿ ಕಲಿತ ಕೆಲಸ

ಕೊಡಿಗೆಯ ಶೆಟ್ಟಿ ಗಾರ್ಡನ್ನಿನ ಕ್ಯಾಂಪು. ಸುಮಾರು ಒಂದು ಸಾವಿರ ಮಂದಿ ಸೀನಿಯರ್ ಮತ್ತು ಜೂನಿಯರ್ ಡಿವಿಶನ್ ಕ್ಯಾಡೆಟುಗಳು. ಸರಕಾರದಿಂದ ಪ್ರತಿಯೊಬ್ಬ ಶಿಬಿರ ವಾಸಿಗೂ ದೈನಂದಿನ ಆಹಾರಭತ್ಯವಾಗಿ ಎರಡು ರೂಪಾಯಿಗಳು ದೊರೆಯುತ್ತಿದ್ದುವು. ಎಂದರೆ ಒಂದೊಂದು ದಿವಸದ ಆಹಾರದ ಖರ್ಚು ಎರಡುಸಾವಿರ ರೂಪಾಯಿಗಳನ್ನು ಮೀರಬಾರದು. ವಾಹನ ವಸತಿ ನಿರ್ಮಾಣ ಮುಂತಾದ ಇತರ ಖರ್ಚುಗಳಿಗೆ ಪ್ರತ್ಯೇಕ ವಾಗಿಯೇ ಹಣವನ್ನು ಮಂಜೂರಿಸಿದ್ದರು. ಬೆಡ್‌ಕಾಫಿ, ಉಪಾಹಾರ, ಮಧ್ಯಾಹ್ನದ ಊಟ, ಸಾಯಂಕಾಲ ಕಾಫಿ ತಿಂಡಿ, ರಾತ್ರಿ ಊಟ. ದಿನಬಿಟ್ಟು ದಿನವಾದರೂ ಮಾಂಸದ ಪದಾರ್ಥ ಬಡಿಸಬೇಕು. ಈ ಖರ್ಚು ಮಾಪನವನ್ನು ನಿಯಂತ್ರಿಸುವುದು ಹೇಗೆ ? ಅತಿಯಾದ ಜೀನತನ ಮಾಡಿದರೆ ಹುಡುಗರಿಗೆ ಸಾಕಷ್ಟು ಹೊಟ್ಟೆಗೆ ಕೊಡದೆ ಅಪರಾಧ ವಾದೀತು. ಮಿಗುವ ಹಣ ಸರಕಾರಕ್ಕೇನೋ ಉಳಿಯುತ್ತದೆ. ಇನ್ನು ಮಿತಿಯಿಲ್ಲದ ಧಾರಾಳತನ ಪ್ರದರ್ಶಿಸಿದರೆ ಕ್ಯಾಂಪು ಮುಗಿಯುವಾಗ, ಮಂಜೂರಾದ ಹಣದ ಗಡಿ ಯನ್ನು ಮೀರಿ ಅಂಗಡಿಗಳಿಗೆ ಲೆಕ್ಕ ತೀರಿಸಲು ಹಣ ಉಳಿಯಲಾರದು. ದಿನ ದಿನ ಒಂದು ಬಿಗಿಸರಿಗೆಯ ಮೇಲಿನ ನಡಿಗೆ ನಾನಿಲ್ಲಿ ಮಾಡಬೇಕು. ಸಹಕಾರ ಸಂಘದ ವ್ಯವಹಾರದಿಂದ ನಾನು ಗಳಿಸಿದ್ದ ಅನುಭವವೂ ನನ್ನ ವಿಷಯವೇ ಆಗಿದ್ದ ಗಣಿತಜ್ಞಾನವೂ ಈಗ ನನಗೆ ಪ್ರಾಯೋಗಿಕ ಉಪಯೋಗಕ್ಕೆ ಬಂದುವು. ಕ್ಯಾಂಪ್ ತೊಡಗುವ ಮೊದಲೇ ಈ ಸಮಸ್ಯೆಗಳನ್ನು ಮನಗಂಡ ನಾನು ಆಹಾರದ ವ್ಯವಹಾರ ಪ್ರತಿ ಹೆಜ್ಜೆಯಲ್ಲಿಯೂ ನಿಯಮಬದ್ಧವಾಗಿರಬೇಕು, ಆದರೂ ಈ ನಿಯಮಗಳ ಸಂಕೋಲೆ ಆಹಾರವಿತರಣೆ ಯನ್ನು ತಡಮಾಡಬಾರದು ಎಂದುಕೊಂಡೆ. ಕ್ಯಾಂಪಿಗೆ ಬೇಕಾದ ಸಕಲ ಆಹಾರ

ಸಾಮಗ್ರಿಗಳ ಯಾದಿಯನ್ನು ಹಿಂದಿನ ಕ್ಯಾಂಪಿನ ಪತ್ರಗಳ ಪರಿಶೀಲನೆಯಿಂದ ತಯಾರಿಸಿದೆ. ಆ ಹೆಸರುಗಳನ್ನು ಅಕಾರಾದಿಯಾಗಿ ಬರೆಸಿ ಇಂಥ ಸಾಕಷ್ಟು ಹಾಳೆಗಳನ್ನು ಸಿದ್ಧಪಡಿಸಿ ಇಟ್ಟುಕೊಂಡೆ. ಟೆಂಡರು ಒಪ್ಪಿದ ಅಂಗಡಿಯವರಿಂದ ಸಾಮಗ್ರಿಗಳು ಕ್ಯಾಂಪಿನ ಉಗ್ರಾಣಕ್ಕೆ ಬಂದೊಡನೆಯೇ ಅವನ್ನು ತೂಕಮಾಡಿ ಅವುಗಳ ವಿವರಗಳನ್ನು ಈ ಯಾದಿಯ ಕ್ರಮದಲ್ಲಿಯೇ ಬರೆದು ಅದೇ ಕ್ರಮದಲ್ಲಿ ಉಗ್ರಾಣದಲ್ಲಿ ಅಳವಡಿಸಲು ಏರ್ಪಾಡು ಮಾಡಿದೆ. American flour— ಇದಕ್ಕೆ ಯಾದಿಯ ಮೇಲೆಯೂ ಉಗ್ರಾಣದಲ್ಲಿಯೂ ಒಂದನೆಯ ಸ್ಥಾನ ; Asafoetidaಕ್ಕೆ ಎರಡನೆಯ ಸ್ಥಾನ, ಹೀಗೆ.

ಆರ್ಮಿಯಲ್ಲಿ ಹಸುಗೆಯ ಮಾನ ಒಬ್ಬೊಬ್ಬನಿಗೆ ಇಂತಿಷ್ಟೇ ಎಂದು ನಿಗದಿಯಾಗಿರುವ ಪಟ್ಟಿ ದೊರೆಯುತ್ತದೆ. ಅದರ ಆಧಾರದ ಮೇಲೆ ಅಡುಗೇ ಮನೆಗೇ ಒಂದೊಂದು ಹೊತ್ತಿಗೂ ಬೇಕಾಗುವಷ್ಟು ಆಹಾರ ಸಾಮಗ್ರಿಗಳನ್ನು ತೂಕ ಮಾಡಿ ಕೊಡುತ್ತಿದ್ದೆವು. ಪ್ರತಿ ಸಲವೂ ಒಂದು ಸಾಮಗ್ರಿಯನ್ನು ಕೊಟ್ಟಂತೆ ಆ ವಿವರವನ್ನು ಯಾದಿಯಲ್ಲಿ ಮುದ್ರಿತವಾಗಿರುವ ಅದರ ಹೆಸರಿನ ಎದುರು ಬರೆಯಬೇಕಾಗಿತ್ತು. ರಾತ್ರಿಯ ಊಟಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸಂಜೆಯ ೪ ಗಂಟೆಗೇ ಕೊಟ್ಟುಬಿಡುತ್ತಿದ್ದೆವು. ಇನ್ನುಳಿದ ಕೆಲಸ ಸುಲಭ. ಪ್ರತಿಯೊಂದು ಅಡ್ಡಸಾಲನ್ನೂ ಕೂಡಿಸಿ ಒಂದೊಂದು ಸಾಮಗ್ರಿಯನ್ನೂ ಎಷ್ಟೆಷ್ಟು ಆ ದಿವಸ ಕೊಡಲಾಗಿದೆ ಎಂದು ತಿಳಿಯುವುದು ; ಅದರ ಖರೀದಿ ಬೆಲೆ ಪ್ರಕಾರ ಒಟ್ಟು ಬೆಲೆಯನ್ನು ಕಂಡುಹಿಡಿಯುವುದು : ಕೊನೆಯ ನೀಟ ಸಾಲಿನ ಮೊತ್ತವೇ ಆ ದಿವಸ ವಿನಿಯೋಗಿಸಿದ ಆಹಾರ ಸಾಮಗ್ರಿಗಳ ಬೆಲೆ. ಇದಕ್ಕೆ ಅಡುಗೆಯವರ ಸಂಬಳ, ಸೌದೆಯ ಬೆಲೆ ಮುಂತಾದವುಗಳ ಸರಾಸರಿಯನ್ನು ಕೂಡಿಸಿದರೆ ಆ ದಿವಸ ಆಹಾರದ ಮೇಲೆ ಮಾಡಿದ ಖರ್ಚು ತಿಳಿಯುತ್ತದೆ. ಕ್ಯಾಂಪಿನ ಮೊದಲನೆಯ ದಿವಸ ಈ ಕೆಲಸವನ್ನು ಪರಿಷ್ಕಾರವಾಗಿ ಮಾಡಲು ನನಗೆ ಆಗಲಿಲ್ಲ. ಕ್ಯಾಂಪು ವ್ಯವಸ್ಥೆಗೊಳ್ಳಲು ಒಂದೆರಡು ದಿವಸಗಳು ಬೇಕಾಗುತ್ತವೆ. ಎರಡನೆಯ ದಿವಸದ ಸಂಜೆ ಎರಡೂ ದಿವಸಗಳ ಒಟ್ಟು ಖರ್ಚನ್ನು ಲೆಕ್ಕ ಹಾಕಿ ನೋಡುವಾಗ ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಬಹುದಾದಲ್ಲಿ ನಾವು ಕೇವಲ ಎರಡು ಸಾವಿರವನ್ನು ಮಾತ್ರ ತಲಪಿದ್ದೆವು. ಆಹಾರ ಸಮೃದ್ಧಿಯಾಗಿತ್ತು ; ಕಳಪೆ ಆಗಿರಲಿಲ್ಲ. ಆದರೆ ಇನ್ನಷ್ಟು ಪುಷ್ಕಳಗೊಳಿಸಬಹುದೆಂದು ಧೈರ್ಯ ಮೂಡಿತು. ಲೆಕ್ಕಪತ್ರಗಳನ್ನೂ ಉಗ್ರಾಣದಲ್ಲಿ ಉಳಿದಿದ್ದ ಸಾಮಗ್ರಿಗಳ ತೂಕಗಳನ್ನೂ ಪುನಃ ಪರಿಶೀಲಿಸಿ ನಮ್ಮ ಗಣನೆ ಸರಿಯಾಗಿದೆ ಎಂದು ನಿರ್ಧರಿಸಿ ರಾಯಪ್ಪನವರಿಗೆ ಎಲ್ಲ ವಿಷಯವನ್ನು ಹೇಳಿದೆ. ಪ್ರತಿ ದಿನವೂ ಮಾಂಸದ ಪದಾರ್ಥ ಕೊಡೋಣ : ಬೆಳಗ್ಗೆ ೧೦–೩೦ ಗಂಟೆ ಹೊತ್ತಿಗೆ ಟ್ರೈನಿಂಗ್ ಗ್ರೌಂಡಿನಲ್ಲಿ ಚಾಕೊಲೆಟ್ ಹಾಲನ್ನು (ಕೊಡಿಗೆಯ ಡೈರಿ ಫಾರ್ಮ್ ಇದನ್ನು ಕುಪ್ಪಿಗಳಲ್ಲಿ ಸರಬರಾಜು ಮಾಡುತ್ತಿತ್ತು) ಹುಡುಗರಿಗೆ ಹಂಚೋಣ ಎಂದು ತೀರ್ಮಾನಿಸಿದೆವು. ಆಹಾರ, ಲೆಕ್ಕಪತ್ರಗಳ ವಿಲೇವಾರಿ ಸಮರ್ಪಕವಾಯಿತು. ಅತ್ತ ಆ ಹಿಂದಿನ ವರ್ಷದ ಬೇಸಗೆಯಲ್ಲಿ ಡೆಹರಾಡೂನಿಗೆ ರಿಫ್ರೆಶರ್ ಕೋರ್ಸಿಗೆ ಹೋಗಿ ಬಂದಿದ್ದ ಜನಾರ್ದನ ಬಾಳಿಗರು ಟ್ರೈನಿಂಗನ್ನು ಇನ್ನಷ್ಟು ನಿಷ್ಕೃಷ್ಟವೂ ಪರಿಷ್ಕಾರವೂ ಆಗಿ ಮಾಡಿದರು.

ಕಮಾಂಡರ್ ದಾದಾಭಾಯ್ ಬಂದು ನಮ್ಮ ಕ್ಯಾಂಪಿನಲ್ಲಿಯೇ ತಂಗಿದರು. "ಓ ನನ್ನ

ಮಕ್ಕಳೇ! ನೀವೆಂಥ ಪಪಾಡ ಪುರುಷರು!" ಎಂದೇ ಅವರು ನಮ್ಮನ್ನು ಕರೆದು ಹುರಿದುಂಬಿಸುತ್ತಿದ್ದರು.

ಕ್ಯಾಪ್ಟನ್ ರಾಯಪ್ಪನವರ ಕೆಲಸವೇ ಹೀಗೆ—ಮಾತಿಲ್ಲ, ಗದ್ದಲವಿಲ್ಲ. ಇಡೀ ಕ್ಯಾಂಪಿನಲ್ಲಿ ಅವರಿದ್ದಾರೆ. ಎಲ್ಲದರ ವಿಚಾರವೂ ಅವರಿಗೆ ತಿಳಿದಿದೆ. ಆದರೆ ಎಲ್ಲ ಕಾರ್ಯಗಳ ಹೊಣೆಯೂ ಇತರರದು! ಹುಡುಗರಿಗೆ ಮಿಲಿಟರಿ ಪಾಠ ಮಾಡಿದರು. ನನ್ನೊಡನೆ ಬಂದು ಆಡಳಿತೆಯ ಅಚಾರದಲ್ಲಿ ಸಮರ್ಥ ಸೂಚನೆ ನೀಡಿದರು. ವಾಸ್ತವಿಕ ಪರಿಸ್ಥಿತಿಯೇ ಇರುವಂತೆ ಮಿಲಿಟರಿ ಕವಾಯತುಗಳನ್ನು (ಆಕ್ರಮಣ, ರಕ್ಷಣೆ ಮುಂತಾದವು) ಮಾಡಿಸಿದರು. ಎನ್‌ಸಿಸಿ ಕೆಲಸವನ್ನು ನಾವೆಲ್ಲರೂ ಕಲಿತದ್ದು ಈ ಮಹಾನುಭಾವನಿಂದ. "ಎನ್‌ಸಿಸಿ ನಿಮ್ಮದು, ಇದನ್ನು ಕಟ್ಟಬೇಕಾದವರು ನೀವು" ಈ ಆದರ್ಶವನ್ನು ಅವರು ಅಕ್ಷರಶಃ ಪಾಲಿಸಿದರು.

ನಿಷ್ಠಾಪೂರ್ವಕ ದುಡಿಮೆಯ ಫಲ ಸಂತೋಷ

ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ಪ್ರಾಂತ ಮುಂತಾದ ಕನ್ನಡನಾಡಿನ ವಿವಿಧ ಪ್ರದೇಶಗಳು ಒಂದನೆಯ ನವಂಬರ್ ೧೯೫೬ರಂದು ವಿಲೀನಗೊಂಡು ಕರ್ನಾಟಕ ರಾಜ್ಯೋದಯವಾಯಿತಷ್ಟೆ. ಇದರ ಪರಿಣಾಮವಾಗಿ ಮಂಗಳೂರಿನ ಎನ್‌ಸಿಸಿಯ ಆಡಳಿತೆ ಬೆಂಗಳೂರಿನಲ್ಲಿದ್ದ ಎನ್‌ಸಿಸಿಯ ಪ್ರಧಾನ ಕಛೇರಿಗೆ ವರ್ಗವಾಯಿತು. ಅದೇ ವೇಳೆ ಮಂಗಳೂರು ಇಂಡಿಪೆಂಡೆಂಟ್ ಕಂಪೆನಿ ಎನ್‌ಸಿಸಿ ಎಂಬ ಹೊಸ ಎನ್‌ಸಿಸಿ ಯೂನಿಟ್ಟನ್ನು ಪ್ರಾರಂಭಿಸಿ ಅದರ ಕೇಂದ್ರ ಕಛೇರಿಯನ್ನು ಮಂಗಳೂರಿನಲ್ಲಿ ಸ್ಥಾಪಿಸಿದರು. ಇದಕ್ಕೆ ಆಫಿಸರ್ ಕಮಾಂಡಿಂಗ್ ನೇಮಕಗೊಂಡು ಬರುವವರೆಗೂ ನಮ್ಮ ಆಫಿಸರ್ ಕಮಾಂಡಿಂಗ್ ಅವರೇ ಅದನ್ನೂ ನೋಡಿಕೊಳ್ಳಬೇಕೆಂದು ಮೇಲಿನಿಂದ ಆದೇಶ ಬಂದಿತು. ಹೀಗಾಗಿ ಕ್ಯಾಪ್ಟನ್ ರಾಯಪ್ಪನ್ ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಎನ್‌ಸಿಸಿ ದಳಗಳ ಮುಖ್ಯಾಧಿಕಾರಿಗಳಾದರು, ಕೊಡಿಗೆಯಲ್ಲಿ ನಮ್ಮ ಕ್ಯಾಂಪು (ಡಿಸೆಂಬರ್ ೧೯೫೬–ಜನವರಿ ೧೯೫೭) ಮುಗಿದೊಡನೆಯೇ ದಕ್ಷಿಣ ಕನ್ನಡ ಜಿಲ್ಲೆಯ ಎನ್‌ಸಿಸಿ ದಳಗಳ ಕ್ಯಾಂಪನ್ನು ಅಲ್ಲಿಯೇ ಮುಂದುವರಿಸಿದರು. ಈ ಕ್ಯಾಂಪನ್ನು ನೋಡಲು ಮಡಿಕೇರಿಯಿಂದ ನಾವು ಮೂವರು ಆಫಿಸರರೂ ಒಂದು ಬೆಳಗ್ಗೆ ಕೊಡಿಗೆಗೆ ಹೋಗಿ ಸಾಯಂಕಾಲ ಮರಳಿದೆವು. ನಾವು ಒಮ್ಮೆ ರಾಜ್ಯಭಾರವನ್ನು ಮಾಡಿ ಬಿಟ್ಟು ಹೋದ ಪ್ರದೇಶದಲ್ಲಿ ಇನ್ನೊಬ್ಬರು ಆಡಳಿತೆ ನಡೆಸುವುದನ್ನು ನೋಡುವಾಗ ಮೂಡುವ ಭಾವಗಳು ಸಮ್ಮಿಶ್ರ. ಅಲ್ಲಿಯ ಒಂದೊಂದು ಸ್ಥಳವೂ ಒಂದೊಂದು ಸ್ಥಾಣುವೂ ಮರಗಳ ಒಂದೊಂದು ಎಲೆಯೂ ಮೂಕವಾಗಿ ನಮ್ಮೊಡನೆ ಸಂಭಾಷಿಸುವಂಥ ಅನುಭವವಾಗುವುದು. ಇದರಲ್ಲಿ ಬಹುಪಾಲು ಗತಕಾಲವನ್ನು—ಎಂದರೆ ನಮ್ಮ ದಿವಸಗಳನ್ನು——ಕುರಿತು ಹೊಗಳಿಕೆಯ ಮಾತುಗಳೇ. ಆ ಮಾನದಂಡದೊಡನೆ ಹೋಲಿಸಿ ಇಂದು ಹೇಗೆ ತಗ್ಗಿದೆ, ಆದ್ದರಿಂದ ನಮ್ಮ ದಿವಸಗಳು (ಮತ್ತು ನಾವು) ಎಂಥ ಉತ್ಕೃಷ್ಟ ಎಂಬಂಥ ಭಾವನೆಯನ್ನು ಮನಸ್ಸಿನಲ್ಲಿ ಸ್ಪಂದಿಸುವಂತೆ ಮಾಡುವುವು. ಇಂದಿನ ಟೀ, ಊಟ, ಶಿಕ್ಷಣ ಅಂದಿಗಿಂತ ವಾಸ್ತವಿಕವಾಗಿ ಉತ್ತಮವೇ ಇದ್ದರೂ ನಮಗೆ ಹಾಗೆ

ಅನ್ನಿಸುವುದಿಲ್ಲ. ವಾಸ್ತವಿಕತೆಗೆ ಈ ವಿರೂಪ ಬರುವುದು ಬಹುಶಃ ನಮ್ಮತನ ಎಂಬ ಭೂತಕನ್ನಡಿಯ ಮೂಲಕ ನಾವು ನೋಡುವುದರಿಂದ. ಅಂದು ನಮ್ಮೊಡನೆ ಕೆಲಸ ಮಾಡಿ ಒಗ್ಗಿ ಹೋಗಿದ್ದ ಜನ ತಿಳಿದೋ ತಿಳಿಯದೆಯೋ ಅಥವಾ ನಮ್ಮನ್ನು ಸಂತೋಷ ಗೊಳಿಸಲೋ ಆಡುವ ಮಾತುಗಳು ಮಾಮೂಲಿನವೇ "ನಿಮ್ಮಂಥವರು ಎಲ್ಲಿ ಬಂದಾರು ! ಅವೆಂಥ ದಿವಸಗಳು. ಇಂದು ಎಲ್ಲವೂ ಗೊಂದಲ. ಮನುಷ್ಯತ್ವಕ್ಕೆ ಬೆಲೆಯೇ ಇಲ್ಲ." ಇಂಥ ಅನುಭವಗಳ ಪರಿಣಾಮವಾಗಿ ನನಗಾಗಲೀ ನನ್ನ ಸೋದರ ಅಫಿಸರು ಗಳಿಗಾಗಲೀ ತಲೆಕೆಡಲಿಲ್ಲ, ನಾವೇ ಮಹಾತ್ಮರೆಂಬ ಭ್ರಮೆ ಮೂಡಲಿಲ್ಲ. ನಾವು ನಮ್ಮ ದಿವಸಗಳನ್ನು ಅಂದಿನ ಪರಿಸ್ಥಿತಿಗೆ ಹೊಂದಿ ನಮ್ಮ ಸಾಮರ್ಥ್ಯದ ಮಿತಿಯಲ್ಲಿ ಮನಃ ಪೂರ್ವಕವಾಗಿ ನಿರ್ವಹಿಸಿದೆವು. ಇಂಥ ನಿರ್ವಹಣೆ ನಮಗೆ ಪೂರ್ಣ ಆನಂದ ನೀಡಿತು. ಅಲ್ಲಿಗೆ ಅದು ಮುಕ್ತಾಯ. ಹಿಂದೆ ಇಂದಾಗದು. ಆದ್ದರಿಂದ ಹಿಂದಿನ ದಿನದ ಆನಂದ ವನ್ನು ಇಂದಿಗೆ ವರ್ಗಾಯಿಸಿ ಇಂದಿನ ಹೊಸ ಆನಂದದಿಂದ ವಂಚಿತರಾಗುವುದು ಬೇಡ. ಇದು ನನ್ನ ದೃಷ್ಟಿ. ಅವನವನ ನಿಷ್ಠಾಪೂರ್ವಕ ಕಾರ್ಯ ಅವನವನಿಗೆ ನೀಡುವ ಆನಂದವೇ ನಿಜವಾದ ಆನಂದ. ಗತವೈಭವದ ಸ್ಮರಣೆ ಅಲ್ಲ. ಬೇರೊಬ್ಬನೊಡನೆ ಹೋಲಿಕೆಯಿಂದಲ್ಲ.

ಉತ್ತಮರುಗಳ ನಿಂದಿಸುತ ದು
ರ್ವೃತ್ತನಾಗಿಯಧರ್ಮ ಕೋಟಿಯೊ
ನಿತ್ಯವಿಧಿ ತನಗಾಗಿ ಧರ್ಮದ ತಾರತಮ್ಯವನು
ಎತ್ತಲೆಂದರಿಯದೆ ಜಗಕ್ಕೆ ಜ
ಡಾತ್ಮರಾಗಿಹ ವೇದಬಾಹ್ಯರ
ಮೃತ್ಯು ದೇವತೆ ಮುರಿದು ಮೋದದೆ ಬಿಡುವಳೇಯೆಂದ

ಕುಮಾರವ್ಯಾಸ

೧೯೫೭

ನೇತ್ರಾವತಿಗೆ ಬಂದ ಮಹಾಪೂರ

ಭೂಮಿ (ನಮ್ಮನ್ನು ಕೇಳದೇ) ಸೂರ್ಯನಿಗೆ ಇನ್ನೊಂದು ಪ್ರದಕ್ಷಿಣೆಯನ್ನೂ ಮುಗಿಸಿತು. ೧೯೫೭ರ ಜೂನಿನಲ್ಲಿ ಹಿಂದಿನ ಕಾರ್ಯಕ್ರಮಗಳ ಪುನರಾವರ್ತನೆ ನಮ್ಮೆಲ್ಲರ ಅನುಭವದ ಪಕ್ವತೆಯ ಫಲವಾಗಿ ಕ್ರಮಬದ್ಧವಾಗಿ ನೆರವೇರಿತು. ಜುಲೈ ತಿಂಗಳಿನಲ್ಲಿಯೇ ವಾರ್ಷಿಕ ಶಿಬಿರದ ಏರ್ಪಾಡನ್ನು ಪ್ರಾರಂಭಿಸುವುದು ಅಗತ್ಯ ಎನ್ನಿಸಿತು—ಈ ವರ್ಷ ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳ ಸೀನಿಯರ್ ಡಿವಿಶನ್ ಹುಡುಗರ ಹಾಗೂ ಜೂನಿಯರ್ ಡಿವಿಶನ್ ಹುಡುಗರ ಮತ್ತು ಹುಡುಗಿಯರ ಕ್ಯಾಂಪನ್ನು ಒಟ್ಟಿಗೆ ಒಂದೇ ಅವಧಿಯಲ್ಲಿ ನಡೆಸಬೇಕೆಂದು ಬೆಂಗಳೂರಿನ ಹುಕುಂ ಇತ್ತು. ದಕ್ಷಿಣ ಕನ್ನಡದ ಉತ್ತರ ತುದಿಯಾದ ಕುಂದಾಪುರದಿಂದಲೂ ಕೊಡಗಿನ ದಕ್ಷಿಣ ಭಾಗವಾದ ಪೊನ್ನಂಪೇಟೆ ಯಿಂದಲೂ ಕ್ಯಾಡೆಟುಗಳು ಆಗಮಿಸಬೇಕು. ಎಲ್ಲೂ ರೈಲುಮಾರ್ಗವಿಲ್ಲ. ಬಸ್ ಮೂಲಕವೇ ಪ್ರಯಾಣ. ಆದಷ್ಟು ಕಡಿಮೆ ಖರ್ಚಿನಲ್ಲಿ ಇದಾಗಬೇಕಾದರೆ ಒಂದು ಕೇಂದ್ರ ಸ್ಥಳದಲ್ಲಿ ನಮ್ಮ ಕ್ಯಾಂಪನ್ನು ಸ್ಥಾಪಿಸಬೇಕು. ಅದು ಪುತ್ತೂರಿನ ಆಸುಪಾಸಿನಲ್ಲಿ ಇದ್ದರೆ ಸರ್ವಹಿತವೆಂಬ ನನ್ನ ಸೂಚನೆಯನ್ನು ಕ್ಯಾಪ್ಟನ್ ರಾಯಪ್ಪನ್ ಅನುಮೋದಿಸಿ ದರು. ಪುತ್ತೂರು ನನ್ನ ಎರಡನೆಯ ಮನೆಯಷ್ಟೆ. ಇಲ್ಲಿಯೂ ಕೊಡಗಿನಂತೆಯೇ ನಾನು ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತನಾಗಿದ್ದುದರಿಂದ ಸೌಕರ್ಯಗಳನ್ನು ಪಡೆಯುವುದು ಸಾಧ್ಯವೆಂದು ಭಾವಿಸಿದ್ದೆ. ನಮ್ಮ ೧೫ CWT ಟ್ರಕ್ಕನ್ನು ಏರಿ ಹೋದೆವು. ಸುಳ್ಯ ನೋಡಿದೆವು. ಆಗಲಿಲ್ಲ. ಮರಿಕೆಯ (ನಾನು ಹುಟ್ಟಿದ ಸ್ಥಳ) ಪಕ್ಕದ ಪದವುಗಳನ್ನು ಪರಿಶೀಲಿಸಿದೆವು. ನೀರಿನ ಸೌಕರ್ಯವಿಲ್ಲ. ಪುತ್ತೂರಿನಲ್ಲಿ ವಿಚಾರಿಸಿದಾಗ ನನ್ನ ಮಾವನವ ರಿಂದ ಉಪ್ಪಿನಂಗಡಿ ಬಳಿ ನೋಡಿದರಾಗಬಹುದೆಂಬ ಸೂಚನೆ ದೊರೆಯಿತು. ಪುತ್ತೂರು–ಬೆಳ್ತಂಗಡಿ ಮಾರ್ಗದಲ್ಲಿ ಪುತ್ತೂರಿನಿಂದ ೯ ಮೈಲಿ ದೂರದಲ್ಲಿ ಉಪ್ಪಿನಂಗಡಿ ಇದೆ. ಮಾವನವರ ಸಮೇತ ಅಲ್ಲಿಗೆ ಹೋಗಿ ಸ್ಥಳೀಯರೊಡನೆ ವಿಚಾರಿಸಿದೆವು.

ವೇಣುಗೋಪಾಲಕೃಷ್ಣ ನಾಯಕರೆನ್ನುವ ಸ್ಥಳೀಯ ವ್ಯಾಪಾರಸ್ಥರು ಹಾಗೂ ಧುರೀಣರು ನಮ್ಮನ್ನು ಆದರದಿಂದ ಸ್ವಾಗತಿಸಿ ಉಪ್ಪಿನಂಗಡಿ–ಸಕಲೇಶಪುರ ರಾಜ ಮಾರ್ಗದಲ್ಲಿ ಉಪ್ಪಿನಂಗಡಿಯಿಂದ ಎರಡು ಮೈಲಿ ದೂರದಲ್ಲಿರುವ ಮಠತಡ್ಕ ಎಂಬಲ್ಲಿಗೆ ಕೊಂಡೊಯ್ದರು. ಬಲು ವಿಶಾಲವಾದ ಹಾಳುಬಿದ್ದ ಪರಂಬು. ೨೦,೦೦೦ ಜನ ನಿಂತರೂ ಜಾಗ ಉಳಿದೀತು. ಅದರ ಒಂದು ಅಂಚು ರಾಜಮಾರ್ಗವಾದರೆ ಎದುರು ಅಂಚು ನೇತ್ರಾವತಿ ನದಿ. ಆಳವಿಲ್ಲ. ಬಲು ಅಗಲ. ಸದಾ ಶುದ್ಧ ನೀರಿನಿಂದ ಸಮೃದ್ಧ. ನಮಗಾಗಿಯೇ ಈ ಸ್ಥಳ ನಿರ್ಮಾಣಗೊಂಡಂತಿತ್ತು. ಜಾಗದ ಆಯ್ಕೆ ಮುಗಿಯಿತು. ಇನ್ನು ಲಾಗ ಹೊಡೆಯುವುದೊಂದೇ ಉಳಿದದ್ದು. ಒಂದೇ ದಿವಸ ಸುಮಾರು ೧,೩೦೦ ಮಂದಿ ವಿವಿಧ ಮೂಲೆಗಳಿಂದ ಉಪ್ಪಿನಂಗಡಿಯಲ್ಲಿ ಸಂಗಮಿಸಬೇಕು. ಇವರ ವಾಹನ

ಸೌಕರ್ಯವನ್ನು ಸಮರ್ಥವಾಗಿಯೂ ಕಡಿಮೆ ಖರ್ಚಿನಿಂದಲೂ ಏರ್ಪಡಿಸಬೇಕು. ಕ್ಯಾಂಪಿಗೆ ಬಂದ ತರುಣರು ಎದುರಾಗುವ ಮಾನವೀಯ ಸಮಸ್ಯೆಗಳು ಪ್ರಮುಖವಾಗಿ ಆಹಾರ, ವಸತಿ. ಅಲ್ಲದೆ ಹುಡುಗಿಯರೂ ಈ ಕ್ಯಾಂಪಿನಲ್ಲಿ ಭಾಗವಹಿಸುವುದರಿಂದ ಹೆಚ್ಚಿನ ಮುನ್ನೆಚ್ಚರಿಕೆ ನಾವು ತೆಗೆದುಕೊಳ್ಳುವುದು ಅತ್ಯಾವಶ್ಯಕ. ಕ್ಯಾಪ್ಟನ್ ರಾಯಪ್ಪನ್ ಶಿಬಿರಾಧಿಪತಿ. ಮಂಗಳೂರಿನ (ಎಂಆರ್‌ಸಿಯಲ್ಲಿ ನನ್ನೊಡನೆ ಶಿಕ್ಷಣ ಪಡೆದಿದ್ದ, ನಾನು ಒಂದು ವರ್ಷ ಎನ್‌ಸಿಸಿಯಿಂದ ಹೊರಗೆ ಇದ್ದುದರಿಂದ ಈಗ ನನಗಿಂತ ಸೀನಿಯರರಾಗಿದ್ದ) ಲೆಫ್ಟಿನೆಂಟ್ ಶಿವಶಂಕರ ಮೆನನ್ ಕ್ಯಾಂಪಿನ ಉಪಮುಖ್ಯಾಧಿಕಾರಿ. ನಾನು ಮಾಮೂಲಿನಂತೆ ಕ್ಯಾಂಪಿನ ಆಡಳಿತಾಧಿಕಾರಿ; ಬಾಳಿಗ ಶಿಕ್ಷಣಾಧಿಕಾರಿ; ಕೃಷ್ಣಯ್ಯ ಅಡ್ಜುಟೆಂಟ್. ಕ್ಯಾಂಪ್ ಪ್ರಾರಂಭವಾಗುವ ಒಂದು ತಿಂಗಳ ಮುಂಚಿತವಾಗಿಯೇ ನಮ್ಮ ಸೈನಿಕರು ಉಪ್ಪಿನಂಗಡಿಯಲ್ಲಿ ಬೀಡುಬಿಟ್ಟರು (ಮಡಿಕೇರಿಯಿಂದ ಅಲ್ಲಿಗೆ ೬೩ ಮೈಲಿಗಳು). ಬಸ್ಸಿನ ಏರ್ಪಾಡನ್ನು ಮಂಗಳೂರಿನ ಸಮರ್ಥ ಸಿಪಿಸಿ ಕಂಪೆನಿಯ ಸಹಕಾರ, ನಿರ್ದೇಶನಗಳಿಂದ ಮಾಡಿದೆವು. ಕ್ಯಾಂಪ್ ತೊಡಗುವ ಒಂದು ವಾರದ ಮೊದಲು ನಾನು ಉಪ್ಪಿನಂಗಡಿಯಲ್ಲಿ ಬೀಡು ಹೊಡೆದೆ. ಸರಕಾರದ ವಿವಿಧ ಇಲಾಖೆಗಳಿಂದ ನಮಗೆ (ವೈಯಕ್ತಿಕವಾಗಿ ನಾವು ಹೋಗಿ ಮಾತಾಡಿದುದರಿಂದ) ಸರ್ವ ಸಹಾಯವೂ ಸಹಕಾರವೂ ಲಭಿಸಿದುವು.

ಡಿಸೆಂಬರ್ ೨೪ರ ರಾತ್ರಿ ಕ್ಯಾಂಪಿನ ಆವರಣದಲ್ಲಿದ್ದವರು ನಾವು ನೂರು ಮಂದಿ— ಕ್ಯಾಂಪಿನ ನಿರ್ವಾಹಕರು. ಮರುದಿವಸದ ಮುಂಜಾನೆಯ ೫ ಗಂಟೆಗೇ ಕ್ಯಾಡೆಟುಗಳ ಮಹಾಪೂರ ಹರಿದುಬರಲು ತೊಡಗುವುದು. ಅದನ್ನು ಕ್ರಮಬದ್ಧವಾಗಿ ಸ್ವೀಕರಿಸಿ ಆಗಾಗಲೇ ಯುಕ್ತ ಮಾರ್ಗದರ್ಶನ ಮಾಡಿ ಕ್ಯಾಂಪನ್ನು ವ್ಯವಸ್ಥೆಗೊಳಿಸಬೇಕು. ಕ್ಯಾಂಪ್ ಕಮಾಂಡೆಂಟರಿಂದ ತೊಡಗಿ ಕೊನೆಯ ಸೇವಕನ ವರೆಗಿನ ಎಲ್ಲರ ಕಾರ್ಯಗಳನ್ನೂ ನಿಗದಿಗೊಳಿಸಿದ್ದೆವು; ಮಾತ್ರವಲ್ಲ, ಒಂದು ಸಲ ಅವನ್ನು ಅಭ್ಯಾಸಮಾಡಿ ಲೋಪದೋಷಗಳನ್ನು ಸರಿಪಡಿಸಿದ್ದೆವು. ಎಲ್ಲಿಯೂ ಸನ್ನಿವೇಶಕ್ಕೆ ನಾವು ಬಲಿಯಾಗಬಾರದು; ಸನ್ನಿವೇಶವನ್ನು ನಾವು ನಿಯಂತ್ರಿಸುವಂತಿರಬೇಕು—ಇದು ನಮ್ಮ ಖಚಿತ ಅಭಿಪ್ರಾಯ.

೨೫ರಂದು ಎಲ್ಲವೂ ನಿರೀಕ್ಷಿಸಿದಂತೆಯೇ ನಡೆಯಿತು. ಆದರೆ ಮಡಿಕೇರಿಯಿಂದ ಬರಬೇಕಾಗಿದ್ದ ಒಂದು ಬಸ್ ಮಾತ್ರ ನಿಶ್ಚಿತ ವೇಳೆಯಲ್ಲಿ ಬರಲಿಲ್ಲ. ಹೊರಟ ಎಂಟು ಬಸ್ಸುಗಳಲ್ಲಿ ಅದು ಕೊನೆಯದಂತೆ; ಏಳು ಬಂದು ಕ್ಯಾಡೆಟುಗಳನ್ನು ಖಾಲಿ ಮಾಡಿ ಮರಳಿ ಗಂಟೆ ಎರಡು ಉರುಳಿದರೂ ಎಂಟನೆಯ ಬಸ್ಸಿನ ಪತ್ತೆ ಇಲ್ಲ. ರಾಯಪ್ಪನ್ ಟ್ರಕ್‌ನಲ್ಲಿ ಧಾವಿಸಿದರು. ರಾತ್ರಿ ೮ ಗಂಟೆಗೆ ಆ ಹುಡುಗರೆಲ್ಲರೂ ಬೇರೆ ಒಂದು ಬಸ್ಸಿನಲ್ಲಿ ಬಂದಿಳಿದಾಗ ತಿಳಿದದ್ದಿಷ್ಟು. ಸಂಪಾಜೆ ಘಾಟ್ ದಾರಿಯಲ್ಲಿ ದೇವರ ಕೊಲ್ಲಿ ತಿರುಗಾಸನ್ನು ಬಸ್ಸು ತಿರುಗುತ್ತಿದ್ದಾಗ ಅದರ ಚಾಲಕದಂಡ ತುಂಡಾಯಿತು. ವೇಗದಿಂದ ತೂಕವಾದ ಬಸ್ಸು ನೇರವಾಗಿ ಧಾವಿಸಿ ಎದುರಿನ ಕಲ್ಲುಬಂಡೆಗೆ ಡಿಕ್ಕಿ ಹೊಡೆಯಬೇಕಾಗಿತ್ತು. ಆದರೆ ಡ್ರೈವರನ ಪ್ರಸಂಗಾವಧಾನತೆಯಿಂದ ಡಿಕ್ಕಿಯ ತೀವ್ರತೆ ಉಜ್ಜುವಿಕೆ ಆಗಿ ಪರ್ಯವಸಾನಗೊಂಡಿತು. ಬದಿಯಲ್ಲಿ ಕುಳಿತಿದ್ದ ಒಂದಷ್ಟು ಹುಡುಗರಿಗೆ ಲಘು ಗಾಯ ನೋವುಗಳಾದುವು. ಆದರೆ ಈ ಘಟನೆಯಿಂದ ಉಂಟಾದ ಗಾಬರಿ ಭಯ

ಅತ್ಯಧಿಕ. ಈ ಹುಡುಗರನ್ನು ಧೈರ್ಯಗೊಳಿಸಿ, ಅಪಾಯವಿಲ್ಲವೆಂಬುದನ್ನು ಅವರ ಮನೆಗಳಿಗೆ ಸ್ಥಿರೀಕರಿಸಿ, ಹೊಸ ಬಸ್ಸಿನಲ್ಲಿ ಅವರನ್ನು ಕ್ಯಾಂಪಿಗೆ ಕರೆತರುವಾಗ ಸೂರ್ಯ ಕಂತಿದ್ದ. ಬಿರುಗಾಳಿ ಜಡಿಮಳೆಗಳು ತಂಗಾಳಿ ತುಂತುರ್ವನಿಗಳಾಗಿ ಮಾಯವಾದದ್ದೊಂದು ಭಾಗ್ಯ.

ನಮ್ಮ ಏರ್ಪಾಡು ಅದೆಷ್ಟೇ ಪರಿಷ್ಕಾರವಾಗಿರಲಿ ನಮ್ಮ ಮನಃಸ್ಥೈರ್ಯ ಅದೆಷ್ಟೇ ಉತ್ಕೃಷ್ಟಮಟ್ಟದ್ದಾಗಿರಲಿ ಘಟನೆ ಅದೆಷ್ಟೇ ಅನಿರೀಕ್ಷಿತವಲ್ಲದ್ದಾಗಿರಲಿ ಒಂದು ಸಲ ಸಮಸ್ಯೆಗಳ ಪ್ರಚಂಡ ತರಂಗಗಳು ಬಂದು ಮಹಾಶಕ್ತಿಯಿಂದ ನಮ್ಮನ್ನು ಬಡಿದಪ್ಪಳಿಸುವಾಗ ತತ್ತರಿಸಿ ಹೋಗುತ್ತೇವೆ. ಆ ಗಳಿಗೆಯಲ್ಲಿ ನಾವು ನಾವಾಗಿರುವುದಿಲ್ಲ. ಒಂದು ವಿಧದ ಸಮಾಧಿ ಅಥವಾ ಅತೀತ ಸ್ಥಿತಿಯಲ್ಲಿರುತ್ತೇವೆ. ಆಡಳಿತಾಧಿಕಾರಿಯಾದ ನನ್ನ ಸ್ಥಿತಿ ಹೀಗಿತ್ತು. ಒಂದೊಂದು ಬಸ್ಸೂ ಕ್ಯಾಂಪ್ ಆವರಣದಲ್ಲಿ ಖಾಲಿಗೊಂಡಂತೆ ನನ್ನ ಮನಸ್ಸಿನ ಉದ್ವಿಗ್ನತೆಯ ಮಾಪಕದಲ್ಲಿ ಪಾದರಸ ಅಷ್ಟಷ್ಟು ಮೇಲೇರಿತು. ಆದರೆ ಸಹೋದ್ಯೋಗಿಗಳು ಸಹಾಯಕರು ಎಲ್ಲರೂ ಸಮರ್ಥವಾಗಿ ಸಹಕರಿಸಿ ಉತ್ಸಾಹದಿಂದ ಅವರವರ ಪಾತ್ರ ನಿರ್ವಹಿಸಿದರು.

೨೫ರ ರಾತ್ರಿ. ೧,೨೦೦ ಮಂದಿಯೂ ಆ ವಿಶಾಲ ಮೈದಾನದ ವಿಸ್ತಾರದಲ್ಲಿ ಕಳಾಪೂರ್ಣವಾಗಿ ಅಳವಡಿಸಿದ್ದ ಬಿಳಿ ಡೇರೆಗಳಲ್ಲಿ ವಿಶ್ರಾಂತಿ ಪಡೆದು ಸುಖವಾಗಿ ನಿದ್ರಿಸುತ್ತಿದ್ದಾಗ, ವಿದ್ಯುದ್ದೀಪಗಳು ಕ್ಯಾಂಪಿನ ದಾರಿಗಳಲ್ಲಿ ನೋಡುವ ಜನರಿಲ್ಲದೆ ಏಕಾಂತದಲ್ಲಿ ಮಿನುಗುತ್ತಿದ್ದಾಗ, ದೊಡ್ಡ ಬೇಟೆ ಉಂಡ ಹೆಬ್ಬಾವು ಸುಸ್ತಾಗಿ ಮೈಚೆಲ್ಲಿದಂತೆ ತಾರುಹಾಕಿದ ರಾಜಮಾರ್ಗ ಮೂರ್ಛಿತವಾಗಿದ್ದಾಗ, "ಜನ ಬರಲಿ ಜನ ಹೋಗಲಿ ನಾನು ಮಾತ್ರ ಸದಾ ಹೀಗೆಯೇ ಹರಿಯುತ್ತಿರುತ್ತೇನೆ" ಎಂದು ನೇತ್ರಾವತಿ ನಿಶ್ಶಬ್ದವಾಗಿ ಗಮಿಸುತ್ತಿದ್ದಾಗ ರಾಯಪ್ಪನ್ ಮತ್ತು ನಾನು ಇಡೀ ಕ್ಯಾಂಪಿನಲ್ಲಿ ಅಲೆಯುತ್ತ ಏರ್ಪಾಡುಗಳನ್ನು ಪರಿಶೀಲಿಸುತ್ತ ಸಾಗಿದೆವು. ರಾತ್ರಿಯ ಪ್ರಹರಿಗಳು ಎಚ್ಚತ್ತಿದ್ದಾರೆಯೋ, ಕ್ವಾರ್ಟರ್ ಗಾರ್ಡಿನಲ್ಲಿ ಶಸ್ತ್ರಗಳನ್ನೂ ಮದ್ದುಗುಂಡುಗಳನ್ನೂ ಜಾಗರೂಕತೆಯಿಂದ ಕಾಯುತ್ತಿದ್ದಾರೆಯೋ, ಅನಧಿಕೃತವಾಗಿ ಯಾರೂ ಬರುತ್ತಿಲ್ಲ ಹೋಗುತ್ತಿಲ್ಲವಷ್ಟೇ, ಬೆಂಕಿ ಕ್ರೂರಮೃಗ ಮುಂತಾದವುಗಳಿಂದ ಅಪಾಯವಿಲ್ಲವಷ್ಟೇ, ಅಡುಗೇ ಮನೆಯಲ್ಲಿ ನಾಳಿನ ಏರ್ಪಾಡು ಮುಂದುವರಿದಿದೆಯೇ, ಉಗ್ರಾಣದಲ್ಲಿ ಆ ದಿವಸದ ಲೆಕ್ಕಾಚಾರಗಳು ಮುಗಿದು ತಾಳೆಯಾಗಿವೆಯೋ—ಇವೆಲ್ಲವನ್ನೂ ನಾವು ಕೂಲಂಕಷವಾಗಿ ನೋಡುತ್ತ ಸಾಗಿದೆವು. ಬಾಳಿಗರ ಟೆಂಟಿನಲ್ಲಿ ಮಿಣಿ ಮಿಣಿ ಲಾಂದ್ರ. ಅವರು ಹಿಂದಿನ ರಾತ್ರಿ ಪೂರ್ತಿ ನಿದ್ರೆಮಾಡದೇ ಕೊಡಗಿನಿಂದ ಬರಬೇಕಾಗಿದ್ದ ಕ್ಯಾಡೆಟುಗಳ ನಿರ್ದೇಶನ ಮಾಡಿದ್ದರು. ಹಗಲಿಡೀ ಇದೇ ಕಾರ್ಯ. ಆಹಾರ ತೆಗೆದುಕೊಂಡಿದ್ದರೋ ಇಲ್ಲವೋ ಅವರನ್ನು ವಿಚಾರಿಸಲು ನಮಗೆ ಪುರಸೊತ್ತಾಗಲಿಲ್ಲ. ಈಗ ಮಧ್ಯರಾತ್ರಿ ಮೀರಿದೆ. ಇನ್ನೂ ಇವರು ಧ್ಯಾನಸ್ಥರಂತೆ ಕುಳಿತಿದ್ದಾರೆ.

"ಏನು ಸ್ವಾಮೀ! ಮಲಗಿಲ್ಲ!" ನನ್ನ ಪ್ರಶ್ನೆ. ಜೊತೆಯಲ್ಲಿದ್ದ ರಾಯಪ್ಪನ್ನರನ್ನು ಕಂಡು ಬಾಳಿಗರು ಸೆಟೆದೆದ್ದರು, ವಂದನೆ ಸಲ್ಲಿಸಿದರು.

"ಬಾಳಿಗಾ! ಏನು ಕುಳಿತೇ ಇದ್ದೀರಿ?" ರಾಯಪ್ಪನ್ ಪ್ರಶ್ನೆ.

"ಉಹುಂ" ಎಂಬ ಅವರ ವಿಶಿಷ್ಟ ಧ್ವನಿಯೊಂದೇ ಉತ್ತರ.

“ಊಟವಾಯಿತೇ ? ಮಲಗಿ. ನಿಮಗೆ ತುಂಬ ದಣಿವಾಗಿರಬೇಕಲ್ಲವೇ ?” ರಾಯಪ್ಪನ್.

“ನಾಳೆಯ ಟ್ರೈನಿಂಗ್ ವಿಲೆವಾರಿ ಮಾಡುತ್ತಿದ್ದೆ. ಬೇರೇನೂ ಇಲ್ಲ, ಉಹುಂ!” ಊಟ ವಿಶ್ರಾಂತಿ ವಿಚಾರ ಅವರೆಂದೂ ಪ್ರಸ್ತಾವಿಸರು. ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗ್ರತಿ ಸಂಯಮೀ—ಇದು ನಮ್ಮ ಬಾಳಿಗ. ಅವರು (ಕ್ಯಾಡೆಟುಗಳು) ಚೆನ್ನಾಗಿರಬೇಕು, ದಕ್ಷರಾಗಬೇಕು ಎಂದು ಇವರು ದುಡಿಯುವರು.

“ಪ್ರೋಗ್ರಾಂ ಮುಗಿಯಿತೇ ? ಇನ್ನಾದರೂ ಮಲಗಿ” ರಾಯಪ್ಪನ್ ಮಾತು. ಇದು ಬಾಳಿಗರಿಗೆ ಒಗ್ಗದ ವಿಧಾನ. ನಮ್ಮನ್ನು ಅವರೂ ಕೂಡಿಕೊಂಡರು.

ಆಹಾರದ ಮಟ್ಟ ಏಕೆ ಏರುತ್ತಿಲ್ಲ?

ಕ್ಯಾಂಪಿಗೆ ಬೇಕಾಗುವ ಆಹಾರ ಸಾಮಗ್ರಿಗಳ ದಾಸ್ತಾನು ಮನೆಗೆ ಕ್ವಾರ್ಟರ್ ಮಾಸ್ಟರ್ ಸ್ಟೋರ್ಸ್ ಎಂದು ಹೆಸರು. ಇದನ್ನು ನೋಡಿಕೊಂಡು ಲೆಕ್ಕಪತ್ರವಿಟ್ಟು ನಡೆಸುವವ—ಎಂದರೆ ಇದರ ಮುಖ್ಯ ಗುಮಾಸ್ತ—ಕ್ವಾರ್ಟರ್ ಮಾಸ್ಟರ್. ಕ್ಯಾಂಪಿನ ಆಡಳಿತಾಧಿಕಾರಿಯಾದ ನನಗೆ ಈ ಕ್ವಾರ್ಟರ್ ಮಾಸ್ಟರ್ ಕಾರ್ಯದರ್ಶಿ ಇದ್ದಂತೆ. ಉಪ್ಪಿನಂಗಡಿ ಕ್ಯಾಂಪಿನಲ್ಲಿ ಕ್ವಾರ್ಟರ್ ಮಾಸ್ಟರ್ ಆಗಿದ್ದವನು ನಮ್ಮ ಎನ್‌ಸಿಸಿ ಯೂನಿಟ್ಟಿನ ಆರ್ಮಿ ಸ್ಟಾಫ್ ಮೈಕಲ್ ಎಂಬಾತ. ಕೂಡಿಗೆ ಕ್ಯಾಂಪಿನ ದಿವಸಗಳಿಂದಲೂ ಈತನೊಡನೆ ನನಗೆ ಸಲುಗೆ ಬೆಳೆದು ಬಂದಿತ್ತು. ಬಿಡುದಿವಸಗಳಲ್ಲಿ ಇವನು ನಮ್ಮ ಕ್ಯಾಡೆಟುಗಳಿಗೆ ಶಿಕ್ಷಕ (ಎನ್‌ಸಿಓ). ಬಲು ಸಮರ್ಥ, ದಕ್ಷ, ಸುಟಿಯಾದವ. ಇವನ ಶಿಸ್ತು ಸದಾ ಉನ್ನತ ಮಟ್ಟದ್ದು ಎಂದು ನಾನು ಭಾವಿಸಿದ್ದೆ. ಉಪ್ಪಿನಂಗಡಿಯನ್ನು ಮೊದಲಾಗಿಯೇ ತಲಪಿದ ನನ್ನ ತಂಡದಲ್ಲಿ ಮೈಕಲನೂ ಇದ್ದ. ಆಹಾರ ಸಾಮಗ್ರಿಗಳ ಟೆಂಡರು, ಶೇಖರಣೆ ಮುಂತಾದವನ್ನು ನಾನು ಪರಿಶೀಲಿಸಿ ಹುಕುಂ ನೀಡಿದ ಮೇಲೆ ಅದರ ವಿವರಗಳನ್ನು ಕಾರ್ಯಗೊಳಿಸಬೇಕಾದವ ಈ ಮೈಕಲ್. ಟೆಂಡರುದಾರರಿಗೆ ಸಾವಿರಾರು ರೂಪಾಯಿ ಬೆಲೆಯ ಸಾಮಗ್ರಿಗಳಿಗೆ ಆಜ್ಞೆ ಸಹಿ ಹಾಕಿ ಕಳಿಸಿದೆ. ಲಾರಿಗಟ್ಟಲೆ ಅವೆಲ್ಲವೂ ನಮ್ಮ ಉಗ್ರಾಣಕ್ಕೆ ಬಂದಾಗ ಅವನ್ನು ಒಂದೊಂದಾಗಿ ತೂಕ ಅಳತೆ ಮುಂತಾದವುಗಳಲ್ಲಿ ಮೈಕಲನ ಸಹಾಯದಿಂದ ಪರೀಕ್ಷಿಸಿ ಖಾತ್ರಿ ಮಾಡಿಕೊಂಡು ಉಗ್ರಾಣದೊಳಗೆ ಜಮಾಯಿಸಿದೆ. ಇಲ್ಲೆಲ್ಲ ಪ್ರತಿ ಟೆಂಡರುದಾರನೂ ಅಪ್ರಾಮಾಣಿಕನೆಂದೇ ಸರಕಾರವನ್ನು ಮೋಸಗೊಳಿಸುವುದೇ ಅವನ ಪರಮೋದ್ದೇಶವೆಂದೇ ತಿಳಿದು ಮುಂದುವರಿಯುವುದು ನಮಗೂ (ಟೆಂಡರುದಾರರಿಗೂ) ಕ್ಷೇಮಂಕರ. ೧೦೦ ಕೇಜಿ ತೂಕವಿರುವ ಮೂವತ್ತು ಮೂಟೆ ಅಕ್ಕಿ ಎಂದು ಬಿಲ್ ಮಾಡುತ್ತಾನೆ. ಟೆಂಡರ್ ಪ್ರಕಾರ ೧ ಕೇಜಿ ಅಕ್ಕಿಗೆ ೧ ರೂಪಾಯಿ ಬೆಲೆ ಇದ್ದರೆ ಬಿಲ್ಲಿನಲ್ಲಿ ರೂ ೩,೦೦೦ ಕಾಣಿಸುವುದರ ಜೊತೆಗೆ ಮೂವತ್ತು ಖಾಲಿ ಚೀಲಗಳ ಬೆಲೆಯನ್ನು ಪ್ರತ್ಯೇಕವಾಗಿ ಕಾಣಿಸುತ್ತಾನೆ. ಚೀಲವಿಲ್ಲದೇ ಅಕ್ಕಿ ಹೇಗೆ ಸರಬರಾಜು ಮಾಡುವಿರಿ ಎಂದು ಕೇಳಿದರೆ ಟೆಂಡರಿನಲ್ಲಿ ಈ ವಿಷಯ ನಿಗದಿಯಾಗಿಲ್ಲ ಎಂದು ನಮ್ಮನ್ನೇ ಸೋಲಿಸಿಬಿಡುತ್ತಾನೆ ಈ ವ್ಯಾಪಾರಿ ಮಹಾಶಯ. ಆಗ ನಮಗೆ ಉಳಿದಿರುವುದು ಒಂದೋ ಚೀಲಗಳ ಬೆಲೆಯನ್ನು ತೆರುವುದು ; ಅಥವಾ ಉಪ

ಯೋಗಾನಂತರ ಚೀಲಗಳನ್ನು ವ್ಯಾಪಾರಿಗೆ ಮರಳಿಸುವುದು. ಇಲ್ಲಿಗೇ ಮುಗಿಯಲಿಲ್ಲ—ಚೀಲದ ಸಮೇತ ಅಕ್ಕಿಯ ತೂಕ ೧೦೦ ಕೇಜಿ ಎಂದು ಅವನು ಹೇಳುತ್ತಾನೆ. ಚೀಲದ ತೂಕವೇ ೧ ಕೇಜಿಯಷ್ಟು ಇರುವಾಗ ಪ್ರತಿ ಚೀಲದಲ್ಲಿಯೂ ನಮಗೆ ಉಭಯ ನಷ್ಟ, ಅವನಿಗೆ ಉಭಯ ಲಾಭ. ಪ್ರತಿಯೊಂದು ಆಹಾರ ಸಾಮಗ್ರಿಯ ವ್ಯವಹಾರದಲ್ಲಿಯೂ ವ್ಯಾಪಾರಿ-ಸರಕಾರ ಸಂಬಂಧದಲ್ಲಿಯೂ ಸರಕಾರದ ಪ್ರತಿನಿಧಿಯಾದ ನಾನು ಕಂಡದ್ದು "ಬಾಲಗಳನ್ನು ನೀವು ಕಳೆದುಕೊಳ್ಳಿ, ತಲೆಗಳನ್ನು ನಾನು ಗೆಲ್ಲುತ್ತೇನೆ" ಎಂಬ ಏಕಮುಖ ವ್ಯಾಪಾರೀ ಮನೋಭಾವ. ನಾನೂ ವ್ಯಾಪಾರದ (ಸಹಕಾರ ಸಂಘ) ಗರಡಿಯಲ್ಲಿ ಪಳಗಿದವನಾದ್ದರಿಂದ ನಮ್ಮ ಎಲ್ಲ ಟೆಂಡರುದಾರರಿಗೂ ಪತ್ರ ಕಳಿಸುವಾಗ ಮುಂದೆ ಆದೇಶ ರವಾನಿಸುವಾಗ ಒಂದು ವಿಷಯ ಸ್ಪಷ್ಟಪಡಿಸುತ್ತಿದ್ದೆ. "ನಮ್ಮ ನಿಮ್ಮ ಸಂಬಂಧ ರಾಷ್ಟ್ರದ ತರುಣರ ಏಳ್ಗೆಯ ದಾರಿಯಲ್ಲಿರುವ ಬಲು ಮುಖ್ಯವಾದ ವ್ಯವಹಾರ ಎಂಬುದು ಮರೆಯದಿರೋಣ. ನಿಮ್ಮ ಸೇವೆಗೆ ನಿಮಗೆ ಯೋಗ್ಯ ಲಾಭ ಬರಲೇಬೇಕು—ನಿಮಗೆ ನಷ್ಟವಾಗಬಾರದು. ಆದರೆ ನಮ್ಮನ್ನು ವಂಚಿಸಿ ನಮಗೆ ಮೋಸಮಾಡಿ ದರ್ಜೆಯಲ್ಲಿ ಅಳತೆಯಲ್ಲಿ ನ್ಯಾಯಬಾಹಿರವಾಗಿ ವರ್ತಿಸಿ ಲಾಭ ಪಡೆಯಲು ನಾನು ಬಿಡಲಾರೆ." ನನ್ನ ವೃತ್ತಿ, ಸಾರ್ವಜನಿಕ ಸ್ಥಾನ ಎಲ್ಲವನ್ನೂ ತಿಳಿದಿದ್ದ ವ್ಯಾಪಾರಸ್ಥರು ಈ ಮಾತುಗಳನ್ನು ಚೆನ್ನಾಗಿಯೇ ಅರ್ಥವಿಸಿಕೊಂಡು ಅಂತೆಯೇ ವರ್ತಿಸುತ್ತಿದ್ದರು. ಕ್ಯಾಂಪು ಮುಗಿದ ದಿವಸ ಅವರ ಬಿಲ್ಲುಗಳ ಬಾಬ್ತು ಸಂಪೂರ್ಣ ಮೊತ್ತವನ್ನು ನಾನಾಗಿ ಅವರನ್ನು ಕರೆದು ಮರ್ಯಾದೆಯಿಂದಲೂ ಸಂತೋಷದಿಂದಲೂ ಚೆಕ್ ಮೂಲಕ ಕೊಟ್ಟು ತೃಪ್ತಿಪಡಿಸಿ ಕಳಿಸುತ್ತಿದ್ದೆ. "ಸ್ವಾಮೀ! ಎಲ್ಲ ಸರಕಾರೀ ಆಫಿಸರರೂ ಹೀಗಿದ್ದರೆ ವ್ಯಾಪಾರದಲ್ಲಿ ಮೋಸ ಹೇಗೆ ಬಂದೀತು" ಎಂದು ವ್ಯಾಪಾರಸ್ಥರು ನನ್ನನ್ನು ಹೊಗಳುತ್ತಿದ್ದರು. ಅದಕ್ಕೆ ನನ್ನ ಉತ್ತರವಿಷ್ಟೆ "ಎಲ್ಲರ ಮಟ್ಟಿಗೆ ನಾನು ಉತ್ತರ ಹೇಳಲಾರೆ. ನನ್ನ ಮಟ್ಟಿಗೆ ಇದೊಂದೇ ನಾನು ತಿಳಿದಿರುವ ಮಾರ್ಗ. ಇದು ನನ್ನ ಕ್ರಮ. ನೀವು ಹೊಗಳಿ ಹೊಗಳದಿರಿ—ನಿಮ್ಮ ಕೆಲಸ ನೀವು ಮಾಡಿ. ನನ್ನನ್ನು ನನ್ನ ಕೆಲಸ ಮಾಡಲುಬಿಡಿ. ನಾವಿಬ್ಬರೂ ಒಂದೇ ಉದ್ದೇಶದ ಎರಡು ಮುಖಗಳೆಂದು ಅರಿತು ಪ್ರಾಮಾಣಿಕವಾಗಿ ವರ್ತಿಸೋಣ."

ಕ್ವಾರ್ಟರ್ ಮಾಸ್ಟರ್ ಸ್ಟೋರ್ಸಿನ ಇತರ ಎಲ್ಲ ವಿವರಗಳನ್ನೂ ಮೈಕಲ್ ನಿರ್ವಹಿಸಿದ. ಅವನು ಒಪ್ಪಿ ಮೆಚ್ಚಿದ ಇಬ್ಬರು ಸೇವಕರನ್ನೇ ಅವನ ಜೊತೆಗೆ ಕೆಲಸಮಾಡಲು ನೇಮಿಸಿದ್ದೆ. ಉಗ್ರಾಣದ ಸಮಸ್ತ ಲೆಕ್ಕಪತ್ರಗಳನ್ನೂ ಹಿಂದಿನ ವರ್ಷಗಳ ಅನುಭವದಿಂದ ಪರಿಷ್ಕರಿಸಿ ಕೆಲಸವನ್ನು ಸುಲಭಗೊಳಿಸಿದ್ದೆ. ಹೀಗೆ ಉಪ್ಪಿನಂಗಡಿಯ ಆಹಾರದ ಮಹಾರಥವನ್ನು ಪ್ರಾರಂಭಿಸಿ ಅದರ ನಿಮಿಷ ನಿಮಿಷದ ಆಗುಹೋಗುಗಳನ್ನು ನೋಡಿಕೊಳ್ಳಲು ಸಮರ್ಥ ಸಾರಥಿಯಾದ ಮೈಕಲನನ್ನು ಬಿಟ್ಟು ನಾನು ಆಡಳಿತೆಯ ಇತರ ಹೊಣೆಗಾರಿಕೆಗಳ ಕಡೆ ಗಮನ ಹರಿಸಿದೆ. ಅಂದಮಾತ್ರಕ್ಕೆ ನಾನು ಕ್ವಾರ್ಟರ್ ಮಾಸ್ಟರ್ ಸ್ಟೋರ್ಸಿನಿಂದ ದೂರವಾದೆನೆಂದಲ್ಲ—ರಾತ್ರಿ ಬಹಳ ಹೊತ್ತು ಅಲ್ಲಿಯೇ ಕುಳಿತಿದ್ದು ಲೆಕ್ಕಪತ್ರ ದಾಸ್ತಾನು ಬಿಲ್ಲು ಎಲ್ಲವನ್ನೂ ಖುದ್ದು ಪರಿಶೀಲಿಸುತ್ತಿದ್ದೆ. ಸಾವಿರಾರು ಮಂದಿಯ ಆ ಬೃಹತ್ ಕ್ಯಾಂಪಿನಲ್ಲಿ ಘಟನೆಗಳು ಸದಾ ನಮ್ಮನ್ನು ಹಿಂದೆ ಹಾಕಿ ಓಡುತ್ತಿದ್ದರೆ ಆಶ್ಚರ್ಯ ಎಲ್ಲ. ಆದರೆ ಈ ಓಟದಲ್ಲಿ ನಾವು ಸೋತು ಹೋಗಬಾರದಷ್ಟೆ. "ನೀವೇಕೆ ಹೀಗೆ

ದುಡಿಯುತ್ತೀರಿ ಸಾರ್! ಸುಖವಾಗಿ ನಿದ್ರೆ ಮಾಡಿ. ನಿಮಗೆ ಆಯಾಸವಾಗಿದೆ'' ಎಂದೆನ್ನುವ ಒಮ್ಮೆ, ''ರೆಗ್ಯುಲರ್ ಆರ್ಮಿಯಲ್ಲಿ ನಿಮ್ಮ ಹಾಗೆ ದುಡಿಯುವವರೇ ಇಲ್ಲ'' ಎನ್ನುವ ಇನ್ನೊಮ್ಮೆ. ''ಸಾರ್ ನೀವೇನಾದರೂ ಆರ್ಮಿ ಸೇರಿದರೆ ಅಲ್ಲಿ ತತ್‌ಕ್ಷಣ ಬ್ರಿಗೇಡ್ ಕಮಾಂಡರರೇ ಆಗಿಬಿಡುವಷ್ಟು ದಕ್ಷತೆ ನಿಮ್ಮಲ್ಲಿದೆ.'' ಇನ್ನೊಂದು ಸಲ ಮೈಕಲನೆಂದ ''ಸದ್ಯ ನಿಮ್ಮ ರಕ್ಷೆ ಇರುವುದರಿಂದ ನಾನು ಬಚಾವ್ ಸಾರ್. ನಿಮಗೆ ತಿಳಿಯದು ಸಾರ್—ಲೋಕವೆಲ್ಲವೂ ಬೆಳ್ಳಗೆ ಎಂದು ಭಾವಿಸುವುದು ನಿಮ್ಮ ದೊಡ್ಡತನದ ಲಕ್ಷಣ ಸಾರ್. ನಮ್ಮ ಸುಬೆದಾರರು ಹವಿಲ್ದಾರರು ಎಲ್ಲ ಇದ್ದಾರಲ್ಲ, ನಿಮ್ಮ ಎದುರು ಅಷ್ಟೊಂದು ವಿನಯದಿಂದ ಸುಟಿಯಾಗಿ ಇರುವರಲ್ಲ, ಅವರಿಗೆಲ್ಲ ನನ್ನ ಮೇಲೆ ಹೊಟ್ಟೆ ಕಿಚ್ಚು. ಸಕ್ಕರೆ ಕೊಡು, ಅಕ್ಕಿ ಕೊಡು, ಹಣ್ಣು ಕೊಡು, ಮೊಟ್ಟೆ ಕೊಡು, ಅದು ಕೊಡು, ಇದು ಕೊಡು ಎಂದು ಮುಂತಾಗಿ ಸದಾ ನನ್ನನ್ನು ಕಾಡುತ್ತಿರುತ್ತಾರೆ. ಆರ್ಮಿಯಲ್ಲಿ ಈ ಸಣ್ಣ ಜನರ ವ್ಯವಹಾರವೇ ಹೀಗೆ—ಕ್ವಾರ್ಟರ್ ಮಾಸ್ಟರ್‌ನಾದನೆಂದರೆ ಅವನು ಲಕ್ಷಾಧಿಪತಿ ಆದನೆಂದೇ. ಸದ್ಯ ನೀವಿಲ್ಲಿರುವುದರಿಂದ ನಾನು ಏನೂ ಭಯಪಡದೇ ನಿರ್ವಂಚನೆಯಿಂದ ಕೆಲಸಮಾಡಲು ಸಾಧ್ಯವಾಗಿದೆ. ಇನ್ನು ಊರಿಗೆ ಮರಳಿದ ಮೇಲೆ ಇವರ ಕೀಟಲೆ ಇದ್ದೇ ಇರುತ್ತದೆ.''

''ನಿನ್ನ ನಿಷ್ಠೆ ನಿನ್ನನ್ನು ಕಾಪಾಡುತ್ತದೆ, ಮೈಕಲ್. ನಾನಿದ್ದೇನೆ, ಏನೂ ಚಿಂತೆ ಮಾಡಬೇಡ'' ನಾನು ಹೇಳಿದೆ.

''ಇನ್ನೊಂದು ವಿಚಾರ ಹೇಳಲು ಮರೆತಿದ್ದೆ ಸಾರ್. ಅಡುಗೇಭಟ್ಟ ಸಕ್ಕರೆ ಮತ್ತು ಅಕ್ಕಿ ಮೂಟೆಗಳನ್ನು ಹೊಳೆಯ ದಂಡೆಗೆ ರಾತ್ರಿ ಸಾಗಿಸುತ್ತಿದ್ದ. ಅದನ್ನು ಹಿಡಿದುಹಾಕಿ ಅಲ್ಲಿಗೆಲ್ಲ ಸೆಂಟ್ರಿ ಹಾಕಿದ್ದೇನೆ.''

''ಏನು ಏನು—ನನಗೆ ಯಾಕೆ ಮೊದಲೇ ಹೇಳಲಿಲ್ಲ ಮೈಕಲ್ ?''

''ಬೇಡ ಸಾರ್! ಅಡುಗೇಭಟ್ಟ, ಸುಬೆದಾರ್, ವ್ಯಾಪಾರಿ ಒಂದಾಗಿದ್ದಾರೆ. ನಾವಿಲ್ಲಿ ಹುಷಾರಿನಿಂದ ಸಾಗಬೇಕು. ಈಗ ಏನೂ ಸೋರಿ ಹೋಗಿಲ್ಲ.''

''ನಾನು ವಿಚಾರಮಾಡಿ ಅಪಾದಿತರನ್ನು ಶಿಕ್ಷಿಸಿಯೇಬಿಡುತ್ತೇನೆ. ಯಾಕೆ ಈ ಹಲ್ಕಾ ಜನ ಹೀಗೆ ಮಾಡಬೇಕು. ಕಮಾಂಡೆಂಟರಿಗೂ ಈ ವಿಚಾರ ತಿಳಿಸಬೇಕು...''

''ಈಗಲೇ ಬೇಡ ಸಾರ್! ನೀವು ಇನ್ನೊಂದು ದಿವಸ ತಾಳಿ. ನಾನೆಲ್ಲವನ್ನೂ ಸರಿಪಡಿಸಿದ್ದೇನೆ.''

ಅಡುಗೇಮನೆ ಸುತ್ತಲೂ ಸರ್ಪಗಾವಲು ಹಾಕಿಸಿದೆ. ನದೀದಂಡೆಯ ಮೇಲೆ ಹಗಲೂ ರಾತ್ರಿಯೂ ಗಸ್ತು ತಿರುಗಲು ಕ್ಯಾಡೆಟುಗಳನ್ನು ನಿಯಮಿಸಿದೆ. ಮೈಕಲ್‌ನ ವಿಷಯದಲ್ಲಿ ನನ್ನ ನಂಬಿಕೆ ಹೆಚ್ಚಾದಷ್ಟೇ ಸುಬೆದಾರ್ ಮತ್ತು ಅಡುಗೆಯವರ ವಿಚಾರದಲ್ಲಿ ಅಪನಂಬಿಕೆ ಹೆಚ್ಚಾಯಿತು. ಪುರಾವೆ ನಾನು ಕಂಡಿಲ್ಲ. ನನ್ನ ಎಚ್ಚರಿಕೆ ನಾನು ವಹಿಸಬೇಕು. ಉಗ್ರಾಣದ ತಪಾಸಣೆಯಿಂದ ಎಲ್ಲವೂ ಸರಿಯಾಗಿದೆ ಎಂದು ತಿಳಿಯಿತು. ಲೆಕ್ಕಪತ್ರಗಳೂ ದಾಸ್ತಾನು ಸಾಮಗ್ರಿಗಳೂ ಹೊಂದಿಕೊಂಡಿದ್ದುವು. ಇದರಿಂದ ಮೈಕಲನ ವಿಚಾರದಲ್ಲಿ ನನಗೆ ದೃಢವಿಶ್ವಾಸ ಬೇರೂರಿತು. ನಾಲ್ಕು ದಿವಸಗಳು ಮುಗಿದುವು. ಎಲ್ಲವೂ ಕ್ರಮಬದ್ಧವಾಗಿ ನಡೆಯುತ್ತಿದ್ದರೂ ನನಗೇನೋ ಅತೃಪ್ತಿ. ''ಆಹಾರದ ಮಟ್ಟ ಏಕೆ

ಏರುತ್ತಿಲ್ಲ ? ಕೊಡಿಗೆಯಲ್ಲಿ ಪೂರೈಸಿದ ಪುಷ್ಕಳ ಆಹಾರ ಸೌಕರ್ಯಗಳನ್ನು ಇಲ್ಲಿ ಏಕೆ ಒದಗಿಸಲಾಗುತ್ತಿಲ್ಲ ?'' ದಿನ ಬಿಟ್ಟು ದಿನ (ಅಲ್ಲಿ ದೈನಂದಿನ) ಮಾಂಸದ ಪದಾರ್ಥ ಬಡಿಸುತ್ತಿದ್ದೆವು. ಅದೂ ಮಿತ ಪ್ರಮಾಣದಲ್ಲಿ. ೧೦–೩೦ ಗಂಟೆಗೆ ಏನನ್ನೂ ಕೊಡು ತ್ತಿರಲಿಲ್ಲ (ಅಲ್ಲಿ ಚಾಕೊಲೇಟ್ ಹಾಲು ಕೊಡುತ್ತಿದ್ದೆವು). ಸಾಮಗ್ರಿಗಳ ಬೆಲೆ ಕಳೆದ ವರ್ಷ ಕ್ಕಿಂತ ಈ ವರ್ಷವಿಶೇಷವಾಗಿ ಏರಿರಲಿಲ್ಲ. ಸರಕಾರದಿಂದ ಡ್ರಮ್‌ಗಟ್ಟಲೆ ಧರ್ಮಾರ್ಥವಾಗಿ ಹಾಲುಪುಡಿ ದೊರೆತದ್ದು ಈ ವರ್ಷದ ರಿಯಾಯತಿ. ಆದರೂ ಆಹಾರ ಏಕೆ ಉತ್ತಮ ವಾಗುತ್ತಿಲ್ಲ ? ರಾಯಪ್ಪನ್ ಇದೇ ಪ್ರಶ್ನೆ ಕೇಳಿದರು ''ರಾವ್ ! ಕಳೆದ ವರ್ಷದ ಮಟ್ಟಕ್ಕೆ ಆಹಾರ ಈ ವರ್ಷ ಇನ್ನೂ ಬಂದಿಲ್ಲ. ಯಾಕೆ ?''

ಹುಡುಗರ ದೃಷ್ಟಿಯಿಂದ ಇತರ ಆಫಿಸರರ ದೃಷ್ಟಿಯಿಂದ ಈ ಕ್ಯಾಂಪು ಅತ್ಯುತ್ತಮ ವೆಂದೇ ಇತ್ತು. ಸಕಾಲದಲ್ಲಿ ಬೇಕಾದಷ್ಟು ಆಹಾರ ಅಚ್ಚುಕಟ್ಟಾಗಿ ದೊರೆಯುತ್ತಿದ್ದುದ ರಿಂದ ಅವರಿಂದ ಯಾವುದೇ ವಿಧವಾದ ದೂರು ಬರಲಿಲ್ಲ. ಆದರೆ ನನ್ನ ಅತೃಪ್ತಿ ಅಸಮಾಧಾನಗಳಿಗೆ ಕ್ಯಾಂಪು ಮುಗಿಯುವವರೆಗೂ ಪರಿಹಾರ ದೊರೆಯಲಿಲ್ಲ.

ಸಂಸ್ಕೃತಿಯ ಒರೆಗಲ್ಲು: ಆಹಾರ ಮತ್ತು ಶೌಚಗೃಹಗಳು

ಪೆರೇಡ್ ಗ್ರೌಂಡಿನಲ್ಲಿ ಹುಡುಗರು ಶಿಸ್ತಿನಿಂದ ವರ್ತಿಸಿದರು. ಆದರೆ ಬಿಡುವೇಳೆಯಲ್ಲಿ ಇದರ ಪ್ರತಿವರ್ತನೆಯನ್ನು ಬಹುಸಂಖ್ಯಾತರಲ್ಲಿ ಕಂಡೆ. ಒಬ್ಬನ ನಿಜವಾದ ಶಿಸ್ತು ಸಂಸ್ಕೃತಿ ಎದ್ದು ತೋರುವುದು ಎರಡು ಸಂದರ್ಭಗಳಲ್ಲಿ—ಆಹಾರ ಮತ್ತು ಶೌಚ ವ್ಯವಹಾರಗಳಲ್ಲಿ. ನಮ್ಮ ಉದ್ದೇಶ ಪೆರೇಡ್ ಗ್ರೌಂಡಿನಲ್ಲಿ ಕಲಿತ, ಪ್ರದರ್ಶಿಸಿದ ಸಾಮೂಹಿಕ ಶಿಸ್ತು ವೈಯಕ್ತಿಕವಾಗಿ ಪ್ರತಿಯೊಬ್ಬ ಕ್ಯಾಡೆಟ್ಟಿನಲ್ಲಿಯೂ ರಕ್ತಗತವಾಗಿ ಅದು ಜೀವನದ ಸಕಲ ರಂಗಗಳಲ್ಲಿಯೂ ವ್ಯಾಪ್ತಿಗೊಳ್ಳಬೇಕೆಂದು. ಇದು ಹೀಗಾಗದಿದ್ದರೆ ಈ ಸಾವಿರಾರು ರೂಪಾಯಿಗಳ ವೆಚ್ಚದ ಇಷ್ಟೊಂದು ಶ್ರಮದ ಕ್ಯಾಂಪು ಅಗತ್ಯವೇ ? ಈ ವಿಚಾರದಲ್ಲಿ ಹುಡುಗರಿಗೂ ಅವರ ಆಫಿಸ ರರಿಗೂ ಬಗೆ ತೆರದಲ್ಲಿ ತಿಳಿಯಹೇಳಿದೆವು. ಆಫಿಸರರು ಅವರವರ ಕ್ಯಾಡೆಟುಗಳನ್ನು ಕ್ರಮ ಬದ್ಧವಾಗಿ ನಡೆಸಿಕೊಂಡು ಶಿಸ್ತಿನಿಂದ ಬಡಿಸುವ ನೆಲೆಗಳಿಗೆ ಬರಬೇಕು ; ಊಟ ಉಪ ಚಾರ ಶಿಸ್ತಿನಿಂದ ನಡೆಯಬೇಕು ; ಅಲ್ಲಿಂದ ನಿರ್ಗಮಿಸುವಾಗ ಆ ಜಾಗವನ್ನು ಹೇಸಿಗೆ ಮಾಡ ಬಾರದು. ಆದರೆ ನಡೆಯುತ್ತಿದ್ದುದೇನು ? ಪೆರೇಡು ಮುಗಿಯುವ ಮೊದಲೇ ಬಹುಮಂದಿ ಆಫಿಸರರು ಸುಸ್ತಾಗಿ ಅವರವರ ಟೆಂಟುಗಳಿಗೆ ಹೋಗಿ ಚಾರ್ಪಾಯ್ ಶಾಯಿ ಗಳಾಗುತ್ತಿದ್ದರು. ಕ್ಯಾಡೆಟುಗಳು ಪ್ರವಾಹರೂಪದಲ್ಲಿ ಲಂಗುಲಗಾಮಿಲ್ಲದೇ ಲಂಗರ್ ಮನೆಗೆ ಧಾವಿಸಿ ಬಂದಾಗ ಅಲ್ಲಿ ಶಿಸ್ತನ್ನು ಕಾಪಾಡಬೇಕಾಗಿದ್ದುದು ನಾವು ಕೆಲವರು ಮಾತ್ರ. ಇದನ್ನು ನಾವು ನಿಯಂತ್ರಿಸಿದೆವು. ಎಲ್ಲವೂ ಸುಸೂತ್ರವಾಗಿ ನೆರವೇರಿತು, ನಿಜ. ಆದರೆ ಹೊಣೆಗಾರಿಕೆಯನ್ನು ಅಷ್ಟು ಜನ ಆಫಿಸರರು ಕಳಚಿಕೊಂಡದ್ದೇಕೆ ? ಹುಡುಗರಿಗೆ ಸ್ವತಃ ವಿವೇಕ ಬೇಡವೇ ? ದುರ್ವರ್ತನೆ ಮನುಷ್ಯನಿಗೆ ಸಹಜವಾದದ್ದು, ಅದರ ಪ್ರತಿರೂಪ ಸದ್ವರ್ತನೆ ಆಗಿರಬಹುದೇ ? ಇದು ನಿಜವಾದರೆ ಮನುಷ್ಯನ ಒಳ್ಳೆಯತನ ದಲ್ಲೇ ನನಗೆ ವಿಶ್ವಾಸ ಉಳಿಯದಲ್ಲ. ಅಥವಾ ನಾನು ನೋಡುವ ದೃಷ್ಟಿಯೇ ತಪ್ಪೇ ? ನಮ್ಮ ಏರ್ಪಾಡುಗಳಲ್ಲಿ ಲೋಪಗಳಿವೆಯೇ ? ಆಫಿಸರರ ಸಭೆಯಲ್ಲಿ, ಅವರೊಡನೆ ಖಾಸಗಿ

ಮಾತಿನಲ್ಲಿ ನಮಗೆ ದೊರೆತದ್ದು ಶಹಭಾಸ್‌ಗಿರಿ, ಮುಕ್ತ ಮನಸ್ಸಿನ ಪ್ರಶಂಸೆ. ಆದ್ದರಿಂದ ನಮ್ಮ ಏರ್ಪಾಡಿನಲ್ಲಿ ದೋಷವಿಲ್ಲ ಎಂಬ ಸಮಾಧಾನ ಮೂಡಿತು. ಇನ್ನು ಶೌಚಗೃಹದ ವರ್ತನೆ. ನೇತ್ರಾವತಿಯ ವಿಶಾಲ ದಂಡೆಯ ಮೇಲೆ ಬೇಕಾದಷ್ಟು ಕಾಲುವೆಗಳನ್ನು ಹೊಡೆಸಿ ಕಕ್ಕಸುಗಳನ್ನು ನಿರ್ಮಿಸಿದ್ದೆವು. ಪ್ರತಿ ದಿವಸ ಮೂರು ಸಲ ತೋಟಿಗಳು ಅವನ್ನು ಶುಚಿಗೊಳಿಸಿ ಫಿನಾಲ್. ಹೊಗೆ ಹಾಕಿ ಶುಚಿಯಾಗಿಡುತ್ತಿದ್ದರು. ಆದರೂ ಡೇರೆ ಗಳ ಆಸುಪಾಸಿನಲ್ಲಿ ರಸ್ತೆಯ ಬದಿಯಲ್ಲೆಲ್ಲ ಈ ಹುಡುಗರು ಉರುಟಿ ಬಿಡುತ್ತಿದ್ದುದರ ಅರ್ಥವೇನು ? ಪೆರೇಡ್ ಗ್ರೌಂಡಿನ ಶಿಸ್ತು ಜೀವನದ ಒಂದೊಂದು ವರ್ತನೆಗೂ ಬರದಿದ್ದರೆ ಗ್ರೌಂಡಿನಲ್ಲಿ ಕಲಿತದ್ದು ಶಿಸ್ತಲ್ಲ—ಒಂದು ವಿಧವಾದ ಯಾಂತ್ರಿಕ ಕ್ರಿಯೆ. ಮನಃಶಾಸ್ತ್ರದಲ್ಲಿ ಅದನ್ನು conditioned reflex ಎನ್ನುತ್ತಾರೆ. ಚೆರ್ರಿಬ್ಲಾಸಮ್ ಬೂಟ್ ಪಾಲಿಷ್ ಕಂಪೆನಿ, ಸಮರ್ಥ ದರ್ಜಿ, ಒಳ್ಳೆ ಧೋಬಿ, ೭ ಓ'ಕ್ಲಾಕ್ ಬ್ಲೇಡ್—ಇವುಗಳ ಸಮಗ್ರ ಮೊತ್ತ ಪೆರೇಡ್ ಗ್ರೌಂಡಿನ ಶಿಸ್ತು. ಇದನ್ನು ಸಂಕ್ಷೇಪವಾಗಿ ಬಿಟಿಡಿಬಿ ಶಿಸ್ತು (ಬೂಟ್ ಪಾಲಿಷ್, ಟೇಲರ್, ಡೋಬಿ, ಬ್ಲೇಡ್) ಎಂದು ನಾನು ಹೆಸರಿಸಿದೆ. ಕ್ಯಾಂಪಿನ ಕೊನೆಯ ದಿನದ ಸಂಜೆ ಕೊಡಗಿನ ವೀರ ಪರಂಪರೆಗೂ ದಕ್ಷಿಣ ಕನ್ನಡ ಜಿಲ್ಲೆಯ ತೌಳವ ಪರಂಪರೆಗೂ ಹೊಡೆದಾಟ ಹತ್ತಿದಾಗ ನಾವೆಲ್ಲರೂ ಹೌಹಾರಿದೆವು. ಆ ಕ್ಷಣವೇ ಅದನ್ನು ಹತೋಟಿಗೆ ತರಲಾಯಿತೆನ್ನಿ. ಯಾರಿಗೂ ಏನೂ ಘಾಸಿ ಆಗಲಿಲ್ಲ. ಅಸಮಾಧಾನ ಮೊಳೆತದ್ದು ಆಟದ ಸ್ಪರ್ಧೆಯಲ್ಲಿ. ಅದಕ್ಕೆ ಗೊಬ್ಬರ ನೀರು ಹಾಕಿ ಬೆಳೆಸಿ ವಿಷ ಫಲವನ್ನು ಕಕ್ಕಿಸಿದ್ದು ಹಿರಿಯರು—ಅದೂ ಜಾತಿ, ಭಾಷೆ, ಊರು ಎನ್ನುವ ಉದ್ವೇಗಕಾರಕ ವಿಷಯಗಳನ್ನು ಅತಿ ಲಂಬಿಸಿ.

"ಹುಡುಗರಿದ್ದಲ್ಲೆಲ್ಲ ಇದು ಇದ್ದದ್ದೇ, ಚಿಂತೆ ಮಾಡಬೇಡಿ" ಎಂದು ಸಹೋದ್ಯೋಗಿ ಯೊಬ್ಬ ಹೇಳಿದಾಗ "ಬೇರೆ ಕ್ಯಾಂಪುಗಳಲ್ಲಿ ಟೆಂಟುಗಳಿಗೆ ಬೆಂಕಿಯನ್ನೇ ಹಾಕಿದ್ದಾರೆ. ಹಾಗಲ್ಲವಲ್ಲ ಇಲ್ಲಿ" ಎಂದು ಇನ್ನೊಬ್ಬ ಸಮಾಧಾನ ನುಡಿದಾಗ ರಾಯಪ್ಪನ್, ಬಾಳಿಗ ಮತ್ತು ನನಗೆ ಮೂಡಿದ ಭಾವವಿದು "ಒಂದು ನಾಡು. ಒಂದು ಭಾಷೆ. ಅದರೊಳಗೆ ಕೊಡಗು—ದಕ್ಷಿಣ ಕನ್ನಡ ಎಂಬ ವೈಷಮ್ಯ. ಇನ್ನು ಈ ಒಂದೊಂದು ಜಿಲ್ಲೆಯ ಹುಡುಗರ ಒಳಗೆ ಆ ಜಾತಿ ಈ ಜಾತಿ ಎಂಬ ಭಿನ್ನತೆ. ನಮ್ಮ ದೇಶದ ಭವಿಷ್ಯವೇನು ?"

ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲಾಗದವನು ಪಳೆಯುಳಿಕೆ ಆಗು ತ್ತಾನೆ. ಬದಲಾವಣೆಗಳು ಕೆಟ್ಟವು ಎಂದು ನಮ್ಮ ಮನಸ್ಸಾಕ್ಷಿ ನುಡಿಯುವಾಗ ನಾವು ಪಳೆಯುಳಿಕೆಗಳಾಗುವುದೇ ನಮಗೆ ಶ್ರೇಯಸ್ಕರ.

ಬೆಂಗಳೂರಿನಿಂದ ಬಂದಿದ್ದ ಹೊಸ ಕಮಾಂಡರ್ ವಿಂಗ್ ಕಮಾಂಡರ್ ರಾಮಕೃಷ್ಣನ್ ನಮ್ಮ ಕ್ಯಾಂಪನ್ನು ಬಲುವಾಗಿ ಮೆಚ್ಚಿಕೊಂಡರು. ಇಡೀ ಮೈಸೂರು ರಾಜ್ಯದಲ್ಲಿ ಇದರಷ್ಟು ಉತ್ಕೃಷ್ಟ ಕ್ಯಾಂಪ್ ಬೇರೆ ತಾನು ನೋಡಲಿಲ್ಲ ಎಂದು ನಮ್ಮನ್ನು ಕೊಂಡಾಡಿದರು. ಪುತ್ತೂರು, ಮಂಗಳೂರು, ಉಪ್ಪಿನಂಗಡಿಗಳಿಂದ ಕೊನೆಯ ದಿನದ ಉತ್ಸವ ಕವಾಯತಿ ನೋಡಲು ಬಂದಿದ್ದ ಸಾರ್ವಜನಿಕರು ನಮ್ಮ ಮಾಯಾಲೋಕವನ್ನು ಬಲುವಾಗಿ ಮೆಚ್ಚಿ ದರು, ಮುಕ್ತವಾಗಿ ಪ್ರಶಂಸಿಸಿದರು.

ಕ್ಯಾಂಪ್ ಮುಗಿದು ಮಡಿಕೇರಿಗೆ ಮರಳುತ್ತಿದ್ದಾಗ ನನ್ನ ಎದುರು ನಿಂತ ಪ್ರಧಾನ

ಪ್ರಶ್ನೆ—ಎನ್‌ಸಿಸಿಯ ಪ್ರಥಮ ಧ್ಯೇಯವನ್ನು ಸಾಧಿಸಲು ಈ ಕ್ಯಾಂಪು ಸಮರ್ಥವಾಯಿತೇ ? ಕೊನೆಯಪಕ್ಷ ಆ ದಾರಿಯಲ್ಲಾದರೂ ನಾವು ನಡೆದಿದ್ದೇವೆಯೇ ? ಲೋಕದ ಡೊಂಕು ತಿದ್ದುವವರು ನಾವಲ್ಲ, ನಿಜ. ಆದರೆ ಕ್ಯಾಂಪಿನಲ್ಲಿ ಇದನ್ನು ನಾವು ಸಾಧಿಸದಿದ್ದರೆ ಇನ್ನೆಲ್ಲಿ ? ನೇತ್ರಾವತಿ ನಕ್ಕಳು. ಮತತಡ್ಕ ಹಿಂದುಳಿಯಿತು. ಸಂಪಾಜೆಯ ತಿರುವು ದಾರಿ ಮಡಿಕೇರಿಯಲ್ಲಿ ಕೊನೆಗೊಂಡಿತು. "ನಿನ್ನ ಹೊಸ ಅಸಂಭವವೇನು ?" ಎಂದು ನಮ್ಮ ಕಾಲೇಜು ಸವಾಲೊಡ್ಡಿತು.

ನಾನು ಕಕಮುಕನಾದೆ

ಉಪ್ಪಿನಂಗಡಿ ಕ್ಯಾಂಪ್ ಮುಗಿದ ಮರುದಿವಸವೇ ಭಾಗಮಂಡಲದ ಸಮೀಪದ ಅಯ್ಯಂಗೇರಿ ಎನ್ನುವಲ್ಲಿ ಒಂದು ಎನ್‌ಸಿಸಿ ಕ್ಯಾಂಪನ್ನು ರಾಯಪ್ಪನ್ ಪ್ರಾರಂಭಿಸಬೇಕಾಗಿದ್ದುದರಿಂದ ಎರಡು ದಿವಸಗಳಿಗೆ ಮೊದಲಾಗಿಯೇ ಅವರು ಉಪ್ಪಿನಂಗಡಿಯಿಂದ ನಿರ್ಗಮಿಸಿದ್ದರು. ಮುಂದಿನ ವಾರ ನಾನು ಮಡಿಕೇರಿಯಿಂದ ಅಯ್ಯಂಗೇರಿಗೆ ಖಾಸಗಿಯಾಗಿ ಹೋದೆ. ೩೦೦ ಜನರನ್ನು ಮೀರದ ಪುಟ್ಟ ಕ್ಯಾಂಪು. ದೈನಂದಿನ ಆಹಾರಭತ್ಯ ಕೇವಲ ಒಂದೂಕಾಲು ರೂಪಾಯಿ. ಇನ್ನು ಕೊಡಗಿನ ಆ ಮೂಲೆಗೆ ೨೦ ಮೈಲಿ ದೂರದ ಮಡಿಕೇರಿ ಮೂಲಕ ಸರಬರಾಜಾಗಬೇಕಾಗಿದ್ದ ಪ್ರತಿಯೊಂದು ಆಹಾರ ಸಾಮಗ್ರಿಯೂ ಬಲು ತುಟ್ಟಿ. ಹೇಗೆ ಆಹಾರ ಪೂರೈಸಿಯಾರೆಂದು ನಾನು ಶಂಕಿಸುತ್ತಿದ್ದೆ. ಅಯ್ಯಂಗೇರಿಯ ಊಟ ಉಪ್ಪಿನಂಗಡಿಯದಕ್ಕಿಂತ ಚೆನ್ನಾಗಿತ್ತು, ಪುಷ್ಕಳವಾಗಿತ್ತು. ಅದೇ ಅಡುಗೆಯವರು.

"ಹೇಗಿದೆ ಆಹಾರ ?" ರಾಯಪ್ಪನ್.

"ಬಲು ಸೊಗಸಾಗಿದೆ. ಏನಿದರ ರಹಸ್ಯ ?"

"ಅವನನ್ನು ತೆಗೆದುಬಿಟ್ಟೆ. ನಾನೇ ಕೆಲವು ಹುಡುಗರ ಸಹಾಯದಿಂದ ರೇಶನ್ ವಿಚಾರ ನೋಡುತ್ತಿದ್ದೇನೆ."

"ಅರ್ಥವಾಗಲಿಲ್ಲ."

"ರಾವ್ ! ಮೈಕಲ್ ಬಲು ಮೋಸಗಾರ. ನಿಮಗೆ ಗೊತ್ತಾಗಲಿಲ್ಲ. ನನಗೆ ತಿಳಿಯುವಾಗ ಉಪ್ಪಿನಂಗಡಿ ಕ್ಯಾಂಪ್ ಮುಗಿದಿತ್ತು."

"ಅದು ಹೇಗೆ ಸಾಧ್ಯ ? ಲೆಕ್ಕಪತ್ರ ನಾನೇ ನೋಡಿದೆ—ಸಾಮಗ್ರಿ ಎಲ್ಲೂ ಸೋರಿ ಹೋಗಲಿಲ್ಲ."

"ಅದೇ ಅವನ ಬುದ್ಧಿವಂತಿಕೆ. ಸಾಮಗ್ರಿ ಕ್ಯಾಂಪಿಗೆ ಬಂದರೆ ತಾನೇ ಸೋರಿಹೋಗುವುದು !"

"ಲೆಕ್ಕಪತ್ರ ತಾಳೆ ಆಗಬೇಡವೇ ?"

"ಅಂಗಡಿಯವನಿಂದ ಬಿಲ್ ಹಾಕಿಸಿದ. ಸಾಮಗ್ರಿ ತರಲಿಲ್ಲ. ಆದರೆ ಬಂತೆಂದು ಬಿಲ್ಲಿನ ಮೇಲೆ ಸರ್ಟಿಫಿಕೇಟ್ ಬರೆದ. ಒಂದೊಂದೂ ಸಾಮಗ್ರಿ ಬಂತೇ ಬರಲಿಲ್ಲವೇ ಎಂದು ನಿಮಗಾಗಲಿ ಯಾರಿಗಾದರೂ ಆಗಲಿ ತಪಾಸಣೆ ಮಾಡುವುದು ಸಾಧ್ಯವಾಗದು. ಅಡುಗೇ ಮನೆಗೆ ಕೊಟ್ಟದ್ದು ವಾಸ್ತವಿಕವಾಗಿ ಒಂದಾದರೆ ಬರೆದದ್ದು ನಾಲ್ಕು. ಹೀಗೆ ಕಾಗದಪತ್ರಗಳನ್ನು ಸಮರ್ಥವಾಗಿ ತಾಳೆ ಮಾಡಿದ. ಸಾಮಗ್ರಿ ಸಾಕಷ್ಟು ದೊರೆಯದಿದ್ದರೆ ಅಡುಗೆ

ಹೇಗೆ ಒಳ್ಳೆಯದಾದೀತು?" ನಾನು ಕಕಮಕನಾದೆ. "ಮುಂದಕ್ಕೆ ಪಾಠವಾಯಿತು. ನಾವೆಲ್ಲರೂ ಜೀವನದ ಮುಂದೆ ಏನೂ ಅರಿಯದ ಶಿಶುಗಳು, ಸಾರ್ವಜನಿಕ ವ್ಯವಹಾರದಲ್ಲಿ ನಮ್ಮ ಎಚ್ಚರ ನಾವು ಸದಾ ವಹಿಸಲೇಬೇಕು" ಎಂದು ಮಾತು ಪೂರೈಸಿದರು.

ನೀನೊಮ್ಮೆ ನಡೆನೋಡು ನೀಬಂದು ಶುಚಿಮಾಡು
ಬಾಳು ಕೊಳೆಯಾಗಿಸಿದವರ ಬೋಧೆಯಿಲ್ಲಿ
ನಿನ್ನ ಹೆಸರಲ್ಲೆ ನರಕ ನಿರ್ಮಿಸಿದವರ
ನೀನೊಮ್ಮೆ ಅವತರಿಸಿ ನೇರಮಾಡು

ವೀರಭದ್ರ ಚನ್ನಮಲ್ಲಸ್ವಾಮೀಜಿ

೧೯೫೮

ಕಾರ್ಗಲ್ಲನ್ನು ಕಾರ್ಗತ್ತಲಲ್ಲಿ ಸೇರಿದೆ

೧೯೫೮ರ ಬೇಸಗೆಯಲ್ಲಿ ಶರಾವತಿ ಯೋಜನೆ ಬೃಹತ್ಪ್ರಮಾಣದಲ್ಲಿ ಪ್ರಾರಂಭವಾಯಿತು. ಈ ಪರ್ವಕಾಲದಲ್ಲಿ ಎನ್‌ಸಿಸಿ ದಳಗಳೂ ಭಾಗವಹಿಸಿ ರಾಷ್ಟ್ರಸೇವಾಕಾರ್ಯದಲ್ಲಿ ನಿರತವಾಗಬೇಕು ಎಂದು ಬೆಂಗಳೂರಿನ ನಮ್ಮ ಮುಖ್ಯ ಕಛೇರಿ ನಿರ್ಧರಿಸಿತು. ಏಪ್ರಿಲ್ ಮೇ ತಿಂಗಳುಗಳಲ್ಲಿ ೧೪ ದಿವಸಗಳ ಕ್ಯಾಂಪು, ಅಖಿಲ ಕರ್ನಾಟಕ ಎನ್‌ಸಿಸಿ ಯೂನಿಟುಗಳಿಂದ ಆರಿಸಿದ ಕ್ಯಾಡೆಟ್ಟುಗಳೂ ಆಫಿಸರರೂ ಶರಾವತಿ ಕ್ಯಾಂಪಿನಲ್ಲಿ ಕೂಡಬೇಕು ಎಂಬ ಆದೇಶ ಕೂರ್ಗ್ ಇಡೆಂಪೆಂಡೆಂಟ್ ಕಂಪೆನಿ ಎನ್‌ಸಿಸಿಗೆ ಸಹ ಬಂದಿತು. ಆ ಹಿಂದಿನ ಎರಡು ವರ್ಷಗಳ ಬೇಸಗೆ ಶಿಬಿರಗಳಿಗೆ ಬಾಳಿಗರೂ ಕೃಷ್ಣಯ್ಯನವರೂ ಅನುಕ್ರಮವಾಗಿ ಹೋಗಿ ಬಂದಿದ್ದುದರಿಂದ ಈ ವರ್ಷ ನನ್ನ ಸರದಿ ಬಂದಿತ್ತು. ಸ್ವಂತೇಚ್ಛೆಯಿಂದ ಮುಂಬಂದವರು ೪೮ ಮಂದಿ. ಇವರೆಲ್ಲರೂ ಗಟ್ಟಿ ಆಳುಗಳು, ಸಾಹಸಿಗರು, ಶೀಲವಂತರು, ಭವಿಷ್ಯದಲ್ಲಿ ತಮಗೆ ಒಳ್ಳೆಯದಾಗಬೇಕೆಂದು ಹಂಬಲವಿದ್ದವರು. ಇವರಲ್ಲಿ ಒಂದೇ ಒಂದು ಕುರುಡು ಬಿಂದು (ಅದನ್ನು ಹಾಗೆ ಹೇಳಬಹುದೇ? ತಿಳಿಯದು) ಇತ್ತು—

ಕೆಲ್ಸ ಕಾರ್ಯ ಅನ್ನಿ—ಬಲು ಖುಷಿ
ನಿದ್ರೆ ಊಟ ಬ್ಯಾಡಾ—ದೊಡ್ರಿಸಿ !
ಇವಾಲ್ಯಾ ಬೆಟ್ಟ ಏರ್ತಿಯೇನೋ ಕೊಡಗಾ !
ಎಂದೇನಾದ್ರೂ ಕೇಳ್ದ್ರೋ
ಮುಂದಿನ್ಗಳ್ಗೆ ತಕ್ಕೋ
ನಿಮ್ಮೆದ್ರೇ ತಂದಿಡ್ತಾನೆ ಆ ಬೆಡಗಾ !
ಯಾಕೋ ಹೇಡಿ ಧೈರ್ಯನಿಲ್ಲಾ
ಎಂದೇನಾದ್ರೂ ಅಂದ್ರೋ
ಎದುರೇನಾದ್ರೂ ನಿಂತ್ರೋ
ಕೊಡ್ತಾನೆ ನಿಮ್ಕೈಗೆ ನಿಮ್ಹಲ್ಲಾ !

ಅವರನ್ನು ಕುರಿತು ಬೇರೆ ಯಾರೂ ಏನಾದರೂ ಲಘುವಾಗಿ ಆಡಕೂಡದು. ತಮ್ಮ ನಾಡು, ತಮ್ಮ ಸಂಸ್ಕೃತಿ, ತಮ್ಮ ಯೂನಿಟ್ಟಿನ ಪರಂಪರೆ, ತಮ್ಮ ಮುಂದಾಳುಗಳು ಇವೆಲ್ಲ ವಿಚಾರಗಳಲ್ಲಿ ಅವರಿಗೆ ಅಪಾರ ಅಭಿಮಾನ. ಈ ಗುಣಗಳು ಸಾಹಸಯಾತ್ರೆಯಲ್ಲಿ ಅದೆಷ್ಟು ಅವಶ್ಯಕವೋ ಕೆಲವು ಉಲ್ಬಣ ಪರಿಸ್ಥಿತಿಗಳಲ್ಲಿ ಅಷ್ಟೇ ಅಪಾಯಕಾರಿಯೂ ಹೌದು. ಆದ್ದರಿಂದ ಇಂಥ ಯೋಧರ ನಾಯಕನ ಹೊಣೆ ಗುರುತರವಾದದ್ದು. ಅವರ ಶಕ್ತಿ ಸಾಮರ್ಥ್ಯ ಯೋಗ್ಯದಾರಿಯಲ್ಲಿ ಹರಿದು ಬೆಳಕನ್ನು ಹಚ್ಚಬಲ್ಲದು; ಹಾದಿ ತಪ್ಪಿದಾಗ ಊರನ್ನೇ ಕೊಚ್ಚಬಲ್ಲದು. ನಮ್ಮ ನಲವತ್ತೆಂಟಕ್ಕೆ ನಾನು ದಿನದಿನ ಶಿಕ್ಷಣವಿತ್ತೆ, ಬೋಧನೆ ನೀಡಿದೆ. ಕ್ಯಾಂಪಿನಲ್ಲಿ ನಾವು ನಮ್ಮ ಸಹಜ ಶಿಸ್ತಿನಿಂದ, ಸುಸಂಸ್ಕೃತ ವರ್ತನೆ

ಯಿಂದ ಎಲ್ಲರ ವಿಶ್ವಾಸವನ್ನು ಗಳಿಸಬೇಕು, ಸ್ಪರ್ಧೆಗಳಲ್ಲಿ ಇತರರು ಯಾರೂ ಏರಲಾಗದ ಎತ್ತರ ಏರಬೇಕು—ಇದು ನನ್ನ ಹಿತವಚನದ ಸಾರ. ಮಡಿಕೇರಿಯಿಂದ ಹಾಸನಕ್ಕೆ ಬಸ್ಸಿನಲ್ಲಿ ಹೋದೆವು. ಅಲ್ಲಿಂದ ರಾತ್ರಿಯ ಟ್ರೈನಿನಲ್ಲಿ ಬೀರೂರಿನ ವರೆಗೆ ಪ್ರಯಾಣ ವಾಯಿತು. ಮುಂದೆ ಬೆಂಗಳೂರಿನಿಂದ ಬೀರೂರು ಮಾರ್ಗವಾಗಿ ತಾಳಗುಪ್ಪೆಗೆ ಹೋಗುವ ಬಂಡಿ ಏರಿ ಸಾಗಬೇಕಾಗಿತ್ತು. ಮಧ್ಯರಾತ್ರಿ ಆ ಬಂಡಿ ಬಂತು. ಬೆಂಗಳೂರಿನ ಕಡೆಯಿಂದ ಬಂದಿದ್ದ ಕ್ಯಾಡೆಟುಗಳು ಅದರ ತುಂಬ ತುಂಬಿ ನಮಗೆ ಎಳ್ಳಷ್ಟು ಜಾಗವೂ ದೊರೆಯು ಲಿಲ್ಲ. ಇನ್ನು ರೈಫಲುಗಳಿವೆ, ಹತ್ಯಾರುಗಳಿವೆ. ನಮ್ಮ ಧಾಂಡಿಗರು ಹಲವಾರು ಮಂದಿ ಕಿಟಕಿಗಳ ಮೂಲಕ ತೂರಿಕೊಂಡರು. ಅವರೊಡನೆ ಕಿಟ್‌ಬ್ಯಾಗುಗಳನ್ನೂ ರೈಫಲು ಗಳನ್ನೂ ಹತ್ಯಾರುಗಳನ್ನೂ ರವಾನಿಸಿದೆವು. ನನ್ನ ಸಮೇತ ಹದಿನೈದು ಮಂದಿ ಹಿಂದೆಯೇ ಉಳಿಯಬೇಕಾಯಿತು. ಅದರ ಮುಂದಿನ ಟ್ರೈನ್ ನಮ್ಮನ್ನು ತಾಳಗುಪ್ಪೆಗೆ ಕೊಂಡೊಯ್ದು ಮುಟ್ಟಿಸಿದ್ದು ಮರುದಿನ ಸಂಜೆ ವೇಳೆಗೆ—ಒಂದು ಹಗಲಿನ ಕ್ಯಾಂಪು ಈ ಹೊತ್ತಿಗಾಗಲೇ ಮುಗಿದುಹೋಗಿತ್ತು. ಆ ನಿರ್ಜನ ರೈಲ್ವೆ ನಿಲ್ದಾಣದಲ್ಲಿ ನಮ್ಮನ್ನು ಸ್ವಾಗತಿಸಲು ಕ್ಯಾಂಪಿನ ಕಡೆಯಿಂದ ಯಾರೂ ಇರಲಿಲ್ಲ. ಕಾರ್ಗಲ್ ಎಂಬಲ್ಲಿ ನಡೆಯು ತ್ತಿದ್ದ ಕ್ಯಾಂಪಿಗೆ ಅಲ್ಲಿಂದ ಹಲವಾರು ಮೈಲಿಗಳಿವೆ ಎಂದು ತಿಳಿಯಿತು. ಆ ರಾತ್ರಿ ದಾರಿ ಅರಸಿ ನಡೆಯುವ ಸಾಹಸ ಬೇಡವೆಂದು ನಿಲ್ದಾಣದಲ್ಲಿಯೇ ಮಲಗಲು ಏರ್ಪಾಡು ಮಾಡಿದೆವು. ಮಳೆ ಸುರಿದು ಒಳಗೂ ಹೊರಗೂ ಬಲು ಥಂಡಿ. ಸರಿಯಾದ ಆಹಾರವೂ ದೊರೆಯಲಿಲ್ಲ. ರಾತ್ರಿ ೯ ಗಂಟೆ ಆದಾಗ, ನಮಗೆ ನಿದ್ರೆ ಬಂತು ಎಂದೆನ್ನಿಸಿದಾಗ, ಕ್ಯಾಂಪಿ ನಿಂದ ಲಾರಿಗಳೂ ಆರ್ಮಿ ಸ್ಟಾಫುಗಳೂ ಬಂದರು. ಒಬ್ಬ ಜೆಮೆದಾರ್ ಅವರ ನಾಯಕ. ನಮ್ಮ ಕ್ಯಾಡೆಟುಗಳು ಅವನಿಗೆ ವಂದನೆ ಸಲ್ಲಿಸಿ ಎದ್ದರು. ಎಚ್ಚರವಾಗಿ ನಾನೂ ಎದ್ದೆ. "ನಾನು ಲೆಫ್ಟಿನೆಂಟ್ ನಾರಾಯಣರಾವ್. ಹೇಗಿದ್ದೀರಿ ಜೆಮದಾರ್ ಸಾಬ್" ಎಂದು ಹಸ್ತಲಾಘವವಿತ್ತೆ.

ಅವನು ಹಸ್ತಲಾಘವವೇನೋ ಇತ್ತ. ಆದರೆ ಆರ್ಮಿ ಕ್ರಮದಂತೆ ಅವನು ಮೊದಲು ನನಗೆ ಸೆಲ್ಯೂಟ್ ಕೊಡಬೇಕಾಗಿತ್ತು; ಕೊಡಲಿಲ್ಲ. "ಕ್ಯಾಂಪ್ ಕಮಾಂಡೆಂಟರಿಗೆ ನಿಮ್ಮ ಮೇಲೆ ತುಂಬ ಅಸಮಾಧಾನವಾಗಿದೆ" ಎಂದ.

"ನಮ್ಮ ತಪ್ಪೇನೂ ಇಲ್ಲವಲ್ಲ. ಹೋಗಿ ಮಾತಾಡೋಣ" ನಾನೆಂದೆ. ಇದೇನಪ್ಪ ಹೊಸ ವಿಪತ್ತು ಎಂದುಕೊಂಡೆ.

ಲಾರಿಯ ಮುಂದಿನ ಸೀಟುಗಳಲ್ಲಿ ಸೀನಿಯರ್ ದರ್ಜೆಯವರು ಕೂರಬೇಕಾದದ್ದು ವಾಡಿಕೆ. ಆದರೆ ಈ ಜೆಮದಾರ್ ನನ್ನನ್ನು ಅಲ್ಲಿಗೆ ಆಹ್ವಾನಿಸಲಿಲ್ಲ. ಅವನೂ ಅವನ ಸಹಾಯಕ ಎನ್‌ಸಿಓನೂ ಅಲ್ಲಿ ಕುಳಿತರು. ನಾನು ನನ್ನ ಹುಡುಗರೊಡನೆ ಲಾರಿಯ ಹಿಂದೆ ಕುಳಿತೆ. ಕ್ಯಾಂಪಿಗೆ ಹೋದೊಡನೆ ನಮ್ಮ ಹುಡುಗರ ಟೆಂಟುಗಳ ಹತ್ತಿರ ನಮ್ಮನ್ನು ಇಳಿಸಿ ಬೇರೆ ಏನೂ ಮಾತಾಡದೇ ಆಹಾರದ ವಿಚಾರ ಪ್ರಸ್ತಾಪಿಸದೇ ಅವನಷ್ಟಕ್ಕೆ ಹೋದ. ಆ ಮೊದಲೇ ತಲಪಿದ್ದ ಸೀನಿಯರ್ ಕ್ಯಾಡೆಟ್ ನನ್ನ ಟೆಂಟ್ ಯಾವುದೆಂದು ಗುರುತಿ ಸಿಟ್ಟಿದ್ದ. ಅಲ್ಲಿಗೆ ನನ್ನನ್ನು ಕೊಂಡೊಯ್ದ. ನಮ್ಮ ಹುಡುಗರೆಲ್ಲರೂ ಸುರಕ್ಷಿತವಾಗಿದ್ದಾ ರೆಂದೂ ಸಾಮಗ್ರಿಗಳೆಲ್ಲವೂ ಸರಿಯಾಗಿವೆಯೆಂದೂ ವರದಿ ಸಲ್ಲಿಸಿದ. ನನ್ನ ಟೆಂಟು ಕೆಸರಿ

ನಿಂದ ತುಂಬಿದ ಹೊಂಡ. ಅದರಲ್ಲಿ ಖಾಲಿ ಕಬ್ಬಿಣದ ಮಂಚವನ್ನು ಒದಗಿಸಿದ್ದುದರಿಂದ ಪಂಕಶಾಯಿಯಾಗುವ ಯೋಗ ತಪ್ಪಿತು. ಹೊರಗೆ ಮಳೆ ಬೀಳುತ್ತಿತ್ತು. ನಾನು (ಆಹಾರ ದೊರೆಯದೇ) ಮಲಗುವಾಗ ರಾತ್ರಿ ೧೨ ಗಂಟೆ. ಬೆಳಗ್ಗೆ ಬೇಗನೆ ಎದ್ದು ನನ್ನ ವೇಷ ಭೂಷಣಗಳನ್ನೆಲ್ಲ ಸರಿಪಡಿಸಿಕೊಂಡು ಕ್ಯಾಂಪ್ ಕಮಾಂಡೆಂಟರನ್ನು ನೋಡೋಣ, ನಾವು ಬಂದಿರುವ ವಿಚಾರ ಅರುಹೋಣ ಎಂದು ಟೆಂಟಿನಿಂದ ಹೊರ ಹೊರಟೆ. ಪಕ್ಕದ ಟೆಂಟಿನ ಒಳಗಿನಿಂದ ಕರೆಬಂತು "ನೀವು ಕೊಡಗಿನ ಆಫಿಸರ್ ನಾರಾಯಣರಾವ್ ಅಲ್ಲವೇ ?"

"ಹೌದು. ನೀವು ಯಾರೆಂದು ತಿಳಿಯಲಿಲ್ಲ. ಕ್ಷಮಿಸಿ" ಅವರ ಮುಖವೂ ನನಗೆ ಸರಿಯಾಗಿ ಕಾಣುತ್ತಿರಲಿಲ್ಲ.

"ಮರೆತಿರಾ ಅಷ್ಟು ಥಕ್ಕನೆ! ಎರಡು ವರ್ಷಗಳ ಹಿಂದೆ ನಾನೂ ನನ್ನ ನನ್ನ ಮಿತ್ರ ಆಫಿಸರರೂ ಮಡಿಕೇರಿಯಲ್ಲಿ ರಾತ್ರಿ ತಂಗಲು ಎಡೆ ತೋರದೇ ಅಲೆಯುತ್ತಿದ್ದಾಗ ನೀವಲ್ಲವೇ ನಮಗೆ ಸಹಾಯ ಮಾಡಿದ್ದು? ಎಷ್ಟು ದೊಡ್ಡ ಸಹಾಯವದು!"

"ಓಹೋಹೋ! ನೀವು ಆರ್ಮಿ ಆಫಿಸರ್ ಮೇಜರ್..."

"ಹೌದು. ಹೌದು. ನಾನೇ ಈ ಕ್ಯಾಂಪಿನ ಕಮಾಂಡೆಂಟ್" ಅವರ ಉತ್ತರ.

ನಾನು ಆ ಕೂಡಲೇ ಬೂಟುಗಳನ್ನು ಕ್ಲಿಕ್ಕಿಸಿ ಅವರಿಗೆ ಮಿಲಿಟೆರಿ ವಂದನೆ ಸಲ್ಲಿಸಿದೆ. ನಡೆದಿದ್ದುದಿಷ್ಟು—ಆ ಬೇಸಗೆಯ ಸಂಜೆ ಮಿಲಿಟೆರಿ ಸಮವಸ್ತ್ರಧಾರಿಗಳಾದ ಇಬ್ಬರು ಆಫಿಸರರು ಮಡಿಕೇರಿ ಬೀದಿಗಳಲ್ಲಿ ತಿರುಗುತ್ತಿದ್ದುದನ್ನು ಕಂಡೆ. ನಾನು ಸಹಜವಾಗಿ ಅವರತ್ತ ಸಾಗಿ ಅವರಿಗೇನಾದರೂ ಸಹಾಯಬೇಕೇ ಎಂದು ವಿಚಾರಿಸಿದೆ. ಅವರಿಗೆ ಆ ರಾತ್ರಿ ಉಳಿದುಕೊಳ್ಳಲು ಒಂದು ಸರಿಯಾದ ಸ್ಥಳ ಬೇಕಾಗಿತ್ತು. ಕೊಡಗು ಸರಕಾರದ ಅತಿಥಿಗೃಹಕ್ಕೆ ಅವರನ್ನು ಕೊಂಡೊಯ್ದು ಅಲ್ಲಿಯ ಅಧಿಕಾರಿಗಳ ನೆರವಿನಿಂದ ಅವರಿಗೆ ಸ್ಥಳ ದೊರಕಿಸಿಕೊಟ್ಟೆ; ಊಟದ ಏರ್ಪಾಡನ್ನು ಮಾಡಿದೆ. ನನ್ನ ಈ ಹಳೆ ಪರಿಚಯಸ್ಥರು, ಅದೂ ನಾನು ಮಾಡಿದ ಒಂದು ಕಿರಿಯ ಸೇವೆಯನ್ನು ಹಿರಿದಾಗಿ ಪರಿಗಣಿಸಿ ಅದನ್ನು ನೆನಪಿನಲ್ಲಿಟ್ಟವರು, ಈ ಕ್ಯಾಂಪಿನ ಮುಖ್ಯಸ್ಥರಾಗಿರುವುದು ನನಗೆ ಬಲು ಸಂತೋಷ ನೀಡಿತು. "ಕ್ಷಮಿಸಿ, ನಾವು ಕೆಲವರು ರೈಲಿನಲ್ಲಿ ಜಾಗ ದೊರೆಯದೆ ಒಂದು ದಿವಸ ತಡವಾಗಿ ಬರಬೇಕಾಯಿತ್ತು" ನಾನೇ ಮಾತು ಮುಂದುವರಿಸಿದೆ.

"ಆ ಚಿಂತೆ ನಿಮಗೆ ಬೇಡ. ನಿಮಗೆ ನಿನ್ನೆ ಬೆಳಗ್ಗಿನಿಂದಲೇ ಹಾಜರಿ ಕೊಡುತ್ತೇವೆ ಮತ್ತು ಅದೇ ಪ್ರಕಾರ ಗೌರವಧನ ಕೊಡುತ್ತೇವೆ."

"ಗೌರವಧನ ಪ್ರಧಾನವಲ್ಲ. ಒಂದು ದಿವಸದ ಶಿಕ್ಷಣ ನಷ್ಟವಾಯಿತಲ್ಲ ಎಂದು ನನಗೆ ಬೇಸರ."

"ಇನ್ನೂ ಬರದೇ ಇರುವ ತಂಡಗಳೂ ಇವೆ, ನಿಮಗೆ ಗೊತ್ತೇ? ಸರಿಯಾದ ಟ್ರೈನಿಂಗು ಬಹುಶಃ ನಾಳೆ ಪ್ರಾರಂಭವಾದೀತಷ್ಟೆ!"

"ಭಾರೀ ಕ್ಯಾಂಪು ಇರಬೇಕಲ್ಲವೆ ಸಾರ್ ?"

"೯೦೦ರಿಂದ ೧,೦೦೦ದಷ್ಟು. ಬಲು ದೊಡ್ಡ ಕ್ಯಾಂಪು; ಬಲು ದೊಡ್ಡ ಕ್ಯಾಂಪು ಎಲ್ಲವೂ ಪರಿಷ್ಕಾರವಾಗಿ ನಡೆಸುವುದೇನು ಸಾಮಾನ್ಯವೇ!" ಇಷ್ಟಾಗುವಾಗ ಅವರ ಟೆಂಟಿಗೆ ಬೆಡ್ ಕಾಫಿ ಬಂತು. "ರಾವ್! ನೀವೂ ಸ್ವಲ್ಪ ಕಾಫಿ ತೆಗೆದುಕೊಳ್ಳಿ. ತುಂಬ

ಆಯಾಸವಾಗಿರಬೇಕು. ಚಳಿ ಬೇರೆ'' ಅವರೇ ನನಗೊಂದು ಕಪ್ ಕಾಫಿ ನೀಡಿದರು. ಈ ಆತ್ಮೀಯ ವರ್ತನೆಯಿಂದ ನಾನು ಹಿಗ್ಗಿ ಅವರಿಗೆ ಸೆಲ್ಯೂಟ್ ಹೊಡೆದು ನಮ್ಮ ಹುಡುಗರ ಟೆಂಟುಗಳ ಕಡೆಗೆ ಹೊರಟೆ.

ಆಫಿಸರರ ಟೆಂಟುಗಳು ಇನ್ನೂ ತೆರೆದಿರಲಿಲ್ಲ. ಹುಡುಗರು ಸಮವಸ್ತ್ರದ ಮೇಲೆ ಟವೆಲ್ಲನ್ನೋ ಲುಂಗಿಯನ್ನೋ ಸುತ್ತಿಕೊಂಡು ಕೈಯಲ್ಲಿ ಟೂತ್ ಬ್ರಷನ್ನು ಹಿಡಿದು ಸಿಕ್ಕಾಬಟ್ಟೆ ನೀರಿಗೋಸ್ಕರ ಅಲೆಯುತ್ತಿದ್ದರು. ಕೆಸರು ಕೊಚ್ಚೆ ಒಂದು ವಿಧದ ಹಳಸಲು ವಾಸನೆ ಸಾರ್ವತ್ರಿಕವಾಗಿತ್ತು. ಮಳೆಯೊಂದಿಲ್ಲದಿದ್ದರೆ ಕ್ಯಾಂಪಿನ ಸ್ಥಳ ಬಲು ಆಕರ್ಷಕ ವಾಗಿತ್ತು. ಶರಾವತಿ ಕಣಿವೆಯ ಸುಂದರ ಹಸುರು ಅಲ್ಲಿ ಸೂರೆಹೋಗಿತ್ತು. ನಮ್ಮ ಹುಡುಗರ ಯೋಗಕ್ಷೇಮ ವಿಚಾರಿಸಿದೆ. ಅವರೆಲ್ಲರೂ ೫-೩೦ ಗಂಟೆಗೇ ಬೆಡ್‌ಕಾಫಿ ಪಡೆಯಲು ಅಡುಗೇ ಮನೆಗೆ ಹೋದರೂ ಅವರಿಗೆ ಕಾಫಿ ದೊರೆಯಲಿಲ್ಲವಂತೆ; ''ನೀವು ತಡವಾಗಿ ಬಂದಿದ್ದೀರಿ'' ಎಂದು ಇವರನ್ನು ಅಟ್ಟಿಬಿಟ್ಟರಂತೆ; ಹಾಗಿದ್ದರೂ ಇವರ ಅನಂತರ ಹೋದ ಬೇರೆ ಕ್ಯಾಡೆಟುಗಳಿಗೆ ಬೇರೆ ದಾರಿಯಲ್ಲಿ ಕೊಂಡೊಯ್ದು ಕಾಫಿ ಕೊಟ್ಟರಂತೆ. ಇದರಿಂದ ನಮ್ಮ ಹುಡುಗರಿಗೆ ಕೋಪ ಬಂದಿತ್ತು. ನಾನೇ ಅಡುಗೆ ಮನೆಗೆ ಹೋದೆ. ಯಾರೊಡನೆ ಮಾತಾಡುವುದು ? ಅರಾಜಕತೆ. ಬಾಣಸಿಗ ಮೆಸ್ ಜೆಸಿಓನ ಕೇಳಿ ಎಂದ. ಜೆಸಿಓ ಉಗ್ರಾಣದಲ್ಲಿದ್ದಾನೆಂದು ಅಲ್ಲಿಗೆ ಹೋದೆ. ''ನೋ ಸಾಬ್ ! ನಾನೀಗ ಕಾಫಿ ಕೊಡಲಾರೆ ತಡವಾಯಿತು'' ಅವನ ಧಾರ್ಷ್ಟ್ಯದ ಮಾತು.

''ಏನು ಮಾತಿದು ! ನಮ್ಮ ಹುಡುಗರು ೫-೩೦ ಗಂಟೆಗೇ ಹೋಗಿದ್ದರೂ ತಡ ವಾಯಿತೇ ! ಅವರಿಗೆ ಕಾಫಿ ದೊರೆಯಲಿಲ್ಲ'' ನಾನು ಹೇಳಿದೆ.

''ಅದು ಹೇಗೆ ನಂಬುವುದು ?'' ಅವನ ಸವಾಲು.

''ನಾನು—ನಾನು ಅವರ ಆಫಿಸರ್ ಹೇಳುತ್ತಿದ್ದೇನೆ.''

''ಸಾರಿ ಸಾಬ್.''

''ಅಂದರೆ ನೀವೀಗ ಕಾಫಿ ಕೊಡಿಸುವುದಿಲ್ಲ ?'' ಅವನು ಉತ್ತರವೀಯದೇ ಧಾರ್ಷ್ಟ್ಯ ದಿಂದ ಸಾಗಿದ.

ನಾನು ಕಮಾಂಡೆಂಟರ ಹತ್ತಿರ ಹೋದೆ. ಅವರಾಗ ಪೂರ್ಣ ಸಮವಸ್ತ್ರ ಧರಿಸಿ ಹೊರಗೆ ನಿಂತಿದ್ದರು. ಪುನಃ ಸೆಲ್ಯೂಟಿಸಿ ಹೇಳಿದೆ ''ನಮ್ಮ ಹುಡುಗರಿಗೆ ಕಾಫಿ ದೊರೆಯಲಿಲ್ಲ ಸಾರ್.''

''ಇಷ್ಟು ಸಣ್ಣ ವಿಚಾರ ನನ್ನೊಡನೆ ಬರಬೇಕೇ ? ನೀವೇ ಅದನ್ನು ಪರಿಹರಿಸಿ— ಕ್ಯಾಂಪು ನಿಮ್ಮದು.''

''ಆ ಪ್ರಯತ್ನದಲ್ಲಿ ನಾನು ವಿಫಲನಾದ್ದರಿಂದಲೇ ನಿಮ್ಮಲ್ಲಿಗೆ ಬಂದಿದ್ದು. ನನಗೂ ಗೊತ್ತಿದೆ ಸೀದಾ ನಿಮ್ಮಲ್ಲಿಗೆ ದೂರು ತರಬಾರದೆಂದು.''

''ಏನು ಮಾಡಿದಿರಿ ಹೇಳಿ.'' ನಡೆದದ್ದನ್ನೆಲ್ಲ ಹೇಳಿದೆ. ಮೆಸ್ ಜೆಸಿಓನ ಔದ್ಧತ್ಯವನ್ನೂ ವಿವರಿಸಿದೆ. ಕಮಾಂಡೆಂಟರು ಅಡುಗೇ ಮನೆಗೆ ನಡೆದರು. ನಾನು ಅವರನ್ನು ಹಿಂಬಾಲಿ ಸಿದೆ. ಮೆಸ್ ಜೆಸಿಓನನ್ನು ಕರೆದು ಕಾಫಿ ಮಾಡಿಸಿ ನಮ್ಮ ಹುಡುಗರಿಗೆ ಕೊಡಲು ಹುಕುಂ ಮಾಡಿದರು. ಅವನ ಮುಖ ವಿಕಾರವಾಯಿತು.

"ನಿಮಗೆ ತೃಪ್ತಿಯಾಯಿತೇ ?" ಕಮಾಂಡೆಂಟರ ಮಾತು (ವ್ಯಂಗ್ಯವಿತ್ತೆಂದು ನನಗೆ ಅನ್ನಿಸಿತು).

"ಖಂಡಿತ. ನಮ್ಮ ಮಕ್ಕಳ ತೃಪ್ತಿಯೇ ನನ್ನ ತೃಪ್ತಿ."

ಆ ದಿವಸವೂ ಅದರ ಮರುದಿವಸವೂ—ಎಂದರೆ ಒಟ್ಟಾಗಿ ಮೂರು ದಿವಸಗಳ ಕಾಲ—camp setting, cleaning and organization ಎಂಬ ಮಹಾಕಾರ್ಯ ಕ್ರಮಗಳು ನಡೆದುವು ಕಾಗದದ ಮೇಲೆ. ನೆಲದ ಮೇಲೆ—ಉಮಹೇ !

ಕವಿದ ಮೋಡ

ನೂರಾರು ಹುಡುಗರು. ಕರ್ನಾಟಕದ ಎಲ್ಲ ಕಡೆಗಳಿಂದಲೂ ಕೆಲಸ ಮಾಡಲು ಉತ್ಸುಕ ರಾಗಿ ಬಂದಿದ್ದಾರೆ. ಅವರಿಗೆ ಯೋಗ್ಯ ಮಾರ್ಗದರ್ಶನವಿಲ್ಲ. ಕಾಲಕಾಲಕ್ಕೆ ಸರಿಯಾಗಿ ಶಿಸ್ತಿನಿಂದ ಆಹಾರದ ವಿತರಣೆ ಇಲ್ಲ. ಆದರೆ ಕ್ಯಾಂಪಿನ ಪಾರ್ಟ್ 1 ಹುಕುಂಗಳಲ್ಲಿ, ಇತರ ಕಾಗದ ಪತ್ರಗಳಲ್ಲಿ ಎಲ್ಲವೂ perfect ! ಮರಳಿನಲ್ಲಿ ಕ್ಯಾಂಪುವಲಯದ ಮಾದರಿ (sand model) ಬಲು ಸೊಗಸಾಗಿತ್ತು. ಕ್ಯಾಂಪ್ ಆಫಿಸಿನಲ್ಲಿ ಮ್ಯಾಪುಗಳು, ಚಾರ್ಟು ಗಳು, ದೈನಂದಿನ ಖರ್ಚು, ಹಾಜರಿ ಮುಂತಾದವನ್ನು ತೋರಿಸುವ ಗ್ರಾಫುಗಳು, ಮಿಲಿಟೆರಿ ನಾಯಕರ ಚಿತ್ರಗಳು—ಎಲ್ಲವೂ ಅತ್ಯಾಕರ್ಷಣೀಯವಾಗಿದ್ದುವು. ಕ್ಯಾಂಪಿನ ದಾರಿ, ಹೊರವಲಯ, ವಿದ್ಯುದ್ದೀಪಗಳ ಸೌಕರ್ಯ—ಸುಸಜ್ಜಿತ ನಗರದಷ್ಟು ಪರಿಷ್ಕಾರ ವಾಗಿದ್ದುವು. ಆದರೆ ಶಿಕ್ಷಣ ? ನಡೆಯಲಿಲ್ಲ. ಆಹಾರ ? ಬಲು ಕಳಪೆ. ಹೊಟ್ಟೆತುಂಬ ಅನ್ನ ಸಹ ದೊರೆಯುತ್ತಿರಲಿಲ್ಲ. ಕ್ಯಾಂಪ್ ಕಮಾಂಡೆಂಟರು ಅವರ ಆರ್ಮಿ ಸ್ಟಾಫ್ ಹಾಗೂ ಭಕ್ತ ಎನ್‌ಸಿಸಿ ಆಫಿಸರ್ ವೃಂದ ಸಮೇತ ಎಲ್ಲ ಕಡೆಯಲ್ಲಿಯೂ ತಿರುಗು ತ್ತಿದ್ದರು. ಎಲ್ಲ ಕಡೆಯಲ್ಲಿಯೂ ಎಲ್ಲವರ ಮೇಲೂ ರೇಗಿ ಆಜ್ಞೆ ನೀಡುತ್ತಿದ್ದರು. ಆದರೆ ಪರಿಣಾಮ ನನಗಂತೂ ಏನೂ ತಿಳಿಯಲಿಲ್ಲ. "ಇಂಥ ಭಾರೀ ಕ್ಯಾಂಪು ನಡೆಸುವುದೆಷ್ಟು ಕಠಿಣ ನಿಮಗೆ ಗೊತ್ತಿದೆಯೇ ಜೀಟಿ ?" ಕಮಾಂಡೆಂಟರು ನನ್ನನ್ನು ಪ್ರಶ್ನಿಸಿದರು.

"ಕೊಡಗಿನಂಥ ಮೂಲೆಯಿಂದ ಬರುವ ಅವರಿಗೆ ಅದು ಹೇಗೆ ತಿಳಿದೀತು ಸಾರ್" ಒಬ್ಬ ಎನ್‌ಸಿಸಿ ಆಫಿಸರ್ ಲಾಂಗೂಲ ಚಾಲಿಸಿದ.

"ನೀವು ಯಾವಾಗ ಕೊಡಗಿಗೆ ಬಂದು ನಮ್ಮ ಯೂನಿಟ್ಟನ್ನು ನೋಡಿದ್ದು" ಎಂದು ಕೋಪದಿಂದ ಆಫಿಸರನನ್ನು ನಾನು ಆ ಕ್ಷಣವೇ ಕೇಳಿದೆ.

"ಕೋಪಮಾಡಬೇಡಿ ! ತಮಾಷೆಗೆ ಹೇಳಿದೆ."

"ಸ್ವಾಮೀ ! ನೀವು ಲಘುವಾಗಿ ಮಾತಾಡಬಹುದಂತೆ. ನಾನು ಕೋಪ ಮಾಡಬಾರ ದಂತೆ ! ಇದಾವ ನ್ಯಾಯ ?"

ನಮ್ಮ ಹುಡುಗರನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದೆ, ನಿಜ. ಆದರೆ ಸಾಮೂಹಿಕ ಅರಾಜಕತೆಯ ಸಾಗರದಲ್ಲಿ ಶಿಸ್ತಿನ ದ್ವೀಪ ಪರಿಶುದ್ಧವಾಗಿ ಉಳಿಯುವುದು ಕಷ್ಟ. ಕ್ಯಾಂಪಿನ ಜೀವ ಸ್ನಾನದ ಮನೆಯಲ್ಲಿದೆ ಎಂಬುದೊಂದು ಹಳೆಯ ನುಡಿ. ಮೊದಲನೆ ದಿವಸ ಕಾಫಿ ಪ್ರಕರಣ ಮುಗಿದ ತರುವಾಯ ಸ್ನಾನದ ಮನೆ ನೋಡಲು ಹೋದೆ. ಟೆಂಟುಗಳ ಸ್ಥಳದಿಂದ ಎರಡು ಫರ್ಲಾಂಗು ದೂರದಲ್ಲಿ ಬಸ್ ಮಾರ್ಗವನ್ನು ದಾಟಿದೊಡನೆ

ಶರಾವತಿಯ ಜಲಾಶಯ ಭಯಂಕರವಾಗಿ ವಿಸ್ತಾರವಾಗಿ ಆಳವಾಗಿ ನಿಶ್ಚಲವಾಗಿ ಕಣ್ಣನ್ನು ಕುಕ್ಕುವುದು. ಇಲ್ಲಿ ನೀರಿನ ಅಂಚಿನಿಂದ ಮೂರು ಅಡಿಗಳ ವರೆಗೆ ಸುಮಾರು ೨೦ ಅಡಿಗಳಷ್ಟು ಉದ್ದಕ್ಕೆ ಬಿದಿರಿನ ಗೂಟಗಳನ್ನು ನೀರಿನ ಒಳಗೆ ನೆಲಕ್ಕೆ ನೆಟ್ಟು ಅವುಗಳಿಗೆ ದಪ್ಪ ಹಗ್ಗಗಳನ್ನು ಕಟ್ಟಿ ಒಂದು ಆವರಣ ಏರ್ಪಡಿಸಿದ್ದರು. ಈ ಆವರಣದೊಳಗೆ ಹುಡುಗರು ಜಲಾಶಯಕ್ಕೆ ಇಳಿದು ಸ್ನಾನಮಾಡುವುದು—ಮತ್ತೆ ಎಲ್ಲಿಯೂ ನೀರನ್ನು ಸ್ಪರ್ಶಿಸಬಾರದು ಎಂದು ಬಲವಾಗಿ ಬರೆದು ತೂಗುಹಾಕಿದ್ದ ಬೋರ್ಡನ್ನು ಅಲ್ಲಿ ಕಂಡೆ. ಆರ್ಮಿ ಸ್ಟಾಫುಗಳೂ ಕ್ಯಾಡೆಟ್-ಪೊಲೀಸರೂ ಅಲ್ಲಿ ಗಸ್ತು ತಿರುಗುತ್ತಿದ್ದರು. ಕ್ಯಾಂಪ್ ಕಮಾಂಡೆಂಟರು ಆ ಮೊದಲೇ ನಮಗೆ ಲಿಖಿತಮೂಲಕ ಕೊಟ್ಟಿದ್ದ ಕ್ಯಾಂಪಿನ ಸ್ಥಿರ ಹುಕುಂಗಳನ್ನು ಪುನಃ ಓದಿಕೊಂಡೆ. "ಪ್ರತಿಯೊಬ್ಬ ಕ್ಯಾಡೆಟನ ಜೀವದ, ಯೋಗಕ್ಷೇಮದ, ಶಿಕ್ಷಣ ಹಾಗೂ ಎಲ್ಲವುಗಳ ಸಮಗ್ರ ಹೊಣೆ ಆತನ ಎನ್‌ಸಿಸಿ ಆಫಿಸರನದು...ಸ್ನಾನದ ಘಟ್ಟಕ್ಕೆ ಕ್ಯಾಡೆಟುಗಳನ್ನು ಸಾಯಂಕಾಲ ೪ರಿಂದ ೫ರ ಒಳಗೆ ಮಾತ್ರ ಕರೆದುಕೊಂಡು ಹೋಗತಕ್ಕದ್ದು. ಪ್ರತಿ ತಂಡವನ್ನೂ ಅದರ ಮುಖ್ಯಾಧಿಕಾರಿಯಾದ ಎನ್‌ಸಿಸಿ ಆಫಿಸರನೇ ಮಾರ್ಚ್ ಮಾಡಿಸಿ ಕರೆದುಕೊಂಡು ಹೋಗಿ ಕ್ರಮಬದ್ಧವಾಗಿ ಸ್ನಾನ ಮಾಡಿಸಿ ಮಾರ್ಚ್ ಮಾಡಿಸಿ ಹಿಂದೆ ಕರೆತರತಕ್ಕದ್ದು..." ನನ್ನ ನಲವತ್ತೆಂಟು ! ಒಂದೊಂದೂ ಕಾವೇರಿಪೂರದಲ್ಲಿ ಈಸಬಲ್ಲ ಈಸಿ ಜೈಸಬಲ್ಲ ಶಕ್ತಿಯ ಗಂಟು. ಈ ನೆನಪೇ ನನ್ನಲ್ಲಿ ಭಯ ಉಂಟು ಮಾಡಿತು. ಈಸಲು ಬರುವವರಿಗೆ ನೀರು ಎಷ್ಟೆಷ್ಟು ಗಭೀರವಾಗಿರುತ್ತದೊ ಅಷ್ಟಷ್ಟು ಪಂಥಾಹ್ವಾನಕರವಾಗಿರುತ್ತದೆ. ನಾನು ಮೊದಲು ಹೇಳಿದ ಮಾತಿದು "ಮಿತ್ರರೇ ! ಸ್ನಾನದ ಸ್ಥಳ ನೋಡಿ ಬಂದಿದ್ದೇನೆ. ಅಲ್ಲಿಗೆ ನಾವೆಲ್ಲರೂ ಒಟ್ಟಿಗೇ ಹೋಗತಕ್ಕದ್ದು. ನನ್ನ ಆಜ್ಞಾನುಸಾರ ಮಾತ್ರ ಸ್ನಾನ ಮಾಡತಕ್ಕದ್ದು. ಈ ಆಜ್ಞೆಯನ್ನು ಎಳ್ಳಷ್ಟಾದರೂ ಮೀರಿದರೆ ಪರಿಣಾಮ ಸರ್ವವಿಧದಲ್ಲಿಯೂ ಭೀಕರವಾದೀತು." ಆ ಸಾಯಂಕಾಲದ ಸ್ನಾನ—ಮೊದಲಿನ ಸ್ನಾನ. ನಾನು ಮಾರ್ಚ್ ಮಾಡಿಸಿ ಕರೆದುಕೊಂಡು ಹೋದೆ. ನಮ್ಮ ಬಕೆಟುಗಳನ್ನು ತಂದು ಸಾಲಾಗಿ ನದೀ ದಂಡೆಯಲ್ಲಿಟ್ಟೆವು. ಅವುಗಳಿಗೆ ನೀರು ತುಂಬಿಸುತ್ತಿದ್ದುದು ಒಂದು ತಂಡ ; ಇನ್ನೊಂದು ತಂಡ ಅವುಗಳಿಂದ ನೀರು ಸುರುವಿಕೊಂಡು ಸ್ನಾನ ಮಾಡುತ್ತಿತ್ತು. ಈ ಪರ್ಯಾಯಕ್ರಮದಿಂದ ಎಲ್ಲರಿಗೂ ಸ್ನಾನ ದೊರೆಯಿತು : ಯಾರೂ ನದಿಗೆ ಇಳಿದು ಸ್ನಾನ ಮಾಡುವ ಸನ್ನಿವೇಶ ಒದಗಲಿಲ್ಲ. ಒಬ್ಬ ನನ್ನ ಕಣ್ಣು ತಪ್ಪಿಸಿ ಇಳಿಯುವ ಏರ್ಪಾಡಿನಲ್ಲಿದ್ದ "ಮಿತ್ರನೇ ! ನೀನು ನನ್ನ ಹೊಣೆಯಲ್ಲಿ ಇಲ್ಲದಾಗ ಹೇಗೆ ಬೇಕಾದರೂ ಹಾರಿ ಪ್ರಾಣ ಕಳೆದುಕೊಳ್ಳಬಹುದು, ನನ್ನ ಅಭ್ಯಂತರವಿಲ್ಲ. ಈಗ ಮಾತ್ರ ಅದು ಕೂಡದು." ಧ್ವನಿಯು ಹಿಂದಿದ್ದ ಅಣಕ ಅವನಿಗೆ ಹಾಗೂ ಇತರ ಎಲ್ಲರಿಗೂ ತಾಗಿತು. ಇತರ ಅಸಂಖ್ಯಾತ ಕ್ಯಾಡೆಟುಗಳಾದರೊ ಸ್ನಾನದ ಆವರಣವನ್ನು ಅತಿಕ್ರಮಿಸಿ ಮೀಯುತ್ತಿದ್ದುದು ಕಂಡಿತು. ನಾನು ಪರೀಕ್ಷಾರ್ಥವಾಗಿ ನೀರಿಗೆ ಇಳಿದೆ. ನಾಲ್ಕು ಹೆಜ್ಜೆ ತೇಲುವಾಗಲೇ ನೀರಿನ ಆಳ ನಾಲ್ಕೆಂಟು ಅಡಿಗಳು. ಮುಂದೆ ಹೇಗೋ ನನಗೆ ಧೈರ್ಯ ಬರಲಿಲ್ಲ. ಬಲು ಕಡಿದಾದ ದಂಡೆ ಇರಬೇಕು. ಇಲ್ಲಿ ಪರೀಕ್ಷೆ ಕೂಡ ಮಾಡಬಾರದೆಂದು ನಾನು ಸಹ ಬಕೆಟ್ ನೀರಿನ ಕಾಕ ಸ್ನಾನವನ್ನು ಮರುದಿವಸದಿಂದ ಆರಂಭಿಸಿದೆ. ಕಮಾಂಡೆಂಟರು ನಮ್ಮ ಹುಡುಗರ ಸ್ನಾನ ವ್ಯವಸ್ಥೆಯನ್ನು ನೋಡಿ ಹರ್ಷ

ವ್ಯಕ್ತಪಡಿಸಿದರು. "ಹೇಗಿದೆ ಸ್ನಾನದ ನೀರು ?" ಎಂದು ಕೇಳಿದಾಗ ನಾನೆಂದೆ "ಭಯಂಕರವಾಗಿದೆ. ಇಲ್ಲಿ ನಾವೆಷ್ಟು ಜಾಗರೂಕರಾಗಿದ್ದರೂ ಸಾಲದು."

ಎರಡನೆಯ ದಿವಸದ ಸಂಜೆ. ನಮ್ಮ ಹುಡುಗರಿಗೆ ಒಂದೊಂದು ಕಂಬಳಿ ಕೊಡಲಾಗುವುದೆಂದೂ ಕ್ಯಾಂಪಿನ ಸ್ಟೋರಿಗೆ ಹೋಗಿ ಅದನ್ನು ಪಡೆದುಕೊಳ್ಳಬೇಕೆಂದೂ ಆದೇಶ ಬಂದಿತು. ನಾನು ಸ್ವತಃ ಸ್ಟೋರಿಗೆ ಹೋದೆ. ಕಂಬಳಿ ವಿತರಣೆ ಮಾಡುತ್ತಿದ್ದ ಜೆಸಿಓ ನನ್ನು ವಿನಯದಿಂದ ಪ್ರಶ್ನಿಸಿದೆ "ನಮ್ಮ ಹುಡುಗರಿಗೆ ಕಂಬಳಿ ಈಗ ಕೊಡುವಿರಾ ?" ನ್ಯಾಯವಾಗಿ ಅವನು ಎದ್ದು ನಿಂತು ನನಗೆ ಸೆಲ್ಯೂಟ್ ನೀಡಿ ಕೂರಲು ಆಸನವಿತ್ತು ಮಾತಾಡಬೇಕಾಗಿತ್ತು. ಆದರೆ ನನ್ನನ್ನು ಲಕ್ಷಿಸದೇ ಸರಕಾರೀ ಕಛೇರಿಯಲ್ಲಿ ಬಿಲ್ ಹಣ ಪಡೆಯುವ ಗುಮಾಸ್ತನಂತೆ ಇಲ್ಲದ ಕೆಲಸದಲ್ಲಿ ಅತಿಮಗ್ನನಾಗಿದ್ದ. ಪುನಃ ಅವನ ಲಕ್ಷ್ಯ ಸೆಳೆಯಲು ನಾನು ಮೊದಲಿನ ಪ್ರಶ್ನೆ ಮಾಡಿದೆ, ಈ ಸಲ ಸ್ವಲ್ಪ ಗಟ್ಟಿಯಾಗಿ. "ನನಗೆ ಚೆನ್ನಾಗಿ ಕಿವಿ ಕೇಳಿಸುತ್ತದೆ. ಈಗ ಕೊಡಲಾಗುವುದಿಲ್ಲ" ಅವನ ವ್ಯಂಗ್ಯ.

"ಯಾಕೆ ?" ನನ್ನ ಪ್ರಶ್ನೆ.

"ನೀವು ಬಂದಾಗಲೆಲ್ಲ ಅದನ್ನು ಕೊಡಲು ನಾನೇನು ಜವಾನ ಅಲ್ಲ."

"ಸುಬೇದಾರ್ ಸಾಬ್ ! ಕಮಾಂಡೆಂಟರ ಆರ್ಡರ್ ಪ್ರಕಾರ ನಾನು ಬಂದಿದ್ದೇನೆ. ನನ್ನ ಇಚ್ಛೆ ಪ್ರಕಾರ ಅಲ್ಲ."

"ಆರ್ಡರ್ ಯಾರದೇ ಆದರೂ ನಾನೀಗ ಅದನ್ನು ಪಾಲಿಸುವವನಲ್ಲ."

"ಹಾಗಾದರೆ ಈ ವಿಚಾರ ನಾನು ಕಮಾಂಡೆಂಟರಿಗೆ ದೂರು ಸಲ್ಲಿಸಬೇಕಾಗುವುದು. ಮೇಲಾಗಿ ನಿಮ್ಮ ಉದ್ಧಟ ವರ್ತನೆ ನನಗೆ ಸಹಿಸಲಾಗುವುದಿಲ್ಲ."

"ನೀವೇನು ಬೇಕಾದರೂ ಮಾಡಿ. ನಾನು ಲೆಕ್ಕಿಸುವುದಿಲ್ಲ."

ಇದು ನಡೆದದ್ದು ನನ್ನ ಹುಡುಗರ ಸಮಕ್ಷಮದಲ್ಲಿ. ನಾನು ನೇರವಾಗಿ ಕಮಾಂಡೆಂಟರ ಬಳಿ ಹೋದೆ. ಯುಕ್ತ ಮರ್ಯಾದೆ ಸಲ್ಲಿಸಿ ನಡೆದ ವಿಚಾರ ಹೇಳಿದೆ. ಅವರು "You should have had more tact" ಎನ್ನಬೇಕೆ ! ಇದೇನಿದು ಈ tact ? ಸುಬೇದಾರನೊಡನೆ ನಾನು ವರ್ತಿಸುವ ಬಗೆ ? ಕೌಶಲ ? ಚಳಕ ? ನನ್ನ ವರ್ತನೆಯಲ್ಲಿ ಕೊರತೆಯಾಗಿದ್ದ ವಿನಯ ಯಾವುದು ? "ಅದನ್ನು ನಾನು ಒಪ್ಪುವುದಿಲ್ಲ. ನಾನು ವಿನಯದಿಂದ ಅವರಿಗೆ ಹೇಳಿದಾಗ ಧಾರ್ಷ್ಟ್ಯದಿಂದ ಆತ ವರ್ತಿಸಿದ" ನಾನೇ ಮುಂದುವರಿಸಿದೆ.

"ನಿಮ್ಮ ಈಗಿನ ಮಾತೇ ನಿಮಗೆ ವಿನಯವಂತಿಕೆ ಇಲ್ಲ ಎನ್ನುವುದರ ಕುರುಹು."

"ಹಾಗಾದರೆ ನಿಮ್ಮ ಆಜ್ಞೆಯನ್ನು ಆತ ತಿರಸ್ಕರಿಸಿದ್ದನ್ನೂ ನನಗೆ ಮಾಡಿದ ಅಪಮಾನವನ್ನೂ ನಾನು ನಿಮಗೆ ಬಂದು ಹೇಳಬಾರದಿತ್ತೇ ?"

"ಈಗ ನಿಮಗೆ ಏನು ಬೇಕು ? ಕಂಬಳಿ ತಾನೇ. ಬನ್ನಿ ಕೊಡಿಸುತ್ತೇನೆ" ಅಸಮಾಧಾನದಿಂದ ಕಮಾಂಡೆಂಟ್ ಹೊರಟರು. ಅದೇ ಸ್ಟೋರ್, ಅದೇ ಸುಬೇದಾರ್. ಮಾತಿಲ್ಲ, ಕತೆಯಿಲ್ಲ. ಕಂಬಳಿ ದೊರೆತವು. ಬೇರೆ ವಲಯಗಳಿಂದ—ಮುಖ್ಯವಾಗಿ ಕಮಾಂಡೆಂಟರ ಯೂನಿಟ್ಟುಗಳಿಂದ—ಬಂದಿದ್ದ ಕ್ಯಾಡೆಟುಗಳಿಗೆ ಬಲು ಸುಲಭವಾಗಿ ಕಂಬಳಿಗಳು ದೊರೆತಿದ್ದುವು. ಆದರೆ ನಮಗೆ ಮಾತ್ರ ಜಗಳವೇ ಅವನ್ನು ದೊರಕಿಸುವ ಸಾಧನವಾಯಿತು.

ಕ್ಯಾಂಪಿನಲ್ಲಿದ್ದ ಎನ್‌ಸಿಸಿ ಆಫಿಸರರು ಸುಮಾರು ಇಪ್ಪತ್ತು ಮಂದಿ. ಮಂಗಳೂರಿನ ಲೆಫ್ಟಿನೆಂಟ್ ಪದಕಣ್ಣಾಯರನ್ನು ಬಿಟ್ಟರೆ ಮಿಕ್ಕ ಎಲ್ಲರೂ ನನಗೆ ಹೊಸಬರು. ಮೈಸೂರು ಬೆಂಗಳೂರು ಆಫಿಸರುಗಳ ಪ್ರಾಬಲ್ಯ ಇಲ್ಲಿ ಅಧಿಕ. ಅವರೇ ಸೀನಿಯರ್ ಆಫಿಸರುಗಳೂ ಹೌದು. ಕಮಾಂಡೆಂಟರೂ ಅವರ ಯುನಿಟ್ಟಿನವರೇ. ಹೀಗಾಗಿ ಒಂದು ಸ್ಪಷ್ಟ ಪಕ್ಷಪಾತ ಧೋರಣೆ ಅಲ್ಲಿ ವೇದ್ಯವಾಗುತ್ತಿತ್ತು. ಆಕರ್ಷಣೀಯ ಟೆಂಟುಗಳು ಆ ಹುಡುಗರಿಗೆ. ಊಟದ ಮನೆಯಲ್ಲಿ ಪ್ರತ್ಯೇಕ ಬಡಿಸುವ ಕೇಂದ್ರಗಳು ಅವರಿಗೆ. ಅಲ್ಲಿ ಬಡಿಸುವಷ್ಟು ಪುಷ್ಕಳವಾಗಿ ಬೇರೆ ಕೇಂದ್ರಗಳಲ್ಲಿ ಬಡಿಸುವುದಿಲ್ಲ. ಎಲ್ಲರಿಗೂ ಟಿಕೇಟುಗಳನ್ನು ಕೊಟ್ಟಿದ್ದುದರಿಂದ ಯಾವ ಹುಡುಗನೂ ಎರಡನೆಯ ಸಲ ಎಲ್ಲಿಯೂ ಏನನ್ನೂ ಪಡೆಯುವಂತಿರಲಿಲ್ಲ. ಹಾಗಿದ್ದರೂ "ನಮಗೆ ಬೇಕಾದ" ಹುಡುಗರಿಗೆ ಮಾತ್ರ ವಿಶೇಷ ರಿಯಾಯಿತಿ. ಇವೆಲ್ಲ ನಮ್ಮ ಹುಡುಗರ ಎದುರೇ ನಡೆಯುತ್ತಿದ್ದುವು. ಉತ್ತರ ಕನ್ನಡ ದಕ್ಷಿಣ ಕನ್ನಡ ಮತ್ತು ಕೊಡಗು ಹುಡುಗರನ್ನು ಮಲತಾಯಿ ಧೋರಣೆಯಿಂದ ಕಾಣುತ್ತಿದ್ದ ಈ ವ್ಯವಹಾರ ನನಗೆ ಸಹಿಸಲಿಲ್ಲ. ಮೇಲಾಗಿ ನಮ್ಮ ಯೋಗ್ಯ ಕ್ಯಾಡೆಟು ಗಳಿಗೆ ಇಂಥ ಸೇವೆಯೇ! ಎಲ್ಲ ಹುಡುಗರೂ ಒಂದೇ, ಹಸಿವು ಎಲ್ಲರಿಗೂ ಒಂದೇ, ಕ್ಯಾಂಪು ಎಲ್ಲರದೂ ಎಂದಿರುವಾಗ ಈ "ನಮಗೆ ಬೇಕಾದ" ವರ್ತನೆ ಏಕೆ!

ಆಫಿಸರರ ಮೆಸ್ಸಿನಲ್ಲಿ ಎನ್‌ಸಿಸಿ ಆಫಿಸರರ ಸಭೆ. ನಮ್ಮ ಸೀನಿಯರ್ ಎನ್‌ಸಿಸಿ ಆಫಿಸರ್ ಅದರ ಅಧ್ಯಕ್ಷರು. ಅವರು ಮಾತಾಡಿದರು "ಸಹೋದ್ಯೋಗಿಗಳೇ! ಇದು ನಮ್ಮ ಪ್ರಥಮ ಭೇಟಿ. ನಿಮಗೆ ಸ್ವಾಗತ. ನಮ್ಮ ಕ್ಯಾಂಪನ್ನು ಉತ್ಕೃಷ್ಟಗೊಳಿಸುವ ವಿಚಾರ ನಿಮ್ಮ ಸಹಕಾರ ಸಲಹೆ ನನಗೆ ಬೇಕು..." ಮಲೆನಾಡಿನ ಪೆದ್ದನಾದ ನನಗೆ ಇದೆಲ್ಲ ಔಪಚಾರಿಕವಾದ ಬೂಟಾಟಿಕೆ ಎಂದು ತಿಳಿಯಲಿಲ್ಲ. ಅವರ ಮಾತು ಮುಗಿದ ಒಡನೇ ನಾನು ಹೇಳಿದೆ "ನನ್ನದು ಎರಡು ಮುಖ್ಯ ಸೂಚನೆಗಳಿವೆ. ಮೊದಲನೆಯುದು ಊಟ, ವಾಸ, ಶಿಕ್ಷಣ ಇಲ್ಲೆಲ್ಲ ನಾವು ಒಂದೇ ಕ್ಯಾಂಪಿನವರು ಎನ್ನುವ ಭಾವ ಕಾರ್ಯ ರೂಪಕ್ಕೆ ಬರಬೇಕು. ಈಗ ಹಾಗಿಲ್ಲ ಎಂದು ನನಗೆ ಅನ್ನಿಸಿದೆ. ಎರಡನೆಯದು ನಾವು ಯಾವ ರಾಷ್ಟ್ರನಿರ್ಮಾಣ ಕಾರ್ಯಕ್ಕೆ ಬಂದಿದ್ದೇವೋ ಅದನ್ನು ಕೂಡಲೇ ತೊಡಗ ಬೇಕು. ಕ್ಯಾಂಪಿನ ಮೂರು ದಿವಸಗಳು ಈಗಾಗಲೇ ವ್ಯರ್ಥವಾಗಿ ಹೋದುವು."

ಅಪ್ರಿಯವಾದ ಸತ್ಯವನ್ನು ನುಡಿಯಬೇಡ. ನುಡಿಯಲೇಬೇಕಾದರೆ ಅದು ಸಿಹಿ ಕವಚದೊಳಗಿನ ಕಹಿ ಗುಳಿಗೆಯಂತಿರಲಿ. ಇವೆರಡೂ ತಿಳಿಯದ ಒರಟ ನಾನು ಕಹಿಸತ್ಯ ವನ್ನು ಕಠಿಣವಾಗಿಯೇ ಹೇಳಿದ್ದೆ. ಪ್ರಾಯದ ಬಿಸಿ ಎಂದೂ ಹೇಳಿ ಬೇಕಾದರೆ. ಸೀನಿಯರ್ ಆಫಿಸರ್ ಪ್ರತಿ ನುಡಿದರು "ನಿಮ್ಮ ಮಾತು ವಿಚಿತ್ರವಾಗಿದೆ. ಇಡೀ ಕ್ಯಾಂಪಿ ನಲ್ಲಿ ರೌಡಿಗಳಂತೆ ವರ್ತಿಸುತ್ತಿರುವವರು ನಿಮ್ಮ ಕೊಡಗಿನ ಕ್ಯಾಡೆಟುಗಳು. ಮೊದಲು ನಿಮ್ಮ ಹುಡುಗರಲ್ಲಿ ಒಂದುತನದ ಅರಿವು ಮೂಡಬೇಕು. ಅದನ್ನು ಸಾಧಿಸಲು ವಿಫಲ ರಾಗಿರುವ ನೀವು ನಮಗೆ ಬೋಧಿಸುತ್ತೀರಿ. ಚೆನ್ನಾಗಿದೆ."

"ಸ್ವಾಮೀ! ತಮ್ಮ ಮಾತು ವೃಥಾರೋಪಣೆಯಿಂದ ಕೂಡಿದೆ. ನಮ್ಮ ಹುಡುಗರು

ಎಲ್ಲ ಕಡೆಯೂ ಒಂದಾಗಿ ಶಿಸ್ತಿನಿಂದ ವಿನಯದಿಂದ ವರ್ತಿಸುತ್ತಿದ್ದಾರೆ. ಅದನ್ನು ಸಹಿಸದ ನೀವು, ಅಂಥ ವರ್ತನೆ ಇಲ್ಲದ ನಿಮ್ಮ ಕ್ಯಾಡೆಟುಗಳನ್ನು ನೋಡಿದ ನೀವು, ಮತ್ಸರದಿಂದ ಈ ಬಿರುನುಡಿ ಆಡುತ್ತಿದ್ದೀರಿ. ಈಗ ನಮ್ಮ ನಿಮ್ಮ ಎಂಬುದು ಬೇಡ. ಕ್ಯಾಂಪು ನಮ್ಮದು, ಎನ್‌ಸಿಸಿಯದು ಎಂದು ತಿಳಿಯೋಣ'' ನಾನೆಂದೆ.

ಚರ್ಚೆ ಮುಂದುವರಿಯಿತು. ಪ್ರತಿಯೊಬ್ಬನೂ ಆದಷ್ಟು ಗಟ್ಟಿಯಾಗಿ ಅರಚಿದ್ದು ಮಾತ್ರ ಅದರ ಫಲ. ಸೀನಿಯರ್ ಆಫಿಸರರಿಗೆ ಮಾತಾಡಲು ಆಗಲಿಲ್ಲ, ಇರಲಿಲ್ಲ. ಅವರೆಲ್ಲರಲ್ಲಿಯೂ ಒಂದು ಅವ್ಯಕ್ತ ಭಯ ಅಂತರ್ಗತವಾಗಿದ್ದಂತೆ ನನಗೆ ಭಾಸ ವಾಯಿತು. ಸಭೆ ಬರಖಾಸ್ತಾಗಿ ಹೊರಗೆ ಬರುತ್ತಿದ್ದಾಗ ಸೀನಿಯರ್ ಆಫಿಸರರೇ ನನ್ನಲ್ಲಿ ಆತ್ಮೀಯವಾಗಿ ಹೇಳಿದರು ''ಈ ದರಿದ್ರ ಕಮಾಂಡೆಂಟ್ ಇರುವ ವರೆಗೆ ಏನೂ ಸಾಧ್ಯ ವಾಗದು. ನೀವನ್ನುವುದನ್ನು ನಾನೊಪ್ಪುತ್ತೇನೆ. ಆದರೆ ಹುಷಾರಾಗಿರಿ.''

''ನೋಡಿ, ನೀವು ಅವರ ಯುನಿಟ್ಟಿನವರು. ಅವರಿಗೆ ಸರಿಯಾದ ಬೋಧನೆ ಮಾಡ ಬೇಕಾದವರು. ಹುಡುಗರಿಗೆ ಹೊಟ್ಟೆ ತುಂಬ ಅನ್ನ ಹಾಕಿ, ಸರಿಯಾದ ಶಿಕ್ಷಣ ಕೊಡಿ ಎಂದು ಬೋಧಿಸಿ. ನಾನಂತೂ ಯಾವ ಕೆಲಸ ಮಾಡಲೂ ಸಿದ್ಧ'' ನನ್ನ ಉತ್ತರ.

''ಅದೇ ತಪ್ಪು. ಜೈ ಜೈ ಹೇಳಲು ಮಾತ್ರ ತಿಳಿದಿದ್ದರೆ ಸಾಕಿಲ್ಲಿ'' ಅವರ ಮಾತು.

ಐದನೆಯ ದಿವಸದ ಬೆಳಗ್ಗೆ. ಶಿಕ್ಷಣದ ಎರಡನೆಯ ದಿವಸ. ನನಗೆ ಸಾಕಷ್ಟು ಹೊರಗಿನ ಕೆಲಸಗಳನ್ನು ವಹಿಸಿದ್ದುದರಿಂದ ನಾನು ಆಫಿಸರರ ಮೆಸ್ಸಿಗೆ ಬಲು ತಡವಾಗಿ ಉಪಾಹಾರ ತೆಗೆದುಕೊಳ್ಳಲು ಹೋದೆ. ಮೆಸ್ಸಿನಲ್ಲಿ ಆ ಮೊದಲೇ ಕಮಾಂಡೆಂಟರೂ ಬಂದು ಕುಳಿತಿ ದ್ದರು. ಅವರಿಗೆ ವಂದನೆ ಸಲ್ಲಿಸಿ ನಾನು ನನ್ನಷ್ಟಕ್ಕೆ ಉಪಾಹಾರ ಸೇವಿಸುತ್ತ ಕುಳಿತೆ. ''ಏನಿಷ್ಟು ತಡ ರಾವ್ !'' ಅವರೆಂದರು.

''ಡ್ಯೂಟಿ ಆಫಿಸರನಷ್ಟೆ ನಾನಿಂದು. ಹಾಗಾಗಿ ಕೆಲಸದ ಸ್ಥಳಕ್ಕೆ ಪೆರೇಡ್ ನಿರ್ಗಮಿಸುವುದನ್ನು ನೋಡಿ ಬರಬೇಕಾಯಿತು ಸಾರ್.''

''ಹೇಗಿದೆ ? ಸರಿಯಾಗಿ ಹೋದರೋ ?''

''ಎಲ್ಲವೂ ಕಾರ್ಯಕ್ರಮದಂತೆ ಸುಸೂತ್ರವಾಗಿ ಸಾಗಿದೆ. ಇನ್ನು ನಾನು ಕೆಲಸದ ಸ್ಥಳವನ್ನು ಸಂದರ್ಶಿಸಲು ಬೇಗನೆ ಹೋಗಬೇಕಾಗಿದೆ.''

''ನಿಮ್ಮಂತೆ ಆಸಕ್ತಿಯಿಂದ ದಕ್ಷತೆಯಿಂದ ಕೆಲಸ ಮಾಡುವವರು ಬಲು ವಿರಳ. ಏನಂತೀರಿ ?''

''ಅದು ನಿಮ್ಮ ಸೌಜನ್ಯ. ಎಲ್ಲರೂ ಅವರವರ ಸಾಮರ್ಥ್ಯಾನುಸಾರ ಕೆಲಸ ಮಾಡುತ್ತಿದ್ದಾರೆ.''

''ನೀವೇನೇ ಹೇಳಿ ! ನೀವೊಬ್ಬರು ಅಪವಾದ'' ಕಮಾಂಡೆಂಟರು.

''ಅಂದರೆ ?''

''ಉಳಿದ ಎನ್‌ಸಿಸಿ ಆಫಿಸರರೆಲ್ಲರೂ ಕಳ್ಳರು. ಅನ್ನದಂಡ ಭೂಮಿ ಭಾರ. ನೀವೇ ನನ್ನುತ್ತೀರಿ ?'' ಕಮಾಂಡೆಂಟರ ತಿರಸ್ಕಾರ ನುಡಿ.

''ಸಾರ್ವತ್ರೀಕರಣ ಎಲ್ಲಿಯೂ ಸಲ್ಲದೆಂದು ನನ್ನ ಮತ.''

''ನಿಮಗೆ ಗೊತ್ತಿಲ್ಲ. ಉಳಿದ ಎನ್‌ಸಿಸಿ ಆಫಿಸರರೆಲ್ಲರೂ ಕಳ್ಳರು...''

ಇನ್ನು ನನಗೆ ತಡೆಯಲಾಗಲಿಲ್ಲ. "ನೀವೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಎನ್‌ಸಿಸಿ ಆಫಿಸರರೆಲ್ಲರೂ ಕಳ್ಳರಾದರೆ ಆರ್ಮಿಯವರೆಲ್ಲರೂ ಮಹಾ ಶುಭಗರೇ ? ಈ ಕ್ಯಾಂಪಿನ ಒಬ್ಬೊಬ್ಬ ಜೆಸಿಓನೂ ಒಬ್ಬೊಬ್ಬ ಎನ್‌ಸಿಓನೂ ಅಶಿಸ್ತಿನ ದುರಹಂಕಾರದ ಮುದ್ದೆ. ಅದಕ್ಕಾಗಿಯೇ ಈ ಕ್ಯಾಂಪು ಇಂಥ ಅವ್ಯವಸ್ಥೆಯಲ್ಲಿದೆ."

"ನನ್ನ ಸ್ಟಾಫ್ ವಿರುದ್ಧ ನಿಮ್ಮ ಆಪಾದನೆಗೆ ಪುರಾವೆ ಇದೆಯೇ ?" ಅವರು ಸಿಡಿದೆದ್ದರು.

"ಖಂಡಿತ" ಎಂದು ನಾನು ತಾಳಗುಪ್ಪೆ ನಿಲ್ದಾಣದ ಅನುಭವ, ಮೆಸ್ಸಿನ ಬೆಡ್ ಕಾಫೀ ಕಹಿ, ಮತ್ತು ಸ್ಟೋರಿನ ಕಂಬಳಿ ಪ್ರಕರಣ ಇವನ್ನು ಅವರ ಗಮನಕ್ಕೆ ತಂದೆ. ಕಮಾಂಡೆಂಟ್ ಮಾತಾಡದೇ ಅಲ್ಲಿಂದ ಎದ್ದು ಹೋದರು.

ಮಿಂಚು, ಗುಡುಗು

ಅದೇ ದಿವಸ ಅಪರಾಹ್ನ ೨-೩೦ ಗಂಟೆ. ೧–೩೦ ಗಂಟೆಗೆ ತಾನೇ ಕೆಲಸದ ಸ್ಥಳದಿಂದ ದಣಿದು ಬಿಸಿಲಿನಲ್ಲಿ ಬೆಂದು ಬಂದಿದ್ದ ಹುಡುಗರು ಅರೆಹೊಟ್ಟೆ ಉಂಡು ಟೆಂಟುಗಳಲ್ಲಿ ಅಕ್ಕಪಕ್ಕಗಳಲ್ಲಿ ಹರಡಿಹೋಗಿದ್ದಾರೆ. ಆಫಿಸರರು ಅವರವರ ಡೇರೆಗಳಲ್ಲಿ ಚಾರ್ಪಾಯಿಗಳ ಮೇಲೆ ಒರಗಿ ಕಣ್ಣು ಮುಚ್ಚಿ ಧ್ಯಾನಸ್ಥರಾಗಿದ್ದಾರೆ. ನಾನು ನಮ್ಮ ಹುಡುಗರ ಟೆಂಟುಗಳ ಸಮೀಪ ನಿಂತುಕೊಂಡು ಅವರ ಟೆಂಟ್ ಶುಚೀಕರಣ ಮುಂತಾದ ಕೆಲಸಗಳಲ್ಲಿ ಹುರಿಂಪು, ನಿರ್ದೇಶನ ನೀಡುತ್ತಿದ್ದೆ. ಆಗಲೇ ಧ್ವನಿವರ್ಧಕ ಅರಚಿತು "ಎಲ್ಲ ಎನ್‌ಸಿಸಿ ಆಫಿಸರರೂ ಈ ಕ್ಷಣ ಅಡುಗೇಮನೆ ಬಳಿ ಹಾಜರಾಗತಕ್ಕದ್ದು." ಪ್ರತ್ಯೇಕವಾಗಿ ಸಂದೇಶವಾಹಕರು ಆಫಿಸರರ ಟೆಂಟುಗಳ ಬಳಿ ಹೋಗಿರಬೇಕು. ಮುಂದಿನ ಐದು ಮಿನಿಟುಗಳಲ್ಲಿ ಎಲ್ಲರೂ ಬಂದು ನಿಂತರು. ಕೆಂಪಾಗಿ ಬಿರಿಯುಂವಂತಿದ್ದ ಕಮಾಂಡೆಂಟರು ಆರ್ಭಟಿಸ ತೊಡಗಿದರು. ಅವರು ಬೊಗಳಿದ ಅವಾಚ್ಯ ಶಬ್ದಗಳನ್ನು ನಾನು ಬರೆಯಲಾರೆ. ನಮ್ಮ ತಂದೆ ತಾಯಿ, ಮನೆ ಮಠ, ವಿದ್ಯೆ ಸ್ಥಾನ ಎಲ್ಲವೂ ಅವರ ಮದ್ದುಗುಂಡುಗಳಿಗೆ ಗುರಿಯಾದುವು. ಸಾರಾಂಶವಿಷ್ಟೇ—ಹುಡುಗರನ್ನು ಪೋಲಿ ಅಲೆಯಲು ಬಿಟ್ಟು ಚಾರ್ಪಾಯಿ ಶಾಯಿಗಳಾದದ್ದು ಯಾವ ಧರ್ಮ ? ಒಂದೊಂದು ಬೈಗಳೂ ಮುಂದಿನದರ ತೀವ್ರತೆಗೆ ಅಧಿಕ ನೂಕುಬಲವೀಯುವಂತೆ ಅವರ ವಾಕ್ಸರಣಿ ಸಾಗಿತ್ತು. ಹೀನಾಮಾನಾ ಬೈದಾಗ ನಾವು ಯಾರೂ ಬಾಯಿ ಬಿಡಲಿಲ್ಲ. ದಿವ್ಯ ನಿರ್ಲಕ್ಷ್ಯದಿಂದ ನಾನು ದೂರದ ಬಾನಿನ ಅಂಚನ್ನು ನೋಡುತ್ತಿದ್ದೆ. "ಜೀಟಿ ! ಆರ್ಮಿ ಸ್ಟಾಫ್ ಡಿಸಿಪ್ಲಿನ್ ವಿಷಯ ಅಷ್ಟೊಂದು ಹೇಳಿದಿರಲ್ಲ ಬೆಳಗ್ಗೆ. ಇದೇ ಏನು ನಿಮ್ಮ ಶಿಸ್ತು ? ಹೇಳಿ" ನನ್ನೆಡೆಗೆ ತಿರುಗಿ ಈ ಚುಚ್ಚು ಬಾಣ ಎಸೆದರು ಕಮಾಂಡೆಂಟ್.

"ನಿಮ್ಮ ಅವಾಚ್ಯ ಶಬ್ದಗಳಿಗೆ ಸಮರ್ಥ ಉತ್ತರವೀಯುವ ಅಸಂಸ್ಕೃತಿ ನನ್ನದಲ್ಲ. ಇಲ್ಲಿ ನಾವು ಭಿಕ್ಷುಕರಾಗಿ ಬಂದಿಲ್ಲ ಎಂಬುದು ನಿಮ್ಮ ನೆನಪಿನಲ್ಲಿರಲಿ ?"

"Worse than beggars" ಅವರ ಹೀನಾಯ ವಾಕ್ಯ.

"ನೀವು ಹುಡುಗರಿಗೆ ಬಡಿಸುವ ಆಹಾರ ನೋಡಿದರೆ ಅದು ನಿಜವೆಂದೆನ್ನಿಸುವುದು" ನನ್ನ ವಕ್ರ ನುಡಿ.

"No, sir please don't get agitated. We shall certainly work better ಮೊದಲನೆಯ ದಿವಸ—ಪಾಪ ಸ್ವಲ್ಪ ಸುಸ್ತಾಯಿತು." ಅದೇ ಯೂನಿಟ್ಟಿನ ಒಬ್ಬ ಎನ್‌ಸಿಸಿ ಆಫಿಸರ್ ಪರಿಸ್ಥಿತಿಯನ್ನು ತಂಪು ಮಾಡಲು ಯತ್ನಿಸಿದ.

ಇವನಾರು ಕಾಕಾಪಿಡಿ ಎಂದು ತಿರಸ್ಕಾರದಿಂದ ನೋಡಿದೆ.

ಅಂತೂ ಕಮಾಂಡೇಟರ ಕೋಪ ಈ ನೆವದಿಂದ ತಗ್ಗಿತು. ನಮ್ಮ ಸಭೆ ವಿಸರ್ಜನೆ ಆಗುವ ಮೊದಲು "I will see you" ಅನ್ನಲು ಮರೆಯಲಿಲ್ಲ.

ಅದೇ ಎನ್‌ಸಿಸಿ ಆಫಿಸರ್ ಆಮೇಲೆ ನನಗೆ ಸಾಂತ್ವನ ನೀಡಿದ "ಈ ಪ್ರಾಣಿ ಶುದ್ಧ ಅನಾಗರಿಕ. ನೀವು ಹೇಳಿದ್ದೆಲ್ಲ ನನಗೆ ಒಪ್ಪಿಗೆ. ಆದರೆ ಅದರ ಇಕ್ಕುಳದ ಹಿಡಿತದಿಂದ ಬಚಾವಾಗುವುದು ಹೇಗೆ!"

"ಮಹಾಸ್ವಾಮೀ! ನಿಮ್ಮಂಥ ಅಕಶೇರುಕಗಳೊಡನೆ ಮಾತಾಡುವುದು ವ್ಯರ್ಥಾಲಾಪ. ಏಕೆಂದರೆ ನಿಮ್ಮ ಮೌಲ್ಯಗಳೇ ಬೇರೆ ನನ್ನವೇ ಬೇರೆ."

ಅದೇ ರಾತ್ರಿ ೯ ಗಂಟೆಗೆ ಮಹಾಪ್ರಭುಗಳ ಒಡ್ಡೋಲಗ. ಉಪಸ್ಥಿತರು ಎಲ್ಲ ಆಫಿಸರರು, ಆರ್ಮಿ ಸ್ಟಾಫುಗಳು, ಕ್ಯಾಡೆಟು ಮುಖ್ಯಸ್ಥರು ಹಾಗೂ ಗುಮಾಸ್ತರು. ವಿಷಯ—ಕ್ಯಾಡೆಟುಗಳ ಮೆಸ್, ಸುಧಾರಣೆಗಳು ಇತ್ಯಾದಿ. ಕಮಾಂಡೆಂಟರು ಪ್ರಾರಂಭಿಸಿದರು "ಕ್ಯಾಡೆಟ್ ಮೆಸ್ ನಿಮ್ಮೆಲ್ಲರದು. ಆದರ ಹೊಣೆ ಇದುವರೆಗೆ ನಾವೇ ಎಂದರೆ ನಾನು ಮತ್ತು ನನ್ನ ಆರ್ಮಿ ಸ್ಟಾಫ್ ಹಾಗೂ ಸಿವಿಲಿಯನ್ ಸ್ಟಾಫ್ ವಹಿಸಿಕೊಂಡಿದ್ದೇವೆ. ಇದು ಎಷ್ಟೊಂದು ತ್ರಾಸದಾಯಕವಾದದ್ದೆಂದು ನಿಮಗೆ ಬೇರೆ ಹೇಳಬೇಕಾಗಿಲ್ಲ" ಹೀಗೆ ಪಿಠಿಕೆ ಹಾಕಿ ಹೇಳಿ ಮೆಸ್ ಜೆಸಿಓ ಮುಖ ನೋಡಿ "ಏನು ಹೇಳುತ್ತೀರಿ ಸಾಬ್" ಎಂದರು.

"ತಾವು ಹೇಳುವುದು ಪೂರ್ತಿ ಖರೆ ಸಾಬ್..." ಪಿಟೀಲು ಕೊಯ್ದ!

ಅವನು ಮುಂದೆ ಹೇಳಿದ್ದು ನಮ್ಮ ಕಾಲೇಜು ಕ್ಯಾಂಪಿನ ಇದೇ ತರಹದ ಒಡ್ಡೋಲಗದಲ್ಲಿ ಆ ಜೆಸಿಓ ವ್ಯಕ್ತಪಡಿಸಿದ ಭಾವಗಳನ್ನೇ (ಪು. ೧೩೧). ಮಿಲಿಟರಿ ಶಿಕ್ಷಣ ಎಷ್ಟು ಪರಿಷ್ಕಾರವಾಗಿ ಯೋಚನಾ ವಿಧಾನವನ್ನೇ ರೂಪಿಸಿಬಿಡುತ್ತದೆ; ಇಲ್ಲಿ ಸ್ವಂತ ವಿಚಾರ ಶಕ್ತಿ ಎಂಥ ಪ್ರಮಾದಕಾರಿ ಹಾಗೂ ಅನಪೇಕ್ಷಣೀಯ ಎಂದು ಮುಂತಾಗಿ ಭಾವಿಸಿದೆ. ಈ ನಾಟಕ ಒಂದಷ್ಟು ಹೊತ್ತು ಮುಂದುವರಿಯಿತು. ಪಾತ್ರಧಾರಿಗಳು ಅವರೇ: ಕಮಾಂಡೆಂಟ್, ಆರ್ಮಿ ಸ್ಟಾಫ್ ಮತ್ತು ಮುಖ್ಯ ಗುಮಾಸ್ತ. ಸಾರಾಂಶವಿಷ್ಟೆ—ಎಲ್ಲವೂ ಅತ್ಯಂತ ತೃಪ್ತವಾಗಿ ನಡೆಯುತ್ತಿವೆ; ಎಲ್ಲವೂ ಸಕಲ ಆಫಿಸರುಗಳ ಮತ್ತು ಕ್ಯಾಡೆಟು ಮುಂದಾಳುಗಳ ಸೂಚನೆ ಅಪೇಕ್ಷೆಗಳಂತೆಯೇ ನಡೆಯುತ್ತಿವೆ. "ಈಗ ನಿಮ್ಮದೇನಾದರೂ ಸೂಚನೆಗಳಿದ್ದರೆ ಹೇಳಿ" ಎಂದು ಕರುಣಿಸಿದರು ಕಮಾಂಡೆಂಟ್.

ಮೇಲಧಿಕಾರಿ "ಏನಾದರೂ ಸೂಚನೆ ಇದೆಯೇ? ಹೇಗಿದ್ದೀರಿ? ಊಟ ವಸತಿ ಚೆನ್ನಾಗಿವೆಯೇ?" ಎಂದು ಕೇಳಿದರೆ ಕೆಳಗಿನವರು "ಬಹುತ್ ಠೀಕ್ ಹೈ ಸಾಬ್" ಎಂದು ಸಂಘಟಿತರಾಗಿ ಗಟ್ಟಿಯಾಗಿ ಗರ್ಜಿಸಿ ವಂದನೆ ಸಲ್ಲಿಸಬೇಕಾದದ್ದು ಆರ್ಮಿ ಸಂಪ್ರದಾಯಗಳಲ್ಲಿ ಒಂದು. ಇದು ನಮಗೆ ಪ್ರತಿಯೊಂದು ಶಿಕ್ಷಣ ಶಿಬಿರದಲ್ಲಿಯೂ ಗಟ್ಟಿಮಾಡಿಸುತ್ತಿದ್ದರು. ನೀವೇನಾದರೂ ಆ ಪ್ರಶ್ನೆಗಳನ್ನು ಅನುಕಂಪಪೂರಿತವಾದದ್ದು

ಆದ್ದರಿಂದ ಸತ್ಯವನ್ನೇ ನುಡಿಯಬೇಕು ಎಂದು ಭಾವಿಸಿ ಹಾಗೆ ವರ್ತಿಸಿದಿರೋ ನಿಮಗೆ ಎರಡು ವಿಧದ ಅಪಾಯಗಳು ಎದುರಾಗುತ್ತವೆ. ಮೊದಲನೆಯದು, ಇದೇ ಸಂಪ್ರದಾಯ ದಲ್ಲಿ ಬೆಳೆದು ಅದರ ಮಹೋನ್ನತ ಪ್ರತೀಕವಾಗಿರುವ ಉಚ್ಚಾಧಿಕಾರಿ ನಿಮ್ಮ ಉತ್ತರ ವನ್ನು ಮೆಚ್ಚುವುದಿಲ್ಲ. ನಿಮ್ಮ ಮೇಲೂ ನಿಮ್ಮ ಯೂನಿಟ್ಟಿನ ಮೇಲೂ ಆತ ತಿರಸ್ಕಾರ ಮನೋಭಾವ ತಾಳುತ್ತಾನೆ. ಎರಡನೆಯದು, ಆತನ ನಿರ್ಗಮನಾನಂತರ ನೀವು ಎದುರಿಸ ಬೇಕಾದ ಆಂತರಿಕ ಮಧುರ ಪರಿಸ್ಥಿತಿ. ಇವೆಲ್ಲ ವಿವರ ನನಗೆ ತಿಳಿಯದಿರಲಿಲ್ಲ ಎಂದಲ್ಲ. ಅಥವಾ ಎಲ್ಲ ಉಚ್ಚಾಧಿಕಾರಿಗಳೂ ಬೂಟಾಟಿಕೆಯವರೆಂದೂ ಇದರ ಅರ್ಥವಲ್ಲ. ಎಂಆರ್‌ಸಿಯಲ್ಲಾಗಲೀ ನಮ್ಮ ರಾಯಪ್ಪನ್‌ರವರ ವ್ಯವಹಾರದಲ್ಲಾಗಲೀ ನಾನು ಕಂಡ ಮಟ್ಟ ಪರಮೋತ್ಕೃಷ್ಟವಾದದ್ದು ; ಯಾವ ನಾಗರಿಕ ವ್ಯವಹಾರವೂ ಈ ಶ್ರೇಷ್ಠ ಮಟ್ಟ ತಲಪಲಾರದು. ಕಮಾಂಡೆಂಟರ ಬೂಟಾಟಿಕೆಯ ನಾಟಕ ನನಗೆ ಸಹಿಸಲಾಗಲಿಲ್ಲ. ನನ್ನ ಕಡೆಗೆ ಅವರ ಕೃಪಾದೃಷ್ಟಿ ತಿರುಗಿದಾಗ ಆ ಮೊದಲು ಹಲವರು ಬಾರಿಸಿದ ಪಿಟೀಲಿಗೆ ವಿರುದ್ಧವಾಗಿ ಬೇರೊಂದು ರಾಗವನ್ನು ನಾನು ನುಡಿಸಿದೆ. "ಸಾರ್, ನನ್ನ ಸೂಚನೆಗಳು ಮುಖ್ಯವಾಗಿ ಮೂರು ಇವೆ."

"ಸಂಕ್ಷಿಪ್ತವಾಗಿರಬೇಕು" ಎಂದ ಜೆಸಿಓ.

"ನಿಮ್ಮೊಡನೆ ನಾನು ಹೇಳುತ್ತಿಲ್ಲ" ನಾನು ಒದರಿದೆ.

"ಹೇಳಿ ಹೇಳಿ" ಎಂದರು ಕಮಾಂಡೆಂಟ್.

"ಕೆಲಸದ ಸ್ಥಳದಿಂದ ಹುಡುಗರು ಬಂದು ಊಟಕ್ಕೆ ಸಿದ್ಧರಾಗಿ ಊಟದ ಮನೆಗೆ ಸೇರುವಾಗ ಕೆಲವು ಸಲ ಸ್ವಾಭಾವಿಕವಾಗಿ ತಡವಾಗುತ್ತದೆ. ಆಗ ಅವರಿಗೆ ಅಲ್ಲಿ ಮೇಲೋಗರಗಳು ದೊರೆಯುವುದೇ ಕಷ್ಟವಾಗುತ್ತದೆ. ಅನ್ನವೂ ಸಾಕಷ್ಟಿರುವುದಿಲ್ಲ, ಇದು ಸರಿಯಾಗಬೇಕು" ನನ್ನ ಸೂಚನೆ.

"ಇದು ಸುಳ್ಳು ಸಾರ್. ಪ್ರತಿದಿನ ನಾನು ಕೊನೆಯ ಕ್ಯಾಡೆಟನ್ನು ವಿಚಾರಿಸಿ ಮತ್ತೆಯೇ ಊಟ ಮಾಡುವುದು" ಎಂದ ಮೆಸ್ ಜೆಸಿಓ.

"ಈ ವಿಚಾರದಲ್ಲಿ ಜಗಳ ಮಾಡಲಾಗಲೀ ಅಥವಾ ನನ್ನ ಸತ್ಯಸಂಧತೆ ಸ್ಪಷ್ಟಪಡಿಸ ಲಾಗಲೀ ಸಿದ್ಧನಿಲ್ಲ. ನೀವೇ ಸ್ವತಃ ಯಾವಾಗ ಬೇಕಾದರೂ ಬಂದು ಪರೀಕ್ಷೆ ಮಾಡಿ. ಇನ್ನು ಮುಂದೆ ಹೀಗಾಗದಿದ್ದರೆ ನಾನು ತೃಪ್ತನಾಗುತ್ತೇನೆ. ಇನ್ನು ಎರಡನೆಯದು. ಉತ್ತರ ಕರ್ನಾಟಕದ ಕ್ಯಾಡೆಟುಗಳಿಗೆ ಚಪಾತಿ ಅನ್ನ ಕೊಡುತ್ತಿದ್ದೀರಿ. ಉಳಿದ ಎಲ್ಲರಿಗೂ ಚಪಾತಿ ಕೊಡದೇ ಅದರ ಬದಲು ಹೆಚ್ಚು ಅನ್ನ ಎಂದು ಹೇಳಿದ್ದೀರಿ. ಪ್ರಾಯೋಗಿಕವಾಗಿ ಇತರ ಕ್ಯಾಡೆಟುಗಳಿಗೆ ದೊರೆಯುವ ಆಹಾರ ಕಡಿಮೆ ಆಗಿದೆ. ಅಲ್ಲದೇ ಇದು ಒಂದು ವಿಧದ ತಿಕ್ಕಾಟಕ್ಕೆ ಎಡೆಮಾಡಿದೆ. ಉತ್ತರ ಕರ್ನಾಟಕದವರಲ್ಲದ ಹಲವಾರು ಕ್ಯಾಡೆಟು ಗಳು ಚಪಾತಿ ಸಾಲಿಗೆ ಸೇರಿ ಚಿಕ್ಕಪುಟ್ಟ ಘರ್ಷಣೆಗಳು ಆಗುತ್ತಿವೆ" ನಾನು ಮುಂದುವರಿ ಸಿದೆ.

"ಈ ಭೇದದ ಮಾತು ಇಲ್ಲಿ ತರಬಾರದು" ಕಮಾಂಡೆಂಟರು.

"ಭೇದ ಮಾಡಿರುವುದು ಅಡುಗೆ ಮನೆಯ ವ್ಯವಸ್ಥೆಯಲ್ಲಿ. ಅದನ್ನು ನಿವಾರಿಸಿದರ ಸಾಕೆಂದು ನನ್ನ ಮನವಿ."

''ಚಪಾತಿ ಬೇಕೇಬೇಕು ನಮಗೆ'' ಧಾರವಾಡದ ಆಫಿಸರೆನ ಮಾತು.

''ಅವರಿಗೆ ಚಪಾತಿ ಕೊಡಬೇಡಿ ಎಂದು ನಾನೆಂದೂ ಹೇಳುವವನಲ್ಲ. ಇಡೀ ಕ್ಯಾಂಪಿಗೆ ಕೊಡಿ ಎಂದು ನನ್ನ ವಿನಂತಿ'' ನನ್ನ ವಾದಮಂಡನೆ.

''ಆರ್ಮಿ ಸ್ಕೇಲ್ ಪ್ರಕಾರ ನಮಗೆ ನಿಗದಿಯಾಗಿರುವುದು ಒಬ್ಬ ಕ್ಯಾಡೆಟಗೆ ೩. ಔನ್ಸ್ ಆಟಾ ಮಾತ್ರ. ಆದ್ದರಿಂದ ಎಲ್ಲರಿಗೂ ಕೊಡಲು ಸಾಧ್ಯವಿಲ್ಲ'' ಮೆಸ್ ಜೆಸಿಓ.

''ಆರ್ಮಿ ಸ್ಕೇಲ್ ಎನ್ನುವುದೊಂದು ಭೌತ ಸ್ಥಿರಾಂಕವಲ್ಲ. ಸಾಂದರ್ಭಿಕವಾಗಿ ಅದನ್ನು ನಾವು ಬದಲು ಮಾಡುವುದು ಜಾಣತನ'' ನಾನು ನುಡಿದೆ.

''ಮೂರನೆಯದು ಹೇಳಿ'' ಕಮಾಂಡೆಂಟ್.

''ಚಪಾತಿ ವಿಚಾರ ತಮ್ಮ ತೀರ್ಮಾನವೇನು ?'' ನನ್ನ ಪ್ರಶ್ನೆ.

''ಅದನ್ನು ನನಗೆ ಬಿಡಿ. ನಾನು ವಿಚಾರಿಸುತ್ತೇನೆ.''

''ಸರಿ. ನನ್ನ ಕೊನೆಯ ಸೂಚನೆ ಎಂದರೆ ಉಪ್ಪಿಟ್ಟು ಮಾಡಿದ ದಿವಸ ಅದರೊಂದಿಗೆ ಬೇಕಾದವರಿಗೆ ಸಕ್ಕರೆ ಒದಗಿಸಬೇಕು'' ನಾನು ಮಂಡಿಸಿದೆ. ಕಮಾಂಡೆಂಟ್ ಘೊಳ್ಳೆಂದು ನಕ್ಕರು. ಉಳಿದ ಆರ್ಮಿ ಸ್ಟಾಫುಗಳು ಯಥೋಚಿತವಾಗಿ ಅನುಕರಿಸಿದರು. ''ಜೆಮದಾರ್ ಸಾಬ್! ಉಪ್ಪಿಟ್ಟಿಗೆ ಸಕ್ಕರೆ! ಎಲ್ಲಾದರೂ ಉಂಟೇ ಈ ಅವಿವೇಕ ?'' ಕಮಾಂಡೆಂಟರ ಹಾಡುಗಾರಿಕೆ.

''ಇಲ್ಲ, ಇಲ್ಲ, ಸಾರ್'' ಜೆಮದಾರನ ಮೃದಂಗವಾದನ.

''ಏನು ಜೋಕ್! ಉಪ್ಪಿಟ್ಟಿಗೆ ಸಕ್ಕರೆ, ಪಾಯಸದ ಜೊತೆಗೆ ಕ್ವಿನೈನು ಎಂದಿದ್ದರೂ ನನಗೆ ಇಷ್ಟು ಆಶ್ಚರ್ಯವಾಗುತ್ತಿರಲಿಲ್ಲ. ಜೆಮದಾರ್ ಸಾಬ್! ಉಪ್ಪಿಟ್ಟಿಗೆ ಸಕ್ಕರೆ ನೀವೆಲ್ಲಾದರೂ ಕೇಳಿದ್ದೀರಾ ?''

''ಇಲ್ಲ ಸಾಬ್! ನನ್ನ ೨೨ ವರ್ಷಗಳ ಅನುಭವದಲ್ಲಿ ನಾನು ಅಖಿಳ ಭಾರತದ ಎಲ್ಲ ಕಡೆಗಳಲ್ಲಿಯೂ ದುಡಿದಿದ್ದೇನೆ. ಎಲ್ಲಿಯೂ ಇಂಥ ಅನಾಗರಿಕ ಗೊಡ್ಡು ಕ್ರಮವನ್ನು ನಾನು ಕಂಡಿಲ್ಲ.''

''ಏನಂತೀರಿ ಜೋಕ್ ?'' ಕಮಾಂಡೆಂಟರ ಮೂದಲಿಕೆ.

''ನನ್ನ ಪ್ರಾಮಾಣಿಕ ಸೂಚನೆಗೆ ನಿಮ್ಮ ಅಪಹಾಸ್ಯಕರ ವರ್ತನೆಯನ್ನು ನಾನು ತೀವ್ರವಾಗಿ ಪ್ರತಿಭಟಿಸುತ್ತೇನೆ. ಇನ್ನು ನಿಮ್ಮ ಈ ಜೆಮದಾರರ ಅನುಭವ ಎಷ್ಟು ಅಪಕ್ವ, ಅವರ ದೇಶಪರ್ಯಟನ ಎಂಥ ವ್ಯರ್ಥಶ್ರಮ ಎಂಬುದು ಅವರ ಈ ಮಾತಿನಿಂದ ವ್ಯಕ್ತವಾಗುತ್ತದೆ. ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಬಂದು ನೋಡಿ—ಸಕ್ಕರೆ ಇಲ್ಲದೇ ಉಪ್ಪಿಟ್ಟು ತಿನ್ನುವವರನ್ನು ದುರ್ಬೀನು ಹಿಡಿದುಕೊಂಡು ಹುಡುಕಬೇಕಾದೀತು. ಒಂದೊಂದು ಪಂಗಡದವರ ನಡವಳಿಕೆ ಅಭ್ಯಾಸಗಳನ್ನು ಅನಾಗರಿಕ ಗೊಡ್ಡು ಕ್ರಮ ಎಂದು ಹೀಗಳೆಯುವ ಈ ಜೆಮದಾರರ ನಾಗರಿಕತೆಯ ಮಾನದಂಡ ಯಾವುದೋ ನಾನು ತಿಳಿಯಲು ಕುತೂಹಲಿಯಾಗಿದ್ದೇನೆ.''

''ಆರ್ಮಿ ಸ್ಕೇಲ್ ಪ್ರಕಾರ ಸಕ್ಕರೆ ಕೊಡಲಾಗುವುದಿಲ್ಲ, ಸಾರ್'' ಮೆಸ್ ಜೆಸಿಓ.

''ತಿಳಿಯಿತೇ ಜೋಕ್ ?'' ಕಮಾಂಡೆಂಟ್.

"ನಾನು ಹೇಳುವುದು ನನ್ನ ಕರ್ತವ್ಯ. ಅದು ಕಾರ್ಯಗತವಲ್ಲದಿದ್ದರೆ ಹಾಗೆ ತಿಳಿಸಿದರೆ ಮುಗಿಯಿತು. ಮೂದಲಿಕೆ ಬೇಡ."

ಇವರ ವಾದದಲ್ಲಿ ಅಥವಾ ಹಾರಾಟದಲ್ಲಿ ಒಂದು ವಿಶಿಷ್ಟ ನಮೂನೆ ಇದೆ ಎಂದು ನನಗೆ ವೇದ್ಯವಾಗತೊಡಗಿತು. ಅಲ್ಲಿಯೂ ಯುದ್ಧಕ್ರಮವೇ—ಆಕ್ರಮಣಶೀಲ ವರ್ತನೆ; ಇದರಲ್ಲಿ ಯಶಸ್ಸು ದೊರೆಯದಾಗ ರಂಗ ಬದಲಾವಣೆ ಮಾಡಿ ಬಲದಿಂದಲೊ ಎಡದಿಂದಲೋ ಇಲ್ಲ ಸೌಮ್ಯ ವರ್ತನೆಯಿಂದಲೋ ತಾವು ಸೋತೆವೆಂಬಂತೆ ನಮ್ಮಲ್ಲಿ ಭ್ರಮೆ ಮೂಡಿಸಿ ಮತ್ತೆ ಇನ್ನಷ್ಟು ಪ್ರಬಲವಾಗಿಯೇ ಆಕ್ರಮಣ ನಡೆಸುವುದು ಇತ್ಯಾದಿ. ಇಲ್ಲೂ ಸೋತರೆ ಯಾವ ರೀತಿ ಶರಣಾಗತರಾಗುತ್ತಾರೆಂಬುದು ನನಗೆ ಆಗ ಅನುಭವಕ್ಕೆ ಬಂದಿರಲಿಲ್ಲ. ಆರ್ಮಿ-ಎನ್‌ಸಿಸಿ ಮಿಶ್ರಣದಲ್ಲಿ ಆರ್ಮಿ ಶ್ರೇಷ್ಠ ಎಂಬ ದುರಹಂಕಾರೀ ವರ್ತನೆ ಎನ್‌ಸಿಸಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿ ಹೋಗಿದೆ. ಮುಂದಾಳುತನ ಅಥವಾ ಅಧಿಕಾರ ಕೇಂದ್ರೀಕೃತವಾಗಿರುವಲ್ಲೆಲ್ಲ ದುರಹಂಕಾರ ಅದರ ಅನಿವಾರ್ಯ ಉಪೋತ್ಪನ್ನವಾಗಿರಬಹುದೇ ಎಂದು ಚಿಂತಿಸಿದೆ. ಆದರೆ ಸಾರ್ವತ್ರೀಕರಣ ಸಲ್ಲದು ಎಂದು ಮನಸ್ಸು ಮಾತ್ರ ಸೂಚಿಸುತ್ತಿತ್ತು.

ಸುರಿದ ಮಳೆ

ಏಳನೆಯ ದಿವಸದ ಬೆಳಗ್ಗೆ. ನಾನು ಉಪಾಹಾರ ಮುಗಿಸಿ ಕ್ಯಾಡೆಟುಗಳ ಸಾಲಿನ ಕಡೆಗೆ ಹೋಗುತ್ತಿದ್ದೆ. ಆ ದಿವಸ ಯಾರೂ ಸೇವಾಕಾರ್ಯಕ್ಕೆ ಹೋಗಬೇಕಾಗಿರಲಿಲ್ಲ. ಕ್ಯಾಂಪಿನ ಆವರಣವನ್ನು ಸ್ವಚ್ಛಗೊಳಿಸುವುದರಲ್ಲಿ ಮಗ್ನರಾಗಬೇಕಾಗಿತ್ತು. ಮಾರನೆಯ ದಿವಸ ಬ್ರಿಗೇಡ್ ಕಮಾಂಡರರೂ ಸರ್ಕಲ್ ಕಮಾಂಡರರೂ ಕ್ಯಾಂಪಿಗೆ ಬರುವುದರಿಂದ ಈ ಕಿಟಕಿ ಅಲಂಕರಣವೂ ತೋಟ ಶೃಂಗಾರವೂ ನೆರವೇರಲೇಬೇಕಾಗಿದ್ದ ವಿಧಿಗಳು. ನನಗೆ ಕರೆ ಬಂತು "ಕಮಾಂಡೆಂಟರು ಕರೆಯುತ್ತಿದ್ದಾರೆ. ಈ ಕ್ಷಣ ಬರಬೇಕಂತೆ" ಎಂದ ಒಬ್ಬ ಕ್ಯಾಡೆಟ್. ನನ್ನ ಎದುರು ಸಾಲಿನಲ್ಲಿದ್ದ ಉತ್ತರ ಕರ್ನಾಟಕದ ಎನ್‌ಸಿಸಿ ಆಫಿಸರ್ ಲೆಫ್ಟಿನೆಂಟ್ ಜಿ. ಪಿ. ಪೈ ಅವರಿಗೂ ಬುಲಾವ್ ಬಂದದ್ದನ್ನು ಕಂಡೆ. ಆಗ ಅವರು ಕಪ್ಪು ಕನ್ನಡಕವನ್ನು ಧರಿಸಿದ್ದರು; ಹೆಗಲಿನ ಮೇಲೆ ಕೆಮರಾ ಜೋಲಾಡುತ್ತಿತ್ತು. ಕಮಾಂಡೆಂಟರ ಅಧಿಕೃತ ಕೊಠಡಿ. ವಿಶಾಲವಾದ, ಮಿಲಿಟೆರಿ ಕ್ರಮದಲ್ಲಿ ಅಲಂಕೃತವಾದ ಡೇರೆ. ಅದರೊಳಗೆ ಹಿಂದಿನ ಗೋಡೆಗೆ ಒತ್ತಾಗಿ ಸಿಂಹಾಸನದಂಥ ಕುರ್ಚಿ. ಅದರ ಮೇಲೆ ಕಮಾಂಡೆಂಟರು ಉಪಸ್ಥಿತರಾಗಿದ್ದಾರೆ. ಅವರ ಹಿಂದೆ ಮತ್ತು ಪಕ್ಕಗಳಲ್ಲಿ ಗೋಡೆಗಳಿಗೆ ಒತ್ತಾಗಿ ವರ್ಣರಂಜಿತ ಬೋರ್ಡುಗಳು, ಅವುಗಳ ಮೇಲೆ ವಿವಿಧ ಚಾರ್ಟುಗಳು, ಮೈಸೂರಿನ ಮ್ಯಾಪು. ಸ್ತಂಭ ಚಿತ್ರಗಳು, ಗ್ರಾಫುಗಳು ಮುಂತಾದವು ದಕ್ಷತೆಯ ಮತ್ತು ಒಪ್ಪಓರಣಗಳ ಪ್ರತೀಕಗಳಾಗಿ ಕಣ್ಣು ಸೆಳೆಯುತ್ತಿದ್ದುವು. ಸಾಹೇಬರ ಎದುರಿನ ಮೇಜು ವಿಶಾಲವಾದದ್ದು. ಆದರೆ ಎಡ ಅಂಚಿನಲ್ಲಿ in ಟ್ರೇಯೂ (ಎಂದರೆ ಒಳ ಬರುವ ಕಾಗದ ಪತ್ರಗಳನ್ನು ಹಾಕಬೇಕಾದ ಕರಡಿಗೆ) ಬಲ ಅಂಚಿನಲ್ಲಿ out ಟ್ರೇಯೂ (ನಿರ್ಗಮ ಕರಡಿಗೆ) ಇದ್ದುವು. ಕಮಾಂಡೆಂಟರ ಬಲ ಬದಿಯಲ್ಲಿ ಅವರು ಒರಗಿರುವ ಗೋಡೆಗೆ ಲಂಬವಾಗಿರುವಂತೆ ಸಾಲಾಗಿ ನಾಲ್ಕು ಜನ ಜೆಸಿಓಗಳೂ ಅವರ ಹಿಂದೆ ಒಂದಷ್ಟು ಎನ್‌ಸಿಓಗಳೂ

ಕುಳಿತಿದ್ದರು. ಕಮಾಂಡೆಂಟರ ಎಡಬದಿಯಲ್ಲಿ, ಮೊದಲಿನ ಸಾಲಿಗೆ ಸಮಾಂತರವಾಗಿ ಮತ್ತು ಎದುರು ಮುಖವಾಗಿ, ಕ್ಯಾಂಪಿನ ಉಪಮುಖ್ಯಸ್ಥರೂ (ಆರ್ಮಿ ಕ್ಯಾಪ್ಟನ್) ಅವರ ಹಿಂದೆ ಮುಖ್ಯ ಗುಮಾಸ್ತ ಮುಂತಾದವರೂ ಮಂಡಿಸಿದ್ದರು. ಎಂಥವನಿಗೂ ಈ ದೃಶ್ಯ ನೋಡುವಾಗ ಎದೆ ಬಡಿತ ಏರಬೇಕು.

ನಾನು ಟೆಂಟಿನ ಪ್ರವೇಶ ದ್ವಾರದಲ್ಲಿ ನಿಂತು ಯುಕ್ತ ವಂದನೆ ಸಲ್ಲಿಸಿ "ಒಳಗೆ ಬರ ಬಹುದೇ" ಎಂದು ಮೆಲುದನಿಯಲ್ಲಿ ಪ್ರಶ್ನಿಸಿದೆ. ಮುಂದೆ ಸಂಭವಿಸಲಿರುವ ಮಹಾ ವಿಪತ್ತಿನ ಮುನ್ಸೂಚನೆ ಎಂಬಂತೆ "ತಡೆಯಿರಿ" ಎಂಬ ಹುಕುಂ ಸಾಹೇಬರಿಂದ ಬಂತು. ನಾನಲ್ಲೇ ನಿಂತೆ. ಪೈಯವರಿಗೆ ಒಳಗೆ ಹೋಗಲು ಪರವಾನಿಗೆ ದೊರೆಯಿತು. ಒಳಗೆ ನಡೆದದ್ದೂ ಆಡಿದ್ದೂ ನನಗೆ ತಿಳಿಯುವಂತೆ ನನ್ನ ಸ್ಥಾನ ಇತ್ತು. "ಏನು ಪೈ ! ಈ ಕ್ಯಾಂಪೇನು ಪಿಕ್‌ನಿಕ್ ಕೇಂದ್ರವೆಂದು ತಿಳಿದಿದ್ದೀರಾ ?" ಕಮಾಂಡೆಂಟರ ಪ್ರಶ್ನೆ.

"ಇಲ್ಲ ಸಾರ್" ಪೈಯವರ ಉತ್ತರ.

"ಮತ್ತೇನು ಈ ವೇಷ ? ಜಾನಿವಾಕರನಂತೆ !"

"ಇಲ್ಲವಲ್ಲ ?"

"ಓಹೋ ನಿಮ್ಮ ಡೌಲು ನೋಡಬಾರದೋ ?" ಪೈಯವರ ಮೌನ ಸಾಹೇಬರ ನಾಲಗೆಗೆ ಚುರುಕನ್ನು ಪ್ರೇರಿಸಿತು. ಮುಂದಿನ ಐದು ಮಿನಿಟುಗಳ ಕಾಲ ಆರ್ಮಿ ಡಿಸಿಪ್ಲಿನ್ನಿನ ಹಿರಿಮೆ, ಕಮಾಂಡೆಂಟ್ ಮತ್ತು ಅವರ ಆರ್ಮಿ ಅನುಯಾಯಿಗಳ ತ್ಯಾಗ, ಎನ್‌ಸಿಸಿ ಆಫಿಸರುಗಳ ಬೇಜವಾಬ್ದಾರಿಕೆ ಇವನ್ನು ಕುರಿತು ಒಂದು ಭೀಷಣ ಭಾಷಣವೇ ಪ್ರವಹಿಸಿತು. ಪೈಯವರು ನಿಂತೇ ಇದ್ದರು.

ಅವರ ನಿರ್ಗಮನಾನಂತರ ನನಗೆ ಒಳಗೆ ಬರಲು ಹುಕುಂ ದೊರೆಯಿತು. ಸಾಹೇಬರ ಮೇಜಿನಿಂದ ನಾಲ್ಕು ಅಡಿಗಳಷ್ಟು ಮುಂದೆ ನಿಂತು ಪುನಃ ವಂದನೆ ಅರ್ಪಿಸಿದೆ. ಸಾವಧಾನ್ ಸ್ಥಿತಿಯಿಂದ ವಿಶ್ರಾಮ್ ಸ್ಥಿತಿಗೆ ಬಂದು ನಿಂತೆ. ನೆರೆದಿದ್ದ ಮಹಾಸಭೆಯ ಒಂದೊಂದು ವ್ಯಕ್ತಿಯೂ ನನ್ನನ್ನೇ ದುರುಗುಟ್ಟಿ ತಿವಿಯುವಂತೆ ನೋಡುತ್ತಿತ್ತು. ಕಮಾಂಡೆಂಟರ ವದನಾರವಿಂದ ಬಿರಿದು ರಕ್ತ ಹರಿಯುವಂತೆ, ಒತ್ತೆ ಕೋಲದಲ್ಲಿ ಭೂತಾವೇಶ ಮೈಗೆ ಬಂದವನಂತೆ ಪ್ರಜ್ವಲಿಸುತ್ತಿತ್ತು. ನನ್ನ ಯಾವ ಅಪರಾಧಕ್ಕೆ ಈ ಶಿಕ್ಷೆ ಎಂದು ತಿಳಿಯದೇ ಒಂದು ಕ್ಷಣ ಮಂಕನಂತೆ ನಿಂತೆ. ಆ ಕಾಂತಕ್ಷೇತ್ರದ ವಿದ್ಯುತ್ತರಂಗಗಳು ನನ್ನನ್ನು ಹಾಗೆ ಮಾಡಿದ್ದುವು. ನಾನೇ ಬಾಯ್ತೆರೆದೆ "ನನ್ನನ್ನು ಕರೆದಿರಂತೆ."

"ಹೌದು, ವಿಚಾರಣೆಗಾಗಿ ಕರೆಸಿದೆ. ತಿಳಿಯುವುದಿಲ್ಲವೇ !" ಕಮಾಂಡೆಂಟರ ಗಡಸು, ಖಚಿತ ಧ್ವನಿ.

ನಾನು ಸಿದ್ಧನಾಗಿದ್ದೆ. ಆದ್ದರಿಂದ ಕೂಡಲೇ ಹೇಳಿದೆ "ಯಾವ ತಪ್ಪಿಗೆ ಈ ವಿಚಾರಣೆ ಎಂದು ನನಗೆ ತಿಳಿಯದು. ಆದರೆ ಇಂಥ ವಿಚಾರಣೆಯಲ್ಲಿ ಈ ಜೆಸಿಓ ಎನ್‌ಸಿಓ ಈ ಸಿವಿಲಿಯನ್ ಸ್ಟಾಫುಗಳಿಗೆ ಏನು ಕೆಲಸ ?"

"ಅದನ್ನು ಕೇಳಲು ನೀವು ಯಾರು ?"

"ಸಾರ್ ! ಒಂದು ವಿಚಾರ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ನನಗಿಂತ ಕೆಳದರ್ಜೆಯವ

ರಾದ ಇವರು ಕುಳಿತಿರುವಾಗ ನಾನು ನಿಂತುಕೊಂಡು ನಿಮ್ಮ ಯಾವ ಪ್ರಶ್ನೆಗೂ ಉತ್ತರ ಕೊಡುವುದಿಲ್ಲ."

"ಏನು ಏನಂದಿರಿ ?"

"ಜೆಸಿಓ ಮುಂತಾದ ಇವರೆಲ್ಲರೂ ನನಗಿಂತ ಹೀನದರ್ಜೆಯವರು—ಅವರು ಕುಳಿತಿರುವಾಗ ನಾನು ನಿಂತಿರಲು ಒಪ್ಪಲಾರೆ."

"ಬ್ಯಾರರ್ ಏಕ್ ಖುರ್ಚಿ ಲಾವೋ" ಕಮಾಂಡೆಂಟರ ಹುಕುಂ.

ಸೇವಕ ಕುರ್ಚಿ ತಂದಿಡುವವರೆಗೆ ದೊರೆತ ಅಲ್ಪಕಾಲಾವಕಾಶದಲ್ಲಿ ನಾನು ಮನಸ್ಸನ್ನು ಹತೋಟಿಗೆ ತಂದುಕೊಂಡೆ. ಆಕ್ರಮಣೆಯೇ ಅತ್ಯುತ್ಕೃಷ್ಟ ರಕ್ಷಣಾ ವಿಧಾನ. ನಾನೇನೂ ತಪ್ಪು ಮಾಡದಿರುವಾಗ ನನ್ನ ಆಕ್ರಮಣನೀತಿ ಶತ್ರುವಿನ ಪರಾಜಯದಲ್ಲಿಯೇ ಪರ್ಯವಸಾಯಿಯಾಗಬೇಕು ಎಂದು ತೀರ್ಮಾನಿಸಿದೆ. ಕುರ್ಚಿ ಬಂತು. ಸಾಹೇಬರ ಎದುರು ಅವರಿಗೆ ಮುಖ ಮಾಡಿ ಕುಳಿತೆ.

"ನಿಮಗೆ ಆಫೀಸರರ ಮೆಸ್ಸಿನಲ್ಲಿ ವರ್ತಿಸಬೇಕಾದ ನೀತಿನಿಯಮ ಗೊತ್ತಿವೆಯೇ ?" ಕಮಾಂಡೆಂಟರ ಸವಾಲು.

"ಖಂಡಿತ ಗೊತ್ತಿವೆ. ತಮಗೆ ಪಾಠ ಮಾಡಬೇಕೇ ? ನಾನು ಮದರಾಸು ರೆಜಿಮೆಂಟಿನ ಅತ್ಯುನ್ನತ ಮೆಸ್ಸಿನಲ್ಲಿ ಶಿಕ್ಷಣ ಪಡೆದವನೆಂದು ನಿಮಗೆ ತಿಳಿದಿರಲಿ" ನನ್ನ ಪಾಟೀ ಸವಾಲು. ಕಮಾಂಡೆಂಟರು ಆ ರೆಜಿಮೆಂಟಿನವರಲ್ಲ. ಅಂತರರೆಜಿಮೆಂಟ್ ಮತ್ಸರ (ಮನುಷ್ಯನ ಇತರ ಸಮಾನಧರ್ಮ ವ್ಯವಸ್ಥೆಗಳಲ್ಲಿ ಇರುವಂತೆಯೇ) ಇಲ್ಲೇನೂ ವಿರಳವಲ್ಲ.

"ನೀವು ನನಗೇನು ಪಾಠ ಮಾಡೀರಿ ! ನಿಮ್ಮನ್ನು ನೀವು ತಿದ್ದಿಕೊಳ್ಳಬೇಕು" ಕಮಾಂಡೆಂಟ್.

"ಈಗ ಆಗಿರುವ ಅಪಾಂತರವಾದರೂ ಏನೆಂದು ಹೇಳಿ."

"ಮೊನ್ನೆ ಆಫೀಸರರ ಮೆಸ್ಸಿನಲ್ಲಿ ಸಲ್ಲದ ಮಾತನ್ನು ಆಡಿ ನೀವು ಮೆಸ್ ನೀತಿಯನ್ನು ಕಾಲಕೆಳಗೆ ತುಳಿದಿದ್ದೀರಿ."

"ತಪ್ಪು ತಪ್ಪು. ಅದು ತಪ್ಪಾದರೆ ಅದನ್ನು ಮೊದಲು ಮಾಡಿದವರು ನೀವೇ. ನಾನಲ್ಲ."

"ಏನು ?"

"ನೀವೇ ಆ ತಪ್ಪನ್ನು ಮೊದಲು ಮಾಡಿದವರು."

"ನಮ್ಮ ಜೆಸಿಓಗಳನ್ನು ಬೈದವರು ನೀವು. ನಿಮ್ಮ ಆ ದೋಷಾರೋಪಣೆಯನ್ನು ರುಜುವಾತು ಮಾಡಬಲ್ಲಿರಾ ?"

"ಮಾತು ದಾರಿ ತಪ್ಪದಿರಲಿ. ಎನ್‌ಸಿಸಿ ಆಫೀಸರರನ್ನು ಕಳ್ಳರೆಂದು ಮೊದಲು ಲಘುವಾಗಿ ಆಡಿದವರು ನೀವು. ಕಮಾಂಡೆಂಟರಾಗಿ ನೀವು ಇತರರಿಗೆ ಮಾರ್ಗದರ್ಶಕರಾಗುವ ಬದಲು ಹೀಗೆ ಮಾತಾಡಬಹುದೇ ?"

"ನನ್ನನ್ನು ಕೇಳಲು ನೀವು ಯಾರು ?"

"ಅದೇ ಮಾತನ್ನು ನಿಮಗೆ ನಾನು ಹೇಳಬೇಕು."

"ನಿಮ್ಮ ಈ ಉದ್ಧಟವರ್ತನೆಗೆ ಶಿಕ್ಷೆ ಗೊತ್ತೋ ?"

"ಸಾರ್! ನಿಮ್ಮ ಈ ಗೊಡ್ಡು ಬೆದರಿಕೆಗೆ ಜಗ್ಗುವವ ಈ ಮಾಣಿ ಅಲ್ಲ. ಏನು ಮಾಡೀರಿ?"

"ನಿಮ್ಮನ್ನು ಈಗಿಂದೀಗಲೇ ಕ್ಯಾಂಪಿನಿಂದ ವಜಾಮಾಡಿ ಹೊರಗಟ್ಟಿಬಿಡುತ್ತೇನೆ."

"ಅಷ್ಟೇ ತಾನೇ! ನಾನೇನು ನಿಮ್ಮ ಈ ಕ್ಯಾಂಪಿನ ದರಿದ್ರ ಕೂಳಿಗಾಗಿ ಬಂದಿದ್ದೇನೆಂದು ಭಾವಿಸಿದ್ದೀರಾ? ಕೊಡಿ ಈ ಕ್ಷಣ ನನ್ನ ಮತ್ತು ನನ್ನ ಕ್ಯಾಡೆಟುಗಳ movement order. ಈಗಿಂದೀಗಲೇ ಹೋಗಿಬಿಡುತ್ತೇವೆ."

"ಇದರ ಪರಿಣಾಮವೇನಾದೀತು ಬಲ್ಲಿರಾ?"

"ಏನಾದೀತು? ಹೆಚ್ಚೆಂದರೆ ನಾನು ಎನ್‌ಸಿಸಿ ಹುದ್ದೆಯನ್ನು ಬಿಡಬೇಕಾದೀತು. ಆದರೆ ಆರ್ಮಿಯಲ್ಲಿ ನಿಮಗೆ ಮೇಲಧಿಕಾರಿಗಳಿದ್ದಾರೆ. ಅವರೆಲ್ಲರೂ ನಿಮ್ಮಂತಿರುವುದಿಲ್ಲ ಎಂಬುದು ನಿಮಗೆ ಗೊತ್ತಿದೆಯಷ್ಟೆ?"

"ನಿಮ್ಮ ನಾಲಗೆ ಬಲು ಸಡಿಲವಾಗಿದೆ. ನಿಮ್ಮ ಯೂನಿಟ್ ಕಮಾಂಡರರು ನಿಮಗೆ ಅತಿಯಾದ ಸಲುಗೆ ಕೊಟ್ಟುದರ ಫಲವಿದು..."

"ನೀವು ಮಾತು ಬದಲಾಯಿಸುತ್ತಿದ್ದೀರಿ. ಪರವಾ ಇಲ್ಲ. ನಮ್ಮ ಕಮಾಂಡರರು ನನಗೆ ಯುಕ್ತವಾದ ಗೌರವವನ್ನೇ ನೀಡಿದ್ದಾರೆ. ನಿಮ್ಮಂತಲ್ಲ ಅವರು."

"ಒಂದು ಪುಟ್ಟ ಗ್ರಾಮದ ಸಣ್ಣ ಯೂನಿಟ್ಟಿನ ಕಮಾಂಡರರು ನಿಮಗೇನು ಗೌರವ ಕೊಟ್ಟಾರು!"

"ಸಾರ್! ಅವರು ಇಂಡಿಯನ್ ಆರ್ಮಿಯ ಒಬ್ಬ ಆಫಿಸರರೆಂದು ತಮಗೆ ನೆನಪಿರಲಿ. ಇನ್ನು ಪುಟ್ಟ ಯೂನಿಟ್ಟೆಂದೇನೂ ನೀವು ಗೇಲಿಮಾಡಬೇಕಾಗಿಲ್ಲ. ನಮ್ಮ ಅಚ್ಚುಕಟ್ಟು ನಿಮಗೆಲ್ಲಿ ಬಂದೀತು!..."

"ನಮ್ಮ ಈ ಒಂದು ಕ್ಯಾಂಪೇ ನಿಮ್ಮ ಊರಿನಷ್ಟು ದೊಡ್ಡದಿರುವಾಗ?"

"ನಿಮ್ಮ ಈ ಕ್ಯಾಂಪೇನು ಮಹಾ ವಿಶೇಷ. ಇದು ನಾನು ನೋಡಿರುವ ಕ್ಯಾಂಪುಗಳಲ್ಲೆಲ್ಲ ಅತಿ ನಿಕೃಷ್ಟ ಕ್ಯಾಂಪು."

"ಅದು ಹತ್ತಿಪ್ಪತ್ತು ಜನರ ಕ್ಯಾಂಪು ನಡೆಸಿದಂತಲ್ಲ."

"ನಾನು, ಖುದ್ದು ನಾನೇ ನಡೆಸಿದ ಕಳೆದ ವರ್ಷದ ಕ್ಯಾಂಪು ೧,೨೦೦ ಕ್ಯಾಡೆಟುಗಳದ್ದು. ಸರ್ಕಲ್ ಕಮಾಂಡರರು ನಾಳೆ ಬರುತ್ತಾರಲ್ಲ. ಅವರ ಹತ್ತಿರ ಕೇಳಿ ಆ ಕ್ಯಾಂಪಿನ ಹಿರಿಮೆ ಶಿಸ್ತು ಹೇಗಿದ್ದುವೆಂದು.."

"ಆದರೆ lay-out ಈ ಕ್ಯಾಂಪಿನಷ್ಟು ಚೆನ್ನಾಗಿತ್ತೆ? ಅಲ್ಲಿ ಈ ಚಾರ್ಟು, ಮ್ಯಾಪು ಎಲ್ಲ ಇದ್ದುವೇ?"

"ಈ ಕ್ಯಾಂಪಿಗೊಂದು lay-out ಇದೆಯೆಂದೇ ನಾನು ತಿಳಿದಿಲ್ಲ. ಕ್ಯಾಡೆಟುಗಳು ಒಂದು ಮೂಲೆಯಲ್ಲಿ, ಆಫಿಸರರು ಬೇರೆ ಒಂದು ಕೊನೆಯಲ್ಲಿ, ಇನ್ನು ಊಟ ಸ್ನಾನ ಮಂದಿರಗಳು ಎಲ್ಲೆಲ್ಲೋ! ಇದನ್ನೂ ಒಂದು lay-out ಎಂದು ಕರೆಯುತ್ತೀರಾ!"

"ಚಾರ್ಟು, ಮ್ಯಾಪು?"

"ಹೌದು. ಶಿಕ್ಷಣ, ಆಹಾರ, ದಕ್ಷ ಆಡಳಿತೆ—ಇವುಗಳಿಂದ ಸಂತೃಪ್ತರಾದ ಹುಡುಗರೇ ನಮ್ಮ ಚಲಿಸುವ ಚಾರ್ಟುಗಳು, ಮ್ಯಾಪುಗಳು. ನಿಮ್ಮಲ್ಲಾದರೋ—ಅರೆ ಹೊಟ್ಟೆಯ

ಕಂಗಾಲು ಮೋರೆಯ ಬಡಕಲು ಜೀವಚ್ಛವಗಳ ಚಲನೆ. ಆದರೆ ಈ ನಿರ್ಜೀವ ಚಾರ್ಟು ಮುಂತಾದವು ಪ್ರಧಾನ. ಈ ಬೂಟಾಟಿಕೆಗೆ ನಾವೆಂದೂ ಸೋತವರಲ್ಲ. ಕೆಲಸ ಮೊದಲು ಅದರ ಪ್ರದರ್ಶನ ಆಮೇಲೆ...''

''ಇಂದಿನ ಆರ್ಥಿಕ ಕಷ್ಟದ ಈ ದಿವಸಗಳಲ್ಲಿ ಮಲೆನಾಡಿನ ಈ ಮೂಲೆಯಲ್ಲಿ ಇಷ್ಟೊಂದು ಹುಡುಗರಿಗೆ ಆಹಾರ ಹಾಕುವುದು ಎಷ್ಟು ಕಷ್ಟವೆಂದು ನಿಮಗೇನಾದರೂ ತಿಳಿದಿದೆಯೋ ?''

''ಸಾರ್ ! ನನ್ನ ಯೋಗ್ಯತೆ ಸಾಮರ್ಥ್ಯ ನಿಮಗೆ ತಿಳಿಯದಿದ್ದರೆ ನಮ್ಮ ಮುಂದಿನ ಕ್ಯಾಂಪಿಗೆ ಬನ್ನಿ—ನಾನು ಆಹ್ವಾನಿಸುತ್ತೇನೆ. ನಾಲ್ಕು ದಿವಸ ನಮ್ಮೊಡನಿದ್ದು ಕೆಲಸ ಕಲಿತು ಬನ್ನಿ. ಮಲೆನಾಡಿನ ಮೂಲೆಯಂತೆ—ಖರ್ಚಂತೆ. ನನ್ನ ಹತ್ತಿರ ಈ ಮಾತು ಬೇಡ...''

''ನಮ್ಮ ಈ ಸುಬೆದಾರರನ್ನು ನೀವು ಬೈದದ್ದೇಕೆ ?''

''ಪುನಃ ಮಾತು ತಿರುಗಿಸುತ್ತಿದ್ದೀರಿ. ನಾನು ಅವರನ್ನೇನೂ ಬೈಯ್ಯಲಿಲ್ಲ. ಅದಿರಲಿ ನೀವೇಕೆ ಎನ್‌ಸಿಸಿ ಆಫಿಸರರನ್ನು ತೆಗಳಿದ್ದು ?

''ಆರ್ಮಿಯಲ್ಲಿ ನಿಮ್ಮ ಈ ಅಶಿಸ್ತಿನ ದುರ್ವರ್ತನೆಗೆ ಕೋರ್ಟ್ ಮಾರ್ಷಲ್ ಆದೀತು...''

''ನಿಮ್ಮ ಈ ಪೊಳ್ಳು ಬೆದರಿಕೆ ಬೇಡ ಈಗ. ನೀವು ನನ್ನನ್ನು ಕಳಿಸಿಬಿಡುತ್ತೇನೆ ಎಂದಿರಲ್ಲ. ಕಳಿಸಿ ನಮ್ಮೆಲ್ಲರನ್ನು—ಈ ಕ್ಷಣವೇ.''

ನನ್ನ ಆಕ್ರಮಣಶೀಲ ವರ್ತನೆಯಿಂದಲೂ ಸತ್ಯ ಮತ್ತು ನ್ಯಾಯ ನನ್ನ ಪರವಾಗಿದ್ದುದರಿಂದಲೂ ಕಮಾಂಡೆಂಟರ ವಾದದಲ್ಲಿ ಕ್ರಮಬದ್ಧವಾದ ಉದ್ದೇಶಪೂರ್ವಕ ಹಿಂಜರಿತ ನನಗೆ ಗೊತ್ತಾಗದಿರಲಿಲ್ಲ. ಆದ್ದರಿಂದ ಕೊನೆಯ ಅಸ್ತ್ರವಾಗಿ ಮೇಲಿನ ಬಾಣ ಹೊಡೆದೆ. ಕಳಿಸಿದ್ದರೆ ಆಗಲೇ ನಿರ್ಗಮಿಸಲು ಸಿದ್ಧನಾಗಿಯೇ ಇದ್ದೆ. ಆದರೆ ಅನಿರೀಕ್ಷಿತ ಮಾರ್ಪಾಡು ಆ ಕ್ಷಣದಲ್ಲಿ ಕಂಡೆ ''ನಾರಾಯಣರಾವ್ ! ಹಂಕು ತುಂಕು ಭಾಯಿ ಭಾಯಿ ಹೈ'' ಎಂದು ಎದ್ದವರೇ ಆಗಲವಾಗಿ ನಗುತ್ತ ಕಮಾಂಡೆಂಟರು ನನ್ನನ್ನು ಆಲಿಂಗಿಸಿದರು—ನಾನಿದ್ದ ಕುರ್ಚಿಯ ಬಳಿಗೆ ಬಂದು ! ನಾನು ಏಳಲಿಲ್ಲ. ಅದು ಧೃತರಾಷ್ಟ್ರಾಲಿಂಗನವಾಗಲಿಲ್ಲ. ''ಏನಂತೀರಿ ಸಾಬ್ ! ಈ ಆಫಿಸರ್ ಇಲ್ಲದಿದ್ದರೆ ಕಳೆದ ವರ್ಷ ಮಡಿಕೇರಿಯಲ್ಲಿ ನನಗೆ ರಾತ್ರಿ ಉಳಿಯಲು ಸ್ಥಳವೇ ದೊರೆಯುತ್ತಿರಲಿಲ್ಲ. ಬಲು ಉಪಕಾರಿ. ಈ ಕ್ಯಾಂಪಿನಲ್ಲಿ ಇವರ ಕೊಡಗಿನ ಕ್ಯಾಡೆಟ್ಟುಗಳಷ್ಟು ಶಿಸ್ತಿನವರನ್ನು, ಈ ಆಫಿಸರಿಗೆ ಅವರ ಮೇಲಿರುವಂಥ ಹತೋಟಿಯನ್ನು ಬೇರೆ ಯಾರಲ್ಲೂ ನಾನು ಕಾಣಲಿಲ್ಲ...'' ಎಂದು ಸುಬೆದಾರರನ್ನು ನೋಡಿ ಹೇಳಿದಾಗ ಅವರು ಎದ್ದು ನಿಂತು ಸೆಲ್ಯೂಟ್ ಹೊಡೆದು ''ಹೌದು ಸಾರ್'' ಎನ್ನಬೇಕೆ ! ಬುದ್ಧಿಯ ಸುದ್ದಿಯೇ ಇಲ್ಲದಿದ್ದರೆ ಎಷ್ಟು ಒಳ್ಳೆಯದು !

''ಜೀಟಿ ! ನಿಮ್ಮ ಸ್ಪಿರಿಟನ್ನು ನಾನು ಮನಃಪೂರ್ವಕವಾಗಿ ಮೆಚ್ಚುತ್ತೇನೆ. ನಾನೂ ನೀವೂ ಪರಮ ಮಿತ್ರರು. ಹೋಗಿ—ಕ್ಯಾಡೆಟುಗಳ ಯೋಗಕ್ಷೇಮ ವಿಚಾರಿಸಿ.'' ಆದ್ದರಿಂದ ಸೋಲುವಾಗ ಅನುಸರಿಸಬೇಕಾದ ನೀತಿ—ಎದುರಾಳಿಯ ಹೊಗಳಿಕೆ !

ಕೊನೆಯ ತುತ್ತು ದಕ್ಕಲಿಲ್ಲ

ಇಂದು ಕ್ಯಾಂಪಿನ ಅತಿ ಸಂಭ್ರಮದ ದಿನ. ಬ್ರಿಗೇಡ್ ಕಮಾಂಡರರೂ (ಬ್ರಿಗೇಡಿಯರ್ ದರ್ಜೆಯವರು) ಸರ್ಕಲ್ ಕಮಾಂಡರರೂ ಕ್ಯಾಂಪನ್ನು ಸಂದರ್ಶಿಸಿ ತಮ್ಮ ಪವಿತ್ರ ಪಾದ ಯಾತ್ರೆಯಿಂದ ಮತ್ತು ವರದಾಯಕ ದೃಷ್ಟಿ ವಾಕ್ಯಗಳಿಂದ ಸಕಲರನ್ನೂ ಮುಖ್ಯವಾಗಿ ಕ್ಯಾಂಪಿನ ಸಮಷ್ಟಿ ಸಾಮರ್ಥ್ಯದ ಪ್ರತೀಕವಾದ ಕಮಾಂಡೆಂಟರನ್ನು ಉದ್ಧರಿಸುವ ದಿನ. ಡೇರೆಗಳ ಸಾಲುಗಳು ನಿಖರವಾಗಿರಬೇಕು. ಬದಿ ಬಟ್ಟೆಗಳನ್ನು ಸುರುಳಿಯಾಗಿ ಸುತ್ತಿ ಓರಣವಾಗಿ ಕಟ್ಟಿರಬೇಕು. ಗೂಟಗಳ ಸಾಲುಗಳೂ ಬಾಗುಗಳೂ ಏಕಪ್ರಕಾರವಾಗಿರಬೇಕು. ದೂರದಿಂದ ನೋಡಿದರೆ ಕ್ಯಾಡೆಟುಗಳ ಡೇರೆಗಳು ಕವಾಯತಿಗೆ ಸಿದ್ಧವಾಗಿ ನಿಂತಿರುವ ಪಟಾಲಮಿನಂತೆ ಕಾಣಬೇಕು. ಇನ್ನು ಡೇರೆಗಳ ಒಳಗೆ, ಕ್ಯಾಡೆಟುಗಳ ಕಿಟ್ ಬ್ಯಾಗುಗಳು, ದರಿ ಬ್ಲ್ಯಾಂಕೆಟುಗಳು, ಊಟದ ತಟ್ಟೆ ಗ್ಲಾಸುಗಳು, ಪಾದರಕ್ಷೆಗಳು, ಲಾಂದ್ರಗಳು ಎಲ್ಲವೂ ನಿಯೋಜಿಸಿದ ಒಂದು ನಮೂನೆಯಲ್ಲಿಯೇ ಇರತಕ್ಕದ್ದು. ಆದ್ದರಿಂದ ಯಾವುದೋ ಒಂದು ಡೇರೆಯಲ್ಲಿ ನಿಂತು ಹಿಂದೆ ಮುಂದೆ ನೋಡಿದಾಗ ತಟ್ಟೆಗಳ ಮಿರಮಿರ ಕಾಂತಿ ನೋಡಿದಿರೋ—ಅದೇ ಸಾಲು ತಲೆಯಿಂದ ತಲೆ ವರೆಗೆ ಕಾಣತ್ತದೆ. ಡೇರೆಗಳ ಗೂಟಕ್ಕೆ ತಗಲು ಹಾಕಿದ ಲಾಂದ್ರಗಳನ್ನು ನೋಡಿದಿರೋ—ಅದೇ ಸಾಲು, ಬರ್ನರುಗಳ ವಿನ್ಯಾಸವೂ ಒಂದೇ ನಮೂನೆಯಲ್ಲಿರುತ್ತದೆ. ದಾರ ಹಿಡಿದು ಈ ಕೆಲಸವನ್ನು ಹುಡುಗರು ಮಾಡುತ್ತಾರೆ. ತಮ್ಮ ವಾಸಸ್ಥಳವನ್ನು ಚೊಕ್ಕಟವಾಗಿ ಕ್ರಮಬದ್ಧವಾಗಿ ಇಟ್ಟುಕೊಳ್ಳುವ ಆವಶ್ಯಕತೆ—ಸಾಮೂಹಿಕ ಜೀವನದಲ್ಲಿ ಇಂಥ ಒಂದು ವ್ಯವಸ್ಥೆಯ ಸೌಂದರ್ಯ ಹಾಗೂ ಸೌಕರ್ಯ—ಹುಡುಗರಿಗೆ ಚೆನ್ನಾಗಿ ಮನದಟ್ಟಾಗುವುದು.

ಕ್ಯಾಂಪಿನ ದಾರಿಗಳ ಎರಡು ಬದಿಗಳೂ ಬಿಳಿ ಇಟ್ಟಿಗೆಗಳ ಸಾಲುಗಳಿಂದ ಅಲಂಕೃತವಾದುವು. ಮಿಂದು ಮಡಿಯುಟ್ಟು ಅಂಗರಾಗ ಪೂಸಿತಳಾಗಿ ಹೂ ಮುಡಿದು ನಿಂತ ಮುಗುದೆಯಂತೆ ಶಿಬಿರ ಶೋಭಿಸಿತು. ಇನ್ನು ಆಫಿಸಿನಲ್ಲಿದ್ದ ಚಾರ್ಟು ಮುಂತಾದ ಕ್ಯಾಂಪಿನ ಜೀವನಾಡಿಗಳಿಗೆ ಹೊಸತೇ ಆದ ಮುಖಮಾರ್ಜನ ಹಾಗೂ ಸೌಂದರ್ಯ ಲೇಪನ ದೊರೆತುವು. ಹೊಸತೊಂದು ಮರಳ ಮಾದರಿ (Sand Model—ಬಯಲಿನಲ್ಲಿ ಕ್ಯಾಂಪು ವಲಯದ ಸಂಕ್ಷೇಪ ಚಿತ್ರವನ್ನು ಪ್ರದರ್ಶಿಸುವ ಮೂರು ಆಯಾಮಗಳ ರಚನೆ) ಕ್ಯಾಂಪಿನ ಕಿರೀಟವಾಯಿತು. ಹಿಂದಿನ ಮೂರು ದಿವಸಗಳ ಸತತ ದುಡಿಮೆ ಇಂದಿನ ಈ ಭವ್ಯದೃಶ್ಯವನ್ನು ಆವಾಹಿಸಿತು.

ಬ್ರಿಗೇಡಿಯರ್ ಮಹೋದಯರು ಅವತರಿಸುವುದು ೧೦ ಗಂಟೆಯ ಸುಮಾರಿಗೆ. ಅವರು ಕ್ವಾರ್ಟರ್ ಗಾರ್ಡಿನಲ್ಲಿ (ಶಸ್ತ್ರಾಗಾರಕ್ಕೆ ಈ ಹೆಸರಿದೆ. ಮುಖ್ಯವಾಗಿ ಕ್ಯಾಂಪಿನ ಒಂದು ಭವ್ಯ ಪ್ರತೀಕ ಕ್ವಾರ್ಟರ್ ಗಾರ್ಡ್. ಇಲ್ಲಿ ಹಗಲಿರುಳೂ ಕಾವಲಿನ ಕ್ಯಾಡೆಟುಗಳು ಇರುತ್ತಾರೆ. ಕ್ಯಾಂಪಿನ ಪ್ರವೇಶದ್ವಾರದಲ್ಲಿ ಇದನ್ನು ಅಂದವಾಗಿ ರಚಿಸಿರುತ್ತಾರೆ. ಅಲ್ಲಿ ಧ್ವಜಸ್ತಂಭವೂ ಕ್ಯಾಂಪಿನ ಬಾವುಟವೂ ರಾರಾಜಿಸುತ್ತಿರುವುವು. ವಿಐಪಿಗಳು—ವೆರಿ ಇಂಪಾರ್ಟೆಂಟ್ ಪರ್ಸನಾಲಿಟೀಸ್, ಅತಿ ಪ್ರಮುಖ ವ್ಯಕ್ತಿಗಳು. ಅಪ್ರುಪ್ಯ ಎಂದು ಸಂಕ್ಷೇ

ಪಿಸಬಹುದು—ಆಗಮಿಸುವಾಗ ಮೊದಲು ಅವರನ್ನು ಕ್ವಾರ್ಟರ್ ಗಾರ್ಡಿಗೆ ಕರೆದೊಯ್ಯುತ್ತಾರೆ. ಅಲ್ಲಿ ಸುಟಿಯಾದ ಕ್ಯಾಡೆಟುಗಳು ಅವರಿಗೆ ನೀಡುವ ಗೌರವರಕ್ಷೆಯನ್ನು ಸ್ವೀಕರಿಸಿ ಅದನ್ನು ವೀಕ್ಷಿಸಿ ತರುವಾಯ ಕ್ಯಾಂಪಿನ ಒಳಗೆ ಹೋಗುವರು. ಕ್ವಾರ್ಟರ್ ಗಾರ್ಡ್ ಸಮಗ್ರ ಕ್ಯಾಂಪಿನ ಸೌಂದರ್ಯದ ಶಿಸ್ತಿನ ಒಪ್ಪಓರಣಗಳ ಸಂಕ್ಷೇಪರೂಪ. "ನಿಮ್ಮ ಕ್ವಾರ್ಟರ್ ಗಾರ್ಡ್ ತೋರಿಸಿ—ನಿಮ್ಮ ಯೂನಿಟ್ಟಿನ ಯೋಗ್ಯತೆ ಹೇಳುತ್ತೇನೆ" ಎಂಬುದು ಆರ್ಮಿಯಲ್ಲಿ ಸಾಧಾರಣವಾಗಿ ಪ್ರಚಲಿತವಿರುವ ಮಾತು.) ಗೌರವರಕ್ಷೆ ಸ್ವೀಕರಿಸಿ ಮತ್ತೆ ಕ್ಯಾಂಪನ್ನು ನೋಡುತ್ತಾರೆ. ೧೧ರಿಂದ ೧೨ ಗಂಟೆ ತನಕ ಕ್ಯಾಡೆಟುಗಳನ್ನು ಕೆಲಸದ ಸ್ಥಳದಲ್ಲಿ ನೋಡಿ ಅವರೊಡನಿದ್ದು ಕ್ಯಾಂಪಿಗೆ ಊಟದ ಹೊತ್ತಿಗೆ ಮರಳುತ್ತಾರೆ. ಕ್ಯಾಡೆಟುಗಳು ಊಟ ಮಾಡುವುದನ್ನು ನೋಡಿ ಅನಂತರ ಆಫಿಸರರ ಮೆಸ್ಸಿನಲ್ಲಿ ಆಫಿಸರರೊಡನೆ ಭೋಜನ ಸ್ವೀಕರಿಸುತ್ತಾರೆ. ಇವಿಷ್ಟು ನಮಗೆ ತಿಳಿಸಿದ್ದ ವಿವರ. ಇದೆಲ್ಲ ಸರಿಯಾದ ಕ್ರಮವೇ—ಹಬ್ಬಹರಿದಿನಗಳಂದು ಹಿರಿಯರು ಮನೆಗೆ ಆಗಮಿಸುವಂದು ನಮ್ಮ ಅತ್ಯುತ್ಕೃಷ್ಟ ಮಟ್ಟವನ್ನು ನಾವು ಅವರಿಗೆ ಪ್ರದರ್ಶಿಸಬೇಕಾದದ್ದು ಅವರ ಮನಸ್ಸಂತೋಷಪಡಿಸಬೇಕಾದದ್ದು ಸುಸಂಸ್ಕೃತ ವರ್ತನೆ.

ಕೊಡಗಿನ ಡೇರೆಗಳ ಸಾಲಿಗೆ ಹೊಸ ಮೆರಗು ಅಂದು ಬಂದಿತ್ತು. ನಾನು ಹಿಂದಿನ ರಾತ್ರಿ ಬಲು ಹೊತ್ತಿನ ತನಕ ಹುಡುಗರೊಡನೆ ಕೆಲಸ ಮಾಡಿದ್ದೆ. ಅದೇ ಆ ಹುಡುಗರಿಗೆ ಟಾನಿಕ್. ೭ ಗಂಟೆಗೆ ಉಪಾಹಾರ ಮುಗಿಸಿ, ಮಗುದೊಮ್ಮೆ ಡೇರೆಗಳಿಗೆ ಅಂತಿಮ ಸ್ಪರ್ಶಗಳನ್ನೂ ಒಪ್ಪವನ್ನೂ ನೀಡಿ ಎರಡು ಮೈಲಿ ದೂರದ ಕೆಲಸದ ಜಾಗಕ್ಕೆ ಹೋದೆವು.

ಕೆಲಸದ ಸ್ಥಳದ ಹೆಸರು ಲಿಂಗನಮಕ್ಕಿ. ಅಲ್ಲಿ ಶರಾವತಿ ಆಳವಾಗಿ ತೀವ್ರವಾಗಿ ಪ್ರವಹಿಸುತ್ತದೆ. ಅದರ ಎರಡು ದಂಡೆಗಳಲ್ಲಿಯೂ ಕಾಡುಗಳಿಂದ ತುಂಬಿದ ಕಡಿದಾದ ಬೆಟ್ಟಗಳು. ಅಲ್ಲೊಂದು ಭಾರೀ ಅಣೆಕಟ್ಟನ್ನು ಕಟ್ಟಿ ನೀರನ್ನು ಸಂಗ್ರಹಿಸುವುದು ಸರಕಾರದ ಯೋಜನೆ. ಇದೇ ಶರಾವತಿ ಯೋಜನೆ ಎಂದು ನಾಡಿನಲ್ಲೆಲ್ಲ ಸುಪ್ರಸಿದ್ಧವಾಯಿತು (ಬೇರೆ ಕಾರಣಗಳಿಗೋಸ್ಕರ ಕುಪ್ರಸಿದ್ಧವೂ ಆಯಿತೆನ್ನಿ). ಅಲ್ಲಿ ಸರಕಾರದ ಎಂಜಿನಿಯರರ ಅವರ ಸಿಬ್ಬಂದಿಗಳ ಭಾರೀ ಸೈನ್ಯಗಳೇ ಬೀಡುಬಿಟ್ಟಿದ್ದುವು. ಇನ್ನು ಕೆಲಸಗಾರರ ಸಂಖ್ಯೆಯಂತೂ ಲೆಕ್ಕಕ್ಕೆ ಸಿಕ್ಕುತ್ತಿರಲಿಲ್ಲ. ಲಾರಿಗಳು. ಮಾರಿಹಲಂಬೆಗಳು (ಬುಲ್‌ಡೋಝರ್ಸ್). ನೀರು ಹರಿಸುವ ಪಂಪುಗಳು ಇವೆಲ್ಲವೂ ಅಧಿಕ ಸಂಖ್ಯೆಯಲ್ಲಿ ಕಾರ್ಯೋದ್ಯುಕ್ತವಾಗಿ ಹೊಳೆಯ ಪ್ರವಾಹಕ್ಕೆ ಗಲಭೆಯ ಪೂರಕ ಪ್ರವಾಹವನ್ನೂ ಬೆರೆಸುತ್ತಿದ್ದುವು. ಇಂಥಲ್ಲಿ ನಮ್ಮ ಅಳಿಲ ಸೇವೆ—ಒಡೆದಿಟ್ಟಿದ್ದ ಕಲ್ಲುಗಳ ಬೆಟ್ಟದಂಥ ರಾಶಿಯನ್ನು ಒಂದು ಕಡೆಯಿಂದ ಸಾಗಿಸಿ ಇನ್ನೊಂದು ಕಡೆ ನದಿಗೆ ಎಸೆದು ಅದರ ಪಾತ್ರವನ್ನು ಮೇಲೆ ತರುವ ಕ್ರಿಯೆ. ಬೇರೆ ಬೇರೆ ಯೂನಿಟ್ಟಿನವರಿಗೆ ಬೇರೆ ಬೇರೆ ಕೆಲಸದ ಜಾಗಗಳು, ಮಾಡಬೇಕಾದ ಕೆಲಸದ ಪರಿಮಾಣ ಎಲ್ಲವನ್ನೂ ಸಂಬಂಧಿತ ಎಂಜಿನಿಯರರು ವಿಧಿಸಿದ್ದರು. ದಿನವಹಿ ಒಂದೊಂದು ಯೂನಿಟ್ಟು ನಿರ್ವಹಿಸಿದ ಕಾರ್ಯವನ್ನು ಅವರು ಅಳತೆ ಮಾಡಿ ಗುರುತು ಇಟ್ಟುಕೊಳ್ಳುತ್ತಿದ್ದರು. ಈ ವಿಧಾನದಿಂದ ಯೂನಿಟ್ಟುಗಳ ನಡುವೆ ಒಂದು ವಿಧದ ಆರೋಗ್ಯಕರ ಸ್ಪರ್ಧೆ ಏರ್ಪಟ್ಟಿತ್ತು. ಯಾರೂ ಕೆಲಸವನ್ನು

ತಪ್ಪಿಸುವಂತಿರಲಿಲ್ಲ. ಹೋಣೆಗಾರಿಕೆಯನ್ನು ಹಂಚಿ ತಲೆಯಮೇಲೆ ಹೊರಿಸಿ—ಕೆಲಸ ವಾಗುತ್ತದೆ. ಎಲ್ಲರೂ ಸೇರಿ ಮಾಡೋಣ, ಒಕ್ಕಟ್ಟಿನಲ್ಲಿ ಬಲವಿದೆ, ಪ್ರತಿಯೊಬ್ಬನೂ ಸಭ್ಯ ಎಂಬ ಆದರ್ಶಪಾಲನೆ ಮಾಡಿ—ಜೀವನ ಆದರ್ಶವಲ್ಲ. ಯಾವುದೇ ಗುಂಪಿನಲ್ಲಿ ಶೇಕಡಾ ೨೦ ಸಭ್ಯರು ದೊರೆಯುವುದು ಕಷ್ಟ, ಮಲಿನ ಜಲ ಶುದ್ಧ ಜಲವನ್ನು ಕೆಡಿಸುವುದೇ ವಿನಾ ನಿಷೇಧಾತ್ಮಕ ವಿಲೋಮವಲ್ಲ—ಎಂಬ ಕಹಿ ವಾಸ್ತವಿಕ ಸಂಗತಿಗಳನ್ನು ತಿಳಿಯು ತ್ತೀರಿ.

ಕೊಡಗಿನ ಕಡುಗಲಿಗಳ ಕಲ್ಲು ಹೊರುವ ಕೆಲಸ ಬಲು ಉನ್ನತಮಟ್ಟದಲ್ಲಿತ್ತು. ನಮ್ಮಲ್ಲಿ ಯಾರೂ ಗೈರುಹಾಜರಾಗುತ್ತಿರಲಿಲ್ಲ. ನಿಗದಿಸಿದ ವೇಳೆಗಿಂತ ಹೆಚ್ಚು ಹೊತ್ತು ಅವರು ಕೆಲಸ ಮಾಡುತ್ತಿದ್ದರು. ಹಾಡು, ತಾಳ, ವಿನೋದಭರಿತ ಮಾತು ಇವುಗಳಿಂದ ನಮ್ಮ ತಂಡದ ದಿನವಹಿ ಕೆಲಸವೂ ಒಟ್ಟು ಕೆಲಸವೂ ಇತರರಿಗಿಂತ ಅದೆಷ್ಟೋ ಮುಂದಿದ್ದುವು. ಮುಂದಾಳು (ಆಫಿಸರ್) ಆದವನು ಹುಡುಗರೊಡನೆ ಸದಾ ಇರಬೇಕು, ಸುಖಕ್ಕಿಂತಲೂ ಹೆಚ್ಚಾಗಿ ಅವರ ಕಷ್ಟಗಳಲ್ಲಿ ಅವನು ಸಮರ್ಥ ಮಾರ್ಗದರ್ಶನ ಮಾಡಬೇಕು. ಆಗ ಕ್ಯಾಡೆಟುಗಳು ಪವಾಡ ಎಸಗುತ್ತಾರೆ. ನಮ್ಮ ಕೆಲಸ ಮುಂದುವರಿಯಿತು. ಆದರೆ ಅಪ್ರುವ್ಯ ಬರಲಿಲ್ಲ. ಬೇರೆ ಸೂಚನೆಯೂ ಇಲ್ಲ. ಸಾಮಾನ್ಯವಾಗಿ ೧೨-೩೦ ಗಂಟೆಗೆ ಅಲ್ಲಿಂದ ಕ್ಯಾಂಪಿಗೆ ಊಟ ಮಾಡಲು ನಿರ್ಗಮಿಸುವುದು ವಾಡಿಕೆ. ಆದರೆ ಇಂದು ೧ ಗಂಟೆಗೆ ಹೊರಟರೆ ಸಾಕೆಂದು ಆದೇಶ ಬಂತು. ಬ್ರಿಗೇಡಿಯರರ ದರ್ಶನವಿಲ್ಲ. ಕ್ಯಾಂಪಿಗೆ ತಲಪುವ ಮೊದಲು ನಮಗೆ ಹೊಸ ಆದೇಶ ಬಂತು—ಬ್ರಿಗೇಡಿಯರರು ಇನ್ನೂ ಕ್ಯಾಂಪಿಗೆ ಬಂದಿಲ್ಲ; ಯಾವ ಮುಹೂರ್ತದಲ್ಲಿಯೂ ಬರಬಹುದು; ಆದ್ದರಿಂದ ಕ್ಯಾಡೆಟುಗಳು ಡೇರೆ ಒಳಗೆ ಹೋಗ ಬಾರದು; ಅಲ್ಲಿ ಓರಣವಾಗಿ ಇಟ್ಟಿರುವ ವಸ್ತುಗಳ ಅಂದ ಕೆಡಿಸಬಾರದು; ತಟ್ಟೆ ಗ್ಲಾಸು ಗಳನ್ನು ಮಾತ್ರ ಎಚ್ಚರದಿಂದ ಹೊರ ತೆಗೆದು ಊಟಕ್ಕೆ ಹೋಗಬೇಕು. ಕ್ಯಾಡೆಟುಗಳು ಊಟ ಮಾಡುವ ವೇಳೆಯಲ್ಲಿ ಬ್ರಿಗೇಡಿಯರರು ಬಂದುಬಿಡುತ್ತಾರೆ ಎಂದು ಕಮಾಂಡೆಂಟರು ನಿರೀಕ್ಷಿಸಿರಬಹುದು.

ನನ್ನ ಕ್ಯಾಡೆಟುಗಳು ಊಟ ಮುಗಿಸಿದುದನ್ನು ನೋಡಿ ನಾನು ಆಫಿಸರರ ಮೆಸ್ಸಿಗೆ ಹೋದೆ. ಆ ಮೊದಲೇ ನಮ್ಮ ಹಲವಾರು ಸಹೋದ್ಯೋಗಿಗಳು ಅಲ್ಲಿಗೆ ಊಟಕ್ಕೆ ಬಂದಿ ದ್ದರು. ಕಮಾಂಡೆಂಟರು ಬಂದಿರಲಿಲ್ಲ. ಬಹುಶಃ ಬ್ರಿಗೇಡಿಯರರ ಬರವನ್ನು ಕಾಯುತ್ತ ನಿಂತಿರಬೇಕು. ನಾನೂ ಒಂದೆರಡು ಆಫಿಸರರೂ ಹೊರತಾಗಿ ಉಳಿದವರೆಲ್ಲರೂ ಊಟ ಮಾಡಿ ಅಲ್ಲಿಂದ ತೆರಳಿದ್ದರು. ಹುಡುಗರ ಡೇರೆಗಳ ಕಡೆಯಿಂದ ಮಾತು ಕೇಕೆ ಎಲ್ಲವೂ ಒಟ್ಟಾಗಿ ಕಲರವ ಉಂಟುಮಾಡುತ್ತಿದ್ದುವು. ಒಳ್ಳೆಯ ಹಸಿವಾಗಿತ್ತು. ಊಟವನ್ನು ತಡ ವಾಗಿ ತೊಡಗಿದ್ದೆ. ಹೀಗಾಗಿ ನಿಧಾನವಾಗಿ ಊಟ ಮುಂದುವರಿಯುತ್ತಿತ್ತು. ಆದರೆ ಕೊನೆಯ ತುತ್ತು ದಕ್ಕಲಿಲ್ಲ.

ಯಾರೋ ಅಂದರು ಏನಂತೆ ?

ಸುದ್ದಿ ಮಿಂಚಿನಂತೆ ಬಡಿದು ಮಾಯವಾಯಿತು; ಆದರೆ ಆಘಾತ ಮಾತ್ರ ಮಿಂಚು ಹೊಡೆತ ದಷ್ಟೇ ತೀವ್ರ—ಮೀಯಲಿಕ್ಕೆ ಹೋಗಿದ್ದ ಹುಡುಗರಲ್ಲಿ ಒಬ್ಬ ಮುಳುಗಿದನಂತೆ.

ಯಾರೆಂದು ಗೊತ್ತಿಲ್ಲವಂತೆ. ಎಲ್ಲ ಆಫಿಸರರೂ ಸ್ನಾನದ ಘಟ್ಟಕ್ಕೆ (ಜಲಾಶಯದ ದಂಡೆಗೆ) ಬರಬೇಕೆಂದು ಧ್ವನಿವರ್ಧಕದಲ್ಲಿ ಹುಕುಂ ಗುಡುಗಿತು. ನನಗೆ ಧಮನಿಗಳಲ್ಲಿ ನೆತ್ತರು ಹೆಪ್ಪುಗಟ್ಟಿದ ಅನುಭವ—ನಮ್ಮ ೪೮ರಲ್ಲಿ ಈ ಒಂದು ಇರುವುದು ಖಂಡಿತ ; ಒಂದೊಂದೂ ಈಸುವುದರಲ್ಲಿ ಪ್ರಾವೀಣ್ಯವಿರುವ ಮತ್ತು ಆಸೆ ಇರುವ ಪ್ರಾಣಿ ; ಈ ವಿಷಗಳಿಗೆಯಲ್ಲಿ ಅಲ್ಲಿ ಮೀಯಲಿಕ್ಕೆ ಯಾಕೆ ಹೋಯಿತೋ ತಿಳಿಯದು, ಯಾರೂ ಮುಳುಗಿರದಿರಲಿ, ನಮ್ಮ ಹುಡುಗರೆಲ್ಲರೂ ಸುರಕ್ಷಿತವಾಗಿರಲಿ ಎಂದು ಮನಸ್ಸಿನಲ್ಲಿಯೇ ಚಿಂತಿಸುತ್ತ ನಾನು ನಮ್ಮ ಹುಡುಗರ ಡೇರೆ ಕಡೆಗೆ ಓಡಿದೆ.

ಭೂಕಂಪನ ಸಂಭವಿಸಿದಾಗ ಆಗುವಂಥ ಪರಿಸ್ಥಿತಿ ಕ್ಯಾಂಪಿನಲ್ಲಿ. ಹುಡುಗರ ಹೊಳೆ ನದೀ ದಂಡೆ ಎಡೆಗೆ ಸಾಗುತ್ತಿದೆ—ಇಲ್ಲ ಅಸಂಖ್ಯಾತ ಹುಡುಗರು ಆ ಕಡೆಯಿಂದ ಟವೆಲ್ ಸುತ್ತಿಕೊಂಡು ಚಡ್ಡಿ ಬಟ್ಟೆ ಹಿಡಿದುಕೊಂಡು ಬರುತ್ತಿದ್ದಾರೆ. ನಮ್ಮ ಕ್ಯಾಡೆಟುಗಳು ಅಲ್ಲೇ ಗುಂಪಾಗಿ ನಿಂತಿದ್ದಾರೆ. ಸೀನಿಯರ್ ಕ್ಯಾಡೆಟ್ ಅವರನ್ನು ಎಲ್ಲಿಗೂ ಕದಲದಂತೆ ಆಜ್ಞೆ ಇತ್ತು ನಿಲ್ಲಿಸಿದ್ದಾನೆ. ''ಹುಡುಗ ಮುಳುಗಿಹೋದನಂತೆ ಸಾರ್'' ಒಬ್ಬನ ಮಾತು.

''ನಿಜವೇ ? ಇರಲಾರದು. ನಮ್ಮವರೆಲ್ಲರೂ ಇರುವರೇ ?'' ನನ್ನ ಮಾತು.

''ನಾನಿವರನ್ನು ಸ್ನಾನಮಾಡಹೋಗಲು ಬಿಡಲಿಲ್ಲ ಸಾರ್'' ಸೀನಿಯರನ ಮಾತು.

''ಒಳ್ಳೇದು ಮಾಡಿದೆ. ಆದರೆ ಈಗ ಸ್ನಾನದ ಕಾಲ ಅಲ್ಲವಷ್ಟೆ ?''

''ಊಟ ಮಾಡಿ ನಾವೆಲ್ಲ ಡೇರೆಗಳಿಗೆ ಬರುತ್ತಿದ್ದಾಗ ಆರ್ಮಿ ಸ್ಟಾಫುಗಳು ಎದುರಿನಿಂದ ಬಂದು ನಾವು ಯಾರೂ ಡೇರೆಗಳಿಗೆ ನುಗ್ಗಬಾರದು, ಸ್ನಾನ ಮಾಡಲು ಹೋಗಬೇಕು, ಬ್ರಿಗೇಡಿಯರರು ಇದೀಗ ಬರುವವರಿದ್ದಾರೆ ಎಂದರು. ಹೀಗಾಗಿ ಬಹುಮಂದಿ ಕ್ಯಾಡೆಟುಗಳು ನದೀದಂಡೆಗೆ ಹೋದರು ಸಾರ್.''

''ನಮ್ಮ ಹುಡುಗರು ಹೋಗಲಿಲ್ಲವಷ್ಟೆ ?'' ನನ್ನ ಮಾತು.

''ನಿಮ್ಮ ಖಚಿತ ಹುಕುಂ ಇಲ್ಲದೇ ನೀವೇ ಮಾರ್ಚ್ ಮಾಡಲು ಆಜ್ಞೆ ನೀಡದೇ ನಾವು ಹೋಗುವಂತಿಲ್ಲವಷ್ಟೆ. ಅದನ್ನು ಜಾರಿ ಮಾಡಿಬಿಟ್ಟೆ. ನಾವೆಲ್ಲರೂ ಅಲ್ಲಿ ಮರಗಳ ಮರೆಯಲ್ಲಿ ತಂಪಾಗಿ ಕೂತಿದ್ದೆವು.''

''ಸದ್ಯ ನಿಮ್ಮ ವಿಧೇಯತೆಗೆ ನಾನು ಬಲು ಸಂತೋಷಪಡುತ್ತೇನೆ. ಈಗ ಆಗಿರುವುದಾದರೂ ಏನು ?''

''ಮೀಯುತ್ತಿದ್ದವರಲ್ಲಿ ಒಬ್ಬ ಮುಳುಗಿದನೆಂದು ಸುದ್ದಿ ಕೇಳಿದ್ದೇವೆ ಯಾರು, ಅದು ನಿಜವೇ ಎಂದು ಖಂತಾಗಿ ತಿಳಿಯದು, ಕಮಾಂಡೆಂಟರೂ ಸ್ಟಾಫುಗಳೂ ನದೀ ದಂಡೆಗೆ ಧಾವಿಸಿದ್ದಾರೆ.''

ನಮ್ಮ ಹುಡುಗರನ್ನು ಅಲ್ಲೇ ಇರಲು ವಿಧಿಸಿ ನಾಲ್ವರು ಕ್ಯಾಡೆಟುಗಳ ಒಡಗೂಡಿ ನಾನು ದಂಡೆ ಎಡೆಗೆ ಓಡಿದೆ. ಅಲ್ಲಿ ರಂಪವೋ ರಂಪ. ಇಕ್ಕಟ್ಟಾದ ದಂಡೆಯ ಮರಳಿನ ಮೇಲೆ ರಾತ್ರಿಯ ಜೇನುಗೂಡಿನಂತೆ ಜನಸಂದಣಿ. ಎಲ್ಲರೂ ಗಭೀರ ವಿಸ್ತಾರ ಮೂಕ ನಿಶ್ಚಲ ಜಲರಾಶಿಯನ್ನು ನೋಡುವವರೇ. ಕಮಾಂಡೆಂಟರು ಗಾಬರಿಬಿದ್ದವರಂತೆ ನೀರಿನಂಚಿನಲ್ಲಿ ದಂಡೆಯ ಮೇಲೆ ಆ ಕಡೆ ಈ ಕಡೆ ಓಡಾಡುತ್ತಿದ್ದರು.

ಮುಳುಗಿದ್ದು ಹೌದೇ ? ಯಾರು ಮುಳುಗಿದ್ದು ? ಕಂಡವರು ಯಾರು ? ಅಥವಾ

ಇದೊಂದು ಏಪ್ರಿಲ್ ಫೂಲ್ ಆಟವೇ ? ಹಾಗಿದ್ದರೆ ಈ ಸುದ್ದಿ ಹುಟ್ಟಿದ್ದು ಯಾರಿಂದ? ಡ್ಯೂಟಿ ಜೆಸಿಓ ಅಂದ "ನಾನಿಲ್ಲಿ ಕಾವಲಿದ್ದೆ ಯಾರೂ ಮುಳುಗಲಿಲ್ಲ ಸಾರ್."

ಡ್ಯೂಟಿ ಆಫಿಸರ್ (ಎನ್‌ಸಿಸಿಯುವರು) ಅಂದರು "ನನಗೆ ಈ ಅಕಾಲದಲ್ಲಿ ಇವರೆಲ್ಲರೂ ಸ್ನಾನ ಮಾಡಲು ಇಲ್ಲಿಗೆ ಬರುವರೆಂದು ಗೊತ್ತಾಗಲಿಲ್ಲ. ಆದ್ದರಿಂದ ನಾನಾಗ ಇಲ್ಲಿರಲಿಲ್ಲ ಸಾರ್."

"ಮೈಸೂರಿನ ಹುಡುಗನೊಬ್ಬ ಹೋದದ್ದು ಇರಬಹುದೆಂದು ಅವರು ಮಾತಾಡಿ ಕೊಳ್ಳುತ್ತಿದ್ದಾರೆ ಸಾರ್" ಎಂದು ಒಬ್ಬ ನಿರಪರಾಧಿ ಅಧಿಕಪ್ರಸಂಗಿ ಕ್ಯಾಡೆಟ್ ಹೇಳಿದ. ಕಮಾಂಡೆಂಟರು ರೌದ್ರಾವತಾರ ತಾಳಿ "ನೀನೇ ನೀನೇ ಅವನನ್ನು ನೂಕಿ ನನಗೆ ಶಿಕ್ಷೆ ವಿಧಿಸುತ್ತಿದ್ದೀಯೆ. ನೀನೇನು ಮನುಷ್ಯನೋ ಕ್ರೂರ ಮೃಗವೋ ?" ಎಂದು ಅವನನ್ನು ಅವಾಚ್ಯ ಶಬ್ದಗಳಿಂದ ಬೈದು ಅವನ ತಲೆಗೆ ಕೆನ್ನೆಗಳಿಗೆ ಯದ್ವಾತದ್ವಾ ಹೊಡೆದರು. ಉಳಿದ ಕ್ಯಾಡೆಟುಗಳು ಹೆದರಿ ಮಾತಾಡಲಿಲ್ಲ.

"ಸಾರ್ ! ನನ್ನದೊಂದು ಸೂಚನೆ ಇದೆ" ನಾನೆಂದೆ.

"ಶುರುವಾಯಿತು ನಿಮ್ಮ ಅಧಿಕಪ್ರಸಂಗ. ಈಗ ಸಂತೋಷವಾಯಿತೇ ನಿಮಗೆ ನನ್ನ ದುರವಸ್ಥೆ ನೋಡಿ ?" ಕಮಾಂಡೆಂಟರು.

"ತಾವು ಅನ್ಯಥಾ ಭಾವಿಸಬಾರದು ಸಾರ್. ಈ ಸುದ್ದಿ ಸುಳ್ಳೆಂದೇ ಭಾವಿಸೋಣ. ಆದರೂ ಇದರ ಸತ್ಯಾಂಶವನ್ನು ನಾವು ನಿರ್ಧರಿಸಲೇಬೇಕು. ಇಡೀ ಕ್ಯಾಂಪಿನ ರೋಲ್ ಕಾಲ್ ತೆಗೆದರೆ ಈ ಕ್ಷಣವೇ ಇದು ಗೊತ್ತಾಗುವುದು" ನಾನೆಂದೆ.

"ನೀವು ಏರ್ಪಾಡು ಮಾಡುವಿರಾ ? ನನ್ನ ಮನಸ್ಸು ಕೆಲಸವನ್ನೇ ಮಾಡುತ್ತಿಲ್ಲ. ನನ್ನ ಕೆಲಸವನ್ನೂ ಹೆಂಡತಿ ಮಕ್ಕಳನ್ನೂ ನೀವು ರಕ್ಷಿಸಬೇಕು" ಎನ್ನಬೇಕೇ ಸಾಹೇಬರು.

ಬಿಗಿಲು ಊದಿದೆ. ಡ್ಯೂಟಿ ಆಫಿಸರ್, ಕ್ಯಾಂಪಿನ ಉಪಮುಖ್ಯಸ್ಥರು, ಎಲ್ಲ ಎನ್‌ಸಿಸಿ ಆಫಿಸರರು ಎಲ್ಲರಿಗೂ ಕಮಾಂಡೆಂಟರ ಆದೇಶ ಮುಟ್ಟಿಸಿದೆ. ಆ ಕ್ಷಣವೇ ಕ್ಯಾಡೆಟುಗಳ ಹೊಳೆ ಕ್ಯಾಂಪಿನ ಶಿಕ್ಷಣದ ಬಯಲಿಗೆ ಹರಿಯಿತು. ಕಕ್ಕಸುಗಳಲ್ಲಿ ಧ್ಯಾನಸ್ಥರಾಗಿರಬಹು ದಾದ ಕಾಡುಗಳಲ್ಲಿ ಅವಿತಿರಬಹುದಾದ ಕ್ಯಾಡೆಟುಗಳಿಗೆ ಕೇಳಲೆಂದು ಧ್ವನಿವರ್ಧಕಗಳಲ್ಲಿ ಅನೇಕ ಬಾರಿ ಕೂಗಿ ಹೇಳಲಾಯಿತು "ಒಂದು ಪ್ರಮುಖ ವಿಷಯದ ನಿರ್ಣಯಕ್ಕಾಗಿ ಎಲ್ಲ ಕ್ಯಾಡೆಟುಗಳೂ ಅವರೆಲ್ಲೇ ಇದ್ದರೂ ಈ ಕ್ಷಣ ಇರುವ ಉಡುಪಿನಲ್ಲಿಯೇ ಶಿಕ್ಷಣದ ಬಯಲಿಗೆ ಬರತಕ್ಕದ್ದು."

ಆಫಿಸರರು ಸ್ಟಾಫುಗಳು ಎಲ್ಲ ಸ್ಥಳಗಳಿಗೂ ವೈಯಕ್ತಿಕವಾಗಿ ಭೇಟಿ ನೀಡಿ ಮೂಲೆ ಮೂಲೆಗಳನ್ನು ಬರಗಿ (ಜಲಾಶಯವನ್ನು ಮಾತ್ರ ಹಾಗೆ ಮಾಡಲು ಸಾಧ್ಯವಾಗಲಿಲ್ಲ) ಹುಡುಗರನ್ನು ಬಯಲಿನಲ್ಲಿ ಒಟ್ಟುಗೂಡಿಸಿದರು. ನಾವು ನಮ್ಮ ನಮ್ಮ ತಂಡಗಳನ್ನು ಪೆರೇಡಿಗೆ ನಿಲ್ಲಿಸಿ ಸಂಖ್ಯೆ ಎಣಿಸಿ ಆಯಾ ತಂಡದ ಮುಂದೆ ನಿಂತೆವು. ಅಡ್ಜುಟೆಂಟ್ ಇಡೀ ಪೆರೇಡನ್ನು ಸಾವಧಾನ್ ಸ್ಥಿತಿಗೆ ಕರೆದರು. ಎನ್‌ಸಿಸಿ ಆಫಿಸರರಿಂದ ರಿಪೋರ್ಟ್ ತೆಗೆದು ಕೊಳ್ಳುತ್ತ ಬಂದರು. ಹೆಚ್ಚು ಕಡಿಮೆ ಎಲ್ಲರೂ ತಮ್ಮ ಕ್ಯಾಡೆಟುಗಳ ಸಂಖ್ಯೆ ಸರಿಯಾಗಿದೆ ಎಂದು ವರದಿ ಮಾಡಿದರು. ಆದರೆ ಮೈಸೂರಿನ ಹಲವಾರು ಕಾಲೇಜುಗಳಿಂದ ಬಂದಿದ್ದ ೮–೧೦ ಕ್ಯಾಡೆಟುಗಳ ಹಲವಾರು ತುಕ್ಕಡಿಗಳಿಗೆ ಆಯಾ ಕಾಲೇಜಿನ ಆಫಿಸರರು ಇರಲಿಲ್ಲ.

ಅವರೆಲ್ಲರನ್ನೂ ಗುಡ್ಡೆ ಹಾಕಿ ಯಾರೋ ಒಬ್ಬ ಆಫಿಸರನ ವಶಬಿಟ್ಟಿದ್ದರು. ಆ ಎನ್‌ಸಿಸಿ ಆಫಿಸರ್ ಅದಕ್ಷತೆಯ ಹಾಗೂ ನಿದ್ರೆಯ ಮೂರ್ತರೂಪ. ಅವನ ಹತ್ತಿರ ತನ್ನ ವಶ ದಲ್ಲಿದ್ದ ಕ್ಯಾಡೆಟುಗಳು ಎಷ್ಟು ಅವರು ಯಾವ ಯಾವ ಕಾಲೇಜಿನವರು ಎಂಬ ಯಾವ ವಿವರ ಗಳೂ ಇರಲಿಲ್ಲ. ಕಮಾಂಡೆಂಟರ ಯದ್ವಾತದ್ವಾ ಬೈಗುಳಗಳನ್ನು ಕೇಳುತ್ತ ಈ ಮಹಾತ್ಮ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ ಸುಮ್ಮನೆ ನಿಂತಿದ್ದ. "ನೀನೇನು ಮನು ಷ್ಯನೋ ಕಲ್ಲೋ ಮಾತಾಡು. ಇಷ್ಟು ದಿನ ನೀನು ಏನು ಮಾಡಿದೆ ? ನಿನ್ನ ವಶದಲ್ಲಿರುವ ಹುಡುಗರ ವಿವರವೂ ನಿನಗೆ ತಿಳಿಯದಲ್ಲ" ಎಂದು ಗರ್ಜಿಸಿದ ಕಮಾಂಡೆಂಟರಿಗೆ ಲಭಿಸಿದ ಪ್ರತಿಕ್ರಿಯೆ ಮೌನ.

ಆಫಿಸಿನಿಂದ ಕ್ಯಾಂಪಿನ ಹಾಜರಾತಿ ಪುಸ್ತಕ ತರಿಸಿ ಪರಿಶೀಲಿಸಿದೆವು—ಕ್ಯಾಂಪಿನ ಒಟ್ಟು ಮೊತ್ತದಿಂದ ಸರಿಯಾಗಿ ವರದಿಯಾಗಿರುವ ಕಾಲೇಜುಗಳ ಕ್ಯಾಡೆಟುಗಳ ಮೊತ್ತವನ್ನು ಕಳೆದು ಮೈಸೂರಿನ ಕ್ಯಾಡೆಟುಗಳ ಸಂಖ್ಯೆ ನಿರ್ಧರಿಸಬಹುದೇ ಎಂದು ನೋಡಲು— ಆದರೆ ಅವುಗಳಲ್ಲಿದ್ದ ಲೆಕ್ಕ ಬೇರೆಯೇ ಇದ್ದದ್ದನ್ನು ನೋಡಿ ನನಗೇನೋ ವಾಸನೆ ಬಂತು. ಮುಖ್ಯ ಗುಮಾಸ್ತ ಹದ್ದಿನಂತೆ ನಮ್ಮೆಡೆಗೆ ಎರಗಿ ಆ ಪುಸ್ತಕಗಳನ್ನು ತಂದುಕೊಟ್ಟ ಜವಾನನನ್ನು ಗದರಿಸಿ ಅವನ್ನು ನಮ್ಮಿಂದ ಕಸಿದುಕೊಂಡ. ಕಮಾಂಡೆಂಟ್ ಈ ದೃಶ್ಯ ವನ್ನು ನೋಡಿದರೂ ಮಾತಾಡಲಿಲ್ಲ. ಅವರು ಹುಡುಗರ ಎದುರು ಅತ್ತರು. "ಓ ನನ್ನ ಪ್ರಿಯ ಮಕ್ಕಳೇ! ನಿಮಗೆ ಹೇಗೆ ತಿಳಿದೀತು ನನ್ನ ಸಂಕಟ. ನಿಮ್ಮ ತಂದೆ ತಾಯಿ ಗಳೆಲ್ಲರೂ ಅವರ ಜೀವನದ ಆಸೆಆಕಾಂಕ್ಷೆಗಳಾದ ನಿಮ್ಮನ್ನು ಇಲ್ಲಿಗೇಕೆ ಕಳಿಸಿದ್ದಾರೆಂದು ಯೋಚನೆ ಮಾಡಿದ್ದೀರಾ ? ನಾನು ನಿಮ್ಮ ಯೋಗಕ್ಷೇಮದ ಹೊಣೆ ಹೊತ್ತಿದ್ದೇನೆಂದು. ಈಗ ನಾನು ಏನು ಮಾಡಲಿ, ಎಲ್ಲಿಗೆ ಹೋಗಲಿ ? ಸರ್ಕಲ್ ಕಮಾಂಡರರು ಅಂದು ಬೆಂಗಳೂರಿನಲ್ಲಿ ಹೇಳಿದರು—ನಿನ್ನಂಥ ದಕ್ಷ ಕಮಾಂಡೆಂಟ್ ಇರುವುದರಿಂದ ಈ ಕ್ಯಾಂಪಿಗೆ ಅನುಮತಿ ಕೊಡುತ್ತಿದ್ದೇನೆ, ಎಂದು. ಅಂದಿನಿಂದಲೂ ನಾನು ನಿದ್ರೆಯನ್ನೇ ಮಾಡಲಿಲ್ಲ. ಈ ಕ್ಯಾಂಪು ಪರಿಷ್ಕಾರವಾಗಿ ನಡೆಯಬೇಕೆಂದು ಹಗಲೂ ರಾತ್ರಿಯೂ ದುಡಿದಿದ್ದೇನೆ. ಈಗ ಹೀಗಾಗಬೇಕೇ ? ಈಗ ಈ ಸುದ್ದಿ ಸುಳ್ಳೋ ನಿಜವೋ ನನಗೆ ತಿಳಿಸಿ ಸಹಾಯ ಮಾಡು ತ್ತೀರಾ ?"

ಮೈಸೂರಿನ ತುಕ್ಕಡಿಗಳ ಕಡೆಯಿಂದ ಒಬ್ಬ ಕ್ಯಾಡೆಟ್ ಹೊರ ಬಂದ. ತಮ್ಮ ಕಾಲೇಜಿನ ಒಬ್ಬ ಕ್ಯಾಡೆಟ್ ಈಗ ತಮ್ಮ ಗುಂಪಿನಲ್ಲಿ ಕಾಣುತ್ತಿಲ್ಲ ಎಂದ.

"ನೀನೇ ಬದಮಾಷ್ ! ನೀನೇ ಅವನನ್ನು ಹೊಳೆಗೆ ನೂಕಿ ಕೊಂದೆ—ಓ—ನನ್ನನ್ನೇ ಯಾಕೆ ನೀನು ಖೂನಿ ಮಾಡಿಬಿಡಬಾರದು" ಎಂದು ಹುಚ್ಚಾಬಟ್ಟೆ ಆರ್ಭಟಿಸುತ್ತ ಆ ಹುಡುಗನಿಗೆ ತಮ್ಮ ದಂಡದಿಂದ ನಾಲ್ಕೆಂಟು ಪೆಟ್ಟುಗಳನ್ನು ಹೊಡೆದರು. ಅವನು ಅಳುತ್ತ ಹಿಂದೆ ಸರಿದ.

ಅಂತೂ ಒಂದು ವಿಷಯ ಖಚಿತವಾಯಿತು. ಮೈಸೂರಿನ ಒಬ್ಬ ಕ್ಯಾಡೆಟ್ ಕಾಣು ತ್ತಿಲ್ಲ. ಅವನು ಕ್ಯಾಂಪಿಗೆ ಬಂದಿದ್ದುದು ಹೌದೆಂಬುದು ಪುರಾವೆಗಳಿಂದ ಸಿದ್ಧವಾಯಿತು. ಅವನ ಹೆಸರು ತಿಳಿದರು. ಧ್ವನಿವರ್ಧಕಗಳಲ್ಲಿ ಅವನನ್ನು ಕೂಗಿ ಕರೆದರು. ಕ್ಯಾಡೆಟು ಗಳನ್ನು ಎಲ್ಲ ಕಡೆಗಳಿಗೂ ವ್ಯವಸ್ಥಿತವಾಗಿ ಕಳಿಸಲಾಯಿತು—ಸಮೀಪದ ಕಾಕ ಅಂಗಡಿ

ಗಳಿಗೆ, ಕೆಲಸದ ಜಾಗಕ್ಕೆ, ಗುಡ್ಡ ಕಾಡುಗಳಿಗೆ. ಜಲಾಶಯದ ಸುತ್ತಲೂ ಗಸ್ತು ತಿರುಗಲು ಐವತ್ತು ಹುಡುಗರ ತಂಡವನ್ನು ಡ್ಯೂಟಿ ಆಫಿಸರರ ಹಿರಿತನದಲ್ಲಿ ನೇಮಿಸಲಾಯಿತು. ಆದರೆ ಹುಡುಗ ಸಿಗಲಿಲ್ಲ. ಕ್ಯಾಂಪಿಗೆ ಬಂದಿದ್ದ ಬ್ರಿಗೇಡ್ ಕಮಾಂಡರರು ಅಲ್ಲಿ ಇಲ್ಲಿ ತಿರುಗಿ ಈ ಗೊಂದಲ ನೋಡಿದರು, ಕ್ಯಾಂಪಿನಿಂದ ತೆಪ್ಪಗೆ ನಿಷ್ಕ್ರಮಿಸಿದರು. ಸರ್ಕಲ್ ಕಮಾಂಡರರು ಮಾತ್ರ ಹೋಗಲಿಲ್ಲ.

ಸಾಯಂಕಾಲವಾಯಿತು. ನೆರಳುಗಳು ಉದ್ದವಾದುವು. ಕರಾಳವಾದುವು. ಸಂಜೆ ಕವಿಯಿತು. ಚಳಿ ಜೋರಾಯಿತು. ಜಲಾಶಯದ ತಳ ಅದೆಷ್ಟು ಭಯಂಕರವಾಗಿರಬಹುದು. ಹೋದ ಹುಡುಗ ಮರಳಲಿಲ್ಲ.

ಮಿಂದದ್ದು ಹೌದಂತೆ. ಮೀಯುತ್ತಿದ್ದಾಗ ಓಕುಳಿ ಆಡಿದ್ದು ಹೌದಂತೆ. ದಂಡೆಯ ಒತ್ತಿಗೇ ನೀರಿನ ಅಂಚಿನಲ್ಲಿಯೇ ಆಡಿದ್ದಂತೆ. ಆಗ ಅವನಿಗೆ ಸಮತೋಲ ತಪ್ಪಿತಂತೆ. ಯಾರೋ ಅಂದರು ಏನಂತೆ ?

ನೀರಿಗೆ ಜಾರೀ ಬಿದ್ದನಂತೆ
ಹೆಚ್ಚೇನು ನೀರೂ ಇದ್ದಿಲ್ಲವಂತೆ
ನೀರಿಲ್ಲ ದಂಡೆಯಲಿ ಬರಿ ಕೆಸರಂತೆ
ಕೆಸರೊಳಗೆ ಕಾಲ್ಜಾರಿ ಉರುಳಿದನಂತೆ
ಉರುಳಿದ ಹುಡುಗನ್ನ ಕಾಣ್ನಿಲ್ಲವಂತೆ
ಯಾರೋ ಅಂದರು ಏನಂತೆ ?

ಕಾರಂತರ ಕ್ಷಮೆ ಕೋರಿ

ಕ್ಯಾಂಪಿನ ಜೀವ ಸ್ನಾನದ ಘಟ್ಟದಲ್ಲಿದೆ

ಆ ಮಧ್ಯರಾತ್ರಿಯಿಂದ ಮುಂದಿನ ಮಧ್ಯರಾತ್ರಿಯವರೆಗೆ ನಾನು ಡ್ಯೂಟಿ ಆಫಿಸರ್. ನನ್ನ ೪೮ರಲ್ಲಿ ೮ನ್ನು ಡೇರೆಗಳ ಉಸ್ತುವಾರಿಕೆಗೆ ಬಿಟ್ಟು ಉಳಿದ ೪೦ನ್ನು ಕ್ಯಾಂಪಿನ ವಿವಿಧ ಕರ್ತವ್ಯಗಳಿಗೆ ವಿಧಿಸಿದೆ. ಇವರಲ್ಲಿ ಪ್ರಮುಖರಾದ ೨೫ ಮಂದಿಯನ್ನು ಜಲಾಶಯದ ಸುತ್ತಲೂ ಪಹರೆಗೋಸ್ಕರ ಆರಿಸಿಕೊಂಡೆ. ನಾನೇ ಇವರ ನಾಯಕ. ಸ್ನಾನ ಮಾಡಲು ಆರಿಸಿದ್ದ ಸ್ಥಳದಿಂದ ಕೆಳಗೆ ಒಂದು ಫರ್ಲಾಂಗ್ ನಡೆದರೆ ಅಲ್ಲಿ ನದಿಯ ಕಟ್ಟೆಯೂ ಕಟ್ಟೆಯ ಮೇಲಿನ ದಾರಿಯೂ ಇದ್ದುವು. ಸ್ನಾನದ ದಂಡೆಯಲ್ಲಿ ಈ ದಾರಿಯವರೆಗೆ ನಡೆಯುವುದು, ಅಲ್ಲಿಂದ ಹೊಳೆಯನ್ನು ದಾಟಿ ಎದುರು ದಂಡೆಗೆ ಹೋಗುವುದು, ಮತ್ತೆ ಆ ದಂಡೆಯಲ್ಲಿ ಒಂದು ಫರ್ಲಾಂಗ್ ಮೇಲೆ ನಡೆಯುವುದು, ಮತ್ತೆ ಮರಳುವುದು ಇದು ನನ್ನ ಕಾರ್ಯಕ್ರಮ. ಸಹಾಯಕ ಕ್ಯಾಡೆಟುಗಳಿಗೆ ಬೇರೆ ಬೇರೆ ಖಂಡಗಳನ್ನು ನಿಯೋಜಿಸಿದ್ದೆ. ಜಲಾಶಯವನ್ನು ನೋಡುತ್ತ ತಿರುಗುವುದೇ ನಮ್ಮ ಕೆಲಸ—ಹೆಣ ಯಾವುದೇ ಗಳಿಗೆಯಲ್ಲಿ ಮೇಲೆ ಬರಬಹುದು ಎಂಬ ಭಾವನೆಯಿಂದ. ಇನ್ನು ಹಾಗೇನಾದರೂ ಬಾರದಿದ್ದರೆ. ಪೊಟರೆಗಳಲ್ಲಿ ಅದು ಸಿಕ್ಕಿಹಾಕಿಕೊಂಡಿದ್ದರೆ ದೇವರೇ ಗತಿ. ಅಲ್ಲಿ ಮುಳುಗಿ ಅರಸುವಂಥ ದಿಟ್ಟರು ಯಾರೂ ಇರಲಿಲ್ಲ. ನಮ್ಮ ಕ್ಷೋಭೆ ತಿಳಿಯದೇ ತಿಳಿದಿದ್ದರೂ ಅದನ್ನು ಲೆಕ್ಕಿಸದೇ ಹಕ್ಕಿಗಳು ಇಂಚರ ಶುರುಮಾಡಿದುವು. ಮೂಡಲಯ್ಯನ ಗಿರಿಯಾಚೆ ಹೊಂಬಣ್ಣ ಕಂಡಿತು. ಟಾರ್ಚ್ ಲೈಟುಗಳ ಪ್ರಕಾಶ ತಗ್ಗಿದ್ದು ಬ್ಯಾಟರಿಗಳ ಸಾಮರ್ಥ್ಯ

ಕುಂಗ್ಗಿದ್ದರಿಂದ ಅಲ್ಲ—ಮಹಾ ಟಾರ್ಚ್‌ಲೈಟು ಆಕಾಶದಲ್ಲಿ ಕ್ರಮೇಣ ಪ್ರತ್ಯಕ್ಷವಾಗುವ ಘಟನೆಯು ವೈಭವದಿಂದ. ನಮ್ಮ ಗಸ್ತು ಮುಂದುವರಿದಿತ್ತು. ಜಲಾಶಯ ಒಲಿಯಲಿಲ್ಲ. ಸ್ನಾನದ ದಂಡೆ ಮುಗಿಸಿದೆ. ಸೇತುವೆ ದಾಟಿದೆ. ಅಲ್ಲೆಲ್ಲೂ ಯಾವ ಸುಳಿವೂ ಇಲ್ಲ. ಎದುರು ದಂಡೆಗೆ ಹೋದೆ. ಮರಗಾಡಿನಿಂದ ಕೂಡಿದ ಇಳಿಜಾರು ಅದು. ಕುಂಟುತ್ತ ಜಾರುತ್ತ ಅಲ್ಲಿ ಮುಂದುವರಿದೆ. ದೃಷ್ಟಿ ಜಲಾಶಯದ ಮೇಲೆ—ಸ್ನಾನ ಪ್ರದೇಶದ ಮೇಲೆ ವಿಶೇಷ ಕೇಂದ್ರೀಕರಣ. ಮೂಕ ಜಲರಾಶಿ ಗುಟ್ಟು ಬಿಡಲಿಲ್ಲ. ಮೇಲಿನವರೆಗೂ ಹೋದೆ. ಈಗ ಬೆಳಕು ಪೂರ್ಣವಾಗಿ ಹರಿದಿತ್ತು. ದೂರದ ಚಡಾವಿನಲ್ಲಿ ಗೇರ್ ಬದಲಾಯಿಸಿ ಏರುತ್ತಿದ್ದ ಬಸ್ಸಿನ ನಿನಾದವನ್ನು ಕೇಳದಿರುವುದು ಸಾಧ್ಯವಾಗಲಿಲ್ಲ. ನಾನು ವಾಪಸ್ ಹೊರಟೆ. ಗಂಟೆ ೬-೩೦ ದಾಟಿತು. ಎದುರಿನಿಂದ ಓಡಿಬಂದ ನಮ್ಮ ಕ್ಯಾಡೆಟ್ ಒಬ್ಬ. ಚಕಿತನಾಗಿ ನೋಡಿದೆ—ಒಂದು ಗಳಿಗೆ ಅವನನ್ನು, ಒಂದು ಗಳಿಗೆ ನೀರನ್ನು.

"ಅಲ್ಲಿ ನೋಡಿ ಸಾರ್ ! ಏನೋ ತೇಲುತ್ತಿದೆ" ಅವನೆಂದ.

ಅವನು ತೋರಿಸಿದೆಡೆ ನಾನು ನೋಡಿದೆ. ನೀರಿನ ರಹಸ್ಯ ಬಯಲಾದದ್ದು ಗೊತ್ತಾಗಲಿಲ್ಲ. ಅದರ ಸಮೀಪದಂಚಿಗೆ ತ್ವರಿತಗತಿಯಿಂದ ನಡೆದೆ. ಹೌದು ಅಲ್ಲಿ ಒಂದು ವಸ್ತು ನಿಶ್ಚಲವಾಗಿ ನೀರಿನ ಮೇಲೆ ತೇಲುತ್ತಿದೆ. ಅದು ಏನು ? ಮರದ ದಿಮ್ಮಿಯೇ ? ಕಸದ ಮೊತ್ತವೇ ? ಜಲರಾಶಿಯ ಕ್ರೌರ್ಯದ ಪ್ರತೀಕವೇ ? ಕ್ಯಾಂಪಿಗೆ ಬಡಿದ ರಾಹುವೇ ? ಕ್ಯಾಂಪಿಗೆ ಸುದ್ದಿ ರವಾನಿಸಿದೆ. ಕಮಾಂಡೆಂಟರು ಓಡಿ ಬಂದರು. ಬೈನಾಕ್ಯುಲರ್ ಹಿಡಿದು ನೋಡಿದರು. ನಾನೂ ನೋಡಿದೆ. ತಲೆಯ ಕೂದಲಿನಂತೆ ಭಾಸವಾದದ್ದು ಕಲ್ಪನೆಯೋ ವಾಸ್ತವಿಕತೆಯೋ ತಿಳಿಯಲಿಲ್ಲ. ೯ ಗಂಟೆಯ ವೇಳೆಗೆ ದೋಣಿಯನ್ನು ಎಲ್ಲಿಂದಲೋ ತರಿಸಿದರು. ಅದರಲ್ಲಿ ಕುಳಿತು ಧೈರ್ಯಶಾಲಿಗಳಾದ ಅಂಬಿಗರು ಆ ಬಡಬಾನಲದ ಮೇಲೆ ತೇಲಿದರು. ದೋಣಿಗೆ ಎರಡು ದಂಡೆಗಳಿಂದಲೂ ಬಲವಾದ ಹಗ್ಗಗಳನ್ನು ಕಟ್ಟಿ ಬಿಲೇ ಮಾಡುತ್ತಿದ್ದೆವು. ತೆಪ್ಪಗಳನ್ನೂ ಸಿದ್ಧಪಡಿಸಿ ಇಡಲಾಗಿತ್ತು. ದೋಣಿ ಸಾಗಿತು ಮುಂದೆ ಹೋಯಿತು—ಗುರಿ ತೇಲುತ್ತಿದ್ದ ಅಸ್ಪಷ್ಟ ಗುರುತಿನೆಡೆಗೆ. ಅಂಬಿಗರು ಕೆಲಸದಲ್ಲಿ ಸಿದ್ಧಹಸ್ತರು. ಕಸದ ತಾಣವನ್ನು ಸೇರಿ ಅದರ ಮೇಲೆ ಕೈ ಆಡಿಸಿದರು—ಶ್ರಮವಹಿಸಿ ಬಗ್ಗಿ ಎತ್ತಿದರು—ಅದು ಮನುಷ್ಯ ದೇಹ ಹೌದು. ಹಿಂದಿನ ದಿವಸ ಲವಲವಿಕೆಯ ಚಟುವಟಿಕೆಯ ಮೂರ್ತಿ ; ಈಗ ಭಾರವಾದ ನಿರ್ಜೀವ ಕೊರಡು.

ದುಃಖಸಮುದ್ರವನ್ನು ದುರಂತ ವೈತರಣಿಯನ್ನು ದಾಟಿ ಬಂದರು ಅಂಬಿಗರು. Home they brought the warrior dead. ದಂಡೆಯ ಮೇಲೆ ಕ್ಯಾಂಪು ಮರಗಟ್ಟಿ ಸ್ತಂಭೀಭೂತವಾಯಿತು. ಯಾರು ಮಾತಾಡಬೇಕು ? ಏನು ಮಾತಾಡಬೇಕು ? ಹೇಗೆ ಮಾತಾಡಬೇಕು ? ಪೊಲೀಸರು ಡಾಕ್ಟರರು ನೆರೆದಿದ್ದರು. ಪೊಲೀಸ್ ಮಹಜರು, ಮರಣೋತ್ತರ ವೈದ್ಯಕೀಯ ಪರೀಕ್ಷೆ ಇವೆಲ್ಲ ಸರಕಾರದ ಕಡೆಯಿಂದ ನಡೆಯಲೇಬೇಕಾದ ಅನಿವಾರ್ಯ ವಿಧಿಗಳು. ಹುಡುಗನ ತಂದೆಗೆ ತಂತಿ ಕಳಿಸಿದರು. ಕ್ಯಾಂಪಿನ ಕಡೆಯಿಂದ Court of inquest ನಡೆಯಬೇಕಾದದ್ದು ಇನ್ನೊಂದು ವಿಧಿ. ಎನ್‌ಸಿಸಿ ಲಾರಿಯಲ್ಲಿ ಡಾಕ್ಟರರ ಪೊಲೀಸರ ಕಮಾಂಡೆಂಟರ ಸಮೇತ ಹೆಣ ಲಿಂಗನಮಕ್ಕಿಯ ಆಸ್ಪತ್ರೆಗೆ ಹೋಯಿತು. ಉಳಿದವರನ್ನು ಕ್ಯಾಂಪಿಗೆ ಕಳಿಸುವುದು ಡ್ಯೂಟಿ ಆಫಿಸರನಾದ ನನ್ನ

ದುಃಖಕರ ಕರ್ತವ್ಯ. ೧೧ ಗಂಟೆಯ ಸುಮಾರಿಗೆ ಕ್ಯಾಂಪಿಗೆ ಮರಳಿದ ಕಮಾಂಡೆಂಟರು ಅವರ ಆಫೀಸಿನಲ್ಲಿ ಅಧ್ಯಕ್ಷ ಸ್ಥಾನ ವಹಿಸಿದರು. ಉಪಮುಖ್ಯಸ್ಥರು (ಆರ್ಮಿ ಕ್ಯಾಪ್ಟನ್) ಜೆಸಿಓ ಮತ್ತು ಎನ್‌ಸಿಓಗಳೂ ಗುಮಾಸ್ತರೂ ಸೇರಿದರು. ನಮಗೆಲ್ಲ ತುಸು ದೂರದಲ್ಲಿ ನಿಂತಿರುವಂತೆ, ಕರೆದಾಗ ಬರುವಂತೆ, ಅಪ್ಪಣೆ ಆಯಿತು.

ಅಲ್ಲಿ ನಡೆದದ್ದೇನೆಂದು ನನಗೆ ಮುಂದೆ ಹಲವಾರು ತಿಂಗಳುಗಳ ತರುವಾಯ ತಿಳಿಯಿತು. ಕಾಗದಪತ್ರಗಳನ್ನು ದಾಖಲೆಗಳನ್ನು ಆರ್ಮಿ ನಿಯಮಾನುಸಾರ ಸರಿಪಡಿಸಲಾಯಿತು. ಅನುಕೂಲವಾಗುವಂತೆ ಸಾಕ್ಷಿ ಹೇಳಿಕೆಗಳನ್ನು ಸ್ಟಾಫುಗಳಿಂದ ವರದಿಮಾಡಿಕೊಳ್ಳಲಾಯಿತು. ಕಮಾಂಡೆಂಟರ ಘನ ಅಧ್ಯಕ್ಷತೆಯಲ್ಲಿ ಆ ವರಿಷ್ಠ ಸಮಿತಿ ೬ ಗಂಟೆಗಳ ಕಾಲ ಕೂಲಂಕಷವಾಗಿ ವಿಚಾರ ನಡೆಸಿ ಯುಕ್ತ ತೀರ್ಮಾನವನ್ನು ತಳೆಯಿತು—ಕ್ಯಾಂಪಿನ ನಿಯಮಗಳೆಲ್ಲವೂ ಬಿಗಿಯಾಗಿಯೂ ಖಚಿತವಾಗಿಯೂ ಬರಹ ಮೂಲಕವಾಗಿಯೂ ಇದ್ದರೂ ಅವು ಕ್ಯಾಂಪಿನ ಸಕಲರಿಗೂ ತಿಳಿದಿದ್ದು ಎಲ್ಲರೂ ಎಲ್ಲವನ್ನೂ ಶಿಸ್ತಿನಿಂದ ಪಾಲಿಸಿದ್ದರೂ ಮನುಷ್ಯಾತೀತ ಕಾರಣಗಳಿಂದ ಸಂಭವಿಸಿದ ಈ ದುರ್ಘಟನೆಗೆ ಯಾರೂ ಹೊಣೆಗಾರರಲ್ಲ.

ಮರುದಿವಸದ ಮುಂಜಾನೆ, ಗತಿಸಿದ ದುರ್ದೈವಿ ಬಾಲಕನ ವೃದ್ಧ ತಂದೆ ಕ್ಯಾಂಪಿಗೆ ಬಂದಾಗ, ನಾನು ನೋಡಿದ್ದೇನು ? "ನಿಮ್ಮ ಮಗನನ್ನು ಕೊಂದ ಪಾಪಿ ನಾನು. ನಾನು ಈ ಲೋಕದಲ್ಲಿ ಬದುಕಲು ಅರ್ಹನಲ್ಲ. ನನ್ನನ್ನು ಕೊಂದುಬಿಡಿ" ಎಂದು ಅವರ ಕೈಗೆ ಒಂದು ರೈಫಲನ್ನು ಕೊಟ್ಟು ಎದುರು ಎದೆಯೊಡ್ಡಿ ನಿಂತರಾ ಸಾಹೇಬರು. ಆದು ಕೆಂಪು ಬಿಳಿ ಬಟ್ಟೆಗಳಿಂದ ಕೂಡಿದ್ದ ರೈಫಲ್ಲೆಂಬುದು ನಮ್ಮ ಗಮನಕ್ಕೆ ಬರದಿರಲಿಲ್ಲ.

ಕ್ಯಾಂಪಿನ ಜೀವ ಸ್ನಾನದ ಘಟ್ಟದಲ್ಲಿದೆ ಎಂಬುದು ಈ ರೀತಿ ಪ್ರತ್ಯಕ್ಷವಾಗಿ ಪುರಾವೆಗೊಳ್ಳಬೇಕೇ ?

ತರಣಿ ತೊಲಗಿದ ಗಗನವೋ ಪಂ
ಕರುಹವಿಲ್ಲದ ಸರಸಿಯೋ ಕೇ
ಸರಿಯ ಲೀಲಾಳಾಪವಿಲ್ಲದ ಬಹಳ ಕಾನನವೋ
ಪರಮ ತತ್ತ್ವ ನಿಧಾನವರಿಯದ
ನರನ ವಿದ್ಯಾರಚನೆಯೋ ನಿ
ರ್ಭರ ಭಯಂಕರವಾಯ್ತು ಪಾಳಯವೆನುತ ಬರುತಿರ್ದ

ಕುಮಾರವ್ಯಾಸ

೧೯೫೯

ಕನಿಷ್ಠ ಮಟ್ಟಕ್ಕೆ ಇಳಿದ ಎನ್‌ಸಿಸಿ

ಲಿಂಗನಮಕ್ಕಿಯ ದುರಂತದ ಪ್ರತಿಧ್ವನಿ ರಾಜ್ಯದ ಎನ್‌ಸಿಸಿಯನ್ನು ಬುಡಮಟ್ಟ ಅಲುಗಿಸಿತು. ಕ್ಯಾಂಪುಗಳ ಆಡಳಿತೆ ಸರಿಯಾಗಿಲ್ಲ, ಅಲ್ಲಿ ಶಿಸ್ತುಭರಿತ ಶಿಕ್ಷಣವಾಗಲೀ ಯೋಗ್ಯ ಆಹಾರವಾಗಲೀ ಕ್ಯಾಡೆಟುಗಳಿಗೆ ಲಭಿಸುತ್ತಿಲ್ಲ, ಆರ್ಥಿಕ ಅವ್ಯವಹಾರಗಳು ವಿಪುಲವಾಗಿ ನಡೆಯುತ್ತಿವೆ ಎಂಬ ಮಾತು ಪ್ರಚಲಿತವಾಯಿತು. ಕ್ಯಾಂಪಿಗೆ ಬಂದಿದ್ದವರು ೪೦೦ ಆಗಿದ್ದು ಬರಬೇಕಾದವರು ೬೦೦ ಆಗಿದ್ದರೆ ಕಮಾಂಡೆಂಟರು ೬೦೦ ಜನರೂ ಬಂದಿದ್ದಾರೆಂದು ಲೆಕ್ಕಪತ್ರಗಳಲ್ಲಿ ನಮೂದಿಸಿ ಅಷ್ಟು ಜನರಿಗೆ ನಿಯಮಾನುಸಾರ ದೊರೆಯಬೇಕಾದ ಮೊಬಲಗನ್ನು ಸರಕಾರದಿಂದ ಪಡೆದು ಸುಳ್ಳು ಲೆಕ್ಕ ತೋರಿಸಿ ಲೆಕ್ಕಾಚಾರವನ್ನು ತಾಳೆ ಪಡಿಸುತ್ತಿದ್ದಾರೆ; ಹುಡುಗರಿಗೆ ಅರೆಹೊಟ್ಟೆ ಬಡಿಸಿ ಅಲ್ಲಿಯೂ ಅನ್ಯಾಯವೆಸಗುತ್ತಿದ್ದಾರೆ ಎಂದು ಮುಂತಾದ ಸುದ್ದಿಗಳು ಜನಜನಿತವಾದುವು.

ಇನ್ನು ಎನ್‌ಸಿಸಿ ಆಫಿಸರುಗಳ ಬುಡಕಟ್ಟು. ಪೆರೇಡ್ ಗ್ರೌಂಡಿಗೆ ಹೋಗುವುದು ಘನತೆಗೆ ಕಡಿಮೆ, ಎನ್‌ಸಿಸಿ ಪಾಠಗಳನ್ನು ಹುಡುಗರಿಗೆ ಬೋಧಿಸುವುದು ನಮ್ಮಂಥ ಮೇಧಾವಿಗಳು (ಅಕೆಡೆಮಿಕ್ಸ್) ಮಾಡುವ ಕೆಲಸವಲ್ಲ, ಎಲ್ಲ ಶಿಕ್ಷಣವನ್ನೂ ಆಡಳಿತೆಯನ್ನೂ ಕ್ಯಾಡೆಟು ಮುಂದಾಳುಗಳಿಗೂ ಆರ್ಮಿ ಸ್ಟಾಫುಗಳಿಗೂ ವಹಿಸಿ ಗೌರವಧನ ಮುಂತಾದ ಸವಲತ್ತುಗಳನ್ನು ತಾವು ಪಡೆಯಬೇಕಾದದ್ದು ಸರಿಯಾದ ಹಾಗೂ ನ್ಯಾಯವಾದ ಕ್ರಮವೆಂದು ಈ ಬುಡಕಟ್ಟು ಭಾವಿಸಿತು. ಯಥಾ ಓಸಿ ತಥಾ ಸೀಸಿ. ಮೇಲಧಿಕಾರಿಗಳನ್ನು ಓಲೈಸಿ ಪುಸಿಹೊಡೆದು ಅಲ್ಲಿ ದಾಖಲೆಗಳನ್ನು ನೆಟ್ಟಗಿಟ್ಟುಕೊಳ್ಳುವುದೊಂದೇ ಈ ವರ್ಗದವರ ಎನ್‌ಸಿಸಿ ಜೀವನದ ಪರಮ ಪುರುಷಾರ್ಥವಾಯಿತು. ಪ್ರಾಮಾಣಿಕ ಕೆಲಸ ಬೇಡವಾದ ಮತ್ತು ಒಲ್ಲದ ಯೂನಿಟ್ ಕಮಾಂಡರರಿಗೆ ಈ ಎನ್‌ಸಿಸಿ ಆಫಿಸರರು ಯೋಗ್ಯ ಶಿಷ್ಯರಾದರು. ಹುಡುಗರಿಗೆ ಕೊಡುವ ಉಪಾಹಾರ ಭತ್ಯದಲ್ಲಿ ಧೋಬಿ ಭತ್ಯದಲ್ಲಿ ಈ ಶಿಷ್ಯರು ಯಥೋಚಿತವಾಗಿ ಲಾಭ ಗಳಿಸಲು ಆರಂಭಿಸಿದರು. ಪೆರೇಡಿಗೆ ಬಂದವರು ೬೦ ಆಗಿದ್ದು ಹಾಜರಿ ಪಟ್ಟಿಯಲ್ಲಿ ಇರುವವರು ೧೦೦ ಆದರೆ ಎಲ್ಲರಿಗೂ ಹಾಜರಿ ಹಾಕಿ ಬಾರದ ೪೦ ಜನರಿಗೂ ಉಪಾಹಾರಭತ್ಯವನ್ನು ಸರಕಾರದಿಂದ (ಹೋಟೆಲುಗಳ ಮೂಲಕ) ಲಪಟಾಯಿಸುವುದು ಈ ಚೋರ ಶಿಷ್ಯರಿಗೆ (ವಿದ್ಯಾಗುರುಗಳಿಗೆ) ತಪ್ಪೆಂದು ಅನ್ನಿಸಲಿಲ್ಲ. ಪೆರೇಡ್ ನಡೆಯದಾಗಲೂ ನಡೆಯಿತೆಂದು ಕಾಗದ ಪತ್ರಗಳಲ್ಲಿ ನಮೂದಿಸುವುದು ಕೆಲವರಲ್ಲಿ ಒಂದು ಸಂಪ್ರದಾಯವೇ ಆಯಿತು! ಎನ್‌ಸಿಸಿ ಶಿಕ್ಷಣ ಐಚ್ಛಿಕವಾಗಿತ್ತು (೧೯೫೯). ಅದರಲ್ಲಿ B ಸರ್ಟಿಫಿಕೇಟ್ ಪರೀಕ್ಷೆ ಹಾಗೂ C ಸರ್ಟಿಫಿಕೇಟ್ ಪರೀಕ್ಷೆ ಎಂಬ ಎರಡು (C ದೊಡ್ಡದು) ಪರೀಕ್ಷೆಗಳನ್ನು ನಡೆಸುತ್ತಾರೆ. ಇವನ್ನು ಪಾಸು ಮಾಡಿದ ಕ್ಯಾಡೆಟುಗಳಿಗೆ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿಯೂ ಕಾಲೇಜು ಕ್ಲಾಸುಗಳಲ್ಲಿಯೂ ಹಲವಾರು ರಿಯಾಯಿತಿಗಳು ದೊರೆಯುತ್ತಿದ್ದುವು. ಆದರೆ ಗುರುಶಿಷ್ಯರ ದರೋಡೆಯು

ಪರಿಣಾಮವಾಗಿ ಈ ಪರೀಕ್ಷೆಗಳು ಅಣಕು ನಾಟಕಗಳಾದುವು. ಪರೀಕ್ಷೆಗೆ ಕೂರದವರಿಗೂ (ಇತರ ಕಾರಣಗಳಿಂದ) ಪ್ರಥಮ ದರ್ಜೆ ದೊರೆಯುವುದು ಸುಲಭವಾಯಿತು. ವಿಶ್ವ ವಿದ್ಯಾಲಯಗಳು ರಿಯಾಯಿತಿಗಳನ್ನು ಮನ್ನಾ ಮಾಡಿದುವು. ಹುಡುಗರಲ್ಲಿ ಎನ್‌ಸಿಸಿ ಯನ್ನು ಕುರಿತು ಆಸಕ್ತಿ ಕುಂದಿತು. ಕುಂದಿತು, ಉಪಾಹಾರದ ಪೆರೇಡ್ ಎಂದೇ ಎನ್‌ಸಿಸಿಯ ಶಿಕ್ಷಣವನ್ನು ಕರೆಯುವಂಥ ದುರವಸ್ಥೆ ಈ ರಾಷ್ಟ್ರೀಯ ಯುವಜನ ಸಂಸ್ಥೆಗೆ ಪ್ರಾಪ್ತ ವಾದದ್ದರಲ್ಲಿ ಎನ್‌ಸಿಸಿ ಆಫಿಸರುಗಳ ಕೊಡುಗೆಯಾಗಲೀ ಪಾತ್ರವಾಗಲೀ ಕಡಿಮೆಯದಲ್ಲ. ಎನ್‌ಸಿಸಿಗೆ ಹುಡುಗರು ಸೇರದಿದ್ದರೆ ತಮ್ಮ ಕೊಳ್ಳಿ ತಪ್ಪಿಹೋಗುವುದಲ್ಲ ಎಂದು ವರ್ಷದ ಆರಂಭದಲ್ಲಿ ಆಫಿಸರುಗಳು ಬಲು ಚಟುವಟಿಕೆಯಿಂದ ಹುಡುಗರನ್ನು ಪುಸಲಾಯಿಸಿ ಆಮಿಷ ತೋರಿಸಿ ಬೇಕಾದ ಕಾಗದ ಪತ್ರಗಳಿಗೆ ಅವರಿಂದ ರುಜು ಹಾಕಿಸಿಕೊಳ್ಳುತ್ತಿದ್ದರು. ಕಾಲೇಜು ತರಗತಿಗಳಲ್ಲಿ ಇದೇ ಗುರುಗಳ ಕೆಳಗೆ ಆ ಹುಡುಗರು ಬದುಕಿ ಉತ್ತೀರ್ಣರಾಗ ಬೇಕಷ್ಟೆ. ಮುಂದೆ ಅವರು ಪೆರೇಡುಗಳಿಗೆ ಬಂದರೂ ಬರದಿದ್ದರೂ ಆಫಿಸರರಿಗೆ ಅದರ ಗೊಡವೆ ಇಲ್ಲ. ಕಾಗದ ಪತ್ರಗಳನ್ನು ಚೊಕ್ಕಟವಾಗಿಟ್ಟುಕೊಂಡರೆ ಸಾಕು ತಾನೆ !

ಡ್ರಿಲ್ಲು ಪೆರೇಡೆನ್ನುತ ಗೋಗರೆಯುವು
ದೇತಕೆ ? ದಾಖಲೆ ಸರಿಯಿರಲಿ
ತೊರೆಯಲಿ ಹೋಮವಮಾಡುವ ಬಾನಲಿ
ಗೋಪುರ.ಕಟ್ಟುವಕ್ಷಿಧೃತಿಯಿರಲಿ !

ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿಯ ನಾವು ಅದೃಷ್ಟವಂತರು. ನಾವು ಮೂವರು ಆಫಿಸರರೂ ನಮ್ಮ ಓಸಿ ಕ್ಯಾಪ್ಟನ್ ರಾಯಪ್ಪನ್ ಅವರೂ ಸಮಾನ ಮನೋಧರ್ಮದ ವರು. ಹೀಗಾಗಿ ನಮ್ಮಲ್ಲಿ ಬಿಡುದಿವಸಗಳ ಶಿಕ್ಷಣವಾಗಲೀ ಕ್ಯಾಂಪಿನ ಚಟುವಟಿಕೆಗಳಾಗಲೀ ಲೆಕ್ಕ ಪತ್ರಗಳಾಗಲೀ ಯಾವ ತೊಂದರೆಯೂ ಇಲ್ಲದೇ ಹಗಲು ಬೆಳಕಿನಷ್ಟು ನಿಚ್ಚಳವಾಗಿ ನಡೆದುಕೊಂಡು ಹೋದುವು. ಇದೇ ವೇಳೆಗೆ ಸರ್ಕಲ್ ಕಮಾಂಡರರಾಗಿ ಬಂದವರು ಲೆಫ್ಟಿನೆಂಟ್ ಕರ್ನಲ್ ಬಿ. ಕೆ. ಸೋಮಯ್ಯನವರು. ಎಂಆರ್‌ಸಿಯಲ್ಲಿ ನಾನು ಶಿಕ್ಷಣ ಪಡೆಯುತ್ತಿದ್ದಾಗ ಉಪಮುಖ್ಯಸ್ಥರಾಗಿದ್ದವರು ಇವರೇ. ನನ್ನ ಚಿಕ್ಕಪ್ಪ ಇವರ ಸಹ ಪಾಠಿ ಹಾಗೂ ಮಿತ್ರ. ಕ್ಯಾಪ್ಟನ್ ರಾಯಪ್ಪನ್ ಸಹ ಮದರಾಸು ರೆಜಿಮೆಂಟಿನವರೇ. ಹೀಗೆ ಹಲವಾರು ಕಾರಣಗಳಿಂದ ಸೋಮಯ್ಯನವರಿಗೆ ನಮ್ಮ ಯೂನಿಟ್ಟಿನ ಮೇಲೆಯೂ ನಮ್ಮೆಲ್ಲರ ಮೇಲೆಯೂ ವಿಶೇಷ ಅಭಿಮಾನ, ಪ್ರೀತಿ. ಅತ್ಯಂತ ದಕ್ಷರು ಶಿಸ್ತುವಂತರು ಎಂದು ಹೆಸರಾದ ಇವರ ಅಭಿಮಾನಕ್ಕೆ ನಾವು ಅರ್ಹತೆ ಪಡೆದವರಾಗಿರಬೇಕು ; ನಮ್ಮ ವರೇ ಈಗ ಸರ್ಕಲ್ ಕಮಾಂಡರರಾಗಿರುವಾಗ ನಾವು ಇನ್ನಷ್ಟು ಮುತುವರ್ಜಿಯಿಂದ ಕೆಲಸ ಮಾಡಬೇಕು ಎಂದು ಕೊಂಡೆವು. ಸೋಮಯ್ಯನವರಿಗೆ ಉಪಮುಖ್ಯಸ್ಥರಾಗಿ ಕೊಡಗಿನವರೇ ಆದ ಮೇಜರ್ ಕೆ. ಎಂ. ಮುತ್ತಪ್ಪನವರು ದೊರೆತದ್ದು ಇನ್ನೊಂದು ಅದೃಷ್ಟ. ಅಪಾರ ಲೋಕ ಪ್ರಜ್ಞೆ, ಕರ್ತೃತ್ವ ಶಕ್ತಿ ಪಡೆದಿದ್ದ ಮುತ್ತಪ್ಪನವರು ಮೈಸೂರು ರಾಜ್ಯದ ಎನ್‌ಸಿಸಿಯ ಬೆನ್ನು ಮೂಳೆ ಎಂದು ಮುಂದಿನ ದಿನಗಳಲ್ಲಿ ಹೆಸರು ಗಳಿಸಿದರು. ಸೋಮಯ್ಯನವರು ಮಹಾಶಕ್ತಿಯ ಪ್ರತಿಷ್ಠಿತಮೂರ್ತಿಯಾದರೆ ಮುತ್ತಪ್ಪ ನವರು ಅದೇ ಶಕ್ತಿಯ ಉತ್ಸವ ಮೂರ್ತಿಗಳಾದರು. ಈ ಯುಗ್ಮ ಮೈಸೂರು ರಾಜ್ಯದ

ಎನ್‌ಸಿಸಿಯು ಹಿರಿತನವನ್ನು ವಹಿಸಿಕೊಂಡದ್ದು ಎನ್‌ಸಿಸಿಯ ಧೃತಿ ಮತ್ತು ಅದನ್ನು ಕುರಿತು ಸಾರ್ವಜನಿಕಾಭಿಪ್ರಾಯ ಅತ್ಯಂತ ಕನಿಷ್ಠ ಮಟ್ಟದಲ್ಲಿದ್ದಾಗ. ಇಂಥ ಪರಿಸ್ಥಿತಿ ಯಾರಿಗೂ ಪ್ರಿಯವಲ್ಲ. ಆದರೆ ದೇಶದ ಕಾರ್ಯ ವ್ಯಕ್ತಿಗಳ ಪ್ರಿಯಾಪ್ರಿಯಗಳನ್ನು ವಿಚಾರಿಸುವುದೇ ? ಎಲ್ಲ ಯೂನಿಟ್ಟುಗಳ ಬಿಡುದಿವಸಗಳ ಶಿಕ್ಷಣ ಕಾರ್ಯಕ್ರಮವನ್ನು ಬೆಂಗಳೂರಿಗೆ ಒಂದು ತಿಂಗಳ ಮೊದಲೇ ರವಾನಿಸಬೇಕು ; ಎನ್‌ಸಿಸಿ ಹಾಜರು ಪುಸ್ತಕ ಗಳಿಗೆ ಪ್ರತಿ ಪೆರೇಡಿನ ಅನಂತರವೂ ಕಾಲೇಜು ಪ್ರಿನ್ಸಿಪಾಲರಿಂದ ದಸ್ಕತು ಪಡೆದುಕೊಳ್ಳ ಬೇಕು ಮುಂತಾದ ಸುಧಾರಣೆಗಳನ್ನು ತಂದರು. ಬೆಂಗಳೂರಿನಿಂದ ಅನಿರೀಕ್ಷಿತವಾಗಿ ಅಧಿಕಾರಿಗಳು ವಿವಿಧ ಯೂನಿಟುಗಳಿಗೆ ಭೇಟಿ ನೀಡಿ ಅವುಗಳ ಆಡಳಿತೆಯನ್ನೂ ಶಿಕ್ಷಣ ವಿಧಾನಗಳನ್ನೂ ಸರಿಯಾದ ಕಂಬಿಗಳ ಮೇಲೆ ಕೂರಿಸಿ ಮುನ್ನೂಕಿದರು. ಆರ್ಮಿ ಆಫಿಸರುಗಳ ಹಾಗೂ ಸ್ಟಾಫುಗಳ ವಿಷಯದಲ್ಲಿ ಆರ್ಮಿ ನಿಯಮಾವಳಿಗಳನ್ನು ಕಟ್ಟು ನಿಟ್ಟಾಗಿ ನಿಷ್ಠುರದಿಂದ ರೂಢಿಗೆ ತಂದರು. ಕೆಲಸಗಳ್ಳ ಅಪ್ರಾಮಾಣಿಕ ಎನ್‌ಸಿಸಿ ಆಫಿಸರುಗಳನ್ನು ತರಾಟೆಗೆ ತೆಗೆದುಕೊಂಡು ಇಡೀ ಸಂಸ್ಥೆಯಲ್ಲಿ ನವಚೈತನ್ಯ ಪ್ರವಹಿಸು ವಂತೆ ಮಾಡಲು ಸೋಮಯ್ಯನವರು ಶ್ರಮಿಸಿದರು.

ಕೈ ಕೊಟ್ಟ ಗಡಿಯಾರ

೧೯೫೯ರ ಡಿಸೆಂಬರ್ ಕ್ಯಾಂಪಿನ ಸ್ಥಳವನ್ನು ಆರಿಸುವ ಹೊಣೆ ಬಾಳಿಗ, ಕೃಷ್ಣಯ್ಯ ಮತ್ತು ನನ್ನ ಮೇಲಿತ್ತು. ರಾಯಪ್ಪನ್ ವಾರ್ಷಿಕ ರಜೆಯಲ್ಲಿ ಊರಿಗೆ ಹೋಗಿದ್ದರು. ಕೂಡಿಗೆ ಸಮೀಪದ ಕಾಡಿನ ನಡುವಿನ ಮದಲಾಪುರದ ಬಯಲನ್ನು ನಾವು ಆರಿಸಿದೆವು. ಕಾಲುವೆ ನೀರು ಅಲ್ಲಿ ಸಮೃದ್ಧವಾಗಿತ್ತು. ರಾಜಮಾರ್ಗದಿಂದ ಅರ್ಧ ಮೈಲಿ ಮಾತ್ರ ಈ ಸ್ಥಳಕ್ಕೆ. ಇಲ್ಲಿವರೆಗೂ ಲಾರಿಗಳು ಬಸ್ಸುಗಳು ಬರಲು ದಾರಿ ಇತ್ತು. ರಾಯಪ್ಪನ್ ಈ ಜಾಗವನ್ನು ಬಲುವಾಗಿ ಮೆಚ್ಚಿಕೊಂಡರು. ಅತ್ಯಂತ ಆಕರ್ಷಣೀಯವಾದ ಕ್ಯಾಂಪು ನಕಾಶೆ ತಯಾರು ಪಡಿಸಿದರು. ಸದ್ದುಗದ್ದಲವಿಲ್ಲದೇ ಹಿಂದಿನ ಅನುಭವಗಳಿಂದ ಇನ್ನಷ್ಟು ಪರಿಷ್ಕರಣ ಗೊಂಡು ನಮ್ಮ ಕ್ಯಾಂಪನ್ನು ಆರಂಭಿಸಿದೆವು. ಸೋಮಯ್ಯನವರು ಬಂದು ಎರಡು ದಿನ ನಮ್ಮೊಡನೆ ಯಾವ ಕೋಲಾಹಲವೂ ಇಲ್ಲದೇ ಉಳಿದಿದ್ದರು. ಲೆಕ್ಕಪತ್ರಗಳನ್ನೂ ದಾಸ್ತಾನುಗಳನ್ನೂ ವಾಸ್ತವಿಕ ವ್ಯವಹಾರಗಳನ್ನೂ ಕೂಲಂಕಷವಾಗಿ ಪರಿಶೀಲಿಸಿದರು, ಸೂಚನೆಗಳನ್ನು ನೀಡಿದರು. "ಆತ್ಮಪ್ರಶಂಸೆ ಮತ್ತು ಪ್ರಚಾರ ಇಲ್ಲದಿರುವುದೊಂದೇ ಈ ಕ್ಯಾಂಪಿನ ಕೊರತೆ" ಎಂದು ಅವರು ಹೇಳಿದರು. ನಾವು ನಕ್ಕೆವು.

ಸಂಜೆ ಅವರು ಮೈಸೂರಿಗೆ ಮರಳುವವರು. ಅದರ ಮೊದಲು ೩ ಗಂಟೆಗೆ ಕ್ಯಾಡೆಟು ಗಳನ್ನು ತಾವು ಸಾಮೂಹಿಕವಾಗಿ ನೋಡಿ ಮಾತಾಡುವುದಾಗಿ ನನಗೆ (ಕ್ಯಾಂಪಿನ ಆಡಳಿತಾ ಧಿಕಾರಿ) ಹೇಳಿದರು. ಊಟಕ್ಕೆ ಹುಡುಗರು ಬರುವುದು ೧ ಗಂಟೆಗೆ. ೨–೩೦ ಗಂಟೆ ಹೊತ್ತಿಗೆ ಅವರೆಲ್ಲರೂ ಡೇರೆಗಳ ಮುಂದೆ ಸಿದ್ಧರಾಗಿ ಮಾರ್ಚ್ ಮಾಡಿ ಬಂದು ಶಿಕ್ಷಣ ರಂಗದಲ್ಲಿ ೨–೪೫ಗಂಟೆಗೆ ಹಾಜರಾಗಬೇಕು ಎಂದು ಹುಕುಮಿಸಿದ್ದೆ. ಎಲ್ಲರ ಊಟವಾದ ಮೇಲೆ ನಾನು ಊಟ ಮಾಡುತ್ತಿದ್ದುದು ವಾಡಿಕೆ. ೨ ಗಂಟೆಗೆ ಸಾಮಾನ್ಯವಾಗಿ ನನ್ನ ಊಟವೂ ಮುಗಿಯುತ್ತಿತ್ತು. ಆದರೆ ಈ ದಿವಸ ಬಲು ತಡವಾಗಿರಬೇಕು. ೨–೨೦

ದಾಟಿ ಹೋಗಿತ್ತು. ಗಬಗಬನೆ ಮುಕ್ಕಿದೆ. ಹುಡುಗರ ಟೆಂಟುಗಳ ಕಡೆಗೆ ಓಡಿದೆ—ಯಾರೂ ಹೊರಡುವ ಆತುರದಲ್ಲಿದ್ದಂತೆ ಕಾಣಲಿಲ್ಲ. ಬಿಗಿಲೂದಿದೆ—ಸೀನಿಯರುಗಳನ್ನು ಕರೆದು "ಸರ್ಕಲ್ ಕಮಾಂಡರರು ನಿಮ್ಮನ್ನು ಈ ಕ್ಷಣ ನೋಡುವವರಿದ್ದಾರೆ. ತಡವಾಗಿ ಹೋಯಿತು. ಹೊರಡಿ" ಎಂದು ಅಬ್ಬರಿಸಿದ. ಒಂದು ಕ್ಷಣದಲ್ಲಿ ಇಡೀ ಕ್ಯಾಂಪು ಹುಣ್ಣಿಮೆ ರಾತ್ರಿಯ ಸಮುದ್ರವಾಯಿತು. ೧,೦೦೦ ಹುಡುಗರನ್ನು ಕ್ರಮಬದ್ಧವಾಗಿ ತರುವುದೇನೂ ಹುಡುಗಾಟವಲ್ಲ. ಅವರ ಉಡುಪುಗಳೂ ಸರಿಯಾಗಿರಲಿಲ್ಲ. ೨-೪೫ ದಾಟಿತು. ಇನ್ನೂ ಹುಡುಗರು ಟೆಂಟುಗಳ ಮುಂದೆ ಕಲೆಯುತ್ತಿದ್ದಾರೆ. ನನ್ನ ಆರ್ಭಟೆ ಹೆಚ್ಚಾಯಿತು. ಬಾಳಿಗರೂ ಕೃಷ್ಣಯ್ಯನವರೂ ಜೂನಿಯರ್ ಡಿವಿಶನ್ ಆಫಿಸರರೂ ಓಡಿಯಾಡಿದರು. ಪೆರೇಡ್ ಓಡಿ ಓಡಿ ಬಂದು ಸಂಗವಿಸಿತು. ಮುಂದಿನ ೫ ಮಿನಿಟುಗಳಲ್ಲಿ ಪವಾಡವನ್ನೇ ಮಾಡಿದೆವು. ಪೆರೇಡನ್ನು ಓರಣವಾಗಿ ನಿಲ್ಲಿಸಿ ಅದರ ವರದಿಯನ್ನು ಕ್ಯಾಪ್ಟನ್ ರಾಯಪ್ಪನ್‌ರಿಗೆ ೩ ಗಂಟೆಗೆ ಸರಿಯಾಗಿ ಒಪ್ಪಿಸಿದೆ. ಬಚಾವ್ ಮಾನ ಉಳಿಯಿತ್ತು ಎಂದುಕೊಂಡೆ. ಸರ್ಕಲ್ ಕಮಾಂಡರರನ್ನು ಒಡಗೂಡಿ ಗೌರವಪೂರ್ವಕವಾಗಿ ಕರೆದು ತರಲು ಸುಂದುರನಾದ ಕ್ಯಾಡೆಟನ್ನು ಅವರ ಟೆಂಟಿಗೆ ಕಳಿಸಿದೆವು. ಅವರಿಗೂ ಪೆರೇಡಿನ ಆಜ್ಞೆ ಕೇಳಿಸಿತ್ತಷ್ಟೆ. ಅವರು ದೂರದಿಂದ ಅದನ್ನು ನೋಡಿ ಓಡಿ ಓಡಿ (ಕಮಾಂಡರರೆಂದಾದರೂ ಓಡುವುದುಂಟೇ ? ತಡವಾಗಬಾರದಷ್ಟೆ ?) ಬಂದರು. ರಾಯಪ್ಪನ್ ಸೋಮಯ್ಯನವರಿಗೆ ವರದಿ ಒಪ್ಪಿಸುವಾಗ ನನ್ನ ವಾಚಿನಲ್ಲಿ ೩-೦೫ ಆಗಿತ್ತು. "ಈ ಪೆರೇಡ್ ೩ ಗಂಟೆಗೆ ಎಂದು ನಾನು ಹೇಳಿದ ನೆನಪು" ಎಂದರು ಸೋಮಯ್ಯನವರು ರಾಯಪ್ಪನ್‌ರಿಗೆ. ನನಗೆ ಅದು ಕೇಳಿಸಿತು.

"ನೀವೇನು ಹೇಳುತ್ತೀರಿ ರಾವ್ ?" ನನ್ನೆಡೆಗೆ ರಾಯಪ್ಪನ್ ತಿರುಗಿ ಪ್ರಶ್ನಿಸಿದರು

"ಹೌದು ಸಾರ್ ! ಈಗ ೩-೦೫ ಆಯಿತಷ್ಟೆ !" ನಾನೆಂದೆ. ವಾಚ್ ತೋರಿಸಿದೆ.

"ಜೀಟ ! ನಿಮ್ಮ ವಾಚ್ ಕೈಕೊಟ್ಟಿದೆ. ಈಗ ಕಾಲ ೨-೩೫" ಎಂದರು ಸರ್ಕಲ್ ಕಮಾಂಡರರು.

ನಿಶಾನಿ ಮೊಟ್ಟೆಯನ್ನೇರಿದೆವು

ನಮ್ಮ ಕಾಲೇಜಿನ ಎದುರಿನ ಹಸುರು ದಿಬ್ಬದ ಮೇಲಿನ ಬಯಲಿಗೆ ಪೆರೇಡ್ ಗ್ರೌಂಡ್ ಎಂದು ಹೆಸರು. ಒಂದು ಕಾಲದಲ್ಲಿ ರಾಜನ ಸೈನ್ಯಗಳು ಇಲ್ಲಿ ಕವಾಯತಿ ಮಾಡಿ ಈ ನೆಲವನ್ನು ಸಪಾಟು ಮಾಡಿದುದರಿಂದ ಮುಂದೆ ಬಂದ ವಿಲಾಯತೀ ವಿದ್ಯೆಯ ಪ್ರಭಾವದಿಂದ ಇದಕ್ಕೆ ಪೆರೇಡ್‌ಗ್ರೌಂಡ್ ಎಂಬ ಪವಿತ್ರ ನಾಮಧೇಯ ಲಭಿಸಿತು. ಸಾಮಾನ್ಯರಿಗೆ ಅರ್ಥವಾಗದ ಅವರ ನಾಲಗೆಗಳು ಗಿರಕಿಸದ ಪ್ರಯೋಗದ ಕುರುಹಷ್ಟೆ ! ರಾಜ ಹೋದ; ಆಂಗ್ಲ ಪ್ರಭು ಆಗಮಿಸಿದ. ಆತನ ಸೈನಿಕರು ಬೇಸಗೆಯಲ್ಲಿ ಮಡಿಕೇರಿಯಲ್ಲಿ ಬಿಡಾರ ಹೂಡಿದಾಗ ಇದೇ ಬಯಲು ಅವರ ಕವಾಯತಿಗಳಿಗೂ ಯೋಗ್ಯ ಆಸರೆ ಆಯಿತು. ಈಗ ಅದರ ಆಂಗ್ಲನಾಮ ಸಾರ್ಥಕ ಎನ್ನಿಸಿತು. ಶಾಂತಿ ಶಿಸ್ತುಪ್ರಿಯರಾದ ಕೊಡಗಿನ ಮಹಾಜನತೆಯ ಮುಂದೆ ಈ ಸೈನ್ಯಗಳ ದರ್ಪ ಪ್ರದರ್ಶನ ಅನಾವಶ್ಯಕವಾದ್ದರಿಂದ ಸೈನಿಕರ ಶಿಬಿರಗಳು ನಡೆಯಲಿಲ್ಲ. ಮಿಲಿಟರಿ ಪೆರೇಡ್ ಗ್ರೌಂಡ್ ಅದರ ವರ್ಚಸ್ವೀ ಮಿಲಿಟರಿ ಶಿರ

ವನ್ನು ಕಳೆದುಕೊಂಡು ಎರಡನೆ ದರ್ಜೆಯ (ಖಾಲಿ) ಪೊಲೀಸ್ ಪೆರೇಡ್‌ಗ್ರೌಂಡ್ ಆಗಿ ನುಸಳಿತು. ಊರವರ ಬಾಯಲ್ಲಿ ಇದು ಪೆರೇಡ್ ಗ್ರೌಂಡ್. ನಮ್ಮ ಚಿಕ್ಕಂದಿನ ದಿನಗಳಲ್ಲಿ ಪೆರೇಡ್ ಪದದ ಉಚ್ಚಾರಣೆ ಸರಿಯಾಗಿ ಕೇಳಿಸದೆ ಅಥವಾ ತಿಳಿಯದೆ ಅದರ ಉಚ್ಚಾರಣೆ ಸಮೀಪ ಸಂಬಂಧಿಯಾದ ಪೇರೆಲ್ ಪದ ಆ ಸ್ಥಾನವನ್ನು ಆಕ್ರಮಿಸಿತ್ತು. ಅಂದು ಕನ್ನಡಾಭಿಮಾನಿಗಳಾದ ನಾವು ಕೆಲವರು ಪೇರಟ್ ಪದವನ್ನು ಕನ್ನಡಿಸಿ ಈ ಹಸುರಿನ ಹಾಸನ್ನು ಗಿಳಿಬಯಲೆಂದೇ ಕರೆದದ್ದು ಉಂಟು. "ಗಿಳಿಯು ಕಂಡಿರಾ ?" ಎಂದು ಈ ಬಯಲಿನಲ್ಲಿ ಅರಸಿದ್ದು ಸಹ ಇತ್ತು.

ಆ ದಿನಗಳಲ್ಲಿ ಪೆರೇಡ್ ಗ್ರೌಂಡ್ ಮಡಿಕೇರಿಯ ಗಡಿ. ಈ ಗಡಿ ಪಾರಾದರೆ ಗಾಳಿಬೀಡಿನ ಸಂಗ್ರಾಮ—ಇಲ್ಲಿ ಈಗ ನಮ್ಮ ಕಾಲೇಜಿದೆ. ಸುತ್ತಲಿನ ಹರವಿನಲ್ಲಿ ಮನೆಗಳು ಅಧಿಕ ಸಂಖ್ಯೆಯಲ್ಲಿ ಹಬ್ಬಿವೆ—ಬೆಳೆದಿದೆ ನೋಡಾ ಮಡಿಕೇರಿ ನಗರ ! ೨೦,೦೦೦ ಮಂದಿ ಒಂದೇ ವೇಳೆ ಹಿಡಿಸಬಹುದಾದ ಹಸುರು ಸಮತಳ ಬಯಲು. ಸುತ್ತಲೂ ನೆಲ ಇಳಿದಿಳಿದು ಹರಡಿಹೋಗುತ್ತದೆ. ಇದಕ್ಕಿಂತ ಎತ್ತರ ಸುದೂರದಲ್ಲಿ ಸುತ್ತಲೂ ಅಂಕುಡೊಂಕಾಗಿ ಕೋಟೆ ಕೊತ್ತಳಗಳಂತೆ ನಿಂತಿರುವ ಬೆಟ್ಟದ ರಾಶಿಗಳು. ಒಂದು ದೊಡ್ಡ ಬೋಗುಣಿ, ಅದರ ನಡುವೆ ಒಂದು ಗುಬಳೆ—ಈ ರೀತಿ ಇದೆ ಪೆರೇಡ್ ಗ್ರೌಂಡಿನ ವಿನ್ಯಾಸ. ಮಳೆಗಾಲ ಚಳಿಗಾಲ ಎಂಬ ವ್ಯತ್ಯಾಸವಿಲ್ಲದೇ ನಮ್ಮೂರ ಹುಡುಗರಿಗೆ ಇದು ಆಟದ ಬಯಲು. ಇಲ್ಲಿ ಆಡಿದ ಹಾಕಿ, ಚಿಣ್ಣಿಕೋಲು, ರೌಂಡ್‌ರೇಸ್, ಕಾಲ್ಚೆಂಡು, ಗುಮ್ಮ ಹಿಡಿಯುವುದು ಮುಂತಾದ ಆಟಗಳೆಷ್ಟೋ, ಉರುಳಿದ ತಂಡಗಳೆಷ್ಟೋ, ನಡೆದ ಪೊಲೀಸ್ ಕವಾಯತಿಗಳೆಷ್ಟೋ ಆ ಹಸುರೇ ಅರುಹಬೇಕಷ್ಟೆ. ಚೈತನ್ಯ ಸಮುದ್ರದ ನಡುವಿನ ದ್ವೀಪ ಈ ಬಯಲು. ಇಲ್ಲಿ ನಿಂತರೆ ಆ ಚೈತನ್ಯ ನಮ್ಮ ಧಮನಿ ಧಮನಿಗಳಲ್ಲೂ ತುಂಬಿ ಮಿಡಿದು ಬಿರಿದು ಪ್ರವಹಿಸಿ ನಮಗೆ ಹೊಸತನ ಪ್ರಾಪ್ತವಾಗುವುದು. ಪೇಟೆಯ ಹರಟೆ ಇಲ್ಲಿಲ್ಲ. ನಾಗರಿಕತೆ ವಿಧಿಸುವ ಮನೆಗಳ ಸಾಲುಗಳ ನೀರಸ ಪುನರಾವರ್ತನೆ ಇಲ್ಲಿ ಕಾಣಿಸದು. ಲೋಕದ ಡೊಂಕನ್ನು ತಿದ್ದುವ ಸ್ವಯಂನೇಮಿತ ವ್ಯರ್ಥಕಾಲ ಹರಣಿಗಳು ಈ ದೂರದ ಚಳಿಯ ಹುದರಕ್ಕೆ ಬರುವ ಭೀತಿ ಖಂಡಿತ ಇಲ್ಲ. ಇನ್ನು ಆವರೇ ? ಹೊಸ ಹರೆಯದ ಪ್ರತೀಕ ಜೋಡಿಗಳೇ ? ನಾಗರಿಕತೆಯ ಈ ಅನಿವಾರ್ಯ ಘಟಕ ಆಶಿಸುವ ಹೆಚ್ಚಿನ ಗೋಪ್ಯ ಇಲ್ಲಿ ದೊರೆಯದ್ದರಿಂದ (ಬಯಲಲ್ಲೇನು ಬಂತು ಗುಟ್ಟು ?) ಅದು ರಾಜಾಸೀಟಿನ ಪರಿಸರಕ್ಕೆ ಸೀಮಿತವಾಗಿತ್ತು. ಆದ್ದರಿಂದ ಶಾಂತಿ ಬೇಕೇ, ಚೈತನ್ಯ ಒದಗಿಸುವ ಕಾಯಕಲ್ಪ ಬೇಕೇ, ಹುಳಿ ಮುದಿಯಾಗದ ಕಂಗಳ ಮೂಲಕ ಎಳೆ ಜೋಡಿಗಳನ್ನು ನೋಡಿ ಕರುಬು ಮೂಡುವಂಥ ತಾಣ ಬೇಕೇ, ನಾಳಿನ ದಿವಸವನ್ನು ಹೊಸ ಹುರುಪಿನಿಂದ ಸ್ವಾಗತಿಸುವ ಲವಲವಿಕೆ ಬೇಕೇ—ಮಡಿಕೇರಿಯ ಹೊರ ವಲಯದ ಹಸಿರುಡುಪಿನ ಪೆರೇಡು ಗ್ರೌಂಡಿಗೆ ಬನ್ನಿ ! ಓ ಬನ್ನಿ ಬನ್ನಿ ಬನ್ನಿ ! ತುಳಿಯೆ ನಿಮ್ಮ ಪದತಳ—ದಳ ದಳ ಅರಳ್ವದಲ್ಲಿ ಚಿರನೂತನ ರಸತಳ (ರಸಾತಳವಲ್ಲ) (ಕುವೆಂಪು ಕ್ಷಮೆ ಕೋರಿ).

ನಮ್ಮ ಕ್ಯಾಡೆಟುಗಳ ಮಿಲಿಟರಿ ಶಿಕ್ಷಣಕ್ಕೆ ಪೆರೇಡ್ ಗ್ರೌಂಡಿಗಿಂತ ಹೆಚ್ಚಿನ ಭವ್ಯ ಪರಂಪರೆ ಇರುವ ಬೇರೆ ಒಂದು ಬಯಲನ್ನು ನಾವು ಎಲ್ಲಿ ಹುಡುಕೋಣ ? ಎಲ್ಲ ವಿಧ

ವಾದ ಮಿಲಿಟರಿ ಪಾಠಗಳನ್ನೂ ಪ್ರಾಯೋಗಿಕವಾಗಿ ಪ್ರತ್ಯಕ್ಷ ಸನ್ನಿವೇಶಗಳ ಮುನ್ನೆಲೆಯಲ್ಲಿ ಬೋಧಿಸಲು ಇದೊಂದು ಅದ್ಭುತ ರಂಗ. ಜನರಲ್ ಕಾರ್ಯಪ್ಪನವರಾಗಲೀ ಜನರಲ್ ತಿಮ್ಮಯ್ಯನವರಾಗಲೀ ಅವರ ಆದರ್ಶಪರಂಪರೆಯಲ್ಲಿ ಮೊಗ್ಗೊಡೆದು ಅರಳಿ ಹೂ ಆಗಿ ರುವ ಇತರ ವೀರ ಯೋಧರಾಗಲೀ ಅವರ ಮೊದಲ ಪಾಠ ಕಲಿತದ್ದು ನಿಸರ್ಗದ ಈ ತೊಟ್ಟಿಲಲ್ಲಿ. ಆ ಸಮಷ್ಟಿ ಚೈತನ್ಯ ನಮ್ಮ ತರುಣ ಧಮನಿಗಳಿಗೆ ಉಕ್ಕಿನ ರಸವನ್ನು ನೀಡಿ ಅವರನ್ನು ಯೋಗ್ಯ ಹಾಗೂ ಸಮರ್ಥ ಧುರೀಣರನ್ನಾಗಿ ಮಾಡುತ್ತಿತ್ತು.

ಮ್ಯಾಪ್ ಪಠನ ಪಾಠ ಹೇಳಿ ಕೊಡುವುದು ನನಗೆ ಬಲುಪ್ರಿಯವಾದ ಹವ್ಯಾಸ, ಪೆರೇಡ್ ಗ್ರೌಂಡ್ ನಮ್ಮ ಕೇಂದ್ರ, ನಮ್ಮ ನೆಲೆ. ಇಲ್ಲಿಂದ ಸುತ್ತಲೂ ಕಾಣುವ ಎಲ್ಲ ಬೆಟ್ಟ ಶಿಖರಗಳನ್ನೂ ಹುಡುಗರಿಗೆ ನೆಲದ ಮೇಲೆಯೂ ಮ್ಯಾಪಿನಲ್ಲಿಯೂ ತೋರಿಸಿ ಅವು ಎಷ್ಟು ಸಮರ್ಪಕವಾಗಿ ಮತ್ತು ವೈಜ್ಞಾನಿಕವಾಗಿ ಸಂವಾದಿಗಳಾಗಿವೆ ಎಂಬುದನ್ನು ವಿವರಿಸುತ್ತಿದ್ದೆ. ನೆಲದ ಸಂಕ್ಷಿಪ್ತ ರೂಪವೇ ಮ್ಯಾಪ್. ಆದರೆ ಒಂದು ವ್ಯತ್ಯಾಸವಿದೆ. ವಿಬಿಳಿತ ಗಳಿರುವ, ಅಂದರೆ ಮೂರು ಆಯಾಮಗಳಿರುವ, ನೆಲವನ್ನು ಎರಡು ಆಯಾಮಗಳ ಕಾಗದಕ್ಕೆ ಸಂಕ್ಷೇಪಿಸುವಾಗ ಸಂವಾದಿತ್ವವನ್ನು ಕಾಪಾಡಿಕೊಳ್ಳಲು ಗಣಿತ ವಿಧಾನ ವೊಂದನ್ನು ಅನುಸರಿಸಬೇಕಾಗುವುದು. ಇದರ ನವುರನ್ನು ಹುಡುಗರಿಗೆ ತಿಳಿಯಪಡಿಸಿ ಈ ಬೌದ್ಧಿಕ ಸಾಹಸದ ಹಿರಿಮೆಯನ್ನು ಅವರು ಅರಿತು ಸಂತೋಷಿಸುವಂತೆ ಮಾಡುವುದು ನನಗೆ ಅಚ್ಚುಮೆಚ್ಚಿನ ಕೆಲಸ. ಮೊದಲು ನಿಸರ್ಗ ಮತ್ತೆ ಅದರ ಪ್ರತಿರೂಪವಾದ ಮ್ಯಾಪ್—ನೆಲದಿಂದ ಮ್ಯಾಪಿಗೆ. ಈ ಪ್ರಯೋಗದಲ್ಲಿ ಹುಡುಗರು ಸಾಕಷ್ಟು ಪರಿಣತ ರಾದ ಮೇಲೆ ಮ್ಯಾಪಿನಿಂದ ನೆಲಕ್ಕೆ ಸಾಗುತ್ತಿದ್ದೆ. ಎಂದರೆ, ಮ್ಯಾಪಿನಲ್ಲಿ ಒಂದು ಬಿಂದು ವನ್ನು ತೋರಿಸಿ ಅದನ್ನು ನೆಲದಲ್ಲಿ ಎಲ್ಲಿದೆ ಎಂದು ಶೋಧಿಸುವ ಪ್ರಯತ್ನ.

ಒಂದು ಸಾಯಂಕಾಲ. ಇಂಥ ಪಾಠವನ್ನು ಅಧಿಕೋತ್ಸಾಹದಿಂದ ಹೇಳಿಕೊಡುತ್ತಿದ್ದೆ. "ಈಗ ರೈಫಲ್ ಗುರಿ ಹಿಡಿದಿರುವ ಶಿಖರ ನೋಡಿ—ಅದರ ಪಕ್ಕದಲ್ಲಿ ಇನ್ನೊಂದು ಶಿಖರ ಮೊದಲಿನದರ ಮೇಲೆಯೇ ಒರಗಿದೆಯೋ ಎಂಬಂತಿದೆ. ಇವೆರಡನ್ನೂ ಮ್ಯಾಪಿ ನಲ್ಲಿ ಗುರುತಿಸಿ, ಅವುಗಳ ಪೈಕಿ ಯಾವುದು ಹೆಚ್ಚು ಎತ್ತರದ್ದು, ಅದರ ಹೆಸರು ಏನು ಎಂದು ಹೇಳಿ,"

ನನ್ನ ಈ ಸವಾಲನ್ನು ಹುಡುಗರು ಸಂತೋಷದಿಂದ ಸ್ವಾಗತಿಸಿದರು. ಮಾಡಬೇಕಾದ ಗಣಿತಗಣನೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿ ಉತ್ತರ ಹೇಳಿದರು. "ಎಡಗಡೆಯದೇ ಹೆಚ್ಚು ಎತ್ತರದ್ದು, ಹೆಸರು ನಿಶಾನಿಮೊಟ್ಟೆ. ಎತ್ತರ ೪,೦೩೮ ಅಡಿಗಳು." ನನಗೆ ತುಂಬ ಸಂತೋಷವಾಯಿತು.

"ಕೊಯಿ ಶಕ್ ಯಾ ಸವಾಲ್ ?" ಎಂದು ಲಘುವಾಗಿ ಕೇಳಿದೆ.

"ಏಕ್ ಶಕ್ ಹೈ ಸಾಬ್" ಎನ್ನಬೇಕೇ ರಾಯಪ್ಪನ್ ಸಾಹೇಬರು ! ಅವರು ದೂರ ದಿಂದ ನನ್ನ ಪಾಠವನ್ನು ಆಲಿಸುತ್ತಿದ್ದುದನ್ನು ನಾನು ಗಮನಿಸಿರಲಿಲ್ಲ. "ನಿಶಾನಿಮೊಟ್ಟೆಗೆ ಹೋಗಿದ್ದೀರಾ, ರಾವ್ ?" ಅವರು ಮುಂದುವರಿಸಿದರು,

ನಾನು ತಲೆ ಅಲ್ಲಾಡಿಸಿದೆ—ಹೋಗಿರಲಿಲ್ಲ ಎಂದು ಸೂಚಿಸಲು.

"ನಮ್ಮ ಬೆಟಾಲಿಯನ್ನಿನ ಈ ವರ್ಷದ ರೌಟ್ ಮಾರ್ಚ್‌ನ್ನು (route march) ಅಲ್ಲಿಗೆ ಯಾಕೆ ಇಡಬಾರದು ?"

"ಆಗಬಹುದು" ಎಂದು ಸಂತೋಷವಾಗಿ ಹಿಂದೆ ಮುಂದೆ ಯೋಚಿಸದೆ ದುಮುಕಿದೆ. ಲಾಗ ಹೊಡೆದು ಜಾಗ ನೋಡುವ ನನ್ನ ಪ್ರವೃತ್ತಿ ಹೇಗೆ ಬದಲಾದೀತು ?

ಮುಂದಿನ ಆದಿತ್ಯವಾರ ಬಾಳಿಗರು, ನಾನು ಒಂದಷ್ಟು ಜನ ಕ್ಯಾಡೆಟ್ ಮುಂದಾಳು ಗಳು ಮಡಿಕೇರಿಯನ್ನು ಬಿಟ್ಟೆವು—ನಿಶಾನಿಮೊಟ್ಟೆಯ ದಾರಿ ಹುಡುಕಲು. ಮಡಿಕೇರಿಯ ಎತ್ತರ ೩,೮೦೦ ಅಡಿಗಳು, ಆದ್ದರಿಂದ ನಾವು ಇಲ್ಲಿ ಏರಬೇಕಾದದ್ದು ಕೇವಲ ನೂರಿನ್ನೂರು ಅಡಿಗಳಷ್ಟನ್ನು. ನಡೆಯಬೇಕಾದ ದೂರ, ಮ್ಯಾಪಿನಲ್ಲಿ ಕಂಡಂತೆ, ಮೂರು ಮೈಲಿಗಳು. ಮ್ಯಾಪಿನಲ್ಲಿ ಕಾಣುವ ಈ ದೂರ ಹಕ್ಕಿ ಹಾರಿದಂಥ ಪಥ ; ಆದರೆ ಇಲ್ಲಿ ಗಮಿಸುವವರು ನಾವು. ನೆಲದ ಮೇಲೆ ನಡೆಯುವವರು. ನಾಲ್ಕೆಂಟು ಬೆಟ್ಟಗಳನ್ನು ಏರಿ ಇಳಿದು ನಿಶಾನಿ ಮೊಟ್ಟೆಯ ಶಿಖರವನ್ನು ತಲಪಿದಾಗ ನಡೆದ ದೂರ ೬–೭ ಮೈಲಿಗಳು.

ಹಿಂದೆ ರಾಜನ ದೂತರು ಇಲ್ಲಿವರೆಗೂ ಗಸ್ತು ಬರುತ್ತಿದ್ದರಂತೆ. ಈ ಕೊನೆಯ ಕೊಡಿ ಯಿಂದ ಪಶ್ಚಿಮದ ವಿಸ್ತಾರ, ಇಳಿಜಾರನ್ನು ನೋಡಿದರೆ ದೂರದ ಸಮುದ್ರದವರೆಗೂ ಹರಡಿಹೋಗಿರುವ ಸಂಪಾಜೆ, ಸುಳ್ಯ ಮೊದಲಾದ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶಗಳು ತೋರುತ್ತವೆ. ಆ ಕಡೆಯಿಂದ ಶತ್ರುಗಳು ಗಿರಿದುರ್ಗವಾದ ಮಡಿಕೇರಿಯನ್ನು ಆಕ್ರಮಿಸಲು ಬರುತ್ತಿದ್ದರೆ ಆ ಸಂಚು ಮೊಟ್ಟೆಯ ಮೇಲೆ ನಿಂತ ಸೈನಿಕನಿಗೆ ಮೊದಲು ಕಾಣುತ್ತಿತ್ತು. ಕೂಡಲೇ ಅವನು ನಿಶಾನಿಯನ್ನು ಮಡಿಕೇರಿಗೆ ರವಾನಿಸುತ್ತಿದ್ದ. ಮಡಿಕೇರಿಯ ರಕ್ಷಕ ಗಡಿಯಾದ ನಿಶಾನಿ ಮೊಟ್ಟೆಯ ಮೇಲೆ ನಾವು ಕುಳಿತೆವು. ಮಟಮಟ ಮಧ್ಯಾಹ್ನದ ೧೨ ಗಂಟೆಗೆ ಮಡಿಕೇರಿಯಿಂದ ಹೊರಟಿದ್ದ ನಾವು ಓಡಿ ಓಡಿ ದಾರಿ ಅರಸಿ ಇಲ್ಲಿಗೆ ಬಂದು ತಲಪಿ ದಾಗ ಗಂಟೆ ೩ ಆಗಿತ್ತು. ಹಿಂದೆ ಹೋಗುವುದು ಸುಲಭ. ಆದರೆ ಮುಂದೆ ನಡೆಯುವುದು ಸವಾಲು. ಅಲ್ಲಿ, ಕೆಳಗೆ, ಕೈ ಎಟುಕಿನ ದೂರದಲ್ಲಿ, ಮಡಿಕೇರಿ-ಮಂಗಳೂರು ರಾಜಮಾರ್ಗ ಮೂರ್ಛಾಗತ ಹೆಬ್ಬಾವಿನಂತೆ ಸುರುಳಿ ಸುತ್ತಿ ಮಲಗಿದೆ. ಹೆಚ್ಚೆಂದರೆ ಒಂದೆರಡು ಮೈಲಿ ಗಳ ದೂರ ಇಳಿಯುತ್ತ ಓಡಿದರೆ ಆ ದಾರಿ ತಲಪುತ್ತೇವೆ. ಅಲ್ಲಿಂದ ಯಾವುದೇ ಬಸ್ ಹತ್ತಿ ಮಡಿಕೇರಿ ತಲಪೋಣ ಎಂದು ಸೂಚಿಸಿದೆ, ಬಾಳಿಗರು ಸಮ್ಮತಿಸಿದರು. ಕಡಿದಾದ ಬೆಟ್ಟ ಇಳಿಯುವಾಗ ನಿಸರ್ಗದ ಸಹಕಾರೀ ಬಲವನ್ನು ವಿರೋಧಿಸುತ್ತೀರಾ ? ನಾಲ್ಕು ಹೆಜ್ಜೆ ಸಾಗುವಾಗ ನಿಮ್ಮ ಮೀನಖಂಡಗಳು ಹಿಗ್ಗಿ ಕುಗ್ಗಿ ಸಾಮರ್ಥ್ಯ ಕಳೆದುಕೊಂಡು ನೋಯಲು ತೊಡಗುವುವು. ಮತ್ತೆ ನಿಮ್ಮನ್ನು ಹೊತ್ತುಕೊಂಡೇ ಹೋಗಬೇಕಾದೀತು. ನಮ್ಮ ಸಮತೋಲ ತಪ್ಪದಂತೆ ನಿಸರ್ಗ ಬಲದೊಡನೆ ಹೊಂದಿಕೊಂಡು ಧಾವಿಸುವುದೇ ಸರಿಯಾದ ಮಾರ್ಗ. ನಾನು ಓಡಿದೆ ; ಹುಡುಗರು ನೆಗೆದರು. ನಾನೂ ನೆಗೆದೆ ; ಹುಡುಗರು ಹಾರಿದರು. ದಢ ದಢ ಎಂಬ ಈ ಉರುಳಾಟದಲ್ಲಿ ಕಾಲಕೆಳಗಿನ ಕಲ್ಲು ಆಕಸ್ಮಿಕ ಆಘಾತದ ಹೊಡೆತಕ್ಕೆ ಪ್ರತಿಕ್ರಿಯೆ ಪ್ರದರ್ಶಿಸುವ ಮೊದಲೇ ನಾವು ಮುಂದಿನ ತಗ್ಗಿನಲ್ಲಿ ಮರೆ ಯಾಗುತ್ತಿದ್ದೆವು. ಆದರೆ ಒಂದು ದುರ್ಬಲ ಗಳಿಗೆಯಲ್ಲಿ ನನ್ನ ಎಚ್ಚರ ಕೊಂಚ ಅಲುಗಿತು. ಬಲಗಾಲಿನ ಮಣಿಗಂಟು ಲಂಬ ಕೋನದಷ್ಟು ತಿರುಚಿಕೊಂಡು ಅಸಾಧ್ಯ ನೋವನ್ನು ಅನುಭವಿಸಿದೆ. ಮುಂದಿನ ಕ್ಷಣ ಮಾತ್ರದಲ್ಲಿ ನೆಲದಲ್ಲಿ ಕುಕ್ಕರುಬಡಿದೆ. ಮಣಿಗಂಟು

ಉಳುಕಿಹೋಗಿತ್ತು ; ಅಥವಾ ಮುರಿದೇಹೋಗಿತ್ತೋ ತಿಳಿಯದು. ನೋವು ಕ್ಷಣ ಕ್ಷಣ ಏರುತ್ತಿತ್ತು. ಆ ಭಾಗವಿಡೀ ಊದಿಕೊಂಡಿತು. ಹುಡುಗರು ಹಾರಿದರೆಂದು ಅವರನ್ನು ಅನುಕರಿಸಿದ ನಾನು ಕೋಡಗನ ಅನುಕರಿಸಿದ ಕೋಣಮರಿಯಂತಾದೆ.

ಕರವಸ್ತ್ರಗಳ ಮಾಲೆ ಬಿಗಿದಾಯಿತು. ತಣ್ಣೀರ ಧಾರೆ ಎರೆದಾಯಿತು. ಬಡಿಗೆ ತುಂಡುಗಳ ಸಹಾಯದಿಂದ ಬಾಳಿಗರ ನೆರವಿನಿಂದ ಉಳಿದ ದೂರವನ್ನು ಪ್ರಾಣೋತ್ಕ್ರಮಣ ವೇದನೆಯ ಸಮೇತ ಮುಗಿಸಿದೆ. ಬೆಟ್ಟದ ತುದಿಯಿಂದ ರಾಜಮಾರ್ಗ ೬ ಮೈಲಿಗಳಿಗಿಂತ ಕಡಿಮೆ ನಡಿಗೆ ದೂರದಲ್ಲಿಲ್ಲ. ನನ್ನ ಈ ಹೊಸ ಸಂಪಾದನೆ ೬ನ್ನು ೧೦ರಿಂದ ಗುಣಿಸಿದಂಥ ಅನುಭವ ನೀಡಿತು. ಮಣಿಗಂಟಿನ ಉಳುಕಿನ ಛಾಯೆ ಮುಂದಿನ ಒಂದು ತಿಂಗಳ ಕಾಲ ಆಗಾಗ ನನಗೆ ಚುರು ಚುರು ಇಂಜೆಕ್ಷನ್ ನೀಡಿ "ನಿನ್ನುದ್ದ ಮೀರಿ ನೀ ನೆಗೆಯ ಬೇಡವೊ !" ಎಂದು ಎಚ್ಚರ ನೀಡುತ್ತಿತ್ತು, ಎಂಆರ್‌ಸಿಯಲ್ಲಿಯಂತೆ (ಪುಟ ೭೩).

ಈ ಅನುಭವ ನಮ್ಮ ೧೪೯ ಮಂದಿಯನ್ನು ಅದೇ ಮಾರ್ಗವಾಗಿ ರೌಟ್ ಮಾರ್ಚಿಗೆ ಕೊಂಡೊಯ್ಯುವಾಗ ಬಲು ಉಪಯುಕ್ತವಾಯಿತು, ಎಲ್ಲ ವಿಧವಾದ ಮುಂಜಾಗರೂಕತೆಗಳನ್ನು ವಹಿಸಿದೆವಲ್ಲದೇ ಸಾಕಷ್ಟು ವೈದ್ಯಕೀಯ ನೆರವುಗಳನ್ನೂ ಕೊಂಡೊಯ್ದೆವು. ಬೆಳಗ್ಗೆ ೭ ಗಂಟೆಗೆ ಪುಷ್ಕಳ ಗ್ರಾಸಾನಂತರ ಪೆರೇಡ್ ಗ್ರೌಂಡನ್ನು ತೊರೆದೆವು. ನಿಶಾನಿ ಮೊಟ್ಟೆಯನ್ನು ಲಗ್ಗೆ ಹತ್ತಿ ಅದನ್ನು ಯಶಸ್ವಿಯಾಗಿ "ಜಯಿಸಿ"ದಾಗ ಗಂಟೆ ೧೦. ಸಾಮೂಹಿಕ ನಡಿಗೆಯ ಶಿಸ್ತು ಒಬ್ಬೊಬ್ಬರ ನಡಿಗೆಯ ಶಿಸ್ತಿಗಿಂತ ಭಿನ್ನವಾದದ್ದು. ಹೀಗಾಗಿ ತಡವಾಗುವುದು ಅನಿವಾರ್ಯ. ಮುಂದಿನ ಇಳಿಜಾರನ್ನು ಮುಗಿಸಿ ಜೋಡುಪಾಲದಲ್ಲಿ ಮಡಿಕೇರಿ-ಮಂಗಳೂರು ರಾಜಮಾರ್ಗವನ್ನು ತಲಪಿದಾಗ ಗಂಟೆ ಅಪರಾಹ್ಣದ ೧. ಅಲ್ಲಿಗೆ ಮಡಿಕೇರಿಯಿಂದ ನಮ್ಮ ಲಾರಿಯಲ್ಲಿ ಊಟ ಬಂದು ನಮ್ಮನ್ನು ಕಾಯುತ್ತಿತ್ತು. ಸಮೃದ್ಧಿಯಾದ ಊಟ ತಿಂದು ತೃಪ್ತರಾಗಿ ತೇಗಿ ರಸ್ತೆಯ ಎರಡೂ ಬದಿಗಳಲ್ಲಿ ಮೈಚೆಲ್ಲಿ ವಿಶ್ರಾಂತಿ ಸುಖ ಪಡೆದೆವು. ಅದೇ ತಪ್ಪಾದದ್ದು. ಅದುವರೆಗೆ ಅತಿ ಚುರುಕಾಗಿದ್ದ ಹುಡುಗರಲ್ಲಿ ಬಲು ಮಂದಿಗೆ ಈಗ ಲಾರಿಖಾಯಿಲೆ ಶುರುವಾಯಿತು. ಕಾಲು ನೋವು, ಕೀಲು ಉರಿ, ಸಂಧಿವಾತ, ತಲೆಯಲ್ಲಿ ಹೊಟ್ಟೆನೋವು, ಹೊಟ್ಟೆಯಲ್ಲಿ ತಲೆನೋವು, ಎದೆಯಲ್ಲಿ ಎರಡೂ ನೋವು! ವಿಚಾರಿಸುವವರಿದ್ದರೆ ಹೃದಯವ್ಯಾಧಿಯವರು ಬೇಕೇ, ಆಮಶಂಕೆಯಿಂದ ಕಂಗಾಲಾದವರು ಬೇಕೇ! ಸಾಹಸದ ಅಗ್ರಬಿಂದು ಮುಗಿದು ಪುಷ್ಕಳ ಗ್ರಾಸ ಭರ್ಜರಿ ಆರಾಮ ಲಭಿಸಿದ ಮೇಲೆ ಉಳಿದ ಒಂಬತ್ತು ಮೈಲಿಗಳನ್ನು ನಡೆಯುವುದು ಮನಸ್ಸಿಗೆ ಅಲರ್ಜಿ ! ಆದರೆ ಹುಡುಗರ ಈ ತಮಾಷೆಗಳಿಗೆ ಬಗ್ಗುವವನು ನಾನಲ್ಲ, ಬಾಳಿಗರಂತೂ ಖಂಡಿತವಾಗಿಯೂ ಅಲ್ಲ. ರಾಯಪ್ಪನ್ ಮುಂದೆ ನಡೆದರು, ಅದ್ದರಿಂದ ನಡಿಗೆಯ ವೇಗ ಮಿತವಾಗಿತ್ತು. ನಾನೂ ಬಾಳಿಗರೂ ಹಿಂದಿನ ನೂಕು ಎಂಜಿನ್ನುಗಳಾದೆವು. ಆ ಒಳಸಂದಾರಿ ಮುಗಿಸಿ ತಾಳತ್ತಮನೆಯ ಸಮೀಪ ಕುಂದೂರ್ಮೊಟ್ಟೆಯ ಕಡಿದಾದ ಒಳದಾರಿ ಏರಿ ರಾಜಾಸೀಟಿನ ಸಂದೀಮರದ ನೆರಳಿನ ಆಸರೆ ಪಡೆದಾಗ ನಮಗೆ ಒದಗಿದ ಕೃತಾರ್ಥಭಾವ ಸಾಮಾನ್ಯವಲ್ಲ. "ರಾಜನೆ ನಾನೆಂದು ಭಾವಿಸಿದೆ." ಯಥೇಷ್ಟ ತಿಂಡಿ ತೀರ್ಥ ನಮಗೆ ನವ ಚೈತನ್ಯ ಒದಗಿಸಿದುವು. ಅರ್ಹತೆ ಪಡೆದು ತಿನ್ನಿ—ಗಂಜಿಯಲ್ಲಿ ಷಡ್ರಸಗಳು ಒಸರುತ್ತವೆ; ಅರ್ಹತೆ ಪಡೆಯದೆ ಮುಕ್ಕಿ—ಮೃಷ್ಟಾನ್ನದಲ್ಲಿ ಹಾಗಲಕಾಯಿ ನುಸುಳಿರುತ್ತದೆ.

ಗುಂಡಿಗೆ ಬಿದ್ದರು ಶೇಷಯ್ಯ

ಈ ನಿಶಾನಿಮೊಟ್ಟೆಯ ವಿಜಯದ ಮೇಲೋಗರಕ್ಕೆ ಸಾಹಿತ್ಯದ ಮತ್ತು ಉತ್ಪ್ರೇಕ್ಷೆಯ ಒಗ್ಗರಣೆ ಹಾಕಿ ಬಡಿಸಿದೆ—ಉಂಡವರು ನನ್ನ ಮಿತ್ರರಾಗಿದ್ದ ಟಿ. ಶೇಷಯ್ಯ (ಸರಕಾರೀ ಮುದ್ರಣಾಲಯದ ಮ್ಯಾನೆಜರ್), ಆರ್. ಎಲ್. ಶ್ರೇಷ್ಠ (ಕೊಡಗಿನ ಪಿಡಬ್ಲ್ಯುಡಿ ಎಕ್ಸಿಕ್ಯೂಟಿವ್ ಎಂಜಿನಿಯರ್), ಎಸ್. ಜೆ. ಪ್ರಭಾಚಂದ್ರ (ಸಹಕಾರೀ ಕೇಂದ್ರ ಬ್ಯಾಂಕಿನ ಕಾರ್ಯದರ್ಶಿ), ಎನ್. ಜ್ವಾಲಣ್ಣ (ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್) ಹಾಗೂ ಪುರಾಣಿಕ್ (ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ನಿನ ಮಡಿಕೇರಿ ಏಜೆಂಟರು). ಸ್ವಂತ ಸಾಹಸವನ್ನು ವರ್ಣಿಸುವಾಗ ಪ್ರಾಪ್ತವಾಗುವ ಮಾನವಸಹಜಗುಣವೇ ಈ ಉತ್ಪ್ರೇಕ್ಷೆ. ಈ ಭಿನ್ನ ವೃತ್ತಿಗಳ ಶ್ರೋತೃವರ್ಗ ನನಗೆ ಲಭಿಸಿದ್ದು ನಮ್ಮ ಕಾಲೇಜಿನ ಸಹಕಾರ ಸಂಘದ ನೆರಳಿನಲ್ಲಿ. ಮೊದಲು ಗ್ರಾಹಕರಾಗಿ ಬಂದವರು ಇವರು. ಮುಂದೆ ನಮ್ಮೊಳಗೆ ಗಾಢ ಮೈತ್ರಿ ಬೆಳೆಯಿತು. "ನಾವೂ ಒಂದು ಸಲ ನಿಶಾನಿ ಮೊಟ್ಟೆಗೆ ಹೋಗಬೇಕು ; ನೀನು ಏರ್ಪಾಡು ಮಾಡಬೇಕು" ಇದು ಅವರೆಲ್ಲರ ಆಸೆ. ಆದರೆ ಅವರೆಲ್ಲರ ಪ್ರಾಯ ಗಳೂ ೪೦ರ ತಪ್ಪು ಮಗ್ಗುಲಲ್ಲಿದ್ದುವು, ಒಬ್ಬರಿಗೆ ನಡೆಯಲು ಕಷ್ಟ, ಸ್ಥೂಲಗಾತ್ರ. ಇನ್ನೊಬ್ಬರಿಗೆ ಬೆಟ್ಟ ಏರುವುದು ಇಳಿಯುವುದು ಎರಡೂ ಪ್ರಯಾಸವೇ, ತ್ರಾಣವಿಲ್ಲ. ಮತ್ತೊಬ್ಬರಿಗೆ ಔನ್ನತ್ಯದ ಭಯ. ಬೆಟ್ಟದ ಮೇಲೆ ನಿಂತರೆ ಥರಥರನೆ ನಡುಗುವರು. ಶೇಷಯ್ಯ ಮಾತ್ರ ಇದಕ್ಕೆಲ್ಲ ಅಪವಾದ. ಅಷ್ಟು ಮಾತ್ರವಲ್ಲ. ಪ್ರಾಯದಲ್ಲಿ ನನಗಿಂತ ಹಿರಿಯರಾಗಿದ್ದರೂ ಅವರೊಡನೆ ಯಾವ ವಿಧವಾದ ಸ್ಪರ್ಧೆಯಲ್ಲಿಯೂ ನಾನು ಗೆಲ್ಲು ತ್ತಿರಲಿಲ್ಲ. ಅವರನ್ನು ಪಾದರಸ, ವಿದ್ಯುತ್ತು ಎಂದು ಕರೆಯುತ್ತಿದ್ದೆವು. ಹೇಗೂ ಇರಲಿ. ಈ ಪಾದರಸವನ್ನೂ ಅತಿ ತೂಕದ ಸೀಸದಗಟ್ಟಿಗಳನ್ನೂ ಸ್ನೇಹದ ದಾರದಿಂದ ಕೋದು ನಿಶಾನಿ ಮೊಟ್ಟೆಯೆಡೆಗೆ ಹೊರಟೆವು. ಸಾಧಾರಣವಾಗಿ ಈ ನಡಿಗೆ ೪ ಗಂಟೆಗಳ ಕಾಲ ತೆಗೆದುಕೊಳ್ಳಬಹುದು ; ಮುಂದೆ ಜೋಡುಪಾಲವನ್ನು ೩ ಗಂಟೆಗಳಲ್ಲಿ ಸೇರಬಹುದೆಂದು ಯೋಜನೆ ಹಾಕಿದ್ದೆ. ಬೆಳಗ್ಗಿನ ೧೦ ಗಂಟೆಗೆ ಮಡಿಕೇರಿ ಬಿಟ್ಟು. ನನಗೆ ಪರಿಚಿತವಾಗಿದ್ದ ಕಡಿದಾದ ದಾರಿಯಲ್ಲಿ ಏರತೊಡಗಿದೆವು. ಆದರೆ ನಮ್ಮ ತೂಕದ ಬಿರಿಗಳು ಎಲ್ಲ ಲೆಕ್ಕ ವನ್ನೂ ತಲೆಕೆಳಗೆ ಮಾಡಿದುವು. ಶೇಷಯ್ಯ ಲಂಗುಲಗಾಮಿಲ್ಲದ ಕುದುರೆಯಾದರೆ ಇನ್ನೊಬ್ಬ ಮಿತ್ರ ಪಟ್ಟುಹಿಡಿದು ನಿಂತ ಕತ್ತೆ. ಇವರ ಮಧ್ಯೆ ಸಹಾಯಹೀನ ರಾವುತ ನಾನು. ಅಂತೂ ಅಪರಾಹ್ಣದ ೩ ಗಂಟೆಗೆ ನಿಶಾನಿಮೊಟ್ಟೆಯ ಮೇಲೆ ಒಟ್ಟಾದೆವು. ತಡ ವಾಯಿತೆಂದು ನನಗೆ ಅನ್ನಿಸಿತು. ಆದ್ದರಿಂದ ಹೆಚ್ಚು ಹೊತ್ತು ಅಲ್ಲಿ ಕೂರದೇ ರಾಜ ಮಾರ್ಗದೆಡೆಗೆ ಇಳಿಯಲು ತೊಡಗಿದೆವು. ಅರ್ಧ ಮೈಲಿ ಸಾಗಿರಬಹುದು—ಶೇಷಯ್ಯ ತನ್ನ ಚಿನ್ನದ ಚೌಕಟ್ಟಿನ ಕನ್ನಡಕವನ್ನು ನಿಶಾನಿಮೊಟ್ಟೆಯ ಮೇಲೆ ಮರೆತುಬಂದಿದ್ದೇ ನೆಂದು ನಮಗೆ ಬಿರಿ ಹಾಕಿದರು. ಅವರು ಅಲ್ಲಿಗೆ ಓಡಿ ಹೋಗಿ ಅದನ್ನು ಹುಡುಕಿ ಪಡೆದು ಹಿಂತಿರುಗುವಾಗ ಅರ್ಧ ಗಂಟೆ ಕಳೆದಿತ್ತು. ಈಗ ಗಂಟೆ ೪. ಸೂರ್ಯಾಸ್ತಮಾನ ಬೆಟ್ಟಗಳ ಹಿಂದೆ ಬೇಗ ಆಗುತ್ತದೆ. ಆದ್ದರಿಂದ ಕಾಡುದಾರಿಯಲ್ಲಿ ಸಿಕ್ಕಿ ಹಾಕಿಕೊಳ್ಳದಿರಬೇಕಾದರೆ ತ್ವರೆಯಾಗಿ ನಡೆಯುವುದೊಂದೇ ಗತಿ ಎಂದು ಭಾವಿಸಿ ಮಿತ್ರರನ್ನು ಹುರಿದುಂಬಿಸಿದೆ.

ಬೆಟ್ಟದ ಮೈಯ್ಯ ಒಳಸುದಾರಿ ಶೇಷಯ್ಯನವರಿಗೆ ಹಿಡಿಸಲಿಲ್ಲ. ಪಾದರಸವನ್ನು ಕೆಣಕುವುದು ಶ್ರೀಷ್ಮರ ಆಟ, ಚಟ, ಕಾಟ.

"ಶೇಷಯ್ಯ ! ಈ ಒಳದಾರಿಯನ್ನು ನೀವೇಕೆ ಶೋಧಿಸಬಾರದು ?" ಶ್ರೀಷ್ಮರ ಕೀಟಲೆ.

"ಹೌದು, ಹೌದು. ಈಗ ಹೊತ್ತಾಗಿ ಹೋಗಿರುವುದರಿಂದ ಒಳದಾರಿಯಲ್ಲಿ ಬೇಗನೆ ನಡೆದು ಇಲ್ಲೇ ಕಾಲಬಳಿ ಕಾಣುತ್ತಿರುವ ಮಂಗಳೂರು ದಾರಿ ಸೇರೋಣ, ಬನ್ನಿ ಜೇಟಿ" ಶೇಷಯ್ಯ ನನಗೆ ಸವಾಲೊಡ್ಡಿದರು.

"ಬೆಟ್ಟದ ಅನುಭವ ನಿಮಗಿಲ್ಲ. ಇಲ್ಲಿ ಒಳದಾರಿ ಯಮಪುರಿಗೆ ರಹದಾರಿ ಆದೀತು. ಗಂಟೆಯೂ ೪ ಆಗಿದೆ. ನನ್ನ ಹಿಂದೆಯೇ ಬನ್ನಿ" ನಾನೆಂದೆ.

"ಜೇಟಿ ಹೇಡಿ" ಶ್ರೀಷ್ಮನ ಇನ್ನೊಂದು ಅಸ್ತ್ರ.

"ಬೇಡಿ ಶೇಷಯ್ಯ" ಪ್ರಭಾಚಂದ್ರ. ಶೇಷಯ್ಯ ಸದಾ ಟಾಪ್‌ಗೇರ್. ಶ್ರೀಷ್ಮರ ಫುಲ್ ಆ್ಯಕ್ಸಿಲರೇಟರ್ ಜೊತೆಗೆ.

"ನೀವು ಬರದಿದ್ದರೆ ಬೇಡ. ನಾನು ನೋಡಿ ನಿಮಗಿಂತ ಮೊದಲು ಬಸ್‌ದಾರಿ ತಲಪಿರುತ್ತೇನೆ" ಶೇಷಯ್ಯ. ಅವರು ಹಾರಿ ಹಾರಿ ದುಮುಕುತ್ತ ನೇರ ದಾರಿಯಲ್ಲಿ (ದಾರಿ ಎಲ್ಲಿ ಬಂತು ? ನಡೆದದ್ದೇ ದಾರಿ) ಇಳಿಯತೊಡಗಿದರು. ಈಗ ಶ್ರೀಷ್ಮರಿಗೂ ಗಾಬರಿ ಆಯಿತು. "ಬೇಡ, ಬೇಡ. ಹಿಂದೆ ಬನ್ನಿ. ಮುಂದೆಂದಾದರೂ ನೋಡೋಣ" ಎಂದು ಕೂಗಿದರು. ಎಷ್ಟು ಕೂಗಿದರೂ ಶೇಷಯ್ಯ ರಾಮಬಾಣದಂತೆ. "ನಿಮಗೇಕೆ ಇಷ್ಟು ಹೆದರಿಕೆ ! ಬನ್ನಿ ನನ್ನ ಹಿಂದೆ" ಮತ್ತೆ ಶೇಷಯ್ಯನ ಪಂಥಾಹ್ವಾನ.

"ಹೆದರಿಕೆ ಧೈರ್ಯದ ಪ್ರಶ್ನೆ ಇದಲ್ಲ. ಸಮೂಹ ಶಿಸ್ತಿನ ವಿಚಾರ. ನಮ್ಮ ಜೊತೆಯಲ್ಲಿರುವಾಗ ನಿಮಗೆ ಪ್ರಾಣ ಕಳೆದುಕೊಳ್ಳುವ ಅಧಿಕಾರವಿಲ್ಲ. ನೀವು ಬರುತ್ತೀರೋ ಇಲ್ಲವೋ ?" ಎಂದು ತಾರಶ್ರುತಿಯಲ್ಲಿ ಕಿರುಚಿದೆ.

ಆದರೆ ಪಾದರಸ ಓಡಲು ತೊಡಗಿದರೆ ಹಿಡಿಯಲು ಸಿಕ್ಕುವುದೇ ? ಶೇಷಯ್ಯ ನಗುನಗುತ್ತ ಇಳಿದರು. ಮುಂದಿನ ಕ್ಷಣದಲ್ಲಿ ನಾವೂ ಅವರೂ ಬೆಟ್ಟದ ಬೇರೆ ಬೇರೆ ಮೈಗಳಲ್ಲಿ ನಡೆಯುತ್ತಿದ್ದೆವು. ಮತ್ತೊಂದು ಹತ್ತು ಹೆಜ್ಜೆ ಮುಂದೆ ಹೋಗುವಾಗ ಅವರಿಗೂ ನಮಗೂ ಮಧ್ಯೆ ಬೆಟ್ಟದ ಉಬ್ಬು ಅಡ್ಡ ಬಂದಿತು. ಇನ್ನೊಂದು ಗಳಿಗೆ, ಅವರು ನಮ್ಮ ದೃಷ್ಟಿಯಿಂದ ಮರೆಯಾದರು. ಏನು ಬಂತಪ್ಪಾ ಈ ಮನುಷ್ಯನಿಗೆ ಎಂದು ನಾವು ಚಿಂತೆಯಿಂದಲೇ ಮುಂದೆ ನಡೆಯುತ್ತಿದ್ದೆವು. ಅಷ್ಟರಲ್ಲಿಯೇ ಭಯಂಕರ ಚೀತ್ಕಾರ "ನಾರಾಯಣರಾವ್, ನಾರಾ..." ಎಂದು ಬೆಟ್ಟದ ಯಾವುದೋ ಮೂಲೆಯಿಂದ ಕರ್ಕಶವಾಗಿ ತಿವಿದು ನಮ್ಮನ್ನು ಕದಡಿಬಿಟ್ಟಿತು. ನೀರೊಳಗೆ ಮುಳುಗಿ ಹೋಗುವವನ, ಹೆಬ್ಬಾವಿನ ಹಿಡಿತಕ್ಕೆ ಸಿಕ್ಕಿದವನ, ಹುಲಿಯಿಂದ ಅಪ್ಪಳಿಸಲ್ಪಟ್ಟವನ ಕರುಣಾಕ್ರಂದನವದು.

ನಮಗೆ ದಿಗ್ಭ್ರಮೆಯಾಯಿತು. ನಿಶಾನಿ ಮೊಟ್ಟೆಯೊಡೆದಂತಾಯಿತು. "ಶೇಷಯ್ಯ ಶೇಷಯ್ಯ" ಎಂದು ಕಿವಿ ಗಡಚಿಕ್ಕುವಂತೆ ಮೇಲೇರಿ ಕೆಳಗಿಳಿದು ಎಲ್ಲ ದಿಕ್ಕಿಗೆ ತಿರುಗಿ ಕಿರುಚಿದೆವು. ಕಾಡು ಮೇಡುಗಳು ಕಣಿವೆ ತೆಮರುಗಳು ಮರುದನಿಗೈದುವು—ಶೇಷಯ್ಯ. ಶೇಷಯ್ಯನಿಲ್ಲ. ಶೇಷಯ್ಯನಿಲ್ಲದೇ ಊರಿಗೆ ಹೋಗುವುದು ಹೇಗೆ ? ಇದೇನು ಅವಸ್ಥೆ ಒದಗಿತು. ಆಲೋಚನೆ ಮಾಡಲಾಗದೇ ಮಾತನಾಡಲಾರದೇ ಮುಂದುವರಿಯಲಾಗದೇ

ಶೂನ್ಯದೃಷ್ಟಿಯನ್ನು ಚೆಲ್ಲುತ್ತ ನಿಂತುಕೊಂಡೆವು. ಗಂಟೆ ೫ ಆಗಿತ್ತು. ಸೂರ್ಯ ಆಗಲೇ ದೂರದ ಬೆಟ್ಟದ ಹಿಂದೆ ಕಂತಿದ್ದ. ಕರಿನೆರಳು ಕರಾಳವಾಗಿ ದೌಷ್ಟ್ಯದ ಪ್ರತೀಕವಾಗಿ ಹರಡಿತ್ತು. ದಾರಿ ಇನ್ನೂ ಆರು ಮೈಲಿದ್ದಿರಬಹುದು. ಮತ್ತೆ ಮುಂದಿನ ನಿರ್ಧಾರ ಕೈಗೊಂಡೆವು. ಅದರ ಪ್ರಕಾರ ನಾನೊಬ್ಬನೇ ಮುಂದೆ ಓಡಿ ಓಡಿ ಹೋಗಿ ದಾರಿ ಸೇರಬೇಕು, ಅಲ್ಲಿಗೆ ಬಂದಿರುವ ಶ್ರೇಷ್ಠರ ಕಾರಿನಲ್ಲಿ ಕುಳಿತು ಮಡಿಕೇರಿಗೆ ಹೋಗಿ ಜನ, ಲೈಟು, ಡಾಕ್ಟರರು, ಬೇಟೆಗಾರರು ಎಲ್ಲರನ್ನೂ ಕರೆದು ತರಬೇಕು; ರಾತ್ರಿಯಿಡೀ ಆ ಭೀಕರ ಏಕಾಂತತೆಯಲ್ಲಿ ಶೇಷಯ್ಯನನ್ನು ಹುಡುಕಬೇಕು; ಉಳಿದವರು ಅಲ್ಲಿಯೇ ಒಬ್ಬರಿಗೊಬ್ಬರು ಕಾಣುವಷ್ಟು ದೂರದಲ್ಲಿ ಹರಡಿ ಕಾಲುದಾರಿಯಲ್ಲಿಯೇ ಮುಂದೆ ನಿಧಾನವಾಗಿ ಇಳಿಯುತ್ತ ಶೇಷಯ್ಯ ನಾಮಸ್ಮರಣೆ ಗಟ್ಟಿಯಾಗಿ ಮಾಡುತ್ತ ಅರಸುತ್ತ ಸಾಗಬೇಕು; ಬೆಟ್ಟದ ತಳದಲ್ಲಿ ಕುಳಿತಿರಬೇಕು ನಾನು ಹಿಂತಿರುಗಿ ಬರುವವರೆಗೆ.

ನಾನು ಒಂದು ಮೈಲಿ ಓಡಿದೆ. ಓಡಿದೆನೋ ಹಾರಿದೆನೋ ಅಂತೂ ಬೆಟ್ಟದ ಬುಡಕ್ಕೆ ಬಂದಿದ್ದೆ. ಅಷ್ಟರಲ್ಲಿಯೇ ದೂರದ ಕಣಿವೆಯಿಂದ ಕೇಕೆ ಹಾಕಿ ಕರೆಯುತ್ತಿದ್ದಾರೆ ಶೇಷಯ್ಯ "ನಾ ಫಸ್ಟ್!" ಪಂಥದಲ್ಲಿ ಅವರು ಗೆದ್ದುದು ನಿಜ. ಹತ್ತಿರ ಹೋಗಿ ನೋಡಿದೆ. ಮೈಕೈ ತೀರ ಗಾಯ, ಕೆಸರು. ಬಟ್ಟೆ ಹರಿದು ಹೋಗಿದೆ. ಆ ಗಳಿಗೆಯಲ್ಲಿ ಮೂಡಿದ ಮೊದಲಿನ ಭಾವ "ಎಲ ಪ್ರಾಣೀ" ಎನ್ನುವ ತಿರಸ್ಕಾರ. ಕೂಡಲೇ ಅಮಿತ ಸಂತೋಷ. ಈ ತುಮುಲಗಳ ನಡುವೆ ನನಗೆ ಮಾತೇ ಹೊರಡಲಿಲ್ಲ. ಅಂತೂ ಅವರು ಶೇಷಯ್ಯ ಹೌದೆಂದು ಸಮೀಪದಿಂದ ಖಚಿತವಾದ ಮೇಲೆ "ಏನು ನಿಮ್ಮ ಕತೆ ? ಬಹಳ ಹೆದರಿಸಿಬಿಟ್ಟಿರಪ್ಪ" ಎಂದು ನಿಟ್ಟುಸಿರುಬಿಟ್ಟೆ.

"ನಾನು ನಿಮ್ಮಿಂದ ಮುಂದೆ ಮುಂದೆ ಇಳಿದಂತೆ ಆ ಬೆಟ್ಟ ನನ್ನನ್ನು ಜೋರು ಜೋರಾಗಿ ನೂಕತೊಡಗಿತು. ನಡೆಯುವುದು ಕಷ್ಟವಾಗಿ ಓಡತೊಡಗಿದೆ. ಮುಂದೆ ಆಳೆತ್ತರದ ಹುಲ್ಲು ರಾಶಿಯೊಳಗೆ ಸಿಕ್ಕಿ ಹಾಕಿಕೊಂಡು ದಿಕ್ಕು ತಪ್ಪಿಹೋಯಿತು. ಅಂತೂ ಕೆಳಗೆ ಕೆಳಗೆಂದು ಕಾಲು ಹಾಕಿದೆ. ಒಂದೆಡೆ ಕಾಲಿಟ್ಟೆ—ಧಿಡೀರನೆ ಕುಸಿದು ಜಾರಿ ಪಾತಾಳಕ್ಕೆ ಬಿದ್ದೆ. ಆಗಲೇ ನಿಮ್ಮ ಹೆಸರನ್ನು ಕೂಗಿ ಕರೆದದ್ದು. ಆ ಆಳದಲ್ಲಿ ನೀರು ಕೆಸರು ಕೊಳೆತ ಎಲೆ ತುಂಬಿದ್ದುದರಿಂದಲೂ ಜಾರಿದ ಪ್ರಪಾತದ ಮೈ ಎಲ್ಲ ಹುಲ್ಲು ಮುಚ್ಚಿದ್ದುದರಿಂದಲೂ ನನಗೇನೂ ಅಪಾಯವಾಗಲಿಲ್ಲ. ನಾನೊಂದು ದಟ್ಟ ಕಾಡಿನ ಬುಡದಲ್ಲಿದ್ದೆ. ಮೇಲೆ ನೋಡಿದರೆ ೩೦ ಅಡಿಯಾದರೂ ನಾನು ಕುಸಿದಿರಬೇಕೆಂದು ತೋರಿತು. ಪೂರ್ಣ ಕತ್ತಲೆ. ದಾರಿ ಎಲ್ಲಿಯೂ ಇಲ್ಲ. ನೀರು ಯಾವ ಕಡೆ ಹರಿಯುತ್ತಿದೆ ಎಂದು ಕೈಯಿಂದ ತಡವಿ ಪರಡಿ ಪರಿಶೀಲಿಸಿದೆ. ಅದರ ಗತಿಯ ಕಡೆಗೆ ತೆವಳಿ ಹರಿದು ಗಿಡಗಳನ್ನು ಮುರಿದು ಮುಂದುವರಿದೆ. ಹೀಗೆ ಎಷ್ಟೋ ಹೊತ್ತು ಹೋಗುವಾಗ ಕಾಡಿನಿಂದ ಹೊರಗೆ ಬಂದೆ. ಮತ್ತೆ ಇಲ್ಲಿಗೆ ಬಂದೆ. ಇಲ್ಲಿಯು ದಾರಿ ಎಲ್ಲ ನೋಡಿ ನೀವಿಲ್ಲಿಗೆ ಬಂದೇ ಬರುವಿರಿ ಎಂದು ಇಲ್ಲಿಯೇ ನಿಂತೆ!"

ನಿಶಾನಿ ಮೊಟ್ಟೆ ಎರಡನೇ ಸಲ ಎಚ್ಚರಿಸಿತ್ತು—ಬೆಟ್ಟಗಳ ನಡುವೆ ಸೀದಾ ಮಾರ್ಗ ಎನ್ನುವುದೊಂದು ಬಿಸಿಲ್ಗುದುರೆ.

ಜನರಲ್ ನಾಲೆಜ್ ಅಭಿವೃದ್ಧಿ ಆಯಿತು!

ರಾಯಪ್ಪನ್ ಯುಗದಲ್ಲಿ ನಡೆದ ಇನ್ನೊಂದು ಘಟನೆಯನ್ನು ಇಲ್ಲಿ ಹೇಳಬೇಕು. ಅರ್ಲ್ ರಾಬರ್ಟ್ ಶೂಟಿಂಗ್ ಕಾಂಪಿಟಿಶನ್ ಎಂಬುದೊಂದು ಅಂತಾರಾಷ್ಟ್ರೀಯ ಗುರಿ ಹೊಡೆಯುವ ಸ್ಪರ್ಧೆ. ಇದರಲ್ಲಿ ಆ ವರ್ಷ ನಮ್ಮ ಆರಿಸಿದ ಹುಡುಗರು ಭಾಗವಹಿಸಬೇಕು ಎಂದು ಬೆಂಗಳೂರಿನಿಂದ ಆದೇಶ ಬಂತು. ಆದರೆ ಈ ಸ್ಪರ್ಧೆಯ ಷರತ್ತುಗಳನ್ನು ಪಾಲಿಸಿ ಗುಂಡು ಹೊಡೆಯಲು ಸಮರ್ಪಕವಾದ ಶೂಟಿಂಗ್ ರೇಂಜ್ (ಗುರಿ ಹೊಡೆಯುವ ವಿಶಾಲ ಪ್ರದೇಶ) ಕೊಡಗಿನಲ್ಲೆಲ್ಲೂ ಇರಲಿಲ್ಲ. ಸಮೀಪದ ಮೈಸೂರು ನಗರದ ಚಾಮುಂಡೀ ಬೆಟ್ಟದ ತಪ್ಪಲಿನಲ್ಲಿದ್ದ ರೇಂಜಿಗೇ ಹೋಗಬೇಕಾಗಿತ್ತು. ಎಂಟು ಕ್ಯಾಡೆಟುಗಳ ತಂಡವನ್ನು ನಮ್ಮ ೧೫ CWT ಟ್ರಕ್ಕಿನಲ್ಲಿ ಕೂರಿಸಿ ಮೈಸೂರಿಗೆ ಕರೆದುಕೊಂಡು ಹೋಗಿ ಈ ಸ್ಪರ್ಧೆ ನಡೆಸಬೇಕು, ರಾಯಪ್ಪನ್ ಮತ್ತು ನಾನು ಇಬ್ಬರೂ ಈ ತಂಡದೊಡನೆ ಮುಂದಾಳುಗಳಾಗಿ ಹೋಗಬೇಕು ಎಂದು ಬೆಂಗಳೂರಿನ ಹುಕುಂ ಆಯಿತು. ಆರಿಸಿದ ಕ್ಯಾಡೆಟುಗಳಿಗೆ ಸಾಕಷ್ಟು ಪೂರ್ವಶಿಕ್ಷಣವನ್ನು ಮಡಿಕೇರಿಯ ಕಿರುರೇಂಜಿನಲ್ಲಿ ನೀಡಿದೆವು.

"ನಾಳೆ ದಿವಸ ಮಧ್ಯಾಹ್ನ ೧೨ ಗಂಟೆಗೆ ಸರಿಯಾಗಿ ನಾವು ಎನ್‌ಸಿಸಿ ಕಛೇರಿಯನ್ನು ಬಿಡುವವರಿದ್ದೇವೆ. ಆದ್ದರಿಂದ ನೀವೆಲ್ಲರೂ ೧೧ ಗಂಟೆಗೇ ಕಛೇರಿಗೆ ಬರತಕ್ಕದ್ದು. ಯಾವ ಕಾರಣದಿಂದಾದರೂ ತಡವಾಗಿ ಬರಕೂಡದು" ಎಂದು ಆಜ್ಞೆ ವಿಧಿಸಿ "ಕೊಯಿ ಶಕ್ ಯಾ ಸವಾಲ್" ಎಂದೂ ಕೇಳಿದೆ.

ನನ್ನ ಹುಕುಂ ಅವರಿಗೆ ತಿಳಿಯಿತೇ ಇಲ್ಲವೇ ಎಂದು ಪರೀಕ್ಷಿಸಲು ಹಲವಾರು ಅಡ್ಡ ಪ್ರಶ್ನೆಗಳನ್ನು ಹಾಕಿದೆ ಪ್ರತಿಯೊಬ್ಬನಿಂದಲೂ ಸಮರ್ಪಕ ಉತ್ತರ ದೊರೆತದ್ದರಿಂದ ನಾನು ತೃಪ್ತಿ ಪಡೆದೆ. ನನ್ನ ಮನೆ ಎನ್‌ಸಿಸಿ ಕಛೇರಿಯ ಪಕ್ಕದಲ್ಲಿಯೇ ಇದ್ದುದರಿಂದ ನಾನು ೧೦ ಗಂಟೆಗೇ ಅಲ್ಲಿಗೆ ಹೋಗಿ, ಆರ್ಮಿ ಸ್ಟಾಫುಗಳ ನೆರವಿನಿಂದ ನಾವು ತೆಗೆದು ಕೊಂಡು ಹೋಗಬೇಕಾಗಿದ್ದ ಗುರಿಹಲಗೆಗಳು, ರೈಫಲುಗಳು, ತೋಟಾಗಳು ಮುಂತಾದ ವನ್ನೆಲ್ಲ ಬಿಡಿಬಿಡಿಯಾಗಿ ಪರೀಕ್ಷಿಸಿ ಎಲ್ಲವೂ ಸರಿಯಾಗಿವೆಯೆಂದು ಖಾತ್ರಿ ಮಾಡಿಕೊಂಡೆ. ಅವನ್ನೆಲ್ಲ ಲಾರಿಯಲ್ಲಿ ಪೇರಿಸಿಯೂ ಆಯಿತು. ಮನೆಗೆ ಹೋಗಿ ಊಟ ಮುಗಿಸಿ ಮರಳುವಾಗ ೧೧–೩೦ ಗಂಟೆ, ಆ ಮೊದಲೇ ಬಂದಿದ್ದ ಕ್ಯಾಡೆಟುಗಳಿಗೆ ಸ್ಟಾಫುಗಳು ಪುನಃ ಪುನಃ ಯುಕ್ತ ಶಿಕ್ಷಣ ಮತ್ತು ಅಭ್ಯಾಸ ನೀಡುತ್ತಿದ್ದರು—ಓಟಕ್ಕೆ ತೊಡಗುವ ಮೊದಲು ಕುದುರೆಗಳನ್ನು ಮಾಲೀಸು ಮಾಡಿ ಕುಮ್ಮಕ್ಕು ನೀಡುವಂತೆ. ಎಲ್ಲರೂ ಸಾವಧಾನ್ ಸ್ಥಿತಿಗೆ ಚಿಮ್ಮಿದರು. ಹಿರಿಯ ಸುಬೆದಾರ್ ನನಗೆ ಗೌರವ ವಂದನೆ ನೀಡಿದ. "ಆಲ್ ಠೀಕ್ ಹೈ ಸಾಬ್?" ಎಂದು ಮಿಲಿಟರಿ ಗತ್ತಿನಲ್ಲಿ ಪ್ರಶ್ನಿಸಿದೆ.

"ಒಂದು ಮಾತ್ರ ಸರಿ ಇಲ್ಲ, ಸಾರ್."

ಎಂಟು ಇರಲಿಲ್ಲ—ಏಳೇ. ಒಬ್ಬ ಯಾರು? ಕೆ. ಎಂ. ಮುದ್ದಪ್ಪ ಎಂಬ ಕ್ಯಾಡೆಟ್. ಸಮರ್ಥ, ಯೋಗ್ಯ, ಒಳ್ಳೆ ಗುರಿ ಹೊಡೆವಾತ. ಇವನಿಗೇನಾಯಿತು? ಆರೋಗ್ಯವೇನಾದರೂ ಥಕ್ಕನೆ ಕೆಟ್ಟುಹೋಯಿತೇ, ಅಪಘಾತವೇನಾದರೂ ಸಂಭವಿಸಿರಬಹುದೇ ಎಂದು ಚಿಂತಿಸಿದೆ. ಬೇರೆ ಯಾವ ಕಾರಣವೂ ಈತನ ತಡವಾಗುವಿಕೆಗೆ ಇದ್ದಿರಲಾರದು. ಅವನಿದ್ದುದ್ದು ಕಾಲೇಜಿನ ಹಿಮ್ಮಗ್ಗಲಿನ ಒಂಟಿ ಮನೆಯಲ್ಲಿ. ಆದ್ದರಿಂದ ಯಾರಿಗೂ ವಾಸ್ತವಿಕ ಪರಿಸ್ಥಿತಿ ತಿಳಿದಿರಲಿಲ್ಲ. ಗಂಟೆ ೧೧–೫೫ ಆಯಿತು. ಮುದ್ದಪ್ಪನಿಲ್ಲ.

ಉಳಿದವರೆಲ್ಲರೂ ಲಾರಿ ಏರಿದ್ದಾರೆ. ೧೧-೫೭ ದಾಟಿತು. ಸುತ್ತಲೂ ನೋಡಿದೆ. ಗಟ್ಟಿಯಾಗಿ ಕರೆದೆ. ಮುದ್ದಪ್ಪ ಇಲ್ಲ. ೧೨-೦೧ ಗಂಟೆ ಆಗಿಯೇ ಹೋಯಿತು.

"ಮಾಚಯ್ಯ! ಲಾರಿ ಚಲೋ !" ಹುಕುಂ ನೀಡಿದೆ.

ಡ್ರೈವರ್ ಮಾಚಯ್ಯ ಪರಮ ಸ್ವಾಮಿಭಕ್ತ, ಶಿಸ್ತಿನ ಇನ್ನೊಂದು ರೂಪ. ಲಾರಿ ಹೊರಟಿತು ಮುದ್ದಪ್ಪರಹಿತವಾಗಿ. ೧೨-೦೫ ಗಂಟೆಗೆ ಪೇಟೆಯಲ್ಲಿ ನಮಗಾಗಿ ಕಾದಿದ್ದ ರಾಯಪ್ಪನ್ ಅವರನ್ನು ಲಾರಿಗೆ ಹತ್ತಿಸಿಕೊಂಡೆವು. ೧೨-೧೦ಕ್ಕೆ ಲಾರಿ ಮಡಿಕೇರಿ ಬಿಟ್ಟಿತು. ಅಂತೂ ಮುದ್ದಪ್ಪ ಬರಲೇ ಇಲ್ಲ. ಕಾಲನಿಷ್ಠೆ-ಕ್ಯಾಡೆಟ್ ನಿಷ್ಠೆ ಇವೆರಡರಲ್ಲಿ ಸ್ಪರ್ಧೆ ಒದಗಿತ್ತು. ನನ್ನ ಒಲವು ಕಾಲನಿಷ್ಠೆ ಎಡೆಗೇ ಆದುದರಿಂದ ಮುದ್ದಪ್ಪನಿಲ್ಲದೇ ನಮ್ಮ ಲಾರಿ ಮೈಸೂರಿನೆಡೆಗೆ ಧಾವಿಸಿತು. ಹುಡುಗರನ್ನು ಶಾರದಾವಿಲಾಸ ಪ್ರೌಢಶಾಲೆ ಯಲ್ಲಿ ತಂಗಲು ಬಿಟ್ಟು, ರಾಯಪ್ಪನ್ ಮತ್ತು ನಾನು ಮರುದಿವಸದ ಏರ್ಪಾಡಿಗೋಸ್ಕರ ಎಲ್ಲೆಲ್ಲಿಗೋ ಹೋಗಿ ಬೇರೆ ಬೇರೆ ಅಧಿಕಾರಿಗಳನ್ನು ಭೇಟಿ ಮಾಡಿದೆವು. ೮ ಗಂಟೆ ರಾತ್ರಿಗೆ ಪುನಃ ಹುಡುಗರನ್ನು ವಿಚಾರಿಸಿ, ಇಂದ್ರಭವನದಲ್ಲಿ ಬಾಡಿಗೆಗೆ ಪಡೆದಿದ್ದ ಕೋಣೆಗೆ ಮಲಗಲು ಹೋದೆವು.

ಮರುದಿನ ಸ್ಪರ್ಧೆಯ ದಿವಸ. ಬೆಳಗ್ಗಿನ ೬ ಗಂಟೆಗೆ ಸರಿಯಾಗಿ ಹುಡುಗರನ್ನು ಕೊಂಡೊಯ್ಯಲು ಅವರಿದ್ದೆಡೆಗೆ ಹೋದೆವು. "ಗುಡ್ ಮಾರ್ನಿಂಗ್ ಸರ್" ಎಂದು ಮೊದಲು ಸ್ವಾಗತಿಸಿದವನು ಕ್ಯಾಡೆಟ್ ಕೆ. ಎಂ. ಮುದ್ದಪ್ಪ.

"ಇದೇನು ಆಶ್ಚರ್ಯ. ಹೇಗೆ ಬಂದೆ ?" ನಾನು ಕೇಳಿದೆ.

"ನನ್ನ ವಾಚು ತಪ್ಪು ಸಮಯ ತೋರಿಸಿ ಮೋಸ ಮಾಡಿತು, ಸಾರ್. ನಾನು ಆಫೀಸಿಗೆ ಬಂದಾಗ ಲಾರಿಯ ಹೊಗೆ ಮೂಸಲು ಮಾತ್ರ ಸಿಕ್ಕಿತು. ಆದರೆ ಜಾಡು ಹಿಡಿದು ಮಡಿಕೇರಿ ಪೇಟೆ ಇಡೀ ಓಡಿದೆ. ಆದರೆ ತುಂಬ ತಡವಾಗಿ ಹೋಗಿತ್ತು. ಮತ್ತೆ ೪ ಗಂಟೆಗೆ ಮಡಿಕೇರಿ ಯಿಂದ ಹೊರಡುವ ಪಾಲಂಜಿ ಬಸ್ಸಿನಲ್ಲಿ ಕುಳಿತು ಮೈಸೂರನ್ನು ರಾತ್ರಿ ೮ ಗಂಟೆಗೆ ತಲಪಿದೆ. ಇಲ್ಲಿ ನನ್ನ ಅದೃಷ್ಟದಿಂದ ಕೊಡಗಿನ ಹುಡುಗರು ಸಿಕ್ಕಿ ನಮ್ಮವರು ತಂಗಿರುವ ಈ ಸ್ಥಳದ ವಿವರ ಹೇಳಿದರು. ಇದು ನಡೆದ ಕತೆ ಸಾರ್. ನನ್ನದು ತಪ್ಪಾಯಿತು. ಶಿಸ್ತು ಭಂಗ ಮಾಡಿದ್ದೇನೆ. ಮನ್ನಿಸಬೇಕು."

"ಅಯ್ಯೋ ಪಾಪ ! ನಿನಗೆ ತುಂಬ ತ್ರಾಸವಾಯಿತಲ್ಲ ಮುದ್ದಪ್ಪಾ" ಎಂದು ರಾಯಪ್ಪನ್ ಅನುಕಂಪದ ನುಡಿ ಆಡಿದರು.

"ಏನೂ ಚಿಂತೆ ಇಲ್ಲ ಸಾರ್. ಜನರಲ್ ನಾಲೆಜ್ ಅಭಿವೃದ್ಧಿಗೊಂಡಿತು" ಎನ್ನಬೇಕೇ ನಮ್ಮ ವೀರ ಮುದ್ದಪ್ಪ!

ಕಷ್ಟದಲ್ಲಿ ಸುಖ ಕಾಣುವ, ವ್ಯತಿರಿಕ್ತ ಸನ್ನಿವೇಶದಲ್ಲಿ ಕೈಗುಣ ನೋಡುವ ಈ "ಜನರಲ್ ನಾಲೆಜ್ ಅಭಿವೃದ್ಧಿ" ಮನೋಭಾವ ಬಲು ಉನ್ನತ ಮಟ್ಟದ್ದು.

ಅಲ್ಲಾಗಲಿ ಅಥವಾ ಇಲ್ಲಾಗಲಿ ! ಸಲ್ಲದೆನ್ನಬೇಡ—
ಒಳ್ಳಿತು—ಎಲ್ಲೂ ಒಂದೆ ನೋಡ
ಸೆಣಸು ನಿಲಿಸು ಒಳ್ಮನಸುಪತಾಕೆ
ಬೀಳದಂತೆ ಜೋಕೆ!

ಗೋಪಾಲಕೃಷ್ಣ ಅಡಿಗ

೧೯೬೦

ಭಾರತೀಯ ಸೈನ್ಯದ ಉಜ್ಜ್ವಲ ಪ್ರತೀಕ

ಕ್ಯಾಪ್ಟನ್ ರಾಯಪ್ಪನ್ ೧೯೬೦ರ ಬೇಸಗೆಯಲ್ಲಿ ವರ್ಗವಾಗಿ ಹೋದರು. ಬಂದದ್ದು ಎಂತೋ ಎಷ್ಟು ಮೆತ್ತಗೋ ಹೋದದ್ದೂ ಅಂತೇ, ಅಷ್ಟೇ ಮೆತ್ತಗೆ. ರಜೆಯ ದಿನಗಳಾದ್ದರಿಂದ ಹುಡುಗರಿಲ್ಲ, ಪೆರೇಡುಗಳಿಲ್ಲ. ನಾವೇ ಏರ್ಪಡಿಸಿದ ಬೀಳ್ಕೊಡುಗೆಯ ಕೂಟಗಳಲ್ಲಿ ಆಡಂಬರವಿಲ್ಲ. ಎಲ್ಲವೂ ಸರಳತೆಯ ಸ್ವಚ್ಛತೆಯ ಪ್ರತೀಕಗಳು. ಅವರ ಸೇವೆಯನ್ನು ಸ್ಮರಿಸಿ ಕೃತಜ್ಞತೆಯನ್ನು ನಾವು ಅರ್ಪಿಸಿದಾಗ "ಸಂಬಳ ಕೊಟ್ಟಿದ್ದಾರೆ ಕೆಲಸಮಾಡಿದ್ದೇನೆ. ಬೇರೇನೂ ಮಾಡಲಿಲ್ಲ. ಸಂಸ್ಥೆ ನಿಮ್ಮದು. ಹುಡುಗರು ನಿಮ್ಮವರು. ನಿಮ್ಮ ಸೇವೆ ದಕ್ಷತೆಗಳೇ ಶ್ಲಾಘನೀಯವಾದವು" ಎಂದರವರು. ಅವರ ಪಾರಕ ನಡತೆ ಬಲು ಎತ್ತರಮಟ್ಟದ್ದು. ಸರಿದಾರಿ ತೋರಿಸಿ ಕೈಹಿಡಿದು ನಡೆಸಿದರು. ಎಲ್ಲ ಹೊಣೆಗಳನ್ನೂ ನಮ್ಮ ವಶಬಿಟ್ಟು ತಾವು ಎಲ್ಲ ಕ್ರಿಯೆಗಳಲ್ಲಿಯೂ ಉತ್ಸಾಹದಿಂದ ಭಾಗವಹಿಸಿದರು. ನಾವು ಎಡವಿದಾಗ ದಾರಿ ತಪ್ಪಿದಾಗ ಸಾಂತ್ವನ ವಚನ ನುಡಿದು ಮಾರ್ಗದರ್ಶನ ಮಾಡಿದರು. ರಾಯಪ್ಪನ್‌ರ ಆದರ್ಶ, ಚೈತನ್ಯ ಭಾರತೀಯ ಸೈನ್ಯದ ಉಜ್ಜ್ವಲ ಪ್ರತೀಕಗಳು.

ತಮ್ಮಯ್ಯ ಎದುರಿಸಿದ ತಾಪತ್ರಯಗಳು

ಗೂರ್ಖಾ ರೆಜಿಮೆಂಟಿನ ಕ್ಯಾಪ್ಟನ್ ಎಂ. ಡಿ. ತಮ್ಮಯ್ಯ ನಮ್ಮ ಮುಂದಿನ ಓಸಿ. ಇವರು ನಮ್ಮೂರಿನವರು ಮಾತ್ರವೇ ಅಲ್ಲ ನಾನು ಮಡಿಕೇರಿಯಿಂದ ಎಸ್‌ಎಸ್‌ಎಲ್‌ಸಿ ಪಾಸಾದ ವರ್ಷವೇ (೧೯೪೨) ವಿರಾಜಪೇಟೆಯಿಂದ (ಕೊಡಗಿನ ಎರಡನೆಯ ಪಟ್ಟಣ; ಮೊದಲನೆಯದು ಮಡಿಕೇರಿ) ಆ ಪರೀಕ್ಷೆಯನ್ನು ಪಾಸು ಮಾಡಿದವರು. ಹೀಗಾಗಿ ಒಂದು ವಿಧದಲ್ಲಿ ನಾವೀರ್ವರೂ ಸಹಪಾಠಿಗಳು. "ಜೀಟಿ! ರಾಯಪ್ಪನವರಿಂದ ಎಲ್ಲ ವಿಷಯಗಳನ್ನೂ ಕೇಳಿ ತಿಳಿದಿದ್ದೇನೆ. ಅವರು ಬೇರೆ ನಾನು ಬೇರೆ ಎಂದು ನೀವು ಯಾರೂ ಭಾವಿಸಬಾರದು. ಬೆಂಗಳೂರಿನಲ್ಲಿಯೂ ಇಲ್ಲಿಯ ಹಿರಿಮೆಯನ್ನು ಹೇಳಿದ್ದಾರೆ. ಆದ್ದರಿಂದ ಹಿಂದಿನ ಸತ್ಸಂಪ್ರದಾಯವನ್ನು ನೀವೆಲ್ಲರೂ ಮುಂದುವರಿಸಿಕೊಂಡು ಹೋಗಬೇಕು. ಸೀನಿಯರ್ ಆಫಿಸರ್ ಆಗಿರುವ ನಿಮ್ಮದೇ ಇದೆಲ್ಲ ಹೊಣೆ ಎಂದು ಭಾವಿಸಿ ನಡೆಯಬೇಕು" ಎಂದರು ತಮ್ಮಯ್ಯ. ಎಣೆಯಿಲ್ಲದ ವಿನಯ ಸೌಜನ್ಯ ಅವರದ್ದು. ನಮ್ಮೊಡನೆ ಹಿರಿಯಣ್ಣನಂತೆ ಇದ್ದರೇ ವಿನಾ ಒಬ್ಬ ಮಿಲಿಟರಿ ಕಮಾಂಡಿಂಗ್ ಆಫಿಸರನಂತೆ ಅಲ್ಲ. ಎಲ್ಲ ಪೆರೇಡುಗಳಿಗೂ ಬಂದು ಪಾಠ ಮಾಡಿದರು. ಕೊಡಗು ಇಡೀ ಸಂಚರಿಸಿ ಜೂನಿಯರ್ ಡಿವಿಶನ್ನುಗಳನ್ನು ವಿಸ್ತರಿಸಿದರು.

೧೯೬೦ರ ಡಿಸೆಂಬರ್ ಕ್ಯಾಂಪನ್ನು ಮದಲಾಪುರದಲ್ಲಿಯೇ ಪುನಃ ನಡೆಸೋಣವೆಂದು ಅವರು ಸೂಚಿಸಿದರು. ಹಿಂದಿನ ವರ್ಷದ ಅನುಭವ ಇಲ್ಲಿ ನಮಗೆ ಬಲು ಪ್ರಯೋಜನ

ಕಾರಿಯಾಯಿತು. ಕ್ಯಾಂಪಿನ ಆಡಳಿತೆಯಲ್ಲಿಯೂ ಶಿಕ್ಷಣದಲ್ಲಿಯೂ ಹಲವಾರು ನೂತನ ಪರಿಷ್ಕಾರಗಳನ್ನು ತಂದುದರಿಂದ ಮೊದಲನೆಯ ದಿವಸವೇ ಪ್ರತಿಯೊಂದು ವಿವರವೂ, ಬಹಳ ತಿಂಗಳುಗಳಿಂದ ಹಾಗೆಯೇ ನಡೆಯುತ್ತಿದೆಯೋ ಎಂಬಷ್ಟು ಸುಸ್ಪಷ್ಟವಾಗಿ, ಕಾರ್ಯಗತವಾಯಿತು. ಬೆಂಗಳೂರಿನಿಂದ ಆಗಮಿಸಿದ್ದ ಸರ್ಕಲ್ ಕಮಾಂಡರರ ಪ್ರತಿನಿಧಿ ಗಲಾಟೆಯಿಲ್ಲದ ಈ ಸುವ್ಯವಸ್ಥೆಯನ್ನು ನೋಡಿ ಆಶ್ಚರ್ಯಪಟ್ಟರು, ಸಂತೋಷಪಟ್ಟರು.

ಆದರೆ ತಮ್ಮಯ್ಯನವರ ರಾಜ್ಯಭಾರದಲ್ಲಿ ಅವರು ಬೇರೆ ವಿಧದ ತೊಂದರೆಗಳನ್ನು ಎದುರಿಸಬೇಕಾಯಿತು. ಜಾತೀಯ ದುಷ್ಟ ಬಲಗಳು ಎಚ್ಚೆತ್ತು ತಮ್ಮಯ್ಯನವರ ಹಾಗೂ ನಮ್ಮ (ಎನ್‌ಸಿಸಿ ಆಫಿಸರುಗಳು) ನಡುವೆ ಬೆಣೆ ತೂರಲು ಪ್ರಯತ್ನಿಸಿದುವು. ಕ್ಯಾಡೆಟುಗಳಿಗೆ ಉನ್ನತ ದರ್ಜೆಗಳನ್ನು ಕೊಟ್ಟು ಮೇಲಿನ ಅಂತಸ್ತುಗಳಿಗೆ ಬಡ್ತಿ ಕೊಡುವುದರಲ್ಲಿ ನಾವು ಎನ್‌ಸಿಸಿ ಕಾಯಿದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೆವು. ಯಾವ ಜಾತಿಯ ಕ್ಯಾಡೆಟನೂ ನಮಗೆ ಪ್ರಿಯನಲ್ಲ, ಯಾವ ಜಾತಿಯವನೂ ನಮಗೆ ಅಪ್ರಿಯನಲ್ಲ. ಮನೆಯ ವ್ಯವಹಾರಗಳು, ಮದುವೆ ಸಂಬಂಧಗಳು, ಧಾರ್ಮಿಕ ಆಚರಣೆಗಳು ಇಂಥ ವೈಯಕ್ತಿಕ ವಿಚಾರಗಳಲ್ಲಿ ಸೌಕರ್ಯಕ್ಕೋಸ್ಕರ ಜಾತಿ ಇದೆ; ಸಾಮಾಜಿಕ ಜೀವನರಂಗದಲ್ಲಿ ಇದು ಎಂದೂ ಹೋಗತಕ್ಕದ್ದಲ್ಲ—ಇದು ನಾವು ಮೂವರೂ ಅರಿತು ಕರಾರುವಾಕ್ಕಾಗಿ ಪಾಲಿಸುತ್ತಿದ್ದ ಸಂಪ್ರದಾಯ. ಸಾರ್ವಜನಿಕ ವ್ಯವಹಾರದಲ್ಲಿ ನಾವು ನ್ಯಾಯಶೀಲರಾಗಿರಬೇಕು, ಹಾಗೆ ವ್ಯಕ್ತಪಡಿಸಬೇಕು, ಹಾಗೆ ರುಜುವಾತುಪಡಿಸಲೂಬೇಕು ಎಂಬುದು ನಮ್ಮ ವ್ಯವಹಾರದ ಪ್ರಕಟಿತ ನೀತಿಯಾಗಿತ್ತು. ಇದನ್ನು ಅರಿಯದ ಅರಿತರೂ ಅರ್ಥವಿಸಿಕೊಳ್ಳಲಾಗದ ದುಷ್ಟಶಕ್ತಿಗಳು ನಮ್ಮ ವಿರುದ್ಧ ತಮ್ಮಯ್ಯನವರ ಮನಸ್ಸನ್ನು ಕಹಿಮಾಡಲು ಕತೆಕಟ್ಟಿದುವು. ಆದರೆ ತಮ್ಮಯ್ಯನವರ ಸಂಸ್ಕೃತಿ ಅತ್ಯುತ್ಕೃಷ್ಟವಾದದ್ದು. ಅವರು ನಗುತ್ತ ತೇಲಿಸಿ ನಮಗೆ ಎಚ್ಚರ ನುಡಿದರು "ಲೋಕ ನೀವೆಣಿಸಿದಷ್ಟು ಸರಳವಲ್ಲ." ಕರ್ನಲ್ ಸೋಮಯ್ಯನವರಿಗೆ ಮೂಗರ್ಜಿಗಳು ಹೋದುವು. ತಮ್ಮ ಊರಿನ ಯೂನಿಟ್ಟಿನ ವಿಚಾರದಲ್ಲಿ ಇಂಥ ಕ್ಷುದ್ರ ಪತ್ರಗಳು, ಆರೋಪಣೆಗಳು ಬಂದದ್ದು ಅವರಿಗೆ ಬಲು ನೋವುಂಟು ಮಾಡಿತು. ಆದರೂ ಹೊಣೆಗಾರಿಕೆ ಇದೆಯಷ್ಟೆ. ಯೂನಿಟ್ಟಿನ ವಾರ್ಷಿಕ ಪರಿಶೀಲನೆಗೆ (ಇನ್‌ಸ್ಪೆಕ್ಷನ್) ಬಂದರು. ಹಲವರು ಅವರನ್ನು ಖಾಸಗಿಯಾಗಿ ಭೇಟಿ ಮಾಡಿ ಗುಸಗುಸ ನುಡಿದದ್ದು ನಮಗೆ ತಿಳಿಯಿತು. ನಮ್ಮ ಕಾಗದಪತ್ರಗಳನ್ನು ಅವರು ಪರಿಶೀಲಿಸಿದರು. ಪ್ರತಿಯೊಂದು ಸಂಗತಿಯನ್ನೂ ಕುರಿತು ಸೂಕ್ಷ್ಮವಾಗಿ ಪ್ರಶ್ನಿಸಿ ವಿವರ ತಿಳಿದುಕೊಂಡರು. "ನನಗೆ ತಿಳಿದಿತ್ತು ನೀವು ಸದಾ ಹೀಗೆಯೇ ಎಂದು. ಈಗ ಅದು ಖಚಿತವಾಗಿ ಸಾಬೀತಾಯಿತು. ನೀವು ಚೆನ್ನಾಗಿರಬೇಕು" ಎಂದು ಕೆಲವೇ ಮಾತುಗಳಲ್ಲಿ ನಮ್ಮನ್ನು ಅವರು ಅಭಿನಂದಿಸಿ ಬೆಂಗಳೂರಿಗೆ ಮರಳಿದರು.

ಇನ್ನೊಂದು ಪರೇಡ್ ದಿವಸ. ಕಾಲೇಜ್ ಸಮೀಪದ ವಿಶಾಲ ದಿಬ್ಬದಲ್ಲಿ ನಾವು ಕ್ಯಾಡೆಟುಗಳ ತಂಡಗಳನ್ನು ಬೇರೆ ಬೇರೆ ಕಡೆ ವಿಭಾಗಿಸಿ ಪಾಠಗಳನ್ನು ನಡೆಸುತ್ತಿದ್ದೆವು. ನನ್ನ ಒಂದು ಪುಟ್ಟ ತುಕ್ಕಡಿಗೆ ರೈಫಲ್ಲಿನಲ್ಲಿ ಗುರಿ ಹಿಡಿಯುವ ಪಾಠವನ್ನು ನಾನು ಬೋಧಿಸುತ್ತಿದ್ದೆ. ನೆಲದ ಮೇಲೆ ಧಿಡೀರನೆ ಕೆಡೆದು ಗುರಿ ಹಿಡಿದು ಪ್ರತ್ಯಕ್ಷವಾಗಿ ಒಬ್ಬೊಬ್ಬನಿಗೂ ನಮೂನೆ ತೋರಿಸಬೇಕಾದ ಈ ಪಾಠದ ೪೦ ಮಿನಿಟುಗಳು ಅದು ಹೇಗೆ ಎಷ್ಟು ಬೇಗ

ಉರುಳಿಹೋದುವು ಎಂದು ನನಗೆ ತಿಳಿಯಲಿಲ್ಲ. ಪಾಠ ಮುಗಿಯುವ ವೇಳೆಗೆ ಹುಡುಗರ ಹಿಂದೆ ಸ್ವಲ್ಪ ದೂರದಲ್ಲಿ ಸಾದಾ ನಾಗರಿಕ ಉಡುಪಿನಲ್ಲಿ ನಿಂತಿದ್ದ ಒಬ್ಬ ವಯೋವೃದ್ಧರನ್ನು ಕಂಡೆ. "ಹಲೋ ನಾರಾಯಣರಾವ್! ಗುಡ್ ಈವ್‌ನಿಂಗ್" ಎಂದು ಅವರೇ ನನ್ನ ಬಳಿಗೆ ಬಂದರು. ಗೊತ್ತಾಯಿತು. ಗೊತ್ತಾಗಿ ಗಾಬರಿ ಆಯಿತು. ಸಂತೋಷವೂ ಆಯಿತು. ಕ್ಯಾಡೆಟ್ಟುಗಳನ್ನು ಸಾವಧಾನ್ ಸ್ಥಿತಿಗೆ ಕರೆದು ಅವರಿಗೆ ಯುಕ್ತವಂದನೆ ಅರ್ಪಿಸಿದೆ. "ನಿಮ್ಮ ದಕ್ಷತೆಗೆ ನಿಷ್ಠೆಗೆ ನಾನು ಸಂತೋಷಪಡುತ್ತೇನೆ." ನಮ್ಮ ಶಿಕ್ಷಣ ಕಾರ್ಯಕ್ರಮದ ಒಂದು ಪ್ರತಿ ಅವರ ಕೈಯಲ್ಲಿತ್ತು.

"ಉಳಿದ ಆಫಿಸರೆಲ್ಲಿ? ಕ್ಯಾಪ್ಟನ್ ತಮ್ಮಯ್ಯನವರೆಲ್ಲಿ?" ಅವರ ಪ್ರಶ್ನೆ.

"ಓಸಿಯವರು ಹೈಸ್ಕೂಲಿನ ಜೂನಿಯರ್ ಡಿವಿಶನ್ನಿನ ಪೆರೇಡಿಗೆ ಹೋಗಿದ್ದಾರೆ ಸಾರ್" ಎಂದೆ.

"ಹಾಗೆ ಹೋಗದಿದ್ದಾಗ?"

"ನಮ್ಮ ಪೆರೇಡುಗಳಿಗೆ ಒಂದು ಪಾಠ ಮಾಡುತ್ತಾರೆ, ಸಾರ್."

"ಸಂತೋಷ" ಅವರ ಉತ್ತರ.

ಬಾಳಿಗರೂ ಕೃಷ್ಣಯ್ಯನವರೂ ಇದ್ದ ಎಡೆಗಳಿಗೆ ಕರೆದುಕೊಂಡು ಹೋದೆ. "ಎಲ್ಲ ಕಡೆಯೂ ಹೀಗೆಯೇ ನಡೆದಿದ್ದರೆ! ನನ್ನ ಊರು ಮಾದರಿಯಾಗಿದೆಯೇ ಎಂದು ಪ್ರತ್ಯಕ್ಷ ಪರಿಶೀಲಿಸಲು ಬಂದೆ ಈ ರೀತಿ ಆಕಸ್ಮಾತ್ತಾಗಿ. ನಿಮಗೆ ಅಭಿನಂದನೆಗಳು."

"ಅಂತಿಮವಾಗಿ ನಮ್ಮ ಸಂತೃಪ್ತಿಯೇ ನಮಗೆ ಲಭಿಸುವ ಶಾಶ್ವತ ಪ್ರತಿಫಲವಲ್ಲವೇ ಸಾರ್" ಎಂದು ನಾನು ದನಿಗೂಡಿಸಿದೆ. ಕರ್ನಲ್ ಸೋಮಯ್ಯನವರು ಬಂದಷ್ಟೆ ಸೌಮ್ಯವಾಗಿ, ಆದರೂ ಖಚಿತವಾಗಿ, ಕರಗಿ ಮಾಯವಾಗಿ ಹೋದರು.

ನಮ್ಮ ಯೂನಿಟ್ಟಿನ ಸೀನಿಯರ್ ಸುಬೇದಾರ್ ಪುರುಷೋತ್ತಮನಾಯ್ಡು ಬಲು ಯೋಗ್ಯ ಸಮರ್ಥ ಆರ್ಮಿ ವ್ಯಕ್ತಿ. ಇವರ ವಾಸ ದುಡಿಮೆ ಎಲ್ಲವೂ ನಮ್ಮ ಆಫಿಸಿನ ಆವರಣದಲ್ಲಿಯೇ. ಮಧ್ಯರಾತ್ರಿಯ ವೇಳೆ ಕಛೇರಿಗೆ ಹೋದರೂ "ಗುಡ್ ಈವ್‌ನಿಂಗ್ ಸಾರ್" ಎಂದು ಎಚ್ಚರದಿಂದ ಇರುವ ವ್ಯಕ್ತಿ ಸುಬೇದಾರ್ ಪುರುಷೋತ್ತಮ ನಾಯ್ಡು. ಇವರು ಕೈಕೆಳಗಿನ ಆರ್ಮಿ ಸ್ಟಾಫುಗಳಿಗೆ ಸಿವಿಲಿಯನ್ ಲಸ್ಕರ್ ಮುಂತಾದ ಸೇವಕರಿಗೆ ಸಿಂಹಸ್ವಪ್ನದಂತೆ. ನಿಷ್ಠಾವಂತರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆದರೆಷ್ಟೈಗಳ್ಳರಿಗೆ ಚೆನ್ನಾಗಿ ಥಳಿಸಿ ಶಿಕ್ಷೆ ವಿಧಿಸಿ ಸರಿಪಡಿಸುತ್ತಿದ್ದರು. ಯೂನಿಟ್ಟಿನ ಸಮಸ್ತ ವ್ಯವಹಾರಗಳೂ ಇವರಿಗೆ ಚೆನ್ನಾಗಿ ಕರಗತವಾಗಿದ್ದುವು.

ತಮ್ಮಯ್ಯನವರು ಒಂದು ದಿವಸ ನನ್ನಲ್ಲಿಗೆ (ಕಾಲೇಜಿನ ಸ್ಟೋರಿಗೆ) ಗಡಿಬಿಡಿಯಿಂದ ಬಂದರು. ನನ್ನನ್ನು ಒಂದು ಮಿನಿಟ್ ಹೊರಗೆ ಕರೆದು ಬೆಂಗಳೂರಿನಿಂದ ಬಂದಿದ್ದ ಒಂದು "ಪ್ರೇಮಪತ್ರ"ವನ್ನು ಓದಲು ಕೊಟ್ಟರು. ಸರ್ಕಲ್ ಕಮಾಂಡರರೇ ರುಜುಹಾಕಿದ್ದ ಗುಪ್ತಪತ್ರವದು—ಅದರೊಂದಿಗೆ ಲಗತ್ತಿಸಲಾಗಿದ್ದ ಮೂಗರ್ಜಿಯನ್ನು ತನಿಖೆಮಾಡಿ ವರದಿ ಸಲ್ಲಿಸಬೇಕು ಎಂದು ಆದೇಶವಿತ್ತು. ಲಗತ್ತಿಸಿದ ಕಾಗದ ಒಂದು ಇನ್‌ಲೇಂಡ್ ಲೆಟರ್. ಸರ್ಕಲ್ ಕಮಾಂಡರರ ವೈಯಕ್ತಿಕ ವಿಳಾಸಕ್ಕೆ ಕುಶಾಲನಗರದಲ್ಲಿ ಅಂಚೆಗೆ ಹಾಕಿದ ಪತ್ರ. ಬರವಣಿಗೆ ಸ್ವಚ್ಛ ಕನ್ನಡದಲ್ಲಿ. ಸಾರಾಂಶವಿಷ್ಟು—ಕ್ಯಾಪ್ಟನ್ ತಮ್ಮಯ್ಯ

ನವರು ಎನ್‌ಸಿಸಿ ಆಫಿಸರುಗಳ ಹಾಗೂ ಸುಬೆದಾರ್ ಪುರುಷೋತ್ತಮ ನಾಯ್ಡುರವರ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ; ಈ ಆಫಿಸರುಗಳೂ ವಿಶೇಷವಾಗಿ ಸುಬೆದಾರರೂ ವಿಪರೀತ ದಬ್ಬಾಳಿಕೆಯಿಂದ ವರ್ತಿಸುತ್ತಿದ್ದಾರೆ; ಯೂನಿಟ್ಟಿನ ಯಾವ ಸ್ಟಾಫಿಗೂ ಬದುಕಲು ಸಾಧ್ಯವಿಲ್ಲ; ಕ್ಯಾಂಪುಗಳಲ್ಲಿ ಇವರೆಲ್ಲರೂ ಸೇರಿ ದುಡ್ಡು ಸಹ ಮಾಡಿದ್ದಾರೆ; ಕ್ವಾರ್ಟರ್ ಮಾಸ್ಟರ್ ಸ್ಟೋರಿನಿಂದ ಬಟ್ಟೆ ಕದ್ದು ಮಾರಿ ಹಣ ಒಳಹಾಕಿದ್ದಾರೆ; ಇತ್ಯಾದಿ. ತಮ್ಮಯ್ಯನವರು "ಈಗೇನು ಮಾಡುವುದು ?"

"ಸಾಯಂಕಾಲದ ವರೆಗೆ ವಿರಾಮ ಕೊಡಿ. ಯೋಚನೆ ಮಾಡಿ ಹೇಳುತ್ತೇನೆ."

ಬಾಳಿಗರೊಡನೆ ವಿಚಾರ ವಿನಿಮಯ ಮಾಡಿದೆ. ಎನ್‌ಸಿಸಿ ಆಫಿಸಿನ ಒಳಗಿನ ವ್ಯವಹಾರ ತಿಳಿದವನೂ ಮೇಲಧಿಕಾರಿಗಳಾದ ನಮ್ಮನ್ನು ಮೆಚ್ಚದವನೂ ಕನ್ನಡವನ್ನು ಸ್ವಚ್ಛವಾಗಿ ಬಲ್ಲವನೂ ಈ ಕಾಗದದ ಹಿಂದಿರುವ ಶಕ್ತಿ ಎಂದು ನಿರ್ಧರಿಸಿದೆವು. ಕ್ಯಾಡೆಟ್ ಆಗಲೀ ಕ್ಯಾಡೆಟುಗಳ ತಂದೆತಾಯಿಗಳಾಗಲೀ ಈ ಅನಾಮಧೇಯ ಪತ್ರದ ಜನಕರಲ್ಲ ಎಂದೂ ತರ್ಕಿಸಿದೆವು. ಆಫಿಸಿನ ಗುಮಾಸ್ತರ ಮಟ್ಟಕ್ಕಿಂತ ಕೆಳಗೆ ಇಳಿಯಲು ಇದು ಸಾಧ್ಯವಿಲ್ಲ. ಕೆಳಗಿನ ವರ್ಗದವರಿಗೆ ಕನ್ನಡ ಇಷ್ಟು ಚೆನ್ನಾಗಿ ಬರೆಯಲು ತಿಳಿಯಲಾರದು. ಆದರೆ ಗುಮಾಸ್ತರೆಲ್ಲರೂ ಸಭ್ಯರು. ಯಾರಿಗೂ ನಮ್ಮಲ್ಲಿ ಯಾರೊಡನೆಯೂ ಯಾವುದೇ ವಿಧವಾದ ಅಸಮಾಧಾನ ಇರಲಿಲ್ಲ. ಆದ್ದರಿಂದ ನಾಲ್ಕನೆಯ ವರ್ಗದ ನೌಕರರೇ ಇದರ ಹಿಂದಿರಬಹುದೆಂಬ ತರ್ಕಕ್ಕೆ ಬಲ ದೊರೆಯಿತು. ಆದರೆ ಈ ನಿಚ್ಚಳ ಭಾಷೆ ? ಯಾವ ನಾಲ್ಕನೆಯ ದರ್ಜೆಯ ನೌಕರನೂ ಸ್ವತಃ ಈ ಪತ್ರ ಬರೆದಿರಲಾರ. ಬೇರೆಯವರಿಂದ ಬರೆಸಿರಬೇಕು. ಅವರೆಲ್ಲರ ಕೈಬರಹಗಳ ಮಾದರಿ ತರಿಸಿ ಪರೀಕ್ಷಿಸಿ ನೋಡಿದೆವು. ಪುರಾವೆ ದೊರೆಯಲಿಲ್ಲ. ಯಾರು ಯಾರ ಸಂಬಂಧಿಕರು ಎಲ್ಲೆಲ್ಲಿ ಇದ್ದಾರೆ ಎಂದು ಪರೀಕ್ಷೆ ಮುಂದುವರಿಸಿದೆವು. ಮೂರು ನಾಲ್ಕು ದಿವಸಗಳ ಪ್ರಯತ್ನದಿಂದ ದೊರೆತದ್ದು ಎರಡು ಉಪಯುಕ್ತ ಮಾಹಿತಿಗಳು—ಒಬ್ಬ ಪ್ಯೂನಿನ ಭಾವಮೈದ ಸರಕಾರೀ ಕಛೇರಿಯಲ್ಲಿ ಗುಮಾಸ್ತ; ಇನ್ನೊಬ್ಬ ಲಸ್ಕರನ ಮಲತಮ್ಮ ನಮ್ಮ ಕಾಲೇಜಿನ ವಿದ್ಯಾರ್ಥಿ. ಅವನು ಬಾಳಿಗರ (ಫಿಸಿಕ್ಸ್) ಶಿಷ್ಯನೂ ಆಗಿದ್ದ. ಆದ್ದರಿಂದ ಅವನ ಫಿಸಿಕ್ಸ್ ರೆಕಾರ್ಡನ್ನು (ಪ್ರಯೋಗ ವಿವರಗಳನ್ನು ಬರೆದಿಡುವ ಪುಸ್ತಕ) ಹೊರತೆಗೆದು ಪರಿಶೀಲಿಸಿದೆವು. ನಮ್ಮ ಪ್ರಯತ್ನ ಯಶಸ್ವಿಯಾದುದಕ್ಕೆ ನಾವು ಬಲು ಹರ್ಷಿತರಾದೆವು. ಆ ಹುಡುಗನನ್ನು ಕರೆಸಿ ಈ ಬದಲಿಸಲಾಗದ ಪುರಾವೆಗಳನ್ನು ಅವನೆದುರು ಹಿಡಿದಾಗ ಅವನು ಹೆದರಿ ತಾನು ಆ ಮೂಗರ್ಜಿಯನ್ನು ಬರೆದುದು ಹೌದೆಂದೂ ತನ್ನ ಮಲ ಅಣ್ಣನ ಒತ್ತಾಯದ ಮೇರೆಗೆ ಅವನು ಹೇಳಿದಂತೆ ಬರೆದದ್ದೆಂದೂ ಒಪ್ಪಿಕೊಂಡ. ಹಾಗೆಯೇ ಬರೆದೂ ಕೊಟ್ಟ. ಲಸ್ಕರನನ್ನು ಮನೆಗೆ ಕರೆಸಿದೆ. ವಾಸ್ತವಿಕತೆಯನ್ನು ಹೇಳಿದೆ. "ನೀನು ಒಪ್ಪಿ ತಪ್ಪಾಯಿತೆಂದು ಬರೆದುಕೊಡು. ನಿನಗೆ ಕೆಲಸ ಉಳಿಯುತ್ತದೆ. ಹಾಗೆ ಮಾಡಲಿಲ್ಲ—ಕೆಲಸ ಕಳೆದುಕೊಳ್ಳುತ್ತೀಯ" ಎಂದು ಹಿತವಾದ ನುಡಿದೆ. ಅವನು ತನಗೇನೂ ತಿಳಿಯದು, ತಾನು ನಿರಪರಾಧಿ ಎಂದೇ ಹಠ ಹಿಡಿದ. ಎರಡು ದಿವಸ ಕಾಲಾವಕಾಶ ನೀಡಿ ಪುನಃ ಹೇಳಿದೆವು. ಆದರೆ ಕೇಡುಗಾಲ ಅವನನ್ನು ಬಿಡಲಿಲ್ಲ. ಸರಿ—ಮುಂದೆ ಅವನನ್ನು ಕೆಲಸದಿಂದ ಹಂಗಾಮಿಯಾಗಿ ರದ್ದುಗೊಳಿಸಿ ವಿಚಾರಣೆ ನಡೆಸಲಾಯಿತು. ನಾನೇ ವಿಚಾರಣಾಧಿಕಾರಿ. ಎಂಸಿಎಸ್‌ಆರ್ ಪ್ರಕಾರ ಇದು ನಡೆಯಬೇಕು. ನನಗೇನೂ

ಗೊತ್ತು ಈ ನಿಯಮ ಜಾಲ ? ನನ್ನ ಮಿತ್ರರಾದ, ಸರಕಾರೀ ಮುದ್ರಣಾಲಯದ ಮ್ಯಾನೇಜರರಾದ. (ಗುಂಡಿಗೆ ಬಿದ್ದರು ಶೇಷಯ್ಯ ಖ್ಯಾತಿಯ) ಶೇಷಯ್ಯನವರ ನೆರವು ಪಡೆದೆ. ಈ ವಿದ್ಯಮಾನವನ್ನು ಕಲಿತೆ (ಪುಟ ೨೨೪).

ಏಳು ದಿವಸಗಳ ವಿಚಾರಣೆ. ೨೦೦-೩೦೦ ಪುಟಗಳಷ್ಟು ನಿರೂಪಣೆ. ಮುಂದೆ ಅವು ಗಳಿಂದ ಸಾರರೂಪವಾಗಿ ನನ್ನ ತೀರ್ಮಾನ. ಎಲ್ಲವನ್ನೂ ನಿರಪೇಕ್ಷವಾಗಿ ವೈಜ್ಞಾನಿಕವಾಗಿ ನಡೆಸಿದೆ. ವೃಥಾ ಈ ಬಡವ ಹಾಳಾಗಿ ಹೋಗುವನಲ್ಲ ಎಂಬ ನನ್ನ ಯಾವ ನಿಲವಿಗೂ ಆತನಿಂದ ಯೋಗ್ಯ ಪ್ರತಿಕ್ರಿಯೆ ಕೊನೆಯವರೆಗೂ ದೊರೆಯಲಿಲ್ಲ. ಸಾಕ್ಷ್ಯಗಳು ಆತನ ವಿರುದ್ಧ ಬಲು ಪ್ರಬಲವಾಗಿದ್ದುವು. ಅವೆಲ್ಲವೂ ಸಂಗತವಾಗಿದ್ದುವು. ಆತನ ಹೇಳಿಕೆ ಗಳು ಅಸಂಗತವಾಗಿದ್ದುವು, ನಾನು ಬರೆದ ತೀರ್ಮಾನದ ಕರಡು ಪ್ರತಿಯನ್ನು ಓದಿದ ಶೇಷಯ್ಯ ನಕ್ಕು "ನಾರಾಯಣರಾವ್ ! ಇದೊಂದು ಉತ್ತಮ ಸಾಹಿತ್ಯ ಪ್ರಬಂಧ. ಭಾಷೆ ನೇರ್ಪಡಿಕೆ ಎಲ್ಲವೂ ಸೊಗಸಾಗಿವೆ. ಆದರೆ ನ್ಯಾಯಾಲಯದಲ್ಲಿ ಇದು ನಿಲ್ಲದು" ಎಂದು ಹೇಳಿ ಬೇರೆಯೇ ಒಂದು ಕರಡುಪ್ರತಿ ತಯಾರು ಮಾಡಿಕೊಟ್ಟರು. ನನ್ನ ಶಿಫಾ ರಸು ಈ ಲಸ್ಕರನನ್ನು ಕೆಲಸದಿಂದ ವಜಾಮಾಡಬೇಕೆಂದು ಇತ್ತು. ಓಸಿ ಅದನ್ನು ಒಪ್ಪಿ ಸರ್ಕಲ್ ಕಮಾಂಡರರಿಗೆ ಕಳಿಸಿದರು. ಅವರು ಅದನ್ನು ವಕೀಲರಿಗೆ ತೋರಿಸಿ ಎಲ್ಲವೂ ಸಮರ್ಪಕವಾಗಿವೆಯೆಂದು ಖಾತ್ರಿ ಮಾಡಿಕೊಂಡು ಲಸ್ಕರನ ವಜಾ ಆಜ್ಞೆ ಹೊರಡಿಸಿದರು. ಅಪೀಲಿನಲ್ಲಿಯೂ ಮುಂದೆ ನ್ಯಾಯಾಲಯದ ವ್ಯವಹಾರದಲ್ಲಿಯೂ ಆತನಿಗೆ ಜಯ ದೊರೆಯಲಿಲ್ಲ. ಕೆಲಸ ಕಳೆದುಕೊಂಡದ್ದು ಖಾಯಂ ಆಯಿತು. ಇಂದಿಗೂ ಎಂದಿಗೂ ಆತನ ವಿಚಾರದಲ್ಲಿ ನನಗೆ ಮರುಕವೇ ಇದೆ. ಆದರೆ ನ್ಯಾಯದ ದಾರಿಯನ್ನು ಅನು ಕಂಪದ ಇಟ್ಟಿಗೆಯಿಂದ ಕಟ್ಟಿಲ್ಲವಷ್ಟೆ ?

ಗುಮಾಸ್ತರ ಕಡೆಯಿಂದ ಬೇರೆ ಒಂದು ಸಮಸ್ಯೆ ಮುಂದಿನ ದಿವಸಗಳಲ್ಲಿ ಎದುರಾ ಯಿತು. ಇನ್ನೊಂದು ಕಛೇರಿಯಿಂದ ವರ್ಗವಾಗಿ ಬಂದ ಹಿರಿಯ ಗುಮಾಸ್ತನೊಬ್ಬ ಆಫಿಸಿನೊಳಗೆ ರಾಜಕೀಯವನ್ನೂ ಹಣಕಾಸಿನ ವಿಚಾರದಲ್ಲಿ ಅಸಮರ್ಪಕ ವ್ಯವಹಾರ ವನ್ನೂ ಶುರುಮಾಡಿದ. ಅವನಿಗೆ ಯಾವ ಹೊಣೆಗಾರಿಕೆ ಕೊಡದಿದ್ದರೂ ಅವನ ಇರವೇ ದಿನ ದಿನ ಏಡಿಗಂತಿ ವ್ಯಾಧಿಯಂತೆ ಉಲ್ಬಣಾವಸ್ಥೆಗೆ ಏರುತ್ತಿತ್ತು. ಬಲು ಗುಪ್ತವಾಗಿ ಬೆಂಗಳೂರಿನ ಅಧಿಕಾರಿಗಳೊಡನೆ ವ್ಯವಹರಿಸಿ ಆತನನ್ನು ಬೇರೆ ಕಡೆಗೆ ವರ್ಗಮಾಡಿಸಿದೆವು. ಇಲ್ಲಿಯೂ ಅವನನ್ನು ಹಂಗಾಮಿಯಾಗಿ ವಜಾಗೊಳಿಸಿ ವಿಚಾರಣಾ ಸಮಿತಿ ಏರ್ಪಡಿಸಿ ಸಾಕಷ್ಟು ಪುರಾವೆಯನ್ನು ಸಂಗ್ರಹಿಸಿ ಅವನನ್ನು ಮನೆಗೆ ಕಳಿಸಬಹುದಿತ್ತು. ನಮ್ಮಿಂದ ಅವನು ತೊಲಗಿಹೋದರೆ ಸಾಕು ಎಂಬುದು ಓಸಿಯವರ ಮತ್ತು ನನ್ನ ಅಭಿಪ್ರಾಯ ವಾದ್ದರಿಂದ ಹೀಗೆ ಮಾಡಿದೆವು.

ಇಬಳೂರಿನಲ್ಲಿ ಸಾಧಿಸಿದ ಸೀನಿಯಾರಿಟಿ

೧೯೩೦ರ ಡಿಸೆಂಬರಿನ ವಾರ್ಷಿಕ ಶಿಕ್ಷಣ ಶಿಬಿರ ನಡೆದದ್ದು ಬೆಂಗಳೂರಿನ ಹೊರವಲಯದ ಇಬಳೂರಿನ ಮಿಲಿಟೆರಿ ಬರಾಕುಗಳಲ್ಲಿ. ಹಳೆ ಮೈಸೂರು, ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳ ಎಲ್ಲ ಕಾಲೇಜುಗಳ ಎನ್‌ಸಿಸಿ ಕ್ಯಾಡೆಟುಗಳೂ ಇದರಲ್ಲಿ ಭಾಗಿಗಳಾಗಬೇಕಾಗಿತ್ತು.

ಬೆಂಗಳೂರಿನ ಒಂದು ಎನ್‌ಸಿಸಿ ಯೂನಿಟ್ಟಿಗೆ ಈ ಕ್ಯಾಂಪನ್ನು ನಡೆಸುವ ಹೊಣೆ, ಅದರ ಓಸಿ ಮತ್ತು ಅಡ್ಮಿನಿಸ್ಟ್ರೇಟಿವ್ ಆಫಿಸರ್ ಮುಖ್ಯ ಕಾರ್ಯನಿರ್ವಾಹಕರು. ನಮ್ಮ ಓಸಿ ಕ್ಯಾಪ್ಟನ್ ತಮ್ಮಯ್ಯ ಶಿಕ್ಷಣಾಧಿಕಾರಿಗಳು. ನಾವೆಲ್ಲ ನಮ್ಮ ನಮ್ಮ ತಂಡಗಳ ಸಮಸ್ತ ಹೊಣೆ ವಹಿಸಿಕೊಂಡರೆ ಸಾಕು ಎಂದು ಮೊದಲೇ ಆದೇಶ ಬಂತು. ಕೃಷ್ಣಯ್ಯನವರೂ ನಾನೂ ನಮ್ಮಲ್ಲಿಂದ ಈ ಶಿಬಿರಕ್ಕೆ ಹೋದ ಆಫಿಸರರು. ಶಿಬಿರ ಬೆಂಗಳೂರಿನಲ್ಲಿ ನಡೆಯುವುದರಿಂದ ದಿನದಿನ ಉನ್ನತ ಮಿಲಿಟರಿ ಅಧಿಕಾರಿಗಳು ಅದನ್ನು ನೋಡಲು ಬರುವವರಿದ್ದಾರೆ ; ಅಲ್ಲದೇ ದೆಹಲಿಯಲ್ಲಿ ನಡೆಯಲಿರುವ (೧೯೬೦ ಜನವರಿ ೨೬) ಗಣರಾಜ್ಯ ಉತ್ಸವದಲ್ಲಿ ಭಾಗಿಗಳಾಗಲು ಈ ರಾಜ್ಯದ ಪ್ರತಿನಿಧಿಗಳಾಗಿ ಹೋಗಲಿರುವ ಆಯ್ದ ಕ್ಯಾಡೆಟುಗಳಿಗೂ ಅವರ ಮುಂದಾಳಾದ ಎನ್‌ಸಿಸಿ ಆಫಿಸರರಿಗೂ ಇಲ್ಲಿ ವಿಶೇಷ ಪೂರ್ವಶಿಕ್ಷಣ ನೀಡಲಾಗುವುದು—ಎಂದು ಮುಂತಾಗಿ ಸರ್ಕಲ್ ಕಮಾಂಡರಿಂದ ವಿಶೇಷ ಹುಕುಂ ಬಂದಿತ್ತು. ಆದ್ದರಿಂದ ಈ ವಿಶಿಷ್ಟ ಶಿಬಿರದಲ್ಲಿ ನಾವು ವಿಶೇಷ ಜಾಗರೂಕತೆಯಿಂದ ಇರಬೇಕು ; ಅದೂ ನಮ್ಮ ಓಸಿ ಇಲ್ಲಿ ಟ್ರೈನಿಂಗ್ ಆಫಿಸರಾಗಿರುವಾಗ ಸರ್ಕಲ್ ಕಮಾಂಡರರಿಗೆ ನಮ್ಮ ಯೂನಿಟ್ಟಿನ ಮೇಲೆ ವಿಶೇಷ ಅಭಿಮಾನವಿರುವಾಗ ನಮ್ಮ ಹೊಣೆ ಹೆಚ್ಚಿನದು ಎಂದು ನಾನು ತಿಳಿದೆ. ನಮ್ಮ ನೂರಾಹತ್ತು ಮಡಿಕೇರಿಯಿಂದ ಮೈಸೂರಿಗೆ ಸ್ಪೆಶಲ್ ಬಸ್ಸುಗಳಲ್ಲಿ ಪಯಣಿಸಿ ಅಲ್ಲಿಂದ ಮುಂದೆ ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ ಸಾಗಿತು. ಮರುಮುಂಜಾನೆಯ ದಟ್ಟ ಹಿಮಪಾತದಲ್ಲಿ, ಬೆಂಗಳೂರು ನಗರ ಇನ್ನೂ ಹೊಂಗನಸುಗಳ ಗುಂಗಿನಲ್ಲಿದ್ದಾಗ ನಾವು ರೈಲ್ವೆನಿಲ್ದಾಣದಲ್ಲಿ ಇಳಿದೆವು. ನಮ್ಮ ಸ್ವಾಗತದ ಏರ್ಪಾಡು ದಕ್ಷವಾಗಿತ್ತು. ಸ್ಪೆಶಲ್ ಬಸ್ಸುಗಳೂ ಆರ್ಮಿ ಸ್ಟಾಫುಗಳೂ ನಮಗಾಗಿ ಅಲ್ಲಿ ಕಾದಿದ್ದರು. ನಾವು ಬಲು ಸುಲಭವಾಗಿ ಉನ್ನತ ಮನೋಭಾವದಿಂದ ಉತ್ಸಾಹ ಪಡೆದು ಇಬಳೂರಿನ ಕ್ಯಾಂಪನ್ನು ಪ್ರವೇಶಿಸಿದೆವು. ಭಾರೀ ಮಿಲಿಟರಿ ಬರಾಕುಗಳಲ್ಲಿ ನಮ್ಮ ವಾಸ್ತವ್ಯ. ಇವು ಸಾಕಷ್ಟು ಜಾಗ ಒದಗಿಸದಿದ್ದುದರಿಂದ ಟೆಂಟುಗಳನ್ನೂ ಪೂರೈಸಲಾಗಿತ್ತು.

ಮೊದಲನೆಯ ದಿವಸ ಕ್ಯಾಂಪಿನ ಅಡ್ಜುಟೆಂಡರು (ಬೆಂಗಳೂರಿನ ಎನ್‌ಸಿಸಿ ಆಫಿಸರರು) ಅವರ ಸಹಾಯಕ ಕ್ಯಾಡೆಟ್ ಅಡ್ಜುಟೆಂಟ್ ಮೊದಲಾದವರು ಮುಂದಾಳುತನ ವಹಿಸಿ ಯುಕ್ತಮಾರ್ಗದರ್ಶನ ಮಾಡಿದರು. ಸಂಜೆಯ ಸಾಮೂಹಿಕ ಪೆರೇಡನ್ನು ಇದೇ ಕ್ಯಾಡೆಟ್ ಅಡ್ಜುಟೆಂಟ್ ನಿಯಂತ್ರಿಸಿದ. ಪೆರೇಡ್ ಮುಗಿದೊಡನೆ ನಮ್ಮ ಸೀನಿಯರ್ ಅಂಡರ್ ಆಫಿಸರ್ ಮಂಜಪ್ಪ ಇತರ ಕ್ಯಾಡೆಟ್ ಮುಂದಾಳುಗಳು ನನ್ನೆಡೆಗೆ ಓಡಿ ಬಂದರು. "ಸಾರ್ ! ಈ ಕ್ಯಾಂಪಿನಲ್ಲಿ ಕ್ಯಾಡೆಟ್ ಅಡ್ಜುಟೆಂಟನ ಆಯ್ಕೆ ಹೇಗೆ ನಡೆದಿದೆ ?" "ಇರುವ ಕ್ಯಾಡೆಟುಗಳಲ್ಲಿ ಅತಿಸೀನಿಯರನಾದವನನ್ನು ಆರಿಸಿರಬೇಕು" ನನ್ನ ಸಮಜಾಯಿಷಿ.

"ಇಂದು ಕಮಾಂಡ್ ಮಾಡಿದವ ನನಗಿಂತ ಸೀನಿಯರನಲ್ಲ, ಸಾರ್."

"ವಿಚಾರಿಸುತ್ತೇನೆ. ನೀವು ಉದ್ವಿಗ್ನರಾಗಬೇಡಿ."

"ಅಷ್ಟು ಮಾತ್ರವಲ್ಲ—ಅವನು ಬಲು ದುರಹಂಕಾರದಿಂದ ನಮ್ಮೊಡನೆ ವರ್ತಿಸುತ್ತಿದ್ದಾನೆ. ನಮಗೆ ಇದು ಸಹಿಸುವುದಿಲ್ಲ."

"ಈಗ ರೇಗಬೇಡಿ. ನಮ್ಮ ವರ್ತನೆ ಸದಾ ಸುಸಂಸ್ಕೃತವಾಗಿರಲೇಬೇಕು."

ಅಡ್ಜುಟೆಂಟರ ಹತ್ತಿರ ಹೋದೆ. ವಿಷಯ ಪ್ರಸ್ತಾವಿಸಿದೆ. ಅವರು ನನ್ನ ವಾದವನ್ನು

ಒಪ್ಪಿದಂತೆ ತೋರಲಿಲ್ಲ. "ನಿಮ್ಮ ಹುಡುಗರ ತಕರಾರು ಹೋದಲ್ಲೆಲ್ಲ ಇದ್ದದ್ದೇ. ಕಾರ್ಗಿಲ್ಲಿನಲ್ಲಿ ನೋಡಿದೆ. ಈಗ ಇಲ್ಲಿ" ಎಂದು ಚುಚ್ಚಿದರು.

"ಕಾರ್ಗಿಲ್ಲಿನ ವಿಷಯ ಜಗಳ ಈಗ ಬೇಡ. ನಮ್ಮ ಹುಡುಗನಿಗೆ ಅನ್ಯಾಯವಾಗಿದೆ ಎಂಬ ಭಾವ ಮೂಡಿದೆ. ಅದನ್ನು ಪರಿಹರಿಸಿ ಸಮಾಧಾನ ಹೇಳಬೇಕಾದವರು ನೀವು. ಅದನ್ನು ಮಾಡಿರೆಂದು ನನ್ನ ಬೇಡಿಕೆ ಅಷ್ಟೆ."

"ಪ್ರತಿ ಕ್ಯಾಡೆಟನಿಗೂ ಸಮಾಧಾನ ಹೇಳುತ್ತ ನಾನು ಹೇಗೆ ಕೂರಲಿ ?"

"ಇಲ್ಲಿ ಬಂದವನು ಕ್ಯಾಡೆಟ್ ಅಲ್ಲ. ಒಂದು ಯೂನಿಟ್ಟಿನ ಪ್ರತಿನಿಧಿ—ನಾನು, ನಿಮ್ಮ ಸಹೋದ್ಯೋಗಿ."

"ಏನು ಮಾಡಬೇಕು ?"

"ಸೀನಿಯಾರಿಟಿ ವಿಚಾರ ಇತ್ಯರ್ಥವಾಗಲಿ. ಅದನ್ನು ನೀವು ನಡೆಸಿರೆಂದು ನನ್ನ ವಿನಂತಿ."

"ಇದೇನು ಮಹಾ ! ಈ ೧೪ ದಿವಸಗಳಲ್ಲಿ ಈಗಾಗಲೇ ಒಂದು ದಿವಸ ಹೋಯಿತು. ಯಾರಿದ್ದರೇನು ? ಈಗ ಹೇಗೂ ಒಬ್ಬ ಇದ್ದಾನಲ್ಲ ?"

"ಸ್ವಾಮೀ ಇಲ್ಲಿ ಯಾರಿದ್ದರೇನು ಮೊದಲಿದ್ದವನೇ ಇರಲಿ ಎನ್ನುವುದು ತರವಲ್ಲ. ಈಗ ನಾನು ಅಡ್ಜುಟೆಂಟ್ ಆಗಿ ನಿಮ್ಮ ಮೇಲೆ ಹುಕುಂ ಚಲಾಯಿಸಿದರೆ ಯಾರಾದರೇನು ಎಂದು ಸುಮ್ಮನಿರುತ್ತೀರೋ ? ನಿಮ್ಮ ವಾದ ನನಗೆ ಅರ್ಥವಾಗುತ್ತಿಲ್ಲ."

"ಹಾಗಾದರೆ ಬನ್ನಿ. ಕಾಗದಪತ್ರ ತಪಾಸಣೆ ಮಾಡೋಣ."

ಇವರು ಅದೆಷ್ಟು ಲಘುವಾಗಿ ಪ್ರತಿಯೊಂದನ್ನೂ ತೆಗೆದುಕೊಳ್ಳುತ್ತಾರೆಂದು ನನಗೆ ಆಶ್ಚರ್ಯವಾಯಿತು. ಆಫಿಸಿಗೆ ಹೋದೆವು. ನಾವು ಕ್ಯಾಂಪಿಗೆ ಮೊದಲೇ ನಮ್ಮ ಸೀನಿಯರ್ ಹುಡುಗರ ಎಲ್ಲ ವಿವರಗಳನ್ನೂ ಇದೇ ಯೂನಿಟ್ಟಿನ ಬೆಂಗಳೂರು ಕಛೇರಿಗೆ ಕಳಿಸಿದ್ದೆವು. ಆ ಪತ್ರದ ಒಂದು ನಕಲು ನನ್ನ ದಫ್ತರದಲ್ಲಿ ಇತ್ತು. ಆಫಿಸಿನಲ್ಲಿ ಕಾಗದಪತ್ರಗಳ ಶೋಧನೆ ನಡೆಸಿದೆವು. ಅಲ್ಲಿ ನಮ್ಮ ಪತ್ರ ಬಂದ ದಾಖಲೆ ಇರಲಿಲ್ಲ. ಈಗ ಕ್ಯಾಡೆಟ್, ಅಡ್ಜುಟೆಂಟ್ ಆಗಿರುವ, ಕ್ಯಾಂಪನ್ನು ನಡೆಸುತ್ತಿರುವ ಮಾತ್ರ ಯೂನಿಟ್ಟಿನ ಹುಡುಗನಿಗೆ ಬಡ್ತಿ ನೀಡಿದ ಪತ್ರಗಳು ದೊರೆತುವು. "ನೋಡಿ. ಈಗ ನಿಮಗೆ ನೆಮ್ಮದಿಯೇ ! ನಾನು ಆಗಲೇ ಹೇಳಲಿಲ್ಲವೇ ಎಲ್ಲಿ ಹೋದರೂ ಶುದ್ಧ ತರಳೆ ನಿಮ್ಮ ಹುಡುಗರದ್ದು" ಅಡ್ಜುಟೆಂಟರ ಗೆಲುವಿನ ಉಣಿಕ. ನಾನೆಂದೆ "ತಾಳಿ, ತಾಳಿ. ನಮ್ಮ ಯೂನಿಟ್ಟಿನ ವಿವರ ಪತ್ರ ಇಲ್ಲಿ ಇಲ್ಲದಿರುವುದು ನಮ್ಮ ತಪ್ಪಲ್ಲ."

"ಮತ್ತೆ ಯಾರದು ?"

"ನಾವು ಕಳಿಸಿದ್ದೇವೆ ಎಂಬುದಕ್ಕೆ ಇಲ್ಲಿ ನೋಡಿ ಪುರಾವೆ. ಇನ್ನು, ನಿಮ್ಮ ಹುಡುಗನಿಗೆ ಬಡ್ತಿ ದೊರೆತದ್ದು ಕ್ಯಾಂಪು ಪ್ರಾರಂಭವಾಗುವ ಹಿಂದಿನ ದಿವಸ. ನಮ್ಮ ಹುಡುಗ ಈ ವರ್ಷದ ಜುಲೈ ೧ರಿಂದಲೇ ಸೀನಿಯರ್ ಅಂಡರ್ ಆಫಿಸರ್ ಆಗಿದ್ದಾನೆ. ಅದ್ದರಿಂದ ನಮ್ಮವನೇ ಸೀನಿಯರ್ ಆಗಬೇಕು" ಎಂದು ನನ್ನಲ್ಲಿದ್ದ ನಕಲುಗಳನ್ನೆಲ್ಲ ತೋರಿಸಿದೆ.

"ಅದು ಆಗಲಾರದು."

"ಹಾಗಾದರೆ ನಾನೀಗಲೇ ಕಮಾಂಡೆಂಟರನ್ನು ನೋಡುವವನಿದ್ದೇನೆ. ಇಂಥ ಅವ್ಯವಹಾರಗಳನ್ನು ನಾನು ಸಹಿಸಲಾರೆ."

"ಕೋಪ ಮಾಡಬೇಡಿ. ನಾನು ನೀವು ಕಾಲೇಜಿನವರು. ಈ ದರಿದ್ರ ಆರ್ಮಿಯವರೊಡನೆ ಏಕೆ ನಮಗೆ ಸಂಬಂಧ ?"

"ಸ್ವಾಮೀ ! ನಿಮ್ಮ ಮಾತು ನನಗೆ ಪುನಃ ಅರ್ಥವಾಗುತ್ತಿಲ್ಲ. ಆರ್ಮಿಯವರ ಔದಾರ್ಯವನ್ನು ದುರುಪಯೋಗಪಡಿಸುವ ಸಣ್ಣ ಬುದ್ಧಿ ನಮಗೆ ಬೇಡ." ಧ್ವನಿ ಸಂಪುಟದ ಸೂಜಿಮೊನೆ ಮಾತಿನ ಗಾನದೋಸೆಯ ಕೊನೆಯ ವರ್ತುಳೀಯ ಗೀರನ್ನು ತಲುಪಿತ್ತು. ಅಲ್ಲೇ ಅದು ಸುತ್ತುತ್ತ ಪುನರಾವರ್ತಿಸತೊಡಗಿದುದರಿಂದ ನಾನು ಜುಗುಪ್ಸೆ ತಾಳಿ ಹೊರಟುಹೋದೆ. ತಮ್ಮಯ್ಯನವರಿಗೆ ನಿಜಸಂಗತಿ ಅರುಹಿದೆ. ಮರುದಿನದ ಮೊದಲ ಪೆರೇಡಿನಲ್ಲಿ ನಮ್ಮ ಸೀನಿಯರ್ ಕ್ಯಾಡೆಟ್ ಶಿಬಿರದ ಕ್ಯಾಡೆಟ್ ಅಡ್ಜುಟೆಂಟನಿಂದ ಹುಕುಂ ಪಡೆಯಬಾರದೆಂದೂ ಮಧ್ಯಾಹ್ನದಒಳಗೆ ತಾನು ಸಮಸ್ಯೆಯನ್ನು ಪರಿಹರಿಸುವುದಾಗಿಯೂ ಭರವಸೆ ನೀಡಿದರು.

ಎರಡನೆಯ ದಿವಸ. ಕ್ಯಾಡೆಟ್ ಅಡ್ಜುಟೆಂಟ್ ಮೊದಲ ಪೆರೇಡನ್ನು ಸಾವಧಾನ್ ಸ್ಥಿತಿಗೆ ಕರೆದ. ಆದರೆ ನಮ್ಮ ಸೀನಿಯರ್ ಬದಿಯಲ್ಲಿ ನಿರ್ಲಕ್ಷ್ಯದಿಂದ ನಿಂತಿದ್ದ. ಅಡ್ಜುಟೆಂಟ್ (ಎನ್‌ಸಿಸಿ ಆಫಿಸರ್) ಗುಡುಗಿದರು "ನೀನು, ಕೊಡಗಿನ ಕ್ಯಾಡೆಟ್ ! ಆಜ್ಞೆ ಪಾಲಿಸದೇ ಯಾಕಲ್ಲಿ ನಿಂತಿದ್ದೀಯಾ ?" ಅವನು ಸಾವಧಾನಕ್ಕೆ ಬಂದು ಆಫಿಸರರಿಗೆ ಸೆಲ್ಯೂಟಿಸಿ "ನನ್ನ ಜೂನಿಯರ್ ನೀಡುವ ಹುಕುಂ ನನಗೆ ಲಗಾವಾಗುವುದಿಲ್ಲ ಸಾರ್" ಎಂದ.

"ಅವನು ನಿನ್ನ ಜೂನಿಯರ್ ಅಲ್ಲ. ನೀನು ಅವನ ಹುಕುಂ ಪಾಲಿಸಬೇಕು, ತಿಳಿಯಿತೇ?"

"ಸಾರಿ, ಸಾರ್."

ಕಮಾಂಡೆಂಟರು ಹಿಂದೆ ನಿಂತಿದ್ದಾರೆ. ಟ್ರೈನಿಂಗ್ ಆಫಿಸರರು ನೋಡುತ್ತಿದ್ದಾರೆ. ಅಡ್ಜುಟೆಂಟ್ ನನ್ನನ್ನು ನೋಡಿದರು. ನಾನು ತಮ್ಮಯ್ಯನವರನ್ನು ನೋಡಿದೆ. ಅವರು ಅಡ್ಜುಟೆಂಟರಿಗೆ ಕೈಸನ್ನೆ ಮಾಡಿದರು. ಈ ಪ್ರಕರಣ ಆಗ ಅಲ್ಲಿಗೇ ಮುಗಿಯಿತು. ಮಧ್ಯಾಹ್ನವೇ ಸ್ಪೆಶಲ್ ಪಾರ್ಟ್ ೧ ಹುಕುಂ ಬಂದಿತು—ನಮ್ಮ ಹುಡುಗನ ಸೀನಿಯಾರಿಟಿಯನ್ನು ಕ್ಯಾಂಪ್ ಕಮಾಂಡೆಂಟರು ಒಪ್ಪಿದ್ದರು.

ಲೈನ್ ಡ್ರೆಸ್ಸಿಂಗಿನಲ್ಲಿ ಕಳೆದುಕೊಂಡೆವು

ನಮ್ಮ ಹುಡುಗರೇ ಆ ಕ್ಯಾಂಪಿನಲ್ಲಿ ಏಕೈಕ ಗರಿಷ್ಠ ತಂಡ. ಇವರೆಲ್ಲರೂ ಭೀಮಗಾತ್ರರು, ಮೀಸೆ ಹೊತ್ತವರು. ಆದ್ದರಿಂದ ಎಲ್ಲೆಲ್ಲಿಯೂ ಈ ಹುಡುಗರನ್ನು ಒಬ್ಬೊಬ್ಬರಾಗಿಯೋ ಒಟ್ಟಾಗಿಯೋ ಗುರುತಿಸುವುದು ಸುಲಭವಾಗಿತ್ತು. ಸಮವಸ್ತ್ರದ ಏಕತೆ ಇವರ ವ್ಯಕ್ತಿತ್ವವನ್ನು ಮರೆಮಾಚುವುದರ ಬದಲು ಅದಕ್ಕೆ ಹೊಸ ಆಯಾಮವನ್ನು ನೀಡಿತ್ತು. ಎರಡನೆಯ ದಿವಸದ ಮುಖಭಂಗದಿಂದ ಅಡ್ಜುಟೆಂಟರಿಗೆ ನಮ್ಮ ಯೂನಿಟ್ಟಿನ ಮೇಲೆ ಕಣ್ಣಿಬಿತ್ತು. ಸಾವಿರಾರು ಮಂದಿಯ ಕ್ಯಾಂಪಿನಲ್ಲಿ ಎಲ್ಲಿ ಏನು ಅವ್ಯವಸ್ಥೆ ತಲೆದೋರಿದರೂ "ರಾಮ್ ! ನಿಮ್ಮ ಕೊಡಗಿನ ವೀರರ ಕೈವಾಡ" ಎಂದು ಅಣಕಿಸುವುದು ರೂಢಿ ಆಯಿತು.

ಪ್ರತಿಸಲವೂ ನಾನು ಸಮಾಧಾನದಿಂದಲೇ ಅವರಿಗೆ ಉತ್ತರ ನೀಡುತ್ತಿದ್ದೆ "ನಮ್ಮ ಹುಡುಗರು ದೇವತೆಗಳೆಂದೇನೂ ನಾನು ಹೇಳುತ್ತಿಲ್ಲ. ಆದರೆ ಅವರೆಂದೂ ಹೇಡಿಗಳಲ್ಲ. ಅಪಮಾನ ಅನ್ಯಾಯಗಳನ್ನು ಸಹಿಸಿಕೊಂಡಿರುವ ಹತವೀರ್ಯರಲ್ಲ. ಅವರ ನಿಷ್ಠೆ ನೋಡಿ. ಬರಾಕು ನೋಡಿ. ಪೆರೇಡ್ ಗ್ರೌಂಡಿನಲ್ಲಿ ಹಾಜರಿ ಪಟ್ಟಿ ನೋಡಿ. ಗುಂಡು ಹೊಡೆಯುವುದರಲ್ಲಿ ಕೈಚಳಕ ನೋಡಿ. ಕ್ಯಾಂಪಿನಲ್ಲಿ ಏನೇ ಕೆಲಸವಾಗಬೇಕಾದರೂ ನಮಗೆ ಹೇಳಿ—ಅಡುಗೇಮನೆಯಿಂದ ತೊಡಗಿ ಲ್ಯಾವೇಟರಿ ವರೆಗೆ ಯಾವುದೂ ಇವರಿಗೆ ಕಷ್ಟವಲ್ಲ ಅಪ್ರಿಯವಲ್ಲ." ನಮ್ಮ ಹುಡುಗರ ಜೊತೆಯಲ್ಲಿಯೇ ನಾವಿಬ್ಬರೂ (ಕೃಷ್ಣಯ್ಯ ಮತ್ತು ನಾನು) ತಪ್ಪದೇ ಇರುತ್ತಿದ್ದೆವು—ಏಕೈಕ ಗರಿಷ್ಠ ತಂಡ. ನಮ್ಮ ಎಚ್ಚರಿಕೆ ನಾವು ವಹಿಸಲೇಬೇಕು.

ಬರಾಕುಗಳ ಲೈನ್ ಡ್ರೆಸಿಂಗ್ ವೀಕ್ಷಣೆ ಮಾಡಿ ಮಾರ್ಕ್ ಹಾಕಲು ಕಮಾಂಡೆಂಟರು ಒಂದು ಸಮಿತಿಯನ್ನು ನೇಮಿಸಿದರು. ನಾನು ಅದರ ಅಧ್ಯಕ್ಷ, ಇನ್ನಿಬ್ಬರು ಆಫಿಸರರು ಅದರ ಸದಸ್ಯರು. ಕೆಲಸಕ್ಕೆ ತೊಡಗುವ ಮೊದಲು ನಾನೊಂದು ನಿಯಮಾವಳಿಯನ್ನು ವಿಧಿಸಿದೆ—ನಮ್ಮ ನಮ್ಮ ಯೂನಿಟ್ಟುಗಳ ಲೈನುಗಳಿಗೆ ನಾವು ಮಾರ್ಕು ಹಾಕಬಾರದು; ಉಳಿದಿಬ್ಬರ ಮಾರ್ಕುಗಳ ಸರಾಸರಿಯನ್ನು ಇಲ್ಲಿ ತೆಗೆದುಕೊಳ್ಳಬೇಕು. ಉಳಿದವರಿಬ್ಬರೂ ಈ ನಿಯಮವನ್ನು ಸಂತೋಷದಿಂದ ಒಪ್ಪಿದರು. ಮೊದಲ ಐದು ದಿವಸಗಳು ನಮ್ಮ ಸಮಿತಿ ಬಲು ನಿರಪೇಕ್ಷವಾಗಿ ಕೆಲಸ ಮಾಡಿತು. ಅಷ್ಟು ದಿವಸಗಳಲ್ಲಿ ಪ್ರತಿ ದಿವಸವೂ ಕೊಡಗಿನ ಯೂನಿಟ್ಟೇ ಒಂದನೆಯ ಸ್ಥಾನದಲ್ಲಿತ್ತು.

ಆರನೆಯ ದಿವಸ. ಅಡ್ಜುಟೆಂಟ್ ಸಾಹೇಬರಿಂದ ಲಿಖಿತ ಮೂಲಕ ಹುಕುಂ ಬಂದಿತು —ಪೆರೇಡು ಕಾಲದಲ್ಲಿ ಒಂದೊಂದು ಬರಾಕಿಗೂ ಒಬ್ಬೊಬ್ಬ ಕ್ಯಾಡೆಟನಿಗಿಂತ ಹೆಚ್ಚು ಕ್ಯಾಡೆಟುಗಳಿರುವ ಯೂನಿಟ್ಟುಗಳಿಗೆ ಲೈನ್ ಡ್ರೆಸ್ಸಿಂಗಿನಲ್ಲಿ ಸೊನ್ನೆ ಅಂಕ ಕೊಡಬೇಕು, ಎಂದು. ಕಳ್ಳಬೀಳುತ್ತಿದ್ದವರು. ಕೆಲಸ ಅಚ್ಚುಕಟ್ಟಾಗಲೆಂದು ಹಿಂದೆ ನಿಲ್ಲುತ್ತಿದ್ದವರು ಯಾರೂ ನಮ್ಮ ಸಮಿತಿ ಪರಿಶೀಲನೆಗೆ ಹೋಗುತ್ತಿದ್ದಾಗ ಎದುರು ಸಿಕ್ಕುತ್ತಿರಲಿಲ್ಲ. ಪೊಲೀಸನನ್ನು ತಪ್ಪಿಸಿ ತಿರುಗುವುದು ಕಳ್ಳನ ಸಹಜ ಪ್ರವೃತ್ತಿ. ಹೀಗಾಗಿ ಹುಕುಂ ಸಿಂಧುವಾಗಲಿಲ್ಲ. ಅಂದಮಾತ್ರಕ್ಕೆ ಕಳ್ಳಬೀಳುತ್ತಿದ್ದವರು ಇರುತ್ತಿರಲಿಲ್ಲ ಎಂದೇನೂ ಭಾವಿಸಬಾರದು.

ಎಂಟನೆಯ ದಿವಸ. ನಮ್ಮ ಸಾಲೇ ಒಂದನೆಯ ಸ್ಥಾನದಲ್ಲಿದೆ. ಎರಡನೆಯದು ಮಂಗಳೂರಿನ ಯೂನಿಟ್. ಅಡ್ಜುಟೆಂಟರಿಂದ ಇನ್ನೊಂದು ಲಿಖಿತ ಹುಕುಂ ಬಂತು. "ಕೊಡಗಿನ ಬರಾಕುಗಳಲ್ಲಿ ಸಾಕಷ್ಟು ಮಂದಿ ಕ್ಯಾಡೆಟುಗಳು ಅಲೆಯುತ್ತಿದ್ದುದರಿಂದ ಅವರಿಗೆ ಈ ದಿವಸ ಸೊನ್ನೆ ಮಾರ್ಕು ಕೊಡಬೇಕು." ಮೊದಲು ಹುಕುಮನ್ನು ಒಪ್ಪಿದೆ. ಅನಂತರ ಹಿಂದಿನ ದಿನಗಳಂತೆಯೇ ಮಾರ್ಕ್ ಹಾಕಿ ಕಾಗದಪತ್ರ ಪೂರೈಸಿದೆ. ನಮ್ಮ ನೂರಾಪತ್ತರಲ್ಲಿ ಯಾರು ಯಾರು ಆ ಬೆಳಗ್ಗೆ ಎಲ್ಲಿ ಎಲ್ಲಿ ಇದ್ದರು ಎಂಬುದನ್ನು ಕಾಗದದ ಮೇಲೆ ಬರೆದುಕೊಂಡು ಹೋಗಿ ಅಡ್ಜುಟೆಂಟರ ಎದುರು ಇಟ್ಟೆ. ನಿಗದಿ ಮಾಡಿದ ಮೂರಕ್ಕಿಂತ ಹೆಚ್ಚು ಮಂದಿ ಅಲ್ಲಿ ಇದ್ದಿರುವುದು ಸಾಧ್ಯವೇ ಇಲ್ಲ ಎಂದು ವಾದಿಸಿದೆ. "ಹಾಗಾದರೆ ನಾನು ಕಂಡದ್ದು ಸುಳ್ಳೇ?"

"ಅದು ನಾನು ಹೇಳಲು ಸಮರ್ಥನಲ್ಲ. ಆದರೆ ನಮ್ಮವರು ಅಲೆಯುತ್ತಿರಲಿಲ್ಲ ಎಂದು ಮಾತ್ರ ನನ್ನ ಸಾಧನೆ ಅಷ್ಟೆ."

ನಮ್ಮ ವಾದ ಕಮಾಂಡೆಂಟರ ವರೆಗೂ ಹೋಯಿತು. ಅವರು ಅಡ್ಜುಟೆಂಟರ ಪಕ್ಷ ಒಪ್ಪಿದರು. ಹೀಗಾಗಿ ಮೊತ್ತದಲ್ಲಿ ನಮ್ಮ ಯೂನಿಟ್ಟಿಗೆ ಒಂದನೆಯ ಸ್ಥಾನ ತಪ್ಪಿ ಹೋಯಿತು. ಎರಡನೆಯ ಸ್ಥಾನವೇನೋ ಲಭಿಸಿತೆನ್ನಿ.

ಕರ್ನಲ್ ಮಾಡಿದ ಪರೀಕ್ಷೆ

ಕರ್ನಲ್ ಸೋಮಯ್ಯನವರೂ ಮೇಜರ್ ಮುತ್ತಪ್ಪನವರೂ ಪ್ರತಿದಿವಸವೂ ಕ್ಯಾಂಪಿಗೆ ಬರುತ್ತಿದ್ದರು. ಎನ್‌ಸಿಸಿ ಆಫಿಸರರು ಪಾಠ ಮಾಡಲೇಬೇಕು ಎಂಬುದು ಕರ್ನಲ್ಲರ ಹುಕುಂ, ಪ್ರತಿದಿನ ಶಿಕ್ಷಣ ವೇಳೆಯಲ್ಲಿ ಕಮಾಂಡೆಂಟ್ ಹಾಗೂ ತಮ್ಮಯ್ಯನವರೊಡಗೂಡಿ ಅವರು ಇಡೀ ಮಲಯದಲ್ಲಿ ಸುತ್ತುತ್ತಿದ್ದರು. ಕಾರ್ಯಕ್ರಮ ಮೊದಲೇ ಸಿದ್ಧವಾಗಿ ಹೋಗಿದ್ದುದರಿಂದ ಯಾರು ಯಾವ ಪಾಠವನ್ನು ಎಲ್ಲಿ ಮಾಡುತ್ತಿರುತ್ತಾರೆ ಎಂಬುದು ಅವರಿಗೆ ಗೊತ್ತಿರುತ್ತಿತ್ತು. ನನ್ನ ಪ್ರಿಯ ಸಹೋದ್ಯೋಗಿಗಳಲ್ಲಿ ಬಲು ಮಂದಿಗೆ ಎನ್‌ಸಿಸಿ ಪಾಠ ಮಾಡುವುದೆಂದರೆ ಜುಗುಪ್ಸೆ. ಗೌರವಧನ ಸ್ವೀಕರಿಸುವಾಗ ಇಷ್ಟು ಸ್ವಲ್ಪ ಸಾಕೇ ನಮ್ಮ ಈ ಮಹಾ ಹೊಣೆಗಾರಿಕೆ, ಸೇವೆಗಳಿಗೆ ಎಂಬ ತಾತ್ಸಾರ ಮನೋಭಾವ. ಖಾಕಿ ಸಮವಸ್ತ್ರಧರಿಸಿ ಆರ್ಮಿಯ ಕೆಲವು ಸ್ಲಾಂಗುಗಳನ್ನೂ ಅಶ್ಲೀಲ ಉದ್ಗಾರಗಳನ್ನೂ ಆರ್ಮಿಯವರಿಗಿಂತಲೂ ತೀವ್ರವಾಗಿ ಅರ್ಭಟಿಸಿದರೆ ಮಿಲಿಟರಿಯ ಸಕಲ ಸದ್ಗುಣಗಳೂ ತಮ್ಮಲ್ಲಿ ಸಹಜವಾಗಿಯೇ ಒರತೆಯೊಡುತ್ತವೆ ಎಂದು ಭಾವಿಸುತ್ತಿದ್ದರು ಈ ಸೋಮಾರಿ ಕೆಲಸಗಳ್ಳರು. ಆದರೆ "ಬ್ಲಡಿ..." ಉದ್ಗಾರ ನಿರ್ಜೀವ ರೈಫಲಿನ ಮೇಲೇನೂ ಪರಿಣಾಮ ಬೀರುತ್ತಿರಲಿಲ್ಲ. ಇನ್ನು ಡ್ರಿಲ್ಲು—ಅಗಿಯಲಾಗದ ನುಂಗಲಾರದ ಕಲ್ಲು. ಲೆಫ್ಟ್-ರೈಟ್ ಸರಿಯಾಗಿ (ತಾಳಲಯ ತಪ್ಪದಂತೆ) ಕಿರುಚುವುದು ಹೇಗೆ, ಪೀಛೇ ಮೂಡ್ ಹುಕುಮನ್ನು ಯಾವ ಕಾಲಿನ ಮೇಲೆ ಕೊಡಬೇಕು ಇದು ತಿಳಿದಿದ್ದವರು ಕಡಿಮೆ. ರೈಫಲ್ ಕವಾಯತಿಯ ಮಾದರಿ ಏನಾದರೂ ಇವರು ಪ್ರದರ್ಶಿಸತೊಡಗಿದರೆ—ಅದೊಂದು ಕೋಡಂಗಿ ವೇಷ! ಎಂಎ, ಎಂಎಸ್‌ಸಿ ಪದವೀಧರರು, ಹಲವಾರು ವರ್ಷಗಳ ಅಧ್ಯಾಪಕತ್ವದ ಅನುಭವವಿರುವವರಿಗೆ ಈ ಬಲು ಸುಲಭ ಯಾಂತ್ರಿಕ ವಿಧಿಗಳು ಏಕೆ ಇಷ್ಟು ಕಷ್ಟಕರವಾಗಬೇಕು ಎಂಬುದು ನನಗೆ ಇನ್ನೂ ಅರ್ಥವಾಗಿಲ್ಲ. ಆಸಕ್ತಿ ಇಲ್ಲ, ನಿಷ್ಠೆ ಇಲ್ಲ ಎನ್ನುವುದಾದರೆ ಆ ಕೆಲಸದಲ್ಲಿ ಉಳಿಯಬಾರದು. ಆಸಕ್ತಿರಹಿತ ಕಾರ್ಯ ಆತ್ಮದ್ರೋಹ. ಹುಡುಗರ ಮುಂದೆ ನಾವೆಂದೂ ಎರಡನೆಯ ದರ್ಜೆಯ ಮಾದರಿ ಆಗಬಾರದು.

ಕರ್ನಲ್ ಸಾಹೇಬರ ದೈನಂದಿನ ಇನ್‌ಸ್ಪೆಕ್ಷನ್ನಿನ ವೇಳೆ ಈ ಕಡೆ ನಡೆಯುತ್ತಿದ್ದುದು ಒಂದು ನಾಟಕ, ಒಂದು ಕಣ್ಣು ಮುಚ್ಚಾಲೆ ಆಟ. ಅವರು ದೂರದಲ್ಲಿ ಬರುತ್ತಿರುವಾಗ ಹಲವಾರು ಕೈಗಂಬಗಳು ಯುಕ್ತ ಸಂಜ್ಞೆಗಳನ್ನು ರವಾನಿಸಿ ಎಲ್ಲರನ್ನೂ ಜಾಗ್ರತಸ್ಥಿತಿಯಲ್ಲಿಡುತ್ತಿದ್ದುವು. ಆರ್ಮಿಯಲ್ಲಿ ಗಟ್ಟಿಯಾಗಿ ಅರಚಿದವನೇ ಜಾಣ; ಮೊದಲಾಗಿ ಕಿರುಚಿದವನೇ ಸುಟಿ ತರುಣ. ಈ ತತ್ತ್ವಾನುಸಾರ ನಮ್ಮ ಆಫಿಸರ್ ಮಹಾಶಯರು ಬಾಯಿಪಾಠ ಕಲಿತು ಬಂದಿದ್ದ ನಾಲ್ಕು ವಾಕ್ಯಗಳನ್ನು ಅರ್ಭಟಿಸುತ್ತಿದ್ದರು. ಒಂದು

ಸ್ಯಾಂಪಲ್ ನೋಡಿ. "ಈಗ ನಾನು ನಿಮಗೆ ಕಲಿಸುತ್ತಿರುವುದು. ಗೊತ್ತಾಗಲಿಲ್ವೋ. ರೈಫಲನ್ನು. ನಾನೇನನ್ನು ಈಗ ಕಲಿಸುತ್ತಿರುವುದು ?" ಎನ್‌ಸಿಸಿ ಆಫಿಸರ್.

"ರೈಫಲನ್ನು, ಸಾರ್" ಕ್ಯಾಡೆಟ್.

ಮೆಲುದನಿಯಲ್ಲಿ "ಬೊಬ್ಬೆ ಹೊಡಿಬೇಡ್ರೋ! ದುಷ್ಮನ್ ಬರುತ್ತಾ ಉಂಟು. ಸುಮ್ನೆ ಕೂರಿ." ಮುಂದುವರಿಸುತ್ತ "ನಾನೀಗ ನಿಮಗೆ ಕಲಿಸುತ್ತಿರುವುದು ರೈಫಲನ್ನು. ರೈಫಲ್ಲು ಒಂದು ಆಯುಧ. ರೈಫಲ್ಲು ಏನು ?" ಆಫಿಸರ್.

"ಒಂದು ಆಯುಧ ಸಾರ್!"

"ಗೊತ್ತಾಯ್ತಲ್ಲ, ರೈಫಲ್ಲು ಒಂದು ಆಯುಧ. ಇದು ಸೈನಿಕನ ಪರಮಮಿತ್ರ. ನಾನು ಏನು ಹೇಳಿದೆ ?" ಆಫಿಸರ್.

"ರೈಫಲ್ಲು ಸೈನಿಕನ ಪರಮಮಿತ್ರ, ಸಾರ್."

"ಸರಿಯಾದ ಮಾತು. ರೈಫಲ್ಲು ಸೈನಿಕನ ಮಿತ್ರ." ಓರೆಗಣ್ಣಿಂದ ನೋಡಿದಾಗ ದುಷ್ಮನ್ ದೂರದಲ್ಲಿರುವುದು ಕಂಡಿತು. "ಮಿತ್ರ ಅಂದಾಗ ನೆನಪಾಯಿತು. ನೋಡಿ ನನಗೊಬ್ಬ ಮಿತ್ರ ಇದ್ದ. ಅವನ ಕತೆ ಬಲು ಸ್ವಾರಸ್ಯ ಉಂಟು. ಅದು ಹೇಳಲೋ ಈ ನೀರಸ ರೈಫಲ್ ಹೇಳಲೋ ?" ಆಫಿಸರ್.

"ಕತೆ ಹೇಳಿ, ಸಾರ್."

"ನನ್ನ ಮಿತ್ರನ ಹೆಸರು ಸುಮಿತ್ರ..."

"ಕರ್ನಲ್ ಬರ್ತಿದ್ದಾರೆ, ಸಾರ್" ಕ್ಯಾಡೆಟ್ಟನ ಎಚ್ಚರಿಕೆ.

"ಅಂದ ಹಾಗೆ ರೈಫಲ್ ಸೋಲ್ಜರನ ಪರಮಮಿತ್ರ. ಆದ್ದರಿಂದ ರೈಫಲ್ಲನ್ನು ಸದಾ ಬಲು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಬೇಕಾದದ್ದು ಅಗತ್ಯ. ನಮ್ಮ ಇಂದಿನ ಪಾಠದ ಉದ್ದೇಶ ರೈಫಲ್ಲನ್ನು ಎಚ್ಚರದಿಂದ ನೋಡಿಕೊಳ್ಳುವುದು, ಅದರ ಶುಚಿತ್ವದ ಕಡೆ ನಿಗಾ ಕೊಡುವುದು ಹಾಗೂ ಅದರ ಕಾಪಾಡಿಕೆ. ಸಂಕ್ಷೇಪವಾಗಿ ರೈಫಲ್ಲಿನ ಎಚ್ಚರ, ಶುಚಿತ್ವ ಮತ್ತು ಕಾಪಾಡಿಕೆ...ದುಷ್ಮನ್ ಹೋಗಯಾ!"

"ಸುಮಿತ್ರಳ ಕತೆ ಹೇಳಿ ಸಾರ್" ಕ್ಯಾಡೆಟ್.

"ಸುಮಿತ್ರಳು ಅಲ್ಲ ಕಾಣ್ರೋ! ಸುಮಿತ್ರನು—ಅವನು, ಅವಳಲ್ಲ."

ಪೊಲೀಸ್—ಕಳ್ಳ ಒಂದೇ ನಾಣ್ಯದ ಎರಡು ಮುಖಗಳು. ಜೀವನದ ಈ ಸತ್ಯ ತಿಳಿಯದಿದ್ದ ಹೆಡ್ಡರಲ್ಲ ಕರ್ನಲ್ ಸೋಮಯ್ಯನವರು. ಆ ಸಂಜೆ ಆಫಿಸರರ ಒಂದು ಸಭೆ ಕರೆದು ಹೇಳಿದರು "ನೀವೆಲ್ಲರೂ ವೃತ್ತಿಯಿಂದ ಅಧ್ಯಾಪಕರು. ಅದರಲ್ಲಿ ಯಶಸ್ಸು ಗಳಿಸಿದವರು. ನಮಗೆಲ್ಲ ಗುರು ಸ್ವರೂಪರು. ಎನ್‌ಸಿಸಿ ಪ್ರಾಕ್ಟಿಸಿಗೆ ಬರುವ ಹುಡುಗರೊಡನೆ ದೈನಂದಿನ ಸಂಪರ್ಕವಿರುವವರು ನೀವು. ಆದ್ದರಿಂದ ನೀವೇ ಅವರಿಗೆ ಎನ್‌ಸಿಸಿ ಪಾಠಗಳನ್ನು ಹೇಳಿಕೊಡಬೇಕು ಎಂಬುದು ನನ್ನ ಅಪೇಕ್ಷೆ. ನೀವು ಹೇಳಿಕೊಟ್ಟಾಗ ಅವರಿಗೆ ಅರ್ಥವಾಗುವಷ್ಟು ಚೆನ್ನಾಗಿ ಆರ್ಮಿ ಸ್ಟಾಫುಗಳು ಹೇಳಿಕೊಡುವಾಗ ಆಗುವುದಿಲ್ಲ. ಕಾರಣ ನಿಮ್ಮ ವಾಕ್ಸರಣಿ ನಿಮ್ಮ ವ್ಯಕ್ತಿತ್ವ ವಿದ್ಯಾರ್ಥಿಗಳ ಮನಸ್ಸನ್ನು ಹಿಡಿಯಬಲ್ಲವು. ನಾನೀಗ ನೋಡಿರುವ ಪ್ರಕಾರ ನಿಮ್ಮಲ್ಲಿ ಬಲು ಮಂದಿ ಬಹಳ ಚೆನ್ನಾಗಿ ಪಾಠ ಮಾಡುತ್ತೀರಿ. ನಿಮಗೆ ಅಭಿನಂದನೆಗಳು. ನಿಮ್ಮಲ್ಲಿ ಒಂದು ಸ್ಪರ್ಧೆ ಏರ್ಪಡಿಸಬೇಕು, ಯಾರು

ಅತ್ಯುತ್ಕೃಷ್ಟ ಶಿಕ್ಷಕ ಎಂದು ನಿರ್ಧರಿಸಲು ಹೀಗೆ ಯೋಚನೆ ಮಾಡಿದ್ದೇನೆ. ವಿವರಗಳನ್ನು ಇಂದು ಸಂಜೆ ಪ್ರಕಟಿಸುತ್ತೇವೆ. ನಿಮಗೆ ಒಳ್ಳೆಯದಾಗಲಿ."

ವಿವರ ಪ್ರಕಟವಾದಾಗ ತಿಳಿದದ್ದಿಷ್ಟು. ೧ನೆಯ ಮೈಸೂರು ಬೆಟಾಲಿಯನ್ ಎನ್‌ಸಿಸಿಯ ಆಫಿಸರರ ತಂಡ ಒಂದು ಘಟಕ ; ೨ನೆಯ ಮೈಸೂರಿನವರ ತಂಡ ಎರಡನೆಯ ಘಟಕ ; ಕೊಡಗು ಮತ್ತು ಮಂಗಳೂರು ಯೂನಿಟ್ಟುಗಳವರ ತಂಡ ಮೂರನೆಯ ಘಟಕ. ಒಂದೊಂದು ಘಟಕದವರನ್ನೂ ಸಾಮೂಹಿಕವಾಗಿ ಕವಾಯತಿ ಹಾಗೂ ಶಸ್ತ್ರ ಕವಾಯತಿಗಳಲ್ಲಿ ಪರೀಕ್ಷಿಸಲಾಗುವುದು ; ಒಬ್ಬೊಬ್ಬ ಆಫಿಸರನನ್ನೂ ನಿಲವು, ಕವಾಯತಿ, ಪಾಠ ಮಾಡುವ ವಿಧಾನ ಇಲ್ಲೆಲ್ಲ ತಪಾಸಿಸಲಾಗುವುದು. ನಾವು ಪಾಠ ಮಾಡಬೇಕಾದ ವಿಷಯಗಳನ್ನೂ ನಮೂದಿಸಿದ್ದರು. ಅಂದಿನಿಂದ ಪ್ರತಿ ಅಪರಾಹ್ಣದ ಬಿಡುವಿನ ವೇಳೆಯಲ್ಲಿ ನಮಗೆಲ್ಲ ಸ್ಪೆಶಲ್‌ಕೋಚಿಂಗ್. ಆರ್ಮಿ ಸ್ಟಾಫುಗಳು ಬಂದರು. ಡ್ರಿಲ್ಲು, ಸಂಗಿನ್ (ಬಾಯೊನೆಟ್), ಮ್ಯಾಪ್‌ರೀಡಿಂಗ್, ಫಯರ್ ಕಂಟ್ರೋಲ್ ಆರ್ಡರ್ಸ್, ಅಪ್ರಿಸಿಯೇಶನ್ ಎಲ್ಲವನ್ನೂ ಗಾನದೋಸೆ ರೀತಿಯಲ್ಲಿ ಬೋಧಿಸಿದರು. ಪರೀಕ್ಷೆ ನಡೆಸಿದವರು ಕರ್ನಲ್ ಸೋಮಯ್ಯ, ಮೇಜರ್ ಮುತ್ತಪ್ಪ, ಕ್ಯಾಂಪ್ ಕಮಾಂಡೆಂಟ್—ಈ ಮೂವರ ಸಮಿತಿ. ನಮ್ಮ ತಂಡವನ್ನು ಸೀನಿಯರ್ ಆಫಿಸರಾಗಿದ್ದ ನಾನೇ ಕಮಾಂಡ್ ಮಾಡಿದೆ. ಮೊದಲ ಬಹುಮಾನ ನಮ್ಮ ತಂಡಕ್ಕೆ ಬಂತು. ಅತ್ಯುತ್ತಮ ಶಿಕ್ಷಕರಾಗಿ (ನನ್ನ ಡೆಹರಾಡೂನ್ ಮಿತ್ರ) ಲೆಫ್ಟೆನೆಂಟ್ ರಂಗನಾಥರಾವ್ ಆಯ್ಕೆಗೊಂಡರು.

ನಾರಾಯಣಮೂರ್ತಿ ಮಾಡಿದ ಪಾಠ

ಶಿಬಿರದ ಕೊನೆಯ ದಿವಸದ ಮನೋರಂಜನೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ನಮ್ಮ ಯೂನಿಟ್ಟಿನ ಕಡೆಯಿಂದ ಆರ್. ವಿ. ನಾರಾಯಣಮೂರ್ತಿ ಹಾಗೂ ಸಂಗಡಿಗರನ್ನು ಕಳಿಸಿದೆ. ನಾಟಕ ಕಲೆಯಲ್ಲಿ ಈತ ಸಿದ್ಧಹಸ್ತ. ಇವನಿಗೆ ಒಂದು ಭಾವನೆ ಕೊಟ್ಟೆ—ಅದರ ವಿಸ್ತಾರವನ್ನೂ ಅಲ್ಲಲ್ಲಿ ತರಬೇಕಾದ ಹಾಸ್ಯಗಳನ್ನೂ ವಿವರಿಸಿದೆ. ಇವನ್ನೆಲ್ಲ ಬಲು ಚೆನ್ನಾಗಿ ಗ್ರಹಿಸಿದ ಈ ತರುಣ ಒಂದು ಹೊಸ ಕಲಾರಂಗವನ್ನೇ ಆ ವೇದಿಕೆ ಮೇಲೆ ಅಂದು ರಾತ್ರಿ ಸೃಷ್ಟಿಸಿದ. ಮನೋರಂಜನೆಯ ಕಾರ್ಯಕ್ರಮದಲ್ಲಿ ನಮ್ಮ ಯೂನಿಟ್ಟಿಗೇ ಪ್ರಥಮ ಬಹುಮಾನ ಬಂದಿತು. ನಾರಾಯಣಮೂರ್ತಿ ಮಾಡಿದ ಪಾಠವನ್ನು ಯಥಾವತ್ತಾಗಿ ಇಲ್ಲಿ ಬರೆಯುತ್ತೇನೆ.

ವೇದಿಕೆಯ ಮೇಲೆ ಇನ್‌ಸ್ಟ್ರಕ್ಟರ್ (ನಾರಾಯಣಮೂರ್ತಿ) ತ್ವರಿತಗತಿಯಿಂದ ನಡೆದು ಬಂದು ನಿಂತ. ಸಾವಧಾನಸ್ಥಿತಿಯಲ್ಲಿ ನಿಂತು ಬಿಗಿಲೂದಿದ. "ಕ್ಲಾಸ್! ಫಾಲ್ ಇನ್!" ಈ ಹುಕುಮಿನ ಹಿಂದೆ ಓಡಿ ಓಡಿ ಬಂದರು ಹತ್ತು ಮಂದಿ ಯೋಧರು.

"ಕ್ಲಾಸ್! ಸಾವಧಾನ್. ಏಕ್ ಲೈನ್ ಮೇ ಬಂದ್!"

ಅವರೆಲ್ಲರೂ ಒಂದೇ ಗೆರೆಯ ಮೇಲಿರುವಂತೆ ಭುಜ ಭುಜ ಒತ್ತಾಗಿ ನಿಂತರು.

"ಲಂಬಾ ಆದ್ಮಿ ದೈನೇ, ಛೋಟಾ ಆದ್ಮಿ ಬಾಯೇ, ಏಕ್ ಲೈನ್ ಮೇ ಬಂದ್!"

ಇವೇ ಮುಂತಾದವು ಪ್ರತಿಯೊಂದು ಶಿಕ್ಷಣ ತರಗತಿಯಲ್ಲೂ ನಡೆಯುವ ಬಿಗಿಯಿಂದ ಮುಂದುವರಿದುವು.

"ಈ ಪೆರೇಡಿನಲ್ಲಿ ನಾನು ನಿಮಗೆ ಕಲಿಸುವ ಪಾಠದ ಹೆಸರು ಬೂಟುಗಳ ಎಚ್ಚರ ಮತ್ತು ಶುಚಿತ್ವ."

ಇಲ್ಲೆಲ್ಲ ಯಥಾವತ್ತಾಗಿ ಸಂದರ್ಭಸ್ಫೂರ್ತಿಯಿಂದ ಕ್ಲಾಸನ್ನು ಪ್ರಶ್ನೆ ಕೇಳಬೇಕು—ಬಲು ಸೀರಿಯಸ್ಸಾಗಿ. ಆಗ ಪೆದ್ದುಪೆದ್ದಾಗಿ ಒಬ್ಬ ಉತ್ತರ ಕೊಡಬೇಕು. ಹೀಗೆಯೇ ತರಗತಿ ಮುಂದುವರಿಯುತ್ತದೆ.

"ಬೂಟುಗಳು ಸೋಲ್ಜರನ ಪ್ರಥಮ ಪರಮ ಮಿತ್ರರು. ಹೆತ್ತ ತಂದೆ ತಾಯಿಯರಲ್ಲ, ಪಡೆದ ಪ್ರೇಯಸಿ ಅಲ್ಲ—ಬೂಟುಗಳೇ ಸೋಲ್ಜರನ ಪರಮ ಮಿತ್ರರು. ಸೋಲ್ಜರನ ಭಾರ ಹೊರುವವು, ಒಂದೆಡೆಯಿಂದ ಇನ್ನೊಂದೆಡೆಗೆ ಅವನ ಪಾದಗಳಿಗೆ ಏನೂ ತೊಂದರೆ ಯಾಗದಂತೆ ಸಾಗಿಸುವವು ಈ ಬೂಟುಗಳು. ಆಯುಧಗಳೆಲ್ಲವೂ ಹೋದರೂ ಬೂಟು ಗಳು ಹೋಗವು—ಪಾದಗಳ ವಿಸ್ತರಣೆಗಳಾದ ಈ ಉಕ್ಕಿನ ಕವಚಗಳ ಸಹಾಯದಿಂದಲೇ ಶತ್ರುಗಳನ್ನು ಒದ್ದು ಕೆಡಹಿ ಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುವುದು ಸಾಧ್ಯವಿದೆ. ಆದ್ದರಿಂದ ಬೂಟುಗಳ ಉಪಯೋಗಗಳನ್ನು ಎಷ್ಟು ಹೇಳಿದರೂ ಕಡಿಮೆಯೇ. ಈ ಪಾಠವನ್ನು ಎರಡು ಹಂತಗಳಲ್ಲಿ ಮಾಡಲಾಗುತ್ತದೆ. ಮೊದಲನೆಯ ಹಂತದಲ್ಲಿ ಬೂಟು ಗಳ ಎಚ್ಚರ. ಎರಡನೆಯ ಹಂತದಲ್ಲಿ ಬೂಟುಗಳ ಶುಚಿತ್ವ.

"ಈಗ ಮೊದಲನೆಯ ಹಂತ. ಬೂಟುಗಳು ಚಕ್ಕಳದಿಂದ ಮಾಡಲ್ಪಟ್ಟವುಗಳಾಗಿರು ವುದರಿಂದ ಕೆಸರು, ನೀರಿನೊಡನೆ ದೀರ್ಘಕಾಲ ಸಂಪರ್ಕವಿದ್ದರೆ ಅವು ಕೆಟ್ಟುಹೋಗು ತ್ತವೆ. ಆದ್ದರಿಂದ ಕೆಸರು ಮತ್ತು ನೀರಿನಿಂದ ಬೂಟುಗಳನ್ನು ದೂರವಿಡಬೇಕು. ಅಂದಮಾತ್ರಕ್ಕೆ ಯುದ್ಧಕಾಲದಲ್ಲಿ ಇದನ್ನೇ ಒಂದು ಆಜ್ಞೆ ಎಂದು ಭಾವಿಸ ಬಾರದು. ಸೈನಿಕ ಸಾಗುತ್ತಿರುವಾಗ ನೀರೋ ಕೆಸರೋ ಎದುರಾದರೆ ಬೂಟುಗಳು ಹಾಳಾಗಿ ಹೋಗುವುವಲ್ಲ ಎಂದು ಹಿಂಜರಿಯಬಾರದು. ದೇಶ ರಕ್ಷಣೆಯ ಪವಿತ್ರ ಮಾರ್ಗ ದಲ್ಲಿ ಇದು ಯಾವುದೂ ಆತಂಕವಾಗಕೂಡದು.

"ಈಗ ಎರಡನೆಯ ಹಂತ. ಬೂಟುಗಳನ್ನು ಶುಚಿಯಾಗಿಡುವುದರಲ್ಲಿ ಎರಡು ವಿಭಾಗ ಗಳಿವೆ. ಒಂದು ಶಾಂತಿಕಾಲದಲ್ಲಿ, ಇನ್ನೊಂದು—ಯುದ್ಧಕಾಲದಲ್ಲಿ. ಶಾಂತಿಕಾಲದಲ್ಲಿ ಬೂಟುಗಳು ಮಿಣಿ ಮಿಣಿ ಕನ್ನಡಿಯಂತೆ ಹೊಳೆದು ನಮ್ಮ ಅಭಿಮಾನದ, ಸ್ವಚ್ಛತೆಯ, ಸುಟಿತನದ ಪ್ರತೀಕಗಳಾಗಬೇಕು. ಆದರೆ ಯುದ್ಧ ಕಾಲದಲ್ಲಿ ಈ ಹೊಳೆತವೇ ಮುಳುವಾಗ ಬಹುದು. ಆಗ ಪಾಲಿಷ್ ಬದಲು ಬೂಟಿಗೆ ಬೇರೆಯೇ ಮೇಣವನ್ನು ಲೇಪಿಸಬೇಕು. ಪಾಲಿಷ್ ಮಾಡಲು ಬೇಕಾಗುವ ಹತ್ಯಾರುಗಳು—ಒಂದು, ಒಂದು ಜೊತೆ ಬೂಟುಗಳು ಲೇಸ್ ಸಮೇತ ; ಎರಡು, ಚೆರ್ರಿ ಬ್ಲಾಸಮ್ ಬೂಟ್ ಪಾಲಿಷ್ ಡಬ್ಬ ಒಂದು ; ಮೂರು, ಬ್ರಷ್ ಒಂದು ; ನಾಲ್ಕು, ನುಣುಪಾದ ಬಟ್ಟೆ ತುಂಡು ಒಂದು. ಪಾಲಿಷ್ ಮಾಡುವ ವಿಧಾನ. ಕಾಲುಗಳನ್ನು ನೀಡಿ ಕೂರಬೇಕು. ಅವುಗಳ ನಡುವೆ ಬೂಟುಗಳನ್ನು ಹಿಮ್ಮಡಿಗಳು ನಮ್ಮೆಡೆಗೆ ಇರುವಂತೆ ಇಡಬೇಕು. ಇವುಗಳ ಬಲಕ್ಕೆ ಕ್ರಮವಾಗಿ ಕೆಳಮುಖವಾಗಿ ಬ್ರಷ್, ಪಾಲಿಷ್ ಡಬ್ಬಿ ಮತ್ತು ಬಟ್ಟೆ ಇಡಬೇಕು. ಡಬ್ಬದ ಮುಚ್ಚಳ ತೆರೆದಿಡಬೇಕು. ಆಮೇಲೆ

ನಡಿಗೆ ಹೇಗೆ ಎಡಗಾಲಿನಿಂದ ಆರಂಭವೋ ಹಾಗೆ ಪಾಲಿಷನ್ನು ಸಹ ಎಡಬೂಟಿನಿಂದ ತೊಡಗಬೇಕು. ಎಡಗೈಯನ್ನು ಎಡಬೂಟಿನ ಒಳಗೆ ತುರುಕಿ ಅದನ್ನು ಅದುಮಿ ಹಿಡಿಯಬೇಕು. ಬಲಗೈಯಿಂದ ಬ್ರಷನ್ನು ಹಿಡಿದು ಒಂದು ಕ್ಷಣ ದಿಗಂತವನ್ನು ನೋಡಬೇಕು. ಕಾರಣ, ಶತ್ರು ಎಲ್ಲಿಯೂ ಹೊಂಚು ಹಾಕುತ್ತಿರಬಹುದು. ಸದಾ ಆ ಭೀತಿ ನಮ್ಮಲ್ಲಿ ಇದ್ದೇತೀರಬೇಕು. ಮರುಕ್ಷಣ ಬ್ರಷಿನಿಂದ ಬೂಟನ್ನು ನೇವರಿಸಿ ಅದರ ಮೇಲಿನ ಧೂಳನ್ನು ನಿವಾರಿಸಬೇಕು. ಬ್ರಷನ್ನು ಹಿಡಿದಿರುವಾಗ ಕೈಬೆರಳುಗಳೆಲ್ಲ ಸಂದಿಲ್ಲದಂತೆ ಒಂದುಗೂಡಿರಬೇಕು. ಮತ್ತೆ ಬ್ರಷಿನ ಒಂದು ತುದಿಗೆ ಪಾಲಿಷನ್ನು ಲಘುವಾಗಿ ಲೇಪಿಸಿಕೊಂಡು ಅದನ್ನು ಬೂಟಿಗೆ ಸವರಬೇಕು. ಇಂಥ ಎಲ್ಲ ಕ್ರಿಯೆಗಳಲ್ಲಿಯೂ ದೃಷ್ಟಿಮಾತ್ರ ದಿಗಂತದೆಡೆಗೆ. ಎಡಬೂಟಿಗೆ ಈ ವಿಧಿ ಮುಗಿದ ಮೇಲೆ ಮುಂದೆ ಬಲಬೂಟಿಗೆ. ಆ ತರುವಾಯ ಬ್ರಷನ್ನು ಅದರ ಸ್ಥಾನದಲ್ಲಿ ಮೊದಲಿನಂತೆಯೇ ಇರಿಸಿ, ಪಾಲಿಷ್ ಡಬ್ಬಿಯನ್ನು ಮುಚ್ಚಿ, ಬಟ್ಟೆಯ ತುಂಡನ್ನು ತೆಗೆದುಕೊಳ್ಳಬೇಕು. ಈಗ ಬೂಟುಗಳ ಮುಮ್ಮಡಿಗಳನ್ನು ನಮ್ಮೆಡೆಗೆ ತಿರುಗಿಸಿಕೊಂಡು ಕ್ರಮವಾಗಿ ಎಡಬೂಟು ಮತ್ತು ಬಲಬೂಟು ಇವನ್ನು ಪಾಲೀಸು ಮಾಡಬೇಕು. ಹೀಗೆ ಮಾಡುವಾಗ ಒಂದಿಷ್ಟು ಎಂಜಲನ್ನು ಮುಮ್ಮಡಿಗಳ ಮೇಲೆ ಉಗಿದರೆ ಪಾಲಿಷ್ ಇನ್ನಷ್ಟು ಚೆನ್ನಾಗಿ ಬರುತ್ತದೆ.''

ಮುಂದೆ ಈ ವಿಧಿಯ ಪ್ರಾಯೋಗಿಕ ನಿದರ್ಶನ, ಮತ್ತೆ ಕ್ಲಾಸಿನಿಂದ ಅಭ್ಯಾಸ.

ಲೋಕಕ್ಕೆ ದೀಪ ಯಾವುದು ? ಹೇಳು ಮಗನೇ ?
ಸೂರ್ಯಚಂದ್ರರು ಅಲ್ಲ, ಬಾನ ಮಿಂಚಲ್ಲ
ಮಿಂಚು ದೀವಿಗೆಯಲ್ಲ ಕಂಚುದೀವಿಗೆಯಲ್ಲ
ಬೆಂಕಿ ಬೆಳಕೂ ಅಲ್ಲ ಹಣತೆಯೂ ಅಲ್ಲ
ಮತ್ತಾವುದೆಂಬೆಯಾ ? ಹೇಳುವೆನು ಕೇಳು—
ಇತ್ತ ಬಾ ಮುಗುಳುನಗು, ನೆಲವೆಲ್ಲಬೆಳಗು !
ಜಗಕೆ ನಗೆಯೇ ದೀಪ, ಕತ್ತಲೆಗೆ ಬಹುರೂಪ

ಸೇಡಿಯಾಪು ಕೃಷ್ಣಭಟ್ಟ

೧೯೬೧

ಕಾಂಪ್ಟಿಯ ಧಗೆಯಲ್ಲಿ ಬಾಯೊನೆಟ್ ಚಾರ್ಜ್

೧೯೬೧ರ ಬೇಸಗೆಯಲ್ಲಿ ಬಾಳಿಗರಿಗೂ ನನಗೂ ಬೆಂಗಳೂರಿನಿಂದ ಒಂದು ವಿಶೇಷವಾದ ಆಹ್ವಾನ ಬಂದಿತು. ಮಹಾರಾಷ್ಟ್ರದ ಪುರಂಧರಗಡದಲ್ಲಿರುವ ಎನ್‌ಸಿಸಿ ತರಬೇತಿ ಕಾಲೇಜಿನಲ್ಲಿ ನಾವು ಆರು ತಿಂಗಳ ಕಾಲ ಮುಂದುವರಿದ ಎನ್‌ಸಿಸಿ ಶಿಕ್ಷಣ ಪಡೆಯಬೇಕು; ಅದರ ಸಮಸ್ತ ಖರ್ಚನ್ನೂ ಸರಕಾರ ವಹಿಸುವುದು ಮಾತ್ರವಲ್ಲ ಆ ಅವಧಿಯಲ್ಲಿ ನಮಗೆ ರ್‍ಯಾಂಕ್ ಸಂಬಳವನ್ನು (ತಿಂಗಳಿಗೆ ರೂಪಾಯಿ ೪೦೦) ಸಹ ಕೊಡಲಾಗುವುದು. ಇನ್ನು ಕಾಲೇಜು ಸಂಬಳ ಹೇಗೂ ಸಿಕ್ಕಿಯೇ ಸಿಕ್ಕುತ್ತದಷ್ಟೆ. ಈ ಶಿಕ್ಷಣ ಮುಗಿಸಿ ಬಂದೊಡನೆ ನಮಗೆ ಮೂರು ವರ್ಷ ಹೆಚ್ಚು ಸರ್ವಿಸ್ ಆಯಿತೆಂದು ಪರಿಗಣಿಸಿ ಎನ್‌ಸಿಸಿಯಲ್ಲಿ ಅಷ್ಟು ಸೀನಿಯಾರಿಟಿ ಕೊಡಲಾಗುವುದು. ಇದು ಕೇಂದ್ರ ಸರಕಾರದ ಆಹ್ವಾನ. ಆದ್ದರಿಂದ ನಮ್ಮನ್ನು ಕೆಲಸಕ್ಕೆ ನೇಮಿಸಿದ್ದ ರಾಜ್ಯ ಸರಕಾರ ಇದನ್ನು ಒಪ್ಪಲು ಸಿದ್ಧವಿತ್ತು. ನಾವಿಬ್ಬರೂ ಒಂದೇ ಒಂದು ಮುಖ್ಯ ಕಾರಣನಿಮಿತ್ತ ಈ ಆಹ್ವಾನವನ್ನು ಮನ್ನಿಸಲಿಲ್ಲ. ನಾವು ಹೋದರೆ ಜುಲೈ-ಡಿಸೆಂಬರ್ ಅವಧಿಯಲ್ಲಿ ನಮ್ಮ ಪಾಠ ನಡೆಯುವುದಿಲ್ಲ. ಆದ್ದರಿಂದ ಹುಡುಗರಿಗೆ ತೊಂದರೆ ಆಗುತ್ತದೆ. ಈಗಾಗಲೇ ಹಲವಾರು ಸಲ ಎನ್‌ಸಿಸಿಯನ್ನು ಬಿಡುವ ಯೋಚನೆ ನಮಗೆ ಬಂದುದಿತ್ತು. ಹುಡುಗರ ಶೀಲ ಉದ್ಧಾರವಾದದ್ದು ನಮಗೆ ಕಾಣಲಿಲ್ಲ. ಬದಲು ಅದು ಇಳಿಯುತ್ತಿತ್ತು. ಎನ್‌ಸಿಸಿ ಶಿಕ್ಷಣ ಅನೇಕರಿಗೆ ವ್ಯವಸ್ಥಿತ ರೌಡಿತನವನ್ನು ಕಲಿಸಿಕೊಟ್ಟಂಥ ಅನುಭವ ನಮಗೆ ಆಗಾಗ ಆಗುತ್ತಿತ್ತು. ಈ ಏಡಿಗಂತಿಯನ್ನು ನಿವಾರಿಸುವುದು ನಮ್ಮಿಂದಾಗದ ಮಹಾಕಾರ್ಯ. ಆದರೆ ಇದರ ಅಂಗವಾಗಿರದೆ ದೂರವಿರುವುದು ನಮಗೆ ಸಾಧ್ಯ ಎಂದು ತರ್ಕಿಸುತ್ತಿದ್ದೆವು. "ನಾನು ಇರುವ ತನಕ ಆ ಯೋಚನೆ ಬೇಡ. ಪ್ರಾಮಾಣಿಕ ವ್ಯಕ್ತಿಗಳು ಹೊಣೆ ಹೊರದಿದ್ದರೆ ಅವರು ಅಪ್ರಾಮಾಣಿಕರ ದುರ್ವರ್ತನೆಗೆ ವ್ಯರ್ಥ ಬಲಿಗಳಾಗುತ್ತಾರೆ" ಎಂದು ಮುಂತಾಗಿ ತಮ್ಮಯ್ಯ ವಾದಿಸುತ್ತಿದ್ದರು.

ಅದೇ ಬೇಸಗೆಯಲ್ಲಿ ನಾನು ನಾಗಪುರದ ಸಮೀಪವಿರುವ ಕಾಂಪ್ಟಿ ಎಂಬಲ್ಲಿಯ ಇನ್ನೊಂದು ಎನ್‌ಸಿಸಿ ಶಿಕ್ಷಣ ಕಾಲೇಜಿಗೆ ಒಂದು ತಿಂಗಳ ರಿಫ್ರೆಷರ್ ಕೋರ್ಸಿಗೆ ಹೋದೆ. ಬಾಳಿಗರು ತನಗೆ ಈ ಮುಂದುವರಿದ ಶಿಕ್ಷಣ ಬೇಕಾಗಿಲ್ಲ ಎಂದು ಬರೆದುಕೊಟ್ಟರು. ಕಾಂಪ್ಟಿಯಲ್ಲಿ ಉತ್ತರ ಭಾರತದ ಹಲವಾರು ಮಿತ್ರರು ನನಗೆ ಲಭಿಸಿದರು. ಪೆರೇಡ್ ಗ್ರೌಂಡಿನಲ್ಲಿಯೂ ಬರಾಕಿನಲ್ಲಿಯೂ ಈ ಮಿತ್ರರೊಡನೆ ನಾನು ಸೌಹಾರ್ದದಿಂದ ಬಾಳಿದೆ. ಆದರೆ ಬೇರೆ ಒಂದು ವಿಧವಾದ ಕಾಟ ಇಲ್ಲಿ ಶುರುವಾಗಿತ್ತು. ಅದು ಆರ್ಮಿ ಸ್ಟಾಫುಗಳಿಗೆ ಮದರಾಸಿಗಳ ವಿರುದ್ಧವಿದ್ದ ಸ್ಪಷ್ಟ ತಿರಸ್ಕಾರ, ಹೇಯ ಭಾವ. ಹಿಂದಿಭಾಷೆ ಎಂಥ ಶೂಲ ಆಗಬಹುದು ಎಂಬುದನ್ನು ಇಲ್ಲಿಯ ಮಿಲಿಟರಿ ಕ್ಲಾಸುಗಳಲ್ಲಿ ದಕ್ಷಿಣದಿಂದ ಹೋದ ನಾವೆಲ್ಲರೂ ಅನುಭವಿಸಿದೆವು. ಆರ್ಮಿಯಲ್ಲಿ ಇಂಥ ಭಾವ ಪ್ರಕಟಿತವಾದರೆ ಈ ದೇಶದ

ಐಕ್ಯವೇನಾಯಿತು ಎಂದು ನಾವೆಲ್ಲರೂ ಮಾತಾಡುತ್ತಿದ್ದೆವು. ನನ್ನ ಹಿಂದೀ ಮಿತ್ರರು ಸ್ಟಾಫುಗಳ ವರ್ತನೆ ತಪ್ಪು ಎಂದು ಖಂಡಿಸುತ್ತಿದ್ದರು. ಆದರೆ ಓಜಿಯ ತಂರುಚಂಗಿಯ ಮುಂದೆ ಖಾಕಿಯ ಮಲ್ಲಿಗೆಯ ರೇಕುಗಳು ನಿಲ್ಲವು. ಇಲ್ಲಿ ನಡೆದ ಎರಡು ಮುಖ್ಯ ಘಟನೆಗಳನ್ನು ಪ್ರಸ್ತಾವಿಸಬೇಕು.

ಟ್ರೈನಿಂಗ್ ಆಫಿಸರ್ ಮೇಜರ್ ಸಾಹೇಬರು. ಆ ದಿವಸದ ಪಾಠ ಅವರು ಮಾಡಬೇಕಾದುದು NCC Organization. ಯಥಾಪ್ರಕಾರ ಮಿಲಿಟರಿ ಡೋಲು ತಮಟೆ ನಗಾರಿ ನಿನಾದಗಳ ನಡುವೆ ಕ್ಲಾಸ್ ಪ್ರಾರಂಭವಾಯಿತು. "The aim of this lecture, gentlemen, is NCC Organization. What is an Organization ?" ಅವರು ಇಡೀ ಕ್ಲಾಸಿಗೆ ಎಸೆದ ಪ್ರಶ್ನೆ.

ನಾವೆಲ್ಲ ಪದವೀಧರರು ರಾಜ್ಯಶಾಸ್ತ್ರದಲ್ಲಿ ಅರ್ಥಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮಾಡಿದ್ದ ವಿದ್ವಾಂಸರೂ ನಮ್ಮಲ್ಲಿದ್ದರು. ಬಲು ಸಮರ್ಪಕವಾದ ಬೇರೆ ಬೇರೆ ವ್ಯಾಖ್ಯೆಗಳನ್ನು ಹಲವಾರು ಮಂದಿ ಹೇಳಿದಾಗ ಮೇಜರ್ ಸಾಹೇಬರು ಅಣಕವಾಡಿದರು "Gentlemen ! The trouble with you is you are too bookish. In the army we want simple, accurate, precise and brief definitions."

"We shall have your definition, sir ?" ನಾವೆಂದೆವು.

"You want to know my definition ? All right, take down."

ಈ ದಿವ್ಯಾನುಗ್ರಹದ ಫಲವಾಗಿ ಉದ್ಭವಿಸುವ ತೀರ್ಥೋದಕಪಾನ ಮಾಡಲು ನಾವು ಅಂಜಲಿ ಒಡ್ಡಿದೆವು. ಅವರು ಅನುಗ್ರಹಿಸಿದರು "Anything in the state of being organized is an Organization."

ಕ್ಲಾಸ್ ಎಬ್ಬಿಸಿದ ನಗುವಿನ ಕೋಲಾಹಲ ಮಿಲಿಟರಿ ಗಾಂಭೀರ್ಯಕ್ಕೆ, ಮೇಜರ್ ಸಾಹೇಬರ ವಿದ್ವತ್ತಿಗೆ ಸವಾಲಾಗಿತ್ತು.

"That is begging the question, sir" ಒಬ್ಬನೆಂದ.

"What, you call me a beggar ?"

"Sir, in English begging the question means—when you do not know how to answer a question you repeat the same words in a different way and confuse that for the answer. I didn't call you a beggar, sir !" ಟ್ರೈನಿಂಗ್ ಆಫಿಸರರ್ ಮತ್ತೆ ಆ ಕ್ಲಾಸನ್ನು ಮುಂದುವರಿಸಲಿಲ್ಲ.

ಮತ್ತೆ ನಾಲ್ಕು ದಿವಸಗಳ ತರುವಾಯ. ಇದೇ ಮಹಾತ್ಮ. ಪೆರೇಡ್ ಗ್ರೌಂಡಿನಲ್ಲಿ "You NCC Officers are all bastards" ಅಂದುಬಿಟ್ಟ. Bastard ಎಂದರೆ ಜಾರಜ ಎಂದರ್ಥ. ಕನ್ನಡದ ಬೆಣ್ಣೆಮುದ್ದೆ ಆದರೆ ಆಂಧ್ರದ ಖಾರ ಗಾಳಿ ಕುಡಿದ ಪಾರ್ಥಸಾರಥಿ ಎದ್ದು ನಿಂತ "ನೀವು ನಮ್ಮ ತಪ್ಪುಗಳನ್ನು ನಿಂದಿಸಿ, ಶಿಕ್ಷೆನೀಡಿ, ಒಪ್ಪುತ್ತೇವೆ. ಆದರೆ ನಮ್ಮ ಹುಟ್ಟನ್ನು ಕುರಿತು ಮಾತು ಆಡಬೇಡಿ" ಎಂದ.

"ನಾನೇನು ಹೇಳಿದೆ ?" ಮೇಜರ್.

"ಬಾಸ್ಟರ್ಡ್ಸ್ ಅಂದಿರಲ್ಲ. ಇದರ ಅರ್ಥ ನಿಮಗೆ ತಿಳಿದಿದೆಯೇ ?" ಪಾರ್ಥಸಾರಥಿ.

"ಅದಕ್ಕೇಕೆ ಇಷ್ಟು ರಂಪ ? ಅದು ಆರ್ಮಿಯಲ್ಲಿ ಸಾಧಾರಣವಾಗಿ ರೂಢಿಯಲ್ಲಿರುವ ಪದ. ನಿಮಗೆ ನೋವಾಗಬೇಕೆಂದೇನೂ ನಾನು ಹಾಗೆ ಹೇಳಲಿಲ್ಲ" ಮೇಜರ್.

"ಸಾರ್ ! ನಾವು ಆರ್ಮಿಯವರಲ್ಲ. ನಾಗರಿಕ ರೀತಿಯಲ್ಲಿಯೇ ನಮ್ಮೊಡನೆ ವರ್ತಿಸಬೇಕೆಂದು ಕೋರುತ್ತೇವೆ." ಪಾರ್ಥಸಾರಥಿ ಮುಂದುವರಿಸಿ "ನೀವು ಆ ಮಾತನ್ನು ಬೇಷರತ್ತಾಗಿ ಹಿಂತೆಗೆದುಕೊಳ್ಳಬೇಕು" ಎಂದ.

ಮೇಜರ್ ಕಕಮಕನಾದ. "ಆಗಲಿ. ತಪ್ಪಾಯಿತು. ನಾನು ಆ ಪದವನ್ನು ವಾಪಸು ತೆಗೆದುಕೊಂಡಿದ್ದೇನೆ." ಮುಂದೆ ಈ ಕ್ಲಾಸೂ ನಡೆಯಲಿಲ್ಲ.

ಅದೇ ದಿವಸ. ಮಧ್ಯಾಹ್ನ ೧೨ ಗಂಟೆಗೆ ನಾವು ಒಂದು ಕ್ಲಾಸಿನಿಂದ ಇನ್ನೊಂದು ಕ್ಲಾಸಿಗೆ ಸಾಲಾಗಿ ನಡೆದುಕೊಂಡು ಹೋಗುತ್ತಿದ್ದೆವು. ಈ ನಡಿಗೆಯಲ್ಲಿ ವ್ಯವಸ್ಥೆ ಅಷ್ಟು ಚೆನ್ನಾಗಿರಲಿಲ್ಲ. ಕಾಂಪ್ಟಿಯ ೧೦೬°—೧೧೦° F ಬಿಸಿಲ ಬೇಗೆಯಲ್ಲಿ ನಾವೆಲ್ಲ ಸೋತು ಕಂಗಾಲಾಗಿದ್ದೆವು. ಟ್ರೈನಿಂಗ್ ಸುಬೆದಾರ್ "ದೌಡ್ಕೇ ಛಲ್" ಅಂದ. ಓಡಿದೆವು—ಆದರೆ ಅದರಲ್ಲೂ ಸತ್ತ್ವವಿರಲಿಲ್ಲ. ಅಂದೇ ಬೆಳಗ್ಗೆ ೧ ಗಂಟೆ ಕಾಲ ಬಾಯೊನೆಟ್ ಶಿಕ್ಷಣದಲ್ಲಿ ಹಾರಿ ತಿವಿದು ಕೂಗಿ ಸುಸ್ತಾಗಿತ್ತು.

"ನಿಮಗೆ ಬಲು ಸುಸ್ತು. ಪಾಠ ಕಲಿಸುತ್ತೇನೆ" ಎಂದ. ಬಿಸಿಲಿನಿಂದ ಕಾದಿದ್ದ ಮರಳಿನ ಬಯಲಿಗೆ ಸಾಗಿಸಿದ. ರೈಫಲ್ಲಿಗೆ ಸಂಗಿನ್ ಲಗತ್ತಿಸಲು ಹುಕುಂ ನೀಡಿದ. ಮುಂದಿನ ಅರ್ಧಗಂಟೆ ಮೇ ತಿಂಗಳ ಕಾಂಪ್ಟೀ ತಾಪದಲ್ಲಿ ಬಾಯೊನೆಟ್ ಚಾರ್ಜ್ ಮಾಡಿದ್ದೂ ಮಾಡಿದ್ದೇ. ಬಸವಳಿದು ಮೂರ್ಛಾಗತರಾಗಿ ಬಿದ್ದವರನ್ನು ಲೆಕ್ಕಿಸಿದವರಿಲ್ಲ. ಎನ್‌ಸಿಸಿ ಆಫಿಸರುಗಳ ಗರ್ವಹತ್ಯೆ ಹೀಗೆ ಸಾರೋದ್ಧಾರವಾಗಿ ಮುಂದುವರಿಯಿತು. ಟ್ರೈನಿಂಗ್ ಆಫಿಸರ್ ಕ್ರೂರತೃಪ್ತಿಯಿಂದ ದೂರದ ನೆರಳಿನಲ್ಲಿ ನಿಂತು ಈ ಪ್ರಕರಣವನ್ನು ವೀಕ್ಷಿಸುತ್ತಿದ್ದ. ಬೌದ್ಧಿಕವಾಗಿ ಬಗ್ಗಿಸಲಾಗದಿದ್ದುದನ್ನು ಶಿಸ್ತಿನ ಬಲ ಪ್ರಯೋಗದಿಂದ ತಗ್ಗಿಸಲಾಗಿತ್ತು. ಕಾಂಪ್ಟಿಯಿಂದ ಹಿಂತಿರುಗುವಾಗ ಬಾಳಿಗರ ನಿರ್ಧಾರ ಅದೆಷ್ಟು ಸರಿಯಾದದ್ದೆಂದು ನಾನು ತಿಳಿದೆ. ಆದಷ್ಟು ಬೇಗ ಎನ್‌ಸಿಸಿಯಿಂದ ವಿಮೋಚನೆ ಪಡೆಯುವುದು ಯೋಗ್ಯ ವಿಧಾನವೆಂದು ಮನಸ್ಸು ನುಡಿಯಿತು.

ಶ್ವಾನಲಾಂಗೂಲವಕ್ರತೆ

ಮಡಿಕೇರಿ ಜೀವನ ಬಿರುಸಾಗಿಯೇ ನಡೆದುಹೋಗಿತ್ತು. ಕ್ಲಾಸುಗಳು ಸಹಕಾರಸಂಘ, ಎನ್‌ಸಿಸಿ, ಕಾಲೇಜಿನ ಇತರ "ಬಿಟ್ಟಿ"ಗಳು, ಸ್ನೇಹಿತರ ಪರವಾಗಿ ಹೊರುತ್ತಿದ್ದ ಬೇರೆ ಬೇರೆ ಕೆಲಸಗಳು—ಇವುಗಳ ಮಧ್ಯೆ ಮರೆತದ್ದು ಎರಡನ್ನು. ಮರೆತೆನೆಂದಲ್ಲ, ಗಮನವೀಯಲು ಸಾಧ್ಯವೇ ಆಗುತ್ತಿರಲಿಲ್ಲ. ಈಗ, ಆ ದಿವಸಗಳಿಂದ ದೂರವಿರುವಾಗ, ಹಾಗೆ ಮಾಡಬಹುದಿತ್ತು ಹೀಗೆ ಮಾಡಬಹುದಿತ್ತು ಎಂದು ಮನಸ್ಸಿನಲ್ಲಿ ಆಲೇಖ್ಯಗಳನ್ನು ಬಿಡಿಸಬಹುದು. ಆದರೆ ಅವನ್ನು ವಾಸ್ತವಿಕವಾಗಿ ಅನುಭವಿಸುತ್ತಿದ್ದಾಗ ಭವಿಷ್ಯದ ಕಡೆ ಒಂದಿಷ್ಟೂ ನಿಗಾ ಇಲ್ಲದೆ ಕುರುಡು ಹೆಜ್ಜೆ ಇಡುತ್ತಿದ್ದಾಗ, ವರ್ತಮಾನ ಕಾಲದಲ್ಲಿ ಅತಿ ತೀವ್ರವಾಗಿ ಬಾಳುತ್ತಿದ್ದಾಗ, ಬೇರೆ ವಿಧದಲ್ಲಿ ವರ್ತಿಸಲು ಪ್ರಾಯಶಃ ಸಾಧ್ಯವಾಗುತ್ತಿರಲಿಲ್ಲ. ೧೯೬೧ಕ್ಕೆ ಇಂದು (೧೯೭೧) ನನ್ನನ್ನು ಕೊಂಡೊಯ್ದರೆ ಮತ್ತು ಇಂದಿನ

ಅನುಭವವನ್ನು ನನಗೆ ಮೂಲಧನವಾಗಿ ಕೊಟ್ಟರೆ ನನ್ನ ಪಥವೇನಾದರೂ ಬೇರೆಯಾಗು ತ್ತಿತ್ತೇ ಎಂದು ಪ್ರಶ್ನಿಸಿದರೆ ಉತ್ತರ ಬಹುಶಃ ಇಲ್ಲ. ಅಂದಿನ ಪರಿಸರಬಲಗಳೂ ಆಂತರಿಕ ಬಲಗಳೂ ಈ ಜೀವಕ್ಕೆ ಆ ಪಥವನ್ನು ವಿಧಿಸಿದ್ದುವು. ತಿಳಿದಿದ್ದರೂ ಗಮನವೀಯಲು ನನಗೆ ಸಾಧ್ಯವಾಗದಿದ್ದ ಎರಡು ವಿಷಯಗಳಿವು—ಗಣಿತಪ್ರಪಂಚದಲ್ಲಿ ಸಾಧನೆ. ಸಂಸಾರದ ಕಡೆ ಮಮತಾವರ್ಜಿ. ನನ್ನ ವೃತ್ತಿಯಲ್ಲಿ (ಗಣಿತಶಾಸ್ತ್ರದ ಲೆಕ್ಚರರ್) ಬಿಎಸ್‌ಸಿ ಮಟ್ಟದ ವರೆಗೆ ನಾನು ಸಮರ್ಥ ಎಂದನಿಸಿಕೊಂಡಿದ್ದೆ. ಆದರೆ ಗಣಿತಶಾಸ್ತ್ರ ಅಲ್ಲಿಗೇ ಮುಗಿಯುವು ದಿಲ್ಲವಷ್ಟೆ. ಆಧುನಿಕ ಗಣಿತ ಶಾಸ್ತ್ರದ ವಿಚಾರ ನಾನು ಅಭ್ಯಾಸ ಮಾಡಬಹುದಿತ್ತು ; ಸಂಶೋಧನ ಪ್ರಬಂಧಗಳನ್ನು ರಚಿಸಿ ಮುಂದುವರಿಯಬಹುದಿತ್ತು ; ವಿದ್ಯಾರ್ಥಿಗಳಲ್ಲಿ ಬುದ್ಧಿವಂತರನ್ನು ಆರಿಸಿ ಸಂಶೋಧನೆಯ ಕಡೆಗೆ ಅವರ ಒಲವು ಮಾಲುವಂಥ ಪರಿಸರ ಸೃಷ್ಟಿಸಬಹುದಿತ್ತು ; ಈ ಪ್ರಪಂಚದಲ್ಲಿ ನಡೆದು ಎತ್ತರ ಏರಬಹುದಿತ್ತು. ಮಾಡಲಿಲ್ಲ. ಹೆಂಡತಿ ಮಕ್ಕಳೊಡನೆ ವಿರಾಮವಾಗಿ ಇರಬಹುದಿತ್ತು. ರಜಾದಿವಸಗಳಲ್ಲಿ ಅವರನ್ನು ಊರೂರಿಗೆ ಕರೆದುಕೊಂಡು ಹೋಗಿ ಅವರ ಮನಸ್ಸನ್ನು ಪ್ರಸನ್ನಗೊಳಿಸಬಹುದಿತ್ತು. ಅವರೇನೂ ಅನ್ನಲಿಲ್ಲ. ನಾನೇನೂ ವಿಚಾರಿಸಲಿಲ್ಲ. "ಕರ್ತವ್ಯದಿಂದ ಲಭಿಸುವ ಸಂತೋಷ ಕ್ಕಾಗಿ ಅನುಭವಿಸಬೇಕಾದ ಅನಿವಾರ್ಯ ತಾಪತ್ರಯ ಮನೆ, ಮಡದಿ, ಮಕ್ಕಳು" ಎಂದು ನಾನು ಹೇಳುತ್ತಿದ್ದೆ, ಅಂತೆಯೇ ವರ್ತಿಸುತ್ತಿದ್ದೆ. ಈ ಬೇಜವಾಬ್ದಾರೀ ನಡತೆಯಿಂದ ಸಂಸಾರದಲ್ಲಿ ಒಂದು ದುರಂತ ಸಂಭವಿಸಿತು. ನಮ್ಮ ಎರಡು ಗಂಡು ಮಕ್ಕಳು ದೊಡ್ಡವ ರಾಗಿದ್ದರು (೮ ಮತ್ತು ೪ ವರ್ಷ ಪ್ರಾಯ). ನಮಗೆ ಒಂದು ಹೆಣ್ಣುಮಗು ಹುಟ್ಟಿತು. ಡಿಸೆಂಬರಿನ ಕಡುಚಳಿಯಲ್ಲಿ, ಅದಕ್ಕೆ ಒಂದು ತಿಂಗಳೂ ತುಂಬುವ ಮುನ್ನ, ಶೀತಜ್ವರ ಬಂದಿತು. ಊರ ಭಾರ ಹೊತ್ತ ನನಗೆ ಆ ಮಗುವಿನ ಕಡೆ ಗಮನಹರಿಸುವುದು ಸಾಧ್ಯ ವಾಗಲಿಲ್ಲ. ಸಾಕಷ್ಟು ವೈದ್ಯಕೀಯ ನೆರವನ್ನು ತತ್‌ಕ್ಷಣ ಒದಗಿಸಿದ್ದರೆ ಅದರ ದುರಂತ ವನ್ನು ತಡೆಯಬಹುದಿತ್ತೋ ಏನೋ. ಫಲಿತಾಂಶ ಹೇಗೆಯೇ ಆಗಿರಲಿ—ಸಂಸಾರಕ್ಕೆ ನನ್ನ ಕರ್ತವ್ಯ ನಿರ್ವಹಣೆಯನ್ನು ನಾನು ಸರಿಯಾಗಿ ಮಾಡಲಿಲ್ಲ ಎಂಬ ಕೊರಗು ಇಂದಿಗೂ ಇದೆ. ಹೋಗಲಿ—ಮತ್ತಾದರೂ ಇಂದಿಗಾದರೂ, ತಿದ್ದಿಕೊಂಡಿದ್ದೇನೆಯೇ ? ಉತ್ತರ ಬಹುಶಃ ಇಲ್ಲ. ನನ್ನ ದೇಹ ಮನಸ್ಸನ್ನು ರೂಪಿಸಿ ನಿಯಂತ್ರಿಸುತ್ತಿರುವ ಜೀನು ಗಳು, ವರ್ಣತಂತುಗಳು ಇಂಥ ವಿಚಿತ್ರ ವರ್ತನೆಯನ್ನೇ ನನಗೆ ವಿಧಿಸಿರಬೇಕು. ಎಂದಾದರೂ —ದುರ್ಬಲ ಗಳಿಗೆಗಳಲ್ಲಿ ಈ ವಿಚಾರ ಯೋಚಿಸಿದ್ದುಂಟು, ಮರುದಿವಸದಿಂದ ಸರಿ ಯಾಗಿರುತ್ತೇನೆಂದುಕೊಂಡದ್ದುಂಟು. ಸಿಂದಬಾದ ನಾವಿಕನ ಬೆನ್ನ ಮೇಲೇರಿದ್ದ ಮುದಿ ಭಾರದಂತೆ ಸಹಕಾರ ಸಂಘ ನನ್ನ ಮೇಲೆ ಸವಾರಿ ಮಾಡುತ್ತಿತ್ತು. ಮೊದಲು ನಾನದನ್ನು (ನಿಮಿತ್ತ ಮಾತ್ರವಾಗಿ) ಪ್ರಾರಂಭಿಸಿದೆ ನಿಯಂತ್ರಿಸಿದೆ, ನಿಜ. ಈಗ ಅದು ನನ್ನನ್ನು ಲಗಾಮಿನಿಂದ ಜಗ್ಗುತ್ತಿತ್ತು. ಯಾವ ರಜೆಯೂ ನನ್ನ ಪಾಲಿಗಿಲ್ಲ. ಎನ್‌ಸಿಸಿಯಿಂದ ಒಂದಿಷ್ಟು ಪ್ರತಿಷ್ಠೆ, ಕಾಸು ಬರುತ್ತಿತ್ತು. ಸಹಕಾರ ಸಂಘದಿಂದ ಒಂದೂ ಇಲ್ಲ. ಮಾತ್ರ ವಲ್ಲ ಲಕ್ಷಾಂತರ ರೂಪಾಯಿಗಳ ವ್ಯವಹಾರದಲ್ಲಿ ದೈನಂದಿನ ಲೆಕ್ಕಪತ್ರ ತಾಳೆಯಾಗ ದಿದ್ದಾಗ ಕೈಯಿಂದ ದುಡ್ಡು ಕಳೆದುಕೊಂಡದ್ದೂ ಇತ್ತು. ಇನ್ನು ಪಿಸುಣಾರ ಹೀನ ವಾಕ್ಯ ಗಳು ಬಸವೇಶ್ವರರಂಥವರನ್ನೇ ಬಿಡದಿದ್ದ ಮೇಲೆ ನನ್ನನ್ನು ಬಿಟ್ಟಾವೇ ? ಇವರಲ್ಲೇನೋ

ಇವನಿಗೆ ಒಳಗೊಳಗಿನ ಲಾಭ ಇರಬೇಕು, ಇಲ್ಲವಾದರೆ ಹೀಗೆ ಕೆಲಸ ಮಾಡಿಯಾನೇ—ನಿಂದಕರ ಈ ಮಾತು ನನ್ನನ್ನು ತಲಪದೆ ಇರುತ್ತಿರಲಿಲ್ಲ. ಸಹಕಾರ ಸಂಘಗಳು ಸಾರ್ವತ್ರಿಕವಾಗಿಯೇ ಎಂಬಂತೆ ವಂಚಕ ವ್ಯವಸ್ಥಾಪಕರ ವಿದ್ಯಾನೆಗಳಿಗೆ ಕದಳೀವನಗಳಾಗಿದ್ದಾಗ ಇಂಥ ಮಾತುಗಳು ಗಾದೆ ಮಾತುಗಳೇ ಆಗಿದ್ದುವು. ಆದ್ದರಿಂದ ಎನ್‌ಸಿಸಿ, ಸಹಕಾರಸಂಘ ಇವೆಲ್ಲವನ್ನೂ ಬಿಟ್ಟು ವೃತ್ತಿಯುತ್ತ ಅಧಿಕನಿಷ್ಠೆಯಿಂದ ದುಡಿಮೆ ತೊಡಗಬೇಕು ಎಂದು ಆಗಾಗ ಚಿಂತಿಸುತ್ತಿದ್ದೆ. ಆದರೆ ಮುಂದಿನ ಗಳಿಗೆ ಕೊಳವೆ ತೆಗೆದ ತರುವಾಯ ನಾಯಿ ಬಾಲದಂತೆ ನಾನಾಗುತ್ತಿದ್ದೆ, ಮಡಕೇರಿ ಬಿಡದೇ ಇದು ಸಾಧ್ಯವಾಗದು. ಆದರೆ ನನಗೆಲ್ಲಿ, ಎಂದು ವರ್ಗ? ದಿನಗಳುರುಳಿದುವು.

ನೀಲಗ್ರಂಥ ಬೀಸಿದ ಜಾಲ

ಎನ್‌ಸಿಸಿ ಕ್ಯಾಂಪುಗಳಲ್ಲಿ ನಡೆಯುತ್ತಿದ್ದ ಹಲವಾರು ವಿಧದ ಅವ್ಯವಹಾರಗಳನ್ನೂ ಅಕ್ರಮಗಳನ್ನೂ ಮನಗಂಡ ಎನ್‌ಸಿಸಿ ಕೇಂದ್ರ ಕಛೇರಿ (ದೆಹಲಿ) ಅವನ್ನು ತಡೆಯಲು ಆಡಳಿತ ಹಾಗೂ ಲೆಕ್ಕ ಪತ್ರಗಳ ನಿಯಮಗಳನ್ನು ಬಿಗಿಪಡಿಸಿತು. ೧೯೬೧ರ ಜುಲೈ ಆಗಸ್ಟ್ ತಿಂಗಳುಗಳಲ್ಲಿ ನಮಗೆ ಬಂದ ನೀಲಿ ಮತ್ತು ಕೆಂಪು ಪುಸ್ತಕಗಳು ಎನ್‌ಸಿಸಿ ಕ್ಯಾಂಪುಗಳನ್ನು ಕುರಿತ ಮಾರ್ಗದರ್ಶಿ ಗ್ರಂಥಗಳಾದುವು. ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಇದ್ದ ನೀಲಿ ಗ್ರಂಥ ಓಸಿಗಳ ದೃಷ್ಟಿಯಲ್ಲಿ ಬೈಬಲ್, ಕುರಾನ್, ಗೀತೆಗಳ ಸ್ಥಾನವನ್ನೇ ಆಕ್ರಮಿಸಿತು. ಒಬ್ಬೊಬ್ಬ ಕ್ಯಾಡೆಟಿಗೆ ಕೊಡುವ ಆಹಾರದ ದೈನಂದಿನ ಭತ್ಯದ (ರೂಪಾಯಿ ೨) ವಿನಿಯೋಗದ ಕೂಲಂಕಷ ವಿವರ ಅದರಲ್ಲಿ ಇತ್ತು. ಕ್ಯಾಂಪು ನಡೆಯುವಸ್ಥಳದ ತಹಶಿಲ್ದಾರರಿಂದ ಸ್ಥಳೀಯ ನೆರಿಕ್‌ದರಗಳನ್ನು (ಎಂದರೆ ಆಹಾರ ಪದಾರ್ಥಗಳಿಗೆ, ವಿಧವಿಧವಾದ ಸೇವೆಗಳಿಗೆ ಸ್ಥಳೀಯವಾಗಿ ಪ್ರಚಲಿತವಿದ್ದ ದರಗಳು) ಪಡೆಯಬೇಕು; ಅವನ್ನು ವೀರದಂತೆ ಕ್ಯಾಂಪಿನ ಎಲ್ಲ ಖರ್ಚುಗಳೂ ಇರಬೇಕು; ಒಬ್ಬೊಬ್ಬ ಕ್ಯಾಡೆಟನಿಗೆ ದಿನವೊಂದರ ಎಷ್ಟೆಷ್ಟು ಯಾವ ಯಾವ ಪದಾರ್ಥವನ್ನು ಸೇವೆಯನ್ನು ಒದಗಿಸಬೇಕು ಎಂಬ ದೀರ್ಘ ಯಾದಿ ಇದೇ ಉದ್ಗ್ರಂಥದಲ್ಲಿ ಉಕ್ತವಾಗಿತ್ತು. ಇಂತಿಷ್ಟು ಔನ್ಸ್ ಅಕ್ಕಿ, ಸಕ್ಕರೆ, ಚಿಮಣೀ ಎಣ್ಣೆ ಮುಂತಾದ ಮಾನಕಗಳ ವಿವರಣೆ ಈ ಯಾದಿ. ಅಡುಗೆಯವರು, ಇತರ ಸೇವಕರ ಸಂಖ್ಯೆಯೂ ಇದೇ ಪ್ರಕಾರ ನಿಗದಿಗೊಳಿಸಲ್ಪಟ್ಟಿತ್ತು. ಕ್ಯಾಪ್ಟನ್ ತಮ್ಮಯ್ಯನವರು ಇವೆರಡೂ ಮಹಾಗ್ರಂಥಗಳನ್ನು ತಂದು ನನ್ನ ಮುಂದಿಟ್ಟರು "ಜೀಟಿ! ಈ ವರ್ಷದ ಡಿಸೆಂಬರಿನಲ್ಲಿ ನಾವೊಂದು ವಲಯಶಿಬಿರವನ್ನು ನಡೆಸಬೇಕಂತೆ—ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಎಲ್ಲ ಸೀನಿಯರ್ ಮತ್ತು ಜೂನಿಯರ್ ಡಿವಿಶನ್ ಕ್ಯಾಡೆಟುಗಳಿಗೋಸ್ಕರ. ಇದರ ಕಮಾಂಡೆಂಟರನ್ನು ಬೆಂಗಳೂರಿನಿಂದ ಕಳಿಸುವರಂತೆ. ನಾನು ಇದರ ಉಪಮುಖ್ಯಸ್ಥನಾಗಿ ಸಕಲ ವ್ಯವಹಾರಗಳನ್ನು ನಿರ್ವಹಿಸಬೇಕು, ಮಾತ್ರವಲ್ಲ, ಲೆಕ್ಕಪತ್ರಗಳನ್ನು ಕ್ರಮಬದ್ಧವಾಗಿಟ್ಟು ಕ್ಯಾಂಪ್ ಮುಗಿದ ಮರುದಿವಸವೇ ಆಡಿಟ್ಟಿಗೆ ಸಿದ್ಧಪಡಿಸಬೇಕು. ಈ ಪುಸ್ತಕಗಳಲ್ಲಿ ನಮೂದಿತವಾಗಿರುವ ರೀತಿಯಲ್ಲಿಯೇ ಚಾತೂತಪ್ಪದಂತೆ ಎಲ್ಲವನ್ನೂ ನಡೆಸಬೇಕಂತೆ. ಎಲ್ಲೇ ಏನೇ ಪ್ರಮಾದವಶಾತ್ ದೋಷ ಉಂಟಾದರೂ ಆರ್ಮಿ ಆಫಿಸರರಾದ ನಮ್ಮ ವಿರುದ್ಧ ಉಗ್ರ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಾಗಿ ಲಿಖಿತ

ಮೂಲಕ ಹಂಚು ಬಂದಿದೆ. ಈ ಕಾರಣದಿಂದ ಎನ್‌ಸಿಸಿ ಆಫಿಸರರಿಗೆ ಹಣಕಾಸಿನ ಹೊಣೆ ಏನನ್ನೂ ಕೊಟ್ಟಿಲ್ಲ. ಈ ಪುಸ್ತಕಗಳನ್ನು ಓದಿ ನಿಮ್ಮ ಅಭಿಪ್ರಾಯ ಹೇಳಿ. ನನಗಂತೂ ಏನೂ ತೋರುತ್ತಿಲ್ಲ'' ಎಂದು ಹೇಳಿದರು.

ನಾನು ಆ ಅಪೂರ್ವ ಗ್ರಂಥರತ್ನಗಳನ್ನು ಪರಿಸಿದೆ. ಗ್ರಂಥಗಳ ಗಾತ್ರ, ಒಕ್ಕಣೆಗಳ ಸರ್ಪವಕ್ರತೆ, ಲೆಕ್ಕಪತ್ರ ಮುಂತಾದ ಕಿರು ಹಾಗೂ ಬಿಡಿ ವಿವರಗಳ ಅತಿ ವಿಸ್ತರಣೆಯಿಂದ ಒದಗಿದ ಅಸಮಂಜಸತೆ, ಕ್ಯಾಂಪು ಕಮಾಂಡೆಂಟರು, ಎನ್‌ಸಿಸಿ ಆಫಿಸರರು ಎಲ್ಲರೂ ಮೋಸಗಾರರು ವಂಚಕರು ಎಂಬ ನಕಾರಾತ್ಮಕ ಆಧಾರಭಾವನೆಗಳಿಂದ ನಿಗಮನಗೊಂಡಿದ್ದ ನಿಯಮಗಳಲ್ಲಿ ಸಹಜವಾಗಿ ತಲೆದೋರಿದ್ದ ವ್ಯಾಘಾತಗಳು—ಇವನ್ನೆಲ್ಲ ಅರಿತ ನನಗೆ ಮೊದಲು ಮೂಡಿದ್ದು ನಗು, ಮತ್ತೆ ತಿರಸ್ಕಾರ. ನಾನು ಒಂದು ದಂತಗೋಪುರದ ಒಳಗೆ ವಾತನಿಯಂತ್ರಣ ಮಾಡಿ ಸುಖಾಸೀನನಾಗುತ್ತೇನೆ. ನನ್ನ ಸ್ಥಾನಮಾನ ಗೌರವ ಆಹಾರ ವಿಹಾರ ಎಲ್ಲವೂ ಖಾತ್ರಿಯಾಗಿವೆ. ಇಡೀ ರಾಷ್ಟ್ರದ ಎಲ್ಲ ಕ್ಯಾಂಪುಗಳ ಸಕಲ ವರದಿಗಳನ್ನೂ ತರಿಸಿಕೊಳ್ಳುತ್ತೇನೆ. ಬೇಕಾದಷ್ಟು ಸಹಾಯಕ ಸಿಬ್ಬಂದಿಯನ್ನು (ಪಾರ್ಕಿನ್ಸನ್ನನ ಪ್ರಥಮ ಸೂತ್ರಾನುಸಾರ) ನೇಮಿಸಿ ಛಿದ್ರಾನ್ವೇಷಣೆಯ ಮಹಾ ಮತ್ತು ಪವಿತ್ರ ಕಾರ್ಯವನ್ನು ಎಲ್ಲರಿಗೂ ವಿಧಿಸುತ್ತೇನೆ. ಇಂಥ ಕೆಲಸದಲ್ಲಿ ಮಿದುಳಿಗೆ ನಿಸರ್ಗ ಒದಗಿಸುವ ಪರಿತ ಅನ್ಯಾದೃಶವಾದುದು. ಈ ಅಭ್ಯಾಸದಿಂದ ನಾನೊಂದು ಸಂಶೋಧನ ಗ್ರಂಥ ರಚಿಸು ತ್ತೇನೆ. ಅದು ಬೇರೆ ಹೇಗಿರಲು ತಾನೇ ಸಾಧ್ಯ ? ಬೌದ್ಧಿಕ ದೊಂಬರಾಟದಲ್ಲಿ ವಾಸ್ತವಿ ಕತೆ ಗೌಣವಾಗುತ್ತದೆ. ನಾನು ಒಂದು ಕ್ಯಾಂಪನ್ನೂ ಒಂದು ಹಳ್ಳಿಯನ್ನೂ ನೋಡಿದವ ನಲ್ಲ. ಒಂದು ಸಲವೂ ಹತ್ತು ಜನರಿಗೆ ಒಂದು ಹೊತ್ತಿನ ಊಟದ ಏರ್ಪಾಡನ್ನೂ ಮಾಡಿ ದವನಲ್ಲ. ನಾನು ಸಿದ್ಧಾಂತ ಪರಿಣತನಾದರೆ ಆಶ್ಚರ್ಯವೇನೂ ಇಲ್ಲ. ನಕಾರಾತ್ಮಕ ಅಡಿ ಪಾಯದಮೇಲೆ ಸೌಧನಿರ್ಮಾಣ ಅಸಾಧ್ಯ. ವಿಧಿ ನಿಯಮಗಳು ಅನಾವಶ್ಯಕ ಎಂದ್ಫು ನನ್ನ ವಾದ ಅಲ್ಲ. ಆದರೆ ಅವುಗಳ ಜಾಲದಲ್ಲಿ ಸಿಕ್ಕಿಹಾಕಿಕೊಳ್ಳುವ ಮೀನು ನಾನಾಗಲಾರೆ. ಗಾರ್ಡಿಯಂನ್ ಗಂಟು ಬಿಡಿಸುವುದು ಸರಿ; ಅದಾಗದಿದ್ದರೆ ಅದನ್ನು ತುಂಡರಿಸುವ ಅಲೆಗ್ಸಾಂಡರ್ ಮಹಾಶಯನ ಧೃತಿ ನಮಗಿರಬೇಕು. ಇದು ನಮ್ಮ ಪ್ರಾಮಾಣಿಕತೆ ಮತ್ತು ನಿಷ್ಠೆಗಳಿಂದ ನಮಗೆ ಸಹಜವಾಗಿ ಒದಗುತ್ತದೆ ಎಂದು ತಿಳಿದಿದ್ದೇನೆ. ನಿಯಮ ಇರುವುದು ವಿಧಿಸಿದ ಕಾರ್ಯ ಕ್ರಮಬದ್ಧವಾಗಿ ನೆರವೇರಲೆಂದು ; ಹತ್ತಾರು ಪ್ರಯೋಗ ಗಳ (ಅಂದರೆ ಕೆಲಸಗಳ) ಸಾರರೂಪ ಈ ನಿಯಮ. ಇದರ ಪಾಲನೆಯಿಂದ ಮುಂದಿನ ನಡಿಗೆ ಸುಗಮವಾಗುವುದು. ಅಂದಮಾತ್ರಕ್ಕೆ ಇದು ನಡಿಗೆಗೆ ಬಿರಿಯಾಗಬಾರದು. ಹಾಗೇನಾದರೂ ಆದರೆ ಇದನ್ನು ತುಂಡರಿಸಿ ಎಸೆಯುವುದೊಂದೇ ಸರಿಯಾದ ದಾರಿ. ಸಿದ್ಧಾಂತಪ್ರಧಾನ ವಿಧಿನಿಯಮಗಳಿಂದ ಎರಡು ವಿಧವಾದ ಅಪಾಯಗಳುಂಟು. ಮೊದಲನೆಯದು ಅವು ಪ್ರಾಮಾಣಿಕ ವ್ಯಕ್ತಿಗಳನ್ನು ಕಾರ್ಯರಂಗದಿಂದ ಉಚ್ಚಾಟನೆ ಗೊಳಿಸುತ್ತವೆ. ಎರಡನೆಯದು ಅಪ್ರಾಮಾಣಿಕ ವ್ಯಕ್ತಿಗಳಿಗೆ ಅವು ಆಡುಂಬೊಲಗಳಾಗು ತ್ತವೆ—ಈ ವ್ಯಕ್ತಿಗಳ ನಿರಂತರ ಹೊಸ ಹಸುರಿನ ಅರಸಿಕೆಯಲ್ಲಿ ವಿಧಿ ನಿಯಮಗಳು ಯೋಗ್ಯ ಗ್ರಾಸವನ್ನು ಪೂರೈಕೆ ಮಾಡುತ್ತವೆ.

ತಮ್ಮಯ್ಯನವರಿಗೆ ನಾನೊಂದು ಮಾತು ಹೇಳಿದೆ ''ಕೆಲಸವನ್ನು ಎಂದಿನಂತೆಯೇ

ನಿಷ್ಠಾಪೂರ್ವಕವಾಗಿ ನಡೆಸೋಣ, ಈ ವಿಧಿನಿಯಮಗಳನ್ನು ಅವು ಪ್ರಾಯೋಗಿಕವೆನಿಸು ವಷ್ಟರ ವರೆಗೆ ಅನುಸರಿಸೋಣ. ಎಲ್ಲಿ ಪರಿಸ್ಥಿತಿಗೂ ನಿಯಮಕ್ಕೂ ಜಟಾಪಟಿ ಹತ್ತು ವುದೋ ಅಲ್ಲಿ ಸಕಾರಣವಾಗಿ ನಿಯಮವನ್ನು ಪರಿವರ್ತಿಸಿ ಮುಂದುವರಿಸೋಣ."

"ಪರಿವರ್ತನೆ ಖಂಡಿತ ಕೂಡದು. ಆಗ ನನ್ನ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವ ರಂತೆ ವರಿಷ್ಠಾಧಿಕಾರಿಗಳು."

"ಸಾರ್ ! ನಾವು ಪ್ರಾಮಾಣಿಕವಾಗಿ ನಮ್ಮ ಪರಿವರ್ತನೆ ವಿವರಿಸೋಣ."

"ಆಡಿಟ್ ಅಬ್ಜಕ್ಷನ್ ?" ತಮ್ಮಯ್ಯನವರು.

"ಆಡಿಟ್ಟಿಗಾಗಿ ಕ್ಯಾಂಪ್ ಅಲ್ಲ. ಕ್ಯಾಂಪಿಗಾಗಿ ಆಡಿಟ್ಟು. ನಡೆಯುವುದರಿಂದ ಎಡಗು ತ್ತೇವೆ. ಎಡಗಿಯೇವಲ್ಲ ಎಂದು ನಡೆಯುವುದನ್ನೇ ನಿಲ್ಲಿಸುತ್ತೇವೆಯೆ ?"

"ನಿಮ್ಮ ಭಾವನೆ ನನಗೆ ಸರಿಯಾಗಿ ತಿಳಿಯುತ್ತದೆ. ಆದರೂ ನೋಡಿ."

"ಆಗಲಿ ಸಾರ್. ಇಡೀ ದೇಶದ ಎಲ್ಲ ಯೂನಿಟ್ಟುಗಳೂ ಈ ಹೊಸ ನಿಯಮಗಳ ಅನುಸಾರ ಈ ವರ್ಷ ಕ್ಯಾಂಪು ನಡೆಸಬೇಕು, ಅವುಗಳಿಗೆಲ್ಲ ಮಾದರಿಯಾಗಿರುವಂತೆ ನಾವು ನಮ್ಮ ಕ್ಯಾಂಪನ್ನು ನಡೆಸೋಣ."

ಹೊಸ ಜಾಗದ ಹೊಸ ಪರಿಸರದ ಅನ್ವೇಷಣೆ ಬೇಡ ; ಕೊಟ್ಟಮುಡಿಯಲ್ಲಿಯೇ ಕ್ಯಾಂಪನ್ನು ನಡೆಸೋಣ ಎಂದು ನಿರ್ಧರಿಸಿದೆವು.

ನೀಲಗ್ರಂಥದ ಒರೆಗಲ್ಲು ಕೊಟ್ಟಮುಡಿ

ವಾಡಿಕೆಯಂತೆ ಆಗಸ್ಟಿನಿಂದಲೇ ಕ್ಯಾಂಪಿನ ಕೆಲಸ ಆರಂಭಿಸಿದೆವು. ಡಿಸೆಂಬರಿನಲ್ಲಿ ಒಂದು ವಾರದ ಮೊದಲೇ ಆರ್ಮಿ ಸ್ಟಾಫುಗಳ ಸಮೇತ ನಾನು ಕೊಟ್ಟಮುಡಿ ಪರಂಬಿಗೆ ತೆರಳಿದೆ. ನಮ್ಮ ವಾಸ ಹೊಳೆತೀರದ ಟೆಂಟುಗಳಲ್ಲಿ. ಅಡುಗೆಯವರನ್ನು ಕರೆದುಕೊಂಡು ಹೋಗಿ ದ್ದೆವು. ಆಹಾರ ಪದಾರ್ಥಗಳನ್ನು ಸಾಕಷ್ಟು ಕೊಂಡಿದ್ದೆವು. ಮೊದಲ ದಿವಸ ಸಾಯಂಕಾಲ ಎಲ್ಲರೂ ಕಲೆತೆವು. ಇಡೀ ಕ್ಯಾಂಪಿನ ನೀಲ ನಕಾಶೆ ಅವರೆದುರಿಗಿಟ್ಟು, ಆಗಬೇಕಾದ ಕೆಲಸ ವನ್ನು ಪರಿಚಯ ಮಾಡಿಕೊಟ್ಟೆ. ಅನಂತರ ಒಬ್ಬೊಬ್ಬನ ಹೊಣೆಯನ್ನು ವಿವರಿಸಿ ಹೇಳಿದೆ. ಇವೆಲ್ಲವನ್ನೂ ಒಂದು ಮಿಲಿಟರಿ ತರಗತಿಯನ್ನು ನಡೆಸುವ ರೀತಿಯಲ್ಲಿ ನಡೆಸಿ "ಕೊಯಿ ಶಕ್ ಯಾ ಸವಾಲ್" ಎಂದು ಸಹ ಕೇಳಿಬಿಟ್ಟೆ ! ಆ ಶಿಸ್ತಿನ ವ್ಯಕ್ತಿಗಳೊಡನೆ ಕೆಲಸ ಮಾಡುವುದೊಂದು ಅಪೂರ್ವ ಯೋಗ. ವಿಧಿಸಿದ್ದ ಪ್ರತಿಯೊಂದನ್ನೂ ಶ್ರದ್ಧೆ ಯಿಂದ ಶಿಸ್ತಿನಿಂದ ಅತಿಶೀಘ್ರವಾಗಿ ಮುಗಿಸಿ ಬಂದು ನನಗೆ "ಕಂಪ್ಲೀಷನ್ ರಿಪೋರ್ಟ್" ನೀಡುತ್ತಿದ್ದರು. ನಾನು ಅಲ್ಲಿಗೆ ಹೋಗಿ ವೀಕ್ಷಣೆ ಮಾಡಿ ಅವರನ್ನು ಪ್ರಶಂಸಿಸಿ ಮುಂದಿನ ಸೂಚನೆ ನೀಡುತ್ತಿದ್ದೆ. ಅಷ್ಟರಿಂದಲೇ ಅವರಿಗೆ ಪರಮ ಸಂತೋಷ. ಒಂದು ಹಗಲು ಮುಗಿಯುವಾಗ ಈ ಸ್ಟಾಫುಗಳೊಡನೆ ದುಡಿದ ಕೂಲಿಗಾರರು "ಸ್ವಾಮೀ ! ನಮ್ಮ ಈ ಜನ್ಮದಲ್ಲಿ ನಾವೆಂದೂ ಇಷ್ಟು ಕೆಲಸವನ್ನು ಇಷ್ಟೊಂದು ಸಂತೋಷವಾಗಿ ಮಾಡಲಿಲ್ಲ" ಎಂದು ಸಂತೃಪ್ತ ಭಾವದಿಂದ ನುಡಿಯುತ್ತಿದ್ದರು. ಕೆಲಸ ತೆಗೆದುಕೊಳ್ಳುವುದರಲ್ಲಿಯೂ ಶಿಸ್ತು ನಿಯಮ ಈ ಆರ್ಮಿ ಸ್ಟಾಫುಗಳದು. "ಕೈ ಕೆಳಗಿನವರ ಮೊರಾಲನ್ನು ಚೆನ್ನಾಗಿಟ್ಟು ಕೊಳ್ಳಿ. ಆಗ ನಿಮಗೆ ಅಸಾಧ್ಯವಾದ ಸವಾಲೇ ಇಲ್ಲ" ಎಂಬುದೊಂದು ಆರ್ಮಿಯ

ಹೇಳಿಕೆ. ಮೊರಾಲ್ ಎಂದರೆ ಮನಸ್ಸಿನ ಲವಲವಿಕೆಯ ಉತ್ಸಾಹದ, ಕಾರ್ಯ ಪ್ರೇಮದ ಒಂದು ವಿಶೇಷ ಹದ, ಧೃತಿ. ಹಣಕಾಸಿನಿಂದ ಅಥವಾ ಇತರ ಆಮಿಷಗಳಿಂದ ಇದನ್ನು ಕೊಳ್ಳಲು ಬರುವುದಿಲ್ಲ. ಕಡ್ಡಾಯವಾಗಿ ಇದನ್ನು ವಿಧಿಸಲು ಆಗುವುದಿಲ್ಲ. ವಿವರಿಸುವುದಾದರೆ, ಕಡ್ಡಾಯತನವೂ ಧೃತಿಯೂ ಪರಸ್ಪರ ವೈರಿಗಳು.

ಇದ್ದದ್ದು ಬೋಳು ಬಯಲು. ಬಂದವರು ಹತ್ತೆಂಟು ಮಂದಿ ಶಕ್ತಿ ಘಟಕಗಳು. ಇವರ ನಿಷ್ಠಾಪೂರ್ವಕ ನಿರಂತರ ಏಕೋದ್ದೇಶಪೂರಿತ ದುಡಿಮೆಯಿಂದ ಅಲ್ಲಿ ಜೀವ ಸಂಚಾರ ಆಯಿತು. ಬಿತ್ತುವುದೇ ತಡ ಅದು ಮೊಳೆಯಿತು. ಯೋಗ್ಯ ಪರಿಸರ, ಪೋಷಣೆ. ಕಳೆಗಳಿಂದ ಪೀಡೆಯಿಲ್ಲ. ಈ ಕಿರು ನಗರ ಎದ್ದ ಬಗೆ—ಗಂಟೆ ಗಂಟೆ ಅದು ನಮ್ಮ ಯೋಜನೆಯ ಪ್ರತ್ಯಕ್ಷರೂಪವಾದ ರೀತಿ—ನಮಗೆಲ್ಲ ಆಶ್ಚರ್ಯವನ್ನೂ ಸಂತೋಷವನ್ನೂ ಒದಗಿಸಿತು. ನಗರ ನಮ್ಮ ಮಾನಸ ಶಿಶುವಾದಂತೆಯೇ ಅದರೊಡನೆ ನಮ್ಮ ನಿಕಟತೆ ಬೆಳೆದು ವೃದ್ಧಿಗೊಂಡು ನಮ್ಮ ಮನಸ್ಸಿನ ಆದರ ಒಂದು ಅವಿಭಾಜ್ಯ ಅಂಗವಾಯಿತು. ಈ ಬಂಧ ಅದೆಷ್ಟು ಬಲವತ್ತರವಾದದ್ದು ಎಂದು ತಿಳಿಯುವುದು ಶಿಬಿರದ ಕೊನೆಯ ದಿವಸ. ದಿನ ದಿನ, ಹಗಲೆನ್ನದೇ ರಾತ್ರಿ ಎನ್ನದೇ ಇದರ ಸುತ್ತ ಎಲ್ಲೆಲ್ಲೂ ತಿರುಗಿದ್ದೀರಿ. ಕನಸಿನಲ್ಲಿಯೂ ನೀವು ದಾರಿ ತಪ್ಪಲಾರಿರಿ. ಗುಂಡಿಗೆ ಬೀಳಲಾರಿರಿ. ಹೋದಲ್ಲೆಲ್ಲ ಕ್ಯಾಡೆಟುಗಳಿಂದಲೂ ಸ್ಟಾಫುಗಳಿಂದಲೂ ಸಂತೃಪ್ತ ಭಾವದ ಪೂರ್ಣ ಸೆಲ್ಯೂಟುಗಳನ್ನು ಸ್ವೀಕರಿಸಿದ್ದೀರಿ. ನಿಮ್ಮ ಸಂಘಟನಾ ಸಾಮರ್ಥ್ಯವನ್ನು ಕುರಿತು ಹೆಮ್ಮೆ ತಳೆದಿದ್ದೀರಿ. ಈಗ ಈ ಶಿಬಿರದೀಪಕ್ಕೆ ಮೆರುಗನ್ನೂ ಹಿರಿಮೆಯನ್ನೂ ನೀಡಿದ್ದ ಕ್ಯಾಡೆಟ್ ಜ್ಯೋತಿಗಳು ನಿರ್ಗಮಿಸಿದ್ದಾರೆ. ಎಣ್ಣೆ ತೀರಿತು, ಬತ್ತಿ ಕರುಟಿತು. ಜಡದೀಪದಿಂದ ಉಪಯೋಗವಿಲ್ಲ. ಅದನ್ನು ರಚಿಸಿದ ನೀವೇ ಅದನ್ನೀಗ ಸಮಾಧಿಗೊಳಿಸಬೇಕು. ಕ್ಯಾಂಪಿನ ಕೊನೆಯ ದಿವಸದ ಅತಿ ದಾರುಣ ಪರಿಸ್ಥಿತಿ ಇದು. ಅದೇ ಸ್ಟಾಫುಗಳು ಅದೇ ಆಳುಗಳು. ಮೊದಲು ಒಂದು ವಾರದ ಕೆಲಸ. ಮುಂದೆ ೧೪ ದಿವಸಗಳ ರಾಜ್ಯಭಾರ. ಈಗ ಒಂದು ಹಗಲಿನಲ್ಲಿ ಎಲ್ಲವೂ ನೆಲಸಮ. ಕೊನೆಯ ತರ್ಪಣ ಕೊಟ್ಟಮುಡಿ ಪರಂಬಿಗೆ ಬಿಡುವಾಗ ಮಿಡಿಯುವ ಭಾವ ಸಂಕೀರ್ಣ :

ಕಟ್ಟುಗಳುಂಟೇ ಕಟ್ಟಲೆಯುಂಟೇ ?
ಹಸುರಿನ ಈ ವಿಸ್ತಾರದಲಿ ?

ಕಡೆಂಗೋಡ್ಲು ಕ್ಷಮೆ ಕೋರಿ

ನಾಲ್ಕು ದಿವಸಗಳ ಮುನ್ನ ಸೌದೆ ಲಾರಿಗಳು ಬಂದುವು. ಆಹಾರ ಸಾಮಗ್ರಿಗಳನ್ನು ಹೊತ್ತು ಲಾರಿಯೂ ಬಂದಿತು. ತರಕಾರಿ, ಹಾಲು, ಮಾಂಸದ ಏರ್ಪಾಡು ಎಲ್ಲವೂ ಪರಿಷ್ಕಾರವಾಗಿ ನಡೆದಿದ್ದುವು. ಕ್ಯಾಡೆಟುಗಳ ಪ್ರಯಾಣದ ವಿಲೆವಾರಿಯನ್ನು ಬಾಳಿಗರು ಮಡಿಕೇರಿಯಲ್ಲಿಯೇ ಇದ್ದು ನಿರ್ವಹಿಸುತ್ತಿದ್ದರು. ಕ್ಯಾಂಪಿನ ಹಿಂದಿನ ದಿವಸ. ಕ್ಯಾಂಪ್ ಕಮಾಂಡೆಂಟ್ ಆಗಿ ನಿಯೋಜಿತಗೊಂಡಿದ್ದ ಮೇಜರ್ ಬಕ್ಷಿ ಬೆಂಗಳೂರಿನಿಂದಲೂ ಕ್ಯಾಪ್ಟನ್ ತಮ್ಮಯ್ಯ ಮಡಿಕೇರಿಯಿಂದಲೂ ಬಂದರು. "ರಾವ್! ಈ ಕ್ಯಾಂಪಿನ ಆಡಳಿತಾಧಿಕಾರಿಗಳಾಗಿ ತಮ್ಮಯ್ಯನವರಿಗೆ ನೀವು ವಿಶೇಷ ಸಹಕಾರ ನೀಡುತ್ತಿದ್ದೀರಿ ಎಂದು ಅವರು ಹೇಳಿದ್ದಾರೆ. ಬಹಳ ಸಂತೋಷ" ಎಂದರು ಬಕ್ಷಿ. ನಾನು ಸುಮ್ಮನಿದ್ದೆ.

"ಎಲ್ಲ ಈ ನೀಲಗ್ರಂಥದ ಪ್ರಕಾರ ನಡೆಸುತ್ತಿದ್ದೀರಷ್ಟೆ ?" ಬಕ್ಷಿ.

"ಸಾಧ್ಯವಾಗುವ ಮಟ್ಟಿಗೂ" ನಾನು.

"ಹಾಗೆಂದರೇನು ? ನಾನು ಅದನ್ನು ಓದಿ ವಿಶೇಷವಾಗಿ ಅಭ್ಯಾಸಮಾಡಿ ಬಂದಿದ್ದೇನೆ. ನಿಮಗೇನಾದರೂ ಸಂಶಯವಿದ್ದರೆ ತೊಂದರೆ ಇದ್ದರೆ ಹೇಳಿ."

"ತುಂಬ ಉಪಕಾರವಾಯಿತು. ಸದ್ಯ ಅಂಥ ಪ್ರಮೇಯವೇನೂ ಇಲ್ಲ."

"ಹಾಗಾದರೆ ನಿಮ್ಮ ಕೆಲಸದ ವಿವರಗಳನ್ನು ತಿಳಿಯಬಹುದೇ ?" ಬಕ್ಷಿ.

"ಧಾರಾಳವಾಗಿ" ನಾನು.

ಒಂದೆರಡು ಗಂಟೆ ಬಕ್ಷಿ ಬಲು ಸೂಕ್ಷ್ಮವಾಗಿ ಎಲ್ಲವನ್ನೂ ಪರಿಶೀಲಿಸಿದರು. ಅವರು ಮೇಧಾವಿ. ಕೆಲಸವನ್ನೂ ನಿಯಮಗಳನ್ನೂ ಚೆನ್ನಾಗಿ ಅರಿತವರು ಎಂಬುದು ನನಗೆ ಸ್ಪಷ್ಟವಾಯಿತು. ಈ ಕಾರಣದಿಂದ ನೀಲಗ್ರಂಥದ ಕೊರತೆಗಳನ್ನೂ ಅಸಾಮಂಜಸ್ಯ ಗಳನ್ನೂ ಅವುಗಳಿಗೆ ನಾವು ನೀಡಿದ್ದ ಪರಿಹಾರಗಳನ್ನೂ ಅವರಿಗೆ ವಿವರಿಸಿದೆ. "ನಿಮ್ಮ ಸಂಶಯವನ್ನು ನಾನು ಪರಿಹರಿಸುವುದಲ್ಲ. ನನ್ನ ಸಂಶಯಗಳಿಗೆ ನೀವು ನಿವಾರಣೆ ಕೊಡ ಬೇಕು" ಎಂದು ಬಕ್ಷಿ ನಮ್ಮ ಕೆಲಸವನ್ನು ಮೆಚ್ಚಿಕೊಂಡರು. ಮತ್ತು "ನೀವು ಮುಂದು ವರಿಸಿ. ನಾನಿಲ್ಲಿರುವುದು ನೆಪಮಾತ್ರ ಎಂದು ಭಾವಿಸಿ ನಿಮ್ಮ ಕೆಲಸ ಮಾಡಿ. ನನ್ನ ಅನುಭವ ಕ್ಕಾಗಿ ನಾನು ನಿಮ್ಮ ಈ ಕಛೇರಿಯಲ್ಲಿ ಬಹಳ ಹೊತ್ತು ಪ್ರತಿದಿನವೂ ಕುಳಿತಿರುತ್ತೇನೆ. ನಿಮ್ಮ ಒಪ್ಪಿಗೆಯಷ್ಟೆ ?" ಅಂದರು.

"ಬಹಳ ಸಂತೋಷ. ನಿಮ್ಮ ಬೆಂಬಲವಿದ್ದರೆ ಏನೂ ಮಾಡಿಯೇನು" ಎಂದೆ.

ಕ್ಯಾಂಪು ಸರ್ವವಿಧದಿಂದಲೂ ಸಮರ್ಪಕವಾಗಿ ನಡೆಯಿತು. ಹುಡುಗರಿಗೆ ಟಿಕೇಟು ಕೊಡದೇ, ಅವರಿಗೆ ಪ್ರಾಮಾಣಿಕ ವರ್ತನೆಯನ್ನು ಕುರಿತು ಸಾಕಷ್ಟು ಬೋಧನೆ ನೀಡಿ, ಊಟ ಉಪಚಾರ ನಡೆಸಿದೆವು. ನಮ್ಮ ಹುಡುಗರನ್ನು ಗೌರವಸ್ಥರು, ಸಂಭಾವಿತರು ಎಂದು ಭಾವಿಸಿ ನಡೆಸಿಕೊಳ್ಳಬೇಕು ; ಶೀಲಸಂವರ್ಧನೆಯ ಒಂದು ವಿಧಾನವಿದು ಎಂಬ ನನ್ನ ನಿಲವನ್ನು ಬಕ್ಷಿಯವರು ಅನುಮೋದಿಸಿದರು.

ಒಂದು ಸಾವಿರವನ್ನು ಮೀರಿದ್ದ ಆ ಕ್ಯಾಂಪು ಬಲು ಚೆನ್ನಾಗಿ, ನಾನು ನಡೆಸಿದ್ದ ಮತ್ತು ಹೋಗಿದ್ದ ಅತ್ಯಂತ ಉತ್ತಮ ಕ್ಯಾಂಪುಗಳಲ್ಲಿ ಒಂದಾಗಿ, ನಡೆದುಹೋಯಿತು. ಕೊನೆಯ ದಿವಸದ ಸಾಮೂಹಿಕ ಕವಾಯತಿಯನ್ನು ವೀಕ್ಷಿಸಲು ಬಂದಿದ್ದ ಜನರಲ್ ಕಾರ್ಯಪ್ಪನವರು ಬಲು ಸಂತೋಷಪಟ್ಟರು. ಕನ್ನಡದಲ್ಲಿಯೇ ಭಾಷಣ ಮಾಡಿ ಹುಡುಗರಲ್ಲಿ ನವಸ್ಫೂರ್ತಿಯನ್ನು ತುಂಬಿದರು. ಬಕ್ಷಿಯವರು ನಿರ್ಗಮಿಸುವ ಮುನ್ನ ಕ್ಯಾಂಪಿನ ಸಮಗ್ರ ಆಡಳಿತೆಯನ್ನು ಕುರಿತು ಒಂದು ಹೊತ್ತಗೆಯನ್ನು ನನ್ನಿಂದ ಬರೆಸಿ ತೆಗೆದುಕೊಂಡರು. ತಮ್ಮಯ್ಯನವರನ್ನೂ ಅಭಿನಂದಿಸಿ ಬೆಂಗಳೂರಿಸಿದರು.

ಎರಡು ಘಟನೆಗಳು

ಕೊಟ್ಟಮುಡಿಯಲ್ಲಿ ನಡೆದ ಎರಡು ಘಟನೆಗಳನ್ನು ಇಲ್ಲಿ ಬರೆಯಬೇಕು.

ಕ್ಯಾಂಪಿನ ಕ್ಯಾಡೆಟುಗಳ ಸಂಖ್ಯಾನುಸಾರ ನೇಮಿಸಬಹುದಾದಷ್ಟು ಅಡುಗೆಯವರನ್ನೂ ಸೇವಕರನ್ನೂ ನಾವು ನೇಮಿಸಿದ್ದೆವು. ಆದರೆ ಸ್ಥಳೀಯವಾಗಿ ಒಂದು ಹೊಸ ಸಮಸ್ಯೆ

ಹಠಾತ್ತಾಗಿ ತಲೆ ಎತ್ತಿತು. ಸಾಕಷ್ಟು ಡೇರೆಗಳು ನಮಗೆ ದೊರೆಯದಿದ್ದುದರಿಂದಲೂ ಡಿಸೆಂಬರಿನ ಕೊಟ್ಟಮುಡಿ ಚಳಿಯಿಂದ ಕೋರೈಸುತ್ತಿದ್ದುದರಿಂದಲೂ ದಕ್ಷಿಣ ಕನ್ನಡದ ಜೂನಿಯರ್ ಡಿವಿಶನ್ ಕ್ಯಾಡೆಟುಗಳನ್ನು ಒಂದು ಮೈಲಿ ದೂರದ ನಾಪೋಕ್ಲು ಪ್ರೌಢ ಶಾಲೆಯಲ್ಲಿ ವಾಸಕ್ಕೆ ಕಳಿಸಿದೆವು. ಅವರಿಗೆ ಬೆಡ್‌ಕಾಫಿ ಏರ್ಪಾಡನ್ನು ಅಲ್ಲಿಯೇ ಮಾಡಿ ಉಳಿದ ಆಹಾರಕ್ಕೂ ಶಿಕ್ಷಣಕ್ಕೂ ಅವರು ಕೊಟ್ಟಮುಡಿಗೆ ಬರಬೇಕೆಂದು ವಿಧಿಸಿದ್ದೆವು. ಇದರಿಂದ ಒಂದಷ್ಟು ಹೆಚ್ಚು ಸೇವಕರ ನೇಮನ ಅನಿವಾರ್ಯವೆನ್ನಿಸಿತು. ಆದರೆ ಇದು ನೀಲಗ್ರಂಥದ ಲಕ್ಷ್ಮಣನ ಗೀಟನ್ನು ಮೀರುತ್ತಿದ್ದುದರಿಂದ ಇದಕ್ಕೆ ತಮ್ಮಯ್ಯನವರ ಒಪ್ಪಿಗೆ ದೊರೆಯಲಿಲ್ಲ. ಪರಿಣಾಮವಾಗಿ ಅಡುಗೆಮನೆಗೆ ನೀರು ಹೊರುತ್ತಿದ್ದವರಲ್ಲಿ ಮೂವರನ್ನು ಖೋತಾಮಾಡಿ ಪ್ರೌಢಶಾಲೆಯ ಕೆಲಸಕ್ಕೆ ನಿಯೋಜಿಸಿದೆ. ಅಡುಗೆಯವರೆಲ್ಲರೂ ಒಲು ಒಳ್ಳೆಯವರು. ಮಹಾಬಲೇಶ್ವರಭಟ್ಟರೂ ಅವರ ಅನುಯಾಯಿಗಳೂ ನನ್ನೊಡನೆ ಹಿಂದಿನ ಎಲ್ಲ ಕ್ಯಾಂಪುಗಳಲ್ಲಿಯೂ ಪಳಗಿದವರು. ನನ್ನ ಮೇಲಿನ ವಿಶ್ವಾಸ ಗೌರವಗಳಿಂದ ತಾವೇ ನೀರು ಹೊತ್ತು ಹೇಗೂ ಅಡುಗೆ ಕೆಲಸ ನಿಭಾಯಿಸಿದರು. ಆದರೆ ಇದು ದಿನ ದಿನ ನಿರಂತರವಾಗಿ ನಡೆಯುವ ಕೆಲಸವಲ್ಲ. ಅಡುಗೆಯವರ ಸಂಕಷ್ಟವನ್ನು ಪ್ರತಿಸಲವೂ ನೋಡಿ ಬೇಗುದಿಗೊಂಡಿತ್ತು ನನ್ನ ಮನಸ್ಸು. ಐದನೆಯ ದಿವಸ ಮಹಾಬಲೇಶ್ವರಭಟ್ಟರು ತಡೆಯಲಾರದೇ ದುಃಖ ತೋಡಿಕೊಂಡರು "ನಮಗೆ ನೀರಿನ ವ್ಯವಸ್ಥೆ ನೀವು ಮಾಡದಿದ್ದರೆ ಅಡುಗೆ ಕೆಲಸ ಸಮರ್ಪಕವಾಗುವುದಿಲ್ಲ. ಏನಾದರೂ ಮಾಡಿ."

"ಉಪಮುಖ್ಯಸ್ಥರು ಒಪ್ಪುವುದಿಲ್ಲ. ಹೇಗಾದರೂ ಸುಧಾರಿಸಿ" ನಾನು ಸಮಾಧಾನ ಹೇಳಿದೆ.

"ಈ ಐದು ದಿವಸವೂ ನಾವು ಪಟ್ಟಿರುವ ಪಾಡು ನೀವು ನೋಡಿದ್ದೀರಿ. ಇನ್ನು ನಮ್ಮನ್ನು ಬಿಟ್ಟುಕೊಡಿ ಎಂದು ಕೇಳುವುದೊಂದೇ ಬಾಕಿ."

ಆಫೀಸಿನಲ್ಲಿ ಲೆಕ್ಕ ಪತ್ರ ವೀಕ್ಷಿಸುತ್ತಿದ್ದ ತಮ್ಮಯ್ಯನವರ ಬಳಿ ನಾನು ಹೋದೆ. ಸಂಗತಿ ಅವರಿಗೆ ತಿಳಿಯದ್ದಲ್ಲ. ಆದರೂ ನಾನು ಬಗೆ ತರದಲ್ಲಿ ವಿವರಿಸಿದೆ. "ಆಡಿಟ್ ಆಬ್ಜಕ್ಷನ್ ಬಂದರೆ ಬರಲಿ. ನಮಗೂ ಟೈಪರೈಟರ್ ಇದೆ. ಅವರಿಗೆ ಅರ್ಥವಾಗದಷ್ಟು ಜಟಿಲ ಇಂಗ್ಲಿಷ್ ಭಾಷೆಯಲ್ಲಿ ನಾನು ಸಮಾಧಾನ ಬರೆದುಕೊಡುತ್ತೇನೆ. ಇನ್ನು ಯಾರಿಂದಲೂ ಓದಲು ಆಗದಂಥ ರುಜು ಹಾಕಲು ನನಗೂ ಬರುತ್ತದೆ" ಎಂದು ಚುಚ್ಚಿದೆ.

ನನ್ನ ವ್ಯಂಗ್ಯ ಅವರಿಗೆ ನಾಟಿ ನೋವು ಮಾಡಿರಬೇಕು. ಕೆಂಪಾಗಿ ನುಡಿದರು "ಈ ವಿಚಾರ ಇನ್ನು ವಾದ ಬೇಡ. ನಾನೇನು ಶಿಸ್ತುಭಂಗ ಪ್ರಕರಣದಲ್ಲಿ ಸಿಕ್ಕಿಹಾಕಿಕೊಳ್ಳಬೇಕೆಂದೇ ನಿಮ್ಮ ಭಾವನೆ?"

ರಕ್ತ ಚಿಮ್ಮಿತು ನನಗೂ. ದೃಷ್ಟಿ ಮಂಜಾಯಿತು. "ಸಾರ್! ಈ ಕ್ಯಾಂಪಿನ ಆಡಳಿತಾಧಿಕಾರಿಯಾಗಿ ವಿಫಲನಾಗಿದ್ದೇನೆ. ಆದ್ದರಿಂದ ಅದರ ಸಮಗ್ರ ಹೊಣೆ ನೀವು ವಹಿಸಿಕೊಳ್ಳಿ. ಈ ಕ್ಷಣ ನನ್ನನ್ನು ಕ್ಯಾಂಪಿನಿಂದಲೂ ಎನ್‌ಸಿಸಿಯಿಂದಲೂ ವಿಮೋಚನೆ ಮಾಡಿಬಿಡಿ" ಎಂದು ಹೇಳಿ ಎದ್ದೆ.

"ಜೀಟಿ! ಏನಾಗಿದೆ ನಿಮಗೆ? ಯಾಕೆ ಇಂಥ ಮಾತು? ಅದನ್ನು ಮರೆತುಬಿಡಿ.

ಬೇಕಾದಷ್ಟು ಸೇವಕರನ್ನು ನೇಮಿಸಿ, ಮುಂದುವರಿಸಿ." ನಾನು ಕರಗಿದೆ. ಸೇವಕರನ್ನು ನೇಮಿಸಲಿಲ್ಲ. ಕ್ಯಾಡೆಟುಗಳ ತಂಡಗಳನ್ನು ಏರ್ಪಡಿಸಿ ನೀರಿನ ಸಮಸ್ಯೆ ಬಗೆಹರಿಸಿದೆ. ತಮ್ಮಯ್ಯನವರು ಸೋತು ಗೆದ್ದರು, ನಾನು ಗೆದ್ದು ಸೋತೆ. ಹೀಗಿತ್ತು ನಮ್ಮ ಸಂಬಂಧ!

ಎರಡನೆಯ ಘಟನೆ. ಕ್ಯಾಂಪು ಜನವರಿ (೧೯೬೨) ೪ನೆಯ ತಾರೀಕಿನವರೆಗೂ ನಡೆಯಬೇಕಾಗಿತ್ತು. ಆದರೆ ಕಾಲೇಜು ೨ರಂದೇ ಪ್ರಾರಂಭ. ಕ್ಯಾಂಪು ತೊಡಗುವ ಮೊದಲೇ ಜನಾರ್ದನ ಬಾಳಿಗರು ಒಂದು ಷರತ್ತು ಹಾಕಿದ್ದರು "ನನ್ನನ್ನು ಜನವರಿ ೧ರಂದು ಬಿಡಬೇಕು. ಇದು ಸಾಧ್ಯವಿಲ್ಲವಾದರೆ ನಾನು ಕ್ಯಾಂಪಿಗೇ ಬರುವುದಿಲ್ಲ."

ಬಾಳಿಗರು ಬಂದರು. ಎಂದಿನಂತೆ ದಕ್ಷವಾಗಿ ಶಿಕ್ಷಣ ನಿರ್ವಹಣೆ ಮಾಡಿದರು. ಜನವರಿ ೧ರಂದು ತನ್ನನ್ನು ಬಿಟ್ಟುಕೊಡಬೇಕೆಂಬ ವರವನ್ನು ಪ್ರಾರ್ಥಿಸಿದರು. ಈ ಬೇಡಿಕೆಯನ್ನು ಕ್ಯಾಂಪ್ ಕಮಾಂಡೆಂಟ್ ಒಪ್ಪಲಿಲ್ಲ. ನನ್ನ ಶಿಫಾರಸಿಗೆ ಅವರು ಆತ್ಮೀಯವಾಗಿ ಅದು ಸಾಧ್ಯವಾಗದು ಎಂದರು. ಬಾಳಿಗರ ಕಾರ್ಯದಕ್ಷತೆ ನೋಡಿ ಮೆಚ್ಚಿದ ಬಕ್ಷಿಯವರು ಅವರೊಡನೆ ಅನುನಯ ವಿನಯದಿಂದ ವಾದ ಮಾಡಿದರು. ಸೌಜನ್ಯಶೀಲ ಬಾಳಿಗರು ಉತ್ತರಿಸಲಿಲ್ಲ. ಅಂದಮಾತ್ರಕ್ಕೆ ಅವರು ಬಕ್ಷಿಯವರ ಕೇಳಿಕೆಯನ್ನು ಮನ್ನಿಸಿದರೆಂದು ತಿಳಿಯಬಾರದು. ಕ್ಯಾಂಪು ೪ರಂದು ಮುಗಿದಾಗ ಬಾಳಿಗರು ೨, ೩ ಮತ್ತು ೪ನೆಯ ತಾರೀಕುಗಳಿಗೆ ತಾನು ಸಂಬಳ ಪಡೆಯಲಾರೆ ಎಂದು ಸಾಧಿಸಿಯೇಬಿಟ್ಟರು. ಬಾಳಿಗರ ಪ್ರಾಮಾಣಿಕತೆಯು, ಶ್ರದ್ಧೆಯು, ನಿಷ್ಠೆಯು ಮಟ್ಟ ವಿಶ್ವೇಶ್ವರಯ್ಯ ದರ್ಜೆಯದು.

ಬಲ್ಲವರ ಒಡನಾಡೆ ಬೆಲ್ಲವನು ಮೆದ್ದಂತೆ
ಅಲ್ಲದಹುದೆಂಬ ಅಜ್ಞಾನಿಯೊಡನಾಡೆ
ಕಲ್ಲಹಾಯ್ದಂತೆ ಸರ್ವಜ್ಞ

ಶುದ್ಧಮೌಲ್ಯನವರಸಿ ಶ್ರದ್ಧೆಯಿಂ ಕಾರ್ಯಮಂ
ಸದ್ದುಗದ್ದಲವಿರದೆ ಮಾಳ್ಪವನು ನಿಜಕು
ಸಿದ್ಧಪ್ರಸಿದ್ಧ ಅತ್ರಿಸೂನು

೧೯೬೨

ಏರಿದವನಿಳಿಯಲೇ ಬೇಕು!

೧೯೬೨. ನಾನು ಎನ್‌ಸಿಸಿ ಸೇರಿ ಹತ್ತುವರ್ಷಗಳಾಗಿದ್ದುವು. ಈಗ ನನ್ನ ದರ್ಜೆ ಮೂರು ನಕ್ಷತ್ರಗಳದು : ಎನ್‌ಸಿಸಿ ಕ್ಯಾಪ್ಟನ್. ನನ್ನ ಎನ್‌ಸಿಸಿ ಜೀವನ ಒಟ್ಟಾಗಿ ಹೇಳುವುದಾದರೆ ಸಾರ್ಥಕವೆನಿಸಿತ್ತು. ನನ್ನ ವ್ಯಕ್ತಿತ್ವದ ಸಂಪೂರ್ಣ ವಿಕಾಸಕ್ಕೆ ಅದು ಅವಕಾಶವಮಾಡಿಕೊಟ್ಟಿದ್ದಲ್ಲದೇ ನನಗೆ ಗೌರವ ಸಂಪತ್ತುಗಳನ್ನು ಒದಗಿಸಿಕೊಟ್ಟದ್ದಲ್ಲದೇ ಅಸಂಖ್ಯ ವಿವಿಧ ರಂಗಗಳ ವಿವಿಧ ದೃಷ್ಟಿಕೋನಗಳ ಜನರೊಡನೆ ಸಂಪರ್ಕವನ್ನೂ ಪೂರೈಸಿತ್ತು. ಕಾಲೇಜು, ಎನ್‌ಸಿಸಿ, ಮನೆ, ಸಹಕಾರಸಂಘ ಇವುಗಳಲ್ಲಿ ಯಾವುದು ನನಗೆ ಹೆಚ್ಚು ಮೆಚ್ಚುಗೆಯದೆಂದು ಹೇಳುವುದು ಕಷ್ಟ. ಆದರೆ ಕಡಿಮೆ ಮೆಚ್ಚುಗೆಯದು ಖಂಡಿತ ಮನೆ ಎನ್ನುವಂಥ ಸ್ಥಿತಿಯಲ್ಲಿ ನಾನಿದ್ದೆ. ಅದುವರೆಗೂ ನನ್ನ ಜೀವನರೇಖೆ ಏರುಮುಖವಾಗಿಯೇ ಸಾಗಿತ್ತು. ಹಿಡಿದ ಕೆಲಸದಲ್ಲಿ ಸಾಧಿಸಿದ ಪಟ್ಟಿನಲ್ಲಿ ಜಯ ಒದಗಿ ಬಂದಿತ್ತು. ಏರಿದವ ಒಂದಲ್ಲ ಒಂದು ದಿವಸ ಇಳಿಯತೊಡಗಬೇಕು ; ಕನಿಷ್ಠ ಪಕ್ಷ ಸಮಭೂಮಿಯನ್ನಾದರೂ ತಲಪಲೇ ಬೇಕು. ಈ ಪರಿಸ್ಥಿತಿ ೧೯೬೨ರಲ್ಲಿ ತಲೆದೋರಿತು. ಕ್ಯಾಪ್ಟನ್ ಎಂ. ಡಿ. ತಮ್ಮಯ್ಯ ವರ್ಗವಾಗಿ ಹೋದರು. ಕರ್ನಲ್ ಸೋಮಯ್ಯ ಆ ಮೊದಲೇ ಬೆಂಗಳೂರಿನ ಮುಖ್ಯ ಕಛೇರಿಯಿಂದ ನಿರ್ಗಮಿಸಿದ್ದರು. ಜನಾರ್ದನ ಬಾಳಿಗರು ರಿಫ್ರೆಶರ್ ಕೋರ್ಸಿಗೆ ಹೋಗಲು ನಿರಾಕರಿಸಿದುದನ್ನು ಬೆಂಗಳೂರಿನ ಕಛೇರಿ ಸರಿಯಾಗಿ ಅರ್ಥಮಿಸಿಕೊಳ್ಳದೇ ಇದೊಂದು ಶಿಸ್ತು ಉಲ್ಲಂಘನೆಯ ಪ್ರಕರಣ ಎಂದು ಭಾವಿಸಿತು. ಮೇಜರ್ ಮುತ್ತಪ್ಪ ಬೆಂಗಳೂರಿನಿಂದ ವರ್ಗವಾಗಿ ಹೋಗುವ ಮುನ್ನ ಕೊಡಗಿಗೆ ಬಂದಾಗ ಬಾಳಿಗರನ್ನು ವೈಯಕ್ತಿಕವಾಗಿ ನೋಡಿ ಆರ್ಮಿ ನಿಯಮಗಳನ್ನು ವಿವರಿಸಿ ಆ ನಿಯಮಜಾಲದಲ್ಲಿ ತಾವು ಹೇಗೆ ಅಸಹಾಯಕ ಚಾಲಕರು ಎಂಬುದನ್ನು ಹೇಳಿ ಬಾಳಿಗರು ರಿಫ್ರೆಶರ್ ಕೋರ್ಸಿಗೆ ಹೋಗಬೇಕೆಂದು ಪ್ರಾರ್ಥಿಸಿಕೊಂಡರು.

"ನಿಮ್ಮ ಯಾವುದೇ ವಿಧವಾದ ಪರೀಕ್ಷೆಗೂ ನಾನು ಸಿದ್ಧ—ನನ್ನ ಎನ್‌ಸಿಸಿ ದಕ್ಷತೆಯನ್ನು ನೀವು ಅಳೆದು ನೋಡಿ. ನನಗೆ ಈ ರಿಫ್ರೆಶರ್ ಕೋರ್ಸಿನ ಅಗತ್ಯ ಏನೂ ತೋರುವುದಿಲ್ಲ. ಒಂದು ತಿಂಗಳ ಕಾಲ ಅದೊಂದು ವ್ಯರ್ಥ ಕಾಲ ಮತ್ತು ಧನಹಾನಿ ಎಂದು ತಿಳಿದಿದ್ದೇನೆ" ಬಾಳಿಗರ ಉತ್ತರ.

"ಒಂದು ತಿಂಗಳ ಕಾಲ ಬೇಸಗೆಯ ರಜೆಯಲ್ಲಿ ನೀವು ಹೋಗಿ. ಆಗ ಕಾಲೇಜು ಪಾಠ ಹಾಳಾಗುವುದಿಲ್ಲ. ಇನ್ನು ನಿಮಗೆ ಆ ಅವಧಿಯಲ್ಲಿ ಕಾಲೇಜು ಸಂಬಳದೊಡನೆ ದರ್ಜೆ ಸಂಬಳವೂ ದೊರೆಯುತ್ತದೆ. ಹೋಗಿ ಬಂದ ತರುವಾಯ ನೀವು ಕ್ಯಾಪ್ಟನ್ ದರ್ಜೆ ಪಡೆಯುತ್ತೀರಿ. ಹೀಗೆ ನಿಮಗೂ ಎನ್‌ಸಿಸಿಗೂ ಇದರಿಂದ ಲಾಭವಿದೆ. ಆದ್ದರಿಂದ ನೀವು ರಿಫ್ರೆಶರ್ ಕೋರ್ಸಿಗೆ ಹೋಗಬೇಕು" ಮೇಜರ್ ಮುತ್ತಪ್ಪನವರ ವಾದ.

ಆದರೆ ಬಾಳಿಗರ ನಿರ್ಧಾರ ಗಡಾಯಿ ಕಲ್ಲಿನಂತೆ ಅಚಲ. ತಮ್ಮಯ್ಯನವರ ಪ್ರಿಯ ವಾಕ್ಕೂ ನನ್ನ ಮಿತ್ರಸಂಹಿತೆಯೂ ಬಾಳಿಗರ ಮೇಲೆ ಪರಿಣಾಮ ಬೀರಲಿಲ್ಲ. ಅವರ ನಿಲವು ನಮಗೆಲ್ಲ ತಿಳಿದಿತ್ತು. ಆದರೆ ಲೋಕವ್ಯವಹಾರದಲ್ಲಿ ಪದ್ಮಪತ್ರಮಿವಾಂಭಸಿ ವರ್ತನೆ ಅಗತ್ಯ ಎಂದು ನನ್ನ ನಂಬಿಕೆ. ಅನಿವಾರ್ಯವಾದ ಮುಂದಿನ ಹೆಜ್ಜೆಯಾಗಿ ಬಿಡುಗಡೆ ಬೇಡಿಕೆಯ ಅರ್ಜಿಯನ್ನು ಬಾಳಿಗರು ಸಲ್ಲಿಸಿದರು. ನಮಗೆಲ್ಲ ಹಿಡಿಸಲಾರದಷ್ಟು ನೋವು ಸಂಕಟಗಳಾದುವು. ಕೃಷ್ಣಯ್ಯನವರ ಕೋಮಲ ಮನಸ್ಸಿಗೆ ಇದರಿಂದ ತೀವ್ರ ಆಘಾತವಾಯಿತು. ಆದರೆ ಸ್ಥಿತಪ್ರಜ್ಞರಾದ ಬಾಳಿಗರಿಗೆ ಏನೂ ಅನ್ನಿಸಲಿಲ್ಲ. "ನಾನೇನು ಕಾಲೇಜು ಬಿಟ್ಟೆನೇ, ದೇಹ ಬಿಟ್ಟೆನೇ? ನಿಮ್ಮೊಡನೆಯೇ ಇದ್ದೇನಲ್ಲ. ಇನ್ನು ಎನ್‌ಸಿಸಿ ಕೆಲಸ—ನೀವು ಅಪೇಕ್ಷೆಪಟ್ಟರೆ ಹಿಂದಿನಂತೆಯೇ ಹುಡುಗರಿಗೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳ ವಿಲೇವಾರಿ ನೋಡಿಕೊಳ್ಳುತ್ತೇನೆ. ನಮ್ಮ ಸ್ನೇಹ ಚಿರವಲ್ಲವೇ?" ಎಂದವರು ಯಾವ ಸೇವೆಗೂ ತ್ಯಾಗಕ್ಕೂ ಮುಂದಾದರು. ಅಂತೂ ೧೯೬೨ರ ಕಾಲೇಜು ವರ್ಷ ಆರಂಭವಾಗುವಾಗ ನಾವು ಬಾಳಿಗರನ್ನು ಎನ್‌ಸಿಸಿಯಿಂದ ಕಳೆದುಕೊಂಡೆವು. ೧೯೪೭-ಪೂರ್ವದ ನೈಷ್ಠಿಕ ಗಾಂಧಿಭಕ್ತ, ಖಾದಿಧಾರಿಯಾದ ಈ ವ್ಯಕ್ತಿಯ ಒಂದೊಂದು ವರ್ತನೆಯೂ ಒಂದೊಂದು ಗಿರಿಶೃಂಗ.

ನಾನು ಮುಂದುವರಿಯುವುದೇ ಬಿಡುವುದೇ ಎಂಬ ವಿಚಾರದಲ್ಲಿ ಡೋಲಾಯಮಾನ ಸ್ಥಿತಿಯಲ್ಲಿದ್ದಾಗ ಹೊಸ ಓಸಿ ಕ್ಯಾಪ್ಟನ್ ಗೋಪಿಮೇನನ್ ಬಂದರು. ಕ್ಯಾಪ್ಟನ್ ಎಂ. ಡಿ. ತಮ್ಮಯ್ಯನವರನ್ನು ಬೀಳ್ಕೊಡುವ ಸರಳ (ಕಾಲೇಜು ಪ್ರಾರಂಭವಾಗಿರಲಿಲ್ಲ) ಸಮಾರಂಭದಲ್ಲಿ ಮೇನನ್ನರೂ ಇದ್ದರು. "ಜೀಟಿ! ಬಾಳಿಗರನ್ನು ಹಿಂದೆ ಪಡೆಯುವ ವಿಚಾರ ನಾನು ಹೊಸತಾಗಿ ಸರ್ವ ಪ್ರಯತ್ನಗಳನ್ನೂ ಮಾಡುತ್ತೇನೆ. ತಮ್ಮಯ್ಯನವರು ಹೇಳಿದ ಪ್ರಕಾರ ನೀವೂ ನಿರ್ಗಮಿಸುವ ಚಿಂತೆಯಲ್ಲಿದ್ದೀರೆಂದು ಕೇಳಿದೆ. ಅಂಥ ಯೋಚನೆ ತೊರೆದೇ ಬಿಡಿ. ನೀವು ಕ್ಯಾಂಪು ನಡೆಸುವುದರಲ್ಲಿ ಸಿದ್ಧಹಸ್ತರೆಂದು ಬೆಂಗಳೂರಿನಲ್ಲಿ ಎಲ್ಲರೂ ಕೊಂಡಾಡುತ್ತಿದ್ದಾರೆ. ತಮ್ಮಯ್ಯನವರೂ ಹಾಗೆಯೇ ಹೇಳಿದ್ದಾರೆ. ನನ್ನ ದಕ್ಷತೆಯೂ ಬಲು ಉನ್ನತಮಟ್ಟದ್ದು. ಆದ್ದರಿಂದ ನಾನೂ ನೀವೂ ಸೇರಿ ಇಲ್ಲೊಂದು ಪವಾಡವನ್ನೇ ಮಾಡಬೇಕು" ಎಂದು ಮೇನನ್ ನನ್ನನ್ನು ಹುರಿದುಂಬಿಸಿದರು.

ದಾಕ್ಷಿಣ್ಯವೆನ್ನಿ, ಕ್ಷಿಪ್ರನಿರ್ಧಾರಕ್ಕೆ ಬರುವ ಸಾಮರ್ಥ್ಯ ಇಲ್ಲವೆನ್ನಿ, ಅಧಿಕಾರದ ಆಸೆಯೆನ್ನಿ—ಮೇನನ್ನರ ಈ ಬಿಚ್ಚು ಮನಸ್ಸಿನ ಮಾತಿಗೆ ನಾನು ಕರಗಿದೆ. ನಾಲ್ಕನೆಯ ಓಸಿಯೂ ಇಷ್ಟೊಂದು ಆತ್ಮೀಯರಾಗಿರುವವರು ಬಂದದ್ದು ಭಾಗ್ಯವೆಂದುಕೊಂಡೆ.

ಬಿಸಿಗೊಳ್ಳುತ್ತಿದ್ದ ಪರಿಸರ

ನನ್ನ ಮನೆ ಎನ್‌ಸಿಸಿ ಕಛೇರಿಯ ಒತ್ತಿಗೆ ಇತ್ತು. ತಮ್ಮಯ್ಯನವರ ನಿರ್ಗಮನದ ಮೂರನೆಯ ದಿವಸ. ಬೆಳಗ್ಗೆ ಕಾಲೇಜಿಗೆ ಹೋಗುವ ಮೊದಲು ಎನ್‌ಸಿಸಿ ಕಛೇರಿಗೆ ಹೋದೆ. ಮೇನನ್ ಸಾಹೇಬರು ಬಂದಿದ್ದರು. "ಜೀಟಿ! ಈ ಆಫಿಸಿಗೆ ಶೋ ಇಲ್ಲ. ಏನಂತೀರಿ?"

"ಹಳೇ ಕಾಲದ ಕಟ್ಟಡ. ಬೇರೇನು ಮಾಡಲಾದೀತು?" ನಾನು.

"ಅದಲ್ಲ ನಾನು ಹೇಳುವುದು. ಈ ಕಟ್ಟಡದಲ್ಲಿಯೇ ಇನ್ನಷ್ಟು ಶೋ ಮಾಡಲು ಸಾಧ್ಯ

ವಿದೆ. ಓಸಿ ರೂಂ ನೋಡಿ—ಇದೊಂದು ಬಿಲ. ಒಂದು ಚಾರ್ಟ್ ಇಲ್ಲ, ಒಂದು ಗ್ರಾಫ್ ಇಲ್ಲ. ಬಂದು ನೋಡುವವರಿಗೆ ಪ್ರಥಮ ಭಾವನೆ ಏನಾದೀತು ಹೀಗಿದ್ದರೆ ?''

''ನಿಮ್ಮ ಅಭಿಪ್ರಾಯವೇನು ?'' ನಾನು.

''ಹಿಂದೆ ಮೂವರು ಓಸಿಗಳು ಬಂದು ಹೋಗಿದ್ದಾರೆ. ಅವರು ಏನು ಮಾಡಿದರೋ ಇಲ್ಲವೋ ನನಗೆ ತಿಳಿಯದು. ಆದರೆ ಅವರೆಲ್ಲರೂ ಒಂದೇ ಮಟ್ಟದ ಗುಗ್ಗುಗಳಾಗಿರಬೇಕು! ಶೋ ಕಡೆ ಒಂದಿಷ್ಟೂ ಗಮನವೀಯಲಿಲ್ಲವಲ್ಲ ? ಈ ಯೂನಿಟ್ಟಿನ ಖಾಸಗಿ ಖಾತೆಯಲ್ಲಿ ಸಾವಿರಾರು ರೂಪಾಯಿ ಉಳಿಸಿ ಹೋಗಿದ್ದಾರೆ. ಅದರ ಸದ್ವಿನಿಯೋಗ ಮಾಡಲು ಕೂಡ ತಿಳಿದಿರಬೇಕು. ಏನಂತೀರಿ ?''

ಸರಿ, ಎಂದಿನಂತೆ ನನ್ನ ಮನಸ್ಸಿನ ಸಮತೋಲ ತಪ್ಪಿತು. ಮುಂದಿನ ಉತ್ತರ ನೇರ ವಾದುವು. ''ಹಿಂದಿನವರ ವಿಚಾರದಲ್ಲಿ ಈಗ ಅವರು ನಮ್ಮ ಎದುರು ಇಲ್ಲದಾಗ ಲಘು ವಾದ ಮಾತೇಕೆ ? ಮುಂದಿನದನ್ನು ಯೋಚಿಸೋಣ.''

''ಇಲ್ಲ ಇಲ್ಲ. ನೀವಿದ್ದೀರಲ್ಲ ಹಿಂದಿಗೂ ಇಂದಿಗೂ ಸಂಬಂಧಿಗಳಾಗಿ. ನೀವು ಹೇಳಿ ನಿಮ್ಮ ಅಭಿಪ್ರಾಯವನ್ನು.''

''ಈ ಯೂನಿಟ್ಟನ್ನು ಇನ್ನು ಮುಂದೆ ನಡೆಸಬೇಕಾದವರು ನೀವು. ನಿಮ್ಮ ಅನುವರ್ತಿ ಗಳಾಗಿ ಕೆಲಸ ಮಾಡಬೇಕಾದವರು ನಾವು. ಆದ್ದರಿಂದ ನನ್ನ ಅಭಿಪ್ರಾಯ ಇಲ್ಲಿ ಅನಾವಶ್ಯಕ.''

''ಅಂದರೇನು ?''

''ನೀವು ಏನೇನು ಸುಧಾರಣೆ ಮಾಡಬೇಕು ಅಂದುಕೊಂಡಿದ್ದೀರೋ ಅದನ್ನು ಮಾಡಿ. ಆ ದಾರಿಯಲ್ಲಿ ನನ್ನಿಂದ ಏನಾಗಬೇಕೋ ಅದನ್ನು ಹೇಳಿ—ಸಂತೋಷದಿಂದ ಮಾಡು ತ್ತೇನೆ.'' ಹೀಗೆ ಒಂದು ವಿಧದ ತಟಸ್ಥ ಪರಿಸ್ಥಿತಿಯಲ್ಲಿ ನಮ್ಮ ಪ್ರಥಮ ಅಧಿಕೃತ ಸಂಭಾಷಣೆ ನಿಂತಿತು. ನಾನು ಕಾಲೇಜಿಗೆ ಹೋದೆ.

ಕಾಲೇಜು ಕ್ಲಾಸುಗಳು ಪ್ರಾರಂಭವಾಗುವ ವೇಳೆಗೆ ಎನ್‌ಸಿಸಿ ಆಫಿಸಿಗೆ ಸಂಪೂರ್ಣ ಮುಖಮಾರ್ಜನ ಲಭಿಸಿತ್ತು. ಚಾರ್ಟುಗಳು, ಬೋರ್ಡುಗಳು, ಇನ್ ಔಟ್ ಹಲಗೆಗಳು, ಹೊಸ ಹೊಸ ಫಲಕಗಳು ಪರದೆಗಳು—ಮುಂತಾದವುಗಳಿಂದ ಶೋಭಿಸುತ್ತಿದ್ದ ಈ ಸೌಧ ವನ್ನು ಪ್ರವೇಶಿಸುವಾಗ ನನಗೆ ಹಿಂದಿನ ಆತ್ಮವಿಶ್ವಾಸ ಉಳಿದಿರಲಿಲ್ಲ. ಓಸಿಯವರ ವರ್ತನೆ ತೀರ ಔಪಚಾರಿಕವಾಗಿದ್ದದ್ದೂ ಒಂದು ಕಾರಣ. ಹಿಂದಿನ ಸಂಪ್ರದಾಯದಂತೆ ತಿಂಗಳಿ ಗೊಂದುಸಲ ಆಫಿಸಿನ ಲೆಕ್ಕಪತ್ರಗಳನ್ನು ನಾನು ಅಜಮಾಯಿಸುತ್ತಿದ್ದೆ. ''ನಿಮಗೆ ಕಾಲೇಜಿನ, ಸ್ಟೋರ್ಸಿನ ಕೆಲಸ ಸಾಕಷ್ಟಿರುವಾಗ ಈ ಹೊರೆ ಹೊರಿಸುವುದು ಕ್ರೌರ್ಯ ಎಂದು ನಾನು ಭಾವಿಸಿದ್ದೇನೆ'' ಓಸಿ ಆಶ್ವಾಸಿಸಿದಾಗ ಕೆಲಸ ಕಡಿಮೆಯಾದದ್ದು, ಬೇರೆ ಕೆಲಸ ಮಾಡಲು ಹೆಚ್ಚು ವೇಳೆ ದೊರೆಯಿತೆಂದು ನನಗೆ ಸಂತೋಷ ನೀಡಿದರೂ ಓಸಿಯವರ ಉದ್ದೇಶ ನಿಷ್ಕಲ್ಮಷಯುತವಾದದ್ದೇ ಎಂಬ ಸಂದೇಹವನ್ನು ಮೊಳೆಸಿತು. ಇಂಥ ವಿಚಾರಗಳಿಂದೂ ನನ್ನ ತಲೆಯನ್ನು ಕೊರೆಯುವ್ವು—ಕೈಮೇಲಿನ ಕೆಲಸಗಳ ತೀವ್ರತೆ ಇದರ ಮುಖ್ಯ ಕಾರಣ.

ಓಸಿಯವರು ಊರಿನಲ್ಲಿಲ್ಲದಾಗ ಕಾನೂನು ಪ್ರಕಾರ ಕಾಗದಪತ್ರಗಳಿಗೆ ನಾನು ರುಜು ಹಾಕಬೇಕಾಗಿತ್ತು. ಆ ಸಂದರ್ಭಗಳಲ್ಲಿ ಓಸಿಯವರ ಕುರ್ಚಿಯ ಮೇಲೆಯೇ ಕುಳಿತು

ಅಧಿಕೃತ ಕಾರ್ಯ ನಿರ್ವಹಿಸುವುದು ಸಂಪ್ರದಾಯ. ಆದರೆ ಈಗ ಅಂಥ ಸಂದರ್ಭಗಳಲ್ಲಿ ಓಸಿ ಕೊಠಡಿಗೆ ಬೀಗ ಜಡಿಯಲ್ಪಟ್ಟಿರುತ್ತಿದ್ದುದರಿಂದ ಇದೇನೋ ಹೊಸ ವಿಪತ್ತು ತಲೆದೋರಿದೆ ಎಂದು ನನಗೆ ಅರ್ಥವಾಯಿತು. ಇದನ್ನು ಸಾಹೇಬರೊಡನೆ ವಿನಯದಿಂದ ವಿಚಾರಿಸಿದಾಗ "ಆ ಆಸನ ರೆಗ್ಯುಲರ್ ಆರ್ಮಿಯಿಂದ ಬಂದ ಖಾಯಂ ಓಸಿಗೆ ಮಾತ್ರ. ಬೇರೆಯವರು ಕೂರಬಾರದು" ಎಂದರು.

"ಸರಿ, ಅಷ್ಟು ಹೇಳಿದರೆ ಮುಗಿಯಿತು. ಅದಕ್ಕಾಗಿ ಕೊಠಡಿಗೇ ಬೀಗ ಹಾಕಬೇಕೇ ?"

"ಅದು ನನ್ನ ಇಷ್ಟ."

ಕಾಲೇಜು ಕ್ಲಾಸುಗಳೂ ಜಡಿಮಳೆಯೂ ಒಟ್ಟೊಟ್ಟಿಗೆ ಆರಂಭವಾದುವು. ಹುಡುಗರ ಆಯ್ಕೆಯನ್ನು ಕೃಷ್ಣಯ್ಯನವರೂ ನಾನೂ ಮಾಡಿದೆವು. ಈ ಸ್ವಾತಂತ್ರ್ಯವನ್ನು ಓಸಿ ನಮಗೆ ವಹಿಸಿದ್ದರು. ಬಾಳಿಗರು ಕಾಗದಪತ್ರಗಳ ಸಕಲ ಜವಾಬ್ದಾರಿ ವಹಿಸಿಕೊಂಡದ್ದು ಬಲು ದೊಡ್ಡ ಉಪಕಾರ. ಓಸಿ ಎಂದೂ ಪೆರೇಡಿಗೆ ಬರಲಿಲ್ಲ. ಹುಡುಗರ ಬಡ್ತಿಗಳನ್ನು ಆ ಹಿಂದಿನ ವರ್ಷಗಳಂತೆಯೇ ಕ್ರಮಪ್ರಕಾರವಾಗಿ ನಿಯಮಬದ್ಧವಾಗಿ ಮಾಡಿ ಸಂಬಂಧಿಸಿದ ಶಿಫಾರಸು ಪತ್ರಗಳನ್ನು ಓಸಿಗೆ ಕಳಿಸಿದೆ. ಅವರು ದಸ್ಕತು ಹಾಕಿ, ಪಾರ್ಟ್ ೧ ಹುಕುಂ ಹೊರಡಿಸಿದಾಗ, ಈ ಬಡ್ತಿಗಳು ಸಿಂಧುವಾಗುತ್ತವೆ. "ನಾನೊಮ್ಮೆ ಆ ಹುಡುಗರನ್ನು ನೋಡಬೇಕು" ಎಂದು ಅವರು ಅಪೇಕ್ಷಿಪಟ್ಟರು.

ಇಂದು ನಮ್ಮ ಯೂನಿಟ್ಟಿನ ಓಸಿ ಅದೇ ಯೂನಿಟ್ಟಿನ ಪೆರೇಡಿಗೆ ಪ್ರಥಮವಾಗಿ ಪದಾರ್ಪಣೆ ಮಾಡುವ ದಿನ. ಸಕಲ ಸನ್ನಾಹಗಳನ್ನೂ ವಿಧಿಪೂರ್ವಕ ಮಾಡಿ ಕ್ಲುಪ್ತ ಕಾಲದಲ್ಲಿ ಅವರನ್ನು ಸ್ವಾಗತಿಸಿದೆವು. ತನ್ನ ಯೂನಿಟ್ಟಿನ ಪೆರೇಡಿಗೆ (ತಾನು ಕೂಡ ಅದರ ಒಂದು ಅಂಗವಾಗಿರುವಾಗ) ತಾನು ಬರುವಾಗ ಈ ಆಡಂಬರ ಏಕೆ ಎಂದು ಅಚ್ಚರಿಪಟ್ಟೆ. ತಾನು ಬೇರೆ, ಕಾಲೇಜು ಬೇರೆ ಎಂಬ ಈ ಮನೋಭಾವ ಸರಿಯಾದದ್ದೇ ಎಂದು ಪ್ರಶ್ನಿಸಿಕೊಂಡೆ. ನಮ್ಮ ಶಿಕ್ಷಣವಿಧಾನ ನೋಡಿದರು. ಭಾವೀ ಮುಂದಾಳು ಕ್ಯಾಡೆಟುಗಳನ್ನು ಸಂದರ್ಶಿಸಿ ಅವರ ವ್ಯಕ್ತಿತ್ವಗಳನ್ನು ಅಳೆದು ತುಲನೆ ಮಾಡಿದರು. ಎಲ್ಲ ನಡೆದದ್ದು ಅರ್ಧ ಗಂಟೆಯಲ್ಲಿ. ಪೆರೇಡು ಇನ್ನೂ ಒಂದು ಗಂಟೆ ನಡೆಯಬೇಕಾಗಿತ್ತು. ಓಸಿ ಹೇಳಿದರು "ಜೇಟಿ ! ಹುಡುಗರನ್ನು ಒಟ್ಟುಗೂಡಿಸಿ. ಅವರಿಗೆ ನಾನು ಭಾಷಣ ಮಾಡಬೇಕೆಂದಿದ್ದೇನೆ" ಒಂದು ಹುಕುಂ, ಒಂದು ಕ್ರಿಯೆ—ನಿರ್ವಹಿಸಿದೆ.

ಭವ್ಯಮೂರ್ತಿ. ಸುಂದರ ವದನ. ಸ್ವಚ್ಛ ವ್ಯಾಕರಣಬದ್ಧ ಮನಮುಟ್ಟುವ ಇಂಗ್ಲಿಷ್ ಮಾತು. ಎಂಥವರೂ ಮಾರುಹೋಗುವಂಥ ಒಲಿಸಿಕೊಳ್ಳುವ ನುಡಿಮುತ್ತುಗಳು. ಮಾತಿನ ಸರಣಿ ಹೀಗಿತ್ತು—ಕೊಡಗಿನ ವೀರ ಪರಂಪರೆಗೆ ಗೌರವ, ಕೊಡವ ಸಂಸ್ಕೃತಿಗೆ ನಮನ, ಕೇರಳ ಹಾಗೂ ಕೊಡವ ಸಂಸ್ಕೃತಿಗಳ ಪ್ರಾಚೀನ ನಂಟಿನ ವಿಶ್ಲೇಷಣೆ, ಇಂಥ ಮಹೋನ್ನತ ಎನ್‌ಸಿಸಿ ಯೂನಿಟ್ಟಿನ ಕಮಾಂಡೆಂಟ್ ಆಗಿ ಬಂದಿರುವ ತನ್ನ ಹಿರಿಮೆ ಮತ್ತು ಸಂತೋಷ. ಹುಡುಗರ ಮನಸ್ಸು ಪ್ರಸನ್ನವಾಯಿತು. ಆದರ ಕವಾಯಿತಿ (ಡ್ರಿಲ್) ಅಂದರೆ ವಿಧಿ ಏನು ? ಮೊದಲು ನೀವು ವಿರಳ ವಸ್ತುವಾಗಬೇಕು. ಮತ್ತೆ, ಎದುರು ಕುಳಿತವರನ್ನು ಬಲು ಗಂಭೀರವಾಗಿ ಪುರಾವೆ ಸಹಿತ (ಇವೆಲ್ಲವೂ ಬುರುಡೆಗಳೇ ಆಗಿದ್ದರೂ ಗಾಂಭೀರ್ಯದ ಲೇಪವನ್ನು ಚೆನ್ನಾಗಿ ಹಚ್ಚಲು ಸಾಧ್ಯವಿದೆ) ಶ್ಲಾಘಿಸಬೇಕು. ಆಮೇಲೆ,

ಇದಕ್ಕಿಂತ ಹೆಚ್ಚಾಗಿ ಇತರರೊಂದಿಗೆ ಹೋಲಿಸಿ ಹೇಗೆ ಇವರು ಸರ್ವಶ್ರೇಷ್ಠರು ಎಂದು ಶಿಷ್ಟ ವಿಶೇಷಣಗಳ ನೆರವಿನಿಂದ ಸಿದ್ಧಪಡಿಸಬೇಕು. ಇಂಥ ಭಾಷಣ ಭಯಂಕರ ವರ್ತನೆಯನ್ನು ಕು.ಶಿ. ಹರಿದಾಸಭಟ್ಟರು ಒಂದು ಕಡೆ ಚಪ್ಪಾಳೀಗಾರಿಕೆ ಎಂದು ಕರೆದಿದ್ದಾರೆ !

"ಹೇಗಿತ್ತು ನನ್ನ ಭಾಷಣ ?" ಓಸಿ ಕೇಳಿದರು.

"ಬಲು ಚೆನ್ನಾಗಿತ್ತು. ನಿಮ್ಮ ಸಾಮರ್ಥ್ಯಗಳು ಬಹುಮುಖವಾಗಿವೆ !" ನಾನೆಂದೆ—ಸಹಜವಾಗಿ ಹೇಳಿದೆನೋ ಪಿಟೀಲು ಬಾರಿಸಿದೆನೋ ತಿಳಿಯದು.

"ಕೊಡಗಿನವರು ರೌಡಿಗಳು. ಆದರೆ ಮಲಬಾರಿನವನಾದ ನಾನು ಇನ್ನಷ್ಟು ರೌಡಿ. ಇವರನ್ನು ಆಳುವ ವಿಧಾನ ಇದೊಂದೇ."

"ಸಾರ್ವತ್ರೀಕರಣ ಎಲ್ಲಿಯೂ ಸಲ್ಲದು ಎಂದು ನನ್ನ ಮತ."

"ಅದಿರಲಿ. ನೀವು ಶಿಫಾರಸು ಮಾಡಿರುವ ಈ ಮುಂದಾಳುಗಳನ್ನು ನೋಡಿದ್ದೇನೆ. ಯಾರಿಗೂ ಜೋಶ್ ಇಲ್ಲ. ಸ್ವಲ್ಪ ರೌಡಿತನ ಇರಲೇಬೇಕು."

"ಯೋಗ್ಯತೆ, ಕರ್ತವ್ಯನಿಷ್ಠೆ, ಶಿಸ್ತು, ಸಂಯಮಗಳಿಂದ ಮೇಲೆ ಬಂದಿರುವವರು ಇವರು. ರೌಡಿತನದ ಅಭಾವ ಒಂದು ಕೊರತೆ ಅಲ್ಲವಷ್ಟೆ?" ನನ್ನ ಪ್ರಶ್ನೆ.

"ಏನೋ, ನೋಡಿ. ಮುಂದೆ ಈ ಸರಪೇತಲ ಮುಂದಾಳುಗಳಿಂದ ನಿಮಗೆ ತೊಂದರೆ ಆದೀತು. ಮುಂದಾಳುಗಳ ಆಯ್ಕೆಯಲ್ಲಿ ನನಗೆ ಅಪಾರ ಅನುಭವ ಉಂಟು."

"ತೊಂದರೆ ಏನು ಬಂತು ಈ ಹುಡುಗರಿಂದ. ಮುಂದಾಳುಗಳಿಲ್ಲದಿದ್ದರೂ ನಾನು ಕೆಲಸ ನಡೆಸಬಲ್ಲೆ. ಆದರೆ ರೌಡಿತನಕ್ಕೆ ಮಾತ್ರ ನಾವು ಪ್ರಾಧಾನ್ಯ ಕೊಡಕೂಡದು."

ಒಂದು ಜಾತಿ ಒಂದು ಕಡೆ ದೀರ್ಘಕಾಲ ಕೇಂದ್ರೀಕೃತವಾಗಿ ಬಾಳಿದರೆ ಅವರಲ್ಲಿ ನಾಟ್ಸೀ ಮನೋಭಾವ ಅಥವಾ ಬುಡಕಟ್ಟುತನ—ಎಂದರೆ ತಾವು ಮತ್ತು ತಮ್ಮ ಸಂಸ್ಕೃತಿ ಮಾತ್ರ ಸರ್ವೋತ್ಕೃಷ್ಟ ಇತರ ಎಲ್ಲರೂ ಎಲ್ಲವೂ ಕನಿಷ್ಠ ಎಂಬ ಭಾವ—ಸಾರ್ವಜನಿಕರಂಗದಲ್ಲಿ ಪ್ರಕಟಗೊಳ್ಳುವುದು ಮನುಷ್ಯನ ಇತಿಹಾಸ ಓದಿದವರಿಗೆ, ಅಭ್ಯಾಸ ಮಾಡಿದವರಿಗೆ ಕಾಣದಿರದು. ಬುಡಕಟ್ಟುತನ ಒಂದು ದುಷ್ಟಶಕ್ತಿ. ವಿವೇಕ ಅದನ್ನು ಗಮನದಲ್ಲಿಟ್ಟು ಯೋಗ್ಯ ಕ್ರಿಯಾಶೀಲ ಶಕ್ತಿಯಾಗಿ ಪರಿವರ್ತಿಸಬಲ್ಲದು. ಆದರೆ ಸಂದರ್ಭ ದೊರೆತಾಗಲೆಲ್ಲ ಅದು ಹೆಡೆ ಎತ್ತದೇ ಇರುವುದಿಲ್ಲ. ನಮ್ಮ ಸಮುಪಸ್ರದ ಭದ್ರಕೋಟೆ ಒಳಗೆ ಇಂಥ ಯಾವ ವಿಘಾತಕ ಶಕ್ತಿಗೂ ಇದುವರೆಗೆ ಪ್ರವೇಶ ದೊರೆತಿರಲಿಲ್ಲ. ಇದರ ಕಾರಣಗಳು ಮುಖ್ಯವಾಗಿ ಅಧಿಕಾರಿಗಳಾದ ನಮ್ಮಲ್ಲಿದ್ದ ಪೂರ್ಣ ಶಿಸ್ತು, ಸಂಯಮ, ಸೌಹಾರ್ದ ; ಕೊಡಗು ಜಿಲ್ಲೆಯ ರಾಜಕೀಯ ವಾತಾವರಣದಲ್ಲಿ ಉಳಿದಿದ್ದ ಶುದ್ಧತೆ ; ಕೊಡಗಿನ ತಂದೆ ತಾಯಿಯಂದಿರಿಗೆ ಗುರುಹಿರಿಯಲ್ಲಿದ್ದ ಅನನ್ಯ ಭಕ್ತಿ ವಿಶ್ವಾಸ. ಆದರೆ ಬೆಳಕು ಹರಿಯುವುದು ನಿಧಾನ ; ಮಬ್ಬು ಕವಿಯುವುದು ಅತಿ ಶೀಘ್ರ. ಯಾವ ಮಾನವ ವ್ಯವಸ್ಥೆಯೂ ಸಂವೃತ ಕೋಟೆಯಾಗಿ ಬಾಳದು. ಕ್ಯಾಡೆಟುಗಳಿಗೆ ಕ್ಯಾಡೆಟ್‌ಮುಂದಾಳುಗಳ ಮತ್ತುನಮ್ಮಿಬ್ಬರು ಆಫಿಸರರ ವಿಚಾರದಲ್ಲಿ ಸಮಾನ ಗೌರವಭಾವವಿದ್ದಂತೆ ಅನ್ನಿಸಲಿಲ್ಲ. ಏನೋ ಒಂದು ವಿಧವಾದ ಗುರಗುರ ಹಿನ್ನೆಲೆಯಲ್ಲಿ ನುಸುಳಿತೋ ಎಂಬಂತೆ ದಿನಗಳು ಉರುಳಿದುವು.ನಮ್ಮ ಶಿಫಾರಸಿನ ಪ್ರಕಾರವೇ ಮುಂದಾಳುಗಳ ನೇಮಕವಾಯಿತು. ಗುರಗುರೆವಿದ್ದದ್ದು ಗುಸಗುಸವಾಗಿ (ರಹಿಂದ ಸಕ್ಕೆ) ತೀರ್ಗಡೆ ಹೊಂದಿದುದು ನನಗೆ ತಿಳಿಯದಿರಲಿಲ್ಲ.

ಒಡ್ಡರಪಾಳೆಯದಲ್ಲಿ ನಡೆದ ಆಸ್ಫೋಟನೆ

೧೯೬೨ರ ವಲಯಶಿಬಿರ ಸೆಪ್ಟೆಂಬರಿನಲ್ಲಿ ಮೈಸೂರು ನಗರದ ಒಡ್ಡರಪಾಳೆಯದಲ್ಲಿ ನಡೆಯುವುದೆಂದೂ ಮೈಸೂರು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸೀನಿಯರ್ ಡಿವಿಶನ್ ಕ್ಯಾಡೆಟುಗಳು ಅದರಲ್ಲಿ ಭಾಗವಹಿಸತಕ್ಕದ್ದೆಂದೂ ಬೆಂಗಳೂರಿನಿಂದ ಬಂದ ಹುಕುಮನ್ನು ನಮಗೆ ಚಾಲ್ತಿ ಮಾಡಿದರು. ಆಗ ತಾನೇ ಎನ್‌ಸಿಸಿ ಆಫಿಸರ್ ಶಿಕ್ಷಣ ಪಡೆದು ಕಾಲೇಜಿಗೆ ಮರಳಿ, ಜನಾರ್ದನ ಬಾಳಿಗರಿಂದ ತೆರವಾಗಿದ್ದ ಖಾಲಿ ಸ್ಥಳವನ್ನು ಭರ್ತಿ ಮಾಡಿದ್ದ ಎನ್. ಎಸ್. ಬಾಳಿಗರೂ ನಾನೂ ಕ್ಯಾಂಪಿಗೆ ಹೊರಟೆವು. ಬದಲಾಗಿದ್ದ ಪರಿಸ್ಥಿತಿ ಗಮನಿಸಿ ನಮ್ಮ ಹುಡುಗರಿಗೆ ವಿಶೇಷ ಶಿಕ್ಷಣ ಬೋಧನೆ ನೀಡಿದೆ. ನಮ್ಮ ಆಳ್ವಿದೆಯ ಕ್ಯಾಡೆಟ್ ಮುಂದಾಳುಗಳಿಗೆ ವಿಧಿ ನಿಯಮಗಳನ್ನು ಕುರಿತು ಸಾಕಷ್ಟು ಪರಿಶ್ರಮ ಕೊಟ್ಟೆ. ಮೈಸೂರನ್ನು ಸ್ಪೆಶಲ್ ಬಸ್ಸುಗಳಲ್ಲಿ ಸೇರಿ ಒಡ್ಡರಪಾಳೆಯವನ್ನು ಪ್ರವೇಶಿಸಿದೆವು. ಹುಡುಗರ ವಾಸಕ್ಕೆ ಅನೇಕ ಕಡೆ ಹರಡಿ ಹೋಗಿದ್ದ ಹಲವಾರು ಪೊಲೀಸ್ ಕಟ್ಟಡಗಳು ; ನಮ್ಮ ವಾಸ ಇನ್ನೆಲ್ಲೋ ; ಊಟದ ಮನೆ ಮೂರನೆಯ ಕಡೆ ; ಶಿಕ್ಷಣ ಮತ್ತೊಂದೆಡೆಯಲ್ಲಿ. ಒಂದು ಕ್ಯಾಂಪನ್ನು ಯಾವ ರೀತಿ ನೆಲೆಗೊಳಿಸಬಾರದು ಎನ್ನುವುದಕ್ಕೆ ಇದೊಂದು ಉತ್ಕೃಷ್ಟ ನಿದರ್ಶನವಾಗಿತ್ತು. ಇಬಳೂರು ಕ್ಯಾಂಪಿನಲ್ಲಿ ಉಪ ಮುಖ್ಯಸ್ಥರಾಗಿದ್ದ ಕ್ಯಾಪ್ಟನ್ ಬಾಬು ಎಂಬವರು ಇಲ್ಲಿಯೂ ಉಪಮುಖ್ಯಸ್ಥರಾಗಿದ್ದರು. ನಮ್ಮಿಬ್ಬರೊಳಗೆ ಇಬಳೂರಿನಲ್ಲಿ ಅಪಾರ ವಿಶ್ವಾಸ ಸಲುಗೆ ಬೆಳೆದು ಬಂದಿದ್ದುವು. ನಮ್ಮ ರಾಯಪ್ಪನ್, ತಮ್ಮಯ್ಯನವರಂಥ ಸುಸಂಸ್ಕೃತ ಆರ್ಮಿ ಆಫಿಸರರಿವರು. ನನ್ನನ್ನು ಕಂಡೊಡನೆ ಆತ್ಮಾದರದಿಂದ ಬರಮಾಡಿಕೊಂಡು "ನೀವು ಬಂದದ್ದು ನನಗೆ ಎಂಟಾನೆ ಬಲ ಬಂದಂತಾಗಿದೆ. ನೀಲಗ್ರಂಥದ ಪ್ರಕಾರ ನೀವು ಕಳೆದ ವರ್ಷ ಕೊಡಗಿನಲ್ಲಿ ನಡೆಸಿದ ಕ್ಯಾಂಪು ಬೆಂಗಳೂರಿನ ಕಛೇರಿಯಲ್ಲೂ ದೆಹಲಿಯಲ್ಲೂ ಮನೆಮಾತಾಗಿದೆ. ಆದ್ದರಿಂದ ನಮ್ಮೆಲ್ಲರ ಕೋರಿಕೆ ಇಷ್ಟೆ—ನೀವು ಈ ಕ್ಯಾಂಪಿನಲ್ಲಿ ಉಪಲೆಕ್ಕಪತ್ರದ ಅಧಿಕಾರಿಯಾಗಿ ಎಲ್ಲ ವಿವರಗಳನ್ನೂ ಆಡಿಟ್ಟಿಗೆ ಸಿದ್ಧಪಡಿಸಲು ನನಗೆ ನೆರವಾಗಬೇಕು" ಎಂದು ವಿಶ್ವಾಸದಿಂದ ನುಡಿದರು.

"ಕ್ಯಾಂಪ್‌ಗೆ ಬಂದ ಮೇಲೆ ಎಲ್ಲ ಕೆಲಸಕ್ಕೂ ನಾನು ಸಿದ್ಧ. ಆದರೆ ಒಂದು ವಿಚಾರ ನಿಮ್ಮಲ್ಲಿ ಹೇಳಲೇಬೇಕು. ಈ ಕೆಲಸ ನನ್ನನ್ನು ನಮ್ಮ ತಂಡದಿಂದ ದೂರವಿಡುತ್ತದೆ. ನಾನು ಅವರೊಡನೆ ಸದಾ ಇರುವಂತಿಲ್ಲ. ನಮ್ಮ ಹುಡುಗರ ನಡುವೆ ಸಹಕಾರ ಚೆನ್ನಾಗಿಲ್ಲದಿರುವುದರಿಂದ ನಾನು ಅವರೊಡನೆಯೇ ಸದಾಕಾಲ ಇರುವುದು ಕ್ಯಾಂಪಿನ ಹಿತದೃಷ್ಟಿಯಿಂದಲೂ ಒಳ್ಳೆಯದು. ಆದ್ದರಿಂದ ಈ ಹೆಚ್ಚಿನ ಹೊಣೆಗಾರಿಕೆಯಿಂದ ನನ್ನನ್ನು ಬಿಡಲಾರಿರಾ ?"

ವಾದದಿಂದ ಸಾಧಿಸಲಾಗದಿದ್ದುದನ್ನು ಬಾಬು ಅವರು ಸೌಜನ್ಯದಿಂದ ಗೆದ್ದರು. ಆದ್ದರಿಂದ ನಾನು ಹಗಲು ಹೆಚ್ಚು ಹೊತ್ತು ನಮ್ಮ ತಂಡದಿಂದ ದೂರ ಇರಬೇಕಾಯಿತು. ಇದರ ಪರಿಣಾಮವಾಗಿ ನಮ್ಮ ಕ್ಯಾಡೆಟ್ ಮುಂದಾಳುಗಳಿಗೆ ಹುಡುಗರ ಮೇಲೆ ಹತೋಟಿ ತಪ್ಪಿತು. ಹುಡುಗರಲ್ಲಿ ಶೇಕಡಾ ಐವತ್ತು ಮಾತ್ರ ಪೆರೇಡಿನಲ್ಲಿ ಇರುತ್ತಿತ್ತು. ಉಳಿದವರು ಕ್ಯಾಂಪಿನಲ್ಲಿಯೇ ಪತ್ತೆ ಇರುತ್ತಿರಲಿಲ್ಲ. ಸಮೀಪದ ನಗರದಲ್ಲಿ ನೆಂಟರಿಷ್ಟರಿರುವಾಗ

ದಸರಾ ಆಮೋದಪ್ರಮೋದಗಳಿರುವಾಗ ಈ ನೀರಸ ಕ್ಯಾಂಪಿನ ಒಣಜೀವನ ಅವರಿಗೆ ಹೇಗೆ ಹಿಡಿಸೀತು ? ರಾತ್ರಿ ಹೋಗಿ ಅವರ ಕೋಣೆಗಳನ್ನೂ ಹಾಸಿಗೆಗಳನ್ನೂ ತಪಾಸಣೆ ಮಾಡಿದರೆ ಅದೆಷ್ಟೋ ಜನರು ಗೈರು ಹಾಜರು. ರಾತ್ರಿ ಎಷ್ಟೆಷ್ಟೋ ಹೊತ್ತಿಗೆ ತೂರಾಡುತ್ತ ಬರುತ್ತಿದ್ದವರು ಕೆಲವರು. ಇನ್ನು ಇಸ್ಪೀಟು, ಧೂಮಪಾನ ಮಾಮೂಲಾದುವು. ನನ್ನ ಎದುರೇ ಇವು ನಡೆಯುವಷ್ಟು ಕಾಲ ಕೆಟ್ಟಿರಲಿಲ್ಲ. ಆದರೆ ಈ ಗೆದ್ದಲನ್ನು ಹತ್ತಿಕ್ಕಲು ನನಗೆ ಸಾಧ್ಯವಾಗುತ್ತಿಲ್ಲವಲ್ಲ ಎಂದು ಖೇದಗೊಂಡೆ. ಊಟದ ಮನೆಯಿಂದ, ಸ್ನಾನದ ಮನೆಯಿಂದ (ನಲ್ಲಿ ನೀರಿನ ಸ್ನಾನ) ದಿನಾಗಲೂ ನಮ್ಮ ಹುಡುಗರ ವಿರುದ್ಧ ದೂರುಗಳು ಬರಲು ಆರಂಭಿಸಿದುವು. ನಮ್ಮ ಸೌಜನ್ಯಶೀಲ ಕ್ಯಾಡೆಟ್ ಮುಂದಾಳುಗಳು ಅರುಹಿದ ಬೇರೆ ಕೆಲವು ವಿವರಗಳು ಭಯಂಕಾರಕವಾಗಿದ್ದುವು—ಹಲವರ ನೀತಿಗೆ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಇವನ್ನು ಕೇಳಿದ ಮೇಲೆ ಸುಮ್ಮನೆ ಕುಳಿತಿರಲಾಗಲಿಲ್ಲ. ರಾತ್ರಿ ನಿದ್ರೆ ಕೆಟ್ಟು ಬೇರೆ ಕೆಲಸಗಳನ್ನು ಬದಿಗಿಟ್ಟು ಈ ವಿಚಾರದಲ್ಲಿ ನಾನೇ ಪತ್ತೆದಾರಿ ಕೆಲಸ ಮಾಡಿದೆ. ಪರಿಸ್ಥಿತಿ ಅವರು ತಿಳಿಸಿದದಕ್ಕಿಂತ ಹೆಚ್ಚು ವಿಷಮಿಸಿತ್ತು. ಏರುತ್ತಿದ್ದ ಸಂಮರ್ದ ಯಾವುದೇ ಗಳಿಗೆಯಲ್ಲಿ ಸಂಧಿಸ್ಥ ಸ್ಥಿತಿ ಮುಟ್ಟಿ ಸ್ಫೋಟಿಸಬಹುದಿತ್ತು. ಆಗ ಕ್ಯಾಂಪಿಗೆ ಕ್ಯಾಂಪೇ ಒಂದು ಯುದ್ಧರಂಗವೂ ಆಗಬಹುದು. ನಮ್ಮ ತಂಡದಲ್ಲಿಯೇ ಎರಡು ಗುಂಪುಗಳು. ಇನ್ನು ಮೈಸೂರಿನವರೂ ನಮ್ಮವರೂ ಹಳೆಯ ಸಾಲಗಳನ್ನು ಇತ್ಯರ್ಥ ಮಾಡಿಕೊಳ್ಳಲು ಬಾಳು ಮಸೆಯುತ್ತಿದ್ದರು? ಅಮಲು ಏರುತ್ತಿತ್ತು. ಆ ರಾತ್ರಿ ನಾನು ನಮ್ಮ ಐವರು ಕುಪ್ರಸಿದ್ಧ ಕ್ಯಾಡೆಟ್ಟುಗಳನ್ನು ಬಂಧಿಸಿ (ಮಿಲಿಟರಿ ಕ್ರಮದಲ್ಲಿ) ಕ್ವಾರ್ಟರ್ ಗಾರ್ಡಿನಲ್ಲಿ ಬಲವದ್ಬಂಧನದಲ್ಲಿ ಇಟ್ಟೆ. ಟ್ರೈನಿಂಗ್ ಆಫಿಸರ್ ಕ್ಯಾಪ್ಟನ್ ಚಾರ್ಲ್ಸ್ ಡಿಸೋಜಾ. ಇವರು ಆ ಹಿಂದೆ ಮಂಗಳೂರಿನಲ್ಲಿ ನನ್ನ ವಿದ್ಯಾರ್ಥಿಯಾಗಿದ್ದವರು. ನಿಯಮ ಪ್ರಕಾರ ಇವರು ಆರೋಪಿ ಕ್ಯಾಡೆಟುಗಳ ವಿಚಾರಣೆ ನಡೆಸಬೇಕಾಗಿತ್ತು. "ನೋಡಿ ಏನಾದರೂ ಮಾಡಿ ಕ್ಷಮಿಸಿ ಬಿಡಿ. ನಿಮ್ಮ ಯೂನಿಟ್ಟಿಗೆ ಕೆಟ್ಟ ಹೆಸರು ಬರುತ್ತದೆ—ಈ ದೊಡ್ಡ ಸಾಮೂಹಿಕ ಕ್ಯಾಂಪಿನಲ್ಲಿ" ಎಂದರವರು.

ನಾನೆಂದೆ "ದೇಹ ಊನವಾಗುತ್ತದಲ್ಲ ಎಂದು ಕ್ಯಾನ್ಸರ್‌ಪೀಡಿತ ಅಂಗವನ್ನು ಉಳಿಸಿಕೊಳ್ಳಲು ಸಾಧ್ಯವಿದೆಯೇ ? ಅದರ ಉಚ್ಚಾಟನೆಯೊಂದೇ ಸರಿಯಾದ ದಾರಿ. ಅವರನ್ನು ಕ್ಯಾಂಪಿನಿಂದ ಡಿಸ್‌ಮಿಸ್ ಮಾಡಿ ಊರಿಗೆ ಕಳಿಸಿಬಿಡಿ."

ನನ್ನ ಇಚ್ಛೆ ಮೇರೆ ಕ್ಯಾಂಪ್ ಕಮಾಂಡೆಂಟ್ ಈ ಐವರು ಕು—ಕ್ಯಾಡೆಟುಗಳನ್ನು ಮರುದಿವಸ ಕ್ಯಾಂಪಿನಿಂದ ಡಿಸ್‌ಮಿಸ್ ಮಾಡಿ ಲಾರಿಯಲ್ಲಿ ಬಸ್‌ನಿಲ್ದಾಣಕ್ಕೆ ಕಳಿಸಿ ಮಡಿಕೇರಿ ಬಸ್ಸಿಗೆ ಹತ್ತಿಸಿ ಕಳಿಸಿಬಿಟ್ಟರು. ಆ ಐವರೂ ನನ್ನ ಶಿಷ್ಯರೇ. ಆ ಐವರೂ ನನ್ನ ಕ್ಯಾಡೆಟುಗಳೇ. ಆ ಐವರೂ ನಮ್ಮ ಕಾಲೇಜಿನ ವಿದ್ಯಾರ್ಥಿಗಳೇ. ನನ್ನ ಎದುರು ಅವರು ಮೊದಲು ಹಾರಾಡಿದರೂ ಪ್ರಬಲ ಪುರಾವೆಗಳ ಎದುರು "ತಪ್ಪಾಯಿತು ಕ್ಷಮಿಸಬೇಕು" ಎಂದು ಮಣಿದರು. ಲಾರಿ ಹತ್ತಿ ಕ್ಯಾಂಪಿನಿಂದ ಹೋಗುವಾಗ ವಿನಯಮೂರ್ತಿಕೆಯಿಂದಲೇ ವರ್ತಿಸಿ ಹೋದರು. ಈ ಘಟನೆ ಮತ್ತು ಅವರ ದೀನ ಮುಖಭಾವ ಅಚ್ಚಳಿಯದ ಗುರುತನ್ನು ನನ್ನ ಮೇಲೆ ಒತ್ತಿದುವು. ಒಂದು ಬೃಹತ್ ಪ್ರಶ್ನೆ ಸೆಟೆದು ನಿಂತಿತು—ನೀನು ಈ ವರೆಗೆ ಎತ್ತಿ ಹಿಡಿದಿದ್ದ ಮೌಲ್ಯಗಳೇನಾದುವು ? ನೀನು ತ್ಯಾಗ ಮಾಡಿದೆನೆಂದು ಸೇವೆ ಮಾಡಿದ

ನೆಂದು ದೇಶ ಕಟ್ಟಿದೆನೆಂದು ಭ್ರಮಿಸಿ ದುಡಿದು ರಚಿಸಿದ ಸೌಧ ಏನಾಯಿತು ? ಪ್ರಾಮಾಣಿಕತೆ, ನಿಷ್ಠೆ, ಶ್ರದ್ಧೆ ಇವೆಲ್ಲವೂ ನಿನ್ನಲ್ಲಿ ನಿಜವಾಗಿಯೂ ನೀನು ತಿಳಿದುಕೊಂಡಿರುವಂತೆ ಇದ್ದಿದ್ದರೆ ಇಂದು ಏಕೆ ಅವುಗಳ ಪ್ರತಿಫಲ ಹೀಗಾಗಬೇಕಾಗಿತ್ತು ? ನಿನ್ನ ಯಾವುದೋ ದೋಷದ ಪ್ರಕಟಿತ ರೂಪ ಇಂದಿನ ಈ ಪ್ರಕರಣ. ವಾಸ್ತವಿಕವಾಗಿ ಆ ಹುಡುಗರು ಒಂದು ಪ್ರತೀಕ ಮಾತ್ರ.

ಈ ಸವಾಲನ್ನು ಎದುರಿಸಲಾಗದೇ ನಾನು ನಮ್ಮ ತಂಡದ ಮುಂದೆ ಹೋದೆ. ಅವರೆಲ್ಲ ನಿರುತ್ಸಾಹಿಗಳಾಗಿ ಜಪ್ಪೆ ಮೋರೆಯಿಂದ ಮೂಲೆ ಹಿಡಿದಿದ್ದರು. ಅವರನ್ನು ಕಲೆಹಾಕಿ ಒಂದು ಪೆರೇಡ್ ಮಾಡಿದೆ. ಅವರಿಗೆ ಘಟನೆಯ ಪೂರ್ಣ ವಿವರ ನೀಡಿದೆ. "ಇಂದು ನಡೆದುಹೋದ ಘಟನೆಯಿಂದ ನಿಮಗೆ ಎಷ್ಟು ಸಂಕಟವಾಗಿದೆ ಎಂದು ನಾನು ಬಲ್ಲೆ. ನಾನೇ ಇದರಲ್ಲಿ ಅಪರಾಧಿ ಎಂದು ನಿಮಗೆ ಕೋಪ ಬಂದಿದ್ದರೆ ಆಶ್ಚರ್ಯವಿಲ್ಲ. ಬೇರೆ ವಿಧಿಯೇ ಇರಲಿಲ್ಲ ಎಂದು ಮಾತ್ರ ನಾನು ನಿಮಗೆ ಅತಿ ವಿಷಾದದಿಂದ ವೇದನೆಯಿಂದ ಹೇಳಬೇಕಾಗಿದೆ. ಇದರಿಂದ ನಾನೊಂದು ಪಾಠ ಕಲಿತಿದ್ದೇನೆ. ನನ್ನ ಎನ್‌ಸಿಸಿ ಜೀವನ ಇಂದು ವಿಫಲಗೊಂಡಿದೆ. ಆದ್ದರಿಂದ ಎನ್‌ಸಿಸಿಯಿಂದ ನಿರ್ಗಮಿಸುವುದೊಂದೇ ನನಗೆ ಉಳಿದಿರುವ ಮಾರ್ಗ. ಈಗಲೇ, ಈ ಕ್ಯಾಂಪಿನಿಂದಲೇ, ಬಿಟ್ಟುಹೋಗುವುದು ನಾನು ವಹಿಸಿಕೊಂಡಿರುವ ಹೊಣೆಗಾರಿಕೆಯ ದೃಷ್ಟಿಯಿಂದ ಸಾಧುವಲ್ಲ. ಆದ್ದರಿಂದ ಕ್ಯಾಂಪ್ ಮುಗಿದು ಊರಿಗೆ ಮರಳಿದೊಡನೆಯೇ ನಾನು ಎನ್‌ಸಿಸಿಗೆ ಬಿಡುಗಡೆ ಅರ್ಜಿ ಸಲ್ಲಿಸುವವನಿದ್ದೇನೆ. ಹಳೆಯದನ್ನು ಮರೆತು ಕ್ಯಾಂಪ್ ಮುಗಿಯುವವರೆಗೆ ಶಾಂತವಾಗಿ ನೀವೆಲ್ಲರೂ ಇರಬೇಕೆಂದು ಕೇಳಿಕೊಳ್ಳುತ್ತೇನೆ."

ಕ್ಯಾಂಪ್ ನಿರ್ವಿಘ್ನವಾಗಿ ಕೊನೆಗೊಂಡಿತು. ನಾನು ಮಡಿಕೇರಿ ತಲಪಿದ ದಿವಸ ನನ್ನ ತಂದೆಯವರೂ ಇತರ ಮಿತ್ರರೂ ಮನೆಗೆ ಬಂದು ಒಂದು ವಿಚಾರ ಅರುಹಿದರು—ರೌಡಿ ಹುಡುಗರ ಪಡೆ ನನ್ನನ್ನು ಹೊಡೆಯಬೇಕೆಂದು ಹಂಚಿಕೆ ಹೂಡಿದೆ ; ಆದ್ದರಿಂದ ಕತ್ತಲಾಗುವ ಮೊದಲೇ ಮನೆ ಸೇರಬೇಕು ; ರಕ್ಷಣಾವ್ಯವಸ್ಥೆ ಮಾಡಿಕೊಳ್ಳಬೇಕು. ಆ ಐವರನ್ನು ಕುರಿತಾಗಲೀ ಇತರರ ವಿಷಯವಾಗಿ ಆಗಲೀ ನನಗೆ ಯಾವ ಭಯವೂ ಅಳುಕೂ ಇರಲಿಲ್ಲ. ಆದ್ದರಿಂದ ನಾನು ಎಂದಿನಂತೆ—ಏನೂ ಆಗದಿದ್ದಂತೆ—ನನ್ನ ಕಾರ್ಯಕಲಾಪಗಳಲ್ಲಿ ಸಂಚಾರಗಳಲ್ಲಿ ಬಹಿರಂಗವಾಗಿಯೇ ತೊಡಗಿದೆ. ಪೇಟೆಗೋ ಬ್ರಾಹ್ಮಣರ ಬೀದಿಯ ನಮ್ಮ ಚಿಕ್ಕಪ್ಪನವರ ಮನೆಗೋ ಹೋಗಿ ಕಾಲೇಜು ಸಮೀಪದ ಊರ ಹೊರಗಿನ ನನ್ನ ಮನೆಗೆ ನಾನು ಮರಳುತ್ತಿದ್ದದ್ದು ರಾತ್ರಿ ೮–೯ ಗಂಟೆಗೆ. ಏನೂ ಆಗಲಿಲ್ಲ. ಆಗಿದ್ದಿದ್ದರೆ ? ಯಾವ ಅಥವಾ ಎಂಥ ಎಚ್ಚರಿಕೆಯೂ ಅದನ್ನು ತಡೆಯುತ್ತಿರಲಿಲ್ಲ. ಪಾತಕಿಗೆ ಇರುವ ಸೃಜನಶೀಲ ಸ್ವಾತಂತ್ರ್ಯ ಸಾತ್ತ್ವಿಕನಿಗೆ ಇಲ್ಲವಷ್ಟೆ ? ಮಡಿಕೇರಿ ತಲಪಿದ ಮಾರನೆಯ ದಿವಸ ನಾನು ಓಸಿಯವರನ್ನು ಭೇಟಿ ಮಾಡಿ (ಅವರು ಕ್ಯಾಂಪಿಗೆ ಬಂದಿರಲಿಲ್ಲವಷ್ಟೆ) ಕೂಲಂಕಷವಾಗಿ ನಡೆದ ದುರ್ಘಟನೆಯನ್ನು ವಿವರಿಸಿದೆ. ಅಲ್ಲದೇ ಪ್ರಿನ್ಸಿಪಾಲರ ಮೂಲಕ ನಾನು ಬಿಡುಗಡೆ ಅರ್ಜಿಯನ್ನು ಸಲ್ಲಿಸಿರುವುದಾಗಿಯೂ ಅದನ್ನು ಬೆಂಗಳೂರಿನ ಕಛೇರಿಗೆ ಅಂಗೀಕರಿಸುವಂತೆ ಶಿಫಾರಸು ಮಾಡಿ ಕಳಿಸಬೇಕೆಂದೂ ಕೇಳಿಕೊಂಡೆ.

"ಏನು ಬರೆದಿದ್ದೀರಿ ಅರ್ಜಿಯಲ್ಲಿ ?" ಓಸಿ.

"ನನಗೆ ಕಾಲೇಜು ಕೆಲಸ ಬಲು ಹೆಚ್ಚಾಗಿರುವುದರಿಂದ ಎನ್‌ಸಿಸಿಗೆ ಸಾಕಷ್ಟು ಕಾಲ ಮೀಸಲಾಗಿಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನನ್ನನ್ನು ಎನ್‌ಸಿಸಿ ಹೊಣೆಗಾರಿಕೆಯಿಂದ ಬಿಡುಗಡೆ ಮಾಡುವಂತೆ ಬೇಡಿದ್ದೇನೆ."

"ನಿಜವಾದ ಕಾರಣ ?"

"ಕಳೆದ ಎರಡು ಮೂರು ವರ್ಷಗಳಿಂದ ಈ ಭಾವನೆ ಬಲಿತು ಬಂದಿದೆ. ಈಗ ಕ್ಯಾಂಪಿನ ಈ ಘಟನೆಯಿಂದ ಅದು ಪಕ್ವವಾಗಿದೆ. ಅದನ್ನೆಲ್ಲ ಅಧಿಕೃತ ಅರ್ಜಿಯಲ್ಲಿ ನಮೂದಿಸುವ ಅಗತ್ಯ ನನಗೆ ಕಾಣುತ್ತಿಲ್ಲ."

"ಯೋಚಿಸಿ ನೋಡಿ."

"ಬೇರೆ ಏನೂ ಯೋಚನೆ ಇಲ್ಲ."

ಘಟನೆಯ ವಿಚಾರ ಅವರಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಮೂರು ದಿವಸಗಳ ಅನಂತರ ಅವರಿಂದ ಒಂದು ಕರೆ ಬಂತು. ಕರೆಬಂದಾಗ ಮಾತ್ರ ನಾನು ಅವರಲ್ಲಿಗೆ ಹೋಗುವುದು ಈಚೆಗೆ ಬೆಳೆದು ಬಂದಿದ್ದ ಸಂಪ್ರದಾಯ. "ಜೇಟಿ ! ಮೈಸೂರಿನ ದುರ್ಘಟನೆಯನ್ನು ಕುರಿತು ಯೂನಿಟ್ ಕಮಾಂಡರನಾಗಿರುವ ನಾನೊಂದು ವಿಚಾರಣೆ ನಡೆಸಬೇಕು. ನಾಳೆ ಸಾಯಂಕಾಲ ಆರೋಪಿ ಹುಡುಗರನ್ನು ಹಾಜರುಪಡಿಸಿ. ನೀವೂ ಇರಿ" ಓಸಿ ಹೇಳಿದರು.

"ಅದರ ಅವಶ್ಯಕತೆ ಏನು ? ಕ್ಯಾಂಪ್ ಕಮಾಂಡೆಂಟ್ ವಿಚಾರಿಸಿದರು. ಈಗ ಅವರು ಯಾರೂ ಇಲ್ಲದೇ ಇರುವಾಗ ಅವರ ತೀರ್ಪಿನ ಮೇಲೆ ನೀವು ವಿಚಾರಣೆ ನಡೆಸುವುದು ಸರಿಯಾದೀತೇ ?" ನಾನೆಂದೆ.

"ನೀವಿದ್ದೀರಲ್ಲ ! ಹುಡುಗರಿಗೆ ತಮಗೆ ಸರಿಯಾದ ನ್ಯಾಯ ದೊರೆತಿಲ್ಲ ಎಂಬ ಭಾವನೆ ಮೂಡಿದೆ. ಆದ್ದರಿಂದ ನಮ್ಮ ಯೂನಿಟ್ಟಿನ ಹಿತದೃಷ್ಟಿಯಿಂದ ಇದು ಅಗತ್ಯ. ನಿಮಗೇನೂ ಆಗುವುದಿಲ್ಲ. ಚಿಂತೆ ಮಾಡಬೇಡಿ."

"ನೀವು ನನ್ನ ವಿಚಾರ ಹಾಗೆ ಭಾವಿಸಿದ್ದೇ ತಪ್ಪು. ನಾನು ಹೇಗೂ ಹೋಗುವವ. ಆದರೆ ಇಂಥ ವಿಚಾರಣೆಯ ನೈತಿಕ ಹಿನ್ನೆಲೆಯನ್ನು ಕುರಿತು ಮಾತ್ರ ನನಗೆ ಶಂಕೆ."

"ಆ ಹೊಣೆ ನನಗಿರಲಿ."

"ಹುಡುಗರ ಎದುರು ಪ್ರತಿವಾದಿಯಾಗಿ ನಿಲ್ಲಲು ನಾನು ತಯಾರಿಲ್ಲ. ನಾನು ಹೇಳುವುದನ್ನು ಹೇಳುತ್ತೇನೆ ಎಲ್ಲಿ ಬೇಕಾದರೂ. ರುಜುವಾತು ಪತ್ರ ಏನೂ ನನ್ನಲ್ಲಿ ಇಲ್ಲ. ಅಗತ್ಯವೂ ಇಲ್ಲ. ಅವರು ನನ್ನ ಎದುರು ಏನೇ ಅಂದರೂ ಏನನ್ನೇ ಪ್ರಕಟಿಸಿದರೂ ನಾನು ಪ್ರತಿಕ್ರಿಯೆ ಮಾತ್ರ ವ್ಯಕ್ತಪಡಿಸುವವನಲ್ಲ" ನಾನು ಸ್ಪಷ್ಟವಾಗಿ ಹೇಳಿದೆ,

ಮರಣೋತ್ತರ ಪರೀಕ್ಷೆಯ ಫಲಶ್ರುತಿ

ಮುಂಚಿನ ಕೋಣೆ. ಐವರು ಆರೋಪಿಗಳು ಒಂದು ಕಡೆ ಕುಳಿತಿದ್ದಾರೆ. ಎದುರು ಓಸಿ ಕುರ್ಚಿ ಮೇಲೆ ಆಸೀನರಾಗಿದ್ದಾರೆ. ನಾನು ಅವರ ಪಕ್ಕದಲ್ಲಿ ಕುರ್ಚಿ ಮೇಲೆ ಕುಳಿತಿದ್ದೇನೆ. ನ್ಯಾಯಾಲಯದ ಗಾಂಭೀರ್ಯ ಉದ್ವಿಗ್ನತೆ. ಹುಡುಗರ ಮುಖದ ಮೇಲೆ ಕಠಿಣ ಮುದ್ರೆ. "ನಿಮಗೆ ಕ್ಯಾಂಪಿನಲ್ಲಿ ಅನ್ಯಾಯವಾಗಿದೆ ಎಂದು ನನಗೆ ದೃಢವಾಗಿದೆ. ಆದ್ದರಿಂದ

ಮಿತ್ರರೇ ನಾನು ಈ ವಿಚಾರಣೆ ಏರ್ಪಡಿಸುತ್ತಿದ್ದೇನೆ. ಇಲ್ಲಿ ನೀವು ನಿರ್ಭಯವಾಗಿ ವರ್ತಿಸಿ. ನಾನಿದ್ದೇನೆ ನಿಮ್ಮ ರಕ್ಷಣೆಗೆ. ಆ ಮೊದಲು ಕ್ಯಾಪ್ಟನ್ ರಾವ್ ಏನು ಹೇಳುತ್ತಾರೋ ಕೇಳೋಣ'' ಸಾಹೇಬರ ಹುಕುಂ ಆಯಿತು.

ನಾನು ಕುಳಿತೇ ಹೇಳಿದೆ ''ಈ ವಿಚಾರಣೆ ನಡೆಸಲು ನಿಮಗಿರುವ ಅಧಿಕಾರ ಏನು ?''

''ಓಸಿಯಾಗಿ ನಾನು ಪಾರ್ಟ್ ೧ ಹುಕುಂ ಹೊರಡಿಸಿದ್ದೇನೆ. ಇದು ನನ್ನ ಅಧಿಕಾರ ಕಕ್ಷೆಯಲ್ಲಿಯ ವ್ಯವಹಾರ. ಈ ವಿಚಾರ ನಿಮ್ಮ ಪ್ರಶ್ನೆ ಅನಗತ್ಯ, ಇವರ ವಿರುದ್ಧ ನಿಮ್ಮ ಪುಕಾರು ಏನೆಂದು ಹೇಳಿ.''

''ಈ ಹಿಂದೆ ನಿಮಗೆ ವರದಿ ನೀಡಿದ್ದೇನೆ. ಬೇರೆ ಏನೂ ಇಲ್ಲ, ಅದನ್ನೇ ಬೇಕಾದರೆ ನೀವು ಓದಿಕೊಳ್ಳಿ, ಅವರಿಗೆ ಓದಿ ಹೇಳಿ. ಅವರ ವಿರುದ್ಧ ನನ್ನ ಪುಕಾರು ಈಗ ಏನೂ ಇಲ್ಲ. ಅವರು ನನ್ನ ವೈರಿಗಳಲ್ಲ, ಸ್ಪರ್ಧಿಗಳಲ್ಲ, ವಿದ್ಯಾರ್ಥಿಗಳು'' ನಾನು ಹೇಳಿದೆ.

''ಹಾಗಾದರೆ ನೀವು ಹೇಳುವುದು ಏನೂ ಇಲ್ಲ ?''

''ಇಲ್ಲ.''

''ಹಾಗೆಂದು ಬರೆದುಕೊಡುತ್ತೀರೋ ?''

''ಅದರ ಅಗತ್ಯ ನನಗೆ ತೋರುತ್ತಿಲ್ಲ.''

''ಮಿತ್ರರೇ ! ನಿಮಗೆ ಅನ್ಯಾಯವಾಗಿವೆ ಎಂದು ನನಗೆ ಇನ್ನಷ್ಟು ದೃಢವಾಗಿದೆ. ಈಗ ನೀವು ಹೇಳಿ'' ಓಸಿ ಕ್ಯಾಡೆಟುಗಳ ಕಡೆಗೆ ತಿರುಗಿ ಹೇಳಿದ ಮಾತು.

ತಮ್ಮ ಮೇಲೆ ವೃಥಾ ದೋಷಾರೋಪಣೆ ಮಾಡಿ ಹಿಂದೆ ಕಳಿಸಲಾಯಿತೆಂದು ಮಾತ್ರ ಅವರು ನುಡಿದರು. ನನ್ನ ಅಥವಾ ಯಾರ ವಿರುದ್ಧವೂ ಅವರು ತಪ್ಪು ಹೊರಿಸಲಿಲ್ಲ. ಓಸಿಯವರ ಯಾವ ಪ್ರಶ್ನೆಗಳಿಗೂ ಇಂಥ ಉತ್ತರ ದೊರೆಯಲಿಲ್ಲ. ಕೊನೆಗೆ ಅವರೆಲ್ಲರೂ ಒಂದು ಮಾತು ಹೇಳಿದರು ''ನಾವು ಇನ್ನು ಎನ್‌ಸಿಸಿಯಲ್ಲಿರುವುದಿಲ್ಲ, ಸಾರ್.''

''ನೀವು ಇರಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಆಗಿಹೋದದ್ದನ್ನು ಮರೆತುಬಿಡಿ. ಅದಕ್ಕಾಗಿ ನಾನು ತುಂಬ ವಿಷಾದಿಸುತ್ತೇನೆ. ನಿಮ್ಮ ತಂದೆ ತಾಯಿಯರಿಗೂ ಹಾಗೆಂದು ಪತ್ರ ಬರೆಯುವೆನು'' ಓಸಿ.

''ಈ ಆಫಿಸರರು ಇರುವ ವರೆಗೆ ನಾವು ಎನ್‌ಸಿಸಿಗೆ ಬರುವುದಿಲ್ಲ'' ಕ್ಯಾಡೆಟುಗಳು.

ನಾನು ಸೇರಿಸಿದೆ ''ನಾನು ಈಗಾಗಲೇ ಎನ್‌ಸಿಸಿಗೆ ರಾಜಿನಾಮೆ ಸಲ್ಲಿಸಿದ್ದೇನೆ. ಬಿಡುಗಡೆ ಮಾಡುವುದು ಓಸಿಯವರ ಕೈಯಲ್ಲಿದೆ—ಬೆಂಗಳೂರಿನಿಂದ ಅವರು ಬಲು ಬೇಗನೆ ಅನುಮತಿ ತರಿಸಬಹುದು. ಆದ್ದರಿಂದ ನನ್ನ ಕಾರಣದಿಂದ ನಿಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳಬೇಡಿ.''

ವಿಚಾರಣೆ ಮುಗಿಯಿತು.

ಚೈನೀ ಮಾರಿಹಲುಬೆಯ ತೀವ್ರ ಪ್ರಸಾರ

ಒಡ್ಡರಪಾಳೆಯದ ಕ್ಯಾಂಪಿನ ಕೊನೆಯ ದಿವಸಗಳಲ್ಲಿ ಪ್ರಚಂಡ ಭೂಕಂಪನವೊಂದು ಸಂಭವಿಸಿ ನಮ್ಮ ಅಡಿಪಾಯಗಳನ್ನು ಛಿದ್ರಿಸಿತ್ತು—ಹಿಮಾಲಯದ ದಳ್ಳುರಿ. ಭಾಯಿಭಾಯಿ ಎಂದು ನಂಬಿಸಿದ್ದ ಚೈನಾ ನಮ್ಮ ರಾಷ್ಟ್ರದ ವಿರುದ್ಧ ಸಂಗ್ರಾಮ ಸಾರಿತ್ತು. ಬರುತ್ತಿದ್ದ

ರೇಡಿಯೊ ಮತ್ತು ಪತ್ರಿಕಾ ವರದಿಗಳು, ಆರ್ಮಿ ಮಿತ್ರರ ಮೂಲಕ ಹರಿಯುತ್ತಿದ್ದ ಸಮಾಚಾರಗಳು ಎಲ್ಲವೂ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತಿದ್ದುವು—ಚೈನೀ ಮಾರಿ ಹಲುಬೆಯ ಎದುರು ಮುಂಚೂಣಿಯಲ್ಲಿದ್ದ ನಮ್ಮ ಸೈನ್ಯಗಳು ಮಣ್ಣು ಹೆಂಟೆಗಳಾಗಿದ್ದುವು. ಆದ್ದರಿಂದ ರಾಷ್ಟ್ರದ ಭವಿಷ್ಯ ? ಸ್ವಾತಂತ್ರ್ಯ ? ದಕ್ಷಿಣದ ತುದಿಯ ಕೊಡಗಿನ ಚಳಿಯ ಲ್ಲಿಯೂ ಕಾವು ಏರಿತು. ಎನ್‌ಸಿಸಿಗೆ ದಿನದಿನ ಹುಕುಂ ಮಳೆಯೋ ಸುರಿಯಿತು ಬೆಂಗಳೂರಿ ನಿಂದ—ಎಲ್ಲ ಸರ್ವಿಸ್ ಆಯುಧಗಳನ್ನೂ ಕೂಡಲೇ ರವಾನಿಸಬೇಕು ; ಎಲ್ಲ ಮಳೆಕೋಟ್, ಜಂಗಲ್ ಹ್ಯಾಟ್, ಬ್ಲ್ಯಾಂಕೆಟ್ ಮುಂತಾದ ಸರಂಜಾಮುಗಳನ್ನೂ ತತ್‌ಕ್ಷಣ ಹಿಂತಿರುಗಿಸ ಬೇಕು. ದೇಶ ರಕ್ಷಣೆಗೋಸ್ಕರ ಯುದ್ಧರಂಗದಲ್ಲಿರುವ ಸೈನಿಕರ ಉಪಯೋಗಕ್ಕೆ ಇವೆಲ್ಲವೂ ಅತ್ಯಾವಶ್ಯಕ ಸಾಮಗ್ರಿಗಳು. ಆಗ ತಾನೇ ಕ್ಯಾಂಪಿನಿಂದ ಮರಳಿದ್ದ ಹುಡುಗರು ಇನ್ನೂ ಮಳೆ ಕೋಟ್, ಜಂಗಲ್ ಹ್ಯಾಟ್ ಮತ್ತು ಬ್ಲ್ಯಾಂಕೆಟ್ ಇವನ್ನು ಎನ್‌ಸಿಸಿ ಕಛೇರಿಗೆ ಹಿಂತಿರುಗಿಸಿರಲಿಲ್ಲ. ನನಗೆ ಸುದ್ದಿ ತಿಳಿಸದೇ, ಮರುದಿವಸದ ಮುಂಜಾನೆ ಎಲ್ಲರೂ ಈ ಸರಂಜಾಮುಗಳನ್ನು ಹಿಂತಿರುಗಿಸಬೇಕೆಂದು, ಓಸಿ ಹುಕುಂ ಹೊರಡಿಸಿದರು. ಹುಡುಗರು ತಂದರು. ನಾನು ಆಗ ಅಲ್ಲಿರಲಿಲ್ಲ. "ಹಿಂದೆ ತೆಗೆದುಕೊಂಡು ರಶೀತಿ ಕೊಡಿ" ಎಂದು ಗಲಾಟೆ ಮಾಡಿದರು. ಒಬ್ಬ ಆರ್ಮಿ ಸ್ಟಾಫ್ ನಮ್ಮ ಅಂಡರ್-ಆಫಿಸರರ ನೆರವಿನಿಂದ ಅದನ್ನು ಪಡೆದ. ಗಲಾಟೆ ಮುಗಿದ ಮೇಲೆ ನೋಡಿದಾಗ ಕಾಗದದ ಪ್ರಕಾರ ಬರಬೇಕಾದುದ ಕ್ಕಿಂತ ಎರಡು ಮಳೆಕೋಟುಗಳು ಕಡಿಮೆ ಬಂದಿದ್ದುವು. ಯಾರೋ ಇಬ್ಬರು ಹುಡುಗರು ದಗಾ ಕೊಟ್ಟಿದ್ದರು. ಸೀನಿಯರ್ ಅಂಡರ್-ಆಫಿಸರನ (ಕ್ಯಾಡೆಟ್) ತಲೆಗೆ ಇದರ ಹೊಣೆ ಕಟ್ಟಿ ಆರ್ಮಿ ಸ್ಟಾಫ್ ಬಚಾವಾದ. ಹುಡುಗ ಬಂದು ನನ್ನೊಡನೆ ಗೋಳುಗರೆದ. ಓಸಿಗೆ ನಾನು ವಿಷಯ ತಿಳಿಸಿದೆ—ತನಗೆ ಅದು ಸಂಬಂಧ ಇಲ್ಲವೆಂದು ನಿರಾಕರಿಸಿಬಿಟ್ಟರು. ಸಾಕಷ್ಟು ತಪಾಸಣೆ ನಡೆಸಿದೆ. ಪ್ರಯೋಜನವಾಗಲಿಲ್ಲ. ಕಡೆಗೆ ನಾನೇ ಆ ನಷ್ಟವನ್ನು ಹಣ ತುಂಬಿ ಭರ್ತಿ ಮಾಡಿದೆ. "ಬೇರೆಯವರ ತಪ್ಪಿಗೋಸ್ಕರ ನಾನು ತರುವ ದಂಡವಿದು" ಎಂದು ಹೇಳಿಯೇ ಕೊಟ್ಟೆ.

ದೇಶದ ಈ ಗಂಡಾಂತರ ಪರಿಸ್ಥಿತಿಯಲ್ಲಿ ರಾಷ್ಟ್ರರಕ್ಷಣೆಯ ಮೂರನೆಯ ಅವಯವ (ಮೊದಲನೆಯದು ಸೈನ್ಯ ಬಲಗಳು, ಎರಡನೆಯದು ಟೆರಿಟೋರಿಯಲ್ ಆರ್ಮಿ) ಎಂದೆ ನಿಸಿಕೊಂಡಿರುವ ಎನ್‌ಸಿಸಿಗೆ ಎಲ್ಲ ವಿದ್ಯಾರ್ಥಿಗಳು ಸೇರಬೇಕು, ಚೆನ್ನಾಗಿ ಶಿಕ್ಷಣ ಪಡೆದು ಆಂತರಿಕ ರಕ್ಷಣೆಯ ಕಾರ್ಯಗಳಲ್ಲಿ ಭಾಗಿಗಳಾಗಿ ದೇಶದ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿಕೊಳ್ಳಬೇಕು ಎಂಬ ಆದೇಶಗಳು ಬಂದುವು. ಆದರೆ ಕ್ಯಾಂಪ್ ಮುಗಿದ ಮೇಲಿನ (ಅಕ್ಟೋಬರ್ ೧೯೬೨) ಪೆರೇಡುಗಳಿಗೆ ಬರುತ್ತಿದ್ದ ಹುಡುಗರ ಸಂಖ್ಯೆ ಕಡಿಮೆಯಾಗಿತ್ತು. ಬೆಂಗಳೂರಿನಿಂದ ಬರುತ್ತಿದ್ದ ಪತ್ರಗಳ ನಕಲುಗಳನ್ನು ದಿನದಿನ ರಾಶಿರಾಶಿಯಾಗಿ ಕಾರ್ಯ ಗತಗೊಳಿಸಲೋಸ್ಕರ ನನಗೆ ಕಳಿಸಿಕೊಡುತ್ತಿದ್ದರು. ಅವನ್ನು ಓದಿ ಮನನಮಾಡುವುದೇ ಒಂದು ಸಾಹಸ. ಈಗ ಪ್ರಾರಂಭವಾಗಿರುವುದೇನು ನಿಜ ಕಾಳಗವೋ ಕಾಗದದ ಕಾಳಗವೋ ಎಂದು ನಾನು ಸಂದೇಹಿಸುವಂತೆ ಈ ರಾಶಿ ಬೆಳೆಯಿತು. ಹಲವಾರು ಪತ್ರಗಳ ಮೇಲೆ ನನ್ನ ಸೂಚನೆಗಳನ್ನೂ ವಿವರಣೆಗಳನ್ನೂ ತತ್‌ಕ್ಷಣ ಬೇಕೆಂದು ಕೇಳುತ್ತಿದ್ದರು. ನನಗೋ ಪಾಠ, ಸ್ಕೋರು ಇವೆರಡರ ನಡುವೆ ಬೇರೆ ಯಾವುದಕ್ಕೂ ಬಿಡುವಿರುತ್ತಿರಲಿಲ್ಲ. ಅಷ್ಟರಲ್ಲೇ

ಓಸಿಯಿಂದ ಎರಡು ಸಲ ಫೋನ್ ಬಂದಿರುತ್ತಿತ್ತು. ಫ್ಯಾನ್ ಎದುರು ನಿಂತೇ ಇರುತ್ತಿದ್ದ. ಅನೇಕ ವೇಳೆ ಅವರಿಂದ ಬರುತ್ತಿದ್ದ ಪತ್ರಗಳ ಅಂಚಿನ ಮತ್ತು ಹಿಂಬದಿಯ ಖಾಲಿ ಸ್ಥಳಗಳಲ್ಲಿಯೇ ಉತ್ತರ ಬರೆದು ರವಾನಿಸುತ್ತಿದ್ದೆ. ನಮ್ಮ ಸಿವಿಲ್ ಸರಕಾರದ ಒಳಗಿನ ವ್ಯವಹಾರಗಳಲ್ಲಿ ಈ ಕ್ರಮ ಮಾನ್ಯವಾದದ್ದೇ. ಆದರೆ ಸಾಹೇಬರಿಂದ ಒಂದು ರಾಕೆಟ್ ಬಂತು. ನನ್ನಂಥ ಸೀನಿಯರ್ ಆಫೀಸರ್ ಇಂಥ ಬೇಜವಾಬ್ದಾರಿಕೆಯಿಂದ ವರ್ತಿಸುವುದು ತನಗೆ ತೀವ್ರ ಅಸಂತೋಷ ಉಂಟುಮಾಡಿದೆ; ಇನ್ನಾದರೂ ನನ್ನ ಶಿಸ್ತು ಸಂಧಾರಿಸಬೇಕು. ನಾನು ಹಿಂದೆ ತರಾಯಿಸಿದೆ—ನನ್ನ ರಾಜಿನಾಮೆ ಅರ್ಜಿಯನ್ನು ತತ್‌ಕ್ಷಣ ಸಿಂಧುಗೊಳಿಸಿ ಎಂದು. ದೇಶದ ಈ ಗಂಡಾಂತರ ಪರಿಸ್ಥಿತಿಯಲ್ಲಿ ನನ್ನ ಈ ರಾಜಿನಾಮೆ ಹೇಡಿತನದ ಕುರುಹು ಎಂದು ತೋರದೇ ಎಂದು ಅವರು ಕೊಂಕು ನುಡಿದರು. ಸಮಯವಿದ್ದರೆ ತಾನೇ ನಾನು ಉತ್ತರ ಕೊಡುವುದು? ಅಂತೂ ಯೋಚಿಸಿದೆ—ದೇಶಕ್ಕೆ ನನ್ನ ಕರ್ತವ್ಯ ಏನು? ನನ್ನ ಸಕಲ ಕೆಲಸಗಳನ್ನೂ ನಿಷ್ಠೆಯಿಂದ ನಿರ್ವಹಿಸುವುದೇ ಸರಿಯಾದ ಮಾರ್ಗ. ಇದರಿಂದ ಭಿನ್ನವಾದ ದೇಶಸೇವೆ ಎಂಬ ಪರಿಕಲ್ಪನೆ ಇಲ್ಲ ಎಂದು ತೀರ್ಮಾನಿಸಿದೆ.

"ನಮ್ಮ ಪಟ್ಟಣದ ಜಲಾಶಯ, ಅಂಚೆ ಕಛೇರಿ, ಬ್ಯಾಂಕು ಮುಂತಾದ ಸಾರ್ವಜನಿಕ ಸೇವಾಕೇಂದ್ರಗಳನ್ನು ರಕ್ಷಿಸುವ ಹೊಣೆ ಎನ್‌ಸಿಸಿ ವಹಿಸಿಕೊಳ್ಳಬೇಕು ಎಂದು ಆದೇಶ ಬಂದಿದೆ. ಆದ್ದರಿಂದ ನಾಳೆ ದಿವಸ ನಾನು ಪೆರೇಡನ್ನು ಉದ್ದೇಶಿಸಿ ಮಾತಾಡಲು ಬರುತ್ತೇನೆ—ಏರ್ಪಡಿಸಿ" ಎಂದು ಸಾಹೇಬರಿಂದ ಹುಕುಂ ಬಂತು. ಎಲ್ಲ ಹುಡುಗರಿಗೂ ನಾನು ವಿಚಾರ ಅರುಹಿದೆ. ಸಾಧ್ಯವಿದ್ದಷ್ಟು ಪ್ರಚಾರ ನೀಡಿದೆ. ಆದರೆ ಹುಡುಗರಿಗೆ ಎನ್‌ಸಿಸಿಯಲ್ಲಿ ಆಸಕ್ತಿ ಕುಂದಿಹೋಗಿತ್ತು. ಪೆರೇಡಿನಲ್ಲಿ ಈ ಹಿಂದೆ ಇರುತ್ತಿದ್ದ ಯಾವ ಆಕರ್ಷಣೆಯೂ ಇರಲಿಲ್ಲ. ಬಾಳಿಗರ ನಿರ್ಗಮನದಿಂದ ಅದು ಮರೆಯಾಗಿ ಹೋಗಿತ್ತು. ೧೮೦ ಬರಬೇಕಾದಲ್ಲಿ ಬಂದವರು ೭೦. ನಿಶ್ಚಿತ ಗಳಿಗೆ ಮಿಲಿಟರಿ ಆಟಾಟೋಪ ಸಮೇತ ಚಿತ್ತೈಸಿದರು ಸಾಹೇಬರು. "ಎಲ್ಲಿ ೧೮೦?"

"ಬಂದವರಿಷ್ಟು ಮಾತ್ರ—೭೦" ನಾನು.

"ಉಳಿದವರೇನಾದರು?" ಓಸಿ,

"ಬಂದಿಲ್ಲ" ನಾನು.

"ಯಾಕೆ?" ಓಸಿ.

ನಾನು ಉತ್ತರಿಸಲಿಲ್ಲ. ಕೆಂಡಕಾರುತ್ತ ೭೦ರ ಎದುರು ನಿಂತರು. ದೇಶ ದ್ರೋಹಿಗಳು, ಪಾತಕರು ಎಂದು ಮುಂತಾಗಿ ಬೈಗುಳ ಪ್ರವಾಹ ಶುದ್ಧ ಮಿಲಿಟರಿ ಸಾಹಿತ್ಯದ ಭಾಷೆಯ ಮೂಲಕ ಹರಿಯಿತು, ಬಾರದವರ ಮೇಲಿನ ಕೋಪದಿಂದ ಬಂದವರಿಗೆ ಶಿಕ್ಷೆ ವಿಧಿಸಿದರು —ಕಾಲೇಜಿಗೆ ಹತ್ತು ಸುತ್ತು ಓಡಬೇಕೆಂದು. ೭೦ ಓಡಿತು, ತಿರುಗಾಸಿನಲ್ಲಿ ಮರೆಯಾದೊಡನೆಯೇ ಓಸಿ ವಿರುದ್ಧ ಘೋಷಣೆಗಳನ್ನು ಕೂಗಿತು. ನಾನು ಓಸಿಯ ಹಿಂದೆ ನಿಂತಿದ್ದವನು ಕೂಡಲೇ ಹುಡುಗರ ಬೆಂಬತ್ತಿ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಂಡೆ.

"ನಮ್ಮ ತಂದೆ ತಾಯಿಯರನ್ನು ನಿಂದಿಸಲು ನಮ್ಮ ಸಂಸ್ಕೃತಿಯನ್ನು ಅವಹೇಳನ ಮಾಡಲು ಇವರು ಯಾರು?" ಎಂಬುದು ಅವರ ಸಹಜ ತರ್ಕಬದ್ಧ ಪ್ರಶ್ನೆ. ನಾನು ಏನೂ ಉತ್ತರ ಹೇಳುವಂತಿರಲಿಲ್ಲ. ಹುಡುಗರಿಗೆ ಸಮಾಧಾನದ ಮಾತು ನುಡಿದೆ.

ಪೆರೇಡನ್ನು ವಿಸರ್ಜಿಸಿ ಹುಡುಗರನ್ನು ಕಳಿಸಿದೆವು. ಆ ಮುಸ್ಸಂಜೆ ಚಳಿ ಕೊರೆಯುತ್ತಿತ್ತು. ಓಸಿ ಕಾರಿನ ಎದುರು ನಾವಿಬ್ಬರೂ ನಿಂತಿದ್ದೆವು. ನನಗೆ ತಡೆಯಲಾಗದೇ ಒಂದು ಮಾತು ಹೇಳಿದೆ "ನಮ್ಮ ಹುಡುಗರನ್ನು ನೀವು ಈ ರೀತಿ ನಡೆಸಿ ಆಳುವಂತಿಲ್ಲ."

"ನಿಮ್ಮಿಂದ ನಾನು ಆಡಳಿತೆಯ ವಿಧಾನ ಕಲಿಯಬೇಕಾಗಿಲ್ಲ."

ಸಂಸಾರಕ್ಕೆ ಬಿದ್ದ ಮಾರಿರೋಗದ ಪ್ರಹಾರ

೧೯೬೨ರ ನವೆಂಬರ್ ತಿಂಗಳ ನಾಲ್ಕನೆಯ ವಾರ. ಪುತ್ತೂರಿನಲ್ಲಿ ಶಿವರಾಮಕಾರಂತರು ಅವರ ನೂತನ ಯಕ್ಷಗಾನ ಗೀತ ನಾಟಕಗಳ (ಬ್ಯಾಲೆ) ಪ್ರಯೋಗವನ್ನು ಎರಡು ದಿವಸ ಸಂಜೆಗಳಲ್ಲಿ ನಡೆಸುವರೆಂಬ ಸುದ್ದಿ ಬಂತು. ಅವನ್ನು ನೋಡಲೆಂದು ನಾನು ಪುತ್ತೂರಿಗೆ ಹೊರಟೆ. ಮಡಿಕೇರಿ ಬಸ್‌ನಿಲ್ದಾಣದಲ್ಲಿ ಬಸ್ ಕಾಯುತ್ತ ನಿಂತಿದ್ದೆ. ಎನ್. ಎಸ್. ತಿಮ್ಮಪ್ಪಯ್ಯ ಎಂಬ ಮಿತ್ರರೂ ಬಂಧುಗಳೂ ಹತ್ತಿರ ಬಂದು ಕೇಳಿದರು "ರಾಮಚಂದ್ರ ಡಾಕ್ಟರರಿಗೆ ಜ್ವರ ಜೋರಾಗಿದೆಯಂತೆ. ಈಗ ಹೇಗಿದೆ?"

ರಾಮಚಂದ್ರ ಡಾಕ್ಟರರು ನನ್ನ ಚಿಕ್ಕಪ್ಪ. ಮೂರು ದಿವಸಗಳ ಹಿಂದೆ ಅವರನ್ನು ನೋಡಿದ್ದೆ. ಆರೋಗ್ಯವಾಗಿ ಇದ್ದರು. ಒಬ್ಬಳೇ ಮಗಳ ಮದುವೆ ನಿಶ್ಚಯವಾದ ಶುಭ ಘಟನೆಯನ್ನು ಸಂತೋಷವಾಗಿ ಆಚರಿಸಿದ್ದೆವು. ಇವರು ಸದಾ ಆರೋಗ್ಯವಂತರು. ಆದ್ದರಿಂದ ಏನೋ ಫ್ಲೂ ಬಂದಿರಬೇಕು; ಅಷ್ಟೊಂದು ಕಠಿಣವಾಗಿದ್ದರೆ ನನಗೆ (ನಮ್ಮ ಮನೆಗಳ ಅಂತರ ಸುಮಾರು ೨ ಮೈಲಿಗಳು) ಸುದ್ದಿ ಖಂಡಿತ ಬರುತ್ತಿತ್ತು ಎಂದು ತರ್ಕಿಸಿದೆ. ನಾನು ಬಸ್ ಹತ್ತಿ ಪುತ್ತೂರಿಸಿದೆ. ಆ ಸಂಜೆ ಬ್ಯಾಲೆ ನೋಡಿ ಸಂತೋಷಪಟ್ಟೆ. ಮರುಸಂಜೆ ಬೇರೆ ಒಂದು ಪ್ರಯೋಗವಿದ್ದುದರಿಂದ ಆ ದಿನವೂ ಪುತ್ತೂರಿನಲ್ಲೇ ಉಳಿಯುವ ಕಾರ್ಯಕ್ರಮ. ಆದರೆ ಬೆಳಗ್ಗೆ ಮಡಿಕೇರಿಯಿಂದ ಬಂದ ಟ್ರಂಕ್ ಟೆಲಿಫೋನ್ ಸಮಾಚಾರ ಭಯಂಕರವಾಗಿತ್ತು—ಚಿಕ್ಕಪ್ಪ ತೀರಿಹೋಗಿದ್ದರು. ಕೂಡಲೇ ಸಿಕ್ಕಿದ ವಾಹನ ಹತ್ತಿ ಡ್ರೈವರನನ್ನು ಪುಸಲಾಯಿಸಿ ಮಡಿಕೇರಿಗೆ ಧಾವಿಸಿದೆ. ಹೌದು—ಅವರ ಭವ್ಯ ಕಳೇಬರ ಈಗ ದಿವ್ಯ ನಿರ್ಲಕ್ಷ್ಯದಿಂದ ಮಲಗಿತ್ತು. ಮೈ ಮುಖ ಎಲ್ಲವೂ ಅವರ ವಾಸ್ತವಿಕ ಗಾತ್ರದ ಎರಡರಷ್ಟು ಊದಿಹೋಗಿದ್ದುವು. ರಕ್ತನಾಳಗಳೆಲ್ಲವೂ ಒಡೆದು ಭಯಂಕರ ವೇದನೆಯಿಂದ ಅವರು ಕೊನೆ ಉಸಿರೆಳೆದರಂತೆ. ಯಾವ ವೈದ್ಯರಿಗೂ—ಸ್ವತಃ ಹೋಮಿಯೋಪತಿ ವೈದ್ಯರಾದ ಅವರಿಗೂ—ಈ ಖಾಯಿಲೆ ಏನೆಂದು ತಿಳಿಯಲಿಲ್ಲ. ಹೆಮರ್ರೇಜ್ ಎಂಬ ಸಾಮಾನ್ಯ ನಾಮ ಸುಲಭವಾಗಿ ಪ್ರಯೋಗಕ್ಕೆ ದೊರೆತರೂ ಹೆಮರ್ರೇಜಿನ ಕಾರಣ ಏನೆಂಬುದು ಚಿದಂಬರ ರಹಸ್ಯವಾಗಿತ್ತು. ೫೦–೬೦ರ ನಡುವಿನ ಬಿರುಸು ತುಂಬು ಜೀವನ. ವೈದ್ಯ ವೃತ್ತಿ. ಏಲಕ್ಕಿ ಕಾಫಿ ಬತ್ತ ಮುಂತಾದ ವ್ಯವಸಾಯ ಉಪವೃತ್ತಿ. ನೆಲೆಗೊಳ್ಳಬೇಕಾಗಿದ್ದ ಸಂಸಾರ. ಆದರ ಆತಿಥ್ಯ ಧಾರಾಳತನ ಇವುಗಳಿಗೆ ಪರ್ಯಾಯನಾಮವಾಗಿದ್ದ ಗೃಹಿಣಿ. ಇವರನ್ನೇ ನಂಬಿಕೊಂಡಿದ್ದ ಮುದುಕಿ ಚಿಕ್ಕತಾಯಿ. ಪಕ್ಕದ ಹಳ್ಳಿಯಲ್ಲಿದ್ದ ಏಕಮಾತ್ರ ಸಮೀಪ ಸಂಬಂಧಿ ಅಣ್ಣ (ನನ್ನ ತಂದೆ) ಮತ್ತು ಅವರ ಸಂಸಾರ. ಅಪಾರ ಮಿತ್ರ ಹಾಗೂ ಬಂಧು ವರ್ಗ. ಇವರೆಲ್ಲರಿಗೂ ಹೇಳದೇ ಕೇಳದೇ ಯಾವ ವಿಧವಾದ ಮುನ್ಸೂಚನೆ ಕೊಡದೇ (ಖಾಯಿಲೆ, ಅವಗಡ ಇತ್ಯಾದಿ) ಹೊರಟೇ ಹೋಗಿದ್ದರು ಈ ಮಹಾನುಭಾವ. ಉಲ್ಕೆ

ಯಂತೆ ಎದ್ದರು; ಇದ್ದಷ್ಟು ಕಾಲ ಅದೇ ರೀತಿ ಪ್ರಜ್ವಲಿಸಿದರು; ಹಠಾತ್ತಾಗಿ ತಿಮಿರ ಗರ್ಭದಲ್ಲಿ ಅದೃಶ್ಯರಾದರು. ಹಿರಿ ಮಗ ದೂರದ ಕೊಟ್ಟಾಯಂನಲ್ಲಿ ಓದುತ್ತಿದ್ದವನಿಗೆ ತಂತಿ ಹೋಯಿತು. ಆದರೆ ಅವನು ಬರುವುದು ಮರುದಿನ ಸಾಯಂಕಾಲ. ಹೀಗಾಗಿ ಮುಂದಿನ ಕ್ರಿಯೆಗಳನ್ನು ಯಾರಿಗೂ ಕಾಯದೇ ಅತಿ ದುಃಖದಿಂದ ನೆರವೇರಿಸಿದೆವು. ನನ್ನ ಹೆಂಡತಿ ಮೂರು ಗಂಡು ಮಕ್ಕಳು, ನನ್ನ ತಂದೆ ತಾಯಿ ತಮ್ಮಂದಿರು ತಂಗಿ, ಇತರ ಬಂಧುಮಿತ್ರರು ಎಲ್ಲರೂ ಜ್ಯೋತಿಹೀನವಾಗಿದ್ದ "ಜ್ಯೋತಿ"ಯಲ್ಲಿ (ಮನೆಯ ಹೆಸರು) ಬಂದು ಸೇರಿದರು. ಮದುವೆಗೋಸ್ಕರ ಸಂಗ್ರಹಿಸಿದ್ದ ಪದಾರ್ಥಗಳು ಉತ್ತರಕ್ರಿಯೆಗಳಿಗಾಗಿ ವಿನಿಯೋಗಗೊಂಡವು. ಕರ್ಮಾಂತರದ ಎರಡನೆಯ ದಿನ (೧೨ನೆಯ ದಿವಸ). ನನ್ನ ಎರಡನೆಯ ಮಗ ಆನಂದ ಅತಿ ತೀವ್ರ ಜ್ವರದಿಂದ ಕೆಂಡವಾದ. ಯಾವ ಯಾವ ಜ್ವರ ಮಾಪಿಯಿಂದ ಪರೀಕ್ಷಿಸಿದರೂ ತಿಳಿದದ್ದು ಹೆದರಿಕೆ ಹುಟ್ಟಿಸುವ ಒಂದೇ ಮಟ್ಟ ೧೦೪ ಮತ್ತು ೧೦೫ ಡಿಗ್ರಿಗಳ ನಡುವೆ. ಕೋಣೆಯಿಂದೀ ಅಗ್ಗಿಷ್ಟಿಕೆ ಇಟ್ಟಂಥ ಅನುಭವ ಆ ಚಳಿಗಾಲದಲ್ಲೂ. ತಣ್ಣೀರು ಬಟ್ಟೆ, ಹಿಮಗಡ್ಡೆ ಲೇಪ—ಒಂದೂ ಪ್ರಯೋಜನಕಾರಿ ಆಗಲಿಲ್ಲ. ಪರೀಕ್ಷಿಸಿದ ಡಾಕ್ಟರುಗಳಿಗೆಲ್ಲ ಆಶ್ಚರ್ಯ—ಇಂಥ ಜ್ವರ ಗಂಟೆಗಟ್ಟಲೆ ಕಂಡರೂ ಈ ಹುಡುಗ ಎಚ್ಚರದಿಂದಲೇ ಇರುವನಲ್ಲ, ಜೀವಕ್ಕೆ ಅಪಾಯವೇನೂ ತಟ್ಟಿಲ್ಲವಲ್ಲ ಎಂದು. ಮನೆಯ ಸಾಮೂಹಿಕ ದುಃಖಮಯ ವಾತಾವರಣದಲ್ಲಿ ನಂಟರು ಇಷ್ಟರ ಗಜಿಬಿಜಿಯ ಸನ್ನಿವೇಶದಲ್ಲಿ ಇದೊಂದು ಅಸಿಧಾರೆಯ ಮೇಲಿನ ನಡಿಗೆ. ಆ ರಾತ್ರಿ ಜ್ವರ ಏರಿತೇ ವಿನಾ ತಗ್ಗಲಿಲ್ಲ. ಹುಡುಗನ ತಾಯಿಗೆ ಉಪವಾಸ ವನವಾಸದ ಜೊತೆಗೆ ಮಗನ ಖಾಯಿಲೆಯ ಚಿಂತೆ. ರಾತ್ರಿ ಕಳೆದೇಳುವಾಗ ಪರಿಸ್ಥಿತಿ ಬಿಗಡಾಯಿಸಿತು. ಆ ಹಗಲು ಹುಡುಗನ ಮೈ ಮುಖ ಕೆಂಪಾಗಿ ಬಿರಿಯುವಂತಾದುವು. ಊದಿ ಊದಿ ಒಡೆದೇಹೋಗುವನೋ ಎಂಬಂತೆ ಕಂಡ. ಹೆಚ್ಚಿನ ಎಚ್ಚರಿಕೆಯ ದೃಷ್ಟಿಯಿಂದ ನಾವು ಕಾಲೇಜು ಪಕ್ಕದ ನಮ್ಮ ಮನೆಗೆ ಹುಡುಗನ ಸಮೇತ ಹೋದೆವು. ಮುಖದ ಮೇಲಿನ ಕೆಂಪು ಬಾಸುಂಡೆಗಳು ಸ್ಪಷ್ಟ ನಿರ್ದಿಷ್ಟ ಆಕಾರ ತಳೆಯುವಂತೆ ಕಂಡಿತು. ಡಾಕ್ಟರ್ ಬೋಪಯ್ಯ ಅದೆಷ್ಟೋ ಸಲ ಬಂದು "ಇದೇನು ಅಂಗರೆಕಜ್ಜಿಯಾಗಿರಬೇಕು. ಬೇರೆ ಯಾವುದಕ್ಕೂ ಇಂಥ ಜ್ವರ ಈ ಬಾಸುಂಡೆಗಳು ಇಷ್ಟು ದೀರ್ಘಕಾಲ ಬರುವುದಿಲ್ಲ" ಎಂದು ಯೋಗ್ಯ ಉಪಶಮನ ಕಾರಕ ಔಷಧಿ ಕೊಟ್ಟವರು ಆ ಸಂಜೆ ಕಹಿ ನಗ್ನ ವಾಸ್ತವಿಕತೆ ಕಂಡರು "ಸ್ವಾಮೀ! ಇದು ಸ್ಮಾಲ್. ಅತಿ ತೀವ್ರವಾಗಿ ಬಂದಿದೆ. ದೇವರಿಗೆ ಮೊರೆಯಿಡಿ. ಔಷಧಿ ಮಾಡುವ." ಹೆಸರು ಹೇಳಲೂ ಹೆದರಿಕೆ ಆಗುವಂಥ ವ್ಯಾಧಿ—ಸ್ಮಾಲ್ ಪಾಕ್ಸ್, ಸಿಡುಬು. ಅತಿನಿಬಿಡವಾಗಿ ದೇಹದ ಯಾವ ಭಾಗದಲ್ಲೂ ಒಂದಿನಿತೂ ಅವಕಾಶವಿರದಂತೆ ವ್ಯಾಪಿಸಿದ್ದುವು—ಸಿಡುಬಿನ ಕೋಟ್ಲೆಗಳು. "ಈಗ ತಿಳಿಯಿತು ನಿಮ್ಮ ಚಿಕ್ಕಪ್ಪನವರ ಸಾವಿನ ರಹಸ್ಯ. ಹೆಮರ್ರೇಜ್ ಮಾದರಿಯ ಸಿಡುಬು. ಎಷ್ಟೋ ಸಾವಿರ ಸಿಡುಬು ರೋಗಿಗಳಲ್ಲಿ ಒಬ್ಬರಿಗೆ ಬರುವಂಥ ಅತಿವಿರಳ ಆದರೆ ಔಷಧವೇ ಇಲ್ಲದ ಖಾಯಿಲೆ ಅದು. ಅವರಿಗೇಕೆ ಬಂತಪ್ಪ!" ಎಂದು ಉದ್ಗರಿಸಿದರು ಡಾಕ್ಟರರು.

ಜ್ವರ ಬರುವ ಮೊದಲು ಚಿಕ್ಕಪ್ಪ ಸಿಡುಬುರೋಗಿಯೊಬ್ಬನನ್ನು ನೋಡಿ ಔಷಧಿ ಕೊಡಲು ಹೋಗಿದ್ದರಂತೆ. ಅವನು ಬದುಕಿದ. ಮಾರಿ ಇವರ ಬಲಿ ಬೇಡಿದಳು.

“ನೀವೆಲ್ಲರೂ ವ್ಯಾಕ್ಸಿನೇಷನ್ ಪುನಃ ಮಾಡಿಸಿಕೊಳ್ಳಬೇಕು. ಮಾತ್ರವಲ್ಲ ಈ ವಿಚಾರ ಮಡಿಕೇರಿಯಲ್ಲಿ ಪ್ರಚಾರವನ್ನು ಮಾಡಬೇಕು'' ಎಂದರು ವೈದ್ಯರು.

ಕೊಡಗಿನ ಏಕೈಕ ದಿನಪತ್ರಿಕೆ ''ಶಕ್ತಿ''ಯಲ್ಲಿ ಸಿಡುಬಿನ ಸುದ್ದಿ ಪ್ರಚಾರ ಮಾಡಿದೆ. ಸಾಮೂಹಿಕವಾಗಿ ವ್ಯಾಕ್ಸಿನೇಷನ್ ವ್ಯವಸ್ಥೆಯನ್ನು ಏರ್ಪಡಿಸುವುದು ಸುಲಭವೇ ಆಗಿತ್ತು. ಎಲ್ಲರಿಗೂ ಆಯಿತು—ಆದರೆ ಚಿಕ್ಕಪ್ಪನವರ ಹಿರಿಯ ಮಗ, ಸ್ವತಃ ಹೋಮಿಯೋಪತಿ ವೈದ್ಯವನ್ನು ಓದುತ್ತಿದ್ದಾತ, ತಂದೆ ಸತ್ತ ಮರುದಿನ ಮಡಿಕೇರಿಗೆ ಬಂದಾತ ವ್ಯಾಕ್ಸಿನೇಷನ್ ಮಾತ್ರ ಮಾಡಿಸಿಕೊಳ್ಳಲಿಲ್ಲ ಕಾರಣ—ಹೋಮಿಯೋಪತಿ ಶಾಸ್ತ್ರ ವ್ಯಾಕ್ಸಿನೇಷನ್ನನ್ನು ವಿರೋಧಿಸುತ್ತದೆ; ಬದಲು ಸಿಡುಬು ತಡೆಹಿಡಿವ ಪ್ರತಿಬಂಧಕಗಳನ್ನು ವಿಧಿಸುತ್ತದೆ. ತನ್ನ ಮೃತ ತಂದೆಯ ಆತ್ಮಕ್ಕೆ ಅದು ಅಪಚಾರವೆಂದು ಭಾವುಕನಾದ. ಹೋಮಿಯೋಪತಿಯ ಮೆಟೀರಿಯಾ ಮೆಡಿಕ ಗ್ರಂಥದಿಂದ ಆಯ್ದು ವಾಕ್ಯ ತೋರಿಸಿದೆವು—ಸಿಡುಬು ಪಿಡುಗಾಗಿ ಹಬ್ಬಿರುವಾಗ ವ್ಯಾಕ್ಸಿನೇಷನ್ ಒಂದೇ ಕ್ಷಿಪ್ರ ಪ್ರತಿಬಂಧಕ ವಿಧಾನ ಎಂದು ಅದರಲ್ಲಿ ಉಲ್ಲೇಖಿತವಾಗಿತ್ತು. ''ನಿನ್ನ ತಂದೆಯ ಆತ್ಮ ಪವಿತ್ರವಾದದ್ದು. ಅದು ನೀನು ಬದುಕಿ ಬಾಳಿ ದೊಡ್ಡವನಾಗಬೇಕೆಂದು ಅಪೇಕ್ಷಿಸುತ್ತದೆಯೇ ಹೊರತು ಪಿಡುಗಿನೊಡನೆ ಸೆಣಸ ಬೇಕೆಂದಲ್ಲ'' ಎಂದು ನಾವು ಯಾರೇ ಏನೇ ಹೇಳಿದರೂ ಅವನು ಕೇಳಲಿಲ್ಲ. ಹೋಮಿಯೋ ಪತಿ ತಡೆಮದ್ದುಗಳನ್ನು ಸೇವಿಸುತ್ತಿದ್ದೇನೆಂದ. ಚಿಕ್ಕಪ್ಪನವರು ಗತಿಸಿ ಒಂದು ತಿಂಗಳಾಗುವ ಮೊದಲೇ ಅದೇ ಹೆಮರ್ರೇಜ್ ಮಾದರಿಯ ಸಿಡುಬು ರೋಗದಿಂದ, ಅದೇ ಉಲ್ಬಣ ಛಾಯೆಗಳ ಸಮೇತ, ಈ ತರುಣ ಅಸುನೀಗಿದ.

''ನಾರಣ್ಣಯ್ಯ! ನನಗೆ ಬದುಕಬೇಕೆಂದು ಆಸೆ ಇದೆ. ಡಾಕ್ಟರರನ್ನು ಕರೆದು ತನ್ನಿ'' ಎಂದು ಆ ದುಷ್ಟ ಪ್ರಾತಃಕಾಲ ೬ ಗಂಟೆಗೆ ಹೇಳಿದ. ಮುಂದಿನ ಐದು ಮಿನಿಟುಗಳ ಒಳಗೆ ಅವನ ಆತ್ಮ ತಂದೆಯ ಆತ್ಮದ ಹಿಂದೆ ಹೋಗಿತ್ತು. ಗಂಡ, ಹಿರಿಮಗ—ಇವರನ್ನು ಒಂದು ತಿಂಗಳ ಕ್ಷಿಪ್ರಾವಧಿಯಲ್ಲಿ ದುರಂತ ಸನ್ನಿವೇಶಗಳಲ್ಲಿ ಕಳೆದುಕೊಂಡ ನನ್ನ ಚಿಕ್ಕಮ್ಮ ನವರ ಸ್ಥಿತಿ ಏನು? ಅದರ ವರ್ಣನೆ ನನ್ನ ಮಿಲಿಟರಿ ಲೇಖನಿಗೆ ಸಾಧ್ಯವಿಲ್ಲ.

ಆನಂದನ ಖಾಯಿಲೆ ಅದರ ಪೂರ್ಣ ಅವಧಿ ತೆಗೆದುಕೊಂಡು ಹಿಂಗಿತು. ಹುಡುಗ ಚೇತರಿಸಿಕೊಂಡ. ಒಂದು ತಿಂಗಳ ಕಾಲದ—ನವೆಂಬರ್ ಡಿಸೆಂಬರ್ ಅವಧಿ—ಈ ಕರಾಳ ಗ್ರಹಣವನ್ನು ಅನುಭವಿಸಿದುದರ ಪರಿಣಾಮವಾಗಿ ನನ್ನ ಹೆಂಡತಿಗೆ ತಡೆಯಲಾರದ ದೌರ್ಬಲ್ಯ ಏನೇನೋ ನೋವು ಬಂದುವು. ಅವಳನ್ನು ಆರೈಕೆ ಮಾಡುವವರು ಯಾರು? ಚೈನಾ ಯುದ್ಧದ ಪರಿಣಾಮವಾಗಿ ಎನ್‌ಸಿಸಿ ವ್ಯವಹಾರ ಬಿರುಸಿನಿಂದ ಸಾಗಬೇಕಾಗಿತ್ತು; ಸಹಕಾರ ಸಂಘದಲ್ಲ ದಿನದಿನ ಸಾವಿರಾರು ರೂಪಾಯಿಗಳ ವ್ಯವಹಾರ ನಾನು ಅಲ್ಲಿಯೇ ಇಲ್ಲದೆ ಸ್ಥಗಿತಸ್ಥಿತಿಗೆ ಬಂದಿತ್ತು; ಕಾಲೇಜಿನ ಕೆಲಸಗಳು ಅಸಂಖ್ಯಾತವಾಗಿದ್ದುವು. ದೇಶ ಬಿಡುತ್ತೀಯಾ? ಸಂಸಾರ ಅಲಕ್ಷಿಸುತ್ತೀಯಾ? ಈ ಇರುಕಿನಿಂದ ಪಾರಾಗುವ ಬಗೆ ಒಂದೇ: ಆಕೆಯನ್ನೂ ಮಕ್ಕಳನ್ನೂ ತವರ್ಮನೆಗೆ (ಪುತ್ತೂರಿಗೆ) ಕಳಿಸುವುದು, ನಾನು ಮಡಿಕೇರಿಯಲ್ಲಿಯೇ ಉಳಿಯುವುದು.

ಅವರು ಅತ್ತ ಹೋದ ಒಡನೆಯೇ ನಾನು ಎಂದಿನ ಕೆಲಸಗಳಲ್ಲಿ ಮನೆಯ ಸಂಕಟ ಕ್ಷೋಭೆಗಳನ್ನು ಮರೆತೆ. ರಾತ್ರಿ ಬಂದು ಒಬ್ಬನೇ ಆ ದೊಡ್ಡ ಮನೆಯಲ್ಲಿ ಮಲಗಿದರೆ

ನಿದ್ರೆ ಇದೆಯೇ? ಶಾಂತಿ ಇದೆಯೇ? ನನ್ನ ಹೆಂಡತಿಯ ಖಾಯಿಲೆ ತೀವ್ರ ಪ್ಲೂರಿಸಿ ಎಂದೂ ಅಪಾಯವಿಲ್ಲವೆಂದೂ ಮಾವ ಬರೆದರು.

ನನ್ನ ಎನ್‌ಸಿಸಿ ಕೆಲಸ ಸರಿಯಾಗಿಲ್ಲ, ಶ್ರದ್ಧೆ ಇಲ್ಲದೇ ನಾನು ಏನೇನೋ ಬರೆದು ಕಳಿಸುತ್ತಿದ್ದೇನೆ—ಎಂಬ ಅರ್ಥದ ಕಠಿಣ ಪತ್ರಗಳು ನನಗೆ ಸಾಹೇಬರಿಂದ ದಿನದಿನ ಬರಲು ಆರಂಭಿಸಿದುವು. ಅವುಗಳಿಂದ ನನ್ನ ದೇಹೋಷ್ಣತೆ ಏರುತ್ತಿತ್ತು. ಆದರೆ ಏನೂ ಉತ್ತರ ನೀಡದೇ ಆಗುವಷ್ಟನ್ನು ಮಾಡಿ ಸುಮ್ಮನಿರುತ್ತಿದ್ದೆ. ಇವರು ನನ್ನನ್ನು ಎನ್‌ಸಿಸಿ ಯಿಂದ ಬಿಡುಗಡೆಯನ್ನೂ ಮಾಡುವುದಿಲ್ಲ, ಸುಮ್ಮನಿರಲೂ ಬಿಡುವುದಿಲ್ಲ—ಎಂಥ ಕ್ರೂರಿ ಗಳು ಎಂದು ನನ್ನನ್ನು ನಾನೇ ಹಳಿದುಕೊಂಡು ಮೂಕನಾಗಿ ಇದ್ದೆ. ಒಂದು ದಿವಸ ಫೋನಿನಲ್ಲಿ ಸಾಹೇಬರಿಂದ ಮಾರ್ಟರ್ ಗುಂಡು ಬಂತು—ನನ್ನ ಅಶಿಸ್ತನ್ನು ಕುರಿತ ದೀರ್ಘ ಭಾಷಣ; ನನ್ನಂಥ ನಾಲಾಯಕರಿಂದ ದೇಶ ಇಂಥ ದುಃಸ್ಥಿತಿಗೆ ಇಳಿದಿದೆ ಎಂದೂ ಕೇಳಿದೆ. ನನ್ನ ಹಿಂದಿನ ಆತ್ಮಾಭಿಮಾನ, ಕ್ಷಿಪ್ರ ಅವಧಾನತೆ ಎಲ್ಲವೂ ಈ ದಿವಸಗಳಲ್ಲಿ ನಷ್ಟಗೊಂಡು ನಾನೊಬ್ಬ ಜೀವಚ್ಛವದಂತೆ ಆಗಿದ್ದೆ. ಆದ್ದರಿಂದ ಆ ಕಟುಭಾಷಣ ಆಲಿಸುವಾಗ ಉತ್ತರ ಏನನ್ನೂ ನೀಡಲಿಲ್ಲ, ಭಾಷೆಯೇ ಹೊರಡಲಿಲ್ಲ. ಕೊನೆಗೆ ಟೆಲಿಫೋನನ್ನು ಕೆಳಗಾದರೂ ಇಡಬಹುದಿತ್ತು. ಆ ಬುದ್ಧಿಯೂ ನನಗೆ ಬರಲಿಲ್ಲ! ಭಾಷಣ ಮಾಡಿ ಮಾಡಿ ಪೆಟ್ರೋಲ್ ತೀರಿದ ಮೇಲೆ ಸಾಹೇಬರು "ನಿಮ್ಮ ಶಿಸ್ತು ಉತ್ತಮವಾಗಬೇಕು ತಿಳಿಯಿತೇ? ಇದು ವರೆಗಿನ ನಿಮ್ಮ ವಿಚಾರದ ವರದಿಗಳೆಲ್ಲವೂ ಕಾಗಕ್ಕ ಗುಬ್ಬಕ್ಕ ಕತೆ" ಎಂದು ಹೀಯಾಳಿಸಿ ಫೋನನ್ನು ಕೆಳಗಿಟ್ಟರು. ಅದಕ್ಕೂ ಉತ್ತರ ನೀಡಲು ನನಗೆ ಆಗಲಿಲ್ಲ. ಸಹಕಾರ ಸಂಘ ದಲ್ಲಿ ನನ್ನ ಎದುರೇ ಕುಳಿತಿದ್ದ ಮಿತ್ರರು ಕೇಳಿದರು "ಏನು ನಿಮ್ಮ ಮುಖದ ಮೇಲೆ ತೀವ್ರ ನೋವನ್ನು ಕಂಡೆನಲ್ಲ. ಏನಾಯಿತು?" ವಿಷಾದದ ನಗುವಿನಿಂದ ನಾನು ಮಾತನ್ನು ತೇಲಿಸಿದೆ. ಒಳಗಿನ ಕೊಳೆಯನ್ನು ಸಾರ್ವಜನಿಕವಾಗಿ ತೊಳೆಯುವುದರಿಂದ ಏನು ಲಾಭ? ಲೋಕದಲ್ಲಿ ಸಾಕಷ್ಟು ದುಃಖವಿದೆ. ನಾನೂ ಏಕೆ ದುಃಖವನ್ನೇ ಕೊಡಬೇಕು? ಸುಮ್ಮ ನಿದ್ದೆ. ನೀಲಕಂಠನಾಗಿರಲು ಪ್ರಯತ್ನಿಸಿದೆ.

ಮರುದಿವಸ ಅಪರಾಹ್ಣದ ೩ ಗಂಟೆ. ಕ್ಲಾಸಿನಲ್ಲಿ ಪಾಠ ಮಾಡುತ್ತಿದ್ದೆ. ಟ್ರಂಕ್ ಫೋನ್ ಕರೆ ಬಂದಿದೆ, ಕೂಡಲೇ ಬರಬೇಕಂತೆ ಎಂದು ಸಹಕಾರ ಸಂಘದಿಂದ (ಕಾಲೇಜಿನ ಹಿಂಬದಿಯ ಕಟ್ಟಡ) ಕರೆಬಂತು. ಪುತ್ತೂರಿನಿಂದ ಭಾವ ಗೌರೀಶಂಕರನ ಮಾತು "ಅಕ್ಕ ಕೊನೆ ಉಸಿರು ಎಳೆಯುತ್ತಿದ್ದಾಳೆ. ನಿನ್ನನ್ನು ನೋಡಬೇಕೆಂದು ಬಯಸುತ್ತಾಳೆ."

ಕಣ್ಣು ಮಂಜಾಗಿ ಕುಳಿತೆ. ಎದುರಿಗೆ ರಖಂ ವ್ಯಾಪಾರಕ್ಕಾಗಿ ನನ್ನ ಬರವನ್ನೇ ಕಾದು ಕುಳಿತಿದ್ದ ದೂರದಿಂದ ಬಂದಿದ್ದ ಗಟ್ಟಿ ಕುಳ; ಬಿಡಿ ಗಿರಾಕಿಗಳು ಹಲವಾರು ಮಂದಿ. ಹೀಗೆ ಅಲ್ಲಿ ಜನ ಮಿಜಿಮಿಜಿ. "ನೋಡಪ್ಪಾ! ಸಾಕ್ಷಾತ್ ಯಮಧರ್ಮರಾಯನೇ ಬಂದು ಈ ಕ್ಷಣ ಹೊರಡೆಂದರೆ ಹೊರಡಲಾಗದ ಪರಿಸ್ಥಿತಿ ನನ್ನದು. ಅವಳ ಪರಿಸ್ಥಿತಿ ಕಡುಕಠಿಣವಾಗಿದ್ದರೆ ಇನ್ನೊಂದು ದಿವಸವಾದರೂ ಉಳಿಯಬಹುದು. ಆದ್ದರಿಂದ ರಾತ್ರಿ ೭ ಗಂಟೆಗೆ ಪುನಃ ಫೋನ್ ಮಾಡು—ನಾನು ಇಲ್ಲಿಯೇ ಕಾಯುತ್ತಿರುತ್ತೇನೆ. ಆ ಕ್ಷಣವೇ ಬೇಕಾದರೆ ಕಾರ್ ಮಾಡಿ ಹೊರಟು ಬರಲು ತಯಾರಾಗಿರುತ್ತೇನೆ."

೭ ಗಂಟೆಯ ಫೋನ್ ಬರುವವರೆಗೆ ನನ್ನ ನಿರ್ಮಾನುಷ ತರ್ಕವನ್ನು ನಾನೇ ಹಳಿ

ಯುತ್ತ ಕುಳಿತಿದ್ದೆ. ಜೀವನ ಬೇಡುವುದು ತರ್ಕವನ್ನಲ್ಲ, ವಿಶ್ವಾಸವನ್ನು ಎಂಬುದು ನನಗೆ ತಿಳಿಯದ್ದಲ್ಲ. ಆದರೆ ಆ ಮುಹೂರ್ತದಲ್ಲಿ ವರ್ತಿಸಿದ್ದು ಹಾಗೆ. ಫೋನ್ ತಡವಾದಂತೆ ನಾಡಿ ಮಿಡಿತ ಏರಿತು. ಕೊನೆಗೊಮ್ಮೆ ಬಂತು. ಬೆಚ್ಚಿ ಬಿಸಿಯಾಗಿ ಆ ನೀರವ ಏಕಾಂತದಲ್ಲಿ ಹೌಹಾರಿ ಅದನ್ನು ಆಲಿಸಿದೆ "ಪರಿಸ್ಥಿತಿ ಸುಧಾರಿಸಿದೆ. ಪ್ರಾಣಾಪಾಯವಿಲ್ಲ."

"ಹಾಗಾದರೆ ನಾನು ಬರುವುದು ?" ನಾನು.

"ಪ್ರಾಣಾಪಾಯವಿಲ್ಲ. ಇನ್ನು ನಿನ್ನ ಅನುಕೂಲ" ಗೌರೀಶಂಕರ.

"ನಾನು ಬರುವುದಿಲ್ಲ. ಆಗದೇ ?

"ಸರಿ. ನೀನು ಆರೋಗ್ಯವಾಗಿರುವಿಯಷ್ಟೆ ಎಂದು ವಿಚಾರಿಸಲು ಹೇಳಿದ್ದಾಳೆ ಅಕ್ಕ." ಆ ನೋವಿನಲ್ಲಿಯೂ ನನ್ನ ಆರೋಗ್ಯದ ಚಿಂತೆ—ಕಡೆಗೆ ಕರುಣಾಳು ರಾಘವನಲಿ ತಪ್ಪಿಲ್ಲ ಎಂಬ ಉನ್ನತ ಭಾವದ ಪ್ರತೀಕ.

"ಎಂದಿನಂತೆ ಫಸ್ಟ್‌ಕ್ಲಾಸ್ ಎಂದು ಹೇಳು."

ನಾನು ಹೋಗಲಿಲ್ಲ. ಅವಳೇ ಗುಣಗೊಂಡು ಚೇತರಿಸಿಕೊಂಡು ತವರ್ಮನೆಯ ಸುಖವುಂಡು ಕೆಲವು ವಾರಾನಂತರ ಮರಳಿದಳು.

ಸಂಸಾರ ಸಾಗರದಾಗ ಲೆಕ್ಕವಿರದಷ್ಟು ದುಃಖದ ಬಂಡಿ
ನಾಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿ ಆಚೆಯಾ ದಂಡಿ
ಮಲಗಿರುವ ಕೂಸು ಮಲಗಿರಲಿ ಅಲ್ಲಿ ಮುಂದಿನದು ದೇವರಚಿತ್ತ
ನಾ ತಡೀಲಾರೆ ಅದು, ಯಾಕ ನೋಡತೀ ಮತ್ತ ಮತ್ತ ನೀ ಇತ್ತ ?

ಬೇಂದ್ರೆ

೧೯೬೩

ಬೀಳಲು ಬಿಡದಿದ್ದ ಬಿಲೇ

ಓಸಿ ಮತ್ತು ನನ್ನ ನಡುವೆ ಯಾವ ಬಾಂಧವ್ಯವೂ ಉಳಿಯಲಿಲ್ಲ. ಜಗಳ ಮಾಡಿ ಮುಂದುವರಿಸುವ ತಾಕತ್ತು ನನ್ನಲ್ಲಿ ಇರಲಿಲ್ಲ, ಬೇಕಾಗಲಿಲ್ಲ. ನನ್ನ ರಾಜೀನಾಮೆ ಪತ್ರವನ್ನು ಅಂಗೀಕರಿಸಿ ನನ್ನನ್ನು ಬಿಡುಗಡೆ ಮಾಡುವ ವಿಚಾರವನ್ನು ಆಗಾಗ ಪತ್ರ ಬರೆದು ನೆನಪಿಗೆ ತರುತ್ತಿದ್ದೆ. ಆದರೆ ಬೆಂಗಳೂರಿನಿಂದ ಈ ಯಾವ ಪತ್ರಕ್ಕೂ ಯಾವುದೇ ವಿಧವಾದ ಉತ್ತರವೂ ಬರಲಿಲ್ಲ. ಶಿಸ್ತಿಗೆ ಕಟ್ಟುಬಿದ್ದು ಅಪಮಾನಗಳನ್ನು ನುಂಗಿಕೊಂಡು ದಿವಸ ತಳ್ಳಿದೆ. ಈ ಮಧ್ಯೆ ಕೇಂದ್ರ ಸರಕಾರ ಎನ್‌ಸಿಸಿ ಶಿಕ್ಷಣವನ್ನು ರಾಷ್ಟ್ರಾದ್ಯಂತ ಎಲ್ಲ ಎಸ್‌ಎಸ್‌ಎಲ್‌ಸಿ-ಉತ್ತರ ವಿದ್ಯಾರ್ಥಿಗಳಿಗೂ ೧೯೬೩ರ ಜೂನಿನಿಂದ ಕಡ್ಡಾಯವಾಗಿ ನೀಡುವ ಆಜ್ಞೆಯನ್ನು ಘೋಷಿಸಿತು. ಇದರ ಅಂಗವಾಗಿ ಅಧಿಕ ಸಂಖ್ಯೆಯಲ್ಲಿ ಹೊಸ ಎನ್‌ಸಿಸಿ ಯೂನಿಟ್ಟುಗಳ ಸ್ಥಾಪನೆ, ಅವನ್ನು ನಡೆಸಲು ಖಾಯಂ ಕಮಾಂಡಿಂಗ್ ಆಫಿಸರರು, ಅಡ್ಮಿನಿಸ್ಟ್ರೇಟಿವ್ ಆಫಿಸರುಗಳು ಮೊದಲಾದವರ ಆಯ್ಕೆ ಇವೆಲ್ಲವೂ ಕ್ಷಿಪ್ರವೇಳೆಯಲ್ಲಿ ನಡೆಯಬೇಕಾದ ವಿಧಿಗಳು. ಅಷ್ಟು ಆರ್ಮಿ ಆಫಿಸರರನ್ನು ಎಲ್ಲಿಂದ ತರುವುದು? ಮೇಲಾಗಿ ಇರುವವರನ್ನೂ ಯುದ್ಧರಂಗಕ್ಕೆ ಶಿಕ್ಷಣಕ್ಷೇತ್ರಗಳಿಗೆ ಇತರ ಮಿಲಿಟೆರಿ ಕೇಂದ್ರಗಳಿಗೆ ಕಳಿಸಬೇಕಾಗಿತ್ತು. ಹೀಗಾಗಿ ಕೇಂದ್ರ ಸರಕಾರ ಎನ್‌ಸಿಸಿ ಆಫಿಸರುಗಳಿಗೆ ಪೂರ್ಣಾವಧಿಯ ಕಮಿಶನ್ ಬಡ್ತಿ ನೀಡಿ ತದನುಗುಣವಾದ ಸಂಬಳ ಭತ್ಯ ಮುಂತಾದ ಸೌಲಭ್ಯಸಮೇತ ಭರತಖಂಡದ ವಿವಿಧ ಎನ್‌ಸಿಸಿ ಯೂನಿಟ್ಟುಗಳಿಗೆ ನೇಮಕ ಮಾಡುವ ನೂತನ ಆಕರ್ಷಕ ಯೋಜನೆಯನ್ನು ಸಮ್ಮುಖದಲ್ಲಿ ಮುಂದೆ ಪ್ರಸಿದ್ಧಿಸಿತು.

೧೯೬೩ರಲ್ಲಿ ಕಾಲೇಜು ಲೆಕ್ಚರರ ಸಂಬಳ ಸಾಮಾನ್ಯವಾಗಿ ರೂಪಾಯಿ ೧೦೦-೨೫೦ ಅಥವಾ ರೂ ೧೦೦-೩೦೦ ಸ್ಕೇಲಿನಲ್ಲಿತ್ತು. ಸುಮಾರು ೧೦-೧೬ ವರ್ಷ ಅನುಭವಿ ಲೆಕ್ಚರರ್ ತಿಂಗಳೊಂದರ ರೂಪಾಯಿ ೨೫೦ಕ್ಕಿಂತ ಹೆಚ್ಚು ಸಂಬಳ ಪಡೆಯುತ್ತಿದ್ದುದು ಅತ್ಯಪೂರ್ವ. ಇನ್ನು ವ್ಯಾಯಾಮ ಶಿಕ್ಷಕರ ತಲಬು ಹಾಗೂ ಸ್ಥಾನಗೌರವ ತೀರ ಕೆಳಮಟ್ಟದಲ್ಲಿದ್ದುವು. ಎನ್‌ಸಿಸಿ ಆಫಿಸರುಗಳಾಗಿದ್ದವರು ಲೆಕ್ಚರರುಗಳು ಮತ್ತು ಸಮಾನ ಅಥವಾ ಅಧಿಕ ಸಂಖ್ಯೆಯಲ್ಲಿ ವ್ಯಾಯಾಮ ಶಿಕ್ಷಕರು. ಇಂಥವರ ದರ್ಜೆ ಲೆಫ್ಟಿನೆಂಟ್ ಅಥವಾ ಕ್ಯಾಪ್ಟನ್ ಆಗಿದ್ದರೆ ಆರ್ಮಿ ಸಂಬಳ ಭತ್ಯಾನುಸಾರ ಅವರಿಗೆ ತಿಂಗಳೊಂದರ ರೂಪಾಯಿ ೬೦೦ಕ್ಕಿಂತಲೂ ಹೆಚ್ಚು ತಲಬು ದೊರೆಯುವುದೆಂದು ತಿಳಿಯಿತು. ಸುಮಾರು ೧೦ ವರ್ಷಗಳ ಎನ್‌ಸಿಸಿ ಅನುಭವವಿದ್ದ, ಕ್ಯಾಪ್ಟನ್ ದರ್ಜೆಯ ನನಗೆ ರೂಪಾಯಿ ೯೦೦ಕ್ಕೆ ಕಡಿಮೆ ಇಲ್ಲದಷ್ಟು ಸಂಬಳ ದೊರೆಯುತ್ತದೆ: ಇನ್ನು ಗೌರವ ಪ್ರತಿಷ್ಠೆ. ಕೇಳಬೇಕೇ—ಕೇಂದ್ರ ಸರಕಾರದ ಪ್ರಥಮ ದರ್ಜೆಯ ಅಧಿಕಾರಿ; ಬಂಗ್ಲೆ, ಕಾರು, ಸೇವಕರು, ಆರ್ಮಿ ಸ್ಟಾಫ್, ದರ್ಬಾರೋ ದರ್ಬಾರು. ಕೆಲಸ ತಿಳಿದದ್ದೇ. ಅದನ್ನೇ ಪ್ರಧಾನ ಹುದ್ದೆಯಾಗಿ ನಡೆಸಬೇಕು. ಇಡೀ ದೇಶ ತಿರುಗಬಹುದು. ಸಾಹಸ

ಪ್ರಿಯರಿಗೆ, ದೇಶಸೇವೆ ಮಾಡಬೇಕೆನ್ನುವವರಿಗೆ, ಆರ್ಥಿಕ ಲಾಭ ಪ್ರಶಸ್ತಿಗಳಿಸಬೇಕೆನ್ನುವವರಿಗೆ ಇದೊಂದು ಸುವರ್ಣಾವಕಾಶ. ನನ್ನ ಮಿತ್ರರೆಲ್ಲರೂ (ಬಾಳಿಗರ ವಿನಾ) ಬೋಧಿಸಿದರು : ಹೇಗೂ ಮೈಸೂರು ಸರಕಾರ ನನ್ನ ಸೇವೆಯನ್ನು ಎರವಲಾಗಿ ಕೇಂದ್ರಕ್ಕೆ ಕೊಡುತ್ತದೆ ; ಬೇಡವೆಂದಾದಾಗ ಹಿಂದೆ ಬರಬಹುದು ; ಲೆಕ್ಚರರ್ ಕೆಲಸ ಇದ್ದೇ ಇದೆ ; ಸ್ಥಾನಮಾನಲಾಭ ದೊರೆಯುವ ಈ ಹೊಸ ಅವಕಾಶವನ್ನು ನಾನು ತತ್‌ಕ್ಷಣ ಉಪಯೋಗಿಸಿಕೊಳ್ಳಬೇಕು. ಮೇನನ್ ಸಾಹೇಬರು ಸಹ ಹೇಳಿದರು "ದೇಶದ ಈ ಗಂಡಾಂತರ ಪರಿಸ್ಥಿತಿಯಲ್ಲಿ ನೀವು ರಾಜಿನಾಮೆ ವಾಪಸು ತೆಗೆದುಕೊಂಡು ಪೂರ್ಣಾವಧಿಯ ಕಮಿಶನ್ನಿಗೆ ಅರ್ಜಿ ಸಲ್ಲಿಸಬೇಕು."

ಹೊಸ ಆಸೆ, ದುಡ್ಡು ಗೌರವಗಳಿಗಿಂತ ಹೆಚ್ಚಾಗಿ ಸಾಹಸಪ್ರಿಯತೆ, ಮಡಿಕೇರಿಯ ಸಕಲ ವಿಧದ ಗೊಸರು ನೆಲದಿಂದ ಬಿಡುಗಡೆಯಾಗುವ ಬಯಕೆ—ಎಲ್ಲವೂ ಸೇರಿ ಒಂದು ವಾರ ನನ್ನ ಮಾನಸಿಕ ಸಮತೋಲ ತಪ್ಪಿತ್ತು. ಈ ವೇಳೆಯಲ್ಲಿ ಚಿಂತನಮಂಥನಗಳಿಂದ ನಿರ್ಧಾರಕ್ಕೆ ಬರುವುದು ಸುಲಭವೆನಿಸಿತು—ರಾಜಿನಾಮೆ ಪತ್ರವನ್ನು ಅಂಗೀಕರಿಸಿರೆಂದು ನಿಚ್ಚಳವಾದ ಮತ್ತೊಂದು ಜ್ಞಾಪಕಪತ್ರ ಕಳಿಸಿದೆ. ಇಲ್ಲೆಲ್ಲ ನನ್ನನ್ನು ಕೈಹಿಡಿದು ದಾರಿ ನಡೆಸಿದ ಸೂತ್ರವೆಂದರೆ ಪರಧರ್ಮೋಭಯಾವಹಃ. ಇದರ ಪೂರ್ವಾರ್ಧವನ್ನು (ಸ್ವಧರ್ಮೇ ನಿಧನಂ ಶ್ರೇಯಃ) ನಾನು ಅನುಷ್ಠಾನಿಸಿದ್ದೆನೋ ಇಲ್ಲವೋ. ಆದರೆ ಈ ಪ್ರಾಯದಲ್ಲಿ (೩೭) ಪರಧರ್ಮಾವಲಂಬನೆ ಬೇಡವೆಂದು ನಿರ್ಧರಿಸಿದೆ. ಅಧಿಕಾರದ ಆಸೆ ನನಗಿಲ್ಲ. ಕೊಡಗು ಸರಕಾರವನ್ನು ಸೇರಿದಾಗ (೧೯೫೩) ನನಗೆ ಅಧಿಕ ಸಂಬಳ ಭತ್ಯ ದೊರೆತದ್ದರಿಂದ ನನ್ನ ಸರಾಸರಿ ಉತ್ಪತ್ತಿ ಹಾಗೂ ಸ್ವಂತ ಮನೆ ಸ್ವಂತ ಊರು ಇವುಗಳಿಂದ ದೊರೆಯುವ ಸೇವೆಯ ಬೆಲೆ ತಿಂಗಳೊಂದರ ರೂಪಾಯಿ ೭೦೦ಕ್ಕೆ ಕಡಿಮೆ ಇರಲಿಲ್ಲ. ಊರಲ್ಲದ ಊರಿಗೆ ಹೋಗಿ ಪಾಠ ಪ್ರವಚನ ಓದು ಇವನ್ನು ನಿಲ್ಲಿಸಿ ೬೦೦ ರೂಪಾಯಿಯ ಕೊಡುಗೆಗೆ ಸಲಾಂಮಾಲೇಕು ಮಾಡುವುದೇಕೆ ? ಇನ್ನು ದೇಶಸೇವೆ. ಮಿಲಿಟೆರಿ ಪರಿಸರಕ್ಕೆ ಹೋಗಿ ಅಲ್ಲಿಯ ಕೆಲಸಕ್ಕೆ ಶಿಕ್ಷಣ ಪಡೆಯದ ನಾನು ಸಾಧಿಸುವುದು ದೇಶಸೇವೆಯನ್ನಲ್ಲ, ಎರಡು ವಿಧವಾದ ದೇಶನಷ್ಟಗಳನ್ನು. ಮೊದಲನೆಯದು, ನನ್ನ ಅಪಕ್ವ ಶಿಕ್ಷಣದಿಂದ ಆ ಕ್ಷೇತ್ರದಲ್ಲಿ ಉಂಟಾಗುವ ನಷ್ಟ ; ಎರಡನೆಯದು, ನನ್ನ ಪ್ರಮುಖ ವೃತ್ತಿ ಮತ್ತು ಇದರಲ್ಲಿ ಈ ೧೭ ವರ್ಷಗಳ ಕಾಲ ಗಳಿಸಿದ ಅನುಭವಗಳ ಉಪಯೋಗ ದೇಶಕ್ಕೆ ದೊರೆಯದಿರುವ ನಷ್ಟ.

ಈ ನಿರ್ಧಾರ ತಳೆದ ಮೇಲೆ ನನಗೆ ಯಾವ ಚಿಂತೆಯೂ ಇರಲಿಲ್ಲ.

ಆದರೆ ಜನವರಿ ೧೯೬೩ರಲ್ಲಿ ಬೆಂಗಳೂರಿನ ಎನ್‌ಸಿಸಿ ಪ್ರಧಾನ ಕಛೇರಿಯಿಂದ ಖುದ್ದು ಒಂದು ವೈಯಕ್ತಿಕ ಪತ್ರ ನನಗೆ ಬಂದಿತು. ಅದರ ಒಕ್ಕಣೆ ಹೀಗಿತ್ತು :

1 Your applications for discharge from NCC have been received from Officer Commanding, Coorg Indep Coy NCC.

2 You will realize at this juncture that it is not possible to accept your resignation when we need the services of all experienced Officers like you. I will be very happy to see you in my

Office at any time during your visit to Bangalore when your difficulties will be sorted out. I strongly racommend that you should now apply for the Wholetime NCC Officers' appointment which I am sure will benefit you at a long run.

“ಇದನ್ನು ಎನ್‌ಸಿಸಿ ಡೈರೆಕ್ಟರರ ಪರವಾಗಿ ಮೇಜರ್ ಎಂ.ಎಸ್. ಮಾಸ್ಟರ್ಸ್ ಎನ್ನುವ ಆಫಿಸರರು ರುಜು ಮಾಡಿದ್ದರು.

ಜನವರಿ ೧೯ರಂದು ಬಂದ ಈ ಕಾಗದಕ್ಕೆ ೨೧ರಂದು ಒಂದು ದೀರ್ಘ ವಿವರಣಾತ್ಮಕ ಉತ್ತರ ಬರೆದೆ,

1 I acknowledge the receipt of your adovequoted letter. I am thankful to you for the good opinion you have of me.

2 I request you not to misunderstand the stand I have taken in submitting my resignation. I am as patriotic as any other good Indian is, and by my submitting the resignation to the NCC Commission I am not trying to run away from my duties.

3 In recent months I have lost all interest in the NCC. Keeping such an Officer against his inclination will not be in the best interests of the NCC movement.

4 My main work as a Lecturer in Mathematics in the College has increased. Being a senior member of the Staff I have to shoulder many heavy responsibilities in the College. In doing so my attention to the NCC (where I am the seniormost Officer next to the Officer Commanding) cannot be as concentrated as it should be. I am not in a position to allow my main work to suffer on account of the NCC. In the result NCC work also will suffer.

5 I am the Honorary Secretary (the executive head) of the Government College Cooperative Stores Limited Mercara, the best students' cooperative stores and one of the best business houses in the Mysore State. The free job (which I have taken on me as a hobby) I am doing is of my liking and it requires all my spare time and energy. Thus my time from 0830 hours to 1900 hours every day (including Sundays and holidays) is fully and usefully occupied. It is not possible for me now to spare any time for the NCC.

6 On the domestic side I had to face repeated calamities in recent months. To set up the broken home of a close and dear relative of mine I have to spend some time every day.

7 In these days of quick decisions and immediate implemen-

tation of important policy matters in the NCC I am convinced that my continuance in the NCC will not be useful.

Under these circumstances stated above I request you to accept my resignation and relieve me of all NCC duties and responsibilities with effect from the afternoon of 31 March 1963 as already requested.

ಈ ಮೇಜರ್ ಮಾಸ್ಟರ್ಸ್ ಎಂಬವರು ಯಾರು ? ಇವರಿಗೇಕೆ ನನ್ನ ವಿಚಾರದಲ್ಲಿ ಅನುಕಂಪ ? ಇವರು ಅಷ್ಟೊಂದು ಆಸಕ್ತಿ ತಳೆದು ಪ್ರೀತಿಪೂರ್ವಕ ಕಾಗದ ಬರೆದದ್ದಕ್ಕೆ ನನ್ನ ಉತ್ತರ ವಿನಯವಂತಿಕೆಯಿಂದ ಕೂಡಿದ್ದರೂ ನಾನು ತಳೆದಿದ್ದ ಮೂಲ ಧೋರಣೆಯಿಂದ ವಿಚಲಿತವಾಗಿರಲಿಲ್ಲ. ಹೀಗೆ ಸರ್ವವಿಧದಿಂದಲೂ ನಾನು ಅದುವರೆಗೆ ಪ್ರೀತಿಯಿಂದ ಸೇವಿಸಿದ್ದ ಸಂಸ್ಥೆಯಿಂದ ದೂರಹೋಗಬೇಕೆಂದು ಪ್ರಯತ್ನಿಸಿದೆ. ಆದರೆ ಎನ್‌ಸಿಸಿ ನನ್ನನ್ನು ಬಿಡಲಿಲ್ಲ. ಮಾನಸಗಂಗೋತ್ರಿಗೆ ಒಳದಾರಿ ಇಲ್ಲ ?

ಆಂತರಿಕ ವಿರಸವೀಗ ದಡ್ಡುಗಟ್ಟಿ ಸ್ಥಗಿತಗೊಂಡಿತ್ತು. ಬೆಂಗಳೂರಿನ ಪತ್ರ, ಅದಕ್ಕೆ ನನ್ನ ಉತ್ತರ ಇವುಗಳಿಂದ ಓಸಿ ಸಾಹೇಬರಿಗೆ ಇವನೊಬ್ಬ ವಿಚಿತ್ರಪ್ರಾಣಿ ಎಂದೆನ್ನಿಸಿ ನನ್ನ ಗೊಡವೆಗೆ ಬರಲಿಲ್ಲ. ಫೆಬ್ರುವರಿ ವೇಳೆಗೆ ಅವರನ್ನು ಮಂಗಳೂರಿಗೆ ವರ್ಗಾಯಿಸುವ ಹಾಗೂ ಯೂನಿಟ್ಟಿನ ಅಧಿಕಾರವನ್ನು ನನಗೆ ನೀಡುವ ಆಜ್ಞೆ ಬಂದಿತು. ನನ್ನ ರಾಜೀನಾಮೆ ಅಂಗೀಕಾರವಾಗುವ ವರೆಗೆ ಬರುವ (ತುರ್ತು ಪರಿಸ್ಥಿತಿಯ ದಿವಸಗಳಷ್ಟೆ) ಎಲ್ಲ ಮಿಲಿಟರಿ ಆಜ್ಞೆಗಳನ್ನೂ ಕರಾರುವಾಕ್ಕಾಗಿ ಪಾಲಿಸಬೇಕಾದದ್ದು ಶಿಸ್ತು, ಧರ್ಮ. ಮೇಸನ್ನರು ಮಂಗಳೂರಿಗೆ ಹೋಗುವ ಮುನ್ನ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಒಂದು ವಿದಾಯಕ ಕೂಟವನ್ನು ಏರ್ಪಡಿಸಿದೆ. ಸಂಸ್ಥೆಯ ದೃಷ್ಟಿಯಿಂದ ನಡೆಯಬೇಕಾಗಿದ್ದ ಅನಿವಾರ್ಯ ವಿಧಿ ಎಂಬ ಭಾವವೇ ಇದರಲ್ಲಿ ಪ್ರಧಾನ. ಆ ಔಪಚಾರಿಕ ಸಭೆಯಲ್ಲಿ ಅವರು ಕಾಲೇಜನ್ನೂ ಹುಡುಗರನ್ನೂ ಹೀನೈಸುವಂಥ ಮಾತಾಡಿದ್ದು ಅನುಚಿತ ಎಂದು ನಮಗೆಲ್ಲರಿಗೂ ಅನ್ನಿಸಿತು.

I am fully alive to the difficulties facing you in finding a suitable substitute to take up the responsibilities here. I will accept the work and dischage it with my full force until you are able to find a suitable substitute ಎಂದು ಮುಂತಾಗಿ ಬೆಂಗಳೂರಿನ ಪ್ರಧಾನ ಕಛೇರಿಗೆ ಪತ್ರ ಬರೆದ.

ಫೆಬ್ರುವರಿ ತಿಂಗಳ ಕೊನೆಯ ವಾರದಿಂದ ನಾನು ನಮ್ಮ ಯೂನಿಟ್ಟಿನ ತಾತ್ಕಾಲಿಕ ಓಸಿ ಆಗಿ ನೇಮಕಗೊಂಡೆ. ಖಾಯಂ ಓಸಿ ಎಂದು ಬರುವರೋ ಯಾರು ಬರುವರೋ ಅಲ್ಲಿವರೆಗೂ ನಾನು ಮುಂದುವರಿಯಬೇಕು. ಬೇಸಗೆ ರಜೆ ಮುಗಿಯುವ ಮೊದಲು ಅವರು ಬರುವುದು ಖಂಡಿತ ಎಂದು ನಂಬಿ ಪ್ರತಿ ಎರಡು ವಾರಕ್ಕೊಮ್ಮೆ ಜ್ಞಾಪಕಪತ್ರಗಳನ್ನು (ನನ್ನ ಬಿಡುಗಡೆಯನ್ನು ಕುರಿತು) ಕಳಿಸುತ್ತ ಮುಂದುವರಿಸಿದೆ.

ಕಡಿಯುದಿದ್ದ ಹೊಕ್ಕುಳ ಬಳ್ಳಿ

ದಿವಸಗಳು ಉರುಳಿದಂತೆ ಕಾಲೇಜು ಪಾಠಗಳು ಮುಗಿದುವು. ಎನ್‌ಸಿಸಿ ಕೆಲಸ ಕಷ್ಟವಾಗಲಿಲ್ಲ. ಮನೆಯ ದುಃಖ ಗಾಯಗಳು ಮಾಯಲಾರಂಭಿಸಿದುವು—ಜೀವನದ ಹಸುರಿನ ಉಳಿಯಬೇಕೆನ್ನುವ ಚೈತನ್ಯ ಅಗಾಧವಾದದ್ದು. ಆಗ ಈಗ ಮನಸ್ಸಿನ ಮುಂದೆ ಮಿಡಿದು ಮಾಯವಾಗುತ್ತಿದ್ದ ಪ್ರಶ್ನೆ—ನಾನು ಎನ್‌ಸಿಸಿಯನ್ನು ಬಿಡಬೇಕೆಂದು ನಿರ್ಧರಿಸಿದ್ದು ಒಂದು ದುಷ್ಟ ಮುಹೂರ್ತದ ವೇದನಾಯುಕ್ತ ಅನುಭವ ಉದ್ವೇಗದಿಂದಲೇ ಅಥವಾ ಒಂದು ಸ್ಪಷ್ಟ ತಾತ್ತ್ವಿಕ ಧೋರಣೆಯಿಂದಲೇ ? ಹಿಂದಿನ ಅನುಭವಗಳನ್ನು ಮೆಲುಕು ಹಾಕಿದಾಗ ಎರಡನೆಯ ನಿಲವಿಗೂ ಆಯಾ ದಿವಸದ ಕಾರ್ಯ ಸಂತೃಪ್ತಿಯನ್ನು ಅವಲೋಕಿಸಿದಾಗ ಮೊದಲನೆಯ ಪಾರಕ್ಕೂ ಸಮರ್ಥನೆಗಳು ದೊರೆತುವು. ಇದೇ ಅವಧಿಯಲ್ಲಿ ಮಡಿಕೇರಿಯನ್ನು ಹೇಗಾದರೂ ತೊರೆದುಬಿಡಬೇಕೆಂಬ ಭಾವನೆ ಪ್ರಬಲವಾಗುತ್ತಿತ್ತು—ಒಂಬತ್ತು ವರ್ಷ ಆ ಊರಿನಲ್ಲಿ ಜಾಂಡ ಹೊಡೆದು ಸಾಧ್ಯವಿದ್ದಷ್ಟು ಹಾರಾಟ ನಡೆಸಿ ಮುಗಿದಿದೆ ; ಕಾಲೇಜಿನ ಒಳಗೆ ವಿದ್ಯಾರ್ಥಿಗಳಿಗೆ ಲೆಕ್ಕ ಕಲಿಸಿ ಕಲಿಸಿ ನಾನು ಬೌದ್ಧಿಕವಾಗಿ ಕನಿಷ್ಠ ಮಟ್ಟಕ್ಕೆ ಇಳಿದಿದ್ದೆ. ಇನ್ನು ಆ ವಿದ್ಯಾರ್ಥಿಗಳ ಶಿಸ್ತು ನೀತಿಗಳ ಮಟ್ಟವೂ ತಾಳಿಯಾಗದೇ ಪ್ರತಿದಿವಸವೂ ದುಗುಡದುಮ್ಮಾನಗಳಿಂದ ಹತಾಶನಾಗುತ್ತಿದ್ದೆ. ನೀತಿ ಶಿಸ್ತುಗಳ ವಿಚಾರ ನನ್ನ ನಿಲವು ನನಗೆ ಅಚಲ. ಆದರೆ ಬದಲಾದ, ಬದಲಾಗುತ್ತಿರುವ ಕಾಲದಲ್ಲಿ ಇಂಥ ಧೋರಣೆ ವಿಪತ್ತುಕಾರಿ. ಹೀಗೆ ಮನಸ್ಸಿಗೆ ಬಿಡಿಚಲು ಹಿಡಿದು ಹೋಗಿತ್ತು. ವರ್ಗವಾಗಿ ಹೊಸ ಪರಿಸರಕ್ಕೆ ಹೋದರೆ ಒಳ್ಳೆಯದು ಎಂದು ಭಾವಿಸಿದೆ. ಆದರೆ ಮಡಿಕೇರಿಯ ನನ್ನ ಸ್ಥಾನಕ್ಕೆ ಬರುವವರು ಯಾರು—ಇತರ ಎಲ್ಲ ಊರಿನ ಲೆಕ್ಚರರುಗಳೂ ಮಡಿಕೇರಿ ವಾಸವನ್ನು ನರಕವಾಸ ಎಂದು ಭಾವಿಸುತ್ತಿದ್ದರು. ಇನ್ನು ನಮ್ಮ ಸಹಕಾರ ಸಂಘ. ಲಕ್ಷಾಂತರ ರೂಪಾಯಿಗಳ ವ್ಯವಹಾರದ ಈ ಸಂಘ ಈಗ ದಕ್ಷ ಸಿಬ್ಬಂದಿಯಿಂದ ಪರಿಪುಷ್ಟವಾಗಿತ್ತು. ಅದರ ಒಂಬತ್ತು ವರ್ಷಗಳ ಜೀವಮಾನ ಕಾಲದಲ್ಲಿ ಅದು ಸಾಧಿಸಿದ ಸೇವೆ ಏರಿದ ಎತ್ತರ ಅಗಾಧವಾಗಿದ್ದುವು. ಆರ್ಥಿಕವಾಗಿ ವ್ಯಾವಹಾರಿಕವಾಗಿ ಇದು ಅತ್ಯುತ್ತಮ ಸ್ಥಿತಿಯಲ್ಲಿತ್ತು. ಮಟ್ಟಸದಾರಿಯಲ್ಲಿ ಟಾಪ್‌ಗೇರಿನಲ್ಲಿ ಧಾವಿಸುತ್ತಿರುವ ಕಿಂಗ್ ಬೆಂರ್ಝ್ ಲಾರಿಗೆ ಈ ಸಂಘವನ್ನು ಹೋಲಿಸುವುದು ನನಗೆ ಪ್ರಿಯವಾದ ಉಪಮೆ. ಇದರ ಪರಿಣಾಮವಾಗಿ ನನ್ನ ಹೊಣೆಗಾರಿಕೆ ಬಲು ಸಂಕೀರ್ಣವೂ ಸೂಕ್ಷ್ಮವೂ ಆಗಿತ್ತು. ಸಿಬ್ಬಂದಿ, ವ್ಯಾಪಾರ, ಗ್ರಾಹಕವರ್ಗ, ಆರ್ಥಿಕಸ್ಥಿತಿ ಎಲ್ಲವೂ ಏರಿದಂತೆ ನನ್ನ ಸ್ಥಾನವೂ ಏರಿತು—ವಿಶಾಲ ಪ್ರಪಂಚವನ್ನು ನೋಡಲು ಔನ್ನತ್ಯ ಅನುಮಾಡಿಕೊಡುವುದು. ಇತರರ ದೃಷ್ಟಿಯಲ್ಲಿ ಎತ್ತರ ಆಕರ್ಷಣೀಯ ಪೂಜಾರ್ಹ, ನಿಜ. ಆದರೆ ಅಲ್ಲಿ ಇರುವವನ ಸ್ಥಿತಿ ಏನು ? ಕಾಲ ಕೆಳಗಿನ ಅಪಾಯವನ್ನು ಅರಿತು ಎಚ್ಚರದಿಂದಿದ್ದರೆ ಸರಿ. ಇಲ್ಲವಾದರೆ ಆತ ಗುಂಡಿಗೆ ಬಿದ್ದಾಗ ಮೊದಲಿನ ಪ್ರಶಂಸಕರೇ ಏಕ್‌ದಂ ನಿಂದಕರಾಗುವ ಉಲ್ಟಾ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಮೇಲಾಗಿ ಸಂಘ ನನ್ನ ವೈಯಕ್ತಿಕ ಹೊಣೆಯಲ್ಲ ; ಹೊಟ್ಟೆಪಾಡಿನ ದಾರಿ ಅಲ್ಲ. ಆದ್ದರಿಂದ ಈಗ ಅದರ ಚಾಲಕತ್ವವನ್ನು ತೊರೆದು ಅನಾಮಿಕನಾಗುವುದು ಯೋಗ್ಯ ಎಂದು ಚಿಂತಿಸಿದೆ. ಮಡಿಕೇರಿ ಬಿಡದೇ ಇದು ಸಾಧ್ಯವಿಲ್ಲ.

ಯಾವ ಪ್ರಿನ್ಸಿಪಾಲರೂ ನನ್ನನ್ನು ಈ ಹೊಣೆಯಿಂದ ಮುಕ್ತ ಮಾಡಲಾರರು. ಯಾವ ಅಧ್ಯಾಪಕರೂ ಈ ಹೊಣೆ ಹೊರಲು ಮುಂದೆ ಬರಲಾರರು. ಏಪ್ರಿಲ್ ತಿಂಗಳತನಕವೂ ಯಾವ ಬದಲಾವಣೆಯೂ ಇಲ್ಲದೇ ಕಾಲ ಸಾಗಿತು. ಈ ಅವಧಿಯಲ್ಲಿ ನಿರ್ವಹಿಸಿದ ಒಂದು ಮಹಾಕಾರ್ಯವೆಂದರೆ ನನ್ನ ಗತ ಚಿಕ್ಕಪ್ಪನವರ ಮಗಳ ಮದುವೆ.

ಮೋಡ ಕವಿದಿದ್ದ ಕುಳಿಗಾಳಿ ತೀಡುತ್ತಿದ್ದ ಒಂದು ಅಪರಾಹ್ಣ. ನಾನು ಎನ್‌ಸಿಸಿ ಆಫೀಸಿನಲ್ಲಿ ಕಾಗದಪತ್ರಗಳನ್ನು ಪರಿಶೀಲಿಸುತ್ತಿದ್ದೆ. ಫೋನ್ ಕರೆ ಬಂತು.

"ನಾರಾಯಣರಾವ್ ಇಲ್ಲಿ" ಎಂದೆ.

"ಹಲೋ ಜೀಟಿ! ತಮ್ಮಯ್ಯ ಇಲ್ಲಿ. ಈಗಲೇ ಬರುತ್ತಿದ್ದೇನೆ ನಿಮ್ಮನ್ನು ನೋಡಲು ಇದ್ದೀರಷ್ಟೆ ?"

ಮೇಜರ್ ಎಂ. ಡಿ. ತಮ್ಮಯ್ಯ ಮಡಿಕೇರಿಗೆ (ಮಾವನ ಮನೆ) ರಜೆಯ ಮೇಲೆ ಬಂದಿದ್ದಾರೆ ; ನಮ್ಮ ಆಫೀಸಿಗೆ ಅವರು ಇಲ್ಲಿಂದ ತೆರಳಿದ ಮೇಲೆ ಪ್ರಥಮವಾಗಿ ಬರುತ್ತಿದ್ದಾರೆ. ನನಗೆ ಬಲು ಸಂಭ್ರಮ, ಉತ್ಸಾಹ. ಈ ಒಂದು ವರ್ಷದ ಕಹಿಯನ್ನು ಕೇಳಲು, ಕೇಳಿ ಅರ್ಥಮಾಡಲು, ಅರ್ಥ ಮಾಡಿ ಅನುಕಂಪ ಸೂಚಿಸಲು ಅವರಿಗಿಂತ ಹೆಚ್ಚು ಸಮರ್ಥ ಶ್ರೋತೃಗಳು ಬೇರೆ ಯಾರಿರುವರು ? ಬಂದವರೇ ಬ್ರೆನ್‌ಗನ್ ಗುಂಡುಗಳ ಸುರಿಮಳೆ ಅವ್ಯಾಹತವಾಗಿ ಸುರಿಸಲು ತೊಡಗಿದರು. ಆತ್ಮೀಯಂತೆಯು ಮತ್ತು ವಿಶ್ವಾಸದ ಕಾರಣವಾಗಿ ಅವರು ತಳೆದಿದ್ದ ಸಾತ್ತ್ವಿಕ ಕೋಪದ ಹಿನ್ನೆಲೆಯಲ್ಲಿ ಹೊರಟ ಮಾತಿನ ಸಾರಾಂಶವಿಷ್ಟು. ಬೆಂಗಳೂರಿನಲ್ಲಿ ಅವರು ಸಕಲ ವಿವರಗಳನ್ನೂ ತಿಳಿದಿದ್ದಾರೆ. ನಾನು ಬರೆಯದಿದ್ದ ಎಲ್ಲ ಕಾರಣಗಳೂ ಮೇಲಧಿಕಾರಿಗಳಿಗೆ ಗೊತ್ತಿವೆ. ಆದ್ದರಿಂದಲೇ ನನ್ನ ರಾಜಿನಾಮೆ ಅಂಗೀಕೃತವಾಗದೇ ಉಳಿದದ್ದು. ಈಗ ಪರಿಸ್ಥಿತಿ ಬದಲಾಗಿರುವುದರಿಂದ ನಾನು ಪೂರ್ಣಾವಧಿಯ ಕಮಿಷನ್ನಿಗೆ ಅರ್ಜಿ ಸಲ್ಲಿಸಲೇಬೇಕು ಮತ್ತು ಈ ಹೊಸ ಸಾಹಸದಲ್ಲಿ ಉದ್ಯುಕ್ತನಾಗಲೇಬೇಕು. ಆರ್ವಿಯ ಪರಿಸ್ಥಿತಿ, ಅದರ ಮುನ್ನೆಲೆಯಲ್ಲಿ ನಾನು ನಡೆಸಬೇಕಾದ ಕರ್ತವ್ಯ ಇವೆಲ್ಲವನ್ನು ಕುರಿತು ಅವರು ಆಡಿದ ಮಾತಿಗೆ ನಾನು ಎದುರು ಉತ್ತರ ಕೊಡಲು ಅಸಮರ್ಥನಾದೆ. ಒಂದೇ ಒಂದು ದುರ್ಬಲ ವಾದವನ್ನು (ಬಹುಶಃ ಹಿಮ್ಮೆಟ್ಟುತ್ತಿರುವ ನನ್ನ ನಿಲವನ್ನು ತಳ್ಳಿ ಹಿಡಿಯಲು ಬಳಸಿದ ಮುರುಕಲು ಹಂದರ) ಮಂಡಿಸಿದೆ "ತಿಳಿಯದ ಹೊಸ ವೃತ್ತಿಗೆ ಹೋಗಿ ನಾನು ಮಾಡುವುದೇನು ? ಇರುವ ವೃತ್ತಿಯೇ ಚೆನ್ನಾಗಿದೆ."

"ಅದನ್ನು ನೋಡಿ ಅಲ್ಲಿ ದುಡಿದು ಆಮೇಲೆ ಹೇಳಿ. ಆ ಕೆಲಸ ನಿಮಗೆ—ನಿಮ್ಮಂಥವರಿಗೆ—ಒಂದಿಷ್ಟೂ ತ್ರಾಸದಾಯಕವಾಗದು. ನೀವು ಹೋಗಲೇಬೇಕು."

ನನ್ನ ತೂಗುಯ್ಯಾಲೆಯ ಮನಕ್ಕೆ ತಮ್ಮಯ್ಯನವರ ಪ್ರಿಯವಾದ ಬಿರುಸಿನ ನುಡಿಗಳು ನೆಲೆ ನೀಡಿದುವು. ಬೆಂಗಳೂರಿಗೆ ಟ್ರಂಕ್‌ಫೋನ್ ಮಾಡಿದರು "ಈ ಆಫಿಸರನ್ನು ಒಪ್ಪಿಸಿದ್ದೇನೆ."

"ನಮಗೆ ಧೈರ್ಯವಿತ್ತು ನಿಮ್ಮ ಯಶಸ್ಸನ್ನು ಕುರಿತು. ಅವರಿಂದ ಅರ್ಜಿ ಕೂಡಲೇ ಕಳಿಸಿ" ಮೇಜರ್ ಮಾಸ್ಟರ್ಸ್ ಅವರಿಂದ ಬಂದ ಮಾತೆಂದು ತಮ್ಮಯ್ಯನವರು ಹೇಳಿದರು.

ರಾಜಿನಾಮೆ ಅರ್ಜಿಯ ವಾಪಸಾತಿ ಪತ್ರವನ್ನು ಅದೇ ನಾನು ಅದೇ ಸ್ವಹಸ್ತದಿಂದ ಬರೆದೆ, ದಸ್ಕತಿಸಿದೆ. ಪೂರ್ಣಾವಧಿ ಕಮಿಷನ್ ಹುದ್ದೆಗೆ ಅರ್ಜಿ ಭರ್ತಿ ಮಾಡಿದೆ. ಎರಡನ್ನೂ ಅಂದೇ—ತಮ್ಮಯ್ಯನವರು ಸುಮ್ಮನೆ ಬಿಡಬೇಕಲ್ಲ—ಬೆಂಗಳೂರಿಗೆ ರವಾನಿಸಿಯೂ ಆಯಿತು. ನನ್ನ ಈ ದೊಂಬರಾಟದ ನೀತಿ-ಅನೀತಿ, ಮನಸ್ಸಾಕ್ಷಿ-ಅಮನಸ್ಸಾಕ್ಷಿ ವಿಚಾರ ವಿವೇಚನೆ ಬಲುಕಾಲ ಮನಸ್ಸಿನಲ್ಲಿ ನಡೆಸಿದ್ದೆ. ಇದೇನಿದ್ದರೂ ವೈಯಕ್ತಿಕ ಪ್ರಶ್ನೆಯಾದ್ದರಿಂದ, ಬೇರೆ ಯಾವ ವ್ಯಕ್ತಿಗೂ ನನ್ನ ಈ ಬದಲಾವಣೆಯಿಂದ ದ್ರೋಹ ವಂಚನೆ ಆಗದಿರುವುದರಿಂದ, ಮತ್ತು ನೈತಿಕ ಅಪರಾಧ ಅಲ್ಲವಾದ್ದರಿಂದ ಈ ವಿಚಾರ ಇನ್ನು ಬೇಡವೆಂದು ಮರೆತೆ. ಈಗ (೧೯೭೧) ತೋರುತ್ತಿದೆ—ಎನ್‌ಸಿಸಿ ವಿಷಯದಲ್ಲಿ ನನಗಿದ್ದ ಒಲವಿನ ಹೊಕ್ಕುಳ ಬಳ್ಳಿ ಕಡಿದುಕೊಳ್ಳಲು ನಾನು ೧೯೬೯ರ ತನಕವೂ ಕಾಯಬೇಕಾಗಿತ್ತು: ಸುಪ್ತ ಮನಸ್ಸಿನ ಗುಪ್ತ ಕವಾಟದಲ್ಲಿ ಒಂದಿಷ್ಟು ಆಸೆ ಇದ್ದರೂ ತ್ಯಾಗ ಪೂರ್ಣವಲ್ಲ. ಮಾನಸಗಂಗೋತ್ರಿಗೆ ಒಳದಾರಿ ಖಂಡಿತ ಇಲ್ಲ!

ಖಡ್ಡಾ ಪೂರ್ಣವಾಯಿತು

ಈ ಮಧ್ಯೆ ನಮ್ಮ ಕೃಷ್ಣಯ್ಯನವರು ತೀವ್ರ ಅನಾರೋಗ್ಯ ಕಾರಣದಿಂದ—ಅವರಿಗೆ ಅಪೆಂಡಿಸೈಟಿಸ್ ವ್ಯಾಧಿ ಉಲ್ಬಣಗೊಂಡು ಬದುಕಿ ಉಳಿದದ್ದು ವಿಶೇಷ—ಎನ್‌ಸಿಸಿ ಚಟುವಟಿಕೆಗಳಿಂದ ದೀರ್ಘಕಾಲ ದೂರವಿದ್ದರು. ಇನ್ನು ಈ ತಾಪತ್ರಯ ಬೇಡವೆಂದೇ ಒಂದು ದಿವಸ ತೀರ್ಮಾನಿಸಿ ಅವರು ರಾಜಿನಾಮೆಯ ಪತ್ರವನ್ನು ಸಲ್ಲಿಸಿದ್ದರು. ವೈದ್ಯಕೀಯ ಶಿಫಾರಸನ್ನು ಇದು ಆಧರಿಸಿತ್ತು. ಆದರೆ ಅವರ ಅರ್ಜಿಗೆ ಕೂಡ ಬೆಂಗಳೂರಿನಿಂದ ಯಾವ ಉತ್ತರವೂ ಬಂದಿರಲಿಲ್ಲ. ತಮ್ಮಯ್ಯನವರ ಆಕಸ್ಮಾತ್ ಪ್ರವೇಶದಿಂದ ನನ್ನ ಪರಿಸ್ಥಿತಿಯಲ್ಲಿ ಉಂಟಾದ ವಿದ್ಯುತ್ ಕ್ಷೋಭೆಯಿಂದ ನವಕಾಂತಬಲ ಈ ಹಸಿ ಕಬ್ಬಿಣದಲ್ಲಿ ತಲೆದೋರಿತು. ನಾನು ಕೃಷ್ಣಯ್ಯನವರನ್ನು ನೋಡಿ ಅವರ ಅರ್ಜಿ ವಾಪಸಾತಿಗೆ ಸೂಚನೆ ನೀಡಿದೆ. ಆ ಮೂರು ತಿಂಗಳ ಅವಧಿಯಲ್ಲಿ ಅವರ ಆರೋಗ್ಯ ಉತ್ತಮಗೊಂಡಿತ್ತು. "ಕಾಲಾಯ ತಸ್ಮೈನಮಃ, ಎಲ್ಲವೂ ನಮ್ಮ ಒಳಿತಿಗೇ" ಎಂಬ ಮನೋಭಾವದ ಸಾತ್ವಿಕ ಶಿರೋಮಣಿ ಕೋಮಲ ಮನಸ್ಸಿನ ಕೃಷ್ಣಯ್ಯ ನನ್ನ ಆಗ್ರಹವನ್ನು ಮನ್ನಿಸಿದರು. ಅವರು ರಾಜಿನಾಮೆ ವಾಪಸಾತಿ ಅರ್ಜಿಯನ್ನೂ ಎನ್‌ಸಿಸಿ ಪೂರ್ಣಾವಧಿ ಕಮಿಷನ್ ಹುದ್ದೆಗೆ ಸಲ್ಲಿಸಬೇಕಾದ ಅರ್ಜಿಯನ್ನೂ ಪಡೆದು ಯುಕ್ತ ಶಿಫಾರಸು ಸಮೇತ ಬೆಂಗಳೂರಿಗೆ ಕಳಿಸಿದೆ. ಟ್ರಂಕ್ ಫೋನಿನಲ್ಲಿ ಮೇಜರ್ ಮಾಸ್ಟರ್ಸ್ ಅವರೊಡನೆ ಮಾತಾಡಿದಾಗ ನನ್ನ ಪ್ರಯತ್ನವನ್ನು ಮೆಚ್ಚಿದುದು ಮಾತ್ರವಲ್ಲ, ಜನಾರ್ದನ ಬಾಳಿಗರನ್ನೂ ಹಿಂದೆ ಪಡೆಯುವ ಪ್ರಯತ್ನ ಮಾಡಬೇಕೆಂದು ಸಹ ಸೂಚಿಸಿದರು. ಆದಷ್ಟು ಬೇಗ ನನ್ನನ್ನು ವೈಯಕ್ತಿಕವಾಗಿ ನೋಡುವ ತಮ್ಮ ಹಂಬಲ ವ್ಯಕ್ತಪಡಿಸಿದರು. ಅವರ ಮಾತು ಬಲು ಆತ್ಮೀಯ. ಬಾಳಿಗರು ಮಾತ್ರ ನಮ್ಮ ಯಾವ ಕೋರಿಕೆಗೂ ಒಲಿಯಲಿಲ್ಲ "ಎನ್‌ಸಿಸಿ ಕೆಲಸ ಏನಿದ್ದರೂ ಮಾಡಿಕೊಡುತ್ತೇನೆ, ಆದರೆ ಕಮಿಷನ್ ಆಗಲೀ ಅದರಿಂದ ದೊರೆಯುವ ಲಾಭವಾಗಲೀ ನನಗೆ ಬೇಡ" ಇದು ಅವರ ಖಚಿತ ನಿಲುವು.

ಎಸ್.ಪಿ. ವಾಳ್ವೇಕರ್ ಎಂಬವರು ಒಂದು ವರ್ಷದ ಹಿಂದೆ ನಮ್ಮ ಕಾಲೇಜಿಗೆ ರಸಾಯನ

ವಿಜ್ಞಾನದ ಪ್ರಾಧ್ಯಾಪಕರಾಗಿ ಗುಲ್ಬರ್ಗಾದಿಂದ ವರ್ಗವಾಗಿ ಬಂದಿದ್ದರು. ಅವರು ೧೯೪೮-೪೯ರಿಂದಲೇ ಎನ್‌ಸಿಸಿಯಲ್ಲಿದ್ದ ಬಲು ಹಿರಿಯ ಮಟ್ಟದ ಆಫಿಸರ್. ೧೯೬೩ ಜನವರಿ ತಿಂಗಳಲ್ಲಿ ಎನ್‌ಸಿಸಿ ಡೈರೆಕ್ಟರರು ಒಮ್ಮೆ ನಮ್ಮ ಕಾಲೇಜಿಗೆ ಭೇಟಿ ನೀಡಿದಾಗ ವಾಳ್ವೇಕರರ ವಿಚಾರ ಅವರಿಗೂ ಅವರೊಡನಿದ್ದ ಮೇಜರ್ ಬಾಬು ಅವರಿಗೂ (ಇಬ ಳೂರು ಕ್ಯಾಂಪಿನಿಂದ ನನ್ನ ಮಿತ್ರರು) ಹೇಳಿದೆ. "ಅದನ್ನು ಬಿಟ್ಟಾಯಿತು. ಈಗ ಅದರಲ್ಲಿ ನನಗೆ ಯಾವ ಆಸಕ್ತಿಯೂ ಇಲ್ಲ.ಆದ್ದರಿಂದ ಸುಮ್ಮನಿರಿ"ಎಂದು ವಾಳ್ವೇಕರರು ನನಗೆಹೇಳಿದ್ದರೂ ನಾನು ಮಾತ್ರ ಅಧಿಕ ಪ್ರಸಂಗ ಎಸಗಿಯೇ ಬಿಟ್ಟಿದ್ದೆ. ಬಾಬು ಅವರು ವಾಳ್ವೇಕರರೊಡನೆ ಸ್ವಲ್ಪ ಹೊತ್ತು ಮಾತಾಡಿ ಅವರ ಎನ್‌ಸಿಸಿ ಅನುಭವಗಳ ವಿವರ ಪಡೆದು "ಪೂರ್ಣಾವಧಿಯ ಕಮಿಷನ್ನಿಗೆ ಸೇರಲೇಬೇಕು" ಎಂದು ವಿನಂತಿಸಿದರು. ಡೈರೆಕ್ಟರರು ಅವರನ್ನು ಪ್ರತ್ಯೇಕವಾಗಿ ನೋಡಿ ಅದೇ ಇಚ್ಛೆಯನ್ನು ವ್ಯಕ್ತಪಡಿಸಿದರು.

ನಾನು ಹೇಗೂ ಹೋಗುವವನು. ವಾಳ್ವೇಕರರಾದರೂ ಎನ್‌ಸಿಸಿಗೆ ದಕ್ಕಲಿ ಎಂಬುದು ನನ್ನ ಭಾವನೆ. ಹೀಗಾಗಿ ಅವರನ್ನು ಒತ್ತಾಯಪಡಿಸಿ ಎಲ್ಲ ಅರ್ಜಿಗಳನ್ನೂ ಭರ್ತಿ ಮಾಡಿ ಬೆಂಗಳೂರಿಗೆ ಕಳಿಸುವ ಕಾರ್ಯ ಪೂರೈಸಿದೆ. ಮುಂದೆ ಸ್ವಲ್ಪ ದಿವಸಗಳಲ್ಲೇ ಅವರಿಗೆ ಎನ್‌ಸಿಸಿ ಕಮಿಷನ್ ಬಂತು. ಇದರ ಪ್ರಕಾರ ಅವರೇ ನನಗಿಂತ ಸೀನಿಯರ್ ಆದರು. ಆರ್ಮಿ ನಿಯಮಾನುಸಾರ ಆಗ ವಾಳ್ವೇಕರರು ನಮ್ಮ ಯೂನಿಟ್ಟಿನ ಓಸಿ ಆಗಬೇಕು. ಇದನ್ನು ನಾನು ಅವರ ಗಮನಕ್ಕೆ ತಂದು ಯುಕ್ತ ಕ್ರಮವನ್ನು ಬೆಂಗಳೂರಿಗೆ ಬರೆದು ಕೈಗೊಳ್ಳುತ್ತೇನೆ ಎಂದೆ. ಆದರೆ ಈ ಮಹಾನುಭಾವ ಬಲು ದೊಡ್ಡತನದಿಂದ ವರ್ತಿಸಿ ಹೀಗೆ ಹೇಳಿದರು "ಈ ಯೂನಿಟ್ಟು ನಿಮ್ಮದು. ನೀವಿಲ್ಲದ್ದೀರಿ. ನೀವೇ ಮುಂದುವರಿಯಬೇಕು. ನಾನು ಈಗ ಕಮಿಷನ್ ಪಡೆದಿರುವುದು ಬೇರೆ ಉದ್ದೇಶದಿಂದ. ಆದ್ದರಿಂದ ಇಲ್ಲಿ ಏನೂ ಬದಲಾವಣೆ ಬೇಡ." ಆರ್ಥಿಕಲಾಭ, ಅಧಿಕಾರ, ಕೀರ್ತಿ ಎಲ್ಲವೂ ನಿಯಮಾನುಸಾರ ಬರಲೇಬೇಕಾದಾಗ, ಬರುವಾಗ ಇಂಥ ಸ್ಪಷ್ಟ ಹಾಗೂ ನಿಃಸ್ವಾರ್ಥ ಮನೋಭಾವದ ಹಿನ್ನೆಲೆಯ ಸಂಸ್ಕೃತಿ ಅತಿ ಉನ್ನತ ದರ್ಜೆಯದು.

ಜೂನ್ ತಿಂಗಳಲ್ಲಿ ನಮಗೆ ಮೂವರಿಗೂ—ಕೃಷ್ಣಯ್ಯ, ವಾಳ್ವೇಕರ್, ನಾನು— ಬೆಂಗಳೂರಿನಲ್ಲಿ ಪೂರ್ಣಾವಧಿಯ ಕಮಿಷನ್ ನೀಡಿಕೆಯ ಬಾಬ್ತು ಆಯ್ಕೆ ಭೇಟಿ ಏರ್ಪಾಡಾಯಿತು. ಬೆಂಗಳೂರಿಗೆ ಹೋದೊಡನೆ ಮೊದಲು ನೋಡಿದ್ದು ಮೇಜರ್ ಮಾಸ್ಟರ್ಸ್‌ರನ್ನು. ಅವರು ಆತ್ಮೀಯವಾಗಿ ಒಂದು ವಿಚಾರ ಹೇಳಿದರು "ಮೇಜರ್ ಮುತ್ತಪ್ಪ, ಮೇಜರ್ ತಮ್ಮಯ್ಯನವರಿಂದ ನಿಮ್ಮ ಕತೆ ಎಲ್ಲವೂ ನನಗೆ ತಿಳಿದಿದೆ. ಇಲ್ಲಿಯ ದಫ್ತರಗಳಲ್ಲಿ ನಿಮ್ಮ ಸಾಮರ್ಥ್ಯದ ವರದಿಗಳಿವೆ. ಈಗ ಹಿಂದಿನದನ್ನು ಮರೆತುಬಿಡಿ. ನಿಮ್ಮಿಂದ ಇನ್ನೂ ದೊಡ್ಡ ಕೆಲಸಗಳಾಗಬೇಕಾಗಿದೆ. ಸಂತೋಷವಾಗಿರಿ." ಔಪಚಾರಿಕ ಆಯ್ಕೆ ಭೇಟಿ ಮುಗಿಯಿತು. ನಮ್ಮನ್ನು ಆರಿಸಿದರು. ನಾವೆಲ್ಲರೂ ಮಡಿಕೇರಿಗೆ ಮರಳಿದೆವು.

ಮಡಿಕೇರಿಯಿಂದ ಹೊರವಂಟೆ

ಜೂನ್ ಆರನೆಯ ಎಂದಿನಂತೆ ಕಾಲೇಜು ತರಗತಿಗಳು ಪ್ರಾರಂಭವಾದುವು. ಪಾಠ ಪ್ರವಚನಗಳನ್ನೂ ಎನ್‌ಸಿಸಿ (ಈಗ ಕಡ್ಡಾಯಗೊಳಿಸಲ್ಪಟ್ಟಿತ್ತು) ಆಯ್ಕೆಗಳನ್ನೂ ಕ್ರಮಬದ್ಧ

ವಾಗಿ ತೊಡಗಿದೆವು. ಎಂದಿನಂತೆ ಒಂದು ಬೆಳಗ್ಗೆ ನಾನು ಎನ್‌ಸಿಸಿ ಕಛೇರಿಗೆ ಹೋದಾಗ ಅಲ್ಲಿ ಆರ್ಮಿ ಸಮವಸ್ತ್ರದ ಮತ್ತು ಮೇಜರ್ ಭುಜಕೀರ್ತಿ ಧರಿಸಿದ ಓರ್ವ ವ್ಯಕ್ತಿ ಓಸಿ ಕುರ್ಚಿಯ ಮೇಲೆ ಕುಳಿತಿದ್ದುದನ್ನು ಕಂಡೆ.

"ನೀವೋ ಕ್ಯಾಪ್ಟನ್ ರಾವ್ ! ಇಲ್ಲಿದೆ ನೋಡಿ ಕೇಂದ್ರಸರಕಾರದ ಹುಕುಂ" ಎಂದು ಅಬ್ಬರದಿಂದ ನುಡಿದದ್ದನ್ನು ನಾನು ಲೆಕ್ಕಿಸದೆ "ನೀವು ಯಾರೆಂಬುದು ನನಗೆ ತಿಳಿಯದು. ಆದರೆ ಮೊದಲು ಆ ಸ್ಥಾನದಿಂದ ಎದ್ದು ಈಚೆಗೆ ಬನ್ನಿ" ಎಂದು ತೀಕ್ಷ್ಣವಾಗಿ ಹೇಳಿದೆ.

ಅಪ್ರತಿಭನಾದ ಆಫಿಸರ್ "ನಾನು ಕೇಂದ್ರ ಸರಕಾರದ ಹುಕುಂ ಈ ಪ್ರಕಾರ ಈ ಯೂನಿಟ್ಟಿನ ಓಸಿ ಆಗಿ ನೇಮಕಗೊಂಡಿದ್ದೇನೆ. ಹುಕುಂ ನೋಡಿ" ಎಂದು ಒಂದು ಕಾಗದ ವನ್ನು ನನಗೆ ನೀಡಿದರು.

"ಮೊದಲು ಸ್ಥಾನವನ್ನು ತಾವು ಬಿಟ್ಟುಕೊಡೋಣವಾಗಲಿ. ಮತ್ತೆ ಉಳಿದೆಲ್ಲ ಮಾತು" ನಾನೆಂದೆ.

ಅವರು ಎದ್ದು ಎದುರು ಕುರ್ಚಿಯ ಮೇಲೆ ಕುಳಿತರು. ನಾನು ಓಸಿ ಸೀಟಿನ ಮೇಲೆ ಮಂಡಿಸಿದೆ. ಅವರು ಕೊಟ್ಟ ಕಾಗದ ತೆಗೆದುಕೊಂಡು ಓದಿ ನೋಡಿ "ಈ ಹುಕುಂ ಪತ್ರ ವನ್ನು ಒಪ್ಪುತ್ತೇನೆ. ಆದರೆ ಇದು ನಿಮಗೆ ಬಂದಿರುವ ಪತ್ರ. ನನಗೆ ಅಧಿಕೃತವಾಗಿ ಬರದೇ ನಾನು ಯೂನಿಟ್ಟಿನ ಹೊಣೆ ನಿಮಗೆ ವಹಿಸಿಕೊಡುವುದು ಹೇಗೆ ಸಾಧ್ಯ ? ನೀವೇ ಹೇಳಿ."

"ನಿಮಗೆ ಬರದಿದ್ದರೆ ಅದು ನನ್ನ ತಪ್ಪೇ ? ಅದು ತನಕವೂ ನನಗೆ ಸಂಬಳ ಭತ್ಯ ಖೋತಾ ಆಗುವುದು ನ್ಯಾಯವೇ ?"

"ಸ್ವಾಮೀ ! ನಿಮಗೆ ತೊಂದರೆ ಆಗಬೇಕೆಂದಾಗಲೀ ಇನ್ನೆರಡು ದಿವಸ ನಾನು ಇದೇ ಹುದ್ದೆಯಲ್ಲಿ ಮುಂದುವರಿದು ಲಾಭ ಗಳಿಸಬೇಕೆಂದಾಗಲೀ ನನಗೆ ಆಸೆ ಇಲ್ಲ. ಆದರೆ ನೀವೇ ಹೇಳಿ—ನನಗೆ ಅಧಿಕೃತ ಆಜ್ಞೆ ಬಾರದೇ ಸರಕಾರದ ಈ ಕಛೇರಿಯನ್ನು ಹೇಗೆ ನಿಮಗೆ ಒಪ್ಪಿಸಲಿ ?"

"ಹಾಗಾದರೆ ನೀವು ಕೇಂದ್ರ ಸರಕಾರದ ಹುಕುಂನ್ನು ಓರ್ವ ಆರ್ಮಿ ಆಫಿಸರ್ ಸ್ವತಃ ತಂದಿರುವುದನ್ನು ಮನ್ನಿಸುವುದಿಲ್ಲ ?"

"ಅಂಥ ಅಪಾರ್ಥ ಇಲ್ಲಿ ಅನಾವಶ್ಯಕ. ನಾನೀಗ ಒಂದು ಕೆಲಸ ಮಾಡುತ್ತೇನೆ— ಬೆಂಗಳೂರಿಗೆ ಟ್ರಂಕ್ ಟೆಲಿಫೋನ್ ಮಾಡಿ ವಿವರ ಕೇಳುತ್ತೇನೆ."

ಬೆಂಗಳೂರಿನಿಂದ ಸ್ಪಷ್ಟೀಕರಣ ಬಂತು—ತಮ್ಮ ಆಫೀಸಿಗೂ ಅಂಥ ಯಾವ ವಿಚಾರವೂ ತಿಳಿದಿಲ್ಲ ; ನಕಲೀ ಆಫಿಸರುಗಳು ಮೋಸ ಮಾಡಲು ಬರುವುದೂ ಉಂಟು ; ಆದ್ದರಿಂದ ತಮ್ಮಿಂದ ಲಿಖಿತ ಹುಕುಂ ಬರುವವರೆಗೆ ನಾನು ಏನೂ ಮಾಡಬಾರದು. ಇದನ್ನು ಎದು ರಿದ್ದ ಆರ್ಮಿ ಮೇಜರರಿಗೆ ಹೇಳಿದೆ. ಅವರು ಸಿಡಿಮಿಡಿಗೊಂಡು ಎದ್ದರು "ಹಾಗಾದರೆ ನಾನೆಂದು ಬರಬೇಕು ?"

"ನಿಮ್ಮ ಮನೆ ವಿಳಾಸ ಕೊಡಿ. ನನಗೆ ಎಂದು ಹುಕುಂ ಬರುವುದೋ ಆ ಕ್ಷಣವೇ ನಿಮಗೆ ಸೂಚನೆ ಕಳಿಸುತ್ತೇನೆ. ಇಲ್ಲ, ದಿನಕ್ಕೊಂದಾವರ್ತಿ ನನಗೆ ಫೋನ್ ಮಾಡಿ."

ಮೂರು ದಿವಸಗಳ ಅನಂತರ ಬೆಂಗಳೂರಿನಿಂದ ಅದೇ ಹುಕುಮಿನ ಪ್ರತಿಯೂ

ಬೆಂಗಳೂರಿನ ಕಛೇರಿಯ ವಿವರಣಾತ್ಮಕ ಪತ್ರವೂ ಬಂದುವು. ಹೊಸ ಸಾಹೇಬರಿಗೆ ವಿಚಾರ ತಿಳಿಸಿದೆ. ಅಂದು ಶುಭದಿವಸವಲ್ಲವಾದ್ದರಿಂದ (?) ಮಾರನೆಯ ಮುಂಜಾನೆ ತಾನು ಬರುವುದಾಗಿಯೂ ಎಲ್ಲವನ್ನು ಸಿದ್ಧಗೊಳಿಸಿಡಬೇಕಾಗಿಯೂ ಹೇಳಿಕಳಿಸಿದರು.

ಆ ದಿವಸ ಬಂದವರನ್ನು ನಾನು ಮುಂಬಾಗಿಲಿಗೆ ಹೋಗಿ ಸ್ವಾಗತಿಸಿದೆ. ಅವರಾಗಿಯೇ ನನ್ನ ಎದುರಿನ ಕುರ್ಚಿಯಲ್ಲಿ ಕುಳಿತರು. ಅಧಿಕೃತವಾಗಿ ಯೂನಿಟ್ಟನ್ನು ಅವರಿಗೆ ಒಪ್ಪಿಸಿದ ಒಡನೆಯೇ ನಾನು ಓಸಿ ಆಸನದಿಂದೆದ್ದು ಅವರನ್ನು ಅಲ್ಲಿಗೆ ಆಹ್ವಾನಿಸಿದೆ. ನನ್ನ ವರ್ತನೆಯನ್ನು ಅವರು ಒಪ್ಪಿದರು.

"ನಾನು ಮರಾಠಾ ರೆಜಿಮೆಂಟಿನವನು. ಭಾರತದೇಶದಲ್ಲಿ ಅತ್ಯಂತ ಉತ್ಕೃಷ್ಟವಾದ ಪಟಾಲಮ್ ನನ್ನದು. ಎಂದೂ ಎರಡನೆಯ ದರ್ಜೆಯ ಪಟಾಲಮಿನ ಮುಂದಾಳಾದವನು ನಾನಲ್ಲ. ನಾನು ಬಂದರೆ ಎಂದರೆ ಇಡೀ ಪಟಾಲಾಂ ಹೆದರಿ ನಡುಗುತ್ತಿತ್ತು. ನನ್ನ ಇಡೀ ಜೀವನ, ಯೋಜನೆ ಎಲ್ಲವೂ ಶಿಸ್ತು ಕ್ರಮಬದ್ಧ. ಆದ್ದರಿಂದ ಈ ಯೂನಿಟ್ ಇದುವರೆಗಿನಂತಲ್ಲ, ಇನ್ನು ಮುಂದೆ ಅತಿ ಉತ್ಕೃಷ್ಟವಾಗುತ್ತದೆ."

"ಭವಿಷ್ಯ ಅದನ್ನು ನಿರ್ಧರಿಸುತ್ತದೆ. ಹಾಗೆಯೇ ಆಗಲಿ" ನಾನೆಂದೆ.

"ಹಿಂದಿನವರು ಇಲ್ಲಿ ಏನೂ ಕೆಲಸ ಮಾಡಿದಂತೆ ತೋರಲಿಲ್ಲ."

"ನಿಮ್ಮ ಮುಂದಿನವರೂ ನಿಮ್ಮನ್ನು ಕುರಿತು ಹೀಗೆಯೇ ಆಡಿಯಾರೆಂದು ಮರೆಯಬೇಡಿ" ನನ್ನ ಪ್ರತಿ ಸವಾಲು.

"ಅದಿರಲಿ. ಇಲ್ಲಿಯ ಲೆಕ್ಕಪತ್ರ, ಸ್ಟೋರು, ಆರ್ಮರಿ ಎಲ್ಲವನ್ನೂ ನಾನು ಕೂಲಂಕಷವಾಗಿ ಪರಿಶೀಲಿಸಿ ಆಮೇಲೆಯೇ ನಿಮಗೆ ಪೂರ್ಣ ಬಿಡುಗಡೆ ರಶೀತಿ ನೀಡುವವನು."

"ಸರಿಯಾದ ಕ್ರಮ."

"ಎಲ್ಲವೂ ಕ್ರಮವಾಗಿವೆಯಷ್ಟೆ ?"

"ಯೂನಿಟ್ಟನ್ನು ತೆಗೆದುಕೊಳ್ಳುವ ನೀವು ಆದರೆ ಉಸ್ತುವಾರಿ ನೋಡಬೇಕಾದವರು. ನಾಳೆ ನಾನು ಈ ಊರಿನಿಂದಲೇ ಹೊರಗೆ ಹೋಗುವವನು, ಮತ್ತೆ ಸಂಶಯ ಬರಬಾರದು ನಿಮಗೆ."

"ಆಗಬಹುದು. ಇಂದು ಡಿ—ದಿವಸ. ಇಂದು ಆಫೀಸ್ ಕಾಗದ, ಫೈಲ್ ಮುಂತಾದವು: ಡಿ—೨, ೩ ದಿವಸಗಳು ಕ್ವಾರ್ಟರ್ ಮಾಸ್ಟರ್ ಸ್ಟೋರ್ಸ್ ; ಡಿ—೪ ದಿವಸ ವಾಹನಗಳು ; ಡಿ—೫ ಇತರ ಬಿಡಿ ಕೆಲಸಗಳು. ಈ ರೀತಿ ಕಾರ್ಯಕ್ರಮ ನಡೆಸಬೇಕು. ನಿಮಗೆ ಸಾಧ್ಯವಾದೀತೇ ?"

"ನನಗೇನು ಕೆಲಸ ಇದರಲ್ಲಿ—ನಾನು ಸುಮ್ಮನೆ ಕುಳಿತಿರುತ್ತೇನೆ. ನೀವು ಬಿಡಿವಿವರ ಪರಿಶೀಲಿಸಿ ಮುಗಿಸಿ. ಕೊರತೆ ಇದ್ದರೆ ರಿಕಾರ್ಡ್ ಮಾಡಿ, ಕಾನೂನು ಪ್ರಕಾರ."

ಆ ಕೂಡಲೇ ನಮ್ಮ ಕಛೇರಿಯ ಎಲ್ಲ ಅಂಗಗಳನ್ನೂ ನೋಡಿ ಬಂದೆವು. ಮರು ದಿವಸ ಬೆಳಗ್ಗೆ ಬಂದವರೇ "ನಿಮ್ಮ ದಕ್ಷ ವ್ಯವಹಾರದಲ್ಲಿ ನಾನು ಏನನ್ನೂ ಪರಿಶೀಲಿಸುವ ಆವಶ್ಯಕತೆ ತೋರುತ್ತಿಲ್ಲ"

"ಅದು ಪೂರ್ಣವಾಗಿ ನಿಮ್ಮ ಹೊಣೆ. ನಾಳೆ ಯಾವ ಲಘು ಪ್ರಸ್ತಾವನೆಯೂ ನನ್ನ ಅಥವಾ ಯೂನಿಟ್ಟಿನ ವಿಚಾರವಾಗಿ ಬರಕೂಡದು" ನಾನೆಂದೆ.

ಮುಂದೆ ಎರಡುವಾರ ಮುಗಿಯುವ ಮೊದಲೇ ಹುಕುಂ ಬಂತು—ಬಳ್ಳಾರಿಗೆ ನನ್ನನ್ನು ಅಡ್ಮಿನಿಸ್ಟ್ರೇಟಿವ್ ಆಫಿಸರ್ ಆಗಿ, ಚಿತ್ರದುರ್ಗಕ್ಕೆ ಕೃಷ್ಣಯ್ಯನವರನ್ನು ಅಡ್ಮಿನಿಸ್ಟ್ರೇಟಿವ್ ಆಫಿಸರ್ ಆಗಿ, ಬಿಜಾಪುರಕ್ಕೆ ವಾಳ್ವೇಕರರನ್ನು ಓಸಿ ಆಗಿ ನೇಮಿಸಿದ್ದರು.

ಬಳ್ಳಾರಿಯಲ್ಲಿ ಬೀಡು ಬಿಟ್ಟೆ

ಸಂಸಾರವನ್ನು ಮಡಿಕೇರಿಯಲ್ಲಿ ಬಿಟ್ಟು ನಾನೊಬ್ಬನೇ ಬಳ್ಳಾರಿಗೆ ಹೊರಟೆ. ಜುಲೈ ೩೧ ರಂದು ಬೆಳಗ್ಗೆ ಮಡಿಕೇರಿ ಬಿಟ್ಟವನು ಆಗಸ್ಟ್ ೧ರ ಬೆಳಗ್ಗೆ ಸುಮಾರು ೧೦-೩೦ ಗಂಟೆಗೆ ಬಳ್ಳಾರಿ ರೈಲ್ವೆ ನಿಲ್ದಾಣದಲ್ಲಿ ಇಳಿದೆ. ಈಗ ನನ್ನದು ಆರ್ಮಿ ಸಮವಸ್ತ್ರವೇ—ಓಜಿ. ಆದ್ದರಿಂದ ಅಲ್ಲಿ ನನ್ನನ್ನು ಸ್ವಾಗತಿಸಲು ಬಂದಿದ್ದ ಮಿಲಿಟರಿ ಜೆಸಿಓನಿಗೆ ಕಷ್ಟವಾಗಲಿಲ್ಲ. ಕಾರ್ ಸಮೇತ ಅವನು ಬಂದಿದ್ದುದರಿಂದ ನನಗೆ ಯಾವ ತೊಂದರೆಯೂ ಇಲ್ಲದೇ ಸೀದಾ ಒಂದು ದೊಡ್ಡ ಹೊಟೇಲಿಗೆ ಹೋಗಿ ಕೋಣೆ ಮಾಡಿಯಾಯಿತು. ಮೇಜರ್ ಸ್ಕಾಟ್ ಎಂಬ ಮಿಲಿಟರಿ ಆಫಿಸರರು ಬೆಂಗಳೂರಿನಿಂದ ಒಂದು ಕಿರಿಯ ತಂಡ (ಒಬ್ಬ ಜೆಸಿಓ, ಎನ್‌ಸಿಓ, ಒಬ್ಬ ಗುಮಾಸ್ತ) ಸಮೇತ ಒಂದು ವಾರದ ಹಿಂದೆ ಬಳ್ಳಾರಿಗೆ ಬಂದಿಳಿದಿದ್ದರು. ಬಳ್ಳಾರಿಯಲ್ಲಿ ಎನ್‌ಸಿಸಿ ಕಛೇರಿ ಇರಲಿಲ್ಲ—ಅದನ್ನು ಪ್ರಾರಂಭಿಸುವ ಹೊಣೆಯನ್ನು ಮೇಜರ್ ಸ್ಕಾಟರಿಗೆ ವಹಿಸಲಾಗಿತ್ತು. ಆದರೆ ನಾನು ಬಳ್ಳಾರಿಗೆ ಬಂದಿಳಿದ ದಿವಸ ಅವರು ಕಾರ್ಯ ನಿಮಿತ್ತ ಬೆಂಗಳೂರಿನಿದ್ದರು. ಹೀಗಾಗಿ ಜೆಸಿಓ ಮತ್ತು ಗುಮಾಸ್ತನ ಮೂಲಕ ಆದುವರೆಗೆ ನಡೆದಿದ್ದ ಕೆಲಸದ ವರದಿ ಪಡೆದೆ. ಅಪರಾಹ್ಣ ಪಾಲಿಟೆಕ್ನಿಕ್, ಮೆಡಿಕಲ್ ಕಾಲೇಜು ಮತ್ತು ವೀರಶೈವ ಕಾಲೇಜುಗಳಿಗೆ ಭೇಟಿ ನೀಡಿ ಆಯಾ ಪ್ರಿನ್ಸಿಪಾಲರನ್ನು ಪರಿಚಯಿಸಿಕೊಂಡೆ. ಕಡ್ಡಾಯ ಎನ್‌ಸಿಸಿಯನ್ನು ಕುರಿತು ಮೊದಲಿನ ಎರಡು ಸಂಸ್ಥೆಗಳಲ್ಲಿ ಉತ್ತೇಜನಕಾರೀ ಸಹಕಾರ ದೊರೆಯಿತು. ಪಾಲಿಟೆಕ್ನಿಕಿನ ಪ್ರಿನ್ಸಿಪಾಲ್ ಮಲ್ಲೇಗೌಡರು ಮತ್ತು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ನಾಗರಾಜರಾಯರು ಆ ದಿವಸಗಳಲ್ಲಿ ನೀಡಿದ ಬೆಂಬಲ ಸಾಮಾನ್ಯವೇನಲ್ಲ. ಆದರೆ ವೀರಶೈವ ಕಾಲೇಜಿನ—ನಮ್ಮ ಎನ್‌ಸಿಸಿಯ ಬಹುಪಾಲು ಕಂಪೆನಿಗಳು ಇಲ್ಲಿಯೇ ಇರಬೇಕಾಗಿತ್ತು—ಪ್ರಿನ್ಸಿಪಾಲರಾದ ಮರಿಯಪ್ಪ ನವರು ಮಾತ್ರ ತುಸು ಬಿರುಸಾಗಿಯೇ ಆದರೆ ಸೀದಾ ಸೀದಾ ನುಡಿದರು "ನೀವು ಕಾಲೇಜಿನಿಂದಲೇ ಬರುವವರಾದ್ದರಿಂದ ಇದು ಅರ್ಥವಾದೀತು. ನೋಡಿ ಈ ಫೈಲು" ಎಂದು ಆ ಮೊದಲು ಕೆಲವು ವರ್ಷಗಳ ಹಿಂದೆ ಅದೇ ಕಾಲೇಜಿನಲ್ಲಿ ಒಂದು ಎನ್‌ಸಿಸಿ ಕಛೇರಿ ಇದ್ದಾಗ ಆ ಓಸಿ ಮಾಡಿದ ಅನ್ಯಾಯಪರಂಪರೆಯ ವಿರುದ್ಧ ತಾವು ನಡೆಸಿದ ಹೋರಾಟದ ವರದಿಯನ್ನು ನನಗೆ ನೀಡಿದರು.

"ನಿಮ್ಮ ಕೋಪ ನನಗೆ ಅರ್ಥವಾಗುತ್ತದೆ. ಆದರೆ ಅದು ಹಿಂದಿನ ಕತೆ. ಅದರ ವಿಚಾರ ಈಗ ಬೇಡ. ಕೇಂದ್ರಸರಕಾರದ ಹುಕುಮನ್ನು, ನಿಮ್ಮ ಯೂನಿವರ್ಸಿಟಿಯ ಆದೇಶವನ್ನು ನಿಮ್ಮ ಸಹಕಾರ ಬೆಂಬಲದಿಂದ, ನಿಮ್ಮ ಹುಡುಗರಲ್ಲಿ ಕಾರ್ಯಗತಗೊಳಿಸಲು ಬಂದಿರುವ ಅಧಿಕಾರಿ ನಾನು. ನಿಮಗೆ ಏನೂ ಬಾಧಕವಾಗದಂತೆ ನಡೆಸುವ ಹೊಣೆ ನನ್ನದು" ಎಂದೆ.

ಮುಂದಿನ ದಿವಸಗಳಲ್ಲಿ ಮರಿಯಪ್ಪನವರು ನಮ್ಮ ಎಲ್ಲ ಕಾರ್ಯಗಳಲ್ಲಿ ಮುತುವರ್ಜಿ ವಹಿಸಿದರು, ಮುಕ್ತಮನಸ್ಸಿನ ಸಹಕಾರ ನೀಡಿದರು. ಕಾಲೇಜು ಪ್ರಿನ್ಸಿಪಾಲರದು.

ಕಾಲೇಜಿನ ಮುಖ್ಯಸ್ಥ ಪ್ರಿನ್ಸಿಪಾಲರು. ಅವರನ್ನು ನಾವು ಎನ್‌ಸಿಸಿ ಚಟುವಟಿಕೆಗಳಿಗೆ ಒಲಿಸಿಕೊಳ್ಳದಿದ್ದರೆ ಅವರೊಡನೆ ನಾವು ವಿನಯಪೂರ್ವಕ ವರ್ತಿಸದಿದ್ದರೆ ನಮ್ಮಿಂದ ಯಾವ ಕೆಲಸವೂ ನಡೆಯದೆಂಬುದು ಇಲ್ಲಿ ನನಗೆ ಸರಿಯಾಗಿ ಅರ್ಥವಾಯಿತು. ಮೇಜರ್ ಸ್ಕಾಟರು ಮರುದಿವಸ ಬಂದರು. ಅನೇಕ ವರ್ಷಗಳ ಮಿತ್ರರಂತೆ ನಾವು ಆ ಮೂರ್ನಾಲ್ಕು ದಿವಸ ಕಾಲ ಕಳೆದೆವು. ನಾನು ಪೂರ್ಣಾವಧಿ ಉದ್ಯೋಗಸ್ಥನಾಗಿ ಬಳ್ಳಾರಿಗೆ ಬಂದಿದ್ದುದ ರಿಂದ ಅವರು ಬೆಂಗಳೂರಿನ ತಮ್ಮ ಕಛೇರಿಗೆ ಹಿಂತಿರುಗಿದರು. ಕಾರೂ ಸಿಬ್ಬಂದಿಯವರೂ ಅವರೊಡನೆ ಮರಳಿದರು. ಈ ಮಧ್ಯೆ ಮೆಡಿಕಲ್ ಕಾಲೇಜಿನ ಆವರಣದಲ್ಲಿ ನಮಗೆ ಒಂದು ವಿಭಾಗ ಆಫೀಸಾಗಿ ದೊರೆತದ್ದರಿಂದಲೂ ಒಂದಷ್ಟು ಸಿಬ್ಬಂದಿಯವರನ್ನು ಆಯ್ಕೆ ಮಾಡಿದ್ದರಿಂದಲೂ ಆಡಳಿತೆಯ ಕಾರ್ಯವನ್ನು ಮುಂದುವರಿಸುವುದು ಸುಲಭ ವಾಯಿತು. ಆಫೀಸಿನ ಸಮೀಪವೇ ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ಪಡೆದೆ —ಹೆಂಡತಿ ಮಕ್ಕಳನ್ನು ಬಳ್ಳಾರಿಗೆ ಬರಲು ಆದೇಶ ಕಳಿಸಿಕೊಟ್ಟೆ. ಪ್ರತ್ಯೇಕವಾಗಿ ಲಾರಿಯಲ್ಲಿ ನನ್ನ ಮನೆ ಸಾಮಗ್ರಿಗಳೆಲ್ಲವೂ ಬಳ್ಳಾರಿಗೆ ಬಂದುವು. ಕೇಂದ್ರ ಸರಕಾರದ ಹುಕುಂ ಜಾರಿ ಆಗಬೇಕಾದರೆ ವಿಪುಲ ಸಂಖ್ಯೆಯಲ್ಲಿ ಶಿಕ್ಷಕರು ಬೇಕು; ಶಿಕ್ಷಣ ಹತ್ಯಾರುಗಳು, ರೈಫಲುಗಳು ಮುಂತಾದವು ಬೇಕು—ಸೊನ್ನೆಯಿಂದ ವಿಶ್ವ ಕಟ್ಟುವ ಒಂದು ಪವಾಡ; ಆ ಕ್ಷಣವೇ ನಡೆಯಬೇಕಾದ ಪರಿಸ್ಥಿತಿ. ಬಳ್ಳಾರಿಯಂಥ ಕಿರಿಯ ಪಟ್ಟಣದಲ್ಲಿದ್ದ ನನ್ನೊಬ್ಬನ ಸಮಸ್ಯೆಯೇ ಇಷ್ಟು ಭಯಂಕರವಾಗಿದ್ದರೆ ಅಖಿಲ ಭಾರತೀಯ ಮಟ್ಟದ ಸಮಸ್ಯೆಗಳನ್ನು ಕೇಳಿ ಕ್ಷಿಪ್ರದಲ್ಲಿಯೇ ಪರಿಹರಿಸಬೇಕಾದ ದೆಹಲಿಯ ವರಿಷ್ಠ ಕಛೇರಿಯ ಪರಿಸ್ಥಿತಿ ಹೇಗಿರಬಹುದು ಎಂದು ಊಹಿಸಿ ಹೆದರಿದೆ. ಆಫೀಸು, ಕೆಲಸ, ಹುಡುಗರಿಗೆ ಶಿಕ್ಷಣ ಎಲ್ಲವನ್ನು ಏಕಾಕಿಯಾಗಿ ಎಷ್ಟು ಕಾಲ ನಿರ್ವಹಿಸ ಬಹುದು ? ಮಿಲಿಟೆರಿ ದಕ್ಷತೆ ಹೇಗೆ ಉಳಿದೀತು ? ನನಗೆ ಒಂದು ಅನುಕೂಲತೆ ಇತ್ತು– ಬಳ್ಳಾರಿಯಲ್ಲಿದ್ದ ನಾಲ್ಕೈದು ಎನ್‌ಸಿಸಿ ಆಫಿಸರರು ತುಂಬ ಉತ್ಸಾಹಶೀಲರಾಗಿದ್ದರು. ಅವರ ನೆರವಿನಿಂದ ಸುಮಾರು ೧,೦೦೦ದಷ್ಟು ಕ್ಯಾಡೆಟುಗಳನ್ನು ಆಗಸ್ಟ್ ಪ್ರಥಮ ವಾರದಲ್ಲಿ ಭಾರೀ ಸಾಮೂಹಿಕ ಪೆರೇಡಿನಲ್ಲಿ ಕಲೆಹಾಕಿ ಜಿಲ್ಲೆಯ ಡೆಪ್ಯೂಟಿ ಕಮಿಶನರ್ ಅವರಿಂದ ಕಡ್ಡಾಯ ಎನ್‌ಸಿಸಿ ಶಿಕ್ಷಣದ ಅಧಿಕೃತ ಉದ್ಘಾಟನೆ ಮಾಡಿಸಿದೆ. ಸಂಸ್ಥೆಗಳ ಎನ್‌ಸಿಸಿ ಶಿಕ್ಷಣ ಕಾರ್ಯಕ್ರಮವನ್ನು ಯುಕ್ತವಾಗಿ ಹೊಂದಿಸಿಕೊಂಡು ಎಲ್ಲ ಸಂಸ್ಥೆಗಳನ್ನೂ ಶಿಕ್ಷಣ ನಡೆಯುವ ವೇಳೆ ಸಂದರ್ಶಿಸುವ ಅನುಕೂಲತೆ ಒದಗಿಸಿಕೊಂಡೆ. ಮೇಲಧಿಕಾರಿ ಸ್ವತಃ ಪೆರೇಡಿನಲ್ಲಿದ್ದರೆ, ಕ್ಲಾಸು ತೆಗೆದುಕೊಂಡರೆ ಹುಡುಗರಲ್ಲಿ ಮೂಡುವ ಉತ್ಸಾಹ ಅಭೂತ ಪೂರ್ವವಾದದ್ದು. ಹೀಗೆ ಆ ಒಂದು ತಿಂಗಳು ಅತಿ ಬಿರುಸಿನಿಂದ ಅತಿ ಉತ್ಸಾಹದಿಂದ ಹೊಸ ಕಟ್ಟಡಕಟ್ಟುವ ಸಾಹಸದಿಂದ ದೊರೆಯುವ ಆತ್ಮತೃಪ್ತಿಯಿಂದ ಕಳೆದುಹೋಯಿತು. ಎನ್‌ಸಿಸಿ ದಳಗಳ ವಿಸ್ತರಣೆಯನ್ನು ಗಮನಿಸಿ ಅದರ ವ್ಯವಸ್ಥೆಯಲ್ಲಿ ಅಸಂಖ್ಯಾತ ಬದಲಾವಣೆಗಳನ್ನು ಮಾಡಲಾಗಿತ್ತು. ಸರಿಸುಮಾರು ೧,೦೦೦-೧೬೦೦ ಸೀನಿಯರ್ ಡಿವಿಶನ್ ಕ್ಯಾಡೆಟುಗಳಿರುವ (ಅಂದರೆ ಅಷ್ಟು ಜನ ಕಾಲೇಜು ವಿದ್ಯಾರ್ಥಿಗಳು ದೊರೆ ಯುವ) ಒಂದೋ ಅಥವಾ ಹೆಚ್ಚು ಕಾಲೇಜುಗಳ ಮೇಲ್ವಿಚಾರಣೆಗೆ ಒಂದು ಎನ್‌ಸಿಸಿ ಬಟಾಲಿಯನ್ (ಯೂನಿಟ್). ನಮ್ಮ ಬೆಟಾಲಿಯನ್ನಿನ ಹೆಸರು ೭೩ನೆಯ ಮೈಸೂರು

ಬೆಟಾಲಿಯನ್ ಎನ್‌ಸಿಸಿಆರ್ (ನ್ಯಾಷನಲ್ ಕ್ಯಾಡೆಟ್ ಕೋರ್ ರೈಫಲ್ಸ್) ಬಳ್ಳಾರಿ. ಬೆಟಾಲಿಯನ್ ಈ ವ್ಯವಸ್ಥೆಯ ಪ್ರಾಥಮಿಕ ಘಟಕ. ಇದರ ಮುಖ್ಯಸ್ಥ ಮೇಜರ್ ದರ್ಜೆಯ ಆರ್ಮಿ (ಅಥವಾ ಪೂರ್ಣಾವಧಿಯ ಎನ್‌ಸಿಸಿ) ಅಧಿಕಾರಿ. ಈತನಿಗೆ ಓರ್ವ ಅಡ್ಮಿನಿಸ್ಟ್ರೇಟಿವ್ ಅಧಿಕಾರಿ, ಒಂಬತ್ತು ಜನ ಜೆಸಿಓಗಳು, ಹದಿನಾರು ಜನ ಎನ್‌ಸಿಓಗಳು ಮತ್ತು ಯುಕ್ತ ಪ್ರಮಾಣದ ಸಿವಿಲಿಯನ್ ಸ್ಟಾಫುಗಳಿಂದ ಕೂಡಿದ ಕಛೇರಿ, ಲಾರಿ, ಕಾರ್, ಮೋಟರ್‌ಸೈಕಲ್ ಮುಂತಾದ ಸಕಲ ಪೂರಕಗಳೂ (ಕಾಗದದ ಮೇಲೆ) ಮಂಜೂರಾಗಿದ್ದುವು. ಸಿವಿಲಿಯನ್ ಸಿಬ್ಬಂದಿ ಕಾಗದಪತ್ರ ಲೆಕ್ಕ ಮುಂತಾದ ಆಫೀಸಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಡೆಸಬೇಕಾದವರು. ಇವರು ರಾಜ್ಯ ಸರಕಾರದ ನೌಕರರು. ಆದ್ದರಿಂದ ಇವರು ಮೈಸೂರಿನ ಬೇರೆ ಕಡೆಗಳಿಂದ ವರ್ಗವಾಗಿ ಬರಬಹುದು ಅಥವಾ ನಾವೇ ಇವರನ್ನು ಸ್ಥಳೀಯವಾಗಿ ತಾತ್ಕಾಲಿಕ ಆಯ್ಕೆ ಮಾಡಬಹುದು. ಮಿಲಿಟರಿ ಸ್ಟಾಫ್ ಕೇಂದ್ರ ನೌಕರರು. ದೆಹಲಿಯ ಆರ್ಮಿ ಮುಖ್ಯ ಕಛೇರಿ ಅವರ ಬಟವಾಡೆ ಮಾಡುವ ಅಧಿಕಾರ ಹೊಂದಿದೆ. ಅದೇ ರೀತಿ ವಾಹನ ಪರಂಪರೆ, ಶಿಕ್ಷಣ ಸಾಮಗ್ರಿಗಳು, ಸಮವಸ್ತ್ರಗಳು ಎಲ್ಲವೂ ಕೇಂದ್ರ ಸರಕಾರದ ವತಿಯಿಂದಲೇ ದೊರೆಯ ಬೇಕು. ಹೀಗೆ ಆಫೀಸಿನ ಒಳಗೆ ದ್ವಿವಿಧ ನಿಯಂತ್ರಣವಿತ್ತು—ಕೇಂದ್ರಸರಕಾರದ ನೌಕರರು, ರಾಜ್ಯಸರಕಾರದ ನೌಕರರು. ಇವೆರಡೂ ವರ್ಗಗಳ ಮೇಲಧಿಕಾರಿಗಳು ಅಡ್ಮಿನಿಸ್ಟ್ರೇಟಿವ್ ಆಫಿಸರ್ (ಎಓ), ಆತನ ಮೇಲೆ ಕಮಾಂಡಿಂಗ್ ಆಫಿಸರ್ (ಸಿಓ ಅಥವಾ ಓಸಿ ಎಂದು ಹೇಳುವುದು ಉಂಟು.)

ಬಳ್ಳಾರಿ ಪೇಟೆಯಲ್ಲಿ ಮಾತ್ರ ಕಾಲೇಜುಗಳೂ ಪಾಲಿಟೆಕ್ನಿಕೂ ಇದ್ದುದರಿಂದ—ಅವು ಗಳಲ್ಲಿದ್ದ ಕ್ಯಾಡೆಟುಗಳ ಮೊತ್ತ ೧,೬೦೦ನ್ನು ಮೀರದಿದ್ದುದರಿಂದ—ನಮ್ಮ ೭೩ನೆಯ ಬೆಟಾಲಿಯನ್ನಿನ ವ್ಯಾಪ್ತಿ ತಾತ್ತ್ವಿಕವಾಗಿ ಬಳ್ಳಾರಿ ಜಿಲ್ಲೆಗೆ ಅನ್ವಯಿಸಿದ್ದರೂ ವಾಸ್ತವಿಕ ವಾಗಿ ಬಳ್ಳಾರಿ ಪೇಟೆಗೆ ಮಾತ್ರ ಆಗ ಸೀಮಿತಗೊಂಡಿತ್ತು. ನಮ್ಮ ಬೆಟಾಲಿಯನ್ನಿನಂಥ ಬೆಟಾಲಿಯನ್ನುಗಳು ಇತರೆಡೆಗಳಲ್ಲಿಯೂ ಇದ್ದುವು. ಗುಲ್ಬರ್ಗದಲ್ಲಿ ಎರಡು, ರಾಯಚೂರಿನಲ್ಲಿ ಒಂದು, ಬಿಜಾಪುರದಲ್ಲಿ ಒಂದು, ಚಿತ್ರದುರ್ಗದಲ್ಲಿ ಒಂದು, ಶಿವಮೊಗ್ಗ ದಲ್ಲಿ ಒಂದು ಹೀಗೆಲ್ಲ ಇದ್ದುವು. ಇವಿಷ್ಟೂ ಬೆಟಾಲಿಯನ್ನುಗಳ ಮೇಲುಸ್ತುವಾರಿಕೆ ಯನ್ನು ನಮ್ಮ ಬೆಟಾಲಿಯನ್ನಿಗೆ ವಿಧಿಸಿದ್ದರು. ಈ ಹೊಣೆಗಾರಿಕೆಯ ನಿರ್ವಹಣೆ ಗೋಸ್ಕರ ನಮ್ಮ ಬೆಟಾಲಿಯನ್ನಿಗೆ ಪ್ರತ್ಯೇಕವಾದ ಒಂದು ನಾಮಧೇಯವೂ ಇತ್ತು—ಎನ್‌ಸಿಸಿ ಗ್ರೂಪ್ ಹೆಡ್ ಕ್ವಾರ್ಟರ್ಸ್, ಬಳ್ಳಾರಿ—ವಿಭಾಗ ಕಛೇರಿ ಇದ್ದ ಹಾಗೆ. ಪ್ರಾದೇಶಿಕವಾಗಿ ಸಮೀಪವಿರುವ ಹಲವಾರು ಬೆಟಾಲಿಯನ್ನುಗಳ ಒಕ್ಕೂಟದ ಕೇಂದ್ರ. ಇದೇರೀತಿ ಬೆಂಗಳೂರಿನಲ್ಲಿ ಎರಡು, ಮೈಸೂರಿನಲ್ಲಿ ಮಂಗಳೂರಿನಲ್ಲಿ ಮತ್ತು ಬೆಳಗಾವಿ ನಲ್ಲಿ ತಲಾ ಒಂದೊಂದು ಎನ್‌ಸಿಸಿ ಗ್ರೂಪ್ ಹೆಡ್ ಕ್ವಾರ್ಟರ್ಸ್ ಇದ್ದುವು. ಇಂಥ ಒಂದು ವಿಭಾಗ ಕಚೇರಿಯ ಓಸಿ ಲೆಫ್ಟಿನೆಂಟ್ ಕರ್ನಲ್ ಆಗಬೇಕು. ಇವರ ಎಓ ನಾನು. ಬಳ್ಳಾರಿಗೆ ನಾನು ಹೋದಾಗ ನನ್ನ ಮೇಲಧಿಕಾರಿ ಯಾರೆಂದು ತಿಳಿದಿರಲಿಲ್ಲ. ಅವರು ಬರುವ ವರೆಗೂ ನಾನೇ ತಾತ್ಕಾಲಿಕವಾಗಿ ಆ ಕೆಲಸವನ್ನೂ ನಿರ್ವಹಿಸಬೇಕಾಗಿತ್ತು. ಗ್ರೂಪ್ ಕಮಾಂಡರರ ಅಧಿಕಾರ ಏನು, ಹೊಣೆ ಏನು—ನನಗೊಂದೂ ತಿಳಿದಿರಲಿಲ್ಲ. ಸೈನ್ಯದ ನಿಯಮ

ನಿಬಂಧನೆ ವಿಧಿಗಳಲ್ಲಿ ನನ್ನ ಮಾಹಿತಿ ಕೇವಲ ಹೊರತೊಗಲಿನದು. ಹೀಗಾಗಿ ಉಳಿದ ಬೆಟಾಲಿಯನ್ನುಗಳಿಂದ ದಿನವಹಿ ಹರಿದು ಬರುತ್ತಿದ್ದ ಅಸಂಖ್ಯಾತ ಪತ್ರಗಳಿಗೆ, ಪ್ರಶ್ನೆಗಳಿಗೆ ನಾನು ಬೆಂಗಳೂರಿಗೆ ದಾರಿ ತೋರಿಸುವ ಬಡಪಾಡೆ ಕೇಂದ್ರವಾದೆ. ರಾಜ್ಯಮಟ್ಟದಲ್ಲಿ ಬೆಂಗಳೂರಿನ ಎನ್‌ಸಿಸಿ ಡೈರೆಕ್ಟೊರೇಟ್ ಎಲ್ಲ ಗ್ರೂಪ್ ಹೆಡ್ ಕ್ವಾರ್ಟರ್ಸ್‌ಗಳಿಗೂ ಪ್ರಧಾನ ಕಛೇರಿ.

ದುಡ್ಡು ಮಾಡಲು ಇಲ್ಲಿ ಬರಬೇಡಿ

ಸೆಪ್ಟೆಂಬರ್ ಪ್ರಾರಂಭದಲ್ಲಿ ಕೇಂದ್ರ ಸರಕಾರದಿಂದಲೂ ಬೆಂಗಳೂರಿನ ಕಛೇರಿಯಿಂದಲೂ ಬಂದ ಅಧಿಕೃತ ಪತ್ರಗಳ ಪ್ರಕಾರ ಮುಂಬಯಿಯಲ್ಲಿ ಆ ವರೆಗೆ ಇದ್ದ ಮೇಜರ್ ಕೆ. ಎ. ಮುತ್ತಣ್ಣ ಎಂಬವರನ್ನು ಲೆಫ್ಟಿನೆಂಟ್ ಕರ್ನಲ್ ದರ್ಜೆಗೆ ಬಡ್ತಿ ನೀಡಿ ಬಳ್ಳಾರಿ ಎನ್‌ಸಿಸಿ ಗ್ರೂಪ್ ಹೆಡ್‌ಕ್ವಾರ್ಟರ್ಸ್‌ನ ಸಿಓ ಆಗಿ ನೇಮಕಮಾಡಲಾಗಿದೆ ಎಂದು ತಿಳಿಯಿತು. ಇವರು ಕೊಡಗಿನ ಮಹನೀಯರೆಂದು ಹೆಸರಿನಿಂದ ಸ್ಪಷ್ಟವಾಗಿದ್ದುದರಿಂದ ನನಗೆ ಸಹಜವಾಗಿ ಸಂತೋಷ ಸಂಭ್ರಮಗಳಾದುವು. ಊರಿನ ಹಿರಿಯರಿಗೆ, ನನ್ನ ತಂದೆಯವರಿಗೆ, ಬರೆದು ತಿಳಿದಾಗ ಅವರು ಬಲು ಸುಸಂಸ್ಕೃತ ಹಾಗೂ ಶಿಸ್ತುಪ್ರಿಯ ವ್ಯಕ್ತಿ ಎಂದು ಗೊತ್ತಾಯಿತು. ನಮ್ಮ ಹಿಂದಿನ ಸರ್ಕಲ್ ಕಮಾಂಡರರಾಗಿದ್ದ ಈಗ (೧೯೬೩) ತಿರುವನಂತಪುರದ ಸೈನಿಕ ಸ್ಕೂಲಿನ ಪ್ರಿನ್ಸಿಪಾಲರಾಗಿರುವ ಕರ್ನಲ್ ಸೋಮಯ್ಯನವರಂತೂ ತುಂಬ ಪ್ರೀತಿಯ ಮತ್ತು ಒಳ್ಳೆಯ ಮಾತುಗಳನ್ನು ಬರೆದರು. "ನಿಮಗೆ ದೊರೆತಿರುವ ಗ್ರೂಪ್ ಕಮಾಂಡರ್ ಪ್ರಥಮ ದರ್ಜೆಯ ಸಂಭಾವಿತರು ಗೌರವಾನ್ವಿತರು. ನಿಮ್ಮಿಬ್ಬರ ಈ ಮೇಳ ಎನ್‌ಸಿಸಿಯ ಭಾಗ್ಯ. ನಿಮಗೆ ಮಂಗಳವಾಗಲಿ." ಕರ್ನಲ್ ಮುತ್ತಣ್ಣನವರಿಗೆ ನಾನು ಪತ್ರ ಬರೆದೆ—ನನ್ನ ಪರಿಚಯ ಹೇಳಿಕೊಂಡೆ; ಅವರ ಪರಿಚಯ ನನಗೆ ಇಲ್ಲದುದಕ್ಕೆ ವಿಷಾದ ವ್ಯಕ್ತಪಡಿಸಿದೆ; ಮುಂದಿನ ದಿವಸಗಳಲ್ಲಿ ಅವರೊಡನೆ ಕೆಲಸ ಮಾಡಲು ದೊರೆತಿರುವ ಸುಸಂದರ್ಭವನ್ನು ನೆನೆಸಿ ಸಂತೋಷಪಟ್ಟೆ; ಅವರಿಗೆ ಶುಭ ಸ್ವಾಗತವನ್ನು ಕೋರಿ ನನ್ನಿಂದ ಈಗ ಏನಾಗಬೇಕು ಎಂದು ಮುಂತಾಗಿ ಪ್ರಶ್ನಿಸಿದೆ. ಅವರು ಅಷ್ಟೇ ಆತ್ಮೀಯತೆಯಿಂದ ತತ್‌ಕ್ಷಣ ಉತ್ತರಿಸಿದರು—ತಾನೇ ಬರೆಯಬೇಕೆಂದು ಯೋಚಿಸಿದ್ದಾಗ ನನ್ನ ಪತ್ರ ಬಂದದ್ದು ತನಗೆ ತುಂಬ ಸಂತೋಷ ಉಂಟುಮಾಡಿದೆ; ನನ್ನ ತಂದೆಯವರನ್ನು ಚೆನ್ನಾಗಿ ಗೊತ್ತಿದೆಯೆಂದೂ ತಾನು ನನ್ನ ಸಹಪಾಠಿಯಾದ ಬಿ. ಸಿ. ಪೊನ್ನಪ್ಪನವರ ಷಡ್ಡಕನೆಂದೂ ತಿಳಿಸಿದರು; ಸಂಸಾರ ಸಮೇತ ಬಳ್ಳಾರಿಗೆ ಬರುತ್ತಿರುವ ತನಗೆ ಒಂದು ಮನೆಯನ್ನು ನಿಶ್ಚಯಮಾಡಬೇಕೆಂದು ಕೋರಿದ್ದರು; ಮಡಿಕೇರಿಯಲ್ಲಿ ಎನ್‌ಸಿಸಿ ಸಾಮೂಹಿಕ ಪೆರೇಡುಗಳಲ್ಲಿ ನನ್ನನ್ನು ನೋಡಿದ್ದುದನ್ನು ಅವರು ಸ್ಮರಿಸಿ ಎನ್‌ಸಿಸಿಗೆ ಹೊಸತಾಗಿ ಬರುತ್ತಿರುವ ತನಗೆ ಎನ್‌ಸಿಸಿ ಕೆಲಸಗಳಲ್ಲಿ ಪರಿಣತನಾದ ನನ್ನೊಡನೆ ಕೆಲಸ ಮಾಡಲು ಬಲು ಸಂತೋಷ ಎಂದು ಪ್ರಿಯ ವಾಕ್ಯಗಳನ್ನು ಬರೆದಿದ್ದರು. ಸೆಪ್ಟೆಂಬರಿನ ಎರಡನೆಯ ವಾರದಲ್ಲಿ ರೈಲಿನಿಂದ ಅವರು ಇಳಿದಾಗ ಅವರೇ ನನ್ನನ್ನು ಮೊದಲು ಗುರುತಿಸಿದರು. ಗೊತ್ತುಪಡಿಸಿಟ್ಟಿದ್ದ ಮನೆಗೆ ಅವರೆಲ್ಲರನ್ನೂ ಕಳಿಸಿ ಆಯಿತು. ಮರುದಿವಸ ಬೆಳಗ್ಗೆ ಅಧಿಕೃತವಾಗಿ ಅವರು ಕಛೇರಿಗ

ಒಂದು ಹೊಸ ಹುದ್ದೆಯನ್ನು ವಹಿಸಿಕೊಂಡರು. ಆಮೇಲೆ ನನ್ನನ್ನು ಕರೆದು ಒಂದು ಮಾತು ಹೇಳಿದರು "ಎನ್‌ಸಿಸಿ ಆಫಿಸರರು ಹೆಚ್ಚಿನವರು ಭ್ರಷ್ಟಾಚಾರಿಗಳು ಎಂದು ಕೇಳಿದ್ದೇನೆ. ನೀವು ಆ ಉದ್ದೇಶದಿಂದ ಈ ಕೆಲಸಕ್ಕೆ ಬಂದಿದ್ದರೆ ಅದು ತೀರ ತಪ್ಪು. ಅಂಥ ಯಾವ ನಡವಳಿಕೆಯೂ ನನ್ನಲ್ಲಿ ನಡೆಯುದು."

ಈ ನಿಷೇಧಾತ್ಮಕ ಸಾರ್ವತ್ರೀಕರಣದ ಅನಿರೀಕ್ಷಿತ ತಾಡನೆಯಿಂದ ನಾನು ಚಕಿತನಾದೆ. ಕೂಡಲೇ ಮನಸ್ಸನ್ನು ಹತೋಟಿಗೆ ತಂದು ಒಂದು ಮಾತು ನುಡಿದೆ "ಸಾರ್, ನನ್ನ ಪ್ರಾಮಾಣಿಕತೆ ಕರ್ತವ್ಯನಿಷ್ಠೆ ಬಗ್ಗೆ ನೀವು ಕ್ರಮೇಣ ಅರಿಯುತ್ತೀರಿ. ಆದರೆ ಗೌರವ ಯುತವಾಗಿ ನನ್ನನ್ನು ನಡೆಸಿಕೊಳ್ಳದಿದ್ದಲ್ಲಿ ನಾನು ಈ ಕೆಲಸದಲ್ಲಿ ಮುಂದುವರಿಯುವವ ನಲ್ಲ ಎಂದು ತಮಗೆ ತಿಳಿದಿರಲಿ. ನಾನು ಉದ್ಯೋಗರಹಿತನಾಗಿ ಅಥವಾ ಕಾಡಿ ಬೇಡಿ ಈ ಪದವಿಗೆ ಬಂದವನಲ್ಲ—ನನಗೆ ಖಾಯಂ ಮೂಲ ಹುದ್ದೆ ಬೇರೆ ಇದ್ದೇ ಇದೆ." (ಪುಟ ೨೦೧ ನೋಡಿ.)

ಮುಂದಿನ ಗಳಿಗೆಯಿಂದ ಅವರು ನನ್ನನ್ನು ನಡೆಸಿಕೊಂಡ ರೀತಿ ಅತಿ ಸುಸಂಸ್ಕೃತ ಬಗೆ ಯದು. ನಾವು ಒಂದು ಮನೆಯ ಅನ್ಯೋನ್ಯ ಬಂಧುಗಳಂತೆ ಪರಸ್ಪರ ಸ್ನೇಹ ಗೌರವ ಯುತವಾಗಿ ವರ್ತಿಸಿದೆವು. ಒಂದು ವಾರಾನಂತರ ಅವರು ಬೆಂಗಳೂರಿನ ಪ್ರಧಾನ ಕಛೇರಿಗೆ ಹೋದವರು ಅಲ್ಲಿಂದ ನನಗೊಂದು ಪತ್ರ ಬರೆದರು—ನನಗೆ ಶೀಘ್ರವೇ ಮೇಜರ್ ದರ್ಜೆಗೆ ಬಡ್ತಿ ನೀಡಲು ತಾನು ಮಾಡಿದ ಪ್ರಯತ್ನವನ್ನೂ ಅದಕ್ಕೆ ಡೈರೆಕ್ಟೊರೇಟಿನಲ್ಲಿ ದೊರೆತ ಒತ್ತಾಸೆಯನ್ನೂ ಅದರಲ್ಲಿ ಪ್ರಸ್ತಾವಿಸಿದ್ದರು.

ಕರ್ನಲ್ ಕಟ್ಟಿದ ಸೌಧ

ಆರ್ಮಿ ನಿಯಮ ನಿಬಂಧನೆಗಳ ವಿಚಾರ ಒಂದು ವಿನೋದದ ಹೇಳಿಕೆ ಇದೆ, ದೆಹಲಿಯಿಂದ ಒಂದು ಮುಖ್ಯ ಆಜ್ಞೆ ಹೊರಟು ಅದು ಎಲ್ಲ ಯೂನಿಟ್ಟುಗಳಿಗೂ ತಲಪುವ ಮೊದಲೇ ಅದಕ್ಕೆ ನಾಲ್ಕು ಕೂಡಿಕೆಗಳೂ (ಎಡೆಂಡ) ಒಂದೊಂದು ಕೂಡಿಕೆಗೂ ತಲಾ ಎರಡು ಪರಿಶಿಷ್ಟಗಳೂ ಒಂದೊಂದು ಪರಿಶಿಷ್ಟಕ್ಕೂ ತಲಾ ಎರಡು ತಿದ್ದುಪಡಿಗಳೂ ಕ್ರಮಬದ್ಧ ವಾಗಿ ಹೊರಟಿರುತ್ತವೆ. ಪರಿಣಾಮವಾಗಿ ಯಾವುದೇ ಹುಕುಮನ್ನು ಚಲಾಯಿಸಬೇಕಾ ದರೂ ಇವೆಲ್ಲ ದಫ್ತರಗಳನ್ನೂ ಓರಣವಾಗಿ ಅಳವಡಿಸಿಕೊಂಡು ಎಲ್ಲ ನಿಬಂಧನೆಗಳನ್ನೂ ಸಮನ್ವಯಿಸಲೇಬೇಕು. ಹಾಗೆ ಮಾಡದಿದ್ದರೆ ನಿಮ್ಮ ಯಾವ ಆರ್ಥಿಕ ವ್ಯವಹಾರವೂ ಯಾವ ಕೋರಿಕೆಗಳೂ ಕಾರ್ಯಗತವಾಗುವುದಿಲ್ಲ. ಈ ನಿಯಮಜಾಲದ ಗೋಜು ಗೋಜಲ ಮಜಲಿನಲ್ಲಿ ಸಿಕ್ಕಿಹಾಕಿಕೊಂಡ ನಾನು ಒಂದು ವಿಚಾರ ಅರಿತೆ—ಸಂಕೀರ್ಣ ಗಣಿತದ ಅಂಕುಡೊಂಕುಗಳಲ್ಲಿ ದಾರಿ ತಪ್ಪದೇ ಮುಂದುವರಿದು ಗುರಿ ಮುಟ್ಟಬಹುದು; ಆದರೆ ಆರ್ಮಿ ನಿಯಮ ಗೊಂಡಾರಣ್ಯದಲ್ಲಿ ಕಂಗಾಲಾಗದೇ ಮುಂದುವರಿಯುವುದು ನನ್ನಿಂದಾಗದು! ಇಲ್ಲಿ ನಮ್ಮ ಕರ್ನಲ್ ಸಾಹೇಬರು ಪಳಗಿದ ಹಳೆ ಹುಲಿ. ಅವರ ಸ್ಮರಣ ಶಕ್ತಿ, ನಿಬಂಧನೆಗಳನ್ನು ಸಮರ್ಪಕವಾಗಿ ಉದ್ಧರಿಸಿ ವಿಷಯಕ್ಕೆ ಪೋಣಿಸುವ ಚಾತುರ್ಯ, ಲೇಖನಿಯ ಹರಿತ ಮತ್ತು ನಿಖರತೆ ಅತ್ಯುತ್ಕೃಷ್ಟ ಮಟ್ಟದವು. ಸಾಹಿತ್ಯ, ಪುರಾಣ, ಕಲೆಗಳು—ಇವುಗಳಲ್ಲೂ ಇವರು ಆಸಕ್ತರಾಗಿದ್ದುದರಿಂದ ನನ್ನ ಆ ಸುಮಾರು ಒಂಬತ್ತು

ತಿಂಗಳ ಇವರೊಂದಿಗಿನ ಒಡನಾಟದಲ್ಲಿ ಮಿಲಿಟರಿ ವಾತಾವರಣದಲ್ಲಿದ್ದೆನೆಂದೇ ಅನಿಸಲಿಲ್ಲ. ಯೂನಿಟ್ಟನ್ನು ವೈಜ್ಞಾನಿಕವಾಗಿ ಕಟ್ಟಿದೆವು. ಗ್ರೂಪ್ ಹೆಡ್ ಕ್ವಾರ್ಟರ್ಸ್ ಆಗಿ ಕೆಳಗಿನ ಎಲ್ಲ ಬೆಟಾಲಿಯನ್ನುಗಳಿಗೂ ಯೋಗ್ಯ ಸಹಕಾರೀ ಮಾರ್ಗದರ್ಶನ ಮಾಡುವುದರಲ್ಲಿ ನಮಗೆ ಬಲು ಸಂತೋಷ ಲಭಿಸುತ್ತಿತ್ತು. ನಮ್ಮ ಗ್ರೂಪಿನ ಬೆಟಾಲಿಯನ್ನುಗಳು ಅತಿ ದಕ್ಷವಾಗಿ ಕ್ಷಿಪ್ರ ಕಾರ್ಯಶೀಲವಾಗಿ ಟ್ರೈನಿಂಗಿನಲ್ಲಿಯೂ ಆಡಳಿತದಲ್ಲಿಯೂ A ೧ ಮಟ್ಟದಲ್ಲಿರಬೇಕೆಂಬುದು ನಮ್ಮಿಬ್ಬರ ಹಂಬಲ. ಮೊದಲು ನಮ್ಮ ಯೂನಿಟ್ಟು ಇತರ ಯೂನಿಟ್ಟುಗಳಿಗೆ ಮಾದರಿ ಆಗಿರಬೇಕು. ಈ ದಿಶೆಯಲ್ಲಿ ಅವಿಶ್ರಾಂತವಾಗಿ ರಜಾದಿನಗಳಲ್ಲಿ ಸಹ ನಾವಿಬ್ಬರು ಅನ್ಯೋನ್ಯವಾಗಿ ಕೆಲಸ ಮಾಡಿದೆವು. ಕರ್ನಲ್ಲರು ಆಫೀಸು ಕಾರ್ಯಗಳಲ್ಲಿ ಬಲು ದಕ್ಷರು. ಅದೇ ಮಟ್ಟಕ್ಕೆ ಬರದ ಕೈಕೆಳಗಿನ ಬೆಟಾಲಿಯನ್ನುಗಳ ವಿಚಾರದಲ್ಲಿ ಬಲು ಅಸಹನಾಶೀಲರು. ಹೀಗಾಗಿ ತಪ್ಪು ವರದಿ ಬಂದಾಗ ಉತ್ತರ ಸಮರ್ಪಕವೆನಿಸದಾಗ ಸ್ವತಃ ಬಿರುಸು ಮಿಲಿಟರಿ ಸಂವಿಧಾನಬದ್ಧ ಮಾತುಗಳಲ್ಲಿ ಬರೆದು ಕೈಕೆಳಗಿನ ಬೆಟಾಲಿಯನ್ನುಗಳ ನಡವಳಿಕೆಯನ್ನು ಖಂಡಿಸುತ್ತಿದ್ದರು. ಈ ಬೆಟಾಲಿಯನ್ನುಗಳ ಕಮಾಂಡರೆಲ್ಲರೂ ಎನ್‌ಸಿಸಿ ಪೂರ್ಣಾವಧಿಯ ಆಫೀಸರರು (ವಾಳ್ವೇಕರ್, ರಂಗನಾಥರಾವ್, ಜೆರೆ, ಕೃಷ್ಣಯ್ಯ ಮೊದಲಾದ ನನ್ನ ಹಿಂದಿನ ಮಿತ್ರರು.) ನನ್ನನ್ನು ಖಾಸಗಿಯಾಗಿ ಕಂಡಾಗ ಅವರು ಅಂದದ್ದುಂಟು "ಬಳ್ಳಾರಿಯಿಂದ ಟಪ್ಪಾಲು ಬರುವ ಗಳಿಗೆ ಪ್ರತಿದಿನವೂ ನಮ್ಮ ನೆತ್ತರೊತ್ತಡ ಏರುತ್ತದೆ." ಇಲ್ಲಿ ನನ್ನ ಪಾತ್ರ ಸುಮಾರಾಗಿ ಕರ್ನಲ್ಲರಿಗೆ ಎನ್‌ಸಿಸಿ ಪೂರ್ಣಾವಧಿ ಆಫೀಸರರ ವಿಚಾರದಲ್ಲಿ ಯೋಗ್ಯ ಮಾಹಿತಿ ನೀಡುವುದಾಗಿತ್ತು—ಅಂಥ ತಪ್ಪುಗಳು ಉದ್ದೇಶಪೂರ್ವಕವಲ್ಲ; ಆರ್ಮಿ ನಿಯಮಾವಳಿ ತಿಳಿಯದಿದ್ದ ನಾವು ಯಾರೂ ಸಹಜವಾಗಿ ಮಾಡುವಂಥವು ; ಆದ್ದರಿಂದ ಸರಿಯಾದದ್ದೇನೆಂದು ತಿಳಿಯಹೇಳುವುದು, ಸೌಮ್ಯ ಮಾತುಗಳಲ್ಲಿ ಹಾಗೆ ಬರೆಯುವುದು ಯೋಗ್ಯ ಎಂದು ಮೆಲುನುಡಿಯುತ್ತಿದ್ದೆ. ಅದೆಷ್ಟೋ ಬಾರಿ—ಧಾರ್ಷ್ಟ್ಯ ಅನ್ನಿ ಬೇಕಾದರೆ—ಕರ್ನಲ್ಲರ ಕರಡು ಕಾಗದದ ಮೇಲೆ ನಾನೇ ಬೇರೆಯದೊಂದನ್ನು ತಯಾರಿಸಿ ಈ ಕಾಗದ ಹೀಗೆ ಹೋದರಾಗದೇ ಎಂದು ಸೂಚಿಸುತ್ತಿದ್ದುದು ಇತ್ತು. ಆಗೆಲ್ಲ ಅವರು ಶ್ರೀಮದ್ಗಾಂಭೀರ್ಯದಿಂದ ಆಗಲಿ ಎಂದು ಒಪ್ಪಿ ನನ್ನ ನಿಲವನ್ನು ಸಮರ್ಥಿಸುತ್ತಿದ್ದರು. ಆ ವರ್ಷ (೧೯೬೩-೬೪) ನಾವು ಕ್ಯಾಂಪು ನಡೆಸಬೇಕಾಗಿರಲಿಲ್ಲ. ಐದೋ ಆರೋ ತಲಾ ೨೪ ಗಂಟೆಗಳ ಕಾಲದ ದೀರ್ಘ ಮಿಲಿಟರಿ ಕವಾಯತಿಗಳನ್ನು ಬೆಟ್ಟ ಕಾಡು ಗುಡ್ಡಗಳಲ್ಲಿ (ಎಂದರೆ ನಗರದಿಂದ ಹೊರಗೆ ಹೋಗಿ) ನಡೆಸಬೇಕೆಂದು ಆದೇಶವಿತ್ತು. ಸ್ಥಳಗಳನ್ನು ಆರ್ಮಿ ಸ್ಟಾಫ್ ಸಮೇತ ಪೂರ್ವ ಪರಿಶೀಲನೆ ನಡೆಸಿ ಯೋಜನೆಗಳನ್ನು ಸಿದ್ಧಪಡಿಸಿ ಕರ್ನಲ್ಲರಿಗೆ ಒಪ್ಪಿಸುತ್ತಿದ್ದೆ. ಅವರು ಅವನ್ನು ಒಪ್ಪುತ್ತಿದ್ದರು. ನಮ್ಮೊಡನೆ ಆ ಕವಾಯತಿಗಳು ನಡೆಯುವಾಗ ಸ್ವತಃ ಬಂದು ಹುಡುಗರಿಗೆ ಹಿತವಚನ ನುಡಿದು ಅವರ ಉತ್ಸಾಹವನ್ನು ಪುಟಿಸುತ್ತಿದ್ದರು. ಆದರೆ ಅವರು ಆಫೀಸ್ ಆಡಳಿತೆ ವಿಚಾರದಲ್ಲಿ ತೋರಿಸಿದಷ್ಟು ಉತ್ಸಾಹವನ್ನಾಗಲೀ ಧುರೀಣತ್ವವನ್ನಾಗಲೀ ಎನ್‌ಸಿಸಿ ಶಿಕ್ಷಣ ವಿಚಾರದಲ್ಲಿ ಪ್ರದರ್ಶಿಸಿದ್ದು ಕಾಣಲಿಲ್ಲ. "ಕಾಗದ ಪತ್ರ ಲೆಕ್ಕ ಇವೆಲ್ಲವನ್ನೂ ಸರಿಯಾಗಿ ಇಟ್ಟುಕೊಳ್ಳಿ. ನೆಲದ ಮೇಲೆ ನೀವು ಏನು ಮಾಡಿ

ದಿರಿ ಮಾಡಲಿಲ್ಲ ಎಂದು ಕೇಳುವವರು ಯಾರೂ ಇಲ್ಲ'' ಎಂದು ಒಮ್ಮೊಮ್ಮೆ ನನಗೆ ಬೋಧಿಸುತ್ತಿದ್ದುದು ಇತ್ತು. ನನ್ನ ಮನೋಧರ್ಮ ತದ್ವಿರುದ್ಧ—ಕೆಲಸದ ಅಂಗವಾಗಿ ದಫ್ತರ; ಕೆಲಸದ ಅಡಿಯಾಳಾಗಿ ದಫ್ತರ; ದಫ್ತರ ಮುಖ್ಯ, ನಿಜ, ಆದರೆ ಕೆಲಸ ಹೆಚ್ಚು ಮುಖ್ಯ. ನಮ್ಮ ಜೊತೆ ಒಂದು ರೀತಿಯಲ್ಲಿ ಪೂರಕವಾಯಿತು. ಆಫೀಸಿನ ಸಕಲ ಜವಾಬ್ದಾರಿಯನ್ನೂ ಬಲು ಸಮರ್ಥವಾಗಿ ಅವರು ನಿರ್ವಹಿಸುತ್ತಿದ್ದುದರಿಂದ ನನಗೆ ಶಿಕ್ಷಣದ ಕಡೆಗೆ ವಿಶೇಷ ಗಮನ ಹರಿಸುವುದು ಸಾಧ್ಯವಾಯಿತು.

ನನ್ನ ಕೆಲಸವನ್ನೂ ನಿಷ್ಠೆಯನ್ನೂ ಒಪ್ಪಿಕೊಂಡ ಕರ್ನಲ್ಲರು ನಾನು ಬೆಟಾಲಿಯನ್ ಕಮಾಂಡರ್ ಆಗಿ ಸ್ವತಂತ್ರವಾಗಿ ಕಾರ್ಯ ನಡೆಸಬೇಕೆಂದು ತೀರ್ಮಾನಿಸಿದರು. ಭೌಗೋಳಿಕವಾಗಿ ಬಳ್ಳಾರಿಗಿಂತ ಶಿವಮೊಗ್ಗವೇ ಗ್ರೂಪ್ ಹೆಡ್ ಕ್ವಾರ್ಟರ್ಸ್ ಆಗಲು ಅಧಿಕ ಯೋಗ್ಯಸ್ಥಳವೆಂದು ನಿರ್ಧರಿಸಿ ಅಲ್ಲಿಗೆ ತಮ್ಮ ಗ್ರೂಪ್ ಆಫೀಸೂ ತಾವೂ ವರ್ಗವಾಗಿ ಹೋಗುವುದು ಒಳ್ಳೆಯದೆಂದು ಬೆಂಗಳೂರಿಗೆ ಶಿಫಾರಸು ಪತ್ರ ರವಾನಿಸಿದರು. ಯುಕ್ತ ವೇಳೆಯಲ್ಲಿ ದೆಹಲಿಯಿಂದ ಈ ಶಿಫಾರಸುಗಳಿಗೆ ಮನ್ನಣೆ ಬಂತು. ಮೇ ೧೯೬೪ರ ಕೊನೆಯಲ್ಲಿ ಗ್ರೂಪ್ ಕಛೇರಿಯೂ ಕರ್ನಲ್ ಮುತ್ತಣ್ಣನವರೂ ಬಳ್ಳಾರಿಯಿಂದ ನಿರ್ಗಮಿಸಿದರು. ೧ ಜೂನ್ ೧೯೬೪ರಿಂದ ನಾನು (ಆ್ಯಕ್ಟಿಂಗ್) ಮೇಜರ್ ದರ್ಜೆ ಪಡೆದು ಬಳ್ಳಾರಿ ಬೆಟಾಲಿಯನ್ನಿನ ಓಸಿ ಆದೆ. ''ಕರ್ನಲ್ಲರು ನಮ್ಮಿಂದ ದೂರ ಹೋದರೂ ನಾವು ಅವರ ಶಿವಮೊಗ್ಗ ಗ್ರೂಪ್ ಹೆಡ್‌ಕ್ವಾರ್ಟರ್ಸ್ ಕಕ್ಷೆಯಲ್ಲಿಯೇ ಇರುವುದೊಂದು ಸಮಾಧಾನದ ಸಂಗತಿ. ಅವರೇ ಕಟ್ಟಿ ಬೆಳೆಸಿರುವ ಈ ಯೂನಿಟ್ಟನ್ನು ದೂರದಿಂದಾದರೂ ಅವರು ನೋಡುತ್ತಿದ್ದು ಮಾರ್ಗದರ್ಶನ ಮಾಡುವುದು ನಮಗೆ ತೃಪ್ತಿ ಧೈರ್ಯಗಳನ್ನು ನೀಡುತ್ತವೆ'' ಎಂದು ಮುಂತಾಗಿ ನಾನು ಬೀಳ್ಕೊಡುಗೆಯ ಸಮಾರಂಭದಲ್ಲಿ ನುಡಿದೆ. ನನ್ನನ್ನು ಕುರಿತು ನಾಲ್ಕು ಒಳ್ಳೆಯ ಮಾತುಗಳನ್ನು ಅವರು ಹೇಳಿ ಬೆಟಾಲಿಯನ್ನಿಗೆ ಶುಭ ಕೋರಿದರು. ಶಿವಮೊಗ್ಗದಿಂದ ಬರೆದ ಮೊದಲ ಖಾಸಗಿ ಪತ್ರದಲ್ಲಿ ಹೇಗೆ ತಾವು ಬಳ್ಳಾರಿಯಲ್ಲಿ ಪರಮ ಸುಖಿಯಾಗಿ ಇದ್ದೆ, ಆದರೆ ಇಲ್ಲಿ ಹೇಗೆ ತಾವು ತಮ್ಮ ಬಳಗ ಇಲ್ಲದೆ ಒಂಟಿಯಾಗಿ ಎಲ್ಲ ಕೆಲಸಗಳನ್ನು ಪ್ರಾರಂಭದಿಂದಲೇ ಮಾಡಬೇಕಾಗಿದೆ ಎಂದು ಮುಂತಾಗಿ ಇತ್ತು.

ವೇದಶಾಸ್ತ್ರ ಪಂಚಾಂಗ ಓದಿಕೊಂಡು
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಚಂಡಭಟರಾಗಿ ನಡೆದು ಕತ್ತಿ ಢಾಲು ಕೈಲಿ ಹಿಡಿದು
ಖಂಡತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಅಂದಣ ಪಲ್ಲಕ್ಕಿ ಏರಿ ಮಂದಿ ಮಾರ್ಬಲ ಕೂಡಿ
ಚಂದದಿಂದ ಮೆರೆಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

ಕನಕದಾಸರು

ಆದರೂ ದುಡಿಯಲೇಬೇಕು—ಮೌಲ್ಯಸಿದ್ಧಿಗೆ!

೧೯೬೪

ಪುರಂಧರದಲ್ಲಿ ಜೀವಂಧರರಾದೆವು

೧೯೬೪ರ ಮಾರ್ಚ್, ಏಪ್ರಿಲಿನಲ್ಲಿ ಪುರಂಧರದಲ್ಲಿಯ (ಮಹಾರಾಷ್ಟ್ರ. ಪೂನಾದಿಂದ ೩೦ ಮೈಲಿ ದೂರದ ಬೋಳುಗುಡ್ಡದ ಮೇಲಿದೆ) ಎನ್‌ಸಿಸಿ ಕಾಲೇಜಿನಲ್ಲಿ ಒಂದು ವಿಶಿಷ್ಟ ತರಬೇತಿಗೋಸ್ಕರ ಹೋದೆ. ನನ್ನಂತೆಯೇ ಬಂದಿದ್ದವರು ಸುಮಾರು ೧೦೦ ಮಂದಿ ಎನ್‌ಸಿಸಿ ಪೂರ್ಣಾವಧಿ ಕಮಿಷನ್ ಪಡೆದಿದ್ದ ಆಫೀಸರುಗಳು—೨/ಲೆಫ್ಟಿನೆಂಟ್ ದರ್ಜೆಯಿಂದ ತೊಡಗಿ ಮೇಜರ್‌ವರೆಗಿನವರು. ಬೆಂಗಳೂರಿನ ಮಿತ್ರ ಅಶ್ವತ್ಥನಾರಾಯಣ, ಕೃಷ್ಣೋಜಿರಾವ್ ಇವರು ನನ್ನ ಕೊಠಡಿಪಾಲಿಗಳು. ನಮಗೆ ಅಲ್ಲಿ ಒಂದು ತಿಂಗಳ ಶಿಕ್ಷಣ ಶಿಬಿರ. ವಿಷಯ Administration & Quarter Mastership ಅಥವಾ ಸಂಕ್ಷೇಪವಾಗಿ A ಮತ್ತು Q. ಅಂದರೆ ಆಡಳಿತೆ ಹಾಗೂ ಲೆಕ್ಕಪತ್ರಗಳ ವಿಚಾರ ಶಿಕ್ಷಣ. ಬೋಳು ಹಾಳುಗರೆಯುವ ಬಂಡೆಯ ಮಂಡೆಯ ಮೇಲಿನ ಒಂದಿಷ್ಟು ವಿಸ್ತಾರವದು. ಹಿಂದೆ ಪಾಳೆಯಗಾರರ ಕೋಟೆಯಾಗಿತ್ತಂತೆ. ಹಾಗಾಗಿ ಐತಿಹಾಸಿಕ ಪ್ರಸಿದ್ಧಿ ಇದೆ. ಆದರೆ ಇಂದು ಯಾವ ವಿಧವಾದ ನಾಗರಿಕತೆಯ ಸಂಪರ್ಕವೂ ಇಲ್ಲದೇ ನಿಸರ್ಗದ ಶೋಭೆಯೂ ಇಲ್ಲದೇ ತೊಂದರೆ ಸಂಕಷ್ಟಗಳೇ ಬಂಡೆರೂಪದಲ್ಲಿ ನಿಂತಿರುವಂಥ ಒಂದು ಕೇಂದ್ರ. ನೀರು ಇಲ್ಲ, ಬಿಸಿಗಾಳಿಯ ಬೋನಸ್! ಹಸುರು ಕಾಣಸಿಗದು. ತರಗೆಲೆ ರಾಜ್ಯ! ಹಾಗಾದರೆ ಏನಿದೆ ಇಲ್ಲಿ? ಕಷ್ಟಪಡುವುದೂ ಶಿಕ್ಷಣದ ಒಂದಂಗ. ಮಾಮೂಲಿನಂತೆ ಈ ಕೆಲಸಕ್ಕೆ ವಿಶೇಷ ಅರ್ಹತೆ ಪಡೆದಿರದ ಮಿಲಿಟರಿ ಆಫೀಸರರೇ ಇಲ್ಲಿಯೂ ಬಹುತೇಕ ಮಂದಿ ಶಿಕ್ಷಕರು. ಸುಲಭ ವಿಷಯವನ್ನು ಆದಷ್ಟು ಕ್ಲಿಷ್ಟಗೊಳಿಸಿ ತಮಗೂ ನಮಗೂ ಅರ್ಥವಾಗದ ರೀತಿಯಲ್ಲಿ ಗಹನ ವಿಚಾರ ಹೇಳಿದೆವೆಂದು ಭ್ರಮಿಸಿ ಪಾಠಗಳನ್ನು ಮಾಡುತ್ತಿದ್ದರು. ಯಾವ ಪುಸ್ತಕವೂ ನಮಗೆ ಅಲ್ಲಿ ದೊರೆಯದಿದ್ದುದರಿಂದ ಅವರು ಹೇಳಿದ್ದೇ ಅಧಿಕೃತ ವಿಷಯವಾಯಿತು. ಒಬ್ಬಿಬ್ಬರು ತಾವು ತಿಳಿದದ್ದನ್ನು ಚೆನ್ನಾಗಿ ಹೇಳಿಕೊಡುವವರಿದ್ದರು. ಆದರೆ ಅವರಿಗೆ ಕೊಟ್ಟಿದ್ದ ಪಾಠಗಳು ಶುದ್ಧ ನೀರಸವಾದವು. ಶಿಸ್ತಿನ ಹೆಸರಿನಲ್ಲಿ ಇವನ್ನೆಲ್ಲ ಕೇಳಿ ತಾಳಿ ಕಾಲಹರಣ ಮಾಡುವುದೊಂದೆ ಉಳಿದಿದ್ದ ಮಾರ್ಗ.

ಒಂದು ದಿವಸ ನಮ್ಮನ್ನು ಪೂನಾನಗರದ ವಿವಿಧ ಆರ್ಮಿ ಕೇಂದ್ರಗಳಿಗೆ ಭೇಟಿಗೋಸ್ಕರ ಮಿಲಿಟರಿ ಲಾರಿಗಳಲ್ಲಿ ಕರೆದೊಯ್ದಿದ್ದರು. ಹಗಲಿಡೀ ಕಡ್ಡಾಯದ ಈ ಪ್ರಯಾಸ ಪ್ರವಾಸ ಆಯಾಸ ಮುಗಿದ ಬಳಿಕ ರಾತ್ರಿ ೭ ಗಂಟೆಗೆ, ಕೃಷ್ಣಪಕ್ಷದ ರಾತ್ರಿ, ಅಲ್ಲಿಂದ ಹೊರಟೆವು. ನಾವು ಕುಳಿತಿದ್ದದ್ದು ಹಿರಿ ಎತ್ತರದ ಮಿಲಿಟರಿ ಲಾರಿಯ ಲಗ್ಗೇಜ್ ಬಾಡಿಯಲ್ಲಿ. ನಾವೂ ಲಗ್ಗೇಜುಗಳೇ ಅಲ್ಲವೇ! ಪೂನಾದಿಂದ ಪುರಂಧರ ಕೋಟೆಯ ಬುಡದವರೆಗೆ ಸಮತಟ್ಟು ದಾರಿ. ಅಲ್ಲಿಂದ ಬಳಸು ಘಾಟ್ ದಾರಿಯಲ್ಲಿ ಕಡಿದಾದ ದುರ್ಗಕ್ಕೆ ಸುತ್ತುಹಾಕಿ ಮೇಲೆ ಸಾಗಬೇಕು. ಈ ದಾರಿ ಸುಮಾರು ೩ ಮೈಲಿ ದೀರ್ಘವಿದೆ. ಸಮತಟ್ಟು ದಾರಿಯಲ್ಲಿ ಲಾರಿ ಓಡುತ್ತಿದ್ದಾಗಲೇ ನಾನು ಅರಿತೆ—ಆ

ಡ್ರೈವರನಿಗೆ ಕೆಲಸ ತಿಳಿಯದೆಂದು. ಪ್ರತಿಸಲವೂ ಗೇರ್ ಬದಲಾಯಿಸುವಾಗ ಎಂಜಿನ್ ನಿಂತುಹೋಗಿ ಮರು ಪ್ರಾರಂಭಮಾಡಿ ಗೊರೋ ಗೊರೋ ಶಬ್ದಸಹಿತವಾಗಿ ಗೇರ್ ಹಾಕುತ್ತಿದ್ದ. ಇನ್ನು ಪಥನಿಯಂತ್ರಣವೋ (ಸ್ಟಿಯರಿಂಗ್)—ರಸ್ತೆ ಬದಿಗಳು ಸಮ ತಟ್ಟಾಗಿದ್ದುದರಿಂದಲೂ ಅದು ಮಿಲಿಟರಿ ಲಾರಿ ಆಗಿದ್ದುದರಿಂದಲೂ ಅವಗಡ ಆಗಲಿಲ್ಲ. ಬೆಟ್ಟದ ಬುಡ ತಲಪಿದಾಗ ೮ ಗಂಟೆ. ನಮ್ಮ ಲಾರಿಯಲ್ಲಿಯೇ ಇದ್ದ ಅಶ್ವತ್ಥನಾರಾಯಣ ರಿಗೆ ಅಂದೆ "ಈತ ಈ ಘಾಟ್ ದಾರಿಯಲ್ಲಿ ಹೇಗೆ ಹೋಗುತ್ತಾನೋ ಭಯವಾಗುತ್ತಿದೆ." ಲಾರಿ ಮಿಲಿಟರಿ ದಕ್ಷತೆಯಿಂದ ಗುಡ್ಡ ಹತ್ತಿತು. ಅರ್ಧದವರೆಗೆ ಅದೇ ಮೂರನೆಯ ಗೇರಿ ನಲ್ಲಿಯೇ ಸಾಗಿತ್ತು—ಎಲ್ಲೂ ಗುಂಡಿಗೆ ಹಾಕಲಿಲ್ಲ. ಈಗ ಎಡದಿಂದ ಬಲಕ್ಕೆ ತೀವ್ರವಾಗಿ ತಿರುಗುವ ಮತ್ತು ಏರುವ U-ತಿರುಗಾಸು ಬಂತು. ಇದನ್ನು ಮೊದಲೇ ಗಮನಿಸಿ ತಿರು ಗಾಸು ಬರುವುದಕ್ಕೆ ಮೊದಲೇ ಎರಡನೆಯ ಗೇರನ್ನು ಎಳೆದಿರಬೇಕಾಗಿತ್ತು. ಅದು ಸಮರ್ಥ ಚಾಲಕ ಅನುಸರಿಸುವ ಮಾರ್ಗ. ಹೇಗೆ ನಡುನೀರಿನಲ್ಲಿ ಹುಟ್ಟುಗಳನ್ನು ಬದಲಾಯಿಸ ಬಾರದೋ ಹಾಗೆ ಏರು ತಿರುಗಾಸಿನಲ್ಲಿ ಗೇರು ಬದಲಾಯಿಸಬಾರದು. ಆದರೆ ನಮ್ಮ ಅದಕ್ಷ ಚಾಲಕ, ಆ U-ತಿರುಗಾಸನ್ನು ಏರುವುದಿಲ್ಲವೆಂದು ಎಂಜಿನ್ ಶಬ್ದದಿಂದ ತಿಳಿಸಿದಾಗ, ಎರಡನೆಯ ಗೇರಿಗೆ ಎಳೆಯಲು ಕ್ಲಚ್ಚನ್ನು ಒತ್ತಿ ಗೋರೋ ಗೊರೋ ಎಂದು ಶಬ್ದ ಹೊರಡಿಸಿದ. ಇದು ನಡೆದದ್ದು ಒಂದು ಸೆಕೆಂಡಿನ ಸೂಕ್ಷ್ಮಾವಧಿಯಲ್ಲಿ. ಎಂಜಿನ್ ನಿಂತಿತು. ತುಂಬುಲಾರಿ ಹಿಂದಕ್ಕೆ ಹೊರಟಿತು. ೨೦೦ ಅಡಿಗಳ ಆಳದ ಪ್ರಪಾತದ ತಳವೇ ಚಿರಸಮಾಧಿ ಎಂದು ಅರಿತ ನಾನು ಏನೂ ಮಾಡಲಾಗದೇ ಆ ಮಹಾ ತುರಂಗದೊಳಗೆ ಚಡಪಡಿಸಿ ನಿಂತೆ. ಡ್ರೈವರ್ ಹೆದರಿ ಕೈಕಾಲು ಚಾಚಿ ಪಕ್ಕದ ಬಾಗಿಲು ತೆರೆದು ಹೊರ ಹಾರಿದ. ಲಾರಿ ಗಡಕ್ ಎಂದು ಅಪ್ಪಳಿಸಿ ನಿಂತಿತು. ನಮಗೆಲ್ಲ ಭಾರೀ ಕುಲುಕಿದ ಅನು ಭವ, ಆದರೆ ಬದುಕಿದ್ದೇವೆ— ಲಾರಿ ಉರುಳಿತೋ ಇಲ್ಲವೋ ಅಂತೂ ನಮಗೇನೂ ಜಖಂ ಆದಂತಿಲ್ಲ. ಯಾರಿಗೂ ಆಗಿರಲಿಲ್ಲ. ಟಾರ್ಚ್‌ಲೈಟ್ ಹಾಕಿ ನೋಡಿದರೆ ಹಿಂದೆ ಪ್ರಪಾತ ಬಾಯ್ದೆರೆದು ಕಾದಿದೆ. ಅಲ್ಲಿ ಇಳಿಯುವಂತಿಲ್ಲ. ಲಾರಿಯ ಮುಂಭಾಗದಿಂದ ಹಾರಿ ಇಳಿದು ನಡುಗಿ ನೋಡಿದೆವು. ಹಿಂದಿನ ಚಕ್ರಗಳಲ್ಲಿ ಒಂದು ಜೊತೆ ಅಂತರಿಕ್ಷದಲ್ಲಿ ಇದೆ; ಇನ್ನೊಂದು ಜೊತೆ ಚಕ್ರ ಓರೆಯಾಗಿ ರಸ್ತೆಯ ಅಂಚಿನಲ್ಲಿ ನಿಂತಿದೆ. ಅದನ್ನು ತಡೆದದ್ದು ಏನೂ ಇಲ್ಲ. ಕರೆಕಟ್ಟೆ ಇಲ್ಲದ ಘಾಟ್ ದಾರಿ ಅದು. ಹಾಗಾದರೆ ಲಾರಿ ಉರುಳಲಿಲ್ಲ ಏಕೆ ? ನಮ್ಮ ಸುದೈವದಿಂದ ಎರಡನೆಯ ಗೇರ್ ಬಿದ್ದಿತ್ತು. ಡ್ರೈವರ್ ಕಾಲು ಎತ್ತಿ ಹಾರಿದಾಗ ಕ್ಲಚ್ ಈ ಗೇರನ್ನು ಹಿಡಿದುಕೊಂಡದ್ದರಿಂದ ಆ ತರುವಾಯದ ಹಿಂಚಲನೆ ಲಾರಿಗೆ ಸಾಧ್ಯವಾಗಲಿಲ್ಲ. ಉಳಿದ ಎತ್ತರವನ್ನು ನಡೆದು ಏರಿದೆವು. ಈ ಘಟನೆಯಿಂದ ಪಡೆದ ಅನುಭವ : ಸಮವಸ್ತ್ರ ಸಕಲ ಕೆಲಸಗಳಿಗೂ ಪರವಾನಿಗೆ ಅಲ್ಲ (ನಾವು ಬದುಕಿ ಉಳಿದುದರಿಂದ).

ಹೊಸ ಪರಿಸರಕ್ಕೆ ಹೊಂದದಿದ್ದ ಮನಸ್ಸು

ಬಳ್ಳಾರಿಗೆ ನಾನು ಹೋದದ್ದು ೧ ಆಗಸ್ಟ್ ೧೯೬೩ರಂದು. ೧ ಜೂನ್ ೧೯೬೪ರಂದು ನಾನು ಬೆಟಾಲಿಯನ್ನಿನ (ಈಗ ಅವರ ಹೆಸರನ್ನು ೨೪ನೆಯ ಮೈಸೂರು ಬೆಟಾಲಿಯನ್

ಎನ್‌ಸಿಸಿ ಬಳ್ಳಾರಿ ಎಂದು ಬದಲಾಯಿಸಿದ್ದರು) ಆಫೀಸರ್ ಕಮಾಂಡಿಂಗ್ ಆದೆ. ಈ ಹತ್ತು ತಿಂಗಳ ಅವಧಿಯಲ್ಲಿ ಒಂಬತ್ತು ತಿಂಗಳ ಕಾಲ ಕರ್ನಲ್ ಏಓ ಆಗಿದ್ದುದರಿಂದ ನಮ್ಮ ೨೦–೨೫ ಆರ್ಮಿ ಸ್ಟಾಫುಗಳ ವಿಚಾರದಲ್ಲಿ ವಿಶೇಷ ಘರ್ಷಣೆ ಒದಗಲಿಲ್ಲ—ಒದಗ ಬಹುದಾದ ಸನ್ನಿವೇಶಗಳು ದಿನದಿನ ತಲೆದೋರುತ್ತಿದ್ದುವು. ಏಓ ಆದ ನಾನೇ ಖುದ್ದು ಅವನ್ನು ಪರಿಶೀಲಿಸಬೇಕಾಗಿತ್ತು, ಸಿಓ ಮುಂದೆ ಅವರು ಯಾರೂ ನೇರ ಹೋಗುವಂತಿಲ್ಲ. "March before the CO" ಅಂದರೆ ಆರ್ಮಿ ನೌಕರರಿಗೆ ಅದು ಕೊನೆಯ ಹಂತ. ಸಮಸ್ಯೆಗಳ ಕೆಲವು ಮಾದರಿ ನೋಡಿ. ಸುಬೆದಾರ್ ದಲೀಪ್‌ಸಿಂಗ್ ಹೇಳುತ್ತಾನೆ "ಸಾರ್, ನಾನು ಇಂಡಿಯನ್ ಆರ್ಮಿಯ ಜೆಸಿಓ. ರೈಲ್ವೇ ಸ್ಟೇಶನ್ನಿಗೆ ಹೋಗಿ ಪಾರ್ಸೆಲ್ ಬರಲಿಲ್ಲವೇ ಎಂದು ವಿಚಾರಿಸಿ ಬಾ ಎಂದು ತಾವು ಅಪ್ಪಣೆ ಮಾಡುತ್ತಿದ್ದೀರಿ. ನಾನು ಎರಡು ಮೈಲಿ ದೂರ ಹೇಗೆ ಹೋಗಲಿ?"

"ಆರ್ಮಿಯಲ್ಲಿ ಏನು ಮಾಡುತ್ತೀರಿ?"

"ಅಲ್ಲಿ ಸಾರ್, ಲಾರಿಯಲ್ಲಿ ಕಳಿಸುತ್ತಾರೆ. ಇಲ್ಲಿ ಕಾರು ಒಂದೇ ಇರುವುದರಿಂದ ಅದ ರಲ್ಲಿಯೇ ಕಳಿಸಬೇಕು."

"ಆದರೆ ಪೆಟ್ರೋಲ್ ಲೆಕ್ಕ ಮಿತಿ ಮೀರುವುದಲ್ಲ. ಮೇಲಿನಿಂದ ಅನುಮತಿ ಇಲ್ಲ."

"ಹಾಗಾದರೆ ನನಗೆ ಸೈಕಲ್ ಭತ್ಯ ಕೊಡಿಸಿ. ಅದೂ ಇಲ್ಲ, ಇದೂ ಇಲ್ಲ ಎಂದಾದರೆ ನಾನು ಹೇಗೆ ದುಡಿಯಲಿ?"

ಸಿ. ಎಚ್. ಎಂ. ಉತ್ತಮ್‌ಚಂದ್ ರೈಲ್ವೇ ಸ್ಟೇಶನ್ನಿನಿಂದ ಒಂದು ಪಾರ್ಸೆಲನ್ನು ಗಾಡಿ ಯಲ್ಲಿ ಹಾಕಿಸಿಕೊಂಡು ತಂದ. ರಶೀತಿಯ ಒಕ್ಕಣೆ ಕಾಗದಗಳನ್ನು ಅವನಿಗೆ ಮೊದಲೇ ಕೊಟ್ಟಿದ್ದೆ. ಅವುಗಳ ಮೇಲೆ ಅತಿಪರಿಷ್ಕಾರವಾಗಿ ಎಲ್ಲ ಕಲಮುಗಳನ್ನೂ ತುಂಬಿ ತಂದಿದ್ದ. ರೈಲ್ವೇ ಸ್ಟೇಶನ್ನಿನಲ್ಲಿ ಆತ ಕೂಲಿಯವನಿಗೆ ಐದು ರೂಪಾಯಿಗಳನ್ನೂ ಗಾಡಿಯವನಿಗೆ ಹತ್ತು ರೂಪಾಯಿಗಳನ್ನೂ ಸಂದಾಯ ಮಾಡಿದ್ದುದು ಈ ರಶೀತಿಗಳ ಪ್ರಕಾರ ಕಾಣು ತ್ತಿತ್ತು. ಗಾಡಿ ಬಾಡಿಗೆ ಎಂದು ಇವನು ಕೊಟ್ಟದ್ದು ಕೇವಲ ಎರಡು ರೂಪಾಯಿಗಳೆಂದು ಬೇರೆಯವರಿಂದ ತಿಳಿದಿತ್ತು, ಇನ್ನು ಕೂಲಿಗೆ ಖಂಡಿತ ಒಂದು ಪೈಸಾವನ್ನೂ ಕೊಟ್ಟಿರ ಲಾರ. ಹೇಗೂ ಪರಮಾವಧಿ ಮೂರು ರೂಪಾಯಿಗಳಲ್ಲಾಗಬಹುದಾಗಿದ್ದ ಈ ಸೇವೆಗೆ ಹದಿನೈದು ರೂಪಾಯಿಗಳೆಂದಾಗ ನನಗೆ ಹೊಟ್ಟೆ ಉರಿದು ಹೋಯಿತು. "ಇದೇನು ಹೆಚ್ಚಾಯಿತಲ್ಲ" ಎಂದು ಹೇಳಿದ್ದೇ ತಪ್ಪಾಯಿತು.

"ನಾನು ಇಂಡಿಯನ್ ಆರ್ಮಿಯ ಸಿ. ಎಚ್.ಎಂ. ಹಾಗೆಲ್ಲ ಸುಳ್ಳು ಹೇಳುವವನೆಂದು ತಾವು ಭಾವಿಸಿ ಹೀನಾಯವಾಗಿ ನೋಡಿದ್ದು ನನಗೆ ಅಪಮಾನವಾಯಿತು ಸಾರ್" ಎಂದು ಆಕ್ರೋಶಿಸಿದಾಗ offence is the best form of defenceನ ಪ್ರತ್ಯಕ್ಷರೂಪ ಅನುಭವಿಸಿದೆ. ಸೋತದ್ದು—ಅಸಹಾಯಕತೆಯ ಕಾರಣವಾಗಿ—ನಾನೇ. ಸರಕಾರದ ಹಣದ ಈ ದುರ್ವ್ಯಯ ನಿಲ್ಲಬೇಕು ಎಂದು ನಿರ್ಧರಿಸಿ ಮುಂದೆ ಪ್ರತಿಸಲವೂ ನಾನೇ ಹಣಕಾಸಿನ ಸಕಲ ವ್ಯವಹಾರಗಳಿಗೂ ಆರ್ಮಿ ಸ್ಟಾಫುಗಳ ಜೊತೆ ಹೋಗುತ್ತಿದ್ದೆ. ಆದರೆ ಇದರಿಂದ ಲಭಿಸಿದ್ದು ಎರಡು "ಲಾಭ"—ನನ್ನ ಕೆಲಸ ಹೆಚ್ಚಾಯಿತು; ಆರ್ಮಿ ಸ್ಟಾಫುಗಳ ದೃಷ್ಟಿ ಯಲ್ಲಿ ನಾನೊಬ್ಬ "ಸಿವಿಲಿಯನ್" ಅಂದರೆ ನಾಲಾಯಕ್ ಎನ್ನುವ ಧ್ವನಿ. ಅವರ ಪರಿ

ಸರಗದಲ್ಲಿ ಬೆಳೆದುಬರದ, ಅವರ ಭಾಷೆ (ಹಿಂದಿ ನನಗೆ ಬಾರದು) ಆಡದ, ಅವರ ಮನೋಧರ್ಮ ಅರಿಯದ ನಾನು ಓಜಿ ವೇಷದಲ್ಲಿದ್ದರೂ ಅವರು ನನ್ನನ್ನು ಅವರ ಪೈಕಿ ಒಬ್ಬ ಎಂದು ಭಾವಿಸುವುದು ಸಾಧ್ಯವಾಗಲಿಲ್ಲ. ನನಗೂ ಹಾಗೆ—ಪ್ರಾಮಾಣಿಕತೆ, ನಿಷ್ಠೆ ಕಾರ್ಯತತ್ಪರತೆ ಇವುಗಳಲ್ಲಿ ಆರ್ಮಿ ಮಟ್ಟ ಬೇರೆ ಸಿವಿಲ್ ಮಟ್ಟ ಬೇರೆ ಎಂದು ಇರ ಕೂಡದು ; ಎಲ್ಲವೂ ವಿಶ್ವೇಶ್ವರಯ್ಯ ಮಟ್ಟದ್ದೇ ಆಗಿರತಕ್ಕದ್ದು ಎಂದುಕೊಂಡು ಕಾರ್ಯ ತತ್ಪರನಾಗಿದ್ದವನಿಗೆ ಹೆಜ್ಜೆ ಹೆಜ್ಜೆಗೆ ಸವಾಲಾದದ್ದು ಆದರ್ಶಕ್ಕೂ ಕೃತಿಗೂ ನಡುವೆ ಇದ್ದ ಮತ್ತು ಬಿರಿಯುತ್ತಿದ್ದ ಕೊರಕಲು. ವ್ಯವಸ್ಥಿತ ಭ್ರಷ್ಟಾಚಾರವೇ ಆರ್ಮಿ ಆಗಿರಬಹುದೇ?

ಮೂರನೆಯ ಮಾದರಿ ನೋಡಿ. ಹವಿಲ್ದಾರ್ ಚಾಯಲ್‌ಸಿಂಗ್ "ಸಾರ್ ! ಈ ದಿನ ಬೆಳಗ್ಗೆ ನಾನು ಬ್ಯಾಂಕ್ ಡ್ಯೂಟಿಗೆ ಹೋಗಿರುವುದರಿಂದ ಅಪರಾಹ್ಣ ನನಗೆ ರೆಸ್ಟ್ ಅವಧಿ. ಆದ್ದರಿಂದ ಪೆರೇಡಿಗೆ ಬರಲಾರೆ."

"ಅದು ಹೇಗೆ ? ಪೆರೇಡಿಗೋಸ್ಕರವೇ ನೀನಿರುವುದಲ್ಲವೆ ?"

"ಹಾಗಾದರೆ ಬ್ಯಾಂಕ್ ಡ್ಯೂಟಿ ಆರ್ಮಿ ಸ್ಟಾಫ್ ಮಾಡಬೇಕು ಎಂದು ಎಲ್ಲಿ ಹೇಳಿದೆ ? ಆರ್ಮಿಯಲ್ಲಿ ನಮಗೆ ಅರ್ಧ ದಿವಸ ಮಾತ್ರ ಕೆಲಸ ಉಳಿದರ್ಧ ದಿವಸ ರೆಸ್ಟ್."

ಈ ಗಂಟನ್ನು ಬಿಡಿಸುವುದು ಹೇಗೆ ? ಇನ್ನು ಹುಡುಗರ ಸೌಕರ್ಯಕ್ಕೋಸ್ಕರ ಆದಿತ್ಯ ವಾರ ಪೆರೇಡ್ ೩ ಗಂಟೆಗಳ ಕಾಲ ಮಾಡಿಸುತ್ತಿದ್ದೆವು. "ಸಾರ್, ಆದಿತ್ಯವಾರ ನಮಗೆ ಹಕ್ಕಿನ ರಜಾದಿವಸ. ಅಂದು ಪೆರೇಡಿಗೆ ಬಂದುದರಿಂದ ಸೋಮವಾರ ಇಡೀ ದಿವಸ ನಮಗೆ ರೆಸ್ಟ್ ಬೇಕು."

ಕರ್ನಲ್ಲರ ಹತ್ತಿರ ಹೋಗಿ ಹೇಳಿಕೊಳ್ಳಿ ಎಂದೆನೇ, ಎರಡು ವಿಧಗಳಲ್ಲಿ ಅದು ತಪ್ಪು. ಒಂದು, ನಾನು ಅದಕ್ಷ ಎಂದು ಇಬ್ಬರಿಗೂ ಮನವರಿಕೆ ಮಾಡಿಕೊಟ್ಟಂತಾಯಿತು. ಎರಡು, ಹೊಣೆ ಹೊರಲಾರದ ನಾನು ಈ ಕೆಲಸದಲ್ಲಿ ಉಳಿಯುವುದು ನ್ಯಾಯವೇ ?

ದಿನದಿನ ಈ ಸಮಸ್ಯೆಗಳನ್ನು ನಾನು ಕರ್ನಲ್ಲರೊಡನೆ ಚರ್ಚಿಸುತ್ತಿದ್ದೆ. "ಪಾಪ ! ಆರ್ಮಿಯಲ್ಲಿ ಬಲು ಕಷ್ಟಪಟ್ಟು ಕೊನೆಯ ದಿವಸಗಳಲ್ಲಿ ಇಲ್ಲಿಗೆ ಬಂದಿದ್ದಾರೆ. ಅವರು ಸುಖ ಪಡಲಿ. ನೀವೇ ಹೇಗಾದರೂ ಸುಧಾರಿಸಿ." ಸ್ವತಃ ೨೪ ಗಂಟೆಗಳೂ ದುಡಿಯು ತ್ತಿದ್ದ ಇವರಿಗೆ ಸ್ವಜಾತಿ ಬಾಂಧವರ ಕೆಲಸಗಳ್ಳತನದ ವಿಷಯ ಅಷ್ಟೊಂದು ಅನುಕಂಪ. ಆರ್ಮಿ ಸುಬೆದಾರರಿಗೂ ಎನ್‌ಸಿಸಿ ಆಫಿಸರರುಗಳಿಗೂ ಜಟಾಪಟಿ ; ಸಿವಿಲ್ ಸ್ಟಾಫಿಗೂ ಆರ್ಮಿ ಸ್ಟಾಫಿಗೂ ಚಕಮಕಿ—ಇವೆಲ್ಲ ದೈನಂದಿನ ಅಪರಿಹಾರ್ಯ ಸಮಸ್ಯೆಗಳಾದುವು. ಯಾವುದೂ ಪ್ರಕೋಪಕ್ಕೆ ಮುಟ್ಟಲಿಲ್ಲ. ಕಾರಣ ಒಳಗೆ ಕರ್ನಲ್ಲರು ಅಧ್ಯಕ್ಷತೆ ವಹಿಸಿದ್ದ ರಷ್ಟೆ. ಇವೆಲ್ಲ ವೈಯಕ್ತಿಕ ಕಿರಿಕಿರಿಗಳು ಬಹುಶಃ ಈ ಹುದ್ದೆಯಲ್ಲಿ ಅನುಭವಿಸಲೇ ಬೇಕಾಗಿದ್ದ ಮಾನವೀಯ ಸಮಸ್ಯೆಗಳು ಎಂದು ಬಗೆದು ನನ್ನ ಸಾಮರ್ಥ್ಯದ ಮಿತಿಯಲ್ಲಿ ಉತ್ಸಾಹದಿಂದ ಕೆಲಸ ನಿರ್ವಹಿಸೋಣ ಎಂದರೆ ಮೂರು ಮುಖ್ಯ ವೈಯಕ್ತಿಕ ಕಾರಣಗಳು ನನಗೆ ತೀವ್ರ ನಿರಾಶೆ ಉಂಟುಮಾಡಿದುವು.

ಒಂದನೆಯದು, ನನಗೆ ದೊರೆಯುತ್ತಿದ್ದ ಆರ್ಥಿಕ ಸಂಭಾವನೆ, ಪೂನಾದಲ್ಲಿರುವ ಕಂಟ್ರೋಲರ್ ಆಫ್ ಡಿಫೆನ್ಸ್ ಅಕೌಂಟ್ಸ್ (ಆಫಿಸರ್ಸ್) ಸಂಕ್ಷೇಪವಾಗಿ ಸಿಡಿಎಓ ಕೇಂದ್ರ ಸರಕಾರದ ನಿಯಮಗಳಿಗೆ ಸರಿಯಾಗಿ ಅರ್ಥ (?) ನೀಡಿ ನನಗೆ (ಪೂರ್ಣಾವಧಿ ಎನ್‌ಸಿಸಿ

ಕಮಿಷನ್ ಪಡೆದ ಎಲ್ಲರಿಗೂ). ಎಂದರೆ ೧೦-೧೧ ವರ್ಷ ಎನ್‌ಸಿಸಿ ಅನುಭವ ಪಡೆದು ಕ್ಯಾಪ್ಟನ್ ದರ್ಜೆ ಪಡೆದಿದ್ದವನಿಗೆ, ತಿಂಗಳೊಂದರ ಸಮಗ್ರವಾಗಿ ರೂಪಾಯಿ ೬೩೦ ಸಂಬಳವೆಂದು ನಿಗದಿಮಾಡಿದ್ದು. ಮಡಿಕೇರಿ ಬಿಟ್ಟು ಬಂದುದಕ್ಕೆ ನನಗೆ ಆದದ್ದು ಮೂರು ವಿಧದ ನಷ್ಟ—ತಿಂಗಳೊಂದರ ೪೦ ರೂಪಾಯಿಗಳಿಗೆ ಕಡಿಮೆ ಇರದಂತೆ ಆರ್ಥಿಕ ನಷ್ಟ; ಕಾಲೇಜು ಲೆಕ್ಚರರ ದುಡಿಮೆಗಿಂತ ನಾಲ್ಕು ಪಟ್ಟು ಹೆಚ್ಚು ದುಡಿಮೆ; ನನಗೆ ಬಲು ಪ್ರಿಯ ವಾಗಿದ್ದ ಗಣಿತಶಾಸ್ತ್ರ ಮತ್ತು ಅಧ್ಯಾಪಕ ವೃತ್ತಿಯಿಂದ ಬಿಡುಗಡೆ. ಕರ್ನಲ್ಲರೊಡನೆ ಈ ವಿಚಾರ ಮಾತಾಡಿದಾಗ "ಅವರು ಹೇಳಿದರು ಇವರು ಹೇಳಿದರು ಎಂದು ನೀವು ನಂಬಿ ಬಂದದ್ದು ತಪ್ಪು. ಮೊದಲು ನಿಮ್ಮ ಹಿತ ನೋಡಿ. ದೇಶದ ಹಿತ ಆಗ ತಾನಾಗಿಯೇ ಆಗುತ್ತದೆ" ಎಂದು ವ್ಯಾವಹಾರಿಕ ನೀತಿಯನ್ನು ಉಪದೇಶಿಸಿದರು.

ಎರಡನೆಯದು, ಆಫೀಸು ಕಟ್ಟುವ ಮತ್ತು ಹೊಸ ನೆಲ ತುಳಿಯುವ ಪ್ರಾರಂಭಿಕ ಉತ್ಸಾಹ ವೈವಿಧ್ಯ ಮುಗಿದು ದಿನದಿನ ಮಾಡಿದ್ದೇ ಮಾಡೋ ಮಾರಾಯ ಪರ್ವಕ್ಕೆ ಬಂದಾಗ ಮಿದುಳು ರೋಸಿ ಹೋಯಿತು. ಪ್ರಧಾನವಾಗಿ ಬುದ್ಧಿಜೀವಿಯಾದ ಹೊಸ ಹೊಸ ಪ್ರಯೋಗಪ್ರಿಯನಾದ ನನಗೆ ಆರ್ಮಿಯ ನೀರಸ ಏಕತಾನ ಸಹಿಸಲಾರದ ಬಿಡಿ ಚಲುಹಿಡಿಸಿತು. ನಾನೊಬ್ಬ ಬೃಹನ್ನೈಫಲ್ ಆಗುತ್ತಿದ್ದೇನೆ ಎಂಬ ಭಾವನೆ ಗಳಿಗೆಗಳಿಗೆಗೆ ಬಲವಾಗುತ್ತಿತ್ತು. ಇಂಗ್ಲಿಷಿನಲ್ಲಾಗಲೀ ಕನ್ನಡದಲ್ಲಾಗಲೀ ಆಫೀಸಿನ ಕೆಲಸಕ್ಕೆ ಸಂಬಂಧ ಪಡದ ಒಂದೇ ಒಂದು ವಾಕ್ಯ ಬರೆಯುವುದು ನನಗೆ ಸಾಧ್ಯವಾಗಲಿಲ್ಲ. ನಾನು ಮೆಚ್ಚಿದ್ದ ಸಾಹಿತ್ಯ, ಕಾವ್ಯ, ಕನ್ನಡಭಾಷೆ, ಗಣಿತಶಾಸ್ತ್ರ, ಕರ್ನಾಟಕ ಸಂಗೀತ ಎಲ್ಲವೂ ಹೇಳ ಹೆಸ ರಿಲ್ಲದೇ ಹೋಗಿ "ಗಿಂಥೀಸೇ ಏಕ್, ಗಿಂಥೀಸೇ ದೋ..." ಎಂಬ ಒಣ ವಿಧಿಯ ದಾಸ ನಾನಾಗುತ್ತಿದ್ದೇನೆ ಎಂದು ಅನಿಸಿ ತಲೆ ಕೆಟ್ಟಂತೆ ಆಗುತ್ತಿತ್ತು.

ಮೂರನೆಯದು, ನಾನು ಬಾಡಿಗೆಗೆ ಹಿಡಿದಿದ್ದ ಬಂಗ್ಲೆಯ ಯಜಮಾನತಿ. ಇಲ್ಲಿ ನಾನು ಮಿಲಿಟರಿ ಕಮಾಂಡರ್. ಅಲ್ಲಿ ನಾನು ಆಕೆಯ ಅವಾಚ್ಯ ನುಡಿಗಳಿಗೆ ಅಸಭ್ಯ ವರ್ತನೆಗೆ ಹೆದರಿ ಕಂಗಾಲಾಗಿ ಮನೆಯಲ್ಲಿ ಇದ್ದಷ್ಟು (ರಾತ್ರಿ ಮಾತ್ರ) ಹೊತ್ತೂ ಅನುಭವಿ ಸಿದ್ದು ಕಾದ ಕಾವಲಿ ಮೇಲಿನ ಸುಖವನ್ನು. ಜಗಳವಾಡಲು ಅದೂ ಹೆಂಗಸಿನೊಡನೆ ನನಗೆ ಸುತರಾಂ ಬರದು. ಇನ್ನು ೨೪ ಗಂಟೆಗಳೂ ಅಲ್ಲಿಯೇ ಇರಬೇಕಾಗಿದ್ದ ಮಡದಿಯ ಭಾಗ್ಯವನ್ನು ನಾನು ಅದೆಂತು ಬಣ್ಣಿಸಲಿ. ಇಂದಿಗೂ ಆಕೆ ಬಳ್ಳಾರಿ ಎಂದಾಗ ಈ ಸಿಂಹಿಣಿಯ ಸ್ವಪ್ನವನ್ನೇ ಕಂಡು ಬೆಚ್ಚುವುದುಂಟು.

ಸುಸಂಸ್ಕೃತ ವರ್ತನೆಗೆ ಮನೆಯ ಪರಿಸರದಲ್ಲಿ ಬೆಲೆ ಇಲ್ಲ. ಆರ್ಮಿ ಸ್ಟಾಫುಗಳೊಡನೆ ಬೆಲೆ ಇಲ್ಲ. ಇದೇನು ಗ್ರಹಚಾರ ಎಂದುಕೊಂಡಾಗಲೇ ಕೇಂದ್ರ ಸರಕಾರದಿಂದ ಹೊಸ ಎರಡು ಬಾಂಬುಗಳು ಬಿದ್ದುವು. ಮೊದಲನೆಯದು ಮನೆ ಸಾಮಾನು ಸರುಜಾಮುಗಳನ್ನು ಮಡಿಕೇರಿಯಿಂದ ಬಳ್ಳಾರಿಗೆ ಸಾಗಿಸಲು ನನಗೆ ಐನೂರು ರೂಪಾಯಿಗಳು ಖರ್ಚಾಗಿ ದ್ದುವು. ಆದರೆ ನಾನು ಆರ್ಮಿಯವನಲ್ಲವಾದ್ದರಿಂದ ಕಾನೂನು ಪ್ರಕಾರ ಆರು ರೂಪಾಯಿ ಗಳನ್ನು ಮಾತ್ರ ಪಡೆಯಲು ಅರ್ಹನೆಂದು ಆ ಹುಕುಂ ತಿಳಿಸಿತು. ಈ ಮಹಾ ಕರುಣೆ ಯಿಂದ ಸಂತುಷ್ಟನಾದ ನಾನು ಆ ಹಣವನ್ನು ಪಡೆಯಲಿಲ್ಲ. ಎರಡನೆಯದು ಎನ್‌ಸಿಸಿ ಪೂರ್ಣಾವಧಿ ಕಮಿಷನ್ ಆಫೀಸರರಾದ ನನ್ನಂಥವರೆಲ್ಲರೂ (ಇಡೀ ಭರತಖಂಡದಲ್ಲಿ)

ಎನ್‌ಸಿಸಿಯು ಹೊಸ ಸಮವಸ್ತ್ರವಾದ ಖಾಕಿ ಪ್ಯಾಂಟ್ ಮತ್ತು ಸ್ಲೇಟ್ ಬಣ್ಣದ ಬುಷ್ ಶರಟಿಗೆ ಬದಲಾಯಿಸಬೇಕೆಂದು ಬಂದ ಹುಕುಂ. ಆ ಮೊದಲು (ಆಗಸ್ಟ್ ೧೯೬೩) ನಾನು ಓಜಿ ಸಮವಸ್ತ್ರ ಹೊಲಿಸುವಾಗ ನಾನೂರು ರೂಪಾಯಿ ಸಮವಸ್ತ್ರ ಭತ್ಯ ಎಂದು ಸರಕಾರ ಕೊಟ್ಟಿತ್ತು. ಅಷ್ಟನ್ನೂ ಖರ್ಚು ಮಾಡಿ ಓಜಿ ಸಮವಸ್ತ್ರಗಳ ರಾಶಿಯನ್ನೇ ಹೊಲಿಸಿದ್ದೆ. ಈಗ ಹೊಸ ಸಮವಸ್ತ್ರಗಳಿಗೇನಾದರೂ ಹೊಸಭತ್ಯ ಕೊಡುವರೋ ಎಂದು ವಿಚಾರಿಸಿದಾಗ ಉತ್ತರ ನಕಾರಾತ್ಮಕ. ಹಳೆಯವು ನನಗೆ ಪ್ರಯೋಜನವಿಲ್ಲ. ಹೊಸವುಗಳ ಮೇಲೆ ನಾನು ಹಣ ಹೂಡಬೇಕಾಯಿತು. ಸಮವಸ್ತ್ರದ ಪರಿವರ್ತನೆಯ ಈ ಹುಕುಮಿಗೆ ಕಾರಣ ನನ್ನ ಜಾತಿಯವರೇ ಎಂದು ಮುಂದೆ ತಿಳಿದೆ. ಸ್ವತಃ ಆರ್ಮಿ ಆಫೀಸರರಲ್ಲದ ಈ ಎನ್‌ಸಿಸಿ ಆಫೀಸರರು ಓಜಿ (ಎಂದರೆ ಪ್ರತಿಷ್ಠೆಯ, ಅಧಿಕಾರದ ಗೌರವದ ಕುರುಹು) ಸಮವಸ್ತ್ರಧಾರಿಗಳಾದದ್ದೇ ತಡ out-herod Herod (ಆರ್ಮ್ಯತೀತ ಆರ್ಮಿವರ್ತನೆ) ಮನೋಭಾವದಿಂದ ವರ್ತಿಸಿದರಂತೆ. ನವಿಲಿನ ಪುಕ್ಕದ ಕಾಗೆಯ ನರ್ತನ ತಪ್ಪು ಹೆಜ್ಜೆಗಳ ಕಲಸುಮೇಲೋಗರವಾಯಿತು. ಆದ್ದರಿಂದ ಈ ಕುಳ ಓಜಿಧಾರಿಯಾಗಿರಲು ನಾಲಾಯಕ್ ಎಂದು ಆರ್ಮಿ ಕೇಂದ್ರ ನಿರ್ಧರಿಸಿ ಹೊಸ ಹುಕುಂ ಜಾರಿ ಮಾಡಿತು. ಕಾರಣ ವಿತರಣೆ ಏನೇ ಇರಲಿ, ತಪ್ಪು ಅವಿವೇಕ ಯಾರದ್ದೇ ಇರಲಿ—ಯಾವ ಕಾಲು ಜಾರಿದರೂ ಕುಂಡೆಗೆ ಪೆಟ್ಟು ಎಂಬಂತೆ—ಇವೆಲ್ಲವುಗಳ ಪರಿಣಾಮವಾಗಿ ನನಗೆ ಆರ್ಥಿಕ ಸಮತೋಲವೂ ಮಾನಸಿಕ ಸಮತೋಲವೂ ಒಂದೇ ವೇಳೆ ನಷ್ಟವಾದುವು. ಆದರೆ ನನ್ನ ಹೊಸ ಕೆಲಸದ ಷರತ್ತುಗಳ ಪ್ರಕಾರ ಎರಡು ವರ್ಷಗಳ ಕೆಲಸದ ತರುವಾಯ ಕೇಂದ್ರ ಸರಕಾರ ನನ್ನನ್ನು ಹಿಂದೆ ಕಳಿಸಬಹುದು ; ಮೂರು ವರ್ಷಗಳ ಕೆಲಸದ ತರುವಾಯ ನಾನಾಗಿ ಹಿಂತಿರುಗಬಹುದು ಎಂದಿತ್ತು. ಹೀಗಾಗಿ ಜೂನ್ ೧೯೬೪ರಲ್ಲಿ ನನಗೆ ದರ್ಜೆ, ಕೆಲಸಗಳಲ್ಲಿ ಬಡ್ತಿ ದೊರೆತು ನಾನೇ ಓಸಿ ಆದಾಗ (ಆರ್ಥಿಕವಾಗಿ ಇದರಿಂದ ತಿಂಗಳೊಂದರ ರೂಪಾಯಿ ಐವತ್ತು ಮಾತ್ರ ಹೆಚ್ಚು ಬಂತು) ನನಗೆ ಏನೂ ಅನಿಸಲಿಲ್ಲ —ಒಂದು ವಿಧದಲ್ಲಿ ಭಯವೇ ಆಯಿತು ; ಕರ್ನಲ್ಲರು ಹೋದ ಮೇಲೆ ಈ ಆರ್ಮಿ ಸ್ಟಾಫ್ ನಡವಳಿಕೆಯನ್ನು ಹೇಗೆ ಎದುರಿಸಲಿ ಎಂದು ನೆನೆದು.

ಮನಸ್ಸಾಕ್ಷಿಗೆ ವಿರುದ್ಧ ವೃತ್ತಿ ಬೇಡ

ಕರ್ನಲ್ ಮುತ್ತಣ್ಣ ಶಿವಮೊಗ್ಗೆಗೆ ಹೋದಮೇಲೆ, ಅವರ ಪ್ರತಿಭೆಯ ಕಾವು ಬೆಟಾಲಿಯನ್ನಿನ ಚಟುವಟಿಕೆಗಳ ಮೇಲೆ ತಗ್ಗಿದ ಮೇಲೆ, ದಿನದಿನದ ಸಂಗೀತವನ್ನು ನಾನೂ ನನಗೆ ಏಓ—ಅಂದರೆ ನನಗೆ ಸಹಾಯಕರಾಗಿ ನೇಮನಗೊಂಡಿದ್ದ (Administrative Officer) ಆಗಿ ಬಂದಿದ್ದ ಒಬ್ಬರು ಎನ್‌ಸಿಸಿ ಕ್ಯಾಪ್ಟನ್‌ರವರೂ ಆಲಿಸಬೇಕಾಯಿತು. ಈಗ ನಾನು ಬಳ್ಳಾರಿಜಿಲ್ಲೆಯ ಕಮಾಂಡಿಂಗ್ ಆಫೀಸರ್—ಡೆಪ್ಯೂಟಿ ಕಮಿಷನರ್ ಮಟ್ಟದವನು. ಆದ್ದರಿಂದ ಜನತೆ, ಸಮಾಜ ನನ್ನಿಂದ ನಿರೀಕ್ಷಿಸುವುದು ಭಾರೀ ಮಟ್ಟದ showವನ್ನು. ನನ್ನ ಹೆಂಡತಿ ಇದ್ದಕ್ಕಿದ್ದಂತೆ ಈಗ ಮೆಡಾಂಸಾಹೇಬಿನಿ ಆದಳು. ನನಗಿಂತ ಹೆಚ್ಚಿನ ಮಟ್ಟದ ಶೋವನ್ನು ಜನತೆ ಅವಳಿಂದ ಕಾಣಬಯಸಿತ್ತು. ಆದರೆ ನಾವು ನಾವಾಗಿಯೇ ಉಳಿದೆವು. ಬಂಡ್ವಾಳಿಲ್ಲದ ಬಡಾಯಿ ಸಲ್ಲದು, ನನ್ನ ಕೆಲಸವೇ ನನ್ನ ಶ್ರದ್ಧೆಯೇ ನನಗೆ

ಗೌರವ ತರಬೇಕೇ ವಿನಾ ಈ ಶೋ ಮುಂತಾದವಲ್ಲ ಎಂದು ನನ್ನ ಮತ. ಹೀಗಾಗಿ ನಾನು ಯಾವ ಕ್ಲಬ್ಬಿಗೂ ಮೆಂಬರನಾಗಲಿಲ್ಲ. ಯಾವ ಕುಲೀನ ಸಮಾಜಸ್ತರದ ಘಟಕವೂ ಆಗ ಲಿಲ್ಲ. ಆದರೆ ಬೆಟಾಲಿಯನ್ನಿಗೆ ಆಗಾಗ ಇನ್‌ಸ್ಪೆಕ್ಷನ್ನಿಗೆ ಬರುತ್ತಿದ್ದ ವಿವಿಧ ದರ್ಜೆಯ ಅಧಿಕಾರಿಗಳು ಮೇಲಧಿಕಾರಿಗಳು ಇವರನ್ನು ಆರ್ಮಿ ಸಂಪ್ರದಾಯಾನುಸಾರ ನಾನು ಯಥೋಚಿತವಾಗಿ ಡಿನ್ನರಿನಿಂದಲೂ ಡ್ರಿಂಕಿನಿಂದಲೂ ಸತ್ಕರಿಸಬೇಕಾಗುತ್ತಿತ್ತು. ನಮ್ಮ ಮನೆಯ ಪುಳಿಚಾರು ಊಟ, ನಿಂಬೇಹಣ್ಣಿನ ಪಾನಕ ಯಾರಿಗೆ ಪ್ರಿಯವಾದೀತು ? ಒಂದು ಪಾನಕೂಟದಲ್ಲಿ ಜೊತೆಗಿರಲಿ ಎಂದು ಇಬ್ಬರು ಎನ್‌ಸಿಸಿ ಆಫೀಸರರನ್ನು ಆಹ್ವಾನಿಸಿದ್ದೆ. ಬಂದವರೂ ಈ ಈರ್ವರೂ ರಂಗು ರಂಗಾಗಿ ಕುಡಿದರು, ಹಾಡಿದರು, ಕುಣಿದರು. ನಾನು ಅಷ್ಟು ಹೊತ್ತೂ (to keep company, ನಾನೇ ತಾನೇ ಆತಿಥೇಯ) ತಣ್ಣೀ ರನ್ನೇ ಕುಡಿದದ್ದು ! ನನ್ನಂಥ ನಿಸ್ಸತ್ತ್ವ ನೀರು ಕುಡಿಕರೊಡನೆ ಈ ಹೆಂಡಕುಡುಕರಿಗೆ ಒಂದಿಷ್ಟೂ ಒಗ್ಗುವುದಿಲ್ಲ. ಹೀಗೆ ನನ್ನ ಹೊಸ ಹುದ್ದೆ ಖರ್ಚನ್ನು ಬಲುವಾಗಿ ಏರಿಸಿತು. ಆರ್ಮಿ ಸ್ಟಾಫುಗಳ ಅಡಳಿತೆ ಬೃಹದಾಕಾರವಾಗಿ ಬೆಳೆಯಿತು, ವೈಯಕ್ತಿಕವಾಗಿ ಪ್ರತಿ ಯೊಬ್ಬನೂ ಯೋಗ್ಯನೇ. ಪ್ರತಿಯೊಬ್ಬನೂ ನಮ್ಮ ಆಫೀಸಿನ ವಿಷಯವಾಗಿಯೂ ನನ್ನ ವಿಷಯವಾಗಿಯೂ ಅಭಿಮಾನ ಇದ್ದವನೇ. ಅವರ ಎಲ್ಲ ವಿಧವಾದ ಆರ್ಥಿಕ ಸಾಂಸಾರಿಕ ಸಮಸ್ಯೆಗಳಿಗೆ ನಾನು ಮುತುವರ್ಜಿ ವಹಿಸಿ ಮೇಲಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸಿ ಪರಿಹಾರಗಳನ್ನು ಸಕಾಲದಲ್ಲಿ ತರಿಸುತ್ತಿದ್ದುದನ್ನು ಅವರೆಲ್ಲರೂ ಸ್ಮರಿಸುತ್ತಿದ್ದರು. "ಸಾರ್ ! ನಮ್ಮ ರೆಗ್ಯುಲರ್ ಯೂನಿಟ್ಟುಗಳಲ್ಲಿಯೂ ಈ ರೀತಿ ನಮ್ಮ ಯೋಗಕ್ಷೇಮ ನೋಡಿಕೊಳ್ಳುವುದಿಲ್ಲ" ಎಂದು ಅವರು ಮುಕ್ತಕಂಠದಿಂದ ನನಗೆ ಕೃತಜ್ಞತೆ ಅರ್ಪಿಸುತ್ತಿ ದ್ದರು. ಮೆಡಾಂ ಸಾಹೇಬಿನಿ (ಆರ್ಮಿ ಕ್ರಮದಂತೆ) ಆರ್ಮಿ ಸ್ಟಾಫುಗಳ ಮನೆಗಳಿಗೆ ಆಗಾಗ ಭೇಟಿ ನೀಡಿ ಅವರ ಹೆಂಡಿರು ಮಕ್ಕಳಿಗೆ ಸಲಹೆ ಸಹಾಯ ನೀಡಿ ಅವರ ಆತ್ಮೀ ಯತೆ ಗಳಿಸಿದ್ದಳು. ಅವಳಿಗೆ ಹಿಂದೀ ಭಾಷೆ ಬರುತ್ತಿದ್ದುದೊಂದು ಅನುಕೂಲ. ಹವಿಲ್ದಾರ್ ಜಾಸ್‌ರಾಮ್ ಎಂಬಾತ ಒಂದು ದಿವಸ ತನ್ನ ರಾಜಿನಾಮೆ ಪತ್ರ ಹಿಡಿದುಕೊಂಡು ಬಂದ. "ಸಾರ್ ! ನನಗೆ ೨೦ ವರ್ಷ ಸರ್ವಿಸ್ ಆಯಿತು. ಎಲ್ಲ ಪರೀಕ್ಷೆಗಳನ್ನೂ ಪ್ರಥಮ ದರ್ಜೆಯಲ್ಲಿ ಮುಗಿಸಿದ್ದೇನೆ. ಆದರೂ ನನಗೆ ಜೆಸಿಓ ಆಗಿ ಬಡ್ತಿ ಬಂದಿಲ್ಲ. ನನಗೆ ಆರ್ಮಿ ಯಲ್ಲಿ ಮುಂದುವರಿಯಲು ಇಷ್ಟವಿಲ್ಲ. ಆದ್ದರಿಂದ ಈ ರಾಜಿನಾಮೆ ಪತ್ರವನ್ನು ತಾವು ಶಿಫಾರಸು ಮಾಡಿ ಮೇಲಕ್ಕೆ ಕಳಿಸಿ" ಎಂದು ಅಂಗಲಾಚಿದ. ನಾನು ಏನೇ ಪ್ರಶ್ನೆ ಕೇಳಿ ದರೂ ಅವನದು ಒಂದೇ ವಿನಯಪೂರ್ವಕ ಬೇಡಿಕೆ—ಆ ಅರ್ಜಿಯನ್ನು ನಾನು ಮೇಲಕ್ಕೆ ಕಳಿಸಲೇಬೇಕೆಂದು. ಆಗ ಅವನನ್ನು ಹಾಗೇ ಕಳಿಸಿದೆ. ಮರುದಿವಸ ಮನೆಗೆ ಕರೆಸಿ ಅವನ ಆರ್ಮಿ ಚರಿತ್ರೆ ಕೇಳಿ ಬರೆದುಕೊಂಡೆ. ಅವನ ಹೇಳಿಕೆಗಳಲ್ಲಿ ಪೂರ್ಣ ಸತ್ಯ ಇತ್ತು. ಅವನ್ನು ಆಧರಿಸಿ ಆರ್ಮಿ ವರಿಷ್ಠ ಕಛೇರಿಗೆ ಪತ್ರ ಬರೆದೆ. ಈ ಮಧ್ಯೆ ಅವನ ರಾಜಿನಾಮೆ ಅರ್ಜಿ ತಡೆಹಿಡಿದು ಇಟ್ಟುಕೊಂಡೆ. ಮುಂದೆ ಒಂದು ತಿಂಗಳಲ್ಲಿ ದೆಹಲಿಯಿಂದ ಹವಿಲ್ದಾರ್ ಜಾಸ್‌ರಾಮ್‌ನನ್ನು ಜೆಸಿಓ ದರ್ಜೆಗೆ ಬಡ್ತಿ ನೀಡಿದ ಹುಕುಂ ಬಂತು. ಈ ಸಂತೋಷಕರ ಹುಕುಮನ್ನೂ ಅವನ ರಾಜಿನಾಮೆ ಅರ್ಜಿಯನ್ನೂ ಅವನ ಕೈಗೆ ನೀಡಿ "ಈಗೇನು ಮಾಡ ಬೇಕು ?" ಎಂದು ಕೇಳಿದೆ. ಆ ಮಹಾರಾಯ ನನ್ನ ಪಾದ (ಬೂಟು) ಸ್ಪರ್ಶ ಮಾಡಲು

ಮುಂದೆ ನುಗ್ಗಿದಾಗ ನಾನು ಆಸನದಿಂದ ಎದ್ದು ಅವನನ್ನು ಎತ್ತಿಹಿಡಿದು "ಅದೆಲ್ಲ ಬೇಡ. ಚೆನ್ನಾಗಿರು" ಎಂದು ಹಾರೈಸಿದೆ.

ಆರ್ಮಿ ಸ್ಟಾಫುಗಳು, ಬಹುತೇಕವಾಗಿ, ನಾವು ತಿಳಿದಿರುವ ವಿದ್ಯೆಯಲ್ಲಿ ಪರಿಣತರಲ್ಲ. ಅವರ ಕಸುಬಿನಲ್ಲೂ ಸ್ವಂತ ಲಾಭದ ದಾರಿಯಲ್ಲೂ ಮಾತ್ರ ಹುಷಾರಿನವರು. ವ್ಯಾವಹಾರಿಕ ಪ್ರಪಂಚದಲ್ಲಿ ಇಷ್ಟರಿಂದಲೇ ಮೇಲೆ ಏರಲು ಸಾಧ್ಯವಾಗುವುದಿಲ್ಲ. ಇನ್ನು ಆರ್ಮಿ ನಿಬಂಧನೆಗಳ ಅಕ್ಟೋಪಸಿನ ಅಪ್ಪುಗೆಯು ಬಿಗಿ ಅವರ ಮೇಲೆ ಬಹಳವಾಗಿರುತ್ತದೆ. ಇಲ್ಲೆಲ್ಲ ವಿದ್ಯಾವಂತರಾದ ನಾವು ಅವರಿಗೆ ನೀಡಬಹುದಾದ ಮಾರ್ಗದರ್ಶನ, ಸಲ್ಲಿಸಬಹುದಾದ ಸೇವೆ ಅಪಾರ. ಉದಾಹರಣೆಗೆ ಅವರ ವಿಷಯಕ್ಕೆ ಸಂಬಂಧಿಸಿದಂಥ ಪರೀಕ್ಷೆಗಳಿಗಾಗಿ ಹೆಚ್ಚಿನ ಶಿಕ್ಷಣ. ಇದನ್ನೂ ವ್ಯವಸ್ಥಿತವಾಗಿ ಬೆಟಾಲಿಯನ್ನಿನಲ್ಲಿ ಏರ್ಪಡಿಸಿ ಅವರಿಗೋಸ್ಕರ ಕ್ಲಾಸುಗಳನ್ನು ಮಾಡಿದ್ದಿತ್ತು. ಇದೆಲ್ಲ ಸರಿ. ಆದರೆ ಅವರ ಸಾಮೂಹಿಕ ಶಿಸ್ತಿನ ಪ್ರಶ್ನೆಬಂದಾಗ ನಾನವರಿಗೆ ಪರಕೀಯನೇ ಆಗಿದ್ದೆ : "ನಿಮ್ಮೊಡನಿದ್ದೂ ನಿಮ್ಮಂತಾಗದೆ."

ಹೀಗೆ ಆಂತರಿಕವಾಗಿ ಉಷ್ಣತೆ ಕ್ರಮೇಣ ಏರುತ್ತಿದ್ದಾಗ ಶಿವಮೊಗ್ಗ ಗ್ರೂಪ್ ಹೆಡ್‌ಕ್ವಾರ್ಟರ್ಸ್ ಕಡೆಯಿಂದ ಬೇರೆಯೇ ವಿಧದ ಸಮಸ್ಯೆ ಪ್ರಾರಂಭವಾಯಿತು. ಒಟ್ಟಿಗೆ ಇದ್ದಾಗ ಕರ್ನಲ್ಲರ ಮತ್ತು ನನ್ನ ಮನಸ್ಸುಗಳು ಅನ್ಯೋನ್ಯವಾಗಿ ಹೊಂದಿಕೊಂಡಿದ್ದರೂ (ಹಾಗೆಂದು ನಾನು ಭಾವಿಸಿದ್ದೆ ; ಅಂದಿನ ವರ್ತನೆಗಳೆಲ್ಲವೂ ಇದನ್ನೇ ದೃಢಪಡಿಸುವಂತಿದ್ದುವು) ಭೌಗೋಳಿಕವಾಗಿ ದೂರವಾಗಿ ದಿನಗಳು ಸರಿದಂತೆ ಈ ಸಾಮರಸ್ಯ ಉಳಿದಿತ್ತು ಎಂದು ನನಗೆ ಅನ್ನಿಸಲಿಲ್ಲ. ಅವರೇ ಕಟ್ಟಿದ ಸಂಸ್ಥೆ. ಅದೇ ಪರಂಪರೆಯಲ್ಲಿ ನಾನು ಬಲು ಮುತುವರ್ಜಿಯಿಂದ ಮುಂದುವರಿಯುತ್ತಿದ್ದೆ. ಆದರೆ ನಾನು ಸಹ ಶಿವಮೊಗ್ಗ ಟಪ್ಪಾಲು ಬರುವಾಗ ಎದೆ ಅದುರು ತಯಾರಾಗಿರುವ ಪರಿಸ್ಥಿತಿ ತಲೆದೋರಿತು. ಒಂದು ದಿವಸ ರಿಟರ್ನ್ ಬರಲಿಲ್ಲ, ಇನ್ನೊಂದು ದಿವಸ ಈ ಪತ್ರದಲ್ಲಿ ಓವರ್‌ಟೈಪ್ ಆಗಿದೆ, ಮತ್ತೊಂದು ದಿವಸ ಕಾಗದದ ಕವರಿನ ಮೇಲೆ ಆಫೀಸ್ ಸೀಲ್ ಒತ್ತಿಲ್ಲ—ಪ್ರತಿಯೊಂದಕ್ಕೂ explain how ಅಥವಾ explain why ಎಂಬ ಕಠಿಣ ಪೀಠಿಕೆಗಳು. ಆಗಾಗ ಟ್ರಂಕ್ ಫೋನಿನಲ್ಲಿ ಬೇರೆ ತರಾಯಿಸಿಕೆಗಳು. ಒಂದು ದಿವಸ ನನ್ನ ಇಂಗ್ಲಿಷ್ ಒಕ್ಕಣೆಯು ಧಾಟಿ ಮರ್ಯಾದೆಯ ಗೆರೆಯನ್ನು ಅತಿಕ್ರಮಿಸಿದೆ ಎಂದು (ತಪ್ಪಾಗಿ) ಟ್ರಂಕ್ ಫೋನಿನಲ್ಲಿ ರಾಕೆಟ್ ಬಂದಾಗ ನನಗೆ ಸಹನೆ ತಪ್ಪಿತು—ನಾನು ಮದ್ರಾಸು ವಿಶ್ವವಿದ್ಯಾಲಯದ ಎಂ.ಎ. ಪದವೀಧರ, ನನ್ನ ಇಂಗ್ಲಿಷ್ ಮಟ್ಟ ಕುರಿತು ಅವರ ಔಚಿತ್ಯದ ತೂಕ ಕುರಿತು ಹೀನ ದರ್ಜೆಯ ಆರ್ಮಿ ಆಫೀಸರರಿಂದ ಸೂಚನೆ ಪಡೆಯಲು ಸಿದ್ಧನಿಲ್ಲವೆಂದು ಹೇಳಿ ಫೋನನ್ನು ಕೆಳಗಿಟ್ಟೆ.

ಈಗ ಅತೃಪ್ತಿಯ ಅಸಮಾಧಾನದ ನಿರಾಶೆಯ ಚಷಕ ಪೂರ್ಣವಾಗಿತ್ತು (ಅಕ್ಟೋಬರ್ ೧೯೬೪). My present tenure in the wholetime cadre will end on 31 July 65. I do not wish to continue in this organization even though returning to the parent profession may mean initially some financial loss to me. I value satisfaction of one's own

conscience a sufficient reward to have better sway over one's financial returns—ಎಂದು ಮುಂತಾಗಿ ಕರ್ನಲ್ಲರಿಗೆ ಖಾಸಗಿ ಪತ್ರ ಬರೆದೆ. ಪ್ರತ್ಯೇಕ ವಾಗಿ ಅವರ ಮೂಲಕ ಅಧಿಕೃತ ರಾಜಿನಾಮೆ ಪತ್ರವನ್ನು ದೆಹಲಿಗೆ ಕಳಿಸಿದೆ. ಮಾರ್ಚ್ ೧೯೬೫ರಂದು ನನ್ನನ್ನು ಬಿಟ್ಟುಕೊಡಬೇಕೆಂದು ಅದರಲ್ಲಿ ಕೋರಿದ್ದೆ—ಮಕ್ಕಳ ವಿದ್ಯಾ ಭ್ಯಾಸದ ಅವಧಿಯನ್ನೂ ಯೂನಿಟ್ಟಿನ ಶಿಕ್ಷಣ ಕಾಲವನ್ನೂ ಲಕ್ಷ್ಯದಲ್ಲಿಟ್ಟು ಈ ತಾರೀಕನ್ನು ಸೂಚಿಸಿದ್ದೆ.

ಹೊಸಪೇಟೆಯಲ್ಲಿ ನಡೆಸಿದ ಶಿಬಿರ

ದಸರಾ ರಜೆಯಲ್ಲಿ (೧೯೬೪) ರಾಯಚೂರಿನ ಹಾಗೂ ಬಳ್ಳಾರಿಯ ಸೀನಿಯರ್ ಡಿವಿಶನ್ ಕ್ಯಾಡೆಟುಗಳಿಗೋಸ್ಕರ ಒಂದು ಕ್ಯಾಂಪನ್ನು ಬಳ್ಳಾರಿ ಜಿಲ್ಲೆಯಲ್ಲಿ ನಡೆಸ ಬೇಕೆಂದು ಬೆಂಗಳೂರಿನಿಂದ ಹುಕುಂ ಬಂತು. ಬಳ್ಳಾರಿಯ ಓಸಿಯಾದ ನಾನು ಈ ಕ್ಯಾಂಪಿನ ಉಪಮುಖ್ಯಾಧಿಕಾರಿಯೂ ಆಗಿರಬೇಕು; ಕ್ಯಾಂಪ್ ಕಮಾಂಡೆಂಟ್ ಆಗಿ ಆರ್ಮಿ ಮೇಜರ್ ಒಬ್ಬರು ಬರಬೇಕು ಎಂದು ಹುಕುಮಿನಲ್ಲಿತ್ತು. ಮುಂದೆ ಒಂದು ವಾರದಲ್ಲಿ ಈ ಆರ್ಮಿ ಮೇಜರರನ್ನು ಹೆಸರಿಸಿದ ಆಜ್ಞೆಯೂ ನನಗೆ ಬಂತು. ಆ ಮೇಜರರಿಂದ ಬಂದ ಪತ್ರ ತಾನು ಇಂಥ ದಿವಸ ಬರುವೆನೆಂದೂ ಸ್ವಾಗತ ಏರ್ಪಡಿಸ ಬೇಕೆಂದೂ ನಾವು ಕ್ಯಾಂಪ್ ಸ್ಥಳ ಆರಿಸಲು ಹೋಗೋಣವೆಂದೂ ತಿಳಿಸಿತು. ಆದರೆ ಹೇಳಿದ್ದ ದಿವಸ ಅವರು ಬರಲಿಲ್ಲ. ಮರುದಿವಸ ಅದೇ ಹೊತ್ತಿಗೆ ಬಂದು ರೈಲ್ವೇ ನಿಲ್ದಾಣದಿಂದ ನಮ್ಮ ಆಫೀಸಿಗೆ ಫೋನ್ ಮಾಡಿದರು. ಅವರನ್ನು ಆವರೆಗೆ ನಾನು ನೋಡಿರಲಿಲ್ಲ. ಆದರೆ ಆವರ ವರ್ತನೆ ನನಗೆ ಹಿತವೆನಿಸಲಿಲ್ಲ—ತಾವು ಶ್ರೇಷ್ಠರೆಂಬ ಮತ್ತು ನಾವು ಅನುಗ್ರಹಪಾತ್ರಗಳೆಂಬ ಭಾವನೆ. ಇಲ್ಲಿಗೇ ಮುಗಿಯಲಿಲ್ಲ—ಆ ದಿವಸ ಇಡೀ ನನಗೆ ಬಟ್ಲರ್ ಇಂಗ್ಲಿಷಿನಲ್ಲಿ ಕ್ಯಾಂಪ್ ನಡೆಸುವ ವಿಚಾರ ಬೋಧನೆ, ಬೋರಿಕೆ. ಕೊನೆಯ ಪ್ರಹಾರ ಆ ಮಹಾಶಯ ಡಿಟೆನ್ಷನ್ ಸರ್ಟಿಫಿಕೇಟ್ ಕೇಳಿದಾಗ: "ಬೆಂಗಳೂರಿನ ಹುಕುಂ ಪ್ರಕಾರ ನಾನು ಮೊನ್ನೆಯಿಂದಲೇ ಇಲ್ಲಿರಬೇಕಾಗಿತ್ತು. ಆದರೆ ರೈಲ್ವೇ ಸಂಚಾರ ದಲ್ಲಿ ತೊಂದರೆ ಉಂಟಾಗಿ ೨೪ ಗಂಟೆ ತಡವಾಗಿ ನಾನು ನಿನ್ನೆ ಇಲ್ಲಿಗೆ ಬಂದಿದ್ದೇನೆ. ಆದ್ದರಿಂದ ನೀವು ಮೊನ್ನೆಯಿಂದಲೇ ನನಗೆ ಡಿಟೆನ್ಷನ್ ಸರ್ಟಿಫಿಕೇಟ್ ಕೊಡಬೇಕು." ಇದೂ ನನಗೆ ಆಜ್ಞೆ ರೂಪದಲ್ಲಿಯೇ.

"ಅದು ಸಾಧ್ಯವಿಲ್ಲ. ನೀವು ಬಂದದ್ದು ನಿನ್ನೆ. ಹೋಗುತ್ತಿರುವುದು ಇಂದು. ಈ ಕಾಲವನ್ನು ಖಚಿತವಾಗಿ ಗುರುತಿಸಿ ಬರೆದು ಸರ್ಟಿಫಿಕೇಟ್ ಕೊಡುತ್ತೇನೆ" ನಾನೆಂದೆ.

"ನಿಮಗೆ ಆರ್ಮಿ ಕ್ರಮ ಸಂಪ್ರದಾಯ ಗೊತ್ತಿಲ್ಲ. ನಾನು ಹೇಳಿದ ಹಾಗೆಯೇ ಕೊಡತಕ್ಕದ್ದು" ಅವರ ಹುಕುಂ.

"ನೀವು ಹೇಳುವಂಥ ಅವ್ಯವಹಾರ ಅಲ್ಲಿಯ ಸಂಪ್ರದಾಯವಾದರೆ, ಸರಿ, ಅದು ನನಗೆ ಗೊತ್ತಿಲ್ಲ. ಆದರೆ ಮಿಲಿಟರಿ ಕಾನೂನಿನ ಪುಸ್ತಕದಿಂದ ಒಂದು ಉದಾಹರಣೆ ಯನ್ನು ನಿಮ್ಮ ಎದುರು ಇಟ್ಟರೆ ನಿಮಗೆ ಬೇಸರವಾಗದಷ್ಟೆ? ಮೊನ್ನೆ ನೀವು ಬೇರೆ ಎಲ್ಲೋ ಒಂದು ಕ್ರಿಮಿನಲ್ ಕೇಸಿನಲ್ಲಿ ಸಿಕ್ಕಿ ಹಾಕಿಕೊಂಡಿರಬಹುದು. ಆಗ ನೀವು ಇಲ್ಲಿ

ಇದ್ದಿರೆಂದು ನಾನು ಸರ್ಟಿಫಿಕೇಟ್ ಕೊಟ್ಟರೆ ನಾನು ಸಹ ನಿಮ್ಮೊಡನೆ ಗುಂಡಿಗೆ ಬಿದ್ದಂತೆ ಅಲ್ಲವೇ ? ಇದು ನನ್ನಿಂದಾಗದು'' ನಾನು ಚುಚ್ಚಿದೆ.

ಅವರ ತುಂಬು ಬೆಲೂನಿನಿಂದ ಗಾಳಿ ಹಠಾತ್ತಾಗಿ ನಿಷ್ಕ್ರಮಿಸಿ ಅವರು ಚಪ್ಪೆಯಾದರು. ಇಂಥ ವ್ಯಕ್ತಿಯೊಂದಿಗೆ ನನಗೆ ಕ್ಯಾಂಪ್ ನಡೆಸುವುದಾಗದು ಎಂದು ಕೂಡಲೇ ನಿರ್ಧರಿಸಿದೆ. ಸ್ಥಳೀಯ ಕಾರಣಗಳ ನೆವದಿಂದ ದಸರಾ ಕ್ಯಾಂಪನ್ನು ಡಿಸೆಂಬರಿಗೆ ವರ್ಗಾಯಿಸಿಕೊಂಡೆ. ಆ ಸಮಯಕ್ಕಾಗುವಾಗ ಕಮಾಂಡೆಂಟರಾಗಿ ಬಂದವರು ನನ್ನ ಮಿತ್ರರಾಗಿದ್ದ ರಾಯಚೂರಿನ ಓಸಿ ಮೇಜರ್ ಜೆರೆ ಅವರು. ಅವರೂ ಗಣಿತಶಾಸ್ತ್ರದ ಪ್ರಾಧ್ಯಾಪಕರೇ.

ಹೊಸಪೇಟೆಯ ಪುರಸಭೆಯ ಹೈಸ್ಕೂಲಿನ ಆವರಣದಲ್ಲಿ ನಡೆಸಿದ ಈ ಕ್ಯಾಂಪು ಒಂದು ಹೊಸ ಪ್ರಯೋಗ (ನನ್ನ ದೃಷ್ಟಿಯಿಂದ). ಜೆರೆ ಲೆಕ್ಕ, ಕಾಗದ, ಒಳಾಡಳಿತ ಮುಂತಾದ ಸಕಲ ಹೊಣೆಗಳನ್ನೂ ಹೊತ್ತುಕೊಂಡರು. ಆಹಾರ, ಶಿಕ್ಷಣ, ಆರೋಗ್ಯ ಇತ್ಯಾದಿ ಉಳಿದ ಎಲ್ಲ ಕೆಲಸಗಳನ್ನು ನಾನೂ ಕ್ಯಾಂಪಿಗೆ ಎರವಲಾಗಿ ಬಂದಿದ್ದ ಕ್ಯಾಪ್ಟನ್ ಪುರುಷೋತ್ತಮ (ಎನ್‌ಸಿಸಿ) ಅವರೂ ವಹಿಸಿಕೊಂಡೆವು. ಆಹಾರದ ದೈನಂದಿನ ಹೊಣೆಯನ್ನು ಪಾಲಿಟೆಕ್ನಿಕಿನ ಎನ್‌ಸಿಸಿ ಆಫೀಸರ್ ಚನ್ನಬಸಪ್ಪನವರಿಗೆ ವಹಿಸಿಕೊಟ್ಟೆ. ಇವರು ದಕ್ಷರು, ಪ್ರಾಮಾಣಿಕರು. ಹೀಗಾಗಿ ಆ ಕಡೆ ಚಿಂತೆ—ಬಲು ದೊಡ್ಡ ಚಿಂತೆ ಆಗಬಲ್ಲದು,—ಉಳಿಯಲಿಲ್ಲ. ಕ್ಯಾಂಪಿನ ಪ್ರಾರಂಭದ ಮೊದಲು ಶಿಕ್ಷಣದ ವಿಚಾರ ನನಗೆ ''ಹಾಗಾಗಬೇಕು. ಮಟ್ಟ ಹಾಳಾಗಬಾರದು'' ಎಂದು ಮುಂತಾಗಿ ಬೋಧಿಸುತ್ತಿದ್ದ ಎನ್‌ಸಿಸಿ ಆಫೀಸರರೊಬ್ಬರನ್ನು ಟ್ರೈನಿಂಗ್ ಹೊಣೆ ಹೊರಲು ವಿಧಿಸಿದೆ. ಆದರೆ ಈ ಮಹಾಶಯ ಒಂದನೆಯ ದಿವಸವೇ ಧೃತಿಗುಂದಿ, ಆಳುಕಿ ಶಿಕ್ಷಣ ಸಾಮಗ್ರಿಗಳ ಅಭಾವ, ಸಾಕಷ್ಟು ಶಿಕ್ಷಕರ ಪೂರೈಕೆ ಆಗದಿರುವಿಕೆ ಮುಂತಾದ ಗೊಡ್ಡು ನೆವಗಳನ್ನು ನನ್ನ ಮುಂದಿಟ್ಟರು. ಅವರ ಪಾದಗಳು ಕೋಟಗಟ್ಟಿದ್ದುವು. ಅವರು ಹೇಳಿದುದೆಲ್ಲವನ್ನೂ ಪೂರೈಸಿಕೊಟ್ಟೆ. ಆದರೆ ಅವರ ಗೋಣಗಾಟ ನಿಲ್ಲಲಿಲ್ಲ. ಮರುದಿವಸ ಬೆಳಗ್ಗೆ ತಲೆನೋವು ಜ್ವರ ಎಂದು ಮಲಗಿದಾಗ ಹೂರಣ ಹೊರಬಿತ್ತು—ತಂಪು ಕೋಣೆಯಲ್ಲಿ ಮೆಚ್ಚುವ ಶ್ರೋತೃಗಳ ಎದುರು ಹರಿಕತೆಮಾಡಿದಂತಲ್ಲ ಮಿಲಿಟರಿ ಶಿಕ್ಷಣ. ಅದು ಬೇಡುವುದು ಮೊದಲಾಗಿ ನಿಷ್ಠೆಯನ್ನು. ಉಳಿದೆಲ್ಲವೂ ಅವಾಗಿಯೇ ಬರುತ್ತವೆ. ಟ್ರೈನಿಂಗ್ ಆಫೀಸರ್ ನಾನೇ ಆದೆ. ಮಿತ್ರ ಪುರುಷೋತ್ತಮರೂ ಚನ್ನಬಸಪ್ಪನವರೂ ಹೊತ್ತ ಹೊಣೆ, ಸಂತೋಷದಿಂದ ನೀಡಿದ ಕೆಲಸ ಬಲು ಉನ್ನತಮಟ್ಟದವು. ಕ್ಯಾಡೆಟ್ ಶಿಕ್ಷಣಜೀವನದ ಯಶಸ್ಸಿಗೆ ಇವರ ಕೊಡುಗೆಯೇ ಪ್ರಧಾನ ಕಾರಣ.

ನಮ್ಮ ಎಂದಿನ ಕವಾಯತಿ ಮುಂತಾದ ಶಿಕ್ಷಣಗಳ ಜೊತೆಗೆ ಎರಡು ಹೊರವಲಯದ ಸಾಹಸ ಹಾಗೂ ಮಿಲಿಟರಿ ಅಣಕು ಯುದ್ಧಗಳು ಮತ್ತು ರೈಫಲ್ ಗುಂಡು ಹೊಡೆತ ಇವನ್ನೂ ಸೇರಿಸಿದೆ. ಎಲ್ಲರೂ ಎಲ್ಲವನ್ನೂ ಪಡೆಯಬೇಕು ; ಎಂಟು ದಿವಸಗಳ ಅವಧಿಯಲ್ಲಿ ಸುಮಾರು ೮೦೦ ಮಂದಿ ಇವನ್ನು ಮುಗಿಸಬೇಕು. ಇದೊಂದು ಲೆಕ್ಕದ ಪ್ರಶ್ನೆ. ಜೆರೆ ಮತ್ತು ನಾನು ಇಬ್ಬರೂ ಲೆಕ್ಕದವರಾದ್ದರಿಂದ ಪರಿಹಾರ ಸುಲಭವಾಯಿತು.

ಮೊದಲನೆಯ ಹೊರವಲಯದ ಅಣಕುಯುದ್ಧ ಹೊಸಪೇಟೆ–ಹಂಪೆ ದಾರಿಯಲ್ಲಿ.

ರಾತ್ರಿ ಹಂಪೆಯಲ್ಲಿ ವಾಸ್ತವ್ಯ. ಮರುಹಗಲು ಹಂಪೆಯ ಸ್ಮಾರಕಗಳ ದರ್ಶನ ; ಸಂಜೆ ವಾಪಾಸ್. ಸುಮಾರು ೨೦ ಮೈಲಿಗಳ ನಡಿಗೆ ಇದು. ಎರಡನೆಯದು ಜಂಬುನಾಥೇಶ್ವರ ಮತ್ತು ಅದರ ಎದುರಿನ ಇನ್ನೂ ಎತ್ತರದ ಬೆಟ್ಟಗಳ ಏರಿಕೆ, ಕವಾಯತಿ, ಮರಳಿಕೆ. ಒಂದು ಹಗಲಿನಲ್ಲಿ ಮುಗಿಯಬೇಕಾಗಿದ್ದ ಈ ಕವಾಯತಿಯಲ್ಲಿ ಹುಡುಗರು ೨೦ ಮೈಲಿಗಳಷ್ಟು ದೂರ ನಡೆಯಬೇಕಾಗಿತ್ತು. ನಾವು ಬೆಳಗ್ಗೆ ೬-೩೦ ಗಂಟೆಗೆ ೨೦೦ ಕ್ಯಾಡೆಟುಗಳ ಮಹಾಸೈನ್ಯ ಸಮೇತ ಹೊರಟೆವು. ನಾಲ್ಕು ಮೈಲಿ ದೂರದ ಜಂಬುನಾಥೇಶ್ವರ ಬೆಟ್ಟದ ಬುಡದ ವರೆಗೆ ನಡಿಗೆ ಸಮತಟ್ಟು ನೆಲದ ಮೇಲೆ. ಮೊದಲು ಕಿರಿಯ ಗುಡ್ಡವಾಗಿ ನುಣ್ಣಗೆ ದೂರದಿಂದ ಕಾಣುತ್ತಿದ್ದ ಬೆಟ್ಟ ಈಗ ದೊಡ್ಡದಾಗಿ ಉಬ್ಬಿ ದಿಟ್ಟತನದಿಂದ ದಿಟವಾಗಿ ಎದುರು ನಿಂತಿತ್ತು. ಇರುವೆ ಸಾಲಿನಂತೆ ಅದನ್ನು ಏರಿದೆವು. ಅದರ ಮೈಯಲ್ಲಿದ್ದ ಜಂಬುನಾಥೇಶ್ವರ ದೇವಾಲಯವನ್ನು ಸಂದರ್ಶಿಸಿ ವಿಶ್ರಾಂತಿ ಪಡೆದು ಬೆಟ್ಟದ ಉಳಿದ ಭಾಗವನ್ನು ಹತ್ತಿ ಶಿಖರವನ್ನು ತಲಪಿದೆವು. ಎದುರು ಮಗ್ಗುಲಲ್ಲಿ ಇಳಿದು ಲಾರಿಗಳು ಓಡುವ ಮಣ್ಣುದಾರಿ ಸೇರಿದಾಗ ಗಂಟೆ ೧೦. ಅಲ್ಲಿಗೆ ಕ್ಯಾಂಪಿನಿಂದ ಉಪಾಹಾರ ಕಾಫಿ ನೀರು ಎಲ್ಲವೂ ಲಾರಿಯಲ್ಲಿ ಬಂದಿದ್ದರಿಂದ ಹುಡುಗರ ಮೊರಾಲ್ ಅತ್ಯುನ್ನತ ಮಟ್ಟಕ್ಕೆ ಏರಿತು. ಮುಂದಿನ ಸವಾಲು ಜಂಬುನಾಥೇಶ್ವರ ಬೆಟ್ಟಕ್ಕೆ ಸಮಾಂತರವಾಗಿ ಗಾತ್ರದಲ್ಲಿ ಅದರ ಎರಡರಷ್ಟಾಗಿ ನಮ್ಮ ಎದುರು ನಿಂತಿದ್ದ ಪರ್ವತ ಸಾಲು. ಎಂದರೆ, ಇವೆರಡು ಬೆಟ್ಟ ಸಾಲುಗಳ ನಡುವಿನ ಕಣಿವೆಯ ತಂಪಿನಲ್ಲಿ ನಾವೀಗ ಇದ್ದೆವು. ಇವೆಲ್ಲ ವಲಯಗಳನ್ನೂ ಆ ಮೊದಲೇ ನಾನು ಸ್ವತಃ ನಡೆದು ಪರಿಶೀಲಿಸಿದ್ದುದರಿಂದಲೂ ಈ ಹುಡುಗರ ಪ್ರಕೃತ ಪರಿಸ್ಥಿತಿಯನ್ನು ಗಮನಿಸಿದ್ದುದರಿಂದಲೂ ಒಂದು ವಿಚಾರವನ್ನು ಸ್ಪಷ್ಟಪಡಿಸುವುದು ಅನಿವಾರ್ಯ ಎನ್ನಿಸಿತು. ''ಮಿತ್ರರೇ ! ಎದುರು ಆಕಾಶಕ್ಕೆ ಕಂಬವಾಗಿ ನಿಂತಿರುವ ದೈತ್ಯ ಪರ್ವತ ನಿಮ್ಮೆಲ್ಲರಿಂದಲೂ ಏರಲು ಸಾಧ್ಯವಾಗದು. ಆದ್ದರಿಂದ ಈಗ ಇಲ್ಲಿ ಆತ್ಮವಿಮರ್ಶೆ ಮಾಡಿಕೊಳ್ಳಿ. ಸಾಧ್ಯವೇ—ಬನ್ನಿ ನನ್ನ ಹಿಂದೆ ; ಆಗದೇ ನಡುವೆ ನಿಂತರೆ ನಾನು ಸುಮ್ಮನಿರಲಾರೆ. ಸಾಧ್ಯವಿಲ್ಲವೇ—ಇದೇ ಮಟ್ಟಸ ದಾರಿಯಲ್ಲಿ ನಡೆದು ಬೆಟ್ಟದ ಸಾಲನ್ನು ಬಳಸಿ ಇದರ ಆಚೆ ಮಗ್ಗುಲಿಗೆ ಬನ್ನಿ. ಮಾನಾಪಮಾನದ ಪ್ರಶ್ನೆ ಇದಲ್ಲ. ತಾಕತ್ತು ಅತಾಕತ್ತುಗಳ ಪ್ರಶ್ನೆ.'' ನನ್ನ ಬೆನ್ನು ಹಿಡಿದವರು ನೂರನ್ನು ಮೀರಲಿಲ್ಲ, ಉಳಿದವರನ್ನು ಎನ್‌ಸಿಸಿ ಆಫೀಸರರ ಹಾಗೂ ಆರ್ಮಿ ಸ್ಟಾಫುಗಳ ಸಮೇತ ಬಳಸುದಾರಿಯ ಸುಖಸವಿಯಲು ಕಳಿಸಿದೆ. ಹುಡುಗರ ತಂಡ ಸಾಮೂಹಿಕವಾಗಿ ಎರಡು ಗಂಟೆ ಕಾಲ ಈ ಬೆಟ್ಟವನ್ನು ಹತ್ತಬೇಕಾಯಿತು. ಬೆವರಿ ಮೈಯೆಲ್ಲ ಒದ್ದೆಯಾಗಿ ಸೋತು ಬಸವಳಿದರು. ಈಗ ಅಗ್ರಭಾಗ ತಲಪಿದ್ದೇವೆ. ಅತ್ತಕಡೆ ಬೆಟ್ಟ ೯೦° ಕೋನದಷ್ಟು ಕಡಿದಾಗಿ ಭೀಕರವಾಗಿ ಇಳಿದು ಹೋಗಿ ಬಾಯಿ ಕಳೆದುಕೊಂಡಿದೆ. ಇದರ ತಪ್ಪಲಿನ ಕಾಡಿನ ನಡುವೆ ರೈಲ್ವೇ ಲೈನು ಎರಡು ದಾರಗಳನ್ನು ಎಳೆದಂತೆ ಅದರ ಮೇಲೆ ಟ್ರೈನು ಒಂದು ಬೆಂಕಿಪೆಟ್ಟಿಗೆ ಹರಿದಂತೆ ಕಾಣುತ್ತಿವೆ. ಇನ್ನೂ ಮುಂದೆ ಸಾಗಿದರೆ ಹೊಸಪೇಟೆಯಿಂದ ಹರಿಹರಕ್ಕೆ ಹೋಗುವ ತಾರುಹಾಕಿದ ದಾರಿ ಕಪ್ಪಾಗಿ ಸುರುಳಿ ಸುರುಳಿಯಾಗಿ ಹರಡಿ ಬಿದ್ದಿದೆ. ಅದರ ಮೇಲೆ ಆಗ ಈಗ ಸಾಗುವ ವಾಹನ ಮನುಷ್ಯ ರಚನೆಗಳ ಅಸಹಾಯಕತೆಯನ್ನೂ ಅಲ್ಪತ್ವವನ್ನೂ ಪ್ರತಿಬಿಂಬಿಸುವಂಥ ಪ್ರತೀಕ. ಮತ್ತೂ

ಮುಂದೆ ದೃಷ್ಟಿ ಹಾಯಿಸಿದರೆ ಕಪ್ಪು ನೀಲ ನೀರಿನ ಮಹಾ ಸರೋವರ ಬಲು ಶಾಂತವಾಗಿ ದೃಷ್ಟಿಯು ಕೊನೆಯುವರೆಗೂ, ಬಾನು ಅದನ್ನು ತಡೆ ಹಿಡಿಯುವ ವರೆಗೂ ಹಬ್ಬಿದೆ. ಇದೇ ತುಂಗಭದ್ರ ಜಲಾಶಯ ; ಮಹಾಶಿಲ್ಪಿಯ ಕನಸು ನನಸಾದದ್ದು ; ಬಳ್ಳಾರಿ ರಾಯಚೂರು ಜಿಲ್ಲೆಗಳ ದುಃಖದುರಂತಗಳನ್ನು ಸಂತೋಷ ಸಮೃದ್ಧಿಗಳಾಗಿ ಪರಿವರ್ತಿಸಿದ ಕಾಮಧೇನು. ನಮ್ಮ ಗುರಿ ಈ ಜಲಾಶಯದ ದಂಡೆ (ಕ್ಯಾಂಪಿನ ಜೀವ ಸ್ನಾನದ ಘಟ್ಟದಲ್ಲಿದೆ! ಪುಟ ೨೧೨). ದೃಷ್ಟಿ ಸಾಗಿದಷ್ಟು ವೇಗವಾಗಿ ಅಥವಾ ಸುಲಭವಾಗಿ ದೇಹ ಸಾಗದು. ನೆಲ ಬಿಟ್ಟು ಜಗ್ಗದ ಈ ನೆಲದ ಅಂಶವನ್ನು ಗಿರಿಶೃಂಗದ ಅಂಚಿನಲ್ಲಿ ಸಾಗಿಸಿಕೊಂಡು ಇಳಿಯುವ ಆಸರೆ ಹುಡುಕುತ್ತ ಮುಂದೆ ಮುಂದೆ ಹೋದೆವು. ಒಂದು ಕಡೆ ಇಳಿಯುವುದು ಸಾಧ್ಯವೋ ಅಸಾಧ್ಯವೋ ತಿಳಿಯದು, ಆದರೆ ಇನ್ನೂ ಮುಂದುವರಿಸುವುದು ಅಪಮಾನಕರ ಎಂದು ಭಾವಿಸಿ ನಾನು ಇಳಿಯಲು ಮುಂದಾದೆ. ಬೆಟ್ಟದ ಇಳಿಜಾರಿನಲ್ಲಿ ಕುಳಿತು ಕಾಲುಗಳನ್ನು ಕೆಳಗೆ ಇಳಿ ಬಿಟ್ಟು ಕೈಗಳ ಸಹಾಯದಿಂದ ಮೆಲ್ಲಮೆಲ್ಲನೆ ಜಾರುವ ಒಂದು ವಿಶಿಷ್ಟ ಭಂಗಿಯಿದು. ಯಾರೂ ಕಲಿಸಿ ಬಂದದ್ದಲ್ಲ ಈ ವಿಧಾನ. ಅಲ್ಲಿಯ ಸನ್ನಿವೇಶದಲ್ಲಿ ಸುರಕ್ಷಿತವಾಗಿ ಸಾಗಲು ಈ ತೆವಳಿಕೆಯೊಂದೇ ಯೋಗ್ಯ ಕ್ರಮವೆಂದು ಸಹಜವಾಗಿ ಅನ್ನಿಸಿತು. ನಿಸರ್ಗ ನಮ್ಮೊಳಗೆ ಹುದುಗಿಸಿಟ್ಟಿರುವ ರಕ್ಷಣಾ ವಿಧಾನಗಳು ಅಪಾರ. ಈ ಜಾರಿಕೆ ನಮಗೆಲ್ಲರಿಗೂ ಒಂದು ಅಪೂರ್ವಾನುಭವ. ಕೆಳಗಿಳಿದು ಜಲಾಶಯದ ದಂಡೆ ಸೇರಿದಾಗ ನಮಗೆ ಒದಗಿದ ಸಂತೋಷ ಅಭಿಮಾನ ಆತ್ಮವಿಶ್ವಾಸ ಬಲು ಎತ್ತರ ಮುಟ್ಟಿದವು. ಅಲ್ಲಿಗೆ ಮುಗಿಯಲಿಲ್ಲ. ಊಟ ಬಂದಿತ್ತು. ನೀರಿಗೆ ಮಾತ್ರ ಯಾರನ್ನೂ ಇಳಿಯಲು ಬಿಡಲಿಲ್ಲ. ಊಟ ವಿಶ್ರಾಂತಿ ಮುಗಿದ ಮೇಲೆ ಬಳಸುದಾರಿಯಲ್ಲಿ ನಡೆದುಕೊಂಡು ಕ್ಯಾಂಪಿಗೆ ಮರಳಿದೆವು. ಜೆರೆಯುವರ ಹಿರಿತನದಲ್ಲಿ ನಡೆದ ಈ ಕ್ಯಾಂಪು ನನಗೆ ಸದಾ ಹೆಮ್ಮೆಯ ಸವಿನೆನಪನ್ನು ಒದಗಿಸುತ್ತದೆ.

ನಿನಗೆ ನೀನೇ ಗೆಳೆಯ !

ನನ್ನಂತೆಯೇ ಎನ್‌ಸಿಸಿ ಪೂರ್ಣಾವಧಿ ಕಮಿಷನ್ ಪಡೆದು ಬಂದಿದ್ದ ಕ್ಯಾಪ್ಟನ್ ಒಬ್ಬರು ನನ್ನ ಏಓ ಆಗಿ ಎಂದರೆಂದು ಹಿಂದೆಯೇ ಹೇಳಿದ್ದೇನೆ. ಅವರನ್ನು ಕಾರ್ಗಲ್ಲಿನ ಶಿಬಿರದ ದಿವಸಗಳಿಂದಲೇ ನಾನು ಅರಿತಿದ್ದೆ. ಮೂಲ ವೃತ್ತಿಯಲ್ಲಿ ಅವರು ಸಹ ಕಾಲೇಜಿನ ಅಧ್ಯಾಪಕರೇ. ಹೀಗಾಗಿ ನಮ್ಮ ಸ್ನೇಹ ಒಡನಾಟ ನಿಕಟವಾದುವು.

"ಇಲ್ಲಿ ನಾನು ಓಸಿ, ನೀವು ಏಓ ಆಗಿರುವುದು ಕೆಲಸದ ಅನುಕೂಲತೆಯ ದೃಷ್ಟಿಯಿಂದ ಎಂದೇ ಭಾವಿಸಬೇಕು. ಈಗ ನಿಮ್ಮ strong points ಯಾವುವು ಎನ್ನಿ. ಆ ಕೆಲಸಗಳನ್ನು ನೀವು ಮಾಡಿ. ಉಳಿದವನ್ನು ನಾನು ಮಾಡುತ್ತೇನೆ" ಎಂದು ಮೊದಲ ದಿವಸವೇ ಸೂಚಿಸಿದೆ.

"ಸಾರ್, ನನಗೆ strong points ಯಾವುವೂ ಇಲ್ಲ. ಆದರೆ ಒಂದು weak point ಇದೆ" ಎಂದರು ನಮ್ಮ ಏಓ.

"ಏನದು ?"

"ನನಗೆ accounts ಕಷ್ಟ."

"ಹಾಗಾದರೆ ನೀವು ಈ ಪೂರ್ಣಾವಧಿ ಕಮಿಷನ್ನಿನ ಕೆಲಸಕ್ಕೆ ಬಂದದ್ದು ತಪ್ಪು."

"ಯಾಕೆ ಹಾಗಂತೀರಿ ? ಈ ಮೊದಲು ನಡೆದಂತೆಯೇ ಮುಂದೆಯೂ ನಡೆಯುವುದು. ಹೇಗೂ ನೀವಿದ್ದೀರಲ್ಲ."

"ನೋಡಿ ಮಿತ್ರರೇ ! ನೀವು ಬೇಗನೇ ಓಸಿಯಾಗಿ ಬಡ್ತಿ ಪಡೆದು ಹೋಗಿಯೇ ಹೋಗುತ್ತೀರಿ. ಆಗ ನಿಮ್ಮ ಜೀವನದ ಅತಿ ದೊಡ್ಡ ಗಂಡಾಂತರವೆಂದರೆ ಈ ಲೆಕ್ಕಪತ್ರ ಗಳ ಮಡು. ನನ್ನ ತಿಳಿವಳಿಕೆಯಲ್ಲಿ ಒಂದು ವಿಚಾರ ಕಂಡಿದ್ದೇನೆ. ಕ್ಯಾಡೆಟುಗಳ ಟ್ರೈನಿಂಗಿನ ಪ್ರಧಾನ ಮತ್ತು ಪ್ರಥಮ ಉದ್ದೇಶದಿಂದ ಇವೆಲ್ಲ ಬೆಟಾಲಿಯನ್ನುಗಳ ರಚನೆ ಆಗಿದ್ದರೂ ಅದೊಂದೇ ಇಲ್ಲಿ ಗೌಣವಾಗಿಬಿಟ್ಟಿದೆ. ನಮ್ಮ ಆಯುಃಪರ್ಯಾನವಿಡೀ accounts, administration, planning, files, rules, regulations ಈ ಚಕ್ರವ್ಯೂಹದ ಕೋಟೆ ಒಳಗೆ ಕಳೆಯುವುದಾಗಿದೆ. Audit objections ಇಲ್ಲವಷ್ಟೆ. Inspection report ಸರಿಯಾಗಿ ಇದೆಯಷ್ಟೆ ಎಂಬ ಶುಷ್ಕ ಶಿಫಾರಸುಗಳೂ ಬೆಟಾಲಿ ಯನ್ನಿನ showವೂ ಇಲ್ಲಿ ಪ್ರಧಾನ. ಆದ್ದರಿಂದ ಲೆಕ್ಕಪತ್ರಗಳಲ್ಲಿ ಪರಿಣತನಲ್ಲದವ ಇಲ್ಲಿ misfit. ಸರ್ಕಾರ ನಡೆಸುವ ಪ್ರತಿಯೊಂದು ಖಾತೆಯಲ್ಲಿಯೂ ಆ ಖಾತೆಯ ಉದ್ದೇಶವೇ ಪ್ರಥಮ ಬಲಿ ಆಗುತ್ತಿರುವುದೊಂದು ವಿಪರ್ಯಾಸ—ನಮ್ಮ ನೀತಿ ಎಂಥ ರಸಾತಳದಲ್ಲಿದೆ ಎನ್ನುವುದರ ಸಾಕ್ಷಿ."

"ನೀವು ಹೇಳುವುದು ಖರೆ ಸಾರ್. ಆದರೆ ನನಗೇತರ ಚಿಂತೆ ?"

"ಈಗ ನೀವು ಇಲ್ಲಿ ಲೆಕ್ಕಪತ್ರಗಳನ್ನು ಕಲಿತುಕೊಳ್ಳಿ. ನಾನಿದ್ದೇನೆ, ನಮ್ಮ ಮುಖ್ಯ ಗುಮಾಸ್ತ ರೇವಣ್ಕರ್ ಇದ್ದಾರೆ. ಮುಂದಿನ ದಿವಸಗಳಿಗೆ ತಯಾರು ಆಗಿ. ಲೆಕ್ಕಪತ್ರ ಗಳಲ್ಲಿ ಯಾರೂ ನಮ್ಮನ್ನು ಮೋಸಗೊಳಿಸುವಂತಿರಬಾರದು. ಆ ವಿಚಾರದಲ್ಲಿ ನಾವು ಯಾರನ್ನು ಅವಲಂಬಿಸಿಯೂ ಇರಕೂಡದು."

ಅವರು ಮೂರು ತಿಂಗಳ ಕಾಲ ಸರಿಯಾಗಿ ನನ್ನೊಡನೆ ಇರಲಿಲ್ಲ, ದೆಹಲಿಯ ಗಣ ರಾಜ್ಯ ನಿಮಿತ್ತವಾದ ಎನ್‌ಸಿಸಿ ಕ್ಯಾಂಪಿಗೆ ಅವರನ್ನು ಸ್ಪೆಶಲ್ ಆಫೀಸರ್ ಆಗಿ ಚುನಾಯಿಸಿ (ಗೌರವ ಹುದ್ದೆ) ಕಳಿಸಿಬಿಟ್ಟರು (ಡಿಸೆಂಬರ್ ೧೯೬೪). ಮುಂದೆ ಫೆಬ್ರುವರಿ ೧೯೬೫ರಲ್ಲಿ ಅವರು ಮರಳಿದಾಗ ಅವರ ಕರ್ತವ್ಯದಕ್ಷತೆಯ ವಿಚಾರ ಒಳ್ಳೆ ಶಿಫಾರಸುಗಳು ನಮಗೆ ಬಂದುವು. ದೆಹಲಿಯಲ್ಲಿ ಅವರು ಗಳಿಸಿದ ಹೆಸರು ನಮ್ಮ ಯೂನಿಟ್ಟಿಗೂ ನಮ್ಮ ಎನ್‌ಸಿಸಿ ವರ್ಗಕ್ಕೂ ಹೆಮ್ಮೆ ತಂದಿತ್ತು. ಮುಂದಿನ ಎರಡು ವರ್ಷಗಳಲ್ಲಿ ಅವರು ಬೇರೆ ಒಂದು ಬೆಟಾಲಿಯನ್ನಿಗೆ ಓಸಿ ಆಗಿ ಬಡ್ತಿ ಪಡೆದು ಹೋದರು. ಅಲ್ಲಿ ಲೆಕ್ಕಪತ್ರಗಳ ಜಾಲದಲ್ಲಿ ಸಿಕ್ಕಿಹಾಕಿಕೊಂಡು ತೊಳಲಿ ಎನ್‌ಸಿಸಿಯನ್ನೇ ಬಿಟ್ಟು ಹೋಗಬೇಕಾಯಿತೆಂದು ಕೇಳಿದೆ. ಅಂತಿಮವಾಗಿ ನಿನಗೆ ನೀನೇ ಗೆಳೆಯ ! ನಿನಗೆ ನೀನೇ !

ಕವಲು ದಾರಿಯ ಮುಂದೆ ನೀ ಬಂದು ನಿಂದು
ಗುರಿ ಯಾವುದೆಂದು ಮುಂಗಾಣದಿರೆ ನೊಂದು
ಮನದ ಪೊರೆ ಪೊರೆಯೊಳುರಿಯೆದ್ದು ಭುಗಿಲಿಡಲು
ನಿನಗೆ ನೀನೇ, ಗೆಳೆಯ, ನಿನಗೆ ನೀನೇ

ಗೋಪಾಲಕೃಷ್ಣ ಅಡಿಗ

೧೯೬೫

ಫಲಿಸದಿದ್ದ ಕೋರಿಕೆಗಳು

ಜನವರಿ ೧೯೬೫ರ ಕೊನೆಯ ವಾರದಲ್ಲಿ ದೆಹಲಿಯಿಂದ ಬಂದ ಹುಕುಂ ನನ್ನನ್ನು ಕ್ಷಣಕಾಲ ಚಿಂತೆಗೆ ಈಡು ಮಾಡಿತು. ಮಾರ್ಚ್ ಅಖೈರಿಗೆ ಬಿಟ್ಟುಕೊಡಿ ಎಂದು ಬೇಡಿದ್ದೆ. ಕೂಡಲೇ ಹೋಗಿ ಎಂದಿತ್ತು ಹುಕುಂ—ನಾನು ಸ್ವಂತೇಚ್ಛೆಯಿಂದ ಮರಳುವವನಾದ್ದರಿಂದ ಪ್ರಯಾಣಭತ್ಯ ಮುಂತಾದವು ನನಗೆ ದೊರೆಯತಕ್ಕದ್ದಲ್ಲ; ನನಗೆ ಸರಕಾರದಿಂದ ಸಮವಸ್ತ್ರ ಭತ್ಯವಾಗಿ ದೊರೆತಿದ್ದ ನಾನೂರು ರೂಪಾಯಿಗಳಲ್ಲಿ ಮೂರನೆಯ ಎರಡರಷ್ಟನ್ನು ನಾನು ಸರಕಾರಕ್ಕೆ ಹಿಂತಿರುಗಿಸತಕ್ಕದ್ದು (ಕಾರಣ, ನಾನು ಒಪ್ಪಿಕೊಂಡಿದ್ದ ೩ ವರ್ಷಗಳ ಅವಧಿಯ ಪೈಕಿ ಒಂದು ಪೂರ್ಣ ವರ್ಷ ಮಾತ್ರ ಕೆಲಸ ಮಾಡಿದ್ದೆನಷ್ಟೆ). ಆರ್ಥಿಕವಾಗಿ ಈ ಹುಕುಮಿನ ಅನ್ವಯ ನನಗೆ ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಾಗದ ಅಧಿಕ ಖರ್ಚು. ಈಗಾಗಲೇ ನಾನು ನನ್ನ ಇನ್ಶ್ಯೂರೆನ್ಸ್ ಪಾಲಿಸಿಗಳನ್ನು ಬ್ಯಾಂಕಿಗೆ ಅಡವಿಟ್ಟು ಎರಡು ಸಾವಿರ ರೂಪಾಯಿಗಳವರೆಗೆ ಸಾಲ ಮಾಡಿದ್ದೆ. ಇದರ ಮೇಲೆ ಒಂದು ಸಾವಿರ ರೂಪಾಯಿಯ ಪೆಟ್ಟು. ನನ್ನ ಕಷ್ಟ ನಷ್ಟ ಪರಂಪರೆಗಳಿಗೆ ಮಿತಿಯೇ ಇಲ್ಲ ಎಂದೆನ್ನಿಸಿತು. ನಿಷ್ಠೆಯ ದಾರಿ ಹತ್ತಿಯ ಹರವಲ್ಲ. ಈ ಹುಕುಮನ್ನು ಪುನರ್ವಿಮರ್ಶಿಸಬೇಕು ಎಂದು ದೆಹಲಿಗೆ ಒಂದು ಅರ್ಜಿ ಸಲ್ಲಿಸಿದೆ. ನನಗೆ ಪ್ರಾರಂಭದಿಂದಲೂ ಒದಗಿದ್ದ ಆರ್ಥಿಕ ನಷ್ಟವನ್ನೂ ಆದರೂ ನಾನು ಸಲ್ಲಿಸಿದ ಸೇವೆಯನ್ನೂ ಯಥೋಚಿತವಾಗಿ ವಿವರಿಸಿದೆ. ಅನಿವಾರ್ಯವೇ ಆದರೆ, ೩೧ ಜುಲೈ ೧೯೬೫ರ ವರೆಗೂ (ಎರಡು ಪೂರ್ಣ ವರ್ಷ ಮುಗಿಯುವ ದಿನಾಂಕ)ಇರುವುದಾಗಿ ಸೂಚಿಸಿದೆ..ವ್ಯಕ್ತಿಗಳ ಸಮುದಾಯ ಸಂಸ್ಥೆ. ಮೊದಲು ಸಂಸ್ಥೆಯ ಕ್ರಮಬದ್ಧ ನಡವಳಿಕೆಗಳನ್ನು ಲಕ್ಷ್ಯದಲ್ಲಿಟ್ಟು ವ್ಯಕ್ತಿ ಕೆಲವೊಂದು ಕನಿಷ್ಠ ಪ್ರಮಾಣದ ನಿಯಮಗಳನ್ನು ಸೃಷ್ಟಿಸುತ್ತಾನೆ. ಇಲ್ಲಿಗೆ ವ್ಯಕ್ತಿ ಸ್ವಾತಂತ್ರ್ಯ ಪ್ರಾಯೋಗಿಕವಾಗಿ ಕೊನೆಗಾಣುತ್ತದೆ. ಮತ್ತೆ ಅದು ಏನು ಉಳಿದಿದ್ದರೂ ಸೈದ್ಧಾಂತಿಕವಾಗಿ ಮಾತ್ರ, ಕಡತಗಳ ಅಂತರಾಳದ ಕತ್ತಲೆಯ ಡೊಂಕಿನ ಅನನುಕೂಲ ಮೂಲೆಯಲ್ಲಿ. ಏಕಾಣುಜೀವಿಯಾಗಿ ರೂಪು ತಳೆದ ನಿಯಮ ಬಲು ಬೇಗ ಬೆಳೆದು ಆಕ್ಟೋಪಸ್ ಸರ್ವವ್ಯಾಪ್ತಿಯನ್ನೂ ಸರ್ವಗ್ರಾಹಿತ್ವವನ್ನೂ ಸಾಮರ್ಥ್ಯವನ್ನೂ ಪಡೆದು ವ್ಯಕ್ತಿಯನ್ನು ಹಿಂಡಿ ಹಿಪ್ಪೆ ಮಾಡಿ ಯಾಂತ್ರಿಕ ಕ್ರಿಯೆ ಎಸಗುವ ಒಂದು ಉಪಕರಣವನ್ನಾಗಿ ಎಸೆದು ಬಿಡುತ್ತದೆ. ಬೌದ್ಧಿಕ ಕ್ರಿಯೆ ವಿಶೇಷವಾಗಿ ಬೇಡವಾದ ಎಲ್ಲ ಆಡಳಿತ ವ್ಯವಸ್ಥೆಗಳಲ್ಲೂ ಈ ಬೆಳೆವಣಿಗೆ ಬಲು ಸಹಜವಾದದ್ದು. ಎನ್‌ಸಿಸಿಯ ಆ ದಿವಸಗಳಲ್ಲಿ ನಾನು ದಿನ ದಿನ ಈ ಅನುಭವ ಪಡೆದೆ. ಈಗ ಆ ಆಡಳಿತಶಾಹಿಯ ರಕ್ಷಣಾ ಕವಚದಿಂದ ಹೊರಗೆ ಸಿಡಿದಿದ್ದ ಹುಳು ನಾನು. ನನ್ನ ಮೊದಲಿನ ಮಿತ್ರರೂ ತಾಬೆದಾರರೂ ಭಕ್ತರೂ ಈಗ ನನ್ನನ್ನು ನೋಡುತ್ತಿದ್ದ ದೃಷ್ಟಿ ಬೇರೆ—ಅನುಕಂಪ ಇರಬಹುದು, ಉದಾಸೀನತೆ ಇರಬಹುದು, ಅಸಹಾಯಕತೆ ಇರಬಹುದು, ತಿರಸ್ಕಾರವೂ ಇರಬಹುದು. ಆದ್ದರಿಂದ ಇನ್ನು

ನನ್ನ ಯಾವ ವಿಧವಾದ ಹಾಲೆ ಅಹವಾಲೆಯೂ ಪ್ರಯೋಜನವಾಗವು ಎಂದು ಖಚಿತ ವಾಯಿತು. ಕಾಲೇಜು ಶಿಕ್ಷಣದ ಡೈರೆಕ್ಟರಿಂದ ನಾನು ಯಾವ ಕಾಲೇಜಿಗೆ ಮರಳ ಬೇಕೆಂಬುದು ಇತ್ಯರ್ಥವಾದೊಡನೆಯೇ ನನಗೆ ಎನ್‌ಸಿಸಿಯಿಂದ ಬಿಡುಗಡೆ ಎಂಬುದು ಸಿದ್ಧವಾಯಿತು. ಬೆಂಗಳೂರಿನ ಎನ್‌ಸಿಸಿ ಡೈರೆಕ್ಟೊರೇಟ್ ಆಲ್ಲಿಯ ಶಿಕ್ಷಣ ಇಲಾಖೆಗೆ ನನ್ನನ್ನು ಹಿಂದೆ ಪಡೆದುಕೊಳ್ಳಲು ಈಗಾಗಲೇ ಪತ್ರ ಬರೆದಿತ್ತು. ಶಿಕ್ಷಣದ ಡೈರೆಕ್ಟರರಾಗಿದ್ದ ದಾವರ್ ಆವರನ್ನು ನೋಡಲು ಬೆಂಗಳೂರಿಗೆ ಹೋದೆ. ಅವರು ಬಹಳ ಕಟ್ಟುನಿಟ್ಟಿನವರು, ಉಗ್ರಶಿಸ್ತಿನವರು ಎಂದು ಮುಂತಾಗಿ ಕೇಳಿದ್ದೆ. ನನ್ನನ್ನು ತುಂಬ ಸೌಜನ್ಯದಿಂದ ಸ್ವಾಗತಿಸಿದರು "ಏನು ಬೇಸರವಾಯಿತೇ.? ಯಾಕೆ ಹಿಂತಿರುಗುವ ಯೋಚನೆ ಇಷ್ಟು ಬೇಗ ?" ಎಂದು ಪ್ರಶ್ನಿಸಿದರು. ಸಂಕ್ಷೇಪವಾಗಿ ಹೇಗೆ ನನ್ನ ವೃತ್ತಿಯೇ ನನಗೆ ಸರ್ವ ಶ್ರೇಷ್ಠ, ಬೇರೆ ಯಾವುದೂ ನನಗೆ ತೃಪ್ತಿ ಕೊಡದು ಎಂಬುದನ್ನು ಹೇಳಿದೆ. ಬುದ್ಧಿ ಜೀವಿಗೆ ಬೇರೆ ಯಾವ ಕಸರತ್ತೂ ಹಿಡಿಸದು ಎಂಬುದನು ಅವರು ಒಪ್ಪಿಕೊಂಡರು. ನಾನು ಬಂದ ಉದ್ದೇಶ ವಿಚಾರಿಸಿದರು.

"ಎರಡು ಕೋರಿಕೆಗಳಿವೆ. ಮೊದಲನೆಯದು, ಜುಲೈ ೩೧ರ ತನಕ ನನ್ನನ್ನು ಶಿಕ್ಷಣ ಇಲಾಖೆಗೆ ತೆಗೆದುಕೊಳ್ಳಬಾರದು" ನಾನೆಂದೆ.

"ಅದು ಸಾಧ್ಯವಿಲ್ಲ. ನಿಮ್ಮ ಎನ್‌ಸಿಸಿ ಡೈರೆಕ್ಟರರು ನನಗೆ ಕಾಗದ ಬರೆದಿದ್ದಾರೆ ಈಗಲೇ ತೆಗೆದುಕೊಳ್ಳಬೇಕೆಂದು. ಅದರ ಪ್ರಕಾರ ನಾನು ವರ್ತಿಸಬೇಕಷ್ಟೆ. ಈ ಸಮಸ್ಯೆಯನ್ನು ನೀವು ಅವರೊಡನೆ ಕೂಡಲೇ ಚರ್ಚಿಸಬೇಕು. ಎರಡನೆಯ ಕೋರಿಕೆ ಏನು ?" ಡೈರೆಕ್ಟರರ ಉತ್ತರ.

"ನನಗೆ ಬೆಂಗಳೂರು, ಮಡಿಕೇರಿ, ಮಂಗಳೂರು ಈ ಮೂರು ಸ್ಥಳಗಳು ಬೇಡ. ಬೇರೆ ಯಾವುದೇ ಊರಿನ ಕಾಲೇಜಿಗೆ ಹಾಕಿದರೂ ಸಂತೋಷದಿಂದ ಹೋಗುತ್ತೇನೆ."

"ಗಣಿತ ವಿಭಾಗದಲ್ಲಿಯ ಖಾಲಿಹುದ್ದೆ ಇರುವುದು ಬೆಂಗಳೂರಿನಲ್ಲಿಯೇ. ಆದ್ದರಿಂದ ನಿಮ್ಮನ್ನು ಇಲ್ಲಿಗೇ ತೆಗೆದುಕೊಂಡಿದ್ದೇನೆ. ಅದನ್ನು ಬದಲಿಸಲಾಗದು."

"ಬಲು ಖರ್ಚಿನ ಸ್ಥಳ ಸಾರ್. ಕಷ್ಟವಾಗುತ್ತದೆ."

ಅವರು ನಕ್ಕು ನುಡಿದರು "ಪರ ಊರಿನಲ್ಲಿ ಇರುವವರು ರಾಜಕೀಯ ಮಾಡಿ ಆಸ್ತಿ ಪಾಸ್ತಿ ಮಾರಿ ಬೆಂಗಳೂರಿಗೆ ಬರಬೇಕೆಂದು ಪ್ರಯತ್ನ ನಡೆಸುತ್ತಾರೆ. ನಿಮಗೆ ನಾನಾಗಿಯೇ ಬೆಂಗಳೂರು ಕೊಟ್ಟಿರುವಾಗ ಬೇಡ ಅನ್ನುತ್ತೀರಿ. ನೀವು ವಿಚಿತ್ರ ಮನುಷ್ಯರು. ಬೆಂಗಳೂರಿಗೆ ಬನ್ನಿ—ನಿಮಗೆ ಅದರಿಂದ ಒಳ್ಳೆಯದಾಗುತ್ತದೆ."

ಮತ್ತೆ ಮಾತು ಉಳಿಯಲಿಲ್ಲ. ಅವರಿಗೆ ವಂದನೆ ಸಲ್ಲಿಸಿ ಹೊರಟೆ.

ಎಲ್ಲೆಲ್ಲೂ ನನಗೆ ಸೋಲು. ಬೆಂಗಳೂರಿನ ಅತಿ ಖರ್ಚಿನ ಅತಿ ಬಿರುಸಿನ ಜೀವನದಲ್ಲಿ ನಾನು ಬದುಕಿ ಉಳಿದೇನೇ ? ತಿಳಿಯದು. ಎನ್‌ಸಿಸಿ ಪೂರ್ಣಾವಧಿ ಕಮಿಷನ್ ಪಡೆದ ಆಫೀಸರ್ ಅವನ ಮೂಲವೃತ್ತಿಗೆ ಮರಳಿದಾಗ ಅವನನ್ನು ಮೊದಲಿದ್ದ ಎನ್‌ಸಿಸಿ ಭಾಗ ಕಾಲದ ಹುದ್ದೆಗೆ ತೆಗೆದುಕೊಳ್ಳಲೇಬೇಕು, ಅವನಿಗೋಸ್ಕರ ಜೂನಿಯರ್ ಆಫೀಸರರನ್ನು ಬೇಕಾದರೆ ನಿವೃತ್ತಿಗೊಳಿಸಿ ಸ್ಥಾನ ತೆರವು ಮಾಡಬೇಕು ಎಂದು ಮುಂತಾಗಿ ದೆಹಲಿಯ ಆದೇಶವಿತ್ತು. ಬೆಂಗಳೂರಿನ ಕಾಲೇಜಿಗೆ ನಾನು ಮರಳಿದಾಗ ಈ ಎನ್‌ಸಿಸಿ ಆಫೀಸರ್

ಹುದ್ದೆಯನ್ನು ಸೇರಿ ತಿಂಗಳೊಂದರ ಎಪ್ಪತ್ತೈದು ರೂಪಾಯಿ ಗೌರವಧನ ಪಡೆಯ ಬಹುದು; ಇದರಿಂದ ನಾನು ಕಲಿತ ಕೆಲಸ ಮುಂದುವರಿಸಿದಂತೆಯೂ ಆಯಿತು; ಖರ್ಚಿಗೆ ಒಂದಷ್ಟು ಹಣ ದೊರೆತಂತೆಯೂ ಆಯಿತು ಎಂದು ಚಿಂತಿಸಿದೆ. ಎನ್‌ಸಿಸಿ ಡೈರೆಕ್ಟರನ್ನು ಭೇಟಿ ಮಾಡಿ ಕಾಲೇಜು ಡೈರೆಕ್ಟರೊಡನೆ ನಡೆದ ಸಂಭಾಷಣೆ ವಿಚಾರ ತಿಳಿಸಿದೆ. "ನೀವು ಬೆಂಗಳೂರಿಗೆ ಮರಳುವುದು ಬಲು ಸಂತೋಷ. ಇಲ್ಲಿ ನೀವು ಎನ್‌ಸಿಸಿ ಆಫೀಸರ್ ಆಗಿ ಮುಂದುವರಿಯಲೇಬೇಕು" ಎಂದರು. ಹೊಸಪೇಟೆಯ ಕ್ಯಾಂಪಿಗೆ ಇವರು ಬಂದು ನಮ್ಮೊಡನೆ ಮೂರು ದಿವಸ ತಂಗಿದ್ದರಿಂದ ನನ್ನ ವಿಚಾರ ಅವರಿಗೆ ಒಳ್ಳೆ ಅಭಿಪ್ರಾಯವಿತ್ತು.

"ಹಾಗೆ ಸೇರುವುದೇನೋ ನನಗೂ ಪ್ರಿಯವೇ. ಆದರೆ ಅದು ಅಲ್ಲಿ ಈಗಾಗಲೇ ಇರಬಹುದಾದ ಒಬ್ಬ ಎನ್‌ಸಿಸಿ ಆಫೀಸರನನ್ನು ನಿವೃತ್ತಿಗೊಳಿಸುವ ಮೂಲಕ ಆಗ ಬಾರದು. ಮುಂದೆ ನೋಡೋಣ" ಎಂದೆ. ನನ್ನ ನಿಲುವನ್ನು ಅವರು ತಾತ್ತ್ವಿಕವಾಗಿ ಒಪ್ಪಿದರು.

ಮೇಜರ್ ಮಾಸ್ಟರ್ಸ್ ತುಂಬ ನೊಂದುಕೊಂಡರು. ಆದರೆ ನನ್ನ ನಿಲವನ್ನು ಮೆಚ್ಚಿದರು ಮಾತ್ರವಲ್ಲ, ತಾವು ನನ್ನ ಸ್ಥಾನದಲ್ಲಿದ್ದಿದ್ದರೆ ಬೇರೆ ರೀತಿ ವರ್ತಿಸಿರುತ್ತಿರಲಿಲ್ಲ ಎಂದು ಹೇಳಿದರು. "ಸಂಬಳ ಸಾರಿಗೆಯಲ್ಲಿ ನಿಮಗೊಂದು ಕಾನೂನು ಆರ್ಮಿಯವರಿಗೊಂದು ಕಾನೂನು. ಕೆಲಸ ಹೊಣೆಗಾರಿಕೆ ಅವರಷ್ಟೇ ನೀವು ಮಾಡಬೇಕು. ಇನ್ನು ನಿಮ್ಮ ಕೈ ಕೆಳಗಿನ ಆರ್ಮಿ ಸ್ಟಾಫುಗಳ ಮೇಲೆ ನಿಮಗೆ ಶಿಸ್ತಿನ ಅಧಿಕಾರವಿಲ್ಲ—ಇವೆಲ್ಲ ಕಾನೂನು ಕತ್ತೆ, ಲತ್ತೆ ಕೊಡುವುದೊಂದೇ ಅದರ ವೃತ್ತಿ ಎನ್ನುವುದಕ್ಕೆ ನಿದರ್ಶನಗಳು. ನನಗೆ ನಿಮ್ಮ ವಿಚಾರದಲ್ಲಿ ಬಲು ಸಂತಾಪವಾಗುತ್ತಿದೆ" ಎಂದರು.

ಹೌದು. ನಾನು ಓಸಿ. ನಾನು ಅವನ (ಆರ್ಮಿ ಸ್ಟಾಫ್) ಯೋಗಕ್ಷೇಮ ಸಂಬಳ ಸಾರಿಗೆ ಎಲ್ಲಕ್ಕೂ ಜವಾಬ್ದಾರ. ಆದರೆ ಅವನು ಅಶಿಸ್ತಿನಿಂದ ವರ್ತಿಸಿದರೆ ನಿಯಮೋ ಲ್ಲಂಘನೆ ಮಾಡಿದರೆ ಅವನ ಮೇಲೆ ನಾನು ಏನೂ ಶಿಸ್ತಿನ ಕ್ರಮ ಕೈಗೊಳ್ಳುವಂತಿಲ್ಲ. ಕಾರಣ—ನಾನು ಎನ್‌ಸಿಸಿ ಪೂರ್ಣಾವಧಿ ಕಮಿಷನ್ ಪಡೆದವ, ಬೇರೆ ವರ್ಗದವ! ಹಾಗಾದರೆ ನನ್ನ ಮೇಲೆ ಒಬ್ಬ ಆರ್ಮಿ ಕಮಿಷನ್ ಪಡೆದವ ಶಿಸ್ತಿನ ಕ್ರಮ ಕೈಗೊಳ್ಳಬಹುದೇ? ದೇಶದ ನ್ಯಾಯಾಧೀಶರೆಲ್ಲರೂ ನ್ಯಾಯ ನೀಡುವುದು ಸಾಧ್ಯವಾದೀತೇ? ನಮ್ಮ ಅಸಹಾಯಕ ಪರಿಸ್ಥಿತಿ ಅಂದು ಇದ್ದದ್ದು ಹೀಗೆ. ಇದರಿಂದ "ಇಂದು ನಾನು ಟ್ರೈನಿಂಗಿಗೆ ಬರುವುದಿಲ್ಲ," "ಈ ಕೆಲಸ ನಾನು ಮಾಡಲಾರೆ" ಎಂದು ಮುಂತಾಗಿ ಒಬ್ಬ ಸ್ಟಾಫ್ ನನ್ನ ಎದುರೆದುರೇ ಖಡಾಖಂಡಿತವಾಗಿ ಬಿರುನುಡಿದಾಗ ನಾನು ಏನೂ ಮಾಡುವಂತಿಲ್ಲ, ಗ್ರೂಪ್ ಕಮಾಂಡರರಿಗೆ ಹೇಳಿದರೆ "ನಿಮಗೆ tact ಸಾಲದು" ಅಥವಾ "ಆರ್ಮಿ ನಿಯಮಾನುಸಾರ ಚಾರ್ಜ್ ಶೀಟ್ ಹಾಕಿ ಶಿಫಾರಸು ಮಾಡಿ ಕಳಿಸಿ. ನೋಡೋಣ." ವ್ಯಾವಹಾರಿಕವಾಗಿ ಇವೆಲ್ಲವೂ ಎಷ್ಟು ಅಪ್ರಾಯೋಗಿಕ ಎಂಬುದನ್ನು ಅನುಭವಿಸಿ ನೋಡಬೇಕು. ತತ್ತ್ವವನ್ನು ಬಲಿಗೊಡುವ tact ಸುಳ್ಳನ್ನು ನಿಜವೆಂದು ಸಾಧಿಸುವ fact ಬೇಡ, ಬೇಡ. ಆದ್ದರಿಂದ ನನ್ನ ನಿರ್ಧಾರ ಸರ್ವ ಶ್ರೇಷ್ಠ ಎಂದು ತೀರ್ಮಾನಿಸಿ ಒಂದು ವಿಧವಾದ ಶಾಂತ ಮನೋಭಾವದಿಂದ ಬಳ್ಳಾರಿಗೆ ಹಿಂತಿರುಗಿದೆ.

ಸರಕಾರೀ ಕಾಲೇಜು ದರ್ಶನ

ಮಾರ್ಚ್ ೩೧, ೧೯೬೫ರ ಮೊದಲು ನಾನು ಬೆಂಗಳೂರಿನ ಸರಕಾರೀ ಕಾಲೇಜಿನ ಪ್ರಿನ್ಸಿಪಾಲರ ಮುಂದೆ ಹಾಜರಾಗಬೇಕು ಎಂಬ ಹುಕುಂ ಬಂತು. ಮಕ್ಕಳ ವಿದ್ಯಾಭ್ಯಾಸ ಏಪ್ರಿಲ್ ಮಧ್ಯದ ವರೆಗೂ ಉಳಿದಿರುವುದರಿಂದ ನಾನು ಮಾತ್ರ ಬಳ್ಳಾರಿಯಲ್ಲಿಯೇ ಸ್ವಲ್ಪ ದಿವಸಗಳ ಕಾಲ ಇರಬೇಕಾಗಿತ್ತು. ಆದರೆ ಆ ದಿವಸಗಳ ನನ್ನ ಇರವು ಕೇವಲ ಖಾಸಗಿ. ಅಧಿಕಾರದಲ್ಲಿದ್ದ ಕ್ಷೇತ್ರದಲ್ಲಿ ಅಧಿಕಾರರಹಿತವಾಗಿ ಬಲು ಕಾಲ ಉಳಿಯಬಾರದು. ಆದ್ದರಿಂದ ೩೧ರ ಅಪರಾಹ್ಣ ನನ್ನ ಏಓ ಆಗಿದ್ದ ಎನ್‌ಸಿಸಿ ಕ್ಯಾಪ್ಟನ್ ಅವರಿಗೆ ಅಧಿಕಾರ ವಹಿಸಿಕೊಟ್ಟೆ. ಅಂದೇ ಸಾಯಂಕಾಲ ಬಸ್ ಹತ್ತಿ ಮಧ್ಯರಾತ್ರಿ ವೇಳೆಗೆ ಬೆಂಗಳೂರು ಸೇರಿದೆ.

ಬೆಂಗಳೂರಿನ ವಿಧಾನಬೀದಿಯ ಮಗ್ಗುಲಿಗೆ, ಸೆಂಟ್ರಲ್ ಕಾಲೇಜಿನ ಎದುರಿಗೆ ರಾರಾಜಿಸುತ್ತಿದೆ ಸರ್ಕಾರೀ ಕಾಲೇಜು. ೨,೦೦೦ಕ್ಕೂ ಮಿಕ್ಕಿದ ವಿದ್ಯಾರ್ಥಿಗಳ ಮಹಾ ಸಮುದ್ರವಿದು. ಕಾಲೇಜಿನ ಕಟ್ಟಡಗಳನ್ನು ಸುತ್ತಿ ನೋಡಲು ಎರಡು ದಿವಸಗಳೂ ಸಾಲವು. ಬೆಂಗಳೂರು ನಗರದ ಕೇಂದ್ರದಲ್ಲಿ ಈ ಕಾಲೇಜು ಇರುವುದರಿಂದ ಇಲ್ಲಿ ಸದಾ ಜನಜಂಗುಳಿ. ಯಾರಿಗೂ ಯಾರನ್ನೂ ಗುರುತಿಲ್ಲ. ಎಲ್ಲರೂ ಅತಿ ಬಿರುಸಾಗಿ ಸಾಗುವವರೇ. ಈ ದೃಶ್ಯ ನೋಡಿ ಹೆದರಿದೆ. ದಾರಿಯಲ್ಲಿ ನಿರಂತರವಾಗಿ ಹರಿಯುತ್ತಿದ್ದ ವಾಹನಗಳನ್ನು ನೋಡಿ ಚಕಿತನಾದೆ. ಕಾಡು ಬೆಟ್ಟ ಗುಡ್ಡ ಹಳ್ಳಿಗಳಲ್ಲಿ ಅಲೆಮಾರಿಯಾಗಿ ಹಾರಾಡಿದ್ದ ಈ ಮುಕ್ಕ ಯಂತ್ರಬ್ರಹ್ಮ ಆಸ್ಫೋಟಿಸುತ್ತಿರುವ ಈ ಮಹಾ ಬೋಗುಣಿಯಲ್ಲಿ ಬದುಕಿ ಉಳಿದಾನೇ ಎಂದು ಚಿಂತಿಸಿದೆ. ನಾಗರಿಕ ಉಡುಪುಧಾರಿಯಾಗಿ—ಸೂಟು ಬೂಟು ಕೈಯಲ್ಲೊಂದು ಬ್ಯಾಗು ಸಮೇತ—ಎಲ್ಲರನ್ನೂ ಬೆರಗಾಗಿ ನೋಡುತ್ತ ಆದರೆ ಯಾರಿಂದಲೂ ಲೆಕ್ಕಿಸಲ್ಪಡದೇ ಕಾಲೇಜನ್ನು ಪ್ರವೇಶಿಸಿದೆ. ಹೆದರಿ ಆಫೀಸಿಗೆ ನುಗ್ಗಿ ಮುಖ್ಯ ಗುಮಾಸ್ತರಿಗೆ ವಂದಿಸಿ ನಿಂತೆ. ತುಂಬ ಸಜ್ಜನಿಕೆಯಿಂದ ಅವರು ನನ್ನನ್ನು ವಿಚಾರಿಸಿದಾಗ ನನ್ನ ಹೆಸರು ಮತ್ತು ನಾನು ಬಂದಿದ್ದ ಉದ್ದೇಶ ಹೇಳಿದೆ. ರಾಮಸ್ವಾಮಿಗೆ ಆದ ಆನಂದ ಅಪಾರ "ತಾವೇಯೋ ಜಿ. ಟಿ. ನಾರಾಯಣರಾಯರು. ಕುಳಿತುಕೊಳ್ಳಿ ಸಾರ್. ಸಾಹೇಬರು ಇದೇನು ಈಗ ತಾನೇ ಬಂದು ಬಿಡುತ್ತಾರೆ. ನಿಮ್ಮ ವಿಚಾರ ಬಹಳ ಕೇಳಿದ್ದೇವೆ. ಇಲ್ಲೆಲ್ಲ ಅದೇ ಮಾತು! ನೋಡ್ರೀ ಚಂದ್ರಶೇಖರರಾಯರೇ—ಇವರೇ ಜಿ. ಟಿ. ನಾರಾಯಣರಾಯರು."

ಅವರು ಮಿಲಿಟೆರಿ ಕ್ರಮದಲ್ಲಿ ಸಾವಧಾನ್ ಸ್ಥಿತಿಗೆ ಬಂದು "ಗುಡ್ ಮಾರ್ನಿಂಗ್ ಸಾರ್" ಎಂದರು. ಲೆಫ್ಟಿನೆಂಟ್ ಚಂದ್ರಶೇಖರರಾಯರು ಎನ್‌ಸಿಸಿ ಆಫಿಸರ್; ರಸಾಯನ ಶಾಸ್ತ್ರದ ಅಧ್ಯಾಪಕರು. ಅವರ ಸಮೇತ ನಾನು ಆಫೀಸಿನ ಒತ್ತಿಗೇ ಇದ್ದ ಗಣಿತಶಾಸ್ತ್ರದ ಕೋಣೆಗೆ ಹೋದೆ. ಗಣಿತಶಾಸ್ತ್ರದ ವಿಭಾಗದ ಮುಖ್ಯಸ್ಥ ಗುರುರಾಜರಾಯರ ಪರಿಚಯ ಮಾಡಿಕೊಂಡೆ. ತುಂಬ ಆತ್ಮೀಯತೆಯಿಂದಲೂ ಸೌಜನ್ಯದಿಂದಲೂ ಅದೆಷ್ಟೋ ವರ್ಷಗಳ ಪೂರ್ವ ಪರಿಚಯವಿದ್ದವರಂತೆಯೂ ನನ್ನನ್ನು ಅವರು ಸ್ವಾಗತಿಸಿದರು. ಇಷ್ಟಾಗುವಾಗ ಸಾಹೇಬರು ಬಂದ ಸುದ್ದಿಯನ್ನು ರಾಮಸ್ವಾಮಿ ನನಗೆ ಹೇಳಿ ಕಳಿಸಿದರು.

ಮಹಡಿಯ ಸೋಪಾನ ಏರಿದೆ. ಬದರಿಂದಲೂ ಎತ್ತರದಲ್ಲಿದ್ದ ವಿಶಿಷ್ಟ ಪ್ರಾಂಗಣದ

ಮೆಟ್ಟಿಲುಗಳನ್ನು ವೇದಂವಾಗಿ ಹತ್ತಿದೆ. ಹೊರಕೋಣೆಯಲ್ಲಿದ್ದ ಆಸನಗಳಲ್ಲಿ ಒಂದರ ಮೇಲೆ ಆಗಂತುಕನಾಗಿ ಕುಳಿತೆ. ಎದುರಿನ ಭಾರೀ ಕೋಣೆಯ ಒಳಗೆ ಪ್ರಿನ್ಸಿಪಾಲ್ ಆರ್. ಆರ್. ಉಮರ್ಜಿ ಕುಳಿತಿದ್ದಾರೆ; ಅವರನ್ನೂ ನನ್ನನ್ನೂ ಪ್ರತ್ಯೇಕಿಸಿದದ್ದು ಬಣ್ಣ ಬಣ್ಣದ ಕನ್ನಡಿಗಳಿದ್ದ ಅಪಾರಕ ಕಿರುಬಾಗಿಲು. ಪ್ಯೂನ್ ರಂಗಯ್ಯ ನನ್ನ ಗುರುತು ಚೀಟಿ ತೆಗೆದುಕೊಂಡು ಹೋಗಿ ಉಮರ್ಜಿಯವರಿಗೆ ಕೊಟ್ಟ. ಒಡನೆಯೇ ಹಿಂದೆ ಬಂದು ಕಿರು ಬಾಗಿಲು ತೆರೆದು ನನ್ನನ್ನು ಒಳಬರಲು ಕರೆದ. ಅದನ್ನು ದಾಟಿ ಪರದೆ ಚೌಕಟ್ಟಿನ ಬದಿಗೆ ಸರಿದು ನಿಂತು "ನಾನು ಒಳಗೆ ಬರಬಹುದೇ ಸಾರ್ ?" ಎಂದು ಇಂಗ್ಲಿಷಿನಲ್ಲಿ ಪ್ರಶ್ನಿಸಿದೆ. "ಓ ಓ ನಿಮಗೆ ಸ್ವಾಗತ" ಎಂದು ಅವರು ವಿಶಾಲ ಸುಂದರ ಸ್ಮಿತವದನದಿಂದ ನನ್ನನ್ನು ಆಹ್ವಾನಿಸಿದರು. "ನಮಸ್ಕಾರ ಸಾರ್, ನಾನು-ಜಿ.ಟಿ. ನಾರಾಯಣರಾವ್. ಈ ಕಾಲೇಜಿಗೆ ಇಂದು ಗಣಿತಶಾಸ್ತ್ರದ ಲೆಕ್ಚರರ್ ಆಗಿ ವರ್ಗವಾಗಿ ಬಂದು ಸೇರಿದವ" ಎಂದೆ.

"It is indeed a pleasure to welcome you" ಎಂದು ಎದ್ದು ನಿಂತು ಹಸ್ತ ಲಾಘವವಿತ್ತು ನನ್ನನ್ನು ಕೂರ ಹೇಳಿದರು. ಅವರ ಉತ್ಸಾಹದ ಹೊನಲಿನಲ್ಲಿ ನಾನು ಕರಗಿಹೋದೆ. "ನೀವು ಈ ಕಾಲೇಜಿಗೆ ಬಂದದ್ದು ನನಗೆ ಬಹಳ ಸಂತೋಷವಾಗಿದೆ. ನಿಮ್ಮ ವಿಚಾರ ತುಂಬ ಒಳ್ಳೆಯ ಮಾತನ್ನು ಕೇಳಿದ್ದೇನೆ" ಎಂದು ಮಾತು ಮುಂದು ವರಿಸಿದರು. ಮೇಲಧಿಕಾರಿಗಳು ಎದುರೇ ಹೇಳುವ ಒಳ್ಳೆಯ ಮಾತುಗಳನ್ನು ಕೇಳುವುದು (ಅದೆಷ್ಟೇ ಪ್ರಿಯವಾದರೂ ಹಿತಕರವಾದರೂ) ಬಲು ತೊಡಕಿನ ವಿಷಯ, ಪಠಾವಳಿ ನಂತೆ ನಾನು ಸುಮ್ಮನೆ ಕುಳಿತು "ನಿಮಗೆ ಧನ್ಯವಾದಗಳು" ಎಂದೆ.

"ನನ್ನಿಂದ ಏನು ಕೆಲಸ ಆಗಬೇಕು ಹೇಳಿ. ಪ್ರಯತ್ನ ಮಾಡುತ್ತೇನೆ" ಎಂದು ಮಾತು ಮುಂದುವರಿಸಿದೆ.

"ಈ ಕಾಲೇಜಿಗೆ ಒಂದು ವಾರ್ಷಿಕ ಕ್ಯಾಲೆಂಡರ್ ಇಲ್ಲ. ಅದರ ತಯಾರಿಕೆಯ ದಾರಿ ಯಲ್ಲಿ ಸ್ವಲ್ಪ ಮುಂದುವರಿಸಿದ್ದೇವೆ. ಜೂನ್ ತಿಂಗಳಾಗುವಾಗ ಒಂದು ಉತ್ಕೃಷ್ಟ ಕಾಲೆಂಡರ್ ಮುದ್ರಿತವಾಗಿ ಹುಡುಗರಿಗೆ ದೊರೆಯುವಂತಾಗಬೇಕು. ಅದರ ಹೊಣೆ ಹೊರಬಲ್ಲಿರಾ ?"

"ಧಾರಾಳವಾಗಿ—ಸಂತೋಷವಾಗಿ" ನಾನು ಹೇಳಿದೆ.

"ಸೂರ್ಯನಾರಾಯಣರಾಯರನ್ನು ನೋಡಿ. ಕಾಲೇಜು ಪತ್ರಿಕೆಯ ಜೊತೆಗೆ ಇದರ ಹೊಣೆಯನ್ನೂ ಅವರು ಹೊತ್ತಿದ್ದಾರೆ. ಅವರಿಗೆ ಸಹಾಯವಾಗುತ್ತದೆ."

"ಆಗಲಿ."

"ಈ ಕಾಲೇಜು ನಿಮ್ಮದು. ನೀವು ಸಾಕಷ್ಟು ಅನುಭವಸ್ಥರು, ಕಾರ್ಯಶೀಲರು. ಆದ್ದ ರಿಂದ ನೀವು ಇಲ್ಲಿಯ ಸನ್ನಿವೇಶ ಗ್ರಹಿಸಿ-ಏನೇನು ಆಗಬೇಕೆಂದು ಬಯಸುತ್ತೀರೋ ಅದ ನ್ನೆಲ್ಲ ಮಾಡಿ. ಈ ಕಾಲೇಜಿನ ಹೆಸರಿನಿಂದ ನೀವು ನಡೆಸುವ ಎಲ್ಲ ಕ್ರಿಯಾಶೀಲ ಕಾರ್ಯ ಗಳಿಗೂ ನನ್ನ ಬೆಂಬಲವಿದೆ. ಯಾವಾಗ ಬೇಕಾದರೂ ನೀವು ಸೀದಾ ಒಳಬಂದು ನನ್ನೊಡನೆ ವಿಚಾರ ವಿನಿಮಯ ನಡೆಸಿ. ನಿಮಗೆ ಬೇರೆ ಏನು ಹೇಳಲಿ. ಅದಿರಲಿ, ನೀವು ನಮ್ಮ ೧೭ನೆಯ ಮೈಸೂರು ಬೆಟಾಲಿಯನ್ನಿನ ಓಸಿ ಮೇಜರ್ ನಾರಾಯಣ್‌ಸಿಂಗ್‌ರನ್ನು ನೋಡಿದಿರಾ ? ಎನ್‌ಸಿಸಿಗೂ ಸೇರಿ ಕೆಲಸ ಮುಂದುವರಿಸಿ."

"ನಿಮ್ಮನ್ನು ನೋಡಿದ ಮೇಲೆ ಅವರನ್ನು ನೋಡುವುದೆಂದು ನನ್ನ ಯೋಜನೆ. ಕಾಲೇಜಿನಲ್ಲಿ ಎನ್‌ಸಿಸಿ ಹುದ್ದೆ ಖಾಲಿ ಇದ್ದರೆ ಮಾತ್ರ ನಾನು ಅದನ್ನು ಸೇರುತ್ತೇನೆ. ಹೇಗೂ ಅವರನ್ನು ಕಂಡಾಗ ತಿಳಿಯುತ್ತದಷ್ಟೆ."

ಉಮರ್ಜಿ—ಸರಕಾರೀ ಕಾಲೇಜಿನ ಸಮಷ್ಟಿ ಚೈತನ್ಯದ ಮೂರ್ತರೂಪ ; ಉತ್ಸಾಹ ಕ್ರಿಯಾಶೀಲತೆಯ ಪ್ರತೀಕ ; ವಿದ್ಯಾಕ್ಷೇತ್ರದಲ್ಲಿ ಆಡಳಿತೆಯ ರಂಗದಲ್ಲಿ ಸಮರ್ಥನಾಮ. ಅವರ ಮಾತು—ಸಮಗ್ರವಾಗಿ ವ್ಯಕ್ತಿತ್ವ—ಕನಿಷ್ಠ ಮಟ್ಟದಲ್ಲಿದ್ದ ನನ್ನ ಮೊರಾಲಿಗೆ ಟಾನಿಕ್ಕಾಯಿತು. ಹಗುರಾಗಿ ಅಲ್ಲಿಂದ ಹೊರ ಹೊರಟೆ. ೧೨ನೆಯ ಮೈಸೂರಿನ ಕಛೇರಿ ಕಡೆಗೆ ಎರವಲು ಸೈಕಲ್ ಪಡೆದು ಸಾಗಿದೆ.

ಒಳಗೂ ಸಮವಸ್ತ್ರ ಧರಿಸಿದ್ದ ಭಾರಿ ಸಿಪಾಯಿ

ಅವರನ್ನು ಆ ಹಿಂದೆ ಒಮ್ಮೆ—ಅದೂ ಅಕಸ್ಮಾತ್ತಾಗಿ ಕಾಲೆಡವಿ—ನೋಡಿದ್ದೆ. ಆಗಲೇ ಅವರ ರಾಮಪ್ಪನ್-ಸರಳತೆಗೂ ತಮ್ಮಯ್ಯ-ಆತ್ಮೀಯತೆಗೂ ಮುತ್ತಪ್ಪ-ಬಾಷ್ಯ ಕಾಠಿಣ್ಯಕ್ಕೂ ಮಾರುಹೋಗಿದ್ದೆ. ಆದದ್ದಿಷ್ಟೆ. ಬಳ್ಳಾರಿ ಸೇರಿದ ತರುಣದಲ್ಲಿ ಬೆಂಗಳೂರಿಗೆ ಕರ್ತವ್ಯದ ಮೇಲೆ ಬರಬೇಕಾಯಿತು. ಡೈರೆಕ್ಟೊರೇಟ್ ಕೆಲಸ ಮುಗಿಸಿದ ಮೇಲೆ ನನ್ನ ಹಳೆಯ ಎನ್‌ಸಿಸಿ ಮಿತ್ರ ಲೆಫ್ಟಿನೆಂಟ್ ಎಚ್. ಎನ್. ಅಶ್ವತ್ಥನಾರಾಯಣ. ಈಗ ಪೂರ್ಣಾವಧಿಯ ಕಮಿಷನ್ ಪಡೆದು ಬೆಂಗಳೂರಿನ ಒಂದು ಬೆಟಾಲಿಯನ್ನಿನಲ್ಲಿ ಏಓ ಆಗಿದ್ದವರನ್ನು ನೋಡಲೆಂದು ಮಿಲಿಟರಿ ಕಾರಿನಲ್ಲಿ ಕುಳಿತು ಹೋದೆ. ಪಾರ್ಕ್ ಹೌಸ್ ಎಂಬ ಬಂಗ್ಲೆಯ ಅಂಗಳದಲ್ಲಿ ಕಾರ್ ನಿಂತಿತು. ಜಗಲಿ ಏರಿದೆ. ಎಡಗಡೆ ದೊಡ್ಡ ಹಾಲಿನಲ್ಲಿ ಅಶ್ವತ್ಥ ನಾರಾಯಣ ಕುಳಿತಿದ್ದುದು ಅಲ್ಲಿಗೇ ಕಂಡಿತು. ಹಳೆ ಪರಿಚಯದ ಸಲಿಗೆಯಿಂದ ಸೀದಾ ಅವರ ಮೇಜದೆಡೆಗೇ ಅವರನ್ನು ಸ್ವಾಗತಿಸುತ್ತ ಮುನ್ನಡೆದೆ. ಹೊಸ್ತಿಲು ದಾಟಿದೆನೋ ಎಡವಿದೆನೋ ಉತ್ಸಾಹದ ಅಮಲಿನಲ್ಲಿ ತಿಳಿಯಲಿಲ್ಲ. ಎಡಗಡೆ ಗೋಡೆಯ ಪಕ್ಕದಲ್ಲಿ ಆಸೀನರಾಗಿದ್ದ ಗಂಭೀರ ಮುಖಮುದ್ರೆಯ ಪ್ರಾಚೀನ ಗ್ರೀಕ್ ಶಿಲ್ಪದಲ್ಲಿ ಕಡೆದಿದ್ದ ಶಿಲಾಮೂರ್ತಿಯನ್ನು ನೆನಪಿಗೆ ತರುವಂಥ ಮೇಜರ್‌ಭುಜಕೀರ್ತಿಧಾರಿ ಆರ್ಮಿ ಆಫೀಸರರನ್ನು ಕಂಡು ತತ್‌ಕ್ಷಣ ಸಾವಧಾನ್ ಸ್ಥಿತಿಗೆ ಪುಟಿದೆ. "Good morning, Sir. I am Captain G. T. Narayana Rao, Administrative Officer of the Bellary Unit, Sir" ಎಂದು ಟಾಪ್‌ಗೇರ್‌ನಲ್ಲಿ (ವೇಗವೂ ಸಂಟಿತನವೂ ಅನುಪಾತದಲ್ಲಿವೆ ?) ಉಸುರಿದೆ. ಅವರ ಪ್ರತಿಕ್ರಿಯೆ ನಿಧಾನ. ಆದರೆ ೫೦ರ ತಪ್ಪು ಮಗ್ಗುಲಲ್ಲಿದ್ದ ಸಾವಿರಾರು ಜನರನ್ನು ನೋಡಿದ್ದ ಹಲವಾರು ಕದನಗಳ ವೀರರಾಗಿದ್ದ ಅವರ ವೀಕ್ಷಣೆ ಅಷ್ಟೇ ಪರಿಷ್ಕಾರವೂ ಆಗಿತ್ತೆಂದು ನನಗೆ ತಿಳಿಯದಿರಲಿಲ್ಲ. "ಕುಳಿತುಕೊಳ್ಳಿ. ಸ್ವಲ್ಪ ಕಾಫಿ ಸೇವಿಸಿ" ಎಂದು ಪ್ರಸನ್ನ ಮುಖಮುದ್ರೆಯಿಂದ ಮೆತ್ತಗೆ ನುಡಿದರು. ಅವರ ಶುಭ್ರ ದಂತಪಂಕ್ತಿಯ ಕಾಂತಿಯನ್ನು ನಾನು ಗಮನಿಸದಿರಲಿಲ್ಲ.

"ಇಲ್ಲ ಸಾರ್ ! ಕ್ಷಮಿಸಿ. ನಾನು ಮಿತ್ರ ಅಶ್ವತ್ಥನಾರಾಯಣರನ್ನು ಒಂದು ಗಳಿಗೆ ನೋಡಿ ಹೋಗಲು ಬಂದವನು." ಆಗಲೇ ಪ್ಯೂನ್ ಮೂರು ಬಟ್ಟಲು ಕಾಫಿ ಹಿಡಿದು

ಕೊಂಡು ಒಳಬಂದ. ಮೇಜರ್ ಸಾಹೇಬರ ಆಜ್ಞೆ—ಕುಳಿತೆ. ಬಟ್ಟಲು ಹಿಡಿದೆ. ಆದರೆ ನನ್ನ ಆತುರ ಅವರಿಂದ ಒದಗಿದ್ದ ಅಸಹನೆ ಅವರಿಗೆ ತಿಳಿದುವು.

"ನೀವು ಅಪಾರ್ಥ ಗ್ರಹಿಸುವುದಿಲ್ಲ ಎಂದು ಭರವಸೆ ನೀಡಿದರೆ ಒಂದು ಮಾತು ಹೇಳ ಬೇಕೆಂದು ಬಯಸುತ್ತೇನೆ."

"ಹೇಳಿ ಸಾರ್."

"ಯಾವ ಮಹಾಕಾರ್ಯವನ್ನೂ ಆತುರವಾಗಿ ನಿರ್ವಹಿಸುವುದು ಸಾಧ್ಯವಿಲ್ಲ. ಕಾಫಿ ಕುಡಿಯಬೇಕಾದಾಗ ಬೇರೆ ಚಿಂತೆ ಬೇಡ. ಆ ಕೆಲಸ ಮಾಡುವಾಗ ಕಾಫಿ ಚಿಂತೆ ಬೇಡ."

ನನ್ನ ವ್ಯಕ್ತಿತ್ವಕ್ಕೆ ವ್ಯಾಸೀಯವಿರುದ್ಧ ನಿಲವಿದು—ಆತುರವಾಗಿ ಯಾವ ಕಾರ್ಯವನ್ನೂ ನಿರ್ವಹಿಸುವುದು ಸಾಧ್ಯವಿಲ್ಲ! ಎಲ್ಲವೂ, doublesನಲ್ಲಿಯೇ ಅಂದರೆ ಓಡೋಡುತ್ತಲೇ ಆಗಬೇಕು. ಲೋಕದಲ್ಲಿ ವಿಪರೀತ ನಿಧಾನತೆ ಇದೆ. ಆದ್ದರಿಂದಲೇ ಇಷ್ಟೊಂದು ತಾಪ ತ್ರಯ—ಇದು ನನ್ನ ಸ್ಪಷ್ಟ ನಿಲವು. ಆಗ ತಿಳಿದಿರಲಿಲ್ಲ—ಮುಂದೊಂದು ದಿವಸ ೧೨ ನೆಯ ಮೈಸೂರಿನ ಬಾವುಟದ ನೆರಳಿನಲ್ಲಿ ನಾರಾಯಣತ್ರಯರು ಸೇರುವರೆಂದು. ಮೇಜರ್ ಎಂ. ಆರ್. ನಾರಾಯಣ್ ಸಿಂಗ್, ೧೨ನೆಯ ಮೈಸೂರಿನ ಓಸಿಯವರ ಮತ್ತು ನನ್ನ ಪ್ರಥಮ ಪರಿಚಯವದು. ಆ ಮೇಲಿನ ದಿವಸಗಳಲ್ಲಿ ಜೆರೆ, ವಾಳ್ವೇಕರ್, ಪೈ ಮುಂತಾದ ನನ್ನ ಮಿತ್ರ ಆಫೀಸರರು ನಾರಾಯಣ್ ಸಿಂಗರು ಒಬ್ಬ ಮಹಾನ್ ವ್ಯಕ್ತಿ, ಆಚಾರ್ಯ ಪುರುಷ ಎಂದು ಅವರ ದಕ್ಷ ಶಿಕ್ಷಣ ಆಡಳಿತಶಿಬಿರ ಎಲ್ಲವನ್ನೂ ಕೊಂಡಾಡುತ್ತಿದ್ದುದನ್ನು ಕೇಳಿದ್ದೆ, ಬೆರಗಾಗಿದ್ದೆ.

೧೨ನೆಯ ಮೈಸೂರಿನ ಕಛೇರಿಯನ್ನು ಪ್ರವೇಶಿಸಿದೆ. ನಾರಾಯಣ್ ಸಿಂಗರ ಕೊಠಡಿ ಬಾಗಿಲಲ್ಲಿ ನಿಂತು ಅವರನ್ನು—ಈ ಸಲ ವಿರಾಮವಾಗಿ—ವಂದಿಸಿದೆ ಪ್ರಾಣಮಿತ್ರನನ್ನು ಹಿರಿಯ ಶಿಷ್ಯನನ್ನು ದೀರ್ಘಕಾಲ ಕಾಣದೇ ಇದ್ದಾಗ ಅಕಸ್ಮಾತ್ತಾಗಿ ಅವನು ಬಂದರೆ ಎಂಥ ಸಂತೋಷ ವಿಸ್ಮಯ ಆಗಬಹುದೋ ಆ ಭಾವನೆಗಳ ಸಂಮಿಶ್ರಣದಿಂದ ಅವರು ಎದ್ದು ಮಂದಹಾಸಬೀರಿ ನನ್ನನ್ನು ಸ್ವಾಗತಿಸಿದರು. "ನಿಮ್ಮ ಕತೆ ನನಗೆ ಚೆನ್ನಾಗಿ ಗೊತ್ತಿದೆ. ನಿಮ್ಮನ್ನು ಪೂರ್ಣಾವಧಿಯ ಹುದ್ದೆಯಲ್ಲಿ ಇಟ್ಟುಕೊಳ್ಳಲಾಗದ್ದು ನಮ್ಮ ಕಾನೂನುನಿಬದ್ಧ ಆಡಳಿತೆಯ ದೊಡ್ಡ ದೋಷ. ನಿಮ್ಮಂಥವರು ಎಲ್ಲಿಯೂ ಚೆನ್ನಾಗಿರು ತ್ತೀರಿ. ಈಗ ನಮ್ಮ ಬೆಟಾಲಿಯನ್ನಿಗೆ ನೀವು ಸೇರಲೇಬೇಕು" ಮೇಜರ್ ನಾರಾಯಣ್ ಸಿಂಗರ ಮಾತು.

"ಖಾಲಿಸ್ಥಳವಿದ್ದರೆ ಮಾತ್ರ" ನಾನು.

"ಹೇಗೂ ಸರಕಾರದ ಹುಕುಂ ಇದೆಯಷ್ಟೆ—ಒಬ್ಬ ಜೂನಿಯರನನ್ನು ನಿವೃತ್ತಿಗೊಳಿಸಿ ನಿಮ್ಮನ್ನು ಆ ಸ್ಥಳಕ್ಕೆ ಆರಿಸುತ್ತೇವೆ. ನಿಮ್ಮ ಅನುಭವ ನಮಗೆ ಬೇಕೇಬೇಕು."

"ಬೇಡ—ಕಾನೂನು ಏನು ಹೇಳಿದರೂ ಮನುಷ್ಯತ್ವವನ್ನು ಮೀರಿದ ಕಾನೂನು ಚಲಾವಣೆ ಬೇಡ. ಒಬ್ಬ ತರುಣನಿಗೆ ಸಿಕ್ಕುತ್ತಿರುವ ಗೌರವಧನವನ್ನು ಮಣ್ಣು ಮಾಡಿ ಆ ಕೆಲಸ ನನಗೆ ಕೊಡಬಾರದು. ಇನ್ನು ಎನ್‌ಸಿಸಿ ಸೇವೆ—ನೀವು ಹೇಳಿದ ಎಲ್ಲ ಕೆಲಸ ಗಳನ್ನೂ ನನಗೆ ತಿಳಿದಷ್ಟು ದಕ್ಷವಾಗಿ ನಿರ್ವಹಿಸಿಕೊಡುತ್ತೇನೆ. ಹುಡುಗರೊಡನೆ ಈ ಸಂಪರ್ಕ ಇರುವುದು ನನಗೂ ಪ್ರಿಯವಾದದ್ದೇ."

ಅದೇ ದಿವಸ ಸಂಜೆ ಬೆಂಗಳೂರಿನಲ್ಲಿ ಒಂದು ಮನೆಬಾಡಿಗೆಗೆ ಹಿಡಿದು ನನ್ನ ತಮ್ಮ ಕೃಷ್ಣಮೂರ್ತಿಯನ್ನು (ಬೆಂಗಳೂರಿನ ಕೆನರಾ ಬ್ಯಾಂಕಿನಲ್ಲಿ ನೌಕರ) ಅದನ್ನು ವಹಿಸಿ ಕೊಳ್ಳಲು ಹೇಳಿ ಬಳ್ಳಾರಿಗೆ ನಿರ್ಗಮಿಸಿದೆ. ಕಾಲೇಜಿಗೆ ಬೇಸಗೆ ರಜೆ ಕೊಟ್ಟಿದ್ದುದರಿಂದ ನನಗೆ ಬೆಂಗಳೂರಿನಲ್ಲಿ ಆತುರದ ಕೆಲಸವೇನೂ ಇರಲಿಲ್ಲ.

ಏಪ್ರಿಲ್ ಮೂರನೆಯ ವಾರದಲ್ಲಿ ಸಂಸಾರ ಸಮೇತ ಬೆಂಗಳೂರಿನ ಗೂಡುಮನೆಯ ಪಂಜರ ಹೊಕ್ಕೆ. ಈ ವೇಳೆಗೆ ಕಾಲೇಜಿನಲ್ಲಿ ಲೆಕ್ಚರರುಗಳ ವರ್ಗಾವಣೆಯ ಪರಿಣಾಮವಾಗಿ ಎನ್‌ಸಿಸಿ ಹುದ್ದೆಯೊಂದು ತಾನಾಗಿಯೇ ಖಾಲಿ ಆಯಿತು. ನಾರಾಯಣ್‌ಸಿಂಗ್ ಆ ಸ್ಥಾನಕ್ಕೆ ನನ್ನನ್ನು ಶಿಫಾರಸು ಮಾಡಿ ಪತ್ರಗಳನ್ನು ಡೈರೆಕ್ಟೊರೇಟಿಗೆ ರವಾನಿಸಿದರು; ಒಂದು ಪ್ರತಿ ನನಗೂ ಬಂತು. ಚೈನಾ ಬಿಸಿ ಏರುತ್ತ ತಗ್ಗುತ್ತ ಮುಂದುವರಿದಿತ್ತು. ಪಾಕಿಸ್ತಾನದ ಕಿರುಕುಳ ಮಿತಿ ಮೀರುತ್ತಿತ್ತು. ಹೀಗಾಗಿ ನಿರಂತರ ಜಾಗರೂಕತೆ ರಾಷ್ಟ್ರಾದ್ಯಂತ ಅನಿವಾರ್ಯ. ೧೭ನೆಯ ಮೈಸೂರಿನ ಕ್ಯಾಡೆಟುಗಳಿಗೆ ಆ ಬೇಸಗೆ ರಜೆಯಲ್ಲೂ ವಿವಿಧ ಶಿಕ್ಷಣಗಳನ್ನು—ಮುಖ್ಯವಾಗಿ ಪೌರರಕ್ಷಣೆ, ಅಗ್ನಿಶಾಮಕ ಕ್ರಿಯೆ, ನಾಗರಿಕ ಧೃತಿ ಪೋಷಣೆ ಮುಂತಾದವುಗಳಿಗೆ ಸಂಬಂಧಿಸಿದಂತೆ—ನೀಡುತ್ತಿದ್ದುದನ್ನು ಕಂಡೆ. ನಾರಾಯಣದ್ವಯರೂ (ನಾರಾಯಣ್‌ಸಿಂಗ್, ಅಶ್ವತ್ಥನಾರಾಯಣ) ಅಲ್ಲಿ ಹುಡುಗರೊಡನೆ ಇದ್ದರು. ನಾನು ಹೋಗಿ ವಂದಿಸಿದೆ "ಬನ್ನಿ ಬನ್ನಿ. ಈಗ ತಂಡ ಅಧಿಕೃತವಾಗಿಯೂ ಪೂರ್ಣವಾಯಿತು." ಎಂದು ಓಸಿ ನಕ್ಕರು.

"ಈ ಕೆಲಸಗಳೆಲ್ಲ ಇನ್ನು ನಿಮ್ಮ ಹೊಣೆ" ಎಂದರು.

"ಖಂಡಿತ. ಆದರೆ ಒಂದೆರಡು ವಾರಗಳ ಮಟ್ಟಿಗೆ ಬಿಡುವು ಕೊಡಿ. ಊರಿಗೆ ಹೋಗದೆ ಒಂದು ವರ್ಷ ದಾಟಿಹೋಗಿದೆ. ನೆಂಟರಿಷ್ಟರನ್ನು ನೋಡಿ ಬರುತ್ತೇನೆ."

"ಆಗಲಿ. ಹೋಗಿ ಹೊಸ ಹುರುಪು ಪಡೆದು ಬನ್ನಿ."

ತಾತ್ಕಾಲಿಕ ವಿಮೋಚನೆ

ಮಡಿಕೇರಿಗೆ ಹೋದವನು ಸಹಜವಾಗಿ ನಮ್ಮ ಕಾಲೇಜಿಗೆ ಹೋದೆ. ಅಲ್ಲಿ ಅಖಿಲ ಭಾರತ ಎನ್‌ಸಿಸಿ ಹುಡುಗಿಯರ ಕ್ಯಾಂಪೊಂದು ನಡೆಯುತ್ತಿತ್ತು. ಕೊಡಗಿನ ಎನ್‌ಸಿಸಿ ಬೆಟಾಲಿಯನ್ನಿನ ಓಸಿಯೂ ಈ ಕ್ಯಾಂಪಿನಲ್ಲಿ ಇದ್ದರು. ಆದರೆ ಇವರನ್ನಾಗಲೀ ಕ್ಯಾಂಪ್ ಕಮಾಂಡೆಂಟ್ ಆಗಿದ್ದವರನ್ನಾಗಲೀ ನಾನಾಗಿ ನೋಡಲು ಹೋಗಲಿಲ್ಲ. ಹೋದಕೂಡಲೇ ನನ್ನ ಕತೆ ಕೇಳುತ್ತಾರೆ, ಆಗ ಒರಟೊರಟಾಗಿ ಏನಾದರೂ ನಾನು ಹೇಳುವುದು, ಅದು ಅವರಿಗೆ ಅಪ್ರಿಯವಾಗುವುದು—ಈ ಗಂಡಾಂತರಗಳು ಅನಾವಶ್ಯಕ, ನಿವಾರಣೀಯ ಎಂದು ಭಾವಿಸಿ ನಾನು ದೂರವೇ ಇದ್ದೆ. ಕಾಲೇಜು ಹಿಂದಿದ್ದ ಸಹಕಾರ ಸಂಘಕ್ಕೆ ಹೋದೆ. ಅಲ್ಲಿ ಮಿತ್ರರೊಡನೆ ಮಾತಾಡುತ್ತ ಕುಳಿತಿದ್ದೆ. ಕೊಡಗಿನ ಓಸಿಯೂ ಓರ್ವ ಹಿರಿ ಪ್ರಾಯದ ನಾಗರಿಕ ಉಡುಪಿನ ಮಹಿಳೆಯೂ ಸಂಘದೊಳಕ್ಕೆ ನೋಡಲೆಂದೋ ವ್ಯಾಪಾರಕ್ಕಾಗಿಯೋ ಬಂದರು. ಈ ಓಸಿಗೆ ನನ್ನ ಪರಿಚಯವಿತ್ತಷ್ಟೆ (ನಾನು ತಾನೇ ಅವರಿಗೆ ಎರಡು ವರ್ಷಗಳ ಹಿಂದೆ ಅಧಿಕಾರ ವಹಿಸಿಕೊಟ್ಟವನು) ಪರಸ್ಪರ ಕುಶಲ ಪ್ರಶ್ನೆಯಾದ ಬಳಿಕ ಆ ಮಹಿಳೆಯನ್ನು ನನಗೆ ಪರಿಚಯಿಸಿಕೊಟ್ಟರು. ಅವರು ದೆಹಲಿಯ

ಎನ್‌ಸಿಸಿ ಡೈರೆಕ್ಟೊರೇಟ್ ಜನರಲ್ಲಿನಲ್ಲಿ ಓರ್ವ ಹಿರಿಯ ಅಧಿಕಾರಿ: ಮುಖ್ಯವಾಗಿ ಮಹಿಳಾ ಎನ್‌ಸಿಸಿ ಪಡೆಗಳ ಮೇಲ್ವಿಚಾರಣೆ ಅವರ ಹೊಣೆ. "ಮೇಜರ್ ರಾವ್ ಇವರು. ಎನ್‌ಸಿಸಿ ಪೂರ್ಣಾವಧಿ ಕಮಿಷನ್ನನ್ನು ತ್ಯಜಿಸಿ ತಮ್ಮ ವೃತ್ತಿಗೆ ಇದೀಗ ತಾನೇ ಮರಳಿದ್ದಾರೆ. ಇದೇ ಊರಿನವರು" ಎಂದು ಮುಂತಾಗಿ ನನ್ನ ಪರಿಚಯವನ್ನು ಆಕೆಗೆ ಮಾಡಿದರು.

"ಅದೇನು ಆ ಹುದ್ದೆಯನ್ನು ಬಿಟ್ಟಿರಿ ?" ಆಕೆ ಮುಂದುವರಿಸಿದರು.

"ನನ್ನ ಮೂಲವೃತ್ತಿಯೇ ನನಗೆ ಹೆಚ್ಚು ಪ್ರಿಯವಾದುದರಿಂದ."

"ನೀವು ತಪ್ಪುಮಾಡಿದಿರಿ" ಖಂಡಿಸುವ ಧ್ವನಿಯಲ್ಲಿ ಆಕೆ ನುಡಿದರು.

"ಅದು ಹೇಗೆ ?"

"ನಿಮ್ಮ ಈ ಉಪಾಧ್ಯಾಯ ವೃತ್ತಿ—ಇದೇನು ಮಹಾ ? ತೀರ ಸಾಮಾನ್ಯವಾದದ್ದು. ಆದರೆ ಒಂದು ಯೂನಿಟ್ಟಿನ ಓಸಿ ಅಂದರೆ ನೋಡಿ ಗೌರವ, ಸಂಬಳ."

ನನ್ನ ವೃತ್ತಿಯನ್ನು ಕುರಿತು ನನಗೆ ಯಾವಾಗಲೂ ವಿಶೇಷ ಗೌರವ ಅಭಿಮಾನ ಇದ್ದದ್ದೇ. ಈಗ, ೨೦ ತಿಂಗಳ ಅಜ್ಞಾತವಾಸದಿಂದ, ಆ ಗೌರವ ಸಾವಿರಮಡಿಯಾಗಿತ್ತು. ನನ್ನ ವೃತ್ತಿಯ ಅಪಹೇಳನೆ ಈ ಆಗಂತುಕ ಮಹಿಳೆಯಿಂದ ಆದದ್ದು ನನಗೆ ಹಿಡಿಸಲಾರದ ಕೋಪ ತಂದಿತು. ಕೂಡಲೇ ಏರುದನಿಯಲ್ಲಿ ಅಬ್ಬರಿಸಿದೆ "ಆ ವೃತ್ತಿ! ಮೂರನೆಯ ದರ್ಜೆಯ ಅರ್ವಿ ತಿರಸ್ಕೃತರಿಗೆ ಮಾತ್ರ ಯೋಗ್ಯ. ನಮ್ಮ ಮಿದುಳು ಅಲ್ಲಿ ಪ್ರಥಮ ನಷ್ಟ."

"ಅದೇಕೆ ಹಾಗೆ ಹೇಳ್ತೀರಿ ?" ಆಕೆ ಸಿಂಹಿಣಿಯಂತೆ ಕೆರಳಿದಳು.

"ಬುದ್ಧಿಗೆ ಅಲ್ಲೇನು ಸವಾಲುಂಟು ? ಅತಿ ದೊಡ್ಡ ಅಧಿಕಾರಿ ಅಂದರೆ ಅತಿ ದೊಡ್ಡ ರೈಫಲ್ ಎಂದರ್ಥ!" ಮಾತು ಮುಂದುವರಿಸುವುದು ನನಗೆ ಬೇಕಾಗಲಿಲ್ಲ. "ಆ ವಿಚಾರ ನಮ್ಮಲ್ಲೇಕೆ ಜಗಳ ?" ಎಂದು ಅಲ್ಲಿಗೇ ಪೂರ್ಣ ವಿರಾಮ ಹಾಕಿದೆ.

ಊರೂರಿನ ನಂಟರಿಷ್ಟರ ಮನೆಗಳ ಮೇಲೆ ದಿಗ್ವಿಜಯ ಮುಗಿಸಿ ಬೆಂಗಳೂರಿಗೆ ಹೊಸ ಹುಮ್ಮಸ್ಸಿನಿಂದ ಮರಳಿದೆ. ಮರುದಿವಸ ಕಾಲೇಜಿಗೆ ಹೋದಾಗ ೧೨ನೆಯ ಮೈಸೂರಿನ ಆಫೀಸಿನಿಂದ ಬಂದಿದ್ದ ಒಂದು ಪತ್ರ ವಿಶೇಷ ಅರ್ಥವನ್ನು ನನಗೆ ನೀಡಿತು —ಅದರ ಪ್ರಕಾರ ನನಗೆ ಆ ಹಿಂದೆ ನೀಡಿದ್ದ ಎನ್‌ಸಿಸಿ ಹೊಣೆಗಾರಿಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು; ಮುಂದೆ ಈ ವಿಚಾರ ತಿಳಿಸಲಾಗುವುದು ಎಂದು ಮುಂತಾಗಿ ಬರೆದಿತ್ತು. ಆಫೀಸಿಗೆ ಹೋದೆ. ಓಸಿ ನಕ್ಕು ನುಡಿದರು "ಏನಾಯ್ತಪ್ಪ ಮಡಿಕೇರಿಯಲ್ಲಿ?"

ನನಗೆ ಮೊದಲು ತಿಳಿಯಲಿಲ್ಲ. ಕೂಡಲೇ ಮನಸ್ಸು ಗ್ರಹಿಸಿತು ಸಂದರ್ಭವನ್ನು. ನಡೆದದ್ದನ್ನು ಹೇಳಿದೆ. "ಅಷ್ಟೇ ತಾನೇ! ಎನ್‌ಸಿಸಿಯ ವಿರುದ್ಧ ಅವಿಶ್ವಾಸದ ಅಥವಾ ದ್ರೋಹದ ಮಾತೇನಾದರೂ ಆಡಿದಿರಾ ?"

"ಅದು ಹೇಗೆ ನನ್ನಿಂದ ಸಾಧ್ಯ ? ಆಕೆಯ ಉದ್ಧಟ ವರ್ತನೆಗೆ ಶಾಸ್ತಿ ಮಾಡಿದ್ದು ತಪ್ಪೇ ?"

"ಅಂತೂ ಏನೇನೋ ಬೆಸೆದು ಹೋಗಿದ್ದಾಳೆ. ನೋಡೋಣ. ನಿಮ್ಮೊಡನೆ ವಿಚಾರಿಸಿ ಮುಂದುವರಿಸಬೇಕೆಂದು ನಾನು ತಡೆದಿದ್ದೆ."

"ನಾನು ಎನ್‌ಸಿಸಿಗೆ ಮರಳುವುದರಿಂದ ನಿಮಗಾಗಲೀ ಅಥವಾ ಎನ್‌ಸಿಸಿ ಡೈರೆಕ್ಟೊರೇಟಿಗಾಗಲೀ ಏನಾದರೂ ಅಳುಕು, ತೊಂದರೆ ಆಗುವುದಾದರೆ ದಯವಿಟ್ಟು ಈಗಿಂದೀಗಲೇ ನನ್ನ ವಿಷಯ ಮರೆತು ಬಿಡಿ."

"ತೊಂದರೆ ? ಖಂಡಿತ ಇಲ್ಲ. ಇದೊಂದು ನನ್ನ ಸತ್ತ್ವಪರೀಕ್ಷೆಯ ವಿಷಯ. ನಾನು ಸೋಲಲು ಒಪ್ಪುವುದೇ ಇಲ್ಲ."

ಮೇ ಜೂನ್ ತಿಂಗಳುಗಳಲ್ಲಿ ಪೌರರಕ್ಷಣೆಯ ಶಿಕ್ಷಣದಲ್ಲಿ ನಾನು ಭಾಗವಹಿಸಿದೆ. ಜೂನಿನಲ್ಲಿ ಕಾಲೇಜಿನ ಪ್ರವೇಶಯಜ್ಞ ಪ್ರಾರಂಭವಾಯಿತು. ಐದಾರು ಸಾವಿರ ಅರ್ಜಿಗಳನ್ನು ಅರಿಸಿ ವಿಂಗಡಿಸಿ ಒಂದು ಸಾವಿರ ಹುಡುಗರನ್ನು ಆಯುವುದೇನೂ ಸಾಮಾನ್ಯ ಕೆಲಸವಲ್ಲ. ಪ್ರಿನ್ಸಿಪಾಲರ ಬೆಂಬಲಕ್ಕೆ ನಿಂತಿದ್ದ ಪ್ರಾಧ್ಯಾಪಕರ ತಂಡದಲ್ಲಿ ನಾನೂ ಒಬ್ಬ ಪ್ರಮುಖ ಸದಸ್ಯ. ಈ ಮಧ್ಯೆ ಕ್ಯಾಲೆಂಡರಿನ ಮುದ್ರಣಕಾರ್ಯ ಭರದಿಂದ ಮುಂದುವರಿದಿತ್ತು. ಜೂನ್ ೨೪ರಂದು ಮೇಲಿನ ತರಗತಿಗಳು ಆರಂಭವಾದುವು. ಜುಲೈ ತಿಂಗಳು ಸಹ ಮುಗಿಯುತ್ತ ಬಂದಿತು. ಕಾಲೇಜಿನ ಎನ್‌ಸಿಸಿ ಶಿಕ್ಷಣ ಭರದಿಂದ ಆರಂಭವಾಗಿ—ಒಂಬತ್ತು ಆಫೀಸರರಿರಬೇಕಾದಲ್ಲಿ ಎಂಟೇ ಜನರಿಂದ ಒಡಗೂಡಿ—ಮುಂದುವರಿಯುತ್ತಿತ್ತು. ಒಂಬತ್ತನೆಯ ಸ್ಥಾನ ಖಾಲಿ ನನ್ನನ್ನು ಕುರಿತ ತಡೆಪತ್ರದ ಇತ್ಯರ್ಥ ಆಗಿರಲಿಲ್ಲ. ಇತರ ಕೆಲಸಗಳು ಆ ದೊಡ್ಡ ಕಾಲೇಜಿನಲ್ಲಿ ನನಗೆ ಮೈತುಂಬ ಇದ್ದುವು. ಹೀಗಾಗಿ ಎನ್‌ಸಿಸಿ ವಿಚಾರದಲ್ಲಿ ವಿಶೇಷ ಚಿಂತೆ ಆಗಲಿಲ್ಲ.

ಕಾಲೇಜಿನಲ್ಲಿ ನನಗೆ ಒದಗಿದ ಸಹೋದ್ಯೋಗಿ ಮಿತ್ರರಲ್ಲಿ ರಸಾಯನ ಶಾಸ್ತ್ರದ ಮುಖ್ಯಸ್ಥ ಕೆ. ಎಸ್. ಲಕ್ಷ್ಮಣರಾಯರನ್ನು ಸ್ಮರಿಸಲೇಬೇಕು. ಇಡೀ ಕಾಲೇಜಿನಲ್ಲಿ ಸರ್ವಾಂತರ್ಯಾಮಿ ಎಂಬ ಒಂದು ಪದವನ್ನು ಯಾರಿಗಾದರೂ ಅನ್ವಯಿಸಬಹುದಾದರೆ ಅದು ಇವರಿಗೆ. ಇವರ ಚಟುವಟಿಕೆಗಳನ್ನು ಕಂಡು ವಿಸ್ಮಿತನಾದೆ. "ಸುಧಾ, ಪ್ರಜಾವಾಣಿ, ಪ್ರಜಾಮತ, ಕೈಲಾಸ" ಮುಂತಾದ ಬೆಂಗಳೂರಿನ ಎಲ್ಲ ಪ್ರಧಾನ ಪತ್ರಿಕೆಗಳಲ್ಲೂ ಇವರ ವಿಜ್ಞಾನ ಲೇಖನಗಳು ಅಚ್ಚಾಗುತ್ತಿದ್ದುವು. ಬೆಂಗಳೂರಿನ ಹಲವಾರು ವೇದಿಕೆಗಳ ಮೇಲಿನಿಂದ ಇವರು ಜನಪ್ರಿಯ ವಿಜ್ಞಾನ ಕುರಿತು ಭಾಷಣ ನೀಡುತ್ತಿದ್ದರು. ಇನ್ನು ಕಾಲೇಜಿನ ಸಕಲ ಚಟುವಟಿಕೆಗಳಲ್ಲೂ ಪಾದರಸರೂಪದಿಂದ ಇವರು ಇದ್ದೇ ಇರುತ್ತಿದ್ದರು. ಮಾತು ವರ್ತನೆ ಸರಳ ಆತ್ಮೀಯ. ಇವರ ಆಸಕ್ತಿಯನ್ನೂ ಕೆಲಸವನ್ನೂ ಕಂಡು ಬೆರಗಾಗಿದ್ದೆ. ರಾಜಾಜಿನಗರದ ಒಂದು ಕರ್ನಾಟಕ ಸಂಘದಲ್ಲಿ ಶಿವರಾಮಕಾರಂತರ ಕೃತಿಗಳನ್ನು ಕುರಿತ ಉಪನ್ಯಾಸಮಾಲೆ ಏರ್ಪಡಿಸಿದಾಗ ಸಹಜವಾಗಿ ಲಕ್ಷ್ಮಣರಾಯರು ಅಲ್ಲಿ ಒಬ್ಬರು ಭಾಷಣಕಾರರಾಗಿ ಆಹ್ವಾನಿತರಾಗಿದ್ದರು. ಕಾರಂತರು "ವಿಜ್ಞಾನ ಪ್ರಪಂಚ" ಗ್ರಂಥಗಳನ್ನು ಬರೆಯುತ್ತಿದ್ದಾಗ ಒಂದಷ್ಟು ದಿವಸ ನಾನು ಅವರೊಡನೆ ಕವಾಯಿತಿ ನಡೆಸಿದ್ದನ್ನು ಈ ಮಿತ್ರರು ಅರಿತಿದ್ದರು ; ಕಾರಂತರಿಗೂ ನನಗೂ ಇದ್ದ ಸ್ನೇಹ ಪರಿಚಯವನ್ನೂ ತಿಳಿದಿದ್ದರು. ಹೀಗಾಗಿ ರಾಜಾಜಿನಗರದಲ್ಲಿ ಕಾರಂತರ "ವಿಜ್ಞಾನ ಪ್ರಪಂಚ" ಕುರಿತು ನಾನು ಮಾತನಾಡಲೇಬೇಕು ಎಂದು ಹಠ ಮಾಡಿದರು. ಒಪ್ಪಿಕೊಂಡೆ. ಮತ್ತೆ ತಿಳಿಯಿತು ನಾನು ಹೊತ್ತ ಹೊಣೆಯ ಭಾರ—೧೯೫೩ಕ್ಕೇ ನನ್ನ ಸಾಹಿತ್ಯ ದೊಂಬರಾಟ ಮುಗಿದಿತ್ತು. ಎರಡು ಕಥಾಸಂಕಲನ ಪುಸ್ತಕಗಳು ಆಗ ಮುದ್ರಣಗೊಂಡಿದ್ದುವು. ಅಲ್ಲಿಂದ

ಈಚೆಗೆ ಸಹಕಾರಸಂಘ, ಎನ್‌ಸಿಸಿ ಮುಂತಾದ ಚಟುವಟಿಕೆಗಳಲ್ಲಿ ನನ್ನ ವೇಳೆ ವ್ಯಯವಾಗಿತ್ತು. ಹೀಗಾಗಿ ಬರೆಯುವ ತಂತ್ರ ಮರೆತು ಹೋಗಿತ್ತು. ಈಗ ಭಾಷಣ ಮಾಡಬೇಕಾಗಿದೆ—ಒಂದು ತೂಕದ ವಿಷಯವನ್ನು ಕುರಿತು ಕನ್ನಡದಲ್ಲಿ. ಬರೆದು ಓದುವುದೊಂದೇ ಮರ್ಯಾದೆ ಉಳಿಸುವ ಮಾರ್ಗವೆಂದು ಬರೆಯಲು ಹೊರಟೆ. ಆದರೆ ನನ್ನ ಶೈಲಿಯ ಏರು ತಗ್ಗು ನನಗೇ ನಾಚಿಕೆ ಉಂಟು ಮಾಡಿದುವು. ಅದು ಹೆಚ್ಚು ಹೆಚ್ಚು ಓರೆಕೋರೆ ಆದಂತೆ ನನ್ನ ಛಲ ಅಷ್ಟಷ್ಟು ಏರಿತು. ಬರೆದೆ ಹರಿದೆ ಬಿಸಾಡಿದೆ. ಸಾಹಿತ್ಯ ಪುಸ್ತಕಗಳನ್ನು ಓದಿದೆ. "ವಿಜ್ಞಾನ ಪ್ರಪಂಚ" ಪುನಃ ತಿರುವಿದೆ. ಮತ್ತೆ ಬರೆದೆ ಹರಿದೆ ಬಿಸಾಡಿದೆ. ಈ ತಪಸ್ಸು ಎರಡು ಮೂರು ವಾರ ಮಾಡಿದಾಗ ನನ್ನ ಮೊದಲ ಲೇಖನ (ಭಾಷಣದ ಕರಡು) ಸಿದ್ಧವಾಯಿತು. ಇದರಿಂದ ಸ್ಫೂರ್ತಿ ಪಡೆದ ನಾನು "ಮಂಗಳ ಲೋಕದ ಅಂಗಳದಲ್ಲಿ" ಎಂದು ಮ್ಯಾರಿನರ್–೪ರ ಕತೆಯನ್ನು ನಿಖರತೆಗೆ ಕೊರತೆ ಬಾರದಂತೆ ಸಾಹಿತ್ಯಲೇಪಸಹಿತ ಬರೆದು "ಸುಧಾ" ಪತ್ರಿಕೆಗೆ ಪೋಸ್ಟ್ ಮಾಡಿದೆ. ಮರುದಿವಸವೇ ಸೇತೂರಾಂರವರ (ಸಂಪಾದಕ) ದೂತ ಮನೆಗೆ ಬಂದು ಅವರು ನನ್ನನ್ನು ನೋಡುವ ಆಸೆ ವ್ಯಕ್ತಪಡಿಸಿದ್ದಾರೆ ಎನ್ನಬೇಕೇ ? ನನ್ನ ಬರವಣಿಗೆಯ ಧಾಟಿಯನ್ನು ಅವರು ಮೆಚ್ಚಿ ನನ್ನಿಂದ ನಿಯತಕಾಲಿಕವಾಗಿ ವಿಜ್ಞಾನಲೇಖನಗಳನ್ನು ಅಪೇಕ್ಷಿಸಿದರು. ಬರೆಯುವ ಗೀಳು ಒಮ್ಮೆ ಅಂಟಿದರೆ ಮುಂದೆ ಅದರ ಕವಾಯತಿಯ ಹೆಜ್ಜೆಗಳು ತಾವಾಗಿಯೇ ವಿಕಾಸಗೊಳ್ಳುತ್ತವೆ—ವಿವಿಧ ಗ್ರಂಥಗಳ ಅಭ್ಯಾಸ, ಸಾಹಿತ್ಯವಾಚನ, ಚಿಂತನ, ಬರವಣಿಗೆಯಲ್ಲಿ ವಿವಿಧ ಪ್ರಯೋಗಗಳು, ಇತ್ಯಾದಿ. ಕಾರಂತರನ್ನು ಕುರಿತು ಭಾಷಣವನ್ನು ಓದಿದೆ, ಮಾಡಿದೆ. ಆದರೆ ಭಾಷಣ ನನಗೆ ಸಿದ್ಧಿಸದ, ಸಿದ್ಧಿಸಿಕೊಳ್ಳಬೇಕಾಗದ ಕಲೆ ; ಬರವಣಿಗೆಯಲ್ಲೇ ಮುಂದುವರಿಯಬೇಕು ಎಂದು ನಿರ್ಧರಿಸಿದೆ. ನನ್ನ ಭಾಷಣ ಏನಿದ್ದರೂ ಅದು ಕ್ಲಾಸುರೂಮಿನೊಳಗೆ ಪಾಠ ಕಾಲದಲ್ಲಿ ಮಾತ್ರ. ತೀರ ಅನಿವಾರ್ಯವಾದರೆ ಮಾತ್ರ ಹೊರಗೆ—ಆಗ ಬರೆದು ಓದುವುದೇ ವಾಡಿಕೆ.

ಎನ್‌ಸಿಸಿಯಲ್ಲಿ ಮರು ಹುಟ್ಟು

ಅಂತಾರಾಷ್ಟ್ರೀಯ ಪರಿಸ್ಥಿತಿ ದಿನದಿನ ಬಿಗಡಾಯಿಸುತ್ತಿತ್ತು. ಆಂತರಿಕವಾಗಿ ಆಹಾರ ಸಮಸ್ಯೆ ಪೌರರಕ್ಷಣೆ ಬೃಹದಾಕಾರವಾಗಿ ಬೆಳೆದಿದ್ದುವು. ಭರತ ಖಂಡವಿಡೀ ಭಯಗ್ರಸ್ತ ರಾಷ್ಟ್ರವಾಗಿತ್ತು. ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ದೇಶ, ಗ್ರಹಣಪೂರ್ವಛಾಯಾಶಂಕುವನ್ನು (umbra) ಹೊಕ್ಕಂಥ ಭಾವನೆ ವಿಷಯ ತಿಳಿದವರಲ್ಲಿ ಮಿಡಿಯುತ್ತಿತ್ತು. ಈ ವರ್ಷದ ಸ್ವಾತಂತ್ರ್ಯೋತ್ಸವದಲ್ಲಿ ದೇಶವಿಡೀ ದೀಕ್ಷೆ ತೊಡಬೇಕು : ಎಂಥ ವಿಪತ್ತು ಬಂದರೂ ಒಂದಾಗಿಯೇ ಇರುತ್ತೇವೆ, ಒಂದಾಗಿಯೇ ದುಡಿಯುತ್ತೇವೆ, ದೇಶದ ಸಮಗ್ರತೆಯನ್ನೂ ಐಕ್ಯವನ್ನೂ ಕಾಪಾಡುತ್ತೇವೆ ಎಂದು ಪ್ರತಿಜ್ಞಾಬದ್ಧರಾಗಬೇಕು ಎಂದು ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಗಳಿಂದ ಆದೇಶ ಬಂತು. ಆಗಸ್ಟ್ ೧೪ರಂದು ಎನ್‌ಸಿಸಿ ದಳಗಳೂ ಇದೇ ಪ್ರತಿಜ್ಞೆ ಸ್ವೀಕರಿಸಬೇಕು ಎಂದು ಎನ್‌ಸಿಸಿ ಡೈರೆಕ್ಟೊರೇಟಿನಿಂದ ಹುಕುಂ ಜಾರಿಯಾಗಿತ್ತಂತೆ. ಒಂದನೆಯ ವಾರದ ಕೊನೆಯಲ್ಲಿ ನಾರಾಯಣ್ ಸಿಂಗರಿಂದ ಕರೆ ಬಂತು—ಎನ್‌ಸಿಸಿ ಡೈರೆಕ್ಟೊರೇಟಿನಲ್ಲಿ ಡೆಪ್ಯೂಟಿ ಡೈರೆಕ್ಟರರು ನನ್ನನ್ನು

ನೋಡಿ ಮಾತಾಡಲು ಇಚ್ಛಿಸಿದ್ದಾರೆ; ಹಳೆ ವಿಷಯವೇ; ಆದರೆ ಸೌಮ್ಯವಾಗಿ ಇರಿ ಎಂದರು. ನನ್ನನ್ನು ಗೌರವದಿಂದ ನಡೆಸಿಕೊಂಡರೆ ನಾನು ಎಷ್ಟು ತಗ್ಗಿ ಬಾಳುವವನು, ಬದಲು ಗೌರವರಹಿತವಾದ ಅಧಿಕಾರಮದದಿಂದ ಮೂಡುವ ಅಹಂಕಾರ ವರ್ತನೆ ಏನಾದರೂ ಎದುರಾಯಿತೋ ಮತ್ತೆ ನಾನು ನಾನಾಗಿರುವುದಿಲ್ಲ ಎಂಬ ಸೂಕ್ಷ್ಮವನ್ನು ಓಸಿಯವರಿಗೆ ಅರುಹಿ ಡೈರೆಕ್ಟೊರೇಟಿಗೆ ಹೋದೆ.

ಡೆಪ್ಯೂಟಿ ಡೈರೆಕ್ಟರರು ಕರ್ನಲ್ ನಾಯ್ಡು ನನ್ನನ್ನು ಚೆನ್ನಾಗಿ ಅರಿತಿದ್ದವರು. ಬಳ್ಳಾರಿಗೂ ಒಮ್ಮೆ ಬಂದು ಒಂದು ದಿವಸ ನಮ್ಮೊಡನೆ ಇದ್ದವರು. ಆದ್ದರಿಂದ ಯಾವ ಅಳುಕೂ ಇಲ್ಲದೇ ನಾನು ಅವರ ಕೊಠಡಿ ಪ್ರವೇಶಿಸಿದೆ. "ಹಳೇ ಕತೇ ಮರೆತು ಬಿಡಿ. ಈಗ ನೀವು ಎನ್‌ಸಿಸಿಗೆ ಮರಳ ಬೇಕು ಎಂದು ಹೇಳಿಕೊಳ್ಳಲು ಕರಿಸಿದೆನಷ್ಟೆ. ಏನಂತೀರಿ ?" ನಾಯ್ಡುರವರ ಮಾತು.

"ಸಾರ್, ನನ್ನ ತತ್ತ್ವವಿಷ್ಟು. ದೇಶ ಒಂದಷ್ಟು ಮೂಲಧನವನ್ನು ಬಂಡವಾಳವಾಗಿ ನನ್ನ ಮೇಲೆ ಹೂಡಿದೆ—ಹೀಗಾಗಿ ನಾನೊಬ್ಬ ಮನುಷ್ಯ, ಒಂದು ಪೂರೈಸಿದ ಮಾಲು ಎನಿಸಿಕೊಂಡಿದ್ದೇನೆ. ನನಗೆ ಗೊತ್ತಿರುವ ಎಲ್ಲ ವಿದ್ಯೆಯನ್ನೂ ಈ ದೇಶಕ್ಕೆ ಪುನಃಪೂರ್ವಕವಾಗಿ ಧಾರೆ ಎರೆಯುವುದು ನನ್ನ ಪವಿತ್ರ ಕರ್ತವ್ಯ. ಆದ್ದರಿಂದ ಈಗ ನಿಮ್ಮ ಇಚ್ಛೆ ಹೇಗಿದೆಯೋ ಹಾಗೆ ಮಾಡಲು ನನಗೆ ಸಂತೋಷವೇ."

"ಬಹಳ ಸಂತೋಷ. ಲೋಕ ನಿಮ್ಮನ್ನು ಅರ್ಥಮಾಡಿಕೊಳ್ಳುವುದು ಅನೇಕ ವೇಳೆ ತಡವಾಗಿ. ನಿಮಗೆ ಒಳ್ಳೆಯದಾಗಲಿ."

ನಾರಾಯಣ್ ಸಿಂಗರಿಗೆ ಆತ್ಮಾನಂದ. "ನಾನು ಹಿಡಿದ ಯಾವ ಕೆಲಸದಲ್ಲೂ ಅಪಜಯ ಅನುಭವಿಸಿದ್ದಿಲ್ಲ" ಎಂದರು.

ಆಗಸ್ಟ್ ೧೪ರ ಎನ್‌ಸಿಸಿ ಸಾಮೂಹಿಕ ಪೆರೇಡಿನಲ್ಲಿ ನಾನು ಸಮವಸ್ತ್ರಧಾರಿಯಾಗಿ—ಉಪಮುಖ್ಯ ಅಧಿಕಾರಿಯಾಗಿ—ನಿಂತಾಗ ಅಧಿಕೃತವಾಗಿ ಎನ್‌ಸಿಸಿಯನ್ನು ಪುನಃ ಪ್ರವೇಶಿಸಿದಂತಾಯಿತು.

೧೨ನೆಯ ಮೈಸೂರನ್ನು ಕೇಳಿ !

೧೨ನೆಯ ಮೈಸೂರಿನ ಸೆಕೆಂಡ್-ಇನ್-ಕಮಾಂಡ್ ಆಗಿದ್ದ ನನಗೆ ಇತರ ಎಂಟು ಆಫೀಸರರಿಗೆ ವಹಿಸಲಾಗಿದ್ದಂತೆ ಯಾವ ಒಂದು ಕಂಪನಿಯೂ ಇರಲಿಲ್ಲ. ಎಲ್ಲವೂ ನನ್ನ ಕಂಪನಿಗಳೇ. ೧,೬೦೦ ಕ್ಯಾಡೆಟುಗಳಿರುವ ಮಹಾಕಾಲೇಜಿನ ಕ್ಯಾಡೆಟುಗಳು. ಅವರ ಎನ್‌ಸಿಸಿ ಆಫೀಸರರು ಪ್ರಿನ್ಸಿಪಾಲರು ಒಂದು ಕಡೆ, ಈ ಕ್ಯಾಡೆಟುಗಳ ಶಿಕ್ಷಣ ನಿರ್ವಹಿಸುವ ೧೨ನೆಯ ಮೈಸೂರು ಇನ್ನೊಂದು ಕಡೆ. ಇವೆರಡರ ನಡುವೆ ಒಂದು ಸುಭದ್ರ ಸೇತುವೆ ಆಗಿ ನಾನು ನಿಲ್ಲುವುದು ತೀರ ಅವಶ್ಯ ಎಂಬುದು ನನಗೆ ಮೊದಲಿನ ವಾರದಲ್ಲಿಯೇ ತಿಳಿಯಿತು. ಇದರಿಂದ ಹುಡುಗರಿಗೆ ಖಚಿತ ನಿರ್ದೇಶನ ದೊರೆತಂತಾಗುತ್ತದೆ. ಇನ್ನು ಓಸಿ ಮತ್ತು ಎಜು ಅವರಿಗೆ ಎರಡು ದೋಣಿಗಳಲ್ಲೂ ಏಕಕಾಲದಲ್ಲಿ ಇದ್ದುಕೊಂಡು ಹುಟ್ಟು ಹಾಕುವ ಸಂದಿಗ್ಧ ಪರಿಸ್ಥಿತಿ ತಪ್ಪಿ ಅವರು ಶಿಕ್ಷಣದ ತೀವ್ರತೆಯ ಕಡೆಗೆ ಇನ್ನಷ್ಟು ಗಮನ ಕೊಡಬಹುದು. ನಾನು ಒಂದು ರೀತಿಯಲ್ಲಿ ಬಟವಾಡೆ ಕೇಂದ್ರವಾದೆ. ಇದರಿಂದ ನಮ್ಮ

ಕಾಲೇಜಿನ ಎನ್‌ಸಿಸಿಯು ಸಮಗ್ರ ಚಿತ್ರ ದೊರೆತು ಸರ್ವವಿಧಗಳಲ್ಲಿ ದೈನಂದಿನ ಶಿಕ್ಷಣ ವಿಧಾನಗಳಲ್ಲಿ ಸುಧಾರಣೆಗಳನ್ನು ತಂದು ಕ್ಯಾಡೆಟುಗಳಿಗೆ ಸೌಕರ್ಯ ಒದಗಿಸುವುದು ಸಾಧ್ಯವಾಯಿತು. ಸಾಯಂಕಾಲ ಕಂಪೆನಿ ಶಿಕ್ಷಣ ನಡೆಯುತ್ತಿದ್ದುದು ಕಾಲೇಜಿನ ಹಿಂಬದಿಯ ವಿಶಾಲ ಕಬ್ಬನ್ ಪಾರ್ಕಿನಲ್ಲಿ. ಬಿಡುವಿದ್ದಾಗಲೆಲ್ಲ ನಾನು ಅಲ್ಲಿಗೆ ಹೋಗಿ ಪಾಠ ಮಾಡುತ್ತಿದ್ದೆ. ಒಂದು ದೊಡ್ಡ ಬೆಟಾಲಿಯನ್ ಅದೆಷ್ಟು ಸಮರ್ಥವಾಗಿ ಅದರ ಪ್ರಧಾನೋದ್ದೇಶವನ್ನು ಪೂರೈಸುವ ದಿಶೆಯಲ್ಲಿ ಕರ್ತವ್ಯ ಎಸಗಬಹುದು ಎಂಬುದಕ್ಕೆ ೧೨ನೆಯ ಮೈಸೂರು ನಿದರ್ಶನ. ಇಲ್ಲಿಯ ಓಸಿ ಕಾಲೇಜಿನ ಅವಿಭಾಜ್ಯ ಅಂಗ; ಹುಡುಗರ ಶಿಕ್ಷಣ ಯೋಗಕ್ಷೇಮ ಸರ್ವಾಂಗೀಣ ವಿಕಾಸ ಅವರ ಉಸಿರು; ಪ್ರಿನ್ಸಿಪಾಲರು ಸದಾ ಕಾಲೇಜಿನ ಉತ್ಕರ್ಷೆಯನ್ನು ತ್ರಿಕರಣಪೂರ್ವಕವಾಗಿ ಸಾಧಿಸಲು ದುಡಿಯುತ್ತಿರುವವರು. ಈ ಮಹಾನ್ ವ್ಯಕ್ತಿಗಳ ಸುಮಧುರ ಬಾಂಧವ್ಯ ಎನ್‌ಸಿಸಿಯು ಹೇಗೋ ಹಾಗೆ ಕಾಲೇಜಿನ ಆದ್ದರಿಂದ ಆ ವಿದ್ಯಾರ್ಥಿಗಳ ಸುಕೃತಫಲ. ಟ್ರೈನಿಂಗ್ ನಾರಾಯಣ್‌ಸಿಂಗರ ಪ್ರಥಮ ನಿಷ್ಠೆ. "ಆಫೀಸ್ ಕೆಲಸ ಹೇಗೂ ಇದ್ದದ್ದೇ. ಇದು ನಡೆದ ಮೇಲಲ್ಲವೇ ಅದು ?" ಎನ್ನುವವರು ಅವರು. "ಹಾಗಾದರೆ ನಿಮಗೆ audit objections ಮುಂತಾದ ತಾಪತ್ರಯಗಳಿಲ್ಲವೇ ?" ಎಂದು ಕೇಳಿದಾಗ ಅವರು ನಗುತ್ತಿದ್ದರು "ಹುಡುಗರ ಅಭಿವೃದ್ಧಿಯ ಮಾರ್ಗದಲ್ಲಿ ಈ ಕ್ಷುದ್ರ ಕಾರಣಗಳು ಅಡ್ಡಿ ಆಗಬಾರದು. ಆಡಿಟರುಗಳ ಕೆಲಸ ಅಭ್ಯಂತರ ಅರಸುವುದು. ನಾವು ಅದನ್ನು ನಿವಾರಿಸುತ್ತೇವೆ. ಅವುಗಳಿಗೆ ಹೆದರಿ ಇಲ್ಲಿ ಮುದುರಿ ಷಂಡರಂತೆ ಇರುವುದು ಅಪರಾಧ." ದಫ್ತರಗಳ ವಿಚಾರ ಅವರಿಗೆ ನಿರ್ಲಕ್ಷವಲ್ಲ—ಆದರೆ ಶಿಕ್ಷಣದ ವಿಚಾರ ಅವರಿಗೆ ಅತಿ ಆಸ್ಥೆ. ಬೇರೆ ಕಡೆ ನೋಡಿದ್ದ, ಕೇಳಿದ್ದ, ಅನುಭವಿಸಿಯೂ ಇದ್ದೆ—ಓಸಿ ಪೆರೇಡಿಗೆ ಬರುವುದೊಂದು ಮಹಾಘಟನೆ! ಇಲ್ಲಿ ಓಸಿ ಬಾರದೇ ಯಾವ ಪೆರೇಡೂ ಆರಂಭವಾಗದು. ಇದರಿಂದ ಆರ್ಮಿ ಸ್ಟಾಫುಗಳು ಶಕ್ತಿಮೀರಿ ದುಡಿಯುತ್ತಿದ್ದರು. ಎನ್‌ಸಿಸಿ ಆಫೀಸರರು ಉತ್ಸಾಹದಿಂದ ಹೊಣೆಗಾರಿಕೆ ಹೊರುತ್ತಿದ್ದರು. ಕ್ಯಾಡೆಟುಗಳಲ್ಲಿ ನವಚೇತನ ಪ್ರವಹಿಸಿತು. ಸಾಮಾನ್ಯ ಶಿಕ್ಷಣಗಳ ಜೊತೆಗೆ ಯಾವುದೇ ಗೌರವರಕ್ಷೆ ಸಾಮೂಹಿಕ ಕವಾಯತಿ, ಎನ್‌ಸಿಸಿ ವಹಿಸಿಕೊಳ್ಳಬಹುದಾದ ಇತರ ಹೊಣೆಗಾರಿಕೆಗಳು ಬಂದರೂ ೧೨ನೆಯ ಮೈಸೂರು ಸದಾ ಸ್ಮಿತವದನದಿಂದ ಸಿದ್ಧ. ಆ ಕೆಲಸ ೧೨ನೆಯ ಮೈಸೂರು ಮಾಡಿ ಮುಗಿಸಿದ ಮೇಲೆ ಇತರರಿಗೆ ಅದು ಮಾದರಿ. "ಈ ಕೆಲಸ ಹೊರುವುದು ಹುಡುಗರ ಹಿತದೃಷ್ಟಿಯಿಂದ ತೀರ ಅವಶ್ಯ. ಅವರ ಸುಪ್ತ ಶಕ್ತಿ ಪ್ರಕಟಗೊಳ್ಳಬೇಕಾದರೆ ಇಂಥ ಬೇರೆ ಬೇರೆ ಹೊಸ ಹೊಸ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರಬೇಕಾದದ್ದು ಅತ್ಯಾವಶ್ಯಕ" ಎನ್ನುತ್ತಿದ್ದರು ಓಸಿ. ಇಂಥ ಎಲ್ಲ ಕೆಲಸಗಳೂ ನನಗೆ ಬಲು ಪ್ರೀತಿಯವು. ಹೀಗಾಗಿ ನನ್ನ ದಿವಸಗಳು ಸಂತೋಷದಿಂದಲೂ ರಭಸದಿಂದಲೂ ಉರುಳಿದುವು.

೧೨ನೆಯ ಮೈಸೂರಿನ ಬೆನ್ನೆಲುಬು, ಎಲ್ಲಿಯೂ ಎಂದೂ ಪ್ರತ್ಯೇಕವಾಗಿ ಪ್ರಕಾಶಕ್ಕೆ ಬರದೇ ಆದರೆ ಎಲ್ಲೆಲ್ಲಿಯೂ ತನ್ನ ದಕ್ಷತೆಯ ಮುದ್ರೆಯನ್ನು ಒತ್ತಿರುವ ಏಓ ಅಶ್ವತ್ಥನಾರಾಯಣರ ವಿಚಾರ ಎಷ್ಟು ಬರೆದರೂ ಕಡಿಮೆಯೇ. ಅವರು ನಡೆಸಿದ (ಕ್ವಾರ್ಟರ್ ಮಾಸ್ಟರ್ ಆಗಿ, ಆದ್ದರಿಂದ ಆಹಾರ ಹಾಗೂ ಲೆಕ್ಕಾಚಾರಗಳ ಹೊಣೆ ಹೊತ್ತವರಾಗಿ)

ಶಿಬಿರಗಳಲ್ಲಿ ನಾನು ಕಂಡದ್ದು ಸಮೃದ್ಧಿ, ಗಲಭೆ ಇಲ್ಲದ ಶಿಸ್ತು. ಒಪ್ಪ ಓರಣಗಳ ರೂಪ ಈ ಮಿತ್ರರು. ದಿನ ದಿನ ಅಂದುಕೊಂಡೆ—ನಮ್ಮ ಜನಾರ್ದನ ಬಾಳಿಗರೆ ಅವಳಿ ತಮ್ಮ ಇವರೆಂದು. ಬೇರೆ ಬೆಟಾಲಿಯನ್ನುಗಳ ಕ್ಯಾಡೆಟುಗಳಿಗೂ ೧೨ನೆಯ ಮೈಸೂರಿನ ಕ್ಯಾಂಪಿಗೆ ಬರಲು ಆಸೆ. ಕಾರಣ, ಮನೆಗಳಲ್ಲಿ ದೊರೆಯದ ರುಚಿಕರ ಆಹಾರ ಯಥೇಚ್ಛವಾಗಿ ಇಲ್ಲಿ ದೊರೆಯುತ್ತದೆ : ಶಿಸ್ತು ಚೆನ್ನಾಗಿರುತ್ತದೆ. ಶಿಬಿರ ಇಂದು ಮುಗಿದರೆ ನಾಳೆ ಬೆಳಗ್ಗೆ ಅಶ್ವತ್ಥನಾರಾಯಣರು ಅದರ ಲೆಕ್ಕ ಪತ್ರಗಳ ಪರಿಶೋಧನೆಗೆ ಸಿದ್ಧರಾಗಿರುತ್ತಾರೆ. ಸರಳ ವ್ಯವಹಾರದಲ್ಲಿ ಹೊಂದಾಣಿಕೆಗಳು ಇರುವುದಿಲ್ಲ. ಆದ್ದರಿಂದ ಕೆಲಸ ಮುಗಿಯುವಾಗಲೇ ಅದರ ವರದಿಯಾದ ಲೆಕ್ಕ ಮುಗಿದಿರಬೇಕು : ಅದನ್ನು ಪರಿಶೋಧನೆಗೆ ಸಿದ್ಧಪಡಿಸುವುದು ಎಂಬ ಪ್ರತ್ಯೇಕ ವಿಧಿ ಇಲ್ಲ. ಹೀಗೆ ನಿಜ ಕ್ಯಾಂಪೂ ಕಾಗದ ಕ್ಯಾಂಪೂ ನಮ್ಮ ಏಓರವರಿಗೆ ಎಡಗಾಲಾದ ಮೇಲೆ ಬಲಗಾಲು ಸಹಜವಾಗಿ ಮುಂದೆ ಬಂದಂತೆ ಸಲೀಸು, ಕೆಲಸ ಯಾವುದೇ ಇರಲಿ. ಎಷ್ಟೇ ಇರಲಿ "ಮಾಡೋಣ" ಎಂಬ ಹಸನ್ಮುಖದ ಉತ್ತರವೊಂದನ್ನೇ ಅವರಿಂದ ನಾವು ಸದಾ ನಿರೀಕ್ಷಿಸಬಹುದು. ಅಶ್ವತ್ಥನಾರಾಯಣ–ನಾರಾಯಣ್ ಸಿಂಗ್ ಈ ನರನಾರಾಯಣ ಜೋಡಿ ಒಂದು ಪವಾಡ, ಒಂದು ಮೋಡಿ.

ಆ ವರ್ಷದ ಸೆಪ್ಟೆಂಬರ್–ಅಕ್ಟೋಬರ್ (೧೯೬೫) ತಿಂಗಳುಗಳಲ್ಲಿ ಭರತ ವರ್ಷ ಅತಿ ದಾರುಣ ಪರಿಸ್ಥಿತಿಯ ಮೂಲಕ ನುಸುಳಬೇಕಾಯಿತು—ಪಾಕಿಸ್ತಾನ ಈ ದೇಶದ ಮೇಲೆ ಮಾಡಿದ ದಾಳಿ. ದೇಶರಕ್ಷಣೆಯ ಒಂದು ಅಂಗವಾಗಿ ನಾಗರಿಕರಿಗೆ ರೈಫಲ್ ಶಿಕ್ಷಣ ನೀಡಬೇಕೆಂದು ಸರಕಾರದ ಯೋಜನೆ ಇತ್ತು. ಉಮಂರ್ಜಿ ನನ್ನನ್ನು ಕರೆದು ಕೇಳಿದರು ಕಾಲೇಜು ಅಧ್ಯಾಪಕರಿಗೆ ರೈಫಲ್ ಶಿಕ್ಷಣ ಕೊಡುವುದಾದೀತೇ ಎಂದು. "Ask 12 Mysore: You have it" ಎಂಬುದು ೧೯೬೫–೬೬ರ ಸೂತ್ರ. ಓಸಿ ಒಪ್ಪಿದರು. ಏರ್ಪಾಡು ಮಾಡಲು ನನಗೆ ಹೇಳಿದರು. ಪ್ರಿನ್ಸಿಪಾಲರ ಸಮೇತ. ಸುಮಾರು ಮೂವತ್ತು ಮಂದಿ ಅಧ್ಯಾಪಕರು ಅಧ್ಯಾಪಿಕೆಯರು ನಮ್ಮ ರೈಫಲ್ ಶಿಕ್ಷಣ ತಂಡ ಸೇರಿದರು. ಓಸಿಯೇ ಸ್ವತಃ ಈ ಶಿಕ್ಷಣವೀಯಲು ಮುಂದೆ ಬಂದರು. ನಾವು ಎನ್‌ಸಿಸಿ ಆಫೀಸರರೆಲ್ಲರೂ ಬಲು ಸಂತೋಷದಿಂದ ನಮ್ಮ ಸಹೋದ್ಯೋಗಿಗಳಿಗೆ ರೈಫಲ್ ಪಾಠ ಮಾಡಿದೆವು. ಗುಂಡು ಹೊಡೆಯುವ ರೇಂಜಿಗೆ ಇವರೆಲ್ಲರನ್ನೂ ಕರೆದುಕೊಂಡು ಹೋಗಿ ಅಲ್ಲಿ ಅಭ್ಯಾಸ ನೀಡಿದೆವು. ಒಂದು ದಿವಸ ಪರೀಕ್ಷೆಯನ್ನೂ ಮಾಡಲಾಯಿತು. ಆ ವೇಳೆ ದೆಹಲಿಯಿಂದ ಎನ್‌ಸಿಸಿ ಡೈರೆಕ್ಟರ್–ಜನರಲ್ ವೀರೇಂದ್ರಸಿಂಗ್ ಬೆಂಗಳೂರಿಗೆ ಬರುವವರಿದ್ದರು. ೧೨ನೆಯ ಮೈಸೂರಲ್ಲದೆ ಬೇರಾವ ಬೆಟಾಲಿಯನ್ನನ್ನು ಪ್ರದರ್ಶನಕ್ಕೆ ಇಡಲು ಸಾಧ್ಯ? ನಿರಂತರ ಕ್ರಮಬದ್ಧ ಶಿಕ್ಷಣದ ಸುವ್ಯವಸ್ಥಿತ ಪ್ರತೀಕ ರೂಪವೇ ನಿಜ ಪ್ರದರ್ಶನ. ಇವರ ಒಂದು ಅಂಗವಾಗಿ ನಮ್ಮ ಅಧ್ಯಾಪಕರ ರೈಫಲ್ ಶಿಕ್ಷಣದ ತರಗತಿಯನ್ನು ತೋರಿಸಿದೆವು. ಅವರಿಗೆ ಪರಮಾಶ್ಚರ್ಯ—ನಗರದ ಅತಿ ದೊಡ್ಡ ಕಾಲೇಜಿನಲ್ಲಿ ಇಷ್ಟೊಂದು ಚಟುವಟಿಕೆಗಳು ಒಂದು ಆರ್ಮಿ ಶಿಕ್ಷಣ ಕೇಂದ್ರದಲ್ಲಿ ನಡೆಯುವಷ್ಟು ಚೊಕ್ಕವಾಗಿ ನಡೆಯುವುದು ಸಾಧ್ಯವೇ ಎಂದು. ಅವರ ವೀಕ್ಷಣೆಯ ಕೊನೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ಅವರಿಂದ ಭಾಷಣವನ್ನೂ ರೈಫಲ್ ಹೊಡೆಯುವುದರಲ್ಲಿ ವಿಜೇತರಾದ ಅಧ್ಯಾಪಕರಿಗೆ ಬಹುಮಾನ ವಿತರಣೆಯನ್ನೂ ಏರ್ಪಡಿಸಿದ್ದೆವು. ವೀರೇಂದ್ರಸಿಂಗರು ಪ್ರಿನ್ಸಿಪಾಲರಿಗೆ ದೆಹಲಿಯಿಂದ

ಬರೆದ ಪತ್ರದಿಂದ ಉದ್ಧೃತ ವಾಕ್ಯ ನೋಡಿ. It was a wonderful gathering of students and I am glad that I was able to talk to them. We do very much appreciate the keen interest that you take in the NCC and for all the help and support that we have received from you. We look forward with firm confidence that the NCC will be able to render useful service to the youth of the Country. The Rifle Club that you have started for the members of your staff is doing very useful work and is a very good leisure-time activity. I wish your Club all success.

ವೀರೇಂದ್ರಸಿಂಗ್ ನನ್ನ ಯೋಗಕ್ಷೇಮ ವಿಚಾರಿಸಿಕೊಂಡು ನನಗೆ ಪುನಃ (ಆಕ್ಟಿಂಗ್) ಮೇಜರ್ ದರ್ಜೆ ಕೊಡಬಹುದೆಂದು ಹುಕುಂ ನೀಡಿದರು.

ಕ್ಯಾಂಪಿನಲ್ಲಿ ಕಲಿಸಿದ ಮಿಲಿಟರಿ ಪಾಠಗಳು

೧೨ನೆಯ ಮೈಸೂರಿನಲ್ಲಿ ಎಂಟು ಕಂಪೆನಿಗಳಿದ್ದುವು. ಇವುಗಳ ಮುಖ್ಯಸ್ಥರಾಗಿ ಒಬ್ಬೊಬ್ಬ ಎನ್‌ಸಿಸಿ ಆಫೀಸರ್. ಒಬ್ಬರನ್ನು ಬಿಟ್ಟು ಇವರೆಲ್ಲರೂ ಪ್ರಾಯದಲ್ಲಿ ನನಗಿಂತ ಕಿರಿಯರು. ಎಲ್ಲರೂ ಕೆಲಸದಲ್ಲಿ ಸಮಾನ ಆಸಕ್ತರು. ತಮ್ಮ ಕಂಪೆನಿಗಳ ವಿಚಾರೆ ಪ್ರೀತಿ ಅಭಿಮಾನ ಪೂರಿತರು. ಯಾವ ಬೆಟಾಲಿಯನ್ನಿನ ಓಸಿಯೂ ಇಂಥ ತರುಣರ ತಂಡ ಪಡೆದಿರಲು ಹೆಮ್ಮೆ ಪಡಬೇಕು. ಒಂದು ಅರ್ಥದಲ್ಲಿ ಇವರೆಲ್ಲರೂ ನಾರಾಯಣ್‌ಸಿಂಗರ ಶಿಷ್ಯರು. ಅವರೇ ಆರಿಸಿ ಎನ್‌ಸಿಸಿ ಶಿಕ್ಷಣಕ್ಕೆ ಕಳಿಸಿ ಅಲ್ಲಿಂದ ಮರಳಿದ ಅನಂತರ ಕಂಪೆನಿ ಆಡಳಿತೆಯ ಶಿಕ್ಷಣ ನೀಡಿ ತಯಾರುಮಾಡಿದ ವ್ಯಕ್ತಿಗಳು. ನಾನೊಬ್ಬನೇ—ಒಂಬತ್ತನೆಯವನಾಗಿ—ಈ ಬಳಗಕ್ಕೆ ಹೊರಗಿನಿಂದ ಬಂದು ಸೇರಿದವನು. ಆದರೆ ನಾರಾಯಣ್‌ಸಿಂಗರ ಶಿಷ್ಯ ಎಂದುಕೊಳ್ಳುವುದರಲ್ಲಿ ನನಗೆ ಇವರಷ್ಟೇ ಸಂತೋಷ, ಹೆಮ್ಮೆ. ಈ ಮಹನೀಯ ತನ್ನ ಬತ್ತಳಿಕೆಯಿಂದ ಹೊರತೆಗೆದ ಅಸ್ತ್ರಗಳಿಗೆ ಅವುಗಳಿಗೆ ನೀಡಿದ ಮಾಂತ್ರಿಕ ಶಕ್ತಿಗೆ ಮಿತಿಯೇ ಇರಲಿಲ್ಲ. ಇಂಥ ನಮ್ಮ ಟೀಮ್ ಬೆಂಗಳೂರು–ಮಾಗಡಿ ದಾರಿಯಲ್ಲಿರುವ "ನಿರಾಶ್ರಿತರ ಪರಿಹಾರಕೇಂದ್ರ" ಎಂಬ ಸ್ಥಳದ ಬಯಲಿನಲ್ಲಿ ಡಿಸೆಂಬರಿನಲ್ಲಿ ಕ್ಯಾಂಪಿಗೆ ಹೋಯಿತು.. ಅಶ್ವತ್ಥನಾರಾಯಣರ ಆಹಾರವನ್ನು ನಮ್ಮ ಹುಡುಗರು ದಕ್ಕಿಸಿಕೊಳ್ಳಬೇಕಾದರೆ ಹುಡುಗರ ಚರ್ಮ ಸುಲಿದುಹೋಗುವಷ್ಟು ಕೆಲಸವನ್ನು ಶಿಕ್ಷಣರಂಗದಲ್ಲಿ ಕೊಡಲೇಬೇಕು. ನಾನು ಈ ಕ್ಯಾಂಪಿನ ಶಿಕ್ಷಣಾಧಿಕಾರಿ.

ಮಿಲಿಟರಿ ಕವಾಯತಿನ ಜೊತೆಗೆ ನಾವು ಈ ಕ್ಯಾಂಪಿನಲ್ಲಿ ನಡೆಸಬೇಕಾದದ್ದು ರಾಷ್ಟ್ರ ರಚನಾಕಾರ್ಯ (ಗದ್ದೆಗಳಿಗೆ ಏರಿ ಕಟ್ಟುವ ಕೆಲಸ), ಎರಡು ಹಗಲು ಒಂದು ರಾತ್ರಿ ಕ್ಯಾಂಪಿನಿಂದ ಹೊರಗೆ ಕಾಡುಗುಡ್ಡ ಅಲೆಯುತ್ತ ಮಿಲಿಟರಿ ಶಿಕ್ಷಣದ ಅಭ್ಯಾಸ ಮತ್ತು ಸುಮಾರು ೨೦ ಮೈಲಿಗಳ ನಡಿಗೆ ಮತ್ತು ಇರುಳು ನಡಿಗೆ. ಶಿಕ್ಷಣವನ್ನು ಬಿಗಿಯಾಗಿ ಬಿರುಸಿನಿಂದ ಮೊದಲನೆಯ ದಿವಸದಿಂದಲೇ ತೊಡಗಿದ್ದುದರಿಂದ ಕ್ಯಾಂಪಿನಲ್ಲಿ ಯಾವುದೇ ವಿಧದ ಗೊಣಗಾಟಕ್ಕೆ ಅವಕಾಶ ಉಳಿಯಲಿಲ್ಲ. ಹುಡುಗರೂ ಆಫೀಸರರೂ ಎಲ್ಲ ಕೆಲಸ

ಗಳನ್ನೂ ಡಬಲ್ಸ್‌ನಲ್ಲಿಯೇ ಮುಗಿಸಬೇಕಾಗಿದ್ದುದರಿಂದ ಬೇರೆ ಯಾವ ಚಿಂತನೆಗೂ ಪುರಸೊತ್ತು ಇರಲಿಲ್ಲ.

ಹೊರವಲಯದ ಕವಾಯತಿ ನಡೆಸಲೆಂದು ನಾನು ಎರಡು ದಿವಸ ಮುಂಚಿತವಾಗಿ ಮ್ಯಾಪ್ ಹಿಡಿದು ಸಂಚರಿಸಿ ದಾರಿಯನ್ನೂ ರಾತ್ರಿ ತಂಗಲು ಸ್ಥಳವನ್ನೂ ನಿಶ್ಚಯಿಸಿದೆ. ಒಂದನೆಯ ದಿವಸ ಹೊರಟ ತಂಡವನ್ನು ನಾನೇ ಮುಂದಾಳಾಗಿ ದಾರಿ ತೋರಿಸುತ್ತ ಶಿಕ್ಷಣ ವಿಧಾನಗಳನ್ನು ಅಳವಡಿಸುತ್ತ ನಡೆಸಿಕೊಂಡು ಹೋದೆ.

ನಾವು ಬೆಳಗ್ಗೆ ಏಳುಗಂಟೆಗೆ "ಆಕ್ರಮಣ" ನಡೆಸಲು ಸಿದ್ಧರಾಗಿ ನಿಂತೆವು. ೧೦೦ ಜನರ ತಂಡ. ಅವರನ್ನು ಯುಕ್ತ ತುಕ್ಕಡಿಗಳಾಗಿ ವಿಭಾಗಿಸಿ ಹೊಣೆಗಳನ್ನು ವಿಶದೀಕರಿಸ ಲಾಯಿತು. ಅವರ ಕಂಪೆನಿ ಕಮಾಂಡರ್ ಮುಂದಾಳು. ಆರ್ಮಿ ಸ್ಟಾಫುಗಳು ಇವರಿಗೆ ಸಹಾಯಕರು. ನಾನು ಇಡೀ ತಂಡದ ಪ್ರಧಾನ ನಾಯಕ. ಯುದ್ಧಕ್ಕೆ ಹೊರಟ ವೇಷ. ಜೊತೆಗೆ ಸಾಕಷ್ಟು ಆಹಾರ (ಹ್ಯಾವರ್‌ಸೇಕ್ ಲಂಚ್—ಕ್ಯಾಂಪಿನಲ್ಲಿ ತಯಾರಿಸಿ ಒಬ್ಬೊಬ್ಬ ನಿಗೂ ಪ್ರತ್ಯೇಕವಾಗಿ ಕಟ್ಟಿ ಕೊಟ್ಟಿದ್ದ ಬುತ್ತಿ), ಬೆನ್ನಮೇಲೆ ರೈಫಲ್, ಮದ್ದುಗುಂಡು, ನಿಶಾನಿಗಳು ಮುಂತಾದ ಶಿಕ್ಷಣ ಸಾಮಗ್ರಿಗಳು.

ಹುಡುಗರಿಗೆ ಯುದ್ಧದ ತಂತ್ರವನ್ನು ಕುರಿತು ಹಿಂದಿನ ಸಂಜೆಯೇ ಯುಕ್ತ ಮಾಹಿತಿ ನೀಡಿದ್ದೆವು.

ಪ್ರತಿಯೊಂದು ಯುದ್ಧಕ್ಕೂ ಒಂದು ಪ್ರಧಾನ ಉದ್ದೇಶವಿದೆ. ತಮಾಷೆಗಾಗಿ ಯಾವ ರಾಷ್ಟ್ರವೂ ಈ ನರಮೇಧವನ್ನು ಕೈಗೊಳ್ಳುವುದಿಲ್ಲ. ಕೃತಯುಗದಿಂದ (ಅಥವಾ ಇನ್ನೂ ಹಿಂದಿನಿಂದ) ತೊಡಗಿ ಇಂದಿನ ತನಕವೂ ನಡೆದಿರುವ ಎಷ್ಟೇ ಚಿಕ್ಕಕೂಟ ಯುದ್ಧವಾಗಿರಲಿ ಎಷ್ಟೇ ದೊಡ್ಡ ಜಾಗತಿಕ ಸಮರವಾಗಿರಲಿ ಅದನ್ನು ನಿರಪೇಕ್ಷವಾಗಿ ಪರಿಶೀಲಿಸಿದರೆ ತಿಳಿ ಯುವುದೇನು ? ಪರಸ್ಪರ ವಿರುದ್ಧ ಉದ್ದೇಶಗಳನ್ನು ಹೊಂದಿರುವ ಎರಡು ಬಲಗಳೀ ಸಹ ಜೀವನ ನಡೆಸಲು ಅಸಮರ್ಥವಾಗುತ್ತವೆ ; ಪ್ರತಿಯೊಂದು ಬಲವೂ ತನ್ನ ನಿಲವೇ ಸರಿಯೆಂದು ಆಗ್ರಹಪೂರ್ವಕ ನಂಬಿ ಅದರ ಸಮರ್ಥನೆಗೋಸ್ಕರ ಸರ್ವಸಿದ್ಧತೆಗಳನ್ನೂ ನಡೆಸುತ್ತವೆ ; ಇವು ಮುಂದುವರಿದಂತೆ ವಾತಾವರಣದಲ್ಲಿ ಒತ್ತಡ ಬಿಸಿ ಏರುತ್ತವೆ ; ಒಂದು ಮುಹೂರ್ತದಲ್ಲಿ ಕಿಡಿ ಜ್ವಲಿಸುತ್ತದೆ—ತತ್‌ಕ್ಷಣ ಯುದ್ಧಾಗ್ನಿ ಭಗ್ಗನೆ ಉರಿಯಲು ತೊಡಗುತ್ತದೆ. ರಾಮಾಯಣ ಯುದ್ಧದಿಂದ ತೊಡಗಿ ಆಧುನಿಕ ವಿಯಟ್‌ನಾಮ್ ಸಮರದ ವರೆಗೆ ಬನ್ನಿ—ಪರಸ್ಪರ ವಿರುದ್ಧ ಉದ್ದೇಶಗಳ ಅಂತಾರಾಷ್ಟ್ರೀಯ ನಿರ್ಣಾಯ ಯುದ್ಧ ವೆಂಬ ತೀರ್ಮಾನಕ್ಕೆ ಬರದಿರಲು ಆಗುವುದಿಲ್ಲ. ಸುಂದರ ಸ್ತ್ರೀಯೋರ್ವಳನ್ನು ಅಪಹರಿ ಸಲು ಅಥವಾ ಅಪಹೃತ ಸ್ತ್ರೀಯನ್ನು ಮರುಪಡೆಯಲು ಅಥವಾ ನೆಲದ ಸ್ವಾಮ್ಯ ಪಡೆಯಲು ಅಥವಾ ಜಲಮಾರ್ಗಗಳ ಮೇಲೆ ಹಿಡಿತ ಸ್ಥಾಪಿಸಲು ಅಥವಾ ಸಂಪತ್ತು, ಗುಲಾಮರನ್ನು ಕೊಳ್ಳೆ ಹೊಡೆಯಲು ಅಥವಾ ಪರಮತ ಖಂಡಿಸಿ ಸ್ವಮತ ಪ್ರಚಾರ ಮಾಡಲು, ಇತ್ಯಾದಿ, ಬೇರೆ ಬೇರೆ ಉದ್ದೇಶಗಳಿಂದ ಬೇರೆ ಬೇರೆ ಕಾಲಗಳಲ್ಲಿ ಯುದ್ಧ ಗಳು ಪ್ರಾರಂಭವಾಗಿರಬಹುದು. ಇವು ಸ್ಥಳೀಯ ಕದನಗಳೋ ವಿಶಾಲ ಯುದ್ಧಗಳೋ ಜಾಗತಿಕ ಸಮರಗಳೋ ಆಗಿರಬಹುದು. ಇವುಗಳ ಕಾಲಾವಧಿಯಲ್ಲೂ ಹಾಗೆ ಭಿನ್ನತೆ ಗಳಿದ್ದಿರಬಹುದು. ಆದರೆ ಇವು ಯಾವುವೂ ಉದ್ದೇಶರಹಿತ ವ್ಯರ್ಥ ಸಾಹಸಗಳಲ್ಲ.

ಉದ್ದೇಶದ ಸಿದ್ಧಿಗಾಗಿ ಅನುಸರಿಸಿದ ಆಯುಧ ಹಾಗೂ ತಂತ್ರ ಮಾತ್ರ ಕಾಲದಿಂದ ಕಾಲಕ್ಕೆ ದೇಶದಿಂದ ದೇಶಕ್ಕೆ ಬದಲಾಗುತ್ತ ಹೋಗಿವೆ. ಕಲ್ಲು, ಮರದ ಕೋಲುಗಳು ಮೊದಲಿನ ಕದನದ ಆಯುಧಗಳಾದರೆ ಪರಮಾಣು ಬಾಂಬ್, ಹೈಡ್ರೊಜನ್ ಬಾಂಬ್, ಬ್ಯಾಕ್ಟೀರಿಯಾ ಬಾಂಬ್ ಇಂದಿನ ಸರ್ವನಾಶೀ ಅಸ್ತ್ರಗಳು. ಕಲ್ಲು ತುಂಡಿನಿಂದ ಬಾಣ ಬಿಲ್ಲುಗಳ ಮೂಲಕ ಮದ್ದುಗುಂಡಿನ ದಾರಿಯಾಗಿ ಬ್ಯಾಕ್ಟೀರಿಯಾ ಬಾಂಬಿನವರೆಗೆ ವಿಕಸಿಸಿ ಬಂದಿರುವ ಯುದ್ಧಾಸ್ತ್ರಗಳ ಅಭ್ಯಾಸ ವಿಜ್ಞಾನದ ಚರಿತ್ರೆಯೂ ಹೌದು. ಎದುರಾಳಿಗೆ ಅರಿಯದ ತಂತ್ರದಿಂದ ತಾನು ಜಯ ಗಳಿಸಬೇಕು. ಎಂದರೆ, ಕನಿಷ್ಠ ವ್ಯಯದಿಂದ (ಜನ, ಸಂಪತ್ತು ಎಲ್ಲವುಗಳ ನಾಶವೂ ಈ ವ್ಯಯದಲ್ಲಿ ಸೇರಿದೆ) ಗರಿಷ್ಠ ಸಿದ್ಧಿ ಸಾಧಿಸಬೇಕು—ಇದು ಪ್ರತಿಯೊಂದು ಯುದ್ಧಕಾತರ ರಾಷ್ಟ್ರದ ಹಂಬಲ. ಈ ದಾರಿಯಲ್ಲಿ ಅದು ನಡೆಸುವ ಸಾಮೂಹಿಕ ಸಿದ್ಧತೆ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಪ್ರಯತ್ನಗಳ ಫಲವಾಗಿ ಯುದ್ಧವಿಧಾನದಲ್ಲಿ ನೂತನ ತಂತ್ರಗಳು ಬರುತ್ತವೆ. ಆನುಷಂಗಿಕವಾಗಿ ರಾಷ್ಟ್ರದಲ್ಲಿ ವಿಜ್ಞಾನ ತಂತ್ರವಿದ್ಯೆಗಳ ಪ್ರಗತಿ ಆರ್ಥಿಕ ಮುನ್ನಡೆ ಮುಂತಾದವು ಆಗುವುವು. ಹೀಗೆ ಒಂದು ವಿಧದಲ್ಲಿ ಯುದ್ಧವೇ ವಿಜ್ಞಾನದ ಮೂಲ ಎಂದರೆ ತಪ್ಪಾಗದು. ಗಂಡಾಂತರ ಪರಿಸ್ಥಿತಿ ಕರಾಳವಾಗಿ ಬಾಯ್ದೆರೆದಿರುವಾಗ ಜೀವ ಬದುಕಿ ಉಳಿಯಲು ಅರಸುವ ಹಲವಾರು ದಾರಿಗಳಲ್ಲಿ ವಿಜ್ಞಾನದ ವಿಕಾಸ ಒಂದು.

ವಿಧಾನಗಳು ಬದಲಾದುವು, ನಿಜ. ಅವು ಮೂಲೋದ್ದೇಶಗಳನ್ನೇ ಅಲ್ಲಾಡಿಸುವಷ್ಟು ಪ್ರಬಲವಾದುವು. ಲಾಂಗೂಲಶ್ವಾನಚಾಲನೆಯಂಥ ಹೊಸ ಪರಿಸ್ಥಿತಿ.ಯುದ್ಧದಲ್ಲಿ ಯಾರು ಸೋತರೂ ಯಾರು ಗೆದ್ದರೂ ಸಮಗ್ರವಾಗಿ ಪ್ರಪಂಚ ಹೊಸ ಮೌಲ್ಯಗಳನ್ನು ಕಾಣುತ್ತ ಅನುಭವಿಸುತ್ತ ಹಳೆಯವನ್ನು ಪೂರ್ಣವಾಗಿ ಬಿಡಬೇಕಾದಂಥ ದಿನಗಳು ಬಂದುವು. ಇದರಿಂದ ಯುದ್ಧದ ಒಂದು ಪ್ರಧಾನ ಪ್ರೇರಣೆಯಾಗಿದ್ದ ನೆಲದಾಹ ಲಾಭದಾಯಕವಲ್ಲ ಎಂದು ತಿಳಿಯಿತು. ಎಂಥ ಪ್ರಬಲ ಶಸ್ತ್ರ ಸೈನ್ಯಗಳ ನೆರವಿನಿಂದಲೂ ಯಾವುದೇ ಕ್ಷುದ್ರ ರಾಷ್ಟ್ರವನ್ನು ಕೂಡ ದೀರ್ಘಕಾಲ ಅಂಕೆಯಲ್ಲಿಟ್ಟುಕೊಂಡು ಆಳುವುದು ಇಂದು ಸಾಧ್ಯವಿಲ್ಲ. ನಮ್ಮ ಜನ ಅವರ ಜನ ಎಂಬ ಭೇದ ಭಾವನೆ ಇರುವ ತನಕ ಅವರ ನೆಲವನ್ನು ನಮ್ಮ ಜನ ಆಳಬೇಕಾದ ಪರಿಸ್ಥಿತಿ ಒದಗುತ್ತದೆ, ಅವರ ಜನವೂ ನಮ್ಮ ಜನವೇ ಆದರೆ—ಎಂದರೆ ಮಾನಸಿಕವಾಗಿ ಅವರನ್ನು ನಮ್ಮ ಯೋಚನಾಲಹರಿಗೆ ಒಗ್ಗುವಂತೆ ಅಥವಾ ಬಗ್ಗುವಂತೆ ಬಡಿದರೆ—ಆಗ ನಾವು ಭಾವನಾತ್ಮಕವಾಗಿ ಆ ಜನವನ್ನು ಗೆದ್ದಂತಾಗುವುದಷ್ಟೆ? ಅಂತಿಮವಾಗಿ ಮಾನಸಿಕ ದಾಸ್ಯವೇ ಅತಿ ಕನಿಷ್ಠ ದಾಸ್ಯ. ಈ ದಿಶೆಯಲ್ಲಿ ರಾಷ್ಟ್ರಗಳು ಚಿಂತಿಸಿದ್ದೇ ತಡ ಭೌತಯುದ್ಧಗಳ ಪ್ರಧಾನ ಸ್ಥಾನ ಭಾವನಾತ್ಮಕ ಯುದ್ಧಗಳಿಗೆ ಎಡೆ ಮಾಡಿಕೊಟ್ಟಿತು: ಶೀತಲ ಸಮರ. ಒಂದು ಪ್ರಬಲ ರಾಷ್ಟ್ರಕ್ಕೆ (ಇದು ಗ್ರಹ) ಭಾವನಾತ್ಮಕವಾಗಿ ಅಡಿಯಾಳಾಗಿರುವ ಇನ್ನೊಂದು ರಾಷ್ಟ್ರದ (ಉಪಗ್ರಹ) ನಾಯಕರು ಸ್ಥಳೀಯರೇ. ಆದರೆ ಕಾಡಿನಲ್ಲಿರುವ ಸಿಂಹಗಳು ಇವರಲ್ಲ. ಸರ್ಕಸ್ ರಂಗದ ರಿಂಗ್‌ಮಾಸ್ಟರನ ಸುತ್ತಲೂ ಆಜ್ಞಾಪಾಲಕರಾಗಿರುವ ಅಫೀಮುಗ್ರಸ್ತ ಸಿಂಹಚರ್ಮದ ಷಂಡರಿವರು, ಕ್ವಿಸ್ಲಿಂಗರು. ಆಧುನಿಕ ಯುಗದಲ್ಲಿ ಭೌತಯುದ್ಧವೂ ಭಾವನಾತ್ಮಕ ಯುದ್ಧವೂ "ಸಹಜೀವನ" ನಡೆಸುತ್ತಿವೆ.

ಭೌತಯುದ್ಧವನ್ನು ಮೂರು ರಂಗಗಳಲ್ಲಿ ನಡೆಸಲಾಗುತ್ತದೆ—ಪ್ರಧಾನವಾಗಿ ನೆಲ (ಮನುಷ್ಯ ನೆಲಜೀವಿಯಾದುದರಿಂದ), ತರುವಾಯ ಜಲ ಹಾಗೂ ವಾಯುಮಂಡಲ. ಇಲ್ಲೆಲ್ಲವೂ ಯುದ್ಧ ಕ್ರಿಯೆಗಳಲ್ಲಿ ನಾಲ್ಕು ಪ್ರಧಾನ ವಿಭಾಗಗಳನ್ನು ಗುರುತಿಸಬಹುದು —ಮುನ್ನಡೆ, ಹೊಡೆ, ತಡೆ, ಹಿನ್ನಡೆ (advance, attack, defence, withdrawal). ತೋಳನಿಗೆ ದೂರದಲ್ಲಿ ಮೇಯುತ್ತಿರುವ ಕುರಿಯ ರುಚಿಕರ ವಾಸನೆ ಆಹ್ವಾನ ನೀಡುತ್ತದೆ. "ಈ ಕುರಿಗೆ ಪ್ರಪಂಚದಲ್ಲಿ ಪ್ರತ್ಯೇಕವಾಗಿ ಬದುಕಲು ಖಂಡಿತ ಅರ್ಹತೆಯಿಲ್ಲ. ನನ್ನ ಹೊಟ್ಟೆಯಲ್ಲಿಯೇ ಅದು ಇರತಕ್ಕದ್ದು ನ್ಯಾಯ" ಎಂದು ತೋಳ ತೀರ್ಮಾನಿಸುತ್ತದೆ. ಆದರೆ ಕುರಿ ತಾನಾಗಿಯೇ ಈ ತೋಳತೀರ್ಮಾನವನ್ನು ಸಫಲಗೊಳಿಸುವುದಿಲ್ಲವಷ್ಟೆ. ಸಾಕಷ್ಟು ಸಮೀಪ ಬಂದ ತರುವಾಯ ತೋಳ ಕುರಿಯನ್ನು ಹೊಡೆಯುತ್ತದೆ. ಮುಂದಿನ ಕತೆ ಇಲ್ಲಿ ಮುಖ್ಯವಲ್ಲ. ಯುದ್ಧಕ್ರಿಯೆಗಳಲ್ಲಿಯ ಎರಡು ಪ್ರಧಾನ ವಿಭಾಗಗಳನ್ನು ಇಲ್ಲಿ ಕಾಣುವುದು ಮುಖ್ಯ. ಇವೆರಡೂ ವಿಭಾಗಗಳ ಒಟ್ಟು ಹೆಸರು ಆಕ್ರಮಣೆ (offence). ಇಲ್ಲಿ ತೋಳ ನಡೆಸಿದ್ದು ಆಕ್ರಮಣೆಯನ್ನು. ಆದ್ದರಿಂದ ಅದು ಆಕ್ರಮಣಕಾರಿ. ಕುರಿಯ ದೃಷ್ಟಿಯಿಂದ ಈ ಚಿತ್ರವನ್ನು ನೋಡಿದರೆ ತೋಳನನ್ನು ತಡೆಯುವ ವ್ಯರ್ಥ ಪ್ರಯತ್ನ ಈ ಬಲಿಷ್ಠರ ಪ್ರಪಂಚದಲ್ಲಿ ಸಲ್ಲದೆಂದು ಅದಕ್ಕೆ ಗೊತ್ತು. ಇಲ್ಲಿ ಕುರಿ ಪ್ರದರ್ಶಿಸಿದ್ದು ರಕ್ಷಣಾ ವಿಧಾನಗಳನ್ನು, ಒಂದು ವೇಳೆ ಕುರಿಯೊಂದೇ ಮೇಲುಗೈ ಆಗಿ ಅದು ತೋಳವನ್ನು ಹಿಂದಟ್ಟುವುದು ಸಾಧ್ಯವಾಗಿದ್ದರೆ ಆಗ ಕುರಿಯದು ಆಕ್ರಮಣ ಕ್ರಿಯೆ ಆಗುತ್ತದೆ, ತೋಳದ್ದು ರಕ್ಷಣಾಕ್ರಿಯೆ ಆಗುತ್ತದೆ. ಹೀಗೆ ಆಕ್ರಮಣೆ ಹಾಗೂ ರಕ್ಷಣೆ ಒಂದೇ ನಾಣ್ಯದ ಎರಡು ಮುಖಗಳು. ಆಕ್ರಮಣಕಾರನಿಗೆ ತನ್ನ ಚಲನೆಯ ಅಥವಾ ಹೊಡೆತದ ಕಾಲ, ಸ್ಥಳವನ್ನು ಆಯುವ ಸೌಕರ್ಯವಿದೆ. ಅವನು ಯುದ್ಧ ಪ್ರೇರಕ. ಇದರಿಂದ ಆವನಿಗೆ ಒಂದು ತೊಂದರೆ ಉಂಟು. ಎದುರಾಳಿಯ ನೆಲದಲ್ಲಿ ಆತ ಕದನ ನಡೆಸಬೇಕಾಗುತ್ತದೆ. ಅಲ್ಲಿಯ ಪರಿಸರ ಇವನಿಗೆ ಹೊಸತು. ಹೀಗಾಗಿ ಅಧಿಕ ಬಲದಿಂದ ಅಧಿಕ ತಯಾರಿಕೆಯಿಂದ ಅಧಿಕ ಜಾಗರೂಕತೆಯಿಂದ ಇವನು ಮುನ್ನಡೆಯಬೇಕು. ರಕ್ಷಣಕಾರನಿಗಾದರೋ ಪ್ರೇರಕಶಕ್ತಿ ಮತ್ತು ಅದರಿಂದ ಒದಗುವ ಆಕಸ್ಮಿಕತೆಯ ಲಾಭ ಇಲ್ಲ. ಆದರೆ ಈತ ಶತ್ರುವನ್ನು ಬಹಳವಾಗಿ ಕಾಡಿಸಬಹುದು, ಪೀಡಿಸಬಹುದು. ತನ್ನ ನೆಲದಲ್ಲಿ ಈತ ನಿಂತಿರುತ್ತಾನೆ. ಆದ್ದರಿಂದ ಕದನರಂಗದಲ್ಲಿ ಇವನಿಗೆ ಸೌಕರ್ಯಗಳು ಜಾಸ್ತಿ.

ಹೀಗೆ ಯುದ್ಧದ ಮೂಲ ಸೂತ್ರಗಳನ್ನು ವಿವರಿಸಿ ಆ ತರುವಾಯ ಹುಡುಗರನ್ನು ವಿವಿಧ ಪಂಗಡಗಳಾಗಿ ವಿಭಾಗಿಸಿ ನಮಗೆ ದೊರೆತ ಪ್ರದೇಶಗಳಿಗೆ ಅನುಗುಣವಾಗಿ ಆಕ್ರಮಣೆಯನ್ನೋ ರಕ್ಷಣೆಯನ್ನೋ ಪ್ರಾಯೋಗಿಕವಾಗಿ ತೋರಿಸುತ್ತಿದ್ದೆವು. ಇದರಲ್ಲಿ ಅವರೆಲ್ಲರೂ ಭಾಗಿಗಳಾಗಿರುತ್ತಿದ್ದುದರಿಂದ ಆ ಏರು ತಗ್ಗುಗಳ ನಡುವೆ ಹಲವಾರು ಮೈಲಿ ತೆವಳಿ ಓಡಿ ಬಿದ್ದು ಎದ್ದು ಸಾಗುವುದರಲ್ಲಿ ಇವರಿಗೆ ಅಮಿತ ಉತ್ಸಾಹ sweet killing ! ಕೊನೆಯ ಗಳಿಗೆ ಎಂದರೆ ಶತ್ರುವಿನಾಶ, ಮಿತ್ರಜಯ—ಇಡೀ ಪ್ರದರ್ಶನದ ಪೂರ್ಣಾಹುತಿಯ ಗಳಿಗೆ. ಆಗ ಹುಡುಗರ ಉತ್ಸಾಹವೂ ಪರಾಕಾಷ್ಠೆಗೆ ಜಿಗಿಯುತ್ತಿತ್ತು. ಇಂಥಲ್ಲೆಲ್ಲ ನಾವೆಲ್ಲರೂ—ಆರ್ಮಿ ಸ್ಟಾಫುಗಳು ಆಫೀಸರರು—ಹುಡುಗರಿಗಿಂತ ಹೆಚ್ಚು

ಶ್ರಮವಹಿಸಿ ದುಡಿಯುವುದು ಅತ್ಯಗತ್ಯ. ಅದೇ ವಿಧದ ಉತ್ಸಾಹದ ಹೊನಲಿನಲ್ಲಿ ತೇಲುತ್ತಿದ್ದ ನಮಗೂ ಪ್ರಾಯದ ಅರಿವಾಗಲೀ ದೇಹದ ಮೇಲಿನ ಪ್ರಜ್ಞೆಯಾಗಲೀ ಆಗ ಇರುತ್ತಿರಲಿಲ್ಲ. ಒಂದು ಕೃತಕ ಸನ್ನಿವೇಶದಲ್ಲಿಯೇ ನಮ್ಮ ಅವಮಲು ಇಷ್ಟು ಎತ್ತರವಟ್ಟಿದ್ದಾದರೆ ವಾಸ್ತವಿಕ ಯುದ್ಧರಂಗದ ಪರಿಸ್ಥಿತಿ ಹೇಗಿರಬಹುದೋ ಅದು ನನಗೆ ತಿಳಿಯದು. ಅಂತೂ ಒಂದು ವಿಷಯ ಸ್ಪಷ್ಟವಾಯಿತು—ನಮ್ಮ ದೇಹದ ಸುಪ್ತ ಚೈತನ್ಯಗಳಿಗೆ ಮಿತಿ ಇರುವಂತೆ ತೋರುವುದಿಲ್ಲ. ಸಾಮೂಹಿಕವಾಗಿ ನಾವು ಏಕೋದ್ದೇಶಪ್ರೇರಿತರಾಗಿ ವರ್ತಿಸಿದರೆ ನಮ್ಮ ಸಕಲ ಪ್ರಯತ್ನಗಳೂ ಏಕಮುಖವಾಗಿ ಒಗ್ಗೂಡಿ ಮಹಾಕಾರ್ಯ ಸಾಧ್ಯವಾಗುವುದು.

ಇನ್ನೊಂದು ತಗ್ಗು ಪ್ರದೇಶದಲ್ಲಿ ಹುಡುಗರನ್ನು ಕೂರಿಸಿದೆ. ತಂಪಾದ ನೆರಳು. ಎದುರಿಗೆ ಸ್ವಲ್ಪದೂರ ಹೀಗೆಯೇ ಮಟ್ಟಸ ಹರವು. ಅಲ್ಲಿಂದ ನೆಲ ಕ್ರಮೇಣ ಏರಿ ಸುದೂರದಲ್ಲಿ ಒಂದು ಕಿರಿಯ ಗುಡ್ಡದ ಅಗ್ರ ಭಾಗದ ಅಂಚಿನಲ್ಲಿ ಮರೆಯಾಗುತ್ತಿತ್ತು. ಕುರುಚಲು ಗಿಡ, ಕಿರಿಯ ಮರಗಳು ಅವಿರಳವಾಗಿ ಹರಡಿದ್ದುವು. ನಮ್ಮ (ಮಿತ್ರರು) ಸ್ಥಳ ಈಗ ನಾವು ಕುಳಿತಿರುವಲ್ಲಿ ಎಂದೂ ಶತ್ರುವಿನ ನೆಲೆ ಗುಡ್ಡದ, ನಮಗೆ ಕಾಣಿಸದ, ಆಚೆ ಬದಿ ಎಂದೂ ಶತ್ರು ನಮ್ಮೆಡೆಗೆ ಧಾಳಿ ಮಾಡಲು ಬರುತ್ತಿದ್ದಾನೆ ಎಂದೂ ಭಾವಿಸಿದರೆ ಇಲ್ಲಿ ಆತ ಅನುಸರಿಸಬೇಕಾದ ಕುತಂತ್ರ ಏನು ; ನಾವು ಹೂಡಬೇಕಾದ ಷಡ್ಯಂತ್ರ ಏನು ? ಈ ಪ್ರಶ್ನೆಗಳಿಗೆ ಒಂದು ಉತ್ತರ ಕ್ಷೇತ್ರ ಕೌಶಲದ ಪಾಠವಾಗುತ್ತದೆ. ನಾವು ಇರುವ, ನಾವು ಚಲಿಸುವ ಕ್ಷೇತ್ರದ ಸಕಲ ಯುದ್ಧಗುಣಗಳನ್ನೂ ಅರಿತು ಅವನ್ನು ನಮ್ಮ ಗರಿಷ್ಠ ಅನುಕೂಲತೆಗೂ ಶತ್ರುವಿನ ಗರಿಷ್ಠ ಅನನುಕೂಲತೆಗೂ ಒದಗುವಂತೆ ಬಳಸಿಕೊಳ್ಳುವುದೇ ಕ್ಷೇತ್ರ ಕೌಶಲ. ಇಲ್ಲಿ ಶತ್ರು ನಮ್ಮಷ್ಟೇ—ನಮಗಿಂತ ಹೆಚ್ಚಲ್ಲದಿದ್ದರೆ—ಬುದ್ಧಿವಂತ ಎಂದು ನಾವು ಭಾವಿಸಲೇಬೇಕು "ನಿನ್ನಲ್ಲಿ ಎಷ್ಟು ಬುದ್ಧಿವಂತಿಕೆ ಇದೆಯೆಂದು ನೀನು ಭ್ರಮಿಸಿರುವೆಯೋ ಕನಿಷ್ಠಪಕ್ಷ ಅಷ್ಟಾದರೂ ಬುದ್ಧಿವಂತಿಕೆ ಶತ್ರುವಿನಲ್ಲಿದೆಯೆಂದು ತಿಳಿ" ಅಥವಾ "ಶತ್ರುವಿನ ಸಾಮರ್ಥ್ಯವನ್ನು ಎಂದೂ ಕಡೆಗಣಿಸಬೇಡ"—ಇವೆಲ್ಲವೂ ಆರ್ಮಿಯ ಚಿರಪರಿಚಿತ ನಾಣ್ಣುಡಿಗಳು.

ಕ್ಷೇತ್ರ ಕೌಶಲದಲ್ಲಿ ಒಂದು ಪಾಠ "ವಸ್ತುಗಳು ಏಕೆ ಕಾಣುತ್ತವೆ ?" ಶತ್ರುವನ್ನು ನಾವು ನೋಡಬೇಕು ಆದರೆ ಆತ ನಮ್ಮನ್ನು ನೋಡದಂತೆ ನಾವು ಎಚ್ಚರ ವಹಿಸಬೇಕು— ಈ ಸೂತ್ರವನ್ನು ಲಕ್ಷ್ಯದಲ್ಲಿಟ್ಟುಕೊಂಡು ಮೇಲಿನ ಪ್ರಶ್ನೆಗೆ ಉತ್ತರವನ್ನು ಪ್ರಾಯೋಗಿಕವಾಗಿ ಅರಸಬಹುದು.

ಗುಡ್ಡದ ಆಚೆ ಬದಿಯಿಂದ ಶತ್ರು ಈಚೆ ಬದಿಗೆ (ನಮಗೆ ಕಾಣುವ ಬದಿಗೆ) ತೆವಳಿಕೊಂಡೇ ಬಂದ. ಆದರೆ ಬಾನಗಡಿರೇಖೆ (skyline) ಉತ್ತರಿಸುವಾಗ ಅವನ ಆಕಾರ ದೊಡ್ಡದಾಗಿ ನಮಗೆ ಕಂಡಿತು. ಆದ್ದರಿಂದ ಬೆಟ್ಟ ಮುಂತಾದ ಪ್ರದೇಶಗಳಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗುವಾಗ ಬಾನಗಡಿರೇಖೆಯ ವಿಚಾರ ಎಚ್ಚರ ವಹಿಸಬೇಕು.

ಶತ್ರು ನಮ್ಮ ಎದುರಿನ ಬೆಟ್ಟದ ಮೈಯಲ್ಲಿಯೇ ಅಡಗಿ ನಮ್ಮನ್ನು ನೋಡುತ್ತಿದ್ದಾನೆ. ಇದು ನಮಗೆ ತಿಳಿದಿಲ್ಲ. ಆದರೆ ಆತನ ಎರಡು ದೋಷಗಳ ಪರಿಣಾಮವಾಗಿ ಅವನ ಇರವು ವ್ಯಕ್ತಪಟ್ಟಿತು. ಮೊದಲನೆಯದು ಅವನು ಒಂದು ಅಡಗುತಾಣದಿಂದ ಸಮೀಪ

ದ್ದಕ್ಕೆ ಚುರುಕಾಗಿ ತಿವಳಿ ಜಿಗಿದ. ಈ ಹಠಾತ್ ಚಲನೆ ನಮ್ಮ ಗಮನ ಸೆಳೆದು ಅವನ ಸ್ಥಾನ ತೋರಿಸಿಕೊಟ್ಟಿತು. ಇನ್ನೊಬ್ಬ ಶತ್ರು ಬಲು ಸುರಕ್ಷಿತವಾಗಿ ಅಡಗಿ ಕುಳಿತಿದ್ದ. ಆದರೆ ಒಂದು ದುರ್ಬಲ ಗಳಿಗೆಯಲ್ಲಿ ಅವನ ಕೈ ಆಡಿತು. ಆಗ ಮಣಿಗಂಟಿನ ಮೇಲೆ ರಾರಾಜಿಸುತ್ತಿದ್ದ ವಾಚಿನ ಕನ್ನಡಿ ಹೊಳೆದು ನಮ್ಮ ಗಮನವನ್ನು ಆ ಕಡೆಗೆ ಸೆಳೆಯಿತು. ಆದ್ದರಿಂದ ಚಲಿಸುವ ವೇಳೆ ಎಚ್ಚರಬೇಕು. ಹೊಳೆಯುವ ವಸ್ತುಗಳನ್ನು ಬಳಸಬಾರದು.

ಎದುರಿನ ಬೆಟ್ಟದ ಮೈಯಲ್ಲಿಯು ಅಸಂಖ್ಯಾತ ಪುಟ್ಟ ಗಿಡಮರಗಳ ನಡುವೆ ಒಂದು ಭಾರೀ ಮಾವಿನ ಮರ ಒಂಟಿಯಾಗಿ ಎದ್ದು ನಿಂತಿದೆ. ಆದರೆ ಕಡೆಗೆ ನಮ್ಮ ಗಮನ ಸಹಜವಾಗಿ ಹರಿಯುವುದು. ಅಲ್ಲೇ ಅಡಗಿರುವ ಶತ್ರು ನಮ್ಮ ಕಣ್ಣಿನ ಜಾಲದಿಂದ ತಪ್ಪಿಸಿಕೊಳ್ಳಲಾರ. ಪರಿಸರದಿಂದ ಭಿನ್ನವಾಗಿರುವ ಮಹಾ ಗಾತ್ರಗಳು ಖಂಡಿತ ಅಪಾಯ ಸ್ಥಾನಗಳು.

ಇನ್ನೊಂದು ಕುರುಚಲು ಪೊದೆಯ ಹಿಂದೆ ಅಡಗಿ ಕುಳಿತಿದ್ದಾನೆ ಶತ್ರು. ಅವನ ಸ್ಥಾನ ಸರ್ವವಿಧದಿಂದಲೂ ಸುರಕ್ಷಿತವಾದದ್ದು. ನಮಗೆ ಅವನು ಅಲ್ಲಿ ಇರುವುದೇ ಗೊತ್ತಿಲ್ಲ. ಆದರೆ ಸೂರ್ಯನ ಸ್ಥಾನ ಬದಲಾದಂತೆ ಅವನ ನೆರಳು ಪೊದೆಯಿಂದ ಹೊರ ಚಾಚಿ ಪಕ್ಕದ ಸಮತಟ್ಟಿನ ಮೇಲೆ ಬೀಳುವುದು. ಇದು ನಮಗೆ ಚೆನ್ನಾಗಿ ಕಾಣುತ್ತದೆ. ಪೊದೆಯ ಹಿಂದೆ ಇರುವ ಶತ್ರುವಿನ ಸ್ಥಾನ ಈಗ ನಮಗೆ (ಸೂರ್ಯದೇವನ ಕೃಪೆಯಿಂದ) ತನ್ನಿಂದ ತಾನೇ ವೇದ್ಯವಾಗುವುದು.

ಶತ್ರು ಎಲ್ಲೋ ದೂರದಲ್ಲಿ ಅವನ ನೆಲದ ಮೇಲೆಯೇ ಬರುತ್ತಿದ್ದಾನೆ. ನಮ್ಮ ಠಾಣದಿಂದ ಸಾಕಷ್ಟು ದೂರದಲ್ಲಿ ಅವನು ಇರುವುದರಿಂದ ಕಾಡಿನ ಮಧ್ಯದ ಆ ಬಯಲಿನಲ್ಲಿ ಅವನು ಸಾಲಾಗಿ ನಡೆದು ಬರುತ್ತಿದ್ದಾನೆ. ನಾವಿಲ್ಲಿ ಒಂದು ಮರದ ಮೇಲೆ ಏರಿ ಬೈನಾಕ್ಯುಲರ್ ಹಿಡಿದು ದೂರದ ವಿಸ್ತಾರವನ್ನು ಕ್ರಮವೀಕ್ಷಣೆ ಮಾಡಿದಾಗ ಕ್ರಮಬದ್ಧ ಹುಳುಗಳ ಮುಂದಿನ ಚಲನೆ ನಮ್ಮ ಲಕ್ಷ್ಯವನ್ನು ಸಹಜವಾಗಿ ಆಕರ್ಷಿಸುತ್ತದೆ.

ಹೀಗೆ ವಸ್ತುಗಳನ್ನು ಕಾಣಲು ಪ್ರಧಾನವಾದ ಕಾರಣಗಳು ಆರು—ಬಾನಗಡಿರೇಖೆ, ಚಲನೆ, ಹೊಳೆತ, ಗಾತ್ರ, ನೆರಳು, ಕ್ರಮಬದ್ಧತೆ. ಕ್ಷೇತ್ರ ಕೌಶಲದ ಈ ಪಾಠದಲ್ಲಿ ವಿವರಣೆಗಳೂ ಪ್ರಾಯೋಗಿಕ ನಿದರ್ಶನಗಳೂ ಸಮಪ್ರಮಾಣದಲ್ಲಿ ಬೆರೆಕೆಯಾದಾಗ ಹುಡುಗರಿಗೆ ಒದಗುವ ತಿಳಿವಳಿಕೆ ಸಂತೋಷ ಅಪಾರ, ಅಂತೆಯೇ ಕಲಿಸುವಾತನಿಗೆ ಲಭಿಸುವ ಸಾರ್ಥಕ್ಯ ಭಾವ ಕೂಡ.

ಇನ್ನೊಂದು ಪ್ರದೇಶಕ್ಕೆ ಸಾಗಿದೆವು. ಅಲ್ಲಿ ಆಂಬುಷ್, ಎಂದರೆ ಕ್ಷಿಪ್ರಾಕ್ರಮಣ, ಪ್ರದರ್ಶನ ಮಾಡಿ ತೋರಿಸಲು ಪ್ರಶಸ್ತವಾದ ಸನ್ನಿವೇಶ ಒದಗಿತು. ಆರಿಸಿದ ಕೆಲವರಿಗೆ ಮೊದಲೇ ಶಿಕ್ಷಣ ಹಾಗೂ ಅಭ್ಯಾಸ ನೀಡಿ ಯುಕ್ತ ಸ್ಥಳಗಳಲ್ಲಿ ಅವರನ್ನು ಅಡಗಿಸಿಟ್ಟೆವು. ಉಳಿದ ಎಲ್ಲ ಹುಡುಗರನ್ನೂ ಈ ಸ್ಥಳದಲ್ಲಿದ್ದ ದಿಬ್ಬದ ಮೇಲೆ ಮರಗಳ ನೆರಳಿನಲ್ಲಿ ಕೂರಿಸಿದೆವು. ಆಂಬುಷ್ ವಿಚಾರ ವಿವರಣೆಗಳನ್ನು ನೀಡಿ ಒಂದು ಕತೆಯನ್ನೂ ಹೇಳಿದೆ: ಇದು ಭಾರತದ ಉತ್ತರ ಗಡಿಯಾದ ಹಿಮಾಲಯ ಪ್ರದೇಶ. ಶತ ಸಹಸ್ರ ಮಾನಗಳಿಂದ ಚಿರಶಾಂತವಾಗಿದ್ದ ಇಲ್ಲಿ ಈಗ ಅರಿಸಿನ ಸಿಡುಗು ಮಾರಕವಾಗಿ ವ್ಯಾಪಿಸಿದೆ. ಎದುರು (ಅಂದರೆ ಕುಳಿತಿರುವವರಿಗೆ ಕಾಣುವ ಸ್ಥಳ) ಭರತ ವರ್ಷ ವಿಸ್ತಾರವಾಗಿ ಸಮೃದ್ಧವಾಗಿ

ಸಂಪದ್ಭರಿತವಾಗಿ ಹಬ್ಬಿದೆ. ಚೈನೀ ಬೇಹಿನ ತಂಡದವರು ಬಲು ಎಚ್ಚರಿಕೆಯಿಂದ ಕಳ್ಳ ಹೆಜ್ಜೆ ಇಡುತ್ತಾ ತಮ್ಮ ನಾಡಿನ ಕಡೆಯಿಂದ ಭರತಖಂಡದ ನೆಲಕ್ಕೆ ಅತಿಕ್ರಮಪ್ರವೇಶ ಮಾಡುತ್ತಿದ್ದಾರೆ. ಶತ್ರುವಿನ ನೆಲದ ಒಂದೊಂದು ಗರಿಕೆಯಲ್ಲೂ ಒಂದೊಂದು ಹಿಮ ಕಣದಲ್ಲೂ ಅಪಾಯವನ್ನು ಕಾಣುವ ಈ ತಂಡದ ಮುಂದುವರಿಯುವಿಕೆಯನ್ನು ನೋಡು ವುದೇ ಒಂದು ಸೊಗಸು. ದೂರದೂರ ಹರಡಿ ಹೋಗಿದ್ದಾರೆ. ಮೊದಲು ಒಬ್ಬ, ಮರೆ ಯಾಗಿ ಅವಿತು, ನುಸುಳುತ್ತಾನೆ. ಅವನು ಎಚ್ಚರದಿಂದ ನೋಡಿ ಚಿಗರೆಯ ತಾದಾತ್ಮ್ಯ ದಿಂದ ಆಲಿಸಿ ಹಿಂದಿನವನಿಗೆ ಬರಲು ಸಂಜ್ಞೆ ನೀಡುತ್ತಾನೆ. ಅದೇ ಕ್ರಮದಲ್ಲಿ ಇಡೀ ತಂಡ ನಮ್ಮ ನೆಲದ ಮೇಲೆ ಎಷ್ಟು ಮುಂದುವರಿದರೂ ಅದಕ್ಕೆ ಭಾರತೀಯ ಸೈನ್ಯದ ಯಾವುದೇ ನೆಲೆ ಅಥವಾ ಚಲನೆ ಗೋಚರಿಸುವುದಿಲ್ಲ. ಈ ಜಾಗವನ್ನು ಚೆನ್ನಾಗಿ ಶೋಧಿಸಿ ಇಲ್ಲಿಯ ಪರಿಸರವನ್ನು ಮನದಟ್ಟು ಮಾಡಿ ಸಂಪದ್ಭರಿತ ಭರತಖಂಡದ ಮೇಲೆ ಭಲ್ಲೂಕ ದೃಷ್ಟಿ ಬೀರಿ ತಂಡ ಹಿಂದೆ ಸಾಗುತ್ತದೆ. ಎರಡನೆಯ ಸಲದ ಬೇಹುಗಾರಿಕೆಯಲ್ಲಿಯೂ ಚೈನೀ ತಂಡದ ಅನುಭವ ಇದೇ ಮಾದರಿಯದು. ಭಾರತೀಯ ತುಕ್ಕಡಿಗಳು ಎಲ್ಲಿಯೂ ಇಲ್ಲ. ಇದರಿಂದ ಒಂದು ವಿಧವಾದ ಆತ್ಮವಿಶ್ವಾಸ ಮೂಡುತ್ತದೆ. ಮೂರನೆಯ ಸಲ ಬರುವಾಗ ಚೈನೀ ಬೇಹುಗಾರರು ಆರಾಮವಾಗಿ ಸಲೀಸಾಗಿ ಎಚ್ಚರ ವಹಿಸದೇ ಬರು ತ್ತಾರೆ. ಈ ಸಲವೂ ಅವರಿಗೆ ಯಾವುದೇ ವಿಧವಾದ ವಿರೋಧ ಎದುರಾಗುವುದಿಲ್ಲ. ಅಂದಮಾತ್ರಕ್ಕೆ ಭಾರತೀಯ ಸೈನ್ಯ ನಿದ್ರೆ ಮಾಡುತ್ತಿತ್ತೆಂದು ಅರ್ಥವಲ್ಲ. ಈಗ ಭಾರತದ ತಂಡ ಭಾರತದ ಎಡೆಯಿಂದ ಬರುತ್ತದೆ. ತಮ್ಮ ನೆಲದ ಮೇಲೆ ಶತ್ರು ಕೆಡೆದು ಹೋಗಿದ್ದ ಅವಶೇಷಗಳನ್ನು ಈ ತಂಡ ಗುರುತಿಸಿದ್ದೇ ತಡ ಒಂದು ಅಂಬುಷ್‌ನ ಯೋಜನೆ ಹೂಡುವುದು. ಸಿಪಾಯಿಗಳು ಅಲ್ಲೇ ಹಿಂದೆ ಮುಂದೆ ಹರಡಿ ಹೋಗಿ ಅವಿತು ಕುಳಿತು ಸರ್ಪಗಾವಲು ಹಾಕುತ್ತಾರೆ. ಅವರು ಒಡ್ಡಿರುವುದು ಒಂದು ಬಲೆ ಯನ್ನು. ಚೈನೀ ತಂಡಕ್ಕೆ ಮೂರು ಸಲದ ಸುಲಭ ಶೋಧನೆಯಿಂದ ಎಚ್ಚರ ಕಡಿಮೆ ಯಾಯಿತು. ಯಾರೂ ತಮ್ಮನ್ನು ಎದುರಿಸುವವರಿಲ್ಲ ಎಂಬ ಧೈರ್ಯದಿಂದ ಅಮ ಲೇರಿದ ಈ ಜನ ಯುದ್ಧೋನ್ಮತ್ತರಾಗಿ ತೂರಾಡುತ್ತ ಹಾರಾಡುತ್ತ ನಗುತ್ತ ಬಂದರು. ಒಂದು ತುಕ್ಕಡಿ ಹೇಗೆ ಸಾಗಬೇಕು ಎಂಬುದಕ್ಕೆ ಇವರ ಮೊದಲಿನ ಚಲನೆ ಪರಮೋ ತ್ಕೃಷ್ಟ ಮಾದರಿಯಾಗಿದ್ದರೆ ಅದು ಹೇಗೆ ಮುಂದುವರಿಯಬಾರದು ಎಂಬುದಕ್ಕೆ ಅಷ್ಟೇ ಚರಮಾಂಕನಿಷ್ಠ ಮಾದರಿ ಇವರ ಈಗಿನ ಚಲನೆ. ಬಯಲಿಗೆ ಬಂದರು. ಬೆಂಕಿ ಹಾಕಿದರು. ಚಾ ಕಾಸಿದರು. ಅಫೀಮು ಸೇರಿಸಿ ಕುಡಿದರು. ಹಾಡುತ್ತಾ ಅಲ್ಲೇ ಕುಣಿಯಲು ತೊಡಗಿ ದರು.

ಸಮಾನರಾರೆಮಗೇ ಸಮಾನರಾರೆಮಗೇ
ಮೂರು ಲೋಕದಾ ಗಂಡರು ನಾವು
ನಚ್ಚಿನ ಮಾವೋಭೃತ್ಯರು ನಾವು
ಸಮಾನರಾರೆಮಗೇ ಸಮಾನರಾರೆಮಗೇ

ಎನ್ನುತ್ತಾ ಕುಣಿದದ್ದೂ ಕುಣಿದದ್ದೇ. ಆಗಲೇ ಗುಂಡುಗಳ ಸುರಿಮಳೆ ಇವರ ಮೇಲೆ ಬಿದ್ದಾಗ ನೆಗೆದು ಬಿದ್ದು ಸತ್ತುಹೋದರು. ಓಡಲು ಯತ್ನಿಸಿದ ಒಬ್ಬಿಬ್ಬರನ್ನು ಆಯಾ

ಮೂಲೆಗಳಲ್ಲಿ ಹುದುಗಿದ್ದ ಭಾರತೀಯ ಯೋಧರು ಸಂಗೀನ್ ತೋರಿಸಿ ಸೆರೆಹಿಡಿದು ಕೊಂಡರು. ಸತ್ತವರ ಮತ್ತು ಸೆರೆಸಿಕ್ಕವರ ತಪಾಸಣೆಯಿಂದ ದೊರೆತ ಮಾಹಿತಿಗಳು ಗುಪ್ತವರದಿಗಳು ಅವೆಷ್ಟೋ. ಹೀಗೆ ಸನ್ನಿವೇಶವನ್ನು ಗ್ರಹಿಸಿ ಶತ್ರುವಿನ ಚಲನವಲನ ವನ್ನು ಅಭ್ಯಸಿಸಿ ಅವನ ದುರ್ಬಲ ಗುಣಗಳ ಕಡೆ ಕೇಂದ್ರೀಕರಿಸಿ ಬಲೆಯೊಡ್ಡಿ ಹೊಂಚು ಹಾಕಿ ಯುಕ್ತ ವೇಳೆಯಲ್ಲಿ ಅವನ ಮರ್ದನ ಮಾಡುವ ಯುದ್ಧ ವಿಧಾನವೇ ಅಂಬುಷ್.

ಇಂಥ ಹಲವಾರು ಪ್ರಯೋಗಗಳ ಮೂಲಕ ಕ್ಯಾಂಪಿನಲ್ಲಿ ಹುಡುಗರ ಆಸಕ್ತಿಯನ್ನು ಸದಾ ಉನ್ನತಮಟ್ಟದಲ್ಲಿಡುತ್ತಿದ್ದೆವು. ಇಲ್ಲಿ ಅವರು ಸಾಕಷ್ಟು ಓಡಿರುತ್ತಾರೆ, ಶ್ರಮಿಸಿರು ತ್ತಾರೆ—ಆದರೆ ಇದರ ಅರಿವೇ ಅವರಿಗಿರುವುದಿಲ್ಲ. ಸಾಹಸ ಪ್ರವೃತ್ತಿಯಲ್ಲಿ ಹೊಸತನದ ನಡೆಯಲ್ಲಿ ದೊರೆಯುವ ಲಾಭವಿದು. ಹಿಂದೆ ಹೇಳಿದಂತೆ ಇದು sweet killing ಜೊತೆಗೆ sweat grilling ಕೂಡ. ಇರುಳುನಡಿಗೆ, ನಕ್ಷತ್ರ ವೀಕ್ಷಣೆ ಮುಂತಾದ ಆಕರ್ಷಕ ಕಾರ್ಯಕ್ರಮಗಳು ೧೨ನೆಯ ಮೈಸೂರಿನ ಕ್ಯಾಂಪಿನ ಇತರ ಚಟುವಟಿಕೆಗಳು. ಕ್ಯಾಂಪ್ ಮುಗಿದು ಮನೆಗೆ ಹೊರಡುವಾಗ ಸಾಮಾನ್ಯವಾಗಿ ಪ್ರತಿ ಕ್ಯಾಡೆಟ್‌ಗೂ ಕಣ್ಣಂಚಿನಲ್ಲಿ ಹನಿಗೂಡುತ್ತಿತ್ತು.

ಜೋಲುವುದೇತಕೆ ನೇಣಿಗೆ ಗೆಳೆಯಾ ?
ಏಣಿಗೆ ಇದೆ, ಹಿಡಿ ಅದರೆಳೆಯಾ
ಹಂತಿಗೆ ಹಂತಿಗೆ ಬೇರೆ ಲೋಕವಿದೆ
ಅಲ್ಲಲ್ಲಿಗೆ ನವಪಾಕವಿದೆ
ನೂರಿಗೆ ಊರದೆ, ಸಾವಿರಕೇರದೆ
ಅಲಕ್ಷವಿರುವುದು ಯಾವ ಎದೆ ?

ಬೇಂದ್ರೆ

೧೯೬೬

ರಾಷ್ಟ್ರಾಧ್ಯಕ್ಷರಿಗೆ ಗೌರವರಕ್ಷೆ

೧೯೬೬ರ ಜನವರಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ. ಇದರಲ್ಲಿ ಸ್ನಾತಕರಿಗೆ ಪದವೀದಾನ ಮಾಡಿ ಆಶೀರ್ವಚನ ನುಡಿಯಲು ರಾಷ್ಟ್ರಾಧ್ಯಕ್ಷ ಎಸ್. ರಾಧಾಕೃಷ್ಣನ್ ಬರುವವರಿದ್ದರು. ಎನ್‌ಸಿಸಿಯ ಮೂರೂ ಬಲಗಳ (ಸೈನ್ಯ, ನೌಕೆ, ವಾಯು) ಸಂಯುಕ್ತ ಗೌರವರಕ್ಷೆ ನೀಡಬೇಕೆಂದು ಬೆಂಗಳೂರಿನ ಎನ್‌ಸಿಸಿ ಡೈರೆಕ್ಟೊರೇಟ್ ನಿರ್ಧರಿಸಿ ಅದರ ಹೊಣೆಗಾರಿಕೆಯನ್ನು ಬೆಂಗಳೂರು ಬಿ ಗ್ರೂಪ್ ಹೆಡ್ ಕ್ವಾರ್ಟರ್ಸ್‌ನ ಕಮಾಂಡರರಿಗೆ ವಿಧಿಸಿತು. ೧೨ನೆಯ ಮೈಸೂರು ಈ ಗ್ರೂಪಿನಲ್ಲಿ ಇರಲಿಲ್ಲ. ಆದ್ದರಿಂದ ನಾವು ನಿಶ್ಚಿಂತೆಯಿಂದ ಇದ್ದೆವು. ಆದರೆ ಒಂದು ಅಪರಾಹ್ಣ ನಾರಾಯಣ್‌ಸಿಂಗರಿಂದ ಕಾಲೇಜಿಗೆ ಫೋನ್ ಬಂತು "ಜೀಟಿ! ಅಭಿನಂದನೆಗಳು. ಬಿ ಗ್ರೂಪಿನ ಕಮಾಂಡರ್ ನಿಮ್ಮನ್ನು ಆಹ್ವಾನಿಸಿದ್ದಾರೆ. ಕಾರ್ ಕಳಿಸಿದ್ದೇನೆ. ಅಲ್ಲಿಗೆ ಹೋಗಿ, ಗೊತ್ತಾಗುತ್ತದೆ."

ಈ ಕಮಾಂಡರ್ ಯಾರೋ ನಾನು ನೋಡಿರಲಿಲ್ಲ. ಕಾರಿನಲ್ಲಿ ಹೋದೆ. ಯುಕ್ತ ವಂದನೆ ಸಲ್ಲಿಸಿ ಅವರೆದುರು ಕುಳಿತೆ. ಅವರೆಂದರು "ರಾಷ್ಟ್ರಪತಿಗೆ ನಾವು ಕೊಡುವ ಗೌರವರಕ್ಷೆಯ ಕಮಾಂಡರ್ ನೀವಾಗಬೇಕು."

"ಅಪ್ಪಣೆಯನ್ನು ನಾನು ಗೌರವವೆಂದು ಒಪ್ಪಲು ಸಂತೋಷವೇ. ಆದರೆ ನಿಮ್ಮ ಗ್ರೂಪಿನಲ್ಲಿ ಇರುವ ಆಫೀಸರರಿಗೆ ಈ ಗೌರವ ಸಲ್ಲಬೇಕಾದದ್ದು ನ್ಯಾಯವಲ್ಲವೇ ?"

"ಹಿಂದೆ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸಾಮೂಹಿಕ ಕವಾಯತಿಯಲ್ಲಿ ನೀವಲ್ಲವೇ ಕಮಾಂಡರರಾಗಿದ್ದುದು ?"

"ಹೌದು."

"ಈ ಸಲವೂ ನೀವೇ ಆಗಬೇಕು."

ನನಗೆ ಲಭಿಸಿದ ಈ ಗೌರವದಿಂದ ನನಗಿಂತಲೂ ಹೆಚ್ಚು ಸಂತೋಷವಾದದ್ದು ಇಬ್ಬರಿಗೆ—ನಾರಾಯಣ್‌ಸಿಂಗರಿಗೆ, ಉಮರ್ಜಿಯವರಿಗೆ.

ಸರ್ಟಿಯಿಂದ ಪಡೆದ ಸರ್ಟಿಫಿಕೇಟ್

ಕಾಲೇಜು ತರಗತಿಗಳು ಮುಗಿದು ಒಂದು ವರ್ಷದ ಬಿರುಸಿನ ದಿವಸಗಳು ಸ್ವಲ್ಪ ಮಂದಗತಿಯವು ಆಗುತ್ತಿದ್ದಾಗ ೧೨ನೆಯ ಮೈಸೂರಿನಿಂದ ಒಂದು ಕರೆ ಬಂತು. ನಾರಾಯಣ್ ಸಿಂಗರ ಎದುರು ಹೋಗಿ ಏನು ಸಂಗತಿ ಎಂದು ವಿಚಾರಿಸಿದೆ. "ಪೌರರಕ್ಷಣೆಯ ಆವಶ್ಯಕತೆ ಎಂದಿಗಿಂತ ಇಂದು ಅಧಿಕವಾಗಿದೆ. ಆದ್ದರಿಂದ ಎನ್‌ಸಿಸಿಯಲ್ಲಿ ಇದನ್ನು ಪ್ರಾರಂಭ ಮಾಡಬೇಕೆಂದು ನಿರ್ಧರಿಸಿದ್ದೇವೆ. ನಮ್ಮ ಬೆಟಾಲಿಯನ್ ಇದರಲ್ಲಿ ಸಹ ಮುಂದಿನ

ಸ್ಥಾನದಲ್ಲಿರಬೇಕು ಎಂಬುದು ನನ್ನ ಆಸೆ. ನೀವು ಪೌರಶಿಕ್ಷಣ ಪಡೆದು ಬರಬೇಕು'' ಎಂದರು ಓಸಿ.

''ಎಲ್ಲಿ ? ಕಾಲಾವಕಾಶ ?''

"ನಾಗಪುರದ ಸೆಂಟ್ರಲ್ ಎಮರ್ಜೆನ್ಸಿ ರಿಲೀಫ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ. ಬೇಸಗೆ ರಜೆಯಲ್ಲಿ ಒಂದು ತಿಂಗಳ ಕಾಲ.'' ''ಸರಿ ಹೋಗೋಣ.''

ನಾಗಪುರದ ಇನ್‌ಸ್ಟಿಟ್ಯೂಟಿನ ಸಂಕ್ಷೇಪನಾಮ ಸರ್ಟಿ. ಮೇ–ಜೂನ್ (೧೯೬೬) ಅವಧಿಯಲ್ಲಿ ನಾನು ಸುಮಾರು ಒಂದು ನೂರು ಮಂದಿ ಅಖಿಳ ಭಾರತೀಯ ಎನ್‌ಸಿಸಿ ಆಫೀಸರರ ಜೊತೆಯಲ್ಲಿ ಒಂದು ತಿಂಗಳ ಪೌರರಕ್ಷಣೆ ಶಿಕ್ಷಣ ಪಡೆದೆ. ಮಿಲಿಟೆರಿ ಶಿಕ್ಷಣದ ಬಿರುಸು ಇಲ್ಲಿಲ್ಲ. ಆದರೆ ಆ ಎಲ್ಲ ಬೋರಿಕೆಗಳೂ ವಿಪುಲವಾಗಿದ್ದುವು. ಇನ್ನು ನಾಗಪುರದ ಸೆಕೆಯಲ್ಲಿ ಆ ಒಂದು ತಿಂಗಳು ಪಟ್ಟ ಕಷ್ಟ ವಿವರಿಸಲು ಸಾಧ್ಯವಿಲ್ಲ. ಗೋಗರೆಯುತ್ತಿದ್ದವರು, ಸದಾ ತೂಕಡಿಸುತ್ತಿದ್ದವರು ಹೆಚ್ಚು. ಶಿಕ್ಷಕರೆಲ್ಲರೂ ಸಾಧು ಸ್ವಭಾವದ ನಾಗರಿಕ ಜನ. ಆದ್ದರಿಂದ ನಮ್ಮ ಎನ್‌ಸಿಸಿ ಬಾಂಧವರ ಶಿಸ್ತು ಅಧೋಮಟ್ಟಕ್ಕೆ ಇಳಿಯಿತು. ಸಂಸಾರಸ್ಥ ಹೆಣ್ಣುಮಕ್ಕಳನ್ನು ಕೆಣಕಿ ಕೆಲವರು ಛೀಮಾರಿ ಹಾಕಿಸಿಕೊಂಡರು. ಬೋರೋ ಅಬೋರೋ—ಬಂದಿದ್ದೇನೆ, ಸರ್ಕಾರ ಹಣ ವೆಚ್ಚ ಮಾಡುತ್ತದೆ. ಆದ್ದರಿಂದ ನಾನು ಶ್ರದ್ಧೆಯಿಂದ ನಿಷ್ಠೆಯಿಂದ ದುಡಿಯಬೇಕು. ಇದು ನನ್ನ ನಿಲವು. ಸದಾ ನಡೆಯುತ್ತಿರುವುದು bore ಎಂದು ಕುಳಿತಾತ ಅಲ್ಲೇ ಇರುವನು, ಬೋರೋ ಅಬೋರೋ ಲೆಕ್ಕಿಸದೆ ನಡೆವಾತ ತಲಪದ ಎಡೆ ಇಲ್ಲ. ಶಿಕ್ಷಣ ಮುಗಿದು ಮರಳಿದ ಮೇಲೆ ಸರ್ಟಿಫಿಕೇಟ್ ಬಂತು—ನನಗೆ ಸಿಕ್ಕಿದ್ದು ಪ್ರಥಮ ದರ್ಜೆ.

ಒರತೆಯ ಉಗಮ

೧೯೬೬ರ ಶಿಕ್ಷಣವರ್ಷ ಪ್ರಾರಂಭವಾದಾಗ (ಜೂನ್) ನಮ್ಮ ಎನ್‌ಸಿಸಿ ದಳಗಳು ಅಧಿಕ ಉತ್ಸಾಹದಿಂದ ಎಲ್ಲ ಕೆಲಸಗಳಲ್ಲೂ ಭಾಗವಹಿಸಲು ತೊಡಗಿದುವು. ಹಿಂದಿನ ವರ್ಷದ ಸರ್ವಾಂಗೀಣ ಶ್ರೇಯಸ್ಸಿನಿಂದ ೧೨ನೆಯ ಮೈಸೂರಿನ ಹೆಸರಿನ ಸುತ್ತಲೂ ಒಂದು ಪ್ರಭಾವಲಯ ಮೂಡಿತ್ತು. ನಮ್ಮ ಬೆಟಾಲಿಯನ್ನಿಗೆ ಇನ್ನೂ ಒಂದು ಹಿರಿಮೆ ಇತ್ತು—ಪರ್ವತಾರೋಹಿಗಳ ಬೆಟಾಲಿಯನ್ ಇದು. ಹಿಮಾಲಯ ಮನಾಲಿ ಮುಂತಾದೆಡೆಗಳಿಗೆ ಹೋಗಿ ಅಲ್ಲಿ ಹಿಮಾಲಯ ಶ್ರೇಣಿಯ ಹಲವಾರು ಗಿರಿಶೃಂಗಗಳನ್ನು ಯಶಸ್ವಿಯಾಗಿ ಏರಿ ಮರಳಿದ್ದ ಅನೇಕ ಕ್ಯಾಡೆಟುಗಳು ಇಲ್ಲೇ ಕೇಂದ್ರೀಕರಿಸಿದ್ದರು ; ಬೇರೆ ಯಾವ ಬೆಟಾಲಿಯನ್ನಿನಲ್ಲೂ ಪರ್ವತಾರೋಹಣ ಶಿಕ್ಷಣ ಪಡೆದ ಕ್ಯಾಡೆಟುಗಳು ಇಷ್ಟು ಅಧಿಕ ಸಂಖ್ಯೆಯಲ್ಲಿರಲಿಲ್ಲ.

''ಹಿಮಾಲಯ ಅಲ್ಲಿದೆ. ಹಣ ಒದಗಿಸುವ ಸರಕಾರ ಇಲ್ಲಿದೆ. ಹೋಗಬೇಕೆನ್ನುವ ತವಕದ ಕ್ಯಾಡೆಟುಗಳಿಗೆ ಇವೆರಡರ ನಡುವೆ ಒಂದು ಸಹಾಯಕ ಸೇತುವೆ ಆಗಿ ಇರಬೇಕಾದದ್ದು ನಮ್ಮ ಕೆಲಸ. ಆದ್ದರಿಂದ ಅರ್ಹತೆ ಪಡೆದವರನ್ನೆಲ್ಲ ಕಳಿಸಲೇಬೇಕು'' ಇದು ನಾರಾಯಣ್‌ಸಿಂಗರ ಹೇಳಿಕೆ. ಹಿಮಾಲಯಶಿಕ್ಷಣ ಪಡೆದು ಮರಳಿದ ನಮ್ಮ ಹುಡುಗರೆಲ್ಲರೂ ಶಕ್ತಿ ಘಟಕಗಳು. ಇವರು ತಮ್ಮ ಸಾಹಸ ಪ್ರದರ್ಶನದ ಕತೆಗಳನ್ನು ರಂಗು

ರೆಂಗಾಗಿ ವರ್ಣಿಸುತ್ತಿದ್ದಾಗ ಸೋಮಾರಿಗಳೂ, ನಿದ್ದೆಗಣ್ಣರೂ ಕಿವಿನಿಮಿರಿಸಿ ಆಲಿಸುತ್ತಿದ್ದರು. ಹಿಮಾಲಯದ ಪ್ರಕೃತಿ ಸೌಂದರ್ಯ, ಹಿಮಗಡ್ಡೆಗಳ ಚಿರನೂತನ ರುದ್ರ ಗಾಂಭೀರ್ಯ, ಆ ಪ್ರಪಾತಗಳ ಗಭೀರತೆ, ಅವನ್ನು ಇಳಿದು ಏರಿ ಎತ್ತರಕ್ಕೆ ಹೋಗುವ ಸಾಹಸ, ಪ್ರಪಾತಗಳನ್ನು ನೈಲಾನ್ ಹಗ್ಗಗಳ ಸಹಾಯದಿಂದ ಜಿಗಿದಿಳಿಯುವ ರೋಮಾಂಚಕ ಅನುಭವ—ಒಂದೇ, ಎರಡೇ—ಹಿಮಾಲಯ ಎಷ್ಟು ಎತ್ತರವೋ ಅಲ್ಲಿಯ ಅನುಭವವೂ ಅಷ್ಟೇ. "ನಾನೆಂದು ಅಲ್ಲಿಗೆ ಹೋಗುವುದು ?" ಈ ಪ್ರಶ್ನೆ ಪ್ರತಿಯೊಬ್ಬನ ಮುಂದೆಯೂ ಎದ್ದು ನಿಲ್ಲುತ್ತಿತ್ತು. ಆದರೆ ನಮಗೆ ದೊರೆಯುತ್ತಿದ್ದ ಸ್ಥಾನಗಳು ವರ್ಷವೊಂದಕ್ಕೆ ಮೂರು ಅಥವಾ ನಾಲ್ಕು. ಹೋಗಲು ಬಯಸುತ್ತಿದ್ದವರ ಸಂಖ್ಯೆ ನೂರಾರು. ಏನೇ ಇರಲಿ. ಸಾಹಸ ಪ್ರವೃತ್ತಿ ನಮ್ಮ ಹುಡುಗರಲ್ಲಿ ಭದ್ರವಾಗಿ ಬೇರೂರಿತ್ತು. ಪರ್ವತಾರೋಹಣ ಗಿರಿಲಂಘನ ಮಾಡಲು ಉತ್ಸುಕರಾದರು !

ಇದೇ ವೇಳೆ ನಮ್ಮ ಬೆಟಾಲಿಯನ್ನಿನ ಶಿಕ್ಷಣಕ್ರಮದಲ್ಲಿ ಒಂದು ಮಾರ್ಪಾಡನ್ನು ಮಾಡಬೇಕೆಂದು ಬಯಸಿದೆವು. ಮಾಮೂಲು ಶಿಕ್ಷಣ ನಮ್ಮ ಎಂಟು ಕಂಪನಿಗಳಿಗೂ ಈ ಹಿಂದೆ ನೀಡುತ್ತಿದ್ದಂತೆಯೇ ಕೊಡಬೇಕು ; ಜೊತೆಗೆ ಆರಿಸಿದ ಒಂದಿಷ್ಟು ಮಂದಿಗೆ ಪೌರ ಶಿಕ್ಷಣ ಮುಂತಾದ ಅಧಿಕ ಶಿಕ್ಷಣ ನೀಡಬೇಕು ; ಈ ಮೂಲಕ ಆಸಕ್ತರ ಒಂದು ಸ್ಪೆಶಲ್ ಕಂಪೆನಿಯನ್ನು ತರಬೇತಿಸಬೇಕು—ಎಂದು ಮುಂತಾಗಿ ನಿರ್ಧರಿಸಿದೆವು. ಸ್ಪೆಶಲ್ ಕಂಪನಿಯ ನಾಯಕತ್ವವನ್ನು ನಾನು ವಹಿಸಬೇಕೆಂದು ನಾರಾಯಣ್‌ಸಿಂಗ್ ಬಯಸಿದರು. ಒಪ್ಪಿದೆ. ಸರ್ಟಿಯಿಂದ ಆಗ ತಾನೇ ಮರಳಿದ್ದೆನಷ್ಟೆ. ಇನ್ನೂ ಒಂದು ಕಾರಣವಿತ್ತು. ಕಡ್ಡಾಯದ ಎನ್‌ಸಿಸಿ ಶಿಕ್ಷಣ ಅಂದು ಸಾಮೂಹಿಕವಾಗಿತ್ತು. ಕಡ್ಡಾಯದ ಗುಡಿಯಲ್ಲಿ ಮೊದಲ ಬಲಿ ಕುತೂಹಲ. ಮನುಷ್ಯ ಅಲ್ಲಿ ಯಾಂತ್ರಿಕತೆಯ ನೀರಸ ಕ್ರಿಯೆ ನಡೆಸಲು ತೊಡಗುತ್ತಾನೆ. ಪೆರೇಡಿನಲ್ಲಿ ನನ್ನ ಅನುಭವ ಇದು—ಕುತೂಹಲವಿರುವ ಕೆಲವರನ್ನು ಇಲ್ಲದಿರುವ ಹಲವರ ಜತೆಗೆ ಸೇರಿಸಿ ಶಿಕ್ಷಣವೀಯುವಾಗ ಇಲ್ಲದವರು ಇದ್ದವರನ್ನು ಕೆಡಿಸುತ್ತಿದ್ದ ಸಂದರ್ಭಗಳೇ ಹೆಚ್ಚು. ಆದ್ದರಿಂದ ಕುತೂಹಲಿಗಳಿಗೆ ಪ್ರತ್ಯೇಕವಾದ ಕಡ್ಡಾಯವಲ್ಲದ ವಿಶೇಷ ಶಿಕ್ಷಣವೀಯಲು ಒಂದು ಸ್ಪೆಶಲ್ ಕಂಪೆನಿ ತೊಡಗುವುದು ನನಗೆ ಪ್ರಿಯವಾಯಿತು. ಸ್ವಂತ ಇಚ್ಛೆಯಿಂದ ಬರುವವರಿಗೆ ಮಾತ್ರ ಇಲ್ಲಿ ಪ್ರವೇಶ. ಇಲ್ಲಿಯ ಶಿಕ್ಷಣವೂ ಹೊಸತು. ಹುಡುಗರ ಸಹಜ ಸಾಹಸ ಪ್ರವೃತ್ತಿಯನ್ನು ವಿಕಾಸಗೊಳಿಸಲು ಪ್ರೇರಕವಾಗುವಂಥದು.

ಪ್ರತಿ ಆದಿತ್ಯವಾರ ಬೆಳಗ್ಗೆ ಪೆರೇಡು. ಹುಡುಗರೇನೋ ಬಂದರು. ಆದರೆ ಅವರಿಗೆ ಕುತೂಹಲಜನಕ ನೂತನ ಉಪಯುಕ್ತ ಶಿಕ್ಷಣ ಏನನ್ನು ನೀಡುವುದು ? ಇದು ನಮ್ಮ ಮುಂದಿದ್ದ ದೊಡ್ಡ ಪ್ರಶ್ನೆ. ಬೇಡ ಎಂದು ಅವರನ್ನು ನಿವಾರಿಸುವುದು ಬಲು ಸುಲಭ ; ಬೇಕು ಎಂದು ನಡೆಸುವುದು ಪ್ರಯಾಸಕರ. ಸ್ವಲ್ಪ ಕಾಲ ಪೌರ ರಕ್ಷಣೆಯನ್ನು ಬೋಧಿಸಿದೆ. ಆದರೇಕೋ ಜೀವಸ್ಪಂದನವಾಗಲಿಲ್ಲ. ಒಂದೆರಡು ವಾರ ಬಯಲು ಗುಡ್ಡ ಅಲೆದು ಬಂದೆವು. ಆದರೆ ಎಲ್ಲೆಲ್ಲಿಯೂ ಜನಪ್ರವಾಹ, ಕೊಳಕು ಹರಿಯುತ್ತಿದ್ದ ನಗರದಲ್ಲಿ ಇದೂ ರುಚಿಸಲಿಲ್ಲ. ಕ್ರಮರಹಿತ ಅಲೆದಾಟ ದಣಿವಿಗೆ ಆಹ್ವಾನ. ಇಷ್ಟಾಗುವಾಗ ಆಗಸ್ಟ್ (೧೯೬೭) ಉರುಳುತ್ತಿತ್ತು. ನಮ್ಮ ಹಿರಿಯ ಹುಡುಗರು ಪಿಂಟೋ, ಬಾಬಾ, ಶ್ರೀಧರನ್

ಮೊದಲಾದವರು ಒಂದು ಬೆಳಗ್ಗೆ ನನ್ನನ್ನು ಕಂಡು ಸೂಚಿಸಿದರು "ನಮ್ಮ ಸ್ಪೆಶಲ್ ಕಂಪೆನಿ ಶಿಲಾರೋಹಣ, ಶಿಲಾವರೋಹಣ ಕಲೆಯನ್ನೇಕೆ ಕಲಿಸಬಾರದು ?"

ಇಂಗ್ಲಿಷಿನಲ್ಲಿ ಮಾತಾಡಿದ ಅವರು ಬಳಸಿದ ಪದಗಳು ದೊಡ್ಡವು rock-climbing, rock-rappling. ಸರಳ ಕನ್ನಡದಲ್ಲಿ ಬಂಡೆ ಏರುವುದು, ಬಂಡೆ ಒದ್ದು ಇಳಿಯುವುದು. ಬಂಡೆಯೂರಿನವ ನಾನು. ದಿನಬೆಳಗಾದರೆ ಎರಡು ಬಂಡೆ ಇಳಿಯದೇ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವಂತಿರಲಿಲ್ಲ. ಅಷ್ಟೇಕೆ ಮನೆಗೆ ನೀರು ತರಬೇಕಾದರೆ ಬಂಡೆಯ ಬುಡದ ಹೊಂಡಕ್ಕೆ ಇಳಿಯಲೇಬೇಕಾಗಿತ್ತು.

"ಅದೂ ಒಂದು ಕಲೆಯೇ ?" ಎಂದು ಸ್ವಾಭಾವಿಕವಾದ ಆಶ್ಚರ್ಯದಿಂದ ನಾನು ಕೇಳಿದೆ.

"ಈ ಆದಿತ್ಯವಾರ ಪ್ರಯತ್ನಿಸೋಣ ಸಾರ್. ನಾವು ಕೆಲವರು ಹಿಮಾಲಯದಲ್ಲಿ ಕಲಿತವರಿದ್ದೇವೆ. ನಮಗೂ ಒಂದು ರಿಫ್ರೆಷರ್ ಆದ ಹಾಗಾಯಿತು" ಎಂದು ಪಿಂಟೋ ಹೇಳಿದ.

"ಯಾವುದನ್ನೂ ನಾವು ಕ್ರಮಬದ್ಧವಾಗಿ ಮಾಡಬೇಕು, ಆದ್ದರಿಂದ ಯಾರಿಗೆಲ್ಲ ಈ ವಿಚಾರದಲ್ಲಿ ಕುತೂಹಲವಿದೆಯೋ ಅವರೆಲ್ಲ ನಾಳೆ ಸಾಯಂಕಾಲ ಕಾಲೇಜಿನ ಹಿಂದಿರುವ ಕಲ್ಲು ಬಂಡೆಗಳ ಮೇಲೆ ಸಭೆ ಸೇರಬೇಕು. ಮುಂದಿನ ಮಾರ್ಗ ಯೋಚಿಸೋಣ" ಎಂದೆ.

ಮರುದಿವಸ ಸಾಯಂಕಾಲ ಕಲ್ಲುಬಂಡೆಗಳ ಮೇಲೆ ಕುಳಿತವರು ನಾವೊಂದಿಪ್ಪತ್ತು ಜನ. ಮಾತುಭಾರಿ ಪಿಂಟೋ ಶಿಲಾರೋಹಣವನ್ನು ಕುರಿತು ಮಾತನಾಡಿದ. ಉಳಿದವರಿಗೆ ಅರ್ಥವಾಯಿತೋ ಇಲ್ಲವೋ, ನನಗಂತೂ ಆಗಲಿಲ್ಲ, ತಲೆದೂಗಿದರು. ಏನಾದರೂ ಮಾಡಲೇಬೇಕೆಂಬ ಉತ್ಸಾಹದ ಆವೇಶದಲ್ಲಿ ಅವರಿಗೆ ಹಿಮಾಲಯ ಪರ್ವತವೊಂದೇ ಎಲ್ಲ ಮಾತಿನ ಹಿನ್ನೆಲೆಯಲ್ಲಿಯೂ ಕಾಣುತ್ತಿತ್ತು. ಅಂತೂ ಮುಂದಿನ ಆದಿತ್ಯವಾರದಿಂದ ನಾವು ಶಿಲಾರೋಹಣ ಸಾಹಸ ಕಾರ್ಯ ತೊಡಗುವುದೆಂದು ನಿರ್ಧರಿಸಿದೆವು. "ಹಾಗಾದರೆ" ಎಂದು ನಾನು ಸಮಾರೋಪ ಭಾಷಣ ಬಿಗಿದೆ, "ಮುಂದಿನ ಆದಿತ್ಯವಾರ ಬೆಳಗ್ಗೆ ೬-೪೫ ಗಂಟೆಗೆ ನಾವಿಲ್ಲಿ ಸೇರುವುದು, ಮುಂದುವರಿಯುವುದು. ಪಿಂಟೋ, ಬಾಬಾ, ಶ್ರೀಧರನ್ ಮುಂದಾಳುಗಳು. ಉಳಿದವರು ಅವರ ಅನುಯಾಯಿಗಳು. ನಾನು ನಿಮ್ಮೆಲ್ಲರ ಹಿಂದೆ ; ಮುಂದೆ ಅಲ್ಲ. ಇಲ್ಲಿ ಸೇರಿರುವ ನಾವೆಲ್ಲರೂ ಸ್ವಯಂಸ್ಫೂರ್ತಿಯಿಂದ ಬಂದವರು ಎಂದು ಚೆನ್ನಾಗಿ ನೆನಪಿರಲಿ. ಆದುದರಿಂದ ನಮ್ಮ ಶಿಸ್ತು, ವರ್ತನೆ ಸದಾ ಎ ಒನ್ ಆಗಿರಬೇಕು."

ಇದಕ್ಕೆ ಮೊದಲು ನಾರಾಯಣ್‌ಸಿಂಗರವರಿಗೆ ಮೇಲಿಂದ ಮೇಲೆ ಇದರ ವಿಚಾರ ತಿಳಿಸಿದ್ದೆ. "ಬಹಳ ಸಂತೋಷ. ನನ್ನ ಬೆಂಬಲ ಸದಾ ಇದೆ. ಆದರೆ ಸುವ್ಯವಸ್ಥಿತವಾಗಿ ಮುಂದುವರಿಯಬೇಕು. ವೈಮಾನಿಕ ತಿಳಿಯದ ಎತ್ತರದಲ್ಲಿ ಹಾರುವಾಗ ಹೇಗೆ ಹೋಗುತ್ತಾನೆ ? ಪ್ರತಿ ಅಂಗುಲದಲ್ಲಿಯೂ ಹೊಸ ರೋಮಾಂಚಕ ಅನುಭವವಿರುವುದರ ಜತೆಗೆ ಅಪಾಯದ ತೀವ್ರತೆಯೂ ಏರಿರುವುದು ಎಂದು ತಿಳಿದು ಮುಂದೆ ನುಗ್ಗುತ್ತಾನೆ. ನಾವು ಹೊಸದಾರಿ ತುಳಿಯುವಾಗ, ಎನ್‌ಸಿಸಿಯಲ್ಲಿ ಹೊಸ ಸಂಪ್ರದಾಯ ಸ್ಥಾಪಿಸುವಾಗ ನಮ್ಮ ಒಂದು ಪುಟ್ಟ ತಪ್ಪು ಕೂಡ ಇಡೀ ಉದ್ದೇಶವನ್ನು ನಾಶಮಾಡಿಬಿಡಬಹುದು. ಮಾತ್ರವಲ್ಲ, ಭವಿಷ್ಯದಲ್ಲಿ ಬೇರೆ ಯಾರೂ ಇಂಥ ಸಾಹಸಕ್ಕೆ ಪುನಃ ತೊಡಗದಂತೆ ದೊಡ್ಡ

ಆತಂಕವಾಗಿಯೂ ಪರಿಣಮಿಸಬಹುದು" ಎಂದು ಎಚ್ಚರಿಕೆಯ ಮಾತಾಡಿದ್ದರು.

ಸಾಹಸಗಳ ಮೊತ್ತವೇ ಅವರ ಜೀವನ. ಐವತ್ತೈದು ಪ್ರಾಯ ಮೀರಿದ್ದ ಈ ದೀರ್ಘ (ಆಗ ನನ್ನ ವಯಸ್ಸು ನಲವತ್ತು) ಆಜಾನುಬಾಹು ವ್ಯಕ್ತಿಯ ಪ್ರತಿಯೊಂದು ಕಣವೂ ಮಿಲಿಟರಿಯ ಶಿಕ್ಷಣ ರಂಗದಲ್ಲಿ, ಯುದ್ಧ ಕ್ಷೇತ್ರದಲ್ಲಿ, ಹಿಮಾಲಯದ ಎತ್ತರದಲ್ಲಿ, ಬರ್ಮಾ ಮಲಯಗಳ ದಟ್ಟ ಕಾಡುಗಳಲ್ಲಿ ಪ್ರದರ್ಶಿಸಿದ ದೈಹಿಕ ಮಾನಸಿಕ ಸಾಹಸ ಕಾರ್ಯಗಳಿಗೆ ಸಾಕ್ಷಿಯಾಗಿತ್ತು. ಎರಡನೆಯ ಮಹಾಯುದ್ಧ, ಅನಂತರ ಹೈದರಾಬಾದು ಪೊಲೀಸ್ ಕ್ರಮ ಇವುಗಳಲ್ಲಿ ಭಾಗವಹಿಸಿದವರಿವರು. ಹೊಸಪೇಟೆಯಿಂದ ಮುಂದೆ ತುಂಗಭದ್ರೆಗೆ ಇರುವ ರೈಲ್ವೇ ಸೇತುವೆಯನ್ನು ಇವರು ಪೊಲೀಸ್ ಕ್ರಮದ ಸಂದರ್ಭದಲ್ಲಿ ರಕ್ಷಿಸಿದ ಸಾಹಸ ಕೇಳಿದವರಿಗೆ ಮರೆಯಲಾಗದ ವಿದ್ಯುದನುಭವ. "ಸೈನಿಕರಾದರೆ ಅದೇ ಅವರ ವೃತ್ತಿ. ಆದ್ದರಿಂದ ಎಷ್ಟೋ ಸಂದರ್ಭಗಳಲ್ಲಿ ಜನನಷ್ಟವಾದರೂ ನಾವು ಗುರಿ ಸಾಧಿಸಲೇಬೇಕು ಎಂಬ ನಿರ್ಧಾರ ತೆಗೆದುಕೊಳ್ಳಬೇಕಾಗುವುದು. ಕ್ಯಾಡೆಟುಗಳು ಸೈನಿಕರಲ್ಲ. ಇಲ್ಲಿ ಸಾಹಸ ಪ್ರದರ್ಶನವಾಗಬೇಕು. ಆದರೆ ಯಾವ ಅಪಾಯವನ್ನೂ ನಾವು ಎದುರಿಸಲು ತಯಾರಿಲ್ಲ" ಇದು ಅವರ ತರ್ಕಸರಣಿ.

ಕಲ್ಲು ಕೊನರಿತು

ಮುಂದಿನ ಆದಿತ್ಯವಾರ, ಬೆಳಗ್ಗಿನ ೬–೪೫ ಗಂಟೆ. ನಾವೆಲ್ಲರೂ, ಸುಮಾರು ಹದಿನೈದು ಮಂದಿ, ಕಾಲೇಜಿನ ಹಿಂಬದಿಯಲ್ಲಿ ಸೇರಿದೆವು. ಮಳೆಗಾಳಿ ಬೀಸಿ ನಮಗೆ ನವಚೇತನ ಊಡುತ್ತಿತ್ತು. ಆದರೆ ೭ ಗಂಟೆಯಾದರೂ ನಾಯಕತ್ರಯರ ಸುಳಿವೇ ಇಲ್ಲ. ಕನ್ನಡಿಗರು ಆರಂಭಶೂರರೇ ? ಆರಂಭವೇ ಆಗಲಿಲ್ಲವಲ್ಲ. ಕಾರಣವನ್ನು ಊಹಿಸಲು ನನಗೆ ಕಷ್ಟ ಆಗಲಿಲ್ಲ. ನಮ್ಮ ಹಿಂದಿನ ಕಲ್ಲ ಮೇಲಿನ ಸಭೆಯಾದ ಮರುದಿವಸ ಹಿಮಾಲಯದ ಪರ್ವತಾರೋಹಣ ಶಿಬಿರ ಸೇರಲು ಒಬ್ಬ ಕ್ಯಾಡೆಟನ್ನು ಆರಿಸಿ ಕಳಿಸಬೇಕೆಂದು ನನಗೆ ಆಜ್ಞೆ ಬಂದಿತು. ಶ್ರೀಧರನ್ ತನ್ನನ್ನು ಆರಿಸಬೇಕೆಂದು ಕೋರಿಕೆ ಸಲ್ಲಿಸಿದ್ದ. ಆದರೆ ನಾನವನಿಗೆ ಸ್ಪಷ್ಟವಾಗಿ ನನ್ನ ನಿಲವನ್ನು ಹೇಳಿದ್ದೆ "ನೀನು ಬಿಎಸ್‌ಸಿ ಕೊನೆಯ ವರ್ಷದಲ್ಲಿದ್ದೀಯೆ. ತಿಂಗಳು ನಾಲ್ಕು ದಿನ ಪಾಠ ಬಿಟ್ಟು ಬಹುದೂರ ಹೋಗುವುದು ಶ್ರೇಯಸ್ಕರ ಅಲ್ಲ. ಅದೂ ಅಲ್ಲದೆ ಮುಂದಿನ ವರ್ಷ ನೀನು ನಮ್ಮೊಡನೆ ಇಲ್ಲದಿರುವುದರಿಂದ ಇಂಥ ವಿಶೇಷ ಅಪೂರ್ವ ಶಿಕ್ಷಣ ಒಬ್ಬ ಜೂನಿಯರ್ ಹುಡುಗನಿಗೆ ಕೊಡಿಸುವುದು ಸರಿಯೆಂದು ನಾನು ತಿಳಿದಿದ್ದೇನೆ." ಸ್ವಾಭಾವಿಕವಾಗಿಯೇ ಅವನಿಗೆ ಈ ವಾದ ಹಿತವಾಗಲಿಲ್ಲವೆಂದು ಅವನ ಮುಖಭಾವದಿಂದ ವ್ಯಕ್ತವಾಯಿತು. ಬಾಬಾ ಅವನ ಮಿತ್ರ. ಆದರೆ ಪಿಂಟೋನಿಗೇನಾಯಿತು ? ಏನೇ ಇರಲಿ, ನಾವು ಹಿರಿಯರು ತೆಗೆದುಕೊಂಡ ನಿರ್ಧಾರ ಬೆಟಾಲಿಯನ್ನಿನ ಅಧಿಕೃತ ನಿರ್ಧಾರ. ಆದರ ಗೌರವ ಆ ನಿರ್ಧಾರವನ್ನು ಕಾರ್ಯಗತಗೊಳಿಸುವುದರಲ್ಲಿದೆ. ಎಡರು ತೊಡರುಗಳನ್ನು ನಾವು ಎದುರಿಸದಿದ್ದರೆ ಇನ್ನಾರು ಎದುರಿಸುವವರು ? ಬಂದ ಹುಡುಗರನ್ನು ಕಟ್ಟಿಕೊಂಡು ನಾನೇ ಅಲೆದೆ. ಶಿಲಾರೋಹಣ, ಅವರೋಹಣಗಳನ್ನು ಕುರಿತು ಒಂದು ಕಿರುಹೊತ್ತಗೆಯನ್ನು ಓದಿಕೊಂಡು ಹೋಗಿದ್ದುದು ಸ್ವಲ್ಪ ಪ್ರಯೋಜನ ನೀಡಿತು. ಲಾಲ್‌ಬಾಗಿನ ಹೊರವಲಯದ ಕಡಿದಾದ ಬಂಡೆ

ಗಳನ್ನು ಕ್ರಮಬದ್ಧವಾಗಿ ಏರಿ, ಇಳಿದು—ಅದಕ್ಕಿಂತ ಹೆಚ್ಚಾಗಿ ಕೈಕಾಲು ಮೈಗಳನ್ನು ಕಲ್ಲಿಗೆ ತರೆದುಕೊಂಡು—ಕಲ್ಲುಬಂಡೆ ಕಾಣುವಷ್ಟು ನುಣ್ಣಗಲ್ಲ, ಮೃದು ಖಂಡಿತ ಅಲ್ಲ ಎಂದು ಅರಿತುಕೊಂಡೆವು. ಗೆಲುವಿನ ಸೂಚನೆಯಿದ್ದ ಮರಳಿದೆವು.

ಸೋಮವಾರ ನಾನು ನಾಯಕತ್ರಯರನ್ನು ನೋಡಿದೆ. ಪಿಂಟೋನಿಗೆ ಬಹುಶಃ ಏಳಲು ತಡವಾಗಿರಬೇಕು. ಆದ್ದರಿಂದ ಬರದಿದ್ದುದಕ್ಕೆ ಸರಿಯಾದ ಕಾರಣ ಕೊಡದೇ "ಸಾರಿ ಸಾರ್. ಇನ್ನು ಮುಂದೆ ಹೀಗಾಗದು" ಎಂದ. ಅಂತೆಯೇ ನಡೆದುಕೊಂಡ. ಉಳಿದಿಬ್ಬರು "ನಮಗೇನೋ ಮನಸ್ಸಿಗೆ ನೋವಾಯಿತು, ಸಾರ್" ಎಂದು ಅರೆಹಲ್ಲು ಗೀರಿದರು. ನಾನು ಬಿರುಸಾಗಿಯೇ ಅಂದೆ "೧೨ನೆಯ ಮೈಸೂರು ನಮಗೆಲ್ಲರಿಗಿಂತಲೂ ದೊಡ್ಡದು ಎಂದು ನಾವೆಲ್ಲರೂ ತಿಳಿದಿರತಕ್ಕದ್ದು. ಅದರ ನಿರ್ಧಾರ ಕಾರ್ಯಗತವಾಗಿಯೇ ಆಗುವುದು. ನಿಮ್ಮ ಕ್ರಮ ಸರಿಯಲ್ಲ."

ಮುಂದೆ ಎಂದೂ ಇಂಥ ಸನ್ನಿವೇಶ ಪುನರಾವರ್ತಿಸಲಿಲ್ಲ. ವಿದ್ಯಾರ್ಥಿಗಳೊಡನೆ ನಿಕಟ ಮತ್ತು ದೀರ್ಘಕಾಲದ ಸಂಪರ್ಕದಿಂದ ನಾನೊಂದು ವಿಚಾರ ತಿಳಿದುಕೊಂಡಿದ್ದೇನೆ—ನಮ್ಮ ಧ್ಯೇಯ ಧೋರಣೆಗಳು ನ್ಯಾಯಸಮ್ಮತವಾಗಿ, ಸ್ಪಷ್ಟವಾಗಿ ಇರಬೇಕು. ಅದರ ನಿರ್ವಹಣೆಯಲ್ಲಿ ಖಚಿತತೆ, ದೃಢತೆ ಇರಬೇಕು. ಆಗ ಸಮಸ್ಯೆಗಳು ವೈಯಕ್ತಿಕ ಒಲವು, ತಿರಸ್ಕಾರಗಳ ಸಮತಳಕ್ಕಿಂತ ಉನ್ನತ ಮಟ್ಟದಲ್ಲಿರುವ, ನಿಷ್ಪಕ್ಷಪಾತವಾಗಿ ಗುಣಾವಗುಣಗಳ ನಿಷ್ಕರ್ಷೆ ಮಾಡುವ ಉದಾತ್ತ ಸಮತಳಕ್ಕೆ ವರ್ಗಾಯಿಸಲ್ಪಡುವುವು. ಅಲ್ಲಿ ಪರಿಹಾರ ಸುಲಭ. ನಾವು ನಿರ್ಲಿಪ್ತರಾಗಿ ಉಳಿಯಬಹುದು.

ಮುಂದಿನ ಎರಡು ಮೂರು ಆದಿತ್ಯವಾರ ಮುಗಿಯುವಾಗ ನಮ್ಮ ಹುಡುಗರ ಸಂಖ್ಯೆ ಮೂವತ್ತಕ್ಕೇರಿತು. ಇನ್ನೂ ಬರುವವರಿದ್ದರು. ಆದರೆ ಕೂಟದಲ್ಲಿ ಶಿಸ್ತು ಕಾಪಾಡಿಕೊಳ್ಳುವ ಉದ್ದೇಶದಿಂದ ಉಳಿದವರನ್ನು ಸೇರಿಸಿಕೊಳ್ಳಲಿಲ್ಲ. "೧೨ನೆಯ ಮೈಸೂರಿನ ಟೈಮ್ ಎಂದರೆ ರೇಡಿಯೋ ಟೈಮ್" ಎಂಬುದು ಹುಡುಗರಿಗೆ ಈ ಅಲ್ಪಾವಧಿಯಲ್ಲಿ ಚೆನ್ನಾಗಿ ಮನವರಿಕೆಯಾಯಿತು. ಪ್ರತಿ ಆದಿತ್ಯವಾರ ಏಳು ಗಂಟೆಗೆ ನಾವು ಹೊರಡುತ್ತಿದ್ದುದು. ೧೫ ಮಿನಿಟು ಮೊದಲೇ ಕಾಲೇಜಿನ ಹಿಂದೆ ಸೇರಬೇಕಾಗಿತ್ತು. ಈ ೧೫ ಮಿನಿಟಿನ ಅಂತರ ಅನಿವಾರ್ಯ ಕಾರಣಗಳಿಂದ ತಡವಾಗಿ ಬರುವವರಿಗಾಗಿ ಮತ್ತು ನಮ್ಮ ಕಾರ್ಯಕ್ರಮ ಅಳವಡಿಸಿಕೊಳ್ಳಲಿಕ್ಕಾಗಿ. ಏಳು ಗಂಟೆಗೆ ಸರಿಯಾಗಿ ನಮ್ಮ ನಡಿಗೆ ತೊಡಗಿಯೇಬಿಡುತ್ತಿತ್ತು. ತಡವಾಗಿ ಬಂದವರಿಗೆ ಒಂದೇ ಉತ್ತರ "ಸಾರಿ ನೀವು ಮುಂದಿನ ವಾರ ಬನ್ನಿ."

"ಸೈಕಲ್ ಪಂಕ್ಚರ್ ಆಯಿತು ಸಾರ್, ಬಸ್ ದೊರೆಯಲಿಲ್ಲ, ಸಾರ್..."

"ನೀವು ಯಾಕೆ ತಡವಾಗಿ ಬಂದಿರಿ ಎಂಬುದನ್ನು ಸಮರ್ಥಿಸಲು ನೂರೆಂಟು ನಿಜ ಕಾರಣಗಳಿರಬಹುದು. ಇನ್ನೂ ಅಷ್ಟು ಕಾರಣಗಳನ್ನು ಸೃಷ್ಟಿಸಲೂ ನೀವು ಶಕ್ತರು ಎಂದು ನನಗೆ ತಿಳಿದಿದೆ. ಆದರೆ ಅವೆಲ್ಲವನ್ನೂ ನಿವಾರಿಸಿ ಕ್ಲುಪ್ತ ಸಮಯದಲ್ಲಿ ಬರುವುದರಲ್ಲಿಯೇ ನಿಮ್ಮ ಹಿರಿಮೆಯಿದೆ. ಮುಂದಿನವಾರ ಸರಿಯಾಗಿ ಬನ್ನಿ. ತಡವಾದರೆ ಬರಲೇ ಬೇಡಿ."

ಕಾಲ ನಿಷ್ಠೆಯ ಸಮಸ್ಯೆ ಮುಂದೆಂದೂ ನಮಗೆದುರಾಗಲಿಲ್ಲ. ಕಾಲ ನಿಷ್ಠೆಯಲ್ಲಿ ಎರಡು ವಿಚಾರ ಉಂಟು—ಒಂದು ಅದರಿಂದ ಆತ್ಮ ಸಂಸ್ಕಾರವಾಗುವುದು; ಇನ್ನೊಂದು ಅದು ನಾವು ಇತರರಿಗೆ, ಅವರ ಸಂವೇದನಶೀಲತೆಗೆ ಸಲ್ಲಿಸುವ ಗೌರವ. ನಮ್ಮ ಆಂತರಂಗಿಕ

ಸಂಸ್ಕೃತಿಯ ಬಾಹ್ಯರೂಪ. ಜೀವನದ ಎಲ್ಲ ರಂಗಗಳಲ್ಲಿಯೂ ಇದು ಸ್ವಾಭಾವಿಕವಾಗಿಯೇ ಬರುವಂತಾಗಬೇಕು. ನಮ್ಮ ಶಿಕ್ಷಣದ ಒಂದು ಉದ್ದೇಶ ಕಾಲನಿಷ್ಠೆಯ ಪ್ರಜ್ಞೆ ಹುಡುಗರಿಗೆ ಬರುವಂತೆ ಮಾಡುವುದು. ಪೆರೇಡ್ ಗ್ರೌಂಡಿನಲ್ಲಿ ಈ ವಿಚಾರದಲ್ಲಿ ನಾವು ಕರುಣಾವಂತರಾಗುವುದು ಕರುಣೆಯ ದುರುಪಯೋಗಮಾಡಿದಂತೆ. ಆದರಿಂದ ಕ್ಯಾಡೆಟುಗಳ ಭವಿಷ್ಯವನ್ನು ಅಷ್ಟು ಹಾಳುಮಾಡಿದಂತೆ.

೧೨ನೆಯ ಮೈಸೂರಿನ ಶಿಲಾರೋಹಿಗಳು

ಲಕ್ಷ್ಮೀನಾರಾಯಣ ನನ್ನ ವಿದ್ಯಾರ್ಥಿ, ಕ್ಯಾಡೆಟ್. ಒರತೆ ಉಗಮಿಸುವ ಕಾಲದಲ್ಲಿ ಅವನು ಹಿಮಾಲಯದ ಬರ್ಫಪರ್ವತಗಳ ಮೇಲೆ ಏರಿ ಏರಿ ಹೋಗುತ್ತಿದ್ದ, ಅಲ್ಲಿ ಶಿಕ್ಷಣ ಪಡೆಯುತ್ತಿದ್ದ. ಸೆಪ್ಟೆಂಬರ್ ತರುಣದಲ್ಲಿ ಅವನು ಅಲ್ಲಿಂದ ಯಶಸ್ವಿಯಾಗಿ ಮರಳಿ ಬಂದ. ಅವನಿಗೆ ಅತ್ಯುಚ್ಚ ಪ್ರಶಸ್ತಿ, ದರ್ಜೆ ಬಂದಿದ್ದುವು. ಹಿಂದೆ ಯಾವ ಕ್ಯಾಡೆಟ್ಟೂ ಸಾಧಿಸದ ವಿಕ್ರಮ ಅವನು ಸಾಧಿಸಿ ತೇನ್‌ಸಿಂಗ್ ಮೊದಲಾದವರಿಂದ ಮೆಚ್ಚುಗೆ ಪತ್ರ ಪಡೆದು ಮರಳಿದ್ದ. ಅವನು ಬಂದಂದಿನಿಂದ ನಮ್ಮ ಶಿಲಾರೋಹಿಗಳ ಕೂಟಕ್ಕೆ ಒಂದು ಸ್ಪಷ್ಟ ಆಕಾರ ಧೋರಣೆ ಬಂದುವು. ಲಕ್ಷ್ಮಿ ಮರಳಿದ ಪ್ರಥಮ ಆದಿತ್ಯವಾರ ನಾವು ಆರೇಳು ಮೈಲಿ ದೂರ ಕಲ್ಲುಬಂಡೆಗಳನ್ನರಸಿ ನಡೆಯುತ್ತ ಹೋದೆವು. ಹೆಬ್ಬಾಳದ ಸಮೀಪದಲ್ಲಿ ಒಂದು ದೇವರ ಗುಡಿಯಿದೆ. ಆದರ ಆವರಣದಲ್ಲಿರುವ ಕಲ್ಲುಬಂಡೆ ನಮ್ಮ ಶಿಕ್ಷಣಕ್ಕೆ ಸರಿಯಾಗಿ ಕಡೆದಂತಿತ್ತು. ೨೦ ಅಡಿ ಎತ್ತರದ ಕಡಿದಾದ ಕಲ್ಲು. ಅದನ್ನು ನೆಟ್ಟಗೆ ಏರುವುದು ಸಾಧ್ಯವೇ ಇಲ್ಲ ಎಂದು ನಮಗೆ ತೋರಿತು. ಆದರೆ ಲಕ್ಷ್ಮಿ ಮಂಗ ಏರುವಷ್ಟು ಸುಲಭವಾಗಿ ಹಗುರವಾಗಿ ಅದನ್ನು ಏರಿದ. ಅಷ್ಟೇ ಸುಲಭವಾಗಿ ಅವನು ಅಲ್ಲಿಂದ ಇಳಿದೂಬಿಟ್ಟ. ಮುಂದೆ ಕಲ್ಲು ಹತ್ತುವ ಕಲೆಯನ್ನು ಹೆಜ್ಜೆ ಹೆಜ್ಜೆಯಾಗಿ ವಿವರಿಸತೊಡಗಿದ. "ಕಲ್ಲುಗಳಲ್ಲಿ ಎರಡೇ ವಿಧ—ಹತ್ತಿರುವ ಕಲ್ಲು, ಹತ್ತಿರದ ಕಲ್ಲು. ಹತ್ತಲಾಗದ ಕಲ್ಲೆಂಬುದು ಇಲ್ಲ. ಕಲ್ಲುಗಳು ನಿಸರ್ಗದಲ್ಲಿ ಹಲವಾರು ಬಗೆಯಲ್ಲಿ ರೂಪುಗೊಂಡಿರುವುವು. ಅವು ನಮ್ಮ ಸೌಕರ್ಯಕ್ಕನುಗುಣವಾಗಿ ನಿರ್ಮಾಣವಾಗಿರುವುದಿಲ್ಲ. ಆದ್ದರಿಂದ ನಾವು ಹತ್ತಬೇಕಾದ ಕಲ್ಲಿನ ಸೂಕ್ಷ್ಮಾವಲೋಕನ ಬಲು ಆಗತ್ಯ. ಕಲ್ಲಿನ ಪ್ರತಿ ಗೀರು, ಬಿರುಕು, ಉಬ್ಬು, ತಗ್ಗು ನಮಗೆ ಒಂದೊಂದು ಆರ್ಥ ನೀಡುವುದು. ಅದನ್ನು ಅನುಸರಿಸಿ ಹತ್ತುವ ಮತ್ತು ಇಳಿಯುವ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು." ಇದು ಅವನು ಕಲಿಸಿದ ಪ್ರಥಮ ಪಾಠ.

ಈ ಸಿದ್ಧಾಂತದ ಪ್ರಕಾರ ಆ ಕಲ್ಲನ್ನು ಅವನು ವಿವರಿಸಿ, ನಿಧಾನವಾಗಿ ಹತ್ತಿ ಮೇಲೆ ಹೋಗಿ ಇತರರನ್ನೂ ಹತ್ತುವಂತೆ ಹುರಿದುಂಬಿಸಿ ಒಂದು ಹೊಸ ದೃಷ್ಟಿ ನಮಗಿತ್ತ. ಹಲವಾರು ಹುಡುಗರು ತುದಿಗೆ ನೆಗೆದರು. ಅವರ ಅಭಿಮಾನಕ್ಕೆ ಪಾರವೇ ಇಲ್ಲ. ಆಗದಿದ್ದವರು, ಸ್ಥೂಲಕಾಯರು, ಪುನಃ ಪುನಃ ಮೇಲೇರಿ ಜಾರಿದವರು ಕಲ್ಲಿನಲ್ಲಿಯೇ ದೋಷ ಹುಡುಕತೊಡಗಿದರು. ಆ ದಿನ ನಮ್ಮ ಶಿಕ್ಷಣ ತುಂಬ ಯಶಸ್ವಿಯಾಯಿತು. ನಿಜವಾಗಿಯೂ ಶಿಲಾರೋಹಿಗಳ ಕೂಟವಾಯಿತು. ಬಳಸುದಾರಿಗಾಗಿ ಅಥವಾ ಏಣಿಯಿಟ್ಟು ಬಂಡೆ ತುದಿಗೇರಿದವರಿಗೆ ಅಥವಾ ನೆರಳಿನಲ್ಲಿ ಆರಾಮವಾಗಿ ಒರಗಿ "ಕಲ್ಲೇರುವು

ದೇಕೆ? ಅದರಲ್ಲಿಯೂ ಒಂದು ಆಟವಿದೆಯೇ?" ಎನ್ನುವ ನಿರಾಶಾವಾದಿಗಳಿಗೆ, ನಿಷ್ಕ್ರಿಯಾವಂತರಿಗೆ "ದೇವರೇ! ಅವರಿಗೆ ತಾವೇನನ್ನುತ್ತೇವೆ ಎಂಬುದರ ಪರಿವೆಯೇ ಇಲ್ಲ" ಎನ್ನಬೇಕಾಗುತ್ತದೆ. ನಮ್ಮ ಯಾವ ಆಟವಾದರೂ ಇಷ್ಟೇ ಅಲ್ಲವೇ? ಕ್ರಿಕೆಟ್ ಆಡದಿದ್ದರೆ ನೋಡದಿದ್ದರೆ ಏನು? ಈಸದಿದ್ದರೆ ಏನು? ನಾವು ಸಾಯುತ್ತೇವೆಯೇ? ಸಾಹಸಭಾಗಿತ್ವದಿಂದ ಲಭಿಸುವ ಆತ್ಮತೃಪ್ತಿ, ಆತ್ಮವಿಶ್ವಾಸವೇ ಅದರ ಫಲ. ಪರೋಕ್ಷವಾಗಿ ಅದು ಜೀವನದ ಇತರ ರಂಗಗಳಲ್ಲಿಯೂ ಸಹಾಯಕವಾಗುವುದು.

ಮುಂದಿನ ವಾರ ಲಕ್ಷ್ಮಿ ಸೂಚಿಸಿದ "ನಮಗೆ ಕಡಿದಾದ ಆಳವಾದ ಬಂಡೆಯನ್ನು ಒದ್ದು ಜಿಗಿಯಲು ಅಥವಾ rapple ಮಾಡಲು ನೈಲಾನ್ ಹಗ್ಗ ಮತ್ತು ಇತರ ಹಲವಾರು ಸಾಧನಗಳು ಬೇಕು. ನೀವು ತರಿಸಿಕೊಡಬೇಕು, ಸಾರ್."

ಬೆಂಗಳೂರಿನಲ್ಲೆಲ್ಲಿಯೂ ಶಿಲಾರೋಹರಣ, ಅವರೋಹಣಗಳಿಗಾಗಿಯೇ ತಯಾರಾದ ವಿಶೇಷ ತರದ ನೈಲಾನ್ ಹಗ್ಗ ದೊರೆಯಲಿಲ್ಲ. ತಾತ್ಕಾಲಿಕ ಉಪಯೋಗಕ್ಕೆಂದು ದಪ್ಪದ ಹತ್ತಿಯ ಹಗ್ಗಗಳನ್ನು ಕೊಂಡುಕೊಂಡೆವು. ಹೆಬ್ಬಾಳದಿಂದ ಮತ್ತೂ ಮುಂದೆ ಇರುವ ಮಿಲಿಟರಿ ಫಾರ್ಮಿನ ಬಳಿ ಒಂದು ದೊಡ್ಡ ಬಂಡೆಯಿದೆ. ಎಂ. ವಿಶ್ವೇಶ್ವರಯ್ಯ ಪ್ರತಿ ಸಾಯಂಕಾಲ ಈ ಬಂಡೆಯವರೆಗೆ ನಡೆದು ಬಂದು ಅದರ ಮೇಲೆ ಸ್ವಲ್ಪ ಹೊತ್ತು ಕುಳಿತಿದ್ದು ಹಿಂತಿರುಗುತ್ತಿದ್ದರಂತೆ. ಪ್ರಾರಂಭಿಕರಿಗೆ ಶಿಕ್ಷಣವೀಯಲು ಇದು ಅತ್ಯುತ್ತಮ ಬಂಡೆ. ಇಲ್ಲಿ ಪ್ರತಿ ಆದಿತ್ಯವಾರವೂ ನಾನಾ ನಮೂನೆಯ ರ್ಯಾಪ್ಲಿಂಗ್ (ಹಗ್ಗಗಳ ಸಹಾಯದಿಂದ ಬಂಡೆ ಇಳಿಯುವುದು) ಕ್ರಮಗಳನ್ನು ಅಭ್ಯಸಿಸಲು ತೊಡಗಿದೆವು.

ಬಂಡೆಜಿಗಿತ

ಬಂಡೆಯ ಆಳ ಎಷ್ಟಿಂಟೋ ಅದರ ಮೂರರಷ್ಟು ಉದ್ದದ ಒಂದು ವಿಧದ ನೈಲಾನ್ ಹಗ್ಗವೂ (ರ್ಯಾಪ್ಲಿಂಗ್ ಹಗ್ಗ ಎಂದು ಇದರ ಹೆಸರು), ಸುಮಾರು ಒಂದೂವರೆಯಷ್ಟು ಉದ್ದದ ಇನ್ನೊಂದು ವಿಧದ ನೇಯ್ಗೆಯ ನೈಲಾನ್ ಹಗ್ಗವೂ (ಬಿಲೇ ಹಗ್ಗ) ಅತಿ ಮುಖ್ಯ ಆವಶ್ಯಕತೆಗಳು. ಉಳಿದವು ಲೋಹದ ಕೊಣಿಕೆಗಳು (ಕೆರಾಬಿನಾರ್) ಹತ್ತಿಯ ಹಗ್ಗಗಳು (ಸ್ಲಿಂಗ್ಸ್—ಕೊನೆಯಿಲ್ಲದ ಸುರುಳಿಗಳು), ಕೈಗೆ ಗವಸುಗಳು, ಪಿಟನ್ಸ್ (ಲೋಹದ ತುಂಡುಗಳು, ಒಂದು ಬದಿಯಲ್ಲಿ ನೈಲಾನ್ ಹಗ್ಗ ಸರಿಯಲು ತೂತು ಇರುವುದು. ಇನ್ನೊಂದು ಬದಿ ಆಣಿಯಂತೆ ಚೂಪಾಗಿರುವುದು. ಬಂಡೆಯ ಬಿರುಕಿನೊಳಗೆ ಪಿಟನನ್ನು ಆಣಿಯಂತೆ ಹೊಡೆದು ಭದ್ರವಾಗಿ ನೆಲೆಗೊಳಿಸಬಹುದು ಹಲವಾರು ಪಿಟನುಗಳ ತೂತುಗಳಿಗಾಗಿ ಸರಿಸಿ ಕಟ್ಟಿದ ನೈಲಾನ್ ಹಗ್ಗ ಭದ್ರವಾಗಿರುವುದು), ಸುತ್ತಿಗೆಗಳು. ಇವು ಮುಖ್ಯ ಪರಿಕರಗಳು.

ನೈಲಾನ್ ಹಗ್ಗ ದೊರೆಯದಿದ್ದರೆ ಹತ್ತಿಯ ಹಗ್ಗವನ್ನು ಉಪಯೋಗಿಸಬಹುದು. ಆದರೆ ಇಲ್ಲಿ ಹಗ್ಗ ಕಡಿದುಹೋಗಿ ಜಿಗಿಯುತ್ತಿರುವಾತ ಬಿದ್ದು ಗಾಸಿಗೊಳ್ಳುವ ಅಪಾಯ ಬಲು ಹೆಚ್ಚು. ರ್ಯಾಪ್ಲಿಂಗ್ ಹಗ್ಗದ ಎರಡು ಕೊನೆಗಳನ್ನೂ ಸೇರಿಸಿ ಹಿಡಿದು ಅದನ್ನು ಸಮಭಾಗ ಮಾಡಬೇಕು. ಇವೆರಡು ಕೊನೆಗಳನ್ನೂ ಬಂಡೆಯ ಮೇಲಿಂದ ಕೆಳಕ್ಕೆಸೆಯಬೇಕು. ಹಗ್ಗದ U-ಆಕಾರದ ಕೇಂದ್ರವನ್ನು ಬಂಡೆಯ ಅಂಚಿನಿಂದ ಮೇಲೆ ಇರುವ ಯಾವುದಾದರೂ

ಭದ್ರ ವಸ್ತುವಿಗೆ ಕಟ್ಟಬೇಕು. ಈ ವಸ್ತು ಅಲ್ಲಿರುವ ಒಂದು ಮರದ ಕಾಂಡವಾಗಬಹುದು ಏನೂ ಇಲ್ಲದಿದ್ದರೆ ಹತ್ತಿಪ್ಪತ್ತು ಪಿಟನುಗಳನ್ನು ಬಂಡೆಯ ಬಿರುಕುಗಳಿಗೆಲ್ಲ ಎರಡು ಸಾಲಾಗಿ ಹೊಡೆದು ಹಗ್ಗವನ್ನು ಅವುಗಳ ತೂತುಗಳಿಗಾಗಿ ಸರಿಸಿ ಮತ್ತೆ ಕೆಳಗೆಸೆಯಬೇಕು. ಅಂತೂ ಮೇಲಿನ ಹಿಡಿತ ಅತಿಭದ್ರವಾಗಿರತಕ್ಕದ್ದು. ಕೆಳಗೆಸೆದ ಖಾಲಿ ಕೊನೆಗಳು ಬಂಡೆಯ ಬುಡದಿಂದ ಹತ್ತಡಿಯಾದರೂ ಮುಂದೆ ಹೋಗುವಷ್ಟು ಉದ್ದವಿರಬೇಕು. ರ್‍ಯಾಪ್ಲಿಂಗ್ ಹಗ್ಗ ಗಟ್ಟಿಯಾಗಿ ಕಟ್ಟಲ್ಪಟ್ಟಿದೆಯೋ ಇಲ್ಲವೋ ಎಂದು ಪರೀಕ್ಷಿಸಲು ಅದರ ಒಂದೊಂದು ಕೊನೆಯನ್ನೂ ನಾಲ್ಕೈದು ಮಂದಿ ಭದ್ರವಾಗಿ ಹಿಡಿದು ಒಟ್ಟಿಗೆ ಹಲವಾರು ಸಲ ಜಗ್ಗಬೇಕು. ಹಗ್ಗದ ದೃಢತೆಯೂ ಇದರಿಂದ ಪರೀಕ್ಷೆಗೊಳಪಡುವುದು.

ಇಷ್ಟಾದ ಮೇಲೆ ರ್‍ಯಾಪ್ಪಲ್‌ಗಾರ ಬಂಡೆಯ ಮೇಲೆ ಮುಂದಿನ ಹೆಜ್ಜೆ ಇಡುತ್ತಾನೆ. ಅವನು ಷರಾಯಿ ಧರಿಸಿರುವುದು ಉತ್ತಮ. ಮೈಮೇಲೆ ಜೆರ್ಸಿಪುಲ್ಲೋವರ್ ಅಥವಾ ಪೂರ್ಣ ತೋಳಿನ ಷರಟನ್ನು ಹಾಕಿಕೊಂಡಿರಬೇಕು. ಕೈಗಳಿಗೆ ಗವಸು. ಸ್ಲಿಂಗನ್ನು ಕಾಲುಗಳ ಹೊರಗಾಗಿ ಸರಿಸಿ ಸೊಂಟದೆಡೆಗೆ ತರುತ್ತಾನೆ, ಹಿಂದಿನ ಭಾಗವನ್ನು ಕೆಳಗಿನಿಂದ ಮುಂದಕ್ಕೆ ತಂದು, ಮುಂದಿನ ಭಾಗಕ್ಕೆ ಜೋಡಿಸಿ ಹಿಡಿದು ಕೆರಾಬಿನಾರಿನಿಂದ ಅವನ್ನು ಪೋಣಿಸುವನು. ರ್‍ಯಾಪ್ಲಿಂಗ್ ಹಗ್ಗವನ್ನೂ ಅದೇ ಕೆರಾಬಿನಾರಿಗೆ ಪೋಣಿಸಿ ಕೈಗಳೆಡೆಗಾಗಿ ಹೆಗಲ ಮೇಲಕ್ಕೆ ಕೊಂಡೊಯ್ದು ಮತ್ತೆ ಬಂಡೆಯಿಂದ ಕೆಳಗೆ ಇಳಿಯುವಂತೆ ಸಡಿಲ ಬಿಡಲಾಗುವುದು. ಅವನ ಸೊಂಟಕ್ಕೆ ಪ್ರತ್ಯೇಕ ಇನ್ನೊಂದು ಹಗ್ಗ (ಬಿಲೇ ಹಗ್ಗ) ಸುತ್ತಿ ಅದನ್ನು ಬಂಡೆಯ ಮೇಲೆ ಭದ್ರವಾಗಿ ಕುಳಿತುಕೊಂಡ ಇಬ್ಬರು ಒಬ್ಬರ ಹಿಂದೊಬ್ಬರು ಹಿಡಿದುಕೊಳ್ಳುತ್ತಾರೆ. ಇವರು ಬಿಲೇಗಾರರು. ರ್‍ಯಾಪ್ಪಲ್‌ಗಾರ ಇಳಿಯುತ್ತ ಹೋದಂತೆ ಬಿಲೇಗಾರರು ಹಗ್ಗವನ್ನು ಕ್ರಮೇಣ ಸರಿಯಲು ಬಿಡುವರು. ಒಂದು ವೇಳೆ ಅವನು ಹತೋಟಿ ತಪ್ಪಿ ಕಂಗಾಲಾದರೆ ಇವರು ಬಿಲೇ ಹಗ್ಗವನ್ನು ಭದ್ರವಾಗಿ ಹಿಡಿದು ಜಿಗಿವಾತನಿಗೆ ಸಮತೋಲ ಕಾಯ್ದಿಟ್ಟುಕೊಳ್ಳಲು ಸಹಾಯ ಮಾಡುವರು. ಈತ ಅತಿ ಗಾಬರಿಯಿಂದ ಏನನ್ನೂ ಮಾಡಲಾರದವನಾಗಿ ಪ್ರಪಾತದ ಮಧ್ಯೆ ನೇಲುತ್ತಿದ್ದರೆ ಇವರು ಬಿಲೇ ಹಗ್ಗವನ್ನು ಬಲು ಜಾಗರೂಕತೆಯಿಂದ ಸಡಿಲಗೊಳಿಸುತ್ತ ಗುಂಡುಕಲ್ಲನ್ನು ಬಾವಿಗಿಳಿಸಿದಂತೆ ಅವನನ್ನು ಬಂಡೆಯ ತಳಕ್ಕೆ ಇಳಿಸುವರು. ಜಿಗಿವಾತನ ಪ್ರಾಣರಕ್ಷಣೆಗೆ, ಅವನಿಗೆ ಧೈರ್ಯ ನೀಡಲು ಬಿಲೇ ಹಗ್ಗ ಅವಶ್ಯ. ಅದನ್ನು ನಿಯಂತ್ರಿಸುವವನ ಪಾತ್ರ ಬಲು ಮುಖ್ಯ. ರ್‍ಯಾಪ್ಲಲ್‌ಗಾರನಿಗೆ ಹಠಾತ್ತಾಗಿ ಸಮತೋಲ ತಪ್ಪುವ ಸಂಭವವಿದೆ. ಆಗ ಬಿಲೇಗಾರರು ಎಚ್ಚರದಿಂದಿರದಿದ್ದರೆ ಜಿಗಿದಾತ ಪ್ರಪಾತದ ತಳಕ್ಕೆ ದೊಪ್ಪನೆ ಬಿದ್ದು ಪ್ರಾಣಾಪಾಯವೂ ಸಂಭವಿಸಬಹುದು. ಜತೆಯಲ್ಲಿಯೇ ಬಿಲೇಗಾರರನ್ನು ಹಗ್ಗ ಜಗ್ಗಿ ಅವರೂ ಉರುಳಿ ಉರುಳಿ ಪ್ರಪಾತದ ತಳಕ್ಕೆ ಬಿದ್ದುಬಿಡಬಹುದು.

ಹೀಗೆ ಸಕಲ ರಕ್ಷಣೆಗಳಿಂದ ಕೂಡಿ ಜಿಗಿವಾತ ಪ್ರಪಾತದ ಅಂಚಿಗೆ ಹಿಂದೆ ಹಿಂದೆ ನಡೆದು ಬರುವನು—ಅಂದರೆ ಅವನ ಬೆನ್ನು ಪ್ರಪಾತದೆಡೆಗೆ ತಿರುಗಿರುವುದು, ಅವನ ಎಡಗೈ, ಕಾಲು ಸಂದಿಗಾಗಿ ಬಂಡೆಯ ಮೇಲಕ್ಕೆ ಹೋಗಿರುವ ರ್‍ಯಾಪ್ಲಿಂಗ್ ಹಗ್ಗವನ್ನೂ, ಬಲಗೈ ಹೆಗಲಿನಿಂದ ಕೆಳಗೆ ಇಳಿದಿರುವ ಅದೇ ಹಗ್ಗವನ್ನೂ ಹಿಡಿದಿರುವುವು. ಎಡಗೈ ದೇಹದಿಂದ ಮುಂದೆ, ಬಲಗೈ ಹಿಂದೆ ಚಾಚಿರುವುವು. ಹಿಂದೆ ಹಿಂದೆ ನಡೆದಂತೆ ಗವಸುಗಳ ನಡುವೆ

ಕೆರಾಬಿನಾರಿಗಾಗಿ ರ್ಯಾಪ್ಲಿಂಗ್ ಹಗ್ಗ ಜಾರುವುದು. ನೈಲಾನ್ ಹಗ್ಗ ಹಗುರ, ಬಹಳ ದೃಢ ಮತ್ತು ಬಲು ನುಣುಪಾಗಿ ಜಾರುವುದು. ಆದರಿಂದ ರ್ಯಾಪ್ಲಿಂಗಿಗೆ ಅದೇ ಸರ್ವಶ್ರೇಷ್ಠವಾದ ಹಗ್ಗ. ಜಗಿವಾತ ಬಂಡೆಯ ಅಂಚಿಗೆ ಬಂದು ಹಿಂದೆ ಹಿಂದೆ ಬಗ್ಗುತ್ತಾನೆ. ಈಗ ಅವನ ಜಂತಸ್ತು ರ್ಯಾಪ್ಪಲ್‌ಗಾರಿಕೆಗೆ ಏರಿದೆ. ದೇಹವಿಡೀ ನೆಟ್ಟಗೆ, ಬಂಡೆಯ ಮೇಲ್ಭಾಗದಲ್ಲಿ ಕುಳಿತು ನೋಡುವವರಿಗೆ ಕೆಳಗಿನ ನೆಲಕ್ಕೆ ಸಮಾಂತರವಾಗಿರುವಂತೆ ಕಾಣುವುದು. ತನ್ನ ತೂಕದಿಂದ ಅವನು ಇನ್ನೂ ಮಾಲುವ ಮೊದಲೇ ಬಂಡೆಗೊಂದು ಬಲವಾದ ಒದೆತವಿತ್ತು ದೂರಕ್ಕೆ ರಟ್ಟುತ್ತಾನೆ. ಅಷ್ಟರಲ್ಲಿಯೇ ಎಂಟು ಹತ್ತಡಿ ಕೆಳಗೆ ಸರ್ರನೆ ಜಾರಿರುತ್ತಾನೆ. ಕಾಲು ಗಳು ಪುನಃ ಪ್ರಪಾತದ ಮೈಗೆ ಬಂದು ಬಡಿಯುವಾಗ ಇನ್ನೊಂದು ಒದೆತ, ಪುನಃ ಎಂಟು ಹತ್ತಡಿ ಜಾರಿಕೆ—ಈ ಕ್ರಮದಲ್ಲಿ ಅವನು ಎಷ್ಟು ಆಳವನ್ನು ಬೇಕಾದರೂ (ರ್ಯಾಪ್ಲಿಂಗ್ ಹಗ್ಗದ ಉದ್ದದ ಮಿತಿಯನ್ನವಲಂಬಿಸಿ) ಜಗಿದಿಳಿಯಬಹುದು. ಎಡಗೈ ಹಿಡಿತ ಅವನಿಗೆ ಭದ್ರತೆಯ ಪ್ರಜ್ಞೆ ನೀಡುವುದು. ಬಲಗೈ ಹಿಡಿತ ದಿಶಾ ನಿರ್ದೇಶನ ಮಾಡುವುದು. ಎರಡು ಕೈಗಳೊಡನೆ, ಹೆಗಲಮೇಲೆ ಮತ್ತು ಕೆರಾಬಿನಾರ್ ಒಳಗೆ ರ್ಯಾಪ್ಲಿಂಗ್ ಹಗ್ಗಕ್ಕೆ ತಿಕ್ಕಾಟ ಒದ ಗುವುದರಿಂದ ರ್ಯಾಪ್ಪಲ್‌ಗಾರನ ವೇಗ ಸ್ವಾಭಾವಿಕವಾಗಿಯೇ ಹತೋಟಿಯಲ್ಲಿರುವುದು. ಅವನು ಹೀಗೆ ಮಿತಿಯಲ್ಲಿ ಜಗಿಯುವಾಗ ಬಿಲೇಗಾರರು ಬಿಲೇ ಹಗ್ಗವನ್ನು ಸುಲಭವಾಗಿ ಜಾರಗೊಡುವರು, ಮಿತಿ ತಪ್ಪಿದಾಗ ಮಾತ್ರ ಅದನ್ನು ಜಗ್ಗಿ ಹಿಡಿದು, ಬಿರಿಯಂತೆ ಪ್ರಯೋಗಿಸುವರು. ಇದು ಒಂದು ನಮೂನೆ.

ಜಗಿತಗಳಲ್ಲಿ ಹಲವಾರು ವಿಧಗಳಿವೆ. ತತ್ತ್ವ ಒಂದೇ. Stomach rappling ಮತ್ತು ಗಾಯಗೊಂಡವನ ರಕ್ಷಣೆ ಇವುಗಳಲ್ಲಿ ಅತಿ ಕಷ್ಟ. ಹೊಟ್ಟೆ ರ್ಯಾಪ್ಲಿಂಗಿನಲ್ಲಿ ಜಗಿವಾತ ಬಂಡೆಯ ಶಿಖರದಿಂದ ಪ್ರಪಾತದೆಡೆಗೆ ಮುಖಮಾಡಿ ನಡೆದುಕೊಂಡು ಹೋಗುತ್ತಾನೆ: ಮುಂದೆ ಅದರ ಅಂಚಿನಲ್ಲಿ ದೇಹವನ್ನು ಬಂಡೆಗೆ ಲಂಬವಾಗಿಯೂ ನೆಲಕ್ಕೆ ಸಮಾಂತರ ವಾಗಿಯೂ ಇಟ್ಟು ತನ್ನ ತೂಕದಿಂದ ನಿಧಾನವಾಗಿ ಕೆಳಗೆ ನಡೆದುಕೊಂಡು ಹೋಗುತ್ತಾನೆ. ಈ ಕ್ರಮದಲ್ಲಿ ಕೆಳಗಿನ ನೆಲದ ಪ್ರತಿಯೊಂದು ಪುಟ್ಟ ಕಲ್ಲೂ, ಗಿಡವೂ ಭಯಂಕರವಾಗಿ ನಮ್ಮನ್ನು ತಿವಿಯಲು, ನುಂಗಲು ಬಂದಂತೆ ಭಾಸವಾಗುವುದು. ಗಾಯಗೊಂಡಾತನನ್ನು ಬೆನ್ನ ಮೇಲೆ ಉಪ್ಪು ಮೂಟೆಯಂತೆ ಹೊತ್ತು ಹೊಟ್ಟೆ ರ್ಯಾಪ್ಲಿಂಗ್ ಕ್ರಮದಲ್ಲಿ ಇಳಿಯು ವುದು ಇನ್ನೂ ಕಷ್ಟದ ಸಾಹಸ. ಹೀಗೆ ರ್ಯಾಪ್ಲಿಂಗ್ ಅತಿ ಅಪಾಯಕರವಾದ, ಆದ್ದರಿಂದ ಅಷ್ಟೇ ಸಂತೋಷದಾಯಕವಾದ ಆಟ. ಇದರಲ್ಲಿ ಭಾಗವಹಿಸುವವರಿಗೆ ಮಹಾ ದೇಹ ತ್ರಾಣವೇನೂ ಬೇಕಾಗಿಲ್ಲ. ಹತ್ತು ಹದಿನೈದು ಅಡಿ ಆಳದ ಬಂಡೆಗಳಲ್ಲಿ ಜಗಿವ ಕ್ರಮ ಗಳನ್ನು ಅಭ್ಯಾಸಮಾಡಿ ಧೈರ್ಯ ಸಂಪಾದಿಸಿಕೊಂಡರೆ ಮುಂದೆ ಆಳ ಹೆಚ್ಚಿದಂತೆ ಹೆಚ್ಚು ಹೆಚ್ಚು ಸಂತೋಷ ಪಡೆಯಬಹುದು, ಧೈರ್ಯವಾಗಿ ದುಮುಕುವಾತನಿಗೆ, ಸ್ವಲ್ಪವಾದರೂ ಬಂಡೆಯ ಪ್ರೇಮಮಯ ಮೃದುಸ್ಪರ್ಶದ ಅನುಭವ ಪಡೆಯದಾತನಿಗೆ, ಈ ವಿದ್ಯೆ ಕರಗತ ವಾಗದು. ಮೈ ನೆನೆಸಿಕೊಳ್ಳದೇ, ಗಂಟುಕು ನೀರು ಕುಡಿಯದೇ ಈಸು ಕಲಿಯುವುದು ಸಾಧ್ಯವೇ ? ಈಸಬೇಕು ಇದ್ದು ಜೈಸಬೇಕು ; ಬಂಡೆ ಒದ್ದು ಜಗಿಯಬೇಕು, ಜಗಿದು ಗೆದ್ದು ಬದುಕಬೇಕು !

ಇಲ್ಲಿ ನಾವು ಕಲಿಯುವ ಪಾಠ ಎರಡು. ಬಂಡೆಯೊಡನೆ ಸೆಣಸಾಟ ಸಲ್ಲದು. ವಿನಯ

ಸಹಿತ ಬಂಡೆಯು ಓರೆಕೋರೆಗಳಿಗೆ ಅನುಗುಣವಾಗಿ ವರ್ತಿಸಿದರೆ ಅದ ನಮ್ಮನ್ನು ತನ್ನ ಮಂಡೆಯ ಮೇಲೆ ಹೊತ್ತು ಸಂತೋಷಗೊಳಿಸುವುದು. ಇನ್ನೊಂದು ಪಾಠ, ಬಂಡೆ ಜಿಗಿಯುವಾಗ ಮನಃಸ್ಥೈರ್ಯವೇ ನಿಜವಾದ ಪ್ರೇರಕಶಕ್ತಿ. ಅಪಾಯಕ್ಕೂ ಸುರಕ್ಷಿತತೆಗೂ ನಡುವೆ ಪ್ರತಿಯೊಬ್ಬನ ಮನಸ್ಸೂ ದುರ್ಗಮಾಭೇದ್ಯ ಕೋಟೆಯೊಂದನ್ನು ಸೃಜಿಸಿರುವುದು. ಬಂಡೆಯ ಅಂಚಿನವರೆಗೆ ಬರುವಷ್ಟು ಹೊತ್ತಿನವರೆಗೆ ಈ ಕೋಟೆ ಎಷ್ಟು ದಪ್ಪವಾದದ್ದು, ಉಕ್ಕಿನಂಥದು ಎಂಬುದರ ಅರಿವೇ ಇರುವುದಿಲ್ಲ. ಅಲ್ಲಿ ಬರುತ್ತಿದ್ದಂತೆಯೇ ಇದು ಸ್ಪಷ್ಟವಾಗಿ ಹೇಳುತ್ತದೆ "ನಾನಿಲ್ಲಿ ಅಡ್ಡ ನಿಂತಿದ್ದೇನೆ. ನಿನ್ನನ್ನು ಇನ್ನು ಮುಂದೆ ಹೋಗಲು ಬಿಡುವುದಿಲ್ಲ. ಹೋಗಲೇಬೇಕಾದರೆ ನನ್ನನ್ನು ಭೇದಿಸಿ ಭೇದಿಸಿ ಹೋಗು. ನೋಡೋಣ, ನಿನ್ನ ತಾಕತ್ತು." ಬಹಳ ಮಂದಿ ಈ ಗೋಡೆಯನ್ನು ಒಡೆಯಲಾರದೇ ಹೆದರಿ ಥರಥರನೆ ನಡುಗಿ ಕುಸಿದು ಅಂಚಿನಿಂದ ಮೇಲಕ್ಕೆ ತೆವಳಿಯಾದರೂ ಬಂದು ಬಿಡುತ್ತಾರೆ. ಅದನ್ನು ಭೇದಿಸಿದವನಿಗೆ ಮಾತ್ರ ಮುಂದಿನ ಸಾಹಸದ ಸಂತೋಷಾನುಭವ. ಆ ನಡು ಆಕಾಶದಲ್ಲಿ ಸರಸರನೆ ಜಾರಿ, ಕುಪ್ಪಳಿಸಿ, ಜಾರಿ, ಕುಪ್ಪಳಿಸಿ, ಜಾರಿ ಇಳಿಯುವ ಅನುಭವಕ್ಕೆ ಸಮಾನವಾದದ್ದು ನಾನು ತಿಳಿದಂತೆ ಕಾರ್ ಚಾಲನೆಯಲ್ಲಿದೆ. ಗಂಟೆಗೆ ೬೦ ಮೈಲಿನ ಮಿತಿ ವರೆಗೆ ಕಾರನ್ನು ನಾವೇ ಪ್ರಯತ್ನಪೂರ್ವಕವಾಗಿ ಚಾಲನೆ ಮಾಡುತ್ತಿದ್ದೇವೆ ಎಂಬ ಭಾವನೆ ಬರುವುದು. ೬೦ರ ಮಿತಿ ದಾಟಿದ ಮೇಲೆ ಬೇರೊಂದು ಅನುಭವವಾಗುವುದು : ನೆಲ, ಗಿಡ, ಮರ, ಆವರಣ, ದಾರಿ ಎಲ್ಲ ಅತಿ ವೇಗದಿಂದ ನಮ್ಮ ಸುತ್ತಲೂ ಹಿಂದಕ್ಕೆ ಜಾರುತ್ತಿವೆ, ನಾವು ಇವುಗಳ ಮಧ್ಯೆ ತೇಲುತ್ತ ಲೀಲಾಜಾಲವಾಗಿ ವಿಹರಿಸುತ್ತಿದ್ದೇವೆ. ಈ ಎರಡನೆಯ ಅನುಭವ ಬಂಡೆ ಜಿಗಿಯುವಾಗ ನಮಗಾಗುವುದು. ನಿಸರ್ಗವನ್ನು ಔನ್ನತ್ಯದಿಂದ ವೀಕ್ಷಿಸುವ ಕ್ರಮವಿದು. ಶ್ರೇಷ್ಠ ನಟರಿಗೆ ನಟನೆಯಲ್ಲಿ ತಾದಾತ್ಮ್ಯ ಹೊಂದಿದಾಗ ಇಂಥ ಅನುಭವವೇ ಮೂಡುವುದೆಂದು ಕೇಳಿದ್ದೇನೆ.

ವಾರ ವಾರ ನಮ್ಮ ಹುಡುಗರು ಮೈಲಿಗಟ್ಟಲೆ ನಡೆದು ಬಂಡೆ ಏರುವುದು, ಜಿಗಿಯುವುದು ಆಟಗಳಲ್ಲಿ ಬಲು ನಿಷ್ಣಾತರಾದರು. ಇಂಥ ಒಂದು ಆದಿತ್ಯವಾರ ಹುಡುಗರಿಂದಲೇ ಸೂಚನೆ ಬಂದಿತು "ನಾವಿಷ್ಟೆಲ್ಲ ಮಾಡುತ್ತಿದ್ದೇವಲ್ಲ. ಈ ವರ್ಷ ಮುಗಿಯುವ ಮೊದಲು ಏನಾದರೊಂದು ಸಾಹಸ ಪ್ರದರ್ಶನ ನಡೆಸಬೇಕು." ನಾರಾಯಣ್‌ಸಿಂಗರು ರಾಮನಗರಮ್, ಸಾವನದುರ್ಗ ಶಿವಗಂಗೆ, ನಂದಿಬೆಟ್ಟ ಎಲ್ಲಿಯಾದರೊಂದೆಡೆ ಒಂದೆರಡು ದಿವಸ ಶಿಬಿರ ನಡೆಸಿ ಕಲಿತ ವಿದ್ಯೆ ಎಲ್ಲವನ್ನೂ ಚೆನ್ನಾಗಿ ಅಭ್ಯಸಿಸಿ ಮರಳಬಹುದೆಂದು ಸಲಹೆಯಿತ್ತರು. ಆದರೆ ನನಗೆ ತಿಳಿದಿದ್ದಂತೆ ಕುದುರೆಮುಖ ಗಂಡುಗಲಿಗಳಿಗೆ ಸರಿಯಾದ ಸ್ಥಳ. ಅಲ್ಲಿ ಸಾಹಸಪ್ರಿಯರಿಗೆ, ನಿಸರ್ಗಪ್ರೇಮಿಗಳಿಗೆ, ಇತಿಹಾಸಪ್ರಸಿದ್ಧ ಸ್ಥಳ ವೀಕ್ಷಕರಿಗೆ ರಸದೂಟವಿದೆ. ಹತ್ತು ವರ್ಷಗಳ ಹಿಂದೊಮ್ಮೆ ಅಲ್ಲಿ ನಾನು ಹತ್ತಿಪ್ಪತ್ತು ಹುಡುಗರನ್ನು ಕಟ್ಟಿಕೊಂಡು ಅಲೆದಿದ್ದೆನಷ್ಟೆ (ಪುಟ ೧೫೭). ಆಗ ಇದ್ದದ್ದು ಉತ್ಸಾಹ ಒಂದೇ. ಉತ್ಸಾಹ, ದೇಹ ಸಾಮರ್ಥ್ಯಗಳನ್ನು ಕ್ರಮಬದ್ಧವಾಗಿ ರೂಪಿಸಿಕೊಂಡು ಹೆಚ್ಚಿನ ಆನಂದ, ಜ್ಞಾನ ಪಡೆಯಲು ತಿಳಿವಳಿಕೆ ಸಾಕಾಗಿರಲಿಲ್ಲ. ಹೀಗಾಗಿ "ಎಂಕು ಪಣಂಬೂರಿಗೆ ಹೋಗಿ ಬಂದಂತೆ" ನಾವೂ ಕುದುರೆಮುಖಕ್ಕೆ ಹೋಗಿ ಬಂದಿದ್ದೆವು. ಆ ಶಿಖರ ನನ್ನ ಮನಸ್ಸಿನ ಮೇಲೆ

ಎಂದೂ ಮಾಸದ ಮುದ್ರೆಯೊತ್ತಿತು. ಇನ್ನೊಮ್ಮೆ ಸರಿಯಾಗಿಯೇ ಬರುತ್ತೇನೆ ಎಂದು ಕೊಂಡಿದ್ದೆ.

ಕುದುರೆಮುಖದ ಕನಸು

ಈಗ ಕಾಲ ಸನ್ನಿಹಿತವಾಗಿತ್ತೋ ಏನೋ. ಕುದುರೆಮುಖ ಕನಸಾಯಿತು, ನಾನು ಹುಡುಗರಿಗೆ ಅದರ ಸಾಹಸವನ್ನು ವಿವರಿಸಿದೆ. ಅದು ಎಲ್ಲಿ ಉಂಟು. ಏನು ಎಂದು ಇವರು ಯಾರಿಗೂ ತಿಳಿಯದು—ಆದರೂ ಹುಡುಗಾಟಿಕೆಯ ಉತ್ಸಾಹದಿಂದ ಹಾರಾಡಿದರು. ಅಂದಿನಿಂದಲೇ ಕುದುರೆಮುಖದ ಕನಸನ್ನು ಕಾಣಲು ತೊಡಗಿದರು. ಇದು ಅಕ್ಟೋಬರ್ ಸುಮಾರಿಗೆ. ನಾರಾಯಣಸಿಂಗ್ ಈ ಯೋಜನೆಯನ್ನು ಸ್ವಾಗತಿಸಿದರು. ಸುಮಾರು ೩೦ ಜನರು, ೧೦ ದಿವಸಗಳ ಶಿಬಿರ. ವೆಚ್ಚ ವೆಷ್ಟಾದೀತೆಂದು ಅಂದಾಜು ಮಾಡಲು ನನಗೆ ಹೇಳಿದರು. ಅದೇ ವೇಳೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಟಿ. ಆರ್. ಜಯರಾಮನ್ ನಮ್ಮ ಕಾಲೇಜಿನ ವಿದ್ಯಾರ್ಥಿಸಂಘದ ಉದ್ಘಾಟನಾ ಭಾಷಣ ಮಾಡುತ್ತ ಹೀಗೆಂದರು "ವಿದ್ಯಾರ್ಥಿಗಳು ಇಂದು ಪೂರ್ಣ ವ್ಯಕ್ತಿತ್ವ ಪಡೆದು ವಿಕಸಿಸಬೇಕು. ಪಾಠ ಪ್ರವಚನದ ಜತೆಗೆ ಸಾಹಸಪ್ರಿಯತೆ, ಆಟ ಓಟಗಳು ಬೆಳೆಯಬೇಕು. ಅವರ ಯಾವುದೇ ವಿಧದ ರಚನಾತ್ಮಕ ಸಾಹಸ ಕ್ರಿಯೆಯನ್ನೂ ಬೆಂಗಳೂರು ವಿಶ್ವವಿದ್ಯಾಲಯ ಸಹಾನುಭೂತಿಯಿಂದ ಪರಿಶೀಲಿಸುವುದು."

ನಾನು ಈ ಒಂದು ಆಶ್ವಾಸನೆಯ ಎಳೆ ಹಿಡಿದು, ಮೊದಲು ಒಬ್ಬನೇ ಹೋಗಿ ಅವರನ್ನು ಭೇಟಿ ಮಾಡಿದೆ. ನಮ್ಮ ಕುದುರೆಮುಖ ಯೋಜನೆಯ ರೂಪುರೇಖೆಗಳನ್ನು ವಿವರಿಸಿದೆ. ನಮಗೆ ಯೂನಿವರ್ಸಿಟಿಯಿಂದ ಧನಸಹಾಯ ದೊರೆಯಬಹುದೇ ಹೇಗೆ ಎಂದು ಮನವಿಮಾಡಿದೆ. "ಅದರೆ ಪೂರ್ಣ ಮಾಹಿತಿಯಿರುವ ಪತ್ರವನ್ನು ನಮಗೆ ಕೊಡಿ. ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ" ಎಂದರು.

ನಾನು ಓಸಿಯವರಿಗೆ ಈ ಸಂತೋಷದಾಯಕ ಸುದ್ದಿ ತಿಳಿಸಿದೆ, ಮತ್ತು ಸುಮಾರು ಒಂದೂವರೆ ಸಾವಿರ ರೂಪಾಯಿಯ ಯೋಜನೆ ತಯಾರಿಸಿದೆ. ಅದನ್ನು ನೋಡಿ ಅವರು ನಕ್ಕು "ಇಲ್ಲೇ ನೀವು ಅತಿ ಜಿಗುಟಾಗಿರುವುದು! ವ್ಯಕ್ತಿಗಳಿಗೆ ಸಾವಿರ, ಸಾವಿರದೈನೂರು ದೊಡ್ಡ ಹಣ. ಕೊಡುತ್ತಿರುವುದು ಯೂನಿವರ್ಸಿಟಿ. ಹೋಗುತ್ತಿರುವವರು ೩೦–೪೦ ಮಂದಿ ಹುಡುಗರು. ಅವರ ಆಹಾರದ ಖರ್ಚೇ ಸುಮಾರು ಸಾವಿರದೈನೂರು ಆಗದಿರದು. ವಾಹನ, ಇತರ ಖರ್ಚು ಒಟ್ಟು ೩,೦೦೦ದ ಅಂದಾಜು ನಾನು ಮಾಡುತ್ತೇನೆ. ಮತ್ತು ಇಂಥ ಸಂದರ್ಭದಲ್ಲಿ ಸ್ವಲ್ಪ ಶಿಕ್ಷಣ ಸಾಮಗ್ರಿಗಳನ್ನು ತರಿಸುವ ಯೋಜನೆಯನ್ನೂ ಹಮ್ಮಿಕೊಳ್ಳಬೇಕು. ೨೦೦ ಅಡಿ ಉದ್ದದ ನೈಲಾನ್ ಹಗ್ಗ ಒಂದಕ್ಕೆ ೧೬೫ರಿಂದ ೨೦೦ ರೂಪಾಯಿಯಾದರೂ ಇರುತ್ತದೆ. ಆದ್ದರಿಂದ ೫,೦೦೦ ರೂಪಾಯಿ ಮುಂಗಡವಾಗಿ ನಾವು ಯಾಚಿಸಬೇಕು. ಕೇಳುವಾಗ ಧಾರಾಳವಾಗಿರೋಣ. ಸರಿಯಾದ ಲೆಕ್ಕಾಚಾರವನ್ನು ಕೊಟ್ಟರೆ ಆಯಿತು" ಎಂದು ವಿವರಿಸಿದರು.

ಒರತೆ ತೊರೆಯಾದಾಗ

ಮುಂದಿನ ವಾರ ನಮ್ಮ ಯೋಜನೆಯ ಪತ್ರಸಮೇತ ನಾವು ಕುಲಪತಿಗಳನ್ನು ನೋಡಿದೆವು. ಅವರು ನಮಗೆ ಆಶ್ಚರ್ಯವಾಗುವಂತೆ "ನೀವು ಮುಂದುವರಿಸಿ. ಈ ಮೊಬಲಗು ನಿಮಗೆ ಸಿಕ್ಕುತ್ತದೆ" ಎಂದುಬಿಟ್ಟರು! ಆ ಗಳಿಗೆಯಲ್ಲಿ ನಾವು ಮೂಕವಿಸ್ಮಿತರಾದೆವು. ಪಾರ್ಕಲಾಂ ಮಂತ್ರ ಜಪದ ಈ ದಿನಗಳಲ್ಲಿ, ನೂರಾರು ಸಲ ಕಂಬದಿಂದ ಮೇಜಕ್ಕೆ ಅಲೆಯದೇ ಯಾವ ಕೆಲಸವೂ ಆಗದ ನಿಧಾನ ಪರ್ವದಲ್ಲಿ, ಈ ಮೊದಲೇ ನಾವೇಕೆ ಯೋಜನೆಯನ್ನು ಮುಂದಿಡಲಿಲ್ಲ ಎನ್ನುವಂಥ ಸವಾಲಿನ ಮಾತು ಅವರದು. ನಾವು ಬಹಳ ಸಂತೋಷದಿಂದ ಹಿಂತಿರುಗಿದೆವು. ಇಂಗ್ಲಿಷಿನಲ್ಲಿ ಹೇಳುವಂತೆ ಚೆಂಡು ಈಗ ನಮ್ಮ ರಂಗದಲ್ಲಿದೆ. ನಮ್ಮ ಮೇಲೆ ಇರುವ ಹೊಣೆ ಗುರುತರವಾದದ್ದು. ಇದುವರೆಗೆ ನಾವು ಮಾಡಿದ್ದು ಚಂದ, ನವಸಂಪ್ರದಾಯಂದ ಲೇಪ ಅದಕ್ಕೆ. ಆದರೆ ಈಗ ಯೂನಿವರ್ಸಿಟಿಯ ವಿಶ್ವಾಸ, ಕ್ಯಾಡೆಟುಗಳ ಉತ್ಸಾಹ ಇವನ್ನು ವ್ಯವಸ್ಥಿತವಾಗಿ ಒಂದುಗೂಡಿಸಿ ಉತ್ತಮ ಫಲಿತಾಂಶ ತರುವುದು ನಮ್ಮ ಹೊಣೆಗಾರಿಕೆ. ಮುಂದಿರುವ ಹೆಜ್ಜೆಗಳು—ಶಿಬಿರದ ಸ್ಥಳ ಪರಿಶೀಲನೆ; ದಿವಸನಿರ್ಣಯ; ಕ್ಯಾಡೆಟ್ಟುಗಳ ಆಯ್ಕೆ; ಶಿಕ್ಷಣ ಸಾಮಗ್ರಿಗಳು, ಇತರಾವಶ್ಯಕತೆಗಳ ಏರ್ಪಾಡು.

ಸ್ಥಳ ಪರಿಶೀಲನೆಗಾಗಿ ನಾನೂ ಓಸಿಯವರೂ ನಮ್ಮ ಕಾರಿನಲ್ಲಿ ಚಾರ್ಮಾಡಿಮಾರ್ಗವಾಗಿ ಧರ್ಮಸ್ಥಳ, ಬೆಳ್ತಂಗಡಿ ತಲಪಿದೆವು. ಸ್ಥಳ, ಜನ, ಸನ್ನಿವೇಶ ಇವುಗಳ ನಿಕಟ ಪರಿಚಯ ಬೆಳೆಸಿಕೊಂಡು ಜನವರಿ (೧೯೬೭) ಅಂತ್ಯದಲ್ಲಿ ಶಿಬಿರ ನಡೆಸುವುದು ಯೋಗ್ಯ ಎಂದು ನಿರ್ಣಯಿಸಿದೆವು. ಅದಕ್ಕಿಂತ ಮೊದಲು ಆಳೆರಡೆತ್ತರ ಬೆಳೆದಿರುವ ಹುಲ್ಲಿನ ಕಡಲಿನಲ್ಲಿ ಬೆಟ್ಟ ಹತ್ತುವುದು ಅಸಾಧ್ಯ. ಮಧ್ಯೆ ಎಲ್ಲಿಯಾದರೂ ಕಾಡಿಗೆ ಬೆಂಕಿ ಬಿದ್ದರೆ ಖಾಂಡವ ದಹನದ ಪುನರಾವರ್ತನೆಯೇ ಆಗಬಹುದು. ದಿವಸ ಮುಂದುವರಿಸಿದರೆ ಸೀನಿಯರ್ ವಿದ್ಯಾರ್ಥಿಗಳಿಗೆ ದೊಡ್ಡ ಪರೀಕ್ಷೆ ಸಮೀಪವಾಗುವುದು. ಆದ್ದರಿಂದ ತೊಂದರೆ. ಏಪ್ರಿಲ್, ಮೇ ಕುದುರೆಮುಖದ ಬುಡದಲ್ಲಿ ಕುದಿಯುವ ಕುಲುಮೆಯಂಥ ಸೆಕೆ, ಮೇಲೆ ಮೋಡ, ಮಳೆ. ಜನವರಿ ೨೦ರಿಂದ ೨೯ರ ತನಕ ಹತ್ತು ದಿವಸ ಶಿಬಿರ ನಡೆಸುವುದು ಎಂದು ನಿಶ್ಚೈಸಿದೆವು.

ನಮಗೆ ಯೂನಿವರ್ಸಿಟಿ ಸಹಾಯ ದೊರೆತ ಶುಭಸಮಾಚಾರ ವಿದ್ಯಾರ್ಥಿ ಲೋಕದಲ್ಲಿ ವಿದ್ಯುದ್ವೇಗದಿಂದ ಪಸರಿಸಿತು. ಕನಸಿನ ಕುದುರೆಮುಖ ವಾಸ್ತವಿಕತೆಗೆ ಬರುವುದೆಂದು ಅವರಿಗೀಗ ಖಚಿತವಾಯಿತು. ನೂರಾರು ಹುಡುಗರು, ಬೇರೆ ಕಾಲೇಜಿನವರು ಸಹ, ದಿನ ದಿನ ಬಂದು ನನ್ನನ್ನು ಬೇಡತೊಡಗಿದರು, ತಾವೂ ಕುದುರೆಮುಖದ ತಂಡವನ್ನು ಸೇರುವುದಾಗಿ ಹಣದ ಕೊರತೆಯನ್ನು ತಾವು ಪೂರೈಸುವುದಾಗಿ ಅವರು ಮಾತುಕೊಟ್ಟರು. ನಮ್ಮ ತರುಣರ ಆಸೆ ಆಕಾಂಕ್ಷೆ ಸಹಜವಾದದ್ದು, ನಮಗೆ ಅಭಿಮಾನ ಉಂಟುಮಾಡುವಂಥವು. ಆದರೆ ನಮ್ಮ ಮುಂದಿನ ಗುರಿಯ ಸಾಧನೆಯಲ್ಲಿ ನಾವು ಕೆಲವು ಸ್ವಯಂ ನಿರ್ಮಿತ ನಿಯಮಾವಳಿಗಳಿಂದ ಬಂಧಿತರಾಗದೇ ಹೋದರೆ, ಒಂದು ಕ್ರಮವನ್ನು ಅನುಸರಿಸದೇ ಹೋದರೆ, ಕುದುರೆಮುಖ ಸಾಹಸ ಕುದುರೆಮುಖಜಾತ್ರೆಯಾದೀತು. ಈ ದೃಷ್ಟಿ

ಯಿಂದ ನಮ್ಮ ಕಾಲೇಜಿನ ಕ್ಯಾಡೆಟುಗಳಿಗೆ ಮಾತ್ರ ಇದರಲ್ಲಿ ಪ್ರವೇಶವೆಂದು ವಿಧಿಸಿದೆವು. ಬೇರೆ ಕಾಲೇಜಿನ ವಿದ್ಯಾರ್ಥಿಗಳೊಡನೆ ಕಟುವಾಗಿ ವಾದಿಸಲೂಬೇಕಾಯಿತು. "ಕುದುರೆ ಮುಖ ಅಲ್ಲಿದೆ. ಯೂನಿವರ್ಸಿಟಿ ಇಲ್ಲಿದೆ. ನೀವು ಪ್ರತ್ಯೇಕವಾಗಿ ನಮಗಿಂತಲೂ ಉತ್ತಮ ವಾದ ಸಾಹಸವನ್ನೇಕೆ ವ್ಯವಸ್ಥೆಗೊಳಿಸಬಾರದು ?"

ಸಾಮಾನ್ಯವಾಗಿ ಜನ, ತಿಳಿದೋ, ತಿಳಿಯದೆಯೋ, ಕೆಲಸಮಾಡದೆ ಆದರ ಫಲ ಗಳಿಸ ಬೇಕೆಂಬ ಬುದ್ಧಿಯವರು. ಇನ್ನು ನಮ್ಮ ಹುಡುಗರೇ ಆದರೂ ನಾಲ್ಕುನೂರರವರೆಗೆ ಮೊದಲು ಕರೆದ ಮೀಟಿಂಗಿಗೆ ಬಂದರು. ಕಾಲೇಜಿನ ಸಭಾಂಗಣದಲ್ಲಿ, ಪಂಖಗಳ ಅಡಿಯ ತಂಪು ಹವೆಯಲ್ಲಿ ಮೈಚೆಲ್ಲಿದ್ದ ಅವರು ಕುದುರೆಮುಖದ ರಂಗುರಂಗಾದ ವರ್ಣನೆಯನ್ನು ಏಕಾಗ್ರತೆಯಿಂದ ಆಲಿಸಿ ಕನಸು ಕಾಣತೊಡಗಿದರು. "ಕುದುರೆಮುಖ ಗಂಡು ಗಂಡುಗಳಿಗೆ ಮಾತ್ರ. ನಿಮ್ಮಲ್ಲಿ ಯಾರಿಗೆ ಬರಲು ಸಾಧ್ಯವಿಲ್ಲ, ಕೈ ಎತ್ತಿ" ಎಂದು ಸವಾರೋಪಿಸಿದೆ. ಬಂದವರು ನಾಲ್ಕುನೂರು, ಎಲ್ಲರೂ ಗಂಡು ಗಂಡುಗಳೇ. ಕೈ ಎತ್ತಿದವರು ಯಾರೂ ಇಲ್ಲ. ನಾನು ನುಡಿದೆ "ಬಹಳ ಸಂತೋಷ. ನನಗೆ ತುಂಬ ಹೆಮ್ಮೆ. ಇಂಥ ಕಠಿಣ ಶಿಬಿರಕ್ಕೆ ಬರಲು ನೀವು ಕೆಲವು ನಿಯಮಗಳನ್ನು ಪಾಲಿಸಬೇಕು. ಮುಂದಿನ ಆದಿತ್ಯವಾರ, ೧೨ನೆಯ ಮೈಸೂರಿನ ೬-೪೫ ಗಂಟೆ ಬೆಳಗ್ಗೆ, ಕಾಲೇಜು ಹಿಂದೆ ಸಮವಸ್ತ್ರಧಾರಿಗಳಾಗಿ ಸೇರಬೇಕು. ೧೫ರಿಂದ ೨೦ ಮೈಲಿಗಳ ವರೆಗಿನ ದೀರ್ಘ ನಡಿಗೆ. ಇದರಲ್ಲಿ ಜಯಪ್ರದ ರಾಗುವ ಮೊದಲಿನ ೬೦ ಅಥವಾ ೭೦ ಹುಡುಗರಿಗೆ ಮುಂದಿನ ಹೆಜ್ಜೆ ವಿವರಿಸಲಾಗು ವುದು.

ಗಂಡುಗಳ ಆಯ್ಕೆ

ಆದಿತ್ಯವಾರ ಬಂದವರು ೧೧೦ ಮಂದಿ. ಎರಡು ಮಿನಿಟ್ ತಡವಾಗಿ ಬಂದವರಿಗೆ ಮುಂದಿನ ವರ್ಷದ (?) ಶಿಬಿರ. ೧೫ ಮೈಲಿ ನಡಿಗೆ ಊಹಿಸಿದಷ್ಟು ಸುಲಭವಲ್ಲ; ಸೈಕಲ್, ಆಟೋ, ಸಿಟಿಬಸ್ ಸಂಸ್ಕಾರಗಳಿಂದ ವಿಕಸಿಸುವ ಹುಡುಗರಿಗೆ ಇದೊಂದು ಭಯಂಕರಾನುಭವ ! ಯಶಸ್ವಿಯಾಗಿ ನಡಿಗೆ ಪೂರೈಸಿದ ಮೊದಲಿನ ೬೦ ಮಂದಿಯನ್ನು ಆರಿಸಲಾಯಿತು. ಎರಡನೆಯ ಹೆಜ್ಜೆ ಇವರಿಗೆ ಬಂಡೆ ಏರುವುದು, ಇಳಿಯುವುದು ಇದರಲ್ಲಿ ಶಿಕ್ಷಣ, ಪರೀಕ್ಷೆ. ಬಂಡೆಯ ಅಂಚಿಗೆ ಬಂದ ಹಲವಾರು ಹುಡುಗರು ಹಿಂದೆ ಸರಿದರು. ಹೀಗೆ ಸಂಖ್ಯೆ ೪೦ಕ್ಕೆ ಇಳಿಯಿತು. ಅವರಲ್ಲಿಯೂ ಮೂರು ಹುಡುಗರು ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಈ ರೀತಿಯಲ್ಲಿ ನಮ್ಮ ಬೆಟ್ಟೆ ಚಿನ್ನವನ್ನು ಆರಿಸಿ ಪುತ್ಥಳಿ ಮಾಡಿದೆವು. ಇವರಲ್ಲಿ ಪ್ರತಿಯೊಬ್ಬನೂ ೧೦ ರೂಪಾಯಿ ಪ್ರವೇಶಧನವೀಯ ಬೇಕು, ಮತ್ತು ಸ್ವಂತ ಖರ್ಚಿನಿಂದ "ಹಂಟರ್ ಬೂಟು"ಗಳನ್ನು ಕೊಂಡುಕೊಳ್ಳ ಬೇಕೆಂದೂ ವಿಧಿಸಿದ್ದೆವು. ತಂದೆ ತಾಯಿಯರಿಂದ ಬರೆಹದಲ್ಲಿ ಅಪಾಯದ ಸರ್ಟಿಫಿಕೇಟು ತರಿಸಿಕೊಂಡೆವು. ಇದರ ಪ್ರಕಾರ ಹುಡುಗ ಸ್ವಂತೇಚ್ಛೆಯಿಂದ ಮತ್ತು ತಂದೆ ತಾಯಿಯರ ಅನುಮತಿ ಮೇರೆಗೆ ಶಿಬಿರಕ್ಕೆ ಬರುವಾತ ; ಅಲ್ಲಿ ಯಾವ ಅಥವಾ ಹೇಗೆ ಎಂಥ ಅಪಾಯ ಸಂಭವಿಸಿದರೂ ಹುಡುಗನಾಗಲೀ ಅವನ ತಂದೆ ತಾಯಿಯರಾಗಲೀ ಸರಕಾರವನ್ನು ಪರಿ ಹಾರಧನ ಯಾಚಿಸುವಂತಿಲ್ಲ. ಇದರ ಅರ್ಥ ವ್ಯವಸ್ಥಾಪಕರಾದ ನಾವು (ಹಿರಿಯರು)

ಬೇಜವಾಬ್ದಾರಿಕೆಯಿಂದ ವರ್ತಿಸಬಹುದೆಂದಲ್ಲ—ಹುಡುಗರನ್ನು ಕಾಲೇಜಿಗೆ, ಶಿಬಿರಕ್ಕೆ ಕಳಿಸಿದರೆ ತಮ್ಮ ಹೊಣೆಗಾರಿಕೆ ಮುಗಿಯಿತೆಂದು ತಿಳಿಯುವ, ಸಂಸ್ಥೆಯಲ್ಲಿ ಪರಮೋಸ ದಿಂದ ಅಥವಾ ಎಷ್ಟೋ ಸಲ ಹುಡುಗನ ತಿಳಿಗೇಡಿತನದಿಂದ ಅವನಿಗೇನಾದರೂ ಅಪಾಯ ಸಂಭವಿಸಿದರೆ ಮೊದಲು ಸಂಸ್ಥೆಯಲ್ಲಿ ದೋಷವನ್ನು ಹುಡುಕುವ ಹಿರಿಯರಿಗೆ ಅವರ ಪಾತ್ರವನ್ನು ಸ್ಪಷ್ಟಪಡಿಸಲು ಇಂಥ ಸರ್ಟಿಫಿಕೇಟು ಅತ್ಯಗತ್ಯ. ಮನೆಯಲ್ಲಿ ಕಲಿಯದ, ಕಲಿಸದ ಶಿಸ್ತು, ಸದ್ವರ್ತನೆಗಳನ್ನು ಕಾಲೇಜು ಕ್ಲಾಸುಗಳಲ್ಲಿ, ಎನ್‌ಸಿಸಿ ಪೆರೇಡ್ ಗ್ರೌಂಡಿ ನಲ್ಲಿ ಕಲಿಸಲು ಸಾಧ್ಯವಿಲ್ಲ.

ಸಾವನದುರ್ಗದ ಜಾರುಬಂಡೆಯ ಮೇಲೆ

ಡಿಸೆಂಬರ್ ೨೫ರಿಂದ ಜನವರಿ ೩ರ ತನಕ ನಮ್ಮ ಬೆಟಾಲಿಯನ್ ವಾರ್ಷಿಕ ಶಿಕ್ಷಣ ಶಿಬಿರ ನಡೆಸಲು ಬೆಂಗಳೂರಿನ ಹೊರವಲಯಕ್ಕೆ ಸಾಗಿತು. ಅಲ್ಲಿಂದ ೨೪ ಮೈಲಿ ದೂರದಲ್ಲಿ ಸಾವನದುರ್ಗವಿದೆ. ಶಿಬಿರದ ಪ್ರಾರಂಭದಲ್ಲಿ ನಾರಾಯಣ್‌ಸಿಂಗ್ ಅಂದರು "ನಿಮ್ಮ ಆರಿಸಿದ ಶಿಲಾರೋಹಿಗಳನ್ನು ಅಲ್ಲಿಗೆ ಲಾರಿಯಲ್ಲಿ ಕರೆದುಕೊಂಡು ಹೋಗಿ ಒಂದು ದಿವಸ ಇಡೀ ಅಭ್ಯಾಸ ಮಾಡಿ ಬನ್ನಿ. ನಾವಿಬ್ಬರೂ ಈ ಕ್ಯಾಂಪನ್ನು ಒಂದೇ ಸಲ ಬಿಟ್ಟುಹೋಗು ವುದು ಸರಿಯಲ್ಲವಾದ್ದರಿಂದ ನೀವೊಬ್ಬರೇ ಹೋಗಿ."

೨೪ ಹುಡುಗರ ತಂಡ. ಹೈಸ್ಕೂಲಿನಲ್ಲಿ ಓದುತ್ತಿದ್ದ ನನ್ನ ಹಿರಿ ಮಗ ಅಶೋಕನೂ (೧೪) ಇವರಲ್ಲಿದ್ದ. ಬುತ್ತಿಯೂಟವನ್ನು ಕಟ್ಟಿಕೊಂಡು ಬೆಳಗ್ಗಿನ ೬ ಗಂಟೆಗೆ ಕ್ಯಾಂಪಿನಿಂದ ಹೊರಟೆವು. ೮ ಗಂಟೆಗೆ ದುರ್ಗದ ಬುಡ ತಲಪಿದೆವು. ನೆಲದಿಂದ ನೇರವಾಗಿ ಆಗಸಕ್ಕೆ ಚಾಚಿರುವ ಆ ಭೀಮಾಕಾರದ ಕರಿಯ ಕಲ್ಲುಗುಂಡ್ಡೆಯ ಎತ್ತರ ೨,೦೦೦ ಅಡಿಗಳಿಗಿಂತಲೂ ಹೆಚ್ಚು ಇರಬೇಕೆಂದು ಅಂದಾಜು. ಆದರೆ ಶಿಖರದಲ್ಲಿಯ ಬಸವನೆಡೆಗೆ ಏರಲು ನೆಲದಿಂದ ಬಳಸು ಕಾಲುದಾರಿಯಿದೆ. ಆದರೆ ನಾವು ಹೋದುದು ನೇರವಾದ ಕಡಿದಾದ ಶಿಲಾ ರೋಹಣಮಾಡಲೆಂದು. ಹೇಗಾದರೂ ಶಿಖರ ತಲಪುವುದಲ್ಲ. ಸಾಹಸ ಪ್ರಯೋಗದಿಂದ ಶಿಖರಾರೋಹಣ ನಮ್ಮ ಗುರಿ. ನಮ್ಮ ಬೆನ್ನ ಮೇಲೆ ಹ್ಯಾವರ್‌ಸ್ಯಾಕಿನಲ್ಲಿ ಬುತ್ತಿ, ಮೂಸಂಬಿ, ಸ್ವಲ್ಪ ಬಟ್ಟೆ. ಲಕ್ಷ್ಮಿ ಮೊದಲಾದ ವಿದ್ಯಾರ್ಥಿ ನಾಯಕರು ನೈಲಾನ್ ಹಗ್ಗ ಗಳ ಹೊರೆ ಹೊತ್ತಿದ್ದರು. ನಾವು ಕಾಲಿಗೆ ಬೂಟು ಧರಿಸಿದ್ದುದು ತಪ್ಪು. ಬಂಡೆಯೇರಲು ಇದು ದೊಡ್ಡ ಪ್ರತಿಬಂಧ. ಬೂಟಿನಡಿಯ ದೊರಗು ಮತ್ತು ಅಲ್ಲಿ ಹೊಡೆದಿರುವ ಆಣಿ ಗಳು ಬಂಡೆಯ ಮೇಲೆ ಜಾರಿ ನಮಗೆ ಎಲ್ಲಿಯೂ ದೃಢವಾಗಿ ನಿಲ್ಲುವುದು ಸಾಧ್ಯವಾಗ ಲಿಲ್ಲ. ಮೊದಲಿನ ೫೦ ಗಜ ನೇರವಾಗಿ ಏರುವಾಗ, ಏರಿಕೆ ಅಷ್ಟೊಂದು ತೀವ್ರವಾಗಿರ ದಿದ್ದುದರಿಂದ ಬೂಟುಗಳಿಂದ ತೊಂದರೆಯಾಗಲಿಲ್ಲ. ಆದರೆ ಮುಂದೆ ಹತ್ತಬೇಕಾದರೆ ಬರಿಕಾಲಿನ ನಡಿಗೆಯೊಂದೇ ಗತಿ. ಬೂಟುಗಳನ್ನು ಕಳಚಿ ಒಂದರ ಲೇಸನ್ನು ಇನ್ನೊಂದಕ್ಕೆ ಕಟ್ಟಿ, ಹೆಗಲ ಮೇಲೆ ಬೂಟು ಮಾಲೆ ಧರಿಸಿದೆವು. ಮೇಲಕ್ಕೆ ಕೈಕಾಲುಗಳು ಸಹಾಯದಿಂದ ತೆವಳಿ ಹತ್ತಿದೆವು. ಬಿರುಕುಗಳಿಗೆಲ್ಲ ಕೈಕಾಲು ತುರುಕಿ ದೇಹವನ್ನು ಮೇಲೆ ಮೇಲೆ ಸಾಗಿಸಿ ದೆವು. ಒಂದು ಘಟ್ಟಕ್ಕೆ ಬರುವಾಗ ಮೇಲೆ ಹತ್ತುವುದು ಸಾಧ್ಯವೇ ಇಲ್ಲ ಎಂದಾಯಿತು; ಕಲ್ಲು ಸ್ವಲ್ಪ ಒಳಗೆ ಹೋಗಿ ಆ ಮೇಲೆ ನಮ್ಮ ಮೇಲೆಯೇ ಉಬ್ಬಿ ಚಾಚಿತ್ತು. ಆದ್ದರಿಂದ

ಬದಿಗೆ ಸರಿದು ಈ ಉಬ್ಬನ್ನು ಬಳಸಿ ಹತ್ತಬೇಕು. ಸ್ವಲ್ಪ ವಿಶ್ರಮಿಸೋಣ ಎಂದು ಬಂಡೆಯ ಮೇಲೆ ಕುಳಿತು ನೋಡುತ್ತೇವೆ—ನಾವು ಮೇಲೆ ಬಂದ ದೂರ ಅಥವಾ ಏರಿಕೆಯ ತೀವ್ರತೆ ಭಯ ಹುಟ್ಟಿಸುವಂತಿದ್ದುವು. ನೆಲ ಅಷ್ಟು ದೂರ ಅಷ್ಟು ಕೆಳಗೆ ಇತ್ತು. ಅದನ್ನೇ ದಿಟ್ಟಿಸುತ್ತ ಕುಳಿತರೆ ನೆಲ ನಮ್ಮನ್ನು ನುಂಗಲು ಬರುವುದೋ ಎನ್ನುವ ಭಯ ಹುಟ್ಟಿಸುತ್ತಿತ್ತು. ನೆಲವನ್ನು ನೋಡುತ್ತಿದ್ದಂತೆಯೇ ಮುಂದಿನ ಹಾದಿಯ ದುರ್ಗಮತೆಯ ಅರಿವೂ ಹೆಚ್ಚಾಯಿತು. ಮೇಲೆ ನೂರಾರು ಅಡಿ ಇನ್ನೂ ಕಡಿದಾಗಿ ಸಾಗಬೇಕು. ಈ ಮಧ್ಯೆ ಬಂಡೆ ಬಿಸಿಲಿನಿಂದ ಕಾದು ಅಲ್ಲಿ ಕುಳಿತಿರುವುದು ಅಸಾಧ್ಯವಾಯಿತು. ಬರಿಗಾಲು ಬರಿಗೈ ಸುಟ್ಟವು. ಹೀಗಾಗಿ ಚಲಿಸದೇ ಉಪಾಯವಿಲ್ಲ. ಲಕ್ಷ್ಮಿ, ಮೋಹನರು ಅಲ್ಲಿ ಅಡ್ಡ ಬಳಸು ದಾರಿಯಲ್ಲಿ ಮುಂದುವರಿದರು. ಮೂರು ಪ್ರತ್ಯೇಕ ನೈಲಾನ್ ಹಗ್ಗಗಳನ್ನು ತೆಗೆದುಕೊಂಡು ಆರೇಳು ಜನರ ಮೂರು ತಂಡಗಳಾಗಿ ನಮ್ಮನ್ನು ವಿಂಗಡಿಸಿ ಒಂದೊಂದು ತಂಡದವರನ್ನು ಒಂದೊಂದು ಹಗ್ಗದಿಂದ ಬಂಧಿಸಲಾಯಿತು. ಮೊದಲಿನವನು ಸಾಹಸಿ, ಗಟ್ಟಿಮುಟ್ಟಾದವನಾಗಿರತಕ್ಕದ್ದು. ಹಗ್ಗದ ಒಂದು ಕೊನೆಯನ್ನು ಅವನ ಸೊಂಟಕ್ಕೆ ಕಟ್ಟಲಾಗುವುದು. ಸುಮಾರು ಹತ್ತಡಿ ಹಿಂದೆ ಇನ್ನೊಬ್ಬನಿಗೆ ಈ ಹಗ್ಗವನ್ನು ಸುತ್ತಿ ಕಟ್ಟಲಾಗುವುದು. ಅವನಿಂದ ಹಿಂದೆ ಹತ್ತಡಿ ದೂರದಲ್ಲಿ ಇನ್ನೊಬ್ಬ. ಹೀಗೆ ಆರೇಳು ಜನರ ಮನುಷ್ಯ ಸರಪಳಿ ನಿರ್ಮಾಣವಾಗುವುದು. ಮೊದಲನೆಯವನು ತೆವಳಿ ಹರಿದು ಒಂದು ಸ್ಥಾನದಲ್ಲಿ ಸಾಕಷ್ಟು ಭದ್ರವಾಗಿ ನಿಲ್ಲುತ್ತಾನೆ. ಎರಡನೆಯವನಿಗಿಂತ ಹತ್ತು ಅಡಿ ಮುಂದೆ ಹೋಗುವಂತಿಲ್ಲವಷ್ಟೆ. ಹಾಗೆ ಹರಿಯುವಾಗ ಅವನನ್ನು ಹಿಂದಿನವನು ಹಗ್ಗದ ಹಿಡಿತದಿಂದ ಜಾರದಂತೆ ನಿಯಂತ್ರಿಸಲು ಸಾಧ್ಯವಾಗುತ್ತದೆ. ಮೊದಲನೆಯವನು ನಿಂತೊಡನೆ ಅವನು ಎರಡನೆಯವನನ್ನು ಬಿಲೇ ಮಾಡುತ್ತಾನೆ. ಇವನನ್ನು ಮೂರನೆಯವನು ಸಹ ಬಿಲೇ ಮಾಡುತ್ತಿರುತ್ತಾನೆ. ಮುಂದೆ ಮೂರನೆಯವನು ತೆವಳುತ್ತಾನೆ. ಈ ಮಧ್ಯೆ ಒಂದೇ ಕಡೆ ಮೂರು ಜನ ಸೇರುವುದು ಅಪಾಯಕರವಾದರೆ ಮೊದಲನೆಯವನು ಮುಂದೆ ಹೋಗಬಹುದು. ಮುಖ್ಯ ತತ್ತ್ವವಿಷ್ಟು : ಒಂದು ಸಲಕ್ಕೆ ಒಬ್ಬ ಮಾತ್ರ ತೆವಳುತ್ತಿರಬೇಕು ; ಉಳಿದವರು ಇರುವಲ್ಲಿಯೇ ಭದ್ರವಾಗಿ ಬಂಡೆಗೆ ಅಂಟಿಕೊಂಡಿರಬೇಕು. ಇದರಿಂದ ಹರಿಯುತ್ತಿರುವವನ ಕಾಲು ಜಾರಿ ಸಮತೋಲ ತಪ್ಪಿದ ಸಂದರ್ಭದಲ್ಲಿ ಉಳಿದವರು ಅವನನ್ನು ಹಿಡಿತದಲ್ಲಿಟ್ಟು ರಕ್ಷಿಸಲು ಸಾಧ್ಯವಾಗುವುದು. ಸಹಜೀವನ, ಸಹಕಾರದ ಸರಿಯಾದ ಅರ್ಥ ಅಪಾಯದ ಪ್ರಪಾತದೆದುರು ತಿಳಿಯುವಷ್ಟು ಚೆನ್ನಾಗಿ ಬೇರೆಲ್ಲಿಯೂ ತಿಳಿಯುವುದಿಲ್ಲ. ಮೇಲೆ ವಿವರಿಸಿದ ಹರಿಯುವಿಕೆಗೆ ಕ್ರಮಕ್ಕೆ ಕಂಬಳೀಹುಳದ ಕ್ರಮ ಎಂದು ಹೆಸರು.

ದೊಡ್ಡ ಕಂಬಳೀಹುಳು ಸರಿಯುವುದನ್ನು ಪರಿಶೀಲಿಸಿ—ಮೊದಲು ಅದರ ಮೂತಿ ನುಸುಳುತ್ತದೆ, ಮತ್ತೆ ಹಿಂದಿನ ಉಂಗುರವನ್ನೆಳೆದುಕೊಳ್ಳುತ್ತದೆ. ಹೀಗೆ ಅದು ಮುಂದೆ ಮುಂದೆ ಹರಿಯುತ್ತದೆ. ನಾವು ಕಂಬಳೀಹುಳದ ಕ್ರಮದಲ್ಲಿ ಒಂದು ಗಂಟೆ ತೆವಳಿ ಬೆಟ್ಟದ ಎರಡು ಮೈ ಸೇರಿದ ನಿರಿಗೆ ಪ್ರದೇಶವನ್ನು ತಲಪಿದೆವು. ಇಂಥ ಒಂದು ಸರಪಳಿಯಲ್ಲಿ ನನ್ನ ಹಿರಿಮಗ ಅಶೋಕನೂ ನಾನೂ ಇದ್ದೆವು. ಉರುಳಿದ್ದರೆ ಒಂದೇ ಬುಟ್ಟಿಯಲ್ಲಿ ಎಲ್ಲ ಮೊಟ್ಟೆಗಳನ್ನು ಇಡಬಾರದು ಎನ್ನುವ ಗಾದೆಗೆ ಇನ್ನೊಂದು ಪುರಾವೆ ಸಿಕ್ಕಿದಂತಾಗುತ್ತಿತ್ತು.

ನಿರಿಗೆಯಲ್ಲಿ ಸ್ವಲ್ಪ ನೆರಳಿತ್ತು. ೧,೦೦೦ ಅಡಿ ಎತ್ತರದಲ್ಲಿದ್ದೇವೆ. ಎಡಗಡೆ ಬಲಗಡೆ ಬೆಟ್ಟದ ಉಬ್ಬು ಪ್ರದೇಶಗಳು, ಅಗ್ರಭಾಗ ಇನ್ನೊಂದು ಸಾವಿರ ಅಡಿ ಮೇಲೆ. ಒಂದೋ ಈ ನಿರಿಗೆಯಲ್ಲಿಯೇ ಮೇಲೆ ಹೋಗಬೇಕು, ಇಲ್ಲ ಕೆಳಗೆ ಇಳಿಯಬೇಕು. ಪುನಃ ಇನ್ನೊಂದು ಮೈಗೆ ಹೋಗುವುದು ಆ ಬಿಸಿಲಿನ ಝಳದಲ್ಲಿ ಸಾಧ್ಯವಿಲ್ಲ. ಮೇಲಿನ ಸಾವಿರ ಅಡಿ ಅತಿ ಕಡಿದಾದದ್ದು. ನೀರು ಹರಿದು ಹರಿದು ನಿರಿಗೆ ಬಲು ನುಣುಪಾಗಿತ್ತು. ನಮ್ಮ ಬಳಗದಲ್ಲಿ ಅಶೋಕನ ಸಮೇತ ಎಂಟು ಜನ ಮಾತ್ರ ಈ ಕೊನೆಯ ಸಾಹಸ ನಿರ್ವಹಿಸಲು ಶಕ್ತರು ಎಂದು ನನಗೆ ಇಷ್ಟರಲ್ಲಿ ಮನವರಿಕೆಯಾಗಿತ್ತು. ಅವರನ್ನು ಆರಿಸಿ ಲಕ್ಷ್ಮಿಯ ನೇತೃತ್ವದಲ್ಲಿ ಕಂಬಳೀ ಹುಳದ ಕ್ರಮದಲ್ಲಿ ಮೇಲೆ ಹೋಗಲು ಕಳಿಸಿಬಿಟ್ಟೆ. ಉಳಿದವರಲ್ಲಿ ಹಲವರಿಗೆ ಮುಖ ಕೆಟ್ಟಿತು. ಅವರೆಲ್ಲರೂ ಮೇಲೇರಲು ಅತ್ಯುತ್ಸುಕರಾಗಿದ್ದರು. ಪ್ರತಿಯೊಬ್ಬನೂ ಸಾಹಸ ಪ್ರದರ್ಶನ ಮಾಡಲು ಮುನ್ನುಗ್ಗುವುದು ಸಹಜವೇ. ಅಪಾಯ ಸನ್ನಿವೇಶದಲ್ಲಿ ಮುಂದಾಳುವಿನ ಮುಂದೆ ಹೆಜ್ಜೆ ಹೆಜ್ಜೆಗೆ ಬರುವ ಪ್ರಶ್ನೆ ಇದೇ—ವೈಯಕ್ತಿಕ ದಾಕ್ಷಿಣ್ಯಕ್ಕೆ ಎಡೆಗೊಡದೇ ನಿಷ್ಪಕ್ಷಪಾತವಾಗಿ ಜ್ಞೇಯನಿಷ್ಠವಾಗಿ ನಿರ್ಧರಿಸಬೇಕು. ಒಂದು ವಿಷಯ ಮುಂದಾಳು ಚೆನ್ನಾಗಿ ತಿಳಿದಿರತಕ್ಕದ್ದು. ಇಂಥ "ಸ್ವಯಂಕೃತಾಪರಾಧ"ಗಳಲ್ಲಿ ಎಲ್ಲವೂ ಸುಗಮವಾಗಿ ಎಲ್ಲರೂ ಸುರಕ್ಷಿತರಾಗಿ ಮರಳಿದರೆ ಹೊಗಳುವವರು ಕೇವಲ ಕೆಲವರು. ಉಳಿದವರು ಒಂದೋ ತಾತ್ಸಾರ ಮನೋವೃತ್ತಿ ಪ್ರದರ್ಶಿಸುತ್ತಾರೆ ; ಇಲ್ಲ ಮತ್ಸರಿಗಳಾಗಿ ರುತ್ತಾರೆ. ಏನಾದರೂ ಅಲ್ಪ ಸ್ವಲ್ಪ ಪರಮೋಸದಿಂದಲೇ ಆದರೂ, ಅಪಾಯ ಘಟಿಸಿದರೆ, ಸಹಾನುಭೂತಿ, ಸಹಾಯ ನೀಡುವವರು ಬೆರಳೆಣಿಕೆಯಲ್ಲಿ ಕೂಡ ಸಿಕ್ಕುವುದಿಲ್ಲ. ಆದರೆ ದೋಷಾರೋಪಣೆ ಮಾಡುವವರು ಧರ್ಮಾರ್ಥ ಸೂಚನೆ ನೀಡುವವರು ವಿಪುಲವಾಗಿರು ತ್ತಾರೆ. ಇದೆಲ್ಲ ಗೊತ್ತಿದ್ದೂ ಮೆರವಣಿಗೆ ಸಾಗಿಯೇ ಇರುತ್ತದೆ ಅನ್ನಿ. ಇಂಥ ಅಪಾಯವನ್ನೆ ದುರಿಸಿ ಜಯ ಲಭಿಸುವಾಗ ನಮಗೊದಗುವ ಕೃತಾರ್ಥತೆ ಅದನ್ನು ಅನುಭವಿಸಿದವರಿಗೇ ಗೊತ್ತು. "ಬಂಡೆ ಏರುವುದೇಕೆ ? ಏರದಿದ್ದರೆ ಅಥವಾ ಬಳಸುದಾರಿಯಿಂದ ಏರಿದರೆ ಆಗದೇ ?" ಎಂದು ಏರದಾತ ಏರಿದಾತನನ್ನು ಪ್ರಶ್ನಿಸಿದಾಗ "ಅದು ಇರುವುದರಿಂದ ಏರಿದೆ. ಏರಿಮೇಲೆ ಸೇರಿದ ಮೇಲೆ ಏಕೆ ಏರಿದೆ ಎಂಬುದರ ಅರಿವಾಯಿತು" ಎಂದನಂತೆ.ಕೃತಾರ್ಥತೆ ಗಾಗಿ ಬಂಡೆ ಏರಬೇಕು. ಇಳಿಯುವವರ ಜತೆಗೆ ನಾನೂ ಇದ್ದೆ. ಎಷ್ಟೋ ಸಲ ಕಡಿದಾದ ಬಂಡೆ ಇಳಿಯುವುದು ಏರುವುದಕ್ಕಿಂತಲೂ ಕಠಿಣ. ನಮಗಿಲ್ಲಿ ಆ ಅನುಭವವಾಯಿತು. ಕಾಲು ಕೆಳಗೆ ಇಳಿ ಬಿಟ್ಟು ಕುಳಿತು ಕೈಕಾಲುಗಳ ಸಹಾಯದಿಂದ ಜಾರಿ ಇಳಿಯುವುದೊಂದೇ ಶರಣು. ಒಂದೊಂದು ಸಲಕ್ಕೆ ೫ ಅಡಿ ದೂರ ಜಾರುತ್ತ ಜಾರುತ್ತ ಆ ಸಾವಿರ ಅಡಿಯನ್ನು ಮುಗಿಸಿದೆವು. ಜಾರುವಿಕೆಯ ಅನುಭವ ಸೊಗಸಾಗಿತ್ತು. ಇಳಿದು ನಿಂತಾಗ ನಮಗೆ ಲಭಿಸಿದ ಬೆಟ್ಟದ ಪ್ರಸಾದ ಗೊತ್ತಾಯಿತು—ನಮ್ಮೆಲ್ಲರ ಖಾಕಿ ಪ್ಯಾಂಟಿನ ಪೃಷ್ಠಭಾಗ ಹರಿದು ಛಿದ್ರ ವಿಚ್ಛಿದ್ರವಾಗಿತ್ತು ! ಖಂಡಿತ ಪೃಷ್ಠಪ್ಯಾಂಟಿಗಳು ನಾವಾಗಿದ್ದೆವು ! ಸದ್ಯ ನಾವು ಪೇಟೆಯಲ್ಲಿಲ್ಲವಲ್ಲ, ಹಿಂತಿರುಗುವುದು ನಮ್ಮ ಲಾರಿಯಲ್ಲೇ ತಾನೇ ಎಂದು ಸಮಾಧಾನದ ನಿಟ್ಟುಸಿರುಬಿಟ್ಟೆವು. ಮುಂದೆ ಅರ್ಧ ಗಂಟೆಯಲ್ಲಿ ನಾವು ಬಳಸುದಾರಿಗಾಗಿ ಹತ್ತಿ ಶಿಖರ ದಲ್ಲಿ ಉಳಿದವರನ್ನು ಸಂಧಿಸಿದೆವು. ಸಾವನದುರ್ಗದ ತಳದಲ್ಲಿ ನಿಂತು ನಾವು ತೆವಳಿದ ದಾರಿ ನೋಡಿದಾಗ ಭಯವಾಯಿತು. ನಾವು ತೀರ ದಣಿದಿದ್ದೆವು. ಹಗ್ಗ ಕಟ್ಟಿಕೊಳ್ಳುವ

ಮೊದಲೇ ಯಾರಾದರೂ ಜಾರಿದ್ದರೆ ಮತ್ತೆ ಅವನ ಆಸೆ ಮುಗಿದಂತೆಯೇ. ಕೃತಾರ್ಥತೆಯ ಸಂತೋಷದೊಡನೆ ಈ ನೆನವರಿಕೆ ನನ್ನಲ್ಲಿ ಈಗಲೂ ಚಳಿ ಹುಟ್ಟಿಸುತ್ತದೆ.

ಯೂನಿವರ್ಸಿಟಿಯಿಂದ ಧನಸಹಾಯ ಮಂಗಡವಾಗಿ ದೊರೆಯಿತು. ಸರಕಾರದಿಂದ ಎನ್‌ಸಿಸಿ ವಿಭಾಗದ ಮೂಲಕ ಒಂದು ಸಾವಿರ ರೂಪಾಯಿ ಶಿಕ್ಷಣ ಸಾಮಗ್ರಿ ಕೊಳ್ಳಲು ದೊರೆಯಿತು. ಡಾರ್ಜಲಿಂಗಿನ ಹಿಮಾಲಯ ಪರ್ವತಾರೋಹಣ ಸಂಸ್ಥೆಗೆ ಬರೆದು ನೈಲಾನ್ ಹಗ್ಗಗಳು, ಗವಸುಗಳು ಮುಂತಾದವನ್ನು ತರಿಸಿಕೊಂಡೆವು. ಅಲ್ಲಿಂದ ಒಬ್ಬ ನುರಿತ ಶಿಕ್ಷಕನನ್ನು ನಮ್ಮ ಕುದುರೆಮುಖ ಶಿಬಿರದಲ್ಲಿ ಸಹಾಯಕ್ಕಾಗಿ ಕಳಿಸಲು ಬರೆದವು. ಅವನು ಜನವರಿ ೧೫ರ ಸುಮಾರಿಗೆ ಬೆಂಗಳೂರಿಗೆ ಬಂದು ತಲಪಬೇಕಾಗಿತ್ತು. ಮೈಸೂರು ಸರಕಾರದ ವೈದ್ಯ, ಆಹಾರ, ಅರಣ್ಯ ಮುಂತಾದ ಇಲಾಖೆಗಳಿಗೆ ಪತ್ರ ಬರೆದು ಅವರ ಸಹಕಾರ, ಸಹಾಯ ಯಾಚಿಸಿದೆವು. ಎಲ್ಲ ಕಡೆಯಿಂದಲೂ ನಮಗೆ ಸಹಕಾರ, ಪ್ರೋತ್ಸಾಹ ದೊರೆತವು. ಜನವರಿ ೩ರಂದು ಪಾರ್ಷಿಕ ಶಿಕ್ಷಣ ಶಿಬಿರ ಮುಗಿಸಿ ಮರಳುವಾಗ ಕುದುರೆಮುಖ ಕೈ ಅಳತೆ ದೂರದಲ್ಲಿರುವಂತೆ ಭಾಸವಾಯಿತು.

ಬರಸಿಡಿಲು ಬಡಿಯಿತು

ಹೀಗೆ ನಮ್ಮ ವಿಶಿಷ್ಟ ಪ್ರಯತ್ನಗಳೂ. ನಾಟಕದಲ್ಲಿ ಸನ್ನಿವೇಶಗಳು ಮೊದಲೇ ನಿಯಮಿಸಿದಂತೆ ನಡೆಯುವ ರೀತಿಯಲ್ಲಿ, ಕುದುರೆಮುಖದೆಡೆಗೆ ಸಂಗಮಿಸಿ ಹರಿಯುತ್ತಿದ್ದುವು. ಈ ಘಟನಾಪರಂಪರೆಗಳನ್ನು ಅವುಗಳಿಂದ ಪ್ರತ್ಯೇಕವಾಗಿ ನಿಂತು ಸಿಂಹಾವಲೋಕಿಸುವಾಗ ನನಗೇ ಆಶ್ಚರ್ಯವಾಗುತ್ತಿತ್ತು. ಯಾವ ಶಕ್ತಿ ಒಂದು ಕಡೆ ನಮಗೆ ಪ್ರೇರಣೆ, ಚೇತನ ನೀಡಿ ಇವುಗಳನ್ನು ನಮ್ಮಿಂದ ನಿರ್ವಹಿಸುವಂತೆ ಮಾಡುತ್ತಿದ್ದಿತೋ ಅದೇ ಶಕ್ತಿ ಇನ್ನೊಂದು ಕಡೆ ಒಂದು ದೊಡ್ಡ ದುರಂತ, ದುಃಖಮಯ ಘಟನೆಗೂ ಅದೇ ಸಮಯದಲ್ಲಿ ಪೀಠಿಕೆ ಹಾಕುತ್ತಿತ್ತು. "ಆದ್ದರಿಂದ ದೇವರನ್ನು ನಂಬಿ" ಎನ್ನುವ ಪಲಾಯನವಾದಿಗಳ ಅನುಕೂಲ ತರ್ಕ ಸಾಧುವಾಗದು. ನಮ್ಮ ಶಿಕ್ಷಣ ಶಿಬಿರ ಮುಗಿದ ದಿವಸ ನಾರಾಯಣ್‌ಸಿಂಗರು "ಸ್ವಲ್ಪ ಅರ್ಜೆಂಟಾಗಿ ನಾನು ಬೆಂಗಳೂರಿಗೆ ಹೋಗಬೇಕಾಗಿದೆ. ನನ್ನ ಮಗನ ಬಟ್ಟೆಗೆ ಬೆಂಕಿ ತಗಲಿ ಅವನನ್ನು ಆಸ್ಪತ್ರೆಗೆ ಸೇರಿಸಿದ್ದಾರಂತೆ..." ಎಂದು ಮುಂದಾಗಿಯೇ ಹೋದರು. ಬೆಂಗಳೂರಿಗೆ ಮರಳಿದ ಮೇಲೆ ನಾವು ವಿಚಾರಿಸಿದಾಗ ಮೇಲಿಂದ ಮೇಲೆ ಸ್ವಲ್ಪ ಮಾತ್ರ ಬೆಂಕಿಯ ಉರಿ ಹತ್ತಿದೆ, ಅಪಾಯವೇನೂ ಇಲ್ಲ ಎಂದು ಅವರೇ ವೈದ್ಯರ ಅಭಿಪ್ರಾಯದ ಪ್ರಕಾರ ಹೇಳಿದರು. ಮಗ ಸ್ವತಃ ಎಂಬಿಬಿಎಸ್‌ನ್ನು ಆ ಹಿಂದೆ ಪಾಸುಮಾಡಿದ ತರುಣ. ಜನವರಿ ಎರಡನೆಯ ವಾರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಡಿಗ್ರಿ ಪಡೆಯಬೇಕಿತ್ತು. ಆಸ್ಪತ್ರೆ ಅವನ ಮನೆಯಂತೆಯೇ ಇದ್ದುದರಿಂದ ಅಲ್ಲಿ ಉತ್ತಮ ವೈದ್ಯಕೀಯ ಚಿಕಿತ್ಸೆ ದೊರೆಯುತ್ತಿತ್ತು. ಬೇಗನೆ ಅವನು ಗುಣ ಹೊಂದುತ್ತಾನೆ ಎಂದು ನಾವೆಲ್ಲರೂ ತಿಳಿದಿದ್ದೆವು. ಆದರೆ ನಡೆದದ್ದು ತದ್ವಿಪರೀತ. ಸುಟ್ಟಗಾಯ ಹೊರಗಿನಿಂದ ತೀವ್ರವಾಗಿರಲಿಲ್ಲ, ನಿಜ. ಅದರ ಶಾಖ ಮಾತ್ರ ಒಳಗಿನ ಕೋಮಲ ಭಾಗಗಳಿಗೆ ಜಖಂ ಮಾಡಿರಬೇಕು. ದಿನೇ ದಿನೇ ಪರಿಸ್ಥಿತಿ ಉಲ್ಬಣಗೊಳ್ಳುತ್ತ ಹೋಯಿತು. ಹಗಲೂ ರಾತ್ರಿಯೂ ನಾರಾಯಣ್

ಹಿಂಗರು ಮಗನ ಜತೆಯಲ್ಲಿಯೇ ಇರಬೇಕಾದ ಪರಿಸ್ಥಿತಿ. ''ಯುದ್ಧರಂಗದಲ್ಲಿ ಗುಂಡು ಗಳ ಮಳೆಯ ನಡುವೆ, ಜನ ಮಿಡಿತೆಗಳಂತೆ ಬೀಳುತ್ತಿದ್ದಾಗ ನಾನು ಬದುಕಿ ಬಂದದ್ದು ಈ ಪರಿಸ್ಥಿತಿ ನೋಡಲೆಂದೇ ?'' ಎಂದು ಅವರು ಹೇಳಿದಾಗ, ''ಜಪಾನೀ ಕೈದಿಯಾಗಿ ಹಲವು ವರ್ಷವಿದ್ದು ನಾನು ಅವರ ಚಿತ್ರಹಿಂಸೆಗೊಳಗಾಗಿಯೂ ಖಾಯಿಲೆ ಕಸಾಲೆಗೆ ಸಿಕ್ಕಿಯೂ ಉಳಿದು ಬಂದುದು ಈ ದುಃಖ ಅನುಭವಿಸಲೆಂದೇ ?'' ಎಂದು ಅವರು ಕೇಳಿದಾಗ ಉತ್ತರ ಕೊಡಬಹುದಾದ ಶಕ್ತಿ ಉತ್ತರವೀಯಲಿಲ್ಲ. ಅದು ಇದ್ದರಲ್ಲವೇ ಉತ್ತರ ಕೊಡುವುದು! ಉತ್ತರ ಕೊಡಲಾಗದ ನಾವು ದಿಗಂತವನ್ನು ನೋಡಿ ಬಿಸು ಸುಯ್ದೆವು. ಅವರಾಗಿಯೇ ಒಂದು ದಿನ ಹೇಳಿದರು ''ಈ ಪರಿಸ್ಥಿತಿಯಲ್ಲಿ ನಾನು ಕುದುರೆಮುಖ ಶಿಬಿರಕ್ಕೆ ಬರುವಂತಿಲ್ಲ. ಅದರ ಕೊನೆಯ ಹಂತದ ಏರ್ಪಾಡನ್ನೂ ಮಾಡುವಂತಿಲ್ಲ. ನೀವು ವಿಶಿಷ್ಟ ಹೊಣೆಗಾರಿಕೆಯನ್ನೂ ಹೊತ್ತು ಮುಂದುವರಿಸಿಕೊಂಡು ಹೋಗಬೇಕು.''

ನಾನೆಂದೆ ''ಈ ಶಿಬಿರವನ್ನು ನಡೆಸುವ ನಡೆಸದಿರುವ ಪ್ರಶ್ನೆ ನನಗೆ ಬರುವುದೇ ಇಲ್ಲ. ನಾವು ಒಂದು ಕೂಟವಾಗಿ ಸ್ವಸಂತೋಷದಿಂದ ಆರಿಸಿಕೊಂಡ ಸಾಹಸವಿದು. ಇದರಲ್ಲಿ ಮುಖ್ಯ ಸೂತ್ರಧಾರರಾದ ನೀವೇ ಬಂದು ನಮ್ಮೊಡನೆ ಇದ್ದು ನಮ್ಮ ಚಟುವಟಿಕೆಗಳಿಗೆ ಆಧಾರ, ಸ್ಥಿರತೆ ನೀಡದಿದ್ದರೆ ಅಂಥ ಶಿಬಿರ ಬರೀ ಯಾಂತ್ರಿಕವೆನಿಸುತ್ತದೆ. ಯಾಂತ್ರಿಕತೆ ಉತ್ಸಾಹಹೀನತೆ ಇಂಥ ಶಿಬಿರದಲ್ಲಿ ಎಲ್ಲಿಯೂ ತಲೆದೋರಬಾರದು. ಮತ್ತೆ ನೀವಿಲ್ಲಿ ಇಂಥ ದುಃಖ ವಾತಾವರಣದಲ್ಲಿರುವಾಗ ನಾವು ಅಲ್ಲಿ ಹೇಗೆ ಸಂತೋಷದಿಂದಿರುವುದು ? ಅಲ್ಲದೆ ನಿಮಗೆ, ನಿಮ್ಮ ಮಗನ ಚಿಂತೆಯೊಡನೆ ಕುದುರೆಮುಖಕ್ಕೆ ಹೋದ ೩೭ ಮಕ್ಕಳ ಚಿಂತೆಯೂ ಸೇರುವುದು. ದೂರವಿದ್ದಾಗ ಚಿಂತೆ ಹೆಚ್ಚಷ್ಟೆ. ಆದ್ದರಿಂದ ಈಗ ಶಿಬಿರ ವನ್ನು ಮುಂದೂಡೋಣ. ನಿಮ್ಮ ಕುಮಾರ ಅಪಾಯದಿಂದ ಪಾರಾದ ಮೇಲೆ ಸಂತೋಷದಿಂದ ನಡೆಸೋಣ.''

ನಮ್ಮನ್ನು ಹಿಂದೆ ಸಾವನದುರ್ಗಕ್ಕೆ ಕಳಿಸಿದ ಇವರು, ನಾನು ಹುಡುಗರ ಜತೆಯಲ್ಲಿಯೇ ಹೋಗಿದ್ದರೂ, ನಾವು ಮರಳುವ ತನಕ ಆಹಾರ, ವಿಶ್ರಾಂತಿ ಸರಿಯಾಗಿ ಪಡೆಯದೇ ಅಸಹಾಯಕರಾಗಿ ಉದ್ವಿಗ್ನತೆಯಿಂದ ಚಡಪಡಿಸುತ್ತಿದ್ದರಂತೆ. ಆ ಕಡೆಯಿಂದ ಬರುವ ಪ್ರತಿ ಬಸ್ಸನ್ನೂ ತಡೆದು ನಮ್ಮ ವಿಚಾರ ಪ್ರಶ್ನಿಸುತ್ತಿದ್ದರಂತೆ. ನಾವು ಮರಳುವಾಗ ರಾತ್ರಿ ೧೧ ಗಂಟೆಯಾಗಿತ್ತು. ರಾತ್ರಿ ಏರಿದಂತೆ ಅವರ ಉದ್ವಿಗ್ನತೆ ಏರಿತಂತೆ. ನಾವು ಹಿಂತಿರುಗಿದ ಮೇಲೆಯೇ ಅವರು ಶಾಂತರಾದದ್ದು. ಕ್ಯಾಂಪಿನ ಪ್ರತಿ ಮಗುವೂ ತನ್ನ ರಕ್ಷಣೆಯಲ್ಲಿರುವ ಪವಿತ್ರ ನಿಧಿಯೆಂದೇ ಅವರ ವಿಶ್ವಾಸಪೂರ್ವಕ ನಂಬಿಕೆ. ಅದೇ ರೀತಿಯ ವರ್ತನೆ. ಇಂಥವರು ನಮ್ಮನ್ನು ೨೦೦ ಮೈಲಿ ಹಿರಿದೂರದ ಕುದುರೆಮುಖದ ಅಜ್ಞಾತ ಔನ್ನತ್ಯದ ಅಪಾಯದೆಡೆಗೆ ಕಳಿಸಿ ಇಲ್ಲಿ ಸುಮ್ಮನೆ ಕುಳಿತಾರೇನು ? ಅವರು ಒಪ್ಪಲಿಲ್ಲ. ''ನಾವು ನಿಶ್ಚೈಸಿದ ತಾರೀಕಿಗೆ ಹೊರಡಲೇಬೇಕು. ಮಗನ ಅಂದಿನ ಪರಿಸ್ಥಿತಿ ನೋಡಿ ನಾನು ನಿಮ್ಮ ಜೊತೆಯಲ್ಲಿ ಅಲ್ಲಿವರೆಗೆ ಬಂದು ಒಂದೆರಡು ದಿನವಿದ್ದು ಹಿಂತಿರುಗುತ್ತೇನೆ. ಇಲ್ಲ, ಶಿಬಿರ ನಡೆಯುತ್ತಿರುವಾಗ ನಡುವೆ ಬಂದು ಸೇರಿಕೊಳ್ಳುತ್ತೇನೆ. ಬೆಟಾಲಿಯನ್ ಕೈಗೊಂಡ ನಿರ್ಧಾರ ನನ್ನೊಬ್ಬನ ಹಿತಾಸಕ್ತಿಗಳನ್ನನುಸರಿಸಿ ಬದಲಾಗಬಾರದು.''

ಅವರ ಮಗನ ಪರಿಸ್ಥಿತಿ ಅತಿ ಚಿಂತಾಜನಕವಾಗಿತ್ತು. ನನಗೆ ಮತ್ತು ನಮ್ಮ ಹುಡುಗರಿಗೆ ಯಾರಿಗೂ ಉತ್ಸಾಹವಿರಲಿಲ್ಲ. "ಬೆಟಾಲಿಯನ್ ಕಮಾಂಡರನ್ನು ಬಿಟ್ಟು ಬೆಟಾಲಿಯನ್ ಇಲ್ಲ. ಈ ಸಂದರ್ಭದಲ್ಲಿ ನಾನು ಗುರುತರ ಹೊಣೆ ಹೊರಲಾರೆ. ಆದ್ದರಿಂದ ಶಿಬಿರ ವನ್ನು ಮುಂದೂಡುವುದೊಂದೇ ಮಾರ್ಗ" ಎಂದು ನಾನು ಹಠಹಿಡಿದೆ. ಅವರು ಏನೂ ಅನ್ನಲಿಲ್ಲ.

ಹುಡುಗರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಸಂಗತಿ ವಿವರಿಸಿದೆ. ಅವರಿಗೆಲ್ಲ ಹತಾಶೆ ಯಾಯಿತು, ನಿಜ. ಆದರೆ ನನ್ನ ನಿರ್ಧಾರವನ್ನು ಅನುಮೋದಿಸಿದರು.

ಕುಮಾರ ಉಳಿಯಲಿಲ್ಲ.

ಶಿಬಿರ ಮುಂದೂಡುವ ನಿರ್ಧಾರ ಕೈಗೊಂಡೊಡನೆ (ಜನವರಿ ೧೦) ನಾವು ಡಾರ್ಜಲಿಂಗಿಗೆ ತಂತಿ ಕಳಿಸಿದೆವು, ಶೆರ್ಪಾ ಶಿಕ್ಷಕ ಬರುವುದು ಬೇಡವೆಂದು. ಆದರೆ ಅಷ್ಟ ರಲ್ಲಿಯೇ ಅಲ್ಲಿಂದ ಒಬ್ಬನಲ್ಲ, ಉತ್ಸಾಹೀ ತರುಣರಿಬ್ಬರು ಹೊರಟುಬಿಟ್ಟಿದ್ದರು. ಆ ದುರ್ದಿನದ ಬೆಳಗ್ಗೆ (ಜನವರಿ ೧೫) ಅವರೂ ಬಂದಿಳಿಯಬೇಕೇ ? ಘಟನೆಗಳ ಕ್ರೂರ ಪ್ರಹಾರವೆಂದರೆ ಇದೇ. ಅವರ ಖರ್ಚು ವೆಚ್ಚವಿತ್ತು ದುಃಖದಿಂದ ಹಿಂದೆ ಕಳಿಸಿದೆವು. ಬೇರಾವ ಮಾರ್ಗವೂ ಇರಲಿಲ್ಲ.

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ
ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ
ನಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ
ನಾನವಾಪ್ತಮವಾಪ್ತವ್ಯಂ ವರ್ತ ಏವಚಕರ್ಮಣಿ
ಯದಿಹ್ಯಹಂ ನವರ್ತೇಯಂಜಾತು ಕರ್ಮಣ್ಯ ತಂದ್ರಿತಃ
ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ

ಶ್ರೀಮದ್ಭಗವದ್ಗೀತಾ

ಅನುವಾದ

ಹಿರಿಯರಾಡಿದ ನುಡಿಯು ಹಿರಿಯರಾಡಿದ ನಡೆಯು
ಅವರು ಕ್ರಮಿಸಿದ ದಾರಿ ಬರೆದಿಟ್ಟ ಸೂತ್ರ
ಲೋಕದಲಿ ಎಲ್ಲರನುಕರಿಸುವರು ಅವರಿಗದೆ
ಅನುಕೂಲ ಅದೆ ಮಾನದಂಡ ಅದೆ ಶಾಸ್ತ್ರ
ನೋಡೆನ್ನ ಪಾರ್ಥ ! ಎನಗಿಲ್ಲ ಮೂರ್ಲೋಕದಲಿ
ಮಾಡಲೇಬೇಕಾದ ಕರ್ತವ್ಯ ಭಾರ
ನನಗೇನು ಬೇಕಿಲ್ಲ ಬೇಕಾದುದಿದೆಯೆಲ್ಲ
ಆದರೂ ತೊರೆದಿಲ್ಲ ಕರ್ಮದಾಚಾರ
ಎಂದಾದರೆಚ್ಚರವ ಮರೆತು ನಾ ಕರ್ಮವನು
ತ್ಯಜಿಸಿದೊಡೆ ನನ್ನ ನಡೆ ಸರಿಯೆಂದು ತಿಳಿದು
ಲೋಗರದನನುಸರಿಸಿ ಕರ್ಮವನೆ ಮಾಡದಿರೆ
ಅಪರಿಮಿತ ಹಾನಿಯಾಗದೆ ಲೋಕವಳಿದು ?

ವಿಜಯನಾಥ ಭಟ್ಟ 'ಕೌಂಡಿನ್ಯ'

೧೯೬೭

ತೊರೆ ಹರಿಯಿತು

ಜನವರಿ ಕೊನೆಯ ವಾರದಲ್ಲಿ ಓಸಿಯವರು ಆಫೀಸಿಗೆ ಬಂದರು. ಮೊದಲಿನ ಗೆಲವಿಲ್ಲ, ದೃಷ್ಟಿ ಅಂತರ್ಮುಖಿಯಾಗಿದೆ. ಕರ್ತವ್ಯ ನಿರ್ವಹಣೆಯೊಂದೇ ಜೀವನದ ಪರಮ ಪದವಿ ಪಡೆಯುವ ದಾರಿ ಎಂದು ತಿಳಿದು ಅನುಷ್ಠಾನಕ್ಕೆ ತಂದವರಿವರು. ಕಛೇರಿಯ ದಫ್ತರ ಗಳನ್ನು, ಹಳೆಯ ಕಾಗದ ಪತ್ರಗಳನ್ನು ಓದುತ್ತಿದ್ದರು. ಫೋನಿಗೆ ಉತ್ತರ ಕೊಡು ತ್ತಿದ್ದರು. ನಾನು ಸುಮ್ಮನೇ ಅವರೆದುರು ಕುಳಿತಿದ್ದೆ. ಏನನ್ನು ಹೇಗೆ ಮಾತಾಡಲಿ ? ಅವರೇ ತೊಡಗಿದರು. "ಹಾಗಾದರೆ ಇನ್ನು ಮುಂದಿನ ದಾರಿ ಏನೆಂದು ಯೋಚನೆ ಮಾಡಿದ್ದೀರಿ ?"

"ಈಗಿನ ಸನ್ನಿವೇಶದಲ್ಲಿ..."

"ಸನ್ನಿವೇಶ ಮುಗಿಯಿತಲ್ಲ. ಯೂನಿವರ್ಸಿಟಿಗೆ, ಹುಡುಗರಿಗೆ ಕೊಟ್ಟ ಮಾತು ನಾವು ಉಳಿದವರು ಪೂರೈಸಲೇಬೇಕಷ್ಟೆ."

"ಆದರೆ ನೀವೀಗ ನಿಮ್ಮ ಮನೆ ಮಠ ಬಿಟ್ಟು ಅಷ್ಟು ದೂರ ಬರುವುದು ಸಾಧ್ಯವೇ, ಸರಿಯೇ ? ಆರೋಗ್ಯ ಸರಿಯಾಗಿ ಉಳಿದೀತೇ ?"

"ಸ್ವಲ್ಪ ಹೊರಗೆ ಹೋಗಿ ಬರುವುದೇ ಈಗ ಹಿತಕರ. ಹುಡುಗರ ಸಹವಾಸ ಈಗ ಮನಸ್ಸಿಗೆ ಅಗತ್ಯವಾದ ಟಾನಿಕ್."

ಕ್ಯಾಲೆಂಡರ್ ನೋಡಿ, ತಿರುವಿ ಫೆಬ್ರುವರಿ ೧೧ರಿಂದ ೨೦ರ ತನಕ ಶಿಬಿರ ನಡೆಸುವು ದೆಂದು ನಿಶ್ಚೈಸಿದೆವು. ಮತ್ತೆ ಪುನಃ ಬೇರೆ ಬೇರೆ ಇಲಾಖೆಗಳಿಗೆ ಪತ್ರ ಬರೆದೆವು. ಪೇಪರ್ಗಳಿಗೆ ಮಾತ್ರ ಬರೆಯಲಿಲ್ಲ.

ಕಾಗದದ ಕುದುರೆಮುಖ

ಮುಂದಿದ್ದ ದಿವಸ ೧೨ ಮಾತ್ರ. ಆಗಬೇಕಾಗಿದ್ದ ಕೆಲಸ ಅಗಾಧವಾಗಿತ್ತು. ಆಹಾರ ಸಾಮಗ್ರಿಗಳ ಶೇಖರಣೆ ; ಟೆಂಟ್ ಮತ್ತು ಶಿಕ್ಷಣ ಸಾಮಗ್ರಿಗಳ ಕ್ರಮಬದ್ಧವಾದ ಜೋಡಣೆ ; ಎರಡು ಮಿಲಿಟೆರಿ ಲಾರಿಗಳನ್ನು ಓಡಿಸಲು ಮಿಲಿಟೆರಿ ಅಧಿಕಾರಿಗಳಿಂದ ಅನುಮತಿ ; ಅಡುಗೆಯವರ ಏರ್ಪಾಡು ; ಹುಡುಗರನ್ನು, ಪೋಷಾಕು, ಸರಂಜಾಮು ಕೊಟ್ಟು ಸಿದ್ಧಪಡಿಸುವುದು—ಇವುಗಳಲ್ಲಿ ಯಾವುದೇ ಒಂದು ಆಗದಿದ್ದರೆ ಶಿಬಿರ ನಡೆಯುವಂತಿಲ್ಲ. ನಮ್ಮ ಏಓ ಅಶ್ವತ್ಥನಾರಾಯಣರಿಗೆ ಬೆಟಾಲಿಯನ್ ಕೆಲಸ ಉಸಿರು ಕಟ್ಟಿಸುವಷ್ಟು ಇದ್ದುದರಿಂದ ಕುದುರೆಮುಖದ ವಿಚಾರದಲ್ಲಿ ತೊಂದರೆ ಇದುವರೆಗೆ ಕೊಡಲಿಲ್ಲ. ಈಗ ಆಹಾರದ ವ್ಯವಸ್ಥೆ ಮಾಡಲು ಅವರೇ ಸರಿಯೆಂದು ಅದನ್ನೂ ಅಡುಗೆಯವರನ್ನು ದೊರಕಿಸಿಕೊಡುವುದನ್ನೂ ಅಶ್ವತ್ಥರಿಗೆ ವಹಿಸಲಾಯಿತು.

"ಮಾಡೋಣ" ಎಂಬ ಹಸನ್ಮುಖವಾಣಿ ಮಾತ್ರ ಅವರಿಂದ ಉತ್ತರ. ಲಾರಿಯ ಏರ್ಪಾಡನ್ನು ಓಸಿ ವಹಿಸಿಕೊಂಡರು. ಮಿಲಿಟರಿಯಲ್ಲಿ ಒಂದು ಲಾರಿಯನ್ನು ಒಂದೂರಿಂದ ಇನ್ನೊಂದೂರಿಗೆ ಹೊರಡಿಸುವ ಮುನ್ನ ಒಂದು ಲಾರಿ ಗಾತ್ರದ ಪತ್ರವ್ಯವಹಾರ ನಡೆಸಿರಬೇಕು. ಉಳಿದಿದ್ದ ೧೦–೧೨ ದಿವಸಗಳಲ್ಲಿ ಪತ್ರಗಳೊಡನೆ ನಾರಾಯಣ್‌ಸಿಂಗರೇ ನಡೆಯುದಿದ್ದರೆ ಅನುಮತಿ ಸಕಾಲದಲ್ಲಿ ದೊರೆಯಲಾರದು. ಒಂದು ವಾರವಿರುವಾಗಲೇ ಎರಡು ಲಾರಿಗಳ ಚಾಲನೆಗೂ ಅನುಮತಿ ದೊರೆಯಿತು. ಒಂದು ಲಾರಿ ನಮ್ಮ ಬೆಟಾಲಿಯನ್ನಿನದೆ; ಇನ್ನೊಂದು ಬೇರೆ ಒಂದು ಬೆಟಾಲಿಯನ್ನಿನದು. ಉಳಿದ ಸಮಸ್ಯೆಗಳ ಪರಿಹಾರ ನನ್ನ ಮಟ್ಟದಲ್ಲಿ ನಡೆಯಲು ಸಾಧ್ಯವಿತ್ತು. ಹೀಗೆ ನಾವು ಮೂರು ದಾರಿಗಳಿಗಾಗಿ ಕುದುರೆಮುಖದ ಶಿಖರದೆಡೆಗೇರುವ ಪ್ರಯತ್ನದಲ್ಲಿ ನಿರತರಾಗಿದ್ದೆವು.

ಈ ಮಧ್ಯೆ ಎರಡನೆಯ ಪರೀಕ್ಷೆಯೊಂದು ಓಸಿಯವರ ಎದುರು ನಿಂತಿತು. ಅವರ ತೊಂಬತ್ತರ ಸಮೀಪದ ಆರಡಿ ಮೂರಿಂಚು ಎತ್ತರದ ಭೀಮಸದೃಶ ತಂದೆಯವರು, ಮೊಮ್ಮಗನ ಅಕಾಲ ನಿಧನದಿಂದ ಬಲು ಗಾಸಿಗೊಂಡ ಹಿರಿಯ ಚೇತನ, ಒಂದು ದಿವಸ ಕುರ್ಚಿಯಲ್ಲಿ ಕುಳಿತಿದ್ದಂತೆಯೇ ತಲೆ ತಿರುಗಿ ಕೆಳಗೆ ಬಿದ್ದರು. ಆಗ ಅವರ ಕಾಲಿನ ಮೂಳೆ ಮುರಿಯಿತು. ಮನಸ್ಸು, ದೇಹಗಳ ನೋವು, ಪ್ರಾಯ ೯೦. ಇನ್ನು ಮೂಳೆ ಕೂಡುವುದುಂಟೇ ? ಆದರೂ ಪ್ರಯತ್ನ ಮಾಡಲೇಬೇಕು. ನೋವಾದರೂ ಉಪಶಮನವಾದೀತು. ಪುನಃ ಆಸ್ಪತ್ರೆಯ ಯಾತ್ರೆ ನಾರಾಯಣಸಿಂಗರಿಗೆ ಪ್ರಾಪ್ತವಾಯಿತು. ಪ್ರಾಣಾಪಾಯವಿದ್ದಂತೆ ತೋರಲಿಲ್ಲ. ಆದರೆ ೯೧ರ ಪಕ್ವ ಪರಿಸ್ಥಿತಿಯಲ್ಲಿ ಏನೂ ಆಗಬಹುದು. "ಈ ಸಲ ಏನೇ ಆದರೂ ಕ್ಯಾಂಪು ನಡೆದೇತೀರಬೇಕು" ಎಂದು ಅವರಾಗಿಯೇ ನನಗೆ ಹೇಳಿದರು. ಮನೆಯಲ್ಲಿ ವೃದ್ಧ ತಾಯಿ; ಆಸ್ಪತ್ರೆಯಲ್ಲಿ ಜಖಂಗೊಂಡ ತಂದೆ. ಮಧ್ಯೆ ಎಡೆತಡೆಯಿರದ ಹೊಣೆಗಾರಿಕೆಗಳ ಪರಂಪರೆ. ಅವರ ಧೀರೋದಾತ್ತ ವ್ಯಕ್ತಿತ್ವ ಇವುಗಳಿಗೆಲ್ಲ ಸಮತೂಕವಾಗಿ ಎದ್ದು ನಿಂತು ಕರ್ತವ್ಯ ನಿರ್ವಹಿಸಿತು. ನಮ್ಮ ಲಾರಿಯೇನೋ ಸರಿಯಾಗಿತ್ತು. ಬೇರೆ ಬೆಟಾಲಿಯನ್ನಿನ ಲಾರಿ ಮಿಲಿಟರಿ ವರ್ಕ್‌ಷಾಪಿಗೆ ಆ ಮೊದಲೇ ರಿಪೇರಿಗಾಗಿ ಹೋಗಿತ್ತು. ಎರಡು ಮೂರು ದಿವಸಗಳಲ್ಲಿ ಎಲ್ಲವೂ ಸರಿಯಾಗುವುವೆಂದು ಷಾಪಿನವರು ಆಶ್ವಾಸನೆಯಿತ್ತಿದ್ದರು. ಆದರೂ ಓಸಿಯವರು ಪ್ರತಿದಿನ ತಂದೆಯವರೊಡನೆ ಕಳೆದಷ್ಟೇ ಹೊತ್ತು ಮಿಲಿಟರಿ ವರ್ಕ್‌ಷಾಪಿನಲ್ಲಿಯೂ ಕಳೆಯುತ್ತಿದ್ದರು. ರಿಪೇರಿಯ ಪ್ರಗತಿ ಏನೂ ಸಾಲದು. ಲಾರಿಯಲ್ಲಿರುವ ನ್ಯೂನತೆಗಳು ಹಲವಾರು ಎಂದೇ ಪ್ರತಿದಿನದ ವರದಿ.

ನಾವು ೧೧ರ ಬೆಳಗ್ಗೆ ಹೊರಟು ಇಡೀ ದಿವಸ ಲಾರಿ ಪ್ರಯಾಣದಲ್ಲಿ ವ್ಯರ್ಥ ಮಾಡುವುದಕ್ಕಿಂತ ೧೦ರ ಸಾಯಂಕಾಲವೇ ಹೊರಟುಹೋಗುವುದು; ಮಧ್ಯರಾತ್ರಿಯವರೆಗೂ ಚಾಲನೆ ಮಾಡಿ ಬೇಲೂರು ಸೇರಿ ಅಲ್ಲಿ ತಂಗುವುದು ಎಂದು ನಿರ್ಧರಿಸಿದೆವು. ರಾತ್ರಿ ಪ್ರಯಾಣ ಲಾರಿ ಎಂಜಿನ್ನುಗಳಿಗೂ ಒಳ್ಳೆಯದು; ದಾರಿಯಲ್ಲಿ ಬೇಲೂರನ್ನು ನೋಡಿದ ಹಾಗೆಯೂ ಆಯಿತು. ಇದು ನಮ್ಮ ಯೋಜನೆ. ದಿನ ಉರುಳಿದಂತೆ ಒಂದು ಕಡೆ ನಾರಾಯಣ್‌ಸಿಂಗರ ತಂದೆಯವರ ಆರೋಗ್ಯ ಗಾಬರಿ ಹುಟ್ಟಿಸುವಂಥ ಸ್ಥಿತಿಗೆ ಮುಟ್ಟಿತು. ಸಾಯಂಕಾಲ ಬೀಳ್ಕೊಡುವ ಮೀಟಿಂಗಿನ ಸಿದ್ಧತೆ ಮುಗಿದಿದೆ. ಆಹಾರ,

ಸಾಮಾನು, ಸರಂಜಾಮು ಎಲ್ಲ ಕ್ರಮಬದ್ಧವಾಗಿ ಲಾರಿಗೆ ಹಾರಲು ಸಿದ್ಧವಾಗಿವೆ. ಒಂದು ಲಾರಿಗೆ ಹೇರನ್ನು ಪೇರಿ ಮುಗಿಯಿತು. ಹುಡುಗರೆಲ್ಲರೂ ಉತ್ಸಾಹದಿಂದ ಬಂದು ಕಾಲೇಜಿನಲ್ಲಿ ನವಹರ್ಷ ಬೀರುತ್ತಿದ್ದಾರೆ. ಅಜ್ಞಾತ ಭವಿಷ್ಯವನ್ನು ಸ್ವಾಗತಿಸುವ, ಅಲ್ಲಿಯ ಸಂತೋಷ ಅನುಭವಿಸುವ ಕುತೂಹಲ ಅವರ ಮುಖಗಳ ಮೇಲೆ ಲಾಸ್ಯವಾಡುತ್ತಿದೆ. ಬೆಟಾಲಿಯನ್ ಆಫೀಸಿಗೆ ಫೋನ್ ಮಾಡಿದಾಗ ಓಸಿಯವರಿರಲಿಲ್ಲ. ಅಶ್ವತ್ಥರೆಂದರು "ಲಾರಿಯಿನ್ನೂ ಹೊರಗೆ ಬರುವ ಲಕ್ಷಣವಿಲ್ಲ. ಅವರ ತಂದೆಯವರ ಸ್ಥಿತಿ ಭಯಂಕರ ವಾಗಿದೆ. ಜತೆಗೆ ಓಸಿಯವರನ್ನು ಬಳ್ಳಾರಿಗೆ ವರ್ಗಾಯಿಸುವ ಆರ್ಡರೂ ಬಂದಿದೆ. ನಿಮ್ಮ ಕ್ಯಾಂಪಿನ ಕೊನೆಯ ದಿವಸ ಅವರು ಹೊಸಬರಿಗೆ ಹೊಣೆ ವಹಿಸಿಕೊಡಬೇಕು. ಆದ್ದರಿಂದ ಅವರು ಹೇಗೆ ಬರುತ್ತಾರೋ ನಾ ಕಾಣೆ. ಈ ಆಡಳಿತೆಯ ಬದಲಾವಣೆಯ ಸಂದರ್ಭದಲ್ಲಿ ನಾನೂ ಹೊರಡುವಂತಿಲ್ಲ."

"ಹರ್ಷ ಸೌಧಕ್ಕೆ ಕಳಶ" ಇಡುವಂಥ ಸುದ್ದಿ ಒಂದೇ, ಎರಡೇ? ಅವುಗಳ ಪರಂಪರೆಯೇ.

ಮೀಟಿಂಗ್ ೪ ಗಂಟೆ ಸಾಯಂಕಾಲಕ್ಕೆ. ಅಪರಾಹ್ಣ ೨ ಗಂಟೆಯ ವರೆಗೂ ಹೊಸ ಸುದ್ದಿ ಏನೂ ಬರಲಿಲ್ಲ. ಏನೇ ಆಗಲಿ ಒಂದು ಲಾರಿಯಲ್ಲಿ ಸಾಮಾನೆಲ್ಲ ಹೇರಿ ಹಿಡಿಯುವಷ್ಟು ಹುಡುಗರನ್ನು ಕರೆದುಕೊಂಡು ಹೊರಟೇ ಬಿಡುವುದು. ಉಳಿದವರು ಮರುದಿವಸ ಬೆಳಗ್ಗೆ ಬಸ್ಸಿನಲ್ಲಿ ಹೊರಟು ಬೆಳ್ತಂಗಡಿಗೆ ಸಂಜೆ ತಲಪಬೇಕು. ಬೇರಾವ ಮಾರ್ಗವೂ ಇಲ್ಲ ಎಂದು ನಾನು ನಿಶ್ಚಯಿಸಿದೆ. ಇಷ್ಟಾಗುವಾಗ ಕಾಲೇಜಿನ ಹಿಂದುಗಡೆ ಗೇಟಿನಿಂದ ಓಸಿಯವರು ಹರ್ಷವದನರಾಗಿ ಮೇಲೆ ಬರುವುದನ್ನು ಕಂಡೆ. "ಪರೀಕ್ಷೆಯಲ್ಲಿ ಗೆದ್ದಂತಾಯಿತು" ಎಂದರು. ಮುಂದುವರಿಯುತ್ತ "ಮೊದಲು ವರ್ಕ್‌ಷಾಪ್ ನೋಡಿದೆ. ಲಾರಿ ಇನ್ನೊಂದು ವಾರದ ಮೇಲಾದರೂ ಹೊರಡುವುದೋ ಇಲ್ಲವೋ ಸಂದೇಹ. ಅಲ್ಲಿಂದ ಸೀದಾ ಗ್ರೂಪ್ ಕಮಾಂಡರರ ಹತ್ತಿರ ಹೋದೆ. ಪರಿಸ್ಥಿತಿ ವಿವರಿಸಿದೆ. ಅವರ ಹತೋಟಿಯಲ್ಲಿರುವ ಬೇರಾವುದಾದರೂ ಬೆಟಾಲಿಯನ್ ಲಾರಿ ಕೊಡಿಸಲು ವಿನಂತಿಸಿದೆ. ಅವರ ಅನುಮತಿ ಯಿಂದ ನನ್ನ ಹಳೆಯ ಮಿತ್ರ, ಸಹೋದ್ಯೋಗಿ, ಈಗ ಒಂದನೆಯ ಮೈಸೂರಿನ ಓಸಿ ಮೇಜರ್ ಎಂ.ಎಸ್. ಖಾನ್‌ರಿಗೆ ಫೋನ್ ಮಾಡಿದೆ. 'ಖಾನ್! ನಾನು ತೊಂದರೆಯಲ್ಲಿ ದ್ದೇನೆ. ೧೦ ದಿವಸಗಳ ವರೆಗೆ ಈಗಿಂದೀಗಲೇ ಕುದುರೆಮುಖಕ್ಕೆ ಹೋಗಿಬರಲು ನಿಮ್ಮ ಲಾರಿ ಬೇಕು' ಎಂದೆ. 'ಕಳಿಸಿಕೊಡುತ್ತೇನೆ' ಒಂದೇ ಉತ್ತರ ಅವರದು. ನಾನವರ ಆಫೀಸಿಗೆ ಹೋಗುವಷ್ಟರಲ್ಲಿಯೇ ಡ್ರೈವರ್, ಲಾರಿ ಎಲ್ಲವನ್ನೂ ಅವರು ಸಿದ್ಧಪಡಿಸಿ ಹೊರಡಿಸಿಟ್ಟಿ ದ್ದರು. ಲಾರಿ ಡ್ರೈವರ್ ರಜೆಯಲ್ಲಿದ್ದುದರಿಂದ ಕಾರ್ ಡ್ರೈವರ್ ಲಿಂಗೋಜಿಯನ್ನು ಈ ಲಾರಿಯಲ್ಲಿ ಕಳಿಸಿದ್ದಾರೆ. ಈ ಲಿಂಗೋಜಿಯೂ ನನ್ನ ಹಳೆಯ ಅನುಯಾಯಿ."

ಕಾಲೇಜಿನ ಹಿಂದೆ ಅನ್ಸಾರಿ (ನಮ್ಮ ಡ್ರೈವರ್) ಲಾರಿಯೂ ಲಿಂಗೋಜಿ ಲಾರಿಯೂ ಭರದಿಂದ ಹೇರಲ್ಪಡುತ್ತಿದ್ದುವು. ಮೀಟಿಂಗು ಪ್ರಾರಂಭವಾಗುವ ಮೊದಲು ಓಸಿಯವರು ಇನ್ನೊಂದು ಮಾತು ಹೇಳಿದರು "ನಾನು ನಿಮ್ಮೊಡನೆ ಬರುತ್ತೇನೆ. ಅಲ್ಲಿ ಒಂದೆರಡು ದಿನ ವಿದ್ದು ಹಿಂತಿರುಗುತ್ತೇನೆ. ಈ ದಿವಸ ಬೆಳಗ್ಗೆ ನನ್ನ ತಂದೆಯವರನ್ನೇ ಕೇಳಿಬಿಟ್ಟೆ: ಎರಡೂ ಕರ್ತವ್ಯಗಳೇ, ಎರಡೂ ಅತಿಮುಖ್ಯವಾದವುಗಳೇ, ಯಾವುದನ್ನು ನಿರ್ವಹಿಸಲಿ, ಯಾವು

ದನ್ನು ನಿರ್ವಹಿಸದಿರಲಿ, ಎಂದು. ಅವರು ಸ್ಪಷ್ಟವಾಗಿ ಹೇಳಿದರು 'ನೀನು ಹೋಗು. ಕ್ಯಾಂಪನ್ನು ಪೂರ್ಣವಾಗಿ ಸರಿಯಾಗಿ ನಡೆಸು. ನೀನು ಹಿಂತಿರುಗಿ ಬರುವ ವರೆಗೂ ನನಗೇನೂ ಆಗುವುದಿಲ್ಲ' ಎಂದು. ಈಗ ನಾನು ಲಘುವಾಗಿ ಇದ್ದೇನೆ.''

ಒಳ್ಳೆಯ ಕೆಲಸಕ್ಕೆ ನೂರೆಂಟು ವಿಘ್ನ. ಅವನ್ನು ಯಶಸ್ವಿಯಾಗಿ ಎದುರಿಸಿದರೆ ನೂರೊಂಬತ್ತನೆಯದು ಜಯ. ಮೀಟಿಂಗಿನಲ್ಲಿ ಪ್ರಿನ್ಸಿಪಾಲ್ ಆರ್. ಆರ್. ಉಮರ್ಜಿ ಮತ್ತು ಅವರ ಸಹೋದ್ಯೋಗಿಗಳು ಸಾಹಸಪ್ರಿಯರಿಗೆ ಶುಭ ಕೋರಿದರು. ಕಾಲೇಜಿಗೆ, ಬೆಟಾಲಿಯನ್ನಿಗೆ, ಯೂನಿವರ್ಸಿಟಿಗೆ ಜಯ ಜಯಕಾರ ಘೋಷಿಸಿ ಅದು ಅಂತ್ಯವಾಯಿತು.

ಕುದುರೆಮುಖದ ರಾವುತರು

ಮೂವತ್ತೇಳು ಹುಡುಗರು, ಇಬ್ಬರು ಅಡುಗೆಯವರು, ಇಬ್ಬರು ಡ್ರೈವರ್, ಒಬ್ಬ ಸೇವಕ, ಮಿಲಿಟರಿಯಿಂದ ಬಂದ ಶಿಕ್ಷಕರು ನಾಲ್ವರು ಸುಬೆದಾರ್ ಖಾನ್ವಿಲ್ಕರ್ ಮೊದಲಾದವರು, ನಾಲ್ವರು ಆಫೀಸರುಗಳು (ಲೆಫ್ಟಿನೆಂಟ್‌ಗಳಾದ ನಿಸಾರ್ ಅಹಮದ್, ಕೆಂಡಗಣ್ಣ ಸ್ವಾಮಿ, ಶಿವಪ್ಪ ಮತ್ತು ನಾನು) ಮುಖ್ಯ ನಾಯಕರು ಮೇಜರ್ ನಾರಾಯಣ್‌ಸಿಂಗ್ (ಓಸಿಯವರು) ಹೀಗೆ ೫೧ ಜನರ ತಂಡ ಸ್ವಯಂಪೂರ್ಣವಾಗಿ ಎರಡು ಲಾರಿಗಳಿಗೆ ಮಿಂಗಡಿಸಲ್ಪಟ್ಟು ಕುದುರೆಮುಖದೆಡೆಗೆ ಹೊರಟಿತು. ಅಶ್ವತ್ಥರು ಎಲ್ಲವನ್ನೂ ಅತ್ಯುತ್ತಮವಾಗಿ ಒದಗಿಸಿಕೊಟ್ಟ ಕರ್ತವ್ಯಧೀರರು. ''ಸಾಧ್ಯವಾದರೆ ಒಂದು ದಿನದ ಮಟ್ಟಿಗಾದರೂ ನಡುವೆ ಬರುತ್ತೇನೆ'' ಎಂದು ನಮ್ಮನ್ನು ಬೀಳ್ಕೊಟ್ಟರು. ಶಿಲ್ಪಿ ದೇವಾಲಯ ನಿರ್ಮಿಸುತ್ತಾನೆ. ಆದರೆ ಪ್ರವೇಶೋತ್ಸವ ಮಾಡುವವರು ಬೇರೆ. ದುಡಿಮೆ ಯಶಸ್ವಿಯಾಗಿ ಪೂರೈಸಿದುದೇ ಅವನ ನಿಜ ಪ್ರತಿಫಲ, ಪರಮ ಸಂತೃಪ್ತಿ.

ನಮ್ಮ ತಂಡದ ಪ್ರಮುಖ ಸದಸ್ಯರನ್ನು ಕುರಿತು ನಾಲ್ಕು ಮಾತು ಹೇಳುವುದು ಅಗತ್ಯ.

ನಿಸಾರ್ ಅಹಮದ್ ಅವರನ್ನು ಕನ್ನಡ ಜನ ಶ್ರೇಷ್ಠ ಆಧುನಿಕ ಕವಿ, ''ಕುರಿಗಳು ಸಾರ್, ನಾವು ಕುರಿಗಳು'' ಪದ್ಯದ ಕರ್ತೃ ಎಂದು ತಿಳಿದಿದೆಯೇ ವಿನಾ ಅವರೊಬ್ಬರು ಕಾಲೇಜು ಲೆಕ್ಚರರು, ಎನ್‌ಸಿಸಿ ಆಫೀಸರರು ಎಂದು ತಿಳಿದಿಲ್ಲ. ಅವರು ನನ್ನನ್ನು ''ಗುರುಗಳೇ'' ಎಂದು ಕರೆಯುವುದೂ ನಾನವರನ್ನು ''ಕವಿಗಳೇ'' ಎಂದು ಓಲೈಸುವುದೂ ಸ್ವಾಭಾವಿಕವಾಗಿ ಹೋಗಿವೆ. ಭಾವ ಜೀವಿ, ತುಂಬ ಮಮತೆಯ ಹೃದಯ. ಥಕ್ಕನೆ ಸಿಟ್ಟಿಗೆದ್ದು ಏನನ್ನಾದರೂ ಹೇಳುವರು. ಮರುಗಳಿಗೆಯಲ್ಲಿ ಮೊದಲಿಗಿಂತಲೂ ಆತ್ಮೀಯವಾಗಿ ಮಾತಾಡುವರು. ಕೆಲಸದಲ್ಲಿ ನಿಷ್ಣಾತರು. ಹುಡುಗರಿಗೆ ಅಚ್ಚುಮೆಚ್ಚಿನ ಗುರುಗಳು. ಯಾವುದಾದರೊಂದು ತಿರಸ್ಕಾರದ ವಿಚಾರ ಹೇಳುವಾಗ ''ಕತ್ತೆ ಸ್ವರೂಪ'' ಎನ್ನುವ ಉಪ್ಪಿನಕಾಯಿಯನ್ನು ಇವರು ಚಪ್ಪರಿಸುವುದನ್ನು ಕೇಳುವುದು ಬಲು ಮೋದಕರವಾಗಿರುತ್ತದೆ. ಇವರು ಮದುವೆಯಾಗಿ ಒಂದು ವರ್ಷವಾಗುತ್ತ ಬಂದಿದೆ. ಹೆಂಡತಿಯನ್ನು ತವರ್ಮನೆಗೆ ಕಳಿಸಿದ್ದಾರೆ. ಶುಭ ಸಮಾಚಾರ ಯಾವ ಗಳಿಗೆಯಲ್ಲಿಯೂ ಬರಬಹುದು. ನಮ್ಮ ಲಾರಿ ಹೊರಡುವ ವರೆಗೂ ಅವರು ಬರುವ, ಬರದಿರುವ ವಿಚಾರದಲ್ಲಿ ಅರ್ಧಮನಸ್ಕರಾಗಿದ್ದರು. ಕವಿ ಹೃದಯ ಹೋಗು ಅನ್ನುತ್ತಿದೆ, ಸಂಸಾರೀಭಾವ ಇಲ್ಲೇ ಇರು ಅನ್ನು

ತ್ತಿದೆ. ಹೇಗೂ ಟ್ರಂಕ್‌ಫೋನ್ ಸೌಕರ್ಯವಿದೆ, ಯಾವಾಗ ಬೇಕಾದರೂ ಹೊರಟು ಹಿಂದೆ ಬಂದುಬಿಡಬಹುದು ಎನ್ನುವ ಆಶ್ವಾಸನೆ ಮೇರೆ ನಮ್ಮೊಡನೆ ಹೊರಟರು.

ಶಿವಪ್ಪ—ಬರೀ ಶಿವಪ್ಪ ಅಲ್ಲ, ನಮ್ಮ ಶಿವಪ್ಪ. ಅವರ "ಏಕಾಂತ" (ಕವನ ಸಂಕಲನ) ಲೋಕಾಂತವಾಗಿ ಥಕ್ಕನೆ ಅವರನ್ನು ಕನ್ನಡ ನಾಡಿನ ದೊಡ್ಡ ತರುಣ ಕವಿಗಳ ಸಾಲಿನಲ್ಲಿ ಕೂರಿಸಿದೆ. ಸಾತ್ತ್ವಿಕ ಸ್ವಭಾವ, ಯಾವುದರಲ್ಲೂ ದುಡುಕಿಲ್ಲ. ಎಲ್ಲವನ್ನೂ ಶ್ರದ್ಧೆಯಿಂದ ಅನುಭವಿಸಿ ಎಂದಾದರೊಮ್ಮೆ ಅಭಿಪ್ರಾಯ ನೀಡುವ ಅಥವಾ ಕವನ ಬರೆಯುವ ಕವಿಯಿವರು. ಅವರ ಕರ್ತವ್ಯದಕ್ಷತೆಯೂ ಹಾಗೆ. ಅವರ ಕವನದ "ಲಯಬದ್ಧ ತೂಗಾಟ"ದಂತೆ. ಅಲ್ಲಿ ಗಲಾಟೆ ಗೊಂದಲವಿಲ್ಲ. ತುಂಬ ಆತ್ಮೀಯ ಮಿತ್ರ. ಎಷ್ಟೋ ಸಲ ಅಂದುಕೊಂಡಿದ್ದೇನೆ, ಇವರ ವಿನಯ ಸೌಜನ್ಯ ಎಂಥ ಉನ್ನತ ಶ್ರೇಣಿಯದು ಎಂದು. ನಿಸಾರರ ಪರಮ ಮಿತ್ರ, ಅವರಿಂದ ತುಂಬ ಪ್ರಭಾವಿತರಾಗಿದ್ದರೂ ಕವನದಲ್ಲಿ ಸ್ವಂತ ಮಾರ್ಗವನ್ನು ತುಳಿದಿರುವ ಓಜಸ್ವಿ. ನಿಸಾರ್ ಮತ್ತು ಶಿವಪ್ಪ ಯಮಳ ನಕ್ಷತ್ರಗಳಂತೆ. ಶಿವಪ್ಪ ಸದಾ ಶಿವಂ.

ಕೆಂಡಗಣ್ಣಸ್ವಾಮಿ "ಪೆಸರ್ ಕೇಳಿ ಬಲ್ಲೆಯೆಂಸ್ ?" ಹೆಸರು ಕೇಳಿ ಹೆದರಬೇಡಿ—ಅದರ ಹೊಸತನದಿಂದಾಗಲೀ ಅರ್ಥದಿಂದಾಗಲೀ. "ಕರುಣೆಗೊಂದು ಕೋಡವನ್, ಎದೆಯೊಲುಮೆಗೆ ತಾಣವನ್." ನಾನು ಪ್ರಥಮವಾಗಿ ಈ ಮಿತ್ರರನ್ನು ನೋಡಿದಾಗ ಅವರ ಹೆಸರು, ದೊಡ್ಡ ಗಾತ್ರ ಅತ್ಯಲ್ಪ ಮಾತು ಇವುಗಳಿಂದ ಆಕರ್ಷಿತನಾದೆ. (ಸ್ವಲ್ಪ ಆತಂಕವೂ ಸೇರಿತ್ತೋ ಏನೋ!) ನಮ್ಮ ಒಡನಾಟ ಎನ್‌ಸಿಸಿಯಲ್ಲಿಯೂ ಹೊರಗೂ ಹೆಚ್ಚಿದಂತೆ ಇವರು ತುಂಬ ಹಿರಿಯ ಆದರ್ಶವಿಟ್ಟುಕೊಂಡಿರುವ ಸಜ್ಜನ ಎಂಬುದನ್ನು ಅರಿತುಕೊಂಡೆ. ಇವರ ಚುಟುಕಗಳು, ತಿಳಿ ವ್ಯಂಗ್ಯದ ನುಡಿಗಳು ರಸಿಕತೆಯ ನಿದರ್ಶನಗಳು. ಇವರೂ ನಿಸಾರರಂತೆ ಒಂದು ವರ್ಷದ ಹಿಂದೆ ಮದುವೆಯಾದ ನವವರ. ಬೆಂಗಳೂರಿನಲ್ಲಿ ಇನ್ನೂ ಮನೆ ಮಾಡದೇ (ಆದ್ದರಿಂದ ನಮಗೆ ಮದುವೆಯ ಬಾಬ್ತು ಸಿಹಿ ಹಂಚದೇ) ಭೀಷ್ಮ ಪರ್ವದಲ್ಲಿಯೇ ಇದ್ದರು.

ಮಹಾರಾಷ್ಟ್ರ ರೆಜಿಮೆಂಟಿನ ಸುಬೇದಾರ್ ಖಾನ್ವಿಲ್ಕರ್ ಮತ್ತು ಅವರ ಬೆಂಬಲಿಗರಾದ ಮೂವರು ಎನ್‌ಸಿಓಗಳು ಪ್ರತಿಯೊಬ್ಬರೂ ದಕ್ಷತೆ, ವಿಶ್ವಾಸಾರ್ಹತೆಗಳ ಪ್ರತೀಕಗಳು. ಯಾವ ಕೆಲಸವನ್ನು ಎಷ್ಟು ಹೊತ್ತಿಗೂ ಮಾಡಲು ಕಂಕಣಬದ್ಧರಾಗಿ ನಿಂತವರು. ಎಲ್ಲ ಸಾಮಾನು ಸರಂಜಾಮುಗಳೂ ಇವರ ಹೊಣೆಗಾರಿಕೆಯಲ್ಲಿದ್ದುವು. "ನಾಳೆ ಬೆಳಗ್ಗೆ ೭ ಗಂಟೆಗೆ ಟೀ ಮತ್ತು ಉಪ್ಪಿಟ್ಟು" ಎಂದರೆ ಸಾಕು, ಅದರ ವಿವರಗಳನ್ನು ಅವರೇ ಪರಿಶೀಲಿಸಿ ಆ ಹೊತ್ತಿಗೆ ಅವನ್ನು ಒದಗಿಸಿಕೊಡುವರು. ಮರು ಸವಾಲು, ವಾದ ಎಂಬುದು ಅವರಿಗೆ ಗೊತ್ತಿಲ್ಲ. ಅಂಥ ಉನ್ನತ ಮಟ್ಟದ ಶಿಸ್ತು.

ದೋಣಿಸಾಗಲಿ ಮುಂದೆಹೋಗಲಿ

ಫೆಬ್ರುವರಿ ೧೦ರ ಸಂಜೆ ಬೆಂಗಳೂರಿನ ಹೆದ್ದಾರಿಗಳಲ್ಲಿ "ಬೆಂಗಳೂರು ಯೂನಿವರ್ಸಿಟಿಗೆ ಜಯವಾಗಲಿ, ಸರಕಾರಿ ಕಾಲೇಜಿಗೆ ಜಯವಾಗಲಿ, ೧೨ನೆಯ ಮೈಸೂರಿಗೆ ಜಯವಾಗಲಿ, ಕುದುರೆಮುಖ ಆರೋಹಣ ಸಾಹಸಕ್ಕೆ ಜಯವಾಗಲಿ" ಎನ್ನುವ ಘೋಷಣೆಗಳು ಎಲ್ಲರ

ಗಮನವನ್ನು ಓಡುತ್ತಿದ್ದ ಎರಡೂ ಎನ್‌ಸಿಸಿ ಲಾರಿಗಳೆಡೆಗೆ ಸೆಳೆದುವು. ಸಮವಸ್ತ್ರ ಧರಿಸಿದ, ನವ ಹರ್ಷ ಹರಿಸುವ, ನಗುಮೊಗದ ಆ ೩೭ ಕ್ಯಾಡೆಟುಗಳು ಅತಿದೂರದ ಅತಿ ಎತ್ತರದ ಕಂದುರೆಮುಖದೆಡೆಗೆ ಆಗ ಸಾಹಸ ಪ್ರದರ್ಶನಕ್ಕಾಗಿ ಧಾವಿಸುತ್ತಿದ್ದರು. ಬೆಂಗಳೂರು ನಗರ ವಿದ್ಯುದ್ದೀಪದ ಕಡಲಿನಲ್ಲಿ ಮುಳುಗಿದ್ದಾಗ, ಈ ಕಡಲಿನ ಸಾರವೇ ಪಶ್ಚಿಮಾಕಾಶದಲ್ಲಿ ಅತ್ಯಂತ ಪ್ರಭಾನ್ವಿತ ಶುಕ್ರ, ಬುಧ, ಚಂದ್ರ ಆಗಿ ಸಾಲಾಗಿ ಕಂಗೊಳಿಸುತ್ತಿದ್ದಾಗ ನಮ್ಮ ಲಾರಿಗಳು ಕತ್ತಲೆಯ ಮೊತ್ತವನ್ನು ಸೀಳಿ ಮುಂದುವರಿದುವು. ಲಾರಿಯ ಒಳಗೆ ಎಲ್ಲರೂ ಕುಳಿತಿರಬೇಕು. ಬದಿಯ ಚೌಕಟ್ಟಿನ ಮೇಲೆ ಪರಂಗಿಮಣೆಯಂತೆ ಕುಳಿತಿರಲೇಬಾರದು. ಹೀಗೆ ಕುಳಿತಿದ್ದರೆ ಬೆನ್ನು ಲಾರಿಯ ರೇಖೆಯಿಂದ ಹೊರಗೆ ಚಾಚಿರುತ್ತದೆ. ಎರಡು ವಾಹನಗಳು ಸಂಧಿಸುವಾಗ ಅಥವಾ ಒಂದನ್ನು ಇನ್ನೊಂದು ಹಿಂದೆ ಹಾಕಿ ಓಡುವಾಗ ಅಪಾಯ ಸಂಭವಿಸಬಹುದು. ರಾತ್ರಿಯ ಎಂಟು ಗಂಟೆ ದಾಟುವಾಗ ಕುಣಿಗಲ್ಲಿನ ಪ್ರವಾಸೀ ಮಂದಿರವನ್ನು ತಲಪಿದೆವು. ಅಲ್ಲಿ ನಾವು ತಂದಿದ್ದ ಮೊಸರನ್ನ, ಚಿತ್ರಾನ್ನ ಎಲ್ಲವನ್ನೂ ತಿಂದು ಪುನಃ ಲಾರಿಗಳನ್ನೇರಿದೆವು. ಮಿಣುಕು ದೀಪಗಳಂತೆ ಲಾರಿಗಳು ಕತ್ತಲೆಯ ಗರ್ಭದಲ್ಲಿ ಹರಿದುವು. ಎಷ್ಟೋ ಮೈಲಿಗಳಿಗೊಮ್ಮೆ ಎದುರಿಂದ ಬರುತ್ತಿದ್ದ ಯಾವುದೋ ಒಂದು ಲಾರಿ, ಹಳ್ಳಿಯ ಸಮೀಪದ ಪೋಲಿ ನಾಯಿಗಳ ಬಗುಳುವಿಕೆ ಅಲ್ಲದಿದ್ದರೆ ನಮ್ಮ ಲಾರಿಗಳು ಒಂದೇ ಶ್ರುತಿ ಮಿಡಿಯುತ್ತ ಧಾವಿಸಿದುವು. ದಾರಿ ನೆಟ್ಟಗೆ. ನಾನೂ ಓಸಿಯವರೂ ಹಿಂದಿನ ಲಾರಿಯ ಮುಂದಿನ ಸೀಟಿನಲ್ಲಿದ್ದೆವು. ಇದ್ದಕ್ಕಿದ್ದ ಹಾಗೆ ನಮ್ಮನ್ನು ಎದುರಿನಿಂದ ಒಂದು ಇದ್ದಲು ಮೂಟೆ ಹೇರಿದ್ದ ಭಾರೀ ಲಾರಿ ದಾಟಿಹೋಯಿತು. ಅದರಿಂದ ವಿಪರೀತ ಮಸಿ, ಮಸಿ ಹುಡಿ ಸುರಿಯುತ್ತಿದ್ದುವು. ಮಾತ್ರವಲ್ಲ, ಅಲ್ಲೆಲ್ಲ ಮಸಿಯ ಧೂಳೂ ತುಂಬಿ ನಮಗೆ ದಾರಿಯೇ ಕಾಣಿಸದಂತಾಯಿತು. ಇಷ್ಟರಲ್ಲಿಯೇ ನಮ್ಮ ಮುಂದಿನ ಲಾರಿ ರಸ್ತೆಯ ಬದಿಗೆ ನಿಂತಿತ್ತು. "ಆ್ಯಕ್ಸಿಡೆಂಟ್" ಎಂದು ಅಲ್ಲಿಂದ ಯಾರೋ ಕೂಗಿದರು. ನಮಗೆ ರಕ್ತ ಹೆಪ್ಪುಗಟ್ಟಿತು. ಲಾರಿಯ ಬದಿಯ ಚೌಕಟ್ಟಿನ ಮೇಲೆ ಸುತ್ತಿದ್ದ ಟಾರ್ಪಾಲಿನ್ನಿಗೆ ಇದ್ದಲು ಲಾರಿಯಿಂದ ಹೊರಗೆ ಚಾಚಿದ್ದ ಮೂಟೆಗಳು ಢಿಕ್ಕಿ ಹೊಡೆದು ಟಾರ್ಪಾಲಿನ್ ಹರಿದುಹೋಗಿತ್ತು. ಅದರ ಮೂಲಕ ಒಳಗೆ ಕುಳಿತವರಿಗೆ ಸಾಕಷ್ಟು ಮಸಿಯ ಅಭಿಷೇಕವಾಗಿತ್ತು. ಢಿಕ್ಕಿ ಹೊಡೆದ ಲಾರಿ, ನಿಂತರೆ ಅಪಾಯವೆಂದು, ಚೆಲ್ಲುತ್ತಿದ್ದ ಮಸಿಯನ್ನು ಲೆಕ್ಕಿಸದೇ ಪರಾರಿಯಾಗಿತ್ತು. ಸದ್ಯ ಯಾರಿಗೇನೂ ಅಪಾಯವಾಗಿರಲಿಲ್ಲ. ಫ್ರೇಮಿನ ಮೇಲೆ ಯಾರಾದರೂ ಕುಳಿತಿದ್ದರೆ ಆ ಗಳಿಗೆಯಲ್ಲಿ ಭೀಕರ ದುರಂತ ಸಂಭವಿಸುತ್ತಿದ್ದುದರಲ್ಲಿ ಸಂದೇಹವೇ ಇಲ್ಲ.

ಚಳಿಗಾಳಿ ಕೊರೆಯುತ್ತಿತ್ತು. ರಾತ್ರಿ ಏರುತ್ತಿತ್ತು. ಮನಸ್ಸು ಕನಸು ಕಾಣುತ್ತಿತ್ತು. ಲಾರಿಯೊಳಗೆ ಕುಳಿತವರಿಗೇನೂ ಸುಖವಲ್ಲ. ಸಾಮಾನು ಸರಂಜಾಮುಗಳ ನಡುವೆ ಹೇಗೆ ಕುಳಿತರೂ ಮೈ ಕೈ ನೋವು ತಪ್ಪಿದ್ದಲ್ಲ. ಅಂತೂ ಒಂದು ಗಂಟೆಗೆ ಯಾವುದೋ ಒಂದು ಪಟ್ಟಣ ಸೇರಿದೆವು. ರಸ್ತೆಯ ದೀಪಗಳು ಉರಿಯುತ್ತಿದ್ದುವು. ಇತಿಹಾಸಪ್ರಸಿದ್ಧ ಬೇಲೂರು ಪಟ್ಟಣವದು.ಅಲ್ಲಿಯ ಪ್ರವಾಸೀ ಮಂದಿರದ ಜಗಲಿ,ಕೋಣೆಎಲ್ಲ ನಾವೇ ವ್ಯಾಪಿಸಿಕೊಂಡೆವು.ಚಳಿ, ನಿದ್ರೆ, ಆಯಾಸ—ಮುಪ್ಪುರಿಗೊಂಡು ಹುಡುಗರನ್ನುಕಾಡುತ್ತಿದ್ದುವು.ಕಿಟ್‌ಬ್ಯಾಗ್ ಬಿಡಿಸಿದೆವು. ಡರಿ, ಬ್ಲ್ಯಾಂಕೆಟ್ ಹರಡಿದೆವು. ಕಾಲು ಚಾಚಿದ್ದೊಂದೇ ಗೊತ್ತು. ಪ್ರವಾಸೀ ಮಂದಿ

ರೆದ ಹೊರವಲಯದಲ್ಲಿ ಯಕ್ಷಗಾನ ಬಯಲಾಟ ನಡೆಯುತ್ತಿದ್ದಿತು. ಆ ರಾಕ್ಷಸರ ಗರ್ಜನೆ, ಚೆಂಡೆ ಮದ್ದಳೆಗಳ ಸಿಂಹನಾದ ಯಾವುದೂ ನಮ್ಮನ್ನು ಎಚ್ಚರದಿಂದಿಡಲು ಶಕ್ತವಾಗಲಿಲ್ಲ. ಮಲಗುವ ಮುನ್ನ ಸೀನಿಯರ್ ಅಂಡರ್ ಆಫೀಸರ್ (ಕ್ಯಾಡೆಟುಗಳಲ್ಲಿ ಪರಮೋತ್ಕೃಷ್ಟ ಪದವಿ—ಅವರ ಮುಂದಾಳು) ಬಾಬಾ ಪ್ರಸಾದನಿಗೆ ಆಜ್ಞೆ ಕೊಟ್ಟೆ "೬ ಗಂಟೆಗೆ ಹಾಸಿಗೆ ಚಾ. ೬–೩೦ ಗಂಟೆ ತನಕ ದೇವಾಲಯ ದರ್ಶನ. ಕೂಡಲೇ ಉಪಾಹಾರ. ೮ ಗಂಟೆಗೆ ಮುಂದಿನ ಪ್ರಯಾಣ."

"ಹಾಸಿಗೆಯಿಂದ ಚಾಲನ ಮಾಡಿಸುವಂಥಾದ್ದು ಇಂತೆಂದು ಹಾಸಿಗೆ ಚಾ" ಇದು ಇಂಗ್ಲಿಷಿನ ಬೆಡ್ ಟೀಯ ತದ್ಭವದ ವ್ಯುತ್ಪತ್ತಿ. ಬೆಳಗ್ಗೆ ಬೇಗ ಏಳು ಎಂದರೆ ಆಗಿನ ಮನಃಸ್ಥಿತಿಯಲ್ಲಿ ಯಾರಿಗೂ ಇಷ್ಟವಾಗಲಾರದು, ಹಾಸಿಗೆ ಎನ್ನುವ ಸಕ್ಕರೆ ಗುಳಿಗೆ ಯೊಳಗೆ ಇದೇ ಕಹಿ ವಿಚಾರವನ್ನು ತುಂಬಿದರೆ ಅದರ ಪರಿಣಾಮ ಅಷ್ಟೊಂದು ಅಹಿತಕರ ವಾಗುವುದಿಲ್ಲ. ನಮ್ಮ ಯಾತ್ರೆಯ ಪ್ರಥಮ ಪ್ರಾತಃಕಾಲ ಬೇಲೂರಿನ ಕಲ್ಲಿನ ಸಂಗೀತ ಶ್ರವಣದಿಂದ ಪ್ರಾರಂಭವಾಯಿತು. "ಜಕಣಾಚಾರಿಯ ಕಲೆಯ ಬಲೆಯಲ್ಲಿಯೇ ಹತ್ತು ದಿವಸಗಳನ್ನೂ ಕಳೆಯಬಾರದೇ ?" ಎಂದನು ಮುಕುಂದ.

"ವಿಶ್ವಕರ್ಮನ ಕವಿತೆಯೇ ನಮಗೆ ಕಂದುರೆಮುಖದ ಮೇಲೆ ಕಾದಿರುವಾಗ..." ಎಚ್ಚರಿಸಿದನು ಚಂದ್ರಶೇಖರ. ಹುಡುಗರೇನೋ ಮರಳಿದರು. ಆದರೆ ಕವಿದ್ವಯರನ್ನು ಭಾವನಾಪ್ರಪಂಚದಿಂದ ಉಪಾಹಾರದ ವ್ಯಾವಹಾರಿಕ ಪ್ರಪಂಚಕ್ಕೆ ಎಳೆದು ತರಲು ಎರಡೆ ರೆಡು ಜನರನ್ನು ಅಟ್ಟಬೇಕಾಯಿತು. ಭಾವಪಾರವಶ್ಯ ಸ್ಥಿತಿಯಲ್ಲಿ ಕಾಲ ಕಾಲವಾಗಿರುತ್ತದೆ,

ಬೇಲೂರಿನಿಂದ ಮುಂದೆ ಮಲೆನಾಡಿನ ತಂಪು. ಹಚ್ಚಹಸುರಿನ ಹರವು. ಬಿಸಿಲು ಬೆಳುದಿಂಗಳು. ಡೊಂಕು ಡೊಂಕಾದ ದಾರಿ. ಕಾಫಿ ತೋಟಗಳನ್ನು ಬಳಸಿ ಕಿತ್ತಳೆ ಮರಗಳ ಸಾಲಿನೆಡೆಗಾಗಿ ಸಾಗುವ ಮೇಖಲೆ.ಸಮೀಪದ ದಾರಿ ಎಂದು ಎಡಗಡೆಯ ಕವಲುದಾರಿಗಾಗಿ ಹೋದದ್ದು ಹಳ್ಳಿಗಾಡಿನ ಧೂಳಿನ ರಾಶಿಗಾಗಿ ಮುಂದುವರಿಯಿತು. ಧೂಳಿನಿಂದ ಹಿಂದಿನ ಲಾರಿಯವರಿಗೆ ಹಸುರು ಅರಸಿನವಾಯಿತು. ಟಾರ್ಪಾಲಿನ್ ಮುಚ್ಚಿದ್ದ ಲಾರಿಯ ಹಿಂಭಾಗ ವಾಯು ಸಂಚಾರವಿಲ್ಲದೇ ಕುಳಿತಿರಲು ಕಷ್ಟವೆಂದೆನ್ನಿಸಿತು. ಬಯಲುಸೀಮೆಯ ಹುಡುಗರು ವಾಂತಿ ಮಾಡಿದರು ! ಪ್ರಕೃತಿ ಸೌಂದರ್ಯ ಹುಚ್ಚು ಹೊಳೆ ಹರಿದಿರುವಾಗ ಮುಸುಕೆಳೆದು ಕೂರುವುದುಂಟೇ ! ಟಾರ್ಪಾಲಿನ್ ಬಿಚ್ಚಿದ ಮೇಲೆ ಅದೆಷ್ಟೊ ಸುಖವಾ ಯಿತು. ಅತಿ ದೂರದ ಬಾನಿನ ನೀಲಿಮೆಯ ಮೇಲೆ ರೇಖಾ ಚಿತ್ರಗಳಿಗಾಗಿ ಕಾಣುತ್ತಿದ್ದ ಪರ್ವತಶ್ರೇಣಿಗಳು ಕ್ರಮೇಣ ಸ್ಪಷ್ಟವಾಗತೊಡಗಿದುವು. ಚಾರ್ಮಾಡಿ ಘಾಟಿನ ಮೇಲೆ ನಾವಿದ್ದೆವು. ಒಂದೊಂದು U- ತಿರುಗಾಸಿಗೂನಡುವೆ ಮಹಾಪ್ರಪಾತ. ಮಲೆನಾಡಿನ ತೊರೆ ದುಮುಕುವ ಹಿಸ್‌ನಾದ. ಒಂದು ಸಲ ಬಲಗಡೆಗೆ ಎತ್ತರದ ಬೆಟ್ಟ, ಎಡಗಡೆಗೆ ಆಳವಾದ ಕಣಿವೆ ಇದ್ದರೆ ಇನ್ನೊಂದು ಸಲ ಇದು ತಿರುಗಾಮುರುಗಾ ಆಗುವುದು. ಹೀಗೆ ಹದಿ ನಾರೋ ಹದಿನೇಳೋ U- ತಿರುಗಾಸುಗಳು ಮುಗಿದಾಗ ನಾವು ಚಾರ್ಮಾಡಿಯ ತಳ ಸೇರಿ ದ್ದೆವು. ಮುಂದಿನದಾರಿ ದಕ್ಷಿಣ ಕನ್ನಡ ಜಿಲ್ಲೆಯ ತೆಂಗು ಕಂಗುಗಳ ಗೇರು ಬಾಳೆಗಳ ನಡು ವಿನ ಹಾಡು. "ಪಡುವಣ ಕಡಲಿನ ತೆಂಗಿನ ಮಡಲಿನ ಮರೆಯಲಿ ಮೆರೆಯುವ" ನಾಡು. ಮರಗಳೆಡೆಯಿಂದ ಸೂರ್ಯ ಕೊರೆಯುತ್ತಿದ್ದ. ನಮ್ಮ ಲಾರಿಗಳ ನಿನಾದದ ವಿನಾ

ಬೇರೆಲ್ಲೆಲ್ಲೂ ನೀರವ ಶಾಂತಿ. ಬೆಂಗಳೂರಿನ ಹುಡುಗರಿಗೆ ದಕ್ಷಿಣ ಕನ್ನಡದ ಕಡಲ ಮಟ್ಟದ ಸೆಕೆ ಕಡುವಾಗಿತ್ತು. ಮುರೆಕಲ್ಲಿನ ಆ ಕೆಮ್ಮಣ್ಣು ಈ ಸೆಕೆಯ ಭಾವನೆಯನ್ನು ಹೆಚ್ಚು ಮಾಡುತ್ತಿತ್ತು. ರಸ್ತೆ ಬದಿಯ ಗಿಡ ಮರಗಳ ಎಲೆಗಳೂ ಕೆಂಧೂಳಿನಿಂದ ಅದೇ ಬಣ್ಣಕ್ಕೆ ತಿರುಗಿದ್ದುವು. ನೀರಿನ ಹರಿವು ಕಂಡಲ್ಲೆಲ್ಲ ನಾವಿಲ್ಲಿಯೇ ತಂಗಬಾರದೇ, ಈ ನೀರಿನೊಳಗೇ ಬಿದ್ದುಕೊಂಡು ಇರಬಾರದೇ ಎಂಬ ಭಾವನೆ ಬರುತ್ತಿತ್ತು.

ಸೂರ್ಯ ನೆತ್ತಿಗೇರುವ ಮೊದಲೇ ಉಜಿರೆ ಸೇರಿದೆವು. ಬೆಂಗಳೂರು-ಚಾರ್ಮಾಡಿ-ಮಂಗಳೂರು ಮಾರ್ಗದಲ್ಲಿ ಉಜಿರೆಯೊಂದು ''ಜಂಕ್ಷನ್.'' ಅಲ್ಲಿಂದ ಎಡೆಗಡೆಗೆ ೬ ಮೈಲಿ ಮುಂದೆ ಹೋದರೆ ಪವಿತ್ರ ಕ್ಷೇತ್ರ ಧರ್ಮಸ್ಥಳ ಬರುವುದು. ಉಜಿರೆಯಿಂದ ಸೀದಾ (ಮಂಗಳೂರಿನೆಡೆಗೆ) ಮುಂದೆ ಹೋದರೆ ೨ ಮೈಲಿ ದೂರದಲ್ಲಿ ಬೆಳ್ತಂಗಡಿಯೆಂಬ ಸ್ವಲ್ಪ ದೊಡ್ಡ ಊರು ಬರುವುದು. ಬೆಳ್ತಂಗಡಿ ತಲಪುವ ಮೊದಲೇ ಬಲಗಡೆಗೆ ಒಂದು ಹಳ್ಳಿ ದಾರಿಯಿದೆ. ಇದರಲ್ಲಿ ೭ ಮೈಲಿ ದೂರ ಸಾಗುವಾಗ ನಾವೂರು ಎನ್ನುವ ಕುಗ್ರಾಮ ಬರುವುದು. ಅದು ಕುದುರೆಮುಖದ ತಳ. ಉಜಿರೆಯಿಂದ ನಾವೂರಿಗೆ ಕಾಲು ದಾರಿಯಾಗಿಯೂ ಹೋಗಬಹುದು. ಧರ್ಮಸ್ಥಳ, ಕುದುರೆಮುಖ ಶ್ರೇಣಿ ಎದುರು ಬದಿರಾಗಿವೆ. ಧರ್ಮಸ್ಥಳದ ಹೆಗ್ಗಡೆಯವರೊಂದು ಗುರುಕುಲಾಶ್ರಮ, ಬೋರ್ಡಿಂಗ್, ಕಾಲೇಜ್ ಎಲ್ಲವನ್ನೂ ಸ್ಥಾಪಿಸಿದ್ದಾರೆ. ಇವೆಲ್ಲ ಇರುವ ಆವರಣದ ಹೆಸರು ಸಿದ್ಧವನ. ಸಿದ್ಧವನದ ಮುಂದೆ ಲಾರಿಗಳು ಓಡುತ್ತಿದ್ದಾಗ ಒಬ್ಬ ಜೂನಿಯರ್ ಡಿವಿಶನ್ ಎನ್‌ಸಿಸಿ ಸಮವಸ್ತ್ರ ಧರಿಸಿದ ಬಾಲಕ ಸುಟಿಯಾಗಿ ನಿಂತು ಕೈ ಅಡ್ಡ ಹಿಡಿದು ಲಾರಿಗಳನ್ನು ನಿಲ್ಲಿಸಿದ. ಸೆಲ್ಯೂಟ್ ನೀಡಿ ''ಮೇಜರ್ ಮುತ್ತಪ್ಪನವರು ಇಲ್ಲಿಯೇ ಒಳಗೆ ನಿಮಗಾಗಿ ಕಾಯುತ್ತಿದ್ದಾರೆ, ಸಾರ್ ! ಬರಬೇಕಂತೆ'' ಎಂದ. ಮೇಜರ್ ಮುತ್ತಪ್ಪ ಈಗ ಮಂಗಳೂರಿನ ಎನ್‌ಸಿಸಿಯ ಮುಖ್ಯಾಧಿಕಾರಿಗಳು. ನನಗೆ ಕಳೆದ ೧೨–೧೩ ವರ್ಷಗಳಿಂದಲೂ ಪರಿಚಿತರು, ಮಿತ್ರರು. ಅವರು ಬೆಂಗಳೂರಿನ ಎನ್‌ಸಿಸಿ ಮುಖ್ಯ ಕಛೇರಿಯಲ್ಲಿ ವರಿಷ್ಠಾಧಿಕಾರಿಗಳಾಗಿದ್ದಾಗ ತಮ್ಮ ದಕ್ಷತೆ, ಕಾರ್ಯ ದುರಂಧರತೆಗಳಿಂದ ಸರ್ವಜನಪ್ರಿಯರಾಗಿದ್ದರು. ಮೇಜರ್ ನಾರಾಯಣ್‌ಸಿಂಗ್ ಮತ್ತು ಮೇಜರ್ ಮುತ್ತಪ್ಪ ಇವರ ಗೆಳೆತನ ಎಷ್ಟೋ ದಶಕಗಳದು. ನಾವು ಬರುವ ವಿಚಾರ ತಿಳಿದು ಮುತ್ತಪ್ಪ ತಾವಾಗಿಯೇ ಉಜಿರೆಗೆ ಬಂದಿದ್ದರು. ಹಳೆಯ ಮಿತ್ರರ ಅಪೂರ್ವ ಭೇಟಿ, ಸಂತೋಷವೋ ದುಃಖವೋ ತಿಳಿಯದು. ನಾರಾಯಣ್‌ಸಿಂಗರ ಸಂಕಟ ಮುತ್ತಪ್ಪನವರಿಗೆ ಗೊತ್ತಿತ್ತು. ಮುತ್ತಪ್ಪನವರೊಂದಿಗೆ ಇನ್ನೂ ಮೂವರು ಟೆರಿಲಿನ್ ಪ್ಯಾಂಟ್, ಷರ್ಟ್, ಟೈ ಎಲ್ಲ ಕಟ್ಟಿ ಅತಿ ಸುಟಿಯಾಗಿ ಹಸನ್ಮುಖದಿಂದ ನಮ್ಮನ್ನು ನೋಡುತ್ತಿದ್ದರು. ''ಬನ್ನಿ, ಇವರು ಪ್ರಭಾಕರ್. ಈ ಕಾಲೇಜಿನ ಪ್ರಿನ್ಸಿಪಾಲ್. ಇವರು ಶೆಣೈ, ಇಲ್ಲಿಯ ಎನ್‌ಸಿಸಿ ಆಫೀಸರ್. ಇವರು ಪೂಜಾರರು, ಮಂಗಳೂರಿನಿಂದ ಬಂದಿದ್ದಾರೆ, ವೈದ್ಯರು ನಿಮ್ಮೊಡನೆಯೇ ಇರಲೆಂದು ಸರಕಾರ ಅವರನ್ನು ಕಳಿಸಿದೆ. ಆರ್ಡರ್ಲಿ ಬಂದಿದ್ದಾನೆ. ಔಷಧಿಗಳೂ ಬಂದಿವೆ'' ಮುತ್ತಪ್ಪ ಪರಿಚಯಿಸಿದರು.

ಅಲ್ಲಿ ಹೆಚ್ಚು ಹೊತ್ತು ಕಳೆಯದೇ ಕೂಡಲೇ ಧರ್ಮಸ್ಥಳದೆಡೆಗೆ ಲಾರಿ ಓಡಿಸಿದೆವು. ದಾರಿಯಲ್ಲಿ ನೇತ್ರಾವತೀ ನದಿಯಲ್ಲಿ ಹತ್ತು ನಿಮಿಷಗಳಿದ್ದು ಕೈ ಕಾಲು ಮುಖ ತೊಳೆದುಕೊಂಡು ಮುಂದೆ ಹೋದೆವು. ಮಹಾಪೂಜೆಗೆ ತಡವಾಯಿತೋ ಏನೋ ಎಂಬ ತವಕದಿಂದ

ತ್ವರೆಯಿಂದ ಓಡಿದ ನಮಗೆ ಪೂಜೆ ಮಂಗಳಾರತಿ ದರ್ಶನ ಲಭಿಸಿದುವು. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸ್ವಾಮಿ ದೇವಾಲಯ ಮತ್ತು ಆ ಪವಿತ್ರಕ್ಷೇತ್ರ ಹಿಂದೂಗಳಿಗೂ ಜೈನರಿಗೂ ಸಮಾನವಾಗಿ ಪುಣ್ಯ ಸ್ಥಳವಾಗಿವೆ. ಜೈನ ಪರಂಪರೆಯ ಹೆಗ್ಗಡೆಯವರ ಖಾಸಗಿ ಸಂಸ್ಥೆ ಈ ದೇವಾಲಯ ಮತ್ತು ಇದಕ್ಕೆ ಸಂಬಂಧಿಸಿದ ವಿಶಿಷ್ಟ ಆಸ್ತಿಪಾಸ್ತಿ. ಲಕ್ಷಾಂತರ ಭಕ್ತಾದಿಗಳು ವರ್ಷವಿಡೀ ಬಂದು ಹೋಗುವ ಈ ಪವಿತ್ರ ನೆಲೆಯ ಆಡಳಿತೆಯನ್ನು ಹೆಗ್ಗಡೆಯವರು ಸ್ವತಃ ನಿರ್ವಹಿಸುತ್ತಾರೆ. ತಂಗಲು ಬೇಕಾದ ಛತ್ರಗಳು, ಕಟ್ಟಡಗಳು ಮುಂತಾದವು ಇಲ್ಲಿ ಇವೆ. ಮಹಾಪೂಜೆಯ ಕಾಲದಲ್ಲಿಯೂ ಬೇರೆ ನಿಶ್ಚಿತ ವೇಳೆಗಳಲ್ಲಿಯೂ ಹೆಗ್ಗಡೆಯವರು ಭಕ್ತರಿಗೆ ದರ್ಶನವೀಯುತ್ತಾರೆ. ಅವರ ಹಾಲೆ ಹವಾಲೆಗಳನ್ನು ಕಷ್ಟ ಸಂಕಟಗಳನ್ನು ಆಲಿಸುತ್ತಾರೆ. ಯುಕ್ತ ಪರಿಹಾರ ಸೂಚಿಸುತ್ತಾರೆ. ಇಲ್ಲಿ ನಾವು ಕಾಣುವುದು ಭಕ್ತರಿಗೆ ಆ ಸ್ಥಳದಲ್ಲಿ, ದೇವರಲ್ಲಿ, ದೇವರ ಮೂರ್ತರೂಪ ಹೆಗ್ಗಡೆಯವರಲ್ಲಿರುವ ಅನನ್ಯ ಭಕ್ತಿ. ಆ ಗಳಿಗೆಯಲ್ಲಿ ಭಕ್ತರಿಗೆ ಹೆಗ್ಗಡೆಯವರ ವಾಣಿ ಮಂಜುನಾಥಸ್ವಾಮಿಯ ಆಜ್ಞೆ. ಅದನ್ನು ಅವರು ಶಿರಸಾವಹಿಸುತ್ತಾರೆ, ಕಲ್ಯಾಣ ಹೊಂದುತ್ತಾರೆ. ಭಕ್ತಿ ಶ್ರದ್ಧೆ ನಂಬಿಕೆ ಎನ್ನುವ ಗುಣಗಳ ಸಮತಳದಲ್ಲಿ ನಡೆದು ಮಂಜುನಾಥಸ್ವಾಮಿಯ ಸನ್ನಿಧಿಯಲ್ಲಿ ತೃಪ್ತಿ, ಸಂತೋಷ ಹೊಂದುವ ಈ ಜನತೆಯ ಶ್ರದ್ಧೆ ಅಪಾರವಾದದ್ದು, ಅಚಲವಾದದ್ದು. ಅಂತೆಯೇ ಅವರ ಭಕ್ತಿಯ ಪ್ರತೀಕವಾಗಿ ಆ ದೇವಾಲಯ ಅತಿ ಪುರಾತನವಾದದ್ದೂ ಮಹಿಮಾಪೂರ್ಣವಾದದ್ದೂ ಆಗಿದೆ. ಇಂಥ ಪುನೀತ ದಿವ್ಯಸ್ಥಳ, ಅಲ್ಲಿಯ ಚಿರಂತನ ಚೇತನ ನಮ್ಮ ಸಾಹಸಕೃತ್ಯದ ಮೇಲೆ ಒಂದು ದೈವಿಕ ಪ್ರಭೆ ಬೀರಿತು. ದೇವರ ಪ್ರಸಾದವಾದ ಊಟ ಮುಗಿಸಿಕೊಂಡು ನಾವೂರಿಗೆ ಹೊರಟೆವು. ಮುತ್ತಪ್ಪ ಮಂಗಳೂರಿಗೆ ಮರಳಿದರು. ಡಾಕ್ಟರರೂ ಅವರ ದೂತನೂ ನಮ್ಮ ಪಂಗಡ ಸೇರಿದರು ಈಗ ನಮ್ಮ ಸಂಖ್ಯೆ ೫೩ಕ್ಕೇರಿತು. ನಮ್ಮ ನಾವೂರು ಪ್ರಯಾಣ, ಅಥವಾ ಕುದುರೆಮುಖದ ಲಾರೀ ಪ್ರಯಾಣದ ಕೊನೆಯ ಅಂಕ, ಸುಮಾರು ೧೫ ಮೈಲಿನಷ್ಟು ದೂರ, ಪ್ರಾರಂಭವಾದದ್ದು ಅಪರಾಹ್ನ ೨ ಗಂಟೆಗೆ. ನಾವು ೪ ಗಂಟೆಗೆ ಮೊದಲೇ ನಾವೂರು ಸೇರಿ ಶಿಬಿರ ಹೂಡಬೇಕು.ಎನ್ನುವುದು ನಮ್ಮ ಕಾರ್ಯಕ್ರಮ. ಅಲ್ಲಿ ಮೆಂಗಿಲ ಶೇಣವ ಎನ್ನುವ ಸ್ಥಳೀಯ ಮಾರ್ಗದರ್ಶಿಗೂ ಅರಣ್ಯ ಇಲಾಖೆಯ ಅಧಿಕಾರಿಗಳಿಗೂ ನಮ್ಮನ್ನು ಕಾದಿರಲು ಕಾಗದ ಬರೆದಿದ್ದೆವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವುದು ಎರಡೇ ಋತುಗಳು, ಬೇಸಗೆ—ಅತಿ ಬೇಸಗೆ. ಫೆಬ್ರುವರಿಯ ನಡು ಹಗಲಿನ ಬಿಸಿಲಿನ ಝಳ ತೀವ್ರವಾಗಿತ್ತು. ಧರ್ಮಸ್ಥಳ-ಉಜಿರೆಯ ಹಾವು ಹರಿದಂಥ ಮಾರ್ಗ. ಎದುರಿಗೆ ದೂರದಲ್ಲಿ ಆಕಾಶವನ್ನೇ ಎತ್ತಿ ಹಿಡಿದಿರುವಂಥ ಪರ್ವತಶ್ರೇಣಿ. ಈಶ್ವರ ದೇವಾಲಯದ ಮುಂದಿರುವ ನಂದಿಯಂತೆ ಈ ಶ್ರೇಣಿಯ ಮುಂದೆ ನಮಗೆ "ಕೈದೂರ"ದಲ್ಲಿ ನೀಳವಾಗಿ ಸೆಟೆದು ನಿಂತಿರುವ ಹೆಬ್ಬಂಡೆ ಜಮಲಾಬಾದ್. ಅದೊಂದು ಗಿರಿದುರ್ಗ. ಪರ್ವತ ಶ್ರೇಣಿಯಲ್ಲಿ ಅತಿ ಎತ್ತರವಾಗಿರುವೆಡೆಯಲ್ಲಿ ಕತ್ತರಿಯಿಂದ ಕತ್ತರಿಸಿ ಇಟ್ಟಂಥ ಸ್ಪಷ್ಟಾಕೃತಿಯ ಶಿಖರ ಕುದುರೆಮುಖ. ಆ ಭವ್ಯ ನೋಟ ನಮ್ಮನ್ನು ಪುಳಕಿತಕಾಯರನ್ನಾಗಿಸಿತು. ಕುದುರೆ ಮುಖಪರೇಖೆ, ಅಲ್ಲಿಂದ ಬೆನ್ನಿನವರೆಗೆ ಇಳಿದ ಕೇಸರದ ರೇಖೆ ಸ್ಪಷ್ಟವಾಗಿ ಕಾಣುವುವು. ಆಕಾಶದ ನೀಲಿ ಪರದೆಯ

ಮೇಲೆ ರೇಖಿಸಿದ್ದ ಚಿತ್ರವಿದು. ಲಾರಿ ಸಾಗಿದಂತೆ ಕಲ್ಪನೆಯು ಲಂಗು ಲಗಾಮಿಲ್ಲದೆ ಕುದುರೆ, ಕುದುರೆಮುಖದಮೇಲೆ ನಾಗಾಲೋಟದಿಂದ ವಿಹರಿಸಿತು. ಆಗಲೇ ಹಾರಿಹೋಗಿ ಕುಳಿತಂತೆ ಊಹಿಸಿತು. ಹೀಗ ಕಲ್ಪನೆ ಗಗನವೇರಿದಾಗ ವಾಸ್ತವಿಕತೆ ರಸ್ತೆಯಲ್ಲಿ ಕುಂಟು ತ್ತಿತ್ತು. ಲಿಂಗೋಜಿಯ ಲಾರಿ ನಿಂತೇ ಬಿಟ್ಟಿತು. ಧರ್ಮಸ್ಥಳದಿಂದ ಮೂರು ಮೈಲಿ ಬಂದಿದ್ದೆವಷ್ಟೆ. ಇನ್ನೂ ೧೨ ಮೈಲಿ ಉಳಿದಿದ್ದುವು.

ಲಾರಿ ಸ್ಟಾರ್ಟ್ ಆಗುತ್ತದೆ. ಆದರೆ ಗೇರ್ ಹಾಕಲು ಸಾಧ್ಯವಿಲ್ಲ. ಆದ್ದರಿಂದ ಅದು ಓಡುವುದಿಲ್ಲ. "ಗೇರ್ ಸ್ಟಕ್‌ಅಪ್ ಆಯಿತು" ಅಂದರೆ ಗೇರ್ ಅಲ್ಲಾಡದ ಕೊರಡಾ ಯಿತು. ಅನ್ಸಾರಿ, ಲಿಂಗೋಜಿ ಸೇರಿ ಗೇರ್ ಪೆಟ್ಟಿಗೆ ಬಿಚ್ಚಿದರು. ಒಳಗೆ ಗೇರ್ ಲಿವರ್ ಮುರಿದೇಹೋಗಿದೆ. ದೊಡ್ಡದಾಗಿಯೇ ಪೆಟ್ಟು ಹೊಡೆದಿತ್ತು. ಅಲ್ಲಿ ಆಗ ದುರಸ್ತಿ ಮಾಡಿ ಹೊರಡುವ ಪರಿಸ್ಥಿತಿ ಅಲ್ಲ. ಮಂಗಳೂರಿನಿಂದಲೇ ಮೆಕಾನಿಕ್ಸ್ ಬರಬೇಕೋ ಏನೋ. ಉಜಿರೆ ಹತ್ತಿರವೇ ಇದೆಯಷ್ಟೆ. ಅಲ್ಲಿಯೂ ಮೆಕಾನಿಕ್ ಇದ್ದರೆ ಬೇಗನೆ ಸರಿ ಪಡಿಸಬಹುದು ಎಂಬ ಆಸೆ. ಹೇಗೂ ಕಾಲದ ಪ್ರಶ್ನೆ, ಆದ್ದರಿಂದ ಲಿಂಗೋಜಿ ಲಾರಿಯ ಜನ, ಸಾಮಾನನ್ನು ಅಲ್ಲಿಯೇ ಬಿಟ್ಟು ಅನ್ಸಾರಿ ಲಾರಿಯನ್ನು ನಾವೂರಿಗೆ ಓಡಿಸಿದೆವು. ಆದರಲ್ಲಿ ಓಸಿ ನಾನು, ಶಿವಪ್ಪ, ಖಾನ್ವಿಲ್ಕರ್ ಇದ್ದೆವು. ನಿಸಾರ್, ಕೆಂಗಡಣ್ಣಸ್ವಾಮಿ, ಹರೂನ್ ಎಲ್ಲರೂ ಅಲ್ಲಿಯೇ ನಿಂತರು. ಅನ್ಸಾರಿ ಲಾರಿಯ ಹುಡುಗರಿಗೆ ಹೇಗೂ ತಾವು ಬಚಾವು ಎಂಬ ಸಂತೋಷ. ಲಿಂಗೋಜಿಯ ಹುಡುಗರಿಗೆ ದುಃಖ. "ಬೇಗನೆ ಹಿಂದೆ ಬರುತ್ತೇವೆ, ನಿಮ್ಮನ್ನೂ ಕೊಂಡೊಯ್ಯುತ್ತೇವೆ. ಮೊದಲು ಹೋದವರಿಗೆ ಕ್ಯಾಂಪು ಪ್ರಾರಂಭಿಸುವ ಕೆಲಸ ಬೇಕಾದಷ್ಟು ಇರುವುದು. ನೀವಿಲ್ಲಿ ಆರಾಮವಾಗಿದ್ದರಾಯಿತಲ್ಲ" ಎಂದು ಸಮಾಧಾನ ಹೇಳಿ ನಾವು ಮುಂದುವರಿಸಿದೆವು. ನಾರಾಯಣಸಿಂಗ್ (ತಾತ) ಧರ್ಮಸ್ಥಳದಲ್ಲಿ ಪ್ರಾರ್ಥನೆ ಮಾಡಿಯೂ ಹೀಗಾಯಿತಲ್ಲ ಎಂದು ಕೆಂಡಗಣ್ಣಸ್ವಾಮಿ ಒಂದು ಚುಟುಕ ಗೀಚಿದರು—

ಧರ್ಮಸ್ಥಳದಾ ಮಂಜ್ನಾಥಾ
ಕಾಪಾಡಪ್ಪಾ ಅನವರ್ತಾ !
ಅಂದ್ಕಂಡ್ ಹೊರಟ್ರೆ ನಮ್ತಾತಾ
ಲಾರೀ ಕೊಟ್ತು ದೊಡ್ಡ್ಲತ !

ನಾವೂರಿನ ತಳಶಿಬಿರ

ನಾವು ಧೂಳಿನ ಕಿರುದಾರಿಗಾಗಿ ಹೋಗಿ ನಾವೂರನ್ನು ತಲುಪುವಾಗ ಸಾಯಂಕಾಲದ ೫ ಗಂಟೆಯಾಗಿತ್ತು. ಯಾವೂರು ? ನಾವೂರು ! ಊರೆಲ್ಲಿ ಬಂತು. ಕುದುರೆಮುಖ ಶ್ರೇಣಿಯ ಬುಡದ ತಪ್ಪಲು ಪ್ರದೇಶ. ನಡು ಮಧ್ಯಾಹ್ನವೂ, ಬೆಟ್ಟದ ಕಾಡುಗಳ ಮರೆಯಲ್ಲಿರುವ ಈ "ಊರಿ"ನಲ್ಲಿ ಕತ್ತಲು. ಇನ್ನು ಊರೆಂದರೆ ಅಲ್ಲಿದ್ದ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ಟ್ರಾವಲರ್ಸ್ ಬಂಗ್ಲೆ. ಅದರಿಂದ ಆರೇಳು ಫರ್ಲಾಂಗ್ ದೂರದಲ್ಲಿ ಬಯಲಿನಲ್ಲಿ ಹರಡಿದ ನಾಲ್ಕೆಂಟು ಗುಡಿಸಲುಗಳು. ಇಂಗ್ಲಿಷ್ ಹೆಸರು ಕೇಳಿ ಸುಂದರ ಪ್ರವಾಸೀ ಮಂದಿರ, ಆಧುನಿಕ ನಲ್ಲಿ ನೀರಿನ ಸೌಕರ್ಯ, ವಾಷ್‌ಬೇಸಿನ್, ವಿದ್ಯುದ್ದೀಪಗಳ ಮೆರುಗು, ಬಟ್ಲರು

ಗಳ ಸಮೂಹ ಎಲ್ಲ ಯೋಚಿಸಿದರೆ ಕುದುರೆಮುಖ ಕೆನೆದೀತು ನಿಮಗೇನೂ ಅನುಭವ ವಿಲ್ಲವೆಂದು. ಹಳ್ಳಿಯವರ ಸರಳ ಭಾಷೆಯಲ್ಲಿ ಹುಂಚು ಹಾಕಿದ ಮನೆ ಬಂಗ್ಲೆ. ಆದ್ದರಿಂದ ನಾವೂರಿನ ಈ ಕಟ್ಟಡ ಬಂಗ್ಲೆ. ಹಿಂದಿನ ಕಾಲದಲ್ಲಿ ಸಾರಿಗೆ ಸಂಪರ್ಕ ಯಥೇಚ್ಛವಿಲ್ಲ ದಿದ್ದಾಗ ಬೆಳ್ತಂಗಡಿಯಿಂದ ನಾವೂರಿಗೆ ಒಂದು ದಿವಸದಲ್ಲಿ ಹೋಗಿ ಕೆಲಸ ಮುಗಿಸಿ ಮರಳುವುದು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ನಾವೂರಿನಲ್ಲಿಯೇ ಕ್ಯಾಂಪು ಮಾಡುವುದು ಅವಶ್ಯವಾಗುತ್ತಿತ್ತು. ಅರಣ್ಯ ಇಲಾಖೆಯ ಅಧಿಕಾರಿಗಳ ತಾತ್ಕಾಲಿಕ ನಿವೇಶನವಿದು. ಆದ್ದರಿಂದ ಒಂದು ಕಾಲದಲ್ಲಿ ವೈಭವದಿಂದ ಮೆರೆದಿರಬಹುದಾದ ಈ ದೊಡ್ಡ ಹಂಚಿನ ಮನೆ (ಬಂಗ್ಲೆ) ಇಂದು ಹಾಳುಹಾಳುಗರೆಯುತ್ತಿತ್ತು.

ಅರೆಮುರಿದು ಒರಗಿಹವು ಗುಡಿಸಲುಗಳೆಲ್ಲ
ಸರಿಮಾಡಿ ಹುಲ್ಲು ಹೊದಿಸುವರೊಬ್ಬರಿಲ್ಲ

ಕುವೆಂಪು

ನಾವು ಡಿಸೆಂಬರಿನಲ್ಲಿ ಸ್ಥಳ ಪರಿಶೀಲನೆಗಾಗಿ ಬಂದಿದ್ದಾಗ ಇಲ್ಲಿ ಯಾರೂ ಇರಲಿಲ್ಲ. ಆದರೂ ಬಾಗಿಲುಗಳ ಚಿಲಕ ಭದ್ರವಾಗಿ ಹಾಕಿ ಬೀಗಗಳು ಜಡಿಯಲ್ಪಟ್ಟಿದ್ದುವು. ಒಂದೆರಡು ದಶಕಗಳ ತುಕ್ಕು, ಗೆದ್ದಲೆ ಆಲ್ಲೆಲ್ಲ ವ್ಯಾಪಿಸಿದ್ದುವು. ಬಾಗಿಲನ್ನು ಮುಟ್ಟುವುದೇ ತಡ—ಅರೆಬಿಯನ್ ನೈಟ್ಸ್ ಕತೆಯಲ್ಲಿ ಕುಪ್ಪಿಯ ದಿಮ್ಮಿ ತೆಗೆದೊಡನೆ ಬೃಹದಾಕಾರದ ಭಯಂಕರ ರಾಕ್ಷಸ ನೆಗೆಯುವಂತೆ—ಬಾಗಿಲು ಹಲಗೆ ಮುರಿದು ಬಿತ್ತು. ಒಳಗೆ ಹಿಂದಿನ ಶತಮಾನದ ನಾಲ್ಕೆಂಟು ಮೇಜು, ಕುರ್ಚಿ ಮೇಲೆ ಪಂಖ. ಒಂದಿಂಚು ದಪ್ಪದ ಧೂಳು ಕಾಲಿಟ್ಟಲ್ಲೆಲ್ಲ. ಗೋಡೆಯ ಮೇಲೆ ಆಧುನಿಕ ಚಿತ್ರಕಲೆಯನ್ನು ಗೆದ್ದಲೆ ಹುಳುಗಳು ಕೊರೆದಿದ್ದುವು. ಜೇಡರ ಹುಳಗಳ ತಂತಿಗಳು ಅಖಂಡವಾಗಿದ್ದುವು. ಹಂಚುಗಳು ಒಂದು ಕಾಲದಲ್ಲಿ ಬೇರೆ ಬೇರೆಯಾಗಿ ಜೋಡಿಸಲ್ಪಟ್ಟಿದ್ದರೂ ಮಳೆ, ಬಿಸಿಲು, ಮಳೆ, ಬಿಸಿಲು ಅವುಗಳ ಮೇಲೆ ಬಿದ್ದು, ಪಾಚಿ, ಕಸ, ಧೂಳು, ತರಗೆಲೆ ಮುಂತಾದವುಗಳ ಅಖಂಡ ಲೇಪ ಅವುಗಳಿಗೆ ಹಚ್ಚಿದಂತಾಗಿ ಇಡಿಯ ಮಾಡೇ ಮಸಿಯ ಹಲಗೆಯಾಗಿತ್ತು. ಆ ಹಂಚುಗಳ ಎರಕಗೊಂಡ ಆಕೃತಿ ಅವುಗಳ ಕೆಳಗಿನ ಬಾರಿಪಟ್ಟಿ, ಪಕಾಸು, ದಾರಮಂದಗಳನ್ನು ಭದ್ರವಾಗಿ ಹಿಡಿದಿತ್ತು. ಏಕೆಂದರೆ ಮರದ ಬಹ್ವಂಶ ಒಂದೋ (ಗೆದ್ದಲೆ ತಿಂದು) ಕುಷ್ಠರೋಗಗ್ರಸ್ತ ವಾಗಿತ್ತು, ಇಲ್ಲ ಮಾಯವಾಗಿತ್ತು. ಕಾಡಿನ ಬುಡವಾದರೂ ಕದಿಯುವವನಿಗೆ ಕೈಗೆ ಸಿಕ್ಕಿದ ಬಾರಿಪಟ್ಟಿ, ಕೊಯ್ದು ಮರ ಕೈಯಲ್ಲಿರುವ ಒಂದು ಹಕ್ಕಿಯಂತೆ. ಕಾಡಿನ ಪೊದೆಯಲ್ಲಿರ ಬಹುದಾದ ಎರಡು ಹಕ್ಕಿಗಳ ಆಸೆ ಅವನಿಗಿಲ್ಲ. ನಮ್ಮ ಈ "ಪ್ರಥಮ ಚುಂಬನ"ದ ಅನುಭವದಿಂದ ಒಂದು ಸಂಗತಿ ನಿರ್ಧರಿಸಿದ್ದೆವು—ಬಂಗ್ಲೆ ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಅಪ್ರವೇಶ್ಯ—out of bounds. ಈ ಬಂಗ್ಲೆಗೆ ಒಂದು ಔಟ್ ಹೌಸೂ ಇದ್ದಿತು. ಪೀಸಾ ನಗರದ ವಾಲುವ ಗೋಪುರವನ್ನು ಮೀರಿಸುವಂತಿದ್ದ ಅದರ ಗೋಡೆಗಳು ಮಾಡಿನ ಆಧಾರದಿಂದಲೇ ಒತ್ತಟ್ಟಿಗೆ ನಿಂತಿದ್ದುವು. ನೀರಿನ ಆಸರೆ ಅಲ್ಲಿಂದ ಒಂದು ಫರ್ಲಾಂಗ್ ದೂರದಲ್ಲಿ ಬೆಟ್ಟದಿಂದ ಹರಿದುಬರುತ್ತಿದ್ದ ಝರಿ. ಫೆಬ್ರವರಿ–ಮಾರ್ಚ್ ವರೆಗೂ ಅದು ಆರಲಾರದೆಂದು ಊಹಿಸಿದ್ದೆವು. ಆದರ ಪಕ್ಕದಲ್ಲಿ ಶಿಬಿರ ಹೂಡಲು ಸರಿಯಾದ ಸ್ಥಳವಿರಲಿಲ್ಲ. ಹೀಗಾಗಿ ಬಂಗ್ಲೆಯ ಅಂಗಳದಲ್ಲಿ ಶಿಬಿರ ಹೂಡುವುದು, ನೀರನ್ನು

ಳ್ಪುರಿಯಿಂದ ಹೊತ್ತುತರುವುದು ಎಂದು ನಮ್ಮ ಪೂರ್ವಯೋಜನೆಯಿತ್ತು. ಡಿಸೆಂಬರಿನಲ್ಲಿ ನಾವು ಬಂಗ್ಲೆಯ ಪರಿಶೀಲನೆಯಿಂದ ಮರಳಿದ ಅನಂತರ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅದರ ಸ್ಥಿತಿಯನ್ನು ಕುರಿತು ಪತ್ರ ಬರೆದಿದ್ದೆವು ಮತ್ತು ಸಾಧ್ಯವಾದರೆ ಅದನ್ನು ದುರಸ್ತಿಗೊಳಿಸಬೇಕೆಂದೂ ಪ್ರಾರ್ಥಿಸಿದ್ದೆವು. ಬಂಗ್ಲೆಯ ಹಿಂದೆ ಅನ್ಸಾರಿ ನಿಂತ. ನಾವೆಲ್ಲ ಲಾರಿಯಿಂದ ದುಮುಕಿದೆವು. ನಮ್ಮನ್ನು ಸ್ವಾಗತಿಸಲು ಯಾರೂ ಇಲ್ಲ. ಕಾಡು ಹಾಳು ಗರೆಯುತ್ತಿತ್ತು. ನಮ್ಮ ಕೆಲಸವನ್ನು ನಾವೇ ಮಾಡಬೇಕು. ಒಂದಿಷ್ಟು ಟೀ ಕಾಯಿಸೋಣವೆಂದರೆ ಟೀ ಹುಡಿಯೂ ಅಡುಗೆಯವರೂ ಲಿಂಗೋಜಿ ಲಾರಿಯಲ್ಲಿ. ಸಕ್ಕರೆ ಮಾತ್ರ ಈ ಲಾರಿಯಲ್ಲಿ. ಇನ್ನು ಅವರು ಬಂದಮೇಲೆಯೇ ಮುಂದಿನ ದಾರಿ. ನೀರು ತಂದು ಕುಡಿಯೋಣವೆಂದರೆ ಬಕೆಟ್‌ಗಳೆಲ್ಲ ಆಚೆ ಲಾರಿಯೊಳಗೆ. ಧರ್ಮಸ್ಥಳದಾ ಮಂಜುನಾಥಾ, ಕಾಪಾಡಪ್ಪಾ ಅನವರತಾ! ಉಳಿದ ದಾರಿಯೊಂದೇ—ಆದಷ್ಟು ಬೇಗ ಅನ್ಸಾರಿಯನ್ನು ಹಿಂತಿರುಗಿಸಿಕೊಂಡು ಹೋಗಿ ಅವರೆಲ್ಲರನ್ನೂ ತರುವುದು, ಮೆಂಗಿಲ ಶೇಣವ ಎನ್ನುವ ಸ್ಥಳಿಕನೊಬ್ಬನ ಮನೆಯ ದಾರಿಯನ್ನು ತೋರಿಸಿ ಅವನನ್ನು ಕರೆದುತರಲು ಹುಡುಗರನ್ನು ಕಳಿಸಿಯಾಯ್ತು. ನಾನು ಅನ್ಸಾರಿ ಲಾರಿಯಲ್ಲಿ ಹಿಂದಕ್ಕೆ ಹೊರಟೆ. ಓಸಿಯವರೂ ಡಾಕ್ಟರರೂ ಶಿಬಿರದಲ್ಲಿಯೇ ಉಳಿದರು. ಲಿಂಗೋಜಿ ಲಾರಿಯಿದ್ದ ಸ್ಥಳವನ್ನು ನಾನು ತಲಪಿದಾಗ ೬ ಗಂಟೆಯಾಗಿತ್ತು. ಸುಮಾರು ಮೂರು ಗಂಟೆಗಳ ಕಾಲ ಅವರೆಲ್ಲರೂ ಆ ನಿರ್ಜನ ಮಾರ್ಗ ಮಧ್ಯೆ ಗಾಳಿಯ ಗೋಳಗಳನ್ನು ಹಾರಿಸುತ್ತ ಕಾಲ ಕಳೆದಿದ್ದರು. ನಾನು ತಲಪಿದೊಡನೆಯೇ ಹುಡುಗರ ಕೂಡಿಟ್ಟಿದ್ದ ಹತಾಶೆ, ಶ್ರಮದ ಪ್ರವಾಹ ಕಟ್ಟೆಯೊಡೆದು ಹರಿದುವು. ಉದ್ದುದ್ದ ಮುಖಮಾಡಿ ಗೋಗರೆದರು. ತಪ್ಪು ನನ್ನದೆಂದು ಅದರ ಅರ್ಥವಲ್ಲ, ಕೇಳುವವನು ನಾನಿದ್ದೇನೆಂದು ಅರ್ಥ.

"ಇದೂ ಶಿಕ್ಷಣದ ಒಂದಂಗವೆಂದು ತಿಳಿಯಬೇಕು. ನೀವು ಮೊದಲೇ ಅಲ್ಲಿಗೆ ಹೋಗಿ ಏನು ಪಟೇಲ್ಗಿರಿ ಮಾಡಬೇಕಾಗಿತ್ತೇ? ಅದಿರಲಿ—ಮಾರ್ಗ ಮಧ್ಯೆ ಬಿಸಿಲಿನ ತಂಪು ಕೃಪೆಯಲ್ಲಿ ಕಲ್ಪನೆಯನ್ನು ಅದುಮಿಟ್ಟು ಶೂನ್ಯವಾಗಿ ದಿಗಂತವನ್ನು ನೋಡುವ ಅನುಭವ ಬೇಕೆಂದರೂ ಲಭಿಸೀತೇ?" ಎಂದು ನಾನು ಸವಾಲು ಹಾಕಿದೆ.

"ಬೆಂಗಳೂರು ಸಿಟಿ ಬಸ್ ಕಾಯುವಾಗ, ಸಾರ್."

"ಆದರೆ ಅಲ್ಲಿ ದಿಗಂತ ಮುಂದಿನ ಮನೆಯ ಕಕ್ಕಟ್ಟು, ಗೋಡೆ ಅಥವಾ ಹೆಚ್ಚೆಂದರೆ ಅದರೊಳಗಿರುವ..."

ನಗೆಗಡಲು ಮೊಗೆಯಿತು. ಕೆಂಡಗಣ್ಣಸ್ವಾಮಿ ಪ್ರತಿಭೆ ಮಿಂಚಿತು—

ಒಂದು ಲಾರಿಯು ದೂರ ಸಾಗಿರಲು ಮುಂದೆ
ಕೆಲಸವಿಲ್ಲದೆ ಕುಳಿತೆ ನಾನಿಲ್ಲೆ ಹಿಂದೆ
ಕೇಪಳೆಯ ಹಣ್ಣು ಮುರಕಲ್ಲಿನಾ ಮಣ್ಣು
ನೋಡೆ ಸಾಲದು ನಮ್ಮ ಒಂದು ಜತೆ ಕಣ್ಣು!

ಲಾರಿಗಳ ಬೆನ್ನು ಬೆನ್ನುಗಳನ್ನು ಸೇರಿಸಿದೆವು. ಲಿಂಗೋಜಿ ಅನ್ಸಾರಿಗೆ ವರ್ಗವಾದ. ಹುಡುಗರೆಲ್ಲರೂ ಅನ್ಸಾರಿ ಲಾರಿಯಲ್ಲಿ. ಇದಕ್ಕೆ ಲಿಂಗೋಜಿ ಲಾರಿಯನ್ನು ಕಟ್ಟಿ "ಮಂದ ಗಮನದಿಂದ ಮುಂದೆ ಸುಂದರಾಂಗರ" ಮೆರವಣಿಗೆ ಮೆರೆಯಿತು. ಐದಾರು ಮೈಲಿ

ದೂರದ ಬೆಳ್ತಂಗಡಿ ತಲಪಿದಾಗ ಕತ್ತಲೆ ಪೂರ್ಣ ಕವಿದಿತ್ತು. ಅಲ್ಲಿದ್ದ "ಜಗತ್ಪ್ರಸಿದ್ಧ" ವರ್ಕ್‌ಷಾಪಿನಲ್ಲಿ ಅಥವಾ ಲಾರೀ ಆಸ್ಪತ್ರೆಯಲ್ಲಿ ಲಿಂಗೋಜಿ ಲಾರಿ, ಲಿಂಗೋಜಿ, ಪರೂನ್ ಇವರನ್ನು ಬಿಟ್ಟು ಉಳಿದವರು ನಾವೂರಿನೆಡೆಗೆ ಹೊರಟೆವು. ಅಷ್ಟರಲ್ಲಿ ಅಲ್ಲಿಗೆ ನಾರಾಯಣ್ ಸಿಂಗ್ (ನಾವೂರಿನಿಂದ ೭ ಮೈಲಿದೆ) ಯಾರದೋ ಕಾರಿನಲ್ಲಿ ಬಂದರು. ಅವರು ಪೋಸ್ಟಾಫೀಸಿನಲ್ಲಿ ತಮ್ಮ ತಂದೆಯವರ ಸ್ಥಿತಿಗತಿ ಶ್ರೀಮಂತಿ ನಿಸಾರರ ಆರೋಗ್ಯ ಮುಂತಾದ ವಿವರ ಸಂಗ್ರಹಿಸಿಡಲು ಬೇಕಾದ ಏರ್ಪಾಡು ಮಾಡಿ ನಮ್ಮ ಲಾರಿಯನ್ನೇರಿದರು.

"ನೀವು ಇಷ್ಟು ತಡಮಾಡಬಾರದಿತ್ತು. ಲಿಂಗೋಜಿಯನ್ನು ಅಲ್ಲಿಯೇ ಬಿಟ್ಟು ಹುಡುಗರನ್ನು ಮೊದಲು ಸಾಗಿಸಿಬಿಡಬೇಕಾಗಿತ್ತು" ಅವರೆಂದರು.

"ಸರಿಯೇ. ಆದರೆ ಲಿಂಗೋಜಿಯ ಅವಸ್ಥೆ?"

"ಪುನಃ ಅನ್ಸಾರಿಯನ್ನು ಓಡಿಸಬಹುದಿತ್ತು."

"ಒಂದರ್ಧ ಗಂಟೆಯ ಉಳಿತಾಯಕ್ಕಾಗಿ ಎಷ್ಟು ಪೆಟ್ರೋಲ್ ಖರ್ಚು. ಅಲ್ಲದೇ ಅಷ್ಟು ಬೇಗ ಹೋಗಿ ಇವರು ಮಾಡುವುದಾದರೂ ಏನು, ನಮ್ಮ ಹಾಗೆ ತಾನೇ?" ನಾನೊಪ್ಪಲಿಲ್ಲ.

"ಇಲ್ಲ, ಹುಡುಗರು ನಮ್ಮ ಹಾಗಲ್ಲ. ಬಲು ಕೋಮಲ. ಶ್ರಮ, ತಾಪ ವಿಪರೀತವಾಗಿರುವಾಗ ಒಂದೊಂದು ನಿಮಿಷವೂ ಯುಗದಂತಾಗುವುದು. ಹೊಣೆ ಹೊತ್ತವರಿಗೆ ಆದರೆ ಭಾರದಿಂದಾಗಿ ಇದು ಗೊತ್ತಾಗುವುದಿಲ್ಲ. ಆದರೆ ಹೊರದ ಹುಡುಗರಿಗೆ ಇದು ಅಸಹನೀಯವಾಗುವುದು."

"ಸರಿ, ಮುಂದಿನ ತಿಳಿವಳಿಕೆಗಾಯಿತು" ಎಂದು ನಾನು ಮುಗಿಸಿದೆ. ಅವರೆಂದದ್ದು ಎಷ್ಟು ಸರಿಯೋ ನಾನು ಮಾಡಿದ್ದೂ ಅಷ್ಟೇ ಸರಿ ಎಂದು ನಾನು ತಿಳಿದಿದ್ದೇನೆ. ಯಾವ ಇಬ್ಬರು ವ್ಯಕ್ತಿಗಳೂ ಒಂದೇ ವಿಷಯವನ್ನು ಕುರಿತು ಏಕಪ್ರಕಾರವಾಗಿ ಅಭಿಪ್ರಾಯ ನೀಡುವುದು ಸಾಧ್ಯವಿಲ್ಲ. ಹೀಗೆ ಮಾತು, ವಾದ, ನಗು ಮುಂದುವರಿದಂತೆ ಲಾರಿ ನಾವೂರು ಬಂಗ್ಲೆಯನ್ನು ಪುನಃ ಪ್ರವೇಶಿಸಿತು. ಓಸಿಯವರೆಂದರು "ಒಂದು ಹೇಳಲು ಮರೆತುಬಿಟ್ಟಿದ್ದೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬಂಗ್ಲೆ, ಔಟ್‌ಹೌಸ್ ರಿಪೇರಿ ಮಾಡಿಸಿದ್ದಾರೆ. ಅವು ಈಗ ಅಪಾಯರಹಿತವಾಗಿವೆ. ಆದರೆ ನೀರಿನ ಸಮಸ್ಯೆ ಪ್ರಬಲವಾಗಿದೆ. ಡಿಸೆಂಬರಿನಲ್ಲಿ ಹರಿಯುತ್ತಿದ್ದ ಕಿರುತೊರೆ ಈಗ ಹನಿ ಹನಿ ತೊಟ್ಟಿಕ್ಕುತ್ತಿದೆ. ಆದರ ದಾರಿಯಲ್ಲಿ ಸ್ವಲ್ಪ ಮೇಲೆ ಹೋಗಿ ಗುಂಡಿ ತೋಡಿ ನಾವು ಕುಡಿಯುವ ನೀರು ಸಂಗ್ರಹಿಸಬೇಕು. ಬೇರೆ ಉಪಾಯವಿಲ್ಲ. ಅಲ್ಲಿಂದ ಇಲ್ಲಿಗೆ ಹೊತ್ತು ತರುವುದು ಪ್ರಯಾಸಕರವಾದರೂ ಹುಡುಗರಿರುವುದರಿಂದ ಈ ಸಮಸ್ಯೆ ನಿವಾರಿಸಬಹುದು. ಆದರೆ ನೀರು ಸಂಗ್ರಹಿಸಿಡಲು ದೊಡ್ಡ ಪಾತ್ರೆಯೇ ಇಲ್ಲವಲ್ಲ?"

ಇದು ಹೇಗೆಯೇ ಇರಲಿ. ನಾವೂರು ಬಂಗ್ಲೆ ಆಗ ಅತಿ ಸಂಭ್ರಮದ ಚಟುವಟಿಕೆಯ ಜೇನುಗೂಡಾಗಿತ್ತು. ಗ್ಯಾಸ್ ಲೈಟುಗಳು, ಲಾಂದ್ರಗಳು, ಟಾರ್ಚ್‌ಲೈಟುಗಳು ಅಲ್ಲಿ ಬೆಳಕಿನ ಹೊಳೆ ಹರಿಸಿದುವು. ಹುಡುಗರ ಒಂದು ತಂಡ ನೀರು ತಂದಿತು. ಇನ್ನೊಂದು ಸೌದೆ ಆಯ್ದಿತು. ಮತ್ತೊಂದು ಸಾಮಾನು ಸರಂಜಾಮುಗಳನ್ನು ಔಟ್‌ಹೌಸಿನಲ್ಲಿ ಶೇಖರಿಸಿ ವ್ಯವಸ್ಥಿತವಾಗಿ ಜೋಡಿಸುವ ಕಾರ್ಯದಲ್ಲಿ ಜಾಂಬ್ರೆ ಮತ್ತು ಖಾನ್ವಿಲ್ಕರರಿಗೆ

ಸಹಾಯಮಾಡಿತು. ಅಡುಗೆಯವರು ಪುಟನೆಗೆಯುತ್ತಿದ್ದ ರಬ್ಬರ್ ಚೆಂಡಿನಂತೆ. ಲಾರಿಯಿಂದಿಳಿದ ಅರ್ಧ ಗಂಟೆಯ ಒಳಗೆ ಅವರು ಟೀ, ಅವಲಕ್ಕಿ ಉಪ್ಪುಕರಿಯನ್ನು ತಯಾರುಮಾಡಿ ಹಂಚಿಯೇಬಿಟ್ಟರು. ಅಮೃತ ಹೇಗಿತ್ತೋ ನನಗೆ ಗೊತ್ತಿಲ್ಲ. ಆದರೆ ಅದು ನಾವೂರಿನ ಆ ಪ್ರಥಮ ಟೀಗಿಂತ ಹೆಚ್ಚು ರುಚಿಕರವಾಗಿದ್ದಿರಲಾರದು ಎಂದು ನಂಬಿದ್ದೇನೆ. ಇನ್ನು ಯಂಡ್ಮೂಡ್ಕ ರತ್ನ ಹೇಳಿದಂತೆ ಆ ಗಳಿಗೆಯಲ್ಲಿ ಪರಮಾತ್ಮನೇ ನನ್ನೆದುರು ಬಂದು ನಿಂತು "ನಿನಗೆ ಚಿರಂಜೀವಿತ್ವ ನೀಡುವ ಆದರೆ ಕಹಿಯಾದ ಅಮೃತ ಬೇಕೋ, ನಾವೂರಿನ ಟೀ ಸಾಕೋ ?" ಎಂದು ಪ್ರಶ್ನಿಸಿದ್ದರೆ "ಹೋಗಯ್ಯ, ಹೋಗು, ಟೀನೇ ಸಾಕು, ನಿನ್ನ ಅಮೃತ ಮೃತವಾಗಲಿ" ಎಂದು ನಾನು ಮಾತ್ರವಲ್ಲ ನಾವೆಲ್ಲರೂ ಏಕ ಕಂಠದಿಂದ ಒದರಿಬಿಡುತ್ತಿದ್ದೆವು. ಹೊಟ್ಟೆಯ ಒಳಗೆ ಖಾರದ ಅವಲಕ್ಕಿಯ ಆ್ಯಟಮ್ ಬಾಂಬೂ ಸುಮಧುರ ಟೀಯ ಹೈಡ್ರೊಜನ್ ಬಾಂಬೂ ಏಕ ಕಾಲದಲ್ಲಿ ಕೆಲಸ ಮಾಡಿ ಶಕ್ತಿದ್ರವ್ಯವನ್ನು ಪ್ರವಹಿಸಿದುವು. ರಾತ್ರಿಯ (೯ ಗಂಟೆ ಆಗಲೇ ಆಗಿದ್ದರೂ ನಮಗೆ ಆಗ ಮುಗಿದದ್ದು ಸಾಯಂಕಾಲದ ಟೀ ಅಷ್ಟೆ) ಊಟದ ಏರ್ಪಾಡು ಭರದಿಂದ ಸಾಗಿತ್ತು.

ಡಾಕ್ಟರ್ ಪೂಜಾರರು ಬಲು ಸಂಟಿಯಾದ ತರುಣ. ಎಂಬಿಬಿಎಸ್ ಡಿಗ್ರಿಧರರಾಗಿ ಮುಂದಿನ ಎಂಎಸ್ ಡಿಗ್ರಿಗೆ ಓದುತ್ತಿದ್ದ ಸರಕಾರೀ ವೈದ್ಯ. ಅವರು ನೀರನ್ನು ಕೂಲಂಕಷವಾಗಿ ಪರಿಶೀಲಿಸಿ "ಈ ನೀರನ್ನು ಕುದಿಸಿ, ಗಾಳಿಸಿ ಕುಡಿಯಬೇಕು. ಬರಿಯ ಬ್ಲೀಚಿಂಗ್ ಪೌಡರ್ ಹಾಕಿದರೆ ಸಾಲದು. ಹಾಗೇ ಕುಡಿದರೆ ಡಿಸೆಂಟ್ರಿ ಬರಬಹುದು" ಎಂದರು. ಇದನ್ನು ಕೇಳಿದ ಅತ್ಯುತ್ಸಾಹಿ ಜಗನ್ನಾಥಶಾಸ್ತ್ರಿ "ಸಾರ್ ! ತೋಡಿನ ಮೇಲ್ಗೋಡೆಗೆ ಬೆಂಕಿ ಹಾಕಿ ಬಿಡೋಣ. ಆಗ ಕುದ್ದ ನೀರೇ ನಮಗೆ ಸಿಗುವುದಷ್ಟೆ" ಎಂದು ಶಾಸ್ತ್ರೀಯವಾದ ಸೂಚನೆ ನೀಡಿದ.

"ಆಗ ತೋಡಿನಲ್ಲಿರುವ ಮೀನುಗಳ ಪಾಡು ?" ಗುರು ಕೇಳಿದ.

"ಮರ ಹತ್ತಿಬಿಡುತ್ತವೆ ಕಾಣಮ್ಮ" ಶ್ರೀನಿವಾಸ ಕೂಡಿಸಿದ.

"ಮರ ಹತ್ತಲು ಅವೇನು ಎಮ್ಮೆ ಕರುಗಳೇ ?" ನಾನು ಮುಗಿಸಿದೆ.

ಕುಡಿಯುವ ನೀರಂತೂ ಹೇಗೋ ಆಗುವುದು. ಆದರೆ ಸ್ನಾನ ಮಾಡಲು? ಬೆಂಗಳೂರಿನ ತಂಪಿನಿಂದ ಬಂದ ಹಸುಗೂಸುಗಳು ನಾವೂರಿನ ಸೆಕೆಯಿಂದ ಚಂಡಿಪಿಂಡಿಯಾಗಿ ಕಂಗಾಲಾಗಿದ್ದರು. ಬಾಬಾ, ಶ್ರೀಧರನ್, ಲಕ್ಷ್ಮಿ ಮೊದಲಾದವರು ಸೇರಿ ಶಿಬಿರಾಗ್ನಿಯನ್ನು ಭರದಿಂದ ಸಿದ್ಧಗೊಳಿಸಿದ್ದರು. ವಿಶಾಲವಾದ ಅಂಗಳವಿದೆ. ಬಂಗ್ಲೆಯ ಚಾವಡಿಯ ಮುಂದೆ ಗುಂಡಿ ತೋಡಿ ಮರದ ಭಾರಿ ಕಾಂಡಗಳನ್ನು ಒಟ್ಟಿದರು, ಅದೊಂದು ಗೋಪುರಾಕೃತಿಗೆ ಬಂದು ಎಲ್ಲವೂ ತಯಾರಾದೊಡನೆಯೇ ಓಸಿಯವರನ್ನು ವಿಧಿ, ಮಂತ್ರಪೂರ್ವಕ ಅಲ್ಲಿಗೆ ಆಮಂತ್ರಿಸಲಾಯಿತು. ಅವರು ಪ್ರತೀಕಾತ್ಮಕವಾಗಿ ಅದಕ್ಕೆ ಅಗ್ನಿ ಸ್ಪರ್ಶಿಸುವುದರ ಮೂಲಕ ಶಿಬಿರಾಗ್ನಿಯನ್ನು (ತನ್ಮೂಲಕ ಶಿಬಿರವನ್ನು) ಅಧಿಕೃತವಾಗಿ ಉದ್ಘಾಟಿಸಿದರು. ಅಲ್ಲಿ ಭಾಷಣದ (ಕೇಳುವವರು ಸಹಿಸಲೇಬೇಕಾದ) ಮೂಕ ಸಂಕಟವಿಲ್ಲ. ಆದರೆ ಆಶುಭಾಷಣದ ಮುಗ್ಧತೆ, ಸೌಂದರ್ಯ ಇವೆ. ಮಾಟಕರೆ ನೋಟಕರು, ನೋಟಕರೆ ಮಾಟಕರು, ನಾಟಕವ ನೋಡು ನಾವೂರಿನ ಬಯಲಂಗಣದಲಿ! ಉತ್ಸಾಹ ಮೂಡಿದರೆ ನಾವು ಅವರೊಡನೆ ಅವರಂತೆ ಪರಟೆ ಕೊಚ್ಚಿ ನಲಿಯಬಹುದು. ದಿನದ ಶಿಸ್ತಿನ ಬಿಗಿಯಿಂದ

ಬಿಸಿಗೊಂಡ ದೇಹಯಂತ್ರಕ್ಕೆ ಇದೊಂದು ಬಗೆಯ ತೈಲಾಭ್ಯಂಜನ. ಕೀಲುಗಳು ನಗೆಯೆಣ್ಣೆಯಿಂದ ಸಡಿಲಗೊಂಡು ಹಗುರಾಗಿ, ಯಂತ್ರ ಮರುದಿನದ ಕಾರ್ಯಕ್ಕೆ ಮೊದಲಿನ ಲವಲವಿಕೆಯಿಂದ ಪುನಃ ಸಿದ್ಧವಾಗುವುದು. ದೊಡ್ಡವರಾದ ನಮಗೆ ಆಗ ಪ್ರಾಯದ ಹೊಣೆಗಾರಿಕೆಯ ಭಾರವನ್ನು ಮರೆತು ಹಗುರವಾಗಿ ಎಳೆಯರಾಗಿರುವ ಸೌಕರ್ಯ ಇದೆ.

ಮೆಂಗಿಲ ಶೇಣವ

ಶಿಬಿರಾಗ್ನಿಯ ಭೀಕರ ಕೆನ್ನಾಲಗೆಯ ಕುಣಿತ. ಕಿಡಿಗಳು ಲಟಪಟನೆ ಚಟಾಯಿಸಿ ಅಂತರಿಕ್ಷಕ್ಕೆ ನೆಗೆದು ಅಲ್ಲಿ ಸಿಕ್ಕಿಹಾಕಿಕೊಂಡು ನಕ್ಷತ್ರಗಳಾಗುವ ಸೊಗಸು. ಹುಡುಗರ ಹಾರಾಟ, ಸಂತೋಷದ ಕೇಕೆಗಳು ಅಲ್ಲಿ ಹುಡುಗರೊಡನೆ ಹುಡುಗನಾಗಿ ಬೆರೆತು ಕುಣಿದು ನಲಿಯುತ್ತಿದ್ದ ಈ ಅಜ್ಜನಾರು? ಕಾಲಿಗೆ ತುಳುನಾಡಿನ ಮೆಟ್ಟು. ಮೊಣಕಾಲಿನಿಂದ ಮೇಲೆ ಎತ್ತಿ ಕಟ್ಟಿರುವ ಬೈರಾಸು. ಮೈಮೇಲೊಂದು ಜುಬ್ಬ. ತಲೆಗೆ ಕೆಂಪು ಎಲೆ ವಸ್ತ್ರದ ಮುಂಡಾಸು. ಕೈಗೆ ಆಧಾರವಾಗಿ ಊರುಗೋಲು. ಬಚ್ಚಬಾಯಿಯನ್ನು ಮುಚ್ಚುವ, ಮುಖದ ಮೇಲೆದ್ದು ಕಾಣುವ, ಬಿಳಿಯ ಹುಲಿಮೀಸೆ. ಕಣ್ಣುಗಳಿಂದ ಆತ್ಮವಿಶ್ವಾಸ, ಪ್ರೀತಿ ಮಿಂಚುವ ಕಾಂತಿ.

"ಅಜ್ಜಾ ಅಜ್ಜಾ, ಕತೆ ಹೇಳು ಅಜ್ಜಾ" ಎಂದು ಮೀಸೆ ಅಣ್ಣಯ್ಯಪ್ಪ.

"ಕುಣಿಯೋಣು ಬಾರಾ" ಎಂದನು ಪಿಂಟೋ.

ಶ್ರೀಧರ ಹಾಡಿದ, ಬಾಬಾ ದನಿ ಸೇರಿಸಿದ. ಉಳಿದವರು ಆಲಾಪನೆ ಮಾಡಿದರು. ಚಪ್ಪಾಳೆಗಳು ತಮಟೆಗಳಾದುವು. ಅಂಗೈಗಳು ತಾಳ ಬಡಿದುವು. ೬೭ ವರ್ಷದ ಅಜ್ಜ, ಪಿಂಟೋ, ಲಕ್ಷ್ಮಿ, ಮೋಹನ ಮೊದಲಾದವರು ಬೆಂಕಿಯ ಸುತ್ತಲೂ ಕುಣಿದದ್ದು; ಹಾಡಿದ್ದೇ ಹಾಡಿದ್ದು.

"ಬೆಟ್ಟ ಈ ರಾತ್ರಿಯೇ ಏರಬಹುದೋ ಅಜ್ಜಾ?"

"ಓ ಖಂಡಿತಾ!"

"ನಿಮಗೆ ಈ ಪ್ರಾಯದಲ್ಲಿ ಕೂಡುವುದೋ?"

"ಅದು ನೋಡುವಾ!"

ಅಜ್ಜನ ಹೆಸರು ಮೆಂಗಿಲ ಶೇಣವ. ಕುದುರೆಮುಖದ ಕೂಸು. ನನಗವನ ಪರಿಚಯ ಹತ್ತು ವರ್ಷಗಳ ಹಿಂದಿನದು. ಅಂದೂ ಅವನು ನಮಗೆ "ಗೈಡ್" ಮಾರ್ಗದರ್ಶಕ. ಡಿಸೆಂಬರಿನಲ್ಲಿ ನಾರಾಯಣಸಿಂಗರೂ ನಾನೂ ನಾವೂರಿಗೆ ಬಂದಿದ್ದಾಗ ನಾನೊಬ್ಬನೇ ಮೆಂಗಿಲ ಶೇಣವನ ಮನೆಗೆ ಹೋಗಿದ್ದೆ. ಬಂಗ್ಲೆಯಿಂದ ಮುಕ್ಕಾಲು ಮೈಲಿ. ಕಾಲುದಾರಿಯಲ್ಲಿ ಹೋಗಿ ಒಂದು ಉಬ್ಬು ದಾಟಿ ಇನ್ನೊಂದು ತೋಡನ್ನು ಪಾಲದ ಮೂಲಕ ಹಾಯ್ದು ಹೋದರೆ ಅವನ ಗುಡಿಸಲು :

> ಬಳಿಯೊಳೆ ಕೆರೆ, ತೊರೆ, ಮರಬಳ್ಳಿಯ ಹೊರೆ,
> ಜೀವದ ತುರುಗಳ ಮೇವುಗಳು
> ಅಂಗಳದಲಿ ಹುಲ್ಲೊಟ್ಟಿಲ ತೊಟ್ಟಿಲ
> ಏರಿ ಮೆರೆವ ಕರು ಮಂದೆಗಳು

ಕಡೆಂಗೋಡ್ಲು

ನಾನು ಸಮವಸ್ತ್ರಧಾರಿಯಾಗಿ ಅಕಸ್ಮಾತ್ತಾಗಿ ಅಲ್ಲಿಗೆ ಹೋಗಿದ್ದುದರಿಂದ ಚಿಕ್ಕ ಪುಟ್ಟ ಕೋಮಣಧಾರೀ ಮಕ್ಕಳು ಹೆದರಿ ಓಡಿ ಅಡಗಿದರು. ಹಿರಿಯ ಮಗಳು ಹುಲ್ಲುಮೆದೆ ಒಟ್ಟುತ್ತಿದ್ದವಳು ಅವಾಕ್ಕಾಗಿ ಬೆರಗಾಗಿ ನಿಂತಳು. "ಮೆಂಗಿಲ್ ಸೋಜಾ ಇಲ್ಲವಾ ?" ನಾನು ಮಾತಾಡಿದೆ. ಅಂತೂ ಕನ್ನಡ ಭಾಷೆ ಕೇಳಿ ಅವಳ ಗಾಬರಿ ಕಡಿಮೆಯಾಗಿರಬೇಕು.

"ಓ" ಎಂದು ಕಿವಿಯೆಡೆ ಕೈ ಹಿಡಿದಳು.

ಪುನಃ ಗಟ್ಟಿಯಾಗಿ ಕೂಗಿ ಹೇಳಿದೆ. "ನಾನಿಲ್ಲಿ ಇದ್ದೇನೆ" ಎಂದು ಮುದುಕ ಹೊರಗೆ ಚಿಮ್ಮಿದ. ದೊಡ್ಡ ಲಂಗೋಟಿಯೊಂದೇ ಅವನ ಮೈ ಮೇಲಿದ್ದ ವಸ್ತ್ರ. ತಲೆಯ ಮೇಲೆ ಮುಟ್ಟಾಳೆ. ಕೈಯಲ್ಲಿ ಖಾಲಿಮಾಡಿದ ಗೊಬ್ಬರದ ಕುಕ್ಕೆ. ಸುತ್ತಲೂ ಗೊಬ್ಬರದ, ಹಸಿ ಹುಲ್ಲು ಕೊಳೆತ ವಾಸನೆ. "ಚಿಂದಿಯನುಟ್ಟೇ ಹಾಳೆಯ ತೊಟ್ಟೇ ಇದೆ ಸಿಂಗರವೆಂದೊಸೆಯುವರು."

"ಏನು ಮೆಂಗಿಲ ಸೋಜಾ ! ನನ್ನನ್ನು ಗೊತ್ತಾಯಿತಾ ?"

"ಮೆಂಗಿಲ ಸೋಜಾ ಅಲ್ಲ—ಮೆಂಗಿಲ ಶೇಣವ" ಎಂದು ತಿದ್ದಿದ. ನನ್ನ ಸಮೀಪ ಬಂದು, ಕಣ್ಣರಳಿಸಿ ನೋಡಿ ಮೇಲೆ ಕೆಳಗೆ ಪುನಃ ನೋಡಿ "ಹ್ಞಾ ನೋಡಿದ್ದೇನೆ. ಆದರೆ ಈ ಕಣ್ಣು ಈಗ ಮೊದಲಿನಷ್ಟು ಶುದ್ಧ ಇಲ್ಲ ಸ್ವಾಮಿ."

"ಅಂತೂ ಎಲ್ಲಿ ಯಾವಾಗ ನೋಡಿದ್ದು ?"

"ಎಲ್ಲಿ—ಮತ್ತೆಲ್ಲಿ ? ನೋಡಿದ್ದರೆ ಇಲ್ಲಿಯೇ. ನಮಗೆ ಸ್ವಾಮೀ ವರ್ಷ ವರ್ಷ ಜನ ಬಂದು ಹೋಗುತ್ತಾರೆ. ಎಲ್ಲರಿಗೂ ಗ್ಯಾಡು ನಾನೇ. ಹಾಗಾಗಿ ಹೆಸರು ಮಿಸಿ ನೆನಪು ಉಳಿಯೋದಿಲ್ಲ."

ಕುದುರೆಮುಖದ ಅಧ್ಯಕ್ಷನಿವ. ಅಧ್ಯಕ್ಷರನ್ನು ನಮಗೆ ಗೊತ್ತಿರುವುದು. ಆದರೆ ಅವರಿಗೆ ನಮ್ಮೆಲ್ಲರನ್ನೂ ಗೊತ್ತಿರಬೇಕೆಂದಿಲ್ಲವಷ್ಟೆ. "ನೀವೆಲ್ಲ ಕ್ಷೇಮವೇ—ಹೆಂಡತಿ, ಮಕ್ಕಳು ?"

"ಕ್ಷೇಮ ಎಂಥಾದ್ದು ? ನೋಡಿ ಸ್ವಾಮೀ—ಅವಳು ಹೋಗಿ ಎಂಟು ವರ್ಷ ಆಯಿತು. ಎಂಟು ಮಕ್ಕಳೂ ನಾನೂ ಇದ್ದೇವೆ."

"ಅಯ್ಯೋ ಪಾಪ."

"ಪಾಪ ಎಂದರೆ ಮಾಡುವುದೇನು ಸ್ವಾಮೀ ? ನನಗೆ ನಿಮಗೆ ಪ್ರೋಗ್ರಾಮು ಉಂಟು, ಕಾಲರಾಯನಿಗುಂಟೋ ! ಕರೆದಾಗ ಹೋಗಲೇಬೇಕಷ್ಟೆ."

"ಏನಾಗಿತ್ತು ?"

"ಹೇಳುವಂಥಾದ್ದು ಏನೂ ಇಲ್ಲ. ಈ ಹುಡುಗ ಹುಟ್ಟಿದಾಗ ನೋಡಿ ಜ್ವರ ಬಂತು. ಎಂಥ ಸುಡುಗಾಡು ಜ್ವರವೋ, ಅದು ಬಿಟ್ಟಿತು. ಆದರೆ ಮತ್ತೆ ಅವಳು ಅವಳಾಗಿ ಉಳಿಯಲಿಲ್ಲ. ಯಾರೂ ಅವಳಿಗೆ ಗುರ್ತೇ ಆಗಲಿಲ್ಲ. ಮಗುಗೆ ಮೊಲೆ ಹಾಲು ಕೊಡಲಿಲ್ಲ. ಅವಳೂ ಆಹಾರ ತೆಗೆದುಕೊಳ್ಳಲಿಲ್ಲ. ಹಳ್ಳಿ ಔಷಧಿ ಮದ್ದು ಮಂತ್ರ ಹರಕೆ ಆಯಿತು. ನಮ್ಮ ಪಾದ್ರಿಗಳು ಸಹ ಔಷಧಿ ಕೊಟ್ಟರು. ಆದರೆ ತೆಗೆದುಕೊಳ್ಳಬೇಕಲ್ಲ. ಬೆಳ್ತಂಗಡಿಯಿಂದ ಡಾಕ್ಟರನ್ನು ಕರೆದುತಂದು ಸೂಜಿ ಮದ್ದು ಕೊಟ್ಟಾಯಿತು. ಆದರೇನು ಮಾಡೋದು ಸ್ವಾಮಿ—ಉಪ್ವಾಸನೇ ಬಿದ್ದು ಹೋಗಿಬಿಟ್ಟಳು."

"ಆಗ ಮಗೂಗೆ ?"

"ಮಗೂಗೆ ಎರಡು ತಿಂಗಳಾಗಿರಲಿಲ್ಲ. ಮತ್ತೆ ನೋಡಿ ಹೀಗೇ ಬೆಳೆಸಿಕೊಂಡು ಬಂದೆವು."

ಹುಡುಗ ಸಂಟಿಯಾಗಿ ಮುಂದ್ದಾಗಿ ಇದ್ದ. ತಾಯಿಯನ್ನು ಕಾಣದ ಶಿಶುಪಾಪ. "ಮಕ್ಕಳಿಗೆ ಮದುವೆ ಏನಾದರೂ ?" ಕೇಳಿದೆ.

"ದೊಡ್ಡವನು ಅಪ್ಪು, ಇಲ್ಲೇ ಇದ್ದಾನೆ. ಇನ್ನೂ ಹುಡುಗ. ಅವನಕ್ಕ ಮಂಗ್ಳೂರಿನಲ್ಲಿ ನಮ್ಮ ಜನದ ಮನೆಯಲ್ಲಿ ಕೆಲಸಕ್ಕಿದ್ದಾಳೆ. ಮದುವೆಯಿಲ್ಲ. ಇವಳು ಅವನ ತಂಗಿ ಕಿವಿ ಸೋರಿ ಸೋರಿ ಕೇಳಿಸೋದೆ ಇಲ್ಲ. ಮದುವೆ ಬೇಡಾಂತಲೇ ಇದ್ದಾಳೆ. ಮತ್ತಿನವರು ಚಿಕ್ಕವರು ನೋಡಿ" ಅವನ ಉತ್ತರ.

"ಪಾಪ ಎಂಥ ಕಷ್ಟವಾಯಿತು."

"ಏನು ಮಾಡೋದು—ಆಯುಸ್ಸು ಇದ್ದಷ್ಟು ದಿವಸ ನಾವೂ ದುಡಿಯಬೇಕಷ್ಟೆ ?"

ಅಜ್ಜನನ್ನು ಕರೆದುಕೊಂಡು ಬಂಗ್ಲೆಗೆ ಬಂದೆ, ಬರುತ್ತ "ಅದಿರಲಿ—ನಿಮ್ಮ ಮನೆಗೆ ಬಂದವನಿಗೆ ಕಾಫಿ, ತಿಂಡಿ, ಸೀಯಾಳ ಕೊಡಬೇಡವೇ" ಎಂದು ಕೆಣಕಿದೆ.

"ಖಂಡಿತಾ ! ಆದರೆ ನೀವು ದೊಡ್ಡವರು ತೆಕ್ಕೊಳ್ಳುತ್ತೀರೋ ಇಲ್ಲವೋ—ಮತ್ತೆ ನಮ್ಮದೆಂಥಾ ಕಾಫಿ."

"ನೀವು ಕೊಟ್ಟು ನೋಡಿ"

"ಹಾಗಾದರೆ ಊಟ ನಮ್ಮಲ್ಲಿ. ಬಡವರ ಗಂಜಿ."

ನಾರಾಯಣ್‌ಸಿಂಗರೂ ನಾನೂ ಮೆಂಗಿಲನೊಡನೆ ಕುದುರೆಮುಖದ ಮ್ಯಾಪ್ ಹಿಡಿದು ಮಾತಾಡಿದೆವು. ಸುಮಾರು ೧೦೦—೧೫೦ ಚದರ ಮೈಲಿ ವ್ಯಾಪಿಸಿದ್ದ ಆ ಪ್ರದೇಶದ ಪ್ರತಿ ಬೆಟ್ಟ, ಕೊರಕಲು, ದಿಬ್ಬ, ಹಳ್ಳಿ ಇವುಗಳ ಹೆಸರು ವಿವರ, ಎತ್ತರ, ದೂರ ಎಲ್ಲ ಅವನಿಗೆ ಬಾಯಿಪಾಠ. ಕುದುರೆಮುಖದ ಶಿಶುವಲ್ಲವೇ !

"ನಾವು ಜನವರಿಯಲ್ಲಿ ಬರುತ್ತೇವೆ, ಹತ್ತು ದಿವಸ ಇರುತ್ತೇವೆ. ನಿಮ್ಮ ಸಹಾಯ ಬೇಕು, ಮೇಲೆ ಬಂದು ದಾರಿ ತೋರಿಸಬೇಕು."

"ಆಗಬಹುದು. ಮೊದಲೇ ಬರುವ ದಿವಸ, ಟೈಮು ತಿಳಿಸಿಬಿಡಿ."

ಅದೇ ಪ್ರಕಾರ ನಾವು ದಿವಸ, ಟೈಮು ತಿಳಿಸಿದ್ದೆವು. ಆದರೂ ನಮ್ಮ ಮೊದಲಿನ ಲಾರಿ ಬಂದಾಗ ಮೆಂಗಿಲ ಶೇಣವ ಅಲ್ಲಿರಲಿಲ್ಲ. ಈಗ ಬಂದು ಸೇರಿದ್ದಾನೆ. ಬಹುಶಃ ನಾವು ಹೇಳಿ ಕಳಿಸಿದ ಮೇಲೆ ಬಂದಿರಬೇಕು. ನಮ್ಮನ್ನು "ಡೋಂಗಿ" ಎಂದು ತಿಳಿದಿದ್ದನೋ ಏನೋ !

ಅವನನ್ನು ಕರೆದು "ಅಲ್ಲ ಶೇಣವ, ನಾವು ಬರುತ್ತೇವೆ ಎಂದು ಮೊದಲೇ ಬರೆದಿದ್ದರೂ ನೀವು ಯಾಕೆ ನಾವಿಲ್ಲಿಗೆ ಬಂದಾಗ ಇರಲಿಲ್ಲ ?" ಎಂದು ತಪ್ಪು ಹುಡುಕಲು ಕೆಣಕಿದೆ.

"ಹೌದೋ ಸ್ವಾಮಿ ! ನೀವು ಕೊಟ್ಟ ಟೈಮು ನಾಲ್ಕು ಗಂಟೆ. ನಾನು ೩ರಿಂದ ೫ರ ತನಕ ನೋಡಿದೆ. ನೀವು ಬರಲಿಲ್ಲ. ತಡವಾಗಿ ಬಂದರೆ ಮತ್ತೆ ಹೇಗೂ ಗೊತ್ತಾಗುವುದಲ್ಲ ಎಂದು ಮನೆಗೆ ಹೋದೆ." ೧೨ನೆಯ ಮೈಸೂರಿನ ಟೈಮು ಎಂದು ಜಂಬ ಮಾಡು

ತ್ತಿದ್ದ ನನಗೆ ಅಜ್ಜನಿಂದ ಪಾಠ ಕಲಿಯುವಂತಾಯಿತು. ಮೆಂಗಿಲ ಶೇಣವ ಬಿಳಿ ದೊರೆಗಳ ಕಾಲದಿಂದಲೂ ಕುದುರೆಮುಖದ "ಶೆರ್ಪಾ" ಆಗಿದ್ದವನು. ಅವನ ಜೀವನಾನುಭವ, ಕುದುರೆಮುಖ ಶ್ರೇಣಿಯ ಪ್ರತಿ ಏರು, ತಗ್ಗು, ಬಂಡೆ, ಕಾಡು ಇವುಗಳ ಬಗ್ಗೆ ಅವನ ಅನುಭವದಷ್ಟೇ ವಿಶಾಲವೂ ಆಳವೂ ಆಗಿತ್ತು. ಅವನ ಒಂದೊಂದು ಮಾತೂ ಈ ಅನುಭವದ ಕಡಲಿನಿಂದ ಹೊರಬರುತ್ತಿದ್ದ ಮುತ್ತು. ಮೆಂಗಿಲ ಶೇಣವ ನಮ್ಮ ಮುಖ್ಯ ಶೆರ್ಪಾ. ಅವನ ಅನುಯಾಯಿಗಳಾಗಿ ಇನ್ನೂ ಮೂವರನ್ನು ನೇಮಿಸಿದೆ. ಫಾರೆಸ್ಟ್‌ಗಾರ್ಡ್ ಪೂಜಾರಿಯೂ ಹಾಜರಾಗಿದ್ದ. ಅವನು ಸದಾ ನಮ್ಮ ಸೇವೆಗೆ ಸೊಂಟಗಟ್ಟಿ ಮಿಲಿಟರಿ ಸಲಾಮು ಕೊಡುತ್ತ ನಿಂತಿದ್ದ. ಆ ಖಾಕಿ ಸಮವಸ್ತ್ರ ಧರಿಸಿದ ಅವನು ಹಳ್ಳಿಗರಿಗೆ ಘನ ಸರಕಾರದ ಪ್ರತಿನಿಧಿ. ಅವನ ದರ್ಪ ಪ್ರಭಾವ ಅಷ್ಟು. ನಮ್ಮೆದುರು ಅವನ ವಿನಯ ಮರ್ಯಾದೆಯೂ ಅಷ್ಟೇ.

"ಸೌದೆ ಬೇಕಲ್ಲ ಪೂಜಾರಿ."

"ಆಯ್ತು ಸಾರ್."

"ನಮಗೆ ಎರಡು ಜನ ಬೇಕಲ್ಲ ಪೂಜಾರಿ."

"ಆಯ್ತು ಸಾರ್."

"ನೀನು ಇಲ್ಲಿಯೇ ಇದ್ದು ಸಹಾಯ ಮಾಡುತ್ತಿರಬೇಕು. ಊಟ ನಮ್ಮೊಡನೆ."

"ಆಯ್ತು ಸಾರ್."

"ನೀರಿನವಸ್ಥೆ ಏನು ಪೂಜಾರಿ !"

"ಆಯ್ತು ಸಾರ್. ತೋಡಿನಿಂದ ತರುವುದು ಸಾರ್."

ಪೂಜಾರಿಯ ಭಾಷೆಯಲ್ಲಿ "ಆಯ್ತು" ಎನ್ನುವುದು ಸಮ್ಮತಿಸೂಚಕ "ಹೂಂ"ನ ಪರ್ಯಾಯಪದ. ತಾಂಬೂಲರಕ್ತರಾಗರಂಜಿತ ಬಾಯಿಯ ಪೂಜಾರಿಯನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್ ನಮ್ಮ ಸಹಾಯಕ್ಕಾಗಿ ಸದಾ ಅಲ್ಲಿಯೇ ಉಳಿದಿರಬೇಕೆಂದು ವಿಧಿಸಿತ್ತು.

ನಾವೂರಿನ ಪ್ರಥಮ ರಾತ್ರಿ

ರಾತ್ರಿ ೧೦ ಗಂಟೆಗೆ ನಾವೂರಿನ ಪ್ರಥಮ ಊಟ—ಸಾರು, ಹಪ್ಪಳ, ಪಲ್ಯ, ಮುದ್ದೇ ಹುಳಿ, ಉಪ್ಪಿನಕಾಯಿ. ಅದರ ರುಚಿ ಶೇಣವನ ನುಡಿಮುತ್ತಿನಲ್ಲಿ "ಗೇರು ಹಣ್ಣಿನ ರಸ ಕ್ಕಿಂತಲೂ ಮಿಗಿಲು." ಶಿಬಿರಾಗ್ನಿಯ ಸುತ್ತಲೂ ಎಲ್ಲರೂ ಕುಳಿತು ತೃಪ್ತಿಯಿಂದ ಊಟ ಮಾಡುತ್ತಿದ್ದ ಆ ದೃಶ್ಯ ಕೃತಕೃತ್ಯತೆಯ ಒಂದು ಕುರುಹು. ಆ ಊಟವನ್ನು ನಾವು ಸಂಪಾದಿಸಿದ್ದೆವು. ಅದರ ರುಚಿಯೂ ಅಷ್ಟೇ ಹೆಚ್ಚು. ಡೇರೆಗಳನ್ನು ಆ ರಾತ್ರಿ ಎರಡು ಕಾರಣಗಳಿಂದಾಗಿ ಹೊಡೆಸಲಿಲ್ಲ. ಒಂದು, ನಾವು ಎಲ್ಲರೂ ಸೇರುವಾಗ ರಾತ್ರಿ ಮೀರಿತ್ತು. ಮತ್ತೆ ಡೇರೆ ಹೊಡೆದು, ನೆಲ ಸಮತಟ್ಟುಮಾಡಿ, ಡೇರೆಗಳ ಸುತ್ತಲೂ ಹಾವು ಚರಂಡಿ (ಡೇರೆಗಳಿರುವ ಪ್ರದೇಶದ ಸುತ್ತಲೂ ಇದು ಆಯತಾಕಾರವಾಗಿ ಇರಬೇಕು. ಹೊರಗಿನಿಂದ ಹರಿದುಕೊಂಡು ಬರುವ ಹಾವು ಇದರೊಳಗೆ ಬೀಳುವುದು. ಕಡಿದಾದ ಬದಿಯಿಂದ ಏರುವುದು ಅದಕ್ಕೆ ಸಾಧ್ಯವಿಲ್ಲದಿರುವುದರಿಂದ ಡೇರೆಯಲ್ಲಿರುವವರು ಸುರಕ್ಷಿತರಾಗಿರು

ತ್ತಾರೆ) ಕಡಿಯಲು ಅವಕಾಶವಿರಲಿಲ್ಲ. ಇದಕ್ಕಿಂತ ಮುಖ್ಯವಾದ ಕಾರಣ ಎರಡನೆಯದು. ಬಂಗ್ಲೆಯ ಜಗಲಿ ಕೋಣೆಗಳು ಬಲು ವಿಶಾಲವಾಗಿದ್ದುವು. ಬಂಗ್ಲೆಯೂ ರಿಪೇರಿಗೊಳಿಸಲ್ಪಟ್ಟು ಸಾಕಷ್ಟು ಭದ್ರವಾಗಿತ್ತು. ರಾತ್ರಿಮಲಗುವಾಗ ೧೨ ಗಂಟೆ. ಹುಡುಗರೆಲ್ಲರೂ ದಣಿದಿದ್ದರು. ಆದರೂ ಶಿಸ್ತು ಮೀರಲು ಸಾಧ್ಯವಿಲ್ಲವಲ್ಲ. ಮರುದಿವಸದ ಉಪಾಹಾರಕ್ಕೆಬೇಕಾಗುವ ನೀರುಸಂಗ್ರಹಿಸಲೇ ಬೇಕಾಯಿತು, ನಾನು ಅಪ್ಪಣೆ ಮಾಡಿದೆ "ನಾಳೆ ೧೨ನೆಯ ತಾರೀಕು ಸರಿಯಾದ ಶಿಕ್ಷಣದ ಆರಂಭ, ೫–೩೦ ಗಂಟೆಗೆ ಹಾಸಿಗೆ ಚಾ. ೬ ಗಂಟೆಗೆ ಉಪಾಹಾರ. ನಿಮ್ಮಲ್ಲಿ ನಾಲ್ವರು ಕ್ಯಾಡೆಟ್ ಶಿಕ್ಷಕರು ಹೊರತಾಗಿ ಉಳಿದ ೩೩ ಮಂದಿಯನ್ನು ೧೧ ಮಂದಿಯ ಮೂರು ಸಮಭಾಗಗಳಾಗಿ ವಿಭಾಗಿಸಿದೆ" ಎಂದು ಆಯಾ ಭಾಗಗಳ ಹುಡುಗರ ಹೆಸರುಗಳನ್ನು ಓದಿ ಹೇಳಿದೆ. "ಒಂದನೆಯ ಪಂಗಡ ನಾಳೆ ಶಿಬಿರದಲ್ಲಿಯೇ ಇದ್ದು ಇಲ್ಲಿಯ ವಿಶಿಷ್ಟ ಕಾರ್ಯ ನಡೆಸಬೇಕು. ಎರಡನೆಯವು ಶಿವಪ್ಪನವರ ಮುಂದಾಳುತನದಲ್ಲಿ ಕುದುರೆಮುಖದ ಸರಹದ್ದಿನವರೆಗೆ ಹೋಗಿ ಅಲೆದು ಸಂಜೆಗೆ ಹಿಂತಿರುಗಬೇಕು. ಮೂರನೆಯದು ಜಮಲಾಬಾದಿಗೆ ಹೋಗಿ ಬರಬೇಕು. ನಮ್ಮ ನಾಲ್ವರು ವಿದ್ಯಾರ್ಥಿ ಶಿಕ್ಷಕರೂ ನಾನೂ ಜಮಲಾಬಾದಿಗೆ ಹೋಗುತ್ತೇವೆ. ನಿಸಾರ್ ಮತ್ತು ಸ್ವಾಮಿಯವರು ಶಿಬಿರದ ಕರ್ತವ್ಯ ನಿರ್ವಹಿಸುತ್ತಾರೆ. ೬–೩೦ ಗಂಟೆಗೆ ಪ್ರತಿಯೊಂದು ಪಂಗಡವೂ ಅದರ ದರ ಕರ್ತವ್ಯದಲ್ಲಿ ಲೀನವಾಗಿಹೋಗಬೇಕು. ಸಂಶಯ ಪ್ರಶ್ನೆ ಉಂಟೇ ?"

"ಡ್ರೆಸ್ ಸಾರ್ ?"

"ಸದಾ ಸಮವಸ್ತ್ರ. ಸಮವಸ್ತ್ರ ಸ್ವರ್ಗಕ್ಕೂ ಹಸುರು ಕಂದೀಲು."

"ಆದರೆ ಈಗಲೇ ತಡವಾಯಿತಲ್ಲ, ಸಾರ್."

"ನಾನು ಹೇಳಿದ್ದು ನಾಳಿನ ಕಾರ್ಯಕ್ರಮ. ಆದರೆ ವಿಚಾರ ಪ್ರಶ್ನೆ ಉಂಟೋ ಎಂದು ಕೇಳಿದ್ದು. ಅಸಂಬದ್ಧ ಪ್ರಲಾಪದ ಅಪಸ್ವರ ಬೇಡ."

ಒಂದನೆಯ ರಾತ್ರಿ. ದೀರ್ಘಪ್ರಯಾಣಾನಂತರ ಶ್ರಮಪಟ್ಟು ಮಲಗಿದ ರಾತ್ರಿ. ಬೆಳಗ್ಗೆ ಸ್ವಲ್ಪ ತಡವಾಗಿ ಏಳಬಹುದೋ ಏನೋ ಎಂದು ನಿರೀಕ್ಷಿಸಿದವರಿಗೆ ೫–೩೦ ಗಂಟೆಯ ಹಾಸಿಗೆ ಚಾ ಸುದ್ದಿ ಬಲು ಕಹಿಯಾಗಿರಬೇಕು.

ನಾವು ಊಟ ಮಾಡುವ ಮೊದಲು ಒಂದು ಸಣ್ಣ ಘಟನೆ ನಡೆಯಿತು. ನಾನು ಡಾಕ್ಟರರನ್ನು ಕುರಿತು "ಕ್ಯಾಂಪ್ ಜೀವನ. ನೀವು ಬಂದದ್ದು ನನಗೆ ಹತ್ತಾನೆ ಬಲ ಬಂದ ಹಾಗೆ. ನಿಮಗೆ ಕಷ್ಟ ಆದರೂ ನಮಗೆ ಧೈರ್ಯವಾಯಿತು. ದಯವಿಟ್ಟು ಸ್ವಲ್ಪ ಹೊಂದಿಕೊಳ್ಳಿ" ಎಂದೆ.

"ನಾನು ಈ ಮೊದಲೇ ಎನ್‌ಸಿಸಿ ಕ್ಯಾಂಪ್ ಒಂದಕ್ಕೆ ಹೋಗಿದ್ದೇನೆ. ನೀವೆಲ್ಲ ಇರುವಾಗ ನನಗೇನೂ ತೊಂದರೆಯಿಲ್ಲ."

"ಸಂತೋಷವಾಯಿತು. ಈಗ ಊಟ ತಯಾರಾಗಿದೆಯಲ್ಲ. ನೀವು ಪ್ಲೇಟ್ ಏನಾದರೂ ತಂದಿದ್ದೀರಾ ?"

ನಮ್ಮ ಮಾತನ್ನು ಕೇಳುತ್ತಿದ್ದಾತ ಅವರ ಆರ್ಡರ್ಲಿ. ಅವನು ಉತ್ತರ ಕೊಟ್ಟ "ಡಾಕ್ಟ್ರು ಪ್ಲೇಟು ಗೀಟು ತರುವ ಕ್ರಮವಿಲ್ಲ."

"ಏನು, ಏನೆಂದಿರಿ ?"

"ಅವರು ಹೇಗೆ ಪ್ಲೇಟು ತರುವುದು ?" ಆರ್ಡರ್ಲಿ ಅಂದ.

"ಮತ್ತೆ ಹೇಗೆ ಊಟ ಮಾಡುತ್ತಾರೆ ?" ನನಗೆ ಕುತೂಹಲವಾಯಿತು.

"ಅವರು ಡಾಕ್ಟ್ರು. ಅವರು ಯಾಕೆ ತರಬೇಕು ? ಅದು ನೀವು ಒದಗಿಸಿ ಕೊಡಬೇಕು."

ಅವನ ಮಾತಿನ ಠೀವಿ ಅದುವರೆಗಿನ ಹುಳಿ ಹುಳಿ ವರ್ತನೆ ನನ್ನನ್ನು ರೇಗಿಸಿತು.

"ನಿನ್ನ ಹತ್ತಿರ ಮಾತಾಡಿದೆನಾ ? ಅಧಿಕ ಪ್ರಸಂಗ ಬೇಡ. ನಿನ್ನ ಡಾಕ್ಟರರೇನು ಸ್ವರ್ಗದಿಂದ ಬಂದವರಾ ?"

ಡಾಕ್ಟರರ ಕಡೆಗೆ ತಿರುಗಿ "ಕ್ಷಮಿಸಿ, ಇದು ನಿಮಗೆ ಅನ್ವಯವಾಗುವುದಿಲ್ಲ. ಈ ಸಣ್ಣ ಮನುಷ್ಯನ ಮಾತು ನೋಡಿ."

ಡಾಕ್ಟರರು ಸೀದಾ ಅವನಿಗೆ ಬಿರುನುಡಿದರು "ನಿನ್ನನ್ನು ಹಿಂದೆ ಕಳಿಸಿಬಿಡುತ್ತೇನೆ." ಆ ಗಳಿಗೆಯಿಂದ ಅವನಂಥ ವಿಧೇಯನನ್ನು ಮನಃಪೂರ್ವಕ ದುಡಿಯುವವನನ್ನು ನಾನು ನೋಡಲಿಲ್ಲ.

ಡಾಕ್ಟರರೂ ಅವರ ಆರ್ಡರ್ಲಿಯೂ ಬಂಗ್ಲೆಯ ಬಲಬದಿಯ ಕೋಣೆಯಲ್ಲಿ ಮಲಗಿದರು. ಅದೇ ಆಸ್ಪತ್ರೆಯೂ ಆಯಿತು. ಎಡಬದಿಯ ಕೋಣೆ ಓಸಿಯವರಿಗೆ. ಮುಂದಿನ ಮತ್ತು ಹಿಂದಿನ ವಿಶಾಲ ಜಗಲಿಗಳಲ್ಲಿ ಹುಡುಗರು ಪವಡಿದರು. ಹೀಗೆ ನಾಲ್ಕೂ ಕಡೆಗಳಲ್ಲಿ ಸಂರಕ್ಷಣೆ ಪಡೆದ ನಡುವಣ ಹಾಲ್ "ಮಂತ್ರಿ ಸಂಪುಟ"ವಾದ ನಾವು ನಾಲ್ವರಿಗೆ. ಶಿವಪ್ಪ, ನಿಸಾರ್, ಸ್ವಾಮಿ ಮತ್ತು ನಾನು. ಹಾಗಿದ್ದರೂ "ಪರೀಕ್ಷಿದ್ರಾಜನೂ ನಿಂಬೇ ಹಣ್ಣೂ" ಕತೆ ಸ್ವಾಮಿಯವರ ನೆನಪಿಗೆ ಬಂದಿತು. ದಕ್ಷಿಣ ಕನ್ನಡದಲ್ಲಿಯೇ ತುಂಬ ಹಾವು, ಸರ್ಪಗಳಿವೆ ಎಂದು ಅವರು ಕೇಳಿದ್ದರು. ಅದರಲ್ಲಿಯೂ ನಾವು ಈಗ ಕಾಡಿನ ಮಧ್ಯೆ ಬೇರೆ ಇದ್ದೇವೆ. ಹೀಗಾಗಿ ಸ್ವಾಮಿ ಮುರುಕು ಬಾಗಿಲುಗಳ ಹರಕುಗಳಿಗೆಲ್ಲ ಚಿಂದಿ ಚೂರುಗಳನ್ನು ತುಂಬಿಸಿ ಭದ್ರಮಾಡಿದರು. ಕಿಟಕಿ ಬಾಗಿಲುಗಳನ್ನು ಮುಚ್ಚಿದರು. ಮೊದಲೇ ಸೆಕೆ. ಇದರಿಂದ ವಾಯು ಸಂಚಾರವೂ ಪ್ರತಿಬಂಧಿತವಾಯಿತು. ನಾನು ಕೇಳಿದೆ "ಏನು ಸ್ವಾಮೀ ಇದು ?"

"ಹೋಗ್ಲಿ ಬಿಡಿ ಸಾರ್—ಜೀವ ಮುಖ್ಯ ಅಲ್ಲವಾ ?" ಅವರ ಉತ್ತರ.

ಹೀಗೆ ಮಾತಾಡುತ್ತಿದ್ದಂತೆಯೇ ಲಯಬದ್ಧ ಗೊರಕೆಯ ತಾನವನ್ನು ಶಿವಪ್ಪ ನುಡಿಸಿದರು. ಸ್ವಾಮಿ ಮರುದನಿಗೈದರು. ಬೆಂಗಳೂರಿನಿಂದ ಯಾವ ಮುಹೂರ್ತದಲ್ಲಿಯೇ ಆದರೂ ಬರಬಹುದಾದ ತಾರಿನ ಸುದ್ದಿ "ಕಲ್ಪಾಂತರಗಳ ಸಂಕ್ಷಿಪ್ತಾಕೃತಿ"ಯ ಆಗಮನದ ಶುಭ ಸಮಾಚಾರ—ಇದನ್ನು ನೆನೆಯುತ್ತ ನಿಸಾರ್ ಸಿಗರೇಟ್ ಸುರುಳಿ ಉಗುಳಿದರು. ನಿದ್ರೆ ಬಂತೋ ಬರಲಿಲ್ಲವೋ, ಬಾಬಾ ಪ್ರಸಾದನ ಬಿಗಿಲು ನಮ್ಮನ್ನು ಬೈರಿಗೆಯಂತೆ ಕೊರೆದೆಬ್ಬಿಸಿತು.

ನಮ್ಮ ವಿದ್ಯಾರ್ಥಿ ಶಿಕ್ಷಕರು

ನಮ್ಮ ವಿದ್ಯಾರ್ಥಿ ಶಿಕ್ಷಕರು ಲಕ್ಷ್ಮೀನಾರಾಯಣ, ಪಿಂಟೋ, ಮೋಹನ ಮತ್ತು ಜಯರಾಮ. ಇವರು ಹಿಮಾಲಯದ ಪರ್ವತಾರೋಹಣ ಸಂಸ್ಥೆಯಲ್ಲಿ ತರಬೇತು

ಹೊಂದಿ ಬಂದ ವೀರಯೋಧರು. ಮೊದಲಿನ ಮೂವರೂ A ದರ್ಜೆ ಪಡೆದವರು. ಇವರಲ್ಲಿ all-rounder ಲಕ್ಷ್ಮಿ. ಇವನು ಮುಖ್ಯ ಶಿಕ್ಷಕ. ಗಾಂಧಾರಿ ವೇಣಿಸಿನಂತೆ ಸ್ವರೂಪ. ಚಟುವಟಿಕೆಯೂ ಹಾಗೆಯೇ. ಕಡಿದಾದ ಕಲ್ಲುಬಂಡೆ, ಆಳವಾದ ಪ್ರಪಾತ ಎಲ್ಲವೂ ಇವನಿಗೆ ಬಯಲಿನ ಮೇಲೆ ನಡೆದಷ್ಟೇ ಸುಲಭ. ವೈಜ್ಞಾನಿಕವಾಗಿ ವಿಚಾರಗಳನ್ನು ವಿವರಿಸಿ ಹೇಳಿಕೊಟ್ಟು, ಸ್ವತಃ ಮಾಡಿ ತೋರಿಸಿ ಇತರರಿಂದ ಮಾಡಿಸುವುದರಲ್ಲಿ ಅತಿ ನಿಸ್ಸೀಮ. ಕ್ಲಾಸಿನಲ್ಲಿ ಇವನು ನನ್ನ ಶಿಷ್ಯನಾಗಿದ್ದರೂ ಶಿಲಾರೋಹಣದಲ್ಲಿ ನಾವೆಲ್ಲರೂ ಇವನ ಶಿಷ್ಯರೇ. ಇವನಿಗೆ ಸರಿಯಾದ ಅನುಯಾಯಿ ಮೋಹನ. ಸದಾ ಕಾರ್ಯತತ್ಪರ, ಸುಟಿ ಚಟುವಟಿಕೆ. ಜೊತೆಗೆ ನಗುಮೊಗ. ಇವನು ಸೊಗಸಾದ ಹಾಡುಗಾರನೂ ಹೌದು. ಹುಡುಗರಿಗೆ ಇವನ ಮೇಲೆ ಅಮಿತ ವಾತ್ಸಲ್ಯ. ಲಕ್ಷ್ಮಿಯೊಡನೆ ಭಯ. ಬಂಡೆಯ ಮೇಲೆ ಲಕ್ಷ್ಮಿ, ಕೆಳಗೆ ಮೋಹನ. ಹೀಗೆ ಇವರ ಜೊತೆ ನಡೆಯುತ್ತಿತ್ತು. ವಿ.ಜೆ. ಪಿಂಟೋ ಇಂಗ್ಲಿಷ್ ಭಾಷೆಯ "ವರ್ಸಟೈಲ್ ಜೀನಿಯಸ್," ಕಮ್ಯೂನಿಸ್ಟ ಭಾಷೆಯ "ಥಿಯೊರೆಟಿಶಿಯನ್." ಯಾವ ಸಾಹಸವನ್ನಾದರೂ ಚೆನ್ನಾಗಿಯೇ ಪ್ರದರ್ಶಿಸಬಲ್ಲವನಾದರೂ ಅದರ ವಿವರವನ್ನು ತಿಳಿಸಿ ಹೇಳುವುದರಲ್ಲಿ, ಹಾಗೆ ಹೇಳುವಾಗ ಅದರ ಅಪಾಯದ ಅಂಶವನ್ನು ಸ್ವಲ್ಪ ಅವಧಾರಣೆ ಸಹಿತ ತಿಳಿಸುವುದರಲ್ಲಿ ಇವನಿಗೆ ಅಧಿಕಾಸಕ್ತಿ.

"ನಿಮಗೆ ಈ ಕಲ್ಲಿನಿಂದ ಹಾರಲೇಬೇಕೇನ್ರಪ್ಪಾ ? ಆದರೆ ನೋಡಿ ಕಾಲು ಜಾರೋದು ನೀವು ಹೆದರೋದು—ನಿಮಗೆ ಧೈರ್ಯ ಇಲ್ಲದಿದ್ರೆ ಮೇಲೇ ಸುಮ್ಮನೆ ಇರಿ. ಅದರಲ್ಲಿ ಅಪಮಾನವೇನೂ ಇಲ್ಲ. ನೋಡಿ—ನಾನು ಹಿಮಾಲಯದಲ್ಲಿ ಇದ್ದಾಗ ಹೀಗೇ ಒಂದು ಪ್ರಸಂಗ..." ಇದು ಪಿಂಟೋ ಮಾತಿನ ಸರಣಿ.

"ಏಯ್ ಇಲ್ನೋಡೋ! ನೀನು ಹಾರು ಸುಮ್ಮನೆ. ಏನೂ ಆಗೋದಿಲ್ಲ. ನಾನಿದ್ದೇನೆ. ನೂಕಿಬಿಡ್ತೀನಿ ನೋಡು. ನೀನೆಲ್ಲೋ ಶುದ್ಧ ಹೆಣ್ಣು ಕಾಣಮ್ಮ" ಇದು ಲಕ್ಷ್ಮಿಯ ಮಾತಿನ ಝರಿ, ಪ್ರಭು ಸಮ್ಮಿತಿ.

"ನೋಡು ಕಾಲು ಮೆತ್ತಗಿಡು. ಹೀಗೆ—ಹೀಗೆ, ಈಗ ಎಲ್ಲ ಸರಿಯಾಯಿತು. ಭಯವಾಗುವುದಿಲ್ಲ. ಚೆನ್ನಾಗಿ ಮಾಡಿದೆ. ಹಾಗೆ ಬಾ. ನಾ ಬಂದೆ, ಬಂದೆ" ಇದು ಮೋಹನನ ಹಿತವಾಣಿ, ಕಾಂತಾಸಮ್ಮಿತಿ.

"ವಂಡರ್‌ಫುಲ್, ವೆರಿಗುಡ್, ಷಾಭಾಷ್, ಏಯ್ ಹಾರಿಬಿಡು—ಹಾಗೆ, ಹಾಗೆ" ದೂರದಿಂದ ನಿಂತು ಉಚಿತವೋ ಅನುಚಿತವೋ ಸದಾ ಅತಿಶಯೋಕ್ತಿಯ ಉದ್ಗಾರದ ಮಳೆಗರೆಯುವ ಹುಡುಗ ಜಯರಾಮ. ಇವನಿನ್ನೂ ಎಳೆಗೂಸು. ಹಿಮಾಲಯದಿಂದ ಮರಳಿದ ತರುಣದಲ್ಲಿ ತೀರ ಬಿಸಿಬಿಸಿಯಾಗಿದ್ದ. ಬಿಲೇಗಿಲೇ ಯಾವುದೂ ಬೇಡ. ಎಲ್ಲಿ ಬೇಕಾದಲ್ಲಿ ಹಾರುತ್ತೇನೆ ಎಂದು ಹೊರಟ. ಆ ಒಂದು ಆದಿತ್ಯವಾರ ನಾವು ಶಿವಾನಂದ ಸ್ಟೋರ್ಸಿನ (ಬೆಂಗಳೂರು) ಪಕ್ಕದ ಬಂಡೆಗಳಲ್ಲಿ ಏರುವುದನ್ನು ಇಳಿಯುವುದನ್ನು ಅಭ್ಯಸಿಸುತ್ತಿದ್ದೆವು. ಹುಡುಗರನ್ನು ನಾಲ್ಕು ತಂಡ ಮಾಡಿ ಒಂದನ್ನು ಜಯರಾಮನ ವಶ ಬಿಟ್ಟು, ನಾನು ಉಳಿದವರ ಮೇಲುಸ್ತುವಾರಿಕೆ ನೋಡಲು ಆ ಕಡೆ ಸರಿದಿದ್ದೆ. ಮುಂದಿನ ಗಳಿಗೆಯಲ್ಲಿ "ಜಯರಾಮ ಬಿದ್ದ, ಭಯಂಕರ ಅಪಾಯವಾಗಿದೆ" ಎಂದು

ಹುಡುಗರ ಬೊಬ್ಬೆ ಕೇಳಿಸಿತು. ನನಗೆ ಹೆದರಿಕೆಯಾಯಿತು. ಹೋಗಿ ನೋಡಿದೆ. ಹತ್ತಡಿ ಎತ್ತರದ ಬಂಡೆ. ಬಿಲೇ ಇಲ್ಲದೇ stomach-rappling ಮಾಡಿತೋರಿಸಲು ಹೊರಟಿದ್ದಾನೆ. ಇದು ನಮ್ಮ ಆಜ್ಞೆಗೆ ವಿರೋಧ—ಬಿಲೇ ಇಲ್ಲದೆ ಯಾರೂ ಯಾವ ಸಾಹಸವನ್ನೂ ಮಾಡಿ ತೋರಿಸಬಾರದು. ವಿದ್ಯಾರ್ಥಿ ಶಿಕ್ಷಕನೇ ಇದನ್ನು ಉಲ್ಲಂಘಿಸಿದ್ದ. ಇಳಿಯುವಾಗ ಕೈಜಾರಿತು. ಬಿದ್ದ, ಮುಖ ಕೆಳಗಾಗಿ ಬಿದ್ದ. ಒಂದು ಕಣ್ಣಿನ ಪಕ್ಕಕ್ಕೆ ಗಾಯವಾಗಿ ಆ ಕಣ್ಣು ಮುಚ್ಚಿಹೋಗಿತ್ತು. ಆವನಿಗೆ ಜ್ಞಾನವಿರಲಿಲ್ಲ. ಎದೆ ಮುಂತಾದ ಸೂಕ್ಷ್ಮ ಭಾಗಗಳಿಗೆ ಪುಣ್ಯವಶಾತ್ ಪೆಟ್ಟಾಗಿರಲಿಲ್ಲ. ನೋಡಿದವರೆಂದರು—ಐದಡಿ ಇಳಿದಮೇಲೆ ಹೀಗಾದದ್ದಂತೆ. ಸದ್ಯ ಇದ್ದುದರಲ್ಲಿ ಇದೊಂದು ಧೈರ್ಯ. ನೀರು ಚಿಮುಕಿಸಿದೆವು, ಪ್ರಥಮಚಿಕಿತ್ಸೆ ನೀಡಿದೆವು. ಜ್ಞಾನ ಬಂದಿತು. ದೊಡ್ಡ ರಸ್ತೆ ಸಮೀಪದಲ್ಲೇ ಇದ್ದುದರಿಂದ ಅವನನ್ನು ಅಲ್ಲಿವರೆಗೆ ನಡೆಸಿಕೊಂಡು ಹೋಗಿ ಆಟೋರಿಕ್ಷಾದಲ್ಲಿ ಕೂರಿಸಿ ನಾನೇ ಸರಕಾರದ ಆಸ್ಪತ್ರೆಗೆ ಸಾಗಿಸಿದೆ. ಬೆಂಗಳೂರು ನಗರ—ಅಷ್ಟರೊಳಗೇ ಅಲ್ಲಿ ಭಾರೀ ಜನಸಂದಣಿ ಸೇರಿತ್ತು. ಇನ್ನು ಅವರ ಮಾತು, ಕತೆ, ಅಂತೆ, ಕಂತೆ ಸಾಹಿತ್ಯದಲ್ಲಿ ರಂಗುರಂಗಾಗಿ ಕಂಡೀತು; ಸಂಬಂಧಿಸದವರಿಗೆ ವಿನೋದವಾಗಿಯೂ ತೋರೀತು. ಆದರೆ ಆ ಆತಂಕದ ಪ್ರಸಂಗದಲ್ಲಿ ಸ್ವತಃ ಭಾಗಿಗಳಾದ ನಮಗೆ ಇರುವ ವೇದನೆಯ ಜೊತೆಗೆ ಇದೊಂದು ನಿವಾರಣೆಮಾಡಬಹುದಾದ ವೇದನೆಯಾಗಿತ್ತು. ಮುಂದಿನ ಒಂದು ಗಂಟೆ ಆಸ್ಪತ್ರೆಯಲ್ಲಿ. ಸುದೈವದಿಂದ ಅವನಿಗೆ ಹೇಳುವಂಥ ಅಪಾಯವೇನೂ ಆಗಿರಲಿಲ್ಲ. ಅಲ್ಲಿಯ ವಿಶಿಷ್ಟ ಚಿಕಿತ್ಸೆಯೂ ಮುಗಿದ ಅನಂತರ ಅವನನ್ನು ನನ್ನೊಡನೆಯೇ ಕಳಿಸಿಕೊಟ್ಟರು. ಆ ಬಂಡೆಯನ್ನು ಜಯರಾಮಬಂಡೆ ಎಂದು ನಾವು ಕರೆದೆವು. (೧೯೯೬: ಈಗ ಬಂಡೆ ಮಂಗಮಾಯವಾಗಿದೆ, ಕಾಂಕ್ರಿಟ್ ಜಂಗಲ್ ವಿಜೃಂಭಿಸುತ್ತಿದೆ!) ಎಲ್ಲ ಸುಖಾಂತವಾದುದರಿಂದ ಈ ಜಯರಾಮಬಂಡೆ ಒಂದು ವಿನೋದದ—ಬಂಡೆಯೊಡನೆ ಸೆಣಸಬೇಡ—ಪ್ರತೀಕವಾಗಿದೆ. ಈ ಅನುಭವದ ಅನಂತರ ಜಯರಾಮ ಪಿಂಟೋನಿಗಿಂತಲೂ ಹತ್ತು ಪಟ್ಟು ಥಿಯೊರೆಟಿಶಿಯನ್ ಆದ.

ತಮಾಷೆ ಬೇರೆ. ನಮ್ಮ ನಾಲ್ವರು ಶಿಕ್ಷಕರೂ ಸಹಕರಿಸಿ ದುಡಿದು ಹಗಲು ರಾತ್ರಿಯೆಂಬುದನ್ನು ಪರಿಗಣಿಸದೆ ಸದಾ ನಮ್ಮ ಬೆಂಬಲಕ್ಕಿದ್ದು ಕುದುರೆಮುಖ ಸಾಹಸವನ್ನು ಯಶಸ್ವಿಗೊಳಿಸಿದರು. ಅವರ ಉತ್ಸಾಹದ ಚಿಲುಮೆ ನಮಗೆಲ್ಲರಿಗೂ ನವಸ್ಫೂರ್ತಿ ನೀಡುವ ಚೈತನ್ಯವಾಗಿತ್ತು.

೧೨ನೆಯ ತಾರೀಕಿನಂದು ನಾವು ಎದ್ದಾಗ ೫ ಗಂಟೆ. ಸೆಕೆಯುಳಿದು ಅತಿ ಹಿತಕರವಾದ ಹವೆ, ನಿದ್ರೆಗೆ ಸೊಗಸಾಗಿ ಜೋಗುಳ ಹಾಡುವ ತಂಗಾಳಿ ಬೀಸುತ್ತಿತ್ತು. ಆದರೆ ಕರ್ತವ್ಯವಿದೆಯಲ್ಲ. ಜಾಂಬ್ರೆ ಆಗಲೇ ಬಂದು "ಟೀ ರೆಡೀ ಸಾಬ್" ಎಂದು ಸೆಲ್ಯೂಟ್ ಹೊಡೆದಿದ್ದ. ಅಡುಗೆಯವರು ಉಪಾಹಾರ ತಯಾರಿಸುತ್ತಿದ್ದರು. ಮಧ್ಯಾಹ್ನದ ಬುತ್ತಿಯನ್ನು (ಚಪಾತಿ, ಪಲ್ಯ) ತಿಮ್ಮಪ್ಪ, ಗುರು, ಶಾಸ್ತ್ರಿ, ಅಣ್ಣಯ್ಯಪ್ಪ ಕಟ್ಟುತ್ತ ಕುಳಿತಿದ್ದರು. ನೀರು ತರಲು ತೋಡಿನೆಡೆಗೆ ಒಂದು ತಂಡ ಹೊರಟಿತು. ವೆಂಗಿಲ ಶೇಣವನ ಗುಂಪು, ಪೂಜಾರಿ ಎಲ್ಲರೂ ಆಗಲೇ ಸಿದ್ಧರಾಗಿದ್ದರು. ನಿಸಾರರೂ ನಾನೂ ಬಯಲಿನೆಡೆಗೆ ಹೋದೆವು. ಆಕಾಶ ವಿಶಾಲ, ನಿರಭ್ರ, ನಕ್ಷತ್ರಗಳ ದೇದೀಪ್ಯಮಾನ ಚಿತ್ರ. ಅತಿ ಮೋಹಕ

ವಾಗಿತ್ತು. "ಗುರುಗಳೇ ! ಈ ನಕ್ಷತ್ರಗಳನ್ನು ಕುರಿತು ನೀವು ಸ್ವಲ್ಪ ನನಗೆ ಹೇಳಬೇಕು" ಎಂದರು ನಿಸಾರ್.

"ಕವಿಗಳಿಗೆ ಈ ಶುಷ್ಕ ವಾಸ್ತವಿಕತೆಯಿಂದ ಪ್ರಯೋಜನವೇನು ?" ನಾನು ಕೆಣಕಿದೆ.

"ಛೇ ಛೇ ! ಹಾಗೆಂದರೇನು. ವಾಸ್ತವಿಕತೆಯಿಂದ ಪ್ರಭಾವಿತನಾದ ಕವಿ ಮತ್ತೆ ಕಲ್ಪನಾಲೋಕದಲ್ಲಿ ಅದಕ್ಕೆ ಬೇರೆ ರೂಪವಿತ್ತು ಪುನಃ ವರ್ಣಿಸುತ್ತಾನೆ."

"ಆಗಲಿ ಹೇಳುತ್ತೇನೆ. ನೀವು ನನಗೆ ಕವಿತೆ ಬರೆಯುವ ಡ್ರಿಲ್ಲನ್ನು ಹೇಳಿ ಕೊಡಬೇಕು."

ನನ್ನ ಈ ಕೆಣಕುಮಾತು ಅವರಿಗೆ ಚುಚ್ಚಿತು. ಕವಿತೆ ಬರೆಯುವುದೂ ಒಂದು ಡ್ರಿಲ್ಲು ಇನ್ನೊಬ್ಬನ ಆಜ್ಞೆಯನ್ನು ಹಿಂದೆ ಮುಂದೆ ಯೋಚಿಸದೇ ನಿರ್ವಹಿಸುವ ಒಂದು ಯಾಂತ್ರಿಕ ಕ್ರಿಯೆ ಎಂದು ಸೂಚಿಸಿದ್ದು ಅವರದೇ ಒಂದು ಪದ್ಯದ ಭಾವವನ್ನು ತಿರುಗಾ ಮುರುಗಾ ಮಾಡಿ—

ಅಧಿಕಾರಿ ಬಂದೊಡನೆ ನನಗರಿಯದಂತೆಯೇ ಸಾರುವುದು
ಬಲಗೈ ಸಲಾಮು ; ಪರತಂತ್ರ ನಾನಿನ್ನೂ,
ಹೊಟ್ಟೆಪಾಡ ಗುಲಾಮು

ಆ ಕಡೆಯಿಂದ ಶಿವಪ್ಪನ ಸಿಗರೇಟ್ ಕೆಮ್ಮಲು ಕೇಳಿಸಿತು. ಸ್ವಾಮಿ ಟಾರ್ಚ್ ಲೈಟನ್ನು ಅಂಗುಲ ಅಂಗುಲಕ್ಕೆ ಬೀರುತ್ತ ಅಲ್ಲಿ ಯಾವ ತರದ ಉರಗವೂ ಇಲ್ಲವೆಂದು ಸ್ಪಷ್ಟಮಾಡಿಕೊಂಡ ಬಳಿಕ ಮುಂದುವರಿದು ಬರುತ್ತಿದ್ದರು. "ಎಲೆ ವನಸ್ಥಳಂಗಳಿರ ! ಎಲೆ ಉರಗಂಗಳಿರ ಲಾಲಿಸಿರಿ ! ಮಹಾಸ್ವಾಮಿ ಕೆಂಡಗಣ್ಣಸ್ವಾಮಿಯವರಿಲ್ಲಿರ್ಪನ್ನವರೆಗಮೀಕ್ಷೇತ್ರಂ ನಿಮಗೌಟಾಫ್ ಬೌಂಡ್ಸ್—ಲಕ್ಷ್ಮಣನ ಗೀಟನ್ನಿಲ್ಲಿ ಎಳದಿರ್ಪೆಂ, ನೀಮೇನಾದರೂ ಇತ್ತಮಾಗಮಿಸುತ್ತಿರ್ಪೊಡೆ 'ಉರಗಂ ನಾ ಬರ್ಪೆಂ' ಎಂದು ಕೂಗಿ ಬಂದಪುದು" ಎಂದು ಮಂತ್ರಘೋಷವನ್ನು ಶಿವಪ್ಪ ಬಜಾಯಿಸಿದರು.

"ಏನೋ ಶಿವಪ್ಪ ! ನೀನೂ ಮಹಾಶೂರ. ನಿನ್ನೆ ರಾತ್ರಿ ಆ ಮಾವಿನ ಮರದವರೆಗೆ ಹೋಗಿ ಬರಬೇಕಾದರೆ ಹಿಂದೊಬ್ಬ ಮುಂದೊಬ್ಬ ನಿನಗೆ. ನೀನೇನು ನನ್ನನ್ನು ಚೇಷ್ಟೆ ಮಾಡುವುದು ?" ಸ್ವಾಮಿ ಮಾರ್ಸಮಾಡಿದರು.

ಫಲಿತಾಂಶವಿಷ್ಟೇ—ಇಬ್ಬರ ಹೂರಣವೂ ಹೊರಗೆ ಬಿತ್ತು. ಅಷ್ಟರಲ್ಲಿಯೇ ಶಿಬಿರ ಜೀವಸ್ಪಂದನದಿಂದ ತುಳುಕುತ್ತಿದ್ದಿತು. ಉಪಾಹಾರ ಮುಗಿಯಿತು. ಪ್ಯಾಕೆಟ್ ಲಂಚ್ ಕಟ್ಟಿಕೊಂಡು ಹೊರಡಬೇಕಾದವರು ಅದರ ಸಮೇತ ಹಾಜರಾದರು. ಮೂರು ಪಂಗಡಗಳಾಗಿ ಹುಡುಗರು ೬-೩೦ಕ್ಕೆ ನಿಂತರು. ಜನ, ಸಾಮಗ್ರಿ, ಆರೋಗ್ಯ ಎಲ್ಲ ಕೂಲಂಕಷವಾಗಿ ಪರಿಶೀಲನೆಮಾಡಲು ಈ ೧೦ ಮಿನಿಟು ಅವಶ್ಯ. ತಡವಾಗಿ ಬರುವವರಿಗೆ ಈ ಅವಕಾಶ ಚುಚ್ಚಿ ಹೇಳುತ್ತದೆ "ನೀವು ತಡ, ನೀವು ತಡ" ಎಂದು.

ಜಮಲಾಬಾದಿಗೆ ಹೋಗಬೇಕಾದವರು ೧೧ ಮತ್ತು ೪ ಶಿಕ್ಷಕರು. ಹೀಗೆ ೧೫. ಕುದುರೆಮುಖದ ಸರಹದ್ದಿಗೆ ೧೧, ಶಿಬಿರದಲ್ಲಿ ೧೧. ಜಮಲಾಬಾದಿನ ತಂಡದಲ್ಲಿ ಮೂರು ಮಂದಿ ಕಡಿಮೆಯಿದ್ದರು. ಯಾರವರು ?

ಮುಕುಂದನಿಗೆ ವಾಂತಿ, ತಲೆನೋವು ಎಂದು ಡಾಕ್ಟರರ ವಶದಲ್ಲಿದ್ದ. ಇನ್ನಿಬ್ಬರು ? ಹಾಸಿಗೆ ಚಾ ಹೊತ್ತಿನಲ್ಲಿ ನೋಡಿದ್ದೆನೆಂದನೊಬ್ಬ. ಬೊಬ್ಬೆ ಹೊಡೆದು ಹೆಸರು ಹಿಡಿದು ಕೂಗಿದನಿನ್ನೊಬ್ಬ. ಆದರೆ ಆ ಹೆಸರಿನವರು ಅಲ್ಲಿಯೇ ಇದ್ದುದರಿಂದ "Oversmart ಆಗದಿರು ಎಲೆ ನನ್ನ ಕಂದಾ !" ಎಂದು ಹೇಳಿಸಿಕೊಂಡ. ನನ್ನ ಹತ್ತಿರ ಹೇಗೂ ಹಾಜರು ಪಟ್ಟಿ ಇದೆಯಲ್ಲ. ಅವರ ಹೆಸರು ತಿಳಿಯಿತು. ೬–೨೫ಕ್ಕೆ ಓ.ಸಿ.ಯವರಿಗೆ ವರದಿಯೊಪ್ಪಿಸಿ ಆಯಿತು. "ಆ ಇಬ್ಬರು ಹುಡುಗರು ಏನಾದರು ?" ಅವರು ಕೇಳಿದರು.

"ಸಾರ್, ಅವರನ್ನು ಹಾಸಿಗೆ ಚಾ ಹೊತ್ತಿನಲ್ಲಿ ಕಂಡವರು ಬಹಳ ಇದ್ದಾರೆ. ಕಾಡಿಗೆಲ್ಲೊ ಹೋಗಿರಬೇಕು. ವಿಚಾರಿಸುತ್ತೇನೆ" ನಾನೆಂದೆ.

"ವಿಚಾರಿಸಿ ಅವರಿಗೆ ಶಿಕ್ಷೆ ನೀಡಬೇಕು. ಉಳಿದವರು ಮುನ್ನಡೆಯಲಿ."

೬–೩೦ಕ್ಕೆ ಸರಿಯಾಗಿ ೧೨ನೆಯ ಮೈಸೂರು ಮೂರು ಭಾಗಗಳಾಗಿ ಕವಲೊಡೆದು ಹೊರಟಿತು. ನನ್ನ ಶಾಖೆಯಲ್ಲಿ (ಜಮಾಲಾಬಾದು) ಇಬ್ಬರು ಕಡಿಮೆ. ನಾವು ಬಂಗ್ಲೆಯ ಅಂಗಳ ದಾಟುವಾಗ ಆ ಬುದ್ಧಿವಂತರಿಬ್ಬರೂ ಓಡಿ ಓಡಿ ಮೇಲುಸಿರುಬಿಡುತ್ತ ಬಂದರು. ನಮ್ಮ ತಂಡವನ್ನು ಸೇರಲು ಅನುಮತಿ ಕೋರಿದರು. ತಾವು ಬಹಿರ್ದೇಶಕ್ಕೆ ಹೋಗಿದ್ದುದಾಗಿ ತಿಳಿಸಿದರು. "ಮಿತ್ರರೇ ೧೨ನೆಯ ಮೈಸೂರಿನ ಅರ್ಥಕೋಶದಲ್ಲಿ ಎರಡು ಪದಗಳಿಗೆ ಸ್ಥಾನವಿಲ್ಲ—ಒಂದು ತಡವಾಗುವಿಕೆ ; ಇನ್ನೊಂದು ಆಯಾಸ. ಇದಕ್ಕೆ ಅಪವಾದವಾದ ನೀವು ಈ ಮೂರು ದಿವಸವೂ ಶಿಬಿರಕೈದಿಗಳಾಗಿ ದುಡಿಯಬೇಕು" ನಾನೆಂದೆ.

"ಕೇವಲ ಒಂದು ಮಿನಿಟು ತಡ, ಸಾರ್."

"ಮಹಾಸ್ವಾಮೀ ! ತಡದಲ್ಲಿ ಎರಡು ಮಿನಿಟಿನ ತಡ, ಎರಡು ಗಂಟೆಯ ತಡ ಎಂದು ಡಿಗ್ರಿಗಳಿಲ್ಲ. ಪ್ರಪಾತದಂಚಿನಲ್ಲಿ ಅರ್ಧ ಇಂಚು, ಕಾಲು ಇಂಚು ಎಂದಿಲ್ಲ. ಒಂದೋ ನೀವು ಈ ಕಡೆ ಸುರಕ್ಷಿತವಾಗಿದ್ದೀರಿ, ಇಲ್ಲ, ಆ ಕಡೆ ಹೊಂಡದಲ್ಲಿ ಬಿದ್ದಿದ್ದೀರಿ, ತ್ರಿಶಂಕುತ್ವವಿಲ್ಲ. ಹಾಗೆಯೇ ಕಾಲದ ವಿಚಾರವೂ. ಕೇವಲ ಸೆಕೆಂಡುಗಳ ತಡವಾಗುವಿಕೆಯಿಂದ ಯುದ್ಧಗಳೇ ಕಳೆದುಹೋಗಿವೆ" ನನ್ನ ಉತ್ತರ.

ಅವರನ್ನು ಸೇರಿಸಿಕೊಳ್ಳಲಿಲ್ಲ. ಹುಡುಗರಲ್ಲಿ ಅನೇಕರಿಗೆ, ಇದನ್ನು ಓದುವ ತಂಪಿನಲ್ಲಿ ಹಲವರಿಗೆ, ಇಂಥ ನಿಷ್ಠುರತೆ ಅಗತ್ಯವೇ, ಹುಡುಗರೊಡನೆ ಸ್ವಲ್ಪ ಸಹನೆ, ತಾಳ್ಮೆಯಿಂದ ವರ್ತಿಸಬೇಡವೇ ಎಂದು ತೋರಿದರೆ ತಪ್ಪಿಲ್ಲ. ಜಾತ್ರೆಗೆ ಹೋಗುವಾಗ ಅಥವಾ ಮದುವೆ ಮುಂತಾದ ಕುಟುಂಬಗಳ ಒಕ್ಕೂಟದ ಸಂತೋಷ ಸಮಾರಂಭಗಳಲ್ಲಿ ತಡವಾಗಿ ಬರುವುದೂ ಚೆಂದ, ಅವ್ಯವಸ್ಥೆಯಿಂದ ನಡೆದುಕೊಳ್ಳುವುದೂ ಚೆಂದ, ಏನು ಮಾಡಿದರೂ ಮಾಡದಿದ್ದರೂ ಚೆಂದ. ಅಲ್ಲಿ ಪ್ರೀತಿ ವಿಶ್ವಾಸಗಳು ಪ್ರಧಾನವಾಗಿರುವ ಪ್ರಪಂಚ. ನಾವು ವ್ಯಕ್ತಿಗಳ ಭವಿಷ್ಯ, ಜೀವಗಳೊಡನೆ ಆಡುವುದಿಲ್ಲ. ಇಲ್ಲಿ ಹಾಗಲ್ಲ. ಇದೊಂದು ಉಚ್ಚ ಮಿಲಿಟರಿ ಶಿಕ್ಷಣ ಶಿಬಿರ. ಅರಿಸಿ ಬಂದ, ಹೊಣೆ ಸಂಪೂರ್ಣ ಅರಿತ, ಯಾರೊಡನೆ ಕಾರ್ಯವೆಸಗುತ್ತಿದ್ದೇವೆ ಎಂದು ತಿಳಿದಿರುವ ಕ್ಯಾಡೆಟುಗಳ ತಂಡ. ಇಲ್ಲಿ ಶಿಸ್ತು, ಕ್ರಮಬದ್ಧತೆ, ನಿಯಮಪಾಲನೆ ಪ್ರಧಾನ ; ಪ್ರೀತಿ ವಿಶ್ವಾಸ ಎರಡನೆಯ ಸ್ಥಾನ. ಇಂಥಲ್ಲಿ ತಪ್ಪಿಗೆ ಆ ಕ್ಷಣ ಶಿಕ್ಷೆ ಆಗದಿದ್ದರೆ, ಒಂದನೆಯದಾಗಿ, ವ್ಯವಸ್ಥೆಯ ಹಿಡಿತ ಶಿಥಿಲವಾಗುವುದು ; ಎರಡನೆಯದಾಗಿ, ಸಂಬಂಧಿಸಿದ ಹುಡುಗರಿಗೂ (ಇತರರಿಗೂ) "ತಪ್ಪು ಮಾಡಿದರೂ ದಕ್ಕುತ್ತದೆ" ಎಂದು

ಪರೋಕ್ಷವಾಗಿ ವಿಷದ ಬೀಜ ಬಿತ್ತಿದಂತಾಗುವುದು. ಇನ್ನೂ ಒಂದು ವಿಚಾರವಿದೆ—ಎಲ್ಲವೂ ಟಾಪ್ ಗೇರಿನಲ್ಲಿ ನಡೆಯಬೇಕಾದ ಇಂಥ ಪ್ರಸಂಗಗಳಲ್ಲಿ ಪ್ರತಿ ನಟ್ಟೂ, ಬೋಲ್ಟೂ, ಜಾಯಿಂಟೂ ಆದರದರ ಕಾರ್ಯವನ್ನು ಆಗಿಂದಾಗಲೇ ನಿರ್ವಹಿಸದಿದ್ದರೆ ಇಡೀ ಎಂಜಿನ್ ನಿಂತುಹೋಗುವುದು. ಇಬ್ಬರು ಹುಡುಗರು ತಡವಾಗಿ ಬಂದುದರಿಂದ ನಮ್ಮ ಎಷ್ಟು ಕಾಲ, ಸಹನೆ ವ್ಯಯವಾದುವು ! ಕಾಲನಿಷ್ಠೆ, ಕ್ರಮಬದ್ಧ ಕಾರ್ಯನಿರ್ವಹಣೆ—ಇವೆರಡು ಜೀವನದ ಸಕಲ ರಂಗಗಳಲ್ಲಿಯೂ ಸರ್ವರಿಗೂ ಬಂದರೆ ದಾರಿದ್ರ್ಯ ದುರ್ಭಿಕ್ಷೆ ಎಲ್ಲಿ ಉಳಿದಾವು ?

ಜಮಲಾಬಾದಿನ ಮಾನಸ ಸರೋವರ

ಕುದುರೆಮುಖ ಪರ್ವತಶ್ರೇಣಿಯ ಬುಡದಲ್ಲಿ ನಾವೂರು ಬಂಗ್ಲೆ. ಇದರ ಎತ್ತರ ಸಮುದ್ರ ಮಟ್ಟದಿಂದ ೪೮೦ ಅಡಿಗಳು. ಬಂಗ್ಲೆ ಶ್ರೇಣಿಗೆ ಮುಖ ಮಾಡಿ ಇದೆ. ಬಂಗ್ಲೆಯ ಜಗಲಿಯ ಮೇಲೆ ನಿಂತು ಶ್ರೇಣಿಯನ್ನು ನೋಡುವಾಗ ಎಡಗಡೆಗೆ, ಅಂದರೆ ಬೆಳ್ತಂಗಡಿ ಕಡೆಗೆ ಜಮಲಾಬಾದ್ ಇದೆ. ಬೆಳ್ತಂಗಡಿಯಿಂದ ಜಮಲಾಬಾದಿಗೆ ನಾವೂರು ಬಂಗ್ಲೆಗೆ ಬರದೇ ಹೋಗುವುದು ಸಾಧ್ಯ. ಕುದುರೆಮುಖ ಶಿಖರದ ಎತ್ತರ ೬,೨೫೭ ಅಡಿಗಳು. ಜಮಲಾಬಾದಿನ ಎತ್ತರ ೧,೭೮೮ ಅಡಿಗಳು. ಬೆಳ್ತಂಗಡಿಯ ಎತ್ತರ ೪೫೦ ಅಡಿಗಳು. ಜಮಲಾಬಾದ್ ಒಂದೇ ಹೆಬ್ಬಂಡೆ ನೀಳವಾಗಿ ಸೆಟೆದು ನಿಂತಂತೆ ಇರುವುದರಿಂದ, ಬೆಳ್ತಂಗಡಿಯ ವಲಯದಲ್ಲಿ ಎಲ್ಲಿಯೇ ನಿಂತರೂ ಮೊದಲು ನಮ್ಮ ಗಮನ ಸೆಳೆಯುವುದು ಈ "ಪೀಸಾ ನಗರದ ವಾಲುವ ಗೋಪುರ," "ಪ್ಯಾರಿಸ್ ನಗರದ ಐಫೆಲ್ ಟವರ್." ಇದರ ಹಿನ್ನೆಲೆಯಲ್ಲಿರುವ ಆಕಾಶದ ಗೋಡೆ ಕುದುರೆಮುಖ ಶ್ರೇಣಿ ಮತ್ತೆ ಗೋಚರವಾಗುವುದು. ಕಣ್ಣ ಸಮೀಪದ ನುಸಿ ದೂರದ ಆನೆಗಿಂತ ನಮಗೆ ದೊಡ್ಡದಲ್ಲವೇ ? ಬೆಳ್ತಂಗಡಿ ಕಡೆಯಿಂದ ನೋಡುವಾಗ ಜಮಲಾಬಾದಿನ ಬಲಭಾಗ ಬೋಳುಬಂಡೆ. ಅತಿನೆಟ್ಟಗೆ ಗೂಳಿಯ ಬೆನ್ನ ಮೇಲಿನ ಡುಬ್ಬದಂತೆ ನಿಂತಿದೆ. ಆದರಿಂದ ಕ್ರಮೇಣ ಎಡಗಡೆಗೆ ಕಾಡು ಮರಗಳಿಂದ ಕೂಡಿದ ಇಳಿಜಾರು ಇದೆ. ಒಟ್ಟಾಗಿ ನೋಡುವಾಗ ಕುದುರೆಮುಖದೆಡೆಗೆ ಮುಖ ಮಾಡಿ ನಿಂತಿರುವ ಆನೆಯಂತೆ ಜಮಲಾಬಾದ್ ಕಾಣುವುದು. ಸಾವನದುರ್ಗಕ್ಕಿಂತ ಜಮಲಾಬಾದ್ ಸ್ವಲ್ಪ ಕಡಿಮೆ ಎತ್ತರ. ನಾವೂರು ಬಂಗ್ಲೆಯಿಂದ ಜಮಲಾಬಾದಿನ ಬುಡದ ವರೆಗೆ ಕಾಲುದಾರಿಯಲ್ಲಿ ಕಾಡು, ಗದ್ದೆಗಳಿಗಾಗಿ ೬ ಮೈಲಿ ನಡೆಯಬೇಕು. ನಮ್ಮ ಪಟಾಲಿನ ೧೩ ಜನ ಸಮವಸ್ತ್ರಧಾರಿಗಳಾದ ಹುಡುಗರು, ಖಾನ್ವಿಲ್ಕರ್ ಮುಂದೆ, ಹಿಂದೆ ನಾನು, ಮಾರ್ಗದರ್ಶಕ ಶೆರ್ಪಾ ನಮಗಿಂತೆಲ್ಲ ಮುಂದೆ ಹೀಗೆ ನಡೆದೆವು. ಸಾಲಾಗಿ ನಾವು ಆ ಶುಭ ಪ್ರಾತಃಕಾಲ ಸಾಗುತ್ತಿದ್ದಾಗ, ಆ ಚೇತನದ ತುಂಬು ಹೊಳೆಯಲ್ಲಿ ತೇಲುತ್ತಿದ್ದಾಗ, ದಾರಿಯೇ ನಮ್ಮ ಕಾಲಡಿಯಲ್ಲಿ ಜಾರಿ ಹೋಗುತ್ತಿದ್ದಂತೆ ಭಾಸವಾಗುತ್ತಿತ್ತು. ತೆಂಗಿನ ಮರಗಳು ಗೌರವ ರಕ್ಷೆ ನೀಡಿದುವು. ಬಾಳೇ ಮರಗಳು ಉದ್ದವಾದ ಎಲೆಗಳನ್ನು ಮೇಲೆ, ಕೆಳಗೆ ತೊನೆದಾಡಿಸಿ ಬೀಸಣಿಗೆ ಗಾಳಿ ಬೀಸಿದುವು. ಕಾಡು ಗುಲಾಬಿ ಕೇಪಳೆ, ಗೋರಟೆ, ಕಣಗಿಲೆ ಹೂಗಳ ಮಿಶ್ರ ಚಿತ್ರ, ಅನಾನಸಿನ ಸಾಲುಗಳ ವರ್ಣ ವೈವಿಧ್ಯ ಕಣ್ಣಿಗೆ ದೊಡ್ಡ ಹಬ್ಬ (ನನ್ನ ಕಣ್ಣಿನಿಂದ ತಪ್ಪಿಸಿದವರಿಗೆ ಬಾಯಿಗೂ ಸಹ !). ದಿನಕರು

ಗಳು ಹೆದರಿ ಓಡಿದುವು. ನಾಯಿಗಳು ಬೊಗಳಿ ಬಾಲ ಮುದುಡಿ ನಾಗಾಲೋಟ ಕಿತ್ತುವು. ಬೇಸಾಯುಗಾರರು ಕುತೂಹಲದಿಂದ ಮನೆಗಳಿಂದ ಹೊರಗೆ ಬಂದು ನಿಂತು ನಮ್ಮನ್ನು ನೋಡಿದರು. "ಜಮಲಾಬಾದುಕು ನಾಣ ಏತು ದೂರೆ ಉಂಡಿಯೇ ?" ಎಂದು ಮುರುಕು ತುಳುವಿನಲ್ಲಿ ತಾತಯ್ಯನೊಬ್ಬನನ್ನು ಪ್ರಶ್ನಿಸಿದಾಗ "ಗಡಾಯಿಕಲ್ಲೋ ಸ್ವಾಮೀ ? ಅದು ಓ ಇಲ್ಲಿಯೇ" ಎಂದು ಅವನು ಶುದ್ಧ ಕನ್ನಡದಲ್ಲಿಯೇ ಉತ್ತರವಿತ್ತ.

ಆದರೆ ನಮ್ಮ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ. ನಮ್ಮ ಎದುರೇ ಅದು "ದಿಟ ಪ್ರಶ್ನೆ —ದಿಟ್ಟ ಪ್ರಶ್ನೆ"ಯಾಗಿ ನಿಂತಿದೆ. ದೂರ ಎಷ್ಟು, ಒಂದು ಮೈಲೇ ಎರಡು ಮೈಲೇ ಎಂದು ತಿಳಿಯಲು ಪ್ರಶ್ನಿಸಿದರೆ "ಓ ಇಲ್ಲಿಯೇ !" ಉತ್ತರ. ಹಳ್ಳಿಗರ "ಓ ಇಲ್ಲಿಯೇ" ಅಳತೆಗೋಲಿನ ಉದ್ದ ೨ ಫರ್ಲಾಂಗಿನಿಂದ ೨ ಮೈಲಿನವರೆಗೆ ಎಷ್ಟೂ ಆಗಬಹುದು.

ಆ ಮನೆಗಳ ಸ್ವಚ್ಛತೆ, ಅಂಗಳ ನೆಲಗಳ ಚೊಕ್ಕಟ, ಅಂಗಳದ ಕರೆಯಲ್ಲಿ ಓರಣವಾಗಿ ಮೇದೆಯೊಟ್ಟಿದ್ದ ಹುಲ್ಲು ಮುಂಡ, ಅದರ ಬದಿಗಿದ್ದ ತೊಂಡೆ, ಬಸಳೇ ಚಪ್ಪರ, ಸಣ್ಣ ಹೂದೋಟ ಇವೆಲ್ಲ ತುಂಬ ಆಕರ್ಷಣೀಯವಾಗಿದ್ದುವು. ಬಡತನವೋ ಸಿರಿವಂತಿಕೆಯೋ, ನಾಗರಿಕತೆಯೋ ಅಲ್ಲವೋ ಜೀವನವನ್ನು ಅಚ್ಚುಕಟ್ಟಾಗಿ ರೂಪಿಸಿಕೊಂಡಿದ್ದವರಿವರು ಎಂಬುದು ತಿಳಿಯಿತು. ಬೆಂಗಳೂರಿನ ನಮಗೆ ಇದು ಹೊಸ ಅನುಭವ. ಜಮಲಾಬಾದ್ ಅಥವಾ ಸ್ಥಳಿಕರ ಭಾಷೆಯಲ್ಲಿ ಗಡಾಯಿಕಲ್ಲು ಇತಿಹಾಸ ಪ್ರಸಿದ್ಧವಾದ ಒಂದು ಗಿರಿದುರ್ಗ. ಇಂಪೀರಿಯಲ್ ಗಜೆಟಿಯರಿನಲ್ಲಿ ಇದರ ಉಲ್ಲೇಖವಿದೆ (೧೯೦೮) : "೧,೭೮೮ ಅಡಿ ಎತ್ತರಕ್ಕೆ ನೇರವಾಗಿ ನಿಂತಿರುವ ಕಡಿದಾದ ಬಂಡೆಯಿದು. ಕುದುರೆಮುಖಸಾಲಿನಿಂದ ಪ್ರತ್ಯೇಕವಾಗಿ ನಿಂತಿದೆ. ೧೭೮೪ರಲ್ಲಿ ಮಂಗಳೂರಿನಿಂದ ಮರಳುತ್ತಿದ್ದ ಟಿಪ್ಪುಸುಲ್ತಾನನು ಈ ಬಂಡೆಯ ಸ್ಥಾನ, ದುರ್ಗಮತೆಗಳನ್ನು ಅನುಲಕ್ಷಿಸಿ ಇದರ ಮೇಲೊಂದು ಕೋಟೆ ಯನ್ನು ನಿರ್ಮಿಸಿ ಭದ್ರಪಡಿಸಿದನು. ಅವನ ಪ್ರೀತಿಯ ತಾಯಿ ಜಮಲಾಬಾಯಿಯ ನೆನಪಿ ಗಾಗಿ ಈ ಕೋಟೆಯನ್ನು ಜಮಲಾಬಾದ್ ಎಂದು ಹೆಸರಿಸಿದನು. ಇದರ ತಳದಲ್ಲಿರುವ ಪಟ್ಟಣವನ್ನು ತನ್ನ ಪ್ರತಿನಿಧಿ ಅಧಿಕಾರಿಯ ನಿವೇಶನವನ್ನಾಗಿ ಮಾಡಿದನು. ಈ ಪಟ್ಟಣದ ಹೆಸರು ನರಸಿಂಹ ಅಂಗಡಿ. ಅದು ಈಗ ಉಳಿದಿಲ್ಲ. ೧೭೯೯ರಲ್ಲಿ ಬ್ರಿಟಿಷರು ಈ ದುರ್ಗ ವನ್ನು ಸ್ವಾಧೀನಪಡಿಸಿಕೊಂಡರು. ಆದರೆ ಮುಂದೆ ಸ್ವಲ್ಪ ಅವಧಿಯಲ್ಲಿ ಇದು ಅವರ ಕೈಯಿಂದ ತಪ್ಪಿಹೋಗಿ ವಿರೋಧಿ ಗುಂಪಿನವರ ಕೈವಶವಾಯಿತು. ಮುಂದಿನ ಮೂರು ತಿಂಗಳ ದೀರ್ಘಕಾಲ ಈ ಕೋಟೆಯ ಸುತ್ತಲೂ ಮುತ್ತಿಗೆ ಹಾಕಿ ಪ್ರತಿಬಂಧಿಸಿದುದರ ಪರಿಣಾಮವಾಗಿ ಮೇಲಿನವರು ಶರಣಾಗತರಾಗಬೇಕಾಯಿತು. ಇದು ನಡೆದುದು ೧೮೦೦ರಲ್ಲಿ."

ಇನ್ನೊಂದು ಪುಸ್ತಕದಲ್ಲಿ (ಸೌತ್ ಕೆನರಾ ಡಿಸ್ಟ್ರಿಕ್ಟ್ ಮ್ಯಾನ್ಯುಯಲ್) ಇನ್ನಷ್ಟು ವಿವರ ವಿದೆ. "ಕದಂಬರ ಸಂತತಿ ನಿರ್ನಾಮ ಹೊಂದಿದ ಅನಂತರ ಬಂದ ತೌಳವ ಪ್ರಭುತ್ವದಲ್ಲಿ ನರಸಿಂಹನೆಂಬ ಬ್ರಾಹ್ಮಣನು ಪ್ರಭುತ್ವದ ಸ್ಥಳೀಯ ಪ್ರತಿನಿಧಿ (ಗವರ್ನರ್) ಆಗಿದ್ದನು. ಅವನ ಅರಮನೆ ಕಲ್ಲಿನ ಬುಡದಲ್ಲಿತ್ತು. ಅದರ ಅವಶೇಷ ಈಗ ಏನೂ ಇಲ್ಲ. ಈ ಪ್ರದೇಶ ನರಸಿಂಹನ ಹೆಸರಿನಿಂದಲೇ ಪ್ರಸಿದ್ಧವಾಯಿತು. ಅತ್ಯುನ್ನತ ಮತ್ತು ಕಡಿದಾದ ಕಲ್ಲಿನ ಮೇಲೆ ಇರುವ ದುರ್ಗ ಅಪಾಯದ ಒಂದು ಕಿರುದಾರಿಯ ವಿನಾ ಬೇರೆಲ್ಲ ಕಡೆಯಿಂದಲೂ

ಅಗಮ್ಯ. ಈ ದಾರಿ ದುರ್ಗದ ಮೇಲೆ ಕುಳಿತವರ ದೃಷ್ಟಿಯು ಅಡಿಯಲ್ಲಿಯೇ ಇದೆ. ಆದ್ದರಿಂದ ದುರ್ಗ ಮತ್ತು ಕಿರುದಾರಿಗಾಗಿ ಏರುವುದು ಅಥವಾ ಇಳಿಯುವುದು ಅತ್ಯಪಾಯದ ಮಾರ್ಗ. ಮೇಲೆ ಕುಳಿತ ಸೈನ್ಯದ ಒಂದು ಪುಟ್ಟ ತುಕ್ಕಡಿಯೂ ಕೆಳಗಿನ ಪಟಾಲಮ್ಮನ್ನೇ ನಡುಗಿಸಬಹುದು.''

ಜಮಲಾಬಾದ್ ಗಡಾಯಿ ಹಳ್ಳಿಯಲ್ಲಿರುವುದರಿಂದ ಅಲ್ಲಿಯವರ ಭಾಷೆಯಲ್ಲಿ ಇದರ ಹೆಸರು ಗಡಾಯಿಕಲ್ಲು. ಬಯಲು ಮುಗಿದು ಕ್ರಮೇಣ ಏರು ಪ್ರಾರಂಭವಾಗುವಾಗ ಒಂದು ಮಹಾ ಪ್ರವೇಶದ್ವಾರ ನಮ್ಮನ್ನು ಸ್ವಾಗತಿಸುವುದು. ಕಲ್ಲು ಚಪ್ಪಡಿಗಳಿಂದ ನಿರ್ಮಿತವಾದ ಈ ಬಾಗಿಲು ಈಗ ಹಾಳುಗರೆಯುತ್ತಿದೆ. ನಮ್ಮ ತಂಡದ ಇತಿಹಾಸದಪ್ತರ ಕೀಟಗಳಾದ ಜಯರಾಜ, ಅಣ್ಣಯ್ಯಪ್ಪ ಜಮಲಾಬಾದಿನ ಗತವೈಭವವನ್ನು ಕುರಿತು ಉದ್ಗ್ರಂಥ ರಚಿಸುವ ಮಹಾಯೋಜನೆಗೆ ವಿಷಯ ಸಂಗ್ರಹ ಮಾಡಬೇಕೆಂದು ನಿರ್ಧರಿಸಿದ್ದಾರೆ. ಇನ್ನು ರಸಾಯನಶಾಸ್ತ್ರ ಭಯಂಕರ ಅನಂತರಾಜು ಮತ್ತು ರಾಮ ಶಿವಣ್ಣ ಜಮಲಾಬಾದ್ ಇಡೀ ಕಬ್ಬಿಣದ ಅದುರಿನಿಂದ ತುಂಬಿರಬಹುದೇ ಎಂದು ಸಂದೇಹಿಸುತ್ತಿದ್ದಾರೆ. ಅವರ ವರದಿ ಕುದುರೆಮುಖದ ತಪ್ಪಲಿನ ಕಬ್ಬಿಣದ ಅದುರಿನ ವಿಚಾರದಲ್ಲಿ ಜಪಾನೀ ತಜ್ಞರು ಮಂಡಿಸಿರುವ ವರದಿಗಿಂತ ವಿಸ್ತೃತವೂ ಬೃಹತ್ತೂ ಆಗುವ ಅಪಾಯ ಉಂಟು. ಭೂಗರ್ಭಶಾಸ್ತ್ರಸಮುದ್ರತಿಮಿಂಗಿಲ ಜಗನ್ನಾಥಶಾಸ್ತ್ರಿ ಮತ್ತು ರಂಗನಾಥ ರಾವುತ್ ಜಮಲಾಬಾದ್ ಅಗ್ನಿಪರ್ವತವಾಗಿದ್ದಿರಬಹುದೇ, ಎಂದು ಇದು ಭೂಗರ್ಭದಿಂದ ಹೊರಗೆ ಚಾಚಿತು, ಆದ್ದರಿಂದ ಭೂಮಿಯ ವಯಸ್ಸೇನು ಎನ್ನುವ ಘನ ಸಮಸ್ಯೆಯ ಪರಿಹಾರಕ್ಕಾಗಿ ನಾನಾ ಬಗೆಯ ಕಲ್ಲು, ಮಣ್ಣು, ಸಂಗ್ರಹಿಸಿ ಅವುಗಳ ಮಧ್ಯೆ ಸಿಕ್ಕಿಹಾಕಿಕೊಂಡು ಹೊರಗೆ ಬರುವ ದಾರಿ ಹುಡುಕುತ್ತಿದ್ದಾರೆ. ಚಂದ್ರಮಂಡಲಕ್ಕೆ ಜಿಗಿಯಲು ಜಮಲಾಬಾದಿನ ಶಿಖರ ಅಮೆರಿಕದ ಕೇಪ್ ಕೆನ್ನೆಡಿಗಿಂತಲೂ ಉತ್ತಮವಲ್ಲವೇ ಎಂಬ ವಿಚಾರ ಪ್ರಭಾಕರ ರೆಡ್ಡಿಯನ್ನು ಪೀಡಿಸುತ್ತಿದೆ. ಉಳಿದ ಪಾಮರರಿಗೆ ಕಂಡದ್ದು ಇಷ್ಟು—ದುರ್ಗದ ಅವಶೇಷವಾಗಿ ಅಲ್ಲಲ್ಲಿ ಮೆಟ್ಟಿಲುಗಳು, ಕಡಿದಾದ ಏರು. ಶಿಖರದಿಂದ ಸ್ವಲ್ಪ ಕೆಳಗೆ ಒಂದು ಪ್ರವೇಶದ್ವಾರ ಮತ್ತು ವಾಸಯೋಗ್ಯವಾದ ಕಲ್ಲಿನ ಮನೆ ಇವೆ. ಅದರ ಗೋಡೆಗಳು ಮಹಾಮೂಲಿನಂತೆ ಅದುವರೆಗೆ ಬಂದಿದ್ದ ಅಸಂಖ್ಯಾತ ಪ್ರವಾಸಿಗಳ ಕೆತ್ತನೆ ಕೆಲಸಗಳಿಂದ, ಚಿತ್ರದ ಕುಸುರುಗಳಿಂದ ಶೋಭಿಸುತ್ತಿದ್ದುವು. ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ೧೯೫೯ ರಿಂದ ಹಿಂದೆ ಯಾವ ಪ್ರವಾಸಿಗನೂ ಅಲ್ಲಿಗೆ ಬಂದಿದ್ದುದು ಉಲ್ಲೇಖಿತವಾಗಿದ್ದುದು ಕಾಣಲಿಲ್ಲ. ''ಹಾಗಾದರೆ ೧೯೫೯ರಿಂದೀಚೆಗೆ ಮಾತ್ರ ಜನ ಬಂದಿರಬಹುದೇ ?'' ಎಂದು ಸಂಶೋಧಕ ಮನಃಪ್ರವೃತ್ತಿಯ ಶ್ರೀಧರ ಪ್ರಶ್ನಿಸಿದ. ''ಅದರರ್ಥ ಹಳೆಯ ದಫ್ತರಗಳ ಮೇಲೆ ಹೊಸ ದಪ್ತರ ಕುಳಿತಿದೆ. ವಾಸಾಂಸಿ ಜೀರ್ಣಾನಿ...''

ಬೆಟ್ಟದ ತುಂಬ ಬೆಳೆದಿದ್ದ ಹುಲ್ಲಿಗೆ ಬೆಂಕಿ ಬಿದ್ದಿದ್ದುದರಿಂದ ಬಂಡೆ ಬೋಳಾಗಿತ್ತು. ಒಂದು ಪಾರ್ಶ್ವ ಮಾತ್ರ ಕುರುಚಲು ಕಾಡು ತುಂಬಿತ್ತು. ಮೆಟ್ಟಿಲುಗಳ ನಿಯಂತ್ರಿತವಾದ ನಡಿಗೆ ಕಾಲುಗಳಿಗೆ ಬೇಗ ನೋವುಂಟುಮಾಡುವುದು. ಜೀವನವೂ ಹಾಗೆಯೆ—ಎಲ್ಲವೂ ಡ್ರಿಲ್ಲಾದರೆ ಜೀವನ ನೀರಸ ಮತ್ತು ಭಾರವಾಗುವುದು ಎಂದು (ಮರುದಿನ ಹೋಗಿಬಂದ)

ನಿಸಾರರೂ ಹೇಳಿದರು. ಮೇಲೆ ಮೇಲೆ ಏರಿದಂತೆ ನಮ್ಮ ದಿಗಂತ ವಿಸ್ತಾರವಾಯಿತು. ಗದ್ದೆ, ಬಯಲು, ತೋಟ, ಕೆರೆ, ಹೊಳೆ, ಮನೆ, ಗುಡ್ಡ ಎಲ್ಲವೂ ಪರದೆಯಮೇಲೆ ಬಿಡಿಸಿದ ಚಿತ್ರಗಳಾದುವು. ನಾವೂರು ಬಂಗ್ಲೆ ಇನ್ನೊಂದು ಘಟ್ಟ ದುಬ್ಬದ ಆಚೆ ಬದಿಗೆ ಅಡಗಿಹೋಯಿತು. ೧೧ ಗಂಟೆಯ ಸುಮಾರಿಗೆ ನಾವು ಶಿಖರ ತಲಪಿದೆವು. ಅಲ್ಲೇನಿದೆ ? ಸುಟ್ಟ ನೊಜೆಹುಲ್ಲಿನ ಗಟ್ಟಿ ಬುಡಗಳು. ಕುಳಿತರೆ ಚುಚ್ಚುತ್ತವೆ. ವಿಪರೀತ ಸೆಕೆ. ಆದರೂ ನಾವು ಸಾಧಿಸಿದ ಪ್ರಥಮ ವಿಜಯವೆಂದು ಸಂತೋಷ ಉಕ್ಕುತ್ತಿತ್ತು. ಹೊಗೆ ಬಾಂಬು ಸುಟ್ಟೆವು. ಮದ್ದುಗುಂಡು ಹೊಟ್ಟಿಸಿದೆವು. ೧೨ನೆಯ ಮೈಸೂರಿಗೆ ಜಯಕಾರ ಕೂಗಿದೆವು. ವಾಟರ್ ಬಾಟಲಿನಲ್ಲಿ ತಂದಿದ್ದ ನೀರು ಖರ್ಚಾಗಿ ಹೋಯಿತು. ದಾಹ ವಿಪರೀತ. ಮುಂದೆಲ್ಲಿಗೆ ಹೋಗುವುದು ?

"ಓ ಇಲ್ಲಿಯೇ ನೀರು ಸಿಕ್ಕುತ್ತದೆ" ಎಂದ ನಮ್ಮ ಶೆಪರ್ಡ್. "ಓ ಇಲ್ಲಿಯೇ" ಬೆಟ್ಟದ ಬುಡವೇ ಆಗಿರಬಹುದೆಂದು ನನಗೆ ಸಂದೇಹ. ಆದರೆ ಅವನು ಕೈ ತೋರಿಸಿದ್ದು ಶಿಖರ ದಿಂದ ಹಿಂದೆ ಸ್ವಲ್ಪ ತಗ್ಗಿನಲ್ಲಿ ; ನಾವು ಬಂದ ದಾರಿಯಲ್ಲಿ ಅಲ್ಲ. ಶಿಖರವನ್ನು ಆನೆಯ ನೆತ್ತಿಯೆಂದರೆ ನಾವು ಹತ್ತಿ ಬಂದ ದಾರಿ ಮುಂಗಾಲು ಕಿವಿಗಳ ಎಡೆಗಾಗಿ. ಬೆನ್ನಿನಮೇಲೆ ಸ್ವಲ್ಪದೂರ ನಡೆದರೆ ನೀರ್ದಾಣವಿದೆಯೆಂದು ಅರ್ಥವಾಯಿತು. ಆ ಕಡೆ (ಕೆಳಗಿನಿಂದ ಕಾಣುತ್ತಿರಲಿಲ್ಲ) ತುಂಬ ಮರಗಿಡಗಳು ಸೊಂಪಾಗಿ ಬೆಳೆದಿದ್ದುದರಿಂದ ಆಸೆ ಚಿಗುರಿತು. ಮುಂದೆ ಎರಡು ಫರ್ಲಾಂಗ್ ನಡೆದು ಒಂದು ಇರುಕಿನೊಳಗೆ ಇಳಿದೆವು. ಅಲ್ಲಿಯೇ ಮಾಯಾಲೋಕ ಥಕ್ಕನೆ ಮಿಂಚಿತು. ತಿಳಿಗೊಳ. ಸುತ್ತಲೂ ಹೆಬ್ಬಂಡೆಗಳ ಕಡಿದಾದ ಗೋಡೆ ಸೃಷ್ಟಿನಿರ್ಮಿತ. ಹೆಬ್ಬಂಡೆಗಳನ್ನು ತಾಗಿ ಮರಗಾಡು. ಒಂದು ದಂಡೆಯ ಮರಗಳ ಕೊಂಬೆಗಳು ಎದುರು ದಂಡೆಯ ಮರಗಳ ಕೊಂಬೆಗಳೊಡನೆ ಸೇರಿ ಹೆಣೆದು ಅಲ್ಲೊಂದು ಹಸುರು ಹಂದರ ಕಟ್ಟಿದಂತಾಗಿತ್ತು. ಅದರಡಿಯಲ್ಲಿ ತಂಪು, ನೀರವ. ನೀರಿನಾಸರೆ, ಹುಡುಗರ ಉತ್ಸಾಹಕ್ಕೆ ಮಿತಿಯಿಲ್ಲ. ಇಂಥ ಸಂದರ್ಭದಲ್ಲಿಯೇ ಖಂಡಿತ ಒತ್ತಬೇಕು ಶಿಸ್ತಿನ ಬ್ರೇಕನ್ನು—ಬಲವಾಗಿಯೇ. ಮೊದಲೆ ಮುಂಗಗಳು ; ಮತ್ತೆ ದಣಿವು, ದಾಹ ; ಮೇಲೆ ಅನಾಯಾಸವಾಗಿ ಎದುರಾದ ಅಚ್ಛೋದ ಸರೋವರ ! ಯಕ್ಷಪ್ರಶ್ನಾಪ್ರಸಂಗದ ಪೂರ್ವಾರ್ಧದ ಪುನರಾವರ್ತನೆಯಾಗಬೇಡವೆಂದಿದ್ದರೆ ಲಗಾಮನ್ನು ಬಲವಾಗಿಯೇ ಜಗ್ಗಬೇಕು.

"ನೀರಿಗೆ ಯಾರೂ ಇಳಿಯಬಾರದು. ಬಕೆಟ್ಟಿನಲ್ಲಿ ನೀರು ತಂದು ದಂಡೆಯಿಂದ ದೂರ ನಿಂತು ಕೈ ಮುಖ ತೊಳೆಯಬೇಕು, ನೀರು ಕುಡಿಯಬೇಕು" ಇದು ನನ್ನ ಆಜ್ಞೆ. "ಕ್ರೂರ ನಕ್ರಾಕುಲದೊಳಿಡಿದಿರ್ದ ಪೆರ್ಮಡು ಗಭೀರ ನಿರ್ಮಲ ಜಲದೊಳೆಸೆವಂತೆ" ಆ ಕೊಳವಿತ್ತು. ನಮ್ಮ ಅಚ್ಚ ಸಂಸ್ಕೃತಿಯ ಸಲ್ಲಕ್ಷಣವೆಂದರೆ ನೀರು ಕಂಡೊಡನೆ ಹಿಂದೆ ಮುಂದೆ ನೋಡದೆ ಅದಕ್ಕೆ ದುಮುಕಬೇಕು ; ಬೇರೆಯವರ ಕಷ್ಟಸುಖದ ಪರಿವೆಯಿಲ್ಲದೇ ನಮ್ಮ ಸಕಲ ಕೃತಿ ಗಳನ್ನೂ ಅಲ್ಲಿಯೇ ನಿರ್ವಹಿಸಬೇಕು. ನಾನು ವಿನಾಕಾರಣ ಹೀಯಾಳಿಸುತ್ತಿದ್ದೇನೆ ಎಂದು ನಿಮಗೆ ಕಂಡರೆ ದಯವಿಟ್ಟು ನಮ್ಮ ಪುಣ್ಯಕ್ಷೇತ್ರಗಳಿಗೆ ಹೋಗಿ ನೋಡಿ. ಅಲ್ಲಿನ ಕೆರೆ, ಕೊಳ, ಹೊಳೆಗಳನ್ನು ಸಂದರ್ಶಿಸಿ ಪರೀಕ್ಷಿಸಿ. ಅಲ್ಲಿಯ ಪ್ರವಾಸೀ ಮಂದಿರಗಳಲ್ಲಿ ಉಳಿದಿದ್ದು ಬನ್ನಿ. ಭಗವದ್ಭಕ್ತಿಯೂ ಸಾಮಾಜಿಕ ಶುಚಿತ್ವ ಪ್ರಜ್ಞೆಯೂ ಪರಸ್ಪರ ಸಂಬಂಧವಿಲ್ಲದವು

ಎಂದು ಈ ಜನ ತಿಳಿದಿರುವಂತೆ ತೋರುವುದು. ಆ ಸಮಯದಲ್ಲಿ ಮಾಸ್ತಿಯವರು ಹೇಳಿದ್ದ ಒಂದು ಹಳೆಯ ಕತೆ ನೆನಪಿಗೆ ಬಂದಿತು. ಗಂಭೀರವಾಗಿ ಹೇಳಿದೆ "ಇಲ್ಲಿಯ ಸ್ಥಳಪುರಾಣವನ್ನೂ ಮಹಿಮೆಯನ್ನೂ ಅಭ್ಯಸಿಸಿ ನಾನು ಬಂದಿದ್ದೇನೆ. ಆ ಪ್ರಕಾರ ಈ ಕೊಳವನ್ನು ಮಹರ್ಷಿ ಋಷ್ಯಶೃಂಗರು ನಿರ್ಮಿಸಿದ್ದಂತೆ. ಇದರ ಮಹಿಮೆಯೇನೆಂದರೆ ಬಲದಂಡೆಯ ನೀರು ಬಲು ಸವಿ. ಅದನ್ನು ಮಾತ್ರ ಕುಡಿಯಿರಿ. ಎಡದಂಡೆಯ ನೀರು ಚಪ್ಪೆ, ರುಚಿಯಿಲ್ಲ."

ಬಲದಂಡೆಯ ನೀರನ್ನು ತಂದಾಯಿತು. ಬಾಯಿಯಿಂದ (ಮೋಟಾರ್ ಎಂಜಿನ್ನಿನ ರೇಡಿಯೇಟರಿನಿಂದ) ನೀರು ತುಳುಕುವ ವರೆಗೆ ಅದನ್ನು ಕುಡಿದರು ಹುಡುಗರು. ಏದುತ್ತ ಸೇಂಕುತ್ತ "ಹೌದು ಸಾರ್, ಬಹಳ ಸವಿ" ಎಂದು ಬಾಯಿ ಚಪ್ಪರಿಸಿದರು. ಬುತ್ತಿಯುಂಡಾಯಿತು. ಆ ಚಪಾತಿ ಬಟಾಟೆ, ಆ ಮೂಸುಂಬಿ. ಆ ಸನ್ನಿವೇಶ, ಆ ಸವಿನೀರು ಅದರ ರುಚಿ ಅಲ್ಲಿಗೇ ಮೀಸಲು. ದೇಹ, ಮನಸ್ಸು ತಣಿದ ತರುವಾಯ "ಈಗ ಎಡದಂಡೆಯ ನೀರನ್ನು ಬೇಕಾದರೆ ತಂದು ಪರೀಕ್ಷಿಸಿ" ಎಂದೆ. ಕುಡಿದವರೆಂದರು "ಬರೀ ಚಪ್ಪೆ, ಏನೂ ರುಚಿಯಿಲ್ಲ." ಹೇಗೆ ಸಾಧ್ಯ? ಅರ್ಹತೆಯೇ ರುಚಿ, ಅರ್ಹತಾರಾಹಿತ್ಯವೇ ಅರುಚಿ.

೧೨ ಗಂಟೆ ದಾಟಿತ್ತು. ಇನ್ನು ಹಾರಾಟ ನಡೆಯಬೇಕಷ್ಟೆ. ನಮ್ಮ ತಂಡದ ಒಬ್ಬ ಪ್ರಮುಖ ಸದಸ್ಯ ವೆಂಕಟೇಶ. ಇವನು ಹಳೆಯ ಸ್ಕೌಟ್ ಹುಲಿ. ಅತಿಶಯ ತೀಕ್ಷ್ಣಮತಿ. ರೇಡಾರ್, ಟೆಲಿವಿಷನ್ ಉಪಕರಣಗಳನ್ನು ಸ್ವತಃ ತಯಾರಿಸುವ ನಿಪುಣ. ಓದಿನಲ್ಲಿ ಹೇಗೋ ಹಾಗೆ ಎನ್‌ಸಿಸಿ ಚಟುವಟಿಕೆಗಳಲ್ಲಿಯೂ ಒಳ್ಳೆ ಗಟ್ಟಿಗ. ಅವನ ಚುರುಕು ನಡೆ, ಮಿಂಚಿನಂಥ ಬುದ್ಧಿ, ಸತತ ಕ್ರಿಯಾಶೀಲತೆ ಇವನ್ನು ಕಂಡ ಅವನ ಸ್ನೇಹಿತರು ಅವನನ್ನು ಕಾಸ್ಮಿಕ್‌ರೇ ಎಂದು ಅರ್ಥಪೂರ್ಣವಾಗಿ ಕರೆಯುತ್ತಿದ್ದರು. ಕಾಸ್ಮಿಕ್ ಎಂದೇ ಅವನನ್ನು ಕರೆಯುವುದು ರೂಢಿಯಾಗಿ ಹೋಯಿತು. ಅವನ ನಿಜವಾದ ಹೆಸರೇ ಮರೆತುಹೋಗುವಷ್ಟು ಪ್ರಬಲವಾಯಿತು ಈ ಅನ್ವರ್ಥನಾಮ.

"ಇಲ್ಲೊಂದು ಹೊಸ ಪ್ರಯೋಗ ಮಾಡೋಣ, ಸಾರ್" ಎಂದನು ಕಾಸ್ಮಿಕ್. ಮಾಡೋಣ ಎಂದರೆ ತಾನು ಮಾಡುತ್ತೇನೆ, ಅನುಮತಿಯಿದೆಯೇ ಎಂದು ಅರ್ಥ.

"ಏನು ನಿನ್ನ ಯೋಜನೆ ವಿವರಿಸು" ಎಂದೆ.

"ರಿವರ್ ಕ್ರಾಸಿಂಗ್, ಸಾರ್."

"ರಿವರ್ ಎಲ್ಲಿದೆಯಯ್ಯ?"

"ನೀವೇನು ಸಾರ್? ಬೋರ್ಡಿನ ಮೇಲೆ ವಿಶ್ವದ ಗೋಳವನ್ನು ಗೀಚಿ let us imagine ಎಂದು ಖಗೋಳಶಾಸ್ತ್ರವನ್ನೇ ಹೇಳಿಕೊಡುತ್ತೀರಿ. ಹಾಗಿರುವಾಗ!"

"ಆಗಲಿ ಅಷ್ಟು ಕ್ಲಿಷ್ಟವಲ್ಲ ಇಲ್ಲಿಯ ಕಲ್ಪನೆ. ಲೇಕ್ ಕ್ರಾಸಿಂಗ್ ಎಂದು ಬದಲಾಯಿಸಿರಿ ನಿಮ್ಮ ಯೋಜನೆಯ ಹೆಸರು."

"ಸರಿ ಸಾರ್. ಸರೋವರೋಲ್ಲಂಘನ" ಅವನು ಸಂಸ್ಕೃತ ಪಂಡಿತನೂ ಹೌದು.

"ಬಹಳ ಸುಲಭ. ಈ ದಂಡೆಯ ಮೇಲೆಯೇ ನಡೆದರೆ ಆ ಕಡೆಗೆ ತಲಪಿರುತ್ತೇವೆ. ಇದೇನು ಮಹಾ!"

"ನೀವೇನು ತಮಾಷೆ ಮಾಡುತ್ತೀರಿ, ಸಾರ್. ಹಗ್ಗ ಕಟ್ಟಿ ಈ ೪೦ ಅಡಿ ಉದ್ದದ ಕೊಳವನ್ನು ಹಗ್ಗದಡಿಯಲ್ಲಿ ಜಾರಿ ದಾಟೋಣ."

"ಆಗಲಿ ಮುಂದುವರಿಸಿ. ಆದರೆ ನಾನು ಪಸುರು ಕಂದೀಲು ಬೆಳಗದೇ ನೀವು ದಾಟ ತಕ್ಕದ್ದಲ್ಲ."

ನಾವು ಕುಳಿತಿದ್ದ ದಂಡೆಯಲ್ಲಿ ಕೊಳದಿಂದ ೨೦-೨೫ ಅಡಿ ಎತ್ತರದಲ್ಲಿ ಭರ್ಜರಿ ಮರ ವೊಂದರ ಕಾಂಡಕ್ಕೆ ಎರಡು ನೈಲಾನ್ ಹಗ್ಗಗಳನ್ನು ಬಿಗಿದು ಕಟ್ಟಿದರು. ಅವುಗಳನ್ನು ದಂಡೆಯ ಮೇಲಕ್ಕಾಗಿ ಬಿಚ್ಚುತ್ತ ಕೊಂಡೊಯ್ದು ಎದುರು ದಂಡೆಯಲ್ಲಿ ೧೦ ಅಡಿ ಎತ್ತರ ದಲ್ಲಿ ಇನ್ನೊಂದು ಮರದ ಕಾಂಡಕ್ಕೆ ಬಿಗಿಯಾಗಿ ಕಟ್ಟಿದರು. ಈಗ ಇಳಿಜಾರಾದ ಒಂದು ಹಗ್ಗದ ಸೇತುವೆ ಕೊಳದ ಮೇಲೆ ನಿರ್ಮಾಣವಾದ ಹಾಗಾಯಿತು. ಹಗ್ಗ ಭದ್ರವಾಗಿದೆ ಎಂದು ಸ್ಥಿರವಾದ ತರುವಾಯ ಮೊದಲು ಮೋಹನನನ್ನು ಕೊಳ ದಾಟಲು ಬಿಡಲಾ ಲಾಯಿತು—ಕಾಸ್ಮಿಕ್ ನಿರ್ದೇಶಕ; ಲಕ್ಷ್ಮಿ ಮೊದಲಾದವರು ಸಹಾಯಕರು. ಪಿಂಟೊ, ಜಯರಾಮ ನನ್ನೊಡನೆ ದಂಡೆಯಲ್ಲಿ ಕುಳಿತು ನೋಡತೊಡಗಿದರು. ಮೋಹನನ ಸೊಂಟಕ್ಕೆ ಒಂದು ಹಗ್ಗ ಸುತ್ತಿ ಅದನ್ನೂ ಹಗ್ಗದ ಸೇತುವೆಯನ್ನೂ ಕೆರಾಬಿನಾರಿನಿಂದ ಪೋಣಿಸ ಲಾಯಿತು. ಕೈಗಳಿಗೆ ಗವಸು. ಸೇತುವೆಯನ್ನು ಭದ್ರವಾಗಿ ಹಿಡಿದುಕೊಂಡು ತಲೆ ಮೊದಲು ಕಾಲು ಹಿಂದಾಗಿ ನಿಂತು ಹಗ್ಗ ಕಟ್ಟಿದ್ದ ಮರಕ್ಕೆ ಬಲವಾಗಿ ಒದ್ದು ಅವನು ಜಾರಲು ತೊಡ ಗಿದ, ಸೇತುವೆ ಇಳಿಜಾರಾಗಿದ್ದುದರಿಂದ ಇದು ಸಾಧ್ಯವಾಯಿತು. ಕೆರಾಬಿನಾರ್ ಮತ್ತು ಕೈಗಳು ಅವನನ್ನು ಭದ್ರವಾಗಿ ಸೇತುವೆಗೆ ಬಂಧಿಸಿವೆ. ಕಾಲುಗಳನ್ನು ನೆಟ್ಟಗೆ ಚಾಚಿದ. ಹೀಗೆ ಅಂಗಾತ ಮಲಗಿದ ಮೋಹನ ಜಾರಿಹೋಗುತ್ತಿದ್ದಂತೆಯೇ ಸೇತುವೆಯ ಹಗ್ಗದ ಕರ್ಷಣ ಸಾಲದೇ ಅದು ಭಾರದಿಂದ ಜಗ್ಗಿತು. ಜಗ್ಗಿದ್ದು ಸ್ವಲ್ಪ ಹೆಚ್ಚೇ ಆದುದರಿಂದ ಮೋಹನನಿಗೆ ನೀರಿನಲ್ಲಿ ಒಂದು ಮುಳುಗಾಟವಾಯಿತು. ಅವನ ಸಮವಸ್ತ್ರವೆಲ್ಲ ಒದ್ದೆ. ಎದುರು ದಂಡೆ ತಲಪಿಯೇಬಿಟ್ಟ. ಬಟ್ಟೆಯನ್ನು ಕಳಚಿ ಒಣಗಲು ಹರಗಿದ. ಮುಂದೆ ಸ್ನಾನ ಮಾಡದೇ ವಿಧಿಯಿರಲಿಲ್ಲ.

"ಸ್ನಾನ ಮಾಡಲಾ, ಸಾರ್ ?"

ನೀರಿನ ಆಳವೆಷ್ಟೋ—ಗೊಸರಿರಬಹುದು. ಅದಿರಲಿ, ನಿನಗೆ ಈಸಲು ಬರುವುದೊ ?"

"ನನಗೆ ಬರುತ್ತದೆ" ಏಳೆಂಟು ಜನ ಕೂಗಿ ಹೇಳಿದರು.

ಶ್ರೀಧರನ್ ಇದ್ದವರಲ್ಲಿ ಧಾಂಡಿಗ. ಅವನು ಮೊದಲು ಈಸಬೇಕು ಸೊಂಟಕ್ಕೆ ಹಗ್ಗ ಕಟ್ಟಿಕೊಂಡು. ಅದನ್ನು ದಂಡೆಯಲ್ಲಿ ನಿಂತವರು ಬಿಲೇ ಮಾಡಬೇಕು. ಶ್ರೀಧರನ್ ಕೊಳದ ಬೇರೆ ಬೇರೆ ಭಾಗಗಳಲ್ಲಿ ನಿಂತು ನೀರಿನ ಆಳ ತಿಳಿಸಬೇಕು. ಇದು ಮುಂದಿನ ಯೋಜನೆ. "ಹುಡುಗರ ತಂಡದೊಡನೆ ಹೋದಾಗ ನೀರು ನಿಮ್ಮ ಪ್ರಥಮ ವೈರಿ" ಎಂದು ನಮ್ಮ ಶಿಸ್ತುಸಂಹಿತೆಯಲ್ಲಿ ಹೇಳಿದೆ. ಆದರೂ ಇಲ್ಲಿಯ ಸನ್ನಿವೇಶ ಅಷ್ಟೊಂದು ಮೋಹಕವಾಗಿತ್ತು. ೪೦ ಅಡಿ ಉದ್ದ ಸುಮಾರು ೩೦ ಅಡಿ ಅಗಲದ ಆ ಕೊಳದಲ್ಲಿ ಎಲ್ಲಿಯೂ ೮ ಅಡಿಗಿಂತ ಆಳದ ನೀರಿರಲಿಲ್ಲ, ಆದರೆ ತಳದಲ್ಲಿ ಕೊಳೆತ ಎಲೆಗಳ ಕಸ ಕಡ್ಡಿಗಳ ಬಲವಾದ ಸಂಸ್ತರವೇ ನೆಲಸಿತ್ತು. ನಮ್ಮ ಹುಡುಗರು ಈಸಲು ತೊಡಗಿದೊಡನೆಯೇ ಶತಶತಮಾನಗಳ ಇತಿಹಾಸದ

ಮೆಂಡ್ಡ್ನಿ ಯನ್ನು ಕಲಕಿದಂತಾಯಿತು. ಮುಂದೆ ಹಗ್ಗದಲ್ಲಿ ಜಾರಿದ ಹುಡುಗರು ಅಂಡರ್‌ವೇರ್ ನಲ್ಲಿದ್ದರು. ಅವರೆಲ್ಲರೂ ಸೇತುವೆ ಮಧ್ಯದ ನೀರಿನ ಸೇಚನೆಯನ್ನು ಹೊಸ ಆಟವೆಂದು ಆಡಿದರು. ನಾವೆಲ್ಲರೂ ಮನದಣಿಯೇ ಈ ಆಟ ಆಡಿದೆವು. ಥಿಯೊರೆಟಿಶಿಯನ್ ಪಿಂಟೋ "ಯಾಕಪ್ಪಾ, ದೇಹ ಬಿಸಿಯಾಗಿರುವಾಗ ಇದು ಸರಿಯಲ್ಲ" ಎಂದು ಮುಂತಾಗಿ ಹೇಳು ತ್ತಿದ್ದ. ನಾನು ಅವನನ್ನು ಬಲವಾಗಿಯೇ ಕೆಣಕಿದೆ "ಪಿಂಟೋ! ನೀನು ಈ ಆಟವಾಡಿದರೆ ನಾನೂ ಆಡುತ್ತೇನೆ. ನಿನಗೆ ಧೈರ್ಯವಿಲ್ಲ!"

ಎದ್ದರೆ ಆಳಲ್ಲ ಪಿಂಟೋ. ಜಾಂಬವಂತನ ಕೆಲಸ ನಾನು ಮಾಡಿದೊಡನೆ (ನನ್ನ ರೂಪ ಆಗ, ೧೯೩೭, ಹಾಗಿರಲಿಲ್ಲ. ಈಗ ೧೯೯೩?) ಪಿಂಟೋ ಹನುಮಂತನಾದ (ಅವನ ರೂಪವೂ ಹಾಗಿಲ್ಲ). ಸಾಗರೋಲ್ಲಂಘನ ಮಾಡಿಯೇ ಬಿಟ್ಟ. ನಾನೂ ಅವನ ಹಿಂದೆ ಧಾವಿಸಿದೆ. ಆದರೆ ಏನು ಮಾಡಿದರೂ ಎಷ್ಟು ಕೆಣಕಿದರೂ ಈಸದಿದ್ದವರು ಇಬ್ಬರು— ವಾಸು, ಕಾರಣ ಈಸುಬಾರದು; ಆದರೆ ಅವನು ಹಗ್ಗದಲ್ಲಿ ಜಾರಿ ನೀರಿನಲ್ಲಿ ಮುಳುಗಿ ಮಿಂದು ಮೇಲೆದ್ದ. ಇನ್ನೊಬ್ಬ ಜಯರಾಮು, ಕಾರಣ ಶೀತ ಎಂದು ಮುಂತಾಗಿ ಆಗ ಬುರುಡೆ ಹೊಡೆದ: ಹಿಂದಿನಿಂದ ತಿಳಿಯಿತು, ಆತ ಅಂಡರ್‌ವೇರೇ ಧರಿಸಿರಲಿಲ್ಲವಂತೆ!

ಮುಂದೆ ರ್‍ಯಾಪ್ಲಿಂಗ್ ನಡೆಯಬೇಕಲ್ಲ. ಶಿಲಾರೋಪಣ ಹೇಗೂ ಆಗಿದೆ. ರ್‍ಯಾಪ್ಲಿಂಗ್ ಮಾಡಲು ಅನುಕೂಲವಾದ ಕಡಿದಾದ ಒಂದು ಬಂಡೆ ಸಮೀಪದಲ್ಲಿಯೇ ದೊರೆಯಿತು. ಕೊಳದಿಂದ ಹೊರಟ ವಾನರಸೇನೆ ಆದರ ಬುಡದಲ್ಲಿ ಬೀಡು ಬಿಟ್ಟಿತು. ಅದರ ಎತ್ತರ ೩೦ ಅಡಿ. ಮನಸ್ವೀಯರಾಗಿ ನಾನಾ ವಿಧದ ರ್‍ಯಾಪ್ಲಿಂಗ್ ಆಟ ಆಡಿ ಹಿಂದಕ್ಕೆ ಹೊರಡು ವಾಗ ೫ ಗಂಟೆ ದಾಟಿ ಹೋಗಿತ್ತು. ಹಸಿವು ಬಾಯಾರಿಕೆ ತೀವ್ರವಾದುವು. ದೂರ ನಡೆದಷ್ಟೂ ಮುಗಿಯುವುದಿಲ್ಲ ಎಂದು ಭಾಸವಾಯಿತು. ಭಾರವಾದ ದೇಹಗಳನ್ನು ಸೆಟೆದು ನಿಂತ ಕಾಲುಗಳಿಂದ ಎಳೆದುಕೊಂಡು ಹೋಗಿ ಬಂಗ್ಲೆ ತಲಪುವಾಗ ೮ ಗಂಟೆ ರಾತ್ರಿ ಮೀರಿತ್ತು. ಓಸಿಯವರು ಉದ್ವಿಗ್ನರಾಗಿದ್ದರು. ನಾವು ಸುರಕ್ಷಿತವಾಗಿ ಹೆಮ್ಮೆಯಿಂದ ಮರಳಿ ಬಂದುದು ಅವರಿಗೆ ಸಂತೋಷವೀಯಿತಾದರೂ ಅವರ ಭಾವನೆಯನ್ನು ನಮಗೆ ತಿಳಿಸಿಯೇಬಿಟ್ಟರು "ನೀವು ಸಂತೋಷಪಡಿ, ಸಾಹಸ ಪ್ರದರ್ಶನ ಮಾಡಿ. ಅದಕ್ಕಾಗಿಯೇ ನಾವಿಲ್ಲಿಗೆ ಬಂದದ್ದು. ಆದರೆ ಕತ್ತಲೆಯ ಮೊದಲು ಹಿಂದೆ ಬರಲೇಬೇಕು. ಇಲ್ಲವಾದರೆ ಇಲ್ಲಿ ನಾನು ಏನೆಂದು ತಿಳಿಯಬೇಕು? ಪ್ರತಿಯೊಂದು ಮಗುವಿನ ಜೀವವೂ ನನ್ನ ಪವಿತ್ರ ಹೊಣೆಯಲ್ಲವೇ?"

ನಿಮ್ಮ ಊಟ ಇಲ್ಲಿದೆ!

ನಾವೆಲ್ಲರೂ ಬಿಸಿ ಬಿಸಿ ಟೀ ಕುಡಿಯುತ್ತಿದ್ದಂತೆಯೇ ಓಸಿ ಹೇಳಿದರು "ನೀರಿನ ಸಮಸ್ಯೆ ಯನ್ನು ನಾನು ಪರಿಹರಿಸಿಬಿಟ್ಟೆ." ನನಗೆ ಆಶ್ಚರ್ಯವೂ ಸಂತೋಷವೂ ಆಯಿತು. ಅವರೇ ಮುಂದುವರಿಸಿದರು "ನೀವೆಲ್ಲರೂ ಹೊರಟುಹೋದಮೇಲೆ ಉಳಿದವರು ಟೆಂಟ್ ಕೆಲಸ, ಶುಚಿತ್ವದ ಕೆಲಸ, ನೀರು ತರುವುದು ಮುಂತಾದವನ್ನು ಮಾಡುತ್ತಿದ್ದರು. ನಿಸಾರರೂ, ಸ್ವಾಮಿಯವರೂ ಆ ಕೆಲಸ ವಹಿಸಿಕೊಂಡರು. ನನಗೆ ಮತ್ತೇನು ಕೆಲಸ? ಹುಡುಗರು ತಂದ ನೀರನ್ನು ಸಂಗ್ರಹಿಸಲು ಪಾತ್ರೆಗಳೇ ಇಲ್ಲವಲ್ಲ. ಬೆಳ್ತಂಗಡಿಗೆ ಹೋಗಿ ಸಾಲವಾಗಿ

ತರೋಣ, ಲಿಂಗೋಜಿಯನ್ನು ವಿಚಾರಿಸಿದಂತೆಯೂ ಆಯಿತು, ಬೆಂಗಳೂರಿಗೆ ಟ್ರಂಕ್ ಫೋನ್ ಮಾತಾಡಿದಂತೆಯೂ ಆಯಿತು ಎಂದು ಹೊರಟುಬಿಟ್ಟೆ. ಬೆಂಗಳೂರಿನಲ್ಲಿ ತಂದೆಯವರ ಪರಿಸ್ಥಿತಿ ಹಾಗೆಯೇ ಇದೆ ಎಂದು ತಿಳಿದು ಇದ್ದುದರಲ್ಲಿ ನೆಮ್ಮದಿಯಾಯಿತು. ಲಾರಿಗೆ ಹೊಸ ಬಿಡಿ ಭಾಗ ತರಲೇಬೇಕು. ಅದಕ್ಕಾಗಿ ಮಂಗಳೂರಿಗೆ ಯಾರನ್ನಾದರೂ ಕಳಿಸಬೇಕು. ನಾಳೆಯ ದಿನ ಹರೂನನ್ನು ಕಳಿಸುವುದು ಎಂದು ನಿಶ್ಚೈಸಿದ್ದೇನೆ. ಇವೆರಡು ಕಾರ್ಯ ಮುಗಿದ ಬಳಿಕ ದೊಡ್ಡ ಹಂಡೆ ಅಥವಾ ಗುಂಡಾಣಗಳು ಎಲ್ಲಿ ಎರವಲಾಗಿ ದೊರೆಯಬಹುದು ಎಂದು ತಿಳಿಯಲು ಬೆಳ್ತಂಗಡಿ ಇಡೀ ಅಲೆದಾಡಿದೆ. ಮುಸಲ್ಮಾನರ ಒಂದು ಮಸೀದಿಯಲ್ಲಿ ಅವು ದೊರೆಯುವುವು ಎಂದು ತಿಳಿಯಿತು. ಅಲ್ಲಿಗೆ ಹೋದೆ. ಅಧಿಕಾರಿಗಳನ್ನು ಕಂಡೆ. ನಮ್ಮ ಕತೆಯನ್ನು ಹೇಳಿದೆ. ಬಗೆಬಗೆಯಲ್ಲಿ ಬೇಡಿಕೊಂಡೆ. ಆದರೆ 'ಎಂಟು ಹತ್ತು ದಿವಸಗಳವರೆಗೆ ನಿಮಗೆ ಕೊಡಲು ಸಾಧ್ಯವೇ ಇಲ್ಲ' ಎಂಬುದೊಂದೇ ಅವರ ಉತ್ತರ. 'ಅಷ್ಟು ದೂರದಿಂದ, ಬೆಂಗಳೂರಿನಿಂದ ನಿಮ್ಮೂರಿಗೆ ಮಕ್ಕಳು ಬಂದಿದ್ದಾರಪ್ಪಾ. ಇಷ್ಟು ಉಪಕಾರ ನೀವು ಮಾಡಬಾರದೇ ?' ಅವರ ಮನಃಪರಿವರ್ತನೆಯಾಗಲಿಲ್ಲ. ಅಲ್ಲಿಂದ ಬೇಸರಗೊಂಡು ಹೊರಟೆ. ಇನ್ನೊಂದು ಕಡೆ ವಿಚಾರಿಸುವಾಗ, ಅಲ್ಲಿಯೇ ಸಮೀಪದಲ್ಲಿ ಅಂದರೆ ಜಮಲಾಬಾದಿನ ಬುಡದಲ್ಲಿ ಒಬ್ಬ ಜೈನ ಶ್ರೀಮಂತರ ಮನೆಯಿದೆ. ಅವರಲ್ಲಿ ದೊರೆತರೂ ದೊರೆಯಬಹುದು ಎಂದು ತಿಳಿಯಿತು. ನನಗೆ ಧೈರ್ಯವಿರಲಿಲ್ಲ. ಆದರೂ ಪ್ರಯತ್ನಮಾಡಿಯೇ ಬಿಡೋಣವೆಂದು ಹೊರಟೆ. ಹಳ್ಳಿ ಧೂಳಿನ ದಾರಿ. ಸೆಕೆಯೋ ಸೆಕೆ. ಹುಡುಗರಿಬ್ಬರೂ ಲಾರಿಯಲ್ಲಿದ್ದಾರೆ. ಮನೆಯಿಂದ ದೂರದಲ್ಲಿ ಲಾರಿ ನಿಲ್ಲಿಸಿ ಅವರಲ್ಲಿಗೆ ನಡೆದುಕೊಂಡು ಹೋದೆ. ವಿಶಾಲವಾದ ದೊಡ್ಡ ಅರಮನೆ. ಯಜಮಾನರ ಹೆಸರು ನಡಗುತ್ತು ಚಂದ್ರಯ್ಯ ಅಜ್ರಿ ಎಂದು ಮತ್ತೆ ತಿಳಿಯಿತು. ಅಲ್ಲಿ ಹಳ್ಳಿಯ ಹಳೆಯ ಕಾಲದ ಸಮೃದ್ಧ ವಾತಾವರಣ. ನನ್ನ ವೇಷ, ಭೂಷಣ, ನಾನು ಹೋದ ಮಧ್ಯಾಹ್ನ ಒಂದು ಗಂಟೆ ಬಿಸಿಲಿನ ಸಮಯ—ಯಾವುದೂ ಅಲ್ಲಿಗೆ ಒಪ್ಪುವಂತಿರಲಿಲ್ಲ. ಹೋದೆ. ಮೆಟ್ಟಿಲಿನಲ್ಲಿ ನಿಲ್ಲುವಾಗಲೇ ಒಳಗಿನಿಂದ ಬಂದ ಯುವಕರೊಬ್ಬರು 'ನಮಸ್ಕಾರ, ಬನ್ನಿ ಕುಳಿತುಕೊಳ್ಳಿ' ಎಂದು ಹಳೆಯ ಪರಿಚಯವಿದ್ದವರಂತೆ ಸ್ವಾಗತಿಸಿದರು. 'ನನಗೆ ಸಮಯವಿಲ್ಲ. ನಾನು ಬಂದದ್ದು...' ಎಂದು ನಾನು ಹೇಳುತ್ತಿದ್ದಂತೆಯೇ 'ಅದೆಲ್ಲವನ್ನೂ ವಿಚಾರಿಸೋಣ. ನೀವು ಮೇಲೆ ಬನ್ನಿ. ಕುಳಿತುಕೊಳ್ಳಿ' ಎಂದು ಒತ್ತಾಯ ಮಾಡಿದರು. ಇದೇನಪ್ಪ ಸಮಯ ಮೀರುತ್ತಿದೆ, ಇಲ್ಲಿಯೂ ನಕಾರವಾದರೆ ಎಂದುಕೊಂಡೆ. ಮುಂದಿನ ಗಳಿಗೆಯಲ್ಲಿ ಒಳಗಿನಿಂದ ಇನ್ನೊಬ್ಬರು ತಂಬಿಗೆ, ನೀರು, ಟವೆಲ್ ತಂದರು. ಹಿಂದೆಯೇ ಷರಬತ್ತು ಬಂದಿತು. 'ನೀವು ಲಾರಿಯಲ್ಲಿ ಬಂದದ್ದು ಕಂಡೆ. ಅದರಲ್ಲಿರುವವರನ್ನು ಬರಹೇಳಿ' ಎಂದು ಅಲ್ಲಿಗೆ ಜನ ಕಳಿಸಿದರು. ನನಗೆ ಬಹಳ ಸಂಕೋಚವಾಯಿತು. ಷರಬತ್ತು ಕುಡಿಯುತ್ತ—ಆ ಸೆಕೆ ಆ ಬಳಲಿಕೆಗೆ ಅದು ಅಮೃತವಾಗಿತ್ತು—ನಾನು ಅಲ್ಲಿಗೆ ಬಂದಿದ್ದುದರ ಕಾರಣ ಹೇಳಿದೆ. ನನಗೆ ಎರಡು ದೊಡ್ಡ ಹಂಡೆ ಬೇಕೆಂದೂ ಕೇಳಿಕೊಂಡೆ. ಅವರು ಅದಕ್ಕೆ ಉತ್ತರ ಕೊಡಲಿಲ್ಲ ನಮ್ಮ ಬಳಗದವರಿಗೂ ಉಪಚಾರ ನಡೆಯಿತು. ನನಗೆ ಹೊತ್ತಾಗುವುದೆಂದು ಆತುರ. ಇವರು ಪಾತ್ರೆಯ ವಿಚಾರ ಮಾತಾಡುವುದೇ ಇಲ್ಲವಲ್ಲ ಎಂದು ಕಳವಳ, 'ಸ್ವಾಮೀ, ಪಾತ್ರೆ ತಮ್ಮಲ್ಲಿ ದೊರೆಯಬಹುದೇ ?' ಎಂದು ಪುನಃ

ಪ್ರಶ್ನಿಸಿದರೆ 'ಅದು, ಆಮೇಲೆ ನೋಡೋಣ. ಈಗ ನೀವು ಊಟ ಮಾಡಬೇಕಲ್ಲ' ಎಂದರು. 'ಇಲ್ಲ ಕ್ಷಮಿಸಬೇಕು. ನಮಗೆ ಊಟ ಕ್ಯಾಂಪಿನಲ್ಲಿ ತಯಾರಾಗಿದೆ. ಅಲ್ಲಿ ಕಾಯು ತ್ತಿದ್ದಾರೆ. ನಾವು ಹೋಗಬೇಕು. ಪಾತ್ರೆ ದಯವಿಟ್ಟು...' 'ಅದು ಹೇಗೆ ? ನಿಮ್ಮ ಊಟ ಇವತ್ತು ಇಲ್ಲಿ ಎಂದು ಮೊದಲೇ ಗೊತ್ತಾಗಿದೆಯಲ್ಲ. ಈಗ ಇಲ್ಲಿಯೇ ಊಟ ಮಾಡ ಬೇಕು' ಎಂದರು. ನಮ್ಮ ಡ್ರೆಸ್ ನೋಡಿ ಬೆಂಚು ತಯಾರು ಮಾಡಿದರು. ಎಲೆ ಹಾಕಿದರು. ಅಣ್ಣ ತಮ್ಮಂದಿರು ಸೇರಿ ಬಡಿಸಲು ತೊಡಗಿಯೇ ಬಿಟ್ಟರು. ಪಂಚಭಕ್ಷ್ಯ ಪರಮಾನ್ನ ಭೋಜನವೆಂದರೆ ಅದು. ಅವರ ಹಿರಿಯ ಸಂಬಂಧಿಕರೊಬ್ಬರಿಗೆ ಆ ಮಧ್ಯಾಹ್ನ ಔತಣ ಏರ್ಪಡಿಸಿ ಮನೆಯವರೆಲ್ಲರೂ ಊಟಕ್ಕೆ ಕುಳಿತಿದ್ದರಂತೆ. ನಾವು ಊಟ ಮಾಡು ತ್ತಿದ್ದಂತೆಯೇ ಅವರೆಲ್ಲರೂ ಊಟ ಮುಗಿಸಿ ಎದ್ದು ಬಂದರು. ಅವರ ಪ್ರೀತಿವಿಶ್ವಾಸ, ಉಪಚಾರಗಳಿಗೆ ಮಿತಿಯೇ ಇಲ್ಲ. ಊಟವಾದಮೇಲೆ ನನ್ನನ್ನು ಅವರ ಮನೆಯ ಉಗ್ರಾಣಕ್ಕೆ ಕರೆದುಕೊಂಡು ಹೋಗಿ 'ನಿಮಗೆ ಬೇಕಾದ ಪಾತ್ರೆ ಆರಿಸಿಕೊಳ್ಳಿ. ಬೇಕಾದಷ್ಟು ದಿವಸ ಇಟ್ಟುಕೊಂಡು ಆಮೇಲೆ ತಂದುಕೊಂಡಿ' ಎಂದರು. ಹೀಗೆ ನಮಗೆ ಈ ಹಂಡೆಗಳು ದೊರೆತುವು. ನಾನು ಪಾತ್ರೆ ತೆಗೆದುಕೊಂಡು ಮರಳುತ್ತಿದ್ದಂತೆಯೇ ಯೋಚನೆ ಮಾಡಲು ತೊಡಗಿದೆ—ಒಂದು ಕಾಲದಲ್ಲಿ ದೊಡ್ಡ ಅಧಿಕಾರಿಗಳು ಬಂದಿಳಿದುಕೊಳ್ಳುತ್ತಿದ್ದ ಈ ಬಂಗ್ಲೆ ಯಲ್ಲಿ ನೀರಿಗೇನಾದರೂ ಅವರು ಏರ್ಪಾಡು ಮಾಡಿರಲಾರರೇ ? ಬೆಟ್ಟದ ಬುಡ, ತೋಡಿ ನಲ್ಲಿ ನೀರು ದೊರೆಯಬೇಕು—ಬಾವಿ ಅಗೆಸಿರಲೇಬೇಕು ಎಂದು ತರ್ಕ. ಡಾಕ್ಟರರೊಡನೆ ಈ ವಿಚಾರ ಮಾತಾಡಿದೆ. ಅವರು ಇಡೀ ಅಂಗಳವನ್ನು ಸುತ್ತಿ ನೋಡಿದರು. ನನ್ನ ಊಹೆ ಸರಿಯಾಗಿತ್ತು ಈ ಔಟ್ ಹೌಸಿನ ಹಿಂದೆ ೧೦೦ ಗಜ ದೂರದಲ್ಲಿ ಹಾಳುಬಾವಿಯನ್ನು ಅವರು ಹುಡುಕಿದರು. ಬಗ್ಗಿ ನೋಡಿದೆವು. ಕಲ್ಲು ಕಟ್ಟಿದ್ದಾರೆ. ಅಡಿಯಲ್ಲಿ ನೀರು ಹೊಳೆಯು ತ್ತಿದೆ. ಕಂಬ ಹಾಕಿಸಿ , ಹಗ್ಗ ರಾಟೆ ಕಟ್ಟಿ, ನೀರು ಸೇದಿದೆವು. ಸಮೃದ್ಧಿಯಾಗಿದೆ, ಶುದ್ಧ ವಾಗಿದೆ. ಡಾಕ್ಟರರೂ ಸರ್ಟಿಫಿಕೇಟ್ ಕೊಟ್ಟರು. ನೀರನ್ನು ಶುದ್ಧಪಡಿಸಿ ಬಾವಿಗೇ ಬ್ಲೀಚಿಂಗ್ ಪೌಡರ್ ದ್ರವವನ್ನು ಸುರಿದರು. ಈಗ ಕುಡಿಯಲು, ಸ್ನಾನಮಾಡಲು ಬೇಕಾದಷ್ಟು ನೀರು ಸಮೀಪದಲ್ಲಿಯೇ ಇದೆ.''

ಒಂಟಿ–ವಾಂತಿ ಗುಡ್ಡೆಯ ಮೇಲೆ

ಶಿವಪ್ಪನವರ ತಂಡ ವೆಂಗಿಲ ಶ್ರೇಣಿಯನೊಡಗೂಡಿ ಕುದುರೆಮುಖದ ಸರಹದ್ದಿಗೆ ಹೋಗಿ ಮರಳಿತ್ತು. ಅವರು ಹೋದ ಬೆಟ್ಟದ ಹೆಸರು ಒಂಟಿ ಗುಡ್ಡೆ. ಓಂತಿ ಗುಡ್ಡೆ, ವಾಂತಿ ಗುಡ್ಡೆಯೆಂದೂ ಕರೆಯುತ್ತಾರೆ. ಇದು ಆ ಭಾಗದಲ್ಲಿ ಒಂಟಿಯಾಗಿ ನಿಂತಿರುವುದರಿಂದ ಒಂಟಿ ಗುಡ್ಡೆ. ಓತಿಕೇತ ಓಡಲು ನಿಂತಿರುವ ಭಂಗಿಯಲ್ಲಿರುವುದರಿಂದ ಓಂತಿ ಗುಡ್ಡೆ. ಇನ್ನು, ಕನ್ನಡದ ಒಂಟಿ, ವೊಂಟಿಯಾಗಿ ಇಂಗ್ಲಿಷಿನಲ್ಲಿ Vanthi ಆಗಿ ಕನ್ನಡಕ್ಕೆ ಮರಳು ವಾಗ ವಾಂತಿ ಆದುದಾಗಿರಲೂಬಹುದು. ''ಭೂಮಿದೇವಿಯ ವಾಂತಿ ಈ ಸಾಲಲ್ಲವೇ ?'' ಎಂದನೊಬ್ಬ ಜೀಯಾಲಜಿ ಪಂಡಿತ. ಮುಂದಿನ ಎರಡು ದಿವಸ (೧೩, ೧೪) ತಂಡ ಗಳನ್ನು ಬದಲಾವಣೆಗೊಳಿಸುವುದರ ಮೂಲಕ ಎಲ್ಲರಿಗೂ ಎಲ್ಲ ಶಿಕ್ಷಣಗಳೂ ಲಭಿಸಿ ದುವು. ನಿಸಾರ್, ಸ್ವಾಮಿ, ಶಿವಪ್ಪ ಒಂದೊಂದು ದಿವಸ ಒಂದೊಂದು ತಂಡದೊಡನೆ

ಹೋಗಿ ಮರಳಿದರು. ಒಂಟಗುಡ್ಡೆಯಿಂದ ಕುದುರೆಮುಖ, ಅದರೆದುರಿನ ಜಮಲಾಬಾದ್ ಎರಡನ್ನೂ ನೋಡಿದ ಕೆಂಡಗಣ್ಣಸ್ವಾಮಿ ದೂರದ ಊರಿನಲ್ಲಿರುವ ತನ್ನ ಪ್ರೇಯಸಿಯ ಸುಂದರ ವದನವನ್ನು ಸ್ಮರಿಸುತ್ತ ಹೀಗೆಂದು ಬರೆದರು

ಜಮಲಾಬಾದೇ ನಂಗೊಂದ್ ಶಾಲೆ
ಆನೆ ತರ ಕಣೇ ಅದರ್ ತಲೆ !
ಕುದ್ರೇಮುಖದ್ಮೇಲ್ನಿಂತು ನೋಡಿದ್ರೆ—ಬಾಲೆ !
ಜಮಲಾಬಾದ್—ಮಚ್ಚೆ ನಿನ್ಮುಖದ್‌ಮೇಲೆ !

ಮುಕುಂದನ ಖಾಯಿಲೆ ಜಾಸ್ತಿಯಾಯಿತು. ಯಾವ ಆಹಾರವೂ ದಕ್ಕಲಿಲ್ಲ. ಪಾಂತಿ ಹೊಟ್ಟೆನೋವು. ಅವನನ್ನು ಮಂಗಳೂರಿನ ದೊಡ್ಡಾಸ್ಪತ್ರೆಗೆ ಕಳಿಸುವುದು ಅಗತ್ಯವೆಂದು ಡಾಕ್ಟರರೆಂದರು. ಆದರೆ ಹುಡುಗ ಹೋಗಲೊಪ್ಪಲಿಲ್ಲ, ಹೇಗಾದರೂ ಮುಂದಿನ ಒಂದೆರಡು ದಿವಸಗಳಲ್ಲಿ ಹುಷಾರಾಗುವುದಾಗಿ ಆಸೆಯಿಟ್ಟುಕೊಂಡಿದ್ದ. ನಮ್ಮ ಬಳಗದ ಅತ್ಯುತ್ಸಾಹೀ ಹುಡುಗ ಇವನು. ಮೂರ್ತಿ ಕಿರಿಯದಾದರೂ ಅತಿ ಸಾಮರ್ಥ್ಯವಂತ. ಡಾಕ್ಟರರ ಊಹೆ ಅವನಿಗೆ ಅಪ್ಪೆಂಡಿಸೈಟಿಸ್ ಇರಬಹುದೆಂದು. ಅವನನ್ನು ಸೋಮವಾರ ಹರೊನ ನೊಂದಿಗೆ ಮಂಗಳೂರಿಗೆ ಕಳಿಸಿದೆವು. ಅಲ್ಲಿ ಅದು ಅಪ್ಪೆಂಡಿಸೈಟಿಸ್ ಹೌದೆಂದು ದೃಢವಾಯಿತು. ಶಸ್ತ್ರಚಿಕಿತ್ಸೆ ಕೂಡಲೇ ನಡೆಸಬೇಕೆಂದು ಅವನ ವಾರೀಸುದಾರರಿಗೆ (ಬೆಂಗಳೂರಿಗೆ) ತಿಳಿಸಿದೆವು. ಅವರು ಕೂಡಲೇ ಕಾರಿನಲ್ಲಿ ಮಂಗಳೂರಿಗೆ ಧಾವಿಸಿ ಬಂದ ಮುಕುಂದನನ್ನು ಬೆಂಗಳೂರಿಗೆ ಕರೆದುಕೊಂಡು ಹೋದರು. ಆಶ್ಚರ್ಯವೆಂದರೆ ಆಗ ಅವನ ಖಾಯಿಲೆ ಕಡಿಮೆಯಾಗಿತ್ತು. ಮುಂದೆ ಶಸ್ತ್ರಚಿಕಿತ್ಸೆಯಿಲ್ಲದೇ ಅವನು ಆರಾಮವಾಗಿಯೂ ಬಿಟ್ಟ. ಪಾಪ, ಶಿಬಿರ ಮಾತ್ರ ತಪ್ಪಿಹೋಯಿತು. ಬೆಂಗಳೂರಿನಿಂದ ವಿಶೇಷ ಸುದ್ದಿ—ಓಸಿಯವರಿಗೆ, ಸಿಸಾರರಿಗೆ—ಬರದಿದ್ದುದರಿಂದ ನಮ್ಮ ಕ್ಯಾಂಪು ಬಲು ಬಿರುಸಿನಿಂದ ಸಂತೋಷದಿಂದ ಮುಂದುವರಿಯಿತು.

ಕಾಸ್ಮಿಕ್‌ರೇ ತಯಾರಿಸಿದ ಕುಂಬಳಕಾಯಿ ಹಲ್ವ

ನಮ್ಮ ಸಂತೋಧನಪಂಡಿತ ಕಾಸ್ಮಿಕ್‌ರೇ ಆ ಒಂದು ದಿವಸ ಕೇಳಿದ "ಸಕ್ಕರೇ ಕುಂಬಳ ಕಾಯಿ ಹಲ್ವ ಮತ್ತು ಬಂಡೆ ಚಪಾತಿ ತಿಂದಿದ್ದೀರಾ ಸಾರ್ ?''

''ಕಾಶೀ ಹಲ್ವ ತಿಂದಿದ್ದೇನೆ. ಅದನ್ನು ಬೂದಿಕುಂಬಳ ಕಾಯಿಯಿಂದ ಮಾಡುವುದು. ಇನ್ನು ಬಂಡೆ ಚಪಾತಿ ತಿನ್ನುವುದೇ ?''

''ಕಾದ ಬಂಡೆಯ ಮೇಲೆ ಚಪಾತಿ ಬೇಯಿಸಿ ತಿನ್ನಬಹುದು. ಅದನ್ನು ಕುದುರೆ ಮುಖದ ಮೇಲೆ ಹೋದಾಗ ಮಾಡಿ ತೋರಿಸುತ್ತೇನೆ. ನೀವು ನನಗೆ ಒಂದೆರಡು ಸಕ್ಕರೆ ಕುಂಬಳಕಾಯಿ ತರಿಸಿಕೊಟ್ಟರಾಗಬಹುದು.''

ಬೆಳ್ತಂಗಡಿಗೆ ಹೋದ ಅನ್ಸಾರಿಗೆ ಸಕ್ಕರೆ ಕುಂಬಳಕಾಯಿ ಎಲ್ಲಿಯೂ ದೊರೆಯಲಿಲ್ಲ. ಪುನಃ ಹೋಗುವಾಗ ಚೀನೀಕಾಯಿ ತೆಗೆದುಕೊಂಡು ಬಾ ಎಂದೆ. ಒಂದಲ್ಲ ನಾಲ್ಕು ತಂದ. ಒಂದೇ ವಸ್ತು. ಬೆಂಗಳೂರು ಭಾಷೆ ಈ ಊರ ಜನರಿಗೆ ತಿಳಿಯಲಿಲ್ಲ. ಕಾಸ್ಮಿಕ್, ಶ್ರೀನಿವಾಸ, ವಾಸು ಹಲ್ವದ ಪಾಕಶಾಸ್ತ್ರಿಗಳು. ಅವರು ಬಲು ಶ್ರದ್ಧೆಯಿಂದ ಅದರ

ತೊಟ್ಟು ಕತ್ತರಿಸಿ, ಅಲ್ಲಿ ತೂತು ಕೊರೆದು, ಒಳಗಿನ ಬೀಜ, ಸುಂಗು ಎಲ್ಲವನ್ನೂ ಹೊರತೆಗೆದರು. ಈಗ ಚೀನೀಕಾಯಿ ಬರೀ ಗುಳವಿರುವ ಬುರುಡೆ. ಅದರೊಳಗೆ ಬೆಲ್ಲ, ತೆಂಗಿನಕಾಯಿ, ಕಸಕಸೆ, ಯಾಲಕ್ಕಿ ಪಾಕವನ್ನು ಹೂರಣವಾಗಿ ತುಂಬಿಸಿ ತೊಟ್ಟಿನ ಮುಚ್ಚಳ ಮುಚ್ಚಿದರು. ಶಿಬಿರಾಗ್ನಿಯ ಸ್ಥಳದಲ್ಲಿ ಎರಡಡಿ ಹೊಂಡ ತೋಡಿ ವಿಧಿಪೂರ್ವಕವಾಗಿ ಹೂರಣಪೂರ್ಣ ಚೀನೀ ಕಾಯಿಯನ್ನು ಅದರೊಳಗೆ ಸ್ಥಾಪಿಸಿ ಮಂತ್ರಪೂರ್ವಕವಾಗಿ ಮಣ್ಣು ಮುಚ್ಚಿ ಅದರಮೇಲೆ ಶಿಬಿರಾಗ್ನಿ ಹೊತ್ತಿಸಿದರು. ಅಗ್ನಿಯ ಸುತ್ತಲೂ ಕೋಲಾಟ, ಬಯಲಾಟ, ಹಾಡುಗಬ್ಬ, ಕತೆಗಳ ಹೊನಲು ಹರಿಯಿತು. ಬೆಂಕಿ ಎಷ್ಟು ಹೊತ್ತು ಉರಿಯಬೇಕೆಂದು ಯಾರಿಗೂ ಖಚಿತವಾಗಿ ತಿಳಿದಿರಲಿಲ್ಲ. ಈಗಾಗಲೇ ಮೇಲಿನ ಶಾಖದಿಂದ ಚೀನೀಕಾಯಿ ಕಪ್ಪಾಗಿಹೋಗಿರಬಹುದು ಎಂದು ಎಲ್ಲರಿಗೂ ತವಕ ಉಂಟಾಯಿತು. "ಹಸಿವಾಗುತ್ತಿದೆ, ಹಲ್ವ ಬೇಕು" ಎಂದೊರಲಿದನು ಸೋಮಯ್ಯ.

ಬೆಂಕಿ ಎಳೆದರು, ಕೆದಕಿದರು, ರಾಶಿ ರಾಶಿ ನೀರು ಸುರಿದರು, ಅಲ್ಲೆಲ್ಲ ಬೂದಿ ಹೊಗೆ. ಅಂಗಳವೆಲ್ಲ ಹೇಸಿಕೆ. ನೆಲ ತಣ್ಣಗೆ, ಮೆತ್ತಗಾದಮೇಲೆ ಕೆಸರಿನ ಹೊಂಡದಿಂದ ಚೀನೀ ಕಾಯಿಯನ್ನು ಉತ್ಖನನದ ಗಾಂಭೀರ್ಯದಿಂದ ಉದ್ಧರಿಸಿದರು. ಅದು ಕಪ್ಪಾಗಿ ಹೋಗಿರಲಿಲ್ಲ.

"ಅಬ್ಬಾ ! ಇದು ಫಸ್ಟ್‌ಕ್ಲಾಸ್ ಆಗಿ ಬೇದಿದೆ" ಎಂದು ಉದ್ಗರಿಸಿದ ಕಾಸ್ಮಿಕ್. ಶೀನಿ, ಪಾಸು ಅವನಿಗೆ ಬೆಂಬಲಿಗರು. ತೊಟ್ಟಿನ ಮುಚ್ಚಳ ತೆಗೆದ. ಒಳಗಡೆ ಬೆಟ್ಟನ್ನಿಟ್ಟ. ಹೂರಣ ಅಂಟಿ ಚುರುಚುರು ಎಂದಾಗ ಬೆಟ್ಟು ಸ್ವಾಭಾವಿಕವಾಗಿಯೇ ಬಾಯಿಗೆ ಧಾವಿಸಿತು. ಹಂದಿಯ ಮಾಂಸವನ್ನು ತಿನ್ನಲು ಆದಿಮಾನವ ಶೋಧಿಸಿದ್ದು ಈ ಕ್ರಮದಲ್ಲಿಯೇ ಅಂತೆ. ಗುಡಿಸಲಿನೊಳಗೆ ಕಟ್ಟಿಹಾಕಲಾಗಿದ್ದ ಹಂದಿಗಳು ಆ ಗುಡಿಸಲಿಗೆ ಆಕಸ್ಮಾತ್ತಾಗಿ ಬೆಂಕಿ ಬಿದ್ದಾಗ ಜೀವಂತ ಬೆಂದುಹೋದುವು. ಆದಿಮಾನವ ಅವುಗಳಲ್ಲೊಂದನ್ನು ಮುಟ್ಟಿದ—ಮಾಂಸ ಅಂಟಿ ಬೆಟ್ಟು ಸುಟ್ಟಿತು. ಬಾಯಿಗೆ ಧಾವಿಸಿತು. ಮುಂದೆಷ್ಟೋ ವರ್ಷ ಗುಡಿಸಲೊಳಗೆ ಹಂದಿಯನ್ನು ಕಟ್ಟಿಹಾಕಿ ಹೊರಗಿನಿಂದ ಬೆಂಕಿಯಿಕ್ಕಿ ಆ ಸುಟ್ಟ ಹಂದಿಯನ್ನು ತಿನ್ನುವ ಪಾಶವೀಕ್ರಮ (ಸುಡುವ ಕ್ರಮ ಮಾತ್ರ ಪಾಶವೀ, ತಿನ್ನುವುದು ಖಂಡಿತವಾಗಿಯೂ ಅಲ್ಲ) ರೂಢಿಯಲ್ಲಿತ್ತಂತೆ ! ಹಂದಿಯ ವ್ಯಥೆಯಿಂದ ಹೂರಣದ ಕತೆಗೆ ಹೊರಳೋಣ.

"ಆಹಾ !" ಎಂದನು ಕಾಸ್ಮಿಕ್.

ಪಿಂಟೋ ಧೊರೆ ಸ್ಪೂನಿನ (ಚಮಚ ಅಲ್ಲ) ಸಹಾಯದಿಂದ ಹಲ್ವದ ತುಣುಕು ತಿಂದು "ಭಲೆ !" ಎಂದು ಮರೆಯಾದ.

ಲಕ್ಷ್ಮಿ ಅದರೊಳಗಿದ್ದ "ತೀರ್ಥ" ಕುಡಿದು "ಏನು ಅಮೃತೋಪಮ !" ಎಂದು ಕತ್ತಲೆಯಲ್ಲಿ ಕರಗಿದ.

ಗೌಡ ಮಾತ್ರ ಕೇಳಿದ "ಹಲ್ವ ಕಹಿ ಅಲ್ವಾ ?"

ರೆಡ್ಡಿ ಅನುಮೋದಿಸಿದ "ತೀರ್ಥ ಬರೀ ಹೊಗೆ ನೀರಿನಂತಿದೆ" ಎಂದು ಉಗಿದ.

ಅಣ್ಣಯ್ಯಪ್ಪ "ಲಕ್ಷ್ಮಿ ತೀರ್ಥವನ್ನು ಉಗಿದು ಬಾಯಿ ತೊಳೆಯುತ್ತಿದ್ದುದನ್ನು ನೋಡಿದೆ" ಎಂದು ಗುಳ್ಳೆಯನ್ನು ಒಡೆದ.

"ಬೆಲ್ಲ ಸವಿಯಾಗಿಲ್ಲ" ಕಾಸ್ಲಿಕ್.

"ಬೆಂಕಿಗೆ ಶಾಖ ಸಾಲದು" ಶ್ರೀನಿವಾಸ.

"ಆತುರ ಸದಾ ಹಾನಿಕರ" ವಾಸು.

"ಈ ಊರಿನವರಿಗೆ ಸಕ್ಕರೆ ಕುಂಬಳಕಾಯಿ ಬೆಳೆಸಲಿಕ್ಕೇ ಬರುವುದಿಲ್ಲ. ಶುದ್ಧ ಅನಾಗರಿಕರು!" ಎಂದು ನಾನು ಮಾತು ಮುಗಿಸಿದೆ. ಬಂಡೆ ಚಪಾತಿಯ ಮಾತು ಮುಂದೆಂದೂ ಸೊಂಡೆ ತೂರಲಿಲ್ಲ.

ನಾಂದಿ ಮಹೋತ್ಸವ—ಹಿಂದಿನ ರಾತ್ರಿ

ಹದಿನಾಲ್ಕರ ರಾತ್ರಿ ಬಲು ಸಂಭ್ರಮದ ವೇಳೆ, ಕಲಿಗಳು ಗಂಡುಗಲಿಗಳಾಗುವ ಅದೇ ಹಿಂದಿನ ಇರುಳು. ಸಾಹಸಪ್ರದರ್ಶನದ ಶುಭ ನಿರೀಕ್ಷಣೆಯ ಸುಂದರ ಸ್ವಪ್ನ ಕಾಣುತ್ತಿರುವ ಸಂಧಿ. ನಾಳೆ ಮದುವೆಯೆಂದರೆ ಇಂದು ಮದುವೆ ಮನೆ ಹೇಗಿದ್ದೀತೋ ಹಾಗೆ. ಮರುದಿನ ಆರು ಗಂಟೆಗೆ ನಾವು ಕುದುರೆಮುಖ ಶಿಖರಾರೋಹಣ ತೊಡಗಬೇಕು. ಈ ಸಾಹಸಕ್ಕೆ ಮೀಸಲಾದದ್ದು ಮೂರು ದಿವಸ—ಒಂದು ದಿವಸ ಆರೋಹಣ, ಒಂದೂವರೆ ದಿವಸ ಅಲ್ಲಿಯೇ ವಾಸ. ಮೂರನೆಯ ಅಪರಾಹ್ಣ ಅವರೋಹಣ. ಆಹಾರ, ಪಾತ್ರೆ, ಬಟ್ಟೆ, ಶಿಕ್ಷಣ ಸಾಮಗ್ರಿ ಎಲ್ಲವೂ ತಲೆ ಹೊರೆಯಲ್ಲಿಯೇ ಮೇಲೆ ಹೋಗಬೇಕು. ಭಾರ ಹೊತ್ತು ನಡೆಯುವುದೂ ಹುಡುಗರ ಶಿಕ್ಷಣದ ಒಂದಂಗ. ಹಿಮಾಲಯದಲ್ಲಿ ನಲವತ್ತು ಪೌಂಡು ಹೊರಿಸುತ್ತಾರೆಂದ ಪೀಟೋ. ಇದು ಹಿಮಾಲಯವಲ್ಲ, ಇಲ್ಲಿ ಹತ್ತುವವರು ಲಕ್ಷ್ಮಿ ಪಿಂಟೋಗಳಲ್ಲ. ಆದ್ದರಿಂದ ಚಿಕ್ಕ ಜನರಿಗೆ, ಚಿಕ್ಕ ಗುಂಡ್ಡಿಗೆ, ಚಿಕ್ಕ ಭಾರ. ಅಡುಗೆಯವರು ಸೂಚಿಸಿ ಆಯ್ದಿದ್ದ ಎಲ್ಲ ಸಾಮಗ್ರಿಗಳನ್ನೂ ಮೊದಲು ಒಂದುಗೂಡಿಸಿದೆವು, ಅಕ್ಕಿ, ತರಕಾರಿ, ಚಾ, ಸಕ್ಕರೆ, ಎಣ್ಣೆ, ಹಾಲುಡಬ್ಬಿ ಇತ್ಯಾದಿ. ಜೊತೆಗೆ ಶಿಕ್ಷಣ ಸಾಮಗ್ರಿ, ರೈಫಲ್, ಔಷಧಿಗಳು, ಪಾತ್ರೆ ಪದಾರ್ಥ—ಒಂದೇ, ಎರಡೇ ? ಯಾವುದನ್ನೂ ಬಿಡುವಂತಿಲ್ಲ. ಇಷ್ಟಲ್ಲದೇ ಹುಡುಗರ ಸ್ವಂತ ವಸ್ತುಗಳು—ಕಂಬಳಿ, ಡರಿ, ಊಟದ ತಟ್ಟೆ, ಜೆರ್ಸಿ, ಬಟ್ಟೆ ಇತ್ಯಾದಿ ವೈಯುಕ್ತಿಕ ವಸ್ತುಗಳನ್ನುಳಿದು ಬೇರೆ ಎಲ್ಲವನ್ನೂ ಜೋಡಿಸಿ ಆಯಿತು. ಅವುಗಳ ಗೋಷ್ವಾರೆಯೂ ಸಿದ್ಧವಾಯಿತು. ನೂರರಷ್ಟು ಬೇರೆ ಬೇರೆ ಹೆಸರುಗಳಿದ್ದುವು ಅಕ್ಕಿಯಿಂದ ಹಪ್ಪಳದವರೆಗೆ, ಸಾಸಿವೆಯಿಂದ ಸೀಮೇ ಸುಣ್ಣದವರೆಗೆ. ಸಂಜೆ ಹುಡುಗರನ್ನು ಒಟ್ಟುಗೂಡಿಸಿ, ವಿಷಯವನ್ನು ವಿವರಿಸಿ, ಬರಲು ಸಾಧ್ಯವಾಗದವರು ತಳದಲ್ಲಿಯೇ ಉಳಿಯಬೇಕೆಂದು ಸ್ಪಷ್ಟಪಡಿಸಿದೆ.

"ಕುದುರೆಮುಖ ಗಂಡುಗಳಿಗೆ ಮಾತ್ರ. ಯಾವುದೇ ಕಾರಣದಿಂದ ನಿಮ್ಮಲ್ಲಿ ಕೆಲವರಿಗೆ ಮೇಲೇರುವುದು ಸಾಧ್ಯವಿಲ್ಲವೆಂದೆನ್ನಿಸಿದರೆ ದಯವಿಟ್ಟು ಪ್ರಾಮಾಣಿಕವಾಗಿ ಹಾಗೆ ತಿಳಿಸಿ ಇಲ್ಲಿಯೇ ಉಳಿಯಿರಿ. ನಡಿಗೆ ದೀರ್ಘ, ಏರು ಕಡಿದು, ಭಾರ ಅತಿ. ಅಂಥಲ್ಲಿ ನಡುದಾರಿಯಲ್ಲಿ ನೀವು ನೀಳವೊಗ ಮಾಡಿದರೆ ಏರುಬ್ಬಸ ಬಿಟ್ಟರೆ ಮೊದಲು ನನಗೆ ಬರುವುದು ಕಡು ಕೋಪ, ಕರುಣೆ ಅಲ್ಲ. ಧೈರ್ಯ, ಸ್ವಂತೇಚ್ಛೆ ಇರುವವರು ಮಾತ್ರ ಬರಬೇಕು."

ಮೂವತ್ತಾರು ಮಂದಿಯಲ್ಲಿ ಐದು ಜನ ತಾವಾಗಿಯೇ ಹಿಂದೆ ನಿಂತರು. ಸಾಮಗ್ರಿ–ಹುಡುಗರ ಪಟ್ಟಿಯನ್ನು ಮೊದಲೇ ಬರೆದು ಸಿದ್ಧಪಡಿಸಿಕೊಂಡು ಆದರ ಪ್ರಕಾರ ಅವರಿಗೆ ಎಲ್ಲವನ್ನೂ ಹಂಚಿಕೊಡಲಾಯಿತು. ಅವನ್ನು ಹುಡುಗರ ಬೆನ್ನ ಮೇಲಿನ ಹ್ಯಾವರ್ ಸ್ಯಾಕಿನೊಳಗೆ ತುಂಬಿಸಿ ಪ್ಯಾಕ್ ಮಾಡಿಯೂ ಆಯಿತು. ಕೋಟ್ ಧರಿಸುವಷ್ಟು ಸುಲಭವಾಗಿ ಇದನ್ನು ಹಾಕಿ ಕೊಳ್ಳಬಹುದು, ಕಳಚಿಬಿಡಬಹುದು. ಮೂರು ಶೆರ್ಪಾರನ್ನು–ಅಂದರೆ ಒಟ್ಟು ಏಳು—ಹೆಚ್ಚಿಗೆ ನೇಮಿಸಿಕೊಂಡೆವು. ಅಕ್ಕಿ, ಹಿಟ್ಟು, ಸಕ್ಕರೆ ಮುಂತಾದ ಆಹಾರ ಪದಾರ್ಥ ಅವರ ತಲೆಯಮೇಲೆ. ಹುಡುಗಳಿಗೆ ದರಿ, ಬ್ಲ್ಯಾಂಕೆಟನ್ನು ಕಟ್ಟುವ ವಿಧಾನವನ್ನೂ ತೋರಿಸಿಕೊಡಲಾಯಿತು. ಬೆಟ್ಟ ಏರುವಾಗ ಭಾರ ಬೆನ್ನಮೇಲೆ ಬೀಳಬೇಕು, ಜೋಲುತ್ತಿರಬಾರದು. ಬಗ್ಗಿ ನಡೆಯುವಾಗ ಇದರಿಂದ ಸುಲಭವಾಗುವುದು. ಜೋಲುತ್ತಿದ್ದರೆ ಅಥವಾ ಕೈಗಳಿಂದ ನೇಲುತ್ತಿದ್ದರೆ ಬಲು ಬೇಗ ಹೆಗಲಿಗೆ, ಇಲ್ಲ, ಕೈಗಳಿಗೆ ತ್ರಾಸವಾಗುವುದು—ಮುಖ್ಯ ಇಷ್ಟು, ಕೈಗಳು ಖಾಲಿಯಾಗಿರಬೇಕು. ಆಕಾಶಕ್ಕೆ ಗಗನ ಯಾತ್ರಿಕನನ್ನು ಉಡಾಯಿಸುವಾಗ ವಹಿಸುವಷ್ಟೇ ಜಾಗರೂಕತೆ ಇಲ್ಲಿ ವಹಿಸಬೇಕು ನಡು ದಾರಿಯಲ್ಲಿ ಯಾವ ತೊಂದರೆಯೂ ಎದುರಾಗಕೂಡದು.

ಡಾಕ್ಟರರು ಮೊದಲು ತಾನು ಬರಲಾರೆ, ಬರಲು ಸಾಧ್ಯವಾಗಲಾರದು ಎಂದವರು ೧೪ರ ರಾತ್ರಿ ನಮ್ಮೆಲ್ಲರ ಪ್ರೋತ್ಸಾಹ (ಸ್ವಾರ್ಥವೂ ಇತ್ತು) ಸಂತೋಷದಿಂದ ತಾವು ಬರುವುದಾಗಿ ಹೇಳಿದರು. ಅಡುಗೆಯವರನ್ನು ಮೊದಲೇ ಗೊತ್ತುಪಡಿಸಿದ್ದೆವು. ನಮ್ಮ ಹೊಟ್ಟೆಯ ಮತ್ತು ಆರೋಗ್ಯದ ಹೊಣೆಯನ್ನು ಬೇರೆಯವರು ವಹಿಸಿಕೊಂಡರೆ ನಮಗೆ ಮಾಡಲಾಗದಿರುವ ಮಹಾಕಾರ್ಯ ಯಾವುದು ? ಅಡುಗೆಯವರು ಮೈಸೂರು ಪಾಕ, ಬಾದುಶಾ, ಚೌಚೌ ಮಾಡಿ ಮೂರು ಟಿನ್ನುಗಳಲ್ಲಿ ತುಂಬಿದರು. ರಾತ್ರಿಯಿಡೀ ನಿದ್ರೆಗೆಟ್ಟು ಬೆಳಗ್ಗಿನ ಉಪಾಹಾರ ಮಧ್ಯಾಹ್ನದ ಆಹಾರ ಸಿದ್ಧಪಡಿಸಿದರು. ಹೀಗೆ ೧೫ರಂದು ಮೇಲೆ ಹೋಗುವವರು ೩೧ ಹುಡುಗರು, ಶಿವಪ್ಪ, ನಾನು, ಡಾಕ್ಟರರು, ಅವರ ಆರ್ಡರ್ಲಿ, ಅಡುಗೆಯವರಿಬ್ಬರು, ಖಾನ್ಸಾಮರಾದಿಯಾಗಿ ಮೂವರು, ಜತೆಗೆ ಬಂದು ಸೇರಿದ ನನ್ನ ಭಾವ ಪುತ್ತೂರಿನ ಗೌರೀಶಂಕರ, ಸೇವಕರು ಏಳು ಜನ—ಹೀಗೆ ೪೮ ಜನರ ತಂಡ ಕುದುರೆಯೊತ್ತಿದೊಡನೆ ಕುದುರೆಮುಖದ ನೆತ್ತಿಗೆ ರಟ್ಟಲು ಸಿದ್ಧವಾಗಿ ೧೪ರ ರಾತ್ರಿ ಮಲಗಿತು.

ಆರೋಹಣ ಪರ್ವ

ಬುಧವಾರ ೧೫ನೆಯ ಫೆಬ್ರುವರಿ, ಶುಭ ಪ್ರಾತಃಕಾಲದ ೪-೩೦ ಗಂಟೆ. ಹೂಗಳು ಪರಿಮಳ ಹಾಡಿದುವು. ನಮ್ಮ ೪೮ ಮಂದಿಯ ತಂಡ ಎಲ್ಲ ಸಾಮಗ್ರಿಗಳನ್ನೊಳಗೊಂಡು ಪ್ರತಿಯೊಬ್ಬನ ಕೈಯಲ್ಲಿ ದೊಡ್ಡ ಬಡಿಗೆ ಹಿಡಿದು ಮೇಲೇರಲು ಸಿದ್ಧವಾಗಿ ನಿಂತಿತು. ಪುನಃ ಕೂಲಂಕಷವಾಗಿ ಪರಿಶೀಲಿಸಿದ ತರುವಾಯ ನಾರಾಯಣ್‌ಸಿಂಗರಿಗೆ ವರದಿ ಸಲ್ಲಿಸಿದೆ. ಅವರು ಹೀಗೆಂದರು "ನನಗೆ ಅತ್ಯಂತ ಹೆಮ್ಮೆಯ ದಿನವಿಂದು. ನಮ್ಮ ಆರೆಂಟು ತಿಂಗಳುಗಳ ಕನಸು ನನಸಾಗುತ್ತಿರುವ, ಶ್ರಮ ಫಲವೀಯುತ್ತಿರುವ ಸಮುಹೂರ್ತ ಈಗ ಬಂದಿದೆ. ನಿಮ್ಮ ಸಾಹಸ ಜಯಪ್ರದವಾಗಲಿ. ನಿಮಗೆ ಮಂಗಳವಾಗಲಿ. ಹೋಗಿ ಸುಖವಾಗಿ ಮರಳಿ ಬನ್ನಿ. ನಾನಿನ್ನು ನಿಮ್ಮನ್ನು ಸ್ವಾಗತಿಸುವುದು ಬೆಂಗಳೂರಿನಲ್ಲಿಯೇ."

೧೨ನೆಯ ಮೈಸೂರು ಹೊರಟಿತು. ಜಯ ಜಯಕಾರ ಗಿರಿಗಹ್ವರಗಳಲ್ಲಿ ಅನುರಣಿತವಾಗುತ್ತಿದ್ದಂತೆ, ತುಪಾಕಿ ಸಿಡಿಮದ್ದುಗಳ ಆಸ್ಫೋಟನೆ ದಿಗಂತವನ್ನು ಭೇದಿಸುತ್ತಿದ್ದಂತೆ ೧೨ನೆಯ ಮೈಸೂರು ಹೊರಟಿತು. ತಂಗಾಳಿ ಮೃದುವಾಗಿ ತೀಡುತ್ತಿದ್ದಂತೆ ಸ್ವಚ್ಛಾಕಾಶದಲ್ಲಿ ತೀಕ್ಷ್ಣ ನಕ್ಷತ್ರಗಳು ಮಂಗಳ ಹಾಡುತ್ತಿದ್ದಂತೆ, ಗಗನದೆಡೆಗೆ ೧೨ನೆಯ ಮೈಸೂರು ಹೊರಟಿತು. ಮಧ್ಯಾಕಾಶದಲ್ಲಿ ವೃಶ್ಚಿಕ ಪ್ರಶ್ನೆಯ ರೂಪದಲ್ಲಿ ನಿಂತಿತ್ತು. ಧನುರಾಶಿಯ ಕಿರಿ ಚಮಚ ಮಕ್ಕಳಿಗೆ ಹಾಲೂಡಿಸುವ ಭಂಗಿಯಲ್ಲಿತ್ತು. ಕಾಡು ನಿಶ್ಶಬ್ದ. ಪೂರ್ವ ದಿಗಂತದಲ್ಲಿ ಕ್ಷಣ ಕ್ಷಣ ಷೋಡಶಿಯ ಮುಖವರ್ಣ ವಿನ್ಯಾಸ ಜಗಮಗಿಸುತ್ತಿತ್ತು. ಆ ಸಮಯದಲ್ಲಿ ೧೨ನೆಯ ಮೈಸೂರು ಹೊರಟಿತು.

ಓಸಿಯವರು ಬಲುದೂರ ಬಂದು ನಮ್ಮನ್ನು ಬೀಳ್ಕೊಟ್ಟರು. ಸಾಗರೋಲ್ಲಂಘನ ಪ್ರಾರಂಭದ ಹನುಮಂತನ ಮನಃಸ್ಥಿತಿ ನಮ್ಮದಾಗಿತ್ತು. ಸ್ವಾಮಿ, ನಿಸಾರರು ತಳದ ಶಿಬಿರಾಧಿಪತಿಗಳಾಗಿ ನಿಂತರು. ನಿಸಾರರೆಂದರು

ಅಲ್ಲಿ ನಾಡಿನೆತ್ತರದಲ್ಲಿ
ನಕ್ಷತ್ರಗಳ ಚಿರವಿಲಾಪದಲ್ಲಿ
ಸಾಹಸಗೈವ ನಿಮಗೆ
ಇದೊ ವಂದನೆ—ಅಭಿ
ವಂದನೆ

"ಹೋಗ್ಬಿಟ್ಟು ಬನ್ನಿ ಸಾರ್! ಈ ಕಡೆ ಚಿಂತೆ ಮಾಡಲೇಬೇಡಿ. ನಿಮಗೇನು ಸಹಾಯ ಬೇಕಾದರೂ ಹೇಳಿಕಳಿಸಿ" ಎಂದು ಕರುಣಾರ್ದ್ರ ಹೃದಯದಿಂದ ಸ್ವಾಮಿಯವರೆಂದರು. ದೈಹಿಕ ಕಾರಣಗಳಿಂದ ಬರಲಾಗದ ಹುಡುಗರ ಮುಖ ನೋಡಿದಾಗ ಕಿಂದರಿ ಜೋಗಿಯ ಹಿಂದೆ ಹೋಗಲಾಗದೇ ಉಳಿದುಹೋದ ಹುಡುಗರ ನೆನಪು ಬರುತ್ತಿತ್ತು.

"ಏನ್ಮಾಡೋದ್ಸಾಮೀ! ಲಾರಿ ಐತೆ, ಇಲ್ಲಿ ಡ್ಯೂಟಿ ನೋಡ್ಬೇಕಲ್ಲ. ಇಲ್ಲವಾದ್ರೆ ನಾನೂ ಬಂದ್ಬಿಡೋವೆ. ಇದೆಲ್ಲ ಏನು ಮಹಾ" ಎಂದು ಉದ್ಗಾರವೆತ್ತಿದವನು ಅನ್ಸಾರಿ. ಅವನು ಮಲಯಾ ಬರ್ಮಾ ಜಂಗಲುಗಳಲ್ಲಿ ತಿಂಗಳುಗಟ್ಟಲೆ ಅಲೆದು (ಎರಡನೆಯ ಮಹಾಯುದ್ಧದಲ್ಲಿ) ಭಾರತಕ್ಕೆ ಮರಳಿಬಂದ ದಿಟ್ಟ. ನಾರಾಯಣ್‌ಸಿಂಗರ ತಂದೆಯವರ ಪರಿಸ್ಥಿತಿ ಸ್ವಲ್ಪ ಕೆಟ್ಟಿತ್ತಂತೆ. ಹಾಗಾಗಿ ಅವರು ಅದೇ ದಿನ ಬೆಂಗಳೂರಿಗೆ ಮರಳುವವರಿದ್ದರು. "ಸಾಧ್ಯವಾದರೆ ಅಶ್ವತ್ಥರನ್ನು ಕಳಿಸುತ್ತೇನೆ, ವರ್ಗ ಬೇರೆ ಇದೆಯಲ್ಲ. ಇನ್ನುಳಿದುದನ್ನೆಲ್ಲ ನೀವೇ ಸುಧಾರಿಸಬೇಕು" ಎಂದು ಮರಳಿದರು.

"ನಮ್ಮ ಕುದುರೆಮುಖ ಗೂಡ್ಸ್ ಬಂಡಿಯ ಎಂಜಿನ್ ಶಿವಪ್ಪ, Last Vehicle(LV) ನಾನು, ಕಂಬಿ ಮೆಂಗಿಲ ಶೇಣವ; ಈ ಬಂಡಿ ಇರುವೆಗಳ ಸಾಲಿನಂತೆ ಆ ಕತ್ತಲೆಯಲ್ಲಿ ಕಾಡಿನ ತರಗೆಲೆಗಳ ಮೇಲೆ ಹರಿಯುತ್ತ ಸಾಗಿತು. ಅರುಣೋದಯ ಕಾಲದಲ್ಲಿ ಕಾಡು ಮಸಿಗಪ್ಪು, ಲಾಂದ್ರ ಟಾರ್ಚುಗಳ ಬೆಳಕು ಕತ್ತಲೆಯೊಡನೆ ಕಣ್ಣಮುಚ್ಚಾಲೆಯಾಟವಾಡುತ್ತ ಕತ್ತಲೆಯ ವೈಭವವನ್ನು ಇನ್ನೂ ಹೆಚ್ಚಾಗಿ ತಿಳಿಯಲು ಸಹಾಯಮಾಡುತ್ತಿದ್ದುವು.

ಕತ್ತಲೊಡನೆ ಪಂತವಿಲ್ಲವಕೆ
ಅದರೊಡನಜ್ಜಿಯಾಟದ ಬಯಕೆ — ಪುತಿನ

ದೂರದಲ್ಲಿ ಕಾಡು ಮರಗಳ ಮರೆಯಲ್ಲಿ ಬೆಟ್ಟಗಳ ಅಂಚಿನಿಂದಾಚೆಗೆ ಬಣ್ಣಗಳ ಆಂದೋಳನವೇ ನಡೆದಿತ್ತು. ಆ ರೋಹಿತದ ಸಂಚಾರ ತೀವ್ರವಾದಂತೆ ಕತ್ತಲೆಯಾಟ ತಗ್ಗತೊಡಗಿತು. ಕಾಡು ಕೋಳಿಗಳು ಪಟಪಟನೆ ಹಾರಿ ಮರೆಯಾದುವು. ಬೆಳಕಿನ ಗಡಿಗೆ ಯೊಡೆಯಿತು. ಬೇಂದ್ರೆ ನೆನಪಾದರು "ಗಿಡಗಂಟಿಯಾ ಕೊರಳೊಳಗಿಂದ ಹಕ್ಕಿಗಳಾ ಹಾಡು—ಹೊರಟಿತು ಹಕ್ಕಿಗಳಾ ಹಾಡು, ಗಂಧರ್ವರಾ ಸೀಮೆಯಾಯಿತು ಕಾಡಿನಾ ನಾಡು ಕ್ಷಣದೊಳು—ಕಾಡಿನಾ ನಾಡು: ಇದು ಬರಿ—ಬೆಳಗಲ್ಲೋ ಅಣ್ಣಾ!" ನಕ್ಷತ್ರ ಚಿತ್ರಗಳು ಯಕ್ಷಗಾನ ಬಯಲಾಟದ ಬಣ್ಣದ ವೇಷಧಾರಿಗಳು ರಾತ್ರಿ ಮುಗಿಯುವಾಗ ಕಂಡಂತೆ ತೇಜೋಹೀನವಾಗಿ ಕಂಡವು. ಸ್ವಲ್ಪ ಹೊತ್ತಿನಲ್ಲಿ ರಂಗ ಸ್ಥಳದಲ್ಲಿಯೇ ಅಂತರ್ಧಾನವಾದುವು. ಮುಂಗಿಲ ಶೇಣವ "ಓ ಹೋ ಹೋ ಹೋಯ್" ಎಂದು ಕೇಕೆಯಿಡುತ್ತ ಹಿಂದಿನವರ ಮರು ಕೂಗನ್ನು ಆಲಿಸುತ್ತ ಮುಂದೆ ಮುಂದೆ ದೊಣ್ಣೆ ಬೀರಿ ಬೀಸಿ ಊರಿ ನಡೆದ. ತಲೆಯ ಮೇಲೆ ಆವನಿಗೂ ಒಂದು ಹೊರೆಯಿತ್ತು. ಕಾಡಿನ ನರುಗಂಪು, ಮುಂಜಾವಿನ ಚೈತನ್ಯದ ಮಾದಕತೆ ಇವುಗಳಿಂದ ಆ ಒಂದು ಗಂಟೆಯ ನಿರಂತರ ನಡಿಗೆ ನಮಗೆ ತಿಳಿದದ್ದು ನೀರ ಬುಗ್ಗೆಯ ಸಮೀಪ ಹರಡಿ ಕುಳಿತಾಗಲೇ. ಮುಂಗಿಲ ಶೇಣವನ ಅಳತೆಯ ಪ್ರಕಾರ ನಾವು ನಡೆದದ್ದು ಕೇವಲ ಒಂದೇ ಮೈಲಿ! ಟೊಮೆಟೋ, ಬಿಸ್ಕತ್, ನೀರು ಸೇವಿಸಿ ಹೊಸ ಹುರುಪಿನಿಂದ ಮುಂದಿನ ಪ್ರಯಾಣ ತೊಡಗಿದೆವು. ಬೆಳ್ಳಂಬೆಳಗು ಸೊರೆಹೋಗಿತ್ತು. ಕುರುಚಲು ಗಿಡ, ಮುಳ್ಳು ಪೊದೆ ಎಲ್ಲ ವನ್ನೂ ದಾಟಿ ಗೊಂಡಾರಣ್ಯದ ನಡುವೆ ದಾರಿ ಸಾಗಿತ್ತು. ಎಲ್ಲಿವರೆಗೋ ಜೀಪ್ ಹೋಗಲು ಮಾಡಿದ ಬಳಸು ದಾರಿ ಬೆಟ್ಟದ ಮೈಯನ್ನು ಆವರಿಸಿಕೊಂಡು ಹರಿಯುತ್ತಿತ್ತು. ಆದರೆ ನಮ್ಮದು ನೇರ ಕಾಲ್ದಾರಿ. ಚಕ್ಕನೆ ರಾಜಮಾರ್ಗ, ಜೀಪ್ ದಾರಿಯ ಎರಡು ಫರ್ಲಾಂಗನ್ನು ನಾವು ನೂರು ಹೆಜ್ಜೆಗಳಲ್ಲಿ ನೇರವಾಗಿ ಹತ್ತಿ ಮುಗಿಸುತ್ತಿದ್ದೆವು. ಆದರೆ ಎಂಥ ಹೆಜ್ಜೆ ಯದು! ದೈತ್ಯದಾಪು. ಸ್ವಲ್ಪ ಮುಂದಕ್ಕೆ ಬಗ್ಗಿ ಊರುಗೋಲನ್ನೂರಿ ಹೆಜ್ಜೆಗೂ ಉಸಿ ರಾಟಕ್ಕೂ ಲಯ ಹೊಂದಿಸಿ ನಿಧಾನವಾಗಿ ನಡೆಯಲು ಹೊರಟರೆ ಎಷ್ಟು ದೂರ ನಡೆ ದರೂ ಆಯಾಸವಾಗುವುದಿಲ್ಲ. ಉಸಿರು ಸೇದಿ ಮೇಲೆ ಮೇಲೆ ಬರುವುದಿಲ್ಲ. ಬೆಟ್ಟ ವೇರುವಾಗಲಂತೂ ಆರಂಭಶೂರತ್ವ ಸಲ್ಲದೇ ಸಲ್ಲದು. ಇಲ್ಲಿ ಬೇಕಾದದ್ದು ಮಿಂಚುಳ್ಳಿಯ ಚಿಮ್ಮುವಿಕೆಯಲ್ಲ, ಗಜಗರಾಜನ ಮಂದಮನ.

ದೈತ್ಯಾಕಾರದ ಮರಗಳೆಡೆಯಿಂದ ದೂರದ ಚಿಕ್ಕ ಚಿಕ್ಕ ದಿಬ್ಬಗಳ ಮೇಲೆ ನೇಸರು ನಲಿ ಯುತ್ತಿದ್ದುದನ್ನು ಕಂಡೆವು, ಎತ್ತರದ ಹಲವಾರು ಬೋಳು ಗುಡ್ಡೆಗಳು ರಸಮೂರ್ಛೆ ಯಲ್ಲಿ ಮಲಗಿದ್ದುವು. ಸುತ್ತಲಿನ ಕಾಡು ನಡೆಯಲಿರುವ ದಾರಿ, ಏರಲಿರುವ ಎತ್ತರ ಬಹಳ ಉಂಟು ಎಂದು ಎಚ್ಚರಿಸುತ್ತಿತ್ತು. ನಮ್ಮ ಮೇಲೆಯೇ ಇದ್ದ ಶಿಖರ ನಮಗೆ ಕಾಣುತ್ತಿರ ಲಿಲ್ಲ. ಏಕೆಂದರೆ ನಾವು ಬೆಟ್ಟದ ಮೈ ಮೇಲಿನ ಕೊರಕಲು ಕಾಡುಮೇಡುಗಳಲ್ಲಿ ನಮ್ಮ ತಲೆ ಕೆಡಿಸಿ ಕೊಂಡಿದ್ದೆವು. ಎಳೆಗಳ ಗೊಂದಲದಲ್ಲಿ ಕಸೂತಿಯನ್ನು ನೋಡಲಾರದವರಾಗಿ ದ್ದೆವು. ಈ ಗೊಂದಲದ ಮಧ್ಯೆ ದಾರಿಯಿಲ್ಲ. ಆದರೆ ಹಾದಿ ಹೊಡೆದು ಗುರಿ ತಪ್ಪದಂತೆ ಕೊಂಡೊಯ್ಯುತ್ತಿದ್ದವನು ಮುಂಗಿಲ ಶೇಣವ. ಬೆಟ್ಟವೇರುವಾಗ ದಿಕ್ಕು, ದಾರಿ ತಪ್ಪು ವುದು ಬಲು ಸುಲಭ. ಅಸಂಖ್ಯಾತ ಕಾಲು ದಾರಿಗಳು ಅಲ್ಲಿ ಸಂಧಿಸುತ್ತಿರುತ್ತವೆ. ಈ

ತಂತಿ ಒಂದ್ರಿಯಲ್ಲಿ ಒಂದು ಸ್ವಲ್ಪ ವ್ಯತ್ಯಾಸವಾದರೂ ನಾವು ಎಲ್ಲಿಗೋ ಹೋಗಿರುತ್ತೇವೆ. ಎಷ್ಟೋ ಸಲ ಹೊರಟಲ್ಲಿಗೇ ಮರಳಿ ಬಂದು ಭೂಮಿ ಉರುಟು ಎನ್ನುವುದನ್ನು ಚೆನ್ನಾಗಿ ತಿಳಿದುಕೊಳ್ಳುತ್ತೇವೆ. ಇನ್ನೊಂದು ಗಂಟೆ ಚುರುಕಾಗಿ ನಡೆದೆವು. ಗಂಟೆ ಎಂಟು ದಾಟಿತ್ತು. ಪುನಃ ಐದು ಮಿನಿಟುಗಳ ವಿರಾಮ.

"ಈಗೆಷ್ಟು ದೂರ, ಅಜ್ಜಾ ?"

"ಎರಡರಿಂದ ಎರಡೂವರೆ ಮೈಲಿನ ಒಳಗೆ, ಹ್ವಾ !"

"ಅಷ್ಟೇ ?"

"ಮತ್ತೇಂಥಾದ್ದು ! ನೀವು ಹೀಗೆ ನಡೆದರೆ ಸಾಯಂಕಾಲ ಹೇವಳಕ್ಕೆ." ಹತ್ತು ಮೈಲಿ ದೂರ ಹತ್ತುವಾಗ ಹೇವಳ ಗ್ರಾಮ. ಅಲ್ಲಿ ನಾವು ಮಧ್ಯಾಹ್ನದ ಊಟ ತೀರಿಸಬೇಕೆಂದು ಯೋಜನೆ. ಆದರೆ ಈ ಹುಡುಗರ ನಡಿಗೆ ಬಲು ನಿಧಾನವಾಯಿತಲ್ಲ. ಆಗ ವಿರಾಮ ಸಮಯವಾಗಿದ್ದರೂ ಹುಡುಗರು ಕೂರಲಿಲ್ಲ, "ಆಡುಪಾಂಬೇ" (ಪುನ್ನಾಗವರಾಳಿ) ರಾಗದಲ್ಲಿ

ಕಾಶಿಗ್ಹೋಗುವೆವು, ವಿ-
ಶ್ವೇಶ್ವರನ ನೋಡೆ
ಕಾಡು ಬಂತೂ, ಕತ್ತಲೆ ಆಯಿತು
ಕಳ್ಳರು ಬಂದರು
ಅಯ್ಯೋ ಕಚಿಪಿಚಿ ಕಿಚಿಪಿಚಿ !

ಎಂದು ಅಭಿನಯಪೂರ್ವಕವಾಗಿ ಹಾಡಿದರು, ಕುಣಿದರು. ಪಾಪ ವಿಧವೆಯರಂತೆ, ಪುಣ್ಯಸಂಪಾದನೆಗಾಗಿ ಕಾಶಿಯತ್ತ ಹೋಗುತ್ತಿದ್ದಾಗ ಹೀಗಾಗಬೇಕೆ ? ಕಚಿಪಿಚಿ ಎಂದು ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಹರಡಿಹೋಗುವಾಗಲಂತೂ ನಮಗೆ ಬಲು ಬೇಸರವಾಯಿತು. ಶೇಣವನೂ ಇವರ ಜತೆ ನಲಿದು ನರ್ತಿಸಿದ. ಮುಂದಿನ ನಡಿಗೆ ಇನ್ನಷ್ಟು ಚುರುಕಾಗಬೇಕೆಂದು ನಾನು ಆದೇಶ ಕಳಿಸಿದೆ. "ಆ ಅಜ್ಜನ ಹುರುಪು ನಮಗೆ ಬರಬಾರದೇ" ಎಂದು ಮೂದಲಿಸಿದೆ. ಬೆಟ್ಟವೇರಲು ಅಭ್ಯಾಸವಿರಬೇಕು. ದಿನ ಬೆಳಗಾದರೆ ಸೈಕಲ್, ಸಿಟಿಬಸ್, ಪೇಟೆಯ ಧೂಳು, ಹೊಗೆ ಇವುಗಳ ಮಧ್ಯೆ ಬೆಳೆಯುವ ಮಕ್ಕಳು. ಮನೆಯಲ್ಲೂ ಕಿಷ್ಕಿಂಧೆ, ಶಾಲೆ ಕಾಲೇಜುಗಳಲ್ಲಿಯೂ ಕಿಷ್ಕಿಂಧೆ, ರೇಷನ್—ಇಂಥ ವಾತಾವರಣದಿಂದ ಒಮ್ಮೆಲೇ ಮುಕ್ತರಾಗಿ ಅರಣ್ಯ ಪರ್ವತಗಳ ಹುಚ್ಚು ಹೊಳೆಗೆ ಬಿದ್ದರೆ ತತ್ತರಿಸಿಹೋಗುತ್ತಾರೆ. ಒಂದು ಸಲ ಮುಳುಗಿ ನೀರು ಕುಡಿದ ಹೊರತು ಸಾಹಸವೆಂದರೇನೆಂದೂ ತಿಳಿಯದ ದುರ್ಬಲಿಗಳಾಗಿರುತ್ತಾರೆ. ನಡಿಗೆ ಚುರುಕಾಯಿತು, ಏರು ಕಡಿದಾಯಿತು, ಹೊತ್ತ ಸಾಮಾನಿನ ತೂಕ ಹೆಚ್ಚಾಯಿತು. "ವೇಗ ಒಂದು ವಿಧದ ಶಕ್ತಿಯಷ್ಟೆ ? ಶಕ್ತಿಗೆ ದ್ರವ್ಯ ರಾಶಿಯಿದೆಯಲ್ಲವೇ ಸಾರ್ ಐನ್‌ಸ್ಟೈನ್ ಪ್ರಕಾರ ? ಆದ್ದರಿಂದ ನಮ್ಮ ನಡಿಗೆಯ ವೇಗ ಹೆಚ್ಚಾದಂತೆ ಸಾಮಾನಿನ ತೂಕ ಹೆಚ್ಚಾಗುವುದು ಈ ಕಾರಣದಿಂದಾಗಿರಬಹುದೇ ?" ಎಂದು ಕಾಸ್ಮಿಕ್ ಪ್ರಶ್ನಿಸಿದ.

"ಖಂಡಿತವಾಗಿಯೂ ಅಲ್ಲ ಎರಡನೇ ಭಾಗಕ್ಕೆ. ಮೊದಲನೆಯ ಭಾಗಕ್ಕೆ ಅಷ್ಟೇ ಖಂಡಿತವಾಗಿ ಹೌದು."

"ಅಂದರೆ, ಸಾರ್ ?"

"ಐನ್‌ಸ್ಟೈನರ ವೇಗ-ಶಕ್ತಿ-ದ್ರವ್ಯರಾಶಿ ಅರಿವಾಗುವುದು ಬೆಳಕಿನ ವೇಗ ಅಥವಾ ಅದರ ಸಮೀಪದ ವೇಗದಲ್ಲಿ ಚಲಿಸಿದಾಗ ಮಾತ್ರ. ನಮಗೀಗ ತೂಕ ಹೆಚ್ಚಾದಂತೆ ಅನ್ನಿಸುವುದು, ಒಂದು, ಹೊತ್ತ ಸಾಮಾನಿನ ಒತ್ತಡ ಹೆಚ್ಚಾಗುವುದರಿಂದ ಮತ್ತು ಎರಡು, ಮನಸ್ಸಿನೊಳಗೆ ನಾವೇನೋ ಮಹಾ ಸಾಧಿಸುತ್ತಿದ್ದೇವೆ ಎಂಬ ಭ್ರಮೆ ಮೂಡುವುದರಿಂದ."

ಐನ್‌ಸ್ಟೈನೋ ನಾನ್‌ಸ್ಟೈನೋ ಭಾರದಿಂದ ಹುಡುಗರು ತೊನೆದಾಡಿದರು. ಹ್ಯಾವರ್ ಸ್ಯಾಕ್ ಕುಸಿಯಿತು. ಪಕ್ಕಕ್ಕೆ ಕಟ್ಟಿದ್ದ ಬ್ಲ್ಯಾಂಕೆಟ್‌ಡರಿಗಳ ಗಂಟು ಸಡಿಲವಾಗಿ ಜೋಲಿದುವು. ಶ್ರೀಧರನ್, ವಾಸು ಅಡ್ಡಗಾಲಿಡುತ್ತ ಹಿಂದೆ ಹಿಂದೆ ಉಳಿದರು. ಇವರ ಜೊತೆಗೆ ನಾಗರಾಜ, ಜಗನ್ನಾಥ, ಚಂದ್ರಶೇಖರ. ಗೂಡ್ಸ್ ಬಂಡಿ ತುಂಡಾಯಿತು. ಪ್ರತಿಯೊಬ್ಬನಿಗೂ ನಿರಖಾದ ಸ್ಥಾನವನ್ನು ವಿಧಿಸಿದ್ದೆ. ಹಾಗೆ ಮಾಡದಿದ್ದರೆ ಉದ್ದವಾದ ಅಂಕುಡೊಂಕಾದ ದಾರಿಯಲ್ಲಿ ಒಬ್ಬನು ಮಧ್ಯೆ ಜಾರಿದರೆ, ಬಿದ್ದರೆ, ಇಲ್ಲ, ಕೆಲಸ ತಪ್ಪಿಸಲು ಅಡಗಿದರೆ ಪತ್ತೆ ಹಚ್ಚುವುದು ಸಾಧ್ಯವಿಲ್ಲ. ಈ ತರುಣರು ಹೀಗೆ ಹಿಂದೆ ಹಿಂದೆ ನಿಂತು ಆಳುಮೋರೆಯಿಂದ ಇತರರ ಮುನ್ನಡೆಗೆ ಅಡ್ಡಿ ಮಾಡಿದಾಗ ನನಗೆ ಬಂದದ್ದು ಸಿಟ್ಟು. "ಸ್ವಲ್ಪ ವಿಶ್ರಾಂತಿ ಪಡೆದು ಹಿಂದಿನಿಂದ ಬರುತ್ತೇವೆ" ಎಂದನೊಬ್ಬ.

"ನಿನ್ನೆ ಏನು ಹೇಳಿದ್ದೆ ? ೧೨ನೆಯ ಮೈಸೂರಿಗೆ ವಿಶ್ರಾಂತಿ ಪದ ಗೊತ್ತಿಲ್ಲ. ನಿಮಗೆ ಎರಡೇ ದಾರಿ—ಒಂದೋ ಈ ಕ್ಷಣ ಹಿಂದೆ ಹೋಗಿ ತಳದ ಶಿಬಿರದಲ್ಲಿ ವಿಶ್ರಾಂತಿ ಪಡೆಯಿರಿ ; ಇಲ್ಲ, ಚುರುಕಾಗಿ ಲೈನಿನಲ್ಲಿ ನಡೆಯಿರಿ. ಕೂಟಕ್ಕೆ ಸಾಮೂಹಿಕವಾಗಿ ದೊರೆಯುವ ವಿಶ್ರಾಂತಿ ನಿಮಗೆ ಪ್ರತ್ಯೇಕವಾಗಿ ಸಿಕ್ಕಲಾರದು, ನಿಮ್ಮ ತೂಕವನ್ನು ನೀವೇ ಹೊರಬೇಕು. ನರಪೇತಲರು ಇಲ್ಲಿ ಬೇಡ."

ಆಯಾಸವೆನ್ನುವುದು ಮನಸ್ಸಿನ ಒಂದು ಸ್ಥಿತಿಯೇ ವಿನಾ ದೇಹದ್ದಲ್ಲ ಎಂದು ನಾನು ಪ್ರಾಯೋಗಿಕವಾಗಿ ಕಂಡುಕೊಂಡಿದ್ದೇನೆ. ಯುಕ್ತಾಹಾರ, ವಿಹಾರ—ಶ್ರಮವೆಲ್ಲಿಂದ ಬರಬೇಕು ? ಮನಸ್ಸು, ದೇಹವಿಜ್ಞಾನಗಳನ್ನು ಅಭ್ಯಾಸಮಾಡಿದವರು ಒಂದು ವಿಚಾರವನ್ನು ಖಚಿತವಾಗಿ ಹೇಳಿದ್ದಾರೆ—ಒಬ್ಬ ಮನುಷ್ಯ ಸಾಮಾನ್ಯವಾಗಿ ಅವನ ಮನಸ್ಸಿನ ಮತ್ತು ದೇಹದ ಶಕ್ತಿಗಳ ಅರ್ಧದಷ್ಟನ್ನೂ ಸರಿಯಾಗಿ ಸದ್ವ್ಯಯಿಸುತ್ತಿಲ್ಲ ; ಇವು ಅತ್ಯಂತ ಸೊಗಸಾದ ರಚನೆಗಳು ಎಂದು. ಗಾಣದೆತ್ತಿನ ಜಾಡಿನಿಂದ ಸ್ವಲ್ಪ ಹೊರಗೆ ಅವನು ಚಲಿಸಿದರೆ ಅತ್ಯಾಯಾಸಗೊಂಡಂತೆ ಭ್ರಮಿಸುತ್ತಾನೆ. ಇಪ್ಪತ್ತರ ಹರೆಯದ ಸ್ವಯಂಸ್ಫೂರ್ತಿಯಿಂದ ಸಾಹಸಪ್ರದರ್ಶನಕ್ಕಾಗಿಯೇ ಸಾಕಷ್ಟು ಅಭ್ಯಾಸಮಾಡಿ ಬಂದ ಹುಡುಗರು ಅದೆಂಥ ಚೇತನದ ಚಿಲುಮೆಗಳಾಗಿರಬೇಡ ? ಇಂಥವರಿಗೆ ವಿಶ್ರಾಂತಿಯೇ ? ಈ ಹಿನ್ನೆಲೆಯಿಂದ ಆ ಎತ್ತರದಲ್ಲಿ "ಕರುಣೆ ಅನುಕಂಪ" ಪದಗಳಿಗೆ ಅರ್ಥ ಬೇರೆ. ಸ್ಫೂರ್ತಿ ಸಾಂಕ್ರಾಮಿಕವಲ್ಲ. ಆಯಾಸ ಹೌದು. ಆಯಾಸಗೊಂಡವರ ಪತ್ತೆ ಮತ್ತೆ ಆಗಲಿಲ್ಲ. ಅಲ್ಲಲ್ಲಿ ಏರುಬ್ಬುಸಬಿಡುತ್ತ ಕುಳಿತದ್ದೂ ಕಾಣಲಿಲ್ಲ.

ಕಾಡಿನ ಸೆರಗು ದಾಟಿ, ಚಿಕ್ಕಪುಟ್ಟ ಗುಡ್ಡೆಗಳ ಕಲ್ಲುರಾಶಿಗಳ ತಲೆ ತುಳಿದು ನಡಿಗೆ ಮುಂದುವರಿಯಿತು. ಅಲ್ಲಲ್ಲ ಆಳೆತ್ತರ ಬೆಳೆದಿದ್ದ ಹುಲ್ಲು ಕೇವಲ ಕೆಲವೇ ದಿನಗಳ ಹಿಂದೆ

ಬೆಂಕಿ ಬಿದ್ದು ಸುಟ್ಟು ಮಸಿಯಶಾಗಿಹೋಗಿತ್ತು. ಆ ನಿರ್ಜನ ಪ್ರದೇಶದಲ್ಲಿ ಹುಲ್ಲು ಹುಟ್ಟುವುದೇಕೋ ? ಸುಟ್ಟು ಹೋಗುವುದೇಕೋ ? ದಾರಿಯಲ್ಲಿ (ದಾರಿಯಲ್ಲ—ನಡೆದದ್ದೇ ದಾರಿ) ಎಲ್ಲಿಯೂ ಜನವಸತಿ ಇಲ್ಲ. ಯಾವ ತರಹದ ವ್ಯವಸಾಯವೂ ಇಲ್ಲ. ನಾಗರಿಕತೆಯ ಜಾಡ್ಯವೇ ಅಲ್ಲಿಲ್ಲ. ಒಂದು ಕೊರಕಲಿಗಾಗಿ ಸಾಗುವಾಗ "ಈ ದಾರಿಗಾಗಿ ಬರುವವರು ಮನೆಯಲ್ಲಿ ಹೆಂಡತಿ ಮಕ್ಕಳಿಗೆ ಹೇಳಿ ಬರುವುದು ಒಳ್ಳೆಯದು. ಕ್ರೂರ ಪ್ರಾಣಿಗಳಿವೆ—ಎಚ್ಚರಿಕೆ" ಎಂದು ಬಲವಾಗಿ ಕೆತ್ತಲ್ಪಟ್ಟಿತ್ತು. ಹೇಗೂ ನಾವು ದೊಡ್ಡ ಪಟಾಲಾಂ, ಮೇಲಾಗಿ ರೈಫಲ್ ಇದೆಯಲ್ಲ. ಅಂತೂ ಆ ಬರೆಹದ ಹಿಂದೆ ಕತೆಯೊಂದು ಅಡಗಿರಬಹುದು.ಮುಂದೆ ನಿಂತಾಗ ಶೇಣವನನ್ನು ಕೇಳಿದರಾಯಿತೆಂದುಕೊಂಡೆ. ಮಧ್ಯಾಹ್ನ ೧೨ ಗಂಟೆ ದಾಟಿತು. ನಮ್ಮ ಪ್ರಯಾಣ ಕಾಲ ೬ ಗಂಟೆಯನ್ನು ಮೀರಿತು. ಬೋಳು ಗುಡ್ಡೆಯ ಮೇಲೆ ಎಲ್ಲಿಗೋ ಏನೋ ಗೊತ್ತಿಲ್ಲದೇ ನಡೆಯುತ್ತಿದ್ದೇವೆ. ಕಾಡುಗಳ ನೆರಳಿನಿಂದ ಪಾರಾಗಿ ಬೀದಿದ್ದೇವೆ. ಎದುರಿಗೆ ಗುಂಡ್ಡೆ ಗುಡ್ಡೆಗಳ ರಾಶಿ. ಹಿಂದೆ ಇಳಿದಿಳಿದು ಮಾಯವಾಗುವ ಕಾಡಿನ ಹಸುರು.

"ಅಜ್ಜಾ ದೂರವಿನ್ನೆಷ್ಟು ?"

"ಓ, ಇಲ್ಲಿಯೇ—ಅದು ನೋಡಿ ಗದ್ದೆ ಅಲ್ಲವೋ ? ಆದರ ಆಚೆ ಬದಿ ಹೇವಳ ಮನೆ."

"ಹಾಗಾದರೆ ೧೦ ಮೈಲಿ ಬಂದಂತಾಯಿತೇ ?"

"ಒಂದು ಅಡಿಯೂ ಕಮ್ಮಿ ಸುತರಾಂ ಇಲ್ಲ, ಹು" ಮುಂಗಿಲ ಶೇಣವನ ಖಂಡಿತ ವಾಣಿ.

"ಅಲ್ಲ—ಹಿಂದೆ ನೀವು ಹೇಳಿದ ದೂರ ಎಲ್ಲ ತಪ್ಪೇ ? ಒಳ್ಳೇ ಜೋಕುಗಾರರಪ್ಪ ನೀವು."

ಹೀಗೆ ಹುಡುಗರಿಗೆ ಹುರಿದುಂಬಿಸಿ, ನಡೆದ ದೂರವನ್ನು ಕಡಿಮೆಯೆಂದು ಹೇಳಿ ಬೆಳಗ್ಗಿನ ತಂಪಿನಲ್ಲಿ ದೂರ ದೂರ ಚುರುಕಾಗಿ ನಡೆಸಿ ದೂರ ತಿಳಿಯದಂತೆ ನಾಲ್ಕು ಸಾವಿರ ಅಡಿ ಎತ್ತರಕ್ಕೆ ತಲಪಿಸಿದ ಮುಂಗಿಲ ಶೇಣವ. ಅಲ್ಲಿ ಕಾಫಿ ತೋಟ, ಯಾಲಕ್ಕಿ ಫಸಲು, ಬಾಳೆಮರ, ಕಿತ್ತಳೆ, ಸಾಲು ಗದ್ದೆ ಇದ್ದುವು. ಮಲೆನಾಡಿನ ಒಣ ದನಗಳ ಹಿಂಡು ಗಾಬರಿಯಿಂದ ಚೆಲ್ಲಾಪಿಲ್ಲಿಯಾಯಿತು. "ಕ್ರೂರ ಪ್ರಾಣಿಗಳಿವೆ" ಫಲಕವನ್ನು ಕಂಡು ಹೆದರಿದ್ದ ಬೆಂಗಳೂರು ಹುಡುಗರು ಕಾಡುಕೋಣಗಳೆಂದು ನಾಡ ಕೋಣಗಳನ್ನು ಕಂಡು ನಡುಗಿದರು. ಕೆಲವರು ಸಂತೋಷಪಟ್ಟರು. ಬಾಣೆಯಿಂದ ನೀರಿಗೆ ಇಳಿದು ಗದ್ದೆಯಲ್ಲಿ ಮುಂದೆ ಮುಂದೆ ನಡೆದೆವು.

ತಲೆಯೆತ್ತಿ ನೋಡಿದರೆ ಆಕಾಶದೆತ್ತರದಲ್ಲಿ ಭೀಕರವಾದ ಕಲ್ಲೊಂದು ಬಂಡೆ ಸಾಲಿನಿಂದ ಹೊರಕ್ಕೆ ಚಾಚಿ ನಿಂತಿದೆ. ಅಂತ್ಯ ಅನಂತದೆಡೆಗೆ ಕೈಚಾಚಿ ನಿಂತಂತಿದೆ ಕುದುರೆಮುಖದ ಹೆಬ್ಬಂಡೆ. ಆಕಾಶದ ತಿಳಿ ನೀಲಿಯನ್ನು ಗಾಸಿಗೊಳಿಸಿದ ಕಗ್ಗಲೆಯಂತಿದೆ. ನೋಡ ನೋಡುತ್ತಿದ್ದಂತೆಯೇ ಅದು ಗಿರಗಿರನೆ ತಿರುಗಿ ನಮ್ಮ ಮೇಲೆ ಬೀಳುವುದೋ ಎಂಬ ಭಾವ ಮೂಡಿಸುತ್ತಿತ್ತು. ಇನ್ನೊಂದು ಗಳಿಗೆ ಅದರ ಪ್ರಬಲಾಕರ್ಷಣೆಯಿಂದ, ಸಾವು ಹತ್ತಿಯ ರೇಕುಗಳಿಗಿಂತ ಹಗುರ ಕ್ಷುದ್ರರಾದವರು, ಅಲ್ಲಿಗೆ ನೇರ ಹಾರಿ ಸೇರಲಾರೆವೇ ಎನ್ನಿಸುತ್ತಿತ್ತು.

ಎಷ್ಟು ಸಮೀಪ ಎಷ್ಟು ಎತ್ತರ! ತದ್ದೂರೇ ತದ್ವಂತಿಕೇ. ನರಪಿಪೀಲಿಕೆ ಹಿಮಾಲಯದೌನ್ನತ್ಯ ಅಳೆಯುವುದುಂಟೆ ? ಎದುರಾಗಿ ನಿಂತಾಗ ನಮ್ಮ ಎಡಗಡೆಗೆ ಕುದುರೆಮುಖದ ಹೆಬ್ಬಂಡೆ ಚಾಚಿದೆ. ಅಲ್ಲಿಂದ ಹಿಂದೆ, ಅಂದರೆ ಬಲಗಡೆಗೆ, ಆ ಪರ್ವತಸಾಲು ಕ್ರಮೇಣ ಇಳಿದಿಳಿದು ಹೋಗಿರುವುದು. ಬಂಡೆಯಿಂದ ಕೆಳಗೆ ಭೀಕರ ಪ್ರಪಾತ. ಅಲ್ಲಿಗಾಗಿ ಏರುವಂತಿಲ್ಲ. ಬಹುಶಃ ಕಂಬಳೀಹುಳು ಕ್ರಮದಿಂದ ಸಾಧ್ಯವಾದೀತು. ಹತ್ತಿರ ಹೋಗಿ ನೋಡಿ ಹೇಳ ಬೇಕಷ್ಟೆ. ಕುದುರೆಮುಖ ಶ್ರೇಣಿಯ ಹಿಂಬದಿಯು ಅಥವಾ ನಮಗೆ ಕಾಣದ ಆಚೆ ಬದಿಯ ಇಳಿಜಾರಿನ ತಪ್ಪಲಲ್ಲಿ ದಟ್ಟಡವಿ ಬೆಳೆದು ನಿಂತಿದೆ. ಆ ಸಹಸ್ರಾರು ಮರಗಳ ಎತ್ತರದ ಕೊಂಬೆ ರೆಂಬೆಗಳು ಒಂದಕ್ಕೊಂದು ಹೆಣೆದುಕೊಂಡಿದ್ದಂತೆ ಈ ಕಡೆಯಿಂದ ಕಾಣುತ್ತಿತ್ತು. ಈ ಹಸಿರಿನ ಗುಚ್ಛ ಶಿಖರದಿಂದಬಲಕ್ಕೆ ಶ್ರೇಣಿಯ ಗಡಿರೇಖೆಯ ಉದ್ದಕ್ಕೂ ತೊಡಿಸಿದ ಆಭರಣದಂತೆ ಇತ್ತು. ಬಂಡೆಯೇ ಕುದುರೆಯ ಮುಖ. ಅದರ ಹಿಂದಿನ ಪರ್ವತರೇಖೆ ಕುದುರೆಯ ಕುತ್ತಿಗೆಯ ಇಳಿಜಾರು. ಇದರ ಮೇಲೆ ಚಾಚಿದ್ದ ಹಸುರಿನ ಗುಚ್ಛ ಪರಂಪರೆ ಕುತ್ತಿಗೆಯ ಮೇಲಿನ ಆಯಾಲುವನ್ನು ನೆನಪಿಗೆ ತರುತ್ತಿತ್ತು. ಈ ಕುದುರೆಮುಖಕ್ಕೆ ಕಡಿವಾಣ ಹಾಕಲು ಸಾಧ್ಯವೇ ?

ಪರ್ವತವನ್ನೇರುವುದು ಅದು ಅಲ್ಲಿರುವುದರಿಂದ ಎಂಬ ಮಾತಿನ ಸಂಪೂರ್ಣಾರ್ಥ ನಮಗಲ್ಲಿ ಆಯಿತು. ಕುದುರೆಮುಖ ನಮ್ಮನ್ನು ಬಾ ಬಾ ಎಂದು ಕರೆಯುತ್ತಿತ್ತು. ನಾವು ತನ್ಮಯತೆಯಿಂದ ತೇಲುತ್ತಿದ್ದೆವು ಆದರೆಡೆಗೆ. ಆಗಲೇ ''ಕಾಲಿಟ್ಟನು ಗೊಸರಿಗೆ ಕೃಷ್ಣಪ್ಪ !''

''ಆಕಾಶದಲ್ಲಿ ದೃಷ್ಟಿಯಿರಲಿ. ಮೋಡಗಳ ಮೇಲೆ ಸಂಚರಿಸುತ್ತಿರು. ಆದರೆ ನೆಲವನ್ನು ಮರೆಯಬೇಡ'' ಎಂದು ಅವನಿಗೂ (ಇತರರಿಗೂ) ಬುದ್ಧಿವಾದ ಹೇಳಿದರು ಕವಿ ಶಿವಪ್ಪ. ಪಾಪ, ದೊಡ್ಡ ಜೀವ ಕೃಷ್ಣಪ್ಪ. ಅವನನ್ನು ಜವುಗು ನೆಲದಿಂದ ಉತ್ಖನನ ಮಾಡಿದಾಗ ಅವನ ಶೂ ಅಲ್ಲಿಯೇ ಸಮಾಧಿಯಾಗಿತ್ತು. ''ಅಲ್ಲಿ ಮಲ್ಲಿಗೆಯ ವನದಲ್ಲಿ, ಮಾಂದಳಿರ ನೆಲದಲ್ಲಿ. ಕಿತ್ತಳೆಯ ಬುಡದಲ್ಲಿ, ಕುದುರೆಮುಖ ತಳದಲ್ಲಿ'' ಇದ್ದ ಬಂಗ್ಲೆ (ಹಂಚು ಹಾಕಿದ ಮನೆಯೇ ಬಂಗ್ಲೆ ಎಂಬುದನ್ನು ನೆನಪಿನಲ್ಲಿಡಬೇಕು) ಮಿಸ್ಟರ್ ಸೈಮನ್ ಲೋಬೋ ಪ್ರಭು ಉರುಫ್ ಸಿಂಹ ಪುರ್ಬುಗಳದು. ಕುದುರೆಮುಖದ ಹುಲಿ ಮೊಗಿಲ ಶೇಣವ. ಈ ಸಿಂಹ ಹೇಗಿರಬಹುದೋ ಎಂದು ಹುಡುಗರು ವಿಸ್ಮಯಾತುರಗಳಿಂದ ನೋಡುತ್ತಿದ್ದರು. ಬಂಗ್ಲೆಯ ಕ್ರಮ ಅನಿರೀಕ್ಷಿತ. ಅದೊಂದು ಹಳೆಯ ಮನೆ. ಹಂಚು ಹಾಕಿದ್ದೇನೋ ಹೌದು. ಅದರ ಮುಂಭಾಗದಲ್ಲಿ ವಿಶಾಲವಾದ ಮತ್ತು ಸೆಗಣಿ ಬಳಿದು ಚೊಕ್ಕಟವಾಗಿದ್ದ ವಿಶಾಲ ಅಂಗಳದಲ್ಲಿ ನಾವು ಹರಡಿ ಕುಳಿತೆವು. ಭಾರಗಳನ್ನು ಕಳಚಿದೆವು. ಬದಿಯ ಹುಲ್ಲುಮುಂಡಕ್ಕೆ ಒರಗಿ ಹಾಸಿಗೆ ಮಾಡಿಕೊಂಡವರು ಅನೇಕರು. ಸಿಗರೇಟು ಸೇದಲೇಬೇಕಾದವರು ಹುಲ್ಲು ಮುಂಡದಾಚೆಗೆ ಮರೆಯಾದದ್ದು ಗೊತ್ತಾಯಿತು.

''ಸ್ವಲ್ಪ ದೂರ ಹೋಗಿ. ಹುಲ್ಲಿನ ಮೆದೆಗೆ ಕಿಚ್ಚು ತಾಗಿತು ಎಚ್ಚರಿಕೆ'' ಎಂದು ಜಾಗರೂಕತೆಯ ನುಡಿ ಹೇಳುವುದೊಂದೇ ಉಳಿದಿದ್ದ ದಾರಿ. ಹಲವಾರು ಪುಟ್ಟ ಮಕ್ಕಳು ಎಲ್ಲರೂ ಲಂಗೋಟೀಧಾರಿಗಳು, ಮುದ್ದುಮುದ್ದಾಗಿಯೂ ಪುಷ್ಟಿಯಾಗಿಯೂ ಬೆಳೆದಂಥವರು ನಮ್ಮ ದಾರಿನಲ್ಲಿ ನಿಂತು ಬೆರಗಾಗಿ ನೋಡುತ್ತಿದ್ದರು. ಅಷ್ಟರಲ್ಲಿ ಸಾಕ್ಷಾತ್ ಸಿಂಹ ಪುರ್ಬುಗಳು

ಪ್ರತ್ಯಕ್ಷರಾದರು. ಹುಡುಗರ ನಿರೀಕ್ಷೆಯ ಹಿಮಾಲಯ ಶಿಖರ ಶಾಂತಸಾಗರದ ತಳಕ್ಕೆ ಕುಸಿಯಿತು ; ೭೦ಕ್ಕೆಕಡಿಮೆ ಪ್ರಾಯವಿಲ್ಲದ ದೃಢಕಾಯದ ಬೇಸಾಯಗಾರ, ಕೌಪೀನಧಾರಿ, ತಲೆಯಮೇಲೆ ಮುಟ್ಟಾಳೆ. ಈ ಸಿಂಹ! "ನಮಸ್ಕಾರ ಸ್ವಾಮೀ" ಎಂದು ನಮ್ಮನ್ನು ಸ್ವಾಗತಿಸಿದ. ಅವನ ಕೈಯಲ್ಲಿ ಒಂದು ವರ್ಷ ಪ್ರಾಯದ ಕೈಗೂಸು ನಲಿಯುತ್ತಿತ್ತು. ಶೇಣವ ಹಿಂದಿನಿಂದ ಪುರ್ಬುವಿನ ವಂಶವೃಕ್ಷ ವಿವರಿಸಿದ—ಪುರ್ಬುವಿನ ಪ್ರಾಯ ೭೩. ಈಗ ಇರುವುದು ನಾಲ್ಕನೆಯ ಹೆಂಡತಿ, ಪ್ರಾಯ ೩೬. ಅವನಿಗೆ ಹುಟ್ಟಿದ ಮಕ್ಕಳ ಒಟ್ಟು ಸಂಖ್ಯೆ ೪೦ ; ಬದುಕಿ ಉಳಿದವರು ೨೮. ದೊಡ್ಡವರೆಲ್ಲರೂ ಕೆಲಸದಮೇಲೆ, ಮದುವೆಯಾಗಿ ಎಲ್ಲೆಲ್ಲಿಯೋ ಹೋಗಿದ್ದಾರೆ. ಮನೆಯಲ್ಲಿರುವವರು ಈಗಿನ ಹೆಂಡತಿ ಮತ್ತು ಆಕೆಯ ಎಂಟು ಮಕ್ಕಳು, ಎಂದು ಮುಂತಾಗಿ. "ಏನು ಮಾಡುವುದು ಸ್ವಾಮೀ ! ಈ ಮಲೆನಾಡಿನಲ್ಲಿ ಹೆಣ್ಣುಗಳಿಗೂ ದನಗಳಿಗೂ ಬರಕತ್ತೇ ಇಲ್ಲ" ಎಂದು ಇನ್ನೊಂದು ನುಡಿಮುತ್ತು ಉದುರಿಸಿದ ಶೇಣವ. ಪುರ್ಬು ನನಗೆ ಹಳೆಯ ಪರಿಚಿತ. ನಾನು ಹತ್ತು ವರ್ಷಗಳ ಹಿಂದಿನ ಕಾಟಿ ಬೇಟೆಯ ಘಟನೆಯನ್ನು ಅವನ ನೆನಪಿಗೆ ತಂದೆ. ಪುರ್ಬು ಈ ಘಟನೆಯನ್ನು ಚೆನ್ನಾಗಿ ತಿಳಿದಿದ್ದ—ತಿಂದಿದ್ದನಷ್ಟೆ ! "ಸ್ವಾಮೀ ! ಮತ್ತೆ ಯಾರೂ ಬರಲಿಲ್ಲ ಆ ರೀತಿ ಈ ಸಲ ರೈಫಲ್ಲು ಮಿನಿ ತಂದಿದ್ದೀರಾ ?" ಆಸೆಯ ಪ್ರಶ್ನೆ.

"ತಂದಿದ್ದೇವೆ. ಆದರೆ ರಕ್ಷಣೆಗಾಗಿ ಮಾತ್ರ. ಬೇಟೆ ಖಂಡಿತ ಆಡುವುದಿಲ್ಲ."

"ನನಗೂ ಬರಲು ಸಾಧ್ಯವಿಲ್ಲ ಸ್ವಾಮೀ. ಈಗ ಮುದುಕನಾದೆ. ಆಗಲಾದರೆ ಆರೋಗ್ಯ ಚೆನ್ನಾಗಿತ್ತು. ಕಳೆದ ವರ್ಷ ಮಳೆಗಾಲದಲ್ಲಿ ನಾನು ಬದುಕಿ ಉಳಿದದ್ದೇ ಹೆಚ್ಚು. ನೀವು ಬರುವಾಗ ದಾರಿಯಲ್ಲಿ ಒಂದು ಎಚ್ಚರಿಕೆಯ ಮಾತು ಬರೆದಿದ್ದ ಬಡೆ. ನೋಡಿದಿರಷ್ಟೆ. ಅಲ್ಲಿ ನಾನು ಒಬ್ಬನೇ ಬರುತ್ತಿದ್ದಾಗ ಒಂದು ಕಾಡುಕೋಣ ಫಕ್ಕನೆ ನನ್ನ ಮೇಲೆಯೇ ಏರಿ ಬರಬೇಕೇ ? ನಾನು ಕೋವಿ ಹಿಡಿದಿರಲಿಲ್ಲ. ಅಲ್ಲದೇ ಅಷ್ಟು ಹತ್ತಿರದಿಂದ ಏನೂ ಮಾಡುವಂತಿರಲಿಲ್ಲ. ಏನೋ ನಿಮ್ಮನ್ನು ನೋಡಬೇಕೆಂದು ದೇವರು ಬರೆದಿದ್ದ. ಅಲ್ಲಿಯೇ ಕೂತು ಹೋದೆ. ಅದು ನನ್ನ ಮೇಲೆ ಎರಗಿ ಕೊಂಬಿನಿಂದೆತ್ತಿ ಹಳ್ಳಕ್ಕೆ ಎಸೆದುಬಿಟ್ಟಿತು. ಆದರೆ ನಾನು ಬೀಳುವಲ್ಲಿ ಹುಲ್ಲಿನ ರಾಶಿ, ಕೆಸರು, ಎಲೆ ಇದ್ದುದರಿಂದ ಮೂಳೆ ಮುರಿಯದೇ ಉಳಿದುಕೊಂಡೆ. ಬಹಳ ಕಷ್ಟ ಸ್ವಾಮೀ."

ಆದರೆ ನನ್ನ ಮನಸ್ಸು ಬೇರೆಯೇ ನುಡಿಯುತ್ತಿತ್ತು "ಹೌದು ಆ ನಿರಪರಾಧಿಯ ಎಷ್ಟೊಂದು ಬಂಧುಬಳಗದವರನ್ನು ನೀನು ಅಮಾನುಷವಾಗಿ ಕೊಂದು ತಿನ್ನಲಿಲ್ಲ? ಅದು ನಿನ್ನ ಮೇಲೆ ಸೇಡು ತೀರಿಸಲೆಂದೇ ನುಗ್ಗಿರಬೇಕು. ಆದರೂ ನಿನ್ನಷ್ಟು ಕ್ರೂರಿ ಅದಲ್ಲ. ಜೀವಸಹಿತ ಬಿಟ್ಟಿತಲ್ಲ !"

ನಾವು ಕೆಳಗಿನಿಂದಲೇ ತಂದಿದ್ದ ಚಿತ್ರಾನ್ನ, ಸಿಹಿ ತಿಂಡಿ, ಶರಬತ್ತು, ಹಣ್ಣು—ಎಲ್ಲವನ್ನೂ ಆ ಸುಂದರ ವಾತಾವರಣದಲ್ಲಿ ಕಬಳಿಸಿದೆವು. ಇದೇ ನಮ್ಮ ಮಧ್ಯಾಹ್ನದ ಊಟ. ಬಂಗ್ಲೆಯೊಳಗೆ ಹೋಗಿ ನಲ್ಲಿ ನೀರು ಹಿಡಿದು ತಂದ ತಿಮ್ಮಪ್ಪ ಹೇಳಿದ "ಸಾರ್ ಇಲ್ಲಿ ಪೈಪ್ ವಾಟರ್ ಸಪ್ಲೈ ಉಂಟು."

"ಹೌದೌದು—ಮಂಗಳೂರಿನ ನಲ್ಲಿ ನೀರು ಸಪ್ಲೈ ಕಂಪೆನಿ ಇಲ್ಲಿವರೆಗೆ ಪೈಪು ಹಾಕಿದೆ"

ಮೆಂಗಿಲಶೇಣವನ ತಟಕ್ಕನೆ ಉತ್ತರ. ತಿಮ್ಮಪ್ಪ ನಂಬಿದ. ಮುಂದೆ ಬೆಟ್ಟ ಏರುವಾಗಲೇ ತಿಳಿದದ್ದು : ಬೆಟ್ಟದ ಝರಿಗೆ ಪುರ್ಬುರ್ ನಳಿಗೆ ಜೋಡಿಸಿದ್ದನಷ್ಟೆ!

ಮಹಾಸಾಧನೆಯೊಂದರಲ್ಲಿ ಕೊನೆಯ ಘಟ್ಟ ತಲಪುವಾಗ ಶಕ್ತಿ ಸಂಚಯ ಕನಿಷ್ಠ ಮಟ್ಟಕ್ಕೆ ಇಳಿದಿರುತ್ತದೆ. ಆದರೆ ಉಳಿದ ಅಂಶದ ಪೂರೈಕೆ ಬೇಡುವುದು ಗರಿಷ್ಠ ಪ್ರಮಾಣದ ಶಕ್ತಿಯನ್ನೇ. ಇಲ್ಲೇನಾದರೂ ಧೃತಿಗುಂದಿದಿರೋ ವಿಶ್ರಾಂತಿ ಪಡೆದಿರೋ ನಿಮ್ಮ ಪ್ರಯತ್ನಸರ್ವಸ್ವದ ತಾಳತಪ್ಪಿಯೇ ಹೋಗುತ್ತದೆ, ಅದು ಲಯದಲ್ಲಿ ಮುಕ್ತಾಯ ವಾಗುತ್ತದೆ. ಆದ್ದರಿಂದ ಊಟ ಮುಗಿಸಿದ ಮೇಲೆ, ಜೊಂಪು ಹಿಡಿವ ಮೊದಲೇ ಅಲ್ಲಿಂದ ಮುಂದಕ್ಕೆ ಹೊರಟೆವು. ಪಿಂಟೋ, ಜಯರಾಮ, ರಾಮಕೃಷ್ಣ ಮೊದಲಾದವರು ಅಲ್ಲಿಯೇ ಶಿಬಿರ ಸ್ಥಾಪಿಸಿ ಮರುದಿನ ಬೆಳಗ್ಗೆ ಲಗ್ಗೆ ಹತ್ತಿದರಾಗದೇ ಎಂದು ಸೂಚಿಸಿದರು. ಸೂಚನೆಯ ಹಿನ್ನೆಲೆಯಲ್ಲಿದ್ದುದು ಅವರಿಗೆ ವಿಶ್ರಾಂತಿ ಬೇಕೆಂದು. ನಾನೆಂದೆ "ನಮಗಿರುವ ಕಾಲಾವಕಾಶದಲ್ಲಿ ಇಂದೇ ಅಲ್ಲಿಗೆ ಹೋಗಬೇಕು. ಹೋದಮೇಲೆ ನೀವು ಒಪ್ಪುತ್ತೀರಿ, ಈ ನಿರ್ಧಾರ ಸರಿಯಾದದ್ದು ಎಂದು." ಬಡಿಬೇಕು ಕಬ್ಬಿಣವ ಬಿಸಿಯಾಗಿ ನಿಗಿನಿಗಿಯು ತ್ತಿರುವಾಗಲೇ.

ಎರಡು ಗಂಟೆಗೆ ಸಿಂಹ ಪುರ್ಬುರ್ ಮನೆಯಿಂದ ಗೂಟ ಕಿತ್ತೆವು. ಮುಂದಿನ ದಾರಿಯ ಉದ್ದ ೫ ಮೈಲಿ. ಹತ್ತಬೇಕಾದ ಎತ್ತರ ಸುಮಾರು ೩,೦೦೦ ಅಡಿ. ಕುದುರೆಮುಖ ತೀರ ಹತ್ತಿರ ಕಂಡರೂ ಎರಡು ಬೆಟ್ಟ ಏರಿ ಇಳಿದು ಅಲ್ಲಿಗೆ ಹೋಗಬೇಕು. ಕುದುರೆಮುಖದ ಔನ್ನತ್ಯದ ಮುಂದೆ ಅವು ಕಲ್ಲು ರಾಶಿಗಳು. ಆದರೆ ನಮಗೆ ಅವೇ ದಿಗ್ಬಂಧನ. ಏರಿಕೆ ಅತಿ ದುರ್ಗಮವಾಯಿತು. ಸಾವನದುರ್ಗಕ್ಕೆ ಸಮಾನವಾದಂತೆ ಅನ್ನಿಸಿತು. ಆದರೆ ನಡು ಹಗಲ ಕೆಂಡಬಂಡೆಯಿಲ್ಲ. ಜೊಂಡು, ಮರಳು, ಕಲ್ಲಿನ ಹರಳು ಕೂಡಿದ್ದ ರಾಶಿ. ಹೀಗಾಗಿ ಜಾರುವ ಬೀಳುವ ಭಯವಿರಲಿಲ್ಲ. ಅದುವರೆಗೆ "ಏರುವೆಯಾ ನಮ್ಮೆತ್ತರಕ್ಕೆ ? ನಾವೇ ಎತ್ತರ" ಎಂದು ಮೆರೆದಿದ್ದ ದಿಗ್ಗಜಗಳು ಕ್ರಮೇಣ ನಮ್ಮ ಕಾಲ ಕೆಳಗೆ ಕುಸಿಯುತ್ತಿದ್ದುವು. ನಮ್ಮ ಶ್ರಮ ಸಾಹಸಗಳ ಮುಂದೆ ಅವು ಮಣಿಯುತ್ತಿದ್ದುವು. ಮೊದಲು ಅವುಗಳಿಗೆ ಹೆದರಿ ಮೇಲೆ ನೋಡುತ್ತಿದ್ದ ನಮಗೆ ಈ ಆತ್ಮವಿಶ್ವಾಸದಿಂದ, ನವಸಾಧನೆಯಿಂದ ಕೆಳಗೆ ನೋಡುವ ಧೈರ್ಯ ಬಂದಿತು. ದೂರದಿಂದ ಭೀಕರ; ಏರುತ್ತಿದ್ದಂತೆ ಅದರಲ್ಲಿಯೆ ಲೀನರಾದ ನಮಗೆ ಮೂಗಿಗಿಂತ ಮುಂದೆ ಕಾಣುವುದೇ ಇಲ್ಲ, ಹಿಂದೆ ಮಾತ್ರ ನೋಡ ಬಾರದು "ನಡೆ ಮುಂದೆ" ; ಒಂದು ಶಿಖರದಿಂದ ಎತ್ತರವಾದ ಇನ್ನೊಂದು ಶಿಖರಕ್ಕೆ ಸಾಗಿದಾಗ ವಿಶ್ವ ಸಾಕ್ಷಾತ್ಕಾರ—ಇದು ಪರ್ವತದ ಸೂತ್ರ. ಕುದುರೆಮುಖ ಆಕಾಶಕ್ಕೆ ಮುಸಿ ಮೆತ್ತಿದ ಭಯಂಕರತೆ ಪಡೆಯಿತು. ನೇರವಾಗಿ ಅದನ್ನು ಲಗ್ಗೆ ಹತ್ತುವುದು ಸಾಧ್ಯ, ಹಗ್ಗಗಳ ಸಹಾಯದಿಂದ. ಆದರೆ ನಮ್ಮ ಆಗಿನ ಪರಿಸ್ಥಿತಿಯಲ್ಲಿ ಅಲ್ಲ. ಅದಕ್ಕೆ ಬೇರೆಯೇ ಕಾರ್ಯಕ್ರಮವನ್ನು ರೂಪಿಸಿ ಪುರ್ಬುರ್ ಮನೆಯಲ್ಲಿ ಪಿಂಟೋ ಸೂಚಿಸಿದಂತೆ ತಂಗಬೇಕು, ಅಲ್ಲಿಂದ ಅರುಣೋದಯದಲ್ಲಿ ಹೊರಡಬೇಕು. ನಮ್ಮ ಶಿಸ್ತಿನ ಪರಿಪಾಲನೆ ಆ ಹಿರಿತನದ ಸಾಮೀಪ್ಯದಲ್ಲಿ ಕಷ್ಟತರವಾಯಿತು. ಯಾರೂ ಸಾಲನ್ನು ಮುರಿದು ಹೋಗಬಾರದು, ಅಡ್ಡ ದಾರಿ ಹಿಡಿಯಬಾರದು ಎಂದು ಕಟ್ಟಪ್ಪಣೆ ವಿಧಿಸಿದ್ದರೂ ಕುದುರೆಮುಖ ಸಮೀಪವಾ ದಂತೆ ಹುಡುಗರ ಉತ್ಸಾಹ ಮೇರೆ ಮೀರಿತು. ವೈಯಕ್ತಿಕ ಹಿರಿಮೆ ಸಾಧಿಸುವ ಅಪೇಕ್ಷೆ

ಹೆಚ್ಚಾಯಿತು. ನಾನೂ ಸ್ವಲ್ಪ ಸಡಿಲಗೊಳಿಸಿದೆ—ಸಾಹಸಪ್ರಿಯರು ಮುಂದೆ ಹೋದರೆ ಹೋಗಲಿ. ಆ ದಾರಿಯಲ್ಲಿ ಹೇಗೂ ಅಪಾಯವೇನೂ ಇಲ್ಲ ಎಂಬ ಧೈರ್ಯದಿಂದ. ತರುಣರಿಗೆ ಈಗ ಮುಂದುಕ ಮೆಂಗಿಲ ಶೇಣಾವ ಬಳಸು ದಾರಿಯಲ್ಲಿ ಹೋಗುತ್ತಿದ್ದಾನೆ ಎಂದೆನ್ನಿಸಿತು. ನಿಜಸ್ಥಿತಿಯೂ ಹಾಗೆಯೇ. ಕುದುರೆಮುಖದ ಶ್ರೇಣಿಗೆ ಬಂದಮೇಲೆ (ಅದು ಎಡಗಡೆಗೆ ಚಾಚಿದೆ) ಬಲಗಡೆಗಾಗಿ (ಅಂದರೆ ಬಂಡೆಯಿಂದ ದೂರ ದೂರ) ಏರುತ್ತ ಹೋಗಿ ಶ್ರೇಣಿಯು ಅತಿ ತಗ್ಗಾದ ಸ್ಥಳದಲ್ಲಿ ಅದನ್ನು ದಾಟಬೇಕು. ಅಲ್ಲಿಂದ ಪೂರ್ಣ ಹಿಂತಿರುಗಿ ಮೇಲೆ ನಡೆದರೆ ಆಗ ಶ್ರೇಣಿಯ ಮೇಲೆಯೇ ಬಂಡೆಯೆಡೆಗೆ ಹೋಗುತ್ತೇವೆ. ಈ ದಾರಿ ಸ್ವಲ್ಪ ಬಳಸಾದರೂ ಕಠಿಣವಲ್ಲ. ಆದರೆ ನಮ್ಮ ಧೀರರಿಗೆ ಎಡೆಗಡೆಯ ಹತ್ತಿರದ ಎತ್ತರದ ಬಂಡೆ ಹೆಚ್ಚು ಆಕರ್ಷಣೀಯವಾಯಿತು. ಅಜ್ಜ ಬಳಲಿದ್ದಾನೆ, ಭಾರ ಹೊತ್ತಿದ್ದಾನೆ, ತ್ರಾಣವಿಲ್ಲ, ಹೋದರೆ ಹೋಗಲಿ ತಾವು ಸೀದಾ ಹೋಗುತ್ತೇವೆಂದು ಹೊರಟರು ಕೆಲವರು. ಕಡಿದಾದ ಬೆಟ್ಟಗಳ ಮಧ್ಯೆ ಈ ಸೀದಾ ಮಾರ್ಗ ಎನ್ನುವುದೊಂದು ಬಿಸಿಲ್ಗುದುರೆ. ಬೆಟ್ಟದ ಮೈಯನ್ನು ಬಳಸಿ ನಡೆದು ಒಂದು ಮಗ್ಗುಲಿನಿಂದ ಇನ್ನೊಂದು ಮಗ್ಗುಲಿಗೆ ತಗ್ಗಾಗಿರುವಲ್ಲಿ ದಾಟಬೇಕೇ ಹೊರತು ಶಿಖರದಿಂದ ಶಿಖರಕ್ಕೆ ಜಿಗಿಯುವುದಲ್ಲ. ಹೀಗಲ್ಲದೆ ಶಿಖರಾಭಿಮುಖವಾಗಿಯೇ ಹೋಗುವವನು ಬೆಟ್ಟವೇರಿ ಕಣಿವೆಯಿಳಿದು ದಾರಿ ತಪ್ಪಿ ಕಷ್ಟಪಟ್ಟು ಗುರಿ ತಲಪುವಾಗ (ತಲಪಿದರೆ) ಬಳಸುದಾರಿಯವನಿಗಿಂತ ಹೆಚ್ಚು ಶ್ರಮ ಪಟ್ಟಿರುತ್ತಾನೆ ಕಾಲಹರಣ ಮಾಡಿರುತ್ತಾನೆ, ಅಪಾಯ ಎದುರಿಸಿರುತ್ತಾನೆ. ಕಣಿವೆಯ ತಳದಲ್ಲಿ ನೀರಿನ ಆಸರೆಯಿರುವುದು. ಅಲ್ಲಿಗೆ ಕಾಡು ಪ್ರಾಣಿಗಳು ಖಂಡಿತ ಬರುತ್ತವೆ. ಹಾವುಗಳ ಭಯವೂ ಇದೆ. ಇಷ್ಟಾಗುವಾಗ ಸಾಯಂಕಾಲವೂ ಸಮೀಪಿಸಿದರೆ ಅವನ ಕುಂಭ ಪೂರ್ಣವಾದಂತೆಯೇ. ನಿಶಾನಿ ಮೊಟ್ಟೆಯಲ್ಲಿ ಗುಂಡಿಗೆ ಶೇಷಯ್ಯ ಬಿದ್ದ ಅನುಭವ (ಪುಟ ೨೨೩) ನನಗೆ ಚೆನ್ನಾಗಿ ನೆನಪಿತ್ತು.

ಕುದುರೆಮುಖದ ಶಿಖರದೆಡೆಗೆ ಸೀದಾ ನಡೆಯಲು ಅಡ್ಡ ತಿರುಗಿದವನು ಕಾವೇರಿಯಪ್ಪ. ಇವನು ಕೊಡಗಿನ ಚತುರ, ನಮ್ಮ ತಂಡದ ಮೂಕ ಸದಸ್ಯ. ಅವನಾಯಿತು, ಅವನ ಕೆಲಸವಾಯಿತು, ಒಳ್ಳೆಯ ಶಿಸ್ತುಗಾರ, ದಕ್ಷ, ಸಮರ್ಥ. ಅವನನ್ನು ಹುಡುಗರು ಬ್ರಹ್ಮಗಿರಿ ಎಂದು ಸಾರ್ಥಕವಾಗಿ ಕರೆಯುತ್ತಿದ್ದರು. ಕುದುರೆಮುಖ ಇವನಿಗೆ ತವರ್ಮನೆ ಇದ್ದಹಾಗೆ. ಅದರಶ್ರೇಣಿಗೆ ಬಂದೊಡನೆ ನೇರದಾರಿ ತುಳಿದ. ಹಿಂದೆ ನೋಡಲಿಲ್ಲ. ಮೇಲೆ ನೋಡಲಿಲ್ಲ. ಪುಳು ಗೋಡೆಯಮೇಲೆ ಹರಿವಂತೆ ಏರತೊಡಗಿದ. ಲಕ್ಷ್ಮಿ, ಶ್ರೀಧರನ್ ಪಿಂಟೊ ಮೊದಲಾದವರು ಅವನ ಹಿಂದೆ ಹೊರಟರು. ಉಳಿದವರು ಬಲು ಹಿಂದೆ ಬಿದ್ದರು, ನಾನು ಎಲ್ಲರಿಗಿಂತಲೂ ಹಿಂದೆ ಇದ್ದರೂ ಇಡೀ ದೃಶ್ಯ ನನ್ನೆದುರು ಅನಾವರಣಗೊಳ್ಳುತ್ತಿತ್ತು, ಸಿನಿಮಾ ಚಿತ್ರಪಟದ ಮೇಲೆ ಘಟನಾಪರಂಪರೆಗಳು ಸರಿಯುವಂತೆ. ಮೆಂಗಿಲ ಶೇಣಾವನ ಹಿಂದೆ ನಡೆದವರೂ ಸಾಕಷ್ಟು ಮಂದಿ. ಹಿಂದೆ ಇದ್ದ ನಾನು ಯಾವ ದಾರಿಯಲ್ಲಿ ನಡೆಯಬೇಕು ? ಸಂದಿಗ್ಧ ಪರಿಸ್ಥಿತಿ. ಪಕ್ವ ಪ್ರಾಯದ ಅನುಭವದ ದಾರಿಯೇ ? ತರುಣ ಧಮನಿಯ ದಿಟ್ಟತನದ ಹಾದಿಯೇ ? ಶಿಸ್ತಿನ ಪಥವೇ ? ಸಾಹಸದ ನೂತನ ಮಾರ್ಗವೇ ? ಇಂಥಲ್ಲೆಲ್ಲ ನಮ್ಮ ಗುರಿಯ ಸಾಧನೆ ಮುಖ್ಯ. ಶಿಖರವನ್ನು ತಲಪುವುದು. ಆದ್ದರಿಂದ ನೇರ ದಾರಿಯೇ ಸರಿ ಎಂದು ನಾನೂ ಎಡಕ್ಕೆ ತಿರುಗಿದೆ. ಹುಡುಗರಾಗಲೇ

ಶ್ರೇಣಿಯ ಅಂಚು ತಲಪಿ ಮರೆಯಾಗಿದ್ದರು. ಈಗ ಶಿಖರ ಕಾಣುತ್ತಿಲ್ಲ. ಮೇಲೆ ನೋಡಿ ದಷ್ಟೂ ಎತ್ತರಕ್ಕೆ ಕಲ್ಲು. ಮಣ್ಣು, ಜೊಂಡುಗಳ ರಾಶಿ. ಹಿಂದೆ ನೋಡುವಂತಿಲ್ಲ. ಹತ್ತಿ ದಷ್ಟೂ ಮುಗಿಯದು. ಒಂದು ಹೆಜ್ಜೆಗೆ ಹತ್ತು ಚಮಚ ಬೆವರಿನಂತೆ ಹರಿದು ಮೈ ಎಲ್ಲ ಒಪ್ದೆ. ದಾರಿ ತಪ್ಪಿಹೋಯಿತೇ ? ಬೇರೆಲ್ಲಿಯಾದರೂ ಏರುತ್ತಿರುವೆನೇ ? ಗಂಟೆ ೪-೩೦ ದಾಟಿತ್ತು. ಆದ್ದರಿಂದ ಭಯವೇನೂ ಇಲ್ಲ. ನಾನು ನೆಲದ ವರೆಗೆ ಬಗ್ಗಿ ತೆವಳುತ್ತಿದ್ದೆ. ಇದ್ದಕ್ಕಿದ್ದಂತೆ ಕುರುಡನಿಗೆ ಕಣ್ಣು ಬಂದರೆ ಆಗಬಹುದಾದಂಥ ಅನುಭವ. ಎಲ್ಲಿಲ್ಲಿಯೂ ಬೆಳಕಿನ ಕಡಲು. ವಿಶಾಲ ವಿಶ್ವ ನೋಡನೋಡುತ್ತಿದ್ದಂತೆಯೇ ತೆರೆತೆರೆಯುತ್ತ ವಿಸ್ತಾರ ವಾಗಿ ಹರಡಿ ಹೋಯಿತು. ಆ ಮೊದಲೇ ತಲಪಿದ್ದ ಹುಡುಗರು ಜಯಘೋಷ ಮಾಡಿ ದರು. ೧೨ನೆಯ ಮೈಸೂರು ಈಗ ಅಧಿಕೃತವಾಗಿ ಕುದುರೆಮುಖದ ಹೆಬ್ಬಂಡೆಯ ಮೇಲೆ ಜಯಭೇರಿ ಬಾರಿಸಿತು. ಆ ಗಳಿಗೆಯಲ್ಲಿ ಭಾವಪಾರವಶ್ಯದಿಂದ ಮನಸ್ಸು ಯೋಚನೆ ಯನ್ನು ಮಾಡಲಿಲ್ಲ. ೬,೨೧೭ ಅಡಿ ಎತ್ತರದ ಮೇಲೆ ನಾವಿದ್ದೆವು. ಆ ಮಹೌನ್ನತ್ಯ ನಮಗೆ ಮಣಿದಿತ್ತು ಎನ್ನುವುದು ಧಾರ್ಷ್ಟ್ಯದ ಮಾತು. ನಾವದನ್ನು ಸತತ ಪ್ರಯತ್ನ ದಿಂದ ಸಾಧಿಸಿದ್ದೆವು ಅಲ್ಲಿ ಮೂಡಿದ ಭಾವ ಒಂದು ವಿಧದ ಸಮಾಧಿಸ್ಥಿತಿ. ಅಲ್ಲಿಗೆ ಹೋಗಿ ಅದನ್ನು ಅನುಭವಿಸಬೇಕೇ ವಿನಾ ಅಲ್ಲಿಂದ ಹಿಂತಿರುಗಿದ ಮೇಲೆ ನಮ್ಮ ಕೆಳಗಿನ ಮಟ್ಟದಲ್ಲಿ ಕಲ್ಪನಾದಾರಿದ್ರ್ಯ ಮುಸುಕಿ ಬಿಟ್ಟಾಗಿನ ವಿವರಣೆಯಿಂದಲ್ಲ. ಸಾಹಿತ್ಯ ವೆಂದೂ ವಾಸ್ತವಿಕತೆಯ ಮೂಕಾಶ್ಚರ್ಯಗಳ ಪ್ರತಿಬಿಂಬ ಆಗದು. ಅಲ್ಲಿ ನಾವು ಕುಳಿತು ಭಾವೋದ್ವೇಗದಲ್ಲಿ ಅನಂತವನ್ನು ಅಳೆಯಲು ಪ್ರಯತ್ನಿಸುತ್ತಿದ್ದೆವು. ನಮ್ಮ ಅನುಭವ ಗಳ ದೃಷ್ಟಿಯ ಮಿತಿಯಿಂದ ಅನಂತವೂ ಮಿತಿಗೆ ಒಳಪಡುತ್ತಿತ್ತೇ ವಿನಾ ಅನಂತದ ಸ್ವಾಭಾವಿಕ ಗುಣದಿಂದಲ್ಲ. ನಡೆದು ಬಂದ ದಾರಿ ದೂರದ ಕಣಿವೆಯಲ್ಲಿ ನುಸುಳಿ ಮಸ ಳಿತ್ತು. ಎರಡು ದಿವಸಗಳ ಹಿಂದೆ ನಾವು ಏರಿದ್ದ ಬಂಡೆ, ಎಷ್ಟು ದೊಡ್ಡ ಗುಂಡು ಕಲ್ಲು ಇದು ಎಂದು ನಮಗೆ ಭಾವನೆ ತರಿಸಿದ್ದ ಜಮಾಲಾಬಾದ್ ಈಗ ಪ್ರಯಾಸದಿಂದ ಕಾಣ ಬಹುದಾದ ಮಣ್ಣು ಹೆಂಟೆಯಾಗಿತ್ತು. ಔನ್ನತ್ಯದಮಹಿಮೆಯೇ ಇದು. ಸಾಹಸದಿಂದ ಅದನ್ನೇರಿ ಅದರಲ್ಲಿ ಒಂದಾದರೆ ನಾವೂ ಹಿರಿಯರಾಗುತ್ತೇವೆ. ಅಲ್ಲಿ ಮೂಡುವುದು ಸಮರ್ಪಣಭಾವ. ನಾವು ಇದನ್ನು ಸಾಧಿಸಿದೆವು ಎಂದುಅನ್ನಿಸುವುದಿಲ್ಲ—ಆ ಔನ್ನತ್ಯದ ಚೇತನ ನಮ್ಮನ್ನು ಅಲ್ಲಿಗೆ ಆಕರ್ಷಿಸಿತು ಎಂದೆನ್ನಿಸುವುದು. ದೃಷ್ಟಿದಿಗಂತ ವಿಸ್ತಾರವಾಗು ವುದು.

ಮರುಕ್ಷಣ ಉಳಿದವರ ಚಿಂತೆ. ದೂರದರ್ಶಿಯಿಂದ ನೋಡಿದರೆ ಅವರ ಸುಳಿವು ಎಲ್ಲಿಯೂ ಕಾಣುವುದಿಲ್ಲ. ಮೆಂಗಿಲ ಶೆಣವ, ಅಡುಗೆಯವರು, ಸೇವಕರು, ೧೭ ಕ್ಯಾಡೆಟು ಗಳು ಮತ್ತು ಶಿವಪ್ಪ ಆ ತಂಡದಲ್ಲಿದ್ದುದರಿಂದ ನಾವೇ 'ಮೈನಾರಿಟಿ'ಯಲ್ಲಿದ್ದೆವು. ಅಲ್ಲದೇ ನಾವು ಉಳಿದುಕೊಳ್ಳಬೇಕಾದ ಪ್ರದೇಶ ಆ ಕಡೆ ಎಲ್ಲೋ ಇದೆ ಎಂದು ಹಿಂದಿನ ಅನು ಭವದಿಂದ ತಿಳಿದಿತ್ತು. ಆದರೆ ನಮಗೆ ಸಮೀಪದಲ್ಲಿ ಇನ್ನೆರಡು, ನಾವು ಕುಳಿತಿದ್ದ ಬಂಡೆ ಯಷ್ಟೇ ಅಥವಾ ಅದಕ್ಕಿಂತ ಸ್ವಲ್ಪ ಎತ್ತರದ, ಶಿಖರಗಳಿದ್ದುವು. ದಿಟ್ಟಿಸಿ ನೋಡುತ್ತಿ ದ್ದಂತೆಯೇ ಅವು ನಮಗಿಂತ ಎತ್ತರವೆಂಬ ಭಾವನೆ ದೃಢವಾಯಿತು. ಹಾಗಾದರೆ ನಾವು ಏರಿದ್ದು ಕೃತ್ರಿಮ ಕುದುರೆಮುಖವೇ ? ಶೆಣವನ ತಂಡ ಕಾಡನ್ನು ಸುತ್ತುವರಿದು ನಮ

ಗಿಂತ ಮೊದಲೇ ಅಲ್ಲಿಗೆ ತಲಪಿರಬಹುದೇ ? ಆಚೆ ಕಡೆಯ ಮೈಯಲ್ಲಿ ಬರುತ್ತಿರುವರೋ ಏನೋ ? ನಮ್ಮ ಕಾವೇರಿಯಪ್ಪ, ಮೋಹನ ಅಲ್ಲಿಗೆ ಧಾವಿಸಿದರು. ಆದರೆ ನೂರಿನ್ನೂರು ಅಡಿ ಇಳಿದು ಮತ್ತೆ ಅಷ್ಟೇ ಹತ್ತಬೇಕಾದ ಪ್ರಮೇಯ. ಅವರಿಗೆ ಆ ದೂರ ತಲಪಲು ೨೦ ಮಿನಿಟು ಬೇಕಾಯಿತು. ಕಾಣಲು ಇಷ್ಟು ಹತ್ತಿರ, ನಡೆದರೆ ಅಷ್ಟು ದೂರ. ಬೆಟ್ಟಗಳಲ್ಲಿ ನಮ್ಮ ಅವಸ್ಥೆಯೇ ಹೀಗೆ.

ಮುಂದೆ ಸ್ವಲ್ಪ ಹೊತ್ತಿನಲ್ಲಿ ನಾವು ಕಳೆತಿದ್ದ ಬಂಡೆಯ ಶ್ರೇಣಿಯಲ್ಲಿ ದೂರ ತಗ್ಗಿನಿಂದ ಪರ್ವತರೇಖೆಯನ್ನು ಆ ಕಡೆಯಿಂದ ದಾಟಿ ದಾಟಿ ಕೆಲವರು ಹರಿಯುತ್ತಿರುವುದು ಕಂಡಿತು —ಬಿಳಿ ಚುಕ್ಕಿಗಳ ಚಲನೆ ಮಾತ್ರ ಕಂಡದ್ದು. ಬೈನಾಕ್ಯುಲರಿನಿಂದ ನೋಡಿದಾಗ ಶೇಣವ ನನ್ನು ಕಂಡು ಧೈರ್ಯವಾಯಿತು. ಹಿಂದೆ ಹುಡುಗರೂ ಇದ್ದರು. ಅವರು ಯಾರೂ ಗಂಟು ಹೊತ್ತಿರಲಿಲ್ಲ. ಆದ್ದರಿಂದ ಆ ತಗ್ಗಿನಲ್ಲಿಯೇ ನಾವು ತಂಗಬೇಕಾದ ಪ್ರದೇಶವಿದೆಯೆಂದು ಖಾತ್ರಿಯಾಯಿತು. ನಾವು ಅವರೆಡೆಗೆ ಓಡಲು ತೊಡಗಿದೆವು. ಅಂದರೆ ಕುದುರೆಮುಖದ ಕತ್ತಿನ ಮೇಲೆ ನಿಬಿಡಾರಣ್ಯದ ಅಂಚಿನಲ್ಲಿ ಇಳಿದೆವು. "ನಾವು ಬಂಗ್ಲೆಗೆ ಹೋಗಿ ಟೀ ಕಾಯಿಸಲು ಏರ್ಪಾಡು ಮಾಡಿ ನೀವೆಲ್ಲಿದ್ದೀರೆಂದು ಹುಡುಕಲು ಬಂದದ್ದು !" ೬,೦೦೦ ಅಡಿ ಎತ್ತರದಲ್ಲಿಯೂ ಶೇಣವನಿಗೆ ಅದೇ ಹುರುಪು, ಅದೇ ಮಿಂಚು, ಅದೇ ಆತ್ಮೀಯತೆ. ಎಲ್ಲರೂ ಅಲ್ಲಿಗೆ ನಡೆದೆವು. ಶಿಖರದಿಂದ ಮುಕ್ಕಾಲು ಮೈಲಿ ದೂರದಲ್ಲಿ ೫೦೦ ಅಡಿ ತಗ್ಗಿನಲ್ಲಿ ಬಂಗ್ಲೆಗಳ ಭಗ್ನಾವಶೇಷಗಳಿವೆ. ಹತ್ತು ವರ್ಷಗಳ ಹಿಂದೆ ಅಲ್ಲಿ ಒಂದಿಷ್ಟು ಗೋಡೆ ಚಿತ್ರಕಲೆ ನೋಡಿದ್ದೆ. ಈಗ ಪಾಯ ಮಾತ್ರ ಉಳಿದಿತ್ತು. ಅಲ್ಲಿ ಕೂರಲು ಸಹ ಸಾಧ್ಯವಿಲ್ಲ. ಅಂಗಳದ ಅವಸ್ಥೆ ಇನ್ನೂ ನಿಕೃಷ್ಟ—ನೊಜೆಹುಲ್ಲಿನ ದೊಡ್ಡ ದೊಡ್ಡ ದಿಂಡುಗಳು ಬೆಳೆದಿದ್ದುದರಿಂದ ಅಲ್ಲಿ ಕೂರುವುದು ಅಥವಾ ಮಲಗುವುದು ಕಲ್ಲುರಾಶಿಯ ಮೇಲೆ ವಿಶ್ರಾಂತಿಸಿದಷ್ಟೇ ಸುಖ ! ಆದರೂ ನಮ್ಮ ಶೇಣವನ ಪಂಗಡ ಅಲ್ಲಿಯೇ ಒಂದು ಬೀಡು ಬಿಟ್ಟಿದ್ದರು—ನ್ಯಾಯುವೇ, ನಿರ್ಧಾರವನ್ನು ತಳೆಯಬೇಕಾದವನು ನಾನಾದುದರಿಂದ. ತಾತ್ಕಾಲಿಕವಾಗಿ ಹೊರೆಯನ್ನು ಅಲ್ಲಿ ಇಳಿಸಿ ಅಲ್ಲಿಯೇ ಟೀ ಕಾಯಿಸಲು ಏರ್ಪಾಡು ಮುಂದುವರಿದಿತ್ತು. ಹರೂನ್ ಮತ್ತು ಅಡುಗೆಯವರು ಸೇರಿ ಕೆಳಗಿನ ಒಂದು ಫರ್ಲಾಂಗ್ ದೂರದ ಬುಗ್ಗೆಯಿಂದ ನೀರು ತರಿಸಿ ಟೀ ತಯಾರು ಮಾಡಿಟ್ಟಿದ್ದರು. ಅಲ್ಲಿ ಕುಡಿಯುವಷ್ಟು ಟೀ, ತಿನ್ನುವಷ್ಟು ಮೈಸೂರುಪಾಕ, ಬಾದುಶಾ, ಚೌಚೌ. ಅದರ ರುಚಿ ಕುದುರೆ ಮುಖದ ಶಿಖರದ ಮೇಲಿನ ಪ್ರಥಮಾನುಭವದಷ್ಟೇ ತೀವ್ರವಾದದ್ದು. ಮುಂದಿನ ನಿರ್ಧಾರ ? ಆ ಅಂಗಳದಲ್ಲಿ ನೆಲೆಯೂರುವುದು ಸಾಧ್ಯವಿಲ್ಲ. ನೀರು ತರುವುದೊಂದು ರಾಜಸೂಯವೇ. ಆದ್ದರಿಂದ ಎಲ್ಲಿ ನೀರಿನ ಸೆಲೆಯಿದೆಯೋ ಅಲ್ಲಿ ನಮ್ಮ ನೆಲೆಯೂ ಇರ ತಕ್ಕದ್ದು ಎಂದು ನಿಶ್ಚಯಿಸಿ ಅಲ್ಲಿಂದ ಗಂಟುಮೂಟೆ ಹೊತ್ತುಕೊಂಡು ಕೆಳಗಿಳಿದೆವು,

ಕುದುರೆಮುಖದ ಪರ್ಣಕುಟೀರ

ನಾವೀಗ ಕುದುರೆಮುಖ ಶ್ರೇಣಿಯ ವನರಾಶಿಯ ಮಗ್ಗುಲಿನ ಇಳಿಜಾರಿನಲ್ಲಿದ್ದೇವೆ. ನಮಗೂ ಶಿಖರಕ್ಕೂ ನಡುವೆ ಗೊಂಡಾರಣ್ಯ ಬೆಳೆದಿದೆ. ಕುದುರೆಮುಖದ ಆಚೆ ಮಗ್ಗುಲಲ್ಲಿ (ನಾವು ಏರಿಬಂದ ವಲಯ) ಒಂದು ಚಿಕ್ಕ ಗಿಡವೂ ಇಲ್ಲ, ಈಚೆ ಮಗ್ಗುಲಲ್ಲಿ

ಗಾಳಿ ಬೆಂಕಿಗಳ ಹೊಡೆತ ವಿಪರೀತ, ಆದ್ದರಿಂದ ಬೆಳೆಯುವ ಸಸ್ಯ ಒಂದೇ, ನೊಜೆಹುಲ್ಲು. ಕುರುಚಲು ಗಿಡಗಳನ್ನು ನಿವಾರಿಸಿಕೊಂಡು ಕೆಳಗೆ ಇಳಿದಂತೆ ದೊಡ್ಡದೊಂದು ಗೊಸರು ಭೂಮಿ. ಅದನ್ನಿಡೀ ನೊಜೆ ಹುಲ್ಲಿನ ದಿಂಡುಗಳು ಆಕ್ರಮಿಸಿವೆ. ಇದರ ಎದುರು ಅಂಚು ಗೊಂಡಾರಣ್ಯ. ಒಸರುವ ನೀರಿನ ಕೆಸರನ್ನು ದಾಟಿಕೊಂಡು ಮುಂದೆ ಹೋದೆವು. ಅಲ್ಲಿದ್ದ ಒಂದು ಕಿರುತೊರೆಯನ್ನು ಕುಪ್ಪಳಿಸಿ ದಾಟಿದೆವು. ಅದು (ನಮ್ಮ ಎಡಗಡೆಯ) ಕುದುರೆ ಮುಖ ಶಿಖರದಲ್ಲಿ ಹುಟ್ಟಿ ಕಾಡಿನೆಡೆಗಾಗಿ ಹರಿದು ಬರುತ್ತಿದ್ದ ತೀರ್ಥ. ಅದರ ದಂಡೆಯಲ್ಲಿ ನೂರು ಜನ ಸುಖವಾಗಿ ಕೂರುವಷ್ಟು ವಿಶಾಲವಾದ ಹಾಸುಗಲ್ಲು ಹಬ್ಬಿತ್ತು. ಹಾಸುಗಲ್ಲಿನಿಂದ ಮೇಲೆ ಯಾರೋ ಪುಣ್ಯಾತ್ಮರು, ಹಿಂದೆ ಬಂದವರು, ಕಡಿದು ಸಿದ್ಧಪಡಿಸಿದ್ದ ಮಣ್ಣಿನ ವಿಶಾಲವಾದ ಎರಡೆರಡು ವೇದಿಕೆಗಳು. ಇವುಗಳನ್ನು ಅತಿಕ್ರಮಿಸುವಂತೆ ಬಂದಿರುವ ಕಾಡಿನ ಮರಗಳು. ಬಂಡೆ ಕಲ್ಲು ಮತ್ತು ಮಣ್ಣಿನ ವೇದಿಕೆಗಳ ಮೇಲೆ ಮರಗಳ ಕೊಂಬೆಗಳು ನಿಬಿಡವಾಗಿ ಹರಡಿ ಸ್ವಾಭಾವಿಕವಾದ ಮಾಡನ್ನು ನಿರ್ಮಿಸಿದ್ದುವು. ನೀರು, ಅದರ ಪಕ್ಕದಲ್ಲಿ ಮಂಚಾ ಮಾಡಲು ಹಾಸುಗಲ್ಲು. ಅದರ ಬದಿಯಲ್ಲಿ ತಂಗಲು ಪರ್ಣ ಕುಟೀರ—ಬೇರೇನು ಬೇಕು ? ಹಿಂದೆ ಬಂದವರು ಆ ವೇದಿಕೆಗಳ ಮೇಲೆ ಬೇಕಾದಷ್ಟು ನೊಜೆ ಹುಲ್ಲನ್ನು ಕೊಯ್ದು ಹಾಸಿದ್ದರು. ಹೀಗಾಗಿ ನಮಗೆಲ್ಲ ಸುಪ್ಪತ್ತಿಗೆಯ ಸೌಭಾಗ್ಯವೂ ಲಭಿಸಿತು. ನೀರಿನಂಚಿನಲ್ಲಿ ನಾವು ಒಲೆ ಹೂಡಿದೆವು. ಅಲ್ಲಿಯೇ ಸಮೀಪದಲ್ಲಿ ಉಗ್ರಾಣವನ್ನು ಸ್ಥಾಪಿಸಿದೆವು. ಬೆಟ್ಟವನ್ನೇರುವ ಮೊದಲು ಗೋಪಾಲ್ವಾರೆಯ ಪ್ರಕಾರ ಕೊಟ್ಟಿದ್ದ ಸಾಮಗ್ರಿಗಳೆಲ್ಲವನ್ನೂ ಅದೇ ಪ್ರಕಾರ ಹಿಂದೆ ಪಡೆದು ಶೇಖರಿಸಿದೆವು. ಸಾಮೂಹಿಕವಾಗಿ ನಿರ್ವಹಿಸುವ ಯಾವ ಚಟುವಟಿಕೆಯಲ್ಲಿಯೂ ವೈಯಕ್ತಿಕವಾದ ಹೊಣೆಗಾರಿಕೆಯನ್ನು ಸ್ಪಷ್ಟವಾಗಿ ಮೊದಲೇ ವಿಧಿಸದಿದ್ದರೆ ದುರ್ಭರ ಸನ್ನಿವೇಶ ಒದಗಿ ಬರುವಾಗ ಎಲ್ಲರೂ ಜಾರುವವರೇ, ಎಲ್ಲರೂ ಧರ್ಮಾರ್ಥ ವಿಪುಲ ಸೂಚನೆ ನೀಡುವವರೇ, ಎಲ್ಲರೂ ಮನಸ್ಸಿನಲ್ಲಿ ಮುಂದಾಳುವನ್ನು ಶಪಿಸುವವರೇ. ಗೋಪಾಲ್ವಾರೆಯನ್ನು ಮಾಡದೇ ಸಾಮಗ್ರಿಗಳನ್ನು ಹಾಗೆಯೇ ಕೈಗೆಬಂದಂತೆ ಹುಡುಗರ ಬೆನ್ನ ಮೇಲೆ ಹೇರಿದ್ದಿದ್ದರೆ, ಮೊದಲನೆಯದಾಗಿ, ಭಾರದ ಸಮವಾದ ಹಂಚುವಿಕೆ ಆಗಿರುತ್ತಿರಲಿಲ್ಲ, ಇದರಿಂದ ಹೆಚ್ಚು ಭಾರ ಹೊರಬೇಕಾದವರಿಗೆ ಅತೃಪ್ತಿ ಮೂಡಿರುತ್ತಿತ್ತು ; ಎರಡನೆಯದಾಗಿ, ಬಿಸ್ಕೆಟ್, ಕಿತ್ತಲೇ ಹಣ್ಣು ಟೊಮೆಟೊ, ಸಿಹಿ ತಿಂಡಿಯಂಥ ಆಕರ್ಷಕ ವಸ್ತುಗಳನ್ನು ಹೊತ್ತವರು ಕೆಲವರಾದರೂ ತಮ್ಮ ಬಾಹ್ಯ ಭಾರವನ್ನು ಆಂತರಿಕವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ್ದರೆ ಆಶ್ಚರ್ಯವಿರುತ್ತಿರಲಿಲ್ಲ. ಅದು ಧರ್ಮರಾಯರಲ್ಲದ ಬಹುಮಂದಿಗೆ ಇರುವ ಸಹಜ ದೌರ್ಬಲ್ಯ.

ಕುದುರೆಮುಖದ ತೀರ್ಥ ಮಂಜುಗಡ್ಡೆಯಷ್ಟು ಕೋಟ. ಅತಿ ಶುಭ್ರ. ಡಾಕ್ಟರ್ ಮಹಾಶಯರೆಂದು "ಈ ನೀರಿಗೆ ಯಾವ ಬ್ಲೀಚಿಂಗ್ ಪೌಡರೂ ಬೇಡ." ನಮ್ಮ ಹೊಸ ಎಲೆವನೆ, ನೊಜೆ ಹಾಸಿಗೆ, ಬಂಡೆಯ ಪಕ್ಕದ ಒಲೆ ಸಿದ್ಧವಾದಾಗ ೬ ಗಂಟೆ ದಾಟಿತ್ತು. ೨೦ ಪೌಂಡು ಭಾರದ 'ಸಿಂದಬಾದನ ಮುದುಕ'ನನ್ನು ಕಳೆದುಕೊಂಡು ಬೆಟ್ಟದ ಚಿಲುಮೆಯಿಂದ ಚೇತನ ಹೀರಿದ ನಾವೆಲ್ಲರೂ ಸೂರ್ಯಾಸ್ತಮಾನದ ಸೊಬಗು ನೋಡಲು ಕುದುರೆಮುಖದೆಡೆಗೆ ಧಾವಿಸಿದೆವು.

೬,೨೧೪ ಅಡಿ ಎತ್ತರದ ಕುದುರೆಮುಖದ ಬಂಡೆಯಮೇಲೆ ನಾವಿದ್ದೇವೆ. ಅಂತ್ಯದ

ಕರೆಗಳ ಅಂಚಿನಲ್ಲಿ ನಾವು ಕುಳಿತ್ತಿದ್ದೇವೆ. ಕೆಳಗಿನಿಂದ ಕಾಣುವ ಭೀಕರತೆ ಈಗ ಅದಕ್ಕಿಲ್ಲ. ನಮ್ಮ ದೃಷ್ಟಿ ಹೋಗುವವರೆಗೆ ಎಲ್ಲಿಯೂ ನಮಗಿಂತ ಎತ್ತರದ ಶಿಖರವಿಲ್ಲ. ಸಮೀಪದ ಎರಡು ಶಿಖರಗಳೂ ಈಗ ಇದಕ್ಕಿಂತ ತಗ್ಗಾಗಿಯೇ ಕಂಡವು. ನಮ್ಮ ದೃಷ್ಟಿದಿಗಂತ ಆ ಔನ್ನತ್ಯದಲ್ಲಿ ಅತ್ಯಧಿಕವಾಗಿ ವಿಸ್ತಾರವಾಯಿತು. ಕಾಡು ಗುಡ್ಡೆ ಹೊಳೆ ಎಲ್ಲ ನಕ್ಷೆಯ ಮೇಲಿನ ಎಳೆಗಳು.

> ಭೂಮಂಡಲದ ರಾಶಿ ಬಣ್ಣ ಬಣ್ಣಗಳ ವೈವಿಧ್ಯ
> ಕರ್ತಾರನ ಕಮ್ಮಟ

ಎಂದು ಬರೆದರು ಶಿವಪ್ಪ.

> ಮಹಾಕಾಶ ಶಿರದ ಮೇಲೆ
> ಅಹಾ ಪೃಥ್ವಿ ರಮ್ಯಮುಂದೆ
> ಬಾನು ಬುವಿಯು ಮುಟ್ಟುವಲ್ಲಿ
> ಏನು ರಮ್ಯ ದೂರದಲ್ಲಿ !
>
> ಮಧುರಚೆನ್ನ

ದೃಷ್ಟಿ ದೂರ ಸಾಗಿದಂತೆ ಭೂಮಿ ಸಾಗರವನ್ನು ಸ್ವಾಗತಿಸುವ ಮುದ್ದಿಸುವ ಮಹಾ ವೃತ್ತ ಕಾಣಿಸಿತು. ಅದರಾಚೆ ನೀರು, ಕಡುನೀಲಿಯನ್ನು ಮೆತ್ತಿದಂತೆ. ಅದರ ಮೇಲೆ ನೊರೆ ನೊರೆಯಾಗಿ ಪ್ರತಿಬಿಂಬಿಸುವ ತೆರೆ ಅದು ನೀರಿನ ರಾಶಿಯೆಂದು ತಿಳಿಸುವುದು. ಮತ್ತೂ ಮುಂದುವರಿದರೆ ಈ ಕಡು ನೀಲಿ ಆಕಾಶದ ತೆಳು ನೀಲಿಯನ್ನು ಸಂಧಿಸುವ ಇನ್ನೊಂದು ಮಹಾವೃತ್ತ. ಅದರಿಂದಾಚೆಗೆ ಏನೇನಿದೆಯೋ ಕುದುರೆಮುಖದಿಂದ ಕಾಣುವು ದಿಲ್ಲ. ಮೇಲೆ ಗೋಳಾಕಾರದ ತಿಳಿ ನೀಲಿ ಬಣ್ಣದ ಬಾನ್, ಕೆಳಗೆ ಬಿಂದು ಸ್ವರೂಪಿಯಾದ ನಾನ್ !

"ಗಗನವನು ನೋಡು ಮೈ ನೀಲಿಗಟ್ಟುವ ವರೆಗೆ" ಎಷ್ಟೊಂದು ಸಾರ್ಥಕ ನುಡಿ. ಅಂಥ ನೀಲ ಪರದೆಗೆ ಅಂಟಿಸಿದ ಕೆಂಪು ತಗಡು ಸೂರ್ಯ. ಸೂರ್ಯ ರಶ್ಮಿ ಈಗ ಕಣ್ಣು ಕುಕ್ಕುವುದಿಲ್ಲ. ಸೂರ್ಯಬಿಂಬ ಬದಿಗಳಲ್ಲಿ ಉದ್ದುದ್ದವಾಗಿ "ದೇವರ ಪೆಪ್ಪರಮಿಂಟ್" ನಂತೆ ಕಾಣುವುದು ಸಹಜ. ತೆಳು ನೀಲಿ ತನ್ನ ದಿನದ ಗಳಿಕೆಯ ಕಾಣಿಕೆಯಾಗಿ ಕಡು ನೀಲಿಗೆ ನೀಡುವ ಹೊಂಬಟ್ಟಲು ಸೂರ್ಯ. "ಚಿನ್ನದ ಡಾಲರ್ ನಾಳಿನ ತೂತಿಗೆ ಜಾರುತಿದೆ" ಎಂದನಂತೆ ನಮ್ಮ ಕವಿ ! ರವಿಯಪ್ರತಿಬಿಂಬ ಕಡಲಲ್ಲಿ ಕಾಣಲಿಲ್ಲ. ಆದರೆ ಕಡಲ ಗೆರೆ ಆ ಬಿಂಬವನ್ನು ಕ್ರಮೇಣ ಸೆಳೆಯಿತು, ಹೋಯಿತು, ಹೋಗಿಯೇಬಿಟ್ಟಿತು. ಆ ಕೊನೆಯ ಚುಕ್ಕಿಯೂ ಇನ್ನಿಲ್ಲ. "ಕುರುಕುಲಾರ್ಕನುಮರ್ಕನುಮಸ್ತಮಿಸಿದು" ಎಂದು ಹೇಳಿದ ರನ್ನ ಮಹಾಕವಿಯ ಉಪಮೆ ಎಷ್ಟೊಂದು ಉಚಿತ. ಆಗ ಸಾಯಂಕಾಲ ಮುಗಿಯಿತು.

> ಇಂತಹ ಸುಂದರ ಸಾಯಂಕಾಲದಿ
> ಜೀವಿಸುವುದಕಿಂತಲು ಬೇರೆಯ ಗುರಿ ಜೀವಕೆ ಬೇಕಿಲ್ಲ
>
> ಕುವೆಂಪು ಕ್ಷಮೆ ಕೋರಿ

ಸಂಜೆಯಹಾಯಿತು.

ಒಂದದ ಪಗಲಿರುಳೆರಡರ
ಸಂದುಗಳಂ ವರುಣಶಿಲ್ಪಿ ರಕ್ತಾಂಬರದಿಂ
ಸಂದಿಸಿ ಪೊಯ್ನ ಪೊಲೆಸೆದುದು
ಮಂದ್ಯೈಸಿದ ಸಂಜೆಗೆಂಪು ಪಡುವಣದೆಸೆಯೊಳ್ ರನ್ನ

ಪಡುವಣ ತೆರೆಯಲ್ಲಿ ಶುಕ್ರ, ಬುಧ, ಶನಿ ಒಟ್ಟಾಗಿ ಕಾಂತಿ ಬೀರಿ ನಕ್ಕವು, ಮಹಾ ವ್ಯಾಧ, ಮಹಾಶ್ವಾನಗಳೊಡಗೂಡಿ ವೃಷಭನನ್ನು ನೀರಿನೆಡೆಗೆ ಅಟ್ಟುವ ಚಿರಂತನ ನಾಟಕ ಆಗ ಪ್ರದರ್ಶಿತವಾಗತೊಡಗಿತು. ಡಯಾನಾ ದೇವಿ (ಚಂದ್ರ) ತನ್ನ ಪ್ರೇಮಿ ಮಹಾ ವ್ಯಾಧನ ಸಮಾಗಮಕ್ಕಾಗಿ ಮಂದಹಾಸದ ಪ್ರಭೆಯನ್ನು ಸೂಸಿ ಬರುತ್ತಿದ್ದ ಇನ್ನೊಂದು ನಾಟಕವೂ ಸಿದ್ಧವಾಗುತ್ತಿತ್ತು. ಮಿಥುನ ರಾಶಿಯ ಹೊಸ್ತಿಲಲ್ಲಿ ನಿಂತಿದ್ದ ಬೆಳಕಿನ ಉಂಡೆ ಗುರು ಇನ್ನೊಂದು ಅದ್ಭುತ ದೃಶ್ಯ.

ರಜನಿಯಲಿ ಝಗಝಗಿಸುತಿರುವ ನಕ್ಷತ್ರಗಳು
ಸಪ್ತರ್ಷಿಮಂಡಲವು. ವ್ಯಾಧ, ಕೃತ್ತಿಕೆ, ರೋಹಿಣಿ,
ಕ್ಷೀರಪಥ ಗುರು ಶುಕ್ರ, ಇಲ್ಲಿದೆ ನಭೋಮಂಡಲ
ಇಲ್ಲೆ ನೆರೆದಿಹದಯ್ಯ ನಕ್ಷತ್ರದಕ್ಷೋಹಿಣಿ
ವಿನಾಯಕ

ಉತ್ತರದೆಡೆಗೆ ತಿರುಗಿದರೆ ಅಲ್ಲೊಂದು ಭರತನಾಟ್ಯ ವಿನ್ಯಾಸವೇ ಪ್ರದರ್ಶಿತವಾಗು ತ್ತಿತ್ತು. ಬಲಗಡೆ ಮೂಡುತ್ತಿರುವ ಸಪ್ತರ್ಷಿ ಮಂಡಲ, ಎಡಗಡೆ ಕುಂತುತ್ತಿರುವ ಕ್ಯಾಸ್ಸಿಯೋಪಿಯಾ—ಇವೆರಡೂ ತಮ್ಮ ನಡುವೆ ಇರುವ ಶಾಶ್ವತ ಧ್ರುವನಕ್ಷತ್ರಕ್ಕೆ ಚಾಮರ ಬೀಸುವ ಭಂಗಿಯಲ್ಲಿ ನಿಂತಿದ್ದುವು. ಒಂದೊಂದು ದೃಶ್ಯ ನೋಡಲು ಆಯು ಮಾನ ಸಾಲದು. ಆಕಾಶದಿಂದ ಭೂಮಿಗೆ ಇಳಿದರೆ ಅಲ್ಲಿ ಇನ್ನೊಂದು ವಿಧದ ಬೆರಗು ನಮಗಾಗಿ ಸಿದ್ಧವಾದಂತಿತ್ತು. ನಮ್ಮ ಕೆಳಗಿನ ದೂರ ದೂರದ ಬೆಟ್ಟದ ಸಾಲುಗಳಿಗೆ ಕಾಡು ಬೆಂಕಿ ಬಿದ್ದಿತ್ತು. ಅವುಗಳ ಮೈಮೇಲೆ ವಿಪುಲವಾಗಿ ಬೆಳೆದಿದ್ದ ಹುಲ್ಲಿನ ಬಣಗಳು ಚಿಟಿಮಿಂಟಿಲನೆ ಉರಿದು ಭೀಕರ ಕೆನ್ನಾಲಗೆ ಕಾರುತ್ತಿದ್ದುವು. ಆ ಕತ್ತಲೆಯಲ್ಲಿಯೂ ಕರಾಳ ಹೊಗೆ ಆಕಾಶದೆಡೆಗೆ ಚಿಮ್ಮುತ್ತಿದ್ದುದು ಕಾಣುತ್ತಿತ್ತು. ಅಲ್ಲಿ ಪ್ರವಹಿಸುತ್ತಿದ್ದ ಬೆಳಕು ನವರಾತ್ರಿಯ ಮೈಸೂರರಮನೆಯ ವೈಭವಕ್ಕಿಂತ ಮಿಗಿಲು; ಕನ್ನಂಬಾಡಿಯ ಬೆಳಕಿನ ಹೊಳೆ ಇದರ ಮುಂದೆ ನೆಸರೆ ಮುಂದಿನ ಸೊಡರು. "ಸರಿಯೇ ಸೂರ್ಯಗೆ ಕೋಟಿ ಮಿಂಚುಂಬುಳುಗಳ್ ?" "ಇದು ದೇವರ ದೀಪಾವಳಿ ಕಾಣೊ" ಆ ದೃಶ್ಯ "ರುದ್ರ ಮನೋಹರ." ಒಂದು ಕಡೆ ಬೆಂಕಿ ಗೆರೆ ಪರ್ವತರಾಜನಿಗೆ ಚಿನ್ನದ ಹಾರ ತೊಡಿಸಿ ದಂತೆ; ಇನ್ನೊಂದು ಕಡೆ ಪರ್ವತದ ಸುಪ್ತ ಪ್ರೇಮ ಹೃದಯಾಕಾಶದಲ್ಲಿ ವ್ಯಕ್ತವಾಗಿತ್ತು; ಮತ್ತೊಂದು ಕಡೆ ಪಲ್ಲಕ್ಕಿಯ ಕಮಾನಿನಂತೆ; ಬೇರೊಂದು ಕಡೆ ದಕ್ಷಿಣ ಭಾರತದ ಸುವರ್ಣ ಚಿತ್ರ! ಉಳಿದ ಕಡೆ ಆಕಾರ ರಹಿತ ಆದರೂ ಸಾಕಾರ. ಬೆಂಕಿಯು ನಾಲಗೆ ಬೆಟ್ಟ ಗಳನ್ನು ನೆಕ್ಕುತ್ತಿದ್ದಿತು.

"ಸಿರಿವಂತರೂ ಬಡವರೂ ಬೀಗವಿಕ್ಕಿರುವ ಎರಡು ಸಂದೂಕಗಳು—ಒಂದರ ಕೀಲಿ ಇನ್ನೊಂದರೊಳಗೆ." ಇಲ್ಲಿ ನಿಸರ್ಗ ಸಿರಿವಂತ, ಮಾನವ ಬಡವ.

ಎಂಟು ಗಂಟೆಗೆ ನಾವು ಆಶ್ರಮಕ್ಕೆ ಮರಳಿದೆವು. ಪಾಯಸ, ಚಿತ್ರಾನ್ನ, ಕೇಸರಿಬಾತ್, ತಿಳಿಸಾರು, ಅನ್ನ ಚಪಾತಿ. ಸಾಕ್ಷಾತ್ ನಳ, ವಲಲರು ಅಲ್ಲಿ ಸಂಗಮಿಸಿದ್ದರು. ಊಟ ವಾಯಿತು—ಶಿಬಿರಾಗ್ನಿ: "ಬೆಂಗಾಳೂರದು, ನಮ್ಮ ಬೆಂಗಾಳೂರದು ಬಲು ದೂ...ಊ ...ರಾ..." ಪಿಂಟೋ ಹಾಡಿದ. ಚಂದ್ರಶೇಖರಬಾಬು ಮಲೆಯಾಳೀ ಹಾಡು ಹಲುಬಿದ. ಕುಣಿದರು, ಕತೆ ಹೇಳಿದರು, ನಕ್ಕು ನಲಿದರು. ಮಲಗುವ ಮುನ್ನ ಕಾಡು ಮೃಗಗಳಿಂದ ರಕ್ಷಣೆಗಾಗಿ ಸಶಸ್ತ್ರ ಪಹರೆಯನ್ನು ಏರ್ಪಾಡು ಮಾಡಲು ಮರೆಯಲಿಲ್ಲ. ಆದರೆ ಶಸ್ತ್ರಧಾರಿ ಗಳು ಮಾತ್ರ ಖಾನ್ವಿಲ್ಕರರು. ಪ್ರಭಾಕರ ರೆಡ್ಡಿ ದೊಡ್ಡ ಶಿಕಾರಿಗಾರನಂತೆ. ಬಗೆಬಗೆ ಯಾಗಿ ಬೇಡಿದ—ರಾತ್ರಿ ಸಂಗಡಿಗರೊಡನೆ ಶಿಕಾರಿಗೆ ಹೋಗಿಬರುವುದಾಗಿ, ರೈಫಲ್ ಕೊಡಬೇಕೆಂದು. "ನನ್ನ ಮುಂದಾಳುತನದಲ್ಲಿ ಅದು ಅಸಾಧ್ಯ—ಬೇಟೆಗೆ ನಾನು ಬದ್ಧ ವೈರಿ" ಎಂದು ಅವನನ್ನು ಹತಾಶೆಗೊಳಿಸಬೇಕಾಯಿತು. ಆ ನಿರಪರಾಧಿ ಕಾಟಿಯನ್ನು ನಾವು ಕೊಂದ ದೃಶ್ಯ ಎಂದೂ ಮರೆಯಲಾರೆ.

ಮರುದಿನ ಮಾಮೂಲಿನಂತೆ ೬–೩೦ಕ್ಕೆ ಉಪಾಹಾರ. ೭ ಗಂಟೆಗೆ ಹೊರಟೆವು. ಒಂದು ತಂಡ ಬಂಡೆ ಜಾರಲು, ಏರಲು; ಇನ್ನೊಂದು ತಂಡ ಕಾಡು ಅಂಡಲೆಯಲು. ಶಿವಪ್ಪ, ಶೇಣವ, ಡಾಕ್ಟರರು ಎರಡನೆಯವರ ಜೊತೆ ಹೋದರು. ನಾನು ಮೊದಲನೆಯವರ ಜೊತೆ ಹೋದೆ, ಊಟದ ಹೊತ್ತಿಗೆ ನಾವು ಮರಳಬೇಕು. ಊಟವಾದ ತರುವಾಯ ತಂಡಗಳ ಬದಲಾವಣೆ. ಇದು ಕಾರ್ಯಕ್ರಮ. ಪುಣ್ಯವಶಾತ್ ನಮಗೆ ಅನುಕೂಲವಾದ ಸ್ಥಳ ಬೇಗನೆ ದೊರೆಯಿತು. ಅಲ್ಲಿ ಕುದುರೆಮುಖದ ಶ್ರೇಣಿ ಥಕ್ಕನೆ ಮುಗಿದು ಕೆಳಗೆ ಸುಮಾರು ೫೦ ಅಡಿ ಆಳದ ನೆಗೆತ. ಬಳಸಿಕೊಂಡು ಹೋಗಿ ಅದರ ತಳ ಸೇರಬಹುದು. ತಳದಿಂದ ಸೀದಾ ಮೇಲೆ ಏರಲು ಸಾಧ್ಯವಾಗುವಂಥ ಒಂದು ಕಡಿದಾದ ಕೊರಕಲೂ (ಚಿಮ್ನಿಯಂತೆ) ಅಲ್ಲಿಯೇ ಇದ್ದಿತು. ಹೀಗಾಗಿ ಇಂದೊಂದೇ ಸ್ಥಳದಲ್ಲಿ ನಮಗೆ ಬಂಡೆ ಏರುವುದು, ಜಿಗಿಯುವುದು ಎರಡನ್ನೂ ಮಾಡಲು ಸಾಧ್ಯವಿತ್ತು. ಆದರೆ ೫೦ ಅಡಿ ಆಳ ಜಿಗಿಯಲು ನಿಲ್ಲುವ ವೇದಿಕೆ (ಅಂದರೆ ಪ್ರಪಾತದ ಅಂಚು) ನೆಲದಿಂದ ಸ್ವಲ್ಪ ಹೊರಗೆ ಚಾಚಿರುವುದರಿಂದ ಅಲ್ಲಿಗೆ ಸಕಲ ರಕ್ಷಣಾಪೂರ್ವಕವಾಗಿಯೇ ಹೋಗಿ ನಿಂತಾಗ ಎಂಥ ಗಂಡೆದೆಯೂ ಒಂದು ಸಲ ಹಿಂದೆ ಮುಂದೆ ಯೋಚಿಸುತ್ತಿತ್ತು. ಲಕ್ಷ್ಮಿ, ಮೋಹನರು ಇಲ್ಲಿ ಕಂಪ್ಪಳಿಸಿ ನೆಗೆದು ಭದ್ರವಾಗಿದೆಯೆಂದರು. ಪಿಂಟೋ ಮೇಲುಗಡೆ ಕುಳಿತು ಜಿಗಿಯು ವವರನ್ನು ಬಿಲೇ ಮಾಡುತ್ತಿದ್ದ. ಅವನ ಬಳಿಯಲ್ಲಿ ಲಕ್ಷ್ಮಿ ಕುಳಿತು ಚಿಮ್ನಿಕಲ್ಲನ್ನೇರು ವವನನ್ನು ಬಿಲೇ ಮಾಡುತ್ತಿದ್ದ. ಇವರ ಸಹಾಯಕ್ಕೆ ಬೇರೆ ಇಬ್ಬರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೂರಿಸಿ ಸುಬೇದಾರ್ ಖಾನ್ವಿಲ್ಕರರನ್ನು ಮೇಲೆ ಉಸ್ತುವಾರಿಕೆಗಾಗಿ ಬಿಟ್ಟು ನಾನು ಕೆಳಗೆ ಬಂದೆ. ಮೊದಲು ಒಬ್ಬ ಜಿಗಿಯಬೇಕು. ಹೀಗೆ ಕೆಳಗೆ ಬಂದವನು ಚಿಮ್ನಿಯ ಮೂಲಕ ಮೇಲೇರಿ ಹೋಗಬೇಕು. ಸಂಶಯಾತ್ಮರು (ವಿನಶ್ಯತಿಃ) ಇದು ಯಾವುದನ್ನೂ ಮಾಡಬಾರದೆಂದು ನಾನು ಕಡ್ಡಾಯವಾಗಿ ವಿಧಿಸಿದೆ. ಇದುವರೆಗಿನ ನಮ್ಮ ಎಲ್ಲ ಸಾಹಸ ಗಳಿಗಿಂತಲೂ ಇದು ಹೆಚ್ಚು ಅಪಾಯಕರವಾದದ್ದು. ಮೂರು ನಾಲ್ಕು ಜನ ಸರಿ ಯಾಗಿಯೇ ಮಾಡಿದರು. ಅದ್ದರಿಂದ ಧೈರ್ಯ ಬಂದಿತು ಇತರರಿಗೆ, ನನಗೂ ಸಹ. ನಾನೂ ಹೊರಟೆ. ಪ್ರಪಾತದ ಅಂಚಿಗೆ ಬಂದಾಗ ಎದೆ ನಡುಗಿತು; ಮೈ ಬೆವರಿತು. ಕಾರಣ

ಏನೂ ಇಲ್ಲ ; ಹಿಂದೆ ಹಾರಿದ್ದೇನೆ, ಆದರೆ ಇಂಥ ಆಳವನ್ನಲ್ಲ. ಆದರೂ ಮಾನ, ಪ್ರತಿಷ್ಠೆ ಇವೆಯಲ್ಲ, ಹೊರಟಮೇಲೆ ಆದದ್ದಾಗಲಿ, ಪ್ರಾಣಭಯವಿಲ್ಲ, ಎಂದು ಜಿಗಿದೇಬಿಟ್ಟೆ. ಜಗಿದ ಕೋನ ಸರಿಯಾಗಲಿಲ್ಲ. ಸಮತೋಲ ತಪ್ಪಿತು. ಇಡೀ ದೇಹ ಬಲಗಡೆಗೆ ಲೋಲಕದಂತೆ ತೂಗಾಡಿ ಬಡಿಯಿತು, ಕಾಲು ಚಾಚಿದ್ದುದರಿಂದ ಅಲ್ಲಿ ನಿಂತೆ. ಇದನ್ನು ನೋಡುತ್ತಿದ್ದ ನನ್ನ ಭಾವ ಶಂಕರ "ಇದು ಭಯಂಕರ" ಎಂದು ಉದ್ಗರಿಸಿದ. ನನ್ನ ತಪ್ಪಿಂದ ಭಯಂಕರವಾಯಿತಷ್ಟೇ. ಮತ್ತೆ ಸರಿಯಾಗಿ ನಿಂತು ಜಿಗಿದೆ. ಸರಿಯಾಗಿಯೇ ಕೆಳಗೆ ಬಂದೆ. ಸದ್ಯ, ಮರ್ಯಾದೆ ಉಳಿಯಿತು. ಚಿಮ್ಮಿ ಏರಲು ನಾನು ಹೊರಡಲಿಲ್ಲ ಐದಡಿ ಹತ್ತಿದ್ದ ಅನಂತರಾಜು ಕುಸಿದುಬಿದ್ದ. ಬಿಲೇ ಇದ್ದುದರಿಂದ ತೊಂದರೆ ಆಗಲಿಲ್ಲ. ಹತ್ತಡಿ ಹತ್ತಿದ್ದ ನಾಗರಾಜ ಸಾಧ್ಯವಿಲ್ಲ ಎಂದು ಕೆಳಗಿಳಿದ. ನಮ್ಮ ಮಾತುಭಾರಿ ಜಗನ್ನಾಥ ಶಾಸ್ತ್ರಿ "ನಾನು ನೋಡಿ ಸಾರ್, ಬೆಸ್ಟ್ ಡೆಮೋನ್‌ಸ್ಟ್ರೇಷನ್ ಕೊಟ್ಟೇಬಿಡುತ್ತೇನೆ" ಎಂದ.

"ಅದು ಮಾತಾಡಿದಷ್ಟು ಸುಲಭ ಅಲ್ಲ" ನಾನೆಂದೆ.

"ನಿಂಗಾಗೋದಿಲ್ಲ ಕಣೋ" ಲಕ್ಷ್ಮಿ ರೇಗಿಸಿದ. ಶಾಸ್ತ್ರಿ ಏರಿಯೇಬಿಟ್ಟ. ಲಕ್ಷ್ಮಿ ಮೇಲಿನಿಂದ (ಅವನಿಗೆ ಏರುತ್ತಿರುವವನನ್ನು ಕಾಣುವುದಿಲ್ಲ. ಹಗ್ಗದ ಹಿಡಿತದಿಂದ ಏರುವವನನ್ನು ಅವನು ನಿಯಂತ್ರಿಸಬೇಕು) ಬಿಲೇ ಹಿಡಿದಿದ್ದ. ಶಾಸ್ತ್ರಿ ಮಾತು ಆಡುತ್ತಲೇ ಗಲಭೆ ಮಾಡುತ್ತಲೇ ಏರತೊಡಗಿದ. ನಾನು ಹೇಳಿದೆ "ಏಕಾಗ್ರತೆಯಿಂದ ಏರಪ್ಪ, ಬೇರೆ ಕಡೆ ಲಕ್ಷ್ಯವೀಯಬೇಡ."

೧೦-೧೨ ಅಡಿ ಏರಿರಬಹುದು, "ಸಾರ್, ಸಾರ್! ನಾಳೆ ದಿವಸದ ಪ್ರೋಗ್ರಾಮ್ ಏನು ?" ನನ್ನ ಕಡೆಗೆ ತಿರುಗಿ ಕೇಳಿದ. ಹಿಡಿದ ಕಲ್ಲಿನ ಹಿಡಿತ ತಪ್ಪಿತು. "ಓ ಬಿದ್ದೇ ಬಿದ್ದೇ" ಎಂದು ಚೀತ್ಕರಿಸಿ ಧಡೀರನೆ ನೆಗೆದುಬಿಟ್ಟ. ಯಾವ ಬಿಲೇ ಹಗ್ಗವೂ ಎಂಥ ಬಿಲೇಕಾರನೂ ಇಂಥ ಹುಚ್ಚು ನೆಗೆತವನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಪ್ರತಿಯೊಬ್ಬನೂ ಅವನವನ ಪಾಲಿನ ಕರ್ತವ್ಯವನ್ನು ಶಿಸ್ತಿನಿಂದ ನಿರ್ವಹಿಸಲೆಂದೇ ಅವರಿಗೆ ಪೂರ್ಣ ಶಿಕ್ಷಣವಿತ್ತೇ ಇಂಥಲ್ಲಿಗೆ ಕರೆದುಕೊಂಡು ಹೋಗುವುದು. ಆದರೂ ಪ್ರಾಯದ ಪ್ರಭಾವ, ನರನನ್ನು ವೀರಿಸಿದ ವಾನರ. ಆ ದುರ್ಧರ ಪ್ರಸಂಗದಲ್ಲಿ ಮೂರು ಭೀಕರ ದುರಂತ ಸಂಭವಿಸದೇ ಇದ್ದದ್ದು ಪವಾಡವೆಂದು ನಾನು ತಿಳಿದಿದ್ದೇನೆ. ಬಿದ್ದ ಶಾಸ್ತ್ರಿಗೆ ಎದೆಗೋ ತಲೆಗೋ ಕಲ್ಲುಬಡಿದು ಶೀಘ್ರಪೆಟ್ಟಾಗಬಹುದಿತ್ತು. ಅದೇ ಗಳಿಗೆಯಲ್ಲಿ ನಿರಪರಾಧಿ ತಿಮ್ಮಪ್ಪ ಅಲ್ಲೇ ಅಡ್ಡ ದಾಟುತ್ತಿದ್ದ. ಅವನ ತಲೆಯ ಮೇಲೆ ಹಠಾತ್ತಾಗಿ ಈ ಕಲ್ಲುಗುಂಡು ಶಾಸ್ತ್ರಿ ಬಿದ್ದ. ಒಂದೆರಡು ಗಂಟೆ ಹೊತ್ತು ತಿಮ್ಮಪ್ಪ ನೋವಿನಿಂದ ಹೊಡೆತದಿಂದ ನರಳುತ್ತಿದ್ದ. ಅವನಿಗೂ ಅಪಾಯ ಸಂಭವಿಸದೇ ಇದ್ದದ್ದು ಅದೃಷ್ಟ. ಇನ್ನು ಬಿಲೇ ಮಾಡಲು ಕುಳಿತಿದ್ದ ಸಾಕ್ಷಾತ್ Chief Instructor. ಹಿಮಾಲಯದ ಕಲಿ ಲಕ್ಷ್ಮೀನಾರಾಯಣ ಬಿಲೇ ಹಗ್ಗವನ್ನು ತನ್ನ ಹೆಗಲಿಗಾಗಿ ಸುತ್ತಿ ಅದರ ಕೊನೆಯನ್ನು ಹಿಂದೆ ಬಿಟ್ಟಿದ್ದ—ಹಿಂದೆ ಯಾರೂ ಹಿಡಿದಿತ್ತಿಲ್ಲ—ಇವನು ಬೇಡವೆಂದು ಹೇಳಿದ್ದನಂತೆ! ಶಾಸ್ತ್ರಿ ಧುಮುಕಿದ್ದು ಹಠಾತ್ತನೆ. ಆ ಎಳೆತದಿಂದ ಬಿಲೇ ಹಗ್ಗ ಲಕ್ಷ್ಮಿಗೆ ಯಮಪಾಶದಂತೆ ಸುತ್ತಿ (ಜಾರದೇ) ಅವನನ್ನು ಗಾಳಿಗೆ ಸಿಕ್ಕ ತರಗೆಲೆಯಂತೆ ಎಳೆದುಬಿಟ್ಟಿತು. ಅವನು ಕುಳಿತಿದ್ದುದು ಪ್ರಪಾತದ ಅಂಚಿನಿಂದ ಕೇವಲ ಎರಡಡಿ ಹಿಂದೆ. ಹುಡುಗ ಬುದ್ಧಿವಂತನೋ,

ಅದೃಷ್ಟವೋ ಅವನು ಹಗ್ಗದ ಹಿಡಿತ ಬಿಟ್ಟು ಕೈಕಾಲು ಚಾಚಿ ನೆಲದಮೇಲೆ ಹೊರಳಿ ಬಿಟ್ಟ. ಲಕ್ಷ್ಮಿಯ ತಲೆ ಪ್ರಪಾತದಂಚಿನಲ್ಲಿ ನೆಲಕ್ಕಪ್ಪಳಿಸಿದುದು ಕೆಳಗಿನಿಂದ ನನಗೆ ಕಂಡಿತು. ಇನ್ನೊಂದಡಿ ಮುಂದೆ ಬಂದಿದ್ದರೆ ಅವನು ೫೦ ಅಡಿ ಕೆಳಗೆ ಬಿದ್ದಿರುತ್ತಿದ್ದ. ಆದರೆ ಅಷ್ಟರಲ್ಲಿಯೇ ಶಾಸ್ತ್ರಿ ನೆಲ ಸೇರಿದ್ದುದರಿಂದ ಲಕ್ಷ್ಮಿ ಅಲ್ಲಿಯೇ ಉಳಿದುಕೊಂಡ. ''ಬಂಡೆಯೊಡನೆ ಸೆಣಸಬೇಡ.'' ಆ ಕ್ಷಣವೇ ನಾನು ಚಿಮ್ಣಿಯನ್ನು ಕೈದುಮಾಡಿದೆ.

ಸಂಜೆ ಪುನಃ ಸೂರ್ಯಾಸ್ತಮಾನ ವೀಕ್ಷಣೆ. ಹೊಸ ನಾಟಕ. ನಿತ್ಯನೂತನತೆಯೇ ಪ್ರಕೃತಿಯ ರಹಸ್ಯ. ನಾವು ಹಿಂತಿರುಗಿ ಹೋದಾಗ ಬಂಡೆ ಕಲ್ಲಿನ ಬಳಿ ಮೋಹನ ಅಂಗಾತ ಬಿದ್ದುಬಿಟ್ಟಿದ್ದಾನೆ, ಕೈಕಾಲು ಎಲ್ಲ ಕೊರಡಿನಂತೆ. ಕಣ್ಣು ಮುಚ್ಚಿಹೋಗಿವೆ. ಬಾಯಿಯಿಂದ ನೊರೆ ಬುದ್ಬುದಿಸುತ್ತಿದೆ. ಅಪಸ್ಮಾರ ? ಹುಡುಗರು ಸುತ್ತಲೂ ಸೇರಿದ್ದಾರೆ. ಗಾಳಿಹಾಕಿದರು ಕೆಲವರು. ''ಇದು ಆಟ. ನಿಜವಲ್ಲ'' ಎಂದರು ಬೇರಿಬ್ಬರು.

ನಾನೆಂದೆ ''ಮೋಹನಾ ! ಇದು ಆಟವಾದರೆ ಭಯಂಕರ ಆಟ. ಇದನ್ನು ಆಡಬಾರದು. ಅದೂ ಇಂಥ ಸ್ಥಳದಲ್ಲಿ ಖಂಡಿತವಾಗಿಯೂ ಆಡಬಾರದು. ಎದ್ದುಬಿಡು ಸಾಕು. ನನಗೆ ಭಯವಾಗಿದೆ'''

ಮೋಹನ ಏಳಲಿಲ್ಲ. ಮೊಸಳೆ ಬಂತು ಕತೆಯೇ ? ಆಟ ವಾಸ್ತವಿಕತೆಯಾಯಿತೇ ? ಸ್ವಲ್ಪ ಹಿಂದಿನಿಂದ ಬರುತ್ತಿದ್ದ ಡಾಕ್ಟರರಿಗೆ ತ್ವರೆಯಾಗಿ ಬರಲು ಹೇಳಿಕಳಿಸಲಾಯಿತು. ಮೋಹನ ಯಥಾಸ್ಥಿತಿ. ಡಾಕ್ಟರರು ಬಂದರು. ಕಣ್ಣುರೆಪ್ಪೆ ಅಗಲಿಸಿ ನೋಡಿದರು. ''ಇನ್ನು ಮುಂದೆ ಈ ಹುಚ್ಚು ಬೇಡ. ಏಳು'' ಎಂದು ಬಾರುಕೋಲಿನಿಂದ ಬೆನ್ನಿಗೆರಡು ಬಾರಿಸಿದರು. ಚಂಗನೆ ನೆಗೆದ, ಮೋಹನ ಸರಿಯಾದ, ಬಾಯಿಗೆ ಟೂತ್‌ಪೇಸ್ಟ್ ಹಾಕಿ ನೊರೆ ಬರಿಸಿದ್ದಂತೆ. ನಾನವನನ್ನು ಚೆನ್ನಾಗಿ ಥಳಿಸಿದೆ.

ಮರುದಿನ, ಅಂದರೆ ಮೂರನೆಯ ದಿನ, ಬೆಟ್ಟ ಕಾಡುಗಳ ಹಿಂದಿನಿಂದ ಸೂರ್ಯೋದಯವಾಗುವುದನ್ನು ನೋಡಲು ಶಿಬಿರಕ್ಕೆ ಧಾವಿಸಿದೆವು. ಚಿನ್ನದ ಡಾಲರ್ ಮೇಲೇರಿ ಬರುವುದು ಇನ್ನೊಂದು ವಿಧದ ಸುಂದರ ದೃಶ್ಯ. ಆ ಬೆಳಗ್ಗೆ ಅವರವರ ಮನಬಂದಂತೆ ಆದರೆ ಐದೈದು ಜನರ ಗುಂಪಾಗಿ ತಿರುಗಿ ಬರಲು ಸ್ವಾತಂತ್ರ್ಯವಿತ್ತು. ಶಿವಪ್ಪ, ಗೌರಿಶಂಕರ ಉಪಾಹಾರವಾದೊಡನೆ ಒಬ್ಬ 'ಶೆರ್ಪಾ'ನೊಡಗೂಡಿ ನಾವೂರಿಗೆ ಹಿಂತಿರುಗಿದರು. ಮೆಂಗಿಲ ಶೇಣವನ ಜೊತೆಯಲ್ಲಿ ನಾನೊಬ್ಬನೇ ಹೊರಟೆ. ಡಾಕ್ಟರರೂ ಖಾನ್ವಿಲ್ಕರರೂ ಪರ್ಣಕುಟೀರದಲ್ಲಿ ಬೇರೆ ಹುಡುಗರೊಡನೆ ಆಡುತ್ತ ಹರಟುತ್ತ ಕುಳಿತರು. ಕುದುರೆಮುಖದ ಗೊಂಡಾರಣ್ಯದೊಳಗೆ ನಾನೂ ಶೇಣವನೂ ಪ್ರವೇಶಿಸಿದೆವು. ಸಾಲಾಗಿ ನಿಂತಿರುವ ತಳವಾರರಂಥ ಮರಗಾಡು. ಅದರಲ್ಲಿ ಪೊದೆಯಿಲ್ಲ. ಕುರುಚಲು ಇಲ್ಲ. ಹೀಗಾಗಿ ಯಾವ ಕಡೆಗೆ ಬೇಕಾದರೂ ಅಲೆಯುವ ಸೌಕರ್ಯವಿತ್ತು. ಅದರೊಳಗೆ ಸೂರ್ಯನ ಬಿಸಿಲು ಬರುವಂತೆಯೇ ಇಲ್ಲ. ನಮ್ಮ ನಡಿಗೆ, ವಾಸನೆಗಳಿಗೆ ಹೆದರಿದ ಯಾವುದೋ ಪ್ರಾಣಿಗಳು ಧಡಧಡನೆ ಧಾವಿಸಿದ ಸದ್ದು ಮಾತ್ರ ನಮಗೆ ಕೇಳಿಸಿತು. ಕಾಡಿನ ಒಂದು ಅಂಚಿನಲ್ಲಿ ಬಂಡೆಗಳ ಮೇಲೆ ಧುಮುಧುಮಿಸಿ ಧುಮುಕುವ ಜಲಪಾತ; ನೈಸರ್ಗಿಕ ಕಾಮನಬಿಲ್ಲು ''ತೆಕ್ಕನೆ ಮೈಮನ ಮರೆ''ಸುವಂಥ ದೃಶ್ಯ. ಕಾಡನ್ನು ಸುತ್ತಿ ಬೆಟ್ಟದ ಇನ್ನೊಂದು ಮಗ್ಗುಲಿಗೆ ಬಂದರೆ ನಾವು ಕುದುರೆಮುಖದ ಜೊತೆಗಾರನಾದ ಗೋಮುಖದ (೬,೧೭೭ ಅಡಿ)

ಮೇಲಿದ್ದೇವೆ ; ಇವೆರಡರ ಮಧ್ಯೆ ಇರುವ ಇನ್ನೊಂದು ಶಿಖರ ಗುಂಡುಕಲ್ಲು (೬,೧೦೦ ಅಡಿ). ಕುದುರೆಮುಖ, ಗುಂಡುಕಲ್ಲು, ಗೋಮುಖ ಸಾಲಾಗಿ ದಕ್ಷಿಣ–ಪಶ್ಚಿಮ ದಿಕ್ಕಿಗೆ ಮುಖ ಮಾಡಿ ನಿಂತಿರುವ ಶಿಖರಗಳು. ನಾವೂರು ಕಡೆಯಿಂದ ಬರುವಾಗ ಅತಿ ಸಮೀಪದ ಅತಿ ಎತ್ತರದ ಕುದುರೆಮುಖ ಮೊದಲು ಕಾಣುವುದರಿಂದ ಉಳಿದ ಶಿಖರಗಳು ಅಲ್ಲಿಗೆ ಅಗೋಚರ, ಕುದುರೆಮುಖದ ಕೆಳಗೆ ಬೋಳು ಬೆಟ್ಟಗಳ ರಾಶಿ, ಬಯಲು ಸೀಮೆ ಕಾಣುವುವು. ಆದರೆ ಗೋಮುಖದ ಕೆಳಗಿನ ದೃಶ್ಯ ಲಕ್ಷಾಂತರ ನವಪಲ್ಲವಖಚಿತ ವೃಕ್ಷ ರಾಶಿ ಒಂದರ ಮೇಲೊಂದು ಬಿದ್ದಂತೆ. ಆ ಚಿಗುರುಗಳ ವರ್ಣವೈವಿಧ್ಯ, ನೊರೆ ನೊರೆ ಯಾಗಿ ಕುಸುರು ಕುಸುರಾಗಿ ಮೊಸರುಗಡಲಿನ ಬೆಣ್ಣೆಯಂತೆ ತೇಲಿಬರುವ ದೃಶ್ಯ ಇನ್ನೊಂದು ಮರೆಯಲಾಗದ ಅನುಭವ. ಸೃಷ್ಟಿಕರ್ತ ಅತಿ ಸುಂದರ ವಿಶಾಲ ರತ್ನಗಂಬಳಿ ಯನ್ನು ಅಲ್ಲಿ ಆಚ್ಛಾದಿಸಿದಂತೆ ಇತ್ತು. ಬಾಂದಳವೇ ರಂಗ, ಭಾನುವೇ ನಾಯಕ, ನಕ್ಷತ್ರ ಗಳು ನಟರು, ಭೂಮಂಡಲವೇ ಪ್ರೇಕ್ಷಕ ! ೧೨ ಗಂಟೆ ಮಧ್ಯಾಹ್ನ ಊಟ ಮುಗಿಸಿ ಹಿಂದೆ ಹೊರಡುವುದೆಂದು ನಮ್ಮ ಕಾರ್ಯಕ್ರಮ. ನಾನು ಹಿಂತಿರುಗಿ ಬರುವುದನ್ನು ಎಲ್ಲರೂ ಕಾತರರಾಗಿ ಕಾಯುತ್ತಿದ್ದರು. ಅವ್ಯಕ್ತ ಸಂತೋಷ ಅವರ ಮುಖದ ಮೇಲೆ ಲಾಸ್ಯ ವಾಡಿತು. ಡಾಕ್ಟರರೆಂದರು "ಮತ್ತೇನಾಯಿತು ?"

"ಏನು ?" ನಾನೆಂದೆ.

"ಅದೇ ನೀವು ಕೂಗಿದಿರಲ್ಲ ?"

"ತಮಾಷೆ ಮಾಡಬೇಡಿ, ಸಾರ್" ಡಾಕ್ಟರರು.

"ಡಾಕ್ಟ್ರೇ ! ನಿನ್ನೆ ರಾತ್ರಿ ಮೋಹನನ ತಮಾಷೆ ನೋಡಿ ಹೆದರಿಹೋದೆ, ಅದಕ್ಕೆ ಮೊದಲು ಲಕ್ಷ್ಮಿಯ ತಮಾಷೆಯೂ ನನ್ನನ್ನು ಅಲುಗಿಸಿತು, ಇನ್ನು ನಾನೇ ಮಾಡು ವುದುಂಟೇ ? ಈಗ ಮಾಡುತ್ತಿರುವವರು ನೀವು." ನನಗೆ ಸಮಸ್ಯೆ.

"ಅಲ್ಲ ಸಾರ್, ಬೈಸನ್ ಏನಾದರೂ !"

"ಹತ್ತು ವರ್ಷಗಳ ಹಿಂದೆ."

"ಅಲ್ಲ, ಇವತ್ತು ?"

"ಹೌದು..."

"ಅದೇ ನಾವು ಕೇಳುತ್ತಿರುವುದು."

"ಹೌದು—ಆದರೆ ಲದ್ದಿ ಕಂಡೆ !"

"ಅಲ್ಲ ಸಾರ್, ನಿಮ್ಮ ಮೇಲೇನಾದರೂ ?"

"ಹೌದು ಏರಿ ಬಂತು,"

"ಅದೇ ನಾವು ಕೇಳುತ್ತಿರುವುದು. ಮತ್ತೇನಾಯಿತು ?"

"ಈ ಭೀಕರ ಕಾನನಾಂತರದೊಳ್ ನಾನುಂ ಮೇಣ್ ಮುಂಗಿಲ ಶೇಣಮುಪೋಗುತ್ತಿರ್ಪಾ ಸಮಯದೊಳ್ ಕೂರ್ಗಣೆಯಂತೆ ಎತ್ತಣಿಂದಲೋ ಬಂದು ಫಕ್ಕನೆ ಮೇಲೆರಗಿದುದ್ಯೆ..."

"ಏನು, ಏನು ?"

"ಒಂದು ದೊಡ್ಡ ಪಕ್ಷಿಕಾ !"

ಎಲ್ಲರೂ ನಕ್ಕರು. ಏನು ಕತೆ ಎಂದು ಡಾಕ್ಟರರನ್ನು ಕೇಳಿದಾಗ ಅವರೆಂದರು "ನೀವು

ಕಾಡಿನೊಳಗೆ ನುಗ್ಗಿಹೋದ ಸ್ವಲ್ಪ ಹೊತ್ತಿನಮೇಲೆ ಅದೇ ದಿಕ್ಕಿನಿಂದ ನಿಮ್ಮ ಸ್ವರ ಕೇಳಿಸಿತು 'Bison, bison, help, help' ಎಂದು. ಖಾನ್ವಿಲ್ಕರ್, ನಾನು ಬೇರೆ ಹುಡುಗರು ಎಲ್ಲರೂ ಕೇಳಿ ನಡುಗಿಹೋದೆವು. ರೈಫಲ್ ಹಿಡಿದರು ಖಾನ್ವಿಲ್ಕರರು; ನಾವೆಲ್ಲರೂ ಅವರ ಹಿಂದೆ ಬೊಬ್ಬೆ ಹೊಡೆಯುತ್ತ ಓಡಿದೆವು. ಕಾಡೆಲ್ಲ ಅಲೆದೆವು. ನಿಮ್ಮ ಹೆಸರನ್ನೂ ಶೇಣವನ ಹೆಸರನ್ನೂ ಕೂಗಿ ಕರೆದೆವು. ಎಲ್ಲಿಯೂ ಸುದ್ದಿಯಿಲ್ಲ, ಸದ್ದಿಲ್ಲ; ಬಿದ್ದಿಲ್ಲ. ದಿಗ್ಭ್ರಮೆಗೊಂಡ ನಾವು ಈಗ ತಾನೇ ಮರಳಿದೆವು.''

ಮುಂದೆ ವಿಚಾರಿಸಿದಾಗ ಸತ್ಯಸಂಗತಿ ತಿಳಿಯಿತು. ಗುರು, ವಾಸು, ಶ್ರೀನಿವಾಸ, ಶಾಸ್ತ್ರಿ ಆಡಿದ ಆಟ ಅದು. ನನ್ನ ಸ್ವರವನ್ನು ಯಶಸ್ವಿಯಾಗಿ ಅನುಕರಿಸಿದ್ದರು. ಮೋಹನನನ್ನು ಥಳಿಸಿದಂತೆ ಇವರನ್ನೂ ಥಳಿಸಿದೆ. ಅಪಾಯಂಕರ ಪ್ರಾಯೋಗಿಕ ತಮಾಷೆ ನಿಜ ಅಪಾಯದಲ್ಲಿ ಪರ್ಯವಸಾಯಿಯಾಗುವುದು ವಿರಳವಲ್ಲ.

ಅವರೋಹಣ ಪರ್ವ

೧೨ ಗಂಟೆಗೆ ನಾವು ಕುದುರೆಮುಖದ ಕೊನೆಯೂಟ ಮುಗಿಸಿದೆವು.

ಮಲಗು ಮಗುವೆ ! ಮಲಗು
ಕುದುರೆ ಮೊಗವೆ
ಅಲುಗದಿರು ಅಗಲದಿರು ಇ
ನ್ನೊಮ್ಮೆ ಬರುವ ವರೆಗೆ

ಎಂದು ಸಾಮೂಹಿಕ ಗಾನ ಹಾಡಿದೆವು.

ಮತ್ತೆ ಅವರೋಹಣ. ಕಡಿಮೆ ಭಾರ. ನ್ಯೂಟನ್ನನ ಸಹಕಾರ. ಸಾಯಂಕಾಲದ ೬ ಗಂಟೆಗೆ ಮೊದಲೇ ನಾವೂರು ಬಂಗ್ಲೆಯ ಸರಹದ್ದು ತಲಪಿದೆವು. ಇಳಿಯುವಾಗಲೂ ಗಂಟೆ ಗಂಟೆಗೆ ಟೀ ತಿಂಡಿಗಳ ಸಮಾರಾಧನೆ. "ಇನ್ನು ಬೇಡ ನಮಗೆ'' ಎಂದು ಹುಡುಗರು ಹೇಳುವವರೆಗೂ ಸರದಿ. ನಾವೂರು ಬಂಗ್ಲೆ ಸಮೀಪವಾದಂತೆ ಕುಶಾಲು ತೋಪು ಹೊಟ್ಟಿಸಿದೆವು. ಹೊಗೆ ಬಾಂಬು ಎಸೆದೆವು. ಜಯಕಾರ ಕೂಗಿದೆವು. ನಮ್ಮ ಗೂಡ್ಸ್ ಬಂಡಿ ಈಗ ಏರೋಪ್ಲೇನ್ ವೇಗದಲ್ಲಿ ಮುನ್ನುಗ್ಗುತ್ತಿದ್ದುದರಿಂದ ಲೈನು ಮುರಿಯಿತು. ಹಿಂದೆ ಇದ್ದ ನಾನು ಲಗುಬಗೆಯಿಂದ ಕಾಲು ಚಾಚಿ ನಡೆಯುತ್ತಿದ್ದೆ. ಶಿಬಿರ ಸೇರಿದ ಮೇಲೆ ಹುಡುಗರ ಲೆಕ್ಕ ತೆಗೆದುಕೊಳ್ಳಬೇಕಷ್ಟೆ. ಆಗಲೇ ನನ್ನ ಬೆನ್ನನ್ನು ವಿಶ್ವಾಸದಿಂದ ತಡವಿ ''ಅಭಿನಂದನೆಗಳು, ಬಹಳ ಸಂತೋಷ !'' ಎಂದರು. ಹಿಂತಿರುಗಿ ನೋಡುತ್ತೇನೆ: ಸಾಕ್ಷಾತ್ ನಾರಾಯಣ್‌ಸಿಂಗ್ ಅವತರಿಸಿದ್ದರು ! ಅವರ ವಿಶ್ವಾಸದ, ಪ್ರೇಮದ ವಿದ್ಯುದಾಲಿಂಗನದಲ್ಲಿ ನಾವೆಲ್ಲರೂ ತಾತ್ಕಾಲಿಕ ಕಾಂತಗಳಾಗಿ ಎಲ್ಲರನ್ನೂ ಆಕರ್ಷಿಸಿದೆವು. ''ಬೆಂಗಳೂರಿಗೆ ಹೋದೆ. ನಿದ್ರೆ ಬರಲಿಲ್ಲ. ತಂದೆಯವರನ್ನು ಪುನಃ ಕೇಳಿದೆ. 'ಹೋಗಿ ಅವರ ಜೊತೆಯಲ್ಲಿಯೇ ತಿರುಗಿ ಬಾ—ಅಲ್ಲಿವರೆಗೂ ನನಗೇನೂ ಆಗುವುದಿಲ್ಲ' ಎಂದರು. ಬಂದುಬಿಟ್ಟೆ, ನಿಮ್ಮ ಗುರುರಾಜರಾಯರೂ ಬಂದಿದ್ದಾರೆ. ನೋಡಿ ಅವರಿಗೆಷ್ಟು ಪ್ರೇಮ ಹುಡುಗರ ಮೇಲೆ.''

ಕರ್ತವ್ಯ. ಸ್ನೇಹಿತ ಇವುಗಳಲ್ಲಿ ಘರ್ಷಣೆ ಬಂದಾಗ ಕರ್ತವ್ಯದ ಭೀಷ್ಮ ಮಾರ್ಗವನ್ನು ಅನುಸರಿಸುವವರಿಂದ ಮಾತ್ರ ಮಹಾಕಾರ್ಯ ಸಾಧ್ಯ. ಅವರೇ ನಿಜವಾದ ಧುರೀಣರು. ಓಸಿಬಂದುದರಿಂದ ಅಭಿಮಾನದ ಸೌಧಕ್ಕೆ ಗೋಪುರವಿಟ್ಟಂತಾಯಿತು. ಅವರೊಡನೆ ಗುರುರಾಜರಾಯರು ಬಂದದ್ದು, ಪ್ರಿನ್ಸಿಪಾಲ್ ಉಮರ್ಜಿಯವರ ಶುಭಾಶಯ ತಂದದ್ದು ನಮಗೆ ತುಂಬ ಹೆಮ್ಮೆಯ ಸಂತೋಷದ ಸಂಗತಿ. ನಿಸಾರ್ ಮತ್ತು ಸ್ವಾಮಿ ನಾವೂರಧಿಪತಿಗಳು ನಮ್ಮ ಸಕಲಾವಶ್ಯಕತೆಗಳನ್ನೂ ಪೂರೈಸಿದ್ದರು. ಇಂಥ ಒಂದು ಸಾಹಸದಲ್ಲಿ ಎಲ್ಲರಿಗೂ ಶಿಖರವೈದುವುದು ಸಾಧ್ಯವಾಗದು. ಬೇರೆ ಹೊಣೆಗಾರಿಕೆ ಹೊತ್ತವರು ಅವುಗಳಿಂದ ಬಂಧಿತರಾಗಿ ನಿಲ್ಲಬೇಕಾಗುತ್ತದೆ. ಮೇಲೆ ಬಂದು, ನಮಗಿಂತೆಲ್ಲ ಚೆನ್ನಾಗಿ ಸೃಷ್ಟಿ ಸೌಂದರ್ಯ ನೋಡಿ ಅನುಭವಿಸಿಸಂತೋಷಪಡಲು ಅರ್ಹತೆಯಿದ್ದು ಈ ಮಿತ್ರರು ಮಾಡಿದ ತ್ಯಾಗ ಸಾಮಾನ್ಯವಾದದ್ದಲ್ಲ. ನಿಂತು ಮೇಲೆ ದಿಟ್ಟಿ ಹರಿಸಿದಾತ ಕೂಡ ಬೆಟ್ಟವೇರಿದಾತನೇ ! ಆ ರಾತ್ರಿ ನಾವು ನಿದ್ರಿಸಲಿಲ್ಲ—ಹಾಡಿದ್ದು, ಕುಣಿದದ್ದು, ವನಭೋಜನ ಮಾಡಿದ್ದು, ಮರುದಿವಸದ ಧರ್ಮಸ್ಥಳದ ಕಾಲ್ನಡಿಗೆಯ ಪ್ರಯಾಣಕ್ಕಾಗಿ ಸಿದ್ಧತೆಮಾಡಿದ್ದು.

ಮರುದಿನ ೧೮ನೆಯ ತಾರೀಕು, ಶಿಬಿರದ ಎಂಟನೆಯ ದಿವಸ, ಡೇರೆಗಳನ್ನು ಕಿತ್ತು ಪ್ಯಾಕ್ ಮಾಡಿದಾಗ, ಗಂಟುಮೂಟೆಗಳನ್ನು ಲಾರಿಯಲ್ಲಿ ಓರಣವಾಗಿ ಜೋಡಿಸಿಟ್ಟಾಗ. ಕೊನೆಯ ಟೀ ತಿಂಡಿ ಸೇವಿಸಿ ನಾವೂರು ಬಂಗ್ಲೆಯಿಂದ ಹೊರಟಾಗ, ಕುದುರೆಮುಖದ ನೆರಳಿನಿಂದ ದೂರ ದೂರ ಸಾಗಿದಾಗ, ಮನಸ್ಸಿನಲ್ಲಿ ಮೂಡಿದ ಹಿರಿಯಭಾವ ಕೃತಜ್ಞತೆ, ಸಮರ್ಪಣ ಭಾವ. ಬಂಗ್ಲೆಯ ಆವರಣದ ಚೂತವನಕ್ಕಾಗಮಿಸಿದ್ದ ಚೈತ್ರವಿನ್ನೆಂದು ಪುನರಾಗಮಿಸುವುದೋ ?

ತುಂಡಾಗದಿದ್ದ ಬೆಟ್ಟುಗಳು

ಗುರುರಾಜರಾಯರ ಸಮೇತ ನಾವು ಒಳದಾರಿಯ ಮೂಲಕ ಉಜಿರೆಯನ್ನು ನಡೆದು ಸೇರಿದೆವು. ಲಾರಿಗಳೆರಡೂ ರಾಜಮಾರ್ಗದಲ್ಲಿ ಓಡಿ ಅದೇ ಸ್ಥಳದಲ್ಲಿ ಸಂಗಮಿಸಿದುವು. ಲಾರಿಗಳನ್ನು ಕಂಡದ್ದರಿಂದಲೋ ಅಥವಾ ನಿಜ ಕಾರಣದಿಂದಲೋ ಸೋಮಯ್ಯನಿಗೆ ಪಾಂತಿ ಜ್ವರ ಇದ್ದಕ್ಕಿದ್ದ ಹಾಗೆ ಉಜಿರೆಯಲ್ಲಿ ಪ್ರಾರಂಭವಾದಾಗ ಅನಿವಾರ್ಯ ನಿರ್ಧಾರ ಕೈಗೊಳ್ಳಬೇಕಾಯಿತು—ಅವನು ಲಾರಿಸಂಚಾರಿಯಾದ. ಹೆಚ್ಚು ನಡೆದು ಅಭ್ಯಾಸ ವಿರದಿದ್ದ ಗುರುರಾಜರಾಯರಿಗೂ ಹೇಳಿದೆ "ಇದುವರೆಗೆ ನಡೆದ ಆರು ಮೈಲಿ ಸಾಕು. ಇನ್ನೂ ಆರು ಮೈಲಿ ನಡೆಯಬೇಕಾಗಿಲ್ಲ. ಲಾರಿ ಹತ್ತಿ ಹೋಗಿ" ಎಂದು. ಆದರೆ ಅವರಿಗೆ ನಮ್ಮೆಲ್ಲರ ಒಡನಾಟದಲ್ಲಿ ಹೊಸ ಹುರುಪು ಬಂದಿತ್ತು. ಆ ಬಿಸಿಲು ಆ ದೂರ ಯಾವು ದನ್ನೂ ಲೆಕ್ಕಿಸದೆ ಮಾತಾಡುತ್ತ ಕತೆ ಹೇಳುತ್ತ ನಮ್ಮೆಲ್ಲರನ್ನೂ ನಗಿಸುತ್ತ ಅವರು ನಡೆದೇ ಬಂದರು. ಪಾದಯಾತ್ರೆಯಿಂದಲೇ ಮಂಜುನಾಥನ ದರ್ಶನ ಮಾಡಬೇಕು ಎಂದು ಅವರ ಪಣ. ಕ್ಷೇತ್ರ ತಲಪುವ ಮೊದಲೇ ಎದುರಾಗುವ ನೇತ್ರಾವತೀ ದಂಡೆಯಲ್ಲಿ ಲಾರಿಗಳೂ ನಾವೂ ತಂಗಿದೆವು. ೧೧ ಗಂಟೆಯ ಸಕೆ. ನಡೆದದ್ದರಿಂದ ಎಲ್ಲರೂ ಬೆವರಿ ತೋಯ್ದು

ತೊಪ್ಪೆಯಾಗಿದ್ದೆವು. ಹರಿವ ತಣ್ಣನೆ ನೀರಿನಲ್ಲಿ ತೋಯ್ದು ಹೋಗಿದ್ದೆವು. ಹರಿವ ತಣ್ಣನೆ ನೀರಿನಲ್ಲಿ ಮೈ ಚೆಲ್ಲಿದಾಗ ದೊರೆತ ಸುಖ ಅನುಪಮ. ಸುತ್ತಲಿನ ವನರಾಶಿ ಆದರ ಸೌಂದರ್ಯ ಕರಗಿ ನೀರಾಗಿ ನೇತ್ರಾವತಿ ಹರಿಯುತ್ತಿತ್ತು. ಆ ಮುಳುಗಾಟದಿಂದ ನಮ್ಮ ಎಲ್ಲ ಆಯಾಸ ಕೊಳೆ ಕಶ್ಮಲ ತೊಳೆದುಹೋಗಿ ನವ ಚೈತನ್ಯಪೂರಿತರಾದೆವು. ಮುಂದೆ ಲಾರಿಗಳನ್ನೇರಿ ಧರ್ಮಸ್ಥಳವನ್ನು ಮಧ್ಯಾಹ್ನದ ಮಹಾಪೂಜೆ ವೇಳೆಗೆ ಸೇರಿದಾಗ ಅಲ್ಲಿಯ ಧರ್ಮಾಧಿಕಾರಿ ರತ್ನವರ್ಮ ಹೆಗ್ಗಡೆಯವರೂ ಇವರ ಸುಪುತ್ರ ಹಾಗೂ ನಮ್ಮ ಕಾಲೇಜಿನ ವಿದ್ಯಾರ್ಥಿ ವೀರೇಂದ್ರ ಕುಮಾರರೂ ನಮ್ಮನ್ನು ಆದರದಿಂದ ಸ್ವಾಗತಿಸಿದರು. (ಈಗ ೧೯೯೬, ಆ ಸುಪುತ್ರರೇ ಡಾ. ವೀರೇಂದ್ರ ಹೆಗ್ಗಡೆಯವರು.) ಅಲ್ಲಿ ದೇವರ ಆಶೀರ್ವಾದ ಪಡೆದು ಕೃತಾರ್ಥರಾದೆವು. ಕುದುರೆಮುಖದ ಶೃಂಗ ದೂರದಿಂದಲೇ ನಮ್ಮನ್ನು ನೋಡಿ ಹರಸಿರಬೇಕು. ದೇವಸ್ಥಾನದ ಪರಿಸರದಲ್ಲಿ ಊಟ ಮುಗಿಸಿಕೊಂಡು ಲಾರಿಗಳನ್ನೇರಿ ನೇರವಾಗಿ ಮಂಗಳೂರಿಗೆ ಬಂಡಿಬಿಟ್ಟೆವು. ಸಂಜೆಯ ನಾಲ್ಕು ಗಂಟೆಗೆ ಮಂಗಳೂರು. ಅಲ್ಲಿಯ ಎನ್‌ಸಿಸಿ ಹೆಡ್‌ಕ್ವಾರ್ಟರ್ಸ್‌ನ ವಿಶಾಲಾವರಣದಲ್ಲಿ ನಮ್ಮ ಬಿಡಾರ. ಕರ್ನಲ್ ಚಿಟ್ಟಿಯಪ್ಪನವರೂ ಮೇಜರ್ ಮುತ್ತಪ್ಪನವರೂ ನಮ್ಮ ಆತಿಥೇಯರು. ರಾತ್ರಿ ಮೇಜರ್ ಮುತ್ತಪ್ಪನವರಲ್ಲಿ ಆಫೀಸರುಗಳಿಗೆಲ್ಲ ಔತಣ.

ಮರುದಿವಸ ಆದಿತ್ಯವಾರ. ಅಂದು ಮಧ್ಯಾಹ್ನದ ತನಕ ಹುಡುಗರು ಮಂಗಳೂರು ದರ್ಶನ ಮಾಡಿ ಅಪರಾಹ್ನ ಮಡಿಕೇರಿಗೆ ಬಂಡಿ ಬಿಡಬೇಕು—ಇದು ನಮ್ಮ ಕಾರ್ಯ ಕ್ರಮ. ಬೆಳಗ್ಗೆ ೬-೩೦ ಗಂಟೆಗೆ ಒಂದಿಷ್ಟು ತರಕಾರಿ ಮುಂತಾದವನ್ನು ತರಲೆಂದು ಗುರುರಾಜರಾಯರೂ ನಾನು ಕಂಕನಾಡಿ ಮಾರ್ಕೆಟಿಗೆ ನಮ್ಮ ಒಂದು ಲಾರಿಯಲ್ಲಿ ಕುಳಿತು ಹೋದೆವು. ವ್ಯಾಪಾರ ಮುಗಿಸಿದ ಬಳಿಕ ಹಿಂದೆ ಬರುವ ದಾರಿಯಲ್ಲಿ ಮೇಜರ್ ಮುತ್ತಪ್ಪನವರ ಮನೆ ಇದ್ದುದರಿಂದ ಒಂದು ಗಳಿಗೆ ಅವರನ್ನು ನೋಡಿ ಬರೋಣವೆಂದು ಯೋಚನೆಮಾಡಿ ಲಾರಿಯನ್ನು ಅವರ ಮನೆ ಎದುರು ರಸ್ತೆಯ ಎಡ ಅಂಚಿನಲ್ಲಿ ನಿಲ್ಲಿಸಿದೆವು. ಲಾರಿಯ ಎಡ ಬಾಗಿಲು ತೆರೆದು ಗುರುರಾಜರಾಯರು (ಅವರು ಹೊರಬದಿಯಲ್ಲಿ ಕುಳಿತಿದ್ದರು) ಫುಟ್ ಬೋರ್ಡ್ ಮೇಲೆ ಒಂದು ಕಾಲಿಟ್ಟರು. ಆ ಕಾಲು ಜಾರಿ ಅಲ್ಲಿಂದ ೧.೫ ಅಡಿ ಕೆಳಗಿದ್ದ ರಸ್ತೆ ಅಂಚಿಗೆ ಅವರ ಕಾಲು ಅಪ್ಪಳಿಸಿ ಬಡಿಯಿತು. ಈ ಹಠಾತ್ ಘಟನೆ ನಡೆದಾಗ ದೇಹದ ಸಮತೋಲ ಕಾಯ್ದಿಡಲು ಅವರು ಅಷ್ಟೇ ತೀವ್ರವಾಗಿ ಬಲಗೈಯನ್ನು ಲಾರಿಯ ಒಳಗೆ ಕೈಗೆ ಸಿಕ್ಕಿದ ಅಂಶವನ್ನು ಬಾಚಿ ಹಿಡಿದರು. ಅವರು ಹಿಡಿದದ್ದು ವಿಂಟರ್ ಬೋರ್ಡಿನ ದಪ್ಪ ತಗಡಿನ ಒಳ ಮಡಚಿದ್ದ ಅಂಚನ್ನು. ಇದು ಬಲು ಹರಿತವಾಗಿಯೂ ಸಾಕಷ್ಟು ಬಿರುಗಾಗಿಯೂ ಇತ್ತು. ಆ ಕ್ಷಣದಲ್ಲಿ ಅವರ ಬೆಟ್ಟುಗಳಿಗೆ ಕಡಿದಾದ ಆಳ ಗಾಯಗಳಾಗಿ ಯಮ ರಕ್ತ ಚಿಮ್ಮಿತು. ಬಲಗೈಹಿಡಿತ ಸಡಿಲವಾಗಿ ದೇಹದ ಸಮತೋಲ ತಪ್ಪಿ ಕಣ್ಣು ಕತ್ತಲೆ ಹೋಗಿ ಅವರಿನ್ನೇನು ಪಕ್ಕದ ಆಳವಾದ ಚರಂಡಿಗೆ ಬೀಳಬೇಕು—ನಾನು ಸೀಟಿನಿಂದ ದುಮುಕಿ ಅವರನ್ನು ಅಪ್ಪಿಹಿಡಿದುಕೊಂಡೆ. ಇಷ್ಟೆಲ್ಲ ನಡೆದದ್ದು ಒಂದು ಸೆಕೆಂಡಿನ ಅನಂತಸೂಕ್ಷ್ಮ ಅವಧಿಯಲ್ಲಿ—ಎಲ್ಲವೂ ಅನಿರೀಕ್ಷಿತವಾಗಿ. ರಕ್ತ ಸೇಚಿತರಾಗಿ ಹಠಾತ್ ಅಪಾಯದಿಂದ ದಿಕ್ಕೆಟ್ಟವರಾಗಿ ಒಂದು ಕ್ಷಣ ಏನು ಮಾಡುವುದೆಂದು ತಿಳಿಯದವರಾಗಿ ಹಾಗೆಯೇ ನಿಂತೆವು. ರಸ್ತೆಯ ಎದುರು ಬದಿಯಲ್ಲಿದ್ದ ಮುತ್ತಪ್ಪ

ನವರ ಮನೆಗೆಹೋದೆವು. ದಾರಿಯಿಡೀ ರಕ್ತ. ಒಂದು ಬಕೆಟ್ ತಣ್ಣೀರು ತರಿಸಿ ಅದರೊಳಗೆ ಕೈ ಅದ್ದಿ ಹಿಡಿದರೆ ಆ ನೀರು ಅಷ್ಟೂ ಕೆನ್ನೀರಾಯಿತು. ಡೆಟ್ಟಾಲ್, ಅಯೊಡೀನ್ ಎಲ್ಲ ವನ್ನೂ ಗಾಯಗೊಂಡ ಬೆಟ್ಟುಗಳ ಮೇಲೆ ಸುರಿದು ಬಟ್ಟೆಗಳ ರಾಶಿಯನ್ನೇ ಸುತ್ತಿ ಮಣಿ ಗಂಟು ತೋಳು ಮುಂತಾದೆಡೆಗಳಲ್ಲಿ ಕಟ್ಟುಗಳನ್ನು ಬಿಗಿದು ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು. ಮರುಕ್ಷಣವೇ ಗುರುರಾಜರಾಯರನ್ನು ಮಂಗಳೂರಿನ ಸರಕಾರೀ (ವೆನ್‌ಲಾಕ್) ಆಸ್ಪತ್ರೆಗೆ ಲಾರಿಯಲ್ಲಿ ಸಾಗಿಸಿದೆ. ಆದಿತ್ಯವಾರ, ಸರಕಾರೀ ಆಸ್ಪತ್ರೆ, ಏನಾದರೂ ನೆರವು ದೊರೆತರೆ ಆಶ್ಚರ್ಯ—ಎಂದುಕೊಂಡು ಹೋದರೆ ದೊರೆತದ್ದು ರಾಜಸ್ವಾಗತ. ಡ್ಯೂಟಿ ಡಾಕ್ಟರರು ತತ್‌ಕ್ಷಣವೇ ಈ ಅಪಘಾತವನ್ನು ಪರೀಕ್ಷಿಸಿ ಯುಕ್ತ ಚಿಕಿತ್ಸೆ ಮಾಡಿದರು. ಆದರೆ ಒಂದು ಮಾತು ಕೊನೆಗೆ ಅವರೆಂದಾಗ ಓಸಿಯುವರಿಗೂ ನನಗೂ ದುಃಖ ಕೋಡಿ ಹರಿಯಿತು. "ತೋರು ಬೆರಳು ಮತ್ತು ನಡುಬೆರಳುಗಳಿಗೆ ಮೂಳೆವರೆಗೂ ಗಾಯವಾಗಿ ಹೋಗಿದೆ. ಅವನ್ನು ಕೊಯ್ದೇ ತೆಗೆದು ಹಾಕಬೇಕಾದೀತು. ಉಂಗುರ ಬೆರಳಿನ ಗಾಯ ಮಾಯಪಾಗಬಹುದು. ಹೇಗೂ ಇದೊಂದು ದೊಡ್ಡ ಅಪಾಯ. ಆದ್ದರಿಂದ ಇವರು ಇಲ್ಲೇ ಒಳರೋಗಿಯಾಗಿ ಒಂದೆರಡು ವಾರ ಉಳಿಯ ಬೇಕಾದೀತು."

ನಮ್ಮ ಮೇಲೆ, ನಮ್ಮ ಹುಡುಗರ ಮೇಲೆ ಅಕ್ಕರೆ ಆದರಗಳಿಂದ ಬಂದರು; ದೈಹಿಕ ತೊಂದರೆ ಅನನುಕೂಲತೆಗಳನ್ನು ಲೆಕ್ಕಿಸದೆ ನಮ್ಮೊಡನೆ ಉಳಿದು ನಮ್ಮ ಜೊತೆ ನಡೆದು ನಮಗೆ ಸಂತೋಷ ನೀಡಿದರು—ಇವರಿಗೆ ಹೀಗಾಗಬೇಕೇ? ಗಂಟೆ ೯ ದಾಟಿದೆ. ಏನು ಮಾಡುವುದು? ಇವರನ್ನು ಆಸ್ಪತ್ರೆಯಲ್ಲಿ ಬಿಟ್ಟು ಹೋಗುವುದು ಸಮಸ್ಯೆ ಅಲ್ಲ. ಹೇಗೂ ಮಂಗಳೂರು ನನಗೆ ಪರಿಚಿತ ಸ್ಥಳ. ಆದರೆ ಇವರ ಬಲಗೈಯಿಯ ಎರಡು ಮುಖ್ಯ ಬೆಟ್ಟುಗಳೇ ಹೋಗಿಬಿಟ್ಟರೆ ಮುಂದೇನು ಗತಿ? ಪ್ರಾಧ್ಯಾಪಕರಿಗೆ ತಲೆ, ಬಾಯಿ, ಬಲಗೈ ಇವೇ ಆಯುಧಗಳು. ಏನೇನೋ ಚಿಂತೆ. ನಿರ್ಧಾರ ಏನೂ ಆಗಲಿಲ್ಲ. ಅಷ್ಟರಲ್ಲಿ ಪವಾಡದಂಥ ಒಂದು ಸನ್ನಿವೇಶ ತಲೆದೋರಿತು. ನಾವು ಕುಳಿತಿದ್ದ ಜಗಲಿಯ ದೂರದ ಕೊನೆಯಲ್ಲಿ ಡಾಕ್ಟರರ ಒಂದು ತಂಡ ನಡೆದುಕೊಂಡು ನಮ್ಮೆಡೆಗೆ ಬರುತ್ತಿತ್ತು. ತಂಡದ ಕೇಂದ್ರವ್ಯಕ್ತಿಯನ್ನು ನಾನು ಹಿಂದೆ ನೋಡಿದ್ದೇನಲ್ಲ—ಹೌದು, ಇವರೇ ಡಾ॥ ಪಿ. ಎನ್. ಆರಿಗರು. ಬಳ್ಳಾರಿಯಲ್ಲಿ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿದ್ದವರು; ಅಲ್ಲಿಯ ಶ್ರೀಸಾಮಾನ್ಯರ ದೇವರು; ಅಲ್ಲಿಯ ಜನತೆಯ ಅಪಾರ ವಿಶ್ವಾಸ ಪ್ರೀತಿ ಗಳಿಸಿದ ಧನ್ವಂತರಿ. ನಾನು ಎದ್ದು ನಿಂತು ಕೈಜೋಡಿಸಿದೆ.

"ಎಲ! ನೀವೇನು ಇಲ್ಲಿ ಈ ವೇಷದಲ್ಲಿ?" ಅವರ ಪ್ರಶ್ನೆ. ನಾನು ಸೂಕ್ಷ್ಮವಾಗಿ ವಿವರಿಸಿ "ಈಗ ನಿಮ್ಮಿಂದ ಒಂದು ಸಹಾಯ ಆಗಬೇಕು ಡಾಕ್ಟರ್. ನಮ್ಮ ಈ ಮಿತ್ರ ಪ್ರೊಫೆಸರರ ಬೆಟ್ಟುಗಳನ್ನು ಪರೀಕ್ಷಿಸಿ ಅವರು ನಮ್ಮೊಡನೆಯೇ ಇಂದು ಬೆಂಗಳೂರಿಗೆ ಬರುವಂತೆ ಏರ್ಪಡಿಸಬೇಕು."

"ನೋಡುವ" ಎಂದು ಅವರನ್ನು ಕರೆದುಕೊಂಡು ಶಸ್ತ್ರಕ್ರಿಯಾಗಾರವನ್ನು ಹೊಕ್ಕರು. ಶಸ್ತ್ರಕ್ರಿಯೆಯಲ್ಲಿ ಅವರು ಸಿದ್ಧಹಸ್ತರು. ಅವರು ಕೈಹಾಕಿದ ಎಲ್ಲ ಶಸ್ತ್ರಕ್ರಿಯೆಗಳೂ ಜಯಪ್ರದ ಎಂಬುದು ನನಗೆ ತಿಳಿದಿತ್ತು. ಆದ್ದರಿಂದ ನಾನು ನಿಶ್ಚಿಂತೆಯಿಂದ ಹೊರಗೆ

ಕಾದೆ. ಸುದ್ದಿಯನ್ನು ನಾರಾಯಣ್‌ಸಿಂಗರಿಗೂ ಹೇಳಿ ಕಳಿಸಿದೆ.

ಹೊರಗೆ ನಾನು ಒಂದೊಂದು ಮಿನಿಟನ್ನೂ ಏಕಾಕಿಯಾಗಿ ಕಳೆಯುತ್ತಿದ್ದಂತೆ ನನ್ನ ಮನಸ್ಸಿನ ತಾಪ ಅಷ್ಟಷ್ಟು ಏರುತ್ತಿತ್ತು. ಅವರು ಹೊರಬರುವುದು ಹೆಚ್ಚೆಚ್ಚು ತಡವಾದಂತೆ ನನಗೆ ಗುರುರಾಜರಾಯರ ಬೆಟ್ಟುಗಳ ವಿಚಾರ ಆಪಧೈರ್ಯ ಹೆಚ್ಚುತ್ತಿತ್ತು. ೧೨ ಗಂಟೆ ದಾಟಿತು. ಶಸ್ತ್ರಕ್ರಿಯಾಗಾರ ಹೊಕ್ಕು ೨ ಗಂಟೆಗಳೇ ಉರುಳಿದ್ದುವು. ಸುದ್ದಿ ಇಲ್ಲ. ಗಂಡೋ ಹೆಣ್ಣೋ? ಆರಿಗರು ಪ್ರತ್ಯಕ್ಷರಾದಾಗ ಅವರ ಹಿಂದೆ ಗುರುರಾಜರಾಯರು ಬಲಗೈ ರುಮಾಲುಧಾರಿಗಳಾಗಿ ಅಭಯಹಸ್ತ ಎತ್ತಿದಾಗ ನನಗೆ ಧೈರ್ಯ ಬಂತು. "ನೋಡಿ ಮೇಜರ್ ರಾವ್! ಇಂಥ ಭಯಂಕರ ಅಪಘಾತಗಳಲ್ಲಿ ಎರಡು ಬೆಟ್ಟುಗಳನ್ನೂ ಕತ್ತರಿಸಿ ತೆಗೆಯುವುದೊಂದೇ ಸಾಂಪ್ರದಾಯಿಕ ಮಾರ್ಗ. ಆದರೂ ಒಂದು ಅಸಾಂಪ್ರದಾಯಿಕ ಶಸ್ತ್ರಕ್ರಿಯೆ ಮಾಡಿದ್ದೇವೆ—ಆ ಮೂರು ಬೆಟ್ಟುಗಳನ್ನೂ ಶುಚಿಪಡಿಸಿ ಮದ್ದು ತುಂಬಿಸಿ ನರ ಮುಂತಾದವನ್ನು ಯುಕ್ತಸ್ಥಳಗಳಲ್ಲಿ ಕೂರಿಸಿ ಬೆಟ್ಟುಗಳನ್ನು ಮಡಿಸಿ ಅಂಗೈ ನಿಧಿಗೆ ಜೋಡಿಸಿ ಹೊಲಿದಿದ್ದೇವೆ. ಈ ಸ್ಥಿತಿಯಲ್ಲಿ ಬೆಟ್ಟುಗಳನ್ನು ಸುಮಾರು ಒಂದು ತಿಂಗಳ ಕಾಲ ಅಲುಗಿಸುವಂತಿಲ್ಲ. ಬಿಚ್ಚಿ ತೊಳೆಯುವಂತಿಲ್ಲ. ಎಲ್ಲ ಸರಿಯಾದರೆ ಹುಣ್ಣು ಅಲ್ಲೇ ಮಾಯುವುದು. ಇವರಿಗೆ ತೊಂದರೆ ಆಗದು. ಸರಿಯಾಗದಿದ್ದರೆ ಒಳಗೆ ವಿಪರೀತ ಸೆಳೆತ ಪ್ರಾರಂಭವಾಗುತ್ತದೆ. ಆಗ ಬ್ಯಾಂಡೇಜ್ ಬಿಚ್ಚಿ ಬೆಟ್ಟುಗಳನ್ನು ಕತ್ತರಿಸಿ ಹಾಕುವುದೊಂದೇ ರಕ್ಷಣೆಯ ವಿಧಾನ. ನೀವಿಂದು ಹೋಗಿ. ಬೆಂಗಳೂರಿನಲ್ಲಿ ಪ್ರಸಿದ್ಧರಾದ ಶಸ್ತ್ರಚಿಕಿತ್ಸಕರಿಗೆ ತೋರಿಸಿ. ಈ ಅಪಘಾತದ ಚರಿತ್ರೆಯನ್ನು ಸಂಗಡವೇ ಕೊಂಡುಹೋಗಿ." ಭರ್ಜರಿ ಪೊಗದಸ್ತಾದ ಊಟ ತರಿಸಿ ನಮ್ಮೊಡನೆ ಅವರೂ ಉಂಡರು. ಸಾಕಷ್ಟು ಮದ್ದು ಮಾತ್ರೆಗಳನ್ನು ನಮಗೆ (ಒಂದು ತಿಂಗಳಿಗೂ ಬೇಕಾಗುವಷ್ಟು) ಕೊಟ್ಟರು.

"ತಮಗೆ ಸಂಭಾವನೆ..." ಎಂದು ಗುರುರಾಜರಾಯರು ಪ್ರಾರಂಭ ಮಾಡುವಾಗಲೇ ಆರಿಗರು ಥಟಕ್ಕನೆ ಹೇಳಿದರು "ಸ್ವಾಮೀ! ಸರಕಾರ ಅದನ್ನು ಕೊಡುತ್ತಿದೆ. ತಾವೇನೂ ಚಿಂತೆ ಮಾಡಬೇಡಿ. ತಮ್ಮ ಬೆಟ್ಟುಗಳು ಉಳಿದರೆ ಅದೇ ಬಲು ದೊಡ್ಡ ಸಂಭಾವನೆ."

"ಅಲ್ಲ ಡಾಕ್ಟರ್! ಇಷ್ಟೊಂದು ಮದ್ದು..."

"ಅವೆಲ್ಲ ನಮಗೆ ಕಂಪೆನಿಗಳಿಂದ ಮಾದರಿ ಬರುವಂಥವು—ಎಲ್ಲವೂ ಧರ್ಮಾರ್ಥ. ಆ ಚಿಂತೆ ನಿಮಗೆ ಬೇಡ."

ಇಂಥವರೇ ಅಲ್ಲವೇ ನೆಲದ ಸಾರ, ಜನರ ಆಶಾಧಾರ. ಭಾರತೀಯತೆಯ ಸಾಕ್ಷಾತ್ಕಾರ!

ಅಪರಾಹ್ಣ ನಾವೆಲ್ಲರೂ ಲಾರಿಗಳನ್ನೇರಿದೆವು. ಪುತ್ತೂರಿನಲ್ಲಿ ನನ್ನ ಮಾವನವರ ಮನೆಯಲ್ಲಿ ಸಾಯಂಕಾಲದ ಉಪಾಹಾರ. ಮುಂದೆ ಶಿವರಾಮಕಾರಂತರ ದರ್ಶನ. ರಾತ್ರಿ ೯ ಗಂಟೆಗೆ ಮಡಿಕೇರಿ. ಅಲ್ಲಿಯ ಎನ್‌ಸಿಸಿ ಆಫೀಸಿಗೆ ನಾವು ಬರುವ ವಿಚಾರ ಮೊದಲೇ ಕಾಗದ ಬರೆದಿದ್ದೆವು—ರಾತ್ರಿ ಅಲ್ಲಿಯೇ ಉಳಿಯಬೇಕೆಂಬುದು ನಮ್ಮ ಇಚ್ಛೆ. ಆದರೆ ಆ ಅಪರಾತ್ರಿ ಊರ ಹೊರಗಿರುವ ಎನ್‌ಸಿಸಿ ಕಛೇರಿಗೆ ಹೋಗಿ ಚಳಿಯ ಊರಿನಲ್ಲಿ ನಡುಗುವುದು—ವಿಶೇಷವಾಗಿ ಗುರುರಾಜರಾಯರು ನಮ್ಮೊಡನಿದ್ದುದರಿಂದ—ಬೇಡವೆಂದು ಭಾವಿಸಿ ಸೀದಾ ಮೈಸೂರಿಗೆ ಲಾರಿಗಳನ್ನು ತಿರುಗಿಸಿದೆವು. ರಾತ್ರಿಯ ೧–೩೦

ಗಂಟೆಗೆ ಶ್ರೀರಂಗಪಟ್ಟಣದ ಪ್ರವಾಸೀಮಂದಿರದಲ್ಲಿ ಬೀಡುಬಿಟ್ಟೆವು. ಮರುದಿವಸ ಬೆಳಗ್ಗಿನ ೧೦ ಗಂಟೆಗೆ ೧೨ನೆಯ ಮೈಸೂರು—ಈಗ ಕುದುರೆ ಮುಖ ಪ್ರಶಸ್ತಿ ವಿಜೇತ—ಬೆಂಗಳೂರನ್ನು ಪ್ರವೇಶಿಸಿತು.

ಗುರುರಾಜರಾಯರ ಬೆಟ್ಟುಗಳ ಕತೆ ಮುಗಿಸಲೇಬೇಕಷ್ಟೆ. ಬೆಂಗಳೂರಿನ ಸರಕಾರೀ (ವಿಕ್ಟೋರಿಯಾ) ಆಸ್ಪತ್ರೆಯ ಸುಪ್ರಸಿದ್ಧ ಶಸ್ತ್ರವೈದ್ಯರೂ ನನ್ನ (ಕೊಡಗಿನ) ಮಿತ್ರರೂ ಆಗಿದ್ದ ಡಾ॥ ಕೆ. ಎಂ. ಕಾಳಪ್ಪನವರ ವಶಕ್ಕೆ ಗುರುರಾಜರಾಯರನ್ನು ಒಪ್ಪಿಸಿದೆ. ಇಡೀ ಚರಿತ್ರೆಯನ್ನು ಅಭ್ಯಸಿಸಿದ ಅವರು ಆರಿಗರ ಕ್ರಮವನ್ನು ಒಪ್ಪಿಕೊಂಡರು. ಮುಂದಿನ ಒಂದು ತಿಂಗಳವರೆಗೂ ತಾವು ಏನೂ ಮಾಡುವುದು ಅವಶ್ಯವಿಲ್ಲ, ತೊಂದರೆ ಏನಾದರೂ ಉಂಟಾದರೆ ತಮ್ಮನ್ನು ಬಂದು ನೋಡಬೇಕು ಎಂದು ಆಶ್ವಾಸಿಸಿ ಕಳಿಸಿದರು. ದಿನಗಳು ಉರುಳಿದುವು—ಅದೃಷ್ಟವಶಾತ್ ಏನೂ ತೊಂದರೆ ಆಗಲಿಲ್ಲ. ಬ್ಯಾಂಡೇಜ್ ಬಿಚ್ಚುವ ಮುಹೂರ್ತ ಬಂತು. ಕಾಳಪ್ಪನವರು ಗುರುರಾಜರಾಯರನ್ನು ಓಟಿಗೆ ಕರೆದುಕೊಂಡು ಹೋದರು. ಸ್ವತಃ ತಮ್ಮ ಮಾಂತ್ರಿಕ ಬೆಟ್ಟುಗಳಿಂದ ಬಿಚ್ಚಿದರು; ಮಡಿಸಿ ಹೊಲಿದಿದ್ದ ಗಂಟುಗಳನ್ನು ತುಂಡಿಸಿದರು. "ಸ್ವಾಮಿ! ದೇವರು ದೊಡ್ಡವನು. ನಿಮ್ಮ ಬೆಟ್ಟುಗಳು ಉಳಿದಿವೆ" ಎಂದು ಉದ್ಗರಿಸಿದರು. ಆರಿಗರ ಅಸಾಂಪ್ರದಾಯಿಕ ಶಸ್ತ್ರಕ್ರಿಯೆ ಚಕ್ರಬಡ್ಡಿ ಕೊಟ್ಟಿತ್ತು.

ಪದವೀದಾನ ಸಮಾರಂಭ

ಮಾರ್ಚ್ ೧೪, ೧೯೬೭. ಕಾಲೇಜಿನಲ್ಲಿ ಅತಿ ಸಂಭ್ರಮದ ದಿವಸ. ವಿಶ್ವವಿದ್ಯಾಲಯದ, ಕಾಲೇಜಿನ, ಎನ್‌ಸಿಸಿಯ ಇತಿಹಾಸದಲ್ಲಿ ಅಂದು "ಕುದುರೆ ಮುಖ ದಿವಸ." ಆ ವೀರರಿಗೆ ಪದವೀದಾನ ಮಾಡುವ ಶುಭ ದಿವಸ. ತುಂಬಿದ ಸಭೆಯ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಆರ್. ಆರ್. ಉಮರ್ಜಿ ಅವರು ವಹಿಸಿದ್ದರು. ಪದವೀದಾನ ಮಾಡಲು ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಡಾ॥ ವಿ. ಕೆ. ಗೋಕಾಕರು ದಯಮಾಡಿಸಿದ್ದರು. ಎನ್‌ಸಿಸಿ ಡೈರೆಕ್ಟರ್ ಏರ್ ಕಮೊಡೋರ್ ಎಸ್. ಕೆ. ಬಕ್ಷಿ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಗೋಕಾಕರು ತಮ್ಮ ಕವಿವಾಣಿಯಿಂದ ಕುದುರೆಮುಖ ಸಾಹಸಕ್ಕೆ ಒಂದು ನೂತನ ಆಯಾಮ ನೀಡಿದರು "ನಿಮ್ಮ ಸಾಹಸೇತಿಹಾಸ ಒಂದು ಸುಂದರ ಕಾವ್ಯದಂತಿದೆ. ಎಲ್ಲಿ ಶ್ರದ್ಧಾ ಸಕ್ತಿಯುಂತ ಪರಿಶ್ರಮವಿದೆಯೋ ಅಲ್ಲಿ ಸೌಂದರ್ಯವಿದೆ. ವಿದ್ಯಾರ್ಥಿ ಜೀವನದ ಈ ನೂತನಾಧ್ಯಾಯವನ್ನು ನೀವು ಬರೆದು ಪುಸ್ತಕರೂಪದಲ್ಲಿ ತಂದರೆ ಅದನ್ನು ವಿಶ್ವ ವಿದ್ಯಾಲಯ ಸಂತೋಷದಿಂದ ಪ್ರಕಟಿಸುವುದು. ಬೆಟ್ಟವನ್ನೇರಿದ್ದೀರಿ. ಅಡೆತಡೆಗಳನ್ನು ನಿವಾರಿಸಿ ಹತ್ತಿದ್ದೀರಿ. ಮೇಲೆ ಹೋದಂತೆ ನಿಮ್ಮ ದೃಷ್ಟಿ ದಿಗಂತ ವಿಸ್ತಾರವಾಗುವುದು. ಜೀವನದ ಪ್ರತಿರಂಗದಲ್ಲಿಯೂ ಹೀಗೆಯೇ. ರಸಾಯನಸಾಸ್ತ್ರದಲ್ಲಿ ಒಂದು ಸಂಶೋಧನೆ ನಡೆಸುವಾಗ ಗಣಿತದ ಒಂದು ಸಮೀಕರಣ ಬಿಡಿಸುವಾಗ ಎದುರಾಗುವ ಜಟಿಲ ಸಮಸ್ಯೆಗಳು ಅವೆಷ್ಟೋ. ಅವನ್ನು ಬಗೆಹರಿಸಿಕೊಂಡು ಮುಂದುವರಿಸಿದರೆ ನೀವು ಕೃತಕೃತ್ಯರಾಗುತ್ತೀರಿ. ಜ್ಞಾನಶಿಖರ ತಲಪುತ್ತೀರಿ. ನಿಮ್ಮ ಈ ಮಹಾಸಾಧನೆ, straight from the horse's mouth ಎಂಬಂತೆ, ಕುದುರೆಯ ಮುಖದಿಂದಲೇ ಬಂದಿರುವ

ನಿಮ್ಮ ಸಾಹಸದ ವರ್ಣನೆ ನಮಗೆಲ್ಲ ಹೆಮ್ಮೆ ತಂದಿದೆ, ನೀವು ಮುಂದೆಯೂ ಇಂಥ ಸಾಹಸ ನಡೆಸಬೇಕು. ವಿಶ್ವವಿದ್ಯಾಲಯಕ್ಕೆ, ದೇಶಕ್ಕೆ ಕೀರ್ತಿ ತರಬೇಕು.''

''ಕಾಲೇಜಿನ ಪ್ರಗತಿಯಲ್ಲಿ ಕುದುರೆಮುಖ ಸಾಹಸ ಬಲು ದೊಡ್ಡ, ದಿಟ್ಟ ಹೆಜ್ಜೆ. ನಿಮ್ಮ ಈ ಸ್ತುತ್ಯರ್ಹ ಕಾರ್ಯ ಕಾಲೇಜಿಗೂ ನನಗೂ ಬಹಳ ಸಂತೋಷ ನೀಡಿದೆ. ಕಾಲೇಜು ಸದಾ ನಿಮ್ಮ ಬೆಂಬಲಕ್ಕಿದೆ'' ಎಂದು ಆರ್. ಆರ್. ಉಮರ್ಜಿ ಹರಸಿದರು.

ಕುಲ್ಲು ಪುಮೋರಿಯ ಶಿಖರದ ಮೇಲೆ

೧೯೬೭ರ ಬೇಸಗೆಯಲ್ಲಿ ನಮಗೆ ಹಿಮಾಲಯ ಪರ್ವತಾರೋಹಣ ಸಂಸ್ಥೆ, ಮನಾಲಿ ಯಿಂದ ಒಂದು ಪತ್ರ ಬಂದಿತು ''ಜುಲೈ ತಿಂಗಳಿನಲ್ಲಿ ಕುಲ್ಲುಪುಮೋರಿ ಎಂಬ ೨೧,೫೦೦ ಅಡಿ ಎತ್ತರದ ಹಿಮಾಲಯ ಶಿಖರಾರೋಹಣವನ್ನು ಏರ್ಪಡಿಸಿದ್ದೇವೆ. ಇದರಲ್ಲಿ ಭಾಗಿ ಗಳಾಗಲು ನಿಮ್ಮ ಬೆಟಾಲಿಯನ್ನಿನ ಲಕ್ಷ್ಮೀನಾರಾಯಣ, ಪಿಂಟೋ ಮತ್ತು ಮೋಹನ ಇವರನ್ನು ಆರಿಸಿದ್ದೇವೆ...''

ಇಡೀ ಭಾರತದಿಂದ ಆಯ್ಕೆಯಾದ ಐದು ಎನ್‌ಸಿಸಿ ಕ್ಯಾಡೆಟುಗಳಲ್ಲಿ ಮೂವರು ನಮ್ಮ ವರೇ, ಬೆಂಗಳೂರಿನ ಸರಕಾರೀ ಕಾಲೇಜಿನವರೇ. ಕನ್ನಡ ನಾಡಿನ ಈ ಶಿಶುಗಳು ಆ ಮೊದಲು ಮನಾಲಿಗೆ ಹೋಗಿ ಒಂದು ತಿಂಗಳಕಾಲ ಪರ್ವತಾರೋಹಣದ ಮೂಲ ಶಿಕ್ಷಣ ಪಡೆದು ಕಡೆದು ಕಡುಗಲಿಗಳಾಗಿ ಮರಳಿದ್ದರು. ಇವರ ಮತ್ತು ಮೈಸೂರಿನ ಇತರ ಸಾಹಸಿಗರ ಶಿಸ್ತು, ಸಾಮರ್ಥ್ಯ ಮತ್ತು ಛಲ ಮನಾಲಿಯ ಅಧಿಕಾರಿಗಳ ದೃಷ್ಟಿ ಯಲ್ಲಿ ಮೈಸೂರಿನ ಸಂತ್ತಲೂ ಒಂದು ಪ್ರಭಾವಲಯವನ್ನೇ ನಿರ್ಮಿಸಿತ್ತು. ಉಳಿದ ಕತೆ ಕಡುಗಲಿಗಳೇ ಹೇಳಲಿ.

ಲಕ್ಷ್ಮೀನಾರಾಯಣ ಉವಾಚ: ''ಜುಲೈ ಒಂದರಂದು ನಾವು ಹಿಮಾಲಯದ ತಪ್ಪಲು ಮನಾಲಿಯಲ್ಲಿ ಸೇರಿದೆವು. ಒಂದುವಾರ ಕಾಲ ಪ್ರಯಾಣದ ಅಂತಿಮ ಸಿದ್ಧತೆಗಳನ್ನು ಮುಗಿಸಿ ಏಳರಂದು ಮುನ್ನಡೆದೆವು. ನಾವು ಎಂಟು ಮಂದಿ ಸದಸ್ಯರಲ್ಲದೇ ಶೆರ್ಪ ಕೂಲಿ ಗಳು, ಸಾಮಾನು ಹೊರಲು ಹೇಸರ ಕತ್ತೆಗಳು ಅವುಗಳ ಚಾಲಕರು ಇಷ್ಟು ಮಂದಿ. ನಮ್ಮ ಉತ್ಸಾಹಕ್ಕೆ ಮಿತಿ ಇರಲಿಲ್ಲ. ಗಗನವನ್ನು ಮೇಲೆತ್ತಿ ಹಿಡಿದಿದ್ದ ಪರ್ವತಾಗ್ರಗಳ ಮೇಲೆ ಜಿಗಿದು ನಕ್ಷತ್ರಲೋಕದ ಮೇರೆ ಮೀರಿ ಅಲ್ಲೆಲ್ಲೋ ತೇಲುತ್ತಿದ್ದೆವು. ಎಂಟು ಮೈಲಿ ಗುಂಡ್ಗ ಗಾಡುಗಳ ಬಳಸುದಾರಿಗಾಗಿ ನಡೆದು ಸಂಜೆ ರಾಲ್ಹಾ ಎಂಬ ಹಳ್ಳಿ ಸೇರಿದೆವು. ಸರಿಯಾದ ಏರುಪಿಕೆ ರಾಲ್ಹಾದಿಂದ ಆರಂಭವಾಗುವುದು. ಮುಂದಿನ ಗುರಿ ಸುಮಾರು ೧೩ ಮೈಲಿ ದೂರದ ೧೩,೦೫೦ ಅಡಿ ಎತ್ತರದ ರೋತಾಂಗ್ ಕಣಿವೆ (ಮನಾಲಿಯ ಎತ್ತರ ೬,೨೦೦ ಅಡಿ) ಈ ಕಣಿವೆಯ ಇಕ್ಕಟ್ಟಾದ ದಾರಿಯೊಂದೇ ಮುಂದಿನ ಪ್ರದೇ ಶಕ್ಕೆ ಇದ್ದ ಕದ. ಬೈರಾಗಿ ತಂಗಿದ್ದೇ ತಾಣ. ಹೀಗೆ ನಾವು ಶಿಬಿರ ಹೊಡೆದು ಕ್ರಮೇಣ ೪೮ ಮೈಲಿಗಳನ್ನು ಗಮಿಸಿದೆವು. ನಾವಲ್ಲಿ ತಂಗಿದ್ದ ಸ್ಥಳ ಛೋಟಾದಾರ. ಹೊರಟು ನಾಲ್ಕು ದಿವಸಗಳಾಗಿದ್ದುವು. ಇಲ್ಲಿವರೆಗೆ ನಮ್ಮ ಊರಿನ ಗುಂಡ್ಗ ಗಾಡಿನಂತೆ ಇರುವ ಪ್ರದೇಶ. ಎಲ್ಲಿಯೂ ಮಂಜುಗಡ್ಡೆ ಅಥವಾ ಹಿಮವಿಲ್ಲ. ಆ ಎತ್ತರಕ್ಕನುಗುಣವಾದ ಸಸ್ಯಗಳು ಫಲಪುಷ್ಪಗಳು ಅಲ್ಲಿದ್ದುವು. ಛೋಟಾದಾರದಿಂದ ನಿಜವಾದ ಹಿಮಾಲಯ ಆರಂಭವಾಗುವುದು. ಹೇಸರಕತ್ತೆಗಳ ಸೇವೆ ಮುಂದೆ ಇಲ್ಲ.''

"ಅಂದರೆ ?"

"ಅಲ್ಲಿ ಚಂದ್ರಾ ನದಿಯನ್ನು ದಾಟಬೇಕು. ಮುಂದೆ ಇದೇ ಚೀನಬ್ ಆಗಿ ಪಾಕಿಸ್ತಾನಕ್ಕೆ ಹರಿಯುವುದು. ಅದರ ಪಾತ್ರ ಅತಿ ಆಳದಲ್ಲಿದೆ. ನದಿಯ ಹರಿವು ಅತಿ ವೇಗ. ಅಗಲವೂ ಸಾಕಷ್ಟಿದೆ. ಅಲ್ಲಿ ಕತ್ತೆಗಳು ದಾಟುವಂತಿಲ್ಲ. ಕಾಲ್ನಡಿಗೆಯವರ ಉಪಯೋಗಕ್ಕಾಗಿ ಒಂದು ದಂಡೆಯಿಂದ ಇನ್ನೊಂದು ದಂಡೆಗೆ ಬಿಗಿದೆಳೆದು ಕಟ್ಟಿರುವ ಕಬ್ಬಿಣದ ಹಗ್ಗದ ಮೇಲೆ ಅತ್ತ ಇತ್ತ ಎಳೆಯಲಾಗುವ ಟ್ರಾಲಿಯಿದೆ. ಇದರಲ್ಲಿ ಒಂದು ಸಲಕ್ಕೆ ಇಬ್ಬರನ್ನು ದಾಟಿಸಬಹುದು. ನಾವೂ ನಮ್ಮ ಸಾಮಗ್ರಿಗಳೂ ಆಚೆ ದಂಡೆ ಸೇರಲು ಒಂದು ದಿನವಿಡೀ ಟ್ರಾಲಿ ಸೇವೆ ಪಡೆಯಬೇಕಾಯಿತು. ಮುಂದೆ ಆರು ಮೈಲಿ ದಾರಿ ಏರಿ ಬಾರಾಶಿಗ್ರಿ ಗ್ಲೇಸಿಯರಿನ ತಳ ಸೇರಿದೆವು (೧೪,೦೦೦ ಅಡಿ) ಅಲ್ಲಿ ನಮ್ಮ ಮುಖ್ಯಶಿಬಿರ ಸ್ಥಾಪಿಸಿದೆವು."

"ಗ್ಲೇಸಿಯರ್ ಅಂದರೇನು ?"

"ಎಷ್ಟೋ ಆಳದಲ್ಲಿ ಒಂದು ನದಿ ಹರಿಯುತ್ತಿರುತ್ತದೆ. ಅದರ ಮೇಲೆ ಕಲ್ಲುಬಂಡೆ ಉರುಳಿ, ಮಂಜುಗಡ್ಡೆ ಕಟ್ಟಿ ಹಲವಾರು ವರ್ಷಗಳಲ್ಲಿ ಒಂದು ಹೊಸ ಬೆಟ್ಟವೇ ನಿರ್ಮಾಣಗೊಳ್ಳುವುದು. ಇಂಥ ಬೆಟ್ಟ ಅದರ ತಳದ ನದಿಯ ನಿರಂತರ ಪ್ರವಾಹದಿಂದ ಅಲ್ಪಸ್ವಲ್ಪ ಚಲಿಸುತ್ತಿದೆ. ಒಂದು ವರ್ಷದಲ್ಲಿ ಈ ಚಲನೆ ಆರೆಂಟು ಅಂಗುಲ ಆಗಬಹುದಷ್ಟೆ. ಆದರೆ ಇದರಿಂದ ಆ ಬೆಟ್ಟದ ಮೈಯಲ್ಲಿ ಭೀಕರ ಬಿರುಕುಗಳು, ಆಳ ಕೊರಕಲುಗಳು, ವೇಗದ ಝರಿಗಳುಂಟಾಗುವುವು. ಮಂದಗತಿಯ ಹಿಮಾವೃತಪರ್ವತವೇ ಗ್ಲೇಸಿಯರ್. ಪ್ರಪಂಚದ ಅತ್ಯಂತ ದೊಡ್ಡ ಗ್ಲೇಸಿಯರುಗಳಲ್ಲಿ ಬಾರಾಶಿಗ್ರಿಯೂ ಒಂದಂತೆ. ನೂರಾರು ಮೈಲಿ ಯದ್ವಾ ತದ್ವಾ ವ್ಯಾಪಿಸಿರುವ ಇದರ ಒಂದು ಶಿಖರವೇ ನಮ್ಮ ಗುರಿಯಾದ ಕುಲ್ಲು ಪುಮೋರಿ."

"ಕುಲ್ಲು ಪುಮೋರಿ ಎಂದರೇನು ಅರ್ಥ ?"

"ಹಿಮಾಲಯ ಶ್ರೇಣಿಯಲ್ಲಿರುವ ಒಂದು ಸುಂದರ ಕಣಿವೆಯ ಹೆಸರು. ಕುಲ್ಲುವಿನ ಕನ್ಯೆಯೇ ಕುಲ್ಲು ಪುಮೋರಿ. ಕನ್ಯೆಯ ಮುಗ್ಧತೆಯಿಂದ—ನಾಚಿಕೆಯಿಂದ ದೂರ ಅಡಗಿ ನಿಂತಿರುವವಳೇ ಪುಮೋರಿ !"

"ಎಂಟು ಗಂಡುಗಳು, ಅವರಲ್ಲಿಯೂ ಮೂವರು ಮೈಸೂರಿನ ಸುಂದರರು, ನಾಚಿಕೆ ಸಹಜವೇ. ಕಡೆಗೂ ಅವಳು ಯಾರನ್ನು ವರಿಸಿದಳು ?"

"ಅವಳನ್ನು ನೋಡುವ ಮೊದಲೇ ಇಷ್ಟು ಆತುರವಾದರೆ ! ನಕಾಶೆಯ ಪ್ರಕಾರ ಪುಮೋರಿಯ ದೂರ ಸುಮಾರು ೨೦ ಮೈಲಿಯಿತ್ತು. ಆದರೆ ಅದನ್ನು ಸ್ಪಷ್ಟವಾಗಿ ನೆಲದ ಮೇಲೆ ಗುರುತಿಸಿದ ಹೊರತು ಮುಂದುವರಿಯುವುದು ಅಪ್ರಯೋಜಕ. ಹೀಗಾಗಿ ತಳದ ಶಿಬಿರದಿಂದ ಮುಂದೆ ಮೂರು ಉಪಶಿಬಿರಗಳನ್ನು ಅಲ್ಲಲ್ಲಿ ಸ್ಥಾಪಿಸಿದೆವು. ಮೂರನೆಯದು ೧೫ ಮೈಲಿ ದೂರದಲ್ಲಿ, ೧೫,೭೦೦ ಅಡಿ ಎತ್ತರದಲ್ಲಿ. ಅಲ್ಲಿಗೆ ನಾವು ೧೬ರಂದು ತಲಪಿದೆವು."

"ಸ್ವರ್ಗದ ಸೋಪಾನಗಳನ್ನೂ ಹೀಗೆಯೇ ನಿರ್ಮಿಸಿದ್ದಾಗಿರಬೇಕು !"

"ಗುರಿ ತಲಪುವುದೇ ಸ್ವರ್ಗವೆಂದಾದರೆ ನೀವಂದುದು ಸರಿ. ಆ ಶುಭ್ರಶ್ವೇತ ಹಿಮ

ವತ್ಪರ್ವತಗಳ ರಾಶಿ, ಕಣಿವೆಗಳ ಆಳ, ನುಂಗಲು ಬಾಯ್ದೆರೆದು ನಿಂತಿರುವ ಕೊರಕಲುಗಳ ಅಸ್ತವ್ಯಸ್ತ ಚಿತ್ರ ಅನುಪಮ. ಮೂರನೆಯ ತಂಗುಶಿಬಿರವೇ ನಮ್ಮ ಮುಂದಿನ ನೆಗೆತದ ವೇದಿಕೆಯಾಯಿತು. ಆದರೆ ಕುಲ್ಲು ಪುಮೋರಿ ದರ್ಶನವಿಲ್ಲ. ಹೀಗಾಗಿ ಸಮೀಪದ ಮೂರು ಉನ್ನತ ಶಿಖರಗಳನ್ನೇರಿ ನೋಡುವುದೆಂದು ಯೋಚಿಸಿ ನಮ್ಮ ತಂಡವನ್ನು ಮೂರು ಉಪತಂಡಗಳಾಗಿ ವಿಂಗಡಿಸಿ ಒಂದೊಂದನ್ನು ಒಂದೊಂದು ಶಿಬಿರಕ್ಕೆ ಕಳಿಸ ಲಾಯ್ತು. ೧೭ನೆಯ ತಾರೀಕು. ಮೈಸೂರಿನ ನಾವು ಮೂವರೂ ಶೆರ್ಪಾ ಭೋಲನೊಡ ಗೂಡಿ ನಮ್ಮ ಪಾಲಿಗೆ ಬಂದ ಶಿಖರವನ್ನೇರತೊಡಗಿದೆವು. ಕೆಳಗಿನಿಂದ ನೋಡುವಾಗ ಅದು ಇತರ ಎರಡು ಶಿಖರಗಳಿಗಿಂತಲೂ ತಗ್ಗಾಗಿದ್ದಂತೆ ಕಂಡಿತು. ಅತ್ಯುನ್ನತವಾದ ದ್ದನ್ನು ಅತಿ ದುರ್ಗಮವಾದದ್ದನ್ನು ಸಾಧಿಸಬೇಕೆಂದಿದ್ದ ನಾವು ಹತಾಶರಾದೆವು. ಮೂರು ಶಿಖರಗಳೂ ಕಾಣುವಂತೆ ಸಾಲಾಗಿದ್ದರೂ ನಮ್ಮ ದಾರಿಗಳು ಬೇರೆ ಬೇರೆಯಾದಂತೆ ನಮ್ಮ ನಡುವಿನ ಅಂತರ ಹೆಚ್ಚಾಗತೊಡಗಿತು. ಸ್ವಲ್ಪ ಹೊತ್ತಿನಲ್ಲಿಯೇ ನಾವು ನಮ್ಮ ದಾರಿಯಲ್ಲಿ ಹರಿಯುತ್ತಿದ್ದ ಕಂಬಳೀ ಹುಳು..."

"ಚಳಿ ಹೆಚ್ಚಾಯಿತೆಂದು ಕಂಬಳಿ ಸುತ್ತಿಕೊಂಡಿರಾ ?"

"ಅಲ್ಲಿಯ ಉಡುಪೇ ಬೇರೆ. ಕಂಬಳಿ ಸುತ್ತಿ ಹಿಂಗಿಸಲಾಗದ ಶೈತ್ಯ ಅಲ್ಲಿದೆ. ರಾತ್ರಿ ಡೇರೆಯೊಳಗೆ ಸ್ಲೀಪಿಂಗ್ ಬ್ಯಾಗ್ ಎನ್ನುವ ಒಂದು ಚೀಲದೊಳಗೆ ನುಸುಳಿ ನಿದ್ರೆ ಮಾಡ ಬೇಕು. ನಾನು ಹೇಳುತ್ತಿದ್ದುದು, ನಾವುನಾಲ್ವರೂ ಒಂದು ದೊಡ್ಡ ಕಂಬಳೀಹುಳುವಿನಂತೆ ಬೆಟ್ಟದ ಮೈಯಲ್ಲಿ ಹರಿಯುತ್ತಿದ್ದೆವೆಂದು. ಅಂದರೆ ಒಂದು ಉದ್ದದ ನೈಲಾನ್ ಹಗ್ಗ ದಿಂದ ನಾವು ಬೇರೆ ಬೇರೆ ದೂರಗಳಲ್ಲಿ ಬಂಧಿತರಾದೆವು. ಮೊದಲಿನವನು ಹಿಮ ಕೊಡಲಿ ಯಿಂದ ಹಾದಿ ಕಡಿದು ಹಗ್ಗ ಬಿಗಿಯಾಗುವವರೆಗೆ ತೆವಳಿ ಅಲ್ಲಿ ಭದ್ರವಾಗಿ ನೆಲೆಯೂರು ತ್ತಾನೆ. ಹಿಂದಿನವನು ಅನಂತರ ತೆವಳಿ ಬರುತ್ತಾನೆ. ಇದೇ ರೀತಿ ಎಲ್ಲರೂ ಮುಂದೆ, ಕಂಬಳೀಹುಳುವಿನ ಉಂಗುರ ಉಂಗುರ ಇಡಿಯ ದೇಹವನ್ನು ಸಾಗಿಸುವಂತೆ, ಹೋಗು ತ್ತಾರೆ. ಒಂದು ಸಲಕ್ಕೆ ಒಬ್ಬ ಮಾತ್ರ ಚಲಿಸುತ್ತಿರುವುದರಿಂದ ಅವನಿಗೆಲ್ಲಿಯಾದರೂ ಕಾಲು ಜಾರಿದರೂ ಅಪಾಯವಿಲ್ಲ. ಉಳಿದವರು ಹಗ್ಗವನ್ನು ಬಲವಾಗಿ ಜಗ್ಗುತ್ತಾರೆ. ಇಂಥ ಏರುವಿಕೆ ಸ್ವಾಭಾವಿಕವಾಗಿಯೇ ಬಲು ನಿಧಾನವಾಗುವುದು. ಕೆಳಗಿನಿಂದ ಸುಲಭ ವಾಗಿ, ತಗ್ಗಾಗಿ ಕಂಡ ನಮ್ಮ ಶಿಖರದ ಇನ್ನೊಂದು ಮುಖ ಈಗ ಗೋಚರವಾಗುತ್ತಿತ್ತು. ಅದು ಅತಿ ಕಡಿದಾಗಿ ನಮ್ಮನ್ನು ಅಣಕಿಸುವಂತೆ ಇತ್ತು. ಆದರೆ ಬುಡ ತಲಪಿದ ನಾವು (೧೮,೫೦೦ ಅಡಿ) ಉಳಿದ ಸುಮಾರು ೫೦೦ ಅಡಿ ಸಾಧ್ಯವೇ ಇಲ್ಲ ಎನ್ನುವ ಮನೋ ದೈಹಿಕ ಸ್ಥಿತಿಗೆ ಬಂದಿದ್ದೆವು. ಶಿಖರ ದೈತ್ಯಸ್ವರೂಪಿಯಾಗಿ ನಮ್ಮನ್ನು ನುಂಗು ವಂತೆ ನಿಂತಿತ್ತು. ಸೋತು ಹಿಂತಿರುಗೋಣವೆಂದರೆ ಛಲ ಅಣಕಿಸಿತು. ಪುನಃ ಪ್ರಯತ್ನ. ಪ್ರತಿ ರಕ್ತಕಣದ ಕೊನೆಯ ಚೈತನ್ಯವೂ ಆವಶ್ಯವಾಗುವ ಸಾಹಸ. ನಮ್ಮ ಹಗ್ಗ ಹಿಗ್ಗಿ ಮುನ್ನುಗ್ಗಿತು. ೧೯,೦೦೦ ಅಡಿ ಎತ್ತರದ ಆ ಶಿಖರದ ನೆತ್ತಿಯ ಮೇಲೆ ಕುಳಿತಾಗ ನಮಗಾದ ಆನಂದ ಅಪಾರ. ನಮ್ಮ ಶಿಖರದ ಮುಂದೆ ಉಳಿದೆರಡೂ ಮಣಿದು ನಿಂತಿ ದ್ದುವು. ಇದು ಅದುವರೆಗೆ ಯಾರೂ ಏರದಿದ್ದ ನೂತನ ಶಿಖರವಾದದ್ದರಿಂದ (virgin peak) ಅದಕ್ಕೆ ನಾಮಕರಣ ಮಾಡುವ ಸುಯೋಗ ನಮ್ಮದಾಯಿತು. ಮೈಸೂರು

ಶಿಖರವೆಂದು ಕರೆಯೋಣವೇ ಎಂದು ಮಾತಾಡಿಕೊಂಡೆವು. ಛೇ ಛೇ ೨೯,೦೦೦ಕ್ಕಿಂತಲೂ ಎತ್ತರದಲ್ಲಿಯೇ ಮೈಸೂರಿರಬೇಕು. ಆದ್ದರಿಂದ ಇವನ್ನು ನಮ್ಮ ಹೆಸರುಗಳಿಂದ ಒಂದೊಂದು ಅಕ್ಷರವನ್ನು ಆರಿಸಿ ದೊರೆಯುವ ಪದದಿಂದ ಕರೆಯೋಣವೆಂದು ಒಪ್ಪಿದೆವು. ಭೋಲಾನಿಂದ B. ಎ. ಲಕ್ಷ್ಮೀನಾರಾಯಣನಿಂದ A, ಮೋಹನನಿಂದ M ಮತ್ತು ಪಿಂಟೋನಿಂದ P ಆರಿಸಿ ಆ ಶಿಖರವನ್ನು BAMP ಶಿಖರವೆಂದು ಕರೆದೆವು.''

''ಅಂತೂ ಅಲ್ಲೊಂದು ಛೋಟಾ ಮೈಸೂರು ಕಟ್ಟಿದಿರಿ.''

''ನಮಗೆ ಅತಿ ಅಭಿಮಾನದ ಸಂಗತಿ ಇದು. ಆದರೆ ಮೈಸೂರು ಎವರೆಸ್ಟ್ ಏರಲೇಬೇಕು...ಆ ಎತ್ತರದಿಂದಲೂ ಪುಮೋರಿ ಕಾಣಲಿಲ್ಲ. ನಮ್ಮ ಉಳಿದ ಎರಡು ತಂಡದವರಿಗೂ ಕಂಡಿರಲಿಲ್ಲ. ಅವರು ಏರಿದ್ದ ಶಿಖರಗಳೂ ನೂತನಾನ್ವೇಷಣೆಗಳೇ. ಒಂದನ್ನು ಸಾಮ್‌ಗ್ಯಾಲ್ ಶಿಖರವೆಂದೂ (೧೮,೫೦೦ ಅಡಿ), ಇನ್ನೊಂದನ್ನು Rocky challenge ಎಂದೂ (೧೮,೭೦೦ ಅಡಿ) ಹೆಸರಿಸಿದ್ದರು.''

ಮೋಹನ ಉವಾಚ : ''ಮರುದಿನ ನಾವೆಲ್ಲರೂ ಇನ್ನೊಂದು ಹೊಸ ಶಿಖರವನ್ನೇರಿ (೧೬,೨೦೦ ಅಡಿ)ಅದನ್ನು ನೀಲ್‌ಡೋಮ್(ಮಂಜುಗಡ್ಡೆಯ ಗೋಳ) ಎಂದು ಕರೆದೆವು. ಈ ಸಲ ನಮ್ಮ ನಿರೀಕ್ಷೆ ಸಫಲವಾಯಿತು. ದೃಷ್ಟಿಯ ಅಂಚಿನಲ್ಲಿ ಕುಲ್ಲು ಪುಮೋರಿಯ ಅಸ್ಪಷ್ಟ ರೇಖಾಚಿತ್ರವನ್ನು ಕಂಡು ಆನಂದ ಪುಳಕಿತರಾದೆವು. ಸುಮಾರು ೧೮–೨೦ ಮೈಲಿ ದೂರದಲ್ಲಿತ್ತು. ನೀಲ್ ಡೋಮಿನಿಂದ ಇಳಿಯುವಾಗ ಪಿಂಟೋ ಒಂದು ಕಡೆ ಜಾರಿ ೫೦೦ ಅಡಿಯಷ್ಟು ಕೆಳಗೆ ಬಿದ್ದು ಮಣಿಗಂಟಿಗೆ ತುಂಬ ನೋವುಂಟುಮಾಡಿಕೊಂಡ. ಈ ಲಕ್ಷ್ಮಿ ಒಂದು ದೊಡ್ಡ ಕೊರಕಲಿನೊಳಗೆ ಕಾಲು ಹಾಕಿ ಅಪಾಯವಾಗದೇ ಉಳಿದುಕೊಂಡ. ಅವನೇನಾದರೂ ಎರಡು ಕಾಲುಗಳನ್ನೂ ಅದರೊಳಗಿಟ್ಟಿದ್ದರೆ ಪಾತಾಳ ಸಮಾಧಿಯೇ.''

''ಕುಲ್ಲು ಪುಮೋರಿ ವಿಚಾರವೇನಾಯಿತು ?''

ಲಕ್ಷ್ಮಿ : ''ಈಗಾಗಲೇ ಆಹಾರ ಪದಾರ್ಥ ಸಾಕಷ್ಟು ಖರ್ಚಾಗಿಹೋಗಿರುವುದರಿಂದ ನಮ್ಮ ನಾಯಕ ತಾನೂ ಇಬ್ಬರು ಶೆರ್ಪಾಗಳೂ ಮಾತ್ರ ಅಲ್ಲಿಗೆ ಹೋಗಿ ಬರುತ್ತೇವೆ, ಉಳಿದವರು ಮುಖ್ಯ ಶಿಬಿರಕ್ಕೆ ಮರಳಬೇಕು ಎಂದು ಅಪ್ಪಣೆ ಮಾಡಿದ. ನಾನು ಬರುತ್ತೇನೆ ಎಂದು ಬಗೆಬಗೆಯಾಗಿ ಬೇಡಿಕೊಂಡೆ. ನನ್ನ ಆರೋಗ್ಯ, ಚಟುವಟಿಕೆ ಅತ್ಯುತ್ಕೃಷ್ಟವಾಗಿದ್ದುವು. ನನಗೆ ಆಹಾರ ಬೇಡ, ಪುಮೋರಿ ಬೇಕು. ಶೆರ್ಪಾನ ಬದಲು ಗಂಟು ಹೊತ್ತು ಬರುತ್ತೇನೆಂದೆ. ಆದರೆ ನಾಯಕನಿಗೆ ಮನಸ್ಸು ಬದಲಾಗಲಿಲ್ಲ. ಹೀಗಾಗಿ ೨೨ ರಂದು ಅವರು ಅತ್ತಕಡೆ ಸಾಗಿದಾಗ ನನಗಾದ ದುಃಖ ಅಷ್ಟಿಷ್ಟಲ್ಲ. ಅವರೇನೋ ಆ ಶಿಖರವನ್ನು ಏರಿ ಜಯಶೀಲರಾಗಿ ಮರಳಿದರು. ನಮ್ಮ ತಂಡದ ವಿಜಯವೇ ಅದು ಎಂದು ನಮ್ಮನ್ನು ಹುರಿದುಂಬಿಸಿದರು. ಆದರೆ ನನಗೆ ಮಾತ್ರ ಇದು ಒಣ ಉಪಚಾರವೆಂದಾಯಿತು. ಹಿಂದೆ ಉಳಿದ ನಾವು ಬೇರೆಬೇರೆ ಶಿಖರ ಏರಿ ಹೊಸ ವಿಕ್ರಮ ಸಾಧಿಸಿದೆವು. ಇವುಗಳಲ್ಲಿ ಒಂದು ಅನುಭವ ಮಾತ್ರ ಭಯಂಕರವಾಯಿತು. ೨೫ರಂದು ಮೈಸೂರಿನ ನಾವು ಮೂವರೂ ಬೇರೆ ಇಬ್ಬರೂ ೨೦,೫೦೦ ಅಡಿ ಎತ್ತರದ ಒಂದು ಶಿಖರವೇರಲು ಹೋದೆವು. ೨೦,೦೦೦ ತಲಪುವಾಗ ಅತಿಯಾದ ಹಿಮ ಪ್ರವಾಹದಿಂದ ಬಿರುಗಾಳಿಯಿಂದ

ಮುಂದುವರಿಯುವುದು ಅಸಾಧ್ಯವಾಯಿತು. ಇನ್ನು ಶಿಬಿರಕ್ಕೆ ಮರಳೋಣ ಎಂದು ನಿರ್ಧರಿಸಿದೆವು. ಕಡಿದಾದ ಬೆಟ್ಟವನ್ನು ಏರುವುದಕ್ಕಿಂತಲೂ ಇಳಿಯುವುದು ಕಠಿಣ. ಆಳ ಭೀಕರವಾಗಿ ಕಣ್ಣು ಕುಕ್ಕುತ್ತದೆ. ದೇಹದ ಭಾರ ಮುಂದೆ ತಳ್ಳುತ್ತದೆ. ಮಣಿ ಗಂಟುಗಳು ಕುಸಿಯುತ್ತವೆ. ಇಲ್ಲಿಯೂ ಹಗ್ಗವೇ ಗತಿ. ಆದರೆ ಈ ಬೆಟ್ಟದ ಒಂದು ಮೈ ಜಾರುಗುಂಪ್ಪೆಯಂತೆ ಇಳಿಜಾರಾಗಿ ಸಪಾಯವಾಗಿ ಆಕರ್ಷಿಸುತ್ತಿತ್ತು. ಆಳ ಸಾವಿರಾರು ಅಡಿ. ಆ ನಯವಾದ ಮಂಜುಗಡ್ಡೆಯ ಇಳಿಜಾರು, ಆದರ ಮೇಲೆ ಹಾಲಿನ ನೊರೆಯಂತೆ ಬಿದ್ದಿದ್ದ ಹಿಮರಾಶಿ ನಮ್ಮನ್ನು ಜಾರಲು ಆಹ್ವಾನಿಸಿದುವು, ಇಂಥಲ್ಲಿ ಜಾರುವುದೂ ಒಂದು ಕಲೆ. ಕಾಲು ಕೆಳಗೆ ನೀಡಿ ಕುಳಿತು ಕೈಗಳಲ್ಲಿ ಹಿಡಿದ ಹಿಮಕೊಡಲಿಗಳಿಂದ ವೇಗ, ದಿಕ್ಕುಗಳನ್ನು ನಿಯಂತ್ರಿಸುತ್ತ ಹೋದರೆ ಸಾವಿರಾರು ಅಡಿಗಳನ್ನು ಕೆಲವೇ ನಿಮಿಷಗಳಲ್ಲಿ ಜಾರಿಬಿಡಬಹುದು. ಹಾಲಿನ ಹದಿಯ ಮೇಲೆ ಜಾರಿದರೆ ಆಗುವ ಅನುಭವ. ನಿಯಂತ್ರಣದಲ್ಲಿ ಏನಾದರೂ ದೋಷವುಂಟಾದರೆ ಮಾತ್ರ ಅವನ ಆಸೆ ಬಿಡಬೇಕು. ಅವನು ಬಂಡ ಕಳಚಿದ ಬಂಡೆಯಂತೆ ಒಂದೋ ಪ್ರಪಾತದ ತಳಕ್ಕೆ ಎಸೆಯಲ್ಪಡಬಹುದು ಅಥವಾ ಆ ಮೊದಲೇ ಚಾಚಿರುವ ಒಂದು ಬಂಡೆಗೆ ಬಡಿದು ನಾಶವಾಗಿ ಹೋಗಬಹುದು.''

''ಆದರೆ ಆ ಕಲ್ಲುಬಂಡೆಯೂ ಹಿಮದ್ದೇ ಆದುದರಿಂದ ಮೆತ್ತಗಿರಬಹುದಷ್ಟೆ ?''

''ಮಂಜುಗಡ್ಡೆ ಕಲ್ಲಿನಷ್ಟೇ ಅಥವಾ ಇನ್ನೂ ಪಾಷಾಣ ಕಠಿಣ. ಹತ್ತಿಯ ರೇಕುಗಳಂತೆ ಮೈದಾಹಿಟ್ಟಿನ ಕಣಗಳಂತೆ ಹಿಮ ಮೃದುವಾಗಿ ಹರಡಿಬಿದ್ದು ಗಟ್ಟಿಯಾಗಿ ಕಾಲಾಂತರದಲ್ಲಿ ಬಂಡೆಯಂತೆ ಆಗುವುದು. ಗಲ್ಲಿಗೇರಿಸಲ್ಪಡುವವನಿಗೆ ಹೊನ್ನಶೂಲವಾದರೇನು ನೋವು ಕಡಿಮೆಯೇ ? ಜಾರುವಿಕೆಯಲ್ಲಿ ಸಾಕಷ್ಟು ಪರಿಣತಿ ಗಳಿಸಿದ್ದ ನಾವು ಮೂವರೂ ಈ ಆಟ ಪ್ರಾರಂಭಿಸಿದೆವು. ಉಳಿದವರು ಉದ್ದದ ದಾರಿಯಲ್ಲಿ ಕುಂಟುತ್ತ ಸಾಗಿದರು.

ಲಕ್ಷ್ಮಿ : ''ಮೊದಲು ನಾನು ಜಾರಿ ಸುಮಾರು ೪೦೦ ಅಡಿ ಕೆಳಗೆ ಬಂದು ನಿಂತೆ. ಹಿಂದೆಯೇ ಮೋಹನ ಅತಿ ವೇಗದಿಂದ ಬರುತ್ತಿದ್ದುದನ್ನು ಕಂಡು ಗಾಬರಿಗೊಂಡೆ. ಆದರೆ ಅವನು ತಡೆ ಹಿಡಿದು ಅಲ್ಲಿಯೇ ನಿಂತ. ಆದರೆ ಪಿಂಟೋ ಮಾತ್ರ ಸ್ವಲ್ಪ ದೂರ ಜಾರುವಾಗಲೇ ಹಿಡಿತ ಕಳೆದುಕೊಂಡ.''

''ಮತ್ತೇನಾಯ್ತು ಪಿಂಟೋ ?''

ಪಿಂಟೋ : ''ಕೈಕೊಡಲಿಯಿಂದ ವೇಗ, ದಿಕ್ಕುಗಳನ್ನು ಹಿಡಿತದಲ್ಲಿಟ್ಟು ಗ್ಲಿಸ್ಸೇಡ್ (glissade) ಮಾಡುತ್ತಿದ್ದಂತೆಯೇ ಕೊಡಲಿ ಕಳಚಿಹೋಯಿತು. ಆ ಗಳಿಗೆ ನಾನು ಗುರುತ್ವಾಕರ್ಷಣೆಯಿಂದ ಕೆಳಗೆ ಉರುಳುವ ಮಾಂಸದ ಮುದ್ದೆಯಾದೆ. ಕ್ಷಣ ಕ್ಷಣ ನಾನು ಉರುಳುತ್ತಿದ್ದ ವೇಗ ಹೆಚ್ಚುತ್ತಿತ್ತು. ಆದರೆ ನಾನು ಪ್ರಯತ್ನ ಬಿಡಲಿಲ್ಲ, ಕಣ್ಣು ತೆರೆದುಕೊಂಡೇ ಇದ್ದೆ. ಎಲ್ಲಿ ಏನಾದರೂ ಆಸರೆ ದೊರೆಯಬಹುದೋ ಎಂದಿದ್ದೆ. ಕೆಳಗೆ ದೂರದಲ್ಲಿ ಯಾರೋ ನಿಂತದ್ದು ಕಂಡೆ, ಕೂಗಿದೆ. ಮುಂದಿನ ಕ್ಷಣದಲ್ಲಿ ನಾನು ಆ ವ್ಯಕ್ತಿಯ ಮೇಲೆ ಬಿದ್ದಿದ್ದೆ. ಬಿದ್ದ ರಭಸಕ್ಕೆ ಅವನ ಪರಟಿನ ಕಾಲರನ್ನು ಬಲುವಾಗಿ ಹಿಡಿದುಕೊಂಡೆ...''

''ಹಾಗೆ ಉರುಳುವಾಗ ಆ ಕಠಿಣ ಮಂಜುಗಡ್ಡೆಗಳು ನಿಮ್ಮ ದೇಹವನ್ನು ಜರ್ಝರಿತಗೊಳಿಸುವುದಿಲ್ಲವೇ ?''

"ಇಲ್ಲ. ಮಂಜುಗಡ್ಡೆಯ ಗಟ್ಟಿ ತಳದ ಮೇಲೆ ಹೊಸತಾಗಿ ಬಿದ್ದು ನಯವಾಗಿ ಹರಡಿರುವ ಹಿಮಕಣಗಳು ನಮಗೆ ಒಂದು ಹಾಸಿಗೆಯ ಮೇಲೆ ಉರುಳಿದ ಅನುಭವ ನೀಡುತ್ತವೆ. ಅಲ್ಲದೇ ನಾವು ಉರುಳಿದಂತೆ ಅವು ನಮ್ಮ ಮೈಗೆ ಅಂಟಿಕೊಂಡು ಒಂದು ಹಿಮ ಕವಚವನ್ನೇ ತೊಡಿಸುವುವು!"

"ಅಂತೂ ಈ ಆಕಾಶಗಂಗೆಯನ್ನು ತಡೆಹಿಡಿದ ಭಗೀರಥ ಯಾರು ?"

ಮೋಹನ : "ಅದೊಂದು ಭಗೀರಥ ಪ್ರಯತ್ನವೇ ಆಯಿತು. ನಾನೇನೋ ಪಿಂಟೋನ ಮಿಂಚಿನ ವೇಗವನ್ನು ತಡೆಯುವ ಹುಚ್ಚು ಪ್ರಯತ್ನ ಮಾಡಿದೆ. ನಾನು ಹಾಗೇನಾದರೂ ಮಾಡಿರದಿದ್ದರೆ ಅವನು ಮುಂದಿನ ಕ್ಷಣ ಕಗ್ಗತ್ತಲೆಯ ಕಣಿವೆಗೆ ಒಗೆಯಲ್ಪಡುತ್ತಿದ್ದ. ಅವನು ನನಗೆ ಬಡಿದ ರಭಸದಲ್ಲಿ ನನ್ನ ಸಮತೋಲ ತಪ್ಪಿಹೋಯಿತು. ನನ್ನ ಷರಟನ್ನು ಅವನು ಭದ್ರವಾಗಿ ಹಿಡಿದಿದ್ದನು. ನಾವಿಬ್ಬರೂ ಈಗ ಒಟ್ಟಾಗಿ ಉರುಳುವ ಒಂದು ಮುದ್ದೆಯಾದೆವು, ಒಂದು ಕೈಯಿಂದ ಪಿಂಟೋನನ್ನು ಹಿಡಿದು ಇನ್ನೊಂದರಲ್ಲಿ ಹಿಡಿದಿದ್ದ ಹಿಮ ಕೊಡಲಿಯ ಸಹಾಯದಿಂದ ರಭಸವನ್ನೂ ದಿಕ್ಕನ್ನೂ ಹಿಡಿತದಲ್ಲಿಡಲು ಆದಷ್ಟು ಪ್ರಯತ್ನಿಸಿದೆ. ಆದರೆ ಇದು ಸೋಲುವ ದಾರಿ ಎಂದು ನನಗೆ ಮನವರಿಕೆಯಾಯಿತು. 'ನನ್ನನ್ನು ಬಿಟ್ಟುಬಿಡೋ' ಎಂದು ನಾನು ಪಿಂಟೋನಿಗೆ ಅರಚಿದೆ. ಅವನ ಕೈಹಿಡಿತ ಬಿಡಿಸಲು ಪ್ರಯತ್ನ ಕೊಡಹಿದೆ. ಆದರೆ ಪ್ರಯೋಜನವಾಗಲಿಲ್ಲ..."

ಲಕ್ಷ್ಮಿ : "ನಾನು ಸಹಾಯಶೂನ್ಯನಾಗಿ ದೂರದ ತಗ್ಗಿನಿಂದ ನೋಡುತ್ತಿದ್ದೆ. ಒಬ್ಬನ ಬದಲು ಇಬ್ಬರಾಯಿತೇ ಎಂದು ಹೆದರಿ ಕಂಗಾಲಾಗಿದ್ದೆ. ಮುಂದಿನ ಉಬ್ಬಿನಲ್ಲಿ ಅವರು ನನ್ನಿಂದ ಮರೆಯಾಗಿ ಹೋದರು. ಇನ್ನು ದೇವರೇ ಗತಿ ಎಂದು ಮೆಲ್ಲನೆ ಇಳಿಯಲು ಪ್ರಯತ್ನಿಸಿದೆ...ಅಷ್ಟರಲ್ಲಿಯೇ ಬೆಟ್ಟದ ಗರ್ಭದಿಂದ ಮೋಹನನ ಸ್ವರ ಮೋಹನವಾಣಿಯಾಗಿ ನನ್ನನ್ನು ಕರೆಯಿತು. ಧೈರ್ಯ ಬಂತು. ಸುಲಭವಾಗಿ ಜಾರಿ ಅವರನ್ನು ಸೇರಿಕೊಂಡೆ,"

"ಯಾವ ಮೋಹನ ಮುರಲಿ ಕರೆಯಿತೋ ದೂರ ತೀರಕೆ ನಿನ್ನನು ? ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ ?"

ಮೋಹನ : "ಮುಂದಿನ ಒಂದು ತಗ್ಗಿನಲ್ಲಿ ಪಿಂಟೋ ಹಠಾತ್ತಾಗಿ ತನ್ನ ಹಿಡಿತ ಬಿಟ್ಟುಬಿಟ್ಟ. ಆ ಕೂಡಲೇ ಅವನ ದಿಕ್ಕು ಬದಲಾಗಿ ಅವನು ಸಮತಟ್ಟಾದ ಪ್ರದೇಶದೆಡೆಗೆ ಉರುಳತೊಡಗಿದ. ನಾನೂ ಹಿಡಿತ ಸರಿಪಡಿಸಿಕೊಂಡು ಅದೇ ಪ್ರದೇಶದೆಡೆಗೆ ಜಾರಿದೆನು. ಅಂತೂ ಯಾವ ಬಂಡೆಗೂ ಇಡುಗಾಯಿಯಾಗದೇ ನಾವು ತಳ ಸೇರಿದೆವು. ಪಾಪ ಪಿಂಟೋನ ಒಂದು ಮೊಣಕಾಲಿನ ಸ್ನಾಯುರಜ್ಜುವಿಗೆ ವಿಪರೀತ ಜಖಂ ಆಗಿ ಅವನಿಗೆ ನಿಲ್ಲಲು ಸಹ ಆಗುತ್ತಿರಲಿಲ್ಲ."

"ಕಲ್ಲು ಪುಮೋರಿಯ ಶಿಖರದ ಮೇಲೆ. ಕನ್ನಡ ಕುವರರ ಸಾಹಸ ಮೇಳೆ ಅದೊಂದು ಬೇರೆಯೇ ಗ್ರಂಥವಾದೀತು."

"ಮುಂದೇನು ಸಾಹಸ ?"

"ಮೈಸೂರು ಪತಾಕೆ ಎವರೆಸ್ಟ್ ಮೇಲೆ ಹಾರಬೇಕು. ಆ ಸಾಮರ್ಥ್ಯ ನಮ್ಮ ತರುಣ

ರಿಗಿದೆ. ಉತ್ಸಾಹ ಇದೆ. ಎನ್‌ಸಿಸಿಯಲ್ಲಿ ಅದನ್ನು ನಿರ್ವಹಿಸುವ ಮುಂದಾಳುತನವಿದೆ. ಆ ದಿನ ಬೇಗನೆ ಬರಲಿ !''

ನಮ್ಮ ಹುಡುಗರ ವಿಶ್ವವಿಖ್ಯಾತ ವಿಕ್ರಮ ಅಖಿಳಭಾರತ ವೃತ್ತ ಪತ್ರಿಕೆಗಳಲ್ಲಿ ಪ್ರಕಟಗೊಂಡಿತು. ಇಂಥ ಒಂದು ಪತ್ರಿಕಾವರದಿಯನ್ನು ಓದಿದ ಕುಲಪತಿ ಗೋಕಾಕರು ಪ್ರಿನ್ಸಿಪಾಲ್ ಉಮರ್ಜಿಯವರಿಗೆ ಒಂದು ಅಭಿನಂದನ ಪತ್ರ ಬರೆದು ಬೆಂಗಳೂರು ವಿಶ್ವ ವಿದ್ಯಾಲಯ ಈ ತರುಣರನ್ನು ಗೌರವಿಸಲು ನಿಶ್ಚೈಸಿದೆ ಎಂದು ತಿಳಿಸಿ ಆ ಸಮಾರಂಭ ವನ್ನು ಉಮರ್ಜಿಯವರು ಏರ್ಪಡಿಸಬೇಕೆಂದು ಕೋರಿದರು. ಸಹಜವಾಗಿ ಈ ಸಂತೋಷದ ಹೊಣೆ ೧೨ನೆಯ ಮೈಸೂರಿಗೆ ಬಂತು. ಆ ಸಮಾರಂಭವನ್ನು ಒಂದು ವಿಶಿಷ್ಟ ರೀತಿಯಲ್ಲಿ ನೆರವೇರಿಸಿದೆವು.

ಪ್ರಾರ್ಥನೆಯನ್ನು ''ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ'' ಕಾಳಿದಾಸೋಕ್ತಿಯಿಂದ (ಹಮೀರ್ ಕಲ್ಯಾಣಿ ರಾಗದಲ್ಲಿ) ಪ್ರಾರಂಭಿಸಿ ಕನ್ನಡ ಕಡುಗಲಿಗಳ ಪ್ರತಾಪಲೀಲೆಯನ್ನು ಕೇಳಲು ಸರ್ವರನ್ನೂ (ಹಾಡಿನ ಮೂಲಕ) ಸ್ವಾಗತಿಸಿ ''ಮಂಗಳ ಸಂಚಿತ ಪಾಪವನು ತೊಳೆಯುತ್ತ ಪಾವನಗೊಳಿಸುವಾ ಕಾವೇರಿ ತಾಯಿಯ ಮುದ್ದಿನಣುಗರ ಶಿರದ ಮೇಲೆತ್ತಿಟ್ಟು ಅಭಿವಂದಿಸಿದ ಹಿಮರಾಜ'' ಎಂದು ಸೂಕ್ಷ್ಮ ಚಿತ್ರ ಕೊಟ್ಟೆವು. ಆ ತರುವಾಯ ಒಬ್ಬೊಬ್ಬ ವೀರನೂ ಮುಂದೆ ಬಂದು ಸಾಹಸ ಕತೆಯನ್ನು ಒಂದು ಹಂತದಿಂದ ಇನ್ನೊಂದು ಹಂತಕ್ಕೆ (ಮಂಜಲು ಓಟದಂತೆ) ಹೇಳುತ್ತ ಕೊಂಡೊಯ್ದು. ವಿಶ್ವವಿದ್ಯಾಲಯದ ಪರವಾಗಿ ಮೂವರಿಗೂ ಬ್ಲೇಸರ್ ಕೋಟುಗಳನ್ನು ಕುಲಪತಿಗಳು ತೊಡಿಸಿ ಗೌರವಿಸಿದರು.

೧೨ನೆಯ ಮೈಸೂರು ನಿಜವಾಗಿಯೂ ಇದನ್ನು ಸಾಧಿಸಿತು !

ಜ್ಞಾನ ಕುದುರೆಮುಖದ ಚಿಂತನೆ

ಒಂದು ಮಹಾಕಾರ್ಯ ನಡೆಸುವ ವರೆಗೆ ಅದರ ನಿರೀಕ್ಷೆಯಿಂದ ಕಾರ್ಯೋದ್ಯುಕ್ತರಾಗಿರುತ್ತೇವೆ. ಅದೇ ನಮಗೆ ದಿನ ದಿನ ಉತ್ಸಾಹಪ್ರೇರಕ ಟಾನಿಕ್. ಆ ಕಾರ್ಯವನ್ನು ನಿರ್ವಹಿಸುತ್ತಿರುವ ದಿನಗಳಲ್ಲಿ ಅದರ ವಿದ್ಯುಚ್ಛಕ್ತಿಯ ಪ್ರಭಾವದಿಂದ ನಮಗೆ ಮೈಮೇಲೆ ದೇವರು ಬಂದಂಥ ಒಂದು ಅನುಭವ ಮೂಡುತ್ತದೆ. ಇದರ ಪರಿಣಾಮವಾಗಿ ದೇಹದ ಗುಪ್ತ ಮೂಲೆಗಳಿಂದಲೂ ಸುಪ್ತ ಶಕ್ತಿ ಸಾಕಷ್ಟು ಪ್ರವಹಿಸಿ ನಮ್ಮ ಶಕ್ತಿ ಸಾಮರ್ಥ್ಯಗಳ ವಿಚಾರ ನಮಗೇ ಅಚ್ಚರಿ ಮೂಡುವಂತೆ ದುಡಿಯುತ್ತೇವೆ. ಅಡ್ರೀನಲ್ ಪರಿಣಾಮ ! ನಿಜವಾದ ಸಮಸ್ಯೆ ಮೂಡುವುದು ಮತ್ತೆ ಬರುವ ದಿವಸಗಳಲ್ಲಿ. ಆ ಹಿಂದಿನ ಎತ್ತರ ಏರಲು ನಮಗೆ ಆಗುವುದಿಲ್ಲ. ಆ ದುಡಿಮೆ ನಮ್ಮಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದು ವಿಧದ ಹತವೀರ್ಯ ಭಾವನೆ ಮೂಡುವುದು. ನಮ್ಮ ಯೋಗ್ಯತೆಯ ವಿಷಯದಲ್ಲಿ ನಮಗೇ ಸಂಶಯವೂ ಬರುವುದುಂಟು. ಸಂಸ್ಥೆ ಒಂದು ಸಮಷ್ಟಿ ಚೈತನ್ಯ. ಅದರ ಚೈತನ್ಯ ಘಟಕಗಳು ವಿದ್ಯಾರ್ಥಿಗಳು. ಈ ಘಟಕಗಳ ಮೊತ್ತ ಒಂದು ಕಾಲದಲ್ಲಿ ಒಂದು ಮಹಾ ಕಾರ್ಯ ಆಗಬೇಕೆಂದು ತೀರ್ಮಾನಿಸಿತು. ಅದರ ನಿರ್ವಹಣೆಯ ಹೊಣೆಯನ್ನು ನನ್ನಂಥ ಕೆಲವು ಅದೃಷ್ಟವಂತರ ಪಾಲಿಗೆ ಅದೇ ಚೈತನ್ಯ ವಿಧಿಸಿತು. ಇದರಿಂದಾಗಿ ನಾನು ಪ್ರಸಿದ್ಧ ನಾದೆ—ವಿದ್ಯುಚ್ಛಕ್ತಿ ಪ್ರವಹಿಸುವಾಗ ಬಲ್ಬ್ ಉರಿಯುವಂತೆ, ಹಸಿ ಕಬ್ಬುಣ (ತಾತ್ಕಾಲಿಕ)

ಕಾಂತವಾಗುವಂತೆ. ಕಾರ್ಯ ಮುಗಿಯಿತು, ಶಕ್ತಿಪ್ರವಾಹ ನಿಂತಿತು—ಬಲ್ಬು ನಂದಿತು, ಕಾಂತ ಕಬ್ಬಿಣವಾಯಿತು. ೧೯೬೭ರ ಬೇಸಗೆಯ ದಿನಗಳಲ್ಲಿ ನನಗೆ ಮೂಡಿದ್ದು ಈ ಭಾವ. ಮಹಾಭಾರತ ಯುದ್ಧ ಮುಗಿದ ತರುವಾಯ ಶ್ರೀಕೃಷ್ಣನ ನಿರ್ಗಮನಾನಂತರ ಅರ್ಜುನನಿಗೆ ಗಾಂಡೀವವನ್ನು ಎತ್ತುವುದೂ ಪ್ರಯಾಸಕರವಾಯಿತಂತೆ. ಭೂತಕಾಲವನ್ನು ನೆನೆದು ಮರುಗುವ ಅಥವಾ ಗತವೈಭವಸ್ಮರಣೆಗಳಿಂದ ಇಂದನ್ನು ನಿಂದಿಸುವ ಸ್ವಭಾವ ನನ್ನದಲ್ಲ. ಅದಕ್ಕೆ ಹೊಸ ಕೆಲಸ ಬೇಕು. ನೇಣಿಗೆ ಜೋಲತಕ್ಕದ್ದಲ್ಲ, ಏಣಿಯ ಹಂತಿಗಳನ್ನು ಏರಲೇಬೇಕು (ಪುಟ ೩೨೧). ಭೌತ ಸಾಹಸಗಳು ನಮ್ಮ ಪ್ರಾಯವನ್ನು ಅವಲಂಬಿಸಿವೆ. ಈಗ ನನಗೆ ೪೧. ಆದ್ದರಿಂದ ಇನ್ನಾದರೂ ಹಿಂದೆ ಸದಾ ಇರುತ್ತಿದ್ದ ಆದರೆ ಸಂದರ್ಭಗಳ ಹೊನಲಿನಲ್ಲಿ ಸಿಕ್ಕಿ ಸಾಧಿಸಲು ಸಾಧ್ಯವಾಗದಿದ್ದ ನನ್ನ ಆಸೆ ಪೂರೈಸಿಕೊಳ್ಳುವ ದಾರಿಯಲ್ಲಿ ಸಾಗುವ ಪ್ರಯತ್ನ ನಡೆಸಬೇಕು ಎಂದು ನಿರ್ಧರಿಸಿದೆ. ಭೌತ ಕುದುರೆಮುಖದ ಎತ್ತರಕ್ಕೆ ಮಿತಿಯಿದೆ—ಹಿಮಾಲಯದ ೨೯,೦೦೨ ಅಡಿಗಳಲ್ಲಿ ಅದು ಮುಗಿಯುತ್ತದೆ. ಆದರೆ ಜ್ಞಾನ ಕುದುರೆಮುಖಕ್ಕೆ ಇಂಥ ಯಾವ ಮಿತಿಯೂ ಇಲ್ಲ ; ಅದನ್ನು ಏರಲು ಪ್ರಾಯದ ಅಡಚಣೆ ಇಲ್ಲ ; ಅದಕ್ಕೆ ದುಡ್ಡು ಕಾಸು ಬೇಡ ; ಒಂದು ಸಂಸ್ಥೆಯ ನೆರವು ಬೇಡ ; ನಾನೇ ಏಕಾಕಿಯೂ ಏಕಾಂಗಿಯೂ ಆಗಿ ಮನಸೋ ಇಚ್ಛೆ ನಡೆಸಬಹುದಾದ ಸಾಹಸವಿದು. ಹೀಗೆಲ್ಲ ನನ್ನ ವಿಚಾರಧಾರೆ ಹರಿಯುತ್ತಿದ್ದಾಗ ೧೯೬೭–೬೮ರ ಕಾಲೇಜು ವರ್ಷ ಪ್ರಾರಂಭವಾಯಿತು.

ಕನ್ನಡದ ಕೆಲಸಕ್ಕೆ ಕರೆ

ಬೆಂಗಳೂರು ವಿಶ್ವವಿದ್ಯಾಲಯ ೧೯೬೭ರ ಜೂನಿನಲ್ಲಿ ಎರಡು ಹೊಸನಿರ್ಧಾರಗಳನ್ನು
ಕೈಗೊಂಡಿತು—ಪ್ರೀಯೂನಿವರ್ಸಿಟಿ ಮತ್ತು ಮೊದಲನೆ ಬಿಎಸ್‌ಸಿ ತರಗತಿಗಳಲ್ಲಿ
ಪರಿಷ್ಕೃತ ಪಠ್ಯಪಟ್ಟಿಯನ್ನು ಗಣಿತ ವಿಭಾಗದಲ್ಲಿ ಒಡನೆ ಜಾರಿಗೆ ತರಬೇಕು; ಕನ್ನಡ
ಮಾಧ್ಯಮದಲ್ಲಿ ಕಾಲೇಜಿನ ಎಲ್ಲ ತರಗತಿಗಳಲ್ಲಿಯೂ ಬೋಧನೆ ಅದನ್ನು ಇಚ್ಛೆ ಪಡುವ
ವಿದ್ಯಾರ್ಥಿಗಳಿಗೆ ನೀಡಬೇಕು. ಗಣಿತವಿಭಾಗದ ಮುಖ್ಯಸ್ಥರು ಅದೇ ವೇಳೆ, ಗಣಿತಪಠ್ಯ
ಪುಸ್ತಕವನ್ನು ಪರಿಷ್ಕೃತ ಪಠ್ಯಪಟ್ಟಿಯ ಅನುಸಾರ ತಾವು ಇಂಗ್ಲಿಷ್ ಕನ್ನಡ ಎರಡು
ಭಾಷೆಗಳಲ್ಲೂ ಬರೆಸಿ ಕೊಡುವುದಾಗಿ ಕುಲಪತಿ ಗೋಕಾಕರಿಗೆ ಆಶ್ವಾಸನೆ ನೀಡಿದರು.
ಆದಷ್ಟು ಬೇಗನೆ ಪ್ರೀಯೂನಿವರ್ಸಿಟಿ ತರಗತಿಗೆ ಇಂಥ ಪಠ್ಯ ಪುಸ್ತಕದ ಆವಶ್ಯಕತೆಯಿತ್ತು.
ಗಣಿತಮುಖ್ಯಸ್ಥರು ಈ ವಿಚಾರವನ್ನು ಸುಪ್ರಸಿದ್ಧ ಗಣಿತ ವಿದ್ವಾಂಸರೂ ನಿವೃತ್ತ ಪ್ರಾಧ್ಯಾಪ
ಕರೂ ಆದ ಡಾ॥ ಸಿ.ಎನ್. ಶ್ರೀನಿವಾಸೈಯ್ಯಂಗಾರ್ಯರೊಡನೆ (ಇವರು ಆಗ ಸೆಂಟ್ರಲ್
ಕಾಲೇಜಿನಲ್ಲಿ ಯುಜಿಸಿ ಪ್ರಾಧ್ಯಾಪಕರಾಗಿದ್ದರು) ಪ್ರಸ್ತಾವಿಸಿದರು. ಐಯ್ಯಂಗಾರ್ಯ
ರೆಂದರಂತೆ ''ಇದಕ್ಕೆ ನೀವು ಒಂದು ಸಮಿತಿ ಏರ್ಪಡಿಸಿ. ಅದಕ್ಕೆ ಜಿ.ಟಿ. ನಾರಾಯಣರಾವ್
ಎಂಬ ವ್ಯಕ್ತಿಯನ್ನು ಆಹ್ವಾನಿಸಬೇಕು. ಅವರ ಜನಪ್ರಿಯ ವಿಜ್ಞಾನ ಲೇಖನಗಳನ್ನು
ಕನ್ನಡದಲ್ಲಿ ಓದಿದ್ದೇನೆ—ಅವರು ಗಣಿತಶಾಸ್ತ್ರದ ಲೆಕ್ಚರರೆಂದೂ ಕೇಳಿದ್ದೇನೆ.'' ಗಣಿತ
ಮುಖ್ಯಸ್ಥರಿಗೆ ನನ್ನನ್ನು ಚೆನ್ನಾಗಿ ಗೊತ್ತಿದ್ದರೂ ನಾನು ಕನ್ನಡದಲ್ಲಿ ಬರೆಯಬಲ್ಲೆ ಎಂಬುದು
ತಿಳಿದಿರಲಿಲ್ಲ. ಐಯ್ಯಂಗಾರ್ಯರಿಂದ ಬಂದ ಈ ಸೂಚನೆ ಅವರಿಗೆ ಪ್ರಿಯವಾಯಿತು.

ಸಮಿತಿಯ ಪ್ರಥಮ ಸಭೆಯಲ್ಲಿ ಪುಸ್ತಕಗಳ ರೂಪರೇಖೆಗಳು, ಯಾರು ಯಾರು ಯಾವ ವಿಷಯಗಳ ಮೇಲೆ ಬರೆಯಬೇಕು ಎಂಬ ಬಿಡಿ ವಿವರಗಳ ಕೂಲಂಕಷ ಚರ್ಚೆ ಮುಗಿಯಿತು. ಐಯ್ಯಂಗಾರ್ಯರು ನನ್ನ ವಿಚಾರದಲ್ಲಿ ಆತ್ಮೀಯ ಶ್ರದ್ಧೆ ತೋರಿಸಿ ಸಭೆ ಮುಗಿದ ಮೇಲೆ ತುಂಬ ದೊಡ್ಡ ಮಾತು ಆಡಿದರು. ಗಣಿತಪ್ರಪಂಚದಲ್ಲಿ ಅವರು ಅಂತಾರಾಷ್ಟ್ರೀಯ ವಿಖ್ಯಾತರು. ನಾನು ಕೇವಲ ಒಬ್ಬ ಅಧ್ಯಾಪಕ ; ಹೆಚ್ಚೆಂದರೆ ಬಿಎಸ್‌ಸಿ ಮಟ್ಟದಲ್ಲಿ ನಿಷ್ಣಾತ. ನನ್ನನ್ನು ಕುರಿತು ಇವರ ಆಸಕ್ತಿ ನನಗೆ ವರ, ಒಂದು ಅಪೂರ್ವ ಯೋಗ ಎನ್ನಿಸಿತು. ಬಿಎಸ್‌ಸಿ ತರಗತಿಗೆ ನಾನೇ ಒಂದು ಪುಸ್ತಕವನ್ನು (ಕನ್ನಡದಲ್ಲಿ) ಬರೆಯಬೇಕೆಂದೂ ಸಮಿತಿ ನಿರ್ಧರಿಸಿತು. ಇಲ್ಲೆಲ್ಲ ಐಯ್ಯಂಗಾರ್ಯರ ಹಿರಿತನದಲ್ಲಿ ಮಾರ್ಗದರ್ಶನದಲ್ಲಿ ಕೆಲಸ ನಡೆಯಬೇಕಾಗಿತ್ತು. ಹೀಗಾಗಿ ನಾನು ವಾರದಲ್ಲಿ ಒಂದೆರಡು ಸಲವಾದರೂ ಅವರ ಮನೆಗೆ ಹೋಗಿ ಒಂದಷ್ಟು ಹೊತ್ತು ಕಲಿಯುವುದು ರೂಢಿಯಾಯಿತು. ಅವರಂಥ ಹಿರಿಯ ವ್ಯಕ್ತಿಯೊಡನೆ ಕಳೆದ, ಕಲಿತ ಆ ಕ್ಷಣಗಳ ಬೆಲೆ ಅಪಾರ, ಅಮೂಲ್ಯ. ಗಣಿತದ ವಿಶಾಲಪ್ರಪಂಚಕ್ಕೆ ನನಗೆ ಪ್ರವೇಶ ಹೀಗೆ ತೀರ ತಡವಾಗಿಯಾದರೂ ದೊರೆಯಿತು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಮನೆ ನನ್ನ ಮನೆಯ ಸಮೀಪದಲ್ಲಿತ್ತು. ನನ್ನ ತಂದೆ ಮತ್ತು ಮಾವಂದಿರನ್ನು ಅವರು ಚೆನ್ನಾಗಿ ಬಲ್ಲರು. ನನ್ನ ಕೆಲವು ಕತೆಗಳನ್ನೂ ಪ್ರಬಂಧಗಳನ್ನೂ (೧೯೫೩ರ ಮೊದಲು) ಅವರು "ಜೀವನ" ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆದರೂ ನಾನು ಸಹಜ ಅಳುಕಿನಿಂದ, ಅವರನ್ನು ಭೇಟಿ ಮಾಡಿರಲಿಲ್ಲ. ಅವರ ಸಾಹಿತ್ಯವಾಚನದಿಂದ ನಾನು ಪ್ರಭಾವಿತನಾಗಿದ್ದೆ. ಅವರ ಸ್ಪಷ್ಟ ಭಾವನೆಗಳ ಸುಂದರ ಶೈಲಿಯ ಭಾಷಣಗಳಿಗೆ ಮಣಿದಿದ್ದೆ. ಆದರೆ ಹೇಗೆ ಅವರೊಡನೆ ಮಾತಾಡುವುದು ಎಂದುಕೊಳ್ಳುತ್ತ ಒಂದು ವರ್ಷವೇ ಉರುಳಿಹೋಯಿತು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶಿವರಾಮ ಕಾರಂತರನ್ನು ಕುರಿತು ನಾನು ಮಾಡಿದ ಒಂದು ಭಾಷಣಕ್ಕೆ ಮಾಸ್ತಿಯವರು ಬಂದಿದ್ದರು. ಸಭೆ ಮುಗಿದ ಮೇಲೆ ನನ್ನ ಮಾತಿನ ಚೊಕ್ಕತನವನ್ನೂ ಬರೆದು ಓದಿದ ಶೈಲಿಯನ್ನೂ ಮೆಚ್ಚಿ ಅಭಿನಂದಿಸಿದರು, ನನ್ನ ಪರಿಚಯ ಹೇಳಿದಾಗ "ಏನು ! ನೀವು ನಮ್ಮ ತಿಮ್ಮಪ್ಪಯ್ಯನವರ ಮಗನೇ ? ಸುಬ್ಬಯ್ಯನವರ ಅಳಿಯನೇ ? ಬಹಳ ಸಂತೋಷ. ಎರಡು ವಿಧಗಳಿಂದ ಮತ್ತೆ ನಮ್ಮ ಲೇಖಕರಾಗಿ ಮೂರನೆಯ ವಿಧದಿಂದ ನೀವು ನಮಗೆ ಆತ್ಮೀಯರು. ಬನ್ನಿ ಮನೆಗೆ" ಎಂದು ಆಹ್ವಾನಿಸಿದರು. ದಾರಿ ಸುಲಭ ಆಯ್ತು. ಹೋದೆ. ಅವರೇನೋ ಅಚ್ಚಿನ ಕರಡನ್ನು ತಿದ್ದುತ್ತಿದ್ದರು. ನಾನೆಂದೆ "ಅಚ್ಚಿನ ಕರಡನ್ನು ತಿದ್ದುವುದು, ಮುದ್ರಣ ಕಾರ್ಯಗಳ ಹೊಣೆ ಇಂಥವೇನಾದರೂ ಮಾಡುವುದಿದ್ದರೆ ನನ್ನಿಂದಾದದ್ದು ಮಾಡಿಯೇನು ಹೇಳಿ."

ಮಾತು ಮುಂದುವರಿಯಿತು. ಅವರು ಕೊಡಗಿಗೆ ಬಂದ ಸಂಗತಿ ನಮ್ಮ ತಂದೆಯವರ ಜೊತೆಯಲ್ಲಿ ಅಪ್ಪಕಳಕ್ಕೆ ಹೋದ ವಿವರ ಎಲ್ಲ ಹೇಳಿದರು. ಈಗಲೂ ನನ್ನ ತಂದೆ (ಪ್ರಾಯ ೬೭) ಕೊಡಗಿನಲ್ಲಿ ಸೈಕಲ್ ಬಿಡುತ್ತಾರೆಂದಾಗ "ತಿಮ್ಮಪ್ಪಯ್ಯನವರಿಗೆ ಹೇಳಿ—ನಾನು ಹೇಳಿದೆನೆಂದು—ಅವರು ಈ ಪ್ರಾಯದಲ್ಲಿ ಸೈಕಲ್ ಬಿಡಬಾರದೆಂದು" ಎಂದರು. ಹೊರಡುವ ಮುನ್ನ ಇನ್ನೊಮ್ಮೆ ನನ್ನ ಹಿಂದಿನ ಹೇಳಿಕೆಯನ್ನು ಅವರ ಮುಂದಿಟ್ಟೆ. ಒಂದೆರಡು ವಾರ ಕಳೆದ ತರುವಾಯ ಪುನಃ ಅವರಲ್ಲಿಗೆ ಹೋಗಿ ಅದೇ

ಕೋರಿಕೆ ಸಲ್ಲಿಸಿದೆ. "ನನಗ್ಗೊತ್ತಿಲ್ಲಪ್ಪಾ. ನಿಮ್ಮನ್ನು ಒಂದು ಪ್ರಶ್ನೆ ಕೇಳಬಹುದೋ ಬಾರದೋ ? ನೀವು ಯೂನಿವರ್ಸಿಟಿ ಪ್ರೊಫೆಸರ್ ಈ ಕೆಲಸ ಹೇಳಬಹುದೋ ?"

"ಹಾಗೇನೂ ತಿಳಿದುಕೊಳ್ಳಬೇಡಿ. ನಿಮ್ಮ ಎದುರು ನಾನಿನ್ನೂ ಶಿಶು. ನೀವು ಹೇಳುವ ಯಾವ ಕೆಲಸವೂ ನನಗೆ ಚಿಕ್ಕದಲ್ಲ. ನನ್ನಿಂದ ಅದು ಬೌದ್ಧಿಕವಾಗಿ ಸಾಧ್ಯವಾದರೆ ಮಾಡುತ್ತೇನೆ."

"ನಾನು ಡಿಕ್ಟೇಶನ್ ಹೇಳಿದರೆ ನೀವು ಬರೆದುಕೊಳ್ಳಬಲ್ಲಿರಾ ?"

"ಸಂತೋಷವಾಗಿ."

"ಈಗ ಕೆಲವು ವರ್ಷಗಳ ಹಿಂದೆ ಪ್ರಾರಂಭಿಸಿದ್ದೆ. ಅದು ನಿಂತೇ ಹೋಯಿತು— ನನ್ನ ಆತ್ಮಚರಿತ್ರೆ. ಈಗ ಅದಕ್ಕೆ ಕಾಲ ಕೂಡಿ ಬಂದಿದೆ. ಸಂತೋಷ."

ಪ್ರತಿ ಆದಿತ್ಯವಾರ ೩ರಿಂದ ೪ರ ತನಕ ಅವರ ಮನೆಯಲ್ಲಿ ನಾನು ಈ ಕೆಲಸ ಮಾಡ ಬೇಕು ಎಂದು ಏರ್ಪಾಡಾಯಿತು. ನನ್ನ ಕಾಲನಿಷ್ಠೆ ೧೨ನೆಯ ಮೈಸೂರಿನದಷ್ಟೆ. ೨ ಗಂಟೆಗೆ ೫೭ ಮಿನಿಟಿಗೆ ಸರಿಯಾಗಿ ನಾನು ಅವರ ಗೇಟು ತೆರೆಯುತ್ತಿದ್ದೆ. ಆ ಮೊದಲೇ ಈ ಸಾಹಿತ್ಯಹಿಮಾಲಯ ಅಲ್ಲಿ ಬಂದು ನಿಂತಿರಬೇಕೇ ? "ನಮಸ್ಕಾರ. ದಯಮಾಡಿಸ ಬೇಕು". ನಾನು ಮುಂದೆ ಅವರು ಹಿಂದೆ. ಅವರು ಎಂದೂ ಮುಂದೆ ಹೋಗಲಾರರು.

"ಚಪ್ಪಲಿ ಹೊರಗೆ ಇಡಬೇಡಿ. ಪೇಟೆ, ಕದ್ದುಬಿಡುತ್ತಾರೆ" ಅಜ್ಜಯ್ಯನ ಎಚ್ಚರ ನುಡಿ.

೩ ಗಂಟೆಗೆ ಸರಿಯಾಗಿ ಮಾಸ್ತಿ ಉವಾಚದ ಪ್ರಾರಂಭ. ಗತಕಾಲದಲ್ಲಿ ಮನಸ್ಸು ಹರಿಯುವಾಗ ಅವರ ದೃಷ್ಟಿ ಅಂತರ್ಮುಖಿ. ಮೃದುವಾಗಿ ಮೆಲುನಡೆಯಿಂದ ಮೃದುನುಡಿಯಿಂದ ಪಾರಿಜಾತ ಕೋಮಲತೆಯಿಂದ ಒಂದೊಂದೇ ಸಲ ವಾಕ್ಯಗಳನ್ನು ಹೇಳುವರು ; ನಾನು ಅಷ್ಟನ್ನೂ ಬರೆದು ತಲೆ ಎತ್ತದೆ ಪೆನ್ನನ್ನು ನಿಲ್ಲಿಸುವೆ ; ಅವರು ಮುಂದುವರಿಸುವರು—ಆ ಒಂದು ಗಂಟೆ ಅವರೂ ನಾನೂ ಮಾತಾಡಿದ್ದಿಲ್ಲ ; ನಾನು ಚಕಾರವೆತ್ತಿದ್ದಿಲ್ಲ ; ಒಂದು ವಾಕ್ಯವನ್ನೂ ಅವರು ತಿದ್ದಬೇಕಾಗಲಿಲ್ಲ ; ಒಂದು ಶಬ್ದ ವನ್ನೂ ನಾನು "ಪುನಃ ಹೇಳಿ ಸ್ಪಷ್ಟವಾಗಲಿಲ್ಲ" ಎಂದು ಕೇಳಬೇಕಾಗಲಿಲ್ಲ. ಅವರ ಮಿದುಳಿನ ಅಂತರಾಳದಲ್ಲಿ ಇಡೀ 'ಭಾವ' (ಆತ್ಮಚರಿತ್ರೆಯ ಹೆಸರು) ಧ್ವನಿಮುದ್ರಿತವಾಗಿ ದ್ದಿರಬೇಕು. ಅವರದನ್ನು ಸುಮ್ಮನೆ ಓದುತ್ತಿರಬೇಕು.ಪ್ರಾಮಾಣಿಕ ಅನುಭವ ಸ್ಪಷ್ಟ ಮನಸ್ಸಿನಲ್ಲಿ ಪುಟಪಾಕಗೊಂಡು ಅಮೃತ ಭಾಷೆಯಲ್ಲಿಹೊರಹೊಮ್ಮುತ್ತಿತ್ತು. ಹಲಗೆ ಬಳಪದ ಹಿಡಿಯದೊಂದಗ್ಗಳಿಕೆಯನ್ನು ಇಲ್ಲಿ ವಾರ ವಾರ ಅನುಭವಿಸಿ ಸುಖಿಯಾದೆ. ದುಃಖಾನುಭವಗಳನ್ನು ನಿರೂಪಿಸುವಾಗ ಅವರು ಆ ಯಾತನೆಯನ್ನು ಪುನಃ ಅನುಭವಿ ಸುತ್ತಿದ್ದುದನ್ನು ನೋಡುತ್ತಿದ್ದೆ. ಸಂತೋಷಾನುಭವಗಳನ್ನು ಹೆಣೆಯುತ್ತಿದ್ದಾಗ ಅವರ "ತುಂಟಿಗಳ ಮೊಗ್ಗೆ ಬಿರಿದು ನಕ್ಕಾಗಿವರು ಥೇಟ್‌ಜುಲೈ ತಿಂಗಳಿನ ಶಿವಮೊಗ್ಗೆ." ಒಂದು ಆದಿತ್ಯವಾರ. ನಾನು ೨–೪೫ ಗಂಟೆಗೇ ಹೋದೆ ; ನನ್ನ ಆಸನದಲ್ಲಿ ಕುಳಿತು ಹಿಂದಿನಸಲ ಬರೆದಿದ್ದುದನ್ನು ಓದುತ್ತಿದ್ದೆ. ೩–೦೫ಕ್ಕೆ ಅವರು ಮೇಲೆ ಬಂದರು. "ನಮಸ್ಕಾರ ನಾರಾಯಣರಾವ್. ಬೇಗ ಬಂದ್ಬಿಟ್ಟಿದ್ದೀರಿ. ಅದೇ ನಾನು ಹೋದೆ. ದಾರಿ ನೋಡಿದೆ. ಮೂರಾಯ್ತು ನೀವು ಬರಲಿಲ್ಲ. ಏನೋ ತೊಂದರೆ ಆಗಿರಬೇಕು ಪಾಪ ಎಂದು ಹಿಂದೆ

ತಿರುಗಿದೆ. ಅಲ್ಲೇ ನಿಮ್ಮ ಚಪ್ಪಲಿ ಕಂಡೆ. ಸರಿ ಬಂದಿದ್ದೀರಿ ಎಂದು ಮೇಲೆ ಬಂದೆ.'' ಅದೇ ನಲ್ಮೆಯ ಮಂದಹಾಸ.

ಅಂದಿನ ಬರವಣಿಗೆ ಮುಗಿದು ನಾನು ಮರಳುವಾಗ ಕಂಡದ್ದೇನು? ಆ ಮಹಾತ್ಮ ತೀರ ಸಹಜವಾಗಿ ನನ್ನ ಚಪ್ಪಲಿಗಳನ್ನು ಒಳಗೆ ತಂದಿಟ್ಟಿದ್ದರು. ''ರಾಜರಾಜರ ಗಂಡ ಶಬರಿ ಎಂಜಲನುಂಡ!'' ಅವರ ಹಿರಿಮೆಯ ಔದಾರ್ಯದ ನೆರಳಿನಲ್ಲಿ ನಾನು ಜೀವನದ ವಿವಿಧ ಸ್ತರಗಳನ್ನು ನೋಡಿ ಎತ್ತರಕ್ಕೆ ಬೆಳೆದಿದ್ದೇನೆ. ''ಸದಾ ಇವರು ಹೀಗೆಯೇ.''

ಸಿಂಹದೊಡನೆ ಸೆಣಸಾಟ

೧೯೬೭ರ ಸೆಪ್ಟೆಂಬರಿನಲ್ಲಿ ನಾವು ವಾರ್ಷಿಕ ಶಿಕ್ಷಣ ಶಿಬಿರವನ್ನು ವಿದ್ಯಾನಗರದಲ್ಲಿ (ಬೆಂಗಳೂರಿನಿಂದ ೧೫ ಮೈಲಿಗಳಷ್ಟು ದೂರದಲ್ಲಿದೆ) ನಡೆಸಬೇಕೆಂದೂ ಅದರ ಮುಖ್ಯಾಧಿಕಾರಿಗಳಾಗಿ ಬೇರೆ ಒಂದು ಯೂನಿಟ್ಟಿನ ಲೆಫ್ಟಿನೆಂಟ್ ಕರ್ನಲ್ ದರ್ಜೆಯ ಆಫೀಸರರು ಇರಬೇಕೆಂದೂ ನಮ್ಮ ಓಸಿ ನಾರಾಯಣ್ ಸಿಂಗರು ಈ ಕ್ಯಾಂಪಿನ ಉಪಮುಖ್ಯಾಧಿಕಾರಿಗಳಾಗಿರಬೇಕೆಂದೂ ಡೈರೆಕ್ಟೊರೇಟಿನಿಂದ ಹುಕುಂ ಬಂತು. ೧೨ ಮತ್ತು ೧೩ನೆಯ ಬೆಟಾಲಿಯನ್ನುಗಳ ಸಂಯುಕ್ತ ಶಿಬಿರವಿದು. ಆಹಾರ ಆಡಳಿತೆ ಮುಂತಾದ ಸಕಲ ಏರ್ಪಾಡುಗಳನ್ನೂ ನಿರ್ದೇಶಿತ ಶಿಬಿರ ಮುಖ್ಯಾಧಿಕಾರಿಗಳು ಮಾಡಿದರು. ಆದರೆ ದುರ್ದೈವದಿಂದ ಶಿಬಿರ ಆರಂಭವಾಗಲು ಒಂದು ವಾರ ಇದ್ದಾಗ ಅವರ ಸಹೋದರರು ತೀರಿಕೊಂಡ ಕಾರಣ ಅವರು ರಜ ಹಾಕಿ ಊರಿಗೆ ತೆರಳಿದರು. ಈಗ ಮೇಜರ್ ನಾರಾಯಣ್‌ಸಿಂಗರೇ ಶಿಬಿರವನ್ನು ನಡೆಸಬೇಕೆಂದು ಡೈರೆಕ್ಟೊರೇಟಿನಿಂದ ಹುಕುಂ ಬಂತು. ಯೋಜನೆ ಬೇರೆಯವರದು ; ನಡೆಸುವವರು ನಾವು. ದೇಹ ಬೇರೆಯವರದು ; ಜೀವ ನಮ್ಮದು. ನೆಲ ನಮ್ಮದಲ್ಲ. ಎಲ್ಲವೂ ಹತ್ತು ದಿವಸಗಳ, ಸಾವಿರ ಜನರ ದರ್ಬಾರು. ಇಂಥಲ್ಲಿ ಹಲವಾರು ಅಸಾಂಗತ್ಯಗಳು ತಲೆದೋರಿದರೆ ಆಶ್ಚರ್ಯವಿಲ್ಲ ; ತೋರದಿದ್ದರೇ ಆಶ್ಚರ್ಯ. ಮೇಜರ್ ನಾರಾಯಣ್‌ಸಿಂಗ್, ಇನ್ನೊಬ್ಬರು ಆರ್ಮಿ ಮೇಜರ್, ನಾನು, ಕ್ಯಾಪ್ಟನ್ ಅಶ್ವತ್ಥನಾರಾಯಣ—ಒಬ್ಬೊಬ್ಬರೂ ಇಂಥ ಹಲವಾರು ಕ್ಯಾಂಪುಗಳನ್ನು ಲೀಲಾಜಾಲವಾಗಿ ನಡೆಸಿ ಅನುಭವವಿದ್ದವರು. ಆದರೆ ನಾವೆಲ್ಲರೂ ಒಂದಾದಾಗ ಆದದ್ದೇನು ? ನಮ್ಮೊಳಗೆ ಅದೆಂಥ ಸಾಮರಸ್ಯವಿದ್ದರೂ ಮೂಲ ಯೋಜನೆಯಲ್ಲಿಯೇ ಅಂತರ್ಗತವಾಗಿದ್ದ ಲೋಪದೋಷಗಳ ಮೂಲಕ ಕ್ಯಾಂಪಿನ ದೈನಂದಿನ ಜೀವನದಲ್ಲಿ ಉದ್ಭವಿಸುತ್ತಿದ್ದ ಸಮಸ್ಯೆಗಳ ಪರಿಹಾರ ನಮ್ಮೆಲ್ಲರ ಸಹನೆ ಸತ್ತ್ವಗಳ ಕೊನೆಯ ಹನಿಯನ್ನೂ ಬೇಡುತ್ತಿತ್ತು. ಈ ಜೀವದ ಇಚ್ಛೆ ಆ ದೇಹದ ಮೂಲಕ ಕಾರ್ಯಗತವಾಗಲು ಕಾಲಾವಕಾಶಬೇಕು.

ಮಾಮೂಲಿನಂತೆ ನಾನು ೧೦೦ ಕ್ಯಾಡೆಟುಗಳ ಒಂದು ತಂಡವನ್ನು (ಅವರ ಆಫೀಸರರು ಹಾಗೂ ಆರ್ಮಿ ಸ್ಟಾಫುಗಳ ಸಮೇತ) ಹೊರವಲಯದ ಮಿಲಿಟರಿ ಕವಾಯತಿಯ ಅಭ್ಯಾಸಕ್ಕೋಸ್ಕರ ಹೊರಡಿಸಿಕೊಂಡು ಹೊರಟೆ. ಶಿಕ್ಷಣದ ಕಡೆಗಿನ ನನ್ನ ಏರ್ಪಾಡುಗಳೆಲ್ಲವೂ ಪರಿಪೂರ್ಣವಾಗಿದ್ದರೂ ಬೆಳಗ್ಗೆ ಹುಡುಗರಿಗೆ ಉಪಾಹಾರ ಹಾಗೂ ಹ್ಯಾವರ್ ಸೇಕ್ ಲಂಚ್ (ಬುತ್ತಿ) ದೊರೆಯುವಾಗ ತಡವಾಯಿತು. ಅಡುಗೇಮನೆ ಅದರ ಹೊಣೆ

ಯಲ್ಲಿ ಕುಂಟಿತ್ತು. ಬೆಳಗ್ಗೆ ೭ ಗಂಟೆಗೆ ಹೊರಡಬೇಕಾದವರು ೮ ಗಂಟೆಗೆ ಹೊರಟೆವು. ಅರ್ಧ ಗಂಟೆ ನಡೆದೆವೋ ಇಲ್ಲವೋ ಜಡಿ ಮಳೆ ಧಾರಾಕಾರವಾಗಿ ಸುರಿಯಲು ಆರಂಭಿಸಿತು. ಚಳಿಗಾಳಿ ತೀಡಿ ಮಳೆ ಕೋಟಿನ ಒಳಗೂ ನೀರನ್ನು ಹರಿಸಿತು. ಆದರೆ ಹಿಂದೆ ಹೋಗುವವರು ಅಥವಾ ಸನ್ನಿವೇಶಕ್ಕೆ ಹೆದರುವವರು ನಾವಲ್ಲ. ನಾನು ಯೋಜಿಸಿದ್ದ ವಿವಿಧ ಪ್ರಯೋಗಗಳನ್ನು ಮಳೆ ದೇವತೆಯ ಅವಕೃಪೆಯ ನಿಮಿತ್ತ ಮನ್ನಾ ಮಾಡಿದೆ. ಆದರೆ ನಡೆದೇ ಇದ್ದೆವು. ಸರಭರ ಮಳೆ ಸುರಿದೇ ಇತ್ತು. ಸುರು ಸುರು ಗಾಳಿ ಬೀಸಿಯೇ ಇತ್ತು. ಅಪರಾಹ್ಣದ ೧ ಗಂಟೆಗೆ ವಿಶಾಲವಾದ ಒಂದು ಮಾವಿನ ತೋಪಿನಲ್ಲಿ ಮರಗಳ ಅಡಿಯಲ್ಲಿ ಕುಳಿತು ಬುತ್ತಿ ತೆರೆದೆವು. ಚಕ್ಕಳ ಚಪಾತಿ, ಹಳಸಿದ ಪಲ್ಯ, ಉಪ್ಪು ಹೆಚ್ಚಾದ ಚಿತ್ರಾನ್ನ—ಮನುಷ್ಯನಿರ್ಮಿತ ಆಹಾರ ವ್ಯರ್ಥವಾಯಿತು ; ನಿಸರ್ಗನಿರ್ಮಿತ ಮಾಸುಂಬಿಗಳೇ ನಮಗೆ ಜೀವಾಧಾರ. ಚಳಿ ಹಸಿವು ಮೇಲಾಗಿ ಆಡಳಿತೆಯ ಮೇಲಿನ ಆಕ್ರೋಶ ಇವುಗಳಿಂದ ನಾನು ಆ ಮಳೆ ಅಡಿಯಲ್ಲಿಯೂ ಬಿಸಿಯಾದೆ. ನೀರೊಳಗಿದ್ದರೂ ಬೆವರ್ದೆನ್ !

ಇದುವರೆಗೆ ನಡೆದುಬಂದದ್ದು ಕಾಡು ಬೆಟ್ಟಗಳ ಹರಕು ನೆಲದ ಮೇಲೆ. ಇನ್ನು ಮುಂದಿನ ನಡಿಗೆ ಹಳ್ಳಿಯ ಲಾರಿ ಗಾಡಿ ದಾರಿಯ ಮೇಲೆ. ಆದ್ದರಿಂದ ಕ್ಯಾಂಪಿನಿಂದ ಲಾರಿಗಳು ಯಾವುದೇ ಗಳಿಗೆ ಅಲ್ಲಿ ನಮ್ಮ ಎದುರಿನಿಂದ ಬಂದು ನಮಗೆ ಆತ್ಯವಶ್ಯವಾಗಿ ಬೇಕಾಗಿದ್ದ ಧೃತಿದಾಯಕ ಚಾ, ತಿಂಡಿಗಳನ್ನು ನೀಡಬಹುದು ಎಂದು ಭಾವಿಸಿದ್ದೆ. ಹೇಗೂ ನಮ್ಮ ತಾತ ನಾರಾಯಣ್‌ಸಿಂಗರು ಕ್ಯಾಂಪಿನಲ್ಲಿಯೇ ಇದ್ದು ನಮ್ಮ ಯೋಗಕ್ಷೇಮ ಚಿಂತನೆಯಲ್ಲಿ ನಿರತರಾಗಿದ್ದರಷ್ಟೆ. ಆದರೆ ಆ ನಾಲ್ಕು ಮೈಲಿಗಳೂ ಪುನಃ ಮಳೆ ನಡಿಗೆಯೇ ಆಯಿತು. ಯಾರೂ ಎದುರಿನಲ್ಲಿ ಬರಲಿಲ್ಲ. ಅಕ್ಕಪಕ್ಕದ ಹಳ್ಳಿಯ ಮನೆಗಳಿಗೆ ಹೋಗೋಣವೇ—ಪ್ರಯೋಜನವಿಲ್ಲ. ನಾವು ಒಂದು ನೂರಿದ್ದೇವೆ. ಚಂಡಿ ಬಟ್ಟೆ ಖಾಲಿ ಹೊಟ್ಟೆ ಇವುಗಳ ಸಹಿತ ಸುಮ್ಮನೆ ಕುಳಿತಿರುವುದು ಯಾವ ಸುಖಕ್ಕಾಗಿ ? ನಮ್ಮ ಗುರಿ ಇದ್ದದ್ದು ರಾಜಮಾರ್ಗದ ಬದಿಯಲ್ಲಿದ್ದ ಒಂದು ಶಾಲೆಯ ಕಟ್ಟಡ. ಅಲ್ಲಿಗೆ ಕ್ಯಾಂಪಿನಿಂದ ಎಂಟು ಮೈಲಿಗಳ ದೂರ. ಶಾಲೆಯನ್ನು ನಾವು ಸಂಜೆ ೪ರ ವೇಳೆ ತಲಪಬೇಕು ; ಆ ಹೊತ್ತಿಗೆ ಮೊದಲೇ ಕ್ಯಾಂಪಿನಿಂದ ಅಲ್ಲಿಗೆ ತಿಂಡಿ, ಚಾ ಮುಂತಾದವು ಬಂದು ನಮ್ಮನ್ನು ಸ್ವಾಗತಿಸಬೇಕು ಎಂದು ಲಿಖಿತಮೂಲಕ ನನ್ನ ಯೋಜನೆಯನ್ನು ಯುಕ್ತ ಆಫೀಸರರಿಗೆ ಮೊದಲೇ ನೀಡಿದ್ದೆ. ಆ ರಾತ್ರಿ ಹುಡುಗರ ವಾಸ ಅದೇ ಶಾಲೆಯಲ್ಲಿ. ಕಾರ್ಯಕ್ರಮ ಪ್ರಕಾರ, ೧೨ನೆಯ ಮೈಸೂರಿನ ಶಿಷ್ಟವರ್ತನೆಯ ಅನುಸಾರ, ನಾವು ಶಾಲೆಯನ್ನು ೪ ಗಂಟೆಗೆ ತಲಪಿದೆವು. ಆದರೆ ಅಲ್ಲಿ ನಮ್ಮನ್ನು ಸ್ವಾಗತಿಸಿದ್ದು ಆಕರ್ಷಕ ಪರಿಮಳವನ್ನು ಉಗಿಯೊಡನೆ ಪಸರಿಸುವ ಚಾ ಅಲ್ಲ ; ನೀರುಳ್ಳಿ ಪಕ್ಕೋಡದ ಮೈನವಿರೇಳಿಸುವ ಆಕಾರ ರುಚಿ ಸುವಾಸನೆ ಅಲ್ಲ—ಧೂಳಿಡಿದ ಮುರುಕು ಬೆಂಚುಗಳ, ಸೋರಿ ನೆನೆದಿದ್ದ ಕೆಸರುಲೇಪಿತ ನೆಲಗಳು. ಈಗ ನನ್ನ ಕೋಪಮಾಪಕದ ಪಾದರಸ ಬಲು ಎತ್ತರಕ್ಕೆ ಏರಿತು. ಮುಂದೆ ಶಾಲೆಯಲ್ಲಿ ದೊರೆಯಲಿರುವ ಸ್ವಾಗತದ ಆಶ್ವಾಸನೆಗಳ ಮೇಲೆ ಕ್ಯಾಡೆಟುಗಳ ಧೃತಿಯನ್ನು ಇದುವರೆಗೆ ಕಾದಿಟ್ಟಿದ್ದೆವು. ಈಗ ಅದು ಅತಿ ಕನಿಷ್ಠ ಮಿತಿಗೆ ಕುಸಿಯಿತು. ಹಾಗೆಂದು ನಾಯಕನಾದ ನಾನು ಕಂಗಾಲಾಗುವಂತಿಲ್ಲವಲ್ಲ. "ಮಿತ್ರರೇ ! ನೀವು ಇಲ್ಲೇ ಎಷ್ಟು ಸೌಕರ್ಯ ಕಲ್ಪಿಸಿಕೊಳ್ಳಬಹುದೋ ಅಷ್ಟನ್ನೂ

ಕಲ್ಪಿಸಿಕೊಂಡು ಮೈಚಾಚಿಕೊಂಡಿರಿ. ನಾನು ಈಗಿಂದೀಗಲೇ ಮೊದಲು ಸಿಕ್ಕುವ ವಾಹನ ಹತ್ತಿ ಕ್ಯಾಂಪಿಗೆ ಹೋಗುತ್ತೇನೆ. ತತ್‌ಕ್ಷಣ ಆಹಾರ ತರುತ್ತೇನೆ. ಅದನ್ನು ಸೇವಿಸಿದ ಒಡನೆಯೇ ನಾವೆಲ್ಲರೂ ಕ್ಯಾಂಪಿಗೇ ಮರಳಬೇಕು. ಈ ಸ್ಥಿತಿಯಲ್ಲಿ ರಾತ್ರಿ ಇಲ್ಲಿ ಉಳಿಯುವುದು ಸರಿಯಲ್ಲ'' ಎಂದು ಮುಂತಾಗಿ ಹುರಿದುಂಬಿಸಿ ಇತರ ಆಫೀಸರರ ವಶ ಅವರನ್ನು ಬಿಟ್ಟು ನಾನು ರಾಜಮಾರ್ಗದ ಅಂಚಿನಲ್ಲಿ ನಿಂತೆ. ಮಳೆ ಇನ್ನೂ ಸುರಿಯುತ್ತಲೇ ಇತ್ತು. ಅರ್ಧಗಂಟೆ ಕಾಲ ನಾನು ಶೂನ್ಯಮನಸ್ಕನಾಗಿ ಗೋಳುಗರೆಯುವ ಗಗನವನ್ನು ನೋಡುತ್ತ ಕಾದಿದ್ದಿರಬಹುದು. ಏನಾಯಿತು ಕ್ಯಾಂಪಿನಲ್ಲಿ, ಯಾಕಿವರು ನಮ್ಮನ್ನು ಮರೆತರು, ಎರಡು ಲಾರಿಗಳು ಎರಡು ಕಾರುಗಳು ಇರುವಾಗ ಆಹಾರದ ವ್ಯವಸ್ಥೆ ಯಾಕೆ ವಿಫಲವಾಯಿತು ಎಂದು ಚಿಂತಿಸುತ್ತಿದ್ದೆ. ಆಗಲೇ ಡಾಡ್ಜ್ ಎಂಜಿನ್ನಿನ ಚಿರಪರಿಚಿತ ಸದ್ದು ದೂರದಿಂದ ಕೇಳಿಸಿತು. ಮುಂದಿನ ಕ್ಷಣ ಕ್ಯಾಂಪಿನಿಂದ ಬರುತ್ತಿದ್ದ ಲಾರಿಯನ್ನು ಕಂಡೆ. ಲಾರಿ ನಿಂತಿತು. ಅದರೊಳಗಿಂದ ಆಹಾರದ ಆಫೀಸರ್ ಹೊರ ನೆಗೆದು ಸುಟಿಯಾಗಿ ನಿಂತು ನನಗೆ ವಂದನೆ ಸಲ್ಲಿಸಿದರು. ವಾಚ್ ಎತ್ತಿ ತೋರಿಸಿದೆ.

''ಅದ್ದು ಸಾರ್...''

''ಸ್ವಾಮೀ! ನಿಮ್ಮ ನೂರೆಂಟು ಕಾರಣ ನನಗೆ ಬೇಡ. ನೀವು ನನ್ನ ಲಿಖಿತ ಹುಕುಮನ್ನು ಪಾಲಿಸಲಿಲ್ಲ. ಅದನ್ನು ಬೇರೆಯಾಗಿ ವಿಚಾರಿಸುತ್ತೇನೆ. ಈಗ ಟೀ, ತಿಂಡಿ ಎಲ್ಲ ತಂದಿದ್ದೀರಷ್ಟೆ? ಎಷ್ಟು ಜನರಿಗೆ?''

''ಅದೇನು ಬಿಡಿ ಸಾರ್? ೧೦ ಮಿನಿಟಿನಲ್ಲಿ ಟೀ ಕಾಯಿಸಿ ಕೊಡುತ್ತೇವೆ. ಹುಡುಗರೂ ಇದ್ದಾರೆ ಲಾರಿಯಲ್ಲಿ.''

''ಅಂದರೆ ನೀವು ಇಲ್ಲಿ ಟೀ ಮಾಡಿಕೊಡುವವರೋ? ಕ್ಯಾಂಪಿನಿಂದ ತಂದಿಲ್ಲ?''

''ಹೌದು—ಇಲ್ಲೇ ನೀರು ಕಾಯಿಸಿ...''

''ನಿಮಗೇನು ಬುದ್ಧಿಗಿದ್ಧಿ ಇದೆಯೇನ್ರೀ? ಇಲ್ಲಿ ನೀವು ಟೀ ಕಾಯಿಸುವುದಂತೆ! ತಿಂಡಿ ಏನು ತಂದಿದ್ದೀರಿ?''

''ಏನೂ ಇಲ್ಲ ಸಾರ್. ಕ್ಯಾಂಪಿನ ಹುಡುಗರಿಗೆ ಇಂದು ಸ್ಪೆಶಲ್ ಊಟ ಮಧ್ಯಾಹ್ನ ಕೊಟ್ಟದ್ದರಿಂದ ಸಾಯಂಕಾಲ ಖಾಲಿ ಟೀ ಮಾತ್ರ.''

''ಅಲ್ರೀ ಈ ನೂರು ಜನ ಕ್ಯಾಂಪಿನ ಊಟ ಪಡೆಯಲಿಲ್ಲ ಎಂದು ನಿಮಗೆ ಗೊತ್ತಿಲ್ವೇ? ಅವರಿಗಾಗಿ ಯಾಕೆ ತಿಂಡಿ ಮಾಡಿಸಲಿಲ್ಲ?''

''ಕಮಾಂಡೆಂಟರು...''

''ಸರಿ—ಗೊತ್ತಾಯಿತು. ಹಾಗಾದರೆ ಈಗ ಖಾಲಿ ಲಾರಿ ಮತ್ತು ಒಣ ಟೀಹುಡಿ ಸಕ್ಕರೆ ಹಾಲುಹುಡಿ ತಂದಿದ್ದೀರಿ ಅನ್ನಿ. ನಡೀರಿ ಶಾಲೆಗೆ.''

ಲಾರಿ ಬಂತೆಂದು ಆತುರದಿಂದ ಮಗ್ಗುಗಳನ್ನು ಹಿಡಿದು ನುಗ್ಗಿ ಬಂದ ಗಂಗ್ಸುಗಳಿಗೆ ದೊರೆತದ್ದು ಇನ್ನು ೧೦ ಮಿನಿಟುಗಳಲ್ಲಿ ಗರಂ ಚಾಯಾ ಕೊಡಲಾಗುವುದೆಂಬ ಚಾರಸಹೀನ ಆಶ್ವಾಸನೆ. ಒಲೆಗೆ ಕಲ್ಲು ಹೂಡಿದರು. ಸೌದೆ ಪೇರಿ ಅದರ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಗೀರಿದರು. ಆದರೆ ಎಣ್ಣೆ ಮುಗಿವನಕ ಬೆಂಕಿ ಉರಿದು ನಂದಿತು. ಬಾವಿಯಿಂದ ನೀರು ತರೋಣವೆಂದು ಹೋದರೆ (ಆ ಹಿಂದೆ ಸ್ಪಷ್ಟವಾಗಿ ಬರೆದುಕೊಟ್ಟಿದ್ದರೂ)

ರಾಟೆ ಹಗ್ಗ ತರದೇ ನೀರು ಬಾವಿಯೊಳಗೆ, ಖಾಲಿಪಾತ್ರೆ ಹಸಿ ಒಲೆಯ ಮೇಲೆ ! ಈ ಅವಾಂತರ ಪರಂಪರೆ ನೋಡಿದ ನನಗೆ ಸಹನೆ ಉಳಿಯಲಿಲ್ಲ. ಮೂವತ್ತು ಹುಡುಗರನ್ನು ಲಾರಿಗೆ ಏರಿಸಿದೆ. "ಉಳಿದವರಿಗೆ ನೀವು ಸಮೃದ್ಧಿ ಚಾ ಕೊಡಿ. ಈ ಲಾರಿಯನ್ನು ಕ್ಯಾಂಪಿನಲ್ಲಿ ಖಾಲಿ ಮಾಡಿ ಇದನ್ನೂ ಇನ್ನೊಂದನ್ನೂ ಕೂಡಲೇ ಕಳಿಸುತ್ತೇನೆ. ಉಳಿದ ಹುಡುಗರೆಲ್ಲರೂ ಅವನ್ನು ಏರಿ ಕ್ಯಾಂಪಿಗೆ ಮರಳತಕ್ಕದ್ದು" ಎಂದು ಆಜ್ಞೆ ವಿಧಿಸಿ ಮೊದಲ ಲಾರಿಯಲ್ಲಿ ನಾನು ಸಹ ಹೋದೆ. ನಾನೇ ಹೋಗದಿದ್ದರೆ ಲಾರಿಗಳು ಹಿಂದೆ ಮರಳಲಾರವು ಎಂದು ನನಗೆ ಸಂದೇಹವಿತ್ತು. ಕ್ಯಾಂಪಿನ ಸಮೀಪ ನಮ್ಮ ಲಾರಿ ತಲಪಿ ದಾಗ ಎದುರಿನಿಂದ ಕ್ಯಾಂಪಿನ ಕಾರು (ನಾರಾಯಣ್‌ಸಿಂಗರ ಸಮೇತ) ನಮ್ಮನ್ನು ಅಡ್ಡ ಹಾಯಿತು. ಕಾರು ಶಾಲೆ ಎಡೆಗೆ ಹೊರಟಿತ್ತೆಂಬುದು ಸ್ಪಷ್ಟ. ನಾವು ಲಾರಿಯನ್ನು ನಿಲ್ಲಿಸಿ ದೆವು. ಆದರೆ ಕಾರು ನಿಲ್ಲದೇ ಶಾಲೆ ಕಡೆ ಧಾವಿಸಿತು. ಕ್ಯಾಂಪಿಗೆ ಬಂದು ಲಾರಿಯನ್ನು ಖಾಲಿ ಮಾಡಿ ಆ ಕ್ಷಣ ಅದನ್ನು ಬೇರೆ ಒಬ್ಬ ಆಫೀಸರರ ಸಮೇತ ಶಾಲೆಗೆ ಕಳಿಸಿದೆ. ಇನ್ನೊಂದು ಲಾರಿ ವಿಚಾರ ನೋಡಿದರೆ ಅದು ಬೆಂಗಳೂರಿನಿಂದ ಮರಳಿರಲಿಲ್ಲ ; ಸರಿ, ಇದೇ ಲಾರಿ ಇನ್ನೂ ಒಂದು ಟ್ರಿಪ್ ಮಾಡಬೇಕೆಂದು ನಿರ್ಧರಿಸಿದೆ, ನನ್ನ ಜೊತೆಯಲ್ಲಿ ಬಂದವರಿಗೆ ಸಾಕಷ್ಟು ಬಿಸಿ ಚಾ ಕೊಡಿಸಿ ಅವರನ್ನು ಬರಾಕುಗಳಿಗೆ ಕಳಿಸಿದೆ. ಇಷ್ಟಾಗು ವಾಗ ಗಂಟೆ ಸಾಯಂಕಾಲದ ೫–೩೦. ಮಳೆ ಸ್ವಲ್ಪ ತಗ್ಗಿತ್ತು. ಆದರೆ ತೂಗುತ್ತಿರುವ ಕರಿಮೋಡಗಳು ರಾತ್ರಿಯ ಎರಡನೆಯ ವರಿಸೆಗೆ ಪೀಠಿಕೆ ಹಾಕುತ್ತಿದ್ದುವು. ನಾನು ಬಟ್ಟೆ ಬದಲಿಸಿ ಬರಾಕಿನಿಂದ ಹೊರಬರುವಾಗಲೇ ಶಾಲೆಗೆ ಹೋಗಿದ್ದ ಲಾರಿ ಹಿಂದೆ ಬಂದ ದ್ದನ್ನು ಕಂಡೆ. ಆದರೆ ಅದು ಖಾಲಿ. ನಾರಾಯಣ್‌ಸಿಂಗರು ಈ ವೇಳೆಗೆ ಶಿಬಿರಕ್ಕೆ ಹಿಂತಿ ರುಗಿದ್ದರು. ಅವರನ್ನು ಆ ಕ್ಷಣ ನೋಡಬೇಕೆಂದು ನನಗೆ ಬುಲಾವ್ ಬಂತು. ಅವರೆಂದೂ ಈ ರೀತಿ ನನ್ನ ಮೇಲೆ ಅಧಿಕಾರ ಚಲಾಯಿಸಿದವರಲ್ಲ. ಆದ್ದರಿಂದ ಏನೋ ವಿಪತ್ತು ಕಾದಿದೆ ಎಂಬ ಸುಳಿವು ಸಿಕ್ಕಿತು. ಆದರೆ ನಾನೇಕೆ ಹೆದರಬೇಕು—ತಪ್ಪೆಲ್ಲ ಕ್ಯಾಂಪಿನವರದೇ. ಆದ್ದರಿಂದ ರಕ್ಷಣೆ ಏನಿದ್ದರೂ ಅವರಿಗೆ ಅಗತ್ಯ ; ನನ್ನ ಪರಿಸ್ಥಿತಿ ಆಕ್ರಮಣಶೀಲವಾಗಿಯೇ ಇತ್ತು.

"ಏನು ಜೀಟಿ ! ನೀವು ಹೀಗೆ ಎದೆಗೆಡುತ್ತೀರಿ ಎಂದು ನಾನು ಭಾವಿಸಿರಲಿಲ್ಲ" ಎಂದು ಬರೆ ಕಾಸಿದರು. ನಾನು ಸುಮ್ಮನಿದ್ದೆ. ಅವರೇ ಮುಂದುವರಿಸಿದರು "ಒಂದು ಹಗಲು ಮಳೆ ನೆನೆಯುವುದು ಕುದುರೆಮುಖದ ವೀರರಾದ ನಿಮಗೆ ಹೇಗೆ ಭಯ ಹುಟ್ಟಿಸಿತು ? ಜೊತೆಗೆ ಆ ಹುಡುಗರಿಗೂ ನೀವು ಭಯ ಹುಟ್ಟಿಸಿ ಮರಳಿದ್ದೀರಿ. ಅವರನ್ನು ನಾನು ಮಾತಾಡಿಸಿದೆ, ಕೇಳಿದೆ. ಅವರ ಧೃತಿ ಅತ್ಯುತ್ಕೃಷ್ಟ ಮಟ್ಟದಲ್ಲಿದೆ. ಚಳಿ ಇರಲಿ ಮಳೆ ಇರಲಿ ತಾವು ರಾತ್ರಿ ಅಲ್ಲಿಯೇ ಇರುವುದಾಗಿ ನನಗೆ ಭರವಸೆ ನೀಡಿದ್ದಾರೆ. ನಿಮಗೇಕೆ ಈ ಅಳ್ಳೆದೆ ?"

ಖಾಲಿ ಲಾರಿ ಯಾಕೆ ಹಿಂದೆ ಬಂತೆಂಬುದು ಈಗ ನನಗೆ ಗೊತ್ತಾಯಿತು. "ಸಾರ್ ! ಇಲ್ಲಿ ಜೀಟಿಗೆ ಅಳ್ಳೆದೆ ಇದೆಯೋ ಗಂಡೆದೆ ಇದೆಯೋ ಎಂಬುದು ಅಪ್ರಾಸಂಗಿಕ. ಅವನು ಅಳ್ಳೆದೆಯವನಾಗಿದ್ದರೆ ಇಂದು ಬೆಳಗ್ಗೆ ಕ್ಯಾಂಪಿಗೇ ಮರಳುತ್ತಿದ್ದ. ಇಲ್ಲಿ ಮುಖ್ಯ ಪ್ರಶ್ನೆ

ಎಂದರೆ ಈ ಒಂದುನೂರು ಮಕ್ಕಳ ಆರೋಗ್ಯದ ಜೊತೆ ನಾವು ಬೇಜವಾಬ್ದಾರಿಯಿಂದ ವರ್ತಿಸಬಹುದೇ ಎಂಬುದು.''

"ಏನಾಗಿದೆ ಅವರಿಗೆ ? ಚೆನ್ನಾಗಿದ್ದಾರಲ್ಲ !"

"ಹೌದು. ಕ್ಯಾಂಪಿನಲ್ಲಿ ಬೆಚ್ಚಗೆ ಕುಳಿತು, ಹೋದವರು ಸತ್ತರೇ ಬದುಕಿದ್ದಾರೆಯೇ ಎಂಬ ವಿಚಾರ ಮಾಡದೇ, ಪುಷ್ಕಳ ಗ್ರಾಸ ಭಕ್ಷಿಸಿದವರಿಗೆ ಲೋಕ ಕಾಣುವುದು ಹಾಗೆಯೇ. ನಿಮ್ಮ ಈ ಕ್ಯಾಂಪಿನ ಆಹಾರದ ಆಡಳಿತೆ ತೀರ ವಿಫಲವಾಗಿದೆ, ತಿಳಿಯಿತೇ ?"

"ಯಾಕೆ ಯಾಕೆ ?"

"ಬುತ್ತಿ, ನಾಯಿಗಳಿಗೂ ಹಿಡಿಸದು. ೪ ಗಂಟೆಗೆ ಟೀ, ತಿಂಡಿ ಕೊಟ್ಟಿರಾ ? ಅವರಿಗೆ ಬೆಚ್ಚಗಿನ ಉಡುಪು ಕಂಬಳಿ ಕಳಿಸಿದ್ದೀರಾ ? ಆ ಮಕ್ಕಳಿಗೆ ಟೈಫಾಯಿಡ್ ಬಂದರೆ ಹೊಣೆಗಾರರು ಯಾರು ? ಆಡಳಿತೆ ದಕ್ಷವಾಗಿಲ್ಲದಿದ್ದರೆ ಯಾವ ಶಿಕ್ಷಣವೂ ಫಲಿಸದು."

"ನಿಮ್ಮ ಮಾತು ನಾನು ಒಪ್ಪುವುದಿಲ್ಲ. ಈ ಲಾರಿ ಈಗ ಟೀ, ತಿಂಡಿ ತೆಗೆದುಕೊಂಡು ಹೋಗಿ ಅವರಿಗೆ ಕೊಡುತ್ತದೆ. ರಾತ್ರಿ ಊಟ ಇನ್ನು ಅರ್ಧ ಗಂಟೆಯಲ್ಲಿ ಪುನಃ ಕಳಿಸಿ ಕೊಡುತ್ತೇವೆ. ಆವರು ಸಂತೋಷವಾಗಿದ್ದಾರೆ."

"ಹಾಗೆಯೇ ಮಾಡಿ. ಆದರೆ ಅದರ ಹೊಣೆಗಾರಿಕೆ ನನ್ನದಲ್ಲ, ನನ್ನದಲ್ಲ, ನನ್ನದಲ್ಲ." ನಾನು ಸಿಟ್ಟಿನಿಂದ ನಡುಗುತ್ತ ಅವರಿಗೆ ಯಾಂತ್ರಿಕವಾಗಿ ವಂದನೆ ಸಲ್ಲಿಸಿ ಅಲ್ಲಿಂದ ಹೊರಟೆ. ಹಾಗೇ ಏಕಾಕಿಯಾಗಿ ಅಡ್ಡಾಡಿದೆ. ಇಂದೇಕೆ ಇವರು ಹೀಗೆ ? ನಮ್ಮ ಜಗಳ ಏನೇ ಇರಲಿ ಆ ಹುಡುಗರು ಪ್ರಯೋಗ ಪಶುಗಳಾಗುವುದು ಬೇಡವೆಂದು ಭಾವಿಸಿ ಅಡುಗೇ ಮನೆಗೆ ಹೋದೆ. ಗಂಟೆ ೭–೩೦. ಅಡುಗೆ ಅರ್ಧಂಬರ್ಧ. ಮಳೆ ಎರಡನೆಯ ಸುತ್ತು ತೊಡಗಿತು. ಎಲ್ಲೆಲ್ಲಿಯೂ ಕೆಸರು, ನೀರು ಚಳಿ. ನಾರಾಯಣ್‌ಸಿಂಗರು ಉದ್ವಿಗ್ನರಾಗಿ ಚಡಪಡಿಸುತ್ತಿದ್ದುದನ್ನು ಕಂಡೆ. ನನಗೆ ಸಹಿಸಲಾಗಲಿಲ್ಲ. ಪುನಃ ಅವರೆದುರು ಹೋಗಿ ನಿಂತು ಹೇಳಿದೆ "ಸಾರ್ ! ಇಲ್ಲಿ ಪ್ರತಿಷ್ಠೆಯ ವಿಚಾರ ಮರೆಯಬೇಕೆಂದು ಬೇಡುತ್ತೇನೆ. ಆ ಹುಡುಗರನ್ನು ವಾಪಸು ಕರೆಸಿ. ರಾತ್ರಿ ಊಟ ಇನ್ನೂ ಒಂದು ಗಂಟೆ ಅಲ್ಲದೆ ತಯಾರಾಗದು. ಮತ್ತೆ ಯಾವಾಗ ಊಟ ಕೊಂಡೊಯ್ಯುವುದು ? ಖಾಯಿಲೆ ಬಂದೀತು ಹುಡುಗರಿಗೆ."

ಅವರು ಮಾತಾಡಲಿಲ್ಲ. ಮಾತು ಮಾಡದ್ದನ್ನು ಕೃತಿ ಮಾಡಿತು. ಲಾರಿಗಳೆರಡೂ ಶಾಲೆಗೆ ಹೋಗಿ ಆ ಹುಡುಗರನ್ನು ಹಿಂದೆ ಕರೆದು ತಂದುವು.

ಸಿಂಹ ? ಯುದ್ಧಭಯಂಕರ ಜೀವಿ, ನಿಜ, ಆದರೆ ಅದೆಂದೂ ನರಿಯಲ್ಲ.

ವಿದ್ಯಾನಗರದ ಗಣರಾಜ್ಯ ದಿವಸ ಶಿಬಿರ

ನನಗೆ ಪ್ರಿಯವಾದ ಬೌದ್ಧಿಕ ಕಾರ್ಯಗಳಲ್ಲಿ ನಿರತನಾಗಲು ದೊರೆತ ಸುಸಂದರ್ಭಗಳಿಂದ ಸಂತೋಷವಾಯಿತು. ಆದರೆ ಒಂದಿಗೇ ಎನ್‌ಸಿಸಿ ಕಡೆ ನನ್ನ ಲಕ್ಷ್ಯ ಮೊದಲಿನಷ್ಟು ಇರುವುದು ಸಾಧ್ಯವಾಗಲಿಲ್ಲ. ಕುದುರೆಮುಖಾನಂತರ ನನಗೆ ಎನ್‌ಸಿಸಿಯಲ್ಲಿ ಮುಂದು ವರಿಯಲು ಹಕ್ಕು ಇಲ್ಲ ಎಂಬಂಥ ಭಾವ ದಿನೇ ದಿನೇ ಪ್ರಬಲವಾಗುತ್ತಿತ್ತು. "ಈ ವರ್ಷವೂ ಒಂದು ಶಿಲಾರೋಹಿಗಳ ಕೂಟ ಸ್ಥಾಪಿಸಬೇಕು. ಮುಳ್ಳಯ್ಯನ ಗಿರಿ ಏರೋಣ"

ಎಂದೆಲ್ಲ ಸೂಚನೆಗಳು ಬಂದುವು. ಒಂದೆರಡು ಆದಿತ್ಯವಾರ ಹಿಂದಿನ ವರ್ಷದಂತೆ ಹಾರಾಟ ನಡೆಸಿದ್ದೆ. ನಾರಾಯಣ್‌ಸಿಂಗರೂ ನಾನೂ ಬಾಬಾಬುಡನ್‌ಗಿರಿ ಪ್ರದೇಶ ವನ್ನು ಯೋಜಣೆ ಮಾಡಿ ಮರಳಿದೆವು. ಆದರೆ ಇಲ್ಲೆಲ್ಲ ಈ ಕಡೆ ಸಾಕಷ್ಟು ಗಮನಕೇಂದ್ರೀ ಕರಣ ನನ್ನಿಂದ ಸಾಧ್ಯವಾಗಲಿಲ್ಲ. ಬೇರೆ ಆಫೀಸರರು—ನನಗಿಂತ ತರುಣರು ಇದ್ದರಷ್ಟೆ— ಮುಂದುವರಿಸಬೇಕು ; ಒಂದು ಭವ್ಯ ಬೆಟಾಲಿಯನ್ನಿನ ಪರಂಪರೆ ಒಬ್ಬನಲ್ಲಿ ಅಂತ್ಯವಾಗ ಬಾರದು ಎಂದು ನನ್ನ ಅಭಿಪ್ರಾಯ. 12 Mysore can do it ಎಂಬ ನಮ್ಮ ಹಿಂದಿನ ವರ್ಷದ ಘೋಷಣೆ ಈಗ 12 Mysore has done it ಆಗಿತ್ತು, ಘೋಷಣೆ ಏನೇ ಇರಲಿ ಜೀವ ಮಾತ್ರ ಸ್ಪಂದಿಸಲಿಲ್ಲ.

ನಾರಾಯಣ್‌ಸಿಂಗರ ವರ್ಗ–ನಿವೃತ್ತಿ ಇವು ಸದಾ ನಮ್ಮ ನೆತ್ತಿಯ ಮೇಲೆ ತೂಗು ತ್ತಿದ್ದ ಡೆಮಾಕ್ಲಿಸನ ಖಡ್ಗ. ಅಶ್ವತ್ಥನಾರಾಯಣರು ಎಂದೂ ವರ್ಗಗೊಂಡು ಅವರ ಮೊದಲ ವೃತ್ತಿ (ಅಧ್ಯಾಪನ) ತೆರಳಬಹುದು. ಈ ಸನ್ನಿವೇಶದಲ್ಲಿ ಎನ್‌ಸಿಸಿಯ ದೈನಂದಿನ ಕಾರ್ಯಗಳೇ ನನಗೆ ಭಾರವಾಗಿ ಕಂಡರೆ ಆಶ್ಚರ್ಯವಿಲ್ಲ. ಅಂದ ಮಾತ್ರಕ್ಕೆ ೧೯೬೭–೬೮ ರಲ್ಲಿ ಒಂದು ಬೆಟಾಲಿಯನ್ ಆಗಿ ಸಾಧಿಸಿದ ಶಿಕ್ಷಣ ಪ್ರಗತಿ ಏನೂ ಕಡಿಮೆಯಿರಲಿಲ್ಲ. ಹಿಂದಿನ ದಕ್ಷತೆ ಕ್ಷಿಪ್ರತೆಗಳ ಪ್ರತೀಕವೇ ಇದಾಗಿತ್ತು. ಗೌರವರಕ್ಷೆಗಳು, ಸಮಾರಂಭ ಪೆರೇಡುಗಳು, ಆಹ್ವಾನಿತರಿಗೆ ಶಿಲಾರೋಹಣ ಶಿಲಾವರೋಹಣ ಪ್ರದರ್ಶನಗಳು, ಗುಂಡು ಹೊಡೆಯುವುದರಲ್ಲಿ ಸ್ಪರ್ಧೆಗಳು, ಪೌರರಕ್ಷಣೆಯ ಪಾಠಗಳು, ವಾರ್ಷಿಕಶಿಕ್ಷಣ ಶಿಬಿರದ ಸಾಹಸಗಳು, ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿವಿಧ ಸಮಾರಂಭಗಳಲ್ಲಿ ಹೊಣೆ ಗಾರಿಕೆಗಳು—ಇಲ್ಲೆಲ್ಲ ಹಳೆಯ ಸತ್ತ್ವ ಇನ್ನಷ್ಟು ಅಭಿವೃದ್ಧಿಗೊಂಡದ್ದು ಕಂಡೆ. ಆ ವರ್ಷ ಎರಡು ಕ್ಯಾಂಪುಗಳಿಗೆ ನಾನು ಹೋಗಬೇಕಾಯಿತು. ಮೊದಲನೆಯದು ನಮ್ಮ ಯೂನಿಟ್ಟಿನ ಕ್ಯಾಂಪು, ಸೆಪ್ಟೆಂಬರಿನಲ್ಲಿ. ಎರಡನೆಯದು ಆಕಸ್ಮಾತ್ತಾಗಿ ಬಂದದ್ದು. ಪ್ರತಿ ವರ್ಷವೂ ಮೈಸೂರು ರಾಜ್ಯದಿಂದ ದೆಹಲಿಗೆ ಗಣರಾಜ್ಯ ಸಮಾರಂಭದಲ್ಲಿ ಭಾಗವಹಿಸಲು ಒಂದು ಎನ್‌ಸಿಸಿ ತಂಡವನ್ನು ಕಳಿಸುವುದು ವಾಡಿಕೆ. ಈ ತಂಡದಲ್ಲಿ ಜೂನಿಯರ್, ಸೀನಿಯರ್ ಡಿವಿಶನ್ನುಗಳ ಸೈನ್ಯ, ನೌಕೆ, ವಿಮಾನ ವಿಭಾಗಗಳ ಆರಿಸಿದ ಕ್ಯಾಡೆಟುಗಳೂ ಮಹಿಳಾ ವಿಭಾಗದ ಆರಿಸಿದ ಕ್ಯಾಡೆಟುಗಳೂ ಇರುತ್ತಾರೆ. ಇವರ ಪ್ರಾದೇಶಿಕ ಆಯ್ಕೆಗಳು ಆ ಹಿಂದೆಯೇ ನಡೆದು ಡಿಸೆಂಬರಿನಲ್ಲಿ ಇವರೆಲ್ಲರೂ ಬೆಂಗಳೂರಿನಲ್ಲಿ ೧೦ ದಿವಸಗಳ ತೀವ್ರ ಶಿಕ್ಷಣ ಪಡೆಯಲು ಒಟ್ಟುಗೂಡುತ್ತಾರೆ. ೧೯೬೭ರ ಡಿಸೆಂಬರಿನ ಇಂಥ (ಪುರುಷ ವಿಭಾಗದ) ಕ್ಯಾಂಪನ್ನು ಮೇಜರ್ ನಾರಾಯಣ್‌ಸಿಂಗರು ನಡೆಸಬೇಕೆಂದೂ ವಿದ್ಯಾನಗರದಲ್ಲಿ ಆಗ ನಡೆಯಲಿರುವ ೧ನೆಯ ಮೈಸೂರು ಬೆಟಾಲಿಯನ್ನಿನ ಕ್ಯಾಂಪಿನೊಡನೆ ಈ ತಂಡವನ್ನು ಆಹಾರ ಮುಂತಾದ ಇತರಾವಶ್ಯಕತೆಗಳಿಗೋಸ್ಕರ ಲಗತ್ತಿಸಬೇಕೆಂದೂ ಡೈರೆಕ್ಟೊರೇಟಿನ ಹುಕುಂ ಬಂತು. ಆ ಮೊದಲೇ ಅಶ್ವತ್ಥನಾರಾಯಣರನ್ನು ಬೇರೆ ಒಂದು ಕ್ಯಾಂಪಿಗೆ ಕಳಿಸಿ ದ್ದುದರಿಂದ ನಾರಾಯಣ್‌ಸಿಂಗರು ನನ್ನ ಸೇವೆಯನ್ನು ಕೋರಿದರು. ಕಾನೂನು ಪ್ರಕಾರ ನಾನು ಒಂದೇ ವರ್ಷದಲ್ಲಿ ಎರಡು ಕ್ಯಾಂಪುಗಳಿಗೆ ಹೋಗುವುದು ಸಾಧ್ಯವಿರಲಿಲ್ಲ. ಆದರೆ ನಾರಾಯಣ್‌ಸಿಂಗರ ಬೇಡಿಕೆಯನ್ನು ಡೈರೆಕ್ಟರರು ಮನ್ನಿಸಿದರು. ಇದೆಲ್ಲ ನಡೆದದ್ದು ಶಿಬಿರ ಪ್ರಾರಂಭವಾಗುವುದಕ್ಕೆ ಎರಡು ದಿವಸಗಳ ಮುಂಚಿತವಾಗಿ. "ನಾಳೆ ಸಾಯಂಕಾಲ

ನಾವು ವಿದ್ಯಾನಗರದಲ್ಲಿ ಇರಬೇಕು. ತಯಾರಾಗಿರಿ'' ಎಂದು ನಾರಾಯಣ್‌ಸಿಂಗರು ಹೇಳಿದಾಗ ನನಗೆ ಈ ಗಣರಾಜ್ಯ ದಿವಸ ಶಿಕ್ಷಣ ಶಿಬಿರದ ವಿಚಾರವಾಗಿ ಏನೂ ತಿಳಿದಿರಲಿಲ್ಲ. ಹುಕುಮನ್ನು ಒಪ್ಪಿದೆ—ಜಾಗ ನೋಡದೆ ಲಾಗ ಹೊಡೆದೆ, ಎಂದಿನಂತೆ.

ಕ್ಯಾಂಪಿಗೆ ಹೋದಮೇಲೆ ನಮ್ಮ ಸಾಹೇಬರ ಮರ್ಜಿ ನನಗೆ ತಿಳಿದದ್ದೇ—ಟ್ರೈನಿಂಗ್, ಹೆಚ್ಚು ಟ್ರೈನಿಂಗ್, ಅತಿ ಹೆಚ್ಚು ಟ್ರೈನಿಂಗ್. ಉಳಿದ ನಮಗೆ ಅವರು ಯಾವ ನಿರ್ದೇಶನವನ್ನೂ ಕೊಡುವವರಲ್ಲ. ತನ್ನಷ್ಟೇ ಸಮರ್ಥರಾದ ಅನುಭವಿಗಳಾದ ನಮಗೆ ಹೇಳುವುದೇನಿದೆ, ತಿಳಿದು ನಾವು ಕೆಲಸ ನಡೆಸಬೇಕು—ಇದು ಅವರ ನಿಲವು. ಹೀಗೆ ಸ್ವಾತಂತ್ರ್ಯ ಕೊಟ್ಟರೆಂದು ನಾವೇನಾದರೂ ತಪ್ಪು ಮಾಡಿದೆವೋ ಅದನ್ನು, ತಡವಾಗಿ, ನಮ್ಮನ್ನು ತಿದ್ದುವ ಉದ್ದೇಶದಿಂದ ತಿಳಿಸದೇ ಇರುತ್ತಿರಲಿಲ್ಲ. ಇದೆಲ್ಲ ಸರಿ, ನಮ್ಮ ಸಾಮಾನ್ಯ ಶಿಕ್ಷಣ ಶಿಬಿರಗಳಲ್ಲಿ, ಇಲ್ಲಿ ಹಾಗಲ್ಲ—ಮೈಸೂರು ರಾಜ್ಯದ ಅತ್ಯುತ್ತಮ ತರುಣರು ಬಂದಿದ್ದಾರೆ ; ಮೂರೂ ಬಲಗಳ ಪ್ರತಿನಿಧಿಗಳು ಭಿನ್ನ ಕವಾಯತಿ ವಿಧಾನಗಳಲ್ಲಿ ತರಬೇತಾದವರು ; ಇವರನ್ನು ೧೦ ದಿವಸಗಳ ಕ್ಷಿಪ್ರಾವಧಿಯಲ್ಲಿ ಒಂದು ಹದಕ್ಕೆ ಬಟ್ಟಿ ಇಳಿಸಿ ಒಂದು ಶಿಷ್ಟ ಕವಾಯತಿಯನ್ನು ಪ್ರದರ್ಶಿಸುವಂತೆ ಮಾಡಬೇಕು. ಬಾಯೊನೆಟ್ ಇರಿತದಲ್ಲಿ ಅತ್ಯಂತ ಸಮರ್ಥರನ್ನಾಗಿ ಪರಿವರ್ತಿಸಬೇಕು. ಆದ್ದರಿಂದ ನಾರಾಯಣ್‌ಸಿಂಗರೆಂದರು ''ಜೇಟಿ ! ಲೆಕ್ಕಪತ್ರ, ಪಾರ್ಟ್ ೧ ಹುಕುಂಗಳು, ಕಾಗದದ ವ್ಯವಹಾರ ಎಲ್ಲ ನಿಮ್ಮವು. ಆಗೀಗ ಶಿಕ್ಷಣ ನೋಡಲು ನೀಡಲು ಬನ್ನಿ. ಟ್ರೈನಿಂಗ್ ನಾನು ನೋಡಿಕೊಳ್ಳುತ್ತೇನೆ.'' ಆಹಾರ ಹೇಗೂ ದೊಡ್ಡ ಕ್ಯಾಂಪಿನೊಡನೆ ದೊರೆಯುತ್ತಿತ್ತಷ್ಟೆ. ಕ್ಯಾಂಪಿನ ಶಿಕ್ಷಣ ಪರಿಷ್ಕಾರವಾಗಿ ನೆರವೇರಬೇಕಾದರೆ ಅದು ಸುಭದ್ರ ಆಡಳಿತೆಯ ಪಾಯದ ಮೇಲೆ ನಿಲ್ಲಬೇಕು. ಆದ್ದರಿಂದ ನನ್ನ ಹೊಣೆ ಅಧಿಕವಾಯಿತು. ದಿನದಿನದ ಆಡಳಿತೆಯ ನಿರ್ವಹಣೆ ರಾತ್ರಿ ೧–೨ ಗಂಟೆ ತನಕವೂ ಸಾಗುತ್ತಿತ್ತು, ಮೂರನೆಯ ದಿವಸದಿಂದ ಪ್ರತಿದಿನ ಎಂಬಂತೆ ಎನ್‌ಸಿಸಿ ಡೈರೆಕ್ಟರರು, ಡೆಪ್ಯೂಟಿ ಡೈರೆಕ್ಟರರು, ಗ್ರೂಪ್ ಕಮಾಂಡರರು ಮೊದಲಾದ ವರಿಷ್ಠ ಅಧಿಕಾರಿಗಳು ಬಂದು ಶಿಕ್ಷಣವನ್ನು ನೋಡಿ ಹೋಗುತ್ತಿದ್ದರು. ಪ್ರತಿಯೊಬ್ಬರು ಬಂದಾಗಲೂ ಗಣರಾಜ್ಯತಂಡ ಸಾಮೂಹಿಕ ಕವಾಯತಿಯನ್ನೂ ಉತ್ಸವ ಮೆರವಣಿಗೆಯನ್ನೂ ಪ್ರದರ್ಶಿಸಬೇಕಾಗಿತ್ತು. ಆರನೆಯ ದಿವಸ. ೨ ಗಂಟೆ ಅಪರಾಹ್ಣ. ಹುಡುಗರು ಆಗತಾನೇ ಊಟ ಮುಗಿಸಿ ಬಂದು ಬರಾಕುಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ನಾನು ಲೆಕ್ಕಪತ್ರಗಳ ವಿಲೆವಾರಿ ಮಾಡುತ್ತ ಆಫೀಸಿನಲ್ಲಿ ಕುಳಿತಿದ್ದೆ. ಆಗಲೇ ಒಂದು ತುರ್ತು ಸಂದೇಶ ಬಂತು. ದೆಹಲಿಯಿಂದ ಎನ್‌ಸಿಸಿ ಡೈರೆಕ್ಟರ್ ಜನರಲ್ (ಡಿಜಿ) ಕ್ಯಾಂಪಿಗೆ ಬರುತ್ತಿದ್ದಾರೆ ; ೨–೪೫ ಗಂಟೆ ವೇಳೆಗೆ ಗಣರಾಜ್ಯತಂಡ ಅವರಿಗೆ ಗೌರವರಕ್ಷೆ ನೀಡಿ ಉತ್ಸವ ಮೆರವಣಿಗೆ ಪ್ರದರ್ಶಿಸಬೇಕು ಎಂದು ಅದರ ಸಾರಾಂಶ. ಆಗ ನಾರಾಯಣ್‌ಸಿಂಗರು ಬೆಂಗಳೂರಿಗೆ ಹೋಗಿದ್ದುದರಿಂದ ಅವರು ಡಿಜಿಯವರ ಜೊತೆಯಲ್ಲೇ ಆಗಮಿಸುವವರಿದ್ದರು. ಹೀಗಾಗಿ ನನ್ನ ಹೊಣೆ ಹೆಚ್ಚಿನದಾಯಿತು. ಮುಂದೆ ಎಲ್ಲವನ್ನೂ ಅತಿ ತ್ವರೆಯಿಂದ ಮಾಡಿದೆವು. ಪೆರೇಡ್ ೨–೩೦ ಗಂಟೆಗೇ ಸನ್ನದ್ಧವಾಯಿತು. ಮುಂದಿನ ೫–೧೦ ಮಿನಿಟುಗಳಲ್ಲಿ ಒಂದೆರಡು ಅಭ್ಯಾಸಗಳನ್ನೂ ಮಾಡಿ ಮುಗಿಸಿದೆವು. ವೇದಿಕೆಯ ಮೇಲೆ ಧ್ವನಿವರ್ಧಕ ಮುಂತಾದ ಪರಿಕರಗಳು ಸಿದ್ಧವಾದುವು. ೨–೪೫ ಗಂಟೆಗೆ ಅವರು ಬಂದರು. ಎಲ್ಲವೂ ಬಲ್ಯ

ಸೊಗಸಾಗಿ ನಡೆದುಹೋದುವು. ಮೆರವಣಿಗೆಗೆ ಇಡೀ ಕ್ಯಾಂಪೇ ಅಲ್ಲಿಗೆ ಆಗಮಿಸಿ ಸಂತ್ರಲೂ ಮಿಲಿಟರಿ ಕ್ರಮದಲ್ಲಿ ನೆರೆದಿತ್ತು, ಉತ್ಸವವಿಧಿಗಳು ಮುಗಿದ ತರುವಾಯ ಕ್ಯಾಂಪನ್ನು ಶುಳ್ಳಿರಿಸಲಾಯಿತು. ನಾರಾಯಣ್‌ಸಿಂಗರು ಮುಖ್ಯ ಅತಿಥಿಗಳಿಗೆ ಸ್ವಾಗತ ಕೋರಿದರು. ಕೊನೆಯಲ್ಲಿ "ಈಗ ಗಣರಾಜ್ಯ ದಿವಸ ಶಿಬಿರದ ಉಪಮುಖ್ಯಾಧಿಕಾರಿಗಳಾದ ಮೇಜರ್ ಜಿ.ಟಿ. ನಾರಾಯಣರಾಯರು ಶಿಬಿರದ ವರದಿ ಓದುತ್ತಾರೆ" ಎನ್ನಬೇಕೇ ? ನನ್ನಲ್ಲಿ ಅಂಥ ವರದಿ ಯಾವುದೂ ಸಿದ್ಧ ಇರಲಿಲ್ಲ. ಹಾಗೆಂದು ಆ ವರಿಷ್ಠ ಸಮ್ಮೇಳನದಲ್ಲಿ ಹೇಳಲು ಬಂದಿತೇ ? ಮೇಲಧಿಕಾರಿ ಹೇಳಿದ್ದನ್ನು ನಡೆಸುವುದೊಂದೇ ಮಿಲಿಟರಿ ಸಂಪ್ರದಾಯ. ಆದ್ದರಿಂದ ಯಾಂತ್ರಿಕವಾಗಿ—ಅನೈಚ್ಛಿಕವಾಗಿ—ನಾನು ಸಾವಧಾನ್ ಸ್ಥಿತಿಗೆ ಜಿಗಿದೆ ; ನೇರವಾಗಿ ಧ್ವನಿವರ್ಧಕದ ಕಡೆ ನಡೆದೆ ; ನಿಂತೆ ; ಕೈಯಲ್ಲಿ ಹಿಡಿದಿದ್ದ ಫೈಲನ್ನು ಬಿಚ್ಚಿ ತೆರೆದು ಎದುರು ಹಿಡಿದುಕೊಂಡೆ ; ಓದಲು ಪ್ರಾರಂಭಿಸಿಯೇಬಿಟ್ಟೆ ! ಹಿಂದೆ ಅಸಂಖ್ಯಾತ ಕ್ಯಾಂಪುಗಳಲ್ಲಿ ಮಾಡಿದ ಕೆಲಸವೇ—ಆದ್ದರಿಂದ ವಿಷಯಗಳ ಆಳವಡಿಕೆಯ ವಿಚಾರ ವಾಗಲೀ ವಾಕ್ಯಗಳ ರಚನೆಯ ವಿಚಾರವಾಗಲೀ ನನಗೇನೂ ಕಷ್ಟ ಇರಲಿಲ್ಲ. ಇನ್ನು ಈ ಶಿಬಿರಕ್ಕೆ ಬಂದಿದ್ದವರ ವಿವರ ಮುಂತಾದವು ಹೇಗೂ ಗೊತ್ತೇ ಇತ್ತು. ಹೀಗೆ ನಾನು ಸುಮಾರು ಐದು ಮಿನಿಟುಗಳ ಕಾಲ ಶಿಬಿರದ ಸಂಕ್ಷೇಪ ವರದಿ "ಓದಿದೆ."

ಸಾಯಂಕಾಲ ಮೇಜರ್ ನಾರಾಯಣ್‌ಸಿಂಗ್ ನಗುಮುಖದಿಂದ "ಏನಪ್ಪಾ ! ವರದಿ ಬಲು ಸೊಗಸಾಗಿತ್ತು. ಡಿಜಿ ತಮಗೆ ಅದರ ಒಂದು ಪ್ರತಿ ಬೇಕೆಂದು ಹೇಳಿ ಕಳಿಸಿದ್ದಾರೆ. ಕೊಡುತ್ತೀರಾ ?"

"ಅಲ್ಲೇ ಗಾಳಿಯಲ್ಲಿ ಅದು ಐಕ್ಯವಾಗಿ ಹೋಯಿತಲ್ಲ ?"

"ಓದಿದಿರಲ್ಲ. ಅದನ್ನೇ ಟೈಪ್ ಮಾಡಿಸೋಣ."

ವಿಷಯ ಹೇಳಿದಾಗ ಅವರಿಗೆ ನಕ್ಕು ನಕ್ಕು ಸಾಕಾಯಿತು. ಆಗಲೇ ಅದನ್ನು ಪುನಃ ಬರೆದು ಟೈಪು ಮಾಡಿಸಿ ಕಳಿಸಿದೆವೆನ್ನಿ.

ರಾಮ ರಾಮಾ ಎಂದು ಕವಿತೆಯ ರೆಂಬೆಯೇರುತ ಕುಕಿಲುವ
ಸವಿಗರೆವ ಸವಿಯಕ್ಕರದ ವಾಲ್ಮೀಕಿ ಕೋಗಿಲೆಗೆರಗುವ
ಜನಿಸುತಲಿ ವಾಲ್ಮೀಕಿ ಗಿರಿಯೊಳು ತೆರಳುತಲಿ ರಾಮಾಬ್ಧಿಗೆ
ಪುಣ್ಯ ರಾಮಾಯಣ ಮಹಾನದಿ ಜಗವ ಪಾವನಗೊಳಿಸಲಿ

ಪುತಿನ

೧೯೬೮

ಕನ್ನಡ ಪಠ್ಯಪುಸ್ತಕ ಸಮಿತಿಯಲ್ಲಿ ಹೊಸ ಕೆಲಸ

ಕುದುರೆಮುಖ ಸಾಹಸದ ಪದವೀದಾನ ಸಮಾರಂಭದಲ್ಲಿ ಗೋಕಾಕರು ಒಡ್ಡಿದ್ದ "ಬರವಣಿಗೆಯ ಕುದುರೆಮುಖದ" ಸವಾಲನ್ನು ನಾನು ನಿಷ್ಠೆಯಿಂದ ಸ್ವೀಕರಿಸಿದೆ. ೧೯೬೮ರ ಏಪ್ರಿಲ್ ಹೊತ್ತಿಗೆ "ಕುದುರೆಮುಖದೆಡೆಗೆ" ಎನ್ನುವ ಪ್ರವಾಸ ಪುಸ್ತಕ ಬೆಂಗಳೂರು ವಿಶ್ವವಿದ್ಯಾಲಯದ ಪ್ರಥಮ ಪ್ರಕಟಣೆಯಾಗಿ ಹೊರಬಂತು. ಅದರ ಮುನ್ನುಡಿಯಲ್ಲಿ ಗೋಕಾಕರು ಹೀಗೆ ಬರೆದರು "...ಶ್ರೀ ಜಿ. ಟಿ. ನಾರಾಯಣರಾಯರು, ಈ ಸಾಹಸವು ಸಾಹಿತ್ಯದಲ್ಲಿ ಸುಂದರವಾಗಿ ಒಡಮೂಡುವಂತಹ ಒಂದು ಉತ್ತಮ ಆರೋಹಣ ವರ್ಣನೆಯನ್ನು ಕನ್ನಡಕ್ಕೆ ಸಲ್ಲಿಸಿದ್ದಾರೆ. ಇಂತಹದೊಂದು ವರ್ಣನಾಪರ ಕೃತಿಯೊಂದನ್ನು ವಿಶ್ವವಿದ್ಯಾಲಯವು ಬೆಳಕಿಗೆ ತರಬಹುದೆಂದು ನಾನು ಹೇಳಿದಾಗ ಇಷ್ಟೊಂದು ಉತ್ತಮ ಕೃತಿ ಹೊರಬರಬಹುದೆಂದು ನಾನೆಣಿಸಿರಲಿಲ್ಲ..." ಇದೇ ವೇಳೆ ಪ್ರಿಯೂನಿವರ್ಸಿಟಿ ಗಣಿತ ಶಾಸ್ತ್ರದ ಪ್ರಥಮ ಭಾಗವೂ ಮುದ್ರಣಗೊಂಡು ಪ್ರಕಟವಾಯಿತು. ಇವೆಲ್ಲ ಕೆಲಸಗಳ ಪರಿಣಾಮವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳು, ರಿಜಿಸ್ಟ್ರಾರರು ಹಾಗೂ ಗಣಿತ ವಿಭಾಗದ ಮುಖ್ಯಸ್ಥರು ನನ್ನ ವಿಚಾರದಲ್ಲಿ ವಿಶೇಷ ಆದರ ಅಭಿಮಾನ ತಳೆದರು. ನಾನು ಬೆಂಗಳೂರು ವಿಶ್ವವಿದ್ಯಾಲಯದ ಗಣಿತ ವಿಭಾಗದಲ್ಲಿ ಲೆಕ್ಚರರ್ ಆಗಿ ಸೇರಬೇಕೆಂದೂ ಇದರಿಂದ ನನ್ನ ಸೇವೆ ವಿಶ್ವವಿದ್ಯಾಲಯಕ್ಕೆ ಶಾಶ್ವತವಾಗಿ ಲಭಿಸುವಂತಾಗುವುದೆಂದೂ ಅವರು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಬಯಸಿದರು. ಎರಡು ವರ್ಷಗಳ ಹಿಂದೆ ಸರಕಾರದಿಂದ ಒಂದು ಪತ್ರ ಬಂದಿತ್ತು—ಬೆಂಗಳೂರು ವಿಶ್ವವಿದ್ಯಾಲಯವನ್ನು ಶಾಶ್ವತವಾಗಿ ಸೇರಬೇಕೆಂದು ಬಯಸುವ ಸರಕಾರೀ ಕಾಲೇಜುಗಳ ಅಧ್ಯಾಪಕರು ತಮ್ಮ ಇಚ್ಛೆಯನ್ನು ಬರವಣಿಗೆಯಲ್ಲಿ ಕೊಡಬೇಕೆಂಬುದು ಅದರ ಸಾರ. ೨೦ ವರ್ಷ ಬಿಎಸ್‌ಸಿ ಪಾಠ ಹೇಳಿ ದಡ್ಡುಗಟ್ಟಿ ಹೋಗಿದ್ದೇನೆ ; ಇನ್ನು ಎಂಎಸ್‌ಸಿಯ ಹೊಸ ವಿಷಯಗಳನ್ನು ಕಲಿತು ಸಮರ್ಥ ಅಧ್ಯಾಪಕನಾಗುವುದು ಸಾಧ್ಯವಾದೀತೇ ? ಒಂದನೆಯ ಸ್ಥಾನದ ಹುದ್ದೆಯಲ್ಲಿ ಎರಡನೆಯ ದರ್ಜೆಯ ಅಧ್ಯಾಪಕನಾಗಿರುವುದಕ್ಕಿಂತ ಸ್ವಸ್ಥಾನದಲ್ಲಿ ಒಂದನೆಯ ದರ್ಜೆಯ ಅಧ್ಯಾಪಕನಾಗಿರುವುದೇ ಲೇಸೆಂದು ನಿರ್ಧರಿಸಿ ಆ ಕಾಗದಕ್ಕೆ ಆಗಲೇ ನಾನು ಒಲ್ಲೆ ಪತ್ರ ಬರೆದು ಕಳಿಸಿದ್ದೆ. ಆದರೆ ಈಗ ಪರಿಸ್ಥಿತಿ ಬದಲಾಗಿತ್ತು. ಸಿ. ಎನ್. ಶ್ರೀನಿವಾಸೈಯ್ಯಂಗಾರ್ಯರ ಪ್ರಭಾವಿ ಸಹವಾಸದಿಂದ ಅವರ ಪ್ರೋತ್ಸಾಹದಿಂದ ನನ್ನ ಗಣಿತಸಾಮರ್ಥ್ಯದ ವಿಷಯ ನನಗೆ ಧೈರ್ಯಮೂಡಿತ್ತು. ಕಷ್ಟಪಟ್ಟು ದುಡಿವರೆ ಕಲಿಯಲಾಗದ ಪರಿಕಲ್ಪನೆ ಇಲ್ಲ ಎಂದು ತಿಳಿದೆ ಏರಲಾಗದ ಕಲ್ಲಿಲ್ಲವಷ್ಟೆ ? ಬೆಂಗಳೂರು ವಿಶ್ವವಿದ್ಯಾಲಯ ಗಣಿತಶಾಸ್ತ್ರ ಲೆಕ್ಚರರ್ ಹುದ್ದೆಗೆ ಜಾಹೀರಾತನ್ನು ಪ್ರಸಿದ್ಧಿಸಿದಾಗ ನಾನು ಅದಕ್ಕೆ ಅರ್ಜಿ ಸಲ್ಲಿಸಿದೆ (ಬೇಸಗೆ ೧೯೬೮).

ಅದೇ ವೇಳೆ ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಪಿ. ಮಲ್ಲಿಕಾರ್ಜುನಪ್ಪ ಒಂದು ವಿಶೇಷ ವಿಚಾರವಿನಿಮಯಕ್ಕೋಸ್ಕರ ನನ್ನನ್ನು ಅವರ ಕೊಠಡಿಗೆ ಆಮಂತ್ರಿಸಿದರು. ವಿಶ್ವವಿದ್ಯಾಲಯದ ಕನ್ನಡ ಪಠ್ಯಪುಸ್ತಕ ಸಮಿತಿ ರಂ. ಶ್ರೀ. ಮುಗಳಿಯವರ (ಕನ್ನಡ ವಿಭಾಗದ ಮುಖ್ಯಸ್ಥರು) ಅಧ್ಯಕ್ಷತೆಯಲ್ಲಿ ಕಾರ್ಯವನ್ನು ತೊಡಗಿದೆ ; ಅದರ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಕೇವಲ ಎರಡು ತಿಂಗಳುಗಳ ಮಟ್ಟಿಗೆ ನನ್ನ ಸೇವೆ ದೊರೆಯಬಹುದೇ—ಇದು ಅವರು ನನಗೆ ಹಾಕಿದ ಪ್ರಶ್ನೆ. ಆ ಕೆಲಸ ನನ್ನಿಂದ ಸಾಧ್ಯವಾಗುವುದೆಂದೂ ಅವರು ಹುರಿದುಂಬಿಸಿದರು, ಬೇಸಗೆ ರಜೆಯ ಎರಡು ತಿಂಗಳುಗಳಲ್ಲಿ ನಾನು ಈ ತಾತ್ಕಾಲಿಕ ಕಾರ್ಯವನ್ನು ವಹಿಸಿಕೊಂಡು ಪ್ರಯತ್ನಮಾಡಿ ನೋಡುವುದು ಒಂದು ವಿಧದ ಸವಾಲೆಂದು ಒಪ್ಪಿಕೊಂಡೆ. ಆದರೆ ಸರಕಾರದಿಂದ ಅನುಮತಿ ಪಡೆಯಬೇಕೆಂದು ಅವರಿಗೆ ಸೂಚಿಸಿದೆ. ಅದನ್ನು ಈಗಾಗಲೇ ಫೋನ್ ಮಾಡಿ ಪಡೆದಾಗಿದೆಯೆಂದು ಅವರು ಹೇಳಿದರು. ಹೀಗೆ ನನಗೆ ಗೊತ್ತಿಲ್ಲದೇ ನನ್ನ ಯಾವ ಪ್ರಯತ್ನವೂ ಇಲ್ಲದೇ ಒಂದು ಹೊಸ ಹೊಣೆ ನನಗೆ ಬಂದಿತು. ''ಇದಕ್ಕೆ ನಿಮಗೇನು ಸಂಭಾವನೆ ಕೊಡಬೇಕು ?'' ಮಲ್ಲಿಕಾರ್ಜುನಪ್ಪನವರ ಪ್ರಶ್ನೆ.

''ಏನೂ ಬೇಡ.''

''ಹಾಗೆಂದರೆ ಆಗದು. ನೀವು ಶ್ರಮಿಸುತ್ತೀರಿ. ಹೊಸ ಇಲಾಖೆ ಕಟ್ಟುತ್ತೀರಿ. ಏನು ಕೊಡಬೇಕೆಂದು ಹೇಳಿ.''

''ಸ್ವಾಮೀ ! ವಿಶ್ವವಿದ್ಯಾಲಯ ಕರೆದು ವಹಿಸುವ ಈ ಹೊಣೆ ನನಗೆ ಸಲ್ಲುವ ಗೌರವವೆಂದು ತಿಳಿದಿದ್ದೇನೆ, ಈ ಗೌರವವೂ ನಾನು ಹಿಡಿದ ಕೆಲಸದ ನಿರ್ವಹಣೆಯಿಂದ ನನಗೆ ದೊರೆಯುವ ತೃಪ್ತಿಯೂ ನನ್ನ ಕೆಲಸದ ಸಂಭಾವನೆಗಳು. ಆರ್ಥಿಕವಾಗಿ ನಾನು ನೆಮ್ಮದಿಯಾಗಿದ್ದೇನೆ. ಬೇರೇನೂ ಬೇಡ.''

''ನಾವು ನಿಮಗೆ ತಿಂಗಳೊಂದರ ಮುನ್ನೂರು ರೂಪಾಯಿಗಳ ಸಂಭಾವನೆ ಕೊಡಬೇಕೆಂದು ತೀರ್ಮಾನಿಸಿದ್ದೇವೆ. ನೀವು ಒಪ್ಪಿಕೊಳ್ಳಬೇಕು.''

''ಬಹಳವಾಯಿತು.''

''ಖಂಡಿತ ಇಲ್ಲ. ನಿಮ್ಮ ಕೆಲಸಕ್ಕೆ ಅದು ಹೆಚ್ಚಂತೂ ಆಗಲೇ ಇಲ್ಲ.''

ಮುಗಳಿಯವರ ಕಛೇರಿಗೆ ಹೋದೆ. ಜೂನ್–ಜುಲೈ ಹೊತ್ತಿಗೆ ಬೇರೆ ಬೇರೆ ವಿಷಯಗಳ ಮೇಲೆ ಕನ್ನಡ ಭಾಷೆಯಲ್ಲಿ ಪಠ್ಯಪುಸ್ತಕಗಳನ್ನು ಪ್ರಕಟಿಸಲು ಸಮಿತಿ ನಿರ್ಧರಿಸಿತ್ತು; ಕೆಲವು ಹಸ್ತಪ್ರತಿಗಳನ್ನು ಸಮಿತಿ ತರಿಸಿ ಪರಿಷ್ಕರಿಸಿ ಮುದ್ರಣಕ್ಕೆ ಸಿದ್ಧಪಡಿಸಿತ್ತು. ಮುಂದೆ ಒಡನೆ ಆಗಬೇಕಾದದ್ದು ಅವುಗಳ ಮುದ್ರಣ. ಹೊಸ ಹಸ್ತಪ್ರತಿಗಳಿಗೆ ಏರ್ಪಾಡು, ಲೆಕ್ಕಾಚಾರ, ಆಡಳಿತ ಕಛೇರಿಯ ರಚನೆ, ವ್ಯಾಪಾರ ಇತ್ಯಾದಿ. ಹಣದ ಕೊರತೆ ಇರಲಿಲ್ಲ. ಸಿಬ್ಬಂದಿ ? ಒಬ್ಬ ಅರೆಸಮಯದ ಕಾರಕೂನ ಹಾಗೂ ಪ್ಯೂನ್ ಇದ್ದರು. ಹೊಸತೊಂದು ಬೆಟಾಲಿಯನ್ನನ್ನು ಕಟ್ಟುವಂಥ ಕಾರ್ಯವಿದು. ಆದ್ದರಿಂದ ನನ್ನ ದುಡಿಮೆ ಅರ್ಧಕಾಲಾವಧಿಯೆಂದು ಅಲ್ಲ. ಪೂರ್ಣಾವಧಿಯೆಂದು ಎಂದು ಒಂದೆರಡು ದಿವಸಗಳಲ್ಲೇ ವೇದ್ಯವಾಯಿತು. ಮುಗಳಿಯವರಂಥ ಸಹೃದಯ ಸಜ್ಜನರೊಡನೆ ಕೆಲಸ ಬಲು ಸಂತೋಷಕರ ಅನುಭವ. ೩೧ ಮೇ ೧೯೬೮ರಂದು ನನ್ನ ಎರಡು ತಿಂಗಳ ಅವಧಿ ಮುಗಿಯುವ ಮೊದಲು ವಿಶ್ವ

ವಿದ್ಯಾಲಯ ಖಾಯಂ ಸಿಬ್ಬಂದಿಯನ್ನು ಆಯ್ಕೆ ಮಾಡಿ ನನ್ನನ್ನು ಬಿಡುಗಡೆ ಮಾಡ ಬೇಕಾಗಿತ್ತು. ಆದರೆ ಮಂಗಳಿಯವರೂ ಮಲ್ಲಿಕಾರ್ಜುನಪ್ಪನವರೂ ಒಂದು ವಿಷಯ ಸ್ಪಷ್ಟ ಪಡಿಸಿದರು "ಇನ್ನೊಂದೆರಡು ತಿಂಗಳು ಹೀಗೆಯೇ ಮುಂದುವರಿಸಿ ಮೊದಲ ಕಂತಿನ ಪುಸ್ತಕಗಳನ್ನು ಹೊರಡಿಸಿಬಿಡಿ. ಮುಂದೊಂದು ದಿನ ಹೇಗೂ ಹೊಸಬರು ಬಂದಿರು ತ್ತಾರೆ. ನಿಮಗೆ ಕಾಲೇಜು ಪಾಠವೂ ವಿಶೇಷ ತ್ರಾಸ ನೀಡದು ಈ ಅವಧಿಯಲ್ಲಿ."

ಜುಲೈ ತಿಂಗಳಲ್ಲಿ ನಾವು ಎಂಟು ಗ್ರಂಥಗಳನ್ನು ಒಂದು ಘನ ಸಮಾರಂಭದಲ್ಲಿ ಬಿಡು ಗಡೆ ಮಾಡಿದಾಗ ವಿಶ್ವವಿದ್ಯಾಲಯ ಸಾಧಿಸಿದ ಈ ಕ್ಷಿಪ್ರ ಪ್ರಗತಿ ಅದಕ್ಕೆ (ಆದ್ದರಿಂದ ಮಂಗಳಿಯವರಿಗೂ ನನಗೂ) ಒಳ್ಳೆ ಹೆಸರನ್ನು ತಂದಿತು. ನಮ್ಮ ವಿಶ್ವವಿದ್ಯಾ ಲಯದ ಈ ಸಾಹಸ ಭಾರತದಲ್ಲೇ ಪ್ರಥಮ ಸ್ಥಾನ ಗಳಿಸಿತೆಂದು ಮುಂದೊಂದು ದಿನ ಮಲ್ಲಿಕಾರ್ಜುನಪ್ಪ ಹೇಳಿದರು. ಇದರ ಪರಿಣಾಮವಿಷ್ಟೇ — ಇನ್ನೆರಡು ತಿಂಗಳ ಕಾಲ (ಆಗಸ್ಟ್–ಸೆಪ್ಟೆಂಬರ್) ನನ್ನ ಕೆಲಸದ ಅವಧಿಯ ವಿಸ್ತರಣೆ. ಸರಕಾರದ ಅನುಮತಿ ಸುಲಭವಾಗಿ ಪ್ರತಿಯೊಂದು ಸಲವೂ ದೊರೆಯುತ್ತಿತ್ತು. ಕಾಲೇಜು, ಎನ್‌ಸಿಸಿ, ಕನ್ನಡ ಪಠ್ಯಪುಸ್ತಕ ಸಮಿತಿ, ಗಣಿತಗ್ರಂಥ ರಚನೆ—ಹೀಗೆ ಕೆಲಸ ನಾನಾ ಆಯಾಮಗಳಲ್ಲಿ ಬೃಹತ್ತಾಗಿ ಬೆಳೆದು ನನಗೆ ಆಕಾಶ ನೌಕೆಯಲ್ಲಿ ಚಲಿಸು ತ್ತಿದ್ದಂಥ ಅನುಭವ ಆ ದಿವಸಗಳಲ್ಲಿ ಆಗುತ್ತಿತ್ತು. ಇವೆಲ್ಲವುಗಳ ಪರಿಣಾಮವಾಗಿ ೧೯೬೮–೬೯ರ ಕಾಲೇಜು ವರ್ಷದಲ್ಲಿ ನಾನು ಎನ್‌ಸಿಸಿ ಮಟ್ಟಿಗೆ ನಿಮಿತ್ತ ಮಾತ್ರನೇ ಆದೆ—ಎಂದರೆ ಯಾವ ಹೊಸ ಸಾಹಸಕ್ಕೂ ಕೈಯಿಕ್ಕಲು ಬಿಡುವಿರಲಿಲ್ಲ. ಅದೇ ವರ್ಷ ಕ್ಯಾಪ್ಟನ್ ಅಶ್ವತ್ಥನಾರಾಯಣರು ಅವರ ಮೈಸೂರಿನ ಮೂಲವೃತ್ತಿಗೆ (ಕಾಲೇಜ್ ಲೆಕ್ಚರರ್) ಮರಳಿದುದರಿಂದ ನಾರಾಯಣ್‌ಸಿಂಗರು ಕಡ್ಡಾಯವಾಗಿ ನನಗೆ ಒಂದು ವಿಚಾರ ಹೇಳಿದರು "ನಾನಿಲ್ಲಿ ಇರುವವರೆಗೆ ಎನ್‌ಸಿಸಿಯಿಂದ ಬಿಡುಗಡೆ ವಿಚಾರ ನಿಮಗೆ ಬೇಡ. ನೀವು ಅದರಲ್ಲಿ ಇರಲೇಬೇಕು."

ಕನ್ನಡ ವಿಶ್ವಕೋಶದ ಮೊದಲ ಕರೆ

ನನ್ನ ಪ್ರಿಯ ಮಿತ್ರ ಪ್ರಿನ್ಸಿಪಾಲ್ ಕು. ಶಿ. ಹರಿದಾಸಭಟ್ಟರು ೧೯೬೮ರ ಜೂನಿನಲ್ಲಿ ಒಂದು ಹೊಸ ವಿಷಯವನ್ನು ನನ್ನ ಮುಂದೆ ಪ್ರಸ್ತಾವಿಸಿದರು. "ಕನ್ನಡ ವಿಶ್ವಕೋಶದ ವಿಚಾರ ನಿಮಗೇನಾದರೂ ತಿಳಿದಿದೆಯೇ ?"

"ಒಂದಷ್ಟು ಲೇಖನಗಳನ್ನು ಕಳೆದ ವರ್ಷ ಬರೆದಿದ್ದೆ ಶ್ರೀನಿವಾಸೈಯ್ಯಂಗಾರ್ಯರ ಕೋರಿಕೆ ಮೇರೆಗೆ. ಇನ್ನೊಂದಷ್ಟನ್ನು ಅನುವಾದ ಮಾಡಿಯೂ ಕೊಟ್ಟಿದ್ದೆ. ಆ ಬಾಬ್ತು ಗೌರವಧನವೂ ಬಂದಿದೆ."

"ಮತ್ತೆ ?"

"ಈ ವರ್ಷದ ಪ್ರಾರಂಭದಲ್ಲಿ ಅದರ ಕಛೇರಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗವಾಗಿ ಹೋಯಿತು ಎಂದು ಪೇಪರುಗಳಲ್ಲಿ ಓದಿದ್ದೇನೆ."

"ಅದೇ ವಿಚಾರ ನಾನೀಗ ನಿಮ್ಮೊಡನೆ ಮಾತಾಡಬೇಕೆಂದಿರುವುದು. ಅವರಿಗೆ ವಿಜ್ಞಾನ

ವಿಭಾಗವನ್ನು ನೋಡಿಕೊಳ್ಳಲು ಒಬ್ಬ ಸಂಪಾದಕರು ಬೇಕಾಗಿದ್ದಾರೆ ಈ ಕ್ಷಣವೇ. ನೀವು ಯಾಕೆ ಅದನ್ನು ಒಪ್ಪಿಕೊಳ್ಳಬಾರದು ?''

''ನೀವೇನು ತಮಾಷೆ ಮಾಡುತ್ತಿಲ್ಲವಲ್ಲ ? ಆ ದೊಡ್ಡ ಹೊಣೆ ಹೊರಲು ಬೇಕಾದ ವಿದ್ವತ್ತು ಖಂಡಿತ ನನ್ನಲ್ಲಿಲ್ಲ. ಕೆಲಸದ ವ್ಯಾಪ್ತಿ ಏನೆಂದು ನನಗೆ ತಿಳಿಯದು.''

''ಅದೆಲ್ಲ ಹಾಗಿರಲಿ. ನೀವು ಒಪ್ಪಿಕೊಳ್ಳಿ ನೋಡುವ.''

''ಅಲ್ಲಿ ಪರಿಸರ ಹೇಗೋ, ಜನ ಹೇಗೋ, ಯಾರು ಅಲ್ಲಿಯ ಮುಖ್ಯಾಧಿಕಾರಿಗಳು ?''

''ದೇಜಗೌ. ನನ್ನ ಅತಿ ಹಳೆಯ ಸ್ನೇಹಿತರು. ನಿಮಗೆ ಅವರೊಡನೆ ಚೆನ್ನಾಗಿ ಒಗ್ಗುತ್ತದೆ. ಏನು ಹೇಳಿ ?''

''ಸರಕಾರದ ನೌಕರ ನಾನೀಗ. ಅಲ್ಲದೇ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಂದು ಕೆಲಸಕ್ಕೆ ಅರ್ಜಿ ಸಲ್ಲಿಸಿದ್ದೇನೆ. ಅವರಿಗೂ ನನ್ನನ್ನು ತೆಗೆದುಕೊಳ್ಳಬೇಕೆಂದು ಆಸೆ ಇದೆ. ಹೀಗೆಲ್ಲ ಇರುವಾಗ ಇಲ್ಲಿಂದ ಅಲ್ಲಿಗೆ ಹೋಗುವುದು ಹೊಸ ಹೊಣೆ ಹೊರುವುದು ಅಗತ್ಯವೇ ?''

''ಯೋಚನೆ ಮಾಡಿ ತಿಳಿಸಿ.''

ಈ ವಿಚಾರ ನಾನು ಪೂಜ್ಯರಾದ ಮಾಸ್ತಿಯವರೊಡನೆ ಪ್ರಸ್ತಾವಿಸಿದೆ. ''ಕನ್ನಡದ ಶಕ್ತಿ ಜವರೇಗೌಡರಲ್ಲಿ ಮೂರ್ತರೂಪ ತಳೆದಿದೆ. ಈ ಕೆಲಸ ಒಪ್ಪಿಕೊಳ್ಳಿ. ಮಾಡಿ. ಬೇರೆ ಯೋಚನೆಯೇ ನಿಮಗೆ ಬೇಡ'' ಎಂದು ಕೂಡಲೇ ಅವರು ಹರಸಿದರು.

ಮುಂದಿನವಾರ. ನಾನು ಪಾಠ ಮುಗಿಸಿ ನನ್ನ ಕೋಣೆಗೆ ಹಿಂತಿರುಗಿ ಬಂದಾಗ ಅಲ್ಲೆಲ್ಲ ಭಾರೀ ವಿಸ್ಮಯ—ಪ್ರೊ॥ ದೇ. ಜವರೇಗೌಡರು ನನ್ನನ್ನು ಹುಡುಕಿಕೊಂಡು ಅಲ್ಲಿಗೆ ಬಂದಿದ್ದರು; ಅವರು ಈಗ ವಿಶ್ವವಿದ್ಯಾಲಯದ ಗ್ರಂಥಭಂಡಾರದಲ್ಲಿ ನನ್ನನ್ನು ಕಾಯುತ್ತ ಕುಳಿತಿದ್ದಾರೆ ; ನಾನು ಕೂಡಲೇ ಅಲ್ಲಿಗೆ ಹೋಗಿ ಅವರನ್ನು ನೋಡಬೇಕು—ಇಷ್ಟು ಸಂದೇಶ ದೊರೆಯಿತು. ಕುಶಿಯವರು ಏನು ''ಕಿತಾಪತಿ'' ಮಾಡಿದರೋ ! ಹೋದೆ. ಆ ಮೊದಲು ನಮ್ಮ ಕಾಲೇಜಿನ ಕರ್ನಾಟಕ ಸಂಘದಲ್ಲಿ ಅವರು ಒಂದು ಭಾಷಣ ಮಾಡಿದಾಗ ಅವರನ್ನು ನಾನು ನೋಡಿದ್ದೆ. ಅವರ ಹಲವಾರು ಸಾಹಿತ್ಯಕೃತಿಗಳನ್ನು ಓದಿದ್ದೆ. ಆದ್ದರಿಂದ ನನಗೆ ಅವರನ್ನು ಗುರುತಿಸುವುದು ಸುಲಭವಾಯಿತು. ಮಾತು ಬಲು ಮೆತ್ತಗೆ, ಆತ್ಮೀಯ. ಕನ್ನಡ ವಿಶ್ವಕೋಶದ ಬವಣೆ ಬಂಡಾಟಗಳನ್ನು ಸಂಕ್ಷೇಪವಾಗಿ ಸ್ಪಷ್ಟವಾಗಿ ತಿಳಿಸಿದರು. ವಿಜ್ಞಾನ ಸಂಪಾದಕತ್ವವನ್ನು ನಾನು ವಹಿಸಿಕೊಳ್ಳಬೇಕೆಂದು ಕೋರಿದರು. ನನ್ನಲ್ಲಿ ಸಾಮರ್ಥ್ಯವಿದೆಯೇ ಇಲ್ಲವೇ ಎಂಬ ನನ್ನ ಎಂದಿನ ಸಂದೇಹಗಳಿಗೆ ಅವರು ಖಚಿತವಾಗಿ ಉತ್ತರ ನೀಡಿದರು ''ನಿಮ್ಮಿಂದ ಈ ಕೆಲಸ ಆಗಿಯೇ ಆಗುತ್ತದೆ. ಇದು ಕನ್ನಡದ ಕೆಲಸ. ಬನ್ನಿ. ನಡೆಸಿಕೊಡಿ.'' ಇಂಥ ತುಂಬು ಮಾತುಗಳೆದುರು ನಾನು ಮೂಕನಾದೆ. ಒಂದು ಆತಂಕ ವ್ಯಕ್ತಪಡಿಸಿದೆ ''ಈ ವಿಶ್ವವಿದ್ಯಾಲಯ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದೆ; ನನ್ನ ಸೇವೆಯನ್ನು ಅದು ಅಪೇಕ್ಷಿಸಿ ಪಟ್ಟಿದೆ. ಆ ಪ್ರಕಾರ ನಾನು ಅರ್ಜಿಯನ್ನೂ ಸಲ್ಲಿಸಿದ್ದೇನೆ. ಆದ್ದರಿಂದ ಈಗ ನಾನು ಬೇರೆ ಕಡೆಗೆ ಹೋಗುವುದು ನೈತಿಕವಾಗಿ ಸಾಧುವಲ್ಲ ಎಂದು ತಿಳಿದಿದ್ದೇನೆ. ಇಲ್ಲಿಯ

ರಿಜಿಸ್ಟ್ರಾರರು ನಿಮ್ಮ ಪರಮಮಿತ್ರರು. ನೀವೇ ಮಾತಾಡಿಕೊಂಡು ನಾನು ಏನು ಮಾಡಬೇಕೆಂದು ತಿಳಿಸಿ. ಹಾಗೆ ಮಾಡುತ್ತೇನೆ."

"ಅದು ಬಲು ಸೂಕ್ಷ್ಮ ವಿಚಾರ. ನಾನು ನಿಮ್ಮಿಬ್ಬರ ನಡುವೆ ಪ್ರವೇಶಿಸುವುದು ತರವಲ್ಲ. ನೀವೇ ಯೋಚಿಸಿ. ಕನ್ನಡದ ಕೆಲಸ ಎಂದು ಪರಿಶೀಲಿಸಿ. ಒಂದು ವಾರ ತಡೆದು ನನಗೆ ಪತ್ರ ಬರೆಯಿರಿ. ಒಂದು ನಾಲ್ಕು ಜನರ ಹೆಸರುಗಳನ್ನಾದರೂ ಸೂಚಿಸಿ. ಆದರೆ ನೀವೇ ಬರಬೇಕು ಎಂದು ನನ್ನ ವಿನಂತಿ."

"ನಿಮ್ಮಲ್ಲಿ ಜೆ. ಆರ್. ಲಕ್ಷ್ಮಣರಾಯರು ಇದ್ದಾರಷ್ಟೆ. ಅವರಿಗಿಂತ ಶ್ರೇಷ್ಠರು ಈ ಕೆಲಸಕ್ಕೆ ಬೇರೆ ಯಾರಿದ್ದಾರೆ?"

"ಅವರು ನಿಘಂಟುವಿನ ಬೆನ್ನುಮೂಳೆ. ಅಲ್ಲಿಂದ ಅವರನ್ನು ಕದಲಿಸುವಂತಿಲ್ಲ."

ಹಿರಿಯರೊಡನೆ ಮಿತ್ರರೊಡನೆ ವಿಚಾರವಿನಿಮಯ ನಡೆಸಿದೆ. ಇದು ಗೊತ್ತಿರುವ ಪರಿಸರ; ಆತ್ಮೀಯ ವಲಯ; ವಿಶ್ವವಿದ್ಯಾಲಯದ ಸೇವೆ ನಾನು ಸೇರುವುದು ಒಂದು ಔಪಚಾರಿಕ ವಿಧಿ; ಆದ್ದರಿಂದ ನೈತಿಕವಾಗಿ ನಾನು ಇಲ್ಲೇ ಉಳಿಯಬೇಕಾದದ್ದು ನ್ಯಾಯ. ಅದು ಗೊತ್ತಿರದ ಪರಿಸರ; ಹೊಸ ಕೆಲಸ; ಅವರೇನೋ ನನ್ನಲ್ಲಿ ವರೆಗೆ ಬಂದು ಆಹ್ವಾನಿಸಿದ್ದಾರೆ—ಅದು ಅವರ ಔದಾರ್ಯದ ಪ್ರತೀಕ. ಅಂತಿಮವಾಗಿ ನೈತಿಕ ಸಮತಲದಲ್ಲಿ ನಾನು ಶುದ್ಧವಾಗಿ ಇರಲೇಬೇಕು ಎಂದು ನಿರ್ಧರಿಸಿದೆ. ದೇಜಗೌರವರಿಗೆ ಬಲು ಸಂಕಟದಿಂದ ಈ ವಿಚಾರ ತಿಳಿಸಿದೆ—ಆ ಹತ್ತು ಪಂಕ್ತಿಗಳ ಕಾಗದದ ಕರಡು ಪೂರ್ಣಗೊಳಿಸಲು ನನಗೆ ಹಲವಾರು ಗಂಟೆಗಳೇ ಬೇಕಾದುವು. ಅವರ ಔದಾರ್ಯಕ್ಕೆ "ಕನ್ನಡದ ಕೆಲಸಕ್ಕೆ" ("ಎಲ್ಲಿದ್ದರೂ ನೀವು ಕನ್ನಡದ ಕೆಲಸ ಮಾಡುತ್ತೀರಿ ಎಂದು ನನಗೆ ಗೊತ್ತಿದೆ" ಎಂದು ಸಹ ಹೇಳಿದ್ದರು) ನನ್ನ ಪ್ರತಿಕ್ರಿಯೆ ಹೀಗಾಗಬೇಕೇ? ಕಾಗದವನ್ನು ಅಂಚೆಗೆ ಹಾಕಿದ ಮೇಲೆ ನಿಶ್ಚಿಂತನಾದೆ.

ಅವರು ಗೆದ್ದು ಬಂದರು

೧೯೬೮ರ ಸೆಪ್ಟೆಂಬರಿನಲ್ಲಿ ನಮ್ಮ ಬೆಟಾಲಿಯನ್ ಮತ್ತು ೧೩ನೆಯ ಬೆಟಾಲಿಯನ್ ಒಟ್ಟಾಗಿ ದೊಡ್ಡಬಳ್ಳಾಪುರದಲ್ಲಿರುವ ಸ್ಕೌಟ್ ಶಿಕ್ಷಣ ಕೇಂದ್ರದಲ್ಲಿ ವಾರ್ಷಿಕ ಶಿಕ್ಷಣ ಶಿಬಿರವನ್ನು ನಡೆಸಿದುವು. ಅಶ್ವತ್ಥನಾರಾಯಣರ ಬದಲು ಲೆಫ್ಟಿನೆಂಟ್ ಕಣ್ಣನ್ ಎಂಬ ಹೊಸ ತರುಣ ಸೂಟಿ ಆಫೀಸರ್ ಈಗ ನಮ್ಮ ಏಓ. ಅವರಿಗೆ ಇದೇ ಪ್ರಥಮ ಎನ್‌ಸಿಸಿ ಕ್ಯಾಂಪ್. ಆಹಾರ ಮತ್ತು ಆಡಳಿತೆಯ ಹೊಣೆ ಅವರದು. ಟ್ರೈನಿಂಗ್ ನನ್ನದು. ಗಣರಾಜ್ಯ ದಿವಸದ ಶಿಕ್ಷಣ ಶಿಬಿರವನ್ನೂ ಇದೇ ಕ್ಯಾಂಪಿಗೆ ಲಗತ್ತಿಸಿದ್ದರು.

ಈಗಾಗಲೇ ನಿವೃತ್ತರಾಗಿ ಪ್ರತಿವರ್ಷವೂ ಪುನರ್ನೇಮನಗೊಳ್ಳುತ್ತಿದ್ದ ನಾರಾಯಣ್ ಸಿಂಗರಿಗೆ ಇದೇ ಕೊನೆಯ ಶಿಬಿರವೆಂಬ ಭಾವ ಮೂಡಿತ್ತು. ನನ್ನ ಎನ್‌ಸಿಸಿ ಜೀವನದ ಕೊನೆಯ ಕ್ಯಾಂಪು ಇದೇ ಎನ್ನುವ ವಿಚಾರದಲ್ಲಿ ನನಗೆ ಸಂದೇಹವೇ ಇರಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯ ಯಾವ ದಿವಸವೂ ಆಯ್ಕೆ ಭೇಟಿ ನಡೆಸಬಹುದು; ಮತ್ತೆ ರಸ್ತೆ ಅಡ್ಡ ದಾಟುವುದೊಂದೇ (ಅಕ್ಷರಶಃ—ಸರ್ಕಾರೀ ಕಾಲೇಜೂ ಸೆಂಟ್ರಲ್ ಕಾಲೇಜೂ ಒಂದೇ ರಸ್ತೆಯ ಎರಡು ಮಗ್ಗುಲುಗಳಲ್ಲಿವೆ) ಉಳಿದದ್ದು. ಆದಾಗುವಾಗ ಎನ್‌ಸಿಸಿ ಜೀವನ

ತಾನಾಗಿಯೇ ಕೈದಾಗುತ್ತದೆ ಎಂದು ಭಾವಿಸಿದ್ದೆ. ಆದ್ದರಿಂದ ನಮ್ಮ ಈ ಕೊನೆಯ ಕ್ಯಾಂಪು ಪರಮೋತ್ಕೃಷ್ಟವಾಗಿರಬೇಕೆಂದು ನಿರ್ಧರಿಸಿ ನಮ್ಮ ಸಕಲ ಉಗ್ರಾಣ ಬತ್ತಳಿಕೆಗಳನ್ನೂ ಶೋಧಿಸಿ ಹೊಸ ಹೊಸ ಆಯುಧಗಳನ್ನು ಹೊರ ತೆಗೆದೆವು. ಅಶ್ವತ್ಥನಾರಾಯಣರಿಗೆ ಸರಿಮಿಗಿಲಾಗಿ ಕಣ್ಣನ್ ದುಡಿದುದರಿಂದ ಆಹಾರ ಆಡಳಿತೆ ಅತ್ಯುತ್ಕೃಷ್ಟಮಟ್ಟದಲ್ಲಿದ್ದುವು. ಶಿಕ್ಷಣದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ತರಲು ಲೆಫ್ಟಿನೆಂಟ್ ಹೆಗ್ಡೆ ಎಂಬ ಉಪ ಶಿಕ್ಷಣಾಧಿಕಾರಿ (ಕಣ್ಣನ್‌ರ ಸಮವಯಸ್ಕರು) ಬಲು ಸಹಾಯಕರಾದರು. ಯುದ್ಧದ ಎಲ್ಲ ವಿಧಿವಿನ್ಯಾಸಗಳಲ್ಲಿ ಅಭ್ಯಾಸ ನೀಡಿ ಪ್ರದರ್ಶನಗಳನ್ನು ನಡೆಸಿದೆವು. ಹೊರವಲಯದ ನಡಿಗೆಗೆ ಘಾಟಿ ಸುಬ್ರಹ್ಮಣ್ಯ ಕ್ಷೇತ್ರವನ್ನು ಗುರಿಯಾಗಿಯೂ ರಾತ್ರಿ ತಂಗಲು ನೆಲೆಯಾಗಿಯೂ ಆಯ್ದೆವು. ಯಥಾಪ್ರಕಾರ ಮೊದಲ ದಿವಸ ನಾನೇ ಹೊರ ನಡಿಗೆಯ ತಂಡದ ಮುಂದಾಳಾಗಿ ಹೊರಟೆ. ಮಳೆ ಇಲ್ಲದಿದ್ದುದರಿಂದ ಎಲ್ಲ ವಿಧವಾದ ಕವಾಯತಿಗಳನ್ನೂ ನಡೆಸಲು ಅನುಕೂಲತೆ ಒದಗಿತು. ರಾತ್ರಿ ಈ ತಂಡ ದೇವಾಲಯದಲ್ಲಿ ಉಳಿದು ಮರು ದಿವಸ ಬೇರೆ ಒಂದು ದಾರಿ ಮೂಲಕ ನಡೆದು ಕ್ಯಾಂಪನ್ನು ಮಧ್ಯಾಹ್ನದ ಊಟಕ್ಕೆ ತಲಪಬೇಕು—ಇದು ಕಾರ್ಯಕ್ರಮ. ಇಂಥ ಒಂದು ರಾತ್ರಿ. ದೇವಾಲಯಕ್ಕೆ ಊಟ ತೆಗೆದುಕೊಂಡು ಹೋಗಿ ಮರಳಿದ ಲಾರಿ ಒಂದು ಸುದ್ದಿ ತಂದಿತು—ನಾಲ್ಕೈದು ಹುಡುಗರು ವಾಂತಿ ಕಾರುತ್ತ ಭೇದಿ ತೂರುತ್ತ ಕಂಗಾಲಾಗಿ ಮಲಗಿದ್ದಾರೆ ; ತಂಡದ ನಾಯಕ ಲೆಫ್ಟಿನೆಂಟ್ ಸತ್ಯನಾರಾಯಣರಾವ್ ಅಲ್ಲಿಯೇ ಅವರ ಆರೈಕೆ ಮಾಡುತ್ತಿದ್ದಾರೆ. ನಾರಾಯಣ್‌ಸಿಂಗ್ ಮತ್ತು ನಾನು ಡಾಕ್ಟರರ ಸಮೇತ ಆ ಕ್ಷಣವೇ ದೇವಾಲಯಕ್ಕೆ ಧಾವಿಸಿದೆವು. ವಾಂತಿ-ಭೇದಿ ಎಂದರೆ ಕಾಲರ, ಕ್ಯಾಂಪಿನಲ್ಲಿ ಕಾಲರ ಎಂದರೆ ಅಗ್ನಿ ಪರ್ವತದ ಮೇಲೆ ಕೂತಂತೆ. ನಾವು ತಲಪಿದಾಗ ರಾತ್ರಿ ೧೦ ಗಂಟೆ. ಆದರೆ ದೇವಾಲಯದಲ್ಲಿ ಸದ್ದಿಲ್ಲ. ನಮಗೆ ಗಾಬರಿ. ನಾವು ಬಂದ ಸದ್ದನ್ನು ಕೇಳಿ ಸತ್ಯನಾರಾಯಣರಾಯರು ಎದ್ದು ಬಂದರು ಪ್ರಸನ್ನವದನರಾಗಿ. ಕುತೂಹಲದಿಂದ ನಾವು ಬಂದ ಕಾರಣವನ್ನು ಪ್ರಶ್ನಿಸಿದರು. ಹುಡುಗರ ಪರಿಸ್ಥಿತಿ ಹೇಗಿದೆ ಎಂದಾಗ ಅವರು ನಕ್ಕು ನುಡಿದರು "ಏನೂ ಆಗಲಿಲ್ಲವಲ್ಲ. ಅಜೀರ್ಣದಿಂದ ಒಂದಿಬ್ಬರು ಕಾರಿದರು ; ಬೇರೆ ಇಬ್ಬರು ಭೇದಿ ಮಾಡಿದರು. ಅಷ್ಟೇ. ಎಲ್ಲರೂ ಚೆನ್ನಾಗಿದ್ದಾರೆ. ಶಾಂತವಾಗಿ ಮಲಗಿದ್ದಾರೆ."

ರಾತ್ರಿ ನಡಿಗೆ, ಈ ಸಲ ಆರ್ಮಿ ಮಟ್ಟದಲ್ಲಿಯೇ—ಅಷ್ಟು ದೀರ್ಘವಾಗಿ, ಕಷ್ಟಕರವಾಗಿ—ನಡೆಸಬೇಕೆಂದು ನಿರ್ಧರಿಸಿ ಮ್ಯಾಪ್ ಸಮೇತ ಸುಮಾರು ೧೦-೧೨ ಮೈಲಿ ಸುತ್ತಳತೆ ಇರುವ ಹಳ್ಳಿ ಗುಡ್ಡ ಕಾಡು ಪ್ರದೇಶವನ್ನು ಸಮೀಕ್ಷಣೆ ಮಾಡಿದೆ. ಸರಿಸುಮಾರಾಗಿ ದೊಡ್ಡ ಒಂದು ವರ್ತುಳೀಯ ಪರಿಧಿಯ ಮೇಲಿರುವಂತೆ ನಾಲ್ಕು ಮುಖ್ಯ ಬಿಂದುಗಳನ್ನು—ಎಂದರೆ ಪಾಳು ಬಿದ್ದ ಒಂದು ಗುಡಿ, ಬೆಟ್ಟದ ಒಂದು ಶಿಖರ, ಒಂದು ಹೆಬ್ಬಂಡೆ, ಎರಡು ಕಾಲ್ದಾರಿಗಳ ಸಂಧಿ ಸ್ಥಳ—ಆರಿಸಿದೆ. ಇಲ್ಲೆಲ್ಲ ಆರ್ಮಿ ಸ್ಟಾಫುಗಳನ್ನು ಸಂಜೆ ೭ರಿಂದ ಮಧ್ಯ ರಾತ್ರಿ ೧೨ ಗಂಟೆ ತನಕ ಕುಳಿತಿರಲು ವಿಧಿಸಿದೆ. ಅದೇ ದಿವಸ ಹಗಲು ೧೨ನೆಯ ಮತ್ತು ೧೩ನೆಯ ಮೈಸೂರುಗಳ ಆಯ್ದು ತಲಾ ಹತ್ತು ಅತ್ಯುತ್ತಮ ಕ್ಯಾಡೆಟುಗಳಿಗೂ ಅವರ ನಾಯಕರಾದ ಒಬ್ಬೊಬ್ಬ ಆಫೀಸರರಿಗೂ ಮ್ಯಾಪ್ ವಿಷಯ ಶಿಕ್ಷಣ ಕೊಟ್ಟೆ. ಅವರು ತಲಪಬೇಕಾದ ನಾಲ್ಕು ಸ್ಥಳಗಳನ್ನೂ

ಮ್ಯಾಪಿನಲ್ಲಿ ತೋರಿಸಿ ನೆಲದ ಮೇಲೆ ಅವುಗಳೆಡೆಗೆ ಸಾಗಿ ಅವನ್ನು ಗುರುತಿಸುವ ಹಿಕ್ಮತ್ತನ್ನೂ ವಿವರಿಸಿದೆ. ಅಮಾವಾಸ್ಯೆಯ ರಾತ್ರಿ ೭ ಗಂಟೆಗೆ ಸರಿಯಾಗಿ ಅವರನ್ನು ಕ್ಯಾಂಪಿನಿಂದ ಎದುರು ಬದುರು ದಿಕ್ಕುಗಳಲ್ಲಿ ಕಳಿಸಿಬಿಟ್ಟೆವು. ಪ್ರತಿಯೊಂದು "ಶತ್ರು ನೆಲೆ"ಗೂ ಅವರು ಹೋಗಿ ಶತ್ರುವನ್ನು "ಜಯಿಸಿ" ರಶೀತಿ ತರಬೇಕು ಎಂದು ವಿಧಿಸಿದ್ದೆ, ಯಾವ ತಂಡ ಮೊದಲು ಬರುವುದೋ ಅದು ವಿಜಯಿಯಾಗುತ್ತದೆ.

ತಂಡಗಳನ್ನು ಓಸಿಯವರೂ ನಾನೂ ಹರಸಿ ಕಳಿಸಿಕೊಟ್ಟೆವು. ಮಧ್ಯರಾತ್ರಿ ವೇಳೆಗೆ ಅವರು ಮರಳಬಹುದು ಎಂದು ತರ್ಕಿಸಿ ನಾವಿಬ್ಬರೂ ಎಚ್ಚತ್ತುಕೊಂಡೇ ಕುಳಿತೆವು. ರಾತ್ರಿಯ ಕರಾಳತೆ ಏರಿತು. ಚಳಿಯ ಕೊರೆತ ಬೈರಿಗೆ ಆಯಿತು. ಚೇಳು ಕುತಿತು, ಕೂರಿಗೆದಾಳು ಮೇಲೆ ಬಂತು. ನಕ್ಷತ್ರಗಳ ತೀಕ್ಷ್ಣ ಬೆಳಕು ಸಂತೋಷ ಕೊಡಲಿಲ್ಲ. ಹುಡುಗರು ಮರಳಲಿಲ್ಲ. "ಒಂದು ಮಿಲಿಟರಿ ಸಾಹಸವನ್ನು ಮಾಡಲು ಎರಡು ದಾರಿಗಳಿದ್ದರೆ ನಮ್ಮ ಜೀಟಿ ಕಷ್ಟತರವಾದದ್ದನ್ನು ಆರಿಸುವುದರಲ್ಲಿ ನಿಸ್ಸೀಮ" ಎಂದು ನಾರಾಯಣ್‌ಸಿಂಗ್ ಗೇಲಿಮಾಡುತ್ತಿದ್ದದಿತ್ತು. "ಏನಪ್ಪಾ ಈ ಜೀಟಿ ದಾರಿ ಭಯಂಕರವೆನಿಸುತ್ತಿದೆಯಲ್ಲ" ಎಂದರು ಕಳವಳದಿಂದ. ಮಧ್ಯರಾತ್ರಿ ದಾಟಿತು—೧ ಗಂಟೆ ಕಳೆಯಿತು. ಈಗ ನನಗೂ ಗಾಬರಿ ಆಯಿತು. ಅತಿಯನ್ನು ನಾನು ನಿರೀಕ್ಷಿಸಿದೆನೇ ? ಆಫೀಸರರೂ ಜೊತೆಯಲ್ಲಿದ್ದಾರಲ್ಲ. ಮುಂದಿನ ಒಂದೊಂದು ಮಿನಿಟೂ ದುಸ್ಸಹನೀಯವಾಯಿತು. ೧-೩೦ ದಾಟಿತು. ಅವರಿಲ್ಲ. ಏನೋ ಸದ್ದು. ಅವರ ನಡಿಗೆ ಇರಬಹುದೇ ? ಇಲ್ಲ. ಎಲ್ಲೋ ನಾಯಿ ಬಗುಳುವಿಕೆ. ಅವರನ್ನು ಕಂಡು ಬಗುಳಿದ್ದಾಗಿರಬಹುದೇ ? ಯಾರಾದರೂ ಗುಂಡಿಗೆ ಬಿದ್ದರೇ ? ಬಂಡೆ ಏರುವಾಗ ಬಿದ್ದು ಪೆಟ್ಟಾಯಿತೇ ? ಹಾವು ಕಚ್ಚಿರಬಹುದೇ ? ಹೋದವರಿಗೆ ಸಾಹಸಪ್ರಿಯತೆಯ ಗರ ಬಡಿದಿರುತ್ತದೆ. ಹಿಂದೆ ಕುಳಿತು ಕಾದಿರುವ ಶಬರಿಯ ಆಸೆ ಆಕಾಂಕ್ಷೆ ಅಪಧೈರ್ಯ ಆ-ರಾಮರಿಗೆ ಹೇಗೆ ತಿಳಿದಿರಬೇಕು? ೨ ಗಂಟೆಯೂ ಆಯಿತು. ಇನ್ನೇನು...ದೂರದಿಂದ "೧೨ನೇ ಮೈಸೂರಿಗೆ ಜಯವಾಗಲಿ" ಘೋಷಣೆ ನಮ್ಮಲ್ಲಿ ವಿದ್ಯುತ್ಸಂಚಾರ ಉಂಟುಮಾಡಿತು. ಓಡಿ ಬಂದವರಿಬ್ಬರು "ನಾವೇ ತಾನೇ ಫಸ್ಟ್ ?" ಉಳಿದವರೆಲ್ಲರೂ ಅವರ ಹಿಂದೆಯೇ ಬಂದು ಸೇರಿದರು. ೧೨ನೆಯ ಮೈಸೂರು ಗೆದ್ದಿತು. ಆದರೆ ೧೩ನೆಯ ಮೈಸೂರು ? ಇವೆರಡು ತಂಡಗಳು ಎಲ್ಲಿಯೂ ಸಂಧಿಸಿರಲಿಲ್ಲವಂತೆ. ಮತ್ತೆ ಪುನಃ ಅವರ ನಿರೀಕ್ಷೆ. ಬೆಳಗ್ಗಿನ ೪ ಗಂಟೆ ವೇಳೆಗೆ ಅವರು ಸಹ ಸುರಕ್ಷಿತವಾಗಿ ಮರಳಿದಾಗ ಗೆದ್ದ ತಂಡ ೧೨ನೆಯ ಮೈಸೂರು ಅಲ್ಲ, ೧೩ನೆಯ ಮೈಸೂರು ಅಲ್ಲ—ಓಸಿ ಮತ್ತು ನಾನು! ರಾತ್ರಿ ಸ್ಥಳ ಸರಿಯಾಗಿ ಗುರುತಿಸಲಾಗದೇ ಛಲ ಬಿಡಲಾರದೇ ಅಡ್ಡಾದಿಡ್ಡಿ ಅಲೆದು ನಡೆಯಬೇಕಾದುದರ ಎರಡರಷ್ಟು ನಡೆದು ಆದರೂ ಶ್ರಮವೆಂದೆನ್ನಿಸದೇ ಅವರು ಮರಳಿದ್ದರು. ನಾಲ್ಕು ಬಿಂದುಗಳನ್ನು ಗುರುತಿಸಿದ ವಿಜಯಸಂತೋಷ ಅವರಿಗೆ ಆಯಾಸಪರಿಹಾರಕ ಚುಚ್ಚುಮದ್ದು ಆಗಿತ್ತು. ದೊಡ್ಡಬಳ್ಳಾಪುರದ ಕ್ಯಾಂಪು ನನ್ನ ಅತ್ಯುತ್ಕೃಷ್ಟ ಶಿಬಿರಗಳಲ್ಲಿ ಒಂದು.

ತಿರುಗಾ ಮುರುಗಾ ಆದ ಪರಿಸ್ಥಿತಿ

ನವಂಬರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಗಣಿತ ಲೆಕ್ಚರರ್ ಹುದ್ದೆಯ ಆಯ್ಕೆಭೇಟಿ ಮುಗಿಯಿತು. ಅಂದೇ ಸಾಯಂಕಾಲ ನನಗೆ ತಿಳಿದ ಸುದ್ದಿ ಜೀವನದ ಕೆಲವು ಮೌಲ್ಯಗಳನ್ನು ಕುರಿತು ಮೂಲಭೂತ ಪ್ರಶ್ನೆಗಳನ್ನು ನನ್ನೆದುರು ಒಡ್ಡಿತು. ಕುಲಪತಿಗಳು, ರಿಜಿಸ್ಟ್ರಾರರು ಮತ್ತು ಹೊರಗಿನಿಂದ ಬಂದಿದ್ದ ಇಬ್ಬರು ತಜ್ಞರಲ್ಲಿ ಒಬ್ಬರು ಮುಕ್ತಕಂಠದಿಂದ ನನ್ನ ಗಣಿತ ಕಾರ್ಯವನ್ನು (ನಾನು ಅರ್ಜಿಸಲ್ಲಿಸಿದ್ದು ಅತಿ ಕೆಳಗಿನ ಹುದ್ದೆ ಲೆಕ್ಚರರ್ ಕೆಲಸಕ್ಕೆ) ಮೆಚ್ಚಿ ನನ್ನನ್ನು ಆರಿಸಬೇಕೆಂದು ಸೂಚನೆ ಮಾಡಿದರೂ ವಿಶ್ವವಿದ್ಯಾಲಯದ ಗಣಿತ ವಿಭಾಗದ ಮುಖ್ಯಸ್ಥರು ಹಾಗೆ ಭಾವಿಸಲಿಲ್ಲವಂತೆ. ಬೇರೆ ಒಬ್ಬ ಅಭ್ಯರ್ಥಿಯನ್ನು ಆರಿಸಬೇಕೆಂದು ಹಠ ಸಾಧಿಸಿಯೇ ಬಿಟ್ಟಿದ್ದರಂತೆ. ನಮ್ಮ ಗಣಿತ ಪಠ್ಯ ಪುಸ್ತಕದ ಕೆಲಸದ ನಿಮಿತ್ತ ನಾನು ಅದೇ ಪ್ರಾಧ್ಯಾಪಕರನ್ನು—ಏನೂ ಗೊತ್ತಿಲ್ಲದವನಂತೆ—ನೋಡಲು ಎಂದಿನಂತೆ ಅಂದು ಸಾಯಂಕಾಲವೂ ಹೋದೆ. ಅವರೇ ಪ್ರಾರಂಭಿಸಿದರು "ನೀವು ಬೇಸರ ಮಾಡಬಾರದು. ಈ ಸಣ್ಣ ಕೆಲಸ ನಿಮ್ಮ ಹಿರಿ ಯೋಗ್ಯತೆಗೆ ಹೇಳಿದ್ದಲ್ಲ. ನೀವು ನಮ್ಮಲ್ಲಿ ಪ್ರಾರಂಭವಾಗಲಿರುವ ಪ್ರಸಾರಾಂಗದ ನಿರ್ದೇಶಕರಾಗಿ ರೀಡರರ ಹಿರಿ ಸಂಬಳ ಮಟ್ಟದಲ್ಲಿ ಬರಬೇಕೆಂದು ನನ್ನ ಆಸೆ. ಆದ್ದರಿಂದ ನಾನು ಬೇರೆಯವರನ್ನು ಶಿಫಾರಸು ಮಾಡಬೇಕಾಯಿತು."

"ನನ್ನ ಭವಿಷ್ಯ ಏನು ಎಂದು ನಿರ್ಧರಿಸುವಾತ ಖುದ್ದು ನಾನೇ, ಬೇರೆಯವರಲ್ಲ. ನನಗೆ ಬೌದ್ಧಿಕರಂಗದ ವಿನಾ ಬೇರೆ ಯಾವ ರಂಗವೂ ಅದೆಷ್ಟೇ ಅಧಿಕಾರ ಆರ್ಥಿಕ ಸವಲತ್ತುದವಲತ್ತು ಒದಗಿಸಿದರೂ ಬೇಡವೆಂಬುದು ನನ್ನ ಅಚಲ ನಿರ್ಧಾರ. ಅಂಥ ಎಲ್ಲ ತಮಾಷೆಗಳನ್ನೂ ಈ ಮೊದಲೇ ನೋಡಿ ಅವುಗಳಲ್ಲಿರುವ ಜಳ್ಳನ್ನು ಅರಿತಿದ್ದೇನೆ."

"ಹಾಗೆನ್ನಬಾರದು. ಪ್ರಸಾರಾಂಗ ಹೊಸತಾಗಿ ಬರುವ ಸಂಸ್ಥೆ. ನಿಮಗಿಲ್ಲಿ ಒಳ್ಳೆಯ ಭವಿಷ್ಯವಿದೆ. ನಿಮ್ಮಂಥ ಕೆಲಸಗಾರರು ದೊರೆಯುವುದು ವಿರಳ."

"ನನಗೆ ಅರ್ಜಿ ಸಲ್ಲಿಸುವ ಕಲ್ಪನೆಯೂ ಇಲ್ಲದಿದ್ದಾಗ ಅದನ್ನು ಸಲ್ಲಿಸಬೇಕೆನ್ನುವ ಸೂಚನೆ ಈ ಕಡೆಯಿಂದ ಬಂತು. ನಾನು ಅರ್ಜಿ ಹಾಕಿದ್ದು ಅತಿ ಕನಿಷ್ಠ ಹುದ್ದೆಗೆ. ಈಗ ಅದೇ ಸಿಕ್ಕದಿದ್ದ ಮೇಲೆ ಮುಂದೆ ಎಂದೋ ಯಾವುದೋ ದೊರೆತೀತೆಂಬ ಹಂಬಲ ನನಗೆ ಇಲ್ಲ. ಆದರೆ ಒಂದು ವಿಚಾರದಲ್ಲಿ ವ್ಯಥೆ ಇದೆ: ನನ್ನನ್ನು ಪರಿಚಯವಿಲ್ಲದ ಮೈಸೂರು ವಿಶ್ವವಿದ್ಯಾನಿಲಯ ಅಲ್ಲಿಗೆ ಬರಲು ನನಗೆ ಆಹ್ವಾನ ನೀಡಿತು; ಅದಕ್ಕೆ ಬರುವುದಿಲ್ಲದಿಲ್ಲವೆಂದು ನಾನು ಬರೆದೆ. ನನ್ನನ್ನು ಬಲು ಚೆನ್ನಾಗಿ ತಿಳಿದಿರುವ ಈ ವಿಶ್ವವಿದ್ಯಾಲಯಕ್ಕೆ ವಿಶ್ವವಿದ್ಯಾಲಯದ ಸೂಚನೆ ಮೇರೆಗೆ ನಾನು ಅರ್ಜಿ ಸಲ್ಲಿಸಿದಾಗಲೂ ಇದಕ್ಕೆ ನಾನು ಬೇಕಾಗಲಿಲ್ಲ."

ರಾತ್ರಿ ದೇಜಗೌರಿಗೆ ಕಾಗದ ಬರೆದೆ—ಬೆಂಗಳೂರಿನ ನೈತಿಕ ಹೊಣೆಗಾರಿಕೆ ನನಗೆ ಮುಗಿದಿದೆ; ಹಿಂದಿನ ಆಹ್ವಾನ ಇಂದೂ ಸಿಂಧುವಾಗಿದ್ದರೆ ನಾನು ಬರಲು ಸಿದ್ಧನಿದ್ದೇನೆ; ಇದು ಈಗಾಗಲೇ ಆ ಕೆಲಸಕ್ಕೆ ತೆಗೆದುಕೊಂಡಿರುವ ಬೇರೆಯವರನ್ನು (ಇದ್ದರೆ) ಮನೆಗೆ ಕಳಿಸುವ ಸಂದರ್ಭ ಕಲ್ಪಿಸುವುದಾದರೆ ನನ್ನ ವಿಷಯ ಮರೆತುಬಿಡಬೇಕು; ಇನ್ನೊಬ್ಬರಿಗೆ

ತೊಂದರೆ ಮಾಡಿ ನಾನು ಬರಲಾರೆ ನನಗೆ ಖಾಯಂ ಹುದ್ದೆಯೊಂದು ಹೇಗೂ ಇದೆ—ಎಂಬುದು ಆದರ ಸಾರಾಂಶ.

ಮರುದಿವಸದ ಸಂಜೆ. ನಾನು ಮನೆಗೆ ನಡೆದು ಬರುತ್ತಿದ್ದೆ. ಆಟೋರಿಕ್ಷ ನನ್ನ ಪಕ್ಕದಲ್ಲಿಯೇ ನಿಂತಿತು—ಹರಿದಾಸಭಟ್ಟರು! ನಾನೂ ಅದರಲ್ಲಿ ಕುಳಿತೆ. ಮನೆಗೆ ಹೋದೆವು. ನನ್ನ ಕಾಗದ ತಲಪಿದಾಗ ಅವರು ಮೈಸೂರಿನಲ್ಲಿದ್ದರಂತೆ. ದೇಜಗೌ ಬಲು ಸಂತೋಷದಿಂದ ನಲಿದರಂತೆ. ''ಇದರ ಪೂರ್ಣ ವಿವರ ತಿಳಿದು ನನಗೆ ಬರೆಯಿರಿ'' ಎಂದು ಹರಿದಾಸ ಭಟ್ಟರನ್ನೇ ಸ್ನೇಹ ಸಂದೇಶವಾಹಕರಾಗಿ ಕಳಿಸಿದ್ದರು. ವಿಜ್ಞಾನ ಸಂಪಾದಕತ್ವಕ್ಕೆ ಸರಿಯಾದ ವ್ಯಕ್ತಿ ಅವರಿಗೆ ಅಲ್ಲಿವರೆಗೂ ಯಾರೂ ದೊರೆತಿರಲಿಲ್ಲ.

ಅಹ್ಹ! ಬಲ್ಲೆ ನಿಮ್ಮ ಮನವ : ಹಳೆಯ ವರುಷದಳಲ ನಲಿವ-
ನಿಂದು ನೆನೆದುಕೊಳ್ಳಿರಯ್ಯ. ಮುಂದೆ ನೋಡಿ ಇರುಳ ಕಂಡು
ಬೆಳಕನರಸಿ ದುಗುಡಗೊಂಡು ಅಳಲಿ ಬೆದರಿ ಸುಯ್ದಿರಯ್ಯ
ಬೆದರಲೇಕೆ ? ಸುಯ್ಯಲೇಕೆ ?
ಭುಜವತಟ್ಟಿ ನಿಲ್ಲಿರಯ್ಯ ನಮ್ಮ ಹಕ್ಕು ಹರುಷವಯ್ಯ
ಹೋದುದೆಲ್ಲ ಹೋದುದೈ ಹೊಸದು ಬಾಳು ನಮ್ಮದೈ
ಇಂದು ಯುಗಾದಿಯು ನಮ್ಮ ಒಸಗೆಯಾದಿಯು

ಪುತಿನ

೧೯೬೯

"ನನಗಂತೂ ನಿಮ್ಮ ಮೇಲೆ ತುಂಬ ವಿಶ್ವಾಸವಿದೆ"

ಮೈಸೂರು ವಿಶ್ವವಿದ್ಯಾನಿಲಯ ಸರಕಾರಕ್ಕೆ ನನ್ನ ಸೇವೆಯನ್ನು ಎರವಲಾಗಿ ಪಡೆಯಲು ಪ್ರಾರ್ಥನೆ ಸಲ್ಲಿಸಿತು. ಸರಕಾರ ನನ್ನನ್ನು ಔಪಚಾರಿಕವಾಗಿ ಪ್ರಶ್ನಿಸಿದಾಗ ನಾನು ಒಪ್ಪಿಗೆ ನೀಡಿದೆ. ಆದರೆ ಮಾರ್ಚ್ ೧೯೬೯ರ ಅನಂತರ ಬಿಡುಗಡೆ ಮಾಡಬೇಕಾಗಿ ಬೇಡಿಕೊಂಡೆ. ಹುಡುಗರಿಗೆ ನನ್ನ ಹೊಣೆ ಇದೆಯಷ್ಟೆ.

"ನಿಮ್ಮ ಈ ನಿರ್ಧಾರದಲ್ಲಿ ಏನೂ ಬದಲಾಗದಷ್ಟೆ?" ಮುಂದಿನ ಪಾರೆ ಬಂದಿದ್ದ ದೇಜಗೌ ಪ್ರಶ್ನಿಸಿದರು.

"ನಾವು ಮಾತ್ರ ಅದನ್ನು ಬದಲಿಸಬಲ್ಲೆವು. ಬೇರೆ ಯಾವ ವಿಧವಾದ ಆಮಿಷ ದಿಂದಲೂ ನಾನು ಬದಲಾಗಲಾರೆ. ಆದರೆ ಇಂದಿಗೂ ನನಗೆ ಸಂದೇಹವೇ ಇದೆ—ಆ ಕೆಲಸ ನನ್ನಿಂದ ಆದೀತೇ ಎಂದು."

"ಕನ್ನಡದ ಕೆಲಸ ಆಗಿಯೇ ಆಗುತ್ತದೆ. ನನಗಂತೂ ನಿಮ್ಮ ಮೇಲೆ ತುಂಬ ವಿಶ್ವಾಸ ವಿದೆ."

ನಾನು ಮೈಸೂರಿಗೆ ಹೋಗುವುದು ಖಚಿತವೆಂಬುದು ತಿಳಿದೊಡನೆಯೇ ನನಗೆ ಹೊಸ ಆಸೆಗಳನ್ನು ಬಲ್ಲ ವಲಯಗಳು ಹುಟ್ಟಿಸಲು ಯತ್ನಿಸಿದುವು—ಸಂಬಳ, ಅಧಿಕಾರ, ಆಮಂತ್ರಣ ಮುಂತಾದವು. ಇನ್ನು ಕೆಲವು ಮಿತ್ರರು ಮೈಸೂರಿನ ವಿಚಾರ ಕಪ್ಪು ಚಿತ್ರ ಗಳನ್ನು ಬರೆದರು. ಅವರ ಸದ್ಭಾವನೆ ಸದುದ್ದೇಶಗಳಿಗೆ ನಾನು ಕೃತಜ್ಞತೆ ಅರ್ಪಿಸಿ "ನನ್ನನ್ನು ನಿಮ್ಮ ಲೆಕ್ಕ ಪುಸ್ತಕದಿಂದ ಅಳಿಸಿಹಾಕಿಬಿಡಿ. ಮೂಲತಃ ನಾನು ಸರಿಯಾದವ ನಾಗಿದ್ದರೆ ಕೆಲಸಗಾರನಾಗಿದ್ದರೆ ಎಲ್ಲಿಯೂ ಬಾಳಬಲ್ಲೆ" ಎಂದು ಮಾತು ಮುಗಿಸಿದೆ.

ಪ್ರಿನ್ಸಿಪಾಲ್ ಉಮರ್ಜಿಯವರು ೧೯೬೯ರ ತರುಣದಲ್ಲಿ ಸರಕಾರೀ ನೌಕರಿಯಿಂದ ನಿವೃತ್ತಿ ಪಡೆದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಖ್ಯಾಕಲನಶಾಸ್ತ್ರದ ಪ್ರಥಮ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿ (ರಸ್ತೆಯನ್ನು ದಾಟಿ) ನಿರ್ಗಮಿಸಿದರು. ಅವರನ್ನು ಬೀಳ್ಕೊಡಲು ನಾವು ನಡೆಸಿದ ಎನ್‌ಸಿಸಿ ಉತ್ಸವ ಕವಾಯತಿ ಒಂದು ಅಪೂರ್ವ ದೃಶ್ಯ. ಈ ಮಾಂತ್ರಿಕ ನಮ್ಮನ್ನು ಬಿಟ್ಟು ಹೋದಾಗ ನಮಗೆಲ್ಲರಿಗೂ ಆದ ವೇದನೆ ಅಷ್ಟಿಷ್ಟಲ್ಲ. ಲೋಕದಲ್ಲಿ ವಿಶ್ವಾಸ ಬಾಂಧವ್ಯ ಬೆಳಸಿಕೊಳ್ಳುವುದೇ ತಪ್ಪೋ ಏನೋ ಎಂಬಂಥ ಭಾವ ಇಂಥ ಸಂದರ್ಭಗಳಲ್ಲಿ ಮೂಡುತ್ತದೆ.

ಅವರ ಹಿಂದೆ ಮೇಜರ್ ನಾರಾಯಣ್‌ಸಿಂಗರ ನಿವೃತ್ತಿ ಆದೇಶ ಬಂದೇ ಬಂತು. ಅವರಿಗೆ ೧೨ನೆಯ ಮೈಸೂರು ನೀಡಿದ ಗೌರವ ಬೀಳ್ಕೊಡುಗೆ ಅತ್ಯಂತ ಆತ್ಮೀಯವೂ ಭವ್ಯವೂ ಆಗಿತ್ತು. ಆ ಸಂದರ್ಭದಲ್ಲಿ ನಾವು 12 Mysore Bids Farewell To Major M. R. Narayan Singh ಎಂಬ ಸಂಭಾವನ ಗ್ರಂಥವನ್ನೇ ಮುದ್ರಿಸಿ ಪ್ರಕಟಿಸಿದೆವು.

ನಮ್ಮ ಕವಿಮಿತ್ರ ಮತ್ತು ಎನ್‌ಸಿಸಿ ಆಫೀಸರ್ ಶಿವಪ್ಪನವರ ಮಾತಿನಲ್ಲಿ ನಾರಾಯಣ್ ಸಿಂಗರು "ಇಟ್ಟ ಒಂದೊಂದು ಹೆಜ್ಜೆಗಳೂ ಸಿಂಹದ ಗುರುತುಗಳು."

೧೭ ಜೂನ್ ೧೯೬೯. ನಾನು ಸರಕಾರೀ ಕಾಲೇಜಿನಿಂದ ಬಿಡುಗಡೆ ಪಡೆದೆ. ಉಮರ್ಜಿರಹಿತ ಕಾಲೇಜಿನಲ್ಲಿ ನನಗೆ ಇರುವುದು ಹಿತವಾಗಲಿಲ್ಲ. ೧೨ನೆಯ ಮೈಸೂರಿನಿಂದಲೂ ಎನ್‌ಸಿಸಿಯಿಂದಲೂ ಕೊಂಡಿ ಕಳಚಿಕೊಂಡೆ. ಜ್ಞಾನ ಕಂದುರೆಮುಖ ಏರಲು (ಇದರ ಔನ್ನತ್ಯದ ಮಿತಿ ನನ್ನ ಸಾಮರ್ಥ್ಯದ ಮಿತಿಯಿಂದ ಮಾತ್ರ ನಿರ್ಧರಿತವಾಗಬೇಕೇ ವಿನಾ ಅದಕ್ಕೆ ಸಹಜವಾಗಿ ಇರಬಹುದಾದ ಮಿತಿಯಿಂದ ಅಲ್ಲ) ಮೈಸೂರಿಗೆ ಸಾಗಿದೆ. ಮಡಿಕೇರಿಯಿಂದ ಮಾನಸಗಂಗೋತ್ರಿಗೆ ಒಳದಾರಿ ಖಂಡಿತ ಇಲ್ಲ. ನನ್ನನ್ನು ಮಾನಸ ಗಂಗೋತ್ರಿ ಆರೋಹಣ ಸಾಹಸಕ್ಕೆ ಆಕರ್ಷಿಸಿದ ಮತ್ತು ಅಲ್ಲಿಯ ಕೆಲಸದಲ್ಲಿ ಪ್ರೇರಿಸಿದ ಮಂತ್ರ "ನನಗಂತೂ ನಿಮ್ಮ ಮೇಲೆ ತುಂಬ ವಿಶ್ವಾಸವಿದೆ."

ನೀರಜಜಾತ ವಿಸ್ತರಿಸಿದಂಡಮುಮಂ ಮಣಿಮಾಲೆಯಾಗಿ ಬಿ
ಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಸರಣ್ಬುಗುವರ್ಗೆ ಲೇಸುಮಂ
ಪ್ರೇರಿಸಲೋಸುಗಂ ಜಳಸುತಿರ್ಪಳಿರುಳ್ ಪಗಲಾವಳೋರ್ವಳಾ
ಭಾರತಿ ನಮ್ಮ ಜಿಹ್ವೆಯೊಳನಾವಿಳದಿಂದಿರುತಿರ್ಕೆ ಸಂತತಂ

ಶಾಸನ ಪದ್ಯ

ಫಲಶ್ರುತಿ

ನನ್ನ ಜೀವನದ ಅತ್ಯಂತ ಫಲವಂತ ಘಟ್ಟದಲ್ಲಿ (೨೬) ರಾಷ್ಟ್ರೀಯ ಸಂಸ್ಥೆಯಾದ ಎನ್‌ಸಿಸಿಯನ್ನು ನಾನು ಪ್ರವೇಶಿಸಿದೆ. ನಿಖರವಾಗಿ ಹೇಳುವುದಾದರೆ ನಾನು ಅದಕ್ಕೆ ತಳ್ಳಲ್ಪಟ್ಟೆ. ಮುಂದಿನ ಹದಿನೇಳು ವರ್ಷಗಳ ಕಾಲ (೧೮೫೨–೧೯೬೯) ಎನ್‌ಸಿಸಿಯ ವಿವಿಧ ಸ್ತರಗಳಲ್ಲಿ ವಿಹರಿಸುವ ಮತ್ತು ಹಲವಾರು ಬಗೆಯ ಪ್ರಯೋಗಗಳಲ್ಲಿ ಭಾಗ ವಹಿಸುವ ಸಂತೋಷ ನನ್ನದಾಗಿತ್ತು. ಸದಾ ಸಂತೋಷವೇ ಇತ್ತೆಂದಲ್ಲ. ಮನಸ್ಸಾಕ್ಷಿಗೂ ಎನ್‌ಸಿಸಿಗೂ ನಡುವೆ ಸಾಮರಸ್ಯ ಒದಗದಿದ್ದಾಗಲೆಲ್ಲ ನಾನು ಎನ್‌ಸಿಸಿಯಿಂದ ವಿಮೋಚನೆ ಪಡೆಯಲು ಪ್ರಯತ್ನಿಸಿದ್ದೇನೆ. ಆದರೆ ಒಂದೊಂದು ಸಲವೂ—ಎನ್‌ಸಿಸಿಯಿಂದ ದೂರ ವಾಗಿ ನಿಂತಿರುವ ನನಗೆ ಇಂದು (೧೯೭೨) ಸಹ ಕಾಣುವಂತೆ—ನಾನು ಎನ್‌ಸಿಸಿಯ ಅಧಿಕ ವಿಶ್ವಾಸದ ಆಲಿಂಗನದಿಂದ ಬಂಧಿತನಾಗಿ ಅದಕ್ಕೆ ಇನ್ನಷ್ಟು ಸಮೀಪವರ್ತಿ ಆಗಿದ್ದೇನೆ. ಇದು ಹೇಗೂ ಇರಲಿ, ಎನ್‌ಸಿಸಿ ಸಂಬಂಧದಿಂದ ನನಗೆ ಅಪಾರ ಲಾಭವಾಗಿದೆ—ಆತ್ಮವಿಶ್ವಾಸವರ್ಧನೆ, ಸುಪ್ತ ಸಾಮರ್ಥ್ಯದ (ಅದರಂತೆ ದೌರ್ಬಲ್ಯದ ಕೂಡ) ಅರಿವು, ಕೆಲಸ ಯಾವುದೇ ಇರಲಿ ಅದನ್ನು ಕ್ರಮಬದ್ಧವಾಗಿ ನಿಷ್ಠೆಯಿಂದ ನಿರ್ವಹಿಸುವ ಪ್ರಯತ್ನ ಮಾಡಬೇಕೆನ್ನುವ ಪ್ರವೃತ್ತಿ, ವ್ಯಾವಹಾರಿಕ ನೀತಿ ನಿಯಮಗಳ ಪರಿಚಯ, ಜನ ದೇಶ ಸಂಪರ್ಕ, ಇತ್ಯಾದಿ.

೨

ಸ್ವತಂತ್ರ ಭಾರತದ ಸಂಸತ್ತು ಮಂಜೂರಿಸಿದ ಮೊದಲ ಕೆಲವು ರಾಷ್ಟ್ರನಿರ್ಮಾಪಕ ಕಾಯ್ದೆಗಳಲ್ಲಿ ೧೯೪೮ರ ನ್ಯಾಷನಲ್ ಕ್ಯಾಡೆಟ್ ಕೋರ್ ಕಾಯ್ದೆಯೂ ಒಂದು. ಇದರ ಪ್ರಕಾರ ರಾಷ್ಟ್ರದ ಯುವಕ ಯುವತಿಯರಿಗೆ ವಿದ್ಯಾಬೋಧನೆಯೊಂದಿಗೆ ಐಚ್ಛಿಕವಾಗಿ ಮಿಲಿಟರಿ ಶಿಕ್ಷಣವನ್ನು ಸಹ ಒದಗಿಸಬೇಕೆಂದಿದೆ. ಎನ್‌ಸಿಸಿಯ ಧ್ಯೇಯಗಳಿವು :

೧ ಶೀಲ. ಸಹವಾಸಿತ್ವ, ಧುರೀಣತ್ವದ ಹೊಣೆ ಮತ್ತು ಸೇವಾದರ್ಶ ಈ ಗುಣಗಳನ್ನು ಯುವಕ ಯುವತಿಯರಲ್ಲಿ ಸಂವರ್ಧಿಸುವುದು.

೨ ಮಿಲಿಟರಿ ಶಿಕ್ಷಣವನ್ನು ಯುವಕ ಯುವತಿಯರಿಗೆ ನೀಡುವುದರ ಮೂಲಕ ಅವರಲ್ಲಿ ರಾಷ್ಟ್ರರಕ್ಷಣೆ ಕುರಿತು ಆಸ್ಥೆಯನ್ನು ವರ್ಧಿಸುವುದು.

೩ ರಾಷ್ಟ್ರೀಯ ಗಂಡಾಂತರ ಪರಿಸ್ಥಿತಿಯಲ್ಲಿ ರಕ್ಷಣಾಬಲಗಳನ್ನು ಕ್ಷಿಪ್ರವಾಗಿ ವಿಸ್ತರಿಸಲು ಅನುಕೂಲವಾಗುವಂತೆ ನುರಿತ ಜನಬಲವನ್ನು ಸಿದ್ಧಪಡಿಸುವುದು.

ಇವನ್ನು ಕಾರ್ಯರೂಪಕ್ಕೆ ಇಳಿಸುವ ಬೃಹದ್ವ್ಯವಸ್ಥೆ ಭಾರತ ಸರಕಾರದ ರಕ್ಷಣಾ ಇಲಾಖೆಯ ಅಂಗವಾಗಿರುವ ನ್ಯಾಷನಲ್ ಕ್ಯಾಡೆಟ್ ಕೋರ್ ಡೈರೆಕ್ಟೊರೇಟ್ ಜನರಲ್ ಎಂಬ ಸಂಸ್ಥೆ. ಇದರ ಶಾಖೋಪಶಾಖೆಗಳಾಗಿ ರಾಷ್ಟ್ರಾದ್ಯಂತ. ಸರಿಸುಮಾರಾಗಿ ಸಮಸ್ತ ವಿದ್ಯಾಮಂದಿರಗಳಲ್ಲೂ ಇಂದು, ಎನ್‌ಸಿಸಿ ವ್ಯಾಪಿಸಿದೆ.

ಎನ್‌ಸಿಸಿ ಶಿಕ್ಷಣ ವ್ಯವಸ್ಥೆಯಲ್ಲಿ ಮುಖ್ಯವಾಗಿ ಮೂರು ಘಟಕಗಳಿವೆ :

೧ ಶಿಕ್ಷಣಕ್ಕೆ ಒಳಪಡುವ ವಿದ್ಯಾರ್ಥಿಗಳು. ಇವರಿಗೆ ಕ್ಯಾಡೆಟುಗಳೆಂದು ಹೆಸರು.

೨ ಇವರ ಮೇಲುಸ್ತುವಾರಿಕೆ ನೋಡಿಕೊಳ್ಳಲು, ವಿದ್ಯಾಮಂದಿರದಿಂದ ಆಯ್ದು ಮಿಲಿಟೆರಿ ಶಿಕ್ಷಣ ಕೊಡಲ್ಪಟ್ಟ, ಕೆಲವರು ಅಧ್ಯಾಪಕರು. ಇವರಿಗೆ ಎನ್‌ಸಿಸಿ ಆಫೀಸರು ಗಳೆಂದು ಹೆಸರು.

೩ ಎನ್‌ಸಿಸಿ ಶಿಕ್ಷಣದ ಸಮಸ್ತ ಆಡಳಿತೆಯನ್ನೂ ಕೇಂದ್ರ ಕಛೇರಿಯ ಆದೇಶಾನು ಸಾರ ನಿರ್ವಹಿಸುವ ಮಿಲಿಟೆರಿ ಅಧಿಕಾರಿ. ಈತನಿಗೆ ಆಫೀಸರ್ ಕಮಾಂಡಿಂಗ್ (ಓಸಿ) ಎಂದು ಹೆಸರು. ಈತನ ಅಧೀನದಲ್ಲಿ ಎನ್‌ಸಿಸಿ ಬೆಟಾಲಿಯನ್ ಎಂಬ ಹೆಸರಿನ ಒಂದು ದೊಡ್ಡ ಆಡಳಿತ ವ್ಯವಸ್ಥೆ ಉಂಟು. ಇದರ ಅಂಗವಾಗಿ ಸೇನಾಬಲಗಳಿಂದ ಎರವಲಾಗಿ ಬಂದಿರುವ ಶಿಕ್ಷಕ ಸಮೂಹ, ಕಛೇರಿ ಆಡಳಿತ ನಡೆಸಲು ಸಹಾಯಕವಾದ ಸಿಬ್ಬಂದಿವರ್ಗ ಶಿಕ್ಷಣ ಸಾಮಗ್ರಿಗಳು, ಇತ್ಯಾದಿ ಇವೆ.

ಹೀಗೆ ಎನ್‌ಸಿಸಿ ಎಂಬುದೊಂದು ತ್ರಿವಳಿಸಂಧಿ ಬಿಂದು: ಅಲ್ಲಿ ಮಿಲಿಟೆರಿ–ಅಧ್ಯಾಪಕ-ವಿದ್ಯಾರ್ಥಿ ಸಂಗಮವಾಗುತ್ತದೆ ; ಅದು ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸದೊಂದಿಗೆ ಸಮರ್ಥ ಮಿಲಿಟೆರಿ ಶಿಕ್ಷಣವನ್ನು ಒದಗಿಸುವ ಉದ್ದೇಶ ಹೊಂದಿದೆ ಎಂದು ಸಂಕ್ಷೇಪ ವಾಗಿ ಹೇಳಬಹುದು.

೩

ಸ್ಥೂಲವಾಗಿ ಹೇಳುವುದಾದರೆ ಎನ್‌ಸಿಸಿ ವ್ಯವಸ್ಥೆ ಮಿಲಿಟೆರಿ ವ್ಯವಸ್ಥೆಯ ಪಡಿಯಚ್ಚು. ಮಿಲಿಟೆರಿಯಲ್ಲಿ ಮೂರು ವಿಭಾಗಗಳಿವೆ—ನೆಲ, ಜಲ, ವಾಯು. ಎನ್‌ಸಿಸಿಯಲ್ಲೂ ಈ ಮೂರು ವಿಭಾಗಗಳಿವೆ. ಒಂದೊಂದು ವಿಭಾಗದ ಉದ್ದೇಶ, ಶಿಕ್ಷಣ ಕ್ರಮ ಸಂಪ್ರದಾಯ ಒಂದೊಂದು. ಎನ್‌ಸಿಸಿಯಲ್ಲೂ ಹಾಗೆಯೇ. ಆದ್ದರಿಂದ ಎನ್‌ಸಿಸಿಯ ಆಯಾ ವಿಭಾಗಕ್ಕೆ ಮಿಲಿಟೆರಿಯ ಅನುರೂಪ ವಿಭಾಗದಿಂದಲೇ ಆಫೀಸರರೂ ಶಿಕ್ಷಕರೂ (ಅದೇ ರೀತಿ ಶಿಕ್ಷಣ ಸಾಮಗ್ರಿಗಳೂ) ಬರಬೇಕಾಗುತ್ತದೆ. ಉದಾಹರಣೆಗೆ ಎನ್‌ಸಿಸಿಯ ವಾಯುವಿಭಾಗ ಸಂಪೂರ್ಣವಾಗಿ ಮಿಲಿಟೆರಿಯ ವಾಯುವಿಭಾಗವನ್ನು ಅವಲಂಬಿಸಿ ಕೊಂಡಿದೆ. ಎನ್‌ಸಿಸಿಯ ಈ ಭಿನ್ನ ವಿಭಾಗಗಳನ್ನು ಕ್ರೋಡೀಕರಿಸಿ ಆಡಳಿತೆಯಲ್ಲಿ ಏಕತೆ ತರಲು ಒಂದೊಂದು ರಾಜ್ಯಮಟ್ಟದಲ್ಲೂ ಒಂದೊಂದು ಎನ್‌ಸಿಸಿ ಡೈರೆಕ್ಟೊರೇಟು ಇದೆ. ಇಂಥ ಹಲವಾರು ರಾಜ್ಯ ಡೈರೆಕ್ಟೊರೇಟುಗಳ ಮೇಲುಸ್ತುವಾರಿ, ಈ ಹಿಂದೆ ಹೇಳಿದಂತೆ, ರಕ್ಷಣಾ ಇಲಾಖೆಯ ಅಂಗವಾಗಿರುವ ಎನ್‌ಸಿಸಿ ಡೈರೆಕ್ಟೊರೇಟ್ ಜನರಲ್ ನದು.

ಎನ್‌ಸಿಸಿ ಆಫೀಸರುಗಳ ಆಯ್ಕೆಯ ವಿಧಾನ ಎನ್‌ಸಿಸಿ ಕಾಯ್ದೆಯಲ್ಲಿ ನಿರೂಪಿತ ವಾಗಿದೆ. ಆಯ್ದ ಅಧ್ಯಾಪಕರನ್ನು, ಮೊದಲಿಗೆ ಮಿಲಿಟೆರಿ ಶಿಕ್ಷಣ ಕೇಂದ್ರಗಳಲ್ಲಿಯೂ ಈಚೆಗೆ ಎನ್‌ಸಿಸಿ ಆಫೀಸರರ ಶಿಕ್ಷಣಕ್ಕಾಗಿಯೇ ತೆರೆದಿರುವ ಹಲವಾರು ಶಿಕ್ಷಣ ಕೇಂದ್ರ ಗಳಲ್ಲಿಯೂ, ಆಯಾ ವಿಭಾಗದ ಶಿಕ್ಷಣ ಕ್ರಮದಲ್ಲಿ ತರಬೇತು ಮಾಡಿ ಅವರಿಗೆ ಎನ್‌ಸಿಸಿ ಕಮಿಷನ್ನನ್ನು ನೀಡಿ ಅವರವರ ವಿದ್ಯಾಮಂದಿರಗಳಿಗೆ ಕಳಿಸಲಾಗುವುದು. ಇವರು, ಇತ್ತ

ತಮ್ಮ ವಿದ್ಯಾಮಂದಿರದ ಅಧಿಕಾರಿಗಳೂ ಹೌದು, ಅತ್ತ ಎನ್‌ಸಿಸಿ ಬೆಟಾಲಿಯನ್ನಿನ ಕಮಾಂಡರರ (ಓಸಿ) ಅನುಯಾಯಿಗಳೂ ಹೌದು. ಇವೆರಡೂ ಸಂಸ್ಥೆಗಳ ನಡುವೆ ಸಮರ್ಪಕ ಸಂಪರ್ಕ ಏರ್ಪಡಿಸಿ ವಿದ್ಯಾರ್ಥಿಗಳ ವಿದ್ಯಾವ್ಯಾಸಂಗಕ್ಕೆ ತೊಂದರೆ ಆಗದಂತೆ ಎನ್‌ಸಿಸಿ ಶಿಕ್ಷಣವನ್ನು ಸಮರ್ಥವಾಗಿ ನಿರ್ವಹಿಸುವುದು ಇವರ ಹೊಣೆ. ಇದಕ್ಕಾಗಿ ಇವರಿಗೆ ಆರ್ಥಿಕ ಸಂಭಾವನೆಯೂ ಸೇರಿದಂತೆ ಹಲವಾರು ಸೌಲಭ್ಯಗಳಿವೆ.

ಎನ್‌ಸಿಸಿ ಶಿಕ್ಷಣದ ಖರ್ಚಿನ ಸಮಸ್ತ ಹೊಣೆಯೂ ಸರಕಾರದ್ದು. ಖರ್ಚಿನ ಮುಖ್ಯ ಶೀರ್ಷಿಕೆಗಳು ಈ ಕೆಳಗಿನಂತಿವೆ :

೧ ಕ್ಯಾಡೆಟುಗಳ ಸಮವಸ್ತ್ರ, ಉಪಾಹಾರ, ಸಾರಿಗೆ, ಸಂಪರ್ಕ ಇತ್ಯಾದಿ.

೨ ಎನ್‌ಸಿಸಿ ಆಫೀಸರರ ಗೌರವಧನ, ಸಾರಿಗೆ, ಸಂಪರ್ಕ ಇತ್ಯಾದಿ.

೩ ಬೆಟಾಲಿಯನ್ ಕಛೇರಿಯ ವೆಚ್ಚ, ಮಿಲಿಟರಿ ಅಧಿಕಾರಿಗಳ ವೇತನ, ಭತ್ಯ, ಇತರ ಸೇವೆಗಳ ಖರ್ಚು ಇತ್ಯಾದಿ.

೪ ವಾಹನಗಳು. ಶಿಕ್ಷಣ ಸಾಮಗ್ರಿಗಳು ಮುಂತಾದವುಗಳ ಮೇಲಾಗುವ ಖರ್ಚು.

೫ ಶಿಬಿರಗಳ ಮೇಲಾಗುವ ಖರ್ಚು.

ಇವೆಲ್ಲ ಖರ್ಚುಗಳ ಅಂತಿಮೋದ್ದೇಶ ಕ್ಯಾಡೆಟುಗಳ ಶಿಕ್ಷಣ ಮತ್ತು ತನ್ಮೂಲಕ ಎನ್‌ಸಿಸಿ ಧ್ಯೇಯಗಳ ಸಿದ್ಧಿ.

೧೯೬೯ ಮಾರ್ಚ್ ೩೧ರಂದು ನಮ್ಮ ದೇಶದಲ್ಲಿ ೧೫,೮೦,೬೩೦ ಎನ್‌ಸಿಸಿ ಕ್ಯಾಡೆಟುಗಳು ಇದ್ದರೆಂದು ವರದಿ ಆಗಿದೆ. ಒಬ್ಬ ಕ್ಯಾಡೆಟನ ಮೇಲೆ ಸರಕಾರಕ್ಕೆ ತಾಗುವ ವಾರ್ಷಿಕ ಸರಾಸರಿ ಖರ್ಚು ಕನಿಷ್ಠ ಪಕ್ಷ ರೂ ೨೦೦. ಅಲ್ಲಿಗೆ, ನಮ್ಮ ದೇಶ ಎನ್‌ಸಿಸಿ ಮೇಲೆ ಒಂದು ವರ್ಷದಲ್ಲಿ ಮಾಡುವ ವೆಚ್ಚ ಸುಮಾರು ರೂ ೩೨ ಕೋಟಿ ಎಂದಾಯಿತು. ಇದು ವರ್ಷದಿಂದ ವರ್ಷಕ್ಕೆ ಏರುವುದೇ ವಿನಾ ಇಳಿಯುವುದಿಲ್ಲ. ಆರ್ಥಿಕವಾಗಿ ಹಿಂದುಳಿದಿರುವ ನಮ್ಮ ದೇಶ ವ್ಯಯಿಸುತ್ತಿರುವ ಈ ಮೊಬಲಗು ಅಲ್ಪವೇನಲ್ಲ. ಆದ್ದರಿಂದ ಇದರ ವಿತರಣೆ ಸಮರ್ಪಕವಾಗಿ ಆಗಿದೆಯೋ ಆಗುತ್ತಿದೆಯೋ ಎಂದು ಆಸಕ್ತ ರಾಷ್ಟ್ರಕರು ಪ್ರಶ್ನಿಸಿದರೆ ಅದು ಹೊಣೆ ಅರಿತು ವರ್ತಿಸುವ ಜನರ ರೀತಿ ಎನ್ನಿಸುತ್ತದೆ.

೪

೧೯೪೮ರಲ್ಲಿ ಪ್ರಾರಂಭವಾದ ಎನ್‌ಸಿಸಿ ಶಿಕ್ಷಣ ವ್ಯವಸ್ಥೆಗೆ ೧೯೭೩ ಬೆಳ್ಳಿ ಹಬ್ಬದ ವರ್ಷ. ಆದ್ದರಿಂದ ಎನ್‌ಸಿಸಿಯ ಧ್ಯೇಯಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಈ ವ್ಯವಸ್ಥೆ ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ಪರಿಶೀಲಿಸಲು ಈಗ (೧೯೭೨) ಕಾಲ ಸನ್ನಿಹಿತವಾಗಿದೆ.

ಮೊದಲನೆಯ ಧ್ಯೇಯ. ಶೀಲ ಮುಂತಾದ ಸದ್ಗುಣಗಳು ವಿದ್ಯಾರ್ಥಿಗಳಲ್ಲಿ ಎನ್‌ಸಿಸಿ ಶಿಕ್ಷಣದ ಪರಿಣಾಮವಾಗಿ ಅಭಿವೃದ್ಧಿಗೊಂಡಿವೆಯೋ ಎಂಬ ಪ್ರಶ್ನೆಗೆ ಖಚಿತ ಉತ್ತರ ಕೊಡುವುದು ಕಷ್ಟ. ದೇಶದ ರಾಜಕೀಯ, ಆರ್ಥಿಕ, ನೈತಿಕ ಮುಂತಾದ ಪ್ರಬಲ ಬಾಹ್ಯ ಕಾರಕಗಳಿಂದಲೂ ಗೃಹಪರಿಸ್ಥಿತಿ ಎಂಬ ಅಷ್ಟೇ ಪ್ರಬಲ ಆಂತರಿಕ ಕಾರಕದಿಂದಲೂ ವಿಶೇಷವಾಗಿ ಪ್ರಭಾವಿತರಾಗುವ ವಿದ್ಯಾರ್ಥಿಗಳ ಮೇಲೆ ಕೇವಲ ಭಾಗಕಾಲೀನ ಎನ್‌ಸಿಸಿ

ಶಿಕ್ಷಣದಿಂದ (೧ ವರ್ಷದಲ್ಲಿ ಹೆಚ್ಚೆಂದರೆ ೮೦ ಗಂಟೆಗಳ ಶಿಕ್ಷಣ ಮತ್ತು ೧೦ ದಿವಸಗಳ ಶಿಕ್ಷಣ ಶಿಬಿರ ಇಷ್ಟು ವೇಳೆ ಮಾತ್ರ ಕ್ಯಾಡೆಟುಗಳು ಎನ್‌ಸಿಸಿಯ ನೇರ ಪ್ರಭಾವಕ್ಕೆ ಒಳಗಾಗುತ್ತಾರೆ) ಗಮನಾರ್ಹ ಪ್ರಗತಿ ಸಿದ್ಧಿಸೀತೆಂದು ನಿರೀಕ್ಷಿಸುವುದು ಅತ್ಯಾಶಾವಾದ. ಆದ್ದರಿಂದ ಎನ್‌ಸಿಸಿಯ ಮೊದಲನೆಯ ಧ್ಯೇಯದ ಸಿದ್ಧಿ ಅಸಿದ್ಧಿ ಏನೇ ಇದ್ದರೂ ಅದು ಕೇವಲ ಭಾವನಾತ್ಮಕವಷ್ಟೆ.

ಎರಡನೆಯ ಧ್ಯೇಯ. ಮಿಲಿಟರಿ ಶಿಕ್ಷಣವನ್ನು ನೀಡುವಲ್ಲಿಯೂ ಮಿಲಿಟರಿ ವಿಷಯದಲ್ಲಿ ಆಸ್ಥೆಯನ್ನು ಮೂಡಿಸುವಲ್ಲಿಯೂ ಪರಿಮಾಣಾತ್ಮಕವಾಗಿ (quantitatively) ಎನ್‌ಸಿಸಿ ಗಮನಾರ್ಹ ಪ್ರಗತಿ ಸಾಧಿಸಿದೆ. ಅಧಿಕ ಸಂಖ್ಯೆಯಲ್ಲಿ ತರುಣ ತರುಣಿಯರು ಈಗ ಎನ್‌ಸಿಸಿ ಸಮವಸ್ತ್ರದಿಂದ ಆಚ್ಛಾದಿಸಲ್ಪಟ್ಟು ಮಿಲಿಟರಿ ಕವಾಯತುಗಳನ್ನು ಶಿಕ್ಷಣದ ಅಂಗವಾಗಿಯೂ ಸಾರ್ವತ್ರಿಕ ಸಮಾರಂಭಗಳ ಭಾಗವಾಗಿಯೂ ಪ್ರದರ್ಶಿಸುವುದು ಕಾಣಬರುತ್ತಿದೆ. ಗುಣಾತ್ಮಕವಾಗಿ (qualitatively) ಸಹ ಇದೇ ವಿಧದ ಪ್ರಗತಿ ಸಿದ್ಧಿಸಿದೆಯೋ ಎಂಬ ಪ್ರಶ್ನೆಗೆ ಉತ್ತರ ಹಿತಕರವಲ್ಲ.

ಮೂರನೆಯ ಧ್ಯೇಯ. ರಾಷ್ಟ್ರದ ಸೇನಾಬಲಗಳಿಗೆ ಸೇರುವವರ ವಾರ್ಷಿಕ ಸಂಖ್ಯೆ ಎಷ್ಟು, ಅವರ ಪೈಕಿ ಎನ್‌ಸಿಸಿ ಶಿಕ್ಷಣ ಪಡೆದವರು ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು ಇವೇ ಮುಂತಾದ ಅಂಕೆ ಅಂಶಗಳ ವಿವರ ದೊರೆಯುತ್ತಿಲ್ಲ. ಆದ್ದರಿಂದ ಸೇನಾಬಲಗಳ ವಿಸ್ತರಣೆಗೆ ಎನ್‌ಸಿಸಿಯ ನೆರವು ಎಷ್ಟರಮಟ್ಟಿನದು, ಎನ್‌ಸಿಸಿ ಇಲ್ಲದೇ ಹೋಗಿದ್ದರೂ ಸೇನಾಬಲಗಳು ಈಗಿನಷ್ಟೇ ಸಮರ್ಥವಾಗಿ ಇರುತ್ತಿರಲಿಲ್ಲವೇ ಎಂದು ಕೇಳಿದರೆ ಉತ್ತರ ಹೇಳುವುದು ಕಷ್ಟ.

ಒಟ್ಟಾಗಿ ಇಷ್ಟು ಹೇಳಬಹುದು. ಎನ್‌ಸಿಸಿಯ ಈ ೨೪-೨೫ ವರ್ಷಗಳ ಅಸ್ತಿತ್ವ ಹಾಗೂ ವಿಸ್ತರಣೆಯಿಂದ ಅದರ ಧ್ಯೇಯಗಳು ಸಿದ್ಧಿಸಲ್ಪಟ್ಟುದೇನಾದರೂ ಇದ್ದರೆ ಅದು ಭಾವನಾತ್ಮಕ ಮಾತ್ರ. ಹಾಗಾದರೆ ಸಾಮೂಹಿಕವಾಗಿ ಇಷ್ಟೊಂದು ಎನ್‌ಸಿಸಿ ಚಟುವಟಿಕೆಗಳು ರಾಷ್ಟ್ರಾದ್ಯಂತ ತೋರುತ್ತಿವೆಯಲ್ಲ, ಮನೆ ಮನೆಯಲ್ಲೂ ಎಂಬಂತೆ ಸುಟಿ ತರುಣ ತರುಣಿಯರು ಎನ್‌ಸಿಸಿ ಸಮವಸ್ತ್ರಧಾರಿಗಳಾಗಿ ಪೆರೇಡುಗಳಲ್ಲಿ ಭಾಗವಹಿಸಲು ಲಗುಬಗೆಯಿಂದ ಧಾವಿಸುತ್ತಿರುವರಲ್ಲ ಇವೆಲ್ಲ ವಾಸ್ತವ ರುಜುವಾತುಗಳಲ್ಲವೇ ಎಂದು ನೀವು ಕೇಳಬಹುದು. ಎಷ್ಟು ಖರ್ಚಿನಲ್ಲಿ ಎಂಬುದು ನನ್ನ ಸವಾಲು. ಪರಿಮಾಣವನ್ನು ಗುಣಕ್ಕೆ ಸಮೀಕರಿಸಬಾರದು. ಎನ್‌ಸಿಸಿಗೋಸ್ಕರ ರಾಷ್ಟ್ರದ ಬೊಕ್ಕಸಕ್ಕೆ ತಾಗುತ್ತಿರುವ ಖರ್ಚು (ಪ್ರತ್ಯಕ್ಷ ಹಾಗೂ ಪರೋಕ್ಷ ಸೇವೆಗಳ ಸಮಗ್ರ ಮೊತ್ತವನ್ನು ಗಣಿಸಬೇಕು) ವಾಸ್ತವಿಕ ಪ್ರಗತಿಯ ಅನುಪಾತದಲ್ಲಿಯೇ ಎಂದು ಪರಿಶೀಲಿಸಿದಾಗ ಎಂಥ ಒಂದು ತಲೆಭಾರದ ಮಹಾವ್ಯವಸ್ಥೆಯಾಗಿ ಎನ್‌ಸಿಸಿ ಸಂಸ್ಥೆ ಬೆಳೆದಿದೆ, ಪಾರ್ಕಿನ್ಸನ್ನನ ಸೂತ್ರಗಳಿಗೆ ಇದೂ ಒಂದು ಎಂಥ ಉತ್ತಮ ನಿದರ್ಶನ ಎಂದು ಮನವರಿಕೆ ಆಗದಿರದು.

೫

ಇದು ಹೀಗೇಕೆ ಎನ್ನುವುದರ ವಿಶ್ಲೇಷಣೆಗೆ ಎನ್‌ಸಿಸಿಯ ಹುಟ್ಟು, ಧೋರಣೆ, ಬೆಳವಣಿಗೆ ಮುಂತಾದವನ್ನು ಅವಲೋಕಿಸಬೇಕಾಗುತ್ತದೆ.

೧೯೪೮ರಿಂದ ೧೯೬೩ರ ತನಕ ಎನ್‌ಸಿಸಿ ಶಿಕ್ಷಣ ಐಚ್ಛಿಕವಾಗಿತ್ತು. ಅದರಲ್ಲೂ ೧೯೬೦ರ ತನಕ ಪರಿಸ್ಥಿತಿ ಕಟ್ಟುನಿಟ್ಟಿನದಾಗಿತ್ತು—ಇಚ್ಛೆ ಪಟ್ಟ ಎಲ್ಲ ವಿದ್ಯಾರ್ಥಿಗಳಿಗೂ ಎನ್‌ಸಿಸಿಯಲ್ಲಿ ಪ್ರವೇಶ ದೊರೆಯುತ್ತಿರಲಿಲ್ಲ. ಸುಮಾರು ೧,೫೦೦ ವಿದ್ಯಾರ್ಥಿಗಳಿದ್ದ ಒಂದು ಕಾಲೇಜಿಗೆ ಕೇವಲ ೭೪ ಮಂದಿ ಕ್ಯಾಡೆಟ್ ಸಂಖ್ಯೆಯನ್ನು ಮಂಜೂರು ಮಾಡುತ್ತಿದ್ದರು. ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಎನ್‌ಸಿಸಿಗೆ ಪ್ರವೇಶವನ್ನು ಬಯಸಿ ಬರುತ್ತಿದ್ದುದರಿಂದ ಅವರ ಗುಣಮಟ್ಟಗಳನ್ನು ಮಿಲಿಟರಿ ಮಾನಕಗಳಿಂದ ನಿರ್ಧರಿಸಿ ಸಮರ್ಥರನ್ನು ಆಯುವ ಸೌಕರ್ಯವಿತ್ತು. ಆದ್ದರಿಂದ ಕ್ಯಾಡೆಟುಗಳ ಗುಣಮಟ್ಟ ಸಹಜವಾಗಿಯೇ ಉನ್ನತವಾಗಿರುತ್ತಿತ್ತು. ಎನ್‌ಸಿಸಿ ಆಫೀಸರುಗಳಿಗೆ ಆಗ ದೊರೆಯುತ್ತಿದ್ದ ಗೌರವ ಧನ ಅಕ್ಷರಶಃ ಪ್ರತೀಕಾತ್ಮಕ. ಅವರ ಆಯ್ಕೆ ಹಾಗೂ ಶಿಕ್ಷಣಗಳಲ್ಲಿಯೂ ಬಲು ಬಿಗಿಯಾದ ಹಿಡಿತವಿರುತ್ತಿತ್ತು. ಹೀಗಾಗಿ ಎನ್‌ಸಿಸಿ ಶಿಕ್ಷಣದಲ್ಲಿ ವಿಶ್ವಾಸವಿದ್ದ ನಿಷ್ಠಾವಂತರು ಮಾತ್ರ ಈ ಸಂಸ್ಥೆಯನ್ನು ಸೇರಬಹುದಿತ್ತು. ಇಲ್ಲಿಯ ಸಾಹಸಮಯ ಜೀವನ ಅದರಿಂದ ಒದಗುವ ಸಂತೃಪ್ತಿ ಇವೇ ಅವರ ಸೇವೆಯ ನಿಜ ಫಲಗಳು. ಮಿಲಿಟರಿಯಿಂದ ಅಂದು ಎರವಲಾಗಿ ಎನ್‌ಸಿಸಿ ಬೆಟಾಲಿಯನ್ನುಗಳಿಗೆ ಬರುತ್ತಿದ್ದ ಅಧಿಕಾರಿಗಳು ಸಾಮಾನ್ಯವಾಗಿ ತರುಣರು, ಉತ್ಸಾಹಶೀಲರು. ಮಿಲಿಟರಿ ಮಟ್ಟದಲ್ಲಿಯೇ ಎನ್‌ಸಿಸಿ ದಳಗಳನ್ನು ಕಟ್ಟಬೇಕೆಂಬ ಆದರ್ಶಾವಿಷ್ಟರಾದವರಿವರು. ಶಿಕ್ಷಣ ಸಾಮಗ್ರಿಗಳ ಪೂರೈಕೆ ಮೊದಲು ಆಗಿ ಆ ತರುವಾಯ ದಳಗಳ ಪ್ರಾರಂಭ ಅಂದಿನ ಸುದಿನಗಳಲ್ಲಿ ನಡೆಯುತ್ತಿತ್ತು. ಇದು ಸರಿಯಾದ ಕ್ರಮ. ಇಂಥ ದಕ್ಷ ವ್ಯವಸ್ಥೆಯಲ್ಲಿ ಶಿಕ್ಷಣ ಬಿಗಿಯಾಗಿ ಸುಟಿಯಾಗಿ ನಡೆಯುತ್ತಿದ್ದುದು ಸಹಜ. ಅಂದು ಎನ್‌ಸಿಸಿ ಎಂದರೆ ಗೌರವದ ಪ್ರತೀಕ, ಹಿರಿಮೆಯ ಕುರುಹು. ಇದರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಸರ್ಟಿಫಿಕೇಟುಗಳನ್ನು ಪಡೆದವರಿಗೆ ವಿಶ್ವವಿದ್ಯಾಲಯದ ಅಂತಿಮ ಪರೀಕ್ಷೆಗಳಲ್ಲಿ ಕೆಲವು ರಿಯಾಯಿತಿಗಳು ದೊರೆಯುತ್ತಿದ್ದುವು, ಆರ್ಮಿಯನ್ನು ಸೇರುವಾಗ ಕೂಡ.

೧೯೬೦ ಉರುಳುವ ಹೊತ್ತಿನಲ್ಲಿ ಎನ್‌ಸಿಸಿಗೆ ಕ್ಷಿಪ್ರವಿಸ್ತರಣೆಯ ಹಸಿವು ತೀವ್ರವಾಯಿತು. ಉದ್ದೇಶ ಘನವಾದದ್ದೇ—ಇಷ್ಟೊಂದು ಜನ ವಿದ್ಯಾರ್ಥಿಗಳು ಎನ್‌ಸಿಸಿ ಕದಗಳನ್ನು ತಟ್ಟುತ್ತಿರುವಾಗ ಆಯ್ದ ಕೇವಲ ಕೆಲವರನ್ನೇ ಒಳಗೆ ಬಿಟ್ಟು ಅತಿ ಮಂದಿಗೆ ಪಂಕ್ತಿಭೇದ ಪ್ರದರ್ಶಿಸುವುದು ತರವಲ್ಲ; "ತಟ್ಟು, ನಿನಗೆ ಪ್ರವೇಶ ದೊರೆಯುತ್ತದೆ" ಎಂಬುದು ಎನ್‌ಸಿಸಿಯ ನೀತಿ ಆಗಬೇಕು; ಇದಕ್ಕಾಗಿ ತಾಗುವ ಅಧಿಕ ವೆಚ್ಚವನ್ನು ರಾಷ್ಟ್ರದ ಮೇಲೆ ಹೇರಬಾರದು; ಬದಲು, ಈಗ ಆಗುತ್ತಿರುವ ಖರ್ಚಿನಲ್ಲಿಯೇ ಮಿತವ್ಯಯ ಸಾಧಿಸಿ ಮತ್ತು ಶಿಕ್ಷಕರ ಹಾಗೂ ಆಫೀಸರರ ಮಂದಿಮೆಯನ್ನು ಅಧಿಕಗೊಳಿಸಿ ಅದನ್ನು ಭರಿಸಬೇಕು ಎಂಬುದು ಆ ದಿವಸಗಳ ಚಿಂತನಲಹರಿ ಆಯಿತು. ಕಾಗದದ ಮೇಲೆ ಸರಾಸರಿ ಲೆಕ್ಕಮಾಡಿ ನೋಡುವಾಗ, ಅಧಿಕಾರಿಗಳೆಲ್ಲರೂ ತೀರ ಸಹಜವಾಗಿ ಹೆಚ್ಚಿನ ಕೆಲಸ ಮಾಡುವರೆಂದು ಊಹಿಸಿಕೊಂಡಾಗ, ಈ ಯೋಜನೆ ಸುಸಂಬದ್ಧವಾಗಿ ಕಂಡುದರಲ್ಲಿ ತರ್ಕಕ್ಕಿಂತ ಉದಾತ್ತ ಧ್ಯೇಯಂಗಳ ಒತ್ತಾಸೆಯೇ ಪ್ರಾಯಶಃ ಹೆಚ್ಚು. ಅದು ಆ ಮೊದಲೇ ಎನ್‌ಸಿಸಿಯನ್ನು ಆಗ ವ್ಯಾಪಕವಾಗಿ ವಿಸ್ತರಿಸಿದ್ದು ಮಾತ್ರವಲ್ಲ, ಇದ್ದ ಸಂಸ್ಥೆಗಳಿಗೆ ನಿಗದಿ ಮಾಡಿದ್ದ ಕ್ಯಾಡೆಟ್ ಸಂಖ್ಯೆಯನ್ನು ಗಮನಾರ್ಹವಾಗಿ ಏರಿ

ಸಿದರು ಕೂಡ. ಹೀಗೆ ಅಗಲವಾಗಿಯೂ ಆಳವಾಗಿಯೂ ಎನ್‌ಸಿಸಿ ವಿಸ್ತಾರಗೊಂಡಿತು—ಕಾಗದದ ಮೇಲೆ. ಇದರ ಪರಿಣಾಮ ನೆಲದ ಮೇಲೆ (ಶಿಕ್ಷಣ ರಂಗದಲ್ಲಿ) ಮಾತ್ರ ವ್ಯತಿರಿಕ್ತವಾಯಿತು. ಮೊದಲನೆಯ ಬಲಿ ಶಿಕ್ಷಣರಂಗದಲ್ಲಿಯ ಶಿಸ್ತು ಹಾಗೂ ಬಿಗಿ. ಗುಣಮಟ್ಟ ತಗ್ಗಿತು. ವಿಶ್ವವಿದ್ಯಾಲಯಗಳು ಆ ಮೊದಲು ನೀಡಿದ್ದ ಪರೀಕ್ಷೆಗಳಲ್ಲಿಯ ರಿಯಾಯತಿಗಳನ್ನು ಮನ್ನಾ ಮಾಡಿದುವು. ಎನ್‌ಸಿಸಿ ಆಫೀಸರರ ಸಂಖ್ಯೆ, ಮಿಲಿಟೆರಿ ಅಧಿಕಾರಿಗಳ ಸಂಖ್ಯೆ, ಶಿಕ್ಷಣ ಸಾಮುಗ್ರಿಗಳ ಸಂಖ್ಯೆ—ಎಲ್ಲೆಲ್ಲೂ ಕೊರತೆ ಸಾರ್ವತ್ರಿಕವಾಯಿತು.

ಇಂಥ ಪರಿಸ್ಥಿತಿಯಲ್ಲಿ ದೇಶ ಮುಂದುವರಿಯುತ್ತಿದ್ದಾಗ ೧೯೬೨ರ ಚೈನೀ ಪ್ರಹಾರ ಹಠಾತ್ತಾಗಿ ಭಾರತದ ಮೇಲೆ ಕಿಡೆಯಿತು. ಸೇನಾಬಲಗಳು, ಸೇನಾಸಾಮುಗ್ರಿಗಳು ತ್ವರೆಯಿಂದ ಗಡಿ ರಕ್ಷಣೆಗೆ ಧಾವಿಸಬೇಕಾಯಿತು ಆಗ ನಡೆದ ಸೇನಾಬಲಗಳ ಅತಿಕ್ಷಿಪ್ರ ವಿಸ್ತರಣೆಯ ಪರಿಣಾಮ ಎನ್‌ಸಿಸಿಯ ಮೇಲೆ ತೀರ ಅಹಿತಕರವಾಯಿತು. ಇಲ್ಲೊಂದು ವಿಧದ ನಿರ್ವ್ಯವಸ್ಥಿತಿ ಏರ್ಪಟ್ಟು ಎನ್‌ಸಿಸಿ ಅನಾಥವಾಯಿತೇ ಎಂಬಂಥ ಅನುಭವ. ಆಗಲೇ ರಾಷ್ಟ್ರ ಎನ್‌ಸಿಸಿಯನ್ನು ಕುರಿತು ಇನ್ನೊಂದು ಮಹತ್ತ್ವಪೂರ್ಣ ನಿರ್ಧಾರ ತಳೆಯಿತು—೧೯೬೩ರ ಶಿಕ್ಷಣ ವರ್ಷದಿಂದ ಕಾಲೇಜಿನ (ನಿಖರವಾಗಿ, ಎಸ್‌ಎಸ್‌ಎಲ್‌ಸಿ-ಉತ್ತರ) ಮೊದಲ ಮೂರು ವರ್ಷಗಳ ವಿದ್ಯಾರ್ಥಿಗಳಿಗೆ ಎನ್‌ಸಿಸಿ ಶಿಕ್ಷಣ ಕಡ್ಡಾಯವಾಗಬೇಕು. ಇದರ ಹಿಂದಿದ್ದ ಉದ್ದೇಶ ಘನವಾದದ್ದೇ—ವಿದ್ಯಾರ್ಥಿಗಳಲ್ಲಿ ಶಿಸ್ತುಸಂವರ್ಧನೆ, ರಾಷ್ಟ್ರದಲ್ಲಿ ಐಕ್ಯಭಾವ ಪ್ರೇರಣೆ, ಸೇನಾಬಲಗಳಿಗೆ ಸಂವಾದಿಯಾಗಿ ನಿಲ್ಲಬಲ್ಲ ಒಂದು ಆಂತರಿಕ ಸಮರ್ಥಬಲದ ನಿರ್ಮಾಣ, ಇತ್ಯಾದಿ. ನರಕವನ್ನೂ ಘನೋದ್ದೇಶದಿಂದಲೇ ನಿರ್ಮಿಸಲಾಗಿದೆ ಎಂಬ ಅರ್ಥದ ಒಂದು ಇಂಗ್ಲಿಷ್ ಗಾದೆ ಉಂಟು. ಕಾರಣವಿಷ್ಟೆ. ಉದ್ದೇಶ ಎಷ್ಟು ಘನವಾದದ್ದು ಎಂಬುದು ಮುಖ್ಯವಲ್ಲ, ಅದರ ನಿರ್ವಹಣೆ ಎಷ್ಟು ಪ್ರಾಮಾಣಿಕ ಸಾಮರ್ಥ್ಯಪೂರಿತವಾದದ್ದು ಎಂಬುದರ ಮೇಲೆ ಅಂತಿಮವಾಗಿ ಉದ್ದೇಶದ ಘನತೆ ಸಹ ಅವಲಂಬಿಸಿದೆ. ಉದ್ದೇಶ ಕೇವಲ ಅಮೂರ್ತ ಮೌಲ್ಯ, ನಿರ್ವಹಣೆ ಅದರೆಡೆಗಿನ ಮೂರ್ತ ಪಥನಿರ್ಮಾಣ ಮತ್ತು ಗಮನ.

ಆಗ ನಡೆದದ್ದೇನು ? ೧೯೬೩ರ ಕ್ಯಾಡೆಟ್ ಮಹಾಪೂರವನ್ನು ಯೋಗ್ಯ ರಾಷ್ಟ್ರನಿರ್ಮಾಪಕ ಬಲಗಳಾಗಿ ಕವಲೊಡೆಸಲು ಎನ್‌ಸಿಸಿ ವ್ಯವಸ್ಥೆಯನ್ನು ಭೂರಿ ಪ್ರಮಾಣದಲ್ಲಿ ಲಂಬಿಸಲಾಯಿತು. ಮಿಲಿಟೆರಿ ಅಧಿಕಾರಿಗಳ ಕೊರತೆ ತುಂಬಲು ನಿವೃತ್ತ-ಪೂರ್ವ ಹಾಗೂ ನಿವೃತ್ತಮಿಲಿಟೆರಿ ಅಧಿಕಾರಿಗಳನ್ನು ಎನ್‌ಸಿಸಿಗೆ ರವಾನಿಸಲಾಯಿತು. ಎನ್‌ಸಿಸಿಅಧಿಕಾರಿಗಳಿಗೆ ಪೂರ್ಣಾವಧಿ ಕಮಿಷನ್ ನೀಡಿ ಅವರ ಪೂರ್ಣಕಾಲದ ಸೇವೆಯನ್ನು ಎನ್‌ಸಿಸಿ ಪಡೆಯುವಂತೆ ಅವಕಾಶವನ್ನು ಒದಗಿಸಲಾಯಿತು. ಇನ್ನು ಹೊಸ ಬೆಟಾಲಿಯನ್ನುಗಳ ಸ್ಥಾಪನೆ, ಅವುಗಳಲ್ಲಿ ಕಾರ್ಯನಿರ್ವಹಿಸಲು ಎನ್‌ಸಿಸಿಆಫೀಸರುಗಳ ಆಯ್ಕೆ ಹಾಗೂ ಶಿಕ್ಷಣ ಇವೆಲ್ಲವೂ ಯುದ್ಧರಂಗದಲ್ಲಿ ನಡೆಯುವ ಚಟುವಟಿಕೆಗಳ ಭರದಿಂದ ನಡೆದುಹೋದುವು. ರಾಷ್ಟ್ರಲಕ್ಷ್ಯದ ಅಮಲಿನಲ್ಲಿ, ದೇಶಭಕ್ತಿಯ ಗುಂಗಿನಲ್ಲಿ ಭಾರೀ ಎನ್‌ಸಿಸಿ ಪಡೆಯೇ ಮೈದಳೆಯಿತು. ಆದಿವಸಗಳ ತೀವ್ರ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ ಎಲ್ಲ ಆಫೀಸರರಿಗೂ ಗೊತ್ತಿರುವ ಸಂಗತಿ ಒಂದುಂಟು : ಸಂಖ್ಯಾಬಾಹುಳ್ಯದ ಪರಿಣಾಮವಾಗಿ ಅಷ್ಟೇ ತೀವ್ರವಾಗಿ ಕುಸಿದು ಬಿದ್ದದ್ದು ಶಿಕ್ಷಣಮಟ್ಟ. ಸಮವಸ್ತ್ರವಿಲ್ಲ, ಶಿಕ್ಷಣ ಸಾಮುಗ್ರಿಗಳಿಲ್ಲ, ನುರಿತ ಶಿಕ್ಷಕ

ರಿಲ್ಲ—ಕಡ್ಡಾಯ ಎನ್‌ಸಿಸಿ ಶಿಕ್ಷಣ ಮಾತ್ರ ನಡೆಯಲೇಬೇಕು. ವ್ಯಕ್ತಿ ಎಂದರೆ ಒಂದು ಬಲಘಟಕ. ಸಮುದಾಯ ಎಂದರೆ ಇಂಥ ಘಟಕಗಳ—ಆದರೆ ಒಂದೊಂದರ, ಮೌಲ್ಯವೂ ಭಿನ್ನ, ಒಂದೊಂದರ ಕ್ರಿಯಾರೇಖೆಯೂ ಭಿನ್ನ—ಅಸಮವಿತರಣೆಯ ಸಂಕೀರ್ಣ. ಇದರಲ್ಲಿ ಉದ್ದೇಶಪೂರ್ವಕವಾಗಿ ಕ್ರಮವನ್ನು ತಂದಾಗ ಮಾತ್ರ ಬಲ ಘಟಕಗಳ ಮೊತ್ತ ಬೃಹತ್ಪ್ರಮಾಣದ ಏಕಫಲಿತವಾಗುತ್ತದೆ, ಆದರಿಂದ ಮಹಾಕಾರ್ಯದ ನಿರ್ವಹಣೆ ಸಾಧ್ಯ ವಾಗುತ್ತದೆ. ಇದಲ್ಲದಿದ್ದರೆ ಸಂತೆಯ ಗೊಂದಲದ ವಿಸ್ತರಣೆಯೇ ಕವಾಯತಿ ರಂಗವಾಗು ತ್ತದೆ. ಮಾನವ ಗತಿವಿಜ್ಞಾನದಲ್ಲಿ ಪವಾಡಗಳಿಗೆ ಎಡೆಯಿಲ್ಲ. ಹಿಂದಿನ ವರ್ಷಗಳಲ್ಲಿ ಕ್ಯಾಡೆಟುಗಳಿಗೆ ಪ್ರತಿ ಪೆರೇಡಿನ ತರುವಾಯ ಕೊಡುತ್ತಿದ್ದ ಉಪಾಹಾರವನ್ನು ಈಗ ಹೊಸತಾಗಿ ಸೇರಿಸಿಕೊಂಡವರಿಗೆ ನಿಲ್ಲಿಸಲಾಯಿತು. ರಾಷ್ಟ್ರಕ್ಕಾಗಿ ಇವರು ಅಷ್ಟು ತ್ಯಾಗ ಮಾಡಬೇಕು ಎಂಬುದು ಉದ್ದೇಶ. ಸಾಮೂಹಿಕ ಮುಷ್ಕರ ಹೂಡಿ ಕ್ಯಾಡೆಟುಗಳು ಉಪಾಹಾರದ ಸೌಲಭ್ಯವನ್ನು ಗಿಟ್ಟಿಸಿಯೇಕೊಂಡರು. ಶಿಸ್ತಿನ ಈ ಪಡೆಗೆ ರಾಷ್ಟ್ರ ರಕ್ಷಣೆಯ ದ್ವಿತೀಯ ಸಾಲಾಗಿರುವ ಈ ಯುವಜನ ಸಂಸ್ಥೆಗೆ ತುರ್ತು ಪರಿಸ್ಥಿತಿಯ ದಿವಸಗಳಲ್ಲೇ ತಾಗಿದ ಈ ಮುಸಿ ಬಲ ದುಃಖಕರ ಅನುಭವ. ವಾತನಿಯಂತ್ರಿತ ತಂಪು ಕೊಠಡಿಗಳ ಒಳಗೆ ಸುಖಾಸೀನರಾಗಿ ಮಾದಕ ಪಾನೀಯಗಳ ಉನ್ಮತ್ತತೆಯಲ್ಲಿ ರಚಿಸಿದ ಅವ್ಯಾವಹಾರಿಕ ಹಾಗೂ ಅಪ್ರಾಯೋಗಿಕ ಯೋಜನೆ ಕುಸಿದದ್ದು ತೀರ ಸಹಜ. ಹೋಗಲಿ, ಒಂದನೆಯ ವರ್ಷ ಹದ ಮೀರಿದ ಪರಿಸ್ಥಿತಿಯಿಂದ, ಅನಿರೀಕ್ಷಿತ ಸಂದರ್ಭಗಳು ಒದಗಿ ಬಂದುವು; ಮಂತ್ತಾದರೂ ವಾಸ್ತವ ಪ್ರಜ್ಞೆ ಬೆಳೆದು ಭದ್ರ ಬುನಾದಿಯ ಮೇಲೆ ಸಂಸ್ಥೆ ಪುನಸ್ಸ್ಥಾಪಿ ಸಲ್ಪಟ್ಟಿತೇ ? ಅಧಿಕಾರ ಹಾಗೂ ಅದರಿಂದ ಪ್ರಾಪ್ತವಾಗುವ ಪ್ರತಿಷ್ಠೆ ಮತ್ತು ಸೌಲಭ್ಯ ಗಳ ರುಚಿ ನೋಡಿದ ಮೇಲೆ ಅಧಿಕಾರಶಾಹಿ ತನ್ನ ಸ್ಥಾನಭದ್ರತೆಗೋಸ್ಕರ ವ್ಯಯಿಸು ವಷ್ಟು ಕಾಲ ಶ್ರಮಗಳನ್ನು ಖುದ್ದು ನಿಯುಕ್ತ ಉದ್ದೇಶ ಸಾಧನೆಗೆ ವ್ಯಯಿಸದಿರುವುದು ಮಾನವ ದೌರ್ಬಲ್ಯ. ಮುಂದಿನ ಕೆಲವೇ ವರ್ಷಗಳಲ್ಲಿ ಕಡ್ಡಾಯ ಎನ್‌ಸಿಸಿಯನ್ನು ಐಚ್ಛಿಕ ಮಾಡಿದ್ದು ಮಾತ್ರವಲ್ಲ ನ್ಯಾಷನಲ್ ಸರ್ವಿಸ್ ಕೋರ್ (ಎನ್‌ಎಸ್‌ಸಿ) ಎಂಬ ಸಮಾಂತರ ವ್ಯವಸ್ಥೆಯನ್ನು ರಾಷ್ಟ್ರ ಅಂಗೀಕರಿಸಿದ್ದು ಎನ್‌ಸಿಸಿ ವಿಸ್ತರಣೆಯ ವೈಫಲ್ಯಕ್ಕೆ ಪರೋಕ್ಷ ನಿದರ್ಶನ. ಸೋರುವ ದೋಣಿಗೆ ತೇಪೆ ಹಾಕಿದರೆ ಶಾಶ್ವತ ಪರಿಹಾರ ದೊರೆ ತೀತೇ ? "ಸೋರುತಿಹುದು ಮನೆಯ ಮಾಳಿಗೀ !"

ಎನ್‌ಸಿಸಿ ಶಿಕ್ಷಣಮಟ್ಟ ಇಳಿದುದಕ್ಕೆ ಅತಿ ವಿಸ್ತರಣೆ, ಶಿಕ್ಷಣ ಸಾಮಗ್ರಿಗಳ ಕೊರತೆ, ಅನಾಸಕ್ತ ವಿದ್ಯಾರ್ಥಿಗಳ ಹಿಂಡು ಮುಂತಾದವು ನಿಜ ಕಾರಣಗಳೇ ಇರಬಹುದು. ಆದರೆ ಇಲ್ಲೆಲ್ಲ ಈ ಸವಾಲನ್ನು ಎದುರಿಸಿ ವಿಧಿ ನಿಯಮಗಳ ಪರಿಮಿತ ಚೌಕಟ್ಟಿನೊಳಗೇ ಕ್ಯಾಡೆಟುಗಳ ಧೃತಿ ಕಾಯ್ದಿಟ್ಟು ಎನ್‌ಸಿಸಿಯ ಗೌರವವನ್ನು ಏರಿಸಲು ಮಿಲಿಟರಿ ಅಧಿಕಾರಿ ಗಳೂ ಎನ್‌ಸಿಸಿ ಆಫೀಸರರೂ ಸಾರ್ವತ್ರಿಕವಾಗಿ ಮನಃಪೂರ್ವಕವಾಗಿ ಶ್ರಮಿಸಿದ್ದರೆ ಪರಿ ಸ್ಥಿತಿ ಹದಗೆಟ್ಟಿರುತ್ತಿರಲಿಲ್ಲ. ಜೀವನದ ಉತ್ಕರ್ಷಕಾಲವನ್ನು ಮಿಲಿಟರಿಯಲ್ಲಿ ಕಳೆದು ನಿವೃತ್ತಿ -ಪೂರ್ವ ಅಥವಾ ನಿವೃತ್ತಿ-ತರುವಾಯದ ದಿವಸಗಳಲ್ಲಿ ಎನ್‌ಸಿಸಿಗೆ ಬಂದ ಮಿಲಿಟರಿ ಅಧಿ ಕಾರಿಗಳು ದೈಹಿಕ ಚಟುವಟಿಕೆಗಳ ಮತ್ತು ಉನ್ನತ ಶಿಕ್ಷಣ ಮಟ್ಟಗಳ ಆದರ್ಶವಾಗಿದ್ದುದು ಬಲು ವಿರಳ. ಇವರಿಗೆ ಕಾಗದದ ಮೇಲಿನ ಶಿಕ್ಷಣ, ಕಛೇರಿಯ ಶೃಂಗಾರ, ತಮ್ಮ ಅಧಿಕಾರದ

ಶುಷ್ಕಪ್ರದರ್ಶನಗಳ ಮೇಲಿದ್ದಷ್ಟು ವಾತ್ಸಲ್ಯ ವಿದ್ಯಾರ್ಥಿಗಳ ಮೇಲಾಗಲೀ ಅವರ ವಾಸ್ತವಿಕ ಶಿಕ್ಷಣದ ಕುರಿತಾಗಲೀ ಮೂಡಲಿಲ್ಲ. ಶಿಕ್ಷಣ ಇವರಿಗೆ ಗೌಣ. ಆದರೆ ಫಲವಾದ ಅಧಿಕಾರ ಇವರಿಗೆ ಪ್ರಧಾನ. ಇನ್ನು ಇವರ ಅನುಯಾಯಿಗಳಾದ ಎನ್‌ಸಿಸಿ ಆಫೀಸರುಗಳು—ನನ್ನ ವೃತ್ತಿಬಾಂಧವರು. ಇವರ ಗೌರವಧನ ಹಾಗೂ ಸವಲತ್ತುಗಳು ೧೯೬೩ರ ತರುವಾಯ ಸಾಕಷ್ಟು ಏರಿದುದರಿಂದ ಆ ದಿಶೆಯಲ್ಲಿಯು ಹಸಿವೆಯೂ ಅಷ್ಟೇ ಕಡಿದಾಗಿ ಏರಿತು. ಎನ್‌ಸಿಸಿ ಹುದ್ದೆ ಈ ಕಾರಣದಿಂದ ಆಕರ್ಷಣೀಯವಾಯಿತು. ಆರ್ಥಿಕ ಸವಲತ್ತೆಂಬ ಕಾಂತ ಕ್ಷೇತ್ರ ಕೆಲಸಗಳ್ಳರೆಂಬ ಹಸಿಕಬ್ಬಿಣದ ರೇಕುಗಳನ್ನು ಆಕರ್ಷಿಸಬಲ್ಲುದೇ ವಿನಾ ಕಾರ್ಯಾಸಕ್ತರೆಂಬ ಚಿನ್ನದ ಗಟ್ಟಿಗಳನ್ನಲ್ಲ. ನಮ್ಮ ಕಬ್ಬಿಣದ ರೇಕುಗಳಿಗೆ ಎನ್‌ಸಿಸಿ ಕರ್ತವ್ಯಗಳು ಪ್ರಿಯವಾಗಲಿಲ್ಲ. ಪೆರೇಡಿಗೆ ಹೋಗುವುದೇ ಕಷ್ಟ, ಹೋದರೂ ಆಗಂತುಕರಾಗಿ ಹೋದಾರೇ ವಿನಾ ಅದರ ಧುರೀಣತ್ವವೇ ತಮ್ಮದು ಎಂಬ ಕರ್ತವ್ಯಾಸಕ್ತ ಮನೋಧರ್ಮದಿಂದಲ್ಲ. ಅಲ್ಲಿ ಪಾಠ ನಡೆಸುವುದು ಇವರ ಘನತೆಗೆ ಕಡಿಮೆ. ಆದರೆ ಅದರ ಫಲವಾದ ಗೌರವಧನ ಸ್ವೀಕಾರ ಅತಿಪ್ರಿಯ.

ಎನ್‌ಸಿಸಿಯಲ್ಲಿರುವ ಪ್ರತಿಯೊಬ್ಬ ಮಿಲಿಟೆರಿ ಹಾಗೂ ಎನ್‌ಸಿಸಿ ಅಧಿಕಾರಿ ಈ ಕೆಳಗಿನ ಪ್ರಶ್ನೆಗಳನ್ನು ತನಗೆ ತಾನೇ ಕೇಳಿಕೊಂಡು ಅವುಗಳಿಗೆ ಪ್ರಾಮಾಣಿಕವಾಗಿ ಉತ್ತರಗಳನ್ನು ಕೊಡುವ ಪ್ರಯತ್ನ ಮಾಡಿದರೆ ಮತ್ತು ಅಂಥ ಉತ್ತರಗಳ ಅನುಸಾರ ತನ್ನ ಎನ್‌ಸಿಸಿ ಭವಿಷ್ಯವನ್ನು ರೂಪಿಸಿಕೊಂಡರೆ ಅದರಿಂದ ಎನ್‌ಸಿಸಿಗೂ ರಾಷ್ಟ್ರಕ್ಕೂ ಅಪಾರ ಉಪಕಾರ ಆಗುತ್ತದೆ :

೧ ಎನ್‌ಸಿಸಿ ಧ್ಯೇಯಗಳ ಮೇಲೆ ನನಗೆ ಪೂರ್ಣ ನಂಬಿಕೆ ಇದೆಯೇ ?

೨ ಎನ್‌ಸಿಸಿ ಶಿಕ್ಷಣವನ್ನು, ಲಭ್ಯ ಶಿಕ್ಷಣ ಸಾಮಗ್ರಿಗಳ ನೆರವಿನಿಂದಲೇ, ಕ್ಯಾಡೆಟುಗಳಿಗೆ ಕುತೂಹಲಕಾರಿ ಆಗುವಂತೆ ಮಾಡಲು ನಾನು ಸತತ ಪ್ರಯತ್ನ ಮಾಡುತ್ತಿರುವೆನೇ ?

೩ ಎನ್‌ಸಿಸಿಯಲ್ಲಿ ಕ್ಯಾಡೆಟುಗಳಿಗೆ ಅಧಿಕಾಸಕ್ತಿ ಮೂಡಿ ಅವರು ಅದರ ಚಟುವಟಿಕೆಗಳಲ್ಲಿ ಮನಃಪೂರ್ವಕವಾಗಿ ಭಾಗಿಗಳಾಗುವಂತೆ ಮಾಡಲು ನಾನು ಹೊಸ ಯೋಜನೆಗಳನ್ನು ರೂಪಿಸಿ ಅವನ್ನು ಕಾರ್ಯರೂಪಕ್ಕೆ ಇಳಿಸುತ್ತಿದ್ದೇನೆಯೇ ?

೪ ನನ್ನ ಕ್ಯಾಡೆಟುಗಳ (ಮತ್ತು ನನ್ನ ಸಂಸ್ಥೆಯ) ಸರ್ವತೋಮುಖಾಭಿವೃದ್ಧಿಗೋಸ್ಕರ ನಾನು ಸತತ ಪ್ರಯತ್ನಶೀಲನಾಗಿದ್ದೇನೆಯೇ ?

೫ ನನ್ನ ವೈಯಕ್ತಿಕ ನಡವಳಿಕೆಗಳಲ್ಲಿ ಸದಾ ನಾನು ಉನ್ನತಾದರ್ಶವನ್ನು ಕಾಪಾಡಿಕೊಂಡು ಗುರುಪರಂಪರೆಗೂ ಎನ್‌ಸಿಸಿ ಪರಂಪರೆಗೂ ಗೌರವ ತಂದಿದ್ದೇನೆಯೇ ?

೬ ನನಗೆ ಎನ್‌ಸಿಸಿ ಇಷ್ಟೊಂದು ಸವಲತ್ತುಗಳನ್ನು ನೀಡಿದೆಯಲ್ಲ, ಇಂಥ ರಾಷ್ಟ್ರೀಯ ಸಂಸ್ಥೆಗೆ ನನ್ನದು ಎಂದು ಎತ್ತಿ ತೋರಿಸಬಹುದಾದಂಥ ಕಿಂಚಿತ್ ಕೊಡುಗೆ ಏನನ್ನಾದರೂ ನಾನು ನೀಡಿದ್ದೇನೆಯೇ ?

ಈ ಪ್ರಶ್ನೆಗಳಲ್ಲಿ ಯಾವುದೇ ಒಂದಕ್ಕೆ ಕೂಡ ನಮ್ಮ ಉತ್ತರ ಸಂಶಯಾಸ್ಪದವಾದರೂ ನಮಗೆ ಎನ್‌ಸಿಸಿಯಲ್ಲಿ ಇರಲು ನೈತಿಕ ಅಧಿಕಾರ ಇಲ್ಲ. ರಾಷ್ಟ್ರದ ಕಾರ್ಯ ಬೇಡುವುದು ನಿಷ್ಠಾವಂತ ಕ್ರಿಯಾಶೀಲರನ್ನು, ಹುಳುಕು ಹುಡುಕುವವರನ್ನಲ್ಲ, ಸಂಶಯಾತ್ಮರನ್ನಲ್ಲ, ಛಾಯಾವ್ಯಕ್ತಿಗಳನ್ನಲ್ಲ.

ಇದುವರೆಗಿನ ನನ್ನ ವಿಶ್ಲೇಷಣೆ ಏನಿದ್ದರೂ ಅದು ಪ್ರಸಕ್ತ ಎನ್‌ಸಿಸಿ ವ್ಯವಸ್ಥೆಯ ಪರಿಧಿಯೊಳಗಿನ ಸಮಸ್ಯೆಗಳನ್ನು ಕುರಿತದ್ದು. ಎನ್‌ಸಿಸಿಯ ರಚನೆ, ಧ್ಯೇಯ, ಕಾರ್ಯ ವಿಧಾನ ಇವೆಲ್ಲವೂ ಈಗಿನ ರೂಪದಲ್ಲಿಯೇ ಮುಂದೆಯೂ ಇರತಕ್ಕವು ಎಂದು—ಅರ್ಥಾತ್ ಸ್ಥಿತಿ ಸ್ಥಾಯೀ ನಿಯಮವನ್ನು—ನಾವು ಒಪ್ಪುವುದಾದರೆ ಈ ವ್ಯವಸ್ಥೆಗೆ ಖಂಡಿತವಾಗಿಯೂ ಕಾಯಕಲ್ಪವಿತ್ತು ಪುನರ್ಜನ್ಮ ನೀಡಲೇಬೇಕು. ಇದನ್ನು ದೀಪ್ತಿವಂತ ಗೊಳಿಸಬೇಕು. ಈ ದಿಸೆಯಲ್ಲಿ ನನ್ನ ಸೂಚನೆಗಳನ್ನು ಇಲ್ಲಿ ಬರೆದಿದ್ದೇನೆ:

೧ ಎನ್‌ಸಿಸಿಯ ಪ್ರತ್ಯಕ್ಷ ಶಿಕ್ಷಣದಲ್ಲಿ ಶ್ರದ್ಧೆ ಇದ್ದು ಅದನ್ನು ಕಾರ್ಯರೂಪಕ್ಕೆ ಇಳಿಸಲು ಸಾಮರ್ಥ್ಯ ಇರುವ ಪ್ರಾಮಾಣಿಕ ದಕ್ಷ ಹಾಗೂ ಉತ್ಸಾಹಶೀಲ ಮಿಲಿಟರಿ ಅಧಿಕಾರಿ ಗಳನ್ನು ಮಾತ್ರ ಸಂಸ್ಥೆಗೆ ಕಳಿಸಬೇಕು. ಇದು ನಿವೃತ್ತ ಅಧಿಕಾರಿಗಳ ವಿಶ್ರಾಂತಿಧಾಮವಾಗ ಬಾರದು, ಅಥವಾ ಸಿ ದರ್ಜೆಯ ಅಧಿಕಾರಿಗಳ ಆರೋಗ್ಯ ಸಂವರ್ಧನ ಕೇಂದ್ರವೂ ಆಗ ಬಾರದು.

೨ ಈಗಿರುವಂತೆ ಸೈನ್ಯ ವಿಭಾಗದ ಯಾವುದೇ ಒಂದು ಎನ್‌ಸಿಸಿ ಬೆಟಾಲಿಯನ್ನನ್ನು ತೆಗೆದುಕೊಂಡರೆ ಅದರ ಆರ್ಮಿ ಅಧಿಕಾರಿಗಳು ಮೂರು ಹಂತಗಳಲ್ಲಿ (ಎನ್‌ಸಿಓಗಳು, ಜೆಸಿಓಗಳು, ಓಸಿ) ಭಿನ್ನ ರೆಜಿಮೆಂಟುಗಳಿಂದ ಬಂದಿರುವುದು ಕಾಣಬರುತ್ತಿದೆ. ಇದರಿಂ ದಾಗಿ ಆ ಬೆಟಾಲಿಯನ್ನಿಗೆ ಒಂದು ವ್ಯಕ್ತಿತ್ವ ಅಂದರೆ ಒಂದು ನಿರ್ದಿಷ್ಟ ಪರಂಪರೆ, ಬೆಳೆದು ಬರುವುದಿಲ್ಲ. ಓಸಿ ಆದವನು ತನ್ನ ರೆಜಿಮೆಂಟಿನ ಪರಂಪರೆಯೇ ಶ್ರೇಷ್ಠ ಎಂದು ಭಾವಿಸಿ ಅದನ್ನು ಎನ್‌ಸಿಸಿ ಬೆಟಾಲಿಯನ್ನಿನಲ್ಲಿತರಲು ಪ್ರಯತ್ನಿಸಿದರೆ ಆತನ ಅನುಯಾಯಿಗಳಾದ ಜೆಸಿಓಗಳೂ ಎನ್‌ಸಿಓಗಳೂ ತಮ್ಮ ತಮ್ಮ ರೆಜಿಮೆಂಟುಗಳ ಹಿರಿಮೆಯನ್ನು ಕಾಯ್ದಿಟ್ಟು ಕೊಳ್ಳಲು ಪರೋಕ್ಷವಾಗಿಯಾದರೂ ಶ್ರಮಿಸುತ್ತಾರೆ. ಮೊತ್ತವಾಗಿ ಆ ಬೆಟಾಲಿಯನ್ನಿನ ಕ್ಯಾಡೆಟುಗಳಿಗೆ ಲಭಿಸುವುದು ಶೂನ್ಯಪರಂಪರೆ. ಇದು ಹೀಗಾಗಬಾರದು. ಅದಕ್ಕಾಗಿ ಸೈನ್ಯದ ನಿರ್ದಿಷ್ಟ ರೆಜಿಮೆಂಟುಗಳಿಗೆ ಸಂವಾದಿಯಾದ ನಿರ್ದಿಷ್ಟ ಎನ್‌ಸಿಸಿ ಬೆಟಾಲಿಯನ್ನು ಗಳನ್ನು ಮೊದಲೇ ನಿಗದಿಮಾಡಬೇಕು. ಬೇರೆ ಮಾತುಗಳಲ್ಲಿ ಹೇಳುವುದಾದರೆ ನಿಗದಿಗೊಳಿ ಸಿದ ಎನ್‌ಸಿಸಿ ಬೆಟಾಲಿಯನ್ನುಗಳನ್ನು ಬೇರೆ ಬೇರೆ ಆರ್ಮಿ ರೆಜಿಮೆಂಟುಗಳು ದತ್ತು ಸ್ವೀಕ ರಿಸುವ ಏರ್ಪಾಡು ಇರಬೇಕು. ಇದರಿಂದ ಆಯಾ ರೆಜಿಮೆಂಟುಗಳ ಪರಂಪರೆ ಅವುಗಳಿಗೆ ಲಗತ್ತಿಸಿದ ಎನ್‌ಸಿಸಿ ಬೆಟಾಲಿಯನ್ನುಗಳಿಗೆ ಪಸರಿಸಿ ಒಂದು ವಿಧದ ಅನ್ಯೋನ್ಯತೆಯ ಭಾವ ಅರಳುತ್ತದೆ, ಅಲ್ಲದೇ ಬೆಟಾಲಿಯನ್‌ನ ಕಛೇರಿಯಲ್ಲಿಯ ಕಾಗದ ಪತ್ರಗಳ "ಮಹಾಯುದ್ಧ" ಮುಕ್ಕಾಲಂಶ ತಣ್ಣಗಾಗಿ ಹೋಗದಿರದು.

೩. ಈಗ (೧೯೭೨) ಪುನಃ ಎನ್‌ಸಿಸಿ ಶಿಕ್ಷಣ ಐಚ್ಛಿಕವಾಗಿರುವುದು ಶುಭ ಸೂಚನೆ; ವಾಸ್ತವ ಪರಿಸ್ಥಿತಿಗೆ ಮನ್ನಣೆ ನೀಡಿರುವುದರ ಚಿಹ್ನೆ. ಆದರೆ ಶಿಕ್ಷಣ ವಿಧಾನಗಳಲ್ಲಿ ತೀವ್ರ ಸುಧಾರಣೆಗಳನ್ನು ತರದಿದ್ದಲ್ಲಿ, ಎನ್‌ಸಿಸಿಯನ್ನು ಸ್ವಂತೇಚ್ಛೆಯಿಂದಲೇ ಸೇರುವವರಿ ಗಾದರೂ, ಇದೊಂದು ಅನುಭವಿಸಲೇಬೇಕಾದ ಶಿಕ್ಷೆ ಎಂಬ ನಿರುತ್ಸಾಹ ಮನೋಭಾವ ಮೂಡದಿರದು. ಇದರಿಂದಾಗಿ ಎನ್‌ಸಿಸಿ ಶಿಕ್ಷಣದಲ್ಲಿ ಅವರ ಭಾಗಿತ್ವ ಯಾಂತ್ರಿಕವಾಗು ತ್ತದೆ. ಇಂಥಲ್ಲಿ ಸ್ತೋಮಪ್ರಜ್ಞೆ ಬೆಳೆಯುವುದಾಗಲೀ ಧುರೀಣತ್ವ ವಿಕಸಿಸುವುದಾಗಲೀ ದೂರ ಉಳಿಯುತ್ತವೆ. ಭವ್ಯ ಪ್ರಥಮ ಮಹಾಯುದ್ಧದ ದಿವ್ಯ ಸ್ಮಾರಕಗಳಾದ ಶವ

ಭಾರದ ರೈಫಲ್ಲುಗಳು, ರಕ್ತಶ್ವೇತವರ್ಣ ನಾಮಾಲಂಕೃತ ಸ್ವಯಂಚಾಲಿತ (ಹಾಗೆಂದು ಆರ್ಮಿ ಉದ್ಗ್ರಂಥಗಳಲ್ಲಿ ಉಕ್ತವಾಗಿದೆ!) ಆಯುಧಗಳು, ನೀರಸ ಏಕತಾನ ವಿತಾನದ ಪೀಟೀ ಮೂಡ್, ಕದಂಥಾಲ್ (ಇವು ಶಿಕ್ಷಕರ ದೃಷ್ಟಿಯಿಂದ ತೇಜ್ ಛಲ್, ದೌಡ್ಕೇ ಛಲ್ ಹುಕುಂಗಳಿಗಿಂತ ಹೆಚ್ಚು ಪ್ರಿಯವಾಗಿರುವುದರಲ್ಲಿ ಏನೂ ಪ್ರತೀಕಾತ್ಮಕತೆ ಇರಲಾರದು?) ಹುಕುಂಗಳು, a map is a sheet of paper ಎನ್ನುವ ದಂಗು ಬಡಿಸುವಂಥ ಮಾರಕ ವಾಸ್ತವತಾನಿರೂಪಣೆಗಳು ಮುಂತಾದವು ಒಂದು ಕಾಲದಲ್ಲಿ ಪಡೆದಿದ್ದ ಔಚಿತ್ಯವೇನಾದರೂ ಇದ್ದರೆ ಅವು ಇಂದು ಪೂರ್ಣ ಘಾಸಿಲೀಕರಣಗೊಂಡಿವೆ. ಪ್ರತಿಯೊಂದು ಪೆರೇಡ್ ಕೂಡ ಕ್ಯಾಡೆಟುಗಳಿಗೆ ಹೊಸ ಸವಾಲನ್ನು ಒಡ್ಡಬೇಕು. ಇಂಥ ಶಿಕ್ಷಣವಿಧಾನದ ರೂಪರೇಖೆಗಳನ್ನು ತಯಾರಿಸುವುದು ಇಂದು, ೧೯೭೧ರ ವಿಜಯಾ ನಂತರ, ಎಂದಿಗಿಂತ ಸುಲಭ ಮತ್ತು ಆವಶ್ಯಕ.

೪ ಮಿಲಿಟರಿಯಿಂದ ಎನ್‌ಸಿಸಿಗೆ ಎರವಲಾಗಿ ಬರುವ ಅಧಿಕಾರಿಗಳು ಬದಲಾದ ಪರಿಸರವನ್ನೂ ಹವೆಯನ್ನೂ ಗಮನಿಸಿ ಮುಕ್ತ ಮನಸ್ಸಿನಿಂದ ತಾವು ದುಡಿಯುತ್ತಿರುವ ವಿದ್ಯಾಮಂದಿರದ ಸಮಸ್ತ ಚಟುವಟಿಕೆಗಳಲ್ಲೂ ಭಾಗವಹಿಸಿ ತಾವು ಅದರ ಅವಿಭಾಜ್ಯ ಅಂಗವೆಂಬುದನ್ನು ಕಾರ್ಯತಃ ತೋರಿಸಬೇಕು. ತಮ್ಮ ದರ್ಜೆಯ ಪ್ರದರ್ಶನ, ಪ್ರಿನ್ಸಿಪಾಲರ ಸಂಬಳದೊಡನೆ ಹೋಲಿಸುವಾಗ ತಮ್ಮ ಔನ್ನತ್ಯದ ಘೋಷಣೆ ಇವು ಪೂರಾ ಅಸ್ಥಾನಿಕ ಅಕಾಲಿಕ ಮತ್ತು ಅಪ್ರಬುದ್ಧ ದೊಂಬರಾಟಗಳು. ಇಲ್ಲಿ ಮೊದಲ ಹೆಜ್ಜೆ ಇಟ್ಟು ಮಾದರಿ ಆಗಬೇಕಾದವನು ಬೆಟಾಲಿಯನ್ ಓಸಿ. ಕ್ಯಾಡೆಟುಗಳು ಮೂಲತಃ ವಿದ್ಯಾಮಂದಿರದ ಸದಸ್ಯರು ಎಂಬುದನ್ನು ಓಸಿ ಮರೆಯಬಾರದು.

೫ ವಿಶ್ವವಿದ್ಯಾಲಯಗಳೂ ರಾಜ್ಯಸರಕಾರಗಳೂ ಎನ್‌ಸಿಸಿಯ ವಿಚಾರ ತಳೆದಿರುವ ನಿಲವು ಶೀಘ್ರವಾಗಿ ಬದಲಾಗಬೇಕು ಒಂದು ತರಾವಿನ ಯಾಂತ್ರಿಕ ಮಂಜೂರಾತಿ ಅಥವಾ ಮುಂಗಡ ಪತ್ರದಲ್ಲಿ ನಮೂದಿಸಲಾದ ಎನ್‌ಸಿಸಿ ಶೀರ್ಷಿಕೆಯ ನಿರಾಸಕ್ತ ಮಂಜೂರಾತಿ ಮಾಡಿದರೆ ಈ ಸಂಸ್ಥೆಗಳ ಹೊಣೆ ಮುಗಿಯುವುದಿಲ್ಲ. ಮೂಲಭೂತವಾಗಿ ವಿದ್ಯಾಮಂದಿರಗಳಲ್ಲಿ ಮೂಡದ ಶಿಸ್ತು ಶೀಲ ಎನ್‌ಸಿಸಿ ಸಂಸ್ಪರ್ಶದಿಂದ ಮೈದಳೆಯಲು ಎನ್‌ಸಿಸಿ ಏನೂ ರಾಮಬಾಣ ಅಲ್ಲ. ಸರಕಾರ–ವಿಶ್ವವಿದ್ಯಾಲಯ–ಎನ್‌ಸಿಸಿ ಇವುಗಳೊಳಗೆ ಹೆಚ್ಚಿನ ಸಂಪರ್ಕ, ಅಭಿಪ್ರಾಯವಿನಿಮಯ ಏರ್ಪಟ್ಟು ವಿದ್ಯಾಭ್ಯಾಸದೊಡನೆ ಸಮಶ್ರುತಿ ಸಮಲಯವಾಗಿ ಎನ್‌ಸಿಸಿ ಐಕ್ಯವಾಗಬೇಕು. ಹೊರಗಿನಿಂದ ಹೇರಿದ ಒಂದು ಬೇಡದ ಹೊರೆ ಇದೆಂಬ ಭಾವ ದೂರವಾಗಬೇಕು. ಎನ್‌ಸಿಸಿ ಧೋರಣೆಯನ್ನು ಸರಕಾರಗಳೂ ವಿಶ್ವವಿದ್ಯಾಲಯಗಳೂ ಪದೇ ಪದೇ ಬದಲಿಸುತ್ತಿರಬಾರದು.

೬ ಎನ್‌ಸಿಸಿ ಆಡಳಿತೆಯಲ್ಲಿಯ ವಿಧಿನಿಯಮಗಳ ಲೆಕ್ಕ ಪತ್ರಗಳ ವ್ಯವಹಾರಗಳು ಸಂಪೂರ್ಣ ಪರಿಷ್ಕರಣಕ್ಕೆ ಒಳಪಟ್ಟು ಬಲು ಸರಳಗೊಳಿಸಲ್ಪಡಬೇಕು. ಹೊಣೆ ಹೊತ್ತಿರುವ ಪ್ರತಿ ಅಧಿಕಾರಿಯೂ, ಅನ್ಯಥಾ ರುಜುವಾತಿಸದಿದ್ದರೆ, ಅಪರಾಧಿ ಎನ್ನುವ ನಿಷೇಧಾತ್ಮಕ ಅದ್ಯುಕ್ತಿಯ ಮೇಲೆ ಈಗಿನ ವಿಧಿನಿಯಮಗಳ ಜಾಲ ಹಬ್ಬಿದೆ. ಇದರಿಂದಾಗಿ ವ್ಯರ್ಥವಾಗುವ ಕಾಲ. ಶ್ರಮ ಅವೆಷ್ಟೊ. ಅಂದಮಾತ್ರಕ್ಕೆ ಅಕ್ರಮ ವ್ಯವಹಾರಗಳಾಗಲೀ ಪೋಲಾಗುವ ಹಣವಾಗಲೀ ಕಡಿಮೆ ಆದದ್ದು ಸಂಶಯಾಸ್ಪದ.

೭

ಈಗ ನಾನು ಎನ್‌ಸಿಸಿಯ ಪರಿಧಿಯಿಂದ ಹೊರಗೆ ನಿಂತು ಇದರ ಸಮಸ್ಯೆಯನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ.

ಇಲ್ಲದ ಒಂದು ವಸ್ತು ಈಥರನ್ನು ಉಂಟು ಎಂದು ವಿಜ್ಞಾನಿಗಳು ದೃಢವಾಗಿ ನಂಬಿ ಅದರ ಗುಣ ಲಕ್ಷಣಗಳನ್ನು ಪರೋಕ್ಷ ವಿಧಾನಗಳಿಂದ ನಿರ್ಧರಿಸಿ ಹಲವಾರು ಸಿದ್ಧಾಂತಗಳನ್ನು ಮಂಡಿಸಿದರು. ಆದರೆ ಈ ಸಿದ್ಧಾಂತಗಳಲ್ಲೇ ಪರಸ್ಪರ ವ್ಯಾಘಾತಗಳೂ ಒಂದೊಂದರಲ್ಲೂ ಆಂತರಿಕ ವ್ಯಾಘಾತಗಳೂ ತಲೆದೋರಿ ಪ್ರಸಕ್ತ ಶತಮಾನದ ಆದಿಯಲ್ಲಿ ಭೌತವಿಜ್ಞಾನಕ್ಷೇತ್ರ ಅತ್ಯಂತ ಗೊಂದಲದಿಂದ ಕೂಡಿತ್ತು. ಆಗ ಐನ್‌ಸ್ಟೈನ್ ಬಂದು ಈಥರ್ ಎಂಬ ವಸ್ತು ಇಲ್ಲ, ಅದರ ಅಸ್ತಿತ್ವಕ್ಕೆ ಆಧಾರವಿಲ್ಲ, ಅದನ್ನು ಇಲ್ಲವೆಂದು ತೊಡೆದುಹಾಕಿದರೆ ಸಿದ್ಧಾಂತಗಳಲ್ಲಿ ಸಾಂಗತ್ಯ ಏರ್ಪಡುತ್ತದೆ ಎಂದು ಘೋಷಿಸಿದರು. ವಿಜ್ಞಾನದಲ್ಲಿ ಹೇಗೋ ಹಾಗೆ ಇತರ ರಂಗಗಳಲ್ಲೂ ಮಾನವ ತಪ್ಪು ನಿಲವುಗಳಿಂದ ತೊಡಗಿ ಆ ಕಾರಣವಾಗಿ ಒದಗುವ ಅಡ್ಡ ದಾರಿಯಲ್ಲಿ ಬಹುದೂರಸಾಗಿ ತಡವಾಗಿಯಾದರೂ ಈ ವ್ಯರ್ಥಶ್ರಮವನ್ನು ಅರಿತು ತರುವಾಯ ಸರಿದಾರಿಗೆ ತಿರುಗುತ್ತಾನೆ. ಇದು ವಿಕಾಸದ ಹಾದಿ. ಎನ್‌ಸಿಸಿ ಪ್ರಯೋಗದಲ್ಲೂ ನಾವು ಹೀಗೆ ಮಾಡಬಾರದೇಕೆ ಎಂದು ಪ್ರಶ್ನಿಸಿಕೊಳ್ಳುವುದು ಒಳಿತು.

ಎನ್‌ಸಿಸಿಯ ಪ್ರಧಾನ ದೌರ್ಬಲ್ಯವಿರುವುದು, ನನಗೆ ತಿಳಿದಂತೆ, ಅದರ ವ್ಯವಸ್ಥೆಯಲ್ಲಿ —ಅದನ್ನು ರಕ್ಷಣಾ ಇಲಾಖೆಯ ಅಂಗವಾಗಿ ಮಾಡಿ ಅದರ ಆಡಳಿತೆಯನ್ನು ಮಿಲಿಟೆರಿ ವರಿಷ್ಠರಿಗೆ ವಹಿಸಿರುವುದರಲ್ಲಿ. ಶಾಂತಿಪಾಲನೆ, ಗಡಿರಕ್ಷಣೆ, ಶತ್ರುಮರ್ದನ ಮುಂತಾದ ರಕ್ಷಣಾ ಕಾರ್ಯಗಳು ಮಿಲಿಟೆರಿಯ ಹೊಣೆ. ಶತ್ರು ದುಷ್ಟ ಎಂಬ ಅಂಗೀಕೃತ ಭಾವನೆಯನ್ನು ಆಧರಿಸಿ ರಕ್ಷಣಾ ವ್ಯವಸ್ಥೆ ಬೆಳೆದು ನಿಂತಿದೆ. ರಾಷ್ಟ್ರರಕ್ಷಣೆಯ ದೃಷ್ಟಿಯಿಂದ ಇಂಥ ನಿಲವು ಮತ್ತು ಅದರಿಂದ ಒದಗುವ ಪಾತ್ರ ಅತ್ಯಗತ್ಯ ನಿಜ. ಆದರೆ ತೊಂದರೆ ಉಂಟಾಗುವುದು ಪಟುವಿದ್ಯಾರ್ಥಿಗಳ ಸೃಜನಶೀಲ ದಿವಸಗಳಲ್ಲಿ ಈ ತತ್ತ್ವವನ್ನು ಅವರ ಮೇಲೆ ಹೇರುವಾಗ. ಮಿಲಿಟೆರಿವ್ಯವಸ್ಥೆಯಲ್ಲಿ ಬೆಳೆದು ಅದರ ಪರಂಪರೆಯನ್ನು ಮೈಗೂಡಿಸಿಕೊಂಡವರು ಬೇರೆ ಯಾವುದೇ ವ್ಯವಸ್ಥಿತ ಪಾತ್ರವನ್ನು ನಿರ್ವಹಿಸುವಲ್ಲಿಯೂ ತಮ್ಮ ಮೂಲಭೂತ ತತ್ತ್ವದಿಂದ ('ಶತ್ರು ದುಷ್ಟ') ವಿಮುಕ್ತರಾಗುವುದು ಅಸಂಭಾವ್ಯ. ಹೀಗಾಗಿ, ಮಿಲಿಟೆರಿ ಪರಂಪರೆಯಿಂದ ರೂಪುಗೊಂಡ ಎನ್‌ಸಿಸಿಯ ತತ್ತ್ವ ಅಥವಾ ತಳಸೂತ್ರ— ವಿದ್ಯಾರ್ಥಿಗಳೆಲ್ಲರೂ ಅಶಿಸ್ತಿನವರು, ಅಶೀಲವಂತರು ; ಅವರಿಗೆ ಯುಕ್ತಮಿಲಿಟೆರಿಶಿಕ್ಷಣ ನೀಡಿ ಉತ್ತಮ ಪ್ರಜೆಗಳಾಗಿ ಮಾಡಬೇಕು—ಎಂದಾಯಿತು. ಆದ್ದರಿಂದ ಎನ್‌ಸಿಸಿಯ ಪಾತ್ರ ರಚನಾತ್ಮಕ (constructive) ಆಗುವುದು ಬಿಟ್ಟು ನಿವಾರಣಾತ್ಮಕ (preventive) ಆಯಿತು. ರಚನಾತ್ಮಕ ಕಾರ್ಯಕ್ರಮವಿರುವಲ್ಲಿ ಯಾವಾಗಲೂ ಹೊಸ ಹಾದಿ ಹೊಸ ನೋಟ ಎದುರಾಗುತ್ತಲೇ ಇರುವುವು. ಇಂಥ ಯುವ ಪ್ರತಿಭೆಗೆ ಹೊಸ ಸವಾಲುಗಳೂ ಪರಿಹಾರಗಳೂ ಕಾಣುತ್ತಿರುತ್ತವೆ. ನಡಿಗೆ ಇರುವಲ್ಲಿ ಕಾಗದದ ಪಾತ್ರ ಕಡಿಮೆ. ಹೀಗಲ್ಲದೆ ನಿವಾರಣಾತ್ಮಕ ಕಾರ್ಯಗಳು ಎದುರಾದುವೋ ಅಲ್ಲಿ ಕಾಗದ ದಫ್ತರ ವಿಧಿ ನಿಯಮಗಳ ಪಾತ್ರ ಪ್ರಧಾನವಾಗುತ್ತದೆ. ಎನ್‌ಸಿಸಿ ವ್ಯವಸ್ಥೆಯ ಒಂದು ದೊಡ್ಡ ದೌರ್ಬಲ್ಯ ಈ

ಕಾಗದದ ಯುದ್ಧ. ಒಬ್ಬ ಪ್ರತಿಭಾವಂತ ನಾಯಕ ಎನ್‌ಸಿಸಿಯ ಪ್ರಸಕ್ತ ಚೌಕಟ್ಟಿನೊಳಗೆ ಒಂದು ಹೊಸ ಯೋಜನೆಯನ್ನು ತಯಾರಿಸಿ ಕಾರ್ಯಗತಮಾಡಲು ಪ್ರಯತ್ನಿಸಿ ನೋಡಲಿ. ಆಗ ಅವರ ವಿಧಿನಿಯಮಗಳ ಸಿಕ್ಕುಗಳು ಎದುರೊಡ್ಡುವ ಬ್ರಹ್ಮಗಂಟಿನ ಸಂಕೀರ್ಣತೆಯ ಅರಿವು ಅವನಿಗೆ ಚೆನ್ನಾಗಿ ಆಗುತ್ತದೆ ಇಲ್ಲಿ ಪ್ರಥಮ ಬಲಿ ಖುದ್ದು ಯೋಜನೆಯೇ !

ಎನ್‌ಸಿಸಿಯನ್ನು ರಕ್ಷಣಾ ಇಲಾಖೆಗೆ ಲಗತ್ತಿಸಿದುದರ ಪರಿಣಾಮವಾದ ಎರಡನೆಯ ದೋಷ ಮಿಲಿಟೆರಿಯ ಸಾರರಿಕ್ತ ಪ್ರತಿರೂಪವಾಗಿ ಎನ್‌ಸಿಸಿ ಮೈತಳೆದದ್ದು. ಮಿಲಿಟೆರಿಯ ಉದ್ದೇಶಾನುಸಾರ ಮೂರು ವಿಭಾಗಗಳಿರಬೇಕು ಸರಿ. ಕ್ಯಾಡೆಟುಗಳನ್ನು ಇವೇ ಜಾಡು ಗಳಲ್ಲಿ ಕಣ್ಣುಗಳಿಗೆ ಕಪ್ಪಡಿ ಕಟ್ಟಿ ಏಕರೀತಿಯ ಪೂರೈಸಿದ ಮಾಲುಗಳಾಗಿ ಮುದ್ರೆಯೊತ್ತಿ ರವಾನಿಸುವುದರ ಪುರುಷಾರ್ಥವೇನು ? ರಕ್ಷಣೆ ದೇಶಕ್ಕೆ ಅತ್ಯವಶ್ಯ ನಿಜ. ಅಂದಮಾತ್ರಕ್ಕೆ ಅದರ ಪಾತ್ರವನ್ನು ಅತಿಯಾಗಿ ಅವಧರಿಸಬೇಕಾಗಿಲ್ಲ. ಹಾಗೆ ಮಾಡಿದರೆ ಅದರಿಂದ ಕೇಡಾದೀತೇ ವಿನಾ ಒಳ್ಳೆಯದು ಫಲಿಸದು. ಹೀಗೆ ತಾತ್ತ್ವಿಕವಾಗಿ ಆಗಲಿ ಪ್ರಾಯೋಗಿಕ ವಾಗಿ ಆಗಲಿ ಎನ್‌ಸಿಸಿ ಈಗಿರುವಂತೆ, ಈ ೨೪–೨೫ ವರ್ಷಗಳಲ್ಲಿ ತನ್ನ ವಿಚಾರದಲ್ಲಿ ಉಜ್ಜ್ವಲ ಇತಿಹಾಸವನ್ನೇನೂ ರಚಿಸಿಕೊಂಡಿಲ್ಲ. ಆಗ ಈಗ ಅಲ್ಲಿ ಇಲ್ಲಿ ನಡೆದ ಮಹಾ ಘಟನೆಗಳನ್ನು ಉಲ್ಲೇಖಿಸಿ ಎನ್‌ಸಿಸಿಯ ಹಿರಿಮೆಯನ್ನು ಸಾರುವುದುಂಟು. ಆದರೆ ಒಂದನೆಯದಾಗಿ, ಇಂಥ ಘಟನೆಗಳು ಎಷ್ಟು ದುಬಾರಿ ವೆಚ್ಚದಲ್ಲಿ ನಡೆದಿವೆ ; ಎರಡನೆಯ ದಾಗಿ, ಆ ಘಟನೆಗಳ ಹಿನ್ನೆಲೆಯಲ್ಲಿಯ ಮಾನವಚೈತನ್ಯದ ವಿಕಾಸಕ್ಕೆ ಎನ್‌ಸಿಸಿಯೇ ಎಷ್ಟರ ಮಟ್ಟಿಗೆ ಕಾರಣ ಎಂಬುದರ ಪರಿಶೀಲನೆ ಆಗಬೇಕು ; ಮೂರನೆಯದಾಗಿ, ಅಲ್ಪಸಂಖ್ಯಾತ ಮಹಾ ಘಟನೆಗಳು ಸಾರ್ವತ್ರಿಕ ರೀತಿ ಎನಿಸವು, ಒಂದು ಪರಂಪರೆಯನ್ನು ರೂಪಿಸವು.

ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ, ಎನ್‌ಸಿಸಿ ಎಂಬ ಈಗಿರುವ ವ್ಯವಸ್ಥೆಯನ್ನು ರದ್ದುಗೊಳಿಸಿ ಅದರ ಬದಲು ವಿದ್ಯಾರ್ಥಿಗಳ ದೈಹಿಕ ಹಾಗೂ ಸಾಮೂಹಿಕ ಚಟುವಟಿಕೆ ಗಳನ್ನು ಸೃಜನಶೀಲವಾಗಿ ರೂಪಿಸಿ ನಿರ್ವಹಿಸಬಲ್ಲ ಒಂದು ನೂತನ ಕೇಂದ್ರ ಸಂಸ್ಥೆಯನ್ನು ರಚಿಸಬೇಕು. ಇದು ಕೇಂದ್ರ ವಿದ್ಯಾ ಇಲಾಖೆಯ ಒಂದು ಅಂಗವಾಗಿರಬೇಕು. ಇದನ್ನು, ಬೇಕಾದರೆ, ನವ-ಎನ್‌ಸಿಸಿ ಎಂದು ಕರೆಯೋಣ. ಸ್ಕೌಟ್, ಯುಓಟಿಸಿ, ಎನ್‌ಸಿಸಿ, ಎಸಿಸಿ, ಎನ್‌ಎಸ್‌ಸಿ ಇವೇ ಮೊದಲಾದ ಯುವಜನ ವ್ಯವಸ್ಥೆಗಳಿಂದ ಇದುವರೆಗೆ ಲಭಿಸಿದ ಅನುಭವಗಳನ್ನು ಕ್ರೋಡೀಕರಿಸಿ ಶಿಕ್ಷಣತಜ್ಞರಿಂದ ದೊರೆಯುವ ಹೊಸ ಸಲಹೆಗಳನ್ನು ಸ್ವೀಕರಿಸಿ ನವ ಎನ್‌ಸಿಸಿಯನ್ನು ರೂಪಿಸಬೇಕು. ಇದು ನಿರ್ವಹಿಸುವ ಪಾತ್ರ ವಿದ್ಯಾರ್ಜ ನೆಯ ವಿಸ್ತರಣೆಯೂ ಅದರ ಪೂರಕಾಂಶವೂ ಆಗಿರಬೇಕು. ವಿದ್ಯಾಭ್ಯಾಸದೊಡನೆ ನವ ಎನ್‌ಸಿಸಿ ಅಖಂಡವಾಗಿ ಏರಕಗೊಂಡಿರಬೇಕು.

ನವ ಎನ್‌ಸಿಸಿಯ ನಿರ್ಮಾಣದ ದಿಶೆಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಗಂಭೀರವಾಗಿ ಚರ್ಚಿಸಿ ಯೋಗ್ಯ ನಿರ್ಧಾರ ತಳೆಯುವ ಕಾಲ ಈಗ ಸನ್ನಿಹಿತವಾಗಿದೆ.

೮

ನಮ್ಮ ವಿದ್ಯಾರ್ಥಿಗಳು ಒಂದು ಸೂತ್ರವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲೇ ಬೇಕಾದ ಕಾಲ ಈಗ ಎಂದಿಗಿಂತ ಹೆಚ್ಚು ಪಕ್ವವಾಗಿದೆ—ಹಿಂಬಾಗಿಲಿನಿಂದ ಜಯಕ್ಕೆ ಪ್ರವೇಶವಿಲ್ಲ

ಎಂಬ ಸಂಪೂರ್ಣ ಸೂತ್ರವದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸ್ವರ್ಗಕ್ಕೆ ಒಳದಾರಿ ಇಲ್ಲ. ನಿಸರ್ಗದಲ್ಲಿ ಮಂಘತ್ತು ಊಟ ದೊರೆಯದು! ಜಯದೆಡೆಗೆ ಸಾಗುವ ಹಾದಿಯನ್ನು ಮಾತಾಪಿತೃಗಳ ಪ್ರತಿಷ್ಠೆ, ಜಾತಿ, ಪ್ರಾಂತ, ಆರ್ಥಿಕ ಪರಿಸ್ಥಿತಿ, ರಕ್ತಸಂಬಂಧ, ಪ್ರಭಾವ ಇವೇ ಮುಂತಾದ ಆಧಾರ ಸಾಮಗ್ರಿಗಳಿಂದಲೂ ಒತ್ತುಗಂಟುಗಳಿಂದಲೂ ನಿರ್ಮಿಸಿಲ್ಲ. ಕಾರ್ಯ, ಅಧಿಕಕಾರ್ಯ, ಅತ್ಯಧಿಕ ಕಾರ್ಯ ಇವು ಒಯ್ಯುವ ದಾರಿಯೇ ಜಯದೆಡೆಗೆ ರಹದಾರಿ. ಶಿಸ್ತು, ನಿರ್ಧಾರ, ಮಗ್ನತೆ ಮತ್ತು ಆರ್ಜವ ಎಂಬ ನಾಲ್ಕು ಮುಖ್ಯ ಪರಿಕರಗಳು ಯಶಸ್ಸಿನ ಆಧಾರ ಸ್ತಂಭಗಳು. ವಿದ್ಯಾರ್ಥಿ ತನ್ನ ಜೀವನ ಕಾಲದಲ್ಲಿ ಎದುರಾಗುವ ಬೌದ್ಧಿಕ ಸಮಸ್ಯೆಗಳನ್ನೂ ಸಾಮೂಹಿಕ ರಂಗದ ಸಮಸ್ಯೆಗಳನ್ನೂ ಸಮಾನ ಶ್ರದ್ಧಾಸಕ್ತಿಗಳಿಂದ ಸ್ವೀಕರಿಸಿ ನಿಷ್ಠೆಯಿಂದ ಅವುಗಳಿಗೆ ಪರಿಹಾರಗಳನ್ನು ಅರಸುವ ದಾರಿ ಯೊಂದೇ ಋಜುವಾದದ್ದು. ಅಲ್ಲಿ ಗುರಿ ದಾರಿಯಿಂದ ಅಭಿನ್ನ. ಈ ನಡಿಗೆಯಲ್ಲಿ ಒದಗುವ ಒಂದೊಂದು ಅನುಭವವೂ ಅಮೂಲ್ಯವಾದದ್ದು. ವೈಯಕ್ತಿಕವಾದದ್ದು. ಇಂಥ ಸಂತೋಷವನ್ನು ವಿದ್ಯಾರ್ಥಿಗಳು ಕ್ಷುದ್ರ ಒಳದಾರಿಗಳನ್ನು ಅರಸುವ ವ್ಯರ್ಥ ಶ್ರಮ ದಿಂದ ಕಳೆದುಕೊಳ್ಳಬಾರದು. ಶಿವರಾಮ ಕಾರಂತರ ಮಾತಿನಲ್ಲಿ "ಮಾಡುವ ಕೆಲಸವೇ ನಮಗೆ ಸಂತೋಷ ಕೊಡಬೇಕು ಎಂದು ತಿಳಿಯುತ್ತೇನೆ. ಗೆಲುವೇ ನಮಗೆ ಸಂತೋಷ ವನ್ನು ಕೊಡಬೇಕಾದಲ್ಲಿ ಸಾವಿರದಲ್ಲಿ ಒಬ್ಬಾತ ಅಂತಹ ಅದೃಷ್ಟಶಾಲಿಯಾಗಿ ಉಳಿಯ ಬಹುದು."

ಇಂದಿನ ವಿದ್ಯಾರ್ಥಿಗಳಿಗೆ ಔನ್ನತ್ಯದ ಆಕರ್ಷಣೆ ಎಲ್ಲ ಕಾಲದ ವಿದ್ಯಾರ್ಥಿಗಳಂತೆಯೇ ಇದೆ, ಸ್ವಲ್ಪ ಹೆಚ್ಚಾಗಿ ಕೂಡ. ಇದು ಅಭಿಮಾನದಾಯಕವಲ್ಲವೇ ಎಂಬ ಪ್ರಶ್ನೆಗೆ ನನ್ನ ಉತ್ತರ, ನಿಮಗೆ ಆಶ್ಚರ್ಯವಾದೀತು, ನಿಷೇಧಾತ್ಮಕ. ಕಾರಣ, ಔನ್ನತ್ಯದೆಡೆಗೆ ಸಾಗುವ ಹಾದಿಯನ್ನು ಕುರಿತು ಇವರಿಗೆ ಅಂಥ ಯಾವ ಪ್ರೀತಿಯೂ ಇಲ್ಲ, ಸ್ಪಷ್ಟ ನಿಲವೂ ಇಲ್ಲ. ಈ ಧಿಡೀರ್ ಜಯಲಾಲಸೆಯೇ ವಿದ್ಯೆಯಲ್ಲಿಯೂ ಅದೇ ರೀತಿ ಇತರ ಸೃಷ್ಟಿಶೀಲರಂಗಗ ಳಲ್ಲಿಯೂ ಗುಣಮಟ್ಟ ಪ್ರಪಾತದೋಪಾದಿಯಲ್ಲಿ ಕುಸಿಯಲು ಕಾರಣ. ಇಂದಿನ ವಿದ್ಯಾರ್ಥಿ ಗಳಿಗಿರುವ ಸೌಕರ್ಯ ಸವಲತ್ತುಗಳು ಸ್ವಾತಂತ್ರ್ಯಪೂರ್ವ ಭಾರತದ ವಿದ್ಯಾರ್ಥಿಗಳದ್ದ ಕ್ಕಿಂತ ಅದೆಷ್ಟೋ ಅಧಿಕ. ಆದರೆ ಅವುಗಳಿಂದ ನಿರೀಕ್ಷಿಸಿದ ಗುಣವೃದ್ಧಿ ಆಗದಿರುವುದನ್ನು ನೋಡುವಾಗ, ಬದಲು ಅನೇಕ ವೇಳೆ ಕ್ಷೋಭೆ ಹೆಚ್ಚುತ್ತಿರುವುದನ್ನು ಕಾಣುವಾಗ, ಸೌಕರ್ಯ ಮತ್ತು ಪ್ರತಿಭಾವಿಕಾಸ ಪರಸ್ಪರ ಪ್ರತಿಲೋಮಾನುಪಾತದಲ್ಲಿವೆಯೇ (inversely proportional) ಎಂಬ ಸಂದೇಹ ಮೂಡುವುದು ಸಹಜ. ಇದು ಹೇಗೂ ಇರಲಿ. ವಿದ್ಯಾರ್ಥಿಜೀವನ ಒಂದು ದೊಡ್ಡ ಭೌದ್ಧಿಕ ಹಾಗೂ ದೈಹಿಕ ಸವಾಲು, ಗರಿಷ್ಠ ವಿಭವಶಕ್ತಿಯನ್ನು (maximum potential energy) ಸಂಗ್ರಹಿಸಿಟ್ಟುಕೊಳ್ಳಲು ಬಲು ಯೋಗ್ಯ ಅವಕಾಶ ಎಂಬುದನ್ನು ನಮ್ಮ ತರುಣಜನಾಂಗ ಅರಿಯಬೇಕು. ಪ್ರಾಯ ೨೫ರ ಹೆಚ್ಚೆಂದರೆ ೩೦ರ ತನಕದ ಅತ್ಯಂತ ಫಲವಂತ ದಿವಸಗಳಲ್ಲಿ ನಿಸರ್ಗ ವ್ಯಕ್ತಿಗೆ ಒದ ಗಿಸುವ ಸಾಮರ್ಥ್ಯಗಳು ಬಹು-ಆಯಾಮದವು (multidimensional). ಪ್ರಪಂಚದ ಮಹಾ ವಿಜ್ಞಾನಸಿದ್ಧಿಗಳು (ಉದಾಹರಣೆಗೆ, ನೊಬೆಲ್ ಪಾರಿತೋಷಿಕ ದೊರೆಕಿಸಿ ಕೊಟ್ಟವನ್ನು ಪರಿಶೀಲಿಸಬಹುದು) ನಡೆದಿರುವುದು ಈ ಅವಧಿಯಲ್ಲಿ. ಬುದ್ಧಿಶಕ್ತಿಯ

ವಿತರಣೆಯಲ್ಲಿ ನಿಸರ್ಗ ಯಾವ ಜಾತಿ, ಜನಾಂಗದ ಮೇಲೆಯೂ ಅಧಿಕ ಪುರಸ್ಕಾರವನ್ನಾಗಲೀ ತಿರಸ್ಕಾರವನ್ನಾಗಲೀ ಪ್ರದರ್ಶಿಸಿರುವುದಕ್ಕೆ ವೈಜ್ಞಾನಿಕಾಧಾರಗಳಿಲ್ಲ. ಅಂದರೆ ಏನಾಯಿತು ? ನಾಡಿನ ಪ್ರತಿ ವಿದ್ಯಾರ್ಥಿಯಲ್ಲಿಯೂ ವಾಲ್ಮೀಕಿ, ವ್ಯಾಸ, ನ್ಯೂಟನ್, ಐನ್‌ಸ್ಟೈನ್ ಮೊದಲಾದ ವಿಭೂತಿ ಪುರುಷರಾಗಲು ಬೇಕಾದ ಸಾಮರ್ಥ್ಯ ಸುಪ್ತವಾಗಿದೆ ಎನ್ನಬಹುದು. ಇದನ್ನು ಅರಿತುಕೊಂಡು ಆ ಸುಪ್ತ ಮಹಾಪ್ರತಿಭೆ ವಿಕಸಿಸುವ ಹಾದಿಯಲ್ಲಿ ವಿದ್ಯಾರ್ಥಿ ನಡೆದನೋ ಅವನು ಇಟ್ಟ ಒಂದೊಂದು ಹೆಜ್ಜೆಯೂ ದಾಖಲೆ ಆಗುತ್ತದೆ, ಹನುಮಂತ ಲಂಘನವೇ ಆಗುತ್ತದೆ, ಜ್ಞಾನ ಕ್ಷಿತಿಜವನ್ನು ಅಷ್ಟಷ್ಟು ವಿಸ್ತರಿಸುತ್ತದೆ, ಅವನಿಗೆ ಸತ್ಕಾರ್ಯ ನಿರ್ವಹಣೆಯಿಂದ ಮಾತ್ರ ಒದಗುವ ಸಂತೃಪ್ತಿಯನ್ನು ನೀಡುತ್ತದೆ. ಹಾಗಲ್ಲದೇ ತನ್ನ ನಿಸರ್ಗದತ್ತ ಸಾಮರ್ಥ್ಯವನ್ನು ಕಡೆಗಣಿಸಿ ಒತ್ತುಗಂಬಗಳ ನೆರವಿನಿಂದ, ಏಣಿಗಳ ಸಹಾಯದಿಂದ ಎತ್ತರ ಏರಲು ಪ್ರಯತ್ನಿಸಿದನೋ ಅವನು ವ್ಯಾವಹಾರಿಕವಾಗಿ, ಆರ್ಥಿಕವಾಗಿ ಕೂಡ, ಯಶಸ್ಸನ್ನು ಪಡೆಯಬಹುದು. ಆದರೆ ಅಂಥವನ ಬಾಳು ಸಮೃದ್ಧ ಜೀವನ ಎನ್ನಿಸುವುದಿಲ್ಲ, ದೇಶ ವಿಘಾತಕವೂ ಹೌದು.

ನಮ್ಮ ವಿದ್ಯಾರ್ಥಿಗಳು ಸಮೃದ್ಧ ಜೀವನವನ್ನು ಸುದೀರ್ಘಕಾಲ ಬಾಳಬೇಕು. ಅವರು ಛಲವಂತರಾಗಬೇಕು, ನಿಷ್ಠಾವಂತರಾಗಬೇಕು, ಮೇಲಾಗಿ ಪ್ರಾಮಾಣಿಕರಾಗಬೇಕು. ಅರ್ಹತೆ ಇಲ್ಲದೇ ತಾನು ಸಂಪಾದಿಸುವ ಒಂದೊಂದು 'ಯಶಸ್ಸೂ' ರಾಷ್ಟ್ರಕ್ಕೆ ಎರಡು ರೀತಿಯಲ್ಲಿ ಹಾನಿ ಉಂಟುಮಾಡುತ್ತದೆ ಎಂಬುದನ್ನು ವಿದ್ಯಾರ್ಥಿ ಚೆನ್ನಾಗಿ ತಿಳಿದಿರಬೇಕು —ಒಂದು, ಅನರ್ಹ ವ್ಯಕ್ತಿ ಆ ಸ್ಥಾನದಲ್ಲಿ ನಡೆಸುವ ಅನಾಚಾರ ; ಎರಡು ಆ ಸ್ಥಾನದಲ್ಲಿ ಅರ್ಹವ್ಯಕ್ತಿಯಿಂದ ಒದಗುತ್ತಿದ್ದ ಸಮರ್ಪಕ ಸೇವೆಯ ಅಲಭ್ಯತೆ.

ಬಂಡೆ ಏರಿಕೆಯಲ್ಲಿ ಒಂದು ಚಿರಪರಿಚಿತ ಪಾಠ ಉಂಟು—ಏರಿರದ ಬಂಡೆಗಳಿರಬಹುದು ಆದರೆ ಏರಲಾಗದ ಬಂಡೆಗಳಿಲ್ಲ. ಬದುಕೂ ಹಾಗೆ. ಬಿಡಿಸದಿರುವ ಸಮಸ್ಯೆಗಳಿರಬಹುದು ; ಆದರೆ ಬಿಡಿಸಲಾಗದ ಸಮಸ್ಯೆಗಳೇ ಇಲ್ಲ. ಜೀವನವನ್ನು ಪ್ರಾಮಾಣಿಕವಾಗಿ ಸ್ವೀಕರಿಸಿ ಅದರ ಸಮಸ್ಯೆ ಸವಾಲುಗಳನ್ನು ಪ್ರಾಮಾಣಿಕವಾಗಿ ಕ್ರಮಬದ್ಧವಾಗಿ ಪರಿಹರಿಸಲು ಸಾಗುವ ದಾರಿಯೊಂದೇ ಋಜುಮಾರ್ಗ. ಇಂಥ ಋಜುಮಾರ್ಗದ ಮೇಲೆ ನಿರ್ಭೀತಿಯಿಂದ ನಡೆಯುವ ಧೃತಿ ಉತ್ಸಾಹ ನಮ್ಮ ವಿದ್ಯಾರ್ಥಿಗಳಿಗೆ ಬರಲಿ ಎಂದು ಹಾರೈಸುತ್ತೇನೆ. ನಾಡಿನ ಆಶೆ ಮತ್ತು ನಾಳೆ ಅವರು ತಾನೇ ! "ಹೊಸ ಚಿಗುರು ಹಳೆ ಬೇರು ಸೇರಿರಲು ಮರ ಸೊಬಗು !"

ಸರ್ ಸಿ. ವಿ. ರಾಮನ್ ಅವರ ಭಾಷಣಗಳಿಂದ ಆಯ್ದಿರುವ ಈ ಎರಡು ಪರಿಚ್ಛೇದಗಳನ್ನು ನಮ್ಮ ವಿದ್ಯಾರ್ಥಿಗಳು ಮನನ ಮಾಡಿ ಅನುಷ್ಠಾನಿಸಬೇಕು.

"ಬೌದ್ಧಿಕ ಮೌಲ್ಯಗಳನ್ನು ತಿಳಿಯುವುದರ ಜೊತೆಗೆ ಸಾಮಾಜಿಕ ಪ್ರಜ್ಞೆಯನ್ನೂ ಉನ್ನತ ಸಂಸ್ಕೃತಿ ಒಳಗೊಂಡಿದೆ. ಸುಸಂಸ್ಕೃತ ವ್ಯಕ್ತಿಗೆ ಅರ್ಥಹೀನ ತತ್ತ್ವ, ಗೊಡ್ಡು ಸಿದ್ಧಾಂತ, ಕುರುಡು ನಂಬಿಕೆಗಳಿಂದ ಏನೂ ಪ್ರಯೋಜನವಿಲ್ಲ. ದೇಶವನ್ನು ದುರ್ಬಲಗೊಳಿಸುವ ಮತೀಯ ವೈಷಮ್ಯ, ಜಾತೀಯ ಕಲಹ ಇವನ್ನೇ ಪುರಸ್ಕರಿಸುವ ನೆಲೆ ವಿಶ್ವವಿದ್ಯಾಲಯವಾದರೆ ಅದು ಜ್ಞಾನದ ದೇವಾಲಯವಾಗುವುದರ ಬದಲು ಅಜ್ಞಾನದ ಕ್ರಿಮಿಕೀಟಗಳನ್ನು ಉತ್ಪಾದಿಸುವ ಕೊಳಚೆಗುಂಡಿಯಾಗುವುದು. ವೈಯಕ್ತಿಕ ಯೋಗ್ಯತೆ,

ಸಾಮರ್ಥ್ಯ, ಶೀಲ ಇವೇ ವಿಶ್ವವಿದ್ಯಾಲಯದಲ್ಲಿ ಜಯದೆಡೆಗೆ ರಹದಾರಿ ಆಗಬೇಕು. ವಿವಿಧ ಅಭಿಪ್ರಾಯ, ಭಾವನೆಗಳ ಸಮನ್ವಯ ಕ್ಷೇತ್ರ ವಿಶ್ವವಿದ್ಯಾಲಯವಾಗಬೇಕು. ಪರಸ್ಪರ ಸೌಹಾರ್ದ ಸಹಿಷ್ಣುತೆ ಇಲ್ಲಿರಬೇಕು. ನಮ್ಮ ವಿಶ್ವವಿದ್ಯಾಲಯಗಳು ಇಂಥ ಉದಾತ್ತ ಧ್ಯೇಯಗಳಿಂದ ಪ್ರೇರಿತವಾದರೆ ದೇಶದ ಸಮಸ್ಯೆಗಳನ್ನು ಪರಿಹರಿಸಲು ಅವು ಬೇರೆ ಎಲ್ಲ ಸಮಸ್ಯೆಗಳಿಗಿಂತಲೂ ಹೆಚ್ಚು ಸಮರ್ಥವಾಗುವುವು.''

''ನಾವಿಂದು ವೇದಕಾಲದಲ್ಲಿ ಜೀವಿಸುತ್ತಿಲ್ಲ. ಆಧುನಿಕ ಯುಗದಲ್ಲಿದ್ದೇವೆ. ಸಂಶೋಧನೆಯ ಯುಗದಲ್ಲಿದ್ದೇವೆ. ಕಲ್ಪನೆ ಹೊಸ ಹೊಸ ಕ್ಷೇತ್ರಗಳಲ್ಲಿ ವಿಹರಿಸಿ ಸಂಶೋಧನೆ ನಡೆಸಿ ನಿಸರ್ಗದ ನಿಗೂಢ ಸಮಸ್ಯೆಗಳನ್ನು ಬಗೆಹರಿಸುವ ದಾರಿಯಲ್ಲಿದ್ದೇವೆ. ಮಾನವನ ಸಕಲಶಕ್ತಿಗಳೂ ಈ ದಾರಿಯಲ್ಲಿ ಕೇಂದ್ರೀಕೃತವಾಗಿವೆ. ಇಂಥ ಮಾನವಶಕ್ತಿಯ ಪ್ರವಾಹದಲ್ಲಿ ಭಾರತದಲ್ಲಿರುವ ನಾವು ದಂಡೆಯಲ್ಲಿ ನಿಂತು ಬೆರಗಾಗಿ ನೋಡುತ್ತಿರಬಾರದು. ಹೀಗೆ ನಿಂತರೆ ನಾವು ಅಸಮರ್ಥರು, ಗೂಡಿನಲ್ಲಿ ಬೀಗ ಹಾಕಿಸಿಟ್ಟುಕೊಳ್ಳಲು ಮಾತ್ರ ಯೋಗ್ಯರು ಎಂದು ಒಪ್ಪಿಕೊಂಡಂತೆ. ಆರ್ಥಿಕವಾಗಿಯೂ ರಾಜಕೀಯವಾಗಿಯೂ ಅದು ನಮ್ಮ ಸರ್ವನಾಶ.''

ಉನ್ನತಸ್ಥಾನವನ್ನೇರಿಹ ವಿಭೂತಿ ಪುರು
ಷರ್ ಭೋಂಕನೆಯ ಪಾರ್ದರಿಲ್ಲ ಗುರಿಗೆ
ನಿದ್ರಾಸಮಾಧಿಯೊಳ್ ಬಾಂಧವರ್ ಕೆಡೆದಿರಲ್
ಶ್ರಮಿಸಿಯೇರಿಹರು ಧ್ರುವತಾರೆಯೆಡೆಗೆ

ಲಾಂಗ್‌ಫೆಲೋ

ಸಮಾರೋಪ

ಈ ಪುಸ್ತಕಕ್ಕೆ ಸಮಾರೋಪವಾಗಿ ಒಂದು ಟಿಪ್ಪಣಿ ಬರೆಯಬೇಕೆಂದು ಈಗ (೨೯-೨-೧೯೯೬) ಅನ್ನಿಸುತ್ತದೆ.

ನಿಸರ್ಗದ ಅಸಂಖ್ಯ ಸೃಷ್ಟಿಗಳ ಪೈಕಿ ಮಾನವನ ಸ್ಥಿತಿ ಮತ್ತು ಗತಿ ಏಕಮೇವಾದ್ವಿತೀಯ.

ಈತ ಅಜೀವಿ ಅಲ್ಲ—ಜೀವಿ. ಸ್ಥಾವರ ಸಸ್ಯ ಅಲ್ಲ—ಜಂಗಮ ಪ್ರಾಣಿ. ಸಹಜ ಪ್ರವೃತ್ತಿ (instinct) ನಿಯಂತ್ರಿತ ಮೂಕ ಪ್ರಾಣಿ ಅಲ್ಲ—ಯೋಚಿಸಬಲ್ಲ, ಮಾತಾಡಬಲ್ಲ, ಕೆಲಸಮಾಡಬಲ್ಲ ಬುದ್ಧಿವಂತ ಪ್ರಾಣಿ. ಎಂದೇ ನಿಸರ್ಗವನ್ನು ವೀಕ್ಷಿಸಿ ಅರ್ಥವಿಸಿ ವ್ಯಾಖ್ಯಾನಿಸಿ ಅನುಕರಿಸಿ ಜೀವನ ಸೌಕರ್ಯಗಳನ್ನು ರೂಪಿಸಿಕೊಳ್ಳುವುದು ಈತನಿಗೆ ಸಿದ್ಧಿಸಿದೆ. ನಾಗರಿಕತೆ ಮತ್ತು ಸಂಸ್ಕೃತಿ, ಅಂತೆಯೇ ವಿಜ್ಞಾನ ಮತ್ತು ತಂತ್ರವಿದ್ಯೆ ನಮಗೆ ಒದಗಿರುವುದು ಈ ಕಾರಣಗಳಿಂದ.

ಅತಿಶಯ ಸೌಕರ್ಯ ಮತ್ತು ತಜ್ಜನಿತ ಸಮೃದ್ಧಿ, ಮೂಲ ಪ್ರೇರಣೆ ಆಶಯಗಳ ಬಗ್ಗೆ ಮಾನವನನ್ನು ಕುರುಡನನ್ನಾಗಿಸುವುದು ವಿರಳವಲ್ಲ. ದ್ರಷ್ಟಾರ ಅಥವಾ ಸಾಮಾಜಿಕ ಚಿಂತಕ ನೇರವಾಗಿ ಮಾನವೀಯ ಸಮಸ್ಯೆಗಳಿಗೆ ಹೃದಯಾಂತರಾಳದಿಂದ ಸ್ಪಂದಿಸುತ್ತಾನೆ. ಮತ್ತು ಪ್ರೀತಿ-ನೀತಿ ಸಮತಲದಲ್ಲಿ ಪರಿಹಾರಗಳನ್ನು ಸೂಚಿಸುತ್ತಾನೆ. ಸ್ವಂತ ಆಚರಣೆಯಿಂದ ಈ ಪರಿಹಾರಗಳಿಗೆ ದೈವಿಕವೋ ಎನ್ನುವ ಅಂತಸ್ತನ್ನು ಕೂಡ ಆವಾಹಿಸುತ್ತಾನೆ. ಆ ಮಟ್ಟದ ಕಳಕಳಿಯಾಗಲೀ ಆರ್ಜವವಾಗಲೀ ದೃಷ್ಟಿ ವೈಶಾಲ್ಯವೇ ಆಗಲೀ ಇರದ ಆತನ ಅನುಚರರು ಆ ನಿಃಸ್ವಾರ್ಥ ಹಾಗೂ ಹೃದಯವಂತ—ಆದ್ದರಿಂದ ವೈಯಕ್ತಿಕ ಆಚರಣೆಗೆ ಕಡು ಕಠಿಣವಾದ—ಮಾರ್ಗದಲ್ಲಿ ಸಹನೆಯಿಂದ ಗಮಿಸಲಾಗದೇ ದ್ರಷ್ಟಾರನ ಬಾಹ್ಯ ರೀತಿ ರಿವಾಜುಗಳನ್ನು ಅನುಕರಿಸತೊಡಗುತ್ತಾರೆ. ಒಂದೇ ಒಂದು ಉದಾಹರಣೆ ನೋಡಿ : ಬ್ರಿಟಿಷ್ ಚಕ್ರಾಧಿಪತ್ಯದ ಸ್ವಾರ್ಥ ಲಾಲಸೆಯನ್ನು ಭಾರತದಿಂದ ಮೂಲೋತ್ಪಾಟಿಸಲು ಮಹಾತ್ಮಗಾಂಧಿ ಕಂಡುಕೊಂಡ ಏಕೈಕ ಪ್ರಾಯೋಗಿಕ ಮಾರ್ಗವನ್ನು ಅಹಿಂಸೆ, ಉಪವಾಸ, ಪುರಸ್ಕಾರ ಮುಂತಾದ ಸಕಾರಾತ್ಮಕ ಕ್ರಿಯಾಶೀಲ ಬಲಗಳಿಂದ ಕಡೆಯಲಾಗಿತ್ತು. ಆದರೆ ಈಗ ಏನಾಗಿದೆ ? ವಿಪರೀತ ಅಸಂಗತ್ಯ.

ಅರ್ಥವೇನು ? ಮೂಲೋದ್ದೇಶದಿಂದ ದೂರವಾದ ಯಾವ ಆಚರಣೆಯೂ ಕೇವಲ ಬೂಟಾಟಿಕೆ. "ಕರದಲಿ ಜಪಮಣಿ ಬಾಯಲಿ ಮಂತ್ರವು। ಅರಿವೆಯ ಮುಸುಕನು ಮೋರೆಗೆ ಹಾಕಿ। ಪರಸತಿಯರ ಗುಣ ಮನದಲಿ ಸ್ಮರಿಸುತ। ಪರಮ ವೈರಾಗ್ಯಶಾಲಿ ಎಂದೆನಿಸುವುದು—ಉದರವೈರಾಗ್ಯವಿದು !"

ಧ್ವನಿ ಏನು ! ಕವಾಯತಿ ರಂಗದ ಶಿಸ್ತು (parade ground discipline) ಆಂತರಿಕ ಸಭ್ಯತೆ ಸಂಸ್ಕೃತಿ ಆರ್ಜವಗಳ ಪ್ರಕಟಿತ ರೂಪವಾದಾಗ, ಮಾತ್ರ ಸಾರ್ಥಕವಾಗುತ್ತದೆ ; ಹಾಗೆ ಆಗದಾಗ ಕೇವಲ ಸಿಂಪಿಗ ಮೋಚಿ ಬ್ರಾಸ್ಸೋ ಬ್ಲಾಂಕೋ ಬೂಟ್

ಪಾಲಿಷ್ ಮುಂತಾದವುಗಳ ಯಾಂತ್ರಿಕ ಲೇಪನವಾಗುತ್ತದೆ. ಎಲ್ಲಿ ವಿಧಿನಿಯಮಗಳು ನಿಜ ಉದ್ದೇಶಕ್ಕೆ ಬಂಧಕಗಳಾಗುತ್ತವೋ ಅಲ್ಲಿ ಬೂಟಾಟಿಕೆ ವಿಜೃಂಭಿಸುತ್ತಿರುವುದು : ಬಹುತೇಕ ಧಾರ್ಮಿಕ ಮಂದಿರಗಳೂ ವಿವಾಹಾದಿ ಉತ್ಸವಗಳೂ ಪೂಜೆ ಧ್ಯಾನಾದಿ ಭಕ್ತ–ಭಗವಂತ ಏಕಾಂತ ಸಂವಾದಗಳೂ ಇಂದು ಪ್ರತಿಷ್ಠಾಸೂಚಕ ಪ್ರದರ್ಶನಗಳಾಗಿರುವುದನ್ನು ಗಮನಿಸುವಾಗ ದುಃಖವಾಗುತ್ತದೆ.

ನಿಸರ್ಗಕ್ಕೆ ಮಾನವ ಎನ್ನುವ ಈ ಜೀವಂತ ತೊಗಲಗೊಂಬೆಯನ್ನು ನಿರ್ಮಿಸಿ ಇದಕ್ಕೆ ಉಸಿರು ಮತ್ತು ಬುದ್ಧಿ ಪ್ರದಾನಿಸುವಲ್ಲಿ ಉದ್ದೇಶವೇನಾದರೂ ಇದ್ದರೆ ಅದು : "ಅಯ್ಯಾ ಮಾನವಾ ! ನೀನು ನನ್ನೊಂದಿಗೆ ಸಹಕರಿಸಿ ಬಾಳಬೇಕು, ತನ್ಮೂಲಕ ನಿನ್ನ ಉತ್ಕರ್ಷ ಸಾಧಿಸಬೇಕು. ಹೀಗಲ್ಲದೇ ನೀನು ನನ್ನನ್ನು ವಿರೋಧಿಸಿ ಅಥವಾ ಶೋಷಿಸಿ ಅಥವಾ ಜಯಿಸಿ ವಿಜೃಂಭಿಸುತ್ತೇನೆ ಎಂದು ವೃಥಾ ಪಣ ತೊಟ್ಟು ಆ ರೀತಿ ನಡೆದುಕೊಂಡುದಾದರೆ ನಿನ್ನ ಸಂತತಿ ಒಂದಲ್ಲ ಒಂದು ದಿನ ನಶಿಸಿ ನಿರ್ನಾಮವಾಗಿ ಹೋಗುವುದು ಖರೆ, ಖರೆ—ಇದು ಮಾತಲ್ಲ ಒರೆ, ಬರೆ !"

ನಿಸರ್ಗ–ಮಾನವ ಅನ್ಯೋನ್ಯತೆ ಸಹಜ ಜೀವನ; ನಿಸರ್ಗ- ಮಾನವ ವೈರುಧ್ಯ ಕೃತಕ ಜೀವನ.

ಇದು "ಎನ್‌ಸಿಸಿ ದಿನಗಳು" ಪುಸ್ತಕದ ತಳರೂಪಿಕೆ. ಎಂದೇ ಅಂದಿನಂತೆ (ಎನ್‌ಸಿಸಿ ದಿನಗಳನ್ನು ಬಾಳುತ್ತಿದ್ದಾಗ ಮತ್ತು ಮುಂದೆ ೧೯೭೧-೭೨ರಲ್ಲಿ ಮೆಲುಕು ಹಾಕುತ್ತಿದ್ದಾಗ) ಒಂದು ಕೂಡ ಇದು ನನಗೆ ಅರ್ಥದಾಯಕವಾಗಿದೆ (ವಿತ್ತದಾಯಕವೆಂಬ ಅರ್ಥದಲ್ಲಿ ಅಲ್ಲ !)

ಒಪ್ಪೋಲೆ

"ಅಚ್ಚು ಕರಡನು ತಿದ್ದುವುದರಲಿ। ಅಚ್ಯುತನ ವಾಹನದ ದೃಷ್ಟಿಯು। ಕೆಚ್ಚಿನಿಂ ನಡೆವಿಹೆನು ನಾನೆಂಬದಟಿಗೇನಾಯ್ತು?" ನನ್ನ ಗರುಡದೃಷ್ಟಿಯ ತೀಕ್ಷ್ಣತೆ ಈಗ ಮುಸಳಿದೆ. ಸೊಸೆ ರುಕ್ಮಿಣಿಮಾಲಾ ಮುದ್ರಿತ ಫಾರಮ್‌ಗಳನ್ನು ಪೂರ್ತಿ ಓದಿ ಅಸಂಖ್ಯ ಮುದ್ರಣ ಸ್ಖಾಲಿತ್ಯಗಳನ್ನು ಗುರುತು ಹಾಕಿ ಕೊಟ್ಟಿರುವಳು. ಅರ್ಥಕ್ಕೆ ಖಾತ್ರಿ ಊನ ಬರುವಂಥ ದೋಷಗಳನ್ನು ಇಲ್ಲಿ ಸೂಚಿಸಿದೆ. ಓದುಗರ ಕ್ಷಮೆ ಕೋರುತ್ತೇನೆ.

ಪುಟ	ಸಾಲು	ತಪ್ಪು	ಒಪ್ಪು
೧	೨೬	ಸ್ವಭಾದವನು	ಸ್ವಭಾವದವನು
೧೦೬	೧೭	ಆಜಾತಶತ್ರು	ಅಜಾತಶತ್ರು
೧೨೭	೧೨	ಅಭಿಪ್ರಾಯರ್ಗಳಿಗೆ	ಅಭಿಪ್ರಾಯಗಳಿಗೆ
೨೧೮	೪	ಅಬ್ಬರಿಸಿದ	ಅಬ್ಬರಿಸಿದೆ
೨೫೦	೧	ನೀಲಗ್ರಥದ	ನೀಲಗ್ರಂಥದ
೩೩೫	೨೮	ಖರ್ಚನಿಂದ	ಖರ್ಚಿನಿಂದ
೩೫೭	೨೩	ಸಂತೋಧನ	ಸಂಶೋಧನ
೩೭೯	೩೩	ಕತ್ತಲೊಚನೆ	ಕತ್ತಲೊಡನೆ
೩೮೫	೧೮	ಬಡೆ	ಬಂಡೆ



ಪತ್ನಿ ಲಕ್ಷ್ಮಿ ಮತ್ತು ಮೊಮ್ಮಗಳು ಅಕ್ಷರಿ ಜೊತೆ ಲೇಖಕ (ಏಪ್ರಿಲ್ ೧೯೯೫)

ಮಡಿಕೇರಿಯ ಜಿ. ಟಿ. ನಾರಾಯಣರಾಯರು (ಜನನ ೩೦-೧-೧೯೨೬) ಮದ್ರಾಸು ವಿಶ್ವವಿದ್ಯಾಲಯದ ಗಣಿತ ಎಂಎ ಪದವೀಧರರಾಗಿ (೧೯೪೭) ಮದ್ರಾಸು, ಮಂಗಳೂರು, ಮಡಿಕೇರಿ ಮತ್ತು ಬೆಂಗಳೂರು ಕಾಲೇಜುಗಳಲ್ಲಿ ಗಣಿತೋಪನ್ಯಾಸಕಾರರಾಗಿ ಸೇವೆ ಸಲ್ಲಿಸಿದರು (೧೯೪೭-೬೯). ೧೯೫೨-೬೯ ಅವಧಿಯಲ್ಲಿ ಎನ್‌ಸಿಸಿ ಅಧಿಕಾರಿಯಾಗಿಯೂ ಅನುಭವ ಗಳಿಸಿದರು. ಅಭಿಜಾತ ಸಂಗೀತದಲ್ಲಿ ಗಾಢ ಆಸಕ್ತಿ. ಸಾಹಿತ್ಯ ಮೊದಲ ಒಲವು. ಗಣಿತ ಮತ್ತೆ ಒದಗಿದ ಹಂದರ. ಎಂದೇ ಕನ್ನಡದಲ್ಲಿ ವಿಜ್ಞಾನ ವಾಙ್ಮಯ ಕೃಷಿ ನಿರಂತರ ದಾಸೋಹ. ಇದರ ಫಲವಾಗಿಯೋ ಎಂಬಂತೆ ೧೯೬೯ರಲ್ಲಿ ಅಯಾಚಿತವಾಗಿ ಬಂದ ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನ : ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕತ್ವ. ೧೯೬೯-೮೬ ಅವಧಿಯಲ್ಲಿ ಈ ಜ್ಞಾನ-ವಿಜ್ಞಾನ ಪರಿವ್ರಾಜಕರೂ ಸಂವಹನಕಾರರೂ ಆಗಿ ಸೇವೆ ಸಲ್ಲಿಸಿ ವಯಸ್ಸು ಅರುವತ್ತು ತುಂಬಿದಾಗ ವಿಶ್ವವಿದ್ಯಾನಿಲಯದ ನಿಯಮಪ್ರಕಾರ ನಿವೃತ್ತರಾದರು. ಅಲ್ಲಿಂದ ಮುಂದಕ್ಕೆ ಪೂರ್ಣಕಾಲ ವಿಜ್ಞಾನವಾಙ್ಮಯ ಲೇಖಕರಾಗಿ ಮೈಸೂರಿನಲ್ಲಿ ನೆಲಸಿದ್ದಾರೆ.

ಪ್ರಕಾಶಕರು

ಅತ್ರಿ ಬುಕ್ ಸೆಂಟರ್

೪ ಶರಾವತಿ ಕಟ್ಟಡ ಬಲ್ಮಠ ಮಂಗಳೂರು ೫೭೫ ೦೦೧

ಚಿತ್ರಕೃಪೆ : ವಿ. ಗೋವಿಂದರಾಜ್, ಯಜ್ಞ, ಅಶೋಕವರ್ಧನ

ರಕ್ಷಾಪುಟ ವಿನ್ಯಾಸ : ಜಿ. ಎಚ್. ಕೃಷ್ಣಮೂರ್ತಿ